
ಕರ್ನಾಟಕ ರಥಶಿಲ್ಪಕಲೆ

(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಸಾದರಪಡಿಸಿದ ಪಿಎಚ್.ಡಿ. ಮಹಾಪ್ರಬಂಧ



[redacted]

[redacted]

ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಲಲಿತಕಲಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ
೨೦[illegible]

ಕರ್ನಾಟಕ ರಥಶಿಲ್ಪಕಲೆ

(ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ)

ಒಂದು ಅಧ್ಯಯನ

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ
ಸಾದರಪಡಿಸಿದ ಮಹಾಪ್ರಬಂಧ

ಸಂಶೋಧಕರು
ಶಿವಪ್ರಕಾಶ. ಎಲ್. ತುಕ್ಕಣ್ಣವರ

ಮಾರ್ಗದರ್ಶಕರು
ಡಾ. ಎಸ್.ಸಿ. ಪಾಟೀಲ
ಪ್ರವಾಚಕರು ಮತ್ತು ಮುಖ್ಯಸ್ಥರು

ಲಲಿತಕಲಾ ನಿಕಾಯ
ಶಿಲ್ಪ ಮತ್ತು ವರ್ಣಚಿತ್ರಕಲಾ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ಬನಶಂಕರಿ, ಬಾದಾಮಿ

೨೦೦೪

ಕರ್ನಾಟಕ ರಥಶಿಲ್ಪಕಲೆ

ಉತ್ತರ ಕರ್ನಾಟಕವನ್ನು ಅನುಲಕ್ಷಿಸಿ

ಒಂದು ಅಧ್ಯಯನ

ಪರಿವಿಡಿ

ಅನುಬಂಧ

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ

ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನ

ಭಾರತೀಯ ಸಂಸ್ಕೃತಿಯಲ್ಲಿ ಜಾತ್ರೆ ಹಾಗೂ ರಥಗಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ರಥವನ್ನು ಎಳೆಯುವುದರೊಂದಿಗೆ ನಡೆಯುವ ಜಾತ್ರೆಯು ಧಾರ್ಮಿಕ ಉತ್ಸವವೇ ಆದರೂ ಅಲ್ಲಿ ಸಮಷ್ಠಿ ಬದುಕನ್ನು ಕಾಣುತ್ತೇವೆ. ಸಾಮರಸ್ಯ, ಸಹಬಾಳ್ವೆ, ಸೌಹಾರ್ದತೆ ಹಾಗೂ ಭಾವೈಕ್ಯತೆಯನ್ನು ಜಾತ್ರೆಯು ಪ್ರತಿಬಿಂಬಿಸುತ್ತದೆ. ಭಾರತೀಯರ ಜೀವನದಲ್ಲಿ ಜಾತ್ರೆ ಹಾಸುಹೊಕ್ಕಾಗಿದೆ. ಎಂತಹ ಕುಗ್ರಾಮವೇ ಇರಲಿ, ಅಲ್ಲೊಂದು ಚಿಕ್ಕ ಪ್ರಮಾಣದ ಜಾತ್ರೆಯು ಇದ್ದೇ ಇರುತ್ತದೆ. ವರ್ಷದ ಎಲ್ಲಾ ಋತು, ಮಾಸಗಳಲ್ಲಿಯೂ ನಾಡಿನ ತುಂಬ ಜಾತ್ರೆಗಳಾಗುತ್ತಲೇ ಇರುತ್ತವೆ.[೧] ನಮ್ಮ ಸಾಂಸ್ಕೃತಿಕ ಬದುಕನ್ನು ಪ್ರತಿಬಿಂಬಿಸುವ ಜಾತ್ರೆಗಳಲ್ಲಿ ರಥವೇ ಪ್ರಮುಖ. ಉಳಿದೆಲ್ಲ ಕಾರ್ಯಕ್ರಮಗಳು ರಥವನ್ನು ಕೇಂದ್ರವನ್ನಾಗಿರಿಸಿಕೊಂಡೇ ರೂಪುಗೊಳ್ಳುತ್ತವೆ.

ಜಾತ್ರೆಗಳು ಅನೇಕ ಪ್ರದರ್ಶನ ಕಲೆಗಳನ್ನು ಪೋಷಿಸುತ್ತ ಬಂದಿವೆ. ಅಲ್ಲದೆ ಜಾತ್ರೆಯಲ್ಲಿ ನಡೆಯುವ ರಥೋತ್ಸವಗಳೂ ಸಹ ಒಂದು ರೀತಿಯ ಪ್ರದರ್ಶನ ಕಲೆಯ ರೂಪದಲ್ಲಿಯೇ ಕಂಡು ಬರುತ್ತವೆ. ಪ್ರತಿಯೊಂದು ರಥವೂ ಒಂದು ಸುಂದರವಾದ ಶಿಲ್ಪ ಕಲಾಕೃತಿಯಾಗಿವೆ. ಇದು ಚಿತ್ರ ಹಾಗೂ ಶಿಲ್ಪಕಲೆಗಳನ್ನು ತನ್ನಲ್ಲಿ ಅಳವಡಿಸಿಕೊಂಡಿದೆ. ಹೀಗೆ ಬೇರೆ ಬೇರೆ ಕಲೆಗಳನ್ನು ಪೋಷಿಸುತ್ತಾ ಬಂದಿರುವ, ಸ್ವತಃ ಒಂದು ಕಲಾಕೃತಿಯಾದ ರಥಶಿಲ್ಪದ ಬಗೆಗೆ ಕಲಾತ್ಮಕ ಅಧ್ಯಯನದ ಅವಶ್ಯಕತೆ ಇಂದು ತುಂಬಾ ಅಗತ್ಯವಾಗಿದ್ದು ಈ ಹಿನ್ನೆಲೆಯಲ್ಲಿ ಈ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಧಾರ್ಮಿಕ ನಂಬಿಕೆ, ಜಾತ್ರೆ, ಉತ್ಸವಗಳು ಜನಪದರಿಂದ ಪರಂಪರಾಗತವಾಗಿ ಬಂದ ಬಳುವಳಿಯಾಗಿವೆ. ಜನಪದ ಕಲೆಗಳು ಅಪ್ಪಟ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದಂತವುಗಳು . ಅವುಗಳ ಕೊಡುಗೆ ಅಪಾರವಾದುದು.[೨] ಅದರಂತೆ ರಥಶಿಲ್ಪಗಳೂ ಕೂಡ ಒಂದು ಕಲಾಕೃತಿಯಾಗಿ ಧರ್ಮಪ್ರಜ್ಞೆಯ ಮೂಲಕ ಜನಪದರಿಂದ ಬೆಳೆದು ಬಂದಿವೆ. ನಿತ್ಯದ ಬದುಕು ಹಸನಾಗಿ ನಡೆಯುವಂತೆ ಒಂದು ಸೂತ್ರದಲ್ಲಿ ಯಾವುದು ಬಂಧಿಸಿದೆಯೋ, ಅದು ಧರ್ಮ. ಈ ಧರ್ಮ ಪ್ರಜ್ಞೆಯ ಆಚಾರ ವಿಚಾರಗಳು ನೂರಾರು ಸಂಪ್ರದಾಯಗಳಿಗೆ, ನಂಬಿಕೆಗಳಿಗೆ, ಮೌಲ್ಯಗಳಿಗೆ

೧. ''ಕರ್ನಾಟಕ ಜಾತ್ರೆಗಳು'' ಸಂ. ಸಿ. ಎಸ್. ಶಿವಕುಮಾರ ಸ್ವಾಮಿ. ಪುಟ ಸಂ. ೫, ೧೯೯೮

೨. ''ಕರ್ನಾಟಕದ ಜನಪದ ಚಿತ್ರಕಲೆ'' ಡಾ. ಎಸ್.ಸಿ. ಪಾಟೀಲ. ಪು. ಸಂ. ೭, ೧೯೯೩

ಕಾರಣವಾಗಿ ಅನೇಕ ಕಲೆಗಳು ಹುಟ್ಟಿಕೊಂಡವು.[೩] ಅವುಗಳಲ್ಲಿ ರಥಶಿಲ್ಪವೂ ಒಂದು. ಉತ್ಸವಗಳಲ್ಲಿ ಬಳಸಲ್ಪಡುವ ರಥಗಳು ಕಾಲದಿಂದ ಕಾಲಕ್ಕೆ ಬದಲಾವಣೆಗೊಂಡು, ಜಾತ್ರೆಯ ಸಂದರ್ಭದಲ್ಲಿ, ಚಲಿಸುವ ರಥವು ಒಂದು ಪ್ರದರ್ಶನ ಕಲೆಯಾಗಿ ಕಂಡುಬರುತ್ತದೆ. ಜನಜೀವನದ ಮಧ್ಯದಲ್ಲಿ ಕೆಲವು ಕಲೆಗಳು ಸಮೂಹ ಪ್ರಜ್ಞೆಯಿಂದ ಹುಟ್ಟು ಪಡೆದರೆ, ವ್ಯಷ್ಠಿ ಪ್ರಜ್ಞೆಯಿಂದಲೂ ಕೆಲವು ಕಲೆಗಳು ಹುಟ್ಟು ಪಡೆಯಲು ಸಾಧ್ಯವಿದೆ. ಜನಪದ ಕಲೆಗಳೆಲ್ಲವೂ ಮನರಂಜನೆಗಾಗಿ ಹಾಗೂ ಆರಾಧನೆಯ ನೆಪದಲ್ಲಿ ಸಮಸಮನಾಗಿ ಬೆಳೆದು ಬಂದಿವೆ ಎಂದು ಹೇಳಿದರೆ ಊಹೆಯಾಗಲಾರದು. ಜನಪದ ಕಲೆಗಳು ಮನಸ್ಸಿಗೆ ಆನಂದ ಹಾಗೂ ನೆಮ್ಮದಿಯನ್ನು ನೀಡುವುದರಿಂದ, ಅವುಗಳು ಮನದಲ್ಲಿಯ ಸೂಪ್ತವಾದ ಬಯಕೆಗಳನ್ನು ಹೊರಹಾಕುವಲ್ಲಿ ನೆಲೆಯೂರಿ ನಿಂತವು. ಹೀಗೆ ಜನರ ಮಧ್ಯದಲ್ಲಿ ನೆಲೆಯೂರಿ ನಿಂತ ಜನಪದ ಕಲೆಗಳು ತಮ್ಮನ್ನು ತಾವು ಗುರುತಿಸಿಕೊಂಡು, ಇಂದು ಆಧುನೀಕರಣದ ವ್ಯವಸ್ಥೆಯಲ್ಲಿಯೂ ಒಂದು ವಿಶಿಷ್ಠವಾದ ಸ್ಥಾನವನ್ನು ಪಡೆದುಕೊಂಡು ಪ್ರದರ್ಶನಗೊಳ್ಳುತ್ತಲಿವೆ. ಈ ರೀತಿಯ ಕಲೆಯ ಪ್ರತೀಕವಾಗಿ ಬೆಳೆದು ಬಂದ ರಥೋತ್ಸವಗಳಲ್ಲಿ ಪ್ರಮುಖವಾದ ರಥಶಿಲ್ಪಗಳು ಸಮಾಜ ಹಾಗೂ ಕಲೆಯ ಅವಿಭಾಜ್ಯ ಅಂಗವಾಗಿ ತಮ್ಮನ್ನು ಗುರುತಿಸಿಕೊಂಡು ಬೆಳೆದು ಬಂದವುಗಳಾಗಿವೆ.

ಕಲೆ ಮಾನವನ ಅನಂತ ಆನಂದಕ್ಕಾಗಿ ಹುಟ್ಟಿರುವಂತಹದು. ಕಲೆಯನ್ನು ಮಾನವ ತನ್ನ ಬಾಳಿನ ಎಲ್ಲ ಸಂದರ್ಭಗಳಲ್ಲಿ ಬಳಸುತ್ತಾ ಬಂದಿದ್ದಾನೆ. ಭಯ ಭಕ್ತಿಗಳಿಂದ ಪೂಜಿಸಿ, ಅವುಗಳಲ್ಲಿ ದೈವತ್ವವನ್ನು ಕಂಡುಕೊಂಡಿದ್ದಾನೆ. ಮುಗ್ಧವಾದ ನಮ್ಮ ಗ್ರಾಮೀಣ ಜನರು, ದೈವೀಶ್ರದ್ಧೆಗೆ ಹಾಗೂ ಪ್ರಾಮಾಣಿಕತೆಗೆ ಹೆಸರಾದವರು. ಇವರ ಧಾರ್ಮಿಕ ಹಾಗೂ ಸೃಜನಾತ್ಮಕ ಸ್ವಭಾವದಿಂದಲೇ ರಥಶಿಲ್ಪಗಳು ಹುಟ್ಟಿಬಂದಿವೆ.[೪]

ಆದಿ ಮಾನವನ ದೈವದ ಪರಿಕಲ್ಪನೆಯೇ ಆತನ ಎಲ್ಲ ಕಲೆಯ ಪ್ರಕಾರಗಳಿಗೂ ಮೂಲ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಆತನು ಅನಾದಿ ಕಾಲದಿಂದಲೂ ಬೆಳೆಸಿ, ಪೋಷಿಸಿಕೊಂಡು ಬಂದ ಕಲೆಗಳೆಲ್ಲವೂ ಆರಾಧನಾ ಸಂದರ್ಭದಲ್ಲಿಯೇ ಹುಟ್ಟಿ ಬಂದವುಗಳಾಗಿವೆ.[೫] ಈ ಕಲ್ಪನೆಯ ಹಿನ್ನೆಲೆಯಲ್ಲಿ ಆತ ದೈವದ ಬಗ್ಗೆ ನಡೆಸಿದ ಚಿಂತನೆಯ ಪರಿಣಾಮವಾಗಿ ರಥಶಿಲ್ಪಗಳು ಹುಟ್ಟಿ ಬಂದಿವೆ ಎಂದು ಹೇಳಬಹುದು. ಮನುಷ್ಯನು ಯಾವುದನ್ನೂ ಪ್ರಯತ್ನಪೂರ್ವಕವಾಗಿ ಕಲಿಯಬೇಕೆಂದುಕೊಂಡವನಲ್ಲ. ಆತನ ಅವಶ್ಯಕತೆಗೆ ತಕ್ಕಂತೆ ಅನಿವಾರ್ಯವಾಗಿ, ಅವನಿಗರಿಯದೆ ಸಹಜವಾಗಿ ಕೊರತೆಯನ್ನು ನೀಗಿಸುವ ರೂಪದಲ್ಲಿ, ಎಲ್ಲವೂ ಜನ್ಮ ತಾಳಿವೆ.[೬] ಈ ವಿಚಾರಕ್ಕೆ ರಥಶಿಲ್ಪಗಳೇನೂ ಹೊರತಾಗಿಲ್ಲ.

ಮಾನವನು ತನ್ನ ಸುತ್ತಮುತ್ತಲಿನ ಪರಿಸರ ಅಲ್ಲದೆ ನಿಸರ್ಗದಲ್ಲಿಯ ಏರಿಳಿತಗಳನ್ನು ಕಂಡು, ತನ್ನಲ್ಲಿ ಭೀತಿಯನ್ನು ಹುಟ್ಟಿಸಿಕೊಂಡು, ಅದನ್ನು ತಡೆಯಲು, ನೆಮ್ಮದಿಯಿಂದ ಬಾಳಿ ಬದುಕಲು ತನಗನಿಸಿದಂತೆ ಭಕ್ತಿಯನ್ನು ಸಮರ್ಪಣೆ ಮಾಡಿದನು. ಬೆಳಕು ನೀಡುವ ಸೂರ್ಯ, ಚಂದ್ರರಷ್ಟೇ ಅಲ್ಲದೆ, ಗುಡುಗು ಸಿಡಿಲುಗಳಿಗೆ ಹೆದರಿ ತನ್ನ ರಕ್ಷಣೆಗೋಸ್ಕರ ಅವುಗಳನ್ನು ಆರಾಧಿಸುತ್ತಾ ಬಂದಿದ್ದಾನೆ.

---

೩. "ಜನಪದ ಚಿತ್ರಕಲೆ" ಡಾ. ಎಸ್.ಸಿ. ಪಾಟೀಲ. ಪು. ಸಂ. ೯, ೧೯೯೩
೪. "ಕಲೆಯ ನೆಲೆ" ವಿ.ಕೃ. ಗೋಕಾಕ, ಪು.ಸಂ. ೨೫, ೧೯೭೮
೫. "ಜನಪದ ಚಿತ್ರಕಲೆ" ಡಾ. ಎಸ್.ಸಿ. ಪಾಟೀಲ, ಪು. ಸಂ. ೧೩, ೧೯೯೩
೬. " ಕಲಾನುಭವ " ವ್ಹಿ. ಸೀತಾರಾಮಯ್ಯ, ಪು.ಸಂ. ೨೭, ೧೯೭೬

ಈ ಹಿನ್ನೆಲೆಯಲ್ಲಿ ಅವನ ಬದುಕಿನಲ್ಲಿ ಮನೆದೇವತೆ, ಸೀಮೆದೇವತೆ, ಓಣಿದೇವತೆ ಹಾಗೂ ಗ್ರಾಮದೇವತೆಗಳೆಲ್ಲವೂ ಹುಟ್ಟಿ ಬಂದವು. ದೇವದೇವತೆಯರ ಜೊತೆ ಜೊತೆಗೆ ದೇವಸ್ಥಾನಗಳೂ ನಿರ್ಮಾಣಗೊಂಡವು.[೭]

ದೇವಾಲಯಗಳೆಂದರೆ ಸಾಮುದಾಯಿಕ ಬದುಕಿನ ಅವಿಭಾಜ್ಯ ಅಂಗಗಳು. ನಮ್ಮ ದೇಶದ ಗ್ರಾಮೀಣ ಬದುಕಿನಲ್ಲಿ ಗುಡಿಗಳೆಂದರೆ ಸಾಮಾಜಿಕ, ಧಾರ್ಮಿಕ ಹಾಗೂ ಸಾಂಸ್ಕೃತಿಕ ಬದುಕಿನ ಕೇಂದ್ರ ಬಿಂದುಗಳು. ಈ ಗುಡಿಗಳಲ್ಲಿರುವ ದೇವರು ಸ್ಥಳೀಯ ದೈವಗಳಿರಬಹುದು ಅಥವಾ ಹಿಂದೂ ಶಿಷ್ಟ ದೇವತೆಗಳಿರಬಹುದು. ಕೆಲವೊಂದು ಕಡೆ ಇವೆರಡೂ ಸೇರಿಕೊಂಡು ಒಂದೇ ದೇವಾಲಯದ ಆರಾಧನಾ ಸಂಕೀರ್ಣದೊಂದಿಗೆ ಐದಾರು ಗುಡಿಗಳಿರುವುದು ಕಂಡು ಬರುತ್ತದೆ. ಇಲ್ಲಿ ನಡೆಯುವ ಕಾರ್ಯಕ್ರಮಗಳು ಜನರ ಬದುಕಿನ ಸಂಘಟನೆಯ ಪ್ರತಿಫಲನಗಳಾಗಿವೆ.[೮] ಸಮಾಜದ ಜನರ ನಿಷ್ಠೆಯೇ ಈ ಗುಡಿಗಳ ತಳಪಾಯವಾದಂತೆ, ದೇವಾಲಯಗಳ ಅವಿಭಾಜ್ಯ ಅಂಗವಾಗಿರುವ ರಥಶಿಲ್ಪಗಳೂ ಸಹ ಅವರ ಭಕ್ತಿ, ಶ್ರದ್ಧೆಯಿಂಲೇ ಹುಟ್ಟಿ ಬೆಳೆದಿರುವಂತವುಗಳಾಗಿವೆ. ಒಂದು ದೇವಾಲಯಕ್ಕೆ ಸಂಬಂಧಿಸಿದ ಒಂದು ರಥ ಅಥವಾ ಆರಾಧನಾ ಸಂಕೀರ್ಣದೊಂದಿಗೆ ಐದಾರು ದೇವಾಲಯಗಳಿರುವಲ್ಲಿ ಎರಡು, ಮೂರು, ಐದು ಹೀಗೆ ಬಹು ಸಂಖ್ಯೆಯ ರಥಗಳೂ ಸಹ ಹುಟ್ಟು ಪಡೆದಿರುವುದನ್ನು ಕಾಣಬಹುದು.

ದೈವಕ್ಕೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಲು ರಥಶಿಲ್ಪಗಳನ್ನು ನಿರ್ಮಿಸಿ, ರಥೋತ್ಸವಗಳನ್ನು ಮಾಡತೊಡಗಿದರು. ಈ ರೀತಿಯಾಗಿ ಜನಪದರಿಂದ ಬೆಳೆದುಬಂದ ರಥಶಿಲ್ಪಕಲೆಯು ಎಂದಿಗೂ ತಮ್ಮ ಗುಣ ಸಂಪತ್ತನ್ನು ಬಿಟ್ಟು ಕೊಡಲಿಲ್ಲ. ಮನುಷ್ಯ, ಪ್ರಪಂಚ ಬದಲಾದಂತೆ ಅವನೊಂದಿಗೆ ಕಾಲಾನುಕ್ರಮವಾಗಿ ರಥಶಿಲ್ಪಗಳೂ ಮರುಹುಟ್ಟನ್ನು ಪಡೆಯುತ್ತಾ ಬಂದಿವೆ. ಹೀಗೆ ಬೆಳೆದಿರುವ ರಥಶಿಲ್ಪಗಳು ಸಾಮಾಜಿಕ ಹಾಗೂ ಸಾಂಸ್ಕೃತಿಕ ನೆಲೆಯಲ್ಲಿ ತಮ್ಮನ್ನು ಯಾವ ರೀತಿ ಗುರುತಿಸಿಕೊಂಡಿವೆ ಎಂಬುದನ್ನು ತಿಳಿಯುವುದಕ್ಕೆ ಪ್ರಯತ್ನ ಮಾಡುವುದು ಈ ಅಧ್ಯಯನದ ಉದ್ದೇಶವಾಗಿದೆ.

ಮಾನವನ ನಿತ್ಯ ಜೀವನದಲ್ಲಿ ಬಳಕೆಯಾಗಲ್ಪಡುವ ವಸ್ತುಗಳಲ್ಲಿ ಕಲಾತ್ಮಕತೆಯನ್ನು ತಂದು, ಅವುಗಳನ್ನು ಸುಂದರಗೊಳಿಸುವಂತಹ ಕ್ರಿಯೆಗಳು ಆತನ ಜೀವನದುದ್ದಕ್ಕೂ ನಡೆಯುತ್ತಲೇ ಬಂದಿವೆ. ಅದೇ ರೀತಿ ಅತ್ಯಂತ ಪ್ರಾಚೀನ ಕಾಲದಿಂದಲೇ ಮಾನವ ಜೀವನದಲ್ಲಿ ಪ್ರಮುಖ ಪಾತ್ರವಹಿಸಿದ ರಥಶಿಲ್ಪಗಳಲ್ಲಿಯೂ ಇಂಥಹ ಪ್ರಕ್ರಿಯೆಗಳು ನಡೆಯುತ್ತ ಬಂದಿವೆ. ಪ್ರಾಗೈತಿಹಾಸಿಕ ಕಾಲದಿಂದಲೂ ಇಂದಿನವರೆಗೂ ಕಲಾತ್ಮಕ ರಥಗಳನ್ನು ಕಾಣಬಹುದು. ಹರಪ್ಪ, ಮೆಹೆಂಜೋದಾರೋ ಸಂಸ್ಕೃತಿ (ಸಿಂಧೂ ಕೊಳ್ಳದ ಸಂಸ್ಕೃತಿ) ಮೆಸಪೊಟೋಮಿಯಾ, ಬೆಬಿಲೋನಿಯಾ, ಗ್ರೀಕ್ ಹೀಗೆ ಮುಂತಾದ ನಾಗರೀಕತೆಗಳಲ್ಲಿ ಕಂಡು ಬರುವ ರಥಗಳ ಸ್ವರೂಪ ವಿಭಿನ್ನವಾಗಿದೆ. ನಂತರ ರಥಶಿಲ್ಪಗಳ ವಿನ್ಯಾಸದಲ್ಲಿ ಹಲವಾರು ಹೊಸ ಆವಿಷ್ಕಾರಗಳು ನಡೆದು ಬಂದವು. ಕಾಲದಿಂದ ಕಾಲಕ್ಕೆ ಅದರ ಸ್ವರೂಪ ಹಾಗೂ ವಿನ್ಯಾಸದಲ್ಲಿ ಬದಲಾವಣೆಗಳಾಗಿರುವುದು ಕಂಡುಬರುತ್ತದೆ.[೯] ಇಂಥಹ ಅಂಶಗಳ ಬಗ್ಗೆ ಈ ಅಧ್ಯಯನದಲ್ಲಿ ಚರ್ಚಿಸುವ ಉದ್ದೇಶವನ್ನು ಇಟ್ಟುಕೊಳ್ಳಲಾಗಿದೆ.

---

೭. ''ಕರ್ನಾಟಕ ಜನಪದ ಕಲೆಗಳು'' ಶಿವರಾಮ ಕಾರಂತ ಪು.ಸಂ. ೩, ೧೯೬೮

೮. ''ಕೋಮು ಸೌಹಾರ್ದತೆ'' ಲೇಖನ ಸಂಕಲನ, ಸಂ. ಡಾ. ಎಚ್.ಸಿ.ಪೋತೆ, ಪು.ಸಂ. ೧೫, ೨೦೦೦

ಪ್ರಾರಂಭದಲ್ಲಿ ರಥಗಳು ರಾಜಮಹಾರಾಜರ ಸಂಚಾರಿ ವಾಹನಗಳಾಗಿದ್ದವು. ವಿವಿಧ ವಿನ್ಯಾಸಗಳಲ್ಲಿ ತಯಾರಿಸಿದ ರಥಗಳನ್ನು ತಮ್ಮ ಬೇರೆ ಬೇರೆ ಕೆಲಸಗಳಿಗೆ, ಒಂದೊಂದನ್ನು ಪ್ರತ್ಯೇಕವಾಗಿ ಉಪಯೋಗಿಸುತ್ತಿದ್ದರು. ವಿಹಾರ ರಥಗಳು, ಸಂಗ್ರಾಮ ರಥಗಳು, ವೈಣಿಕ ರಥಗಳು ಹಾಗೂ ನೌಕಾವಿಹಾರ ರಥಗಳು- ಹೀಗೆ ವಿವಿಧ ಬಗೆಯ ರಥಗಳು ಅವರ ನಿತ್ಯ ಜೀವನದಲ್ಲಿ ಉಪಯೋಗವಾಗುತ್ತಿದ್ದವು.[೧೦] ಎಲ್ಲ ರಥಗಳೂ ಬೇರೆ ಬೇರೆ ವಿನ್ಯಾಸಗಳಲ್ಲಿರುತ್ತಿದ್ದವು. ಹೀಗೆ ವಿವಿಧ ಬಗೆಯ ರಥಗಳ ಬಗ್ಗೆ ತಿಳಿಯುವ ಪ್ರಯತ್ನ ಮಾಡುವದು ಈ ಅಧ್ಯಯನದ ಉದ್ದೇಶವಾಗಿದೆ. ರಾಜಮಹಾರಾಜರ ಕೆಲವು ಸಾರೋಟಗಳನ್ನು, ಟಾಂಗಾ, ಜಟಕಾ ಇತ್ಯಾದಿಗಳನ್ನು ಕೆಲವು ವಸ್ತುಸಂಗ್ರಹಾಲಯಗಳಲ್ಲಿ ಇಂದಿಗೂ ಕಾಣಬಹುದು. ಅಂತಹ ಕೆಲವು ರಥಗಳು ಅಸ್ತಿತ್ವಕ್ಕೆ ಬಂದಿರುವುದರ ಬಗ್ಗೆಯೂ ಚರ್ಚಿಸುವ ಉದ್ದೇಶವನ್ನು ಹೊಂದಿದೆ.

ಪ್ರಾರಂಭದಲ್ಲಿ ಸಾಗಾಣಿಕೆಗಾಗಿ ಒಳಸಲ್ಪಡುತ್ತಿದ್ದ ರಥಗಳು ನಂತರದಲ್ಲಿ ಅದರ ಜೊತೆ ಜೊತೆಯಾಗಿಯೇ ಧಾರ್ಮಿಕ ಉದ್ದೇಶಗಳಿಗಾಗಿಯೂ ಬಳಕೆಯಾಗತೊಡಗಿದವು. ಅನೇಕ ರಾಜ ಮಹಾರಾಜರು ಸುಂದರವಾದ ದೇವಾಲಯಗಳನ್ನು ನಿರ್ಮಿಸಿದಂತೆ, ಕಲಾತ್ಮಕ ಸುಂದರ ರಥಗಳನ್ನು ನಿರ್ಮಿಸಿ, ತಮ್ಮ ಕುಲದೇವತೆಯನ್ನು ರಥದಲ್ಲಿ ಪ್ರತಿಷ್ಠಾಪಿಸಿ, ಉತ್ಸವಗಳನ್ನು ಮಾಡುವುದರ ಮೂಲಕ ರಥಶಿಲ್ಪಗಳಿಗೆ ಒಂದು ಮಹತ್ವವನ್ನು ನೀಡಿದರು. ಇದಲ್ಲದೆ ರಥಗಳು, ಉತ್ಸವಗಳಲ್ಲಿ ಸುಗಮವಾಗಿ ಸಾಗಲು ತಮ್ಮ ಸಂಪತ್ತನ್ನು ವಿನಿಯೋಗಿಸಿ ವಿಶಾಲವಾದ ರಥಬೀದಿಗಳನ್ನು ನಿರ್ಮಾಣ ಮಾಡಿದರು.[೧೧] ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು , ಸೋದೆಯ ಅರಸರು, ಸುರಪುರದ ನಾಯಕರು ಹಾಗೂ ಬೀಳಗಿಯ ಸಂಸ್ಥಾನಿಕರು ಹೀಗೆ ಮುಂತಾದವರ ಆಡಳಿತ ಕಾಲದಲ್ಲಿ ರಚನೆಯಾದ ರಥಶಿಲ್ಪಗಳ ಕುರಿತು ಅಧ್ಯಯನ ಮಾಡುವುದರ ಜೊತೆಗೆ ರಥಶಿಲ್ಪಕಲೆಯ ಇತಿಹಾಸವನ್ನು ಅನುಕ್ರಮವಾಗಿ ಕಟ್ಟಿಕೊಡುವ ಉದ್ದೇಶವನ್ನು ಹೊಂದಿದೆ.

ರಥಶಿಲ್ಪಕಲೆಯ ಇತಿಹಾಸವನ್ನು ಹೇಳುವ ಸಂದರ್ಭದಲ್ಲಿ , ಪೂರಕವಾಗಿ ಆಯಾ ಕಾಲದ ಸಮಕಾಲೀನ ಸಾಹಿತ್ಯ ಮತ್ತು ಶಾಸನಗಳಲ್ಲಿ ಉಲ್ಲೇಖವಾದ ರಥಶಿಲ್ಪಗಳ ಉದಾಹರಣೆಗಳನ್ನು ಬಳಸಿಕೊಂಡು ಅನೇಕ ದೇವಾಲಯಗಳು ವೀರಗಲ್ಲು, ಶಾಸನಗಳಂತಹ ಸ್ಮಾರಕಗಳ ಮೇಲೆ ಕೆತ್ತಲ್ಪಟ್ಟ ರಥಶಿಲ್ಪ ಮಾದರಿಗಳನ್ನು ಗಮನಿಸಿ, ತೌಲನಿಕವಾಗಿ ಚರ್ಚಿಸುವುದರ ಮೂಲಕ ರಥಶಿಲ್ಪಕಲೆಯ ಇತಿಹಾಸವನ್ನು ತಿಳಿಯಪಡಿಸುವ ಉದ್ದೇಶವನ್ನು ಈ ಅಧ್ಯಯನವು ಹೊಂದಿದೆ.

ದೇವಾಲಯದ ನಿರ್ಮಾಣ ಕಾರ್ಯವನ್ನು ಪ್ರಾಚೀನ ಗ್ರಂಥಗಳಲ್ಲಿ ನಿರೂಪಿಸಲಾಗಿರುವಂತೆಯೇ, ದೇವಾಲಯದ ಪ್ರತೀಕವಾದ ರಥಶಿಲ್ಪಗಳ ಬಗ್ಗೆಯೂ ಕೆಲವು ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಪ್ರಕಾರ, ದೇವಾಲಯದ ಉತ್ಸವಗಳಲ್ಲಿ ಬಳಸಲ್ಪಡುವ ದೇಗುಲ ರಥಗಳು, ದೇವತೆಗಳು, ಋಷಿಮುನಿಗಳು, ಬ್ರಾಹ್ಮಣರು, ಪಂಡಿತೋತ್ತಮರು, ಅರಸರು, ಯಕ್ಷರು, ಕಿನ್ನರರು ಹಾಗೂ ಕ್ಷತ್ರೀಯರು ಹಲವಾರು ಬಗೆಯ ರಥಗಳನ್ನು ಬಳಸುತ್ತಿದ್ದರೆಂದು ತಿಳಿದು ಬರುತ್ತದೆ. ಇಂತಹ ಕುತೂಹಲಕಾರಿಯಾದ ವಿಷಯದ ಬಗ್ಗೆ

೯. '' ದೇಗುಲ ರಥಶಿಲ್ಪ'' ದ್ರುವರಾಜ. ನಾ. ಗದಗಕರ, ಪು.ಸಂ. ೨, ೧೯೯೯
೧೦. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೧೯,೧೯೯೫
೧೧. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೨೧,೧೯೯೫

ಚರ್ಚಿಸುವ ಉದ್ದೇಶವನ್ನು ಹೊಂದಿದೆ.

ಇದಲ್ಲದೆ ರಥಶಿಲ್ಪಗಳ ನಿರ್ಮಾಣ ಹಂತಗಳ ಬಗ್ಗೆ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಗಳಿವೆ. 'ವಿಜಯತಂತ್ರ' ಗ್ರಂಥವು ಮೂರು ವಿಧದ ರಥಗಳನ್ನು ವರ್ಗೀಕರಣ ಮಾಡಿದರೆ, 'ಮಾನಸಾರ' - ವು ಏಳು ಬಗೆಯ ರಥಗಳ ವರ್ಗೀಕರಣವನ್ನು ಹೇಳುತ್ತದೆ. ಇದಲ್ಲದೆ 'ಕುಮಾರ ತಂತ್ರ' ವು ಎಂಟು ಬಗೆಯ ರಥಗಳನ್ನು ವರ್ಗೀಕರಿಸುತ್ತದೆ. ಯಾವ ರಥಗಳನ್ನು ಯಾರು ಉಪಯೋಗಿಸಲು ಅರ್ಹರಾಗಿರುವರೆಂದು 'ಶಿಲ್ಪ ರತ್ನಾಕರ' , 'ರುದ್ರವಾಸ್ತು ' , 'ಪರಾಶರವಾಸ್ತು ' ಮೊದಲಾದ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ.[೧೨] ಈ ಎಲ್ಲ ವಿಷಯಗಳನ್ನು ವಿವರವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಪ್ರಾಚೀನ ಗ್ರಂಥಗಳ ಪ್ರಕಾರ, ರಥಶಿಲ್ಪಗಳಲ್ಲಿ ವಿಜಯಕಾಂತ, ಶ್ರೀಕರ, ನಭಸವನಭದ್ರಕ, ಪ್ರಭಂಜನ ಭದ್ರಕ, ಪ್ರಸಾದ ಭದ್ರಕ, ಪತ್ರಕಲ್ಪ, ಚಿತ್ರಕಲ್ಪ, ಪುಷ್ಪಕ ರಥ, ಗಂಧರ್ವ ರಥ, ಸಾಮ್ಯರಥ ಹೀಗೆ ಇನ್ನೂ ಅನೇಕ ವಿಧದ ರಥಗಳನ್ನು ತಿಳಿಯಬಹುದು. ಅಲ್ಲದೆ ಅವುಗಳ ಲಕ್ಷಣಗಳನ್ನೂ ತಿಳಿಯಬಹುದಾಗಿದೆ. ಅನೇಕ ರಥಗಳು ಚೌಕು, ಅಷ್ಟಮು, ದ್ವಾದಶ, ವರ್ತುಳ ಹಾಗೂ ಬಹುಕೋನಗಳ ವಿನ್ಯಾಸಗಳಲ್ಲಿಯೂ ಕಂಡು ಬರುವವು.[೧೩] ಕರ್ನಾಟಕದಲ್ಲಿ ವಿವಿಧ ಸುಂದರವಾದ ದೇವಾಲಯಗಳು ಬೇರೆ ಬೇರೆ ಶೈಲಿಗಳಲ್ಲಿ ನಿರ್ಮಾಣಗೊಂಡಂತೆ, ರಥಶಿಲ್ಪಗಳೂ ಸಹ ನಾಗರ, ವೇಸರ, ದ್ರಾವಿಡ ಹೀಗೆ ವಿವಿಧ ಶೈಲಿಗಳಲ್ಲಿ ನಿರ್ಮಾಣಗೊಂಡಿವೆ. ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಕಟ್ಟಿಗೆಯ ರಥ, ಲೋಹದ ರಥ, ಸಂಕೀರ್ಣ ರಥ ಹಾಗೂ ಶಿಲಾ ರಥಗಳನ್ನು ಕಾಣಬಹುದು. ಪ್ರಾದೇಶಿಕವಾಗಿ ಈ ಎಲ್ಲ ರಥಗಳಲ್ಲಿ ಕಂಡುಬರುವ ಸಾಮ್ಯಗಳು ಹಾಗೂ ವ್ಯತ್ಯಾಸಗಳನ್ನು ಗುರುತಿಸುತ್ತಾ , ಅವುಗಳ ರಚನಾ ವಿಧಾನಗಳ ಬಗ್ಗೆಯೂ ಗಮನ ಹರಿಸುವ ಉದ್ದೇಶವನ್ನು ಹೊಂದಿದೆ.

ರಥಶಿಲ್ಪಗಳು ಒಂದೇ ಹಂತದಲ್ಲಿ ನಿರ್ಮಾಣಗೊಳ್ಳದೆ, ವಿವಿಧ ಹಂತಗಳಲ್ಲಿ ನಿರ್ಮಾಣಗೊಳ್ಳುತ್ತವೆ. ರಥಶಿಲ್ಪ ನಿರ್ಮಾಣ ಕಾರ್ಯದಲ್ಲಿ ಅದಕ್ಕೆ ಪೂರ್ವಭಾವಿಯಾಗಿ ನೀಲ ನಕ್ಷೆಗಳನ್ನು ರಚಿಸುವರು. ಅದರಲ್ಲಿ ಅಳವಡಿಸುವ ಮೂರ್ತಿಗಳು, ಚಿತ್ರ ವಿನ್ಯಾಸಗಳು ಅವುಗಳನ್ನು ಸೂಕ್ಷ್ಮ ಕುಸುರಿಕೆತ್ತನೆಯ ಕೆಲಸದಿಂದ ಸುಂದರಗೊಳಿಸುವರು. ರಚನೆಯಾದ ರಥಶಿಲ್ಪದ ಎಲ್ಲ ಬಿಡಿಭಾಗಗಳನ್ನು ಅಡಿಪಾಯ, ಅಧಿಷ್ಠಾನ, ಮಂಟಪ, ಗೋಪುರ ಹಾಗೂ ಕಳಶ ಭಾಗಗಳಲ್ಲಿ ಸರಿಯಾಗಿ ಹೊಂದಿಸುವುದು. ಇದಲ್ಲದೆ ರಥಶಿಲ್ಪಿಯು ಮೊದಲ ಹಂತದಲ್ಲಿ ರಥ ನಿರ್ಮಾಣ ಮಾಡಿದ ನಂತರ, ಎರಡನೆಯ ಹಂತದಲ್ಲಿ, ನಿಯೋಜಿಸಲ್ಪಟ್ಟ ಕುಶಲಕರ್ಮಿಗಳು ಉತ್ಸವಕ್ಕಾಗಿ ರಥವನ್ನು ಸಿದ್ಧಗೊಳಿಸುವರು. ಈ ಹಂತದಲ್ಲಿ ರಥದ ಮೇಲೆ ಗೋಪುರ ನಿರ್ಮಿಸುವರು.

ಬಣ್ಣ ಬಣ್ಣದ ಬಟ್ಟೆ ಪತಾಕೆಗಳನ್ನು ಕಟ್ಟುವುದು, ಕಳಶವನ್ನಿಟ್ಟು ತಳಿರುತೋರಣಗಳಿಂದ ಅಲಂಕಾರ ಮಾಡುವುದು ಹೀಗೆ ಪ್ರತಿಯೊಂದು ಹಂತದ ನಿರ್ಮಾಣ ಸಂದರ್ಭದಲ್ಲಿ ಅನುಸರಿಸುವ ವಿಧಿ ವಿಧಾನಗಳನ್ನು ವಿವರವಾಗಿ ಚರ್ಚಿಸುವ ಉದ್ದೇಶವನ್ನು ಹೊಂದಿದೆ.

೧೨. ''ಶಿಲ್ಪಕಲಾ ಪ್ರಪಂಚ'' ಪಿ.ಆರ್.ತಿಪ್ಪೇಸ್ವಾಮಿ, ಪು.ಸಂ. ೪೭೬, ೧೯೯೪
೧೩. ''ಉರುಳಗಾಲಿಯ ರಥಗಳು ಉರುಳಿಬಂದ ಕಥೆ''ಅಶೋಕ ಹಾಸ್ಯಗಾರ ಸಂಯುಕ್ತಕರ್ನಾಟಕ ಜುಲೈ ೧೫ , ಪು.ಸಂ.೪,೧೯೯೦

ಲೋಹ ಮಾಧ್ಯಮದ ರಥಗಳಲ್ಲಿ ಕಬ್ಬಿಣ, ಬೆಳ್ಳಿ ಹಾಗೂ ಚಿನ್ನದ ರಥಗಳು ನಿರ್ಮಾಣಗೊಂಡಿರುವುದನ್ನು ನಾಡಿನ ವಿವಿಧೆಡೆಯಲ್ಲಿ ಕಾಣಬಹುದು. ಕಬ್ಬಿಣದ ರಥಗಳನ್ನು ತಯಾರಿಸುವ ಹಂತದಲ್ಲಿ ಕಬ್ಬಿಣದ ಪಟ್ಟಿಗಳನ್ನು, ರಾಡ್‌ಗಳನ್ನು ಹಾಗೂ ತಗಡುಗಳನ್ನು ಕತ್ತರಿಸುವುದು, ಅವುಗಳನ್ನು ಒಂದಕ್ಕೊಂದು ಜೋಡಿಸಿ ವೆಲ್ಡಿಂಗ್ ಮಾಡುವುದು, ಪೂರ್ಣ ಕಬ್ಬಿಣದಿಂದ ಸಿದ್ಧಗೊಂಡ ರಥಕ್ಕೆ ವರ್ಣಗಾರಿಕೆಯನ್ನು ಮಾಡುವುದು- ಹೀಗೆ ಬೇರೆ ಬೇರೆ ಕಾರ್ಯಗಳನ್ನು ಕೈಗೊಳ್ಳಬೇಕಾಗುವುದು. ಚಿನ್ನದ ಹಾಗೂ ಬೆಳ್ಳಿಯ ಮಾಧ್ಯಮದ ರಥಗಳನ್ನು ತಯಾರಿಸುವಾಗ ಮೊದಲು ನೀಲ ನಕ್ಷೆಯ ಪ್ರಕಾರ, ಒಂದು ಕಾಷ್ಠ ರಥವನ್ನು ತಯಾರಿಸುವರು. ಆಮೇಲೆ ಬೆಳ್ಳಿ ಅಥವಾ ಬಂಗಾರದ ತಗಡುಗಳಲ್ಲಿ ಉಬ್ಬು ಶಿಲ್ಪಗಳನ್ನು ತಯಾರಿಸುವರು. ಕೆಲವೊಂದು ಸಂದರ್ಭದಲ್ಲಿ ಬೆಳ್ಳಿ ಅಥವಾ ಬಂಗಾರವನ್ನು ಕರಗಿಸಿ, ಪಡಿಯಚ್ಚುಗಳಲ್ಲಿ ದ್ರವರೂಪದ ಲೋಹವನ್ನು ಸುರಿದು ವಿವಿಧ ಶಿಲ್ಪಕಲಾಕೃತಿಗಳನ್ನು ರಚಿಸುವರು. ಎಲ್ಲ ಕಲಾಕೃತಿಗಳು ಬಿಡಿ ಬಿಡಿಯಾಗಿ ಪಟ್ಟಿಕೆಗಳಲ್ಲಿ ಸಿದ್ಧಗೊಂಡ ನಂತರ ಕಾಷ್ಠ ರಥಕ್ಕೆ ಮೊಳೆಗಳಿಂದ ಹೊಡೆದು ಸರಿಯಾಗಿ ಕೂಡಿಸುವುದು, ಕಾಯಿಸುವುದು, ಪಾಲಿಶ್ ಮಾಡುವುದು ಹೀಗೆ ವಿವಿಧ ಹಂತಗಳಲ್ಲಿ ತಯಾರಿಸುವ ವಿಧಿವಿಧಾನಗಳನ್ನು ವಿವರವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಇವುಗಳಲ್ಲದೆ ಸಂಕೀರ್ಣ ಮಾಧ್ಯಮದ ರಥಗಳಾದ ಕಟ್ಟುವ ರಥಗಳು, ತಟ್ಟಿಯ ರಥಗಳು, ತೆಪ್ಪದ ರಥಗಳು, ಹೂವಿನ ರಥಗಳು ಹೀಗೆ ಅನೇಕ ವಿಧದ ರಥಗಳು ನಾಡಿನ ವಿವಿಧೆಡೆ ಉತ್ಸವದ ಸಂದರ್ಭದಲ್ಲಿ ಕಾಣಸಿಗುವವು, ಇಂತಹ ಚರರಥಗಳನ್ನು ಆಯಾ ಗ್ರಾಮದವರೆಲ್ಲರೂ ಸೇರಿ ಜಾತಿಬೇಧವಿಲ್ಲದೆ, ಯಾವ ಯಾವ ಕೆಲಸದಲ್ಲಿ ಯಾರು ಪರಿಣಿತರಿರುವರೋ ಅಂತವರೆಲ್ಲರ ಸಹಾಯ ಸಹಕಾರದೊಂದಿಗೆ ನಿರ್ಮಾಣ ಮಾಡುವರು. ಹೀಗೆ ಅನೇಕ ಮಾಧ್ಯಮಗಳಲ್ಲಿ ನಿರ್ಮಾಣವಾಗುವ ರಥಗಳ ತಯಾರಿಕಾ ವಿಧಾನಗಳ ಬಗ್ಗೆ ವಿವರವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ರಥಶಿಲ್ಪವನ್ನು ನಿರ್ಮಿಸುವಲ್ಲಿ ವಿವಿಧ ರೀತಿಯ ಪರಿಕರಗಳು ಬಳಕೆಯಾಗುತ್ತವೆ. ಮಾಧ್ಯಮದ ಹಿನ್ನೆಲೆಯಲ್ಲಿ ಬೇರೆ ಬೇರೆಯಾಗಿ ಬಳಸಲ್ಪಡುವ ಪರಿಕರಗಳನ್ನು ವಿಂಗಡಿಸಿಕೊಂಡು ಅಧ್ಯಯನಕ್ಕೊಳಪಡಿಸಲಾಗುವುದು. ಶಿಲಾ ಮಾಧ್ಯಮ, ಕಾಷ್ಠ ಮಾಧ್ಯಮ, ಲೋಹ ಮಾಧ್ಯಮ ಹಾಗೂ ಸಂಕೀರ್ಣ ಮಾಧ್ಯಮದ ರಥಗಳನ್ನು ತಯಾರಿಸುವ ಸಾಮಗ್ರಿಗಳು ಆಯಾ ಮಾಧ್ಯಮಕ್ಕನುಗುಣವಾಗಿ ಬೇರೆ ಬೇರೆಯಾಗಿಯೇ ಇರುತ್ತವೆ. ಹಾಗೆಯೇ ಕೆಲವು ಸಾಮಗ್ರಿಗಳಲ್ಲಿ ಸಾಮ್ಯತೆ ಕಂಡು ಬರುತ್ತದೆ. ರಥಗಳನ್ನು ನಿರ್ಮಿಸುವ ಕಟ್ಟಿಗೆ ಗಾಲಿಗಳಿಗೆ ಬಳಸುವ ಶಿಲೆ, ಅಲ್ಲದೆ ಕಳಸವನ್ನು ಒಳಗೊಂಡಂತೆ ವಿವಿಧ ಭಾಗಗಳಲ್ಲಿ ಬಳಸುವ ಲೋಹದಂತಹ ವಸ್ತುಗಳು, ಹಾಗೆಯೇ ರಥದ ಅಲಂಕರಣಕ್ಕಾಗಿ ಉಪಯೋಗಿಸಲಾಗುವ ವಿವಿಧ ಬಣ್ಣದ ಬಟ್ಟೆಗಳು, ಧ್ವಜಗಳು, ತಳಿರು ತೋರಣಗಳು, ಬಾಳೆ ದಿಂಡುಗಳು- ಹೀಗೆ ಅನೇಕ ವಸ್ತುಗಳನ್ನು ಪರಿಗಣಿಸಲಾಗುವುದು. ಇದಲ್ಲದೆ ಬೇರೆ ಬೇರೆ ಮಾಧ್ಯಮದ ರಥಗಳನ್ನು ತಯಾರಿಸಲು ರಥಶಿಲ್ಪಿಗಳು ಬಳಸುವ ಸುತ್ತಿಗೆ, ಉಳಿಗಳು ಅನೇಕ ವಿದ್ಯುತ್ ಚಾಲಿತ ಯಂತ್ರಗಳು ಅಲ್ಲದೆ ಕಬ್ಬಿಣ, ಹಿತ್ತಾಳೆ, ಬೆಳ್ಳಿ, ಬಂಗಾರ ಮೊದಲಾದ ಲೋಹಗಳಿಂದ ಎರಕಹೊಯ್ದು ರಥಶಿಲ್ಪ ನಿರ್ಮಿಸುವಲ್ಲಿ ಬಳಕೆಯಾಗುವ ವಸ್ತುಗಳನ್ನೊಳಗೊಂಡಂತೆ

ವಿವರಿಸುವ ಉದ್ದೇಶಗಳನ್ನು ಹೊಂದಿದೆ.

ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಉತ್ಸವದ ದಿನದಂದೇ ಚಿಕ್ಕ ಪ್ರಮಾಣದ ರಥಶಿಲ್ಪಗಳನ್ನು ಕಡಿಮೆ ಅವಧಿಯಲ್ಲಿ ಸ್ಥಳೀಯ ಕುಶಲಕರ್ಮಿಗಳು ನಿರ್ಮಿಸುತ್ತಾರೆ. ಇಲ್ಲಿ ಪ್ರದರ್ಶನ ಸಂದರ್ಭವನ್ನು ಗಮನಿಸಿ, ಪ್ರಾದೇಶಿಕವಾಗಿ ಲಭ್ಯವಿರುವ ಪರಿಕರವನ್ನು ಕಲಾತ್ಮಕವಾಗಿ ರಥಗಳ ಸಿದ್ಧತೆಗೆ ಬಳಸಿಕೊಳ್ಳಲಾಗುತ್ತದೆ. ಇಂತಹ ವಿವರಗಳನ್ನು ಈ ಅಧ್ಯಯನ ಮಾಡುವ ಉದ್ದೇಶಗಳನ್ನು ಹೊಂದಿದೆ.

ರಥ ಶಿಲ್ಪಗಳ ಅಧ್ಯಯನದಿಂದ ಮಾನವನ ಕಲಾ ಬದುಕು, ಧಾರ್ಮಿಕ ನಂಬಿಕೆ ಆಚರಣೆಗಳಂತಹ ಸಾಂಸ್ಕೃತಿಕ ಸಂಗತಿಗಳು ತಿಳಿದು ಬರುತ್ತವೆ. ಅಲ್ಲದೆ ನಮ್ಮ ಪೂರ್ವಜರು ತಯಾರಿಸಿದ ರಥಶಿಲ್ಪಗಳಲ್ಲಿ ಕಾಣುವ ಕಲಾವಂತಿಕೆ, ಸೃಜನಾತ್ಮಕತೆಯ ಜೊತೆಗೆ ಅವರ ಜೀವನದ ವಿವಿಧ ಮಜಲುಗಳನ್ನು ತಿಳಿಯಬಹುದಾಗಿದೆ. ಪ್ರತಿಯೊಂದು ರಥಶಿಲ್ಪವೂ ಆಕಾರ, ವಿನ್ಯಾಸ ಶೈಲಿಗಳಲ್ಲಿ ಭಿನ್ನಭಿನ್ನವಾಗಿ ರೂಪುಗೊಂಡಿದೆ. ಈ ಭಿನ್ನತೆಗೆ ರಥ ನಿರ್ಮಿಸುವ ಕಲಾವಿದರ ಭಾವನಾತ್ಮಕ ಅಭಿವ್ಯಕ್ತಿಯ ಜೊತೆಗೆ ಆಯಾ ಪ್ರದೇಶದ ಜನಜೀವನ ಆಚಾರ ವಿಚಾರಗಳ ದಟ್ಟ ಪ್ರಭಾವವು ಕಾರಣವಾಗಿರುತ್ತದೆ. ರಥಶಿಲ್ಪಗಳ ಅಧ್ಯಯನದಿಂದ ಇಂತಹ ಅನೇಕ ಪ್ರಾದೇಶಿಕ ವೈಶಿಷ್ಟ್ಯತೆಗಳನ್ನು ತಿಳಿಯಬಹುದಾಗಿದೆ.

ವಿವಿಧ ವಿನ್ಯಾಸಗಳಲ್ಲಿ ಹಾಗೂ ಶೈಲಿಗಳಲ್ಲಿ ಮತ್ತು ವಿವಿಧ ಮಾಧ್ಯಮಗಳಲ್ಲಿ ರಚನೆಗೊಂಡ ರಥಶಿಲ್ಪಗಳು ಕನ್ನಡ ನಾಡಿನ ಹಲವಾರು ದೇವಸ್ಥಾನಗಳಿಗೆ ಹಾಗೂ ಮಠಮಾನ್ಯಗಳಿಗೆ ಸೇರಿದಂತವುಗಳಾಗಿವೆ. ಈ ಎಲ್ಲ ರಥಗಳು ತಮ್ಮಲ್ಲಿ ಅನೇಕ ಶಿಲ್ಪಕಲಾಕೃತಿಗಳನ್ನು ಹಾಗೂ ಚಿತ್ರಕಲೆಯನ್ನು ಮೈಗೂಡಿಸಿಕೊಂಡಿವೆ. ಈ ಎಲ್ಲ ಶಿಲ್ಪಕೃತಿಗಳೂ ಹಾಗೂ ಚಿತ್ರಕೃತಿಗಳು ದಾರ್ಮಿಕ, ಸಾಮಾಜಿಕ, ಐತಿಹಾಸಿಕ ಹೀಗೆ ಅನೇಕ ವಿಷಯಗಳನ್ನಾಧರಿಸಿ ರಚಿತವಾಗಿವೆ. ಇಂಥ ಶಿಲ್ಪಕೃತಿಗಳು ಮತ್ತು ಚಿತ್ರ ಕೃತಿಗಳಲ್ಲಿ ಅನೇಕ ಶಿವಶರಣರ ಶಿಲ್ಪಗಳು, ದೇವಾನುದೇವತೆಯರ ಶಿಲ್ಪಗಳು, ಸಿದ್ಧ ಪುರುಷರ ಶಿಲ್ಪಗಳು, ಪ್ರಾಣಿ ಪಕ್ಷಿಗಳ ಶಿಲ್ಪಗಳು, ನಕ್ಷಾ ಶಿಲ್ಪಗಳು, ಎಲೆಬಳ್ಳಿಯಂತ ವಿನ್ಯಾಸಗಳು, ಮಿಥುನ ಶಿಲ್ಪಗಳು, ಅಷ್ಟದಿಕ್ಪಾಲಕರು, ನವಗ್ರಹಗಳು, ದ್ವಾರಪಾಲಕರು, ರಾಮಾಯಣ, ಮಹಾಭಾರತ, ದಶಾವತಾರ, ಪಂಚತಂತ್ರ ಇಂತಹ ಪೌರಾಣಿಕ ಹಿನ್ನೆಲೆಯ ಶಿಲ್ಪಕೃತಿಗಳು ಹಾಗೂ ಚಿತ್ರಕೃತಿಗಳು ಅಲ್ಲದೆ ಗಂಧರ್ವರು, ಪಂಡಿತೋತ್ತಮರು- ಹೀಗೆ ಅನೇಕ ಶಿಲ್ಪ ಹಾಗೂ ಚಿತ್ರಕೃತಿಗಳನ್ನು ರಥಗಳ ಅಧಿಷ್ಠಾನ ಹಾಗೂ ಮಂಟಪ ಭಾಗಗಳಲ್ಲಿ ಕಾಣಬಹುದು ಈ ಎಲ್ಲ ಶಿಲ್ಪ ಹಾಗೂ ಚಿತ್ರಕೃತಿಗಳನ್ನಾಧರಿಸಿ ನಮ್ಮ ಪೂರ್ವಜರ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮನೋಭಾವವನ್ನು ಅರಿಯುವ ನಿಟ್ಟಿನಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದಲ್ಲದೆ ನಮ್ಮ ಹಿರಿಯರು ಕಲೆಗೆ ಪ್ರೋತ್ಸಾಹ ನೀಡಿರುವದರಿಂದ, ಇಂಥ ಸುಂದರ, ಕಲಾತ್ಮಕ, ಕುಸುರಿ ಕೆತ್ತನೆಯಿಂದ ಕೂಡಿದ ಭವ್ಯ ಹಾಗೂ ದಿವ್ಯ ರಥಗಳು ನಮ್ಮ ಕಣ್ಮನಗಳನ್ನು ಸೆಳೆಯುವುದರಲ್ಲಿ ಯಶಸ್ವಿಯಾಗಿವೆ. ಆದ್ದರಿಂದ ರಥಗಳ ನಿರ್ಮಾಣಕ್ಕೆ, ರಥಶಿಲ್ಪಕಲೆಗೆ ಪ್ರೋತ್ಸಾಹಿಸಿದ ಅನೇಕ ಸಹೃದಯರ ಬಗ್ಗೆಯೂ ವಿವೇಚಿಸುವ ಉದ್ದೇಶವನ್ನು ಹೊಂದಿದೆ.

ಕೆಲವು ರಥಗಳು ಸುಂದರವಾದ ವರ್ಣಚಿತ್ರಗಳಿಂದ ಅಲಂಕಾರಗೊಂಡಿರುತ್ತವೆ. ಅಲ್ಲದೆ ಕೆಲವು ರಥಗಳಿಗೆ ವಿವಿಧ ಬಣ್ಣ ಬಣ್ಣದ ಕಾಗದಗಳಿಂದ, ಬಣ್ಣ ಬಣ್ಣದ ಬಟ್ಟೆಗಳಿಂದ, ಹಸಿರು ತಳಿರು

ತೋರಣಗಳಿಂದ, ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಿ ಇಡೀ ರಥವನ್ನು ವರ್ಣಗಳಿಂದ ಕಂಗೊಳಿಸುವ ಹಾಗೆ ಮಾಡಿರುತ್ತಾರೆ. ಆದ್ದರಿಂದ ಕರ್ನಾಟಕದ ವಿವಿಧೆಡೆ ಕಂಡುಬರುವ ರಥಗಳಲ್ಲಿ ವರ್ಣವಿನ್ಯಾಸವು ಯಾವ ರೀತಿಯಲ್ಲಿ ಮೂಡಿಬಂದಿದೆ ಎಂಬುದರ ಬಗ್ಗೆ ವಿವಿಧ ಮಾಧ್ಯಮದ ರಥಗಳ ಉದಾರಣೆಗಳೊಂದಿಗೆ ವಿವರವಾಗಿ ಅಧ್ಯಯನ ಮಾಡುವ ಉದ್ದೇಶವನ್ನು ಹೊಂದಿದೆ.

ಇದಲ್ಲದೆ ಹಾಲಕ್ಕಿ ಜನರು ರಚಿಸುವ 'ಹಸೆ' ಚಿತ್ರಗಳಲ್ಲಿ ಮೂಡಿ ಬಂದಿರುವ ರಥಗಳು ಕರಾವಳಿ ಭಾಗದ ವಿಶೇಷ ಕಲೆಯಾದ 'ಕಾವಿ' ಭಿತ್ತಿ ಚಿತ್ರಗಳಲ್ಲಿ ಕಂಡುಬರುವ ಸುಂದರವಾದ ರಥಗಳು, ಗ್ರಾಮೀಣ ಹೆಣ್ಣು ಮಕ್ಕಳು ಕಸೂತಿ ಕೆಲಸದಲ್ಲಿ ಉಪಯೋಗಿಸಿಕೊಂಡ ರಥದ ವಿನ್ಯಾಸಗಳು, ಉತ್ತರ ಕರ್ನಾಟಕದ ಗ್ರಾಮೀಣ ಜನರು ಬರೆಯುವ ಬೆಳದಿಂಗಳ ಚಿತ್ರಗಳಲ್ಲಿ ಕಂಡು ಬರುವ ರಥಗಳು, ಅಲ್ಲದೆ ಕೆಲವು ಜಾತ್ರಾ ವಿಶೇಷಗಳಲ್ಲಿ ಬಣ್ಣ ಬಣ್ಣದ ರಂಗೋಲಿಯಿಂದ ಬಿಡಿಸಿದ ರಥದ ಚಿತ್ರಗಳು- ಹೀಗೆ ಹಲವಾರು ಚಿತ್ರ ವಿನ್ಯಾಸಗಳಲ್ಲಿ ವೈವಿಧ್ಯಮಯವಾಗಿ ರೂಪುತಾಳಿರುವ ರಥಶಿಲ್ಪ ಮಾದರಿಯ ಚಿತ್ರಗಳ ಬಗ್ಗೆ ಚರ್ಚಿಸಲಾಗುವುದು.

ಯಾವುದೇ ಒಂದು ಕಲಾ ಪರಂಪರೆ ಬೆಳೆಯಲು ಅದರ ಪೋಷಕರ ಪಾತ್ರ ಮಹತ್ವಪೂರ್ಣವಾಗಿರುತ್ತದೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ವೈಭವಯುತವಾಗಿ ಬೆಳೆದು ಬಂದಿರುವ ರಥಶಿಲ್ಪಕಲೆಯ ಪರಂಪರೆಗೆ ಅದರ ಪೋಷಕರು ಬಹುಮುಖ್ಯ ಕಾರಣರಾಗಿದ್ದಾರೆ. ಭಾರತದಲ್ಲಿ ಸಿಂಧೂ ನಾಗರಿಕತೆಯಿಂದ ಇಂದಿನವರೆಗೂ ಅನೇಕ ರಥಶಿಲ್ಪಗಳಿಗೆ ಪೋಷಣೆಯನ್ನು ಒದಗಿಸಿರುವವರು ರಾಜಮಹಾರಾಜರು, ಸಂಸ್ಥಾನಿಕರು, ಸಾಮಂತರು, ಪುರಪ್ರಮುಖರು ಮಾತ್ರವಲ್ಲದೆ ಸಾಮಾನ್ಯ ಜನರೂ ಸಹಿತ ರಥಶಿಲ್ಪ ಕಲೆಯನ್ನು ಪೋಷಿಸುತ್ತ ಬಂದಿರುವರು.

ಕರ್ನಾಟಕದಲ್ಲಿ ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ದೊರೆಗಳು, ಸೋದೆ ಅರಸರು ಮುಂತಾದವರು ರಥಶಿಲ್ಪಕಲೆಯ ಪೋಷಕರಾಗಿರುವುದು ತಿಳಿದು ಬರುತ್ತದೆ. ಸೋದೆ ಅರಸರಿಂದ ನಿರ್ಮಿತವಾದ ಬನವಾಸಿಯ ರಥ, ಘಂಟೆ ರಾಜವಂಶದಿಂದ ರಚನೆಯಾದ ಬೀಳಗಿಯ ರಥ, ವಿಜಯನಗರದ ಅರಸರಿಂದ ನಿರ್ಮಾಣಗೊಂಡ ಹಂಪೆಯ ಶಿಲೆಯ ರಥ, ಕರ್ನಾಟಕದ ಅನೇಕ ಮಠಮಾನ್ಯಗಳಲ್ಲಿ ಕಂಡುಬರುವ ಹಳೆಯ ರಥಗಳು, ಉಡುಪಿ , ಶೃಂಗೇರಿ ಹಾಗೂ ಧರ್ಮಸ್ಥಳಗಳಲ್ಲಿ ಧರ್ಮದರ್ಶಿಗಳು ಮತ್ತು ಸ್ವಾಮಿಗಳಿಂದ ಪೋಷಣೆಗೊಂಡ ರಥಗಳು- ಹೀಗೆ ಅನೇಕರಿಂದ ರಥಶಿಲ್ಪಗಳು ಪೋಷಣೆಯನ್ನು ಪಡೆದಿರುವ ವಿಷಯವನ್ನು ತಿಳಿಯುವ ಉದ್ದೇಶವನ್ನು ಹೊಂದಿದೆ.

ಯಾವುದೇ ಕಲಾ ಪರಂಪರೆಯಲ್ಲಿ ಅದರ ಪೋಷಕರಂತೆಯೇ ಕೃತಿ ರಚನೆ ಮಾಡುವ ಕಲಾವಿದನಿಗೂ ಅಷ್ಟೇ ಮಹತ್ವವಿದೆ. ರಥ ಶಿಲ್ಪಗಳ ಕಲಾತ್ಮಕತೆ, ಭವ್ಯತೆ, ಅದನ್ನು ನಿರ್ಮಿಸಿದ ಕಲಾವಿದನ ಭಾವನಾತ್ಮಕ ವಿಚಾರವೂ ಬಹು ಮುಖ್ಯವಾಗಿರುತ್ತದೆ.

ಕರ್ನಾಟಕದಲ್ಲಿ ಇಂದಿಗೂ ಶ್ರೇಷ್ಠ ರಥಶಿಲ್ಪಿಗಳಿದ್ದಾರೆ. ಬಾಗಲಕೋಟ ಜಿಲ್ಲೆಯ ಬದಾಮಿ ತಾಲೂಕಿನ ಸುಳ್ಳ ಗ್ರಾಮದ ಮಳಿಯಪ್ಪ ಬಡಿಗೇರ, ಬೆಂಗಳೂರಿನ ಮನೋಹರ ಬಡಿಗೇರ, ಕೊಪ್ಪಳದ ಮಲ್ಲಪ್ಪ ಬಡಿಗೇರ, ಲೋಕಾಪುರದ ಭೀಮರಾವ ಮಾಯಾಚಾರ್ಯ, ದಾವಣಗೆರೆ ಜಿಲ್ಲೆ

ಚನ್ನಗಿರಿ ತಾಲೂಕಿನ ಗೊಪ್ಪೆನ್ಹಳ್ಳಿಯ ಎಂ. ಪರಮೇಶ್ವರಾಚಾರ್ಯ, ಎ. ಚಂದ್ರಾಚಾರ್ಯ, ಮೈಸೂರಿನ ಸಿ. ಪರಮೇಶ್ವರಾಚಾರ್ಯ ಇವರೆಲ್ಲ ಹೆಸರಾಂತ ಕಾಷ್ಠ ರಥಶಿಲ್ಪಿಗಳು. ಅಲ್ಲದೆ ಅನೇಕ ರಥಶಿಲ್ಪಗಳನ್ನು ಲೋಹ ಮಾಧ್ಯಮದಲ್ಲಿ ತಯಾರಿಸಿ, ಅಜರಾಮರರಾದ ಸಿಂಗಣ್ಣಾಚಾರ್ಯ, ಎ. ಚನ್ನಾಚಾರ್ಯ, ಡಿ.ವಿ.ಸುಬ್ಬಣ್ಣಾಚಾರ್ಯ, ರಜತಕಲಾ ಪ್ರವೀಣ ಅಂಕಪ್ಪಾಚಾರ್ಯ ಹೀಗೆ ಅನೇಕ ಸಮಕಾಲೀನ ರಥಶಿಲ್ಪಕಲಾವಿದರ ಬಗ್ಗೆ ಅವರು ತಯಾರಿಸಿದ ರಥಶಿಲ್ಪಗಳ ವಿವರಗಳೊಂದಿಗೆ ಹಾಗೂ ಅವರು ಪಡೆದಿರುವ ಮಾನ, ಸಮ್ಮಾನಗಳು, ಪ್ರಶಸ್ತಿ ಪುರಸ್ಕಾರಗಳು ಮತ್ತು ಪಡೆದಿರುವ ಬಿರುದುಗಳೊಂದಿಗೆ ರಥಶಿಲ್ಪ ಕಲಾವಿದರ ಪರಿಚಯವನ್ನು ಮಾಡಿಕೊಡುವ ಉದ್ದೇಶವನ್ನು ಹೊಂದಿದೆ.

ವ್ಯಕ್ತಿ, ಸಂಸ್ಥೆ, ಸಮಾಜದ ಸಾಂಸ್ಕೃತಿಕ ಬುತ್ತಿಯಾಗಿರುವ ರಥಶಿಲ್ಪಗಳು ಹಾಳಾಗದಂತೆ ಉಳಿಸಿಕೊಳ್ಳುವುದು. ಇಂದು ತೀರಾ ಅಗತ್ಯವಾಗಿದೆ. ಅನೇಕ ರಥಶಿಲ್ಪಗಳು ಕಾಲ ಕಳೆದಂತೆ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಹಾಳಾಗುತ್ತ ಸಾಗುತ್ತಿದೆ. ಇದಕ್ಕೆ ಕಾಲಮಾನದ ಪ್ರಭಾವಕ್ಕಿಂತ ನಾವು ಅವುಗಳ ರಕ್ಷಣೆಯ ಬಗ್ಗೆ ಹೆಚ್ಚು ಗಮನ ಹರಿಸದೇ ಇರುವುದು ಬಹುಮುಖ್ಯ ಕಾರಣವಾಗಿದೆ.

ಜಾತ್ರೆ ಉತ್ಸವಗಳ ಅವಿಭಾಜ್ಯ ಅಂಗವಾಗಿರುವ ರಥಶಿಲ್ಪಗಳು, ಉತ್ಸವದ ಸಮಯದಲ್ಲಿ ಓರಣವಾಗಿ ಸಿಂಗರಿಸಲ್ಪಟ್ಟು, ಉತ್ಸವದ ನಂತರ ಅವುಗಳನ್ನು ನಿರ್ಲಕ್ಷಿಸಿ ದೇವಾಲಯದ ಹಿಂಭಾಗದ ಒಂದು ಮೂಲೆಯಲ್ಲಿಯೋ ಅಥವಾ ಸನಿಹದ ಬಯಲಿನಲ್ಲಿಯೋ ನಿಲ್ಲಿಸಿ, ಅದಕ್ಕೆ ತೆಂಗಿನ ಗರಿಗಳನ್ನು ಹೊಂದಿಸುವುದು, ಪ್ಲಾಸ್ಟಿಕ್ ಹಾಳೆಗಳಿಂದ ಮುಚ್ಚುವುದು, ಇಲ್ಲವೆ ತಗಡುಗಳಿಂದ ಮರೆ ಮಾಡುವಂತಹ ತಾತ್ಪೂರ್ತಿಕ ಕ್ರಮಗಳು ರಥಶಿಲ್ಪ ರಕ್ಷಣೆಯಲ್ಲಿ ನಾವು ತೋರುವ ನಿರ್ಲಕ್ಷ್ಯದ ಪ್ರತೀಕಗಳಾಗಿವೆ. ಉದಾಹರಣೆಗೆ :- ಸೋದೆ ಅರಸರ ಕಾಲದಲ್ಲಿ ರಚಿತವಾದ ಬನವಾಸಿಯ ರಥವು ಸಧ್ಯದಲ್ಲಿ ಶಿಥಿಲಾವಸ್ಥೆಯಲ್ಲಿದೆ. ಬೀಳಗಿ ಸಂಸ್ಥಾನಿಕರ ಕಾಲದ ಸೀತಾರಾಮಚಂದ್ರ ದೇವಾಲಯದ ಮುಂದಿರುವ ರಥ ಹಾಳಾಗುವ ಸ್ಥಿತಿಯಲ್ಲಿದೆ. ಬಾದಾಮಿ ಬನಶಂಕರಿ ದೇವಸ್ಥಾನಕ್ಕೆ ಸಂಬಂಧಿಸಿದ, ಬಯಲಿನಲ್ಲಿ ಗಾಳಿ, ಬಿಸಿಲು, ಮಳೆಗಳಿಗೆ ಮೈಯೊಡ್ಡಿ ನಿಂತಿರುವ ರಥದ ಎಲ್ಲ ಕಲಾತ್ಮಕ ಶಿಲ್ಪ ವಿನ್ಯಾಸಗಳು ಎಣ್ಣೆ ಹಾಗೂ ಧೂಳಿನಿಂದ ಸಂಪೂರ್ಣವಾಗಿ ಮುಚ್ಚಿಹೋಗಿವೆ. ಗುಲಬರ್ಗಾ ಜಿಲ್ಲೆಯ ಅನೇಕ ಲೋಹದ ರಥಗಳು ಯಾವುದೇ ಆಸರೆ ಇಲ್ಲದೆ ಪ್ರಕೃತಿಗೆ ಮೈಯೊಡ್ಡಿ ನಿಂತಿವೆ.

ಹೀಗೆ ಕರ್ನಾಟಕದುದ್ದಕ್ಕೂ ಅನೇಕ ರಥಗಳು ನಾಶದ ಅಂಚಿನಲ್ಲಿರುವುದು ಕಂಡುಬರುತ್ತದೆ. ಆದ್ದರಿಂದ ನಮ್ಮ ಪೂರ್ವಜರ ರಥಶಿಲ್ಪಗಳ ಸಂರಕ್ಷಣೆಗೆ ರಕ್ಷಣೆ ಒದಗಿಸುವ ವಿಧಾನಗಳನ್ನು ಚರ್ಚಿಸುತ್ತಾ, ಆಧುನಿಕ ವಿಧಾನಗಳಿಂದ ರಥಶಿಲ್ಪಗಳನ್ನು ಹೆಚ್ಚುಕಾಲ ಉಳಿಸಿಕೊಳ್ಳುವ ಬಗೆಗಿರುವ ವಿಧಿವಿಧಾನಗಳನ್ನೂ ಸಹ ಈ ಅಧ್ಯಯನದಿಂದ ತಿಳಿದುಕೊಳ್ಳುವ ಉದ್ದೇಶವಾಗಿದೆ.

ರಥಗಳ ಅಧ್ಯಯನದಿಂದ ಅವುಗಳ ಕಲಾತ್ಮಕತೆಯನ್ನು ಕಂಡುಕೊಳ್ಳುವುದರ ಜೊತೆಗೆ ರಥೋತ್ಸವದ ಸಂದರ್ಭದಲ್ಲಿ ನಡೆಯುವ ವಿಧಿವತ್ತಾದ ಆಚರಣೆ ಕ್ರಿಯಾದಿಗಳ ಮುಖಾಂತರ ಆ ಭಾಗದ ಜನರ ಸಾಂಸ್ಕೃತಿಕ ಬದುಕನ್ನು ತಿಳಿದುಕೊಳ್ಳಬಹುದಾಗಿದೆ.

ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದು ಬಂದ ರಥಶಿಲ್ಪಗಳು ಅನೇಕ ಕಲೆಗಳಿಗೆ, ಜನಪದ

ಹಾಡುಗಾರರಿಗೆ ಹಾಗೂ ಕೆಲವು ಹಬ್ಬ ಹರಿದಿನಗಳಲ್ಲಿ ಗ್ರಾಮೀಣ ಹೆಣ್ಣುಮಕ್ಕಳಿಗೆ ಯಾವ ರೀತಿಯಲ್ಲಿ ಪ್ರಭಾವ ಬೀರಿರುವವು ಎಂಬುವುದರ ಬಗ್ಗೆ ತಿಳಿಯಲು ಪ್ರಯತ್ನಿಸಬಹುದಾಗಿದೆ.

ಭಾರತದಲ್ಲಿ ಅನೇಕ ಸುಂದರವಾದ ದೇವಾಲಯಗಳನ್ನು ಕಾಣಬಹುದು ಈ ದೇವಾಲಯಗಳನ್ನು ನಿರ್ಮಿಸಲು ವಾಸ್ತುಶಾಸ್ತ್ರವು ಆಧಾರವಾಗಿರುತ್ತದೆ. ಆದರಂತೆಯೇ ರಥಶಿಲ್ಪಗಳೂ ಕೂಡ ವಾಸ್ತುಶಾಸ್ತ್ರವನ್ನು ಅಳವಡಿಸಿಕೊಂಡೇ ನಿರ್ಮಾಣಗೊಂಡಿವೆ. ದಾಸರು, ಶರಣರು ಹಾಗೂ ಅನೇಕ ಅನುಭಾವಿಗಳು ದೇಹಕ್ಕೂ, ದೇವಾಲಯಕ್ಕೂ ಹಾಗೂ ರಥಗಳಿಗೂ ಸಂಬಂಧಿಸಿದ ಅನೇಕ ಆಧ್ಯಾತ್ಮಿಕ ವಿಚಾರಗಳನ್ನು ಹೇಳಿರುವರು. ವೇದ ಸಾಹಿತ್ಯದಲ್ಲಿ ದೇಹವನ್ನು ದೇವಾಲಯವೆಂದು ಹೇಳಿರುವ ಉಲ್ಲೇಖವಿದೆ. ಆದರೆ ರಥಶಿಲ್ಪಗಳು ದೇವಾಲಯದ ಮಾದರಿಯಲ್ಲೇ ನಿರ್ಮಾಣಗೊಳ್ಳುತ್ತವೆ. ಅಂದರೆ ಇಲ್ಲಿ ದೇಹ, ದೇವಾಲಯ ಹಾಗೂ ರಥಗಳಿಗೂ ಸಂಬಂಧವಿರುವುದನ್ನು ತಿಳಿಯುವ ಪ್ರಯತ್ನವನ್ನು ಮಾಡುವ ಉದ್ದೇಶವನ್ನು ಹೊಂದಿದೆ.

ರಥೋತ್ಸವಗಳಲ್ಲಿ ಪ್ರಾದೇಶಿಕವಾಗಿ ಬೇರೆ ಬೇರೆ ಪೂಜಾ ವಿಧಿ-ವಿಧಾನಗಳು ಕಂಡುಬರುತ್ತವೆ. ಕೆಲವು ರಥೋತ್ಸವಗಳು ಮುಂಜಾನೆಯ ಸಮಯದಲ್ಲಿ ಜರುಗಿದರೆ, ಇನ್ನೂ ಕೆಲವು ರಥಗಳು ಗೋಧೂಳಿಯ ಸಮಯದಲ್ಲಿ ನಡೆಯುವವು. ಅಲ್ಲದೆ ಕೆಲವು ಪ್ರದೇಶಗಳಲ್ಲಿ ರಾತ್ರಿ ಸಮಯದಲ್ಲಿ ರಥೋತ್ಸವಗಳು ಜರುಗುತ್ತವೆ. ಹೀಗೆ ನಾಡಿನಾದ್ಯಂತ ನಡೆಯುವ ರಥೋತ್ಸವಗಳನ್ನು ಹೆಸರಿಸುತ್ತ ,ಆಯಾ ಪ್ರದೇಶದ ರಥೋತ್ಸವಗಳ ವಿಧಿ-ವಿಧಾನಗಳನ್ನು ತಿಳಿಯುವ ಉದ್ದೇಶವನ್ನು ಹೊಂದಿದೆ.

ರಥೋತ್ಸವಗಳು ಜರುಗುವ ಮುನ್ನ ಕೆಲವು ಪ್ರದೇಶಗಳಲ್ಲಿ ಆಯಾ ದೇವಾಲಯದ ಸಂಪ್ರದಾಯಕ್ಕೆ ಅನುಗುಣವಾಗಿ ವಾಹನೋತ್ಸವ ಅಥವಾ ಉಚ್ಚಾಯದ ಮೆರವಣಿಗೆಗಳು ನಡೆಯುತ್ತದೆ. ನಂದಿ, ಸಿಂಹ, ಶರಭ, ಮೇಷ, ಗಜ ಹೀಗೆ ಮುಂತಾದ ಪ್ರಾಣಿ ಶಿಲ್ಪಗಳನ್ನು, ಪ್ರಭಾವಳಿಯನ್ನು ಹೊಂದಿದ, ಹೂವಿನ ಅಲಂಕಾರವನ್ನು ಮಾಡಿದ ವಾಹನಗಳಲ್ಲಿಟ್ಟು ವಿವಿಧ ಮೇಳಗಳ ಜೊತೆಯಲ್ಲಿ ಮೆರವಣಿಗೆ ಮಾಡುವರು. ಇನ್ನು ಕೆಲವು ಪ್ರದೇಶದ ರಥೋತ್ಸವಗಳಲ್ಲಿ, ಕಟ್ಟುವ ರಥದಂತೆ ಅಥವಾ ಗಡ್ಡೆಯ ರಥದಂತೆಯೇ ವಿನ್ಯಾಸವನ್ನುಹೊಂದಿದ ಉಚ್ಚಾಯದಲ್ಲಿ. ದೇವತಾ ಮೂರ್ತಿಗಳನ್ನು ಅಥವಾ ಚಿತ್ರಗಳನ್ನು ಪ್ರತಿಷ್ಠಾಪಿಸಿ, ಉಚ್ಚಾಯವನ್ನು ಎಲ್ಲ ಗ್ರಾಮಸ್ಥರೂ ಕೂಡಿ ಎಳೆಯುವರು. ಈ ರೀತಿ ಮಾಡುವುದರಿಂದ ಜಾತ್ರೆಯ ವಾತಾವರಣ ನಿರ್ಮಾಣಗೊಳ್ಳುತ್ತದೆ ಎಂದು ತಿಳಿದು ಬರುತ್ತದೆ. ಇಂಥಹ ರಥೋತ್ಸವದ ಸಂಧರ್ಭದಲ್ಲಿ ಜರುಗುವ ಅನೇಕ ರೀತಿಯ ಮೆರವಣಿಗೆಗಳು ಹಾಗೂ ಅವುಗಳ ಪೂಜಾ ವಿಧಿವಿಧಾನಗಳ ಬಗ್ಗೆಯೂ ಚರ್ಚಿಸಲಾಗುವುದು.

ರಥೋತ್ಸವಗಳಿಗೆ ಮುನ್ನ ಎಳೆಯುವ ಈ ಉಚ್ಚಾಯಗಳಲ್ಲಿ ಅನೇಕ ಸುಂದರವಾದ ಪ್ರಾಣಿಶಿಲ್ಪಗಳು, ಶಿವ ಶರಣರ ಶಿಲ್ಪಗಳು, ದೇವತಾ ಶಿಲ್ಪಗಳು ಹಾಗೂ ಅನೇಕ ಹೂ ಬಳ್ಳಿಯಂತಹ ನಕ್ಷಾ ವಿನ್ಯಾಸಗಳನ್ನು ಕಾಣಬಹುದು. ಇದಲ್ಲದೆ ಕೆಲವು ಉಚ್ಚಾಯಗಳಲ್ಲಿ ಬಣ್ಣ ಬಣ್ಣದ ಕಾಗದಗಳು, ಬಟ್ಟೆಗಳು ಹಾಗೂ ವಿವಿಧ ವರ್ಣಗಳಿಂದ ರಚಿಸಿದಂತಹ ವರ್ಣಚಿತ್ರಗಳು ಕಂಡುಬರುವವು. ಆದ್ದರಿಂದ ಉಚ್ಚಾಯಗಳಲ್ಲಿ ಕಂಡುಬರುವಂತಹ ಶಿಲ್ಪಕಲಾಕೃತಿಗಳ ಬಗ್ಗೆ ಹಾಗೂ ಅವುಗಳಲ್ಲಿ ಕಾಣುವಂತಹ ವರ್ಣವಿನ್ಯಾಸದ ಬಗ್ಗೆ ತಿಳಿಯುವ ಹಾಗೂ ವಿವಿಧ ಪ್ರದೇಶಗಳಲ್ಲಿಯ ವ್ಯತ್ಯಾಸಗಳನ್ನು

ಮತ್ತು ಸಾಮ್ಯಗಳನ್ನು ಕಂಡುಕೊಳ್ಳುವ ಉದ್ದೇಶವನ್ನು ಹೊಂದಿದೆ. ಇದರೊಂದಿಗೆ ಉಚ್ಚಾಯಗಳ ರಚನಾ ವಿಧಾನಗಳನ್ನೂ ತಿಳಿಯಬಹುದಾಗಿದೆ.

ಕರ್ನಾಟಕವನ್ನು ಉತ್ತರ ಕರ್ನಾಟಕ ಹಾಗೂ ದಕ್ಷಿಣ ಕರ್ನಾಟಕವೆಂದು ಎರಡು ಭಾಗಗಳನ್ನಾಗಿ ವಿಂಗಡಿಸಬಹುದು. ಉತ್ತರ ಕರ್ನಾಟಕದಲ್ಲಿ ಹೈದರಾಬಾದ್ ಕರ್ನಾಟಕ ಹಾಗೂ ಮುಂಬೈ ಕರ್ನಾಟಕವೆಂದೂ ವಿಂಗಡಿಸಬಹುದು. ನಾಡಿನಾದ್ಯಂತ ಈ ಎಲ್ಲ ಭಾಗಗಳಲ್ಲಿ ಅನೇಕ ರಥಶಿಲ್ಪಗಳನ್ನು ಕಾಣಬಹುದು. ಈ ಅಧ್ಯಯನದಲ್ಲಿ ಕರ್ನಾಟಕದ ಎಲ್ಲ ಭಾಗಗಳಲ್ಲಿ ಕಂಡು ಬರುವಂತಹ ಕಲಾತ್ಮಕ ಹಾಗೂ ಸುಂದರವಾದ ಪ್ರಮುಖ ರಥಗಳನ್ನು ಅಧ್ಯಯನಕ್ಕೊಳಪಡಿಸಿಕೊಂಡು, ಅಧ್ಯಯನದ ಇತಿಮಿತಿಗೆ ಅನುಗುಣವಾಗಿ ಉತ್ತರ ಕರ್ನಾಟಕದ ಹನ್ನೆರಡು ಜಿಲ್ಲೆಗಳಲ್ಲಿ ಕಂಡುಬರುವ ಸುಂದರವಾದ ರಥಶಿಲ್ಪಗಳ ಬಗೆಗೆ ಹೆಚ್ಚಿಗೆ ಗಮನ ಹರಿಸುವ ಉದ್ದೇಶವನ್ನು ಹೊಂದಿದೆ.

ಚಿತ್ರಕಲಾ ಕ್ಷೇತ್ರದಲ್ಲಿ ಇಲ್ಲಿವರೆಗೆ ನಡೆದ ಅಧ್ಯಯನಗಳು :

ಕರ್ನಾಟಕದ ಸಂರ್ಭದ ಚಿತ್ರಕಲಾ ಕ್ಷೇತ್ರದಲ್ಲಿ ಹೆಚ್ಚಿನ ಸಂಶೋಧನಾ ಅಧ್ಯನಗಳು ನಡೆದಿಲ್ಲವೆಂದೇ ಹೇಳಬಹುದಾಗಿದೆ. ಏಕೆಂದರೆ ವಿಶ್ವವಿದ್ಯಾಲಯ ಮಟ್ಟದಲ್ಲಿ ಚಿತ್ರಕಲೆಗಳ ಕುರಿತಾದ ಅಧ್ಯಯನಕ್ಕೆ ಅವಕಾಶ ದೊರಕಿದ್ದು ತೀರ ಇತ್ತೀಚೆಗಷ್ಟೆ. ನಂತರದಲ್ಲಿ ಅಧ್ಯನಗಳೂ ೬೦ ರ ದಶಕದಲ್ಲಿ ತೀವ್ರಗೊಂಡು ಈಗ ಪ್ರೌಢಾವಸ್ಥೆಗೆ ಬಂದು ತಲುಪಿದೆ. ೧೯೮೦ರ ದಶಕದಿಂದ ಕರ್ನಾಟಕದಲ್ಲಿ ನಡೆದ ಚಿತ್ರಕಲಾ ಅಧ್ಯಯನಗಳ ವಿವರವನ್ನು ಈ ಕೆಳಗೆ ಕೊಡಲಾಗಿದೆ.

೧೯೮೦ ರ ದಶಕದಿಂದ ಕರ್ನಾಟಕದ ದೃಶ್ಯಕಲಾ ಕ್ಷೇತ್ರದಲ್ಲಿ ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮಟ್ಟದಲ್ಲಿ ಚಿತ್ರಕಲೆ ಕುರಿತು ಸಂಶೋಧನಾತ್ಮಕ ಅಧ್ಯಯನಗಳು ಪ್ರಾರಂಭಗೊಂಡಿರುವುದು ಕಂಡುಬರುತ್ತದೆ. ಡಾ. ಎಸ್.ಸಿ. ಪಾಟೀಲರು ೧೯೮೩ ರಲ್ಲಿ ಕರ್ನಾಟಕ ವಿ.ವಿ.ಯ ಸ್ನಾತಕೋತ್ತರ ಶಿಕ್ಷಣ ವಿಭಾಗಕ್ಕೆ ಮಂಡಿಸಿದ **ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ ಒಂದು ಅಧ್ಯಯನ**[೧೪] ಎಂಬ ಸಂಶೋಧನ ಕಿರುಪ್ರಬಂಧದಲ್ಲಿ ಈ ಕ್ಷೇತ್ರದ ಪ್ರಥಮ ಅಧ್ಯಯನದ ಕಾರ್ಯವೆಂದು ದಾಖಲಾಗಿದೆ. ೧೯೮೭ ರಲ್ಲಿ ಡಾ.ಬಿ.ಕೆ: ಹಿರೇಮಠರವರು **ಕನ್ನಡ ಹಸ್ತಪ್ರತಿಗಳು ಒಂದು ಅಧ್ಯಯನ**[೧೫] ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ಹಸ್ತಪ್ರತಿ ಚಿತ್ರಕಲೆ ಕುರಿತಂತೆ ಕೆಲವು ಅಧ್ಯಾಯಗಳು ಮೀಸಲಾಗಿವೆ. ಇದರ ನಂತರ ೧೯೯೧ ರಲ್ಲಿ ಕರ್ನಾಟಕದಲ್ಲಿ ಜನಪದ ಚಿತ್ರಕಲೆಯನ್ನೇ ಸಂಶೋಧನೆಯ ಮುಖ್ಯ ವಿಷಯವನ್ನಾಗಿಟ್ಟುಕೊಂಡು ಕರ್ನಾಟಕ ವಿ.ವಿ.ಗೆ ಮಂಡಿಸಿದ ಪಿಹೆಚ್.ಡಿ. ಮಹಾಪ್ರಬಂಧ **ಕರ್ನಾಟಕದ ಜನಪದ ಚಿತ್ರಕಲೆ**[೧೬] ಈ ಮಹಾಪ್ರಬಂಧವನ್ನು ಡಾ. ಎಸ್.ಸಿ. ಪಾಟೀಲರು ಸಿದ್ಧಪಡಿಸಿದ್ದು ನಮ್ಮ ದೃಶ್ಯಕಲಾ ಕ್ಷೇತ್ರದ ಮೊದಲ ಅಧ್ಯಯನ ಎಂಬ ಅಗ್ಗಳಿಕೆಗೆ ಪಾತ್ರವಾಗಿದೆ. ನಂತರದ ದಿನಗಳಲ್ಲಿ ೧೯೯೫ ರಲ್ಲಿ ಡಾ.ಅ.ಲ. ನರಸಿಂಹನ್ ಅವರು ಬೆಂಗಳೂರು ವಿ.ವಿ. ಮಂಡಿಸಿದ ಪಿಎಚ್.ಡಿ. ಮಹಾಪ್ರಬಂಧ ಕರ್ನಾಟಕದ

೧೪. ಡಾ. ಎಸ್.ಸಿ. ಪಾಡೀಲ, ಮಾಧ್ಯಮಿಕ ಶಾಲಾ ಶಿಕ್ಷಣದಲ್ಲಿ ಚಿತ್ರಕಲಾ ಶಿಕ್ಷಣ, ಕರ್ನಾಟಕ ವಿ.ವಿ., ೧೯೮೩.
೧೫. ಡಾ. ಬಿ.ಕೆ. ಹಿರೇಮಠ, ಕನ್ನಡ ಹಸ್ತ ಪ್ರತಿಗಳು, ಪಿಹೆಚ್.ಡಿ. ಮ.ಪ್ರ. ಕರ್ನಾಟಕ ವಿ.ವಿ., ೧೯೮೭.
೧೬. ಡಾ. ಎಸ್.ಸಿ. ಪಾಟೀಲ, ಕರ್ನಾಟಕದ ಜನಪದ ಚಿತ್ರಕಲೆ, ಪಿಹೆಚ್.ಡಿ., ಮ.ಪ್ರ., ೧೯೯೧.

ಚಿತ್ರಕಲೆಯಲ್ಲಿ ಸಂಸ್ಕೃತಿಕ ಅಂಶಗಳು,[17] ೧೯೯೭ ರಲ್ಲಿ ಡಾ. ಸಂಪದಾ ಭಟ್ ಅವರ **ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು,**[18] ಬೆಂಗಳೂರು ವಿಶ್ವವಿದ್ಯಾಲಯಕ್ಕೆ ೧೯೯೭ ರಲ್ಲಿ ಡಾ. ಪುಷ್ಪಾದ್ರಾವಿಡ ಇವರು ಮಂಡಿಸಿದ ಅನಿವಾಸಿ ಭಾರತೀಯ ಕಲಾವಿದ **ದಿ.ಲ ನಿಕೋಲಸ್ ರೋರಿಕ್ ಜೀವನ ಮತ್ತು ಕಲಾಕೃತಿಗಳು,**[19] ೨೦೦೧ ರಲ್ಲಿ ಡಾ. ಯಾದಪ್ಪ ಪರದೇಶಿಯವರ **ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಒಂದು ಅಧ್ಯಯನ,**[20] ೨೦೦೨ ರಲ್ಲಿ ಡಾ. ಶಿವಾನಂದ ಬಂಟನೂರು ಇವರ **ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ,**[21] ೨೦೦೨ ರಲ್ಲಿ **ಡಾ.ಗಿರೀಶ** ಅವರು **ಬುಡಕಟ್ಟು ಚತ್ರಕಲೆ,**[22] ೨೦೦೨ ರಲ್ಲಿ ಡಾ.ಲಕ್ಷ್ಮೀದೇವಿಗವಾಯಿಯವರ **ಕಲಾವಿದ ಎಂ. ಎ. ಚಿಟ್ಟಿಯವರ ಜೀವನ, ಕಲಾಕೃತಿಗಳು- ಒಂದು ಅಧ್ಯಯನ,**[23] ೨೦೦೨ ರಲ್ಲಿ ಶರಣಪ್ಪ ಕೋಲ್ಕಾರ ಅವರ **ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸಿಕ ಕಾಲದ ಕಲೆ,**[24] ೨೦೦೨ ರಲ್ಲಿ ಡಾ.ಸೌಮ್ಯ ಅವರ **ಯಂತ್ರಾದಿ ವಿಜುವಲ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್‌ಟು ಕಾಂಟೆಂಪರರಿ ತಾಂತ್ರಿಕಾ ಆರ್ಟಿಸ್ಟ್**[25] ೨೦೦೨ ರಲ್ಲಿ ಡಾ. ಪ್ರಮೀಳಾ ಲೋಚನ ಅವರ **ಮೈಂಡ್ ಮ್ಯೂಜಿಕ್ ಅಂಡ್ ಕಲರ್ ಎಕ್ಸಪೋಜಿಸ್ ಅಂಡ್ ಡೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್**[26] ೨೦೦೩ ರಲ್ಲಿ ಡಾ.ವೀಣಾ ಶೇಖರ್ ಮಂಡಿಸಿದ **ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ** (೧೭೮೦-೧೮೭೦),[27] ೨೦೦೩ ರಲ್ಲಿ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ ಅವರ **ಕಲಾವಿದ ಆರ್.ಎಮ್. ಹಡಪದ, ಒಂದು ಅಧ್ಯಯನ,**[28] ೨೦೦೩ ರಲ್ಲಿ ಡಾ. ಎಸ್.ಸಿ. ಪಾಟೀಲರು ಕರ್ನಾಟಕ ವಿ.ವಿಗೆ ಮಂಡಿಸಿದ **ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ್**

---

೧೭. ಡಾ. ಅ.ಲ. ನರಸಿಂಹನ್, ಕಾರ್ನಟಕದ ಚಿತ್ರಕಲೆಯಲ್ಲಿ ಸಾಂಸ್ಕೃತಿಕ ಅಂಶಗಳು, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ. ೧೯೯೮

೧೮. ಡಾ. ಸಂಪದಾ ಭಟ್, ಹಿಂದೂಸ್ಥಾನಿ ಸಂಗೀತ ಹಾಗೂ ರಾಗಮಾಲ ಚಿತ್ರಗಳು, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ. ೧೯೯೮

೧೯. ಡಾ. ಪುಷ್ಪಾದ್ರಾವಿಡ, ಅನಿವಾಸಿ ಭಾರತೀಯ ಕಲಾವಿದ ದಿ. ನಿಕೋಲಸ್ ರೋರಿಕ ಜೀವನ ಮತ್ತು ಕಲಾಕೃತಿಗಳು, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿವಿ., ೧೯೯೭

೨೦. ಡಾ. ಯಾದಪ್ಪ ಪರದೇಶಿ, ಉತ್ತರ ಕರ್ನಾಟಕದ ಭಿತ್ತಿ ಚಿತ್ರಕಲೆ, ಒಂದು ಅಧ್ಯಯನ, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ. ೨೦೦೦

೨೧. ೨೦೦೨ ರಲ್ಲಿ ಡಾ. ಶಿವಾನಂದ ಬಂಟನೂರು, ಕರ್ನಾಟಕದ ಜನಪದ ಶಿಲ್ಪಕಲೆ, ಒಂದು ಅಧ್ಯಯನ, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ. ೨೦೦೨

೨೨. ಡಾ.ಗಿರೀಶ ಬುಡಕಟ್ಟು ಚಿತ್ರಕಲೆ, ಪಿಹೆಚ್.ಡಿ. ಮ.ಪ್ರ., ಕನ್ನಡ ವಿ.ವಿ. ೨೦೦೨

೨೩. ಡಾ.ಲಕ್ಷ್ಮೀದೇವಿ ಗವಾಯಿ, ಕಲಾವಿದ ಎಂ.ಎ.ಚಿಟ್ಟಿಯವರ ಜೀವನ, ಕಲಾಕೃತಿಗಳು- ಒಂದು ಅಧ್ಯಯನ, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ. ೨೦೦೨

೨೪. ಡಾ. ಶರಣಪ್ಪ ಕೋಲ್ಕಾರ ಅವರ ಕೊಪ್ಪಳ-ಹಂಪಿ ಪ್ರದೇಶದ ಪ್ರಾಗಿತಿಹಾಸಿಕ ಕಾಲದ ಕಲೆ, ಪಿಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ. ೨೦೦೨

೨೫. ಡಾ.ಸೌಮ್ಯ, ಯಂತ್ರಾ ದಿ ಯುಜುಮ್ ಆಫ್ ಶಂಕರಾ ಫಿಲಾಸಫಿ ವಿತ್ ರೆಫೆರೆನ್ಸ್‌ಟು ಕಾಂಟೆಂಪರರಿ ತಾಂತ್ರಿಕಾ ಆರ್ಟಿಸ್ಟ, ಹಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ. ೨೦೦೨

೨೬. ಡಾ. ಪ್ರಮೀಳಾ ಲೋಚನ, ಮೈಂಡ್ ಮ್ಯೂಜಿಕ್ ಅಂಡು ಕಲರ್ ಎಕ್ಷಪೋಜಿಸ್ ಅಂಡ್ ದೆವೆಲಪ್ಮೆಂಟ್ ಆಫ್ ರಾಗಮಾಲಾ ಅಂಡ್ ಕಾಂಟೆಂಪರರಿ ಪೇಂಟಿಂಗ್, ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ. ೨೦೦೨

೨೭. ಡಾ. ವೀಣಾ ಶೇಕರ್, ಎ ಸ್ಟಡಿ ಆಫ್ ಹಿಸ್ಟಾರಿಕಲ್ ಪೇಂಟಿಂಗ್ ಆಫ್ ಕರ್ನಾಟಕ (೧೭೮೦-೧೮೭೦), ಪಿಹೆಚ್.ಡಿ., ಮ.ಪ್ರ., ಬೆಂಗಳೂರು ವಿ.ವಿ., ೨೦೦೩

೨೮. ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ, ಕಲಾವಿದ ಆರ್.ಎಮ್. ಹಡಪದ, ಒಂದು ಅಧ್ಯಯನ, ಪಿಹೆಚ್.ಡಿ. , ಮ.ಪ್ರ., ಕನ್ನಡ ವಿ.ವಿ. ೨೦೦೩

ಎಜ್ಯುಕೇಶನ್ ಆಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರೆಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ,[೨೯] ೨೦೦೪ ರಲ್ಲಿ ಡಾ.ವಿ.ಎಮ್. ಬಾಗಾಯತ್ ಅವರ **ಕರ್ನಾಟಕ ಮುಸ್ಲಿಂ ಅರಸರ ಕಲಾದ ಚಿತ್ರಕಲೆ, ಒಂದು ಅಧ್ಯಯನ** (೧೪೦೦-೧೮೦೦),[೩೦] ೨೦೦೪ ರಲ್ಲಿ ಡಾ. ಶಿವಕುಮಾರ ಎ.ಓ. ಅವರ **ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮುಗಳು**[೩೧] ಕುರಿತ ಪ್ರಬಂಧಗಳು, ೨೦೦೨ ರಲ್ಲಿ ಮಲ್ಲಿಕಾರ್ಜುನ ಬಾಗೋಡಿಯವರ ಎಂ.ಫಿಲ್. ಪದವಿಗಾಗಿ ಮಂಡಿಸಿದ **ಚಿತ್ರಕಲಾವಿದ ಜೆ. ಎಸ್. ಖಂಡೇರಾವ-ಒಂದು ಅಧ್ಯಯನ,**[೩೨] ಮತ್ತು ೨೦೦೩ರಲ್ಲಿ ಎ.ಎಸ್.ವಿಶ್ವನಾಥ ಅವರ **ಯಕ್ಷಗಾನ ದೃಶ್ಯಕಲೆಯ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ,**[೩೩] ಕರ್ನಾಟಕ ದೃಶ್ಯಕಲೆಯ ಕುರಿತಾಗಿ ಬಂದ ಸಂಶೋಧನಾ ಅಧ್ಯಯನಗಳಾಗಿದ್ದು, ಈಗ ಗುಲ್ಬರ್ಗಾ, ಬೆಂಗಳೂರು, ಕರ್ನಾಟಕ ವಿ.ವಿ. ಮತ್ತು ಕನ್ನಡ ವಿ.ವಿ.ಗಳಲ್ಲಿ ಪಿಹೆಚ್.ಡಿ. ಅಧ್ಯಯನಕ್ಕೆ ಹಲವಾರು ವಿದ್ಯಾರ್ಥಿಗಳು ಸೇರ್ಪಡೆಯಾಗಿ ಅಧ್ಯಯನ ನಿರತರಾಗಿದ್ದಾರೆ. ಇದಲ್ಲದೇ ಅನೇಕ ಬಿ.ಎಫ್.ಎ. ಪದವಿ ಹಾಗೂ ಎಮ್.ವಿ.ಎ. ಪದವಿ, ಎಮ್.ಎಫ್.ಎ. ಪದವಿ ತರಗತಿಗಳಿಗೆ ಅಧ್ಯಯನದ ಭಾಗವಾಗಿ ಕಿರು ಸಂಶೋಧನಾ ಪ್ರಬಂಧಗಳು ರಚನೆಯಾಗಿದ್ದು ಅವುಗಳ ಸಂಖ್ಯೆ ನೂರೈವತ್ತಕ್ಕೂ ಮಿಕ್ಕಿದೆ. ಹೀಗೆ ಈ ಕ್ಷೇತ್ರದಲ್ಲಿ ಸಂಶೋಧನೆ ತೀವ್ರವಾಗಿ ಮುನ್ನೆಡೆಯುತ್ತಲಿದೆ.

ರಥ ಶಿಲ್ಪಕಲೆಯ ಬಗೆಗೆ ನಡೆದಿರುವ ಅಧ್ಯಯನ ಸಮೀಕ್ಷೆ :

ಕರ್ನಾಟಕದ ರಥಶಿಲ್ಪ ಕಲೆ ಕುರಿತು ಸಮಗ್ರ ಅಧ್ಯಯನಗಳು ನಡೆದಿಲ್ಲ ವಾದರೂ ಅಲ್ಲಲ್ಲಿ ಕೆಲವು ಪುಸ್ತಕಗಳು ಹಾಗು ಲೇಖನಗಳು ಪ್ರಕಟವಾಗಿರುವುದು ಸಮಾಧಾನಕರ ಎನ್ನಬಹುದು. ಕಲಾತ್ಮಕ ಹಾಗೂ ಸಾಂಪ್ರದಾಯಿಕ ಶಿಲ್ಪಕಲೆಯನ್ನು ಬೆಳೆಸಿ ಉಳಿಸಿಕೊಂಡು ಬಂದತಃ ಈ ರಥಶಿಲ್ಪಗಳ ಬಗ್ಗೆ ಅಧ್ಯಯನಮಾಡುವುದು ತುಂಬಾ ಅವಶ್ಯಕವಾಗಿದೆ.

'ದೇಗುಲ ರಥಶಿಲ್ಪ' ಎಂಬ ಪುಸ್ತಕದಲ್ಲಿ ರಥಗಳ ಐತಿಯಾಸಿಕ ಹಿನ್ನೇಲೆ ರಥದ ಲಕ್ಷಣಗಳು ರಥಗಳು ಬೆಳೆದು ಬಂದ ಬಗೆ ರಥ ನಿರ್ಮಾಣ ಕಾರ್ಯದ ಕೆಲವು ಹಂತಗಳು ಈ ಎಲ್ಲ ವಿಷಯಗಳು ಸಂಕ್ಷಿಪ್ತವಾಗಿ ಪ್ರಕಟಗೊಂಡಿವೆ[೩೪]. ಕೆಲವು ಪ್ರಾಚೀನ ಗ್ರಂಥಗಳಾದ ಮಾನಸಾರ, ವಿಜಯ ತಂತ್ರ, ಪರಾಷರವಾಸ್ತು, ರುದ್ರವಾಸ್ತು ಇಂತಹ ಗ್ರಂಥಗಳಲ್ಲಿ ರಥಶಿಲ್ಪಗಳ ಕೆಲವು ಲಕ್ಷಣಗಳನ್ನು

೨೯. ಡಾ.ಎಸ್.ಸಿ. ಪಾಟೀಲ, ಎ ಕ್ರಿಟಿಕಲ್ ಎನಾಲಿಸಿಸ್ ಆಫ್ ಆರ್ಟ ಎಜ್ಯುಕೇಶನ್ ಆಟ್ ಸ್ಕೂಲ ಲೆವೆಲ್ ಇನ್ ಕರ್ನಾಟಕ ಸ್ಟೇಟ್ ವಿತ್ ಸ್ಪೆಷಲ್ ರಫೆರೆನ್ಸ್ ಟು ಡ್ರಾಯಿಂಗ ಆಂಡ್ ಪೇಂಟಿಂಗ, ಕರ್ನಾಟಕ ವಿ.ವಿ., ೨೦೦೩

೩೦. ಡಾ. ವಿ. ಎಮ್. ಬಾಗಾಯತ್, ಕರ್ನಾಟಕ ಮುಸ್ಲಿಂ ಅರಸರ ಕಾಲದ ಚಿತ್ರಕಲೆ, ಒಂದು ಅಧ್ಯಯನ (೧೪೦೦-೧೮೦೦), ಪೆಹೆಚ್.ಡಿ., ಮ.ಪ್ರ., ಕನ್ನಡ ವಿ.ವಿ., ೨೦೦೪

೩೧. ಡಾ. ಶಿವಕುಮಾರ ಎ.ಓ., ಕರ್ನಾಟಕದ ಸಮಕಾಲೀನ ಉತ್ಸವಗಳು ಹಾಗೂ ವಾಣಿಜ್ಯ ಮೇಳಗಳ ವಿವಿಧ ಆಯಾಮಗಳು, ಪಿಹೆಚ್.ಡಿ., ಮ.ಪ್ರ., ಗು.ವಿ.ಗು., ೨೦೦೪

೩೨. ಮಲ್ಲಿಕಾರ್ಜುನ ಬಾಗೋಡಿ, ಚಿತ್ರಕಲಾವಿದ ಜೆ.ಎಸ್. ಖಂಡೇರಾವ-ಒಂದು ಅಧ್ಯಯನ, ಎಂ.ಫಿಲ್., ಸಂ.ಪ್ರ., ಕನ್ನಡ ವಿ.ವಿ., ೨೦೦೨

೩೩. ಎ.ಎಸ್. ವಿಶ್ವನಾಥ, ಯಕ್ಷಗಾನ ದೃಶ್ಯಕಲೆಯ ಮುಖವರ್ಣಿಕೆ ಮತ್ತು ವೇಷಭೂಷಣ, ಎಂ.ಫಿಲ್., ಸಂ.ಪ್ರ., ಕನ್ನಡ ವಿ.ವಿ., ೨೦೦೩

೩೪. ''ದೇಗುಲ ರಥಶಿಲ್ಪ'' ದ್ರುವರಾಜ ನಾ. ಗದಗಕರ,ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

೩೫. ''ದೇಗುಲ ರಥಶಿಲ್ಪ'' ದ್ರುವರಾಜ ನಾ. ಗದಗಕರ,ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

ಉಲ್ಲೇಖಿಸಲಾಗಿದೆ[೩೫]. ಕರ್ನಾಟಕದಲ್ಲಿ ಬಯಲು ಬಂಡೆ ಚಿತ್ರಕಲೆಯ ಬಗ್ಗೆ ಹೇಳುತ್ತ ಜಮಖಂಡಿಯ ಸಮೀಪದ ಬಂಡಿಗಣಿ ಹತ್ತಿರ ದೊರೆತಿರುವ ರಥದ ರೇಖಾ ಚಿತ್ರದ ಬಗ್ಗೆ, **ಕರ್ನಾಟಕದ ಜನಪದ ಚಿತ್ರಕಲೆ,** ಎಂಬ ಪಿಹೆಚ್.ಡಿ. ಮಹಾ ಪ್ರಬಂಧದಲ್ಲಿ ಉಲ್ಲೇಖಿಸಲಾಗಿದೆ[೩೬]. ಕಲೆ ಹಾಗೂ ಹಬ್ಬಗಳ ಕುರಿತು ಬರೆದಿರುವ, **ಕಲೆ ಮತ್ತು ಹಬ್ಬ** , ಎಂಬ ಪುಸ್ತಕದಲ್ಲಿ ಹಬ್ಬಗಳ ಕುರಿತಾಗಿ ವಿವರಿಸುವಾಗ ಕೆಲವು ಜಾತ್ರೆಗಳ ಉದಾಹರಣೆಗಳೊಂದಿಗೆ ರಥದ ವಿಷಯವಾಗಿಯು ತಿಳಿದು ಬರುವುದು[೩೭]. **ಕರ್ನಾಟಕ ಗ್ರಾಮ ದೇವತೆಗಳು**, ಎಂಬ ಪುಸ್ತಕದಲ್ಲಿ, ಗ್ರಾಮ ದೇವತೆಗಳು ಅಪ್ಪಟ ಧಾರ್ಮಿಕ ಹಿನ್ನೆಲೆಯಲ್ಲಿ ಬೆಳೆದುಕೊಂಡು ಬಂದಿರುವ ವಿಷಯವನ್ನು ಹೇಳುತ್ತ ಆಯಾ ದೇವತೆಗಳ ಪೂಜಾ ವಿಧಿ ವಿಧಾನಗಳನ್ನು ವಿವರಿಸುವಾಗ, ಪಲ್ಲಕ್ಕಿ, ರಥಗಳಂತಹ ಉದಾಹರಣೆಗಳೊಂದಿಗೆ ವಿವರಿಸಿರುವುದು ತಿಳಿದುಬರುವುದು[೩೮]. ಕರ್ನಾಟಕದ ಅನೇಕ ಹಳೆಯ ದೇವಸ್ಥಾನಗಳು ಮಠ ಮಾನ್ಯಗಳು ಹಾಗೂ ಅರಮನೆಗಳು ಸುಂದರವಾದ ಬಿತ್ತಿ ಚಿತ್ರಗಳನ್ನೊಳಗೊಂಡಿವೆ. ಈ ಬಿತ್ತಿ ಚಿತ್ರಗಳಲ್ಲಿ ರಥದ ಮಾದರಿಯನ್ನೊಳಗೊಂಡ ಅನೇಕ ಚಿತ್ರಗಳನ್ನು ಕಾಣಬಹುದು. ಈ ವಿಷಯವಾಗಿ **ಕರ್ನಾಟಕ ಬಿತ್ತಿ ಚಿತ್ರಗಳ ಪರಂಪರೆ,** ಎಂಬ ಪುಸ್ತಕದಲ್ಲಿ ಸಂಕ್ಷಿಪ್ತವಾದ ವಿವರಣೆಯನ್ನು ಕಾಣಬಹುದು[೩೯]. ಅನೇಕ ಜನಪದ ಗೀತೆಗಳಲ್ಲಿ ರಥದ ಹಾಗೂ ರಥೋತ್ಸವಗಳ ಕುರಿತು, ವಿವರಿಸಿರುವುದು ಕಂಡುಬರುತ್ತದೆ. **ಕರ್ನಾಟಕ ಜನಪದ ಗೀತೆಗಳು ಒಂದು ಸಂಸ್ಕೃತಿಕ ಅಧ್ಯಯನ,** ಎಂಬ ಗ್ರಂಥದಲ್ಲಿ ರಥ ಹಾಗೂ ರಥೋತ್ಸವದ ಕುರಿತಾಗಿ, ಜನಪದ ಗೀತೆಗಳಲ್ಲಿ ಅಲ್ಲಲ್ಲಿ ವಿವರಿಸಲಾಗಿದೆ[೪೦]. ಕರ್ನಾಟಕದಲ್ಲಿ ಅನೇಕ ಕರಕುಶಲ ಕಲೆಗಳು ಹುಟ್ಟಿ ಬಂದಿವೆ. ಅವುಗಳ ವಿಷಯವಾಗಿ **ಕರಕುಶಲ ಕಲೆಗಳು** ಎಂಬ ಪುಸ್ತಕದಲ್ಲಿ ವಿವರಿಸುತ್ತ, ಚಿಕ್ಕ ಚಿಕ್ಕ ರಥಗಳ ಮಾದರಿಗಳನ್ನು ತಯಾರಿಸುವ ಬಗ್ಗೆ ಚರ್ಚಿಸಲಾಗಿದೆ[೪೧]. ಕರ್ನಾಟಕದ ಸಂಸ್ಕೃತಿ ಹಾಗೂ ಇಲ್ಲಿ ಬೆಳೆದು ಬಂದಂತಹ ಹಬ್ಬಳ ಕುರಿತಾಗಿ ವಿವರಿಸುತ್ತ, ಕೆಲವು ಜಾತ್ರೆಗಳ ಉದಾಹರಣೆಗಳೊಂದಿಗೆ ರಥೋತ್ಸಗಳ ವಿಷಯವನ್ನು, **ಕರ್ನಾಟಕ ಸಂಸ್ಕೃತಿ ಪರಂಪರೆ ಹಬ್ಬಗಳು**, ಎಂಬ ಪುಸ್ತಕದಲ್ಲಿ ವಿವರಿಸಲಾಗಿದೆ[೪೨]. ಇತ್ತೀಚೆಗೆ ಬೆಳೆಯುತ್ತಿರುವ ಆಧುನಿಕ ಶಿಲ್ಪ ಕಲೆಯ ಬಗ್ಗೆ ವಿವರಿಸುತ್ತ, ಸಾಂಪ್ರದಾಯಿಕ ಶಿಲ್ಪ ಕಲೆ ಹಾಗೂ ಆಧುನಿಕ ಶಿಲ್ಪಕಲೆಗೆ ಇರುವ ವ್ಯತ್ಯಾಸವನ್ನು ಹಾಗೂ ಸಾಮ್ಯವನ್ನು ಕುರಿತು ಚರ್ಚಿಸುವಾಗ , **ಕರ್ನಾಟಕ ಆಧುನಿಕ ಶಿಲ್ಪಕಲೆ**, ಎಂಬ ಪುಸ್ತಕದಲ್ಲಿ ರಥದ ಬಗ್ಗೆ ಉಲ್ಲೇಖಿಸಲಾಗಿದೆ[೪೩]. **ಚಿತ್ರ ಶಿಲ್ಪ ವಾಸ್ತುಶಿಲ್ಪಕಲೆಗಳು**, ಎಂಬ ಪುಸ್ತಕದಲ್ಲಿ ಚಿತ್ರ ಹಾಗೂ ಶಿಲ್ಪಕಲೆಯ ಬಗ್ಗೆ ವಿವರಿಸುತ್ತ, ಅವುಗಳು ವಾಸ್ತು ಶಿಲ್ಪದಲ್ಲಿ ಹೇಗೆ ಬಳಕೆಗೊಳ್ಳುವವು ಎಂಬ ವಿಷಯನ್ನು ಚರ್ಚಿಸುವ ಸಂದರ್ಭದಲ್ಲಿ ರಥಶಿಲ್ಪಗಳ

---

೩೬. ''ಕರ್ನಾಟಕದ ಜನಪದ ಚಿತ್ರಕಲೆ '' ಡಾ. ಎಸ್.ಸಿ. ಪಾಟೀಲ,ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ ಸಂಸ್ಥಾನಮಠ, ಗದಗ - ೧೯೯೩

೩೭. ''ಕಲೆ ಮತ್ತು ಹಬ್ಬ '' ಎಸ್.ಕೆ. ಹೂಗಾರ,ಕನ್ನಡ ಅಧ್ಯಯನ ಪೀಠ, ಕ.ವಿ. ಧಾರವಾಡ - ೧೯೭೭

೩೮. ''ಕರ್ನಾಟಕದ ಗ್ರಾಮ ದೇವತೆಗಳು'' ಡಿ. ಲಿಂಗಯ್ಯ,ಐಬಿಎಚ್. ಪ್ರಕಾಶ, ಬೆಂಗಳೂರು - ೧೯೮೪

೩೯. ''ಕರ್ನಾಟಕ ಭಿತ್ತಿ ಚಿತ್ರ ಪರಂಪರೆ'' ಡಾ.ಅ.ಲ. ನರಸಿಂಹನ್,ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೮

೪೦. ''ಕರ್ನಾಟಕದ ಜನಪದ ಗೀತೆಗಳು ಸಾಂಸ್ಕೃತಿಕ ಅಧ್ಯಯನ''ನಂ. ತಪಸ್ವೀಕುಮಾರ,ಪ್ರಸಾರಾಂಗ, ಮೈ.ವಿ. ವಿ., ಮೈಸೂರು - ೧೯೮೨

೪೧. ''ಕರಕುಶಲ ಕಲೆಗಳು'' ಡಿ. ಗಣೇಶ, ನಿರ್ದೇಶಕರು, ಪ್ರಸಾರಾಂಗ, ಮೈ.ವಿ.ವಿ. ಮೈಸೂರು - ೧೯೮೨

೪೨. ''ಕರ್ನಾಟಕ ಸಂಸ್ಕೃತಿ, ಪರಂಪರೆ ಹಬ್ಬಗಳು (ಭಾಗ-೧) '' ಎಸ್.ಎಸ್. ಹಿರೇಮಠ,ಸಮತಾ ಪ್ರಕಾಶನ, ಹರಪನ ಹಳ್ಳಿ - ೧೯೯೨

೪೩. ''ಕರ್ನಾಟಕದ ಆಧುನಿಕ ಶಿಲ್ಪಕಲೆ '' ಕೆ.ವಿ. ಸುಬ್ರಹ್ಮಣ್ಯಂ, ಕರ್ನಾಟಕ ಲಲಿತ ಕಲಾ ಅಕಾಡೆಮಿ,

೪೪. ''ಚಿತ್ರ ಶಿಲ್ಪ ವಾಸ್ತು ಕಲೆಗಳು '' ಡಾ. ಶಿವರಾಮ ಕಾರಂತ, ಕನ್ನಡ ಅಧ್ಯಯನ ಪೀಠ, ವಿಷೆಶ

ಕುರಿತು ಕೆಲವು ವಿಷಯಗಳನ್ನು ಹೇಳಲಾಗಿದೆ[೪೪]. **ಕರ್ನಾಟಕದ ಜನಪದ ಶಿಲ್ಪಕಲೆ,** ಒಂದು ಅಧ್ಯಯನ ಎಂಬ ಮಹಾಪ್ರಬಂಧದಲ್ಲಿ ಜನಪದರಿಂದ ಆರಾಧನೆ ಹಿನ್ನೆಲೆಯಲ್ಲಿ ಬೆಳೆದು ಬಂದತಹ ರಥಶಿಲ್ಪದ ಬಗೆಗೆ ವಿವರಿಸಲಾಗಿದೆ[೪೫]. **ಜನಪದರ ಆರಾಧನೆ ಮತ್ತು ರಂಗಕಲೆ,** ಎಂಬ ಪುಸ್ತಕದಲ್ಲಿ ಆರಾಧನೆಗೆ ಸಂಬಂಧಿಸಿದ ವಿಷಯವನ್ನು ಕುರಿತು ಚರ್ಚಿಸುವಾಗ ರಥದ ವಿಷಯವಾಗಿ ಸಂಕ್ಷಿಪ್ತ ವಿವರಣೆ ನೀಡಲಾಗಿದೆ[೪೬]. **ಜನಪದರ ಬದುಕು,** ಎಂಬ ಪುಸ್ತಕದಲ್ಲಿ ಭಾವೈಕ್ಯತೆ ಮನೋಭಾವನೆ, ಸಹಬಾಳ್ವೆ ಹಾಗೂ ಜಾತೀಯತೆಯ ಬಗ್ಗೆ ಚರ್ಚಿಸುವಾಗ ಜಾತ್ರೆಗಳ ಕುರಿತು ಹೇಳುವಾಗ ರಥೋತ್ಸವಗಳ ಕುರಿತು ಚರ್ಚಿಸಲಾಗಿದೆ[೪೭]. ಕರ್ನಾಟಕದ ಅನೇಕ ವಾಸ್ತು ಶಿಲ್ಪಗಳಲ್ಲಿ ಮಿಥುನ ಶಿಲ್ಪಗಳನ್ನು ಕಾಣಬಹುದು. ಅಂತಹ ಶಿಲ್ಪಗಳು ರಥಶಿಲ್ಪಗಳಲ್ಲಿ ಕಂಡುಬರುತ್ತವೆ. ಈ ವಿಷಯವಾಗಿ **ದೇವಾಲಯ ಮತ್ತು ಲೈಂಗಿಕ ಶಿಲ್ಪ,** ಎಂಬ ಪುಸ್ತಕದಲ್ಲಿ ವಿವರಣೆ ಇದೆ[೪೮]. ಬಳ್ಳಾರಿ ಜಿಲ್ಲೆಯ ಮರದ ವಾಸ್ತು, ಎಂಬ ಪುಸ್ತಕದಲ್ಲಿ, ಬಳ್ಳಾರಿ ಜಿಲ್ಲೆಯ ಮರದ ವಾಸ್ತುಕಲೆಯ ಕರಿತಾಗಿ ಚರ್ಚಿಸುವಾಗ ಅನೇಕ ಕಂಬಗಳು, ಕಮಾನುಗಳು, ಬೊದಿಗೆಗಳು ಇಂತಹ ಹಾಗೂ ಮನೆಗಳಲ್ಲಿ, ಮಠಗಳಲ್ಲಿ, ದೇವಸ್ಥಾನಗಳಲ್ಲಿ ಕಂಡುಬರುವ ವಾಸ್ತು ಶಿಲ್ಪ ಕಲೆಯ ಕುರಿತಾಗಿ ಹೇಳುವಾಗ, ರಥ ಶಿಲ್ಪಗಳ ಕುರಿತಾಗಿ ವಿವರಿಸಲಾಗಿದೆ[೪೯]. ಬಿಜಾಪೂರ ಜಿಲ್ಲೆಗೆ ಸಂಬಂಧಿಸಿದ ಜಾತ್ರೆಗಳ ಕುರಿತು ತಿಳಿಯ ಪಡಿಸುವ **ಬಿಜಾಪೂರ ಜಿಲ್ಲಾಯ ಜಾತ್ರೆಗಳು, ಒಂದು ಅಧ್ಯಯನ,** ಎಂಬ ಪುಸ್ತಕದಲ್ಲಿ ರಥೋತ್ಸವಗಳ ಕುರಿತಾಗಿ ಹಾಗೂ ಕೆಲವು ರಥಗಳ ವಿಷಯವಾಗಿ ತಿಳಿಸಲಾಗಿದೆ[೫೦]. **ರಾಜಸ್ಪರ್ಶ** ಎಂಬ ಪುಸ್ತಕದಲ್ಲಿ ರಥ ಹಾಗೂ ತೇರು ಈ ವಿಷಯನ್ನು ಚರ್ಚಿಸುವಾಗ ರಥದ ಲಕ್ಷಣಗಳ ಕುರಿತಾಗಿ ಹೇಳಲಾಗಿದೆ[೫೧]. **ಶಿಲ್ಪ ಕಲಾ ಪ್ರಪಂಚ** ಎಂಬ ಪುಸ್ತಕದಲ್ಲಿ ರಥಶಿಲ್ಪದ ಬಗ್ಗೆ ವಿವರಣೆ ಇದೆ[೫೨].

ಉಡುಪಿಯ ರಥಗಳು ಸಾಗಿ ಬಂದ ಪಥ, ಎಂಬ ಲೇಖನದಲ್ಲಿ ರಥಗಳ ಬಗ್ಗೆ ವಿವರಿಸಿದ್ದಾರೆ. ಅಲ್ಲದೇ ರಥಗಳ ಇತಿಹಾಸವನ್ನು ಕುರಿತು ಚರ್ಚಿಸಿದ್ದಾರೆ[೫೩]. **ಉರುಳುಗಾಲಿಯ ರಥಗಳು ಉರುಳಿಬಂದ ಕಥೆ,** ಎಂಬ ಲೇಖನದಲ್ಲಿ ರಥಗಳು ಬೆಳೆದುಬಂದ ಬಗೆ ಹಾಗೂ ಅವುಗಳ ಮಹತ್ವವನ್ನು ಕುರಿತಾಗಿ ಚರ್ಚಿಸಿದ್ದಾರೆ[೫೪]. **ಕಾಂಬೋಡಿಯಾದಲ್ಲಿ ಭಾರತೀಯ ವಾಸ್ತುಶಿಲ್ಪ,** ಎಂಬ ಲೇಖನದಲ್ಲಿ ಕಾಂಬೋಡಿಯಾದ ವಾಸ್ತುಶಿಲ್ಪಗಳಲ್ಲಿ ರಥಗಳ ಮಾದರಿಗಳನ್ನು ಕುರಿತು ಹೇಳಲಾಗಿದೆ[೫೫].

---

೪೫. ''ಕರ್ನಾಟಕ ಜನಪದ ಶಿಲ್ಪಕಲೆ ಒಂದು ಅಧ್ಯಯನ'' ಡಾ. ಶಿವಾನಂದ. ಎಚ್. ಬಂಟನೂರ, ೨೦೦೨

೪೬. ''ಜನಪದ ಆರಾಧನೆ ಮತ್ತು ಕಂಗಲೆ'' ಡಾ. ಸುಸಿಲಾ ಪಿ. ಉಪಾಧ್ಯಾಯ, ಪಾದೇಶಿಕ ಜಾನಪದ ಮತ್ತು ರಂಗಲೆಗಳ, ಅಧ್ಯಯನ ಕೇಂದ್ರ, ಉಡುಪಿ - ೧೯೮೯

೪೭. ''ಜಾನಪದ ಬದುಕು '' ಕೆ.ಎಸ್. ಉಪಾಧ್ಯಾಯ, ಕರ್ನಾಟಕ ಸಂಘ, ಕಿತ್ತೂರ - ೧೯೯೪

೪೮. ''ದೇವಾಲಯ ಮತ್ತು ಲೈಂಗಿಕ ಶಿಲ್ಪ '' ತಾ.ಪಿ. ಧರ್ಮರಾವ(ಮೂಲ) ಎಸ್. ಆರ್. ಶಾಸ್ತ್ರಿ (ಅಣು),ನವ ಕರ್ನಾಟಕ ಪಬ್ಲಿಕೆಷನ್ ಲಿ. ಬೆಂಗಳೂರು - ೧೯೮೩

೪೯. ''ಬಳ್ಳಾರಿ ಜಿಲ್ಲೆಯ ಮರದ ವಾಸ್ತು '' ಡಾ. ಸಿ. ಮಹದೇವ, ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೫೦. ''ಬಿಜಾಪೂರ ಜಿಲ್ಲೆಯ ಜಾತ್ರೆಗಳು, ಒಂದು ಅಧ್ಯಯನ''ರಾಜೇಸಾಬ ಚಪ್ಪರಬಂದ, ಪಿ.ಎಚ್.ಡಿ. ಮಹಾಪ್ರಬಂಧ ಪ್ರಕಟಿತ, ಕ.ವಿ.ವಿ.,ಧಾರವಾಡ - ೧೯೯೮

೫೧. '' ರಾಜಸ್ಪರ್ಶ ಕೀರ್ತಿನಾಥ ಕುರ್ತುಕೋಟಿ'' ಪ್ರಕಾಶನ ಮನೋಹರ ಗ್ರಂಥಮಾಲಾ, ಧಾರವಾಡ, ೧೯೯೬

೫೨. ''ಶಿಲ್ಪಕಲಾ ಪ್ರಪಂಚ'' ಪಿ.ಆರ್. ತಿಪ್ಪೇಸ್ವಾಮಿ, ಲಲಿತಕಲಾ ಅಕಾಡೆಮಿ, ಬೆಂಗಳೂರು, ೧೯೯೪

೫೩.. '' ಉಡಪಿ ರಥಗಳು ಸಾಗಿ ಬಂದ ಪಥ'' ಸತೀಶ ಮಲ್ಯ,ಕನ್ನಡ ಪ್ರಭ, ಜುಲೈ ೧, ೧೯೮೪

೫೪. '' ಉರುಳುಗಾಲಿಯ ರಥಗಳು ಉರುಳಿಬಂದ ಕಥೆ''ಅಶೋಕ ಹಾಸ್ಯಗಾರ, ಸಂಯುಕ್ತ ಕರ್ನಾಟಕ, ಜುಲೈ ೧೫, ೧೯೯೦

೫೫. ''ಕಾಂಬೋಡಿಯಾದಲ್ಲಿ ಭಾರತೀಯ ವಾಸ್ತು ಶಿಲ್ಪ ''ಎಸ್. ನಾಗೇಶ, ತುಶಾರ, ಡಿಶಂಬರ ೧೯೮೬

ವರ್ಷಗಳ ಇತಿಹಾಸ, ಎಂಬ ಲೇಖನದಲ್ಲಿ ರಥಗಳ ಐತಿಹಾಸಿಕ ಹಿನ್ನೆಲೆ, ರಥಗಳು ಆವಿಷ್ಕಾರಗೊಂಡ ಬಗೆ, ರಥಗಳ ನಿರ್ಮಾಣ, ರಥೋತ್ಸವಗಳ ವಿಧಿವಿಧಾನಗಳು ಹಾಗೂ ರಥಗಳ ಲಕ್ಷಣನಗಳನ್ನು ಕುರಿತು ಚರ್ಚಿಸಲಾಗಿದೆ[೫೭]. ರಥೋತ್ಸವದ ಮಹತ್ವ, ಎಂಬ ಲೇಖನದಲ್ಲಿ ರಥ ಹಾಗೂ ಜನಪದರ ಜೀವನದ ಬಗ್ಗೆ ವಿವರಿಲಾಗಿದೆ[೫೮]. ವಾಸ್ತು ಶಿಲ್ಪ ಮತ್ತು ಬಿತ್ತಿ ಚಿತ್ರಗಳಲ್ಲಿ ತೇರು, ಎಂಬ ಲೇಖನದಲ್ಲಿ ರಥಗಳ ಮಾದರಿಗಳನ್ನೊಳಗೊಂಡ ಶಿಲ್ಪ ಹಾಗೂ ಚಿತ್ರಗಳ ಬಗ್ಗೆ ವಿವರಿಸಲಾಗಿದೆ[೫೯]. ತಂಜಾ ಊರು ಕಲೆಯ ಆಗರ, ಎಂಬ ಲೇಖನದಲ್ಲಿ ರಥಶಿಲ್ಪದ ಕಲಾತ್ಮಕಥೆಯ ಬಗ್ಗೆ ಚರ್ಚಿಸಲಾಗಿದೆ[೬೦]. ಸೋಮೇಶ್ವರ ದೇವಾಲಯದಲ್ಲಿ ಅರಳಿದ ಶಿಲ್ಪಕಲೆ, ಎಂಬ ಲೇಖನದಲ್ಲಿ, ವಾಸ್ತುಶಿಲ್ಪದಲ್ಲಿ ರಥಗಳ ಮಾದರಿಗಳನ್ನು ಕುರಿತು ಚರ್ಚಿಸಲಾಗಿದೆ[೬೧]. ಶ್ರೀ ಚಿತ್ರಾಪುರ ರಥೋತ್ಸವ, ಎಂಬ ಲೇಖನದಲ್ಲಿ ರಥೋತ್ಸವದ ವಿಧಿವಿಧಾನಗಳು ಹಾಗೂ ವಿವಿಧ ಶೈಲಿಯ ರಥಗಳ ಬಗೆ ಹೇಳಲಾಗಿದೆ[೬೨]. ಜನಪದ ಮತ್ತು ಚಾತ್ರೆ, ಎಂಬ ಲೇಖನದಲ್ಲಿ ಚಾತ್ರೆಗಳ ಬಗ್ಗೆ ವಿವರಿಸುತ್ತ, ರಥ ಹಾಗೂ ಜನಪದರ ನಡುವಿನ ಸಂಬಂಧದ ಕುರಿತಾಗಿ ಹೇಳಲಾಗಿದೆ[೬೩]. ಬನವಾಸಿಯ ತೇರು, ಎಂಬ ಲೇಖನದಲ್ಲಿ ರಥದ ಇತಿಹಾಸವನ್ನು ಹೇಳುತ್ತ, ಮಹಾರಾಜರ ಕಾಲದಿಂದ ರಥೋತ್ಸವ ಬೆಳೆದು ಬಂದ ಬಗೆಯನ್ನು ಚರ್ಚಿಸಲಾಗಿದೆ[೬೪]. ಹಂಪೆಯ ವಿಜಯ ವಿಠಲದ ದೇವಾಲಯದ ವಿಶೇಷತೆ, ಎಂಬ ಲೇಖನದಲ್ಲಿ ಹಂಪೆಯ ಕಲ್ಲಿನ ರಥದ ವಿಷಯವಾಗಿ ಸಂಕ್ಷಿಪ್ತವಾಗಿ ಹೇಳಲಾಗಿದೆ[೬೫]. ಜನಪದ ಹಾಡುಗಳು ಹಾಗೂ ಚಾತ್ರೆ, ಎಂಬ ಲೇಖನದಲ್ಲಿ ಜಾತ್ರೆಯ ಬಗ್ಗೆ ಜನಪದರು ಹೇಳುವ ಹಾಡುಗಳ ಕುರಿತಾಗಿ ಚರ್ಚಿಸುವ ಸಂದರ್ಭದಲ್ಲಿ ರಥದ ಲಕ್ಷಣಗಳನ್ನು ಹೇಳಲಾಗಿದೆ[೬೬].

ಹೀಗೆ ಕೆಲವು ಗ್ರಂಥಗಳಲ್ಲಿ, ಪುಸ್ತಕಗಳಲ್ಲಿ ಹಾಗೂ ಬಿಡಿಲೇಖನಗಳಲ್ಲಿ ರಥಗಳ ವಿಷಯವಾಗಿ ಅಲ್ಲಲ್ಲಿ ಚರ್ಚಿಸಿರುವುದನ್ನು ಬಿಟ್ಟರೆ ಸಮಗ್ರವಾಗಿ ರಥಶಿಲ್ಪಗಳ ಬಗ್ಗೆ ಅಧ್ಯಯನ ನಡೆಯದೇ ಇರುವುದರಿಂದ ಕಲಾತ್ಮಕ ರಥಗಳ ಕುರಿತಾಗಿ ಕಲಾತ್ಮಕ ದೃಷ್ಟಿಕೋನದಿಂದ ಕರ್ನಾಟಕ ರಥಶಿಲ್ಪ ಕಲೆಯ ಬೆಗ್ಗೆ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

---

೫೬. ''ಪ್ರಾಚೀನ ಕಾಲದಲ್ಲಿ ರಥಗಳ ಪಾತ್ರ'' ಎಸ್. ಮಂಜುನಾಥ,ಕನ್ನಡ ಪ್ರಭ, ೧೯೮೯

೫೭. '' ರಥ ಸಾವಿರ ವರ್ಷಗಳ ಇತಿಹಾಸ''ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ೧೯೯೫

೫೮. '' ರಥೋತ್ಸವದ ಮಹತ್ವ''ಪಂಡಿತ ಗುತ್ತಲ ರಂಗಾಚಾರ್ಯ,ಸುಧಾ , ಪು.ಸಂ. ೪೩

೫೯. '' ವಾಸ್ತು ಶಿಲ್ಪ, ಭಿತ್ತಿ ಚಿತ್ರಗಳಲ್ಲಿ ತೇರು''ಡಾ.ಜೋತ್ಸ್ನಾ ಕಾಮತ್, ಇತಿಹಾಸ ದರ್ಶನ, ಸಂಪುಟ. ೭,೧೯೯೨

೬೦. '' ತಂಜಾ ಊರು ಕಲೆಯ ಆಗರ ''ಎಂ. ರಾಮರಾವ್,ಕನ್ನಡ ಪ್ರಭ, ಜುಲೈಲ, ೧೯೮೪

೬೧ ''ಸೋಮೇಶ್ವರ ದೇವಾಲಯದಲ್ಲಿ ಅರಳಿದ ಶಿಲ್ಪಕಲೆ'' ಕೆ.ಎಂ. ಹೂಗಾರ, ಸಂಯುಕ್ತ ಕರ್ನಾಟಕ, ಜೂನ್೨, ೧೯೮೨

೬೨. ''ಶ್ರೀ ಚಿತ್ರಾಪುರ ರಥೋತ್ಸವ '' ಸಂತೋಷಕುಮಾರ ಗುಲವಾಡಿ, ಮಹೇಶ ಪಬ್ಲಿಕೇಶನ್ಸ್, ಮುಂಬಯಿ,೧೯೭೩

೬೩. '' ಜನಪದ ಮತ್ತು ಚಾತ್ರೆ'' ನವೀನ್ ಆರ್. ಸಂಯುಕ್ತ ಕರ್ನಾಟಕ, ೧೯೮೫

೬೪. '' ಬನವಾಸಿಯ ತೇರು'' ಸಿದ್ದಲಿಯ್ಯ ಎಚ್.ಬಿ., ಕರ್ಮವೀರ, ೧೯೯೪

೬೫. '' ಹಂಪಿಯ ವಿಜಯ ವಿಠಲದೇವಾಲಯದ ವಿಶೇಷತೆ'' ಪ್ರಸನ್‌ಕುಮಾರ ಎನ್., ಕಸ್ತೂರಿ, ೧೯೯೨

೬೬. '' ಜನಪದ ಹಾಡುಗಳು ಹಾಗೂ ಜಾತ್ರೆ'' ಸಂತೋಷ ಬಡಿಗೇರ, ಸುಧಾ, ೧೯೯೪

ಅಧ್ಯಯನದ ಸ್ವರೂಪ

ಈ ಪ್ರಬಂಧವನ್ನು ಒಂಭತ್ತು ಅಧ್ಯಾಯಗಳಲ್ಲಿ ವಿಂಗಡಿಸಿಕೊಂಡಿದ್ದು, ಪ್ರತಿಯೊಂದು ಅಧ್ಯಾಯದಲ್ಲಿ ಚರ್ಚಿತಗೊಂಡ ವಿಷಯಗಳನ್ನು ಸಂಕ್ಷಿಪ್ತವಾಗಿ ಈ ಕೆಳಗಿನಂತೆ ಹೇಳಬಹುದು.

ಮೊದಲನೆಯ ಅಧ್ಯಾಯದಲ್ಲಿ ಅಧ್ಯಯನದ ಉದ್ದೇಶ, ಸ್ವರೂಪ, ವಿಧಾನ ಮತ್ತು ಆಕರ ಸಾಮಗ್ರಿಗಳ ಕುರಿತಾದ ಮಾಹಿತಿಯನ್ನು ನೀಡಲಾಗಿದೆ.

ಎರಡನೆಯ ಅಧ್ಯಾಯದಲ್ಲಿ ರಥಶಿಲ್ಪದ ಅರ್ಥ, ಸ್ವರೂಪ, ಪ್ರಾಚೀನತೆಯನ್ನು ಹೇಳುತ್ತ, ರಥಶಿಲ್ಪಕಲೆ ಬೆಳೆದು ಬಂದ ಕ್ರಮಬದ್ಧ ಇತಿಹಾಸವನ್ನು ಗುರುತಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ರಥಶಿಲ್ಪಗಳ ನಿರ್ಮಾಣ ಕಾರ್ಯದಲ್ಲಿ ಅಡಿಪಾಯದಿಂದ ಕಳಶದವರೆಗೆ ಬಳಕೆಗೊಳ್ಳುವ ಪರಿಕರಗಳ ಬಗೆಗೆ ವಿವರವಾದ ಮಾಹಿತಿಯನ್ನು ನೀಡಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ವಿವಿಧ ಮಾಧ್ಯಮಗಳ ರಥಗಳನ್ನು ನಿರ್ಮಾಣ ಮಾಡುವ, ಪ್ರಾರಂಭದ ಹಂತದಿಂದ ಉತ್ಸವಗಳಲ್ಲಿ ರಥಗಳನ್ನು ಅಲಂಕಾರಗೊಳಿಸುವವರೆಗಿನ ಅನೇಕ ರೀತಿಯ ರಚನಾ ವಿಧಾನಗಳನ್ನು ವಿವರವಾಗಿ ಹೇಳಲಾಗಿದೆ.

ಐದನೆಯ ಅಧ್ಯಾಯದಲ್ಲಿ ವಿವಿಧ ಬಗೆಯ ರಥಶಿಲ್ಪಗಳನ್ನು ವಿಂಗಡಣೆ ಮಾಡಿಕೊಂಡು, ಅವುಗಳ ಮೇಲೆ ನಿರೂಪಿತಗೊಂಡಿರುವ ಚಿತ್ರ ಶಿಲ್ಪಗಳ ವಸ್ತುವಿಷಯಗಳನ್ನು ವಿಷಯಾನುಸಾರವಾಗಿ ವಿಭಾಗಿಸಿಕೊಂಡು ವಿವರಿಸಲಾಗಿದೆ.

ಆರನೆಯ ಅಧ್ಯಾಯದಲ್ಲಿ ವಿವಿಧ ಮಾಧ್ಯಮಗಳ ರಥಶಿಲ್ಪಗಳಲ್ಲಿನ ವರ್ಣವಿನ್ಯಾಸವನ್ನು ಕುರಿತು ವಿಶ್ಲೇಷಿಸಲಾಗಿದೆ. ಜೊತೆಗೆ ವಿವಿಧ ಬಗೆಯ ಚಿತ್ರ ವಿನ್ಯಾಸಗಳಲ್ಲಿ ನಿರೂಪಿತಗೊಂಡಿರುವ ರಥಶಿಲ್ಪದ ಮಾದರಿಗಳನ್ನು ಸಂದರ್ಭೋಚಿತವಾಗಿ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ಕರ್ನಾಟಕದ ಅನೇಕ ಸಿದ್ಧಹಸ್ತ ರಥಶಿಲ್ಪಿಗಳ ಪರಿಚಯ ಮಾಡಿಕೊಡುವುದರೊಂದಿಗೆ ಸುಂದರವಾದ ರಥಶಿಲ್ಪಗಳನ್ನು ಪೋಷಿಸಿಕೊಂಡು ಬಂದವರ ಬಗ್ಗೆ ಹೇಳಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ಪ್ರಾದೇಶಿಕವಾಗಿ ರಥಶಿಲ್ಪಗಳಿಗೆ ಒದಗಿಸಿರುವ ರಕ್ಷಣಾ ವಿಧಾನಗಳ ಬಗ್ಗೆ ಹೇಳುತ್ತ, ಅವುಗಳಿಗೊದಗುವ ಆಪತ್ತುಗಳು ಮತ್ತು ಅನುಸರಿಸಬೇಕಾದ ರಕ್ಷಣಾ ವಿಧಾನಗಳ ಬಗ್ಗೆ ವಿವರವಾಗಿ ಚರ್ಚಿಸಲಾಗಿದೆ.

ಒಂಭತ್ತನೆಯ ಅಧ್ಯಾಯದಲ್ಲಿ ಪ್ರಸ್ತುತ ಪ್ರಬಂಧದ ಎಂಟೂ ಅಧ್ಯಾಯಗಳಲ್ಲಿ ಚರ್ಚಿತಗೊಂಡ ಫಲಿತ ವಿಶ್ಲೇಷಣೆಯನ್ನು ನೀಡಲಾಗಿದೆ.

ಅಧ್ಯಯನದ ಆಕರ ಸಾಮಗ್ರಿಗಳ ಸಂಗ್ರಹ ಹಾಗೂ ಬಳಕೆಯ ಕ್ರಮ

ಈ ಅಧ್ಯಯನಕ್ಕಾಗಿ ಎರಡು ರೀತಿಯ ಆಕರಸಾಮಗ್ರಿಗಳನ್ನು ಬಳಸಿಕೊಂಡು ಪ್ರಬಂಧ ರಚಿಸಲಾಗಿದೆ.

೧. ಮೂಲ ಆಕರ ಸಾಮಗ್ರಿ.

೨. ಆನುಷಂಗಿಕ ಆಕರ ಸಾಮಗ್ರಿ.

೧. ಮೂಲ ಆಕರ ಸಾಮಗ್ರಿ :

ಮೂಲ ಆಕರ ಸಾಮಗ್ರಿಗಳಲ್ಲಿ ಮುಖ್ಯವಾದದ್ದು ಕ್ಷೇತ್ರಕಾರ್ಯ. ಈ ಕ್ಷೇತ್ರಕಾರ್ಯ

೧. ಸಂದರ್ಶನ.

೨. ಸಂಭಾಷಣೆ.

೩. ಧ್ವನಿ ಮುದ್ರಣ.

೪. ಛಾಯಾ ಚಿತ್ರಣ.

೫. ಸಂಗ್ರಹಿತ ವಿಷಯದ ಪಟ್ಟಿಗಳನ್ನು ಸಿದ್ಧಪಡಿಸುವಿಕೆ.

ಹೀಗೆ ವಿವಿಧ ಸ್ವರೂಪದಲ್ಲಿ ಅಧ್ಯಯನ ಒಳಪಟ್ಟಿದೆ.

೧. ಸಂದರ್ಶನ : ಕರ್ನಾಟಕದ ಅಧ್ಯಯನ ಕ್ಷೇತ್ರಗಳನ್ನು ಜಿಲ್ಲಾವಾರು ವಿಂಗಡಿಸಿಕೊಂಡು ಸ್ಥಳಕ್ಕೆ ಭೇಟಿ ಕೊಡುವುದು, ಜಿಲ್ಲೆಯ ಸಮಗ್ರ ಪರಿಚಯಕ್ಕಾಗಿ ತಾಲೂಕುಗಳನ್ನು ಘಟಕಗಳನ್ನಾಗಿ ಮಾಡಿಕೊಂಡು, ಈ ತಾಲೂಕುಗಳನ್ನು ಪ್ರತಿನಿಧಿಸುವ ಊರುಗಳನ್ನು ಆಯ್ಕೆಮಾಡುವುದು, ಹೀಗೆ ಆಯ್ಕೆಮಾಡಿಕೊಂಡು ಊರು, ದೇವಸ್ಥಾನಗಳಿಗೆ ಭೇಟಿ ನೀಡಿ ಅನೇಕ ರಥಶಿಲ್ಪಿಗಳನ್ನು ಸಂದರ್ಶಿಸಿ ರಥಶಿಲ್ಪದ ಕುರಿತು ವಿವಿಧ ವಿಷಯಗಳನ್ನು ಸಂಗ್ರಹಿಸಲಾಯಿತು.

ವಿವಿಧ ಬಗೆಯ ಹಾಗೂ ವಿವಿಧ ಮಾಧ್ಯಮದ ರಥಗಳನ್ನು ಕುರಿತು ಚರ್ಚಿಸಲಾದ ವಿಷಯಗಳನ್ನು ಸಂಗ್ರಹಿಸಲಾಯಿತು. ಪ್ರಾದೇಶಿಕವಾಗಿ ರಥಗಳಲ್ಲಿ ಕಂಡುಬರುವಂತಹ ವ್ಯತ್ಯಾಸಗಳನ್ನು ಹಾಗೂ ಸಾಮ್ಯಗಳನ್ನು ಕುರಿತು ಸಂದರ್ಶನದಿಂದ ವಿಷಯನ್ನು ಸಂಗ್ರಹಿಸಲಾಯಿತು.

೨. ಸಂಭಾಷಣೆ : ರಥಗಳ ವಿಷಯವಾಗಿ ಆಯಾ ಊರಿನವರ ಅಭಿಪ್ರಾಯವನ್ನು ಹಾಗೂ ರಥಗಳ ಬಗೆಗೆ ಅವರು ತಿಳಿದುಕೊಂಡಿರುವ ವಿಷಯವನ್ನು ಧಾಖಲು ಮಾಡಲಾಯಿತು. ರಥ ಹಾಗೂ ರಥೋತ್ಸವಗಳ ಬಗ್ಗೆ ಜನಪದರೊಂದಿಗೆ ಚರ್ಚಿಸುತ್ತ ಕಥೆ, ಐತಿಹ್ಯ ಹಾಗೂ ಹಾಡುಗಳನ್ನು ಕುರಿತು ವಿಷಯ ಸಂಗ್ರಹಣೆ ಮಾಡಲಾಯಿತು.

೩. ಧ್ವನಿ ಮುದ್ರಣ : ಕರ್ನಾಟಕದ ಅನೇಕ ಖ್ಯಾತ ರಥಶಿಲ್ಪಿಗಳನ್ನು ಸಂದರ್ಶಿಸಿ ರಥಗಳ ನಿರ್ಮಾಣ ಹಂತಗಳ ಬಗ್ಗೆ, ರಥೋತ್ಸವಗಳ ವಿಧಿವಾಧಾನಗಳ ಬಗ್ಗೆ ಹಾಗೂ ವಿವಿಧ ಶೈಲಿಯ ಮತ್ತು ವಿವಿಧ ಮಾಧ್ಯಮಗಳ ರಥಗಳ ಕುರಿತಾಗಿ ಚರ್ಚಿಸುತ್ತಾ ಧ್ವನಿ ಮುದ್ರಣವನ್ನು ಮಾಡಿಕೊಳ್ಳಲಾಗಿದೆ. ಆಯಾ

ಊರಿನ ದೇವಸ್ಥಾನದ ಅರ್ಚಕರ, ಮಠಗಳ ಮಠಾಧಿಶರ ಹಾಗೂ ಆಯಾ ಊರಿನ ಸಾಮಾನ್ಯ ವರ್ಗದವರನ್ನು ಸಂದರ್ಶಿಸಿ ರಥ ಹಾಗೂ ರಥೋತ್ಸವಗಳ ಬಗ್ಗೆ ಚರ್ಚಿಸುತ್ತ ಧ್ವನಿ ಮುದ್ರಣ ಮಾಡಿಕೊಳ್ಳಲಾಗಿದೆ.

೪. ಛಾಯಾ ಚಿತ್ರಣ : ಕರ್ನಾಟಕದ ವಿವಿಧ ಜಿಲ್ಲೆಗಳ ಕ್ಷೇತ್ರಕಾರ್ಯವನ್ನು ಕೈಗೊಂಡು ಕಾಷ್ಠ ಮಾಧ್ಯಮ, ಲೋಹ ಮಾಧ್ಯಮ, ಸಂಕೀರ್ಣ ಮಾಧ್ಯಮ ಹಾಗೂ ಶಿಲಾ ಮಾಧ್ಯಮದ ರಥಗಳನ್ನು ಛಾಯಾ ಚಿತ್ರಣ ಮಾಡಿಕೊಳ್ಳಲಾಗಿದೆ. ಆಯಾ ರಥಗಳಲ್ಲಿ ಕಂಡುಬರುವಂತಹ ಕಲಾತ್ಮಕ ಶಿಲ್ಪಗಳು ಹಾಗೂ ಚಿತ್ರಗಳನ್ನು ಪ್ರತ್ತೇಕವಾಗಿ ಛಾಯಾ ಚಿತ್ರಣಮಾಡಿಕೊಳ್ಳಲಾಗಿದೆ. ಅಲ್ಲದೆ ರಥದ ವಿವಿಧ ಭಾಗಗಳನ್ನು ಪ್ರತ್ತೇಕವಾಗಿ ಛಾಯಾ ಚಿತ್ರಣಗೊಳಸಲಾಗಿದೆ.

ರಥ ಶಿಲ್ಪಕೇಂದ್ರಗಳಿಗೆ ಭೇಟಿಕೊಟ್ಟು ರಚನಾ ಹಂತದಲ್ಲಿರುವ ರಥಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸಲಾಗಿದೆ. ಉತ್ಸವದ ಸಂದರ್ಭದಲ್ಲಿ ರಥೋತ್ಸವಗಳಲ್ಲಿ ಭಾಗವಹಿಸಿ ಶೃಂಗಾರಗೊಂಡ ಅನೇಕ ರಥಗಳ ಛಾಯಾ ಚಿತ್ರಗಳನ್ನು ಸಂಗ್ರಹಿಸಲಾಗಿದೆ. ಅನೇಕ ರಥಶಿಲ್ಪಿಗಳ ಛಾಯಾಚಿತ್ರಗಳನ್ನು ಸಂಗ್ರಹಿಸಲಾಗಿದೆ.

ಸಂದರ್ಶನ, ಸಂಭಾಷಣೆ ಮತ್ತು ಛಾಯಾಚಿತ್ರ ಎಂಬ ಈ ಮೂರು ಅಂಶಗಳು ಈ ವಸ್ತು ಸಂಗ್ರಹದ ವಿಷಯದಲ್ಲಿ ಪ್ರಮುಖವಾದವುಗಳು.

೫. ಸಂಗ್ರಹಿಸಿದ ವಿಷಯದ ಪಟ್ಟಿಗಳನ್ನು ಸಿದ್ಧಪಡಿಸುವಿಕೆ : ಕ್ಷೇತ್ರಕಾರ್ಯದ ಅನುಭವವೇದ್ಯ, ಚಿತ್ರವೇದ್ಯ ವಿವರಗಳನ್ನು ಅಭ್ಯಾಸಕ್ಕೆ, ಬರವಣಿಗೆಗೆ ಬಳಸಿಕೊಳ್ಳಲಾಗಿದೆ. ಅವಶ್ಯವೆನಿಸಿದ ಪಟ್ಟಿಗಳನ್ನು ಸಿದ್ಧಪಡಿಸಿ ಪ್ರಭಂಧ ರಚನೆಗೆ ಅನುಕೂಲವಾಗುವಂತಹ ವಿಷಯಗಳನ್ನು ಸಂಗ್ರಹಿಸಲಾಗಿದೆ.

೨. ಆನುಷಂಗಿಕ ಆಕರ ಸಾಮಗ್ರಿ :

ಪ್ರಸ್ತುತ ಅಧ್ಯಯನದ ವಿಷಯ ಸಂಗ್ರಹಕ್ಕೆ ಕ್ಷೇತ್ರಕಾರ್ಯದ ಸಮಗ್ರ ಮಾಹಿತಿಗಳನ್ನು ಪಟ್ಟಿಗಳಲ್ಲಿ ಸಂಗ್ರಹಿಸಿಕೊಂಡಂತೆ ಆನುಷಂಗಿಕ ವಿವರಗಳನ್ನು ಒಂದೊಂದು ವಿಷಯಕ್ಕೆ ಸಂಬಂಧ ಪಟ್ಟಂತೆ, ಜಿಲ್ಲಾವಾರು ಮಾಹಿತಿ ದೊರೆಯುಂತೆ, ಬೇರೆ ಬೇರೆ ಉಪಪಟ್ಟಿಕೆಗಳ ವಿಷಯಗಳನ್ನು ಟಿಪ್ಪಣಿಸಿಕೊಂಡು ಈ ಮಹಾಪ್ರಂಧವನ್ನು ಸಿದ್ಧಪಡಿಸಲಾಗಿದೆ.

ಪ್ರಕಟಿತ, ಅಪ್ರಕಟಿತ, ಸಾಹಿತ್ಯಕೃತಿಗಳು, ಶಾಸನನಿಘಂಟುಗಳು, ಪಿಹೆಚ್.ಡಿ. ಮಹಾಪ್ರಭಂಧಗಳು, ಪ್ರವಾಸಿ ಬರಹಗಳು, ನಿಘಂಟು, ವಿಶ್ವಕೋಷ, ಗೇಜೆಟಿಯರ್‌ಗಳು, ದೇಶಿಯ ಭಾಷೆಗೆ ಅನುವಾದಿಸಿದ ಅನುವಾದ ಗ್ರಂಥಗಳು, ಲೇಖನಗಳು ಇವೆಲ್ಲವು ರಥಶಿಲ್ಪಕಲೆಯ ಅಧ್ಯಯನಕ್ಕೆ ಆನುಷಂಗಿಕ ಆಕರ ಸಾಮಗ್ರಿಯಾಗಿ ಬಳಕೆಯಾಗಿವೆ.

◆ ◆ ◆

ಅಧ್ಯಾಯ-ಎರಡು

ರಥಗಳ ಐತಿಹಾಸಿಕ ಹಿನ್ನೆಲೆ

ರಥಗಳ ಐತಿಹಾಸಿಕ ಹಿನ್ನೆಲೆ

ಯಾವುದೇ ಒಂದು ಕಲೆಗೆ ತನ್ನದೇ ಆದ ಐತಿಹಾಸಿಕ ಹಿನ್ನೆಲೆ ಇದ್ದೇ ಇರುತ್ತದೆ. ಜನಪದರಿಂದ ಪರಂಪರಾಗತವಾಗಿ ಆರಾಧನಾ ಕಲೆಯ ಹಿನ್ನೆಲೆಯಲ್ಲಿ ಬೆಳೆದು ಬಂದ ರಥಶಿಲ್ಪವು ಸಹ ಈ ಹೇಳಿಕೆಗೆ ಹೊರತಾಗಿಲ್ಲ.

ಭಾರತೀಯರಲ್ಲಿ ರಥದ ಹಾಗೂ ರಥೋತ್ಸವದ ಕಲ್ಪನೆ ಬಹು ಪ್ರಾಚೀನವಾದುದೆಂದು ತೋರಿಬರುತ್ತದೆ. ನಮ್ಮಲ್ಲಿ ಶಿಲ್ಪ ಹಾಗೂ ವಾಸ್ತುಶಿಲ್ಪಕಲೆಗೆ ಸನಾತನ ಧರ್ಮವೇ ಸ್ಫೂರ್ತಿಯಾದಂತೆ ರಥಶಿಲ್ಪಕಲೆಗೂ ಸಹ ಪ್ರೇರಣೆಯಾಗಿದೆ. ಶಿಲ್ಪಕಲೆ ವೇದಗಳಷ್ಟು ಪ್ರಾಚೀನವಾದುದಾಗಿದೆ. ತ್ವಷ್ಟಾ ಎಂಬ ದೇವಶಿಲ್ಪಿಯ ಹೆಸರು ಋಗ್ವೇದದಲ್ಲಿ ಕಂಡುಬರುತ್ತದೆ. ತೈತ್ಯರೀಯ ಅರಣ್ಯಕದಲ್ಲಿ ಮಹಾಶಿಲ್ಪ ವಿಶ್ವಕರ್ಮ ಮತ್ತು ಕಾಶ್ಯಪರ ಹೆಸರಿನಲ್ಲಿ ಉಲ್ಲೇಖವಿದೆ. ಋಷಿಗಳು ತಮ್ಮ ದಿವ್ಯ ದೃಷ್ಠಿಯಿಂದ ದೇವರ ಪ್ರತ್ಯಕ್ಷ ದರ್ಶವನ್ನು ಪಡೆಯುತ್ತಾರೆ. ತಾವು ದರ್ಶಿಸಿದ ಪರಬ್ರಹ್ಮ ವಸ್ತುವನ್ನು, ಈ ದರ್ಶನದಿಂದ ತಮಗಾದ ಆನಂದವನ್ನು ಮಾತುಗಳಲ್ಲಿ ಅಭಿವ್ಯಕ್ತಪಡಿಸುತ್ತಾರೆ[೧]. ಹೀಗೆ ಋಷಿಮುನಿಗಳು ಕಂಡ ದೇವತಾ ಮೂರ್ತಿಗಳನ್ನು ಶಿಲ್ಪಿಗಳು ತಮ್ಮ ಅದ್ಭುತವಾದ ಕಲ್ಪನಾ ಸಾಮರ್ಥ್ಯದಿಂದ, ಸ್ಥೂಲ ಪದಾರ್ಥಗಳಲ್ಲಿ ಸೃಷ್ಟಿಸಲು ಪ್ರಯತ್ನಿಸುತ್ತಾರೆ. ಈ ಪ್ರಯತ್ನದ ಫಲವಾಗಿ ದೇವತಾ ಮೂರ್ತಿಗಳ ಪ್ರತಿಷ್ಠಾಪನೆ ಯಾಗುತ್ತದೆ. ಅನಂತರ ಶಿಲ್ಪಿಗಳು ಕಂಡರಿಸಿದ ವಿಗ್ರಹಗಳ ಆರಾಧನೆಯಲ್ಲಿ ಮಾನವನು ಆಸಕ್ತನಾಗುತ್ತಾನೆ. ಕಾಲಕ್ರಮೇಣ ಈ ದೇವತಾ ವಿಗ್ರಹಗಳಿಗೆ ದೇವಾಲಯಗಳು ನಿರ್ಮಾಣವಾಗುತ್ತವೆ. ನಂತರ ದೇವರ ಬಗೆಬಗೆಯ ಉತ್ಸವಗಳು ಆರಂಭವಾಗುತ್ತವೆ. ದೇವಾಲಯಗಳಲ್ಲಿ ಪ್ರತಿಷ್ಠಾಪಿಸಲ್ಪಟ್ಟ ದೇವರುಗಳನ್ನು ಉತ್ಸವಗಳ ರೂಪದಲ್ಲಿ ಹೊರಗೆ ಕೊಂಡೊಯ್ದು, ಜನ ಸಾಮಾನ್ಯರ ದರ್ಶನಕ್ಕೆ ಅವಕಾಶವನ್ನು ಕಲ್ಪಿಸಿದರು. ಈ ಹಿನ್ನೆಲೆಯ ಫಲವಾಗಿಯೇ ಪಲ್ಲಕ್ಕಿ ಉತ್ಸವ, ಮೆರವಣಿಗೆ, ರಥೋತ್ಸವ, ಮೊದಲಾದ ಉತ್ಸವಗಳ ಆಚರಣೆ ರೂಢಿಗೆ ಬಂದಿತು[೨]. ಹೀಗೆ ಭಾರತೀಯರ ಸಾಂಸ್ಕೃತಿಕ ಬದುಕಿನಲ್ಲಿ ಬಹು ಪ್ರಾಚೀನ ಕಾಲದಿಂದಲೂ ಈ ಬಗೆಯ ಉತ್ಸವಗಳು ಅನೂಚಾನವಾಗಿ ನಡೆದುಕೊಂಡು ಬರುತ್ತಿದ್ದುವು ಎಂದು ತಿಳಿದು ಬರುತ್ತದೆ.

೧. '' ರಥ ಸಾವಿರ ವರ್ಷಗಳ ಇತಿಹಾಸ(ಲೇ)'' ಪಿ.ಆರ್.ತಿಪ್ಪೇಸ್ವಾಮಿ, ಪ್ರಜಾವಾಣಿ ಪು.ಸಂ. ೧೯, ೧೯೯೫
೨. '' ಉಡಪಿ ರಥಗಳು ಸಾಗಿ ಬಂದ ಪಥ(ಲೇ)'' ಸತೀಶ ಮಲ್ಯ, ಕನ್ನಡ ಪ್ರಭ, ಪು.ಸಂ. ೧೨, ಜುಲೈ ೧, ೧೯೮೮

ರಥದಲ್ಲಿ ಭಗವಂತನೇ ಮೂರ್ತಿ ಸ್ವರೂಪನಾಗಿ ಜೀವಾತ್ಮ ಸ್ವರೂಪದಿಂದ ನೆಲೆಯಾಗಿರುತ್ತಾನೆ.

ಕಠೋಪನಿಷತ್ತಿನಲ್ಲಿ ನಚಿಕೇತುವಿಗೆ ಯಮನು ಉಪದೇಶ ಮಾಡುವಾಗ ರಥದ ರೂಪವನ್ನು ಹೇಳಿಕೊಡುತ್ತಾನೆ.

''ಆತ್ಮಾನಂ ರಥಿನಂ ವಿದ್ಧಿ ಶರೀರಂ ರಥಮೇವ ತು
ಬುದ್ಧಿಂತು ಸಾರಥಿಂ ವಿದ್ಧಿ ಪುನಃ ಪ್ರಗ್ರಹ ಮೇವಚ
ಇಂದ್ರಿಯಾನಿ ಹಯ್ಯನಾ - ಹುರ್ವಿಷಯಸ್ತೇಷಂ ಗೋಚರಾನ್
ಆತ್ಮೇಂದ್ರಿಯ ಮನೋಯುಕ್ತಂ ಭೋಕ್ತ್ಯೈಾಹುರ್ಮನಿಷಿಣ
ಯಸ್ತ್ವು ವಿಜ್ಞಾನ ವಾನ್ಭವತ್ಯಿ ಯುಕ್ತೇನ ಮನಸಾ ಸದಾ.
ತಸ್ಯೇಂದ್ರಿಯಾಣಿ ವಶ್ಯಾನಿ ಸದಶ್ವಾ ಇವ ಸಾರಥೇ'' .

ಇಲ್ಲಿ ರಥವು ಉಪಮಾನವಾಗಿದೆ, ಮಾನವ ಶರೀರವು ಉಪಮೇಯವಾಗಿದೆ. ಈ ರೂಪದಲ್ಲಿ ಆತ್ಮವನ್ನು ರಥಿಕಯಂತಲೂ, ಶರೀರವನ್ನು ರಥವೆಂತಲೂ, ಬುದ್ಧಿಯನ್ನು ರಥದ ಸಾರಥಿಯಂತಲೂ, ಮನಸ್ಸನ್ನು ಕಡಿವಾಣವೆಂತಲೂ, ಇಂದ್ರೀಯಗಳನ್ನು ರಥಕ್ಕೆ ಹೂಡಿದ ದಿವ್ಯಾಶ್ವಗಳೆಂತಲೂ ಹಾಗೂ ವಿಷಯಾಸಕ್ತಿಗಳೇ ಈ ರಥವು ಚಲಿಸುವ ಮಾರ್ಗವೆಂತಲೂ ವರ್ಣಿಸಲಾಗಿದೆ[೮].

ಕಠೋಪನಿಷತ್ತಿನಲ್ಲಿಯ ''ಶರೀರಂ ರಥಮೇವತು'' ಈ ವಾಕ್ಯದ ಅರ್ಥವೇನೆಂದರೆ, ದೇಹ, ದೇವಾಲಯ ಹಾಗೂ ರಥ ಈ ಮೂರು ಒಂದೇ ತತ್ವದ ಭಿನ್ನವಸ್ತುಗಳಾಗಿರುತ್ತವೆ. ಅಂತೆಯೇ ರಥವು ಚಲಿಸಿದರೆ ವಾಹನ, ಸ್ಥಿರವಾದರೆ ದೇವಾಲಯ. ಅದರಂತೆಯೇ ಮನುಷ್ಯನ ದೇಹವು ಕೂಡ ದೇಗುಲದ ಹಾಗೂ ರಥದ ಲಕ್ಷಣವನ್ನು ಹೊಂದಿದೆ ಎಂದು ಹೇಳಬಹುದು[೯].

ಜಗನ್ನಾಥದಾಸರು 'ಹರಿಕಥಾಮೃತಸಾರ' ದಲ್ಲಿಯೂ ರಥದ ರೂಪಕವನ್ನು ನೀಡಿರುವರು.

ಈ ಶರೀರವೇ ರಥ ಪತಾಕೆ ಸು
ವಾಸಗಳೆ ಪುಂಡ್ರಗಳು ಧ್ವಜ ಸಿಂ
ಹಾಸನವೇ ಚಿತ್ತವು ಸುಬುದ್ಧಿಯೆ ಕಲಶ ಸನ್ಮನವೇ
ಪಾಶುಗುಣ ದಂಡಕ್ರಯಗಳು ಶು
ಭಾಶುಭದ್ರಯಕರ್ಮ ಚಕ್ರ ಮ
ಹಾ ಸಮರ್ಥಾತ್ವಗಳು ದಶಕರಣಂಗಳಿನಿಸುವಹು

೮. '' ದೇಗುಲ ರಥಶಿಲ್ಪ'' ದ್ರುವರಾಜ ನಾ. ಗರಗಕರ, ಪು.ಸಂ. ೪೧
೯. ''ವೇದಾಧ್ಯಯನದ ಮಹತ್ವ'' ನಾಗಲಿಂಗಾಚಾರ್ಯರು, ಪು.ಸಂ. ೧೮, ೧೯೭೮

ಮಾತರೀಶ್ವರಂ ದೇಹರದೊಳು

ಸೂತನಾಗಿಹ ಸರ್ವಕಾಲದಿ

ಶ್ರೀ ತರುಣವಲ್ಲಭ ರಥಿಕನೆಂದರಿದು ನಿತ್ಯದಲಿ

ಪ್ರೀತಿಯಿಂದಲಿ ಪೋಷಿಸುತ ವಾ

ತಾತಪಾದಿಗಳಿಂದವಿರತ

ಈ ತನುವಿನೊಳು ಮಮತೆ ಬಿಟ್ಟಿಹನೆಹನೆ ಮಹಾಯೋಗಿ, ಮಾನವ ಶರೀರವೇ ಒಂದು ರಥ ಅವನುಡುವ ಬಟ್ಟೆ ಬರೆಗಳೇ ಧ್ವಜಪಟಲ, ಚಿತ್ತವೆಂಬ ಪೂರ್ಣ ಸ್ಮರಣಶಕ್ತಿಯೇ ಸಿಂಹಾಸನ, ನಿಶ್ಚಯಾತ್ಮಕ ಬುದ್ಧಿಯೇ ರಥದ ಕಲಶ ಸಾಧು, ಆಲೋಚನಾತ್ಮಕ ಮನಸ್ಸು ರಥದ ಹಗ್ಗಗಳು, ಪಾಪ ಪುಣ್ಯಗಳೆಂಬ ಎರಡೂ ಕೃತ್ಯಗಳು ಈ ರಥದ ದಿವ್ಯ ಚಕ್ರಗಳು, ಪಂಚ ಕರ್ಮೇಂದ್ರಿಯ, ಆ ಹತ್ತು ಕರ್ಣಗಳು ಈ ದಿವ್ಯ ರಥದ ಅಶ್ವಗಳಾಗಿವೆ. ಮುಖ್ಯ ಪ್ರಾಣನೇ ಈ ರಥದ ಸಾರಥಿ ಲಕ್ಷ್ಮೀ ಪತಿಯೇ ಈ ದೇಹರಥಕ್ಕೆ ರಥಿಕ ಎಂದು ಹೇಳಿರುವರು[೧೦]. ಇದಲ್ಲದೇ ಶಿವಶರಣರಾದಂತಹ ಬಸವಣ್ಣನವರು,

''ಉಳ್ಳವರು ಶಿವಾಲಯವ ಮಾಡುವರು

ನಾನೇನು ಮಾಡಲಿ ಬಡವನಯ್ಯಯೆ

ಎನ್ನ ಕಾಲೆ ಕಂಬ ದೇಹವೇ ದೇಗುಲ

ಶಿರವೇ ಹೊನ್ನ ಕಳಶವಯ್ಯ'' ಎಂದು ಹೇಳಿರುವರು.

ಅಲ್ಲದೆ ಯೋಗಿಗಳಾದ ಸಂತ ಶಿಶುನಾಳ ಶರೀಫ ಸಾಹೇಬರು,

''ಗುಡಿಯ ನೋಡಿರಣ್ಣಾ

ದೇಹದ ಗುಡಿಯ ನೋಡಿರಣ್ಣಾ

ಗುಡಿಯ ನೋಡಿರಿದು

ಪೊಡವಿಗೆ ಒಡೆಯನು

ಅಡಗಿಕೊಂಡು ಕಡುಬೆಳಗಿನೊಳಿರುತಿಹ

ಗುಡಿಯ ನೋಡಿರಣ್ಣಾ'' ಎಂದು ಹೇಳಿರುವರು.

ಅಲ್ಲದೆ ಶಿವಯೋಗಿಗಳಾದಂತಹ ನಿಜಗುಣ ಶಿವಯೋಗಿಗಳು,

''ಗಾಲಿಯೊಂದರ ರಥವಹಿತ ಪನ್ನಗಣ ಹೊರಜೆ

---

೧೦. '' ದೇಗುಲ ರಥಶಿಲ್ಪ'' ದ್ರುವರಾಜ ನಾ. ಗರಗಕರ, ಪು.ಸಂ. ೪೨

ಯೇಳು ವಾಜಿಗಳು ಸಾರಥಿ ಹೆಳವನಾದರುಣ
ನಾಲಂಬರ ಹಿತವಹ ಮಾರ್ಗವತಿ ಬಲದ ಮಂದೇಹರುಗಳೊಡನಾಹ್ವ
ಮೇಲೆ ತಾನೋರ್ವನೆ ಪಗಲೊಂದರೊಳು ರವಿ ವಿ
ಶಾಲಭದ್ರದ ಕಡೆಗೆ ದಾಂಟುವನು ದೈವಾನು
ಕೂಲಮಿರೆ ವಿಷಮಸಾಧನದಿಂದೆ ತನಗಹುದು ಲೋಕಹಿತವಾದ ಕೀರ್ತಿ''

ಎಂದು ತಮ್ಮ ವಚನದಲ್ಲಿ ದೇಹಕ್ಕೂ ರಥಕ್ಕೂ ಇರುವ ಸಾಮ್ಯತೆಯ ಲಕ್ಷಣಗಳನ್ನು ಹೇಳಿರುವರು. ಇಂಥ ಪರಮ ಅಂತರಾರ್ಥವುಳ್ಳ ರಥೋತ್ಸವದಿಂದ ವಿಶ್ವಕಲ್ಯಾಣವಾಗುವುದೆಂಬ ನಂಬಿಕೆ ಹಿಂದುಗಳಲ್ಲಿ ಗಾಢವಾಗಿದೆ.

ಭಗವಂತನ ಸಾನ್ನಿಧ್ಯವುಳ್ಳ ಭಗವತ್ ಸ್ವರೂಪವೇ ಆಗಿರುವ ರಥದ ರಥೋತ್ಸವವನ್ನು ಶಾಸ್ತ್ರ ರೀತಿಯಲ್ಲಿ ಮಂತ್ರ ಪೂರ್ವಕವಾಗಿ ಆಚರಿಸಿದರೆ, ದೇಶದಲ್ಲಿ ಸುಭಿಕ್ಷತೆ ಶಾಂತಿ ನೆಲೆಸುವುದಲ್ಲದೆ ಪ್ರಜೆಗಳ ಸುಖ ಸಂತೋಷ ನೆಮ್ಮದಿಯ ಜೀವನಕ್ಕೆ ಕಾರಣವಾಗುತ್ತದೆಯೆಂಬ ನಂಬಿಕೆ ನಮ್ಮ ಹಿಂದೂ ಧರ್ಮದಲ್ಲಿ ಬಲವಾಗಿ ಬೇರೂರಿದೆ.

ಪುರಾತನವಾದ ನಮ್ಮ ಹಿಂದೂ ಧರ್ಮದಲ್ಲಿ ರಥ ಪರಂಪರೆಗೆ ವೇದ ಕಾಲದಷ್ಟು ಹಿಂದಿನ ಇತಿಹಾಸವಿದೆ. ಮುಂದೆ ಕಟ್ಟಲ್ಪಟ್ಟ ಕುದುರೆಗಳಿಂದ ಎಳೆಯಲ್ಪಡುವ ಇಂದ್ರನ ಮಹಾರಥದ ಉಲ್ಲೇಖ ಋಗ್ವೇದದಲ್ಲಿದೆ[೧೧].

''ರಥೇ ತಿಷ್ಟನ್ ನಯತಿ ವಾಜಿಃ ಪುರಃ'' ಎಂದು ತಿಳಿಸುವ ಈ ವೇದಮಂತ್ರ, ಭಾರತದಲ್ಲಿ ರಥದ ಅಸ್ತಿತ್ವವನ್ನು ನಿಖರವಾಗಿ ಉಲ್ಲೇಖಿಸುತ್ತದೆ.

ಬ್ರಹ್ಮಾಂಡ ಪುರಾಣದಲ್ಲಿ ತ್ರಿಪುರ ಸಂಹಾರಕ್ಕಾಗಿ ಶಿವನು ರಥವನ್ನು ಬಳಸಿದ ಉಲ್ಲೇಖ ಕಂಡುಬರುತ್ತದೆ. ವಿಷ್ಣು ಧರ್ಮೋತ್ತರ ಪುರಾಣದಲ್ಲಿ ಸೂರ್ಯದೇವನ ರಥದ ಕಲ್ಪನೆಯೇ ಬೇರೆಯಾಗಿದೆ. ಆರು ಅರೆಗಳಿಂದ ಕೂಡಿದ ಚಕ್ರವಿದ್ದು, ಏಳು ಕುದುರೆಗಳಿಂದ ಕೂಡಿದ ರಥಕ್ಕೆ, ಅರುಣನೇ ಸಾರಥಿ. ಗಾಯತ್ರಿ, ಬೃಹತೀ, ಉಷ್ಣಿತ್, ಜಗತೀ, ತ್ರಿಷ್ಟುಪ, ಅನುಷ್ಟಪ್, ಪಜೆ ಎಂಬ ಛಂದಸ್ಸುಗಳೇ ಸೂರ್ಯನ ರಥದ ಏಳು ಅಶ್ವಗಳು ಎಂದು ಹೇಳಲಾಗಿದೆ. ಅಲ್ಲದೆ ಏಳು ಅಶ್ವಗಳು ವಾರದ ಏಳು ದಿನಗಳ ಪ್ರತೀಕವೂ ಆಗಿವೆ. ಸೂರ್ಯನ ರಥದ ಚಕ್ರ ಕಾಲಚಕ್ರದ ಸಂಕೇತವು ಆಗಿದೆ. ''ಕಾಲೋ ಅಶ್ವೋವವತಿಹಿ ಸಪ್ತ ರಶ್ಮಿ'' ಎಂದು ಅಥರ್ವಣವೇದದಲ್ಲಿ ಹೇಳಲಾಗಿದೆ[೧೨]. ಸೂರ್ಯನು ತನ್ನ ಕೈಯಲ್ಲಿರುವ ಕಡಿವಾಣದಿಂದ ಎಲ್ಲ ಜಗತ್ತನ್ನು ಧರಿಸುವಂತೆ ತೋರಿಬರುತ್ತಾನೆ. ಎಲ್ಲ ತೇಜಸ್ಸಿಗೂ ನಿಧಿಯಾಗಿರುವುದರಿಂದ ಸೂರ್ಯನು ರಕ್ತವರ್ಣದಿಂದ ಕೂಡಿರುತ್ತಾನೆ. ಗ್ರಹಗಳ ರಾಜನೆನಿಸಿದ ತೇಜೋನಿಧಿ ಉಜ್ವಲಮೂರ್ತಿಯಾದ ಸೂರ್ಯನು ರಥಾರೂಢನಾಗಿರುವುದನ್ನು ವರ್ಣಿಸಿರುವುದು ತಿಳಿದು ಬರುತ್ತದೆ.'ರಥಸ್ಥಂ ಭಾಸ್ಕರಂ ದೃಷ್ಟ್ವಾ ಪುನರ್ಜನನ ವಿದ್ಯತೇ' ಎಂದೂ

---

೧೧. '' ಉರುಳುಗಾಲಿಯ ರಥಗಳು ಉರುಳಿಬಂದ ಕಥೆ'' ಅಶೋಕ ಹಾಸ್ಯಗಾರ, ಸಂಯುಕ್ತ ಕರ್ನಾಟಕ, ಜುಲೈ ೧೫, ೧೯೯೦
೧೨. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೨೦,೧೯೯೫

ಹೇಳಲಾಗಿದೆ. ಅಂದರೆ ರಥಾರೂಢನಾದ ಭಾಸ್ಕರನನ್ನು ನೋಡುವ ಪುಣ್ಯವಂತರಿಗೆ ಪುನರ್ಜನ್ಮವಿರಲಾರದು ಎಂದರ್ಥ[೧೩].

ರಥವು ಮನುಷ್ಯನ ದೇಹದ ಅಂತರ್ ಲಕ್ಷಣಗಳ ಸಂಕೇತವಾಗಿರುವುದರಿಂದ, ಆಧ್ಯಾತ್ಮಿಕತೆಯ ಹಿನ್ನೆಲೆಯಲ್ಲಿ ಹೇಳುವುದಾದರೆ ಯಾರು ದೇಹವೆಂಬ ರಥದಲ್ಲಿ, ಕೋಟಿ ಸೂರ್ಯಪ್ರಭೆಯಿಂದ ಜಗವನ್ನು ಬೆಳಗುತ್ತಿರುವ ಆತ್ಮವನ್ನು ಸಾಕ್ಷಾತ್ಕರಿಸಿಕೊಂಡು, ಆ ದಿವ್ಯ ಬೆಳಕಿನಲ್ಲಿ ಬೆರೆಯುವರೋ, ಅವರಿಗೆ ಪುನರ್ಜನ್ಮವಿರಲಾರದೆಂದು ತಿಳಿದುಬರುತ್ತದೆ.

ಶಿಲ್ಪರತ್ನಾಕರ, ರುದ್ರವಾಸ್ತು, ಪರಾಶರವಾಸ್ತು ಮೊದಲಾದ ಪ್ರಾಚೀನ ಗ್ರಂಥಗಳಲ್ಲಿ ರಥಗಳ ಬಗ್ಗೆ ಉಲ್ಲೇಖಗಳಿವೆ. ಪುಷ್ಪಕ ರಥ, ವಿಮಾನ ರಥ, ಸೌಮ್ಯ ರಥ, ಕಾಂತ ರಥ, ವಿದ್ಯಾಧರ ರಥ, ಸ್ಯಂದನ ರಥ, ಗಂಧರ್ವ ರಥ, ಮತ್ತು ಸುರಪುಷ್ಪಕ ರಥ ಹೀಗೆ ಅನೇಕ ಬಗೆಯ ರಥಗಳನ್ನು ಹೆಸರಿಸಲಾಗಿದೆ. ಈ ಎಲ್ಲ ರಥಗಳು ಬೇರೆ ಬೇರೆ ದೇವತೆಗಳಿಗೆ ಋಷಿಮುನಿಗಳಿಗೆ, ಬೇರೆ ಬೇರೆ ಆಕಾರದಲ್ಲಿ ರಚಿತವಾಗಿರಬೇಕೆಂದು ಅಲ್ಲಿ ವಿವರವಾಗಿ ಪ್ರಸ್ತಾಪಿಸಲಾಗಿದೆ[೧೪].

ವಿಮಾನ ರಥವು ಭಾರ್ಗವ, ರಘುವಂಶದವರು, ಜರಾಸಂದ ರಾಕ್ಷಸರು, ವಾಲ್ಮೀಕಿ ನಾರದ ಮುಂತಾದವರಿಗೂ, ಸೌಮ್ಯ ರಥವು ಸೌಮ್ಯ ಮೂರ್ತಿಗಳಾದ ಅಗಸ್ತ್ಯ, ತಂಬುರ, ವಶಿಷ್ಠಾದಿ ಋಷಿಗಳಿಗೆ ಮಾತ್ರವೆಂತಲೂ, ಕಾಂತ ರಥವು ಸಪ್ತ ಮಾತೃಕೆಯರು ಹಾಗೂ ಪ್ರಭಾವತಿ, ರುಕ್ಮಿಣಿ, ರೋಹಿಣಿ, ಶಚಿದೇವಿ ಮುಂತಾದವರಿಗೆಂದೂ, ವಿದ್ಯಾಧರ ರಥವು ಗಂಧರ್ವರಿಗೂ, ಷಣ್ಮುಕಾದಿ ದೇವತೆಗಳಿಗೂ, ಕಾಳಿದಾಸಾದಿ ಪಂಡಿತರಿಗೂ, ಸ್ಯಂದನ ರಥವು ರಾಜರು, ರಾಜಗುರುಗಳಿಗೂ, ರಾಕ್ಷಸರಿಗೂ, ಸಿದ್ಧರು ಮೊದಲಾದವರಿಗೂ, ಗಂಧರ್ವ ರಥವನ್ನು ಯಕ್ಷ, ಗಂಧರ್ವ, ಗರುಡಾದಿ, ಆಕಾಶದಲ್ಲಿ ಸಂಚರಿಸುವವರೂ ಬಳಸಬಹುದೆಂಬ ವರ್ಣನೆಯಿದೆ.

ಋಗ್ವೇದದಲ್ಲಿ ಅಶ್ವಿನಿ ದೇವತೆಗಳು ಬಳಸುತ್ತಿದ್ದ ದಿವ್ಯ ರಥಗಳ ಉಲ್ಲೇಖವಿದೆ. ದೇವಶಿಲ್ಪಿ ಋಭುಗಳಿಂದ ನಿರ್ಮಿತವಾದ, ಅಶ್ವಿನಿ ದೇವತೆಗಳ ರಥವು ವಿಲಕ್ಷಣ ಹಾಗೂ ಗಮನಶೀಲವಾದುದು. ಈ ದಿವ್ಯ ರಥವು ವಜ್ರದಂತಹ ಮೂರು ಶಿಖರಗಳನ್ನು ಹಾಗೂ ಮೂರು ಆಸನಗಳನ್ನು ಹೊಂದಿದ್ದು, ಈ ರಥಕ್ಕೆ ಮೂರು ದಿವ್ಯಾಶ್ವಗಳನ್ನಾಗಲಿ ಇಲ್ಲವೆ ಮೂರು ಹೇಸರಗತ್ತೆಗಳನ್ನಾಗಲಿ ಹೂಡಲಾಗುತ್ತಿತ್ತು. ನಿರಂತರವಾಗಿ ಚಲಿಸುತ್ತಿದ್ದ ಈ ರಥವು ಮನಸ್ಸಿನ ವೇಗಕ್ಕಿಂತಲೂ ಮಿಗಿಲಾಗಿತ್ತೆಂದು ಹೇಳಲಾಗಿದೆ[೧೫].

ಮಾನಸಾರ ಗ್ರಂಥದಿಂದ ಇನ್ನೂ ಕೆಲವೊಂದು ವಿಷಯಗಳು ತಿಳಿದು ಬರುತ್ತವೆ. ದೇವರುಗಳಿಗೆ, ಬ್ರಾಹ್ಮಣರಿಗೆ ಹಾಗೂ ಕ್ಷತ್ರಿಯರಿಗೆ ಬೇರೆ ಬೇರೆ ಬಗೆಯ ರಥಗಳನ್ನು ಉಪಯೋಗಿಸಬೇಕೆಂದು ಹೇಳಲಾಗಿದೆ. ಇದಲ್ಲದೆ ಮಾನಸಾರ ಗ್ರಂಥವು ಏಳು ವಿಧದ ರಥಗಳನ್ನು ಹೆಸರಿಸಿದೆ. ಅವು ಈ ರೀತಿಯಲ್ಲಿವೆ. ನಭಸವನ ಭದ್ರಕ, ಪ್ರಭಂಜನ ಭದ್ರಕ, ನಿವಾತ ಭದ್ರಕ, ಪವನ ಭದ್ರಕ, ಪ್ರಸಾದ ಭದ್ರಕ, ಇಂಪ್ರಕ ಅನೀಲ ಭದ್ರಕ. ಈ ಎಲ್ಲ ರಥಗಳು ವಿವಿಧ ವಿನ್ಯಾಸಗಳ ಮುಖಮಂಟಪಗಳನ್ನು ಹೊಂದಿದ ರಥಗಳಾಗಿವೆ. 'ವಿಜಯ ತಂತ್ರ' ಗ್ರಂಥವು ಪತ್ರಕಲ್ಪ, ಚಿತ್ರಕಲ್ಪ

೧೩. '' ಉರುಳುಗಾಲಿಯ ರಥಗಳು ಉರುಳಿಬಂದ ಕಥೆ'' ಅಶೋಕ ಹಾಸ್ಯಗಾರ, ಸಂಯುಕ್ತ ಕರ್ನಾಟಕ, ಜುಲೈ ೧೫, ೧೯೯೦,

೧೪. ''ಶ್ರೀ ಚಿತ್ರಾಪುರ ರಥೋತ್ಸವ '' ಸಂತೋಷಕುಮಾರ ಗುಲವಾಡಿ, ಪು.ಸಂ. ೧೬, ೧೯೭೩

೧೫. '' ರಥೊತ್ಸವದ ಮಹತ್ವ'' ಪಂಡಿತ ಗುತ್ತಲ ರಂಗಾಚಾರ್ಯ, ಸುಧಾ , ಪು.ಸಂ. ೪೩, ೧೯೮೮



ಶ್ರೀ ವಿಜಯಲಕ್ಷ್ಮೀ ರಥ




ಶ್ರೀ ಸೂರ್ಯದೇವನ ರಥ



ಶ್ರೀ ಕಾಳಿಕಾಮಾತೆ ರಥ



ಶ್ರೀ ಶನಿದೇವನ ರಥ



ಶ್ರೀ ಶ್ರೀರಾಮನ ರಥ

ಹಾಗೂ ರತ್ನಕಲ್ಪ ಎಂಬ ಮೂರು ವಿಧದ ರಥಗಳನ್ನು ಹೆಸರಿಸಿದೆ. ಈ ಮೂರೂ ವಿಧದ ರಥಗಳು ದೇವತೆಗಳು ಉಪಯೋಗಿಸಲು ಅರ್ಹವಾದಂತವುಗಳಾಗಿವೆ. 'ಕುಮಾರತಂತ್ರ' ಗ್ರಂಥವು ವಿಜಯಕಾಂತ, ಶ್ರೀರಕ, ವಿಶಾಲ, ನಿಭದ್ರ, ಶ್ರೀ ವಿಶಾಲಭದ್ರ, ಹಾಗೂ ಭದ್ರ ವಿಶಾಲಕ ಎಂದು ಎಂಟು ಬಗೆಯ ರಥಗಳನ್ನು ಹೆಸರಿಸಿದೆ[೧೬].

ಹೇಮಚಂದ್ರ ವಿರಚಿತ 'ಬ್ರಹ್ಮವೈವರ್ತ' ಪುರಾಣದಲ್ಲಿ ರಥಗಳ ವಿವರ ಬರುತ್ತದೆ. ಗೋಲೋಕ ರಥ, ದೇವಿ ರಥ, ನವಗ್ರಹ ರಥಗಳು, ಯುದ್ಧಕ್ಕೆ ಬಳಸುವ ಶಕಾಂಗ ರಥ, ದೇವರಿಗೆ ಬಳಸುವ ಮಹಾರಥ, ಅಶ್ವಿನಿಕುಮಾರರ ಮೂರು ಆಸನಗಳ ಚಿನ್ನದ ರಥಗಳನ್ನು ಹೆಸರಿಸಲಾಗಿದೆ. ಇದಲ್ಲದೆ ಗೋಲೋಕ ರಥವು ಚಿನ್ನದಿಂದ ರಚಿಸಲ್ಪಟ್ಟಿದ್ದು, ರತ್ನದ ಸ್ತಂಭಗಳು, ರತ್ನ ಕಲಶ, ಶ್ವೇತ ಚಾಮರ, ದುಕೂಲವಸ್ತ್ರ ಹಾಗೂ ಪಾರಿಜಾತ ಪುಷ್ಪಮಾಲೆಯಿಂದ ಅಲಂಕಾರಗೊಂಡು ನೂರು ಚಕ್ರಗಳಿಂದ ಕೂಡಿದ ಮನೋವೇಗದ ರಥವೆಂದು ಹೇಳಲಾಗಿದೆ. ದೇವಿ ರಥವು ಹಸ್ತಿದಂತದಿಂದ ನಿರ್ಮಿಸಲ್ಪಟ್ಟು ಚಿನ್ನದ ಕಳಶಗಳು, ಪತಾಕೆ, ಧ್ವಜಗಳಿಂದ ಕೂಡಿದ ರಥವೆಂದು ಹೇಳಿದೆ[೧೭].

ನವಗ್ರಹ ರಥಗಳಲ್ಲಿ ಸಾವಿರ ಯೋಜನ ದೀರ್ಘದ ಸೂರ್ಯನ ರಥವು ಏಳು ಕುದುರೆಗಳಿಂದ ಕೂಡಿರುತ್ತದೆ. ಮೂರು ಚಕ್ರಗಳ ಬಿಳಿ ಕುದುರೆಯ ಚಂದ್ರ ರಥ, ಎಂಟು ಕುದುರೆಗಳ ವಾಯುವೇಗದ ಬುಧ ರಥ, ಹತ್ತು ಕುದುರೆಗಳ ಶುಕ್ರ ರಥ, ಎಂಟು ಕುದುರೆಗಳ ಚಿನ್ನದ ಕುಜ ರಥ, ಇದೇ ರೀತಿಯ ಗುರು ರಥ, ಕಬ್ಬಿಣದಿಂದ ನಿರ್ಮಿಸಲ್ಪಟ್ಟ ಶನಿ ರಥ, ಆರು ಕುದುರೆಗಳ ರಾಹು ಹಾಗೂ ಕೇತುಗಳೆಂಬ ರಥಗಳ ವಿವರವಿದೆ. ಹಲವು ಹಂತಗಳನ್ನು ಹೊಂದಿರುವ ಈ ರಥಗಳನ್ನು ಶಾಸ್ತ್ರೀಯವಾಗಿ ಆಗಮೋಕ್ತ ಪ್ರಮಾಣಗಳ ಪ್ರಕಾರ ಸಿದ್ಧಗೊಳಿಸುವರೆಂದು ಹೇಳಲಾಗಿದೆ[೧೮].

ಪೌರಾಣಿಕ ಗ್ರಂಥಗಳಾದ ರಾಮಾಯಣ ಹಾಗೂ ಮಹಾಭಾರತಗಳಲ್ಲಿಯೂ ರಥಗಳ ಬಗ್ಗೆ ಉಲ್ಲೇಖಗಳಿವೆ. ಸೀತೆ ಮಾಯಾವೃತ್ತದಿಂದ ಹೊರ ಬಂದೊಡನೆಯೇ ಭಿಕ್ಷುವು ರಾಕ್ಷಸ ಅವತಾರವನ್ನು ತಳೆದು ತನ್ನ ಕೈಗಳಿಂದ ಆಕೆಯನ್ನು ಹಿಡಿದು, ತನ್ನ ಮಾಯಾರಥದಲ್ಲಿ ಆಕೆಯನ್ನು ಕೂರಿಸಿಕೊಂಡು ಹಾರಿಹೋದನೆಂದು ತಿಳಿದು ಬರುತ್ತದೆ. ಇದಲ್ಲದೆ, ರಾಮನು ಸೀತೆಯನ್ನು ಅರಸುತ್ತ ಹೊರಟು ಕಪಿಗಳೊಂದಿಗೆ ಸಖ್ಯವನ್ನು ಸಂಪಾದಿಸಿದ ನಂತರ, ರಥವೊಂದು ಆಕಾಶ ಮಾರ್ಗವಾಗಿ ಹಾರಿಹೋಗುತ್ತಿರುವುದನ್ನು ಮತ್ತು ತುಂಬ ಸುಂದರಿಯಾದ ಹೆಂಗಸೊಬ್ಬಳು ಅಳುತ್ತ, ತಮ್ಮ ಗಮನ ಸೆಳೆಯಲು ಆಭರಣಗಳಲ್ಲಿ ಒಂದನ್ನು ರಥವು ಆಕಾಶ ಮಾರ್ಗದಲ್ಲಿರುವಾಗಲೇ ತಮ್ಮ ತಲೆಯ ಮೇಲೆ ಎಸೆದಳೆಂದು ಕಪಿಗಳು ಹೇಳಿದವು[೧೯]. ಇದಲ್ಲದೆ ಕೊನೆಯ ಸಂದರ್ಭದಲ್ಲಿ ರಾಮ ರಾವಣರ ನಡುವೆ ಯುದ್ಧ ನಡೆದಾಗ ರಥಗಳು ಬಳಕೆಗೊಂಡಿದ್ದವು ಎಂದು ರಾಮಾಯಣದಿಂದ ತಿಳಿದು ಬರುತ್ತದೆ.

ಮಹಾಭಾರತದಲ್ಲಿ ಅನೇಕ ಸನ್ನಿವೇಶಗಳಲ್ಲಿ ರಥಗಳ ಬಳಕೆಯು ಕಂಡು ಬರುವುದು. ಮುಖ್ಯವಾಗಿ ಕೌರವ ಹಾಗೂ ಪಾಂಡವರ ನಡುವೆ ಯುದ್ಧ ನಡೆಯುವ ಸಂದರ್ಭದಲ್ಲಿ ತನ್ನೆಲ್ಲ

---

೧೬. '' ರಥ ಸಾವಿರ ವರ್ಷಗಳ ಇತಿಹಾಸ '' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೧೯,೧೯೯೫
೧೭. '' ರಥ ಸಾವಿರ ವರ್ಷಗಳ ಇತಿಹಾಸ '' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೧೯,೧೯೯೫
೧೮. ''ನವ ಗ್ರಹಗಳು ಮತ್ತು ನಂಬಿಕೆ'' ಶ್ರೀ ಕಂಠಾಚಾರ್ಯ, ಸುಧಾ, ಪು.ಸಂ. ೧೫, ೨೬ ಜನವರಿ ೧೯೯೦
೧೯. '' ಸೀತಾಪಾಹರಣ '' ಎಸ್. ಶ್ರೀನಿವಾಸ ಮೂರ್ತಿ, ಜುಲೈ ೧೯೯೧

ಬಂಧುಗಳ ವಧೆಗೆ ನಿರಾಕರಿಸಿ ಕೈಚೆಲ್ಲಿ ಕುಳಿತ ಅರ್ಜುನನಿಗೆ ಕೃಷ್ಣಪರಮಾತ್ಮನು ರಥದಲ್ಲಿಯೇ ಗೀತೋಪದೇಶವನ್ನು ಮಾಡಿದನೆಂದು ತಿಳಿದು ಬರುತ್ತದೆ.

ಹೀಗೆಯೇ ಕೆಲವು ಪ್ರಾಚೀನ ಗ್ರಂಥಗಳಾದ ಶಾರದಾ ತಿಲಕ, ವಾತುಳಾಗಮ, ಶಿಲ್ಪರತ್ನಾಕರ, ರುದ್ರವಾಸ್ತು, ಪರಾಶರವಾಸ್ತು, ವಿಷ್ಣುಧರ್ಮೋತ್ತರ ಪುರಾಣ, ಬ್ರಹ್ಮವೈವರ್ತ ಪುರಾಣ, ಶೈವಾಗಮ, ವೈಷ್ಣವಾಗಮ, ತಂತ್ರಾಗಮ, ಕಾರಗಾಗಮ, ಕಾಮಿಕಾಗಮ ಹಾಗೂ ಸುಪ್ರಬೇಧಾಗಮಗಳಲ್ಲಿ ರಥಗಳ ನಿರ್ಮಾಣ ಹಂತದ ಕೆಲವು ಸಂಕ್ಷಿಪ್ತ ವಿವರಣೆಗಳನ್ನು ಹೇಳಲಾಗಿದೆ[೨೦].

ಹಲವು ನಾಗರಿಕತೆಗಳಲ್ಲಿ ರಥಗಳ ಬಳಕೆಯು ಪ್ರಾರಂಭಗೊಂಡು, ರಥ ನಿರ್ಮಾಣ ಹಂತದಲ್ಲಿ ಹಲವು ಆವಿಷ್ಕಾರಗಳು ನಡೆದವು. ಆರಂಭದಲ್ಲಿ ಮರದಿಂದ ನಿರ್ಮಿಸಲಾದ ರಥಗಳು ಅಸ್ಥಿತ್ವದಲ್ಲಿದ್ದು, ಅನಂತರ ಬಹುಕಾಲ ಬಾಳಿಕೆಬರುವಂತಹ ಲೋಹದ ರಥಗಳು ನಿರ್ಮಾಣಗೊಂಡಿರಬಹುದು. ಮೊದಮೊದಲು ಎರಡು ಚಕ್ರಗಳನ್ನುಳ ರಥಗಳು ಉಪಯೋಗಿಸಲ್ಪಡುತ್ತಿದ್ದು, ನಂತರ ನಾಲ್ಕು ಚಕ್ರಗಳನ್ನುಳ್ಳ ರಥಗಳು ಬಳಕೆಗೆ ಬಂದವು[೨೧].

ಪ್ರಾದೇಶಿಕವಾಗಿ ಆಯಾ ಕಾಲಮಾನದ ಪರಿಸ್ಥಿತಿಗೆ ಅನುಗುಣವಾಗಿ ನವೀನತೆಯನ್ನು ಮೈಗೂಡಿಸಿಕೊಂಡು, ಹಲವು ಪ್ರಕಾರದ ರಥಗಳು ಬೆಳೆದು ಬಂದವು.

ನಮ್ಮ ರಾಜ ಮಹಾರಾಜರು ಹಲವು ಬಗೆಯ ರಥಗಳನ್ನು ವಿವಿಧ ಉದ್ದೇಶಗಳಿಗಾಗಿ ಬಳಸುತ್ತಿದ್ದರು.

ತಂಜಾವೂರು ಜಿಲ್ಲೆಯ ತಿರುವಾಂಕೂರಿನಲ್ಲಿರುವ ಶಿಲಾ ರಥಕ್ಕೆ ಸಂಬಂಧಿಸಿದ ದಂತ ಕಥೆಯೊಂದಿದೆ. ''ಮನುನಿದಿ ಚೋಳರಾಜನ ಪುತ್ರ ಒಂದು ದಿನ ರಥದಲ್ಲಿ ಬರುತ್ತಿದ್ದಾಗ ಕರುವೊಂದು ರಥದ ಗಾಲಿಗೆ ಸಿಕ್ಕು ಮರಣಹೊಂದಿತು. ತನ್ನ ಕಂದನನ್ನು ಕಳೆದುಕೊಂಡ ತಾಯಿ ಗೋವು ಅರಮನೆಯ ದ್ವಾರಕ್ಕೆ ಹೋಯಿತು. ಅಲ್ಲಿದ್ದ ನ್ಯಾಯದ ಗಂಟೆಯನ್ನು ಎಳೆಯಿತು. ಗೋವಿನ ಕಥೆ ಕೇಳಿದ ರಾಜನು ತನ್ನ ಮಗನ ಮೇಲೆ ರಥವನ್ನೇ ಹರಿಸುವಂತೆ ತೀರ್ಮಾನ ಕೊಟ್ಟ ರಾಜನು ನಿಷ್ಪಕ್ಷಪಾತದಿಂದ ಕೊಟ್ಟ ತೀರ್ಪಿನಿಂದ ತೃಪ್ತಿ ಹೊಂದಿದ ಗೋವು ರಾಜಕುಮಾರನಿಗೆ ಮರಳಿ ಜೀವ ಕೊಟ್ಟಿತಂತೆ''.[೨೨]

ರಾಜನು ಪಟ್ಟಾಭಿಷೇಕ ಸಮಯದಲ್ಲಿ ಬಳಸಲ್ಪಡುತ್ತಿದ್ದ ವಿಶಿಷ್ಟ ಬಗೆಯ ಗೋರಥದ ವರ್ಣನೆ, ಮಹಾಭಾರತದಲ್ಲಿ ಈ ರೀತಿಯಲ್ಲಿ

''ತತೋ ನವಂ ರಥಂ ಶುಭ್ರಂ ಕಂಬಳಾಜಿನಂ ಸಂವೃತ

ಯುಕ್ತೋಷ್ಟೋಡಭೀಃ ಗೋಬಿಃ ಪಾಂಡುರೈಃ ಶುಭ ಲಕ್ಷಣ್ಯೆ

ಮಂತ್ರೈಃ ಅಭ್ಯರ್ಚಿತಂ ಪುಣ್ಯ್ಯೈಃ ಸ್ತೂಯಮಾಂಶ್ಚವಂಧಿಭಿ

೨೦. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ.೨೦,೧೯೬೫
೨೧. '' ಉರುಳುಗಾಲಿಯ ರಥಗಳು ಉರುಳಿಬಂದ ಕಥೆ'' ಅಶೋಕ ಹಾಸ್ಯಗಾರ, ಸಂಯುಕ್ತ ಕರ್ನಾಟಕ, ಜುಲೈ ೧೫, ೧೯೯೦,
೨೨. '' ತಂಜಾ ಊರು ಕಲೆಯ ಆಗರ '' ಎಂ. ರಾಮರಾವ್, ಕನ್ನಡ ಪ್ರಭ, ಜುಲೈಲ, ೧೯೮೪

ಆರುರೋಹ ಯಥಾದೇವ ಸೋವೋ ಅಮೃತಮಯಂ ರಥಂ''

ರಾಜನು ಹೊಸದಾಗಿ ರಾಜ್ಯಭಾರವನ್ನು ವಹಿಸಿಕೊಂಡು ಸಿಂಹಾಸನವನ್ನು ಅಲಂಕರಿಸುವ ಸಮಯದಲ್ಲಿ, ಹದಿನಾರು ಗೋವುಗಳಿಂದ ಎಳೆಯುತ್ತಿದ್ದ ಗೋರಥದಲ್ಲಿ ಆಸೀನನಾಗಿ ನಗರ ಸಂಕೀರ್ತನೆಯನ್ನು ಮಾಡಿ ಅನಂತರ ಸಿಂಹಾಸನವನ್ನು ಆರೋಹಣ ಮಾಡುತ್ತಾನೆಂದು ಗ್ರಂಥಗಳಾಧಾರದಿಂದ ತಿಳಿಯುತ್ತದೆ.

ಕೌಟಿಲ್ಯನು ಅರ್ಥಶಾಸ್ತ್ರದಲ್ಲಿ ಮೂರು ವಿಧದ ರಥಗಳನ್ನು ಹೆಸರಿಸಿರುವನು.ದೇವರಥ, ಪುಷ್ಪರಥ ಹಾಗೂ ಪುರಜನರು ಮತ್ತು ರಾಜ ಮಹಾರಾಜರು ಯುದ್ಧಗಳಲ್ಲಿ ಬಳಸುವ ರಥಗಳು. ದೇವ ರಥವು ದೇವರಿಗಾಗಿ ಮಾತ್ರ ಮೀಸಲಾಗಿದ್ದು, ಪುಷ್ಪರಥಗಳನ್ನು ರಾಜ ಮಹಾರಾಜರು ವಿಹಾರ ಸಂದರ್ಭದಲ್ಲಿ ಉಪಯೋಗಿಸುತ್ತಿದ್ದರು. ಪುರಜನರು ತಮ್ಮ ದಿನನಿತ್ಯದ ಕೆಲಸ ಕಾರ್ಯಗಳಲ್ಲಿ ಕೆಲವು ರಥಗಳನ್ನು ಬಳಸಿದರೆ, ರಾಜ ಮಹಾರಾಜರು ಸಂಗ್ರಾಮದಲ್ಲಿ ಬಳಸುತ್ತಿದ್ದ ರಥಗಳು ಬೇರೆಯಾಗಿಯೇ ಇರುತ್ತಿದ್ದವು[೨೩].

ಇದಲ್ಲದೆ ಕರ್ಣಿ ರಥಗಳನ್ನು ರಾಜಮಾತೆಯರ ವಿಹಾರಕ್ಕಾಗಿಯೂ, ಸಂಗ್ರಾಮಿಕ ರಥಗಳನ್ನು ಸಂಗ್ರಾಮದಲ್ಲಿಯೂ, ವೈಣಿಕ ರಥಗಳನ್ನು ರಥ ನಡೆಸುವ ತರಬೇತಿ ಪಡೆಯುವಲ್ಲಿಯೂ, ಪಂದ್ಯಕ್ಕಾಗಿ ಪಂದ್ಯದ ರಥಗಳು, ಪುಷ್ಯ ರಥಗಳನ್ನು ರಾಜ ಮಹಾರಾಜರ ಮೆರವಣಿಗೆಯ ವಿಶೇಷ ಸಂದಂರ್ಭದಲ್ಲಿಯೂ, ವಿಹಾರಕ್ಕಾಗಿ ವಿಹಾರ ರಥಗಳು ನೌಕಾವಿಹಾರಕ್ಕಾಗಿ ನೌಕಾ ರಥಗಳನ್ನೂ, ದಿನ ಬಳಕೆಯ ರಥಗಳನ್ನು ದಿನನಿತ್ಯದ ಕಾರ್ಯಗಳಿಗಾಗಿಯೂ ಬಳಸುತ್ತಿದ್ದರು.

ಅಲೆಗ್ಸಾಂಡರ್ ಹಾಗೂ ಪೋರಸ್‌ನ ನಡುವೆ ನಡೆದ ಕದನದಲ್ಲಿ ಉಪಯೋಗಿಸಲ್ಪಟ್ಟ ರಥಗಳೇ, ಯುದ್ಧದ ಕೊನೆಯ ರಥಗಳಾಗಿರಬಹುದು[೨೪]. ಮಧ್ಯಯುಗದ ನಂತರದಲ್ಲಿ, ಪೌರಾಣಿಕ ಕಾಲದಲ್ಲಿ ಮೆರೆದ ರಥಗಳು ನಮಗೆ ನೋಡಲು ದೊರೆಯುವುದಿಲ್ಲ. ಆದರೆ ಇಂತಹ ರಥಗಳ ಮಾದರಿಗಳನ್ನು ವಾಸ್ತುಶಿಲ್ಪದಲ್ಲಿ ಕಾಣಬಹುದು. ಪಟ್ಟದ ರಥ (ರಾಜರಥ), ಪುಷ್ಯರಥ, ಸಾಂಗ್ರಮಿಕ ರಥ (ಸಮರ ರಥ), ಪರಿಯಾಂಕ ಮತ್ತು ಸಾಗಾಣೆ ಮೊದಲಾದ ಅಶ್ವ ರಥಗಳನ್ನು ವ್ಯಾಪಕವಾಗಿ ಹೊಯ್ಸಳರು ಬಳಸುತ್ತಿದ್ದುದರಿಂದ, ಹೊಯ್ಸಳ ಕಲಾಕಾರರಿಗೆ ಸುಪರಿಚಿತವಾಗಿದ್ದವು. ಯುದ್ಧಕಾಲ ಹಾಗೂ ಶಾಂತಿಕಾಲಗಳೆರಡರಲ್ಲಿಯೂ ರಥಗಳು ಪ್ರಮುಖ ಪಾತ್ರ ವಹಿಸುತ್ತಿದ್ದವು. ಹೊಯ್ಸಳ ದೇವಾಲಯಗಳ ಪಟ್ಟಿಕೆಗಳಲ್ಲಿ, ಭಿತ್ತಿಗಳಲ್ಲಿನ ಅಲಂಕಾರ ಪಟ್ಟಿಕೆಗಳಲ್ಲಿ ವಿವಿಧ ಬಗೆಯ ರಥಗಳನ್ನು ಕೆತ್ತಲಾಗಿದೆ.

ಬೇಲೂರು ಚನ್ನಕೇಶವ ದೇವಾಲಯದ ಹೊರಗೋಡೆಯ ಮಧ್ಯದಲ್ಲಿ ಅಲಂಕಾರ ಪಟ್ಟಿಕೆಗಳಲ್ಲಿ ವಿವಿಧ ಬಗೆಯ ರಥಗಳ ಮಾದರಿಗಳನ್ನು ಹೊಂದಿದ ಉಬ್ಬುಶಿಲ್ಪವಿನ್ಯಾಸವನ್ನು ಕೆತ್ತಲಾಗಿದೆ. ಇಬ್ಬರು ಯೋಧರು ಎರಡೆರಡು ಅಶ್ವಗಳನ್ನು ಹೊಂದಿದ ರಥಗಳಲ್ಲಿ ಮುಖಾಮುಖಿಯಾಗಿ ನಿಂತು ಬಾಣಪ್ರಯೋಗ ಮಾಡುತ್ತಿರುವಂತೆ ಕೆತ್ತಲಾಗಿದೆ. ದೇವಸ್ಥಾನದ ಎಡಗಡೆಯ ಗೋಡೆಯ ಮಧ್ಯಪಟ್ಟಿಕೆಯಲ್ಲಿ ಮತ್ತೊಂದು ರಥದ ಸಾಲಿನ ಶಿಲ್ಪವಿನ್ಯಾಸಗಳನ್ನು

೨೩. '' ಉರುಳುಗಾಲಿಯ ರಥಗಳು ಉರುಳಿಬಂದ ಕಥೆ'' ಅಶೋಕ ಹಾಸ್ಯಗಾರ, ಸಂಯುಕ್ತ ಕರ್ನಾಟಕ, ಜುಲೈ ೧೫, ೧೯೯೦
೨೪. ''ಪ್ರಾಚೀನ ಕಾಲದಲ್ಲಿ ರಥಗಳ ಪಾತ್ರ'' ಎಸ್. ಮಂಜುನಾಥ, ಕನ್ನಡ ಪ್ರಭ, ೧೯೮೯

ಕಾಣಬಹುದು. ರಾಜಕುಮಾರನು ಸುಂದರವಾದ ಕಂಬ ಕಮಾನುಗಳಿಂದ ಕೂಡಿದ ಹಾಗೂ ಮೇಲೆ ದುಂಡನೆಯ ಛತ್ರಿಯನ್ನು ಹೊಂದಿರುವ ರಥದಲ್ಲಿ ಗಂಭೀರವಾಗಿ ಕುಳಿತಿರುವಂತೆ ಹಾಗೂ ಮೆರವಣಿಗೆಯಲ್ಲಿ ಪಾಲ್ಗೊಂಡ ಅವನ ಮಂತ್ರಿ ಹಾಗೂ ರಾಜಗುರುಗಳು ಎರಡು ಗಾಲಿಗಳಿರುವ ಹಾಗೂ ಎರಡು ಅಶ್ವಗಳನ್ನು ಹೊಂದಿದ ರಥದಲ್ಲಿ ಸಂಭಾಷಣೆಯಲ್ಲಿ ತೊಡಗಿರುವಂತೆ ಉಬ್ಬುಶಿಲ್ಪವನ್ನು ರಚಿಸಲಾಗಿದೆ. ಸೋಮನಾಥಪುರದ ಕೇಶವ ದೇವಾಲಯದ ಹೊರಗಡೆಯ ಗೋಡೆಯ ಅಲಂಕಾರ ಪಟ್ಟಿಕೆಗಳಲ್ಲಿ ಸುಂದರವಾದ ಅಶ್ವರಥಗಳ ಹಾಗೂ ಪಕ್ಷಿ ರಥಗಳ ಉಬ್ಬುಶಿಲ್ಪಗಳನ್ನು ಕಾಣಬಹುದು. ಜೋರಾಗಿ ಓಡುತ್ತಿರುವ ಅಶ್ವಗಳನ್ನು ನಿಯಂತ್ರಿಸಲು ಲಗಾಮುಗಳಿಗೆ ಜೋಡಿಸಲ್ಪಟ್ಟ ಕಡಿವಾಣಗಳನ್ನು, ಜೋರಾಗಿ ಹಿಂದಕ್ಕೆ ಎಳೆಯುತ್ತಿರುವ ರಥಿಕನು ಹಿಂದಕ್ಕೆ ಬೀಳುವಂತೆ ಮತ್ತು ಅದರಲ್ಲಿರುವ ಸಾರಥಿಯು ರಾಜಕುಮಾರನಿಗೆ ಸಹಾಯಕನಾಗಿ ನಿಲ್ಲುವಂತೆ ಕೆತ್ತಲಾಗಿದೆ. ಸಾರಥಿಯು ರಾಜಕುಮಾರನಿಗೆ ರಥವನ್ನು ನಡೆಸುವ ತರಬೇತಿಯನ್ನು ನೀಡುತ್ತಿರುವ ಹಾಗೆ ಕಾಣಿಸುತ್ತದೆ. ಇದಲ್ಲದೆ ಮುಂಭಾಗದಲ್ಲಿ ನವಿಲು ಹಾಗು ಹಂಸಗಳ ಮುಖದ ವಿನ್ಯಾಸವನ್ನು ಹೊಂದಿ, ಪಕ್ಕದಲ್ಲಿ ದೊಡ್ಡ ದೊಡ್ಡ ರೆಕ್ಕೆಗಳನ್ನು ಹೊಂದಿದ ರಥದಲ್ಲಿ ದೇವತೆಗಳು ಆಕಾಶದಲ್ಲಿ ಸಂಚರಿಸುವಂತೆ ಕೆತ್ತಿದ ಸುಂದರವಾದ ಪಕ್ಷಿರಥಗಳನ್ನು ಕಾಣಬಹುದು.

ಹಳೆಬೀಡಿನ ಹೊಯ್ಸಳೇಶ್ವರ ದೇವಾಲಯದ ಹೊರಗೋಡೆಯ ಅಲಂಕಾರ ಪಟ್ಟಿಕೆಗಳಲ್ಲಿ ಎರಡು ಹಾಗೂ ನಾಲ್ಕು ಚಕ್ರಗಳುಳ್ಳ ಅಶ್ವರಥಗಳನ್ನು ಕೆತ್ತಲಾಗಿದೆ. ಇವುಗಳನ್ನು ಎರಡು ಹಾಗೂ ನಾಲ್ಕು ಅಶ್ವಗಳು ಎಳೆಯುವಂತೆ ರಚಿಸಲಾಗಿದೆ. ರಥದ ಚೌಕಟ್ಟು ಒಂದರಿಂದ ಮತ್ತೊಂದನ್ನು ಬೇರ್ಪಡಿಸಲು ಅಡ್ಡಪಟ್ಟಿಗಳಿಂದ ಕೂಡಿರುವ ಸುಂದರ ಹೂಬಳ್ಳಿ ನಕ್ಷಾಕೃತಿಗಳಿಂದ ಅಲಂಕೃತವಾಗಿರುವಂತಹ ಪಟ್ಟಿಕೆಗಳಿಂದ ಕೂಡಿವೆ. ರಥದ ಆಕಾರಕ್ಕೆ ಅನುಗುಣವಾಗಿ ಅದರಲ್ಲಿ ಇಬ್ಬರಿಂದ ಎಂಟು ಜನರವರೆಗೂ ಕುಳಿತುಕೊಂಡಿರುವಂತೆ ರಚಿಸಲಾಗಿದೆ. ಕ್ರಿಯೆಯನ್ನು ಪ್ರದರ್ಶಿಸುತ್ತಿರುವಂತಹ ಸಮರ ರಥಗಳನ್ನು ಕೆತ್ತನೆ ಮಾಡಿರುವ ಜವನಿಕೆಗಳಲ್ಲಿ ರಚಿಸಲಾಗಿದೆ. ಕೆಲವು ಸಮರ ರಥಗಳು ಅರೆಗಳಿರುವ ಅಥವಾ ಅರೆಗಳಿಲ್ಲದಿರುವ ನಾಲ್ಕು ಚಕ್ರಗಳ ಮೇಲೆ ವೇದಿಕೆಯಿಂದ ಕೂಡಿವೆ. ವೀರನ ಹಿಂಭಾಗದಲ್ಲಿರುವ ಕಂಬದ ಮೇಲೆ ವೀರ ಲಾಂಛನ ಹಾಗೂ ಪತಾಕೆಗಳಿವೆ. ಬೇರೆ ಬೇರೆ ರಥಗಳಲ್ಲಿ ಮುಖಾಮುಖಿಯಾಗಿ ಕುಳಿತು, ಬಿಲ್ಲು ಬಾಣಗಳಿಂದ ಕಾದಾಡುತ್ತಿರುವ ಇಬ್ಬರು ವೀರರ ಸುಂದರ ಚಿತ್ರಣವಿದೆ.

ಮದನಿಕೆಯ ಸೋಮೇಶ್ವರ ದೇವಾಲಯದ ಹೊರಗೋಡೆಯ ಹಾಗೂ ಕಂಬಗಳ ಮಧ್ಯ ಸಾಲುಗಳಲ್ಲಿ ಕೆತ್ತಲ್ಪಟ್ಟಿರುವ ಅಲಂಕಾರ ಉಬ್ಬುಶಿಲ್ಪ ವಿನ್ಯಾಸಗಳಲ್ಲಿ ವಿವಿಧ ಬಗೆಯ ರಥಗಳ ಮಾದರಿಗಳನ್ನು ರಚಿಸಲಾಗಿದೆ. ನಾಲ್ಕು ಅಶ್ವಗಳನ್ನು ಹೊಂದಿದ ಎರಡು ಗಾಲಿಗಳಿರುವ ಹಾಗೂ ಸುಂದರ ಕಂಬ ಕಮಾನುಗಳಿಂದ ಕೂಡಿದ ರಥದಲ್ಲಿ ರಾಜಕುಮಾರಿಯರು ಸಂಭಾಷಣೆಗೆ ತೊಡಗಿರುವಂತೆ ಹಾಗೂ ಅವರ ಹಿಂದೆ ಕುಳಿತಿರುವ ಇಬ್ಬರು ಪರಿಚಾರಿಕೆಯರು, ರಾಜಕುಮಾರಿಯರಿಗೆ ನೆರಳು ಬೀಳುವಂತೆ, ರಥದ ಮೇಲ್ಭಾಗದ ಛತ್ರಿಯನ್ನು ಸರಿಪಡಿಸುವಂತೆ ಸುಂದರವಾಗಿ ರಚಿಸಲಾಗಿದೆ. ಓಡುತ್ತಿರುವ ಅಶ್ವಗಳ ಮುಂಗಾಲುಗಳನ್ನು ಮೇಲಕ್ಕೆ ಹಾರಿಸಿದಂತೆ ಕೆತ್ತಲಾಗಿದೆ. ಇದೇ ಸಾಲಿನ ಪಟ್ಟಿಕೆಯಲ್ಲಿ ಇಬ್ಬರು ಯೋಧರು ತಮ್ಮ ಸಾರಥಿಗಳಿಗೆ ಆದೇಶ ಕೊಡುತ್ತ

ಮುಖಾಮುಖಿಯಾಗಿ ಬರುತ್ತಿರುವ ರಥಗಳಲ್ಲಿ ನಿಂತು, ಬಾಣಪ್ರಯೋಗವನ್ನು ಮಾಡುತ್ತಿರುವಂತೆ, ರಥವನ್ನು ಎಳೆಯುತ್ತಿರುವ ಅಶ್ವಗಳು ನಾಗಾಲೋಟದಲ್ಲಿರುವಂತೆ ಸಾರಥಿಯು ಬಹಳ ಗಂಭೀರವಾಗಿ ರಥ ಚಾಲನೆಯಲ್ಲಿ ಲಕ್ಷ್ಯವಹಿಸಿರುವಂತೆ ಕಲಾತ್ಮಕವಾಗಿ ಕೆತ್ತಲಾಗಿದೆ. ಜೋರಾಗಿ ಚಲಿಸುತ್ತಿರುವ ರಥದ ಮೇಲಿನ ಸುಂದರವಾದ ಛತ್ರಿಗಳು ಹಾಗೂ ಧ್ವಜಪತಾಕೆಗಳು ಗಾಳಿಯ ಒತ್ತಡಕ್ಕೆ ಹಿಂದೆ ಸರಿದಂತೆ ಬಹಳ ಸುಂದರವಾಗಿ ರಚಿಸಲಾಗಿದೆ. ಮಂದಿರದ ಎಡಭಾಗದ ಗೋಡೆಯ ಅಲಂಕಾರ ಪಟ್ಟಿಕೆಗಳಲ್ಲಿ ಗರುಡಪಕ್ಷಿಯ ಮುಖವಿನ್ಯಾಸವುಳ್ಳ ಹಾಗೂ ಕುದುರೆಗಳ ಮುಖವಿನ್ಯಾಸವುಳ್ಳ ಹಾಗೂ ರಥದ ಎರಡೂ ಗಾಲಿಗಳಿರುವ ಭಾಗಗಳ ಮೇಲ್ಭಾಗದಲ್ಲಿ ಪಕ್ಷಿಗಳ ರೆಕ್ಕೆಗಳನ್ನುಳ್ಳ ಸುಂದರ ರಥಶಿಲ್ಪವಿನ್ಯಾಸವನ್ನು ಕಾಣಬಹುದು. ಇವುಗಳಲ್ಲಿ ಕುಳಿತಿರುವ ದೇವ ದೇವತೆಯರು ಅಭಯ ಹಸ್ತದೊಂದಿಗೆ ಎಲ್ಲರನ್ನು ಹರಸುತ್ತ ಹೋಗುತ್ತಿರುವಂತೆ ರಚಿಸಲಾಗಿದೆ[೨೫].

ಬೇಲೂರು ಹಳೇಬೀಡುಗಳ ಸಮೀಪದ ಕಕ್ಕೇರಿಯಲ್ಲಿ ನಿರ್ಮಿಸಿದ ಹೊಯ್ಸಳ ಶೈಲಿಯ ದೇವಾಲಯದಲ್ಲಿ ಹೊರಗೋಡೆಯ ಮೇಲೆ ಒಂದು ರಥದ ಉಬ್ಬುಶಿಲ್ಪವಿನ್ಯಾಸವಿದೆ. ಒಬ್ಬ ರಾಜನು ಕಾಡು ದಾರಿಯಲ್ಲಿ ರಥವನ್ನು ಓಡಿಸುವ ದೃಶ್ಯವಿದೆ. ಒಂದೇ ಮಗ್ಗುಲ ಕಾಣುವ ಈ ರಥವು ಎರಡು ಗಾಲಿಗಳನ್ನು ಹೊಂದಿದ್ದು, ರಥದ ಹಿಂಬದಿಯು ಮರಿಗೆಯಾಕಾರದಲ್ಲಿ ಮೇಲೆ ತಿರುಗಿ, ಹೂ ಬಳ್ಳಿಗಳ ವಿನ್ಯಾಸವನ್ನು ಹೊಂದಿದೆ. ಇದಲ್ಲದೆ ಇನ್ನೊಂದು ರಥದ ಶಿಲ್ಪವಿನ್ಯಾಸವಿರುವಲ್ಲಿ ಇಬ್ಬರು ಯೋಧರು ಒಬ್ಬರಿಗೊಬ್ಬರು ವಿರುದ್ಧವಾಗಿ ರಥದಲ್ಲಿ ನಿಂತು ಬಾಣಪ್ರಯೋಗವನ್ನು ಮಾಡುತ್ತಿರುವರು. ಆದರಲ್ಲಿ ಒಬ್ಬ ಯೋಧನು ಬಿರುಸಾಗಿ ಬಂದ ಬಾಣದಿಂದ ತಪ್ಪಿಸಿಕೊಳ್ಳಲು ಹಿಂದಕ್ಕೆ ಸರಿದಿರುವಂತೆ ರಚಿಸಲಾಗಿದೆ. ಎರಡೆರಡು ಅಶ್ವಗಳನ್ನು ಹೊಂದಿದ ರಥಗಳು ನಾಲ್ಕು ಗಾಲಿಗಳಿಂದ ಕೂಡಿವೆ. ಒಂದು ರಥದ ಗಾಲಿಗಳು ಚಿಕ್ಕದಾಗಿದ್ದು, ಇನ್ನೊಂದು ರಥದ ಗಾಲಿಗಳು ಅದಕ್ಕಿಂತ ಸ್ವಲ್ಪ ದೊಡ್ಡ ಪ್ರಮಾಣದಲ್ಲಿವೆ.

ಹಂಪೆಯ ಸುಪ್ರಸಿದ್ಧವಾದ ಶಿಲಾ ರಥವು ನಿಂತಿರುವ ಅಡಿಪಾಯದ ಪೀಠದ ಸುತ್ತಲೂ ಕೆತ್ತನೆ ಮಾಡಿದಂತಹ ಉಬ್ಬು ಶಿಲ್ಪ ವಿನ್ಯಾಸಗಳಲ್ಲಿ ರಥದ ಶಿಲ್ಪಗಳನ್ನು ಕಾಣಬಹುದು. ಕುದುರೆ ಹಾಗೂ ಗಿಳಿಗಳ ಮುಖವಿನ್ಯಾಸಗಳನ್ನು ಹೊಂದಿರುವ ರಥಗಳು ಒಂದೇ ಮಗ್ಗುಲಿಗೆ ಕಾಣುವಂತೆ ರಚಿಸಲಾಗಿದೆ.

ಈ ರಥಗಳಲ್ಲಿ ಇಬ್ಬರು ಯೋಧರು ಒಂದು ಕೈಯಿಂದ ರಥದ ಮಧ್ಯದಲ್ಲಿರುವ ಕಂಬವನ್ನು ಹಿಡಿದು, ಇನ್ನೊಂದು ಕೈಯಲ್ಲಿ ಖಡ್ಗವನ್ನು ಹಿಡಿದಿರುವಂತೆ ಕೆತ್ತನೆ ಮಾಡಿರುವುದು ಕಂಡುಬರುತ್ತದೆ.

ಗುಲಬುರ್ಗಾ ಜಿಲ್ಲೆಯ ಚಿತಾಪುರ ತಾಲೂಕಿನ ಮಳಖೇಡದ ಶಿಥಿಲಾವಸ್ಥೆಯನ್ನು ಹೊಂದಿದ ಶಿವಲಿಂಗ ದೇವಸ್ಥಾನದ ಹೊರಗೋಡೆಯ ಅಲಂಕಾರ ಪಟ್ಟಿಕೆಗಳಲ್ಲಿ ರಥದ ಉಬ್ಬುಶಿಲ್ಪವನ್ನು ಕೆತ್ತಿರುವರು. ನಾಲ್ಕು ಅಶ್ವಗಳು ನಿಧಾನವಾಗಿ ಓಡುತ್ತಿರುವಂತೆ, ಸಾರಥಿಯು ಅಶ್ವಗಳನ್ನು ನಿಯಂತ್ರಿಸುವಂತೆ, ರಾಜನು ರಥದ ಸುಂದರವಾದ ಪೀಠದ ಮೇಲೆ ಕುಳಿತು ಪ್ರಜೆಗಳತ್ತ ಕೈ ಮಾಡುವಂತೆ ಶಿಲ್ಪವನ್ನು ಕೆತ್ತಲಾಗಿದೆ. ಒಂದೇ ಬದಿಯಿಂದ ಕಾಣುವ ಈ ರಥವು ನಾಲ್ಕು ಚಕ್ರಗಳನ್ನು ಹೊಂದಿದ್ದು, ಮಧ್ಯಭಾಗದಲ್ಲಿರುವ ಕಂಬದ ಮೇಲೆ ದುಂಡಾಕಾರವಾಗಿ ಛತ್ರಿಯನ್ನು ಹೊಂದಿದೆ. ಅಲ್ಲದೆ ಒಂದು ಧ್ವಜವನ್ನು ಹೊಂದಿದೆ.

೨೫. ''ಸೋಮೇಶ್ವರ ದೇವಾಲಯದಲ್ಲಿ ಅರಳಿದ ಶಿಲ್ಪಕಲೆ'' ಕೆ.ಎಂ. ಹೂಗಾರ, ಸಂಯುಕ್ತ ಕರ್ನಾಟಕ, ಜೂನ್ ೨, ೧೯೮೨

ಕಾಂಬೋಡಿಯಾದ ದೇವಾಲಯಗಳ ಸಮುಚ್ಚಯದಲ್ಲಿರುವ ಲಕ್ಷ್ಮೀ ದೇವಸ್ಥಾನದ ಹೊರಗೋಡೆಯಲ್ಲಿ ರಚಿಸಲಾದ ಉಬ್ಬು ಶಿಲ್ಪ ಕೆತ್ತನೆಯಲ್ಲಿ ರಥವನ್ನು ಕಾಣಬಹುದು. ಬಲಬದಿ ಒಂದೇ ಕಾಣುವ ರಥದ ಶಿಲ್ಪ ವಿನ್ಯಾಸವು ಸುಂದರವಾಗಿದೆ. ಈ ಶಿಲ್ಪದಲ್ಲಿ ರಥದ ಒಂದೇ ಚಕ್ರ, ಮುಂಗಾಲುಗಳನ್ನು ಎತ್ತಿ ನೆಗೆಯುತ್ತಿರುವ ಕುದುರೆಗಳು, ಒಬ್ಬ ರಥಿಕ ಹಾಗೂ ರಥದ ಮೇಲೆ ಬಿಲ್ಲು ಬಾಣಗಳಿಂದ ಸಿದ್ಧನಾದ ಯೋಧನನ್ನು ಕಾಣಬಹುದು. ಈ ರಥಕ್ಕೆ ಮೇಲ್ಛಾವಣಿ ಇಲ್ಲ. ಇದಲ್ಲದೆ ಕೆಲವು ಪ್ರಾಚೀನ ಹಸ್ತಪ್ರತಿಗಳಲ್ಲಿ ಹಾಗೂ ಕಿರುವರ್ಣ ಚಿತ್ರಗಳಲ್ಲಿ ಅಶ್ವಗಳಿಂದ ಎಳೆಯಲ್ಪಡುವ ಅನೇಕ ಬಗೆಯ ರಥಗಳ ಚಿತ್ರವಿನ್ಯಾಸಗಳಿರುವುದನ್ನು ಕಾಣಬಹುದು[೨೬].

ರಾಜ ಮಹಾರಾಜರು ಉಪಯೋಗಿಸುವ ರಥಗಳ ಮಾದರಿಗಳನ್ನೇ ಹೋಲುವ ದಮನಿ, ಸಾರೋಟ, ಟಾಂಗಾ, ಜಟಕಾಗಳನ್ನು ಈಗ ನಾವು ಕಾಣಬಹುದು. ಹೀಗೆ ಪ್ರಾರಂಭದಲ್ಲಿ ವಿವಿಧ ಉದ್ದೇಶಗಳಿಗಾಗಿ ಸಂಚಾರಕ್ಕಾಗಿ ಬಳಸಲಾಗುತ್ತಿದ್ದ ರಥವು ನಂತರ ಅದರ ಜೊತೆ ಜೊತೆಯಾಗಿಯೇ ಧಾರ್ಮಿಕ ಉದ್ದೇಶಗಳಿಗಾಗಿ ಬಳಕೆಯಾಗತೊಡಗಿತು. ನಾಡಿನ ಅನೇಕ ದೇವಾಲಯಗಳಲ್ಲಿ ಉತ್ಸವದ ಸಂಧರ್ಭದಲ್ಲಿ ಅಲಂಕಾರಗೊಂಡ, ಕಣ್ಮನ ಸೆಳೆಯುವ, ಅನೇಕ ಸುಂದರವಾದ ರಥಗಳನ್ನು ಕಾಣಬಹುದು. ಈ ರಥಗಳು ರಾಜ ಮಹಾರಾಜರು ಉಪಯೋಗಿಸುತ್ತಿದ್ದ ರಥಗಳಿಗಿಂತ ತೀರ ಭಿನ್ನವಾದ ವಿನ್ಯಾಸಗಳನ್ನು ಹೊಂದಿದ್ದು, ಆಕಾರ ಪ್ರಕಾರಗಳಲ್ಲಿ ದೇಗುಲವನ್ನು ಹೋಲುತ್ತವೆ.

ಈ ಪ್ರಕಾರದ ರಥಗಳು ನಿರ್ಮಾಣಗೊಳ್ಳಲು ಮಾನವನ ಧಾರ್ಮಿಕ ನಂಬಿಕೆಯೇ ಕಾರಣವೆನ್ನಬಹುದು. ತನಗೆ ಬದುಕಲು ಅವಕಾಶ ಮಾಡಿಕೊಟ್ಟ ಪ್ರಕೃತಿಗೆ ಕೃತಜ್ಞತೆ ಸಲ್ಲಿಸಲು ಹಾಗೂ ಭಯ ದುಗುಡುಗಳನ್ನು ನೀಗಿಸಲು ಅನೇಕ ದೇವತೆಗಳನ್ನು ಸೃಷ್ಟಿಸಿದನು. ಪ್ರತಿಯೊಂದು ದೇವತೆಗೆ ಸಂಬಂಧಿಸಿದಂತೆ ದೇವಾಲಯಗಳನ್ನು ನಿರ್ಮಿಸಿದನು. ಇಡೀ ಸೃಷ್ಠಿಗೆ ಒಡೆಯನಾದ ಭಗವಂತನನ್ನು ಮರೆಸಲು ದೇವಾಲಯವನ್ನೇ ಹೋಲುವಂತಹ ರಥಗಳನ್ನು ನಿರ್ಮಿಸಿದನು. ಹೀಗೆ ಜನಪದರಿಂದ ಪರಂಪರಾಗತವಾಗಿ ಬೆಳೆದು ಬಂದ ರಥಶಿಲ್ಪಕ್ಕೆ ''ತೇರು'' ಎಂದೂ ಕರೆಯುವುದುಂಟು.

ರಥ ಹಾಗೂ ತೇರು ಈ ಎರಡೂ ಶಬ್ದಗಳನ್ನು ನಾವು ರೂಢಿಯಲ್ಲಿ ಅರ್ಥಭೇದವಿಲ್ಲದೆ ಸಮಾನಾರ್ಥ ಪದವಾಗಿ ಉಪಯೋಗಿಸುತ್ತೇವೆ. ಶಬ್ದಕೋಶದ ದೃಷ್ಟಿಯಿಂದ ಎರಡೂ ಸಮಾನಾರ್ಥವನ್ನು ಕೊಡುವ ಶಬ್ದಗಳೇ. ರಥವು ರಾಜಯೋಗ್ಯವಾದ ವೀರೋಚಿತವಾದ ವಾಹನ. ರಥ ಭಾಷೆಯಲ್ಲಿ ಸಂಜ್ಞೆಯಾದರೆ, ಅರ್ಥದಲ್ಲಿ ಶ್ರೀಮಂತಿಕೆ ಹಾಗೂ ಶೌರ್ಯವಾಗಿದೆ. ಪೌರಾಣಿಕ ಕಾಲದಲ್ಲಿ ರಾಜ ಮಹಾರಾಜರು ಬಳಸುತ್ತಿದ್ದ ರಥಗಳು ವಿಶಿಷ್ಟ ಬಗೆಯವು. ಮಹಾರಾಜನೇ ಈ ರಥಗಳ ಒಡೆಯ. ರಥವು ಚಲಿಸಲು ಸಾರಥಿಯನ್ನು ಅವಲಂಬಿಸುವುದಲ್ಲದೆ ಸ್ವತಃ ಆ ರಾಜನೇ ಸಾರಥ್ಯ ವಿದ್ಯೆಯನ್ನು ಬಲ್ಲವನಾಗಿರುತ್ತಿದ್ದನು. ರಾಜನು ಸರ್ವ ಸ್ವತಂತ್ರನಾಗಿ ರಥದಲ್ಲಿ ಕುಳಿತು ಪ್ರಯಾಣ ಮಾಡಬಹುದಾಗಿತ್ತು. ಅಲ್ಲದೆ ಹಲವು ಉದ್ದೇಶಗಳಿಗಾಗಿ ರಥವನ್ನು ಉಪಯೋಗ ಮಾಡಬಹುದಾಗಿತ್ತು. ರಥವು ರಾಜನ ಪ್ರತಿಷ್ಠೆಯ ಸಂಕೇತವೂ ಆಗಿತ್ತು[೨೭].

ಆದರೆ ದೇವಾಲಯಗಳಲ್ಲಿರುವ ರಥಗಳು ವಿನ್ಯಾಸದಲ್ಲಿ ರಾಜ ಮಹಾರಾಜರ ರಥಗಳಿಗಿಂತ

೨೬. ''ಕಾಂಬೋಡಿಯಾದಲ್ಲಿ ಭಾರತೀಯ ವಾಸ್ತುಶಿಲ್ಪ'' ಎನ್. ನಾಗೇಶ, ತುಷಾರ, ಡಿಶಂಬರ ೧೯೮೬
೨೭. ''ರಾಜ ಸ್ಪರ್ಶ'' ಕೀರ್ತಿನಾಥ ಕುರ್ತುಕೋಟಿ, ೧೯೯೬,

ತೀರ ಭಿನ್ನವಾಗಿ ಕಂಡುಬರುತ್ತವೆ. ಈ ರಥಗಳು ದೇವಾಲಯದ ವಿನ್ಯಾಸವನ್ನೇ ಹೋಲುತ್ತವೆ. ಅನೇಕ ಸುಂದರವಾದ ಕಮಾನುಗಳು, ಕಂಬಗಳು, ಗೋಪುರ, ಸುಂದರವಾದ, ಕಲಾತ್ಮಕವಾದ ಮೂರ್ತಿಶಿಲ್ಪಗಳು ಹಾಗೂ ಅನೇಕ ಅಂತಸ್ತುಗಳನ್ನು ಹೊಂದಿರುವುದು ದೇವಾಲಯದಲ್ಲಿ ಬಳಸುವ ರಥಗಳ ಲಕ್ಷಣಗಳಾಗಿವೆ. ಈ ರಥಗಳು ಗತಿಶೀಲವಾಗಬೇಕಾದರೆ ನೂರಾರು, ಸಾವಿರಾರು ಭಕ್ತರ ಕೈಗಳಾಸರೆ ಬೇಕಾಗುವುದು. ಈ ರಥವು ರಥೋತ್ಸವದ ಸಂದರ್ಭದಲ್ಲಿ ಮಾತ್ರ ಚಾಲನೆಗೊಂಡು ವರ್ಷವಿಡೀ ಸ್ಥಾವರ ಶಿಲ್ಪವಾಗಿ ತೇರಿನ ಮನೆಯಲ್ಲಿಯೇ ಇರುತ್ತದೆ. ಇಂಥ ರಥಗಳು, ಬ್ರಹ್ಮಾಂಡದ ಭಗವಂತನಿಗೆ ಮಾತ್ರ ಮೀಸಲೆಂದು ಹೇಳಬಹುದು.

ಇಂತಹ ಭವ್ಯ ಹಾಗೂ ದಿವ್ಯ ರಥಗಳು ಪರಂಪರಾಗತವಾಗಿ ಉಳಿದು ಬೆಳೆದುಕೊಂಡು ಬರಲು ಅನೇಕ ರಾಜಮಹಾರಾಜರು ಸಹ ಪ್ರೋತ್ಸಾಹಿಸಿರುವುದನ್ನು ಗಮನಿಸಬಹುದು.

ಕರ್ನಾಟಕದಲ್ಲಿ ಇಂಥಹ ದೇಗುಲ ರಥಗಳು ಕ್ರಿ.ಶ. ಸುಮಾರು ಹದಿನೇಳು ಅಥವಾ ಹದಿನೆಂಟನೆಯ ಶತಮಾನದ ಹಿಂದಕ್ಕೆ ಹೋಗುವುದಿಲ್ಲವೆಂದು ಹೇಳಬಹುದು. (ಜಾರ್ಜ್ ಮಿಷಲ್ ೧೯೯೨ : ೩೦) ಇದಲ್ಲದೆ ಇಂತಹ ರಥಗಳ ನಿರ್ಮಾಣವನ್ನು ವಿಜಯನಗರೋತ್ತರ ಕಾಲದಿಂದ ಗುರುತಿಸಲಾಗುವುದು. (ಕ.ಕ.ವಿ.ವಿ. ೧೯೭೮ : ೧೪೨೨). ಆದರೆ ಹಂಪೆಯ ವಿಜಯವಿಠಲ ದೇವಾಲಯದ ಅವಿಭಾಜ್ಯ ಅಂಗವಾದ ಕಲ್ಲಿನ ರಥವನ್ನು ಗಮನಿಸಿದಾಗ ರಥಗಳ ನಿರ್ಮಾಣವನ್ನು ವಿಜಯನಗರ ಪೂರ್ವಕಾಲದಿಂದಲೂ ಗುರುತಿಸಬಹುದು[೨೮]. ಸಾಮಾನ್ಯವಾಗಿ ಪ್ರತಿವರ್ಷವು ರಥಗಳನ್ನು ದುರಸ್ತಿ ಮಾಡಿ, ಹಾಳಾದ ಭಾಗಗಳನ್ನು ತೆಗೆದು ಹೊಸದಾಗಿ ಅಳವಡಿಸಲಾಗುವುದು. ಅನಂತರ ಸಂಪೂರ್ಣವಾಗಿ ರಥವನ್ನೇ ಬದಲಾಯಿಸಲಾಗುತ್ತದೆ. ಆದ್ದರಿಂದ ಅತ್ಯಂತ ಹಳೆಯ ಕಾಲದ ರಥಗಳು ಕಾಣಸಿಗಲಾರವು. ಆದರೆ ಕೆಲವು ಐತಿಹಾಸಿಕ ಗ್ರಂಥಗಳನ್ನಾಧರಿಸಿ, ರಥಗಳು ಇವರಿಂದ ಹೀಗೆ ಬೆಳೆದು ಪಾರಂಪರಿಕವಾಗಿ ಉಳಿದುಕೊಂಡು ಬಂದವೆಂದು ಹೇಳಬಹುದು.

ದೇವಾಲಯಗಳಲ್ಲಿ ವರ್ಷಕ್ಕೊಮ್ಮೆ ನಡೆಯುವ ಉತ್ಸವದಲ್ಲಿ ಉಪಯೋಗಿಸುವಂತಹ ಇಂತಹ ರಥಗಳನ್ನು ವಾಸ್ತುಶಿಲ್ಪದಲ್ಲಿಯೂ ಕಾಣಬಹುದು.

ಉತ್ತರ ಕನ್ನಡ ಜಿಲ್ಲೆಯ ಭಟ್ಕಳದಲ್ಲಿರುವ ವಿಜಯನಗರ ಕಾಲದ ಕೇತಪ್ಪಯ್ಯ ದೇವಾಲಯದ ಹೊರಜಗತಿಯ ಮೇಲೆ ತೇರನ್ನು ಎಳೆಯುವ ಉಬ್ಬು ಚಿತ್ರವಿದೆ. ಇದು ಕ್ರಿ.ಶ ೧೫೪೬ ರಲ್ಲಿ ರಚಿಸಲ್ಪಟ್ಟಿದೆ. ಎತ್ತರವಿಲ್ಲದ ತೇರನ್ನು ಭಕ್ತಾದಿಗಳು ಹಗ್ಗದ ನೆರವಿನಿಂದ ಎಳೆಯುತ್ತಿದ್ದಾರೆ. ಇವರೆಲ್ಲ ನಡುವಿಗೆ ಅಡ್ಡ ಪಂಚೆ ಸುತ್ತಿಕೊಂಡು ತಲೆಗೆ ರುಮಾಲು ಧರಿಸಿದ್ದಾರೆ. ಇಂದಿಗೂ ಆ ಪ್ರದೇಶದಲ್ಲಿ ಬೀಡು ಬಿಟ್ಟ ಗೊಂಡರು, ಗ್ರಾಮ ಚಿಕ್ಕಲಿಗರು, ಸೇರುಗಾರರು ಇದೇ ರೀತಿ ಬಟ್ಟೆಗಳನ್ನು ಧರಿಸುವ ಪರಿಪಾಠ ಇಟ್ಟುಕೊಂಡಿದ್ದಾರೆ. ತೇರಿನ ದಿಕ್ಕು ಮತ್ತು ವೇಳೆಯನ್ನು ನಿಯಂತ್ರಿಸಲು ಪೇಟಮಣೆ ಹಿಡಿದಿರುವ ವ್ಯಕ್ತಿಯೊಬ್ಬನು ತೇರಿನ ಹಿಂದುಗಡೆಗೆ, ತಲೆಗೆ ಕುಲಾವಿ ಧರಿಸಿಕೊಂಡು ಸಾಗುತ್ತಿದ್ದಂತೆ ರಚಿಸಲಾಗಿದೆ. ತೇರು ಚಲನೆಯಲ್ಲಿದ್ದಾಗ ಇಂತಹ ತಡೆಹಾಕುವ ಸಾಮಗ್ರಿಗಳನ್ನು ಇಂದಿಗೂ ನೋಡಬಹುದಾಗಿದೆ[೨೯].

---

೨೮. '' ವಿಜಯ ನಗರದ ವಾಸ್ತು ಶಿಲ್ಪ'' ಎಂ.ಎಚ್. ವಾಣಿ, ಸುಧಾ, ೧೯೯೭, ಮಾರ್ಚ.

೨೯. '' ವಾಸ್ತು ಶಿಲ್ಪ, ಭಿತ್ತಿ ಚಿತ್ರಗಳಲ್ಲಿ ತೇರು''ಡಾ.ಜ್ಯೋತ್ಸ್ನಾ ಕಾಮತ್, ಪು.ಸಂ.೬೫, ೧೯೯೨.

ಇದೇ ಜಿಲ್ಲೆಯಲ್ಲಿ ಕಿ.ಶ.೧೬೬೧ ರಲ್ಲಿ ನಿರ್ಮಾಣಗೊಂಡ ವೆಂಕಟಾಪುರದ ವೆಂಕಟರಮಣ ದೇವಾಲಯದ ಗರ್ಭಗುಡಿಯ ಹೊರಗೋಡೆಯಲ್ಲಿ ಸಾಲಂಕೃತ ತೇರಿನ ಉಬ್ಬುಶಿಲ್ಪವಿದೆ. ಇದನ್ನು ನೋಡುತ್ತಿದ್ದಂತೆ ಕರ್ನಾಟಕದ ಕರಾವಳಿಯಲ್ಲಿ ಇಂದಿಗೂ ಪ್ರಚಲಿತವಿರುವ ತೇರುಗಳು ಕಣ್ಣಿಗೆ ಕಟ್ಟಿದಂತಾಗುತ್ತವೆ. ಈ ರಥದಲ್ಲಿ ವಿಷ್ಣುವಿನ ವಿಗ್ರಹವನ್ನು ಉತ್ಸವಮೂರ್ತಿಯಾಗಿ ಬಳಸಲಾಗಿದೆ[೩೦].

ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹಂಪೆಯ ವಿಜಯವಿಠಲ ದೇವಾಲಯದ ಆವರಣದಲ್ಲಿ, ಕಣ್ಮನ ಸೆಳೆಯುವ ಶಿಲಾರಥವು, ಆ ದೇವಸ್ಥಾನದ ಅವಿಭಾಜ್ಯ ಅಂಗವೆಂದು ಹೇಳಬಹುದು. ವಾಸ್ತುಶಿಲ್ಪದಲ್ಲಿ ಅಪರೂಪವಾದ ಈ ಶಿಲಾರಥವು ವಿಜಯನಗರ ಸಾಮ್ರಾಜ್ಯವನ್ನಾಳಿದ ಸದಾಶಿವನ ಕಾಲದಲ್ಲಿ ನಿರ್ಮಾಣಗೊಂಡಿದೆ ಎಂದು ತಿಳಿದು ಬರುತ್ತದೆ. ಇದು ನೇರವಾಗಿ ದೇವಸ್ಥಾನಗಳ ಉತ್ಸವಗಳಲ್ಲಿ ಬಳಸುವ ರಥದ ವಿನ್ಯಾಸವನ್ನೇ ಹೋಲುತ್ತದೆ. ಈ ಶಿಲೆಯ ರಥಕ್ಕೆ ಇಟ್ಟಿಗೆ ಮತ್ತು ಗಾರೆಯ ದುಂಡು ಶಿಖರವಿತ್ತೆಂದು ತಿಳಿದುಬರುತ್ತದೆ. ಗೋಪುರ ಭಾಗದಿಂದ ರಥದಲ್ಲಿ ಸೀಳುಗಳು ಬರುವವೆಂದು, ರಥದ ಗೋಪುರ ಭಾಗವನ್ನು ಪೂರ್ಣವಾಗಿ ತೆಗೆದು, ಮಂಟಪಕ್ಕೆ ಸೈಜುಗಲ್ಲಿನ ಕಂಬಗಳನ್ನು ಆಸರೆಯಾಗಿ ಕೊಡಲಾಗಿದೆ[೩೧]. ಸಧ್ಯದಲ್ಲಿ ಮಂಟಪ ಭಾಗದವರೆಗೆ ಮಾತ್ರ ರಥವನ್ನು ನೋಡಬಹುದಾಗಿದೆ.

ಒರಿಸ್ಸಾದ ಕೋನಾರ್ಕದ ಸೂರ್ಯ ದೇವಾಲಯವು ರಥಾಕಾರದ ಮಂದಿರಕ್ಕೆ ಒಂದು ಉತ್ತಮ ನಿದರ್ಶನವಾಗಿದೆ. ಪ್ರಸಿದ್ಧವಾದ ಈ ಸುಂದರ ದೇವಾಲಯವು ಸಪ್ತಾಶ್ವಗಳಿಂದ ಚಲಿಸಲ್ಪಡುವ ಸೂರ್ಯದೇವನ ದಿವ್ಯ ರಥದಂತೆಯೇ ಗೋಚರವಾಗುತ್ತದೆ. ರಥಾಕಾರದ ಈ ದೇವಾಲಯವನ್ನು ಕ್ರಿ.ಶ.೧೩ ನೇ ಶತಮಾನದಲ್ಲಿ ಗಂಗವಂಶದ ನರಸಿಂಹದೇವನು (ಕಾಲ೧೨೩೮ ರಿಂದ ೧೨೬೪) ನಿರ್ಮಿಸಿದನೆಂದು ಐತಿಹ್ಯವಿದೆ. [೩೨].

ಪಲ್ಲವ ವಂಶಸ್ಥನಾದ ನರಸಿಂಹವರ್ಮ ಮಾಮಲ್ಲನ ಕಾಲದ ಶಿಲ್ಪಿಗಳು ಬುಹಾ ದೇವಾಲಯದ ನಿರ್ಮಾಣವನ್ನು ಮುಂದುವರೆಸಿದರಾದರೂ, ಕಟ್ಟಡ ನಿರ್ಮಾಣದಲ್ಲಿ ಇನ್ನೂ ಒಂದು ಹೆಜ್ಜೆ ಮುಂದುವರೆದು, ಸ್ವತಂತ್ರವಾಗಿ ನಿಂತ ಏಕಶಿಲೆಗಳಿಂದ ರಥಾಕಾರವಾಗಿ ದೇಗುಲಗಳನ್ನು ನಿರ್ಮಿಸಿದರು. ಮಹಾಬಲಿಪುರದಲ್ಲಿ ರಥಗಳೆಂದು ಪ್ರಖ್ಯಾತವಾಗಿರುವ ಒಂಭತ್ತು ವಿಮಾನಗಳಿವೆ. ಇವರು ನಿರ್ಮಿಸಿದ ರಥಾಕಾರದ ವಿಮಾನಗಳನ್ನು ಪಂಚಪಾಂಡವರು ರಥಗಳೆಂದು ಹೆಸರಿಸಲ್ಪಡುವ ದ್ರೌಪದಿ ರಥ, ಧರ್ಮರಾಜನ ರಥ, ಭೀಮರಥ, ಅರ್ಜುನ ರಥ, ನಕುಲ-ಸಹದೇವ ರಥಗಳು ತುಂಬಾ ಕಲಾತ್ಮಕವಾಗಿವೆ. ಇವುಗಳಲ್ಲದೆ ವಾಯವ್ಯ ಭಾಗದಲ್ಲಿ ವಲಯನ್‌ಕುಟ್ಟೆ ರಥ, ಉತ್ತರದಲ್ಲಿ ಪಿಡಾರಿ ರಥ, ಮತ್ತು ಗಣೇಶ ರಥಗಳು ಸಹ ಆಕರ್ಷಕವಾಗಿವೆ[೩೩].

ರಥಾಕಾರದಲ್ಲಿ ನಿರ್ಮಾಣಗೊಂಡ ದೇವಸ್ಥಾನಗಳಲ್ಲಿ ಚೆನ್ನೈನ ಪಾರ್ಥಸಾರಥಿ ದೇವಸ್ಥಾನವು ಒಂದು, ಈ ದೇವಾಲಯದ ಗರ್ಭಗೃಹ ಧೀರ್ಘ ಚತುಸ್ರಾಕಾರದಲ್ಲಿದ್ದು , ಅದರಲ್ಲಿ

---

೩೦. '' ವಾಸ್ತುಶಿಲ್ಪ, ಭಿತ್ತಿಚಿತ್ರಗಳಲ್ಲಿ ತೇರು''ಡಾ.ಜೋತ್ಸ್ನಾ ಕಾಮತ್, ಪು.ಸಂ.೬೬, ೧೯೯೨ .

೩೧. ''ಅಲೆಕ್ಸಾಂಡರ್ ಗ್ರೀನ್‌ಲಾ ಹಾಗೂ ಜಾನ್ ಗಾಲಿಂಗ್ಸ್ ಕಂಡ ವಿಜಯನಗರ'' ಡಾ. ಎಂ.ಎಸ್. ನಾಗರಾಜರಾವ್, ೧೯೯೮, ಪು. ಸಂ. ೨೪

೩೨. '' ಉರುಳುಗಾಲಿಯ ರಥಗಳು ಉರುಳಿಬಂದ ಕಥೆ'' ಅಶೋಕ ಹಾಸ್ಯಗಾರ, ಸಂಯುಕ್ತಕರ್ನಾಟಕ, ಜುಲೈ೧೫, ೧೯೯೦,

೩೩. '' ಶಿಲ್ಪಾದರ್ಶ'' ಡಾ. ಜಿ. ಜ್ಞಾನಾನಂದ, ಪು.ಸಂ. ೭೩, ೨೦೦೨

ಕಾಣಬಹುದು[೨.೪].

ಇದಲ್ಲದೆ ಸೋದೆಯ ತ್ರಿವಿಕ್ರಮ ದೇವಸ್ಥಾನವು ರಥಾಕಾರದ ವಿನ್ಯಾಸವನ್ನು ಅನುಸರಿಸಿದೆ. ಈ ರಥಕ್ಕೆ ಮೂರು ಚಕ್ರಗಳಿರುವುದಕ್ಕೆ ಒಂದು ಪೌರಾಣಿಕ ಕಥೆಯೂ ಇದೆ. ಬದರಿಯ ಮಧ್ವಯತಿಗಳಾದ ತ್ರಿವಿಕ್ರಮ ವಿಗ್ರಹವನ್ನು ಶಿಲಾ ರಥದ ಸಮೇತವಾಗಿ, ಭೂತರಾಜನ ಮೂಲಕ ಸೋದೆಗೆ ತರುವಾಗ, ಮಾರ್ಗದಲ್ಲಿ ರಾಕ್ಷಸನೊಂದಿಗೆ ಹೋರಾಡಿ, ಶಿಲಾ ರಥದ ಒಂದು ಚಕ್ರವನ್ನು ಬಳಸಿ ರಾಕ್ಷಸನನ್ನು ಸಂಹರಿಸಬೇಕಾಯಿತು. ಈ ಕಾರಣದಿಂದ ಈಗ ಶಿಲಾ ರಥದಲ್ಲಿ ಮೂರು ಚಕ್ರಗಳು ಮಾತ್ರ ಉಳಿದಿವೆ ಎಂದು ಹೇಳಲಾಗುತ್ತದೆ[೨.೫].

ಹೀಗೆ ಅನೇಕ ರಾಜರುಗಳು ವಾಸ್ತುಶಿಲ್ಪಕೃತಿಗಳಾಗಿ ಮೆರೆಯುವಂತಹ ರಥಾಕಾರದ ಮಂದಿರಗಳನ್ನು ನಿರ್ಮಿಸುವುದಷ್ಟೇ ಅಲ್ಲದೆ ಅನೇಕ ದೇವಸ್ಥಾನಗಳಿಗೆ ರಥಗಳನ್ನು ದೇಣಿಗೆಯಾಗಿ ನೀಡಿರುವುದನ್ನು ಇತಿಹಾಸದ ಪುಟಗಳಿಂದ ತಿಳಿದುಕೊಳ್ಳಬಹುದಾಗಿದೆ.

ಬನವಾಸಿಯ ಪ್ರಾಚೀನ ಕಾಲದಿಂದಲೂ ಹಲವು ಕ್ಷೇತ್ರಗಳಲ್ಲಿ ಮಹತ್ತರ ಪಾತ್ರವಹಿಸಿದೆ. ಕರ್ನಾಟಕದ ವಿಶಿಷ್ಟ ಚರಿತ್ರೆ ಮತ್ತು ಸಂಸ್ಕೃತಿಯ ಉಗಮವು ಇಲ್ಲಿಂದಲೇ ಆರಂಭವಾಗುವುದು. ಇಂಥಹ ಪ್ರಸಿದ್ಧ ಐತಿಹಾಸಿಕ ಪಟ್ಟಣವಾದ ಬನವಾಸಿಯಲ್ಲಿ ಮಧುಕೇಶ್ವರ ದೇವಾಲಯವಿದೆ. ಮಧುಕೇಶ್ವರ ಕದಂಬರ ಕುಲದೈವವಾಗಿತ್ತು. ಬನವಾಸಿ ಮತ್ತು ಸುತ್ತಮುತ್ತಲಿನ ಪ್ರದೇಶ ಕ್ರಮವಾಗಿ ಕದಂಬ, ಗಂಗ, ಬಾದಾಮಿ ಚಾಲುಕ್ಯ, ರಾಷ್ಟ್ರಕೂಟ, ಯಾದವ, ಹೊಯ್ಸಳ ,ವಿಜಯನಗರ ಹಾಗೂ ಸೋದೆ ಅರಸರ ವ್ಯಾಪ್ತಿಗೆ ಸೇರಿತ್ತು. ಎಲ್ಲ ರಾಜಮನೆತನದವರು ಈ ದೇವಾಲಯಕ್ಕೆ ದಾನದತ್ತಿಗಳನ್ನು ನೀಡಿದ್ದಾರೆ. ಇವರಲ್ಲಿ ಸೋದೆ ರಾಮಚಂದ್ರ ನಾಯಕ ೧೬೦೮ ರಲ್ಲಿ ಪ್ರತಿ ವರ್ಷದ ಉತ್ಸವದ ಉಪಯೋಗಕ್ಕಾಗಿ ಭವ್ಯವಾದ ತೇರೊಂದನ್ನು ಮಾಡಿಸಿಕೊಟ್ಟನೆಂದು ತಿಳಿದುಬರುತ್ತದೆ. ಜಾತ್ರೆಯ ಧಾರ್ಮಿಕ ಉತ್ಸವದ ಅಂಗವಾಗಿ, ತೇರು ಎಳೆಯುವ ಕಾರ್ಯದಲ್ಲಿ ಬಹುಮಟ್ಟಿನ ಶ್ರಮಿಕ ವರ್ಗದವರು ಜೊತೆಗೂಡಿ ಕೆಲಸ ಮಾಡುವಂತಹ ಒಂದು ವ್ಯವಸ್ಥೆಯನ್ನು ಸೋದೆ ಅರಸರೇ ಕಾರ್ಯರೂಪಕ್ಕೆ ತಂದರೆಂದು ತಿಳಿದುಬರುತ್ತದೆ[೨.೬].

ಉಳುವೆ ಚನ್ನಬಸವೇಶ್ವರ 'ವಾರ್ದಿಕ' ಎಂಬ ಹೆಸರಿನ ಅಪ್ರಕಟಿತ ಕೃತಿಯಲ್ಲಿ ಉಲ್ಲೇಖದ ಪ್ರಕಾರ ಸುದಾಪುರದರಸರು ಮಾಳ್ವ ಬಂಧೂರ ಬಸವೇಶ್ವರನೋತ್ಸವ ಎಂಬ ವಾಕ್ಯದ ಮೂಲಕ ಸೋದೆಯರಸರು ಉಳವಿಯಲ್ಲಿ ಚನ್ನಬಸವೇಶ್ವರ ಜಾತ್ರೆ ನಡೆಸುತ್ತಿದ್ದುದು ವ್ಯಕ್ತವಾಗುತ್ತದೆ. 'ಉಳವಿ ಮಹಾತ್ಮೆ' ಎಂಬ ಹೆಸರಿನ ಸದಾಶಿವರಾಯನ ಕೃತಿಯಲ್ಲಿ, ಮಾಘಶುದ್ಧ ಹುಣ್ಣಿಮೆ ವಸಂತಮಾಸದ ಇಂದು ವಾರದಂದು ಬಸವೇಶ್ವರ ರಥೋತ್ಸವವು ಜರುಗುತ್ತಿದ್ದ ಉಲ್ಲೇಖವಿದೆ. ಸೋದೆ ಅರಸರು ಚನ್ನಬಸವಣ್ಣನ ಪರಮಭಕ್ತರು, ಉಳವಿಯ ಚನ್ನಬಸವಣ್ಣನ ಮೂಲ ರಥವನ್ನು ಸೋದೆ ಅರಸರೇ ಮಾಡಿಸಿಕೊಟ್ಟರೆಂದು ತಿಳಿದುಬರುತ್ತದೆ[೨.೭].

೨.೪. '' ರಥಗಳಲ್ಲಿನ ಕಲೆ, ಸಂಸ್ಕೃತಿಯ ನೆಲೆ '' ಕನ್ನಡ ಪ್ರಭ, ಜೂನ್ ೨೪,೧೯೮೪

೨.೫. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೨೧,೧೯೯೫

೨.೬. ''ಸೋದೆ ಅರಸು ಮನೆತನ, ಒಂದು ಅಧ್ಯಯನ '' ಡಾ. ಎಂ.ಜಿ. ವಾರಿ, ಪು.ಸಂ. ೧೮೬

೨.೭. ''ಸೋದೆ ಅರಸು ಮನೆತನ, ಒಂದು ಅಧ್ಯಯನ '' ಡಾ. ಎಂ.ಜಿ. ವಾರಿ, ಪ್ರಸಾರಾಂಗ, ಪು.ಸಂ. ೧೮೭

ವಿಜಯನಗರದ ಅರಸರ ರಾಜಾಶ್ರಯದಲ್ಲಿ ಬೆಳೆದು ಬಂದ ಹಂಪೆಯ ವಿರೂಪಾಕ್ಷನ ರಥೋತ್ಸವವು ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಕನ್ನಡ ನಾಡನ್ನು ಬಹುಕಾಲದವರೆಗೆ ಆಳಿದ ವಿಜಯನಗರದ ಅರಸರು ತಮ್ಮ ಆಳ್ವಿಕೆಯ ಕಾಲದಲ್ಲಿ ಹಲವಾರು ದೇಗುಲಗಳನ್ನು ನಿರ್ಮಿಸಿದಂತೆ, ಅಲ್ಲಿನ ಉತ್ಸವಕ್ಕಾಗಿ ಸುಂದರ ಮರದ ರಥಗಳನ್ನು ನಿರ್ಮಿಸಿ, ರಥೋತ್ಸವಕ್ಕೆ ಭದ್ರ ಬುನಾದಿಯನ್ನು ಹಾಕಿದರು[೩೮].

ವಿದ್ಯಾರಣ್ಯರ ಕಾಲದಲ್ಲಿ ಜರುಗುತ್ತಿದ್ದ ರಥೋತ್ಸವವನ್ನು ಕಣ್ಣಾರೆ ಕಂಡ ಸಮಕಾಲೀನ ಕವಿ (ಹದಿನಾಲ್ಕನೆಯ ಶತಮಾನ) ಅಹೋಬಲನು ತನ್ನ ''ವಿರೂಪಾಕ್ಷ ವಸಂತೋತ್ಸವ ಚಂಪು'' ಎಂಬ ಕೃತಿಯಲ್ಲಿ, ಶ್ರೀ ವಿರೂಪಾಕ್ಷನ ರಥೋತ್ಸವದ ಚಿತ್ರಣವನ್ನು ಸೊಗಸಾಗಿ ನೀಡಿದ್ದಾನೆ. ಅದರಲ್ಲಿ ವಿದ್ಯಾರಣ್ಯರು ರಥಾರೋಹಣ ಮಾಡಿದ ಸನ್ನಿವೇಶವು ಅರ್ಥಪೂರ್ಣವಾಗಿ ಮೂಡಿಬಂದಿದೆ.

''ಆಮೇಲೆ ವಿದ್ಯಾರಣ್ಯರು ತಮ್ಮ ಶಿಷ್ಯರೊಂದಿಗೆ ಒಂದು ಎತ್ತರವಾದ ಸೌದದಂತಿರುವ ರಥವನ್ನು ಏರಿದರು. ಮತ್ತೊಮ್ಮೆ ಶಿವಪೂಜೆಯನ್ನು ಮಾಡಿದರು. ಕೆಳಗಿದ್ದ ಬ್ರಾಹ್ಮಣರು ಬೀಸಣಿಕೆಯನ್ನು ಹಿಡಿದು ಅವರನ್ನು ಓಲೈಸಿದರು'' ಎಂದು ಉಲ್ಲೇಖಿಸಲಾಗಿದೆ[೩೯].

ಇದರಂತೆ ಹಂಪೆಯ ಪಂಪಾಪತಿಯ ರಥೋತ್ಸವವನ್ನು ಕಣ್ಣಾರೆ ಕಂಡ ನಿಕೋಲೋ ಈ ರೀತಿಯಾಗಿ ವರ್ಣಿಸಿದ್ದಾನೆ. ವರ್ಷದ ಒಂದು ನಿರ್ಧಿಷ್ಟ ಸಮಯಕ್ಕೆ ದೇವತಾ ಮೂರ್ತಿಯನ್ನು ಎರಡು ರಥಗಳ ಮಧ್ಯದಲ್ಲಿರಿಸಿ ನಗರದಲ್ಲಿ ಒಯ್ಯಲಾಗುತ್ತದೆ. ಅವುಗಳಲ್ಲಿ ಶ್ರೀಮಂತವಾಗಿ ಅಲಂಕೃತವಾದ ತರುಣಿಯರಿದ್ದು, ದೇವರ ನಾಮವನ್ನು ಹಾಡುತ್ತಾರೆ ಮತ್ತು ರಥಗಳನ್ನು ಬೃಹತ್ ಜನಸಮೂಹ ಅನುಸರಿಸುತ್ತದೆ. ಹೀಗೆ ಇತಿಹಾಸ ಪುಟಗಳಲ್ಲಿ ದೊರೆಯುವಂತಹ ಉಲ್ಲೇಖಗಳಿಂದ ತಿಳಿದುಬರುವುದೇನೆಂದರೆ, ರಾಜಾಶ್ರಯದಿಂದ, ಭವ್ಯ ಪರಂಪರೆಯಿಂದ ಬೆಳೆದು ಬಂದ ರಥೋತ್ಸವವು ಮುಂದಿನ ತಲೆಮಾರಿನವರಿಗೂ ಪ್ರೇರಕ ಶಕ್ತಿಯಾಗಿ ಮುಂದುವರೆಯುತ್ತ ಬಂದಿತೆಂದು ಅರ್ಥವಾಗುತ್ತದೆ[೪೦].

ಹದಿನಾಲ್ಕನೆ ಶತಮಾನದಲ್ಲಿ ವಿಜಯನಗರದ ದೊರೆ ಬುಕ್ಕರಾಯನು ಗೋಕರ್ಣಕ್ಕೆ ಭೇಟಿಯಿತ್ತ ತರುವಾಯ, ವಿವಿಧ ಪೂಜಾ ವಿಧಾನಗಳು, ಉತ್ಸವ ಪರಂಪರೆಗಳು ನೆಲೆಗೊಂಡಿರಬೇಕೆಂದು ಕ್ಷೇತ್ರಪುರಾಣ ಹಾಗೂ ಲಭ್ಯವಾದ ಶಿಲಾಶಾಸನಗಳು ಪ್ರಚುರಪಡಿಸುತ್ತವೆ. ಇದನ್ನು ಅವಲಂಬಿಸಿಯೇ ಇದೇ ವೇಳೆ ಮಹಾರಥೋತ್ಸವಗಳು ಪ್ರವೇಶ ಪಡೆದಿರಬೇಕೆಂದು ಅಂದಾಜಿಸಬಹುದು. ಇದಲ್ಲದೆ ವಿದೇಶಿ ಪ್ರವಾಸಿಗಳಾದ ಭೂಕಾನಿಕಾ, ಫ್ರಾಯಿಡ್ ಅವರು ಕೂಡಾ ಗೋಕರ್ಣ ರಥೋತ್ಸವವನ್ನು ಕಂಡು ಬಣ್ಣಿಸಿದ್ದಾರೆ[೪೧].

ಇದಲ್ಲದೆ ಜಮಖಂಡಿ ಸಂಸ್ಥಾನಿಕರಾದ ಪಟವರ್ಧನ ರಾಜರು, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ದೇವಸ್ಥಾನಕ್ಕೆ , ಆಸಗಿಯ ಸಿದ್ಧೇಶ್ವರ

---

೩೮. ''ವಿಜಯ ನಗರ ಅರಸರ ಆಳ್ವಿಕೆ '' ಸಿ. ಎಚ್. ಪ್ರಸಾದ, ಪ್ರಜಾವಾಣಿ, ಆಗಸ್ಟ ೮,೧೯೮೯

೩೯. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ೧೯೯೫ ಪು.ಸಂ. ೨೨

೪೦. ''ರಥೋತ್ಸವದ ಮಹತ್ವ '' ಪಂಡಿತ ಗುತ್ತಲ ರಂಗಾಚಾರ್ಯ, ೧೯೯೫.

೪೧. '' ಗೋಕರ್ಣದ ಮಹಾರಥ ಸ್ಯಂದನ'' ಕೆ. ಶ್ರೀಧರ ಅಡಿ, ಸಂಯುಕ್ತ ಕರ್ನಾಟಕ , ಜುಲೈ ೧೬, ೨೦೦೦

ದೇವಸ್ಥಾನ ಹಾಗೂ ರಾಮತೀರ್ಥದ ಕಾಡಸಿದ್ಧೇಶ್ವರ ದೇವಸ್ಥಾನಗಳಿಗೆ ರಥಗಳನ್ನು ದಾನವಾಗಿ ನೀಡಿರುವರು. ಈ ಎಲ್ಲ ರಥಗಳು ಬಾಹ್ಯ ವಿನ್ಯಾಸದಲ್ಲಿ ಒಂದೇ ತೆರನಾಗಿದ್ದು, ಉದ್ದಗಲೆತ್ತರಗಳಲ್ಲಿ ಸ್ವಲ್ಪ ಹೆಚ್ಚೂ ಕಡಿಮೆಯಾಗಿ ಕಂಡುಬರುತ್ತವೆ. ಇವುಗಳಲ್ಲಿ ಬನಹಟ್ಟಿಯ ಶ್ರೀ ಕಾಡಸಿದ್ದೇಶ್ವರ ದೇವಸ್ಥಾನವು ಎತ್ತರವಾಗಿ ಕಂಡುಬರುತ್ತದೆ.

ಇದರಂತೆ ಬೀಳಗಿಯ ಸಂಸ್ಥಾನಿಕರಾದ ಘಟೆರಾಜ ವಂಶದವರಿಂದ ಬೀಳಗಿಯ ಸೀತಾರಾಮಚಂದ್ರ ದೇವಾಲಯಕ್ಕೆ ರಥವು ದೇಣಿಗೆಯಾಗಿ ಕೊಡಮಾಡಲ್ಪಟ್ಟಿದೆ ಎಂದು ತಿಳಿದುಬರುವುದು. ಇದರಂತೆ ಮೈಸೂರು ಅರಸರೂ ಕೂಡ ರಥೋತ್ಸವಗಳಿಗೆ ಪ್ರೋತ್ಸಾಹಿಸಿರುವರು.

ಹೀಗೆ ರಾಜಾಶ್ರಮದಲ್ಲಿ ಬೆಳೆದು ಬಂದ ರಥಗಳು ಮುಂದೆ ಮಠಮಾನ್ಯಗಳ ಧರ್ಮದರ್ಶಿಗಳು ಹಾಗೂ ಸ್ವಾಮಿಗಳಿಂದಲೂ ಮುಂದುವರೆಯುತ್ತ ಬಂದಿವೆ ಎಂದು ಹೇಳಬಹುದು. ಉಡುಪಿಯ ಬ್ರಹ್ಮರಥವು ಕೃಷ್ಣಾಪೂರ ಮಠದ ಮೂವತ್ತನೇ ಯತಿಗಳಾಗಿದ್ದ ಶ್ರೀ ವಿದ್ಯಾತೀರ್ಥರಿಂದ ನಿರ್ಮಾಣಗೊಂಡಿವೆ. ಈ ಬ್ರಹ್ಮ ರಥವು ಸುಮಾರು ನೂರು ವಸಂತಗಳನ್ನಾದರೂ ಪೂರೈಸಿರಬೇಕು. ಗರುಡ ರಥವು ಬ್ರಹ್ಮರಥಕ್ಕಿಂತಲೂ ಸ್ವಲ್ಪ ಕಿರಿದಾಗಿದ್ದು ಶಿರೂರು ಮಠದ ಯತಿವರ್ಯರಾದ ಶ್ರೀ ಲಕ್ಷ್ಮೀ ಸಮುದ್ರ ತೀರ್ಥರು ಇದರ ನಿರ್ಮಾಣಕ್ಕೆ ಕಾರಣರಾಗಿದ್ದಾರೆ. ರಜತ ರಥವನ್ನು ಪುತ್ತಿಗೆ ಮಠಾಧೀಶರಾಗಿದ್ದ ಶತಾಯುಷಿ ಶ್ರೀ ಸುಧೀಂದ್ರತೀರ್ಥರು ಭಕ್ತರ ಅನುಮತಿಯೊಂದಿಗೆ ಮಾಡಿಸಿಕೊಟ್ಟಿರುವರು. ಚಿನ್ನದ ರಥವನ್ನು ಶ್ರೀ ವಿದ್ಯಾಮಾನ್ಯ ತೀರ್ಥರು ಭಕ್ತರ ನೆರವಿನಿಂದ ನಿರ್ಮಿಸಿಕೊಟ್ಟಿರುವರು.

ಇದರಂತೆ ಗುಲಬುರ್ಗಾ ಜಿಲ್ಲೆಯ ಅಫಜಲಪೂರ ತಾಲೂಕಿನ ದೇಸಾಯಿ ಕಲ್ಲೂರಿನಲ್ಲಿರುವ ಕಬ್ಬಿಣದ ರಥವನ್ನು ಆ ಊರಿನ ದೇಶಮುಖ ಅವರು, ಅವರ ಗುರುಗಳಾದ ಶಿವಯೋಗಿ ಗುರುಪಾದಪ್ಪನವರಿಗೆ ಅರ್ಪಿಸಿದರು[೪೨]. ಧರ್ಮಸ್ಥಳದ ಮುಂಜಯ್ಯ ಹೆಗಡೆ ಹಾಗೂ ರತ್ನವರ್ಮ ಹೆಗಡೆಯವರು ಮಂಜುನಾಥ ದೇವಸ್ಥಾನದ ಬೆಳ್ಳಿಯ ರಥದ ನಿರ್ಮಾಣಕ್ಕೆ ಕಾರಣರಾದವರು. ಹೀಗೆ ಅನೇಕ ಧರ್ಮದರ್ಶಿಗಳ ನೇತೃತ್ವದಲ್ಲಿ ರಥೋತ್ಸವಗಳು ಬೆಳೆದು ಉಳಿದುಕೊಂಡು ಬರಲು ಸಾಧ್ಯವಾಗಿದೆ. ಇದರಂತೆ ಗದುಗಿನ ತೋಂಟದಾರ್ಯ ಮಠ, ಹುಬ್ಬಳ್ಳಿಯ ಮೂರುಸಾವಿರ ಮಠ, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಗುದ್ನೆಪ್ಪನ ಮಠ, ಗೋಕಾಕ ತಾಲೂಕಿನ ಅಂಕಲಗಿಯ ಅಡವಿ ಅಜ್ಜನವರ ರಥ ಇಂಥಹ ಅನೇಕ ಮಠಗಳಲ್ಲಿ ಹಾಗೂ ನಾಡಿನ ಹಲವಾರು ದೇವಸ್ಥಾನಗಳಲ್ಲಿ ಇಂದಿನವರೆಗೂ ರಥೋತ್ಸವಗಳನ್ನು ಕಾಣಬಹುದು.

ಹೀಗೆ ಪೌರಾಣಿಕ ಕಾಲದಿಂದ ಸಂಚಾರಕ್ಕಾಗಿ ಬಳಸಲ್ಪಡುತ್ತಿದ್ದ ರಥಗಳು, ರಾಜ ಮಹಾರಾಜರ ಕಾಲದಲ್ಲಿ ವಿವಿಧ ಉದ್ದೇಶಗಳಿಗಾಗಿ ಉಪಯೋಗಿಸಲ್ಪಟ್ಟು, ಅದರ ಜೊತೆಜೊತೆಯಾಗಿಯೇ ಧಾರ್ಮಿಕ ಉದ್ದೇಶಗಳಿಗಾಗಿ ದೇಗುಲ ರಥವಾಗಿ ಮಾರ್ಪಾಟುಗೊಂಡು ಅನೇಕ ರಾಜಮನೆತನದವರಿಂದ ಮಠ ಮಾನ್ಯಗಳ ಧರ್ಮದರ್ಶಿಗಳಿಂದ ಹಾಗೂ ಸ್ವಾಮಿಗಳಿಂದ ಅಂದಿನಿಂದ ಇಂದಿನವರೆಗೂ ಬೆಳೆದು ಉಳಿದುಕೊಂಡು ಬಂದಿವೆ. ಈ ರೀತಿಯಾಗಿ ರಥ ಶಿಲ್ಪಗಳಿಗೆ ಒಂದು ಐತಿಹಾಸಿಕ ಹಿನ್ನೆಲೆ ಇದೆಯೆಂದು ತಿಳಿಯಬಹುದಾಗಿದೆ.

೪೨. ''ಸಂದರ್ಶನ, ಶಿವಮೂರ್ತಿ ನಿಲಂಗಪ್ಪ ಗುದ್ದನಗಿ'' ದೇಸಾಯಿ ಕಲ್ಲೂರು, ಜೂನ್ ೯, ೨೦೦೨

◆ ◆ ◆

ಅಧ್ಯಾಯ-ಮೂರು

ರಥಗಳ ಪರಿಕರಗಳು

ರಥಗಳ ಪರಿಕರಗಳು

ನಮ್ಮ ಪೂರ್ವಿಕರ ಮುಖ್ಯ ಕಸುಬು ಕೃಷಿಯೇ ಆಗಿದೆ. ಅಲ್ಲದೆ ಮಳೆ, ಬಿಸಿಲು, ಚಳಿ, ಗಾಳಿಯಿಂದ ರಕ್ಷಣೆ ಪಡೆಯಲು ವಸತಿ ನಿರ್ಮಾಣ ಕಾರ್ಯ, ದೈನಂದಿನ ಬದುಕಿನಲ್ಲಿ ದೈವಿ ಆರಾಧನೆಗೆ ಕೆಲವು ವಿಶಿಷ್ಟ ಆಚರಣೆಗಳು ಹಾಗೂ ಮನರಂಜನೆಗೆ ಕೆಲವು ಆಟಗಳು, ಹೀಗೆ ಮುಂತಾದವುಗಳನ್ನು ಹುಟ್ಟುಹಾಕಿಕೊಂಡು ಜೀವನ ನಡೆಸುತ್ತಾ ಬಂದಿದ್ದಾರೆ. ಮನುಷ್ಯ ಜೀವನದಲ್ಲಿ ದಿನನಿತ್ಯದ ಪ್ರತಿಯೊಂದು ಕೆಲಸ ಕಾರ್ಯಗಳಿಗೆ ವಿವಿಧ ರೀತಿಯ ವಸ್ತುಗಳು ಬಳಸಲ್ಪಡುವವು.

ಹಳೆಯ ಮತ್ತು ಹೊಸ ಶಿಲಾಯುಗದಲ್ಲಿ ಮಾನವನು ಅಲೆಮಾರಿ ಅಥವಾ ಬೇಟೆಗಾರಿಕೆಯ ಜೀವನದ ಹಂತದಲ್ಲಿ ತನ್ನ ಹಸಿವನ್ನು ತಣಿಸಲು ಕೆಲವು ಕಾಡುಪ್ರಾಣಿಗಳನ್ನು ಕೊಲ್ಲುವುದಕ್ಕೆ , ಸತ್ತ ಪ್ರಾಣಿಗಳ ಚರ್ಮದಿಂದ ಕವಚಗಳನ್ನು ತಯಾರಿಸುವುದಕ್ಕೆ ಅಲ್ಲದೆ ಬೆಳೆ ಬೆಳೆಯಲು ಹುಟ್ಟುಹಾಕಿಕೊಂಡ ಅನೇಕ ಸಲಕರಣೆಗಳು ಮಾನವನ ಸೌಂದರ್ಯ ದೃಷ್ಟಿ ಮತ್ತು ಕಲಾ ಜಾಣ್ಮೆಯನ್ನು ಎತ್ತಿ ತೋರಿಸುತ್ತವೆ. ಹೀಗೆ ಬದುಕಿನ ಮುನ್ನಡೆಗೆ ಉಪಯುಕ್ತವಾಗುವ ಸಲಕರಣೆಗಳೇ ಮುಂದೆ ಕರಕುಶಲ ಕಲೆಗಳಿಗೆ ದಾರಿ ಮಾಡಿಕೊಟ್ಟವೆ.

ಅಂದಿನಿಂದ ಇಂದಿನವರೆಗೂ ಕುಶಲಕರ್ಮಿಗಳು ಹಾಗೂ ಅನೇಕ ಕಲಾವಿದರು, ವಿವಿಧ ವಸ್ತುಗಳಲ್ಲಿ ನವೀನ ರೀತಿಯ ವಿನ್ಯಾಸಗಳನ್ನು ಮೂಡಿಸಲು ತಮಗೆ ಬೇಕಾದಂತಹ ಪರಿಕರಗಳನ್ನು ತಯಾರಿಸಿಕೊಳ್ಳುತ್ತಾ ಬಂದಿದ್ದಾರೆ.

ಇತ್ತೀಚೆಗೆ ಕೆಲವು ಆಧುನಿಕ ವಿದ್ಯುತ್ ಚಾಲಿತ ಯಂತ್ರಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ. ಇವುಗಳನ್ನು ಉಪಯೋಗಿಸಿ ಕಾಷ್ಠ, ಲೋಹ ಹಾಗೂ ಶಿಲೆಯ ಮಾಧ್ಯಮಗಳಲ್ಲಿ ಸುಂದರವಾದ ಕಲಾತ್ಮಕ ವಸ್ತುಗಳನ್ನು ಹಾಗೂ ಅನೇಕ ಬೃಹದಾಕಾರದ ವಾಸ್ತುಶಿಲ್ಪಗಳನ್ನು ಹಾಗೂ ಸೂಕ್ಷ್ಮ ಕುಸುರಿ ಕೆತ್ತನೆಯ ಶಿಲ್ಪವಿನ್ಯಾಸಗಳನ್ನು ನಿರ್ಮಾಣಮಾಡಿರುವುದನ್ನು ಇಂದಿಗೂ ನಾವು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ಕಾಣಬಹುದು.

ಹಾಗೆಯೇ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ವಿವಿಧ ಮಾಧ್ಯಮದ ರಥಗಳು

ನಿರ್ಮಾಣವಾದುದನ್ನು ಕಾಣಬಹುದು. ಎಲ್ಲ ರಥಗಳು ನಿರ್ಮಾಣಗೊಳ್ಳಲು ಅವುಗಳ ಮಾಧ್ಯಮಕ್ಕನುಗುಣವಾಗಿ ಬೇರೆ ಬೇರೆ ರೀತಿಯ ಬೇರೆ ಬೇರೆ ವಿನ್ಯಾಸದ, ವಿವಿಧ ರೀತಿಯಲ್ಲಿ ಉಪಯೋಗಿಸಲ್ಪಡುವ ಅನೇಕ ಪರಿಕರಗಳನ್ನು ಉಪಯೋಗಿಸಲಾಗುವುದು.

ಸಾಮಾನ್ಯವಾಗಿ ರಥಶಿಲ್ಪದ ನಿರ್ಮಾಣದಲ್ಲಿ ಕೆಳಗಿನಿಂದ ಮೇಲಿನವರೆಗೆ ವಿವಿಧ ಬಗೆಯ ಪರಿಕರಗಳು ಬಳಕೆಯಾಗುತ್ತವೆ. ರಥವನ್ನು ನಿರ್ಮಿಸುವ ಕಟ್ಟಿಗೆ, (ಮರ) ಅದರ ಗಾಲಿಗಳಿಗೆ ಬಳಸುವ ಶಿಲೆ ಅಥವಾ ಭಾಗಗಳಲ್ಲಿ ಬಳಸುವ ವಿವಿಧ ಲೋಹಗಳು, ಹಾಗೆಯೇ ರಥದ ಅಲಂಕರಣಕ್ಕಾಗಿ ಉಪಯೋಗಿಸಲಾಗುವ ವಿವಿಧ ಬಣ್ಣದ ಬಟ್ಟೆಗಳು ಮತ್ತು ಧ್ವಜಗಳು, ತಳಿರು ತೋರಣಗಳು ಇಂತಹ ಪರಿಕರಗಳೂ ಪ್ರಮುಖವಾಗಿರುತ್ತವೆ.

ಕೆಲವು ಪ್ರದೇಶಗಳಲ್ಲಿ ಇಡೀ ರಥವನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ಅಲಂಕಾರಗೊಳಿಸಿ, ಬಟ್ಟೆಗಳ ಮೇಲೆ ಚಿತ್ರಗಳನ್ನು ಬರೆದು, ಅವುಗಳನ್ನೇ ರಥದ ವಿನ್ಯಾಸದಲ್ಲಿ ಹೊಂದಿಸಿರುತ್ತಾರೆ. ಇನ್ನು ಕೆಲವು ಪ್ರದೇಶಗಳಲ್ಲಿ, ಹೂವಿನಿಂದ, ಬಾಳೆದಿಂಡುಗಳಿಂದ ಉತ್ಸವದ ದಿನವೇ ಕಡಿಮೆ ಅವಧಿಯಲ್ಲಿ ರಥ ನಿರ್ಮಾಣ ಮಾಡುವುದನ್ನು ಕಾಣುತ್ತೇವೆ. ಇವುಗಳಲ್ಲದೆ ಕಬ್ಬಿಣ, ಹಿತ್ತಾಳೆ, ಬೆಳ್ಳಿ, ಚಿನ್ನ ಮೊದಲಾದ ಲೋಹಗಳಿಂದ ಎರಕ ಹೊಯ್ದು ತಯಾರಿಸಲ್ಪಡುವ ರಥಗಳ ಪರಿಕರಗಳು ವಿವಿಧ ರೀತಿಯಲ್ಲಿ ಕಂಡುಬರುತ್ತವೆ. ಹೀಗೆ ರಥ ನಿರ್ಮಾಣ ಕಾರ್ಯದಲ್ಲಿ ಸ್ಥಿರರಥದ ತಯಾರಿಕಾ ಸಾಮಗ್ರಿಗಳು ಹಾಗೂ ಉತ್ಸವದ ಸಂದರ್ಭದಲ್ಲಿ ತಯಾರಿಸಲ್ಪಡುವ ಚರರಥದ ತಯಾರಿಕಾ ಸಾಮಗ್ರಿಗಳು ವಿವಿಧ ರೀತಿಯಲ್ಲಿರುವುದನ್ನು ಗಮನಿಸಬಹುದು. ಆದ್ದರಿಂದ ವಿವಿಧ ಮಾಧ್ಯಮದ ರಥಳನ್ನು ,

I. ಕಾಷ್ಠ ಮಾಧ್ಯಮದ ರಥಗಳ ಪರಿಕರಗಳು

II. ಲೋಹ ಮಾಧ್ಯಮದ ರಥಗಳು ಪರಿಕರಗಳು

III. ಸಂಕೀರ್ಣ ಮಾಧ್ಯಮದ ರಥಗಳು ಪರಿಕರಗಳು

IV. ಶಿಲಾ ಮಾಧ್ಯಮದ ರಥಗಳು ಪರಿಕರಗಳು


ಎಂದು ನಾಲ್ಕು ಮಾಧ್ಯಮಗಳಲ್ಲಿ ವಿಂಗಡಿಸಿಕೊಂಡು ಮಾಧ್ಯಮಗಳ ಹಿನ್ನೆಲೆಯಲ್ಲಿ ಬೇರೆ ಬೇರೆಯಾಗಿ ಬಳಸಲ್ಪಡುವ ಪರಿಕರಗಳನ್ನು ಅಧ್ಯಯನ ಮಾಡೋಣ.

I. ಕಾಷ್ಠ ಮಾಧ್ಯಮದ ರಥಗಳು ಪರಿಕರಗಳು : ಕಾಷ್ಠ ಮಾಧ್ಯಮದ ರಥಗಳಲ್ಲಿ ಎರಡು ವಿಧಗಳು.

ಅ) ಗಡ್ಡಿ ರಥಗಳು

ಬ) ಅಂಕಣ ರಥಗಳು.

ಅ. ಗಡ್ಡಿ ರಥಗಳ ಪರಿಕರಗಳು:


ರಥಗಳ ಪರಿಕರಗಳು
ಕಾಷ್ಠ ಮಾಧ್ಯಮದ ರಥಗಳ ಪರಿಕರಗಳು
ಲೋಹ ಮಾಧ್ಯಮದ ರಥಗಳ ಪರಿಕರಗಳು
ಸಂಕೀರ್ಣ ಮಾಧ್ಯಮದ ರಥಗಳ ಪರಿಕರಗಳು
ಶಿಲಾ ಮಾಧ್ಯಮದ ರಥಗಳ ಪರಿಕರಗಳು
ಕಾಷ್ಠ ಮಾಧ್ಯಮದ ರಥಗಳ ಪರಿಕರಗಳು
ಗಡ್ಡಿ ರಥಗಳು
ಅಂಕಣ ರಥಗಳು
ಮರದ ದೊಡ್ಡ ಹಲಗೆಗಳು ಹಾಗೂ ದೊಡ್ಡ ಗಾತ್ರದ ಶಿಲೆಗಳು
ವಿವಿಧ ವಿಧದ ಕಾಷ್ಠಗಳು
ಕಬ್ಬಿಣದ ಸಲಾಕೆಗಳು ಹಾಗೂ ನಟ್‌ಬೋಲ್ಟ್‌ಗಳು
ಮರಗೆತ್ತನೆಯ ಸಾಮಗ್ರಿಗಳು
ವಿವಿಧ ವರ್ಣಗಳು
ವಿವಿಧ ತೈಲಗಳು
ಬಿದಿರುಗಳು
ಬಿಗಿದು ಕಟ್ಟುವ ಸಾಮಗ್ರಿಗಳು
ಅಲಂಕಾರ ಸಾಮಗ್ರಿಗಳು
ಪೂಜಾ ಸಾಮಗ್ರಿಗಳು
ದಪ್ಪವಾದ ಹಗ್ಗಗಳು
ಪೆನ್ಸಿಲ್‌ಗಳು ಹಾಗೂ ಬಣ್ಣ ಬಣ್ಣದ
ಚಾಕಪೀಸ್‌ಗಳು
ಡ್ರಾಯಿಂಗ್ ಶೀಟ್ಸ್ ಮತ್ತು ಟ್ರೆಸ್ಸಿಂಗ್ ಶೀಟ್ಸ್
ವಿವಿಧ ಅಂಟು ಪದಾರ್ಥಗಳು
ಅಳತೆ ಪಟ್ಟಿಗಳು
ಗರಗಸಗಳು
ವುಡ್ ಕಟಿಂಗ್ ಮಶೀನ್
ಡ್ರಿಲ್ಲಿಂಗ್ ಮಶೀನ್
ವುಡ್ ಕಟಿಂಗ್ ಸಾಧನಗಳು
ಎಲ್ ಶೇಪ್ ಲೈನರ್ಸ್
ಮರದ ಹತೋಡಿಗಳು
ಸುತ್ತಿಗೆಗಳು
ಉಳಿಗಳು
ಸ್ಯಾಂಡ್ ಪೇಪರ್‌ಗಳು
ಪಾಲಿಶ್ ಮಶೀನ್

೧. ಮರದ ದೊಡ್ಡ ಹಲಗೆಗಳು ಹಾಗೂ ದೊಡ್ಡ ಗಾತ್ರದ ಶಿಲೆಗಳು :

ದೊಡ್ಡ ಗಾತ್ರದ ಹಲಗೆಗಳು ಹಾಗೂ ಶಿಲೆಗಳನ್ನು ರಥಗಳ ಚಕ್ರಗಳ ನಿರ್ಮಾಣಕ್ಕೆ ಉಪಯೋಗಿಸಲಾಗುವದು. ರಥಗಳ ಎತ್ತರ ಹಾಗೂ ಭಾರಗಳಿಗೆ ಅನುಗುಣವಾಗಿ ಅಳವಡಿಸಿದ ಶಿಲೆಯ ಹಾಗೂ ಹಲಗೆಯ ಚಕ್ರಗಳನ್ನು ಕರ್ನಾಟಕದ ಅನೇಕ ರಥಗಳಲ್ಲಿ ಗಮನಿಸಬಹುದು. ಉದಾಹರಣೆಗೆ ಬಾಗಲಕೋಟೆ ಜಿಲ್ಲೆಯ ಬನಶಂಕರಿಯ ದೇವಸ್ಥಾನದ ರಥ, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಢವಳಗಿಯ ಶ್ರೀ ಮಡಿವಾಳೇಶ್ವರ ದೇವಸ್ಥಾನದ ರಥ, ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ದೇವಸ್ಥಾನದ ರಥ, ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಶ್ರೀ ತಿಂತನಿ ಮೌನೇಶ್ವರ ರಥ, ಗುಲಬರ್ಗಾ ಜಿಲ್ಲೆಯ ಜೇರಗಿ ತಾಲೂಕಿನ ಜೇರಟಗಿಯ ಶರಣ ಬಸವೇಶ್ವರ ರಥ ಇಂತಹ ಇನ್ನೂ ಹಲವಾರು ಬೃಹತ್ ರಥಗಳಿಗೆ ಅವುಗಳ ಅಗಲ ಎತ್ತರಗಳಿಗೆ ತಕ್ಕಂತೆ ಅವುಗಳ ಭಾರವನ್ನು ತಡೆಯುವಂತಹ ದೊಡ್ಡ ಗಾತ್ರದ ಶಿಲೆಯ ಚಕ್ರಗಳನ್ನು ಅಳವಡಿಸಿರುವುದನ್ನು ಕಾಣಬಹುದು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ದೇವಸ್ಥಾನದ ರಥ, ರಾಯಚೂರು ಜಿಲ್ಲೆ ಗಬ್ಬೂರಿನ ಬೂದಿ ಬಸವೇಶ್ವರ ರಥ, ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನದ ರಥ, ಇದೇ ಜಿಲ್ಲೆಯ ಮರೆಮ್ಮನಳ್ಳಿಯ ಎರಡು ರಥಗಳು, ಹುಬ್ಬಳ್ಳಿಯ ಮೂರು ಸಾವಿರ ಮಠದ ಹಳೆಯ ರಥ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ರಥ, ನಂಜನಗೂಡಿನ ನಂಜುಂಡೇಶ್ವರ ದೇವಸ್ಥಾನದ ರಥ, ಧರ್ಮಸ್ಥಳದ ವಸ್ತುಸಂಗ್ರಹಾಲಯದ ಮುಂದೆ ನಿಂತಿರುವ ನಾಲ್ಕು ರಥಗಳು ಇಂತಹ ಅನೇಕ ಸುಂದರ ರಥಗಳಿಗೆ ದೊಡ್ಡ ದೊಡ್ಡ ಗಾತ್ರದ ಮರದ ಚಕ್ರಗಳನ್ನು ಅಳವಡಿಸಿರುವುದನ್ನು ಕಾಣಬಹುದು.

೨. ವಿವಿಧ ವಿಧದ ಕಾಷ್ಠಗಳು : ಗಡ್ಡಿ ರಥಗಳ ನಿರ್ಮಾಣದಲ್ಲಿ ವಿವಿಧ ವಿಧದ ಕಾಷ್ಠಗಳು ಬಳಸಲ್ಪಡುತ್ತವೆ. ಗಡ್ಡಿ ರಥಗಳ ಅಡಿಪಾಯ ಭಾಗದಿಂದ ಮಂಟಪ ಭಾಗದವರೆಗೆ ತೊಲೆಗಳು, ಅಚ್ಚುಗಳು, ವಿವಿಧ ವಿನ್ಯಾಸದಕಂಬಗಳು, ಮಂಟಪಗಳು ಹಾಗೂ ಅನೇಕ ರೀತಿಯ ಮೂರ್ತಿ ಶಿಲೆಗಳನ್ನು ಕಾಣಬಹುದು. ರಥ ತಯಾರಿಕೆಯಲ್ಲಿ ಆಯಾ ಭಾಗಗಳಿಗೆ ಸಂಬಂಧಿಸಿದಂತೆ ವಿವಿಧ ರೀತಿಯ ಕಟ್ಟಿಗೆಗಳನ್ನು ಬಳಸಬೇಕಾಗುತ್ತದೆ. ಸಾಮಾನ್ಯವಾಗಿ ತೇಗು ಹೊನ್ನಿ , ನಂದಿ, ಶ್ರೀಗಂಧ, ಹಲಸು, ವಾಟೆ, ಹೊನ್ನಿ , ಬೇವು, ಜಾಲಿ ಹಾಗೂ ದಿಂಡಲ ಕಟ್ಟಿಗೆಗಳು ರಥ ನಿರ್ಮಾಣ ಕಾರ್ಯದಲ್ಲಿ ಹೆಚ್ಚಾಗಿ ಬಳಕೆಯಾಗುತ್ತವೆ. ಅತೀ ಸೂಕ್ಷ್ಮ ಕೆತ್ತನೆಯ ಕೆಲಸಕ್ಕೆ ಅಂದರೆ ರಥದ ಗಡ್ಡೆ ಭಾಗದಲ್ಲಿ ಕಾಣುವಂತಹ ಮೂರ್ತಿಶಿಲ್ಪಗಳನ್ನು ತಯಾರಿಸಲು ಸಾಗುವಾನಿ ಕಟ್ಟಿಗೆ ಬಳಸುವುದನ್ನು ಉತ್ತರ ಕರ್ನಾಟಕದ ಅನೇಕ ರಥಗಳಲ್ಲಿ ಕಾಣಬಹುದು.

ಉದಾ :- ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಇಂಚಲದ ರಥ, ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕರಾಯನ ರಥ, ಕೊಪ್ಪಳದ ಗವಿಸಿದ್ಧೇಶ್ವರ ದೇವಸ್ಥಾನದ ರಥ, ಹುಲುಗಿಯ ಹುಲಿಗೆಮ್ಮ ದೇವಸ್ಥಾನದ ರಥ, ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ತಿಂತನಿ ಮೌನೇಶ್ವರ ರಥ, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೊಡದ ಪವಾಡ ಬಸವೇಶ್ವರ ದೇವಸ್ಥಾನದ

ರಥ, ಬಾಗಲಕೋಟೆ ಜಿಲ್ಲೆಯ ಶಿರೂರು ಸಿದ್ದೇಶ್ವರ, ಬಾದಾಮಿ ಬನಶಂಕರಿ ಹಾಗೂ ಮುಚಖಂಡಿ ರಥಗಳಂತಹ ಅನೇಕ ಸುಂದರ, ಸೂಕ್ಷ್ಮ ವಿನ್ಯಾಸಗಳನ್ನು ಹೊಂದಿರುವಂತಹ ರಥಗಳಲ್ಲಿ ವಿವಿಧ ರೀತಿಯ ಕಾಷ್ಠಗಳನ್ನು ಬಳಸಿರುವುದನ್ನು ಗಮನಿಸಬಹುದು.

೩. ಕಬ್ಬಿಣದ ಸಲಾಕೆಗಳು ಹಾಗೂ ನಟ್ ಬೋಲ್ಟ್‌ಗಳು :- ರಥಗಳ ಅಡಿಪಾಯ ಭಾಗದಿಂದ ಮಂಟಪ ಭಾಗದವರೆಗೆ ಒಂದರ ಮೇಲೊಂದನ್ನು ಜೋಡಿಸಲ್ಪಟ್ಟ ವಿವಿಧ ರೀತಿಯ ಕಾಷ್ಠಗಳ ತೊಲೆಗಳು ಹಾಗೂ ಹಲಗೆಗಳು ಸರಿದಾಡದಂತೆ ಭದ್ರವಾಗಿ ಕೂಡಲು ಕಬ್ಬಿಣದ ಉದ್ದವಾದ ಸಲಾಕೆಗಳನ್ನು ಉಪಯೋಗಿಸುವರು. ಅಡಿಪಾಯದ ತೊಲೆಗಳಿಂದ ಮಂಟಪದ ಹಲಗೆಗಳಲ್ಲಿ ಕೊರೆಯಲಾದ ರಂಧ್ರಗಳಿಂದ ಹಾಯ್ದು ಬಂದ ಕಬ್ಬಿಣದ ಸಲಾಕೆಯು ಅಲುಗಾಡದಂತೆ ಸಲಾಕೆಗಳ ಎರಡೂ ಅಂಚುಗಳಲ್ಲಿ ನಟ್ ಬೋಲ್ಟ್‌ಗಳನ್ನು ಬಿಗಿಯಾಗಿ ಅಳವಡಿಸಿರುವುದನ್ನು ಗಡ್ಡಿ ರಥಗಳ ಒಳಭಾಗದಲ್ಲಿ ಕಾಣಬಹುದು.

೪. ಮರಗೆತ್ತನೆಯ ಸಾಮಗ್ರಿಗಳು : ಕಾಷ್ಠ ರಥಗಳು ಸುಂದರವಾಗಿ ನಿರ್ಮಾಣಗೊಳ್ಳಬೇಕಾದರೆ ಕಾಷ್ಠಗಳನ್ನು ರಥದ ವಿನ್ಯಾಸದ ಅಳತೆಗನುಗುಣವಾಗಿ ಕೊರೆಯಲು, ಗೆರೆ ಹಾಕಲು, ಕೆತ್ತಲು, ಪಾಲಿಶ್ ಮಾಡಲು ಹಾಗೂ ಸೂಕ್ಷ್ಮ ವಿನ್ಯಾಸಗಳನ್ನು ಮೂಡಿಸುವುದಕ್ಕೆ ರಥ ಶಿಲ್ಪಿಗಳು ಅನೇಕ ಮರಗೆತ್ತಯ ಸಾಮಗ್ರಿಗಳನ್ನು ಉಪಯೋಗಿಸುವರು. ಅವುಗಳಲ್ಲಿ ಒಂದೊಂದರ ಉಪಯೋಗಗಳನ್ನು ತಿಳಿಯುವಾ.

i. ಪೆನ್ಸಿಲ್‌ಗಳು ಹಾಗೂ ಬಣ್ಣಬಣ್ಣದ ಚಾಕ್‌ಪೀಸ್‌ಗಳು :

ಮರದ ದೊಡ್ಡ ಗಾತ್ರದ ಹಲಗೆಗಳು ಕೊರಡುಗಳ ಮೇಲ್ಮೈ ಮೇಲೆ ಸರಾಗವಾಗಿ ಮೂಡಬಲ್ಲ ಚಾಕ್‌ಪೀಸ್ ಗಳು ಹಾಗು ಪೆನ್ಸಿಲ್‌ಗಳನ್ನು ಗೆರೆ ಹಾಕಲು ಮತ್ತು ಗುರುತುಗಳನ್ನು ಮಾಡಲು ಉಪಯೋಗಿಸುವರು. ರಥ ನಿರ್ಮಾಣ ಕಾರ್ಯಕ್ಕೆ ಉಪಯೋಗಿಸುವ ಬೇರೆ ಬೇರೆ ಜಾತಿಯ ಕಾಷ್ಠಗಳು, ದಿಂಡುಗಳು , ಕೊರಡುಗಳು, ಹಲಗೆಗಳು ಹಾಗೂ ಚಿಕ್ಕ ತುಣುಕುಗಳನ್ನು ಗುರುತಿಸಲು ಬೇರೆ ಬೇರೆ ಬಣ್ಣದ ಚಾಕ್ ಪೀಸ್ ಹಾಗೂ ಪೆನ್ಸಿಲ್‌ಗಳನ್ನು ಬಳಸುವರು. ಎಲ್ಲ ಕಾಷ್ಠಗಳನ್ನು ಒಂದೇ ಸ್ಥಳದಲ್ಲಿ ಒಂದರ ಮೇಲೊಂದನ್ನು ವಟ್ಟಿದ್ದರೂ, ಈ ಕಟ್ಟಿಗೆ ಇದೇ ಜಾತಿಗೆ ಸೇರಿದ್ದು, ಈ ಕಟ್ಟಿಗೆ ಇಂತಹ ಕೆಲಸಕ್ಕೆ ಉಪಯೋಗಕ್ಕೆ ಬರುವಂತಹದು ಎಂದು ಬಣ್ಣ ಬಣ್ಣಗಳಿಂದ ಗುರುತಿಸಲಾದ ಚಾಕ್‌ಪೀಸ್ ಅಥವಾ ಪೆನ್ಸಿಲ್‌ಗಳ ಗೆರೆಗಳಿಂದ ತಿಳಿದುಕೊಳ್ಳಲು ಸಹಾಯವಾಗುತ್ತದೆ.

ii. ಡ್ರಾಯಿಂಗ್ ಸೀಟ್ಸ ಮತ್ತು ಟ್ರೆಸ್ಸಿಂಗ್ ಶೀಟ್ಸ :

ರಥ ನಿರ್ಮಾಣ ಮಾಡಲು ರಥಶಿಲ್ಪಿಗಳು, ರಥದ ನೀಲನಕ್ಷೆಯನ್ನು ಸಿದ್ಧಪಡಿಸಬೇಕಾಗುತ್ತದೆ. ಅಲ್ಲದೆ ರಥದ ಅಧಿಷ್ಠಾನ ಭಾಗದಲ್ಲಿ ಮೂರ್ತಿ ಶಿಲ್ಪಗಳ ಕೆತ್ತನೆ ಮಾಡಲು, ಮುಂಚೆಯೇ ವಿವಿಧ ಮೂರ್ತಿಶಿಲ್ಪಗಳ ರೇಖಾಚಿತ್ರಗಳನ್ನು ರಚಿಸಬೇಕಾಗುತ್ತದೆ. ರಥಗಳ ನೀಲನಕ್ಷೆ ಮೂರ್ತಿಶಿಲ್ಪಗಳು ಹಾಗೂ ಅನೇಕ ರೀತಿಯ ನಕ್ಷೆಗಳ ರೇಖಾ ಚಿತ್ರಗಳನ್ನು ರಚಿಸಲು ಡ್ರಾಯಿಂಗ್ ಪೇಪರ್‌ಗಳು ಬಳಕೆಯಾಗುತ್ತವೆ. ಸಿದ್ಧಪಡಿಸಿಕೊಂಡ ರೇಖಾಚಿತ್ರಗಳ ವಿನ್ಯಾಸಗಳನ್ನು ಮರದ ಹಲಗೆಗಳ ಮೇಲೆ ತದ್ರೂಪವಾಗಿ ಮೂಡುವಂತೆ ಟ್ರೇಸ್ಸಿಂಗ್ ಸೀಲ್‌ಗಳ ಉಪಯೋಗಮಾಡುತ್ತಾರೆ. ಒಂದೇ ರೀತಿಯ

ಚಿತ್ರಗಳು ರಥದ ಬೇರೆ ಬೇರೆ ಭಾಗದಲ್ಲಿ ರಚಿತವಾಗಲು ಟ್ರೇಸ್ಸಿಂಗ್ ಸೀಲ್‌ಗಳು ತುಂಬಾ ಸಹಾಯಕಾರಿಯಾಗುತ್ತವೆ.

iii. ವಿವಿಧ ಅಂಟು ಪದಾರ್ಥಗಳು :

ಮರದ ಹಲಗೆಗಳ ಮೇಲೆ ಮೂರ್ತಿಶಿಲ್ಪಗಳ ಹಾಗೂ ವಿವಿಧ ನಕ್ಷೆಗಳ ಕೆತ್ತನೆಯನ್ನು ಮಾಡಲು, ಪೇಪರುಗಳ ಮೇಲೆ ರಚಿತವಾದ ರೇಖಾ ಚಿತ್ರಗಳನ್ನು ಆಯಾ ಅಳತೆಗೆ ಸಂಬಂಧಿಸಿದ ಹಲಗೆಗಳ ಮೇಲೆ ಅಂಟಿಸುವ ವಿಧಾನವನ್ನು ಗಮನಿಸಬಹುದು. ಮರದ ಹಲಗೆಗಳ ಮೇಲೆ ಪೇಪರುಗಳು ಸರಿಯಾಗಿ ಅಂಟಿಕೊಳ್ಳಲು ರಥಶಿಲ್ಪಿಗಳು ಅನೇಕ ರೀತಿಯ ಅಂಟುಪದಾರ್ಥಗಳನ್ನು ಬಳಸುವರು.

ಉದಾ :- ಫೆವಿಕಾಲ್, ವೆಮಿಕಾಲ್, ಥಿನ್ ಟ್ರಾನ್ಸ್‌ಪರಂಟ್ ಗಮ್ ಅಥವಾ ತಾವೇ ಸಿದ್ದಪಡಿಸಿದ ತಿನ್ನುವ ಅಂಟಿನಿಂದ ಮಾಡಿದ ದ್ರವ ಅಥವಾ ಗಂಜಿ ಇಂಥವುಗಳನ್ನು ಉಪಯೋಗಿಸುವರು. ರಥೋತ್ಸವದ ಸಂದರ್ಭದಲ್ಲಿ ಚರರಥದ ನಿರ್ಮಾಣದಲ್ಲಿ ಉಪಯೋಗವಾಗುವ ಪತಾಕೆಗಳು ಮತ್ತು ಬಿದಿರುಗಳ ಕಡ್ಡಿಗಳಿಗೆ ಸರಿಯಾಗಿ ಅಂಟಲು ಇಂತಹ ಅಂಟು ಪದಾರ್ಥಗಳನ್ನು ಬಳಸುವರು.

iv. ಅಳತೆಯ ಪಟ್ಟಿಗಳು :

ಅನೇಕ ರೀತಿಯ ಕಾಷ್ಠಗಳನ್ನು ಬೇರೆ ಬೇರೆ ಅಳತೆಗಳಲ್ಲಿ ವಿಂಗಡಿಸಿಕೊಂಡು ವಿವಿಧ ರೀತಿಯ ಶಿಲ್ಪವಿನ್ಯಾಸಗಳನ್ನು ಬೇರೆ ಬೇರೆ ಅಳತೆಗಳಲ್ಲಿ ನಿರ್ಮಾಣ ಮಾಡಲು ಅನೇಕ ಅಳತೆ ಪಟ್ಟಿಗಳು ಬಳಕೆಯಾಗುತ್ತವೆ. ಇಂಚು ಪಟ್ಟಿಗಳು, ಫೂಟ್ ಪಟ್ಟಿಗಳು, ಮೀಟರ್ ಪಟ್ಟಿಗಳು, ಎಲ್ ಆಕಾರದ ಪಟ್ಟಿಗಳು ಹಾಗೂ ಸುರುಳಿಗಳಾಗಿ ಸುತ್ತಿಕೊಳ್ಳುವ ಅಳತೆ ಪಟ್ಟಿಗಳನ್ನು ರಥ ಶಿಲ್ಪಿಗಳು ಬಳಸುವರು.

v. ಗರಗಸಗಳು :

ಉದ್ದವಾದ ಮರದ ಹಲಗೆಗಳನ್ನು ತಮಗೆ ಬೇಕಾದ ಅಳತೆಗಳಲ್ಲಿ ಕತ್ತರಿಸಲು ಅಥವಾ ತುಂಡು ಮಾಡಲು ಬೇರೆ ಬೇರೆ ರೀತಿಯ ಗರಗಸಗಳನ್ನು ಬಳಸುವುದುಂಟು. ದೊಡ್ಡ ಗಾತ್ರದ ಹಲಗೆಗಳನ್ನು ತುಂಡರಿಸಲು ಸುಮಾರು ಮೂರು ಅಡಿ ಉದ್ದವಾದ ಎರಡೂ ಅಂಚುಗಳಲ್ಲಿ ಮರದ ಹಿಡಿಕೆಗಳುಳ್ಳ ಗರಗಸಗಳನ್ನು ಹಾಗೂ ಚಿಕ್ಕ ಗಾತ್ರದ ಹಲಗೆಗಳನ್ನು ತುಂಡರಿಸಲು, ಕಬ್ಬಿಣದ ಆಯತಾಕಾರದ ಚೌಕಟ್ಟುವುಳ್ಳ ಎಕ್ಸೆಲ್ ಬ್ಲೇಡ್‌ಗಳನ್ನು ಉಪಯೋಗಿಸುವರು.

vi. ವುಡ್ ಕಟಿಂಗ್ ಮಶೀನ್ :

ದೊಡ್ಡ ದೊಡ್ಡ ಮರದ ದಿಂಡು ಹಾಗೂ ಕೊರಡುಗಳನ್ನು ಬೇಕಾದ ಅಳತೆಗಳಲ್ಲಿ ಹಲಗೆಗಳನ್ನು ತಯಾರಿಸಿಕೊಳ್ಳಲು ದೊಡ್ಡ ಪ್ರಮಾಣದ ಮರ ಕೊರೆಯುವ ಯಂತ್ರವನ್ನು ಉಪಯೋಗಿಸುವರು. ಮರದ ಹಲಗೆಗಳ ಮೇಲೆ ಬೇರೆ ಬೇರೆ ಬಾರ್ಡರ್ ಡಿಜೈನ್‌ಗಳಿಗನುಗುಣವಾಗಿ ಮೂಡಿಸಲು ಕಟಿಂಗ್ ಮಶೀನ್‌ಗಳಿಗೆ ಅನೇಕ ರೀತಿಯ ಬ್ಲೇಡ್‌ಗಳನ್ನು

ಅಳವಡಿಸಬಹುದು. ಮರದ ಹಲಗೆಗಳನ್ನು ತಮಗೆ ಬೇಕಾದ ಅಳತೆಗಳಲ್ಲಿ ತಯಾರಿಸಿಕೊಂಡು, ಒಂದೇ ರೀತಿಯ ವಿನ್ಯಾಸಗಳನ್ನು ಹಲಗೆಗಳ ಬಾರ್ಡರ್‌ಗಳಲ್ಲಿ ಸಾಲುಸಾಲಾಗಿ ರಚಿಸಲು ವುಡ್ ಕಟಿಂಗ್ ಮಶೀನ್‌ಗಳನ್ನು ಬಳಸುವರು. ಈ ಯಂತ್ರಗಳು ವಿದ್ಯುತ್ ಶಕ್ತಿಯ ಸಹಾಯದಿಂದ ಕೆಲಸ ಮಾಡುತ್ತವೆ.

vii. ಡ್ರಿಲ್ಲಿಂಗ್ ಮಶೀನ್ :

ರಥ ನಿರ್ಮಾಣ ಕಾರ್ಯದಲ್ಲಿ ರಥದ ಅಡಿಪಾಯ ಭಾಗದಲ್ಲಿರುವ ದೊಡ್ಡ ದೊಡ್ಡ ತೊಲೆಗಳ, ಅಧಿಷ್ಠಾನ ಮತ್ತು ಮಂಟಪ ಭಾಗಗಳಲ್ಲಿ ಹೊಂದಿಕೆಯಾಗುವಂತಹ ದೊಡ್ಡ ದೊಡ್ಡ ಮರದ ಹಲಗೆಗಳು ಸರಿದಾಡದಂತೆ ನಟ್ ಬೋಲ್ಟ್‌ಗಳನ್ನು ಅಳವಡಿಸಿರುವುದನ್ನು ಕಾಣುತ್ತೇವೆ. ಈ ಕಬ್ಬಿಣದ ಸಲಾಕೆಗಳು ಹಾಗೂ ನಟ್ ಬೋಲ್ಟ್‌ಗಳು ರಥದ ಅನೇಕ ಹಲಗೆಗಳಲ್ಲಿ ಪಾರಾಗಿ ಬರಲು ತೊಲೆಗಳಿಗೆ ಹಾಗೂ ಹಲಗೆಗಳಿಗೆ ರಂಧ್ರಗಳನ್ನು ಕೊರೆಯಬೇಕಾಗುವದು. ಬೇರೆ ಬೇರೆ ಅಳತೆಯ ರಂಧ್ರಗಳನ್ನು ಮಾಡಲು ವಿವಿಧ ಬಗೆಯ ಅಳತೆಯ ಬ್ಲೇಡ್‌ಗಳಿರುವ ಡ್ರಿಲ್ಲಿಂಗ್ ಮಶೀನ್‌ಗಳನ್ನು ಉಪಯೋಗಿಸುವರು. ಇವುಗಳೂ ಸಹ ವಿದ್ಯುತ್‌ಚಾಲಿತ ಯಂತ್ರಗಳು.

viii. ವುಡ್‌ಕಟಿಂಗ್ ಸಾಧನಗಳು :

ಮರದ ಹಲಗೆಗಳ ಮೇಲ್ಮೈ ಭಾಗಗಳನ್ನು ಸಮಪಾತಳಿಯನ್ನಾಗಿಸಲು ವುಡ್‌ಕಟ್ ಮಶೀನ್‌ಗಳನ್ನು ಬಳಸುವರು. ಮೇಜಿನಾಕಾರದ ಸಾಧನದ ಮೇಲ್ಭಾಗದ ಮಧ್ಯಭಾಗದಲ್ಲಿ, ಪಂಚಲೋಹಗಳಿಂದ ತಯಾರಿಸಲ್ಪಟ್ಟ ಒಂದು ಬದಿಯ ಅಂಚು ಹರಿತವಾಗಿರುವ ಲೋಹದ ಕೊಳವೆಯನ್ನು ತಿರುಗುವಂತೆ ಅಳವಡಿಸಿರುವ ವಿದ್ಯುತ್‌ಚಾಲಿತ ಯಂತ್ರವನ್ನು ಕಾಣಬಹುದು. ಇದರಿಂದ ಮರದ ದೊಡ್ಡ ದೊಡ್ಡ ಹಲಗೆಗಳು ಹಾಗೂ ತೊಲೆಗಳ ಮೇಲ್ಮೈಗಳನ್ನು ಸಮಪಾತಳಿಯನ್ನಾಗಿಸುವರು. ಇನ್ನು ಚಿಕ್ಕ ಚಿಕ್ಕ ಹಲಗೆಗಳಿಗೆ ಆಯತಾಕಾರದಲ್ಲಿ ವಿವಿಧ ರೀತಿಯ ವಿನ್ಯಾಸಗಳಿರುವ, ಮಧ್ಯ ಭಾಗದಲ್ಲಿ ಚಪ್ಪಟೆಯಾದ ಕಬ್ಬಿಣದ ಪಟ್ಟಿಯನ್ನು ಹೊಂದಿದ, ಹಿಡಿಕೆ ಇರುವ ಸಣ್ಣ ವುಡ್‌ಕಟ್ ಸಾಧನವನ್ನು ಬಳಸುವರು. ಇದಕ್ಕೆ ವಿದ್ಯುತ್‌ಶಕ್ತಿಯ ಸಹಾಯ ಬೇಕಿಲ್ಲ.

ix . ಎಲ್ ಶೇಪ್ ಲೈನ್‌ರ್ಸ್ :

ಸಮಪಾತಳಿಯನ್ನಾಗಿಸಿದ ಮರದ ಹಲಗೆಗಳ ಮೇಲೆ ವಿನ್ಯಾಸಗಳನ್ನು ಮೂಡಿಸಲು ಬಣ್ಣ ಬಣ್ಣದ ಕಡುಗಳಿಂದ ರೇಖೆಗಳನ್ನು ಎಳೆಯುವರು. ಈ ರೇಖೆಗಳು ಸರಿಯಾಗಿವೆ ಎಂದು ರಥಶಿಲ್ಪ ನಿರ್ದೇಶಕನು ಪರೀಕ್ಷಿಸಿದಾದ ಮೇಲೆ ಗೆರೆಗಳು ಅಳುಕದಂತೆ ಎಲ್ ಶೇಪ್‌ನ ಲೈನರ್ಸ್‌ಗಳಿಂದ ಮತ್ತೆ ಪೆನ್ಸಿಲ್ ಅಥವಾ ಕಡುಗಳ ರೇಖೆಗಳ ಮೇಲೆ ಗೆರೆಗಳನ್ನೆಳೆಯಲಾಗುತ್ತದೆ. ಈ ರೇಖೆಗಳು ಅಳಿಸಿ ಹೋಗಲಾರವು ಏಕೆಂದರೆ ಎಲ್ ಶೇಪ್ ಲೈನರ್ಸ್‌ಗಳು ಸಣ್ಣ ಸಣ್ಣ ಕಟ್ಟಿಗೆಯ ತುಣುಕುಗಳಿಂದ ತಯಾರಿಸಲ್ಪಟ್ಟಿದ್ದು, ಒಳಬದಿಯಲ್ಲಿ ಎರಡೆರಡು ಮೊಳೆಗಳು ಹೊರಗೆಚಾಚಿಕೊಂಡಿರುತ್ತವೆ. ಮೊಳೆಗಳಿಂದ ಎಳೆಯಲ್ಪಡುವ ಗೆರೆಗಳು ಕಟ್ಟಿಗೆಯ ಹಲಗೆಗಳ ಮೇಲ್ಮೈಯನ್ನು ಸಮಾನಾಂತರವಾಗಿ ಕೊರೆದಿರುವ ಗೆರೆಗಳಾಗಿರುತ್ತವೆ. ಇದು ಶಿಲ್ಪಿಗಳಿಗೆ ಕೆತ್ತನೆಯ ಕಾರ್ಯಕ್ಕೆ ತುಂಬಾ

ಸಹಾಯಕವಾಗಿರುತ್ತದೆ. ಈ ಎಲ್ ಶೇಪ್‌ನ ಲೈನರಗಳು ಒಂದು ಇಂಚನಿಂದ ಎರಡು ಫೂಟ್‌ಗಳ ವರೆಗೆ ಬೇರೆ ಬೇರೆ ಅಳತೆಗಳಲ್ಲಿ ತಯಾರಿಸಲ್ಪಟ್ಟಿರುತ್ತವೆ.

x. ಮರದ ಹತೋಡಿಗಳು :

ಮರದ ಹಲಗೆಗಳ ಮೇಲೆ ಕೆತ್ತನೆ ಕೆಲಸವನ್ನು ಕೈಗೊಂಡಾಗ, ಉಳಿಗಳ ಮೇಲೆ ಹೊಡೆಯಲು ಮರದ ಹತೋಡಿಗಳನ್ನು ಬಳಸುವರು. ಮರದ ಹಲಗೆಗಳ ಮೇಲೆ ಶಿಲ್ಪರಚನೆಯ ಸಂದರ್ಭದಲ್ಲಿ ಹಲಗೆಯ ಮೇಲೆ ಮೂಡಿಸಲಾದ ರೇಖಾಚಿತ್ರಗಳ ರೇಖೆಗಳಗುಂಟ ಸರಿಯಾಗಿ ಕೆತ್ತಲು, ಉಳಿಗಳು ಕೈಹಿಡಿತದಲ್ಲಿರಲು ಮರದ ಹತೋಡಿಗಳ ಬಳಕೆಯಾಗುತ್ತದೆ. ಹತೋಡಿಗಳು ಸುಮಾರು ಒಂದು - ಒಂದೂವರೆ ಅಡಿ ಉದ್ದವಾಗಿರುತ್ತವೆ. ಮರಗಳ ಹಲಗೆಗಳ ಮೇಲೆ ಸೂಕ್ಷ್ಮ ಕೆತ್ತನೆ ಕೆಲಸ ಕೈಗೊಂಡಾಗ ಒಮ್ಮೊಮ್ಮೆ ಜೋರಾಗಿ ಹಾಗೂ ಒಮ್ಮೊಮ್ಮೆ ಬಹಳ ಸಾವಕಾಶವಾಗಿ ಉಳಿಗಳಿಗೆ ಹೊಡೆತ ಹಾಕಬೇಕಾಗುತ್ತದೆ. ಒಂದು ವೇಳೆ ಲೋಹದ ಸುತ್ತಿಗೆಗಳನ್ನು ಬಳಸಿದರೆ, ಸಾವಕಾಶವಾಗಿ ಪೆಟ್ಟು ಬೀಳಬೇಕಾದ ಸಂದರ್ಭದಲ್ಲಿ ಜೋರಾಗಿ ಹೊಡೆತ ಬೀಳುವುದರಿಂದ ಸೂಕ್ಷ್ಮ ಕೆತ್ತನೆಯ ವಿನ್ಯಾಸದಲ್ಲಿ ತಪ್ಪು ತಡೆಗಳುಂಟಾಗುತ್ತವೆ. ಆದ್ದರಿಂದ ಮರದ ಹತೋಡಿಗಳು ಸೂಕ್ಷ್ಮ ಕೆತ್ತನೆಯ ಕೆಲಸಕ್ಕೆ ತುಂಬಾ ಸಹಾಯಕವಾಗುತ್ತವೆ.

ಮರದ ಹತೋಡಿಗಳು ಆಯತಾಕಾರ, ಸಿಲಿಂಡರ ಆಕಾರ, ಗೋಪುರಾಕಾರ ಹಾಗೂ ಚೌಕಾಕಾರದಲ್ಲಿ ಕೆಲಸಕ್ಕೆ ಉಪಯೋಗವಾಗುವಂತೆ ರಥಶಿಲ್ಪಿಗಳಿಂದಲೇ ತಯಾರಿಸಲ್ಪಟ್ಟಿರುತ್ತವೆ. ಕೈಯಲ್ಲಿ ಹಿಡಿಯಲು ಸಹಾಯಕವಾಗುವಂತೆ ಹಿಡಿಕೆಗಳನ್ನು ಹೊಂದಿರುತ್ತವೆ.

xi. ಸುತ್ತಿಗೆಗಳು :

ಮರದ ಹಲಗೆಗಳನ್ನು ಒಂದನ್ನೊಂದು ಹೊಂದಿಸಲು ಬೇರೆ ಬೇರೆ ಅಳತೆಯ ಮೊಳೆಗಳನ್ನು ಹೊಡೆಯಲು ವಿವಿಧ ಅಳತೆಗಳ ಸುತ್ತಿಗೆಗಳನ್ನು ಬಳಸುವರು. ಕೆಲವು ಚಿಕ್ಕ ಸುತ್ತಿಗೆಗಳನ್ನು ಸೂಕ್ಷ್ಮ ಕೆತ್ತನೆ ಕೆಲಸಗಳಲ್ಲಿಯೂ ಬಳಸಲಾಗುವುದು. ಕೆಲವು ಸುತ್ತಿಗೆಗಳು ತಪ್ಪಾಗಿ ಹೊಡೆದ ಮೊಳೆಗಳನ್ನು ಹಲಗೆಯಿಂದ ಹೊರತೆಗೆಯಲು ಸಹಾಯಕಾರಿಯಾಗುತ್ತವೆ.

xii. ಉಳಿಗಳು :

ಮರಗೆತ್ತನೆಯ ಕೆಲಸದಲ್ಲಿ ಉಳಿಗಳ ಪಾತ್ರ ಬಹಳ ಮುಖ್ಯವಾಗಿರುತ್ತದೆ. ಎಷ್ಟು ಒಳ್ಳೆಯ ಉಳಿಗಳಿರುವವೋ, ಅಷ್ಟೇ ಒಳ್ಳೆಯ ಸೂಕ್ಷ್ಮ ವಿನ್ಯಾಸಗಳನ್ನು ಮೂಡಿಸಲು ಸಾಧ್ಯ. ರಥಶಿಲ್ಪಿಗಳು ಅನೇಕ ಬಗೆಯ ಉಳಿಗಳನ್ನು ಉಪಯೋಗಿಸುವರು. ಅವುಗಳನ್ನು ತಮಗೆ ಬೇಕಾದ ಆಕಾರ ಪ್ರಕಾರಗಳಲ್ಲಿ ತಾವೇ ತಯಾರಿಸುವುದೂ ಉಂಟು.

★. ಚಪ್ಪಟೆಯಾಕಾರದ ಉಳಿಗಳು :

ಸುಮಾರು ಎರಡೂವರೆ ಇಂಚು ಅಗಲದಿಂದ ಕಾಲು ಇಂಚು ಅಗಲದ ತುದಿಯುಳ್ಳ ಚಪ್ಪಟೆಯಾಕಾರದ ಉಳಿಗಳನ್ನು ಕಾಣಬಹುದು. ದೊಡ್ಡ ಉಳಿಗಳಿಗೆ ಕಟ್ಟಿಗೆಯ ಅಥವಾ ಫೈಬರ್‌ದ ಹಿಡಿಕೆಗಳನ್ನು ಅಳವಡಿಸಿರುವರು. ಏಕೆಂದರೆ ಈ ಉಳಿಗಳಿಂದ ಹಲಗೆಯ ಹೆಚ್ಚಿನ, ಬೇಡವಾದ

ಭಾಗವನ್ನು ತೆಗೆಯಬೇಕಾದಾಗ ಹತೋಡಿಯಿಂದ ಹೊಡೆದ ಹೊಡೆತಗಳನ್ನು ತಡೆಯುವ, ಗಟ್ಟಿಯಾದ ಉತ್ತಮ ಕಾಷ್ಠದಿಂದ ಅಥವಾ ಫೈಬರದಿಂದ ತಯಾರಿಸಿದ ಹಿಡಿಕೆಗಳು ಸಹಾಯಕವಾಗುತ್ತವೆ.

ಎರಡು ಇಂಚು ಅಥವಾ ಎರಡೂವರೆ ಇಂಚಿನ ತುದಿಯುಳ್ಳ ಉಳಿಗಳನ್ನು ಮರದ ಕೆತ್ತನೆಯ ಮೊದಲ ಹಂತದಲ್ಲಿ ಉಪಯೋಗಿಸುವರು. ಒಂದು ಅಥವಾ ಒಂದೂವರೆ ಇಂಚು ಅಗಲದ ಉಳಿಗಳನ್ನು ಕೆತ್ತನೆ ಮಾಡುವ ಮರದ ಹಲಗೆಯ ಸ್ಥಳದ ಮೇಲ್ಮೈಯನ್ನು ಒಂದು ಪದರು ಒಳಗಿಳಿಸಲು ಉಪಯೋಗಿಸುವರು. ಅರ್ಧ ಇಂಚು ಅಥವಾ ಕಾಲು ಇಂಚುಗಳಷ್ಟು ಸಣ್ಣ ಉಳಿಗಳನ್ನು ಸೂಕ್ಷ್ಮ ವಿನ್ಯಾಸಗಳ ರಚನೆಯಲ್ಲಿ ಬಳಸಲಾಗುವುದು. ಸಣ್ಣ ಚಪ್ಪಟೆಯ ಉಳಿಗಳಿಗೆ ಹಿಡಿಕೆಗಳಿರುವುದಿಲ್ಲ.

ಈ ಚಪ್ಪಟೆಯ ಉಳಿಗಳಲ್ಲಿ ಅರ್ಧವೃತ್ತದ ಅಂಚುಗಳುಳ್ಳ ಉಳಿಗಳನ್ನು ಕಾಣಬಹುದು. ಅರ್ಧ ಚಂದ್ರಾಕೃತಿಯ ಉಳಿಗಳನ್ನು ವಿವಿಧ ಬಳ್ಳಿ, ಹೂವು ಹಾಗೂ ಎಲೆಗಳಂತಹ ನಕ್ಷೆಗಳನ್ನು ತಯಾರಿಸುವಲ್ಲಿ ಬಳಸಲಾಗುವುದು. ಒಟ್ಟಿನಲ್ಲಿ ಚಪ್ಪಟೆಯಾಕಾರದ ಉಳಿಗಳು ಕೆತ್ತನೆಯ ಮೊದಲ ಹಂತದಲ್ಲಿ ಉಪಯೋಗವಾಗುವವು.

★. ದುಂಡಾದ ಹಿಡಿಕೆಗಳುಳ್ಳ ಉಳಿಗಳು :

ದುಂಡಾದ ಹಿಡಿಕೆಗಳುಳ್ಳ ಉಳಿಗಳು ಸಾಮಾನ್ಯವಾಗಿ ಒಂದೂವರೆ ಇಂಚು ಅಗಲದಿಂದ ಸೂಜಿಯ ಮೊನೆಯಷ್ಟು ಚೂಪಾದ ಆಕಾರಗಳಲ್ಲಿ ತಯಾರಿಸಲ್ಪಟ್ಟಿರುತ್ತವೆ. ಈ ಉಳಿಗಳು ಮರಗೆತ್ತನೆಯ ಎರಡನೆಯ ಹಂತದಲ್ಲಿ ಅಂದರೆ ಸೂಕ್ಷ್ಮ ವಿನ್ಯಾಸಗಳ ರಚನೆಯ ಹಂತದಲ್ಲಿ ಉಪಯೋಗವಾಗುತ್ತವೆ. ದುಂಡಾದ ಹಿಡಿಕೆಗಳುಳ್ಳ ಉಳಿಗಳಲ್ಲಿ ಚಪ್ಪಟೆ ಹಾಗೂ ಅರ್ಧ ಚಂದ್ರಾಕೃತಿಯ ಉಳಿಗಳನ್ನು ಕಾಣಬಹುದು. ಇವುಗಳಲ್ಲದೆ ಚೂಪಾದ ಸೂಜಿಯ ಮೊನೆಯಾಕಾರದ ಉಳಿಗಳೂ ಉಂಟು.

ಚಪ್ಪಟೆಯ ಉಳಿಗಳಲ್ಲಿ ಇಂಗ್ಲೀಷ ಅಕ್ಷರಗಳ ವ್ಹಿ-ಶೇಪ್, ಯು-ಶೇಪ್ ಹಾಗೂ ಸಿ-ಶೇಪ್ ಉಳಿಗಳನ್ನು ನೋಡಬಹುದು. ಈ ಎಲ್ಲ ಉಳಿಗಳು ಸೂಕ್ಷ್ಮ ವಿನ್ಯಾಸಗಳನ್ನು ತಯಾರಿಸುವಲ್ಲಿ ಉಪಯೋಗವಾಗುವವು. ಮೊನೆಯಾಕಾರದ ಉಳಿಗಳು ಶಿಲ್ಪರಚನೆಯ ಅಂತಿಮ ಹಂತದಲ್ಲಿ ಅತೀ ಸೂಕ್ಷ್ಮ ವಿನ್ಯಾಸಗಳನ್ನು ರಚಿಸುವಲ್ಲಿ ಬಳಕೆಯಾಗುತ್ತವೆ.

ಈ ಎಲ್ಲ ಉಳಿಗಳಿಗೆ ಯಾವುದೇ ಕಟ್ಟಿಗೆಯ ಅಥವಾ ಫೈಬರ್‌ದ ಮಾಧ್ಯಮದ ಹಿಡಿಕೆಗಳಿರುವುದಿಲ್ಲ. ಸುತ್ತಿಗೆ ಅಥವಾ ಹತೋಡಿಗಳಿಂದ ಹೊಡೆಯಲು ಅನುಕೂಲವಾಗುವಂತೆ ಮೇಲ್ಭಾಗದಲ್ಲಿ ಮಾತ್ರ ದಪ್ಪವಾಗಿರುವುದನ್ನು ಕಾಣಬಹುದು.

xiii. ಸ್ಯಾಂಡ್ ಪೇಪರ್‌ಗಳು :

ರಥಶಿಲ್ಪದ ಅಧಿಷ್ಠಾನ ಭಾಗದಲ್ಲಿ ಕಾಣುವಂತಹ ಎಲ್ಲ ಬೇರೆ ಬೇರೆ ಮೂರ್ತಿಶಿಲ್ಪಗಳು, ಅನೇಕ ನಕ್ಷೆಗಳು ಹಾಗೂ ವಿವಿಧ ರೀತಿಯ ಉಬ್ಬು ತಗ್ಗುಗಳು ಸುಂದರವಾಗಿ ಕಾಣಲು, ಅವುಗಳಿಗೆ ಅಂತಿಮ ರೂಪವನ್ನು ಕೊಡಲು ಸ್ಯಾಂಡ್ ಪೇಪರುಗಳನ್ನು ಬಳಸುವರು. ಸ್ಯಾಂಡ್ ಪೇಪರ್‌ಗಳಲ್ಲಿ

ಒಂದು, ಎರಡು, ಮೂರು ಹೀಗೆ ವಿವಿಧ ಸಂಖ್ಯೆಯ ಪೇಪರುಗಳಿರುತ್ತವೆ. ಈ ಪೇಪರುಗಳಿಂದ ಮರದ ವಿನ್ಯಾಸಗಳ ಮೇಲ್ಭಾಗದಲ್ಲಿ ಜೋರಾಗಿ ಉಜ್ಜುವುದರಿಂದ ಕಾಷ್ಠ ವಿನ್ಯಾಸಗಳು ತುಂಬಾ ನಯವಾಗಿ ಕಂಡುಬರುತ್ತವೆ. ಮೊದಲು ಹೆಚ್ಚು ಅಂಕಿಗಳ ಪೇಪರುಗಳನ್ನು ಬಳಸಿ ನಂತರ ಅಂತಿಮ ಹಂತಕ್ಕೆ ಕಡಿಮೆ ಸಂಖ್ಯೆಯ ಪೇಪರುಗಳನ್ನು ಬಳಸಲಾಗುವುದು. ಸ್ಯಾಂಡ್ ಪೇಪರುಗಳ ಬಳಕೆಯು ಕಾಷ್ಠ ಶಿಲ್ಪಗಳಿಗೆ ಒಂದು ಹೊಸ ಬಗೆಯ ಹೊಳಪನ್ನು ನೀಡುತ್ತದೆ.

ivx. ಪಾಲಿಶ್ ಮಶಿನ್ :

ರಥಶಿಲ್ಪದ ಮಂಟಪ ಭಾಗದಲ್ಲಿ ಅನೇಕ ರೀತಿಯ ಕಮಾನುಗಳನ್ನು ನೋಡಬಹುದು. ಕಮಾನುಗಳು ಎರಡು ಅಥವಾ ನಾಲ್ಕು ಕಂಬಗಳನ್ನು ಹೊಂದಿರುತ್ತವೆ. ಈ ಕಂಬಗಳ ಕೆತ್ತನೆಯು ಯಂತ್ರಗಳ ಸಹಾಯದಿಂದ ಆಗುವಂತೆ, ಆ ಕಂಬಗಳಿಗೆ ನಯವಾದ ಹೊಳಪನ್ನು ತರಲು ಪಾಲಿಶ್ ಯಂತ್ರವು ಸಹಾಯಕವಾಗುತ್ತದೆ. ಪಾಲಿಶ್ ಯಂತ್ರದ ಮಧ್ಯದ ವುಡ್‌ಗ್ರಿಪ್‌ಗೆ ಕಂಬವನ್ನು ಕೂಡಿಸಿ, ಜೋರಾಗಿ ತಿರುಗುವ ಕಂಬಕ್ಕೆ ಪಾಲಿಶ್ ಪೇಪರನ್ನು ಹಿಡಿದಾಗ ಕಂಬಗಳಿಗೆ ಹೊಳಪು ಬರುವುದು. ನೋಡಲು ನಯವಾಗಿ ಕಾಣತೊಡಗುವವು. ಕೆಲವೊಂದು ಮಶಿನ್‌ಗಳಿಗೆ ಬೇರೆ ಬೇರೆ ಸ್ಯಾಂಡ್ ಬ್ಲೇಡ್‌ಗಳು ಇರುವುದರಿಂದ ಅವುಗಳನ್ನು ರಥಶಿಲ್ಪಿಗಳು ಬಳಸುವರು.

೫. ವಿವಿಧ ವರ್ಣಗಳು :

ರಥಶಿಲ್ಪವು ಪೂರ್ಣ ಮಂಟಪಭಾಗದವರೆಗೆ ಸಿದ್ದವಾದ ನಂತರ ಬೇರೆ ಬೇರೆ ವಿಧದ ವರ್ಣಗಳನ್ನು ಬಳಸಬೇಕಾಗುತ್ತದೆ. ಅಧಿಷ್ಠಾನ ಭಾಗದ ಕೆಲವು ಮೂರ್ತಿಶಿಲ್ಪಗಳಿಗೆ, ಮಂಟಪ ಭಾಗದ ಕೆಲವು ಕಂಬಗಳ ಕಮಾನುಗಳಿಗೆ ಸೌಂದರ್ಯವನ್ನು ವೃದ್ಧಿಸಲು ಬೇರೆ ಬೇರೆ ಬಣ್ಣಗಳನ್ನು ಲೇಪಿಸಿರುವುದನ್ನು ಕರ್ನಾಟಕದ ಅನೇಕ ಸುಂದರ ಸೂಕ್ಷ್ಮ ವಿನ್ಯಾಸವುಳ್ಳ ರಥಗಳಲ್ಲಿ ಕಾಣಬಹುದು. ವಾರ್ನಿಸ್ ವರ್ಣಗಳು ಅಕ್ರೆಲಿಕ್ ವರ್ಣಗಳು, ಲೈಟ್‌ವುಡ್ ಕಲರ್‌ಗಳನ್ನು ಬಳಸಿ, ನಂತರ ಇಡೀ ರಥಕ್ಕೆ ಟ್ರಾನ್ಸ್‌ಪರಂಟ್ ವಾರ್ನಿಸ್ ಅಥವಾ ವುಡ್‌ಟಚ್‌ಗಳಂತಹ ಆಧುನಿಕ ವರ್ಣಲೇಪನ ಮಾಡುವರು. ವಾರ್ನಿಸ್ ಹಾಗೂ ವರ್ಣಲೇಪನ ಮಾಡುವುದರಿಂದ ರಥಕ್ಕೆ ಕ್ರಿಮಿಕೀಟಗಳಿಂದ ಯಾವುದೇ ರೀತಿಯ ಬಾಧೆಯುಂಟಾಗದು.

೬. ವಿವಿಧ ತೈಲಗಳು :

ಕರ್ನಾಟಕದಲ್ಲಿ ಇತ್ತೀಚಿನ ರಥಗಳನ್ನು ಬಿಟ್ಟರೆ ಹಳೆಯ ರಥಗಳೆಲ್ಲವೂ ತೈಲ ಲೇಪಿಸಿಕೊಂಡು ನಿಂತಿರುವುದನ್ನು ಕಾಣಬಹುದು. ರಥದ ಕಾಷ್ಠಗಳು ಹಾಳಾಗದಂತೆ ಮಳೆ, ಗಾಳಿ, ಬಿಸಿಲುಗಳಿಂದ ಸುರಕ್ಷಿತವಾಗಿರಲು ಸಾಂಪ್ರದಾಯಕವಾಗಿ ಪೂರ್ಣ ರಥಕ್ಕೆ ರಥೋತ್ಸವದ ಸಂದರ್ಭದಲ್ಲಿ ತೈಲ ಲೇಪನ ಮಾಡುವುದನ್ನು ಕಾಣಬಹುದು. ರಥದ ಚಕ್ರಗಳು ಸರಿಯಾಗಿ ತಿರುಗಲು ಎಣ್ಣೆ ಅಥವಾ ಗ್ರೀಸ್‌ಗಳನ್ನು ಚಕ್ರಗಳ ಅಚ್ಚಿನ ಭಾಗದಲ್ಲಿ ಲೇಪಿಸಲಾಗುತ್ತದೆ.

೭. ಬಿದಿರುಗಳು :

ರಥೋತ್ಸವದ ಸಂದರ್ಭದಲ್ಲಿ ಗಡ್ಡೆಯ ರಥದ ಮೇಲ್ಭಾಗದಲ್ಲಿ ತಯಾರು ಮಾಡುವಂತಹ

ಚರರಥದ ಭಾಗದಲ್ಲಿ ಬಿದಿರುಗಳ ಬಳಕೆಯಾಗುವುದನ್ನು ಗಮನಿಸಬಹುದು. ಗೋಪುರಾಕಾರದಲ್ಲಿಯೋ, ಮೊಗ್ಗಿನಾಕಾರದಲ್ಲಿಯೋ ಅಥವಾ ಗುಂಡಾಕಾರದಲ್ಲಿಯೋ ಹೀಗೆ ಬೇರೆ ಬೇರೆ ವಿನ್ಯಾಸಗಳಲ್ಲಿ ಚರರಥದ ಸಿದ್ಧತೆಯನ್ನು ಮಾಡಲು ಬಿದಿರುಗಳಗಳು ಹಾಗೂ ಬಿದಿರನ ಪಟ್ಟಿಗಳನ್ನು ಬಳಸುವರು. ಬಣ್ಣ ಬಣ್ಣದ ಪತಾಕೆಗಳನ್ನು ಅಂಟಿಸಲು ಸಣ್ಣ ಸಣ್ಣ ಬಿದಿದಿನ ಕಡ್ಡಿಗಳನ್ನು ಉಪಯೋಸುಗಿವರು.

೮. ಬಿಗಿದು ಕಟ್ಟುವ ಸಾಮಗ್ರಿಗಳು :

ರಥೋತ್ಸವದ ಸಂದರ್ಭದಲ್ಲಿ ಚರರಥವನ್ನು ತಯಾರಿಸುವಾಗ ಬಿದಿರುಗಳನ್ನು, ಹಲಗೆಗಳನ್ನು ಹಾಗೂ ಕಬ್ಬಿಣದ ಪಟ್ಟಿಗಳನ್ನು ಸರಿಯಾಗಿ ಬಿಗಿದು ಕಟ್ಟಲು ನಾರಿನಿಂದ ತಯಾರಿಸಿದ ಚರಿ, ಸುತುಳಿ, ಇಲ್ಲವೆ ಖಾತಿ, ಹಗ್ಗ ಮತ್ತು ಕೆಲವು ಸಲ ದಾರವನ್ನು ಉಪಯೋಗಿಸುವರು. ಇತ್ತೀಚೆಗೆ ದಪ್ಪ ತಂತಿ ಇಲ್ಲವೆ ತೆಳು ಕಬ್ಬಿಣದ ಭಡಿಗಳನ್ನು ಉಪಯೋಗಿಸುವರು.

೯. ಅಲಂಕಾರ ಸಾಮಗ್ರಿಗಳು :

ಉತ್ಸವದ ಸಂದರ್ಭದಲ್ಲಿ ರಥವು ಸುಂದರವಾಗಿ ಕಾಣಲು ಅನೇಕ ಅಲಂಕರಣ ಸಾಮಗ್ರಿಗಳನ್ನು ಬಳಸುವರು. ಗಡ್ಡೆಯ ಭಾಗದ ನಾಲ್ಕೂ ದಿಕ್ಕುಗಳಲ್ಲಿ ಕಟ್ಟಲು ಬಾಳೆಯ ದಿಂಡುಗಳನ್ನು ಬಳಸುವರು. ಮಂಟಪ ಭಾಗದಲ್ಲಿ ಕಂಬಗಳಿಗೆ ತೆಂಗಿನಗರಿ ಅಥವಾ ಬಾಳೆದಿಂಡುಗಳನ್ನು ಕಟ್ಟುತ್ತಾರೆ. ಕೆಲವು ಪ್ರದೇಶಗಳಲ್ಲಿ ಕಂಟಮಾಲಿ ಅಂದರೆ ಬೆಂಡು, ಬತ್ತಸುಗಳನ್ನು ನೇತುಹಾಕಿರುತ್ತಾರೆ. ಬೇರೆ ಬೇರೆ ತರಹದ ಹೂವಿನ ಹಾರಗಳು, ಬಿಡಿ ಹೂವುಗಳು, ಎಲೆಗಳು, ಇವುಗಳಲ್ಲದೆ ಕೆಲವು ರಥಗಳಿಗೆ ಪ್ಲಾಸ್ಟಿಕ್ ಹೂವುಗಳು, ಮಿಂಚುವ ಜರಿ, ಇಲ್ಲವೆ ಬಣ್ಣ ಬಣ್ಣದ ಮಿಂಚುವ ಕಾಗದಗಳನ್ನು ಬಳಸುವರು. ಗಡ್ಡಿ ರಥಗಳಲ್ಲಿ ಗಡ್ಡೆ ಅಥವಾ ಮಂಟಪ ಭಾಗದಲ್ಲಿ ಹೆಚ್ಚು ಶಿಲ್ಪವಿನ್ಯಾಸಗಳನ್ನು ಹೊಂದದ ರಥಗಳಲ್ಲಿ ಅನೇಕ ಬಣ್ಣ ಬಣ್ಣದ ಕ್ಯಾಲೆಂಡರ್‌ಗಳು ದೇವತಾ ಮೂರ್ತಿಗಳ ಫೋಟೋಗಳನ್ನು ಬಳಸುವುದನ್ನು ಕಾಣಬಹುದು. ಗೋಪುರ ಭಾಗದಲ್ಲಿ ವಿವಿಧ ರೀತಿಯ ಆಕಾರದ ಬಣ್ಣ ಬಣ್ಣದ ಪತಾಕೆಗಳು, ಬಣ್ಣ ಬಣ್ಣದ ಬಟ್ಟೆಗಳನ್ನು ಉಪಯೋಗಿಸುವರು. ಮೇಲೆ ಕಳಸವನ್ನು ಹೊಂದಿ ಕಳಸಕ್ಕೆ ನೆರಳು ಬೀಳುವಂತೆ ಒಂದು ಸುಂದರವಾದ ಬಣ್ಣದ ಛತ್ರಿಯನ್ನು ಕಟ್ಟಿರುವುದನ್ನು ಕಾಣಬಹುದು.

೧೦. ಪೂಜಾ ಸಾಮಗ್ರಿಗಳು :

ಮಂಟಪ ಭಾಗದಲ್ಲಿ ಗ್ರಾಮ ದೇವತಾ ಮೂರ್ತಿಯ ಪ್ರತಿಷ್ಠಾಪನೆಯಾದ ನಂತರ ಪೂಜೆಗಾಗಿ ವಿವಿಧ ಸಾಮಗ್ರಿಗಳು ಉಪಯೋಗವಾಗುತ್ತವೆ. ವಿಭೂತಿ, ಅರಿಶಿಣ, ಕುಂಕುಮ, ಭಂಡಾರ, ಎಲೆ, ಅಡಿಕೆ, ಪಂಚಾರತಿ, ಧೂಪ, ಅಭಿಷೇಕ, ಅನೇಕ ತಾಮ್ರ ಅಥವಾ ಹಿತ್ತಾಳೆಯ ಪಾತ್ರೆಗಳು, ಐದು ವಿಧದ ಧಾನ್ಯಗಳು, ಅನೇಕ ಜಾತಿಯ ಹೂಗಳು, ವಿವಿಧ ಫಲಗಳು, ಗಂಟೆ, ಜಾಂಗುಟಿಗಳು ಮತ್ತು ಚಿನ್ನ, ಬೆಳ್ಳಿ, ವಜ್ರದಂತಹ ಬೆಲೆಬಾಳುವ ವಸ್ತುಗಳಿಂದ ತಯಾರಿಸಲ್ಪಟ್ಟ ಅನೇಕ ಸುಂದರ ಆಭರಣಗಳು, ಪೂಜೆಯ ಕೊನೆಯ ಹಂತದಲ್ಲಿ ಬಳಸಲಾಗುವ ತೆಂಗಿನ ಕಾಯಿಗಳು ಅಥವಾ ಬೂದುಗುಂಬಳ ಕಾಯಿಗಳು-ಹೀಗೆ ಹಲವಾರು ಪೂಜಾ ಸಾಮಗ್ರಿಗಳು ಉಪಯೋಗವಾಗುವವು.

೧೧. ದಪ್ಪವಾದ ಹಗ್ಗಗಳು :

ಉತ್ಸವದ ಸಂದರ್ಭದಲ್ಲಿ ಸಾವಿರಾರು ಭಕ್ತರಿಂದ ಎಳೆಯಲ್ಪಡುವ ರಥವು ಮುಂದೆ ಸಾಗಲು ತುಂಬಾ ದಪ್ಪ ಗಾತ್ರದ ಹಗ್ಗಗಳನ್ನು ಉಪಯೋಗಿಸುವರು. ಕೆಲವು ಗ್ರಾಮಗಳ ರಥೋತ್ಸವದ ಸಂದರ್ಭದಲ್ಲಿ ತೇರು ಎಳೆಯುವ ಹಗ್ಗವು ನಿಶ್ಚಿತವಾದ ಊರಿನಿಂದಲೇ ಬರಬೇಕಾಗುವದು. ಹಗ್ಗ ಬರುವವರೆಗೆ ರಥೋತ್ಸವವಾಗದು. ಅತೀ ಉದ್ದ ಹಾಗೂ ದಪ್ಪ ಗಾತ್ರದ ಹಗ್ಗಗಳು ಉಪಯೋಗವಾಗುವವು.

ಬ. ಅಂಕಣ ರಥಗಳ ಪರಿಕರಗಳು :

೧. ಮರದ ದೊಡ್ಡ ಹಲಗೆಗಳು ಹಾಗೂ ದೊಡ್ಡ ಗಾತ್ರದ ಶಿಲೆಗಳು ೨) ವಿವಿಧ ವಿಧದ ಕಾಷ್ಠಗಳು ೩. ಕಬ್ಬಿಣದ ಸಲಾಕೆಗಳು ಹಾಗೂ ನಟ್-ಬೋಲ್ಟ್‌ಗಳು ೪) ಮರಗೆತ್ತನೆಯ ಸಾಮಗ್ರಿಗಳು ೫. ವಿವಿಧ ವರ್ಣಗಳು ೬) ವಿವಿಧ ತೈಲಗಳು ೭) ಬಿದಿರುಗಳು ೮) ಬಿಗಿದು ಕಟ್ಟುವ ಸಾಮಗ್ರಿಗಳು ೯. ಅಲಂಕಾರ ಸಾಮಗ್ರಿಗಳು ೧೦) ಪೂಜಾ ಸಾಮಗ್ರಿಗಳು ೧೧) ದಪ್ಪವಾದ ಹಗ್ಗಗಳು.

ಹೀಗೆ ಗಡ್ಡಿ ರಥ ತಯಾರಿಕೆಯಲ್ಲಿ ಉಪಯೋಗಿಸಲ್ಪಡುವ ಪರಿಕರಗಳನ್ನೇ ಅಂಕಣ ರಥಗಳ ತಯಾರಿಕೆಯ ಸಂದರ್ಭದಲ್ಲಿ ಉಪಯೋಗಿಸುವುದನ್ನು ಕಾಣಬಹುದು.

ಅತೀ ಸೂಕ್ಷ್ಮ ಶಿಲ್ಪ ವಿನ್ಯಾಸಗಳು ಅಂಕಣ ರಥಗಳಲ್ಲಿ ಕಂಡುಬರುವುದಿಲ್ಲ. ಆದ್ದರಿಂದ ಮರಗೆತ್ತನೆಯ ಸಾಮಗ್ರಿಗಳಲ್ಲಿ ಕೆಲವು ಸೂಕ್ಷ್ಮ ಕೆತ್ತನೆ ಮಾಡುವಂತಹ ಉಳಿಗಳನ್ನು ಬಳಸುವುದಿಲ್ಲ.

ಅಂಕಣ ರಥಗಳಿಗೆ ಉತ್ಸವದ ಸಂದರ್ಭದಲ್ಲಿ ಗಡ್ಡಿ ರಥಗಳಂತೆ ಗೋಪುರ ಭಾಗದಲ್ಲಿ ಪತಾಕೆಗಳು ಕಂಡು ಬರುವುದಿಲ್ಲ. ಕೆಲವು ರಥಗಳಿಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಸುತ್ತಿರುತ್ತಾರೆ.

ಕಾಷ್ಠ ಮಾಧ್ಯಮದ ಅಂಕಣ ರಥಗಳಿಗೆ ಸಂರಕ್ಷಣೆಯನ್ನು ಒದಗಿಸಲು ಗಡ್ಡಿ ರಥಗಳಿಗೆ ಉಪಯೋಗಿಸುವ ತೈಲಗಳನ್ನು ಹಾಗೂ ವಾರ್ನಿಸ್ ಬಣ್ಣಗಳನ್ನು ಉಪಯೋಗಿಸುವರು.

II. ಲೋಹ ಮಾಧ್ಯಮದ ರಥಗಳ ಪರಿಕರಗಳು :

ಲೋಹ ಮಾಧ್ಯಮದ ರಥಗಳಲ್ಲಿ,

ಅ. ಕಬ್ಬಿಣದ ರಥಗಳು

ಬ. ಬೆಳ್ಳಿಯ ರಥಗಳು

ಕ. ಚಿನ್ನದ ರಥಗಳು

ಎಂದು ಮೂರು ವಿಧಗಳನ್ನಾಗಿ ವಿಂಗಡಿಸಿಕೊಂಡು ಮಾಧ್ಯಮಗಳ ಹಿನ್ನೆಲೆಯಲ್ಲಿ ಅವುಗಳ ತಯಾರಿಕಾ ಪರಿಕರಗಳನ್ನು ಅಧ್ಯಯನ ಮಾಡುವಾ.

ಅ. ಕಬ್ಬಿಣದ ರಥಗಳ ಪರಿಕರಗಳು :

೧. ದಪ್ಪ ಗಾತ್ರದ ಕಲ್ಲುಗಳು : ಕಬ್ಬಿಣದ ರಥಗಳ ನಿರ್ಮಾಣ ಕಾರ್ಯದಲ್ಲಿ ದಪ್ಪ ಗಾತ್ರದ

ಕಾಷ್ಠ ರಥಶಿಲ್ಪದ ತಯಾರಿಕಾ ಪರಿಕರಗಳು


ವಕ್ರ ಮೊನೆಯ ಚಪ್ಪಟೆ ಆಕಾರದ ಉಳಿಗಳು


ಕೊಡತಿಗಳು ಹಾಗೂ ಡ್ರಿಲ್ ಮಷಿನ್


ವಿವಿಧ ಅಳತೆಗಳುಳ್ಳ L ಶೇಪ್ ಲೈನರ್ಸ


ಚೌಕಾಕಾರ ಮೊನೆಯ ಚಪ್ಪಟೆ ಆಕಾರದ ಉಳಿಗಳು


ಉಬ್‌ಕಟ್, ಗರಗಸ ಹಾಗೂ ಅಳತೆ ಪಟ್ಟಿಗಳು


ಉಳಿಗಳು ಹಾಗೂ ಸುತ್ತಿಗೆಗಳು


U,V ಹಾಗೂ C ಆಕಾರದ ಮೊನೆಯ ಚಪ್ಪಟೆಯ ಉಳಿಗಳು

ಲೋಹಮಾಧ್ಯಮದ ರಥಗಳ ಪರಿಕರಗಳು

- ಕಬ್ಬಿಣ ರಥಗಳು
  - ದಪ್ಪಗಾತ್ರದ ಕಲ್ಲುಗಳು
  - ದಪ್ಪಗಾತ್ರದ ಕಬ್ಬಿಣದ ಪಟ್ಟಿಗಳು
  - ಎಂಗಲ್ಸ್ ಮತ್ತು ನಟ್‌ಬೋಲ್ಟ್‌ಗಳು
  - ತಗಡುಗಳು
  - ಪ್ಲೇಟ್ಸ್
  - ಕಬ್ಬಿಣದ ರಾಡಗಳು
  - ಕಬ್ಬಿಣದ ಛಡಿಗಳು
  - ಕಬ್ಬಿಣದ ಕೆಲಸ ಮಾಡುವ ಯಂತ್ರಗಳು
    - ಮೆಟಲ್ ಕಟಂಗ್ ಮಶಿನ್
    - ಮೆಟಲ್ ಪಾಲಿಶ್ ಮಶಿನ್
    - ವೆಲ್ಡಿಂಗ್ ಮಶಿನ್
    - ಲೈಟ್ ಕಂಟ್ರೋಲರ್
    - ಬರ್ನರ್
    - ಸಿಲಿಂಡರ
    - ಸುತ್ತಿಗೆಗಳು
    - ಪಕ್ಕಡಗಳು
    - ಸ್ಕ್ರೂಡ್ರೈವರ್‌ಗಳು
    - ಎಂಗಲ್ ಮೆಕರ್
  - ವಿವಿಧ ವರ್ಣಗಳು
  - ಚಿತ್ರ ರಚನೆ ಸಾಮಗ್ರಿಗಳು
    - ಪೆನ್ಸಿಲ್‌ಗಳು
    - ಅಳತೆಯ ಪಟ್ಟಿಗಳು
    - ವಿವಿಧ ಕುಂಚಗಳು
    - ಸ್ಪ್ರೇ ಗನ್
    - ಥಿನ್ನರ್
    - ಸೀಮೆ ಎಣ್ಣೆ
    - ಬಿದಿರುಗಳು
  - ಎರಕ ಹೊಯ್ಯುವ ಸಾಮಗ್ರಿಗಳು
    - ಮೆಟಲ್ ಪೀಸ್‌ಗಳ
    - ಕುಲುಮೆ
    - ಪಡಿ ಯಚ್ಚುಗಳು
  - ಅಲಂಕಾರ ಸಾಮಗ್ರಿಗಳು
  - ಪೂಜಾ ಸಾಮಗ್ರಿಗಳು
- ಬೆಳ್ಳಿ ರಥಗಳು / ಚಿನ್ನದ ರಥಗಳು
  - ಕಾಷ್ಠ ಮಾಧ್ಯಮ ರಥದ ಎಲ್ಲ ಪರಿಕರಗಳು
  - ಪೆನ್ಸಿಲ್‌ಗಳು
  - ಪೇಪರ್‌ಗಳು ಮತ್ತು ಟ್ರೆಸ್ಸಿಂಗ್ ಸೀಟ್ಸ್
  - ಅಳತೆ ಪಟ್ಟಿಗಳು
  - ಅಂಟು ಪದಾರ್ಥಗಳು
  - ಹಿಡಿಕೆಗಳು
  - ಬೆಳ್ಳಿಯ/ಚಿನ್ನದ ತಗಡುಗಳು
  - ಸಿಲ್ವರ್ ವಾಟರ್
  - ಕತ್ತರಿಗಳು
  - ಮೊಳೆಗಳು
  - ಸುತ್ತಿಗೆಗಳು
  - ಬ್ರೆಶ್‌ಗಳು
  - ಪಾಲಿಶ್ ಮಶಿನ್
  - ಕಟಂಗ್ ಮಶಿನ್
  - ಮೇಣ
  - ರಾಳ
  - ರಾಳದ ಮಣೆ
  - ಉಳಿಗಳು
  - ಬೆಳ್ಳಿ/ಚಿನ್ನ ಕರಗಿಸುವ ಪಾತ್ರೆಗಳು
  - ಉಷ್ಣತಾ ಮಾಪಕ
  - ಬರ್ನರ್
  - ಗ್ಯಾಸ್ ಸಿಲಿಂಡರ್
  - ಪಡಿಯಚ್ಚುಗಳು
  - ಅಲಂಕಾರ ಸಾಮಗ್ರಿಗಳು

ಕಲ್ಲುಗಳು ಬಳಕೆಯಾಗುತ್ತವೆ. ಕಬ್ಬಿಣದ ರಥದ ಎಲ್ಲ ಭಾಗಗಳು ಕಬ್ಬಿಣದಿಂದ ಪೂರ್ಣಗೊಂಡರೂ, ಕೆಲವು ಕಬ್ಬಿಣದ ರಥಗಳಿಗೆ ಕಲ್ಲಿನ ಗಾಲಿಗಳನ್ನು ಅಳವಡಿಸಿರುವುದನ್ನು ಕಾಣಬಹುದು. ರಥದ ಅಗಲ ಎತ್ತರಗಳಿಗೆ ಸಂಬಂಧಿಸಿದಂತೆ ಶಿಲೆಯ ಚಕ್ರಗಳಿರುವ ಅನೇಕ ಕಬ್ಬಿಣದ ರಥಗಳನ್ನು ಕಾಣಬಹುದು.

ಉದಾ : ಬೆಳಗಾಂವಿ ಜಿಲ್ಲೆ ಗೋಕಾಕ ತಾಲೂಕಿನ ಕುರ್ನಿಯ ರಥ, ಗುಲಬರ್ಗಾ ಜಿಲ್ಲೆ ಆಳಂದ ತಾಲೂಕಿನ ಜಿಡಗಾದ ರಥ, ಗುಲಬರ್ಗಾ ಜಿಲ್ಲೆ ಶಹಾಪೂರ ತಾಲೂಕಿನ ಸಾಪ್ತಾಪೂರದ ರಥ, ಜೇವರಗಿ ತಾಲೂಕಿನ ಡಿಗ್ಗಿ ಸಂಗಮೇಶ್ವರ ರಥ ಗುಲಬರ್ಗಾ ಜಿಲ್ಲೆಯ ಅನೇಕ ರಥಗಳು ಹಾಗೂ ರಾಯಚೂರು ಜಿಲ್ಲೆಯ ದೇವಸೂಗೂರದ ಸುಗೂರೇಶ್ವರ ದೇವಸ್ಥಾನದ ರಥ, ಬೀದರ ಜಿಲ್ಲೆಯ ಸುಲೇಪೇಟದ ರಥ ಹೀಗೆ ಹಲವಾರು ಕಬ್ಬಿಣದ ರಥಗಳಲ್ಲಿ ಶಿಲೆಯ ಚಕ್ರಗಳ ಅಳವಡಿಕೆಯನ್ನು ಕಾಣಬಹುದು.

೨. ದಪ್ಪ ಗಾತ್ರದ ಕಬ್ಬಿಣದ ಪಟ್ಟಿಗಳು : ಕಬ್ಬಿಣ ರಥಗಳ ನಿರ್ಮಾಣ ಕಾರ್ಯದಲ್ಲಿ ಕಬ್ಬಿಣದ ದಪ್ಪ ಗಾತ್ರದ ಪಟ್ಟಿಗಳು ರಥಗಳ ಚಕ್ರಗಳನ್ನು ತಯಾರಿಸುವಲ್ಲಿ ಹಾಗೂ ರಥದ ಭಾರವು ಹೆಚ್ಚಾಗಿ ಬೀಳುವ ಸ್ಥಳಗಳಲ್ಲಿ ಉಪಯೋಗಿಸಲ್ಪಡುತ್ತವೆ.

೩. ಎಂಗಲ್ಸ್ ಮತ್ತು ನಟ್ ಬೋಲ್ಟ್‌ಗಳು : ರಥದ ನೀಲ ನಕ್ಷೆಯ ಪ್ರಕಾರ ಅಡಿಪಾಯ ಭಾಗದ ನಂತರ ನಿರ್ಮಾಣವಾಗುವ ರಥಕ್ಕೆ ಬೇರೆ ಬೇರೆ ದಪ್ಪಳತೆಗಳಲ್ಲಿ ದೊರೆಯುವ ಎಂಗಲ್ಸ್‌ಗಳನ್ನು ರಥದ ಎತ್ತರಕ್ಕೆ ತಕ್ಕಂತೆ ಕತ್ತರಿಸಿ ಜೋಡಿಸಿರುವುದನ್ನು ಕಾಣಬಹುದು. ಈ ಎಲ್ಲ ಎಂಗಲ್ಸ್‌ಗಳು ಒಂದನ್ನೊಂದು ಬಿಗಿಯಾಗಿ ಹಿಡಿದುಕೊಳ್ಳಲು ವಿವಿಧ ಬಗೆಯ ವೈಸರ್ಸ್ ಹಾಗೂ ನಟ್ ಬೋಲ್ಟ್‌ಗಳನ್ನು ಉಪಯೋಗ ಮಾಡುವರು.

೪. ತಗಡುಗಳು : ರಥದ ಎತ್ತರಕ್ಕನುಗುಣವಾಗಿ ಎಂಗಲ್ಸ್‌ಗಳನ್ನು ಜೋಡಿಸಿದಾದ ಮೇಲೆ ದಪ್ಪ ಹಾಗೂ ತೆಳುವಾದ ತಗಡನ್ನು ಬಳಸಿಕೊಂಡು, ಕಮಾನುಗಳಾಕಾರದಲ್ಲಿ ವಿವಿಧ ನಕ್ಷೆಗಳ ಆಕಾರಗಳಲ್ಲಿ ತಗಡನ್ನು ಕತ್ತರಿಸಿ, ಅವುಗಳನ್ನು ಎಂಗಲ್ಸ್ ಪಟ್ಟಿಗಳ ಮೇಲೆ ಸ್ಕ್ರೂಗಳಿಂದ ಅಥವಾ ನಟ್ ಬೋಲ್ಟ್‌ಗಳಿಂದ ಬಿಗಿದಿರುವುದನ್ನು ಕಾಣಬಹುದು.

೫. ಪ್ಲೇಟ್ಸ್ : ಬೇರೆ ಬೇರೆ ದಪ್ಪಳತೆಗಳಲ್ಲಿ ದೊರೆಯುವ ಕಬ್ಬಿಣದ ಪ್ಲೇಟ್‌ಗಳನ್ನು ಕಬ್ಬಿಣ ರಥಗಳ ತಯಾರಿಕಾ ಹಂತದಲ್ಲಿ ಬಳಸಲಾಗುವದು. ನಾಲ್ಕು ಅಥವಾ ಅದಕ್ಕಿಂತ ಹೆಚ್ಚು ಎಂಗಲ್ ಪಟ್ಟಿಗಳು ಒಂದೇ ಕಡೆಗೆ ಬಂದು ಕೂಡಿದಾಗ, ಅವುಗಳು ಬಿಗಿಯಾಗಿ ಕೂರಲು, ಒಳಮಗ್ಗುಲ ಹಾಗೂ ಹೊರ ಮಗ್ಗುಲಗಳಲ್ಲಿ ಕಬ್ಬಿಣದ ಪ್ಲೇಟ್‌ಗಳನ್ನು ಉಪಯೋಗಿಸಲಾಗುವುದು. ಅಚ್ಚುಗಳಿಂದ ಚಕ್ರಗಳು ಹೊರಗೆ ಸರಿಯದಂತೆ ದಪ್ಪ ಗಾತ್ರದ ಕಬ್ಬಿಣದ ಪ್ಲೇಟ್‌ಗಳನ್ನು ಬಳಸುವರು.

೬. ಕಬ್ಬಿಣದ ರಾಡ್‌ಗಳು : ಅಡಿಪಾಯ ಭಾಗದಲ್ಲಿರುವಂತಹ ಎರಡು ಅಚ್ಚುಗಳು ಹಾಗೂ ಅದರ ಮೇಲೆ ಐದು ಅಥವಾ ಆರು ಕಬ್ಬಿಣದ ದಪ್ಪ ಗಾತ್ರದ ರಾಡ್‌ಗಳನ್ನು ಬಳಸುವರು. ಅಡಿಪಾಯ ಭಾಗ ಭದ್ರವಾಗಿರಲು ರಾಡ್‌ಗಳು ತುಂಬಾ ಸಹಾಯಕಾರಿಯಾಗಿವೆ.

೭. ಕಬ್ಬಿಣದ ಛಡಿಗಳು : ರಥದ ಗೋಪುರ ಭಾಗವನ್ನು ನಿರ್ಮಿಸುವಾಗ ಬೇರೆ ಬೇರೆ ವಿನ್ಯಾಸಗಳ ಗೋಲಗಳನ್ನು ರಚಿಸುವ ಸಂದರ್ಭದಲ್ಲಿ ಕಬ್ಬಿಣದ ಛಡಿಗಳು ಉಪಯೋಗವಾಗುವವು. ಕೆಲವು ದಪ್ಪವಾದ ಹಾಗೂ ಕೆಲವು ತೆಳುವಾದ ಕಬ್ಬಿಣದ ಛಡಿಗಳನ್ನು ವಿವಿಧ ವಿನ್ಯಾಸಗಳಲ್ಲಿ ಮಣಿಸಿ, ಹೂವಿನಾಕಾರದಲ್ಲಿ, ಮೊಗ್ಗಿನಾಕಾರದಲ್ಲಿ, ವರ್ತುಳಾಕಾರದಲ್ಲಿ ಹೀಗೆ ಹಲವಾರು ಆಕಾರಗಳಲ್ಲಿ ಗೋಪುರ ಭಾಗದ ವಿನ್ಯಾಸಗಳನ್ನು ರಚಿಸುವರು.

೮. ಕಬ್ಬಿಣದ ಕೆಲಸ ಮಾಡುವ ಯಂತ್ರಗಳು : ಕಬ್ಬಿಣ ರಥಗಳ ನಿರ್ಮಾಣ ಕಾರ್ಯದಲ್ಲಿ ಅನೇಕ ವಿದ್ಯುತ್‌ಚಾಲಿತ ಯಂತ್ರಗಳ ಬಳಕೆಯನ್ನು ಕಾಣಬಹುದು. ಅವುಗಳಲ್ಲಿ ಪ್ರತಿಯೊಂದರ ಹೆಸರುಗಳು ಹಾಗೂ ಉಪಯೋಗವನ್ನು ತಿಳಿಯುವಾ.

i. ಮೆಟಲ್ ಕಟಿಂಗ್ ಮಶಿನ್ : ಕಬ್ಬಿಣ ರಥ ತಯಾರಿಕಾ ಸಮಯದಲ್ಲಿ ದೊಡ್ಡ ದೊಡ್ಡ ಎಂಗಲ್‌ಗಳು, ಛಡಿಗಳು, ಪ್ಲೇಟ್‌ಗಳು ಹಾಗೂ ದಪ್ಪ ಗಾತ್ರದ ಕಬ್ಬಿಣದ ರಾಡ್‌ಗಳು ಹೀಗೆ ಹಲವಾರು ವಿಧದ ದಪ್ಪ ಹಾಗೂ ಸಣ್ಣ ಗಾತ್ರದ ಕಬ್ಬಿಣದ ವಸ್ತುಗಳನ್ನು ವಿವಿಧ ಅಳತೆಗಳಲ್ಲಿ ಕತ್ತರಿಸಲು ಈ ಮೆಟಲ್ ಕಟಿಂಗ್ ಮಶಿನ್‌ನ್ನು ಉಪಯೋಗಿಸುತ್ತಾರೆ.

ii. ಮೆಟಲ್ ಪಾಲಿಶ್ ಮಶಿನ್ : ವಿವಿಧ ಅಳತೆಗಳಲ್ಲಿ ಹಾಗೂ ಬೇರೆ ಬೇರೆ ವಿನ್ಯಾಸಗಳಲ್ಲಿ ಕತ್ತರಿಸಲಾದ ಕಬ್ಬಿಣದ ವಸ್ತುಗಳು ಸರಿಯಾದ ಸಮಪಾತಳಿಯ ಮೈವಳಿಕೆಯನ್ನು ಹೊಂದಿರುವುದಿಲ್ಲ. ಅವುಗಳ ಮೇಲ್ಮೈ ಹಾಗೂ ಅಂಚುಗಳನ್ನು ಸರಿಯಾದ ರೀತಿಯಲ್ಲಿ ಸಮಗೊಳಿಸಲು ಮತ್ತು ನಯವಾಗಿಸಲು ಈ ಮೆಟಲ್ ಪಾಲಿಶ್ ಮಶಿನನ್ನು ಬಳಸುವರು. ಈ ಯಂತ್ರಕ್ಕೆ ವಿವಿಧ ರೀತಿಯ ಪಾಲಿಶ್ ಬ್ಲೇಡ್‌ಗಳನ್ನು ಅಳವಡಿಸಿ, ಕಬ್ಬಿಣದ ವಸ್ತುಗಳಿಗೆ ಪಾಲಿಶ್ ಮಾಡಲಾಗುವದು.

iii. ವೆಲ್ಡಿಂಗ್ ಮಶಿನ್ : ರಥ ತಯಾರಿಕಾ ಕಾರ್ಯದಲ್ಲಿ ದಪ್ಪ, ಸಣ್ಣ, ತೆಳುವಾದ ಅಥವಾ ಉದ್ದವಾದ ಅನೇಕ ಕಬ್ಬಿಣದ ತಂತಿಗಳು, ಛಡಿಗಳು, ಎಂಗಲ್ಸ್ ಹಾಗೂ ರಾಡ್‌ಗಳನ್ನು ಒಂದನ್ನೊಂದು ಸರಿಯಾಗಿ ಬಿಗಿಯಾಗಿ ಹೊಂದಿಕೊಳ್ಳುವಂತೆ ಮಾಡಲು ವೆಲ್ಡಿಂಗ್ ಮಶಿನ್‌ದ ಸಹಾಯವನ್ನು ಪಡೆಯುವರು.

iv. ಲೈಟ್ ಕಂಟ್ರೋಲರ್ : ಅನೇಕ ರೀತಿಯ ಕಬ್ಬಿಣದ ವಸ್ತುಗಳು ಒಂದಕ್ಕೊಂದು ಸರಿಯಾಗಿ ಹೊಂದಿಕೊಂಡು ಸರಿದಾಡದಂತೆ ಕೂರಲು ವೆಲ್ಡಿಂಗ್ ಮಾಡುವ ಸಮಯದಲ್ಲಿ ಪ್ರಕಾಶಮಾನವಾದ ಬೆಳಕು ಹೊರಹೊಮ್ಮುತ್ತದೆ. ಅಲ್ಲದೆ ಬೆಂಕಿಯ ಕಿಡಿಗಳೂ ಸಹ ಸಿಡಿಯತೊಡಗುತ್ತವೆ. ಅತೀ ಪ್ರಕಾಶಮಾನವಾದ ಬೆಳಕನ್ನು ನೋಡುವುದರಿಂದ, ಕೆಲಸಗಾರರ ಕಣ್ಣುಗಳಿಗೆ ಅಪಾಯವುಂಟಾಗುವ ಸಾಧ್ಯತೆ ಇರುತ್ತದೆ. ಆದ್ದರಿಂದ ಲೈಟ್ ಕಂಟ್ರೋಲರ್ ಎಂಬ ಸಾಧನವನ್ನು ಉಪಯೋಗಿಸುವರು.

v. ಬರ್ನರ್ : ಅತೀ ಗಟ್ಟಿಯಾದ ಕಬ್ಬಿಣದ ಛಡಿಗಳು, ಪ್ಲೇಟ್‌ಗಳು, ಸಲಾಕೆಗಳು ಹಾಗೂ ಎಂಗಲ್‌ಗಳನ್ನು ವಿವಿಧ ವಿನ್ಯಾಸಗಳಲ್ಲಿ ಮಣಿಸಲು ಬರ್ನರ್ ಎಂಬ ಸಾಧನವನ್ನು ಉಪಯೋಗಿಸುವರು. ಇದರಿಂದ ಹೊರಬರುವ ನೀಲಿ ಜ್ವಾಲೆಯು ಕಬ್ಬಿಣವನ್ನು ಅತೀ ಶೀಘ್ರದಲ್ಲಿ ಕೆಂಪಾಗುವಂತೆ ಕಾಯಿಸುತ್ತದೆ. ಕಾದ ಕಬ್ಬಿಣವನ್ನು ಜೋರಾಗಿ ಹೊಡೆದು ಮಣಿಸಲು

ಸಹಾಯಕವಾಗುತ್ತದೆ. ಇದಲ್ಲದೆ ಕೆಲವು ಕಬ್ಬಿಣದ ಪ್ಲೇಟ್‌ಗಳಿಗೆ ಈ ಸಾಧನದಿಂದ ಖಾವು ಕೊಟ್ಟು ಸರಿಯಾಗಿ ಸುತ್ತಿಗೆಯಿಂದ ಹೊಡೆದು ವಿವಿಧ ವಿನ್ಯಾಸಗಳನ್ನು ರಚಿಸುವರು.

vi. ಸಿಲಿಂಡರ್ (ಗ್ಯಾಸ್) : ವಿವಿಧ ಕಬ್ಬಿಣದ ವಸ್ತುಗಳನ್ನು ಮಣಿಸಲು ಬರ್ನರ್‌ನ್ನು ಉಪಯೋಗಿಸಿದರೆ, ಬರ್ನರ್‌ದಿಂದ ಜ್ವಾಲೆಯು ಹೊರಹೊಮ್ಮುವುದಕ್ಕೆ ಗ್ಯಾಸ್ ಸಿಲಿಂಡರ್‌ಗಳನ್ನು ಬಳಸಲಾಗುವದು. ಗ್ಯಾಸ್ ಸಿಲಿಂಡರ್‌ಗಳನ್ನು ಎಲ್ಲಿ ಬೇಕಲ್ಲಿ ಸ್ಥಳಾಂತರಿಸಲು ಸಾಧ್ಯವಾದುದರಿಂದ ರಥ ತಯಾರಿಕೆಯಲ್ಲಿ ತುಂಬಾ ಸಹಾಯಕಾರಿಯಾಗುವುದು.

vii. ಸುತ್ತಿಗೆಗಳು : ಕಬ್ಬಿಣದ ವಸ್ತುಗಳನ್ನು ಕಾಯಿಸಿ ವಿವಿಧ ರೀತಿಯಲ್ಲಿ ಮಣಿಸುವುದಕ್ಕೆ, ಛಾಣದಿಂದ ಹಿಡಿದು ಕಬ್ಬಿಣದ ಶಳಿಗಳನ್ನು ಕತ್ತರಿಸಲು ಮೊಳೆ ಹೊಡೆಯಲು ಮತ್ತು ಸರಿದಾಡಿದ ಎಂಗಲ್‌ಗಳನ್ನು ಸರಿಪಡಿಸಲು ಸುತ್ತಿಗೆಗಳು ಬಳಕೆಯಾಗುವುವು.

viii. ಪಕ್ಕಡಗಳು : ರಥದ ಎಂಗಲ್‌ಗಳಿಗೆ ಪ್ಲೇಟ್‌ಗಳಿಗೆ ಹಾಗೂ ರಾಡ್‌ಗಳಿಗೆ ಅಳವಡಿಸಲಾದ ನಟ್ ಬೋಲ್ಟ್‌ಗಳನ್ನು ಸರಿಯಾಗಿ ಬಿಗಿಮಾಡಲು ವಿವಿಧ ರೀತಿಯ ಪಕ್ಕಡಗಳನ್ನು ಬಳಸುವರು.

ix. ಸ್ಕ್ರೂ ಡ್ರೈವರ್ಸ್ : ಕೆಲವೊಂದು ಎಂಗಲ್ಸ್ ಹಾಗೂ ಪ್ಲೇಟಗಳಿಗೆ ಸ್ಕ್ರೂಗಳನ್ನು ಅಳವಡಿಸಲಾಗುವುದು. ಇವುಗಳನ್ನು ಬಿಗಿಯಲು ಸ್ಕ್ರೂಡ್ರೈವರ್‌ಗಳನ್ನು ಉಪಯೋಗಿಸುವರು.

xi. ಎಂಗಲ್ ಮೇಕರ್ : ಕೆಲವು ಕಬ್ಬಿಣದ ಸಲಾಕೆಗಳನ್ನು ಮಣಿಸಲು, ಮೊದಲು ಸಲಾಕೆಗಳನ್ನು ಕಾಯಿಸಿ, ಎಂಗಲ್ ಮೇಕರ್‌ನ ಎರಡು ದಪ್ಪವಾದ ಕಬ್ಬಿಣದ ಶಳಿಗಳ ಮಧ್ಯದಲ್ಲಿ ಸೇರಿಸಿ ಜೋರಾಗಿ ಜಗ್ಗಲಾಗುವುದು. ಇದರಿಂದ ಕಡಿಮೆ ಶಕ್ತಿಯನ್ನು ಬಳಸಿ ಸಲಾಕೆಗಳನ್ನು ಮತ್ತು ಎಂಗಲ್ ಪಟ್ಟಿಗಳನ್ನು ಮಣಿಸಲು ಉಪಯೋಗವಾಗುವದು.

೯. ವಿವಿಧ ವರ್ಣಗಳು : ಕಬ್ಬಿಣ ರಥಗಳಲ್ಲಿ ಹೆಚ್ಚಾಗಿ ಉಬ್ಬು ಶಿಲ್ಪಗಳನ್ನು ಕಾಣಲಾಗುವುದಿಲ್ಲ. ಕಬ್ಬಿಣದಿಂದ ಪೂರ್ಣ ಪ್ರಮಾಣದಲ್ಲಿ ಸಿದ್ಧವಾದ ರಥಕ್ಕೆ ಬೇರೆ ಬೇರೆ ಬಣ್ಣಗಳಿಂದ ಸುಂದರವಾದ ಚಿತ್ರರಚನೆಯನ್ನು ಮಾಡುವ ಸಂದರ್ಭದಲ್ಲಿ ವಿವಿಧ ವರ್ಣಗಳನ್ನು ಉಪಯೋಗಿಸುವರು. ರಥವು ಮಳೆ, ಬಿಸಿಲುಗಳಿಂದ ತುಕ್ಕು ಹಿಡಿಯದಂತೆ ವಾರ್ನಿಸ್ ಹಾಗೂ ಅಕ್ರ್ಯಾಲಿಕ್ ಮಾಧ್ಯಮದ ವರ್ಣಗಳನ್ನು ಉಪಯೋಗಿಸುವರು. ಬೇರೆ ಬೇರೆ ವಿನ್ಯಾಸಗಳ ರೇಖಾಚಕ್ರಗಳು ಹಾಗೂ ಅನೇಕ ದೇವತೆಗಳ ಚಿತ್ರರಚನೆ ಮಾಡುವುದಕ್ಕೆ ಬಣ್ಣಗಳು ಬಳಸಲ್ಪಡುವವು.

೧೦. ಚಿತ್ರ ರಚನೆಯ ಸಾಮಗ್ರಿಗಳು : ವಿವಿಧ ವಿನ್ಯಾಸಗಳ ಹಾಗೂ ದೇವತೆಗಳ ಚಿತ್ರರಚನೆ ಮಾಡಲು ಅನೇಕ ಸಾಮಗ್ರಿಗಳು ಬಳಕೆಯಾಗುವವು. ಅವುಗಳಲ್ಲಿ ಒಂದೊಂದರ ಉಪಯೋಗಗಳನ್ನು ತಿಳಿಯುವಾ.

i. ಪೆನ್ಸಿಲ್‌ಗಳು : ಚಿತ್ರರಚನೆಗೆ ಚಿತ್ರ ಕಲಾವಿದರು ಮೊದಲು ಕೈಗೊಳ್ಳುವ ಕೆಲಸವೆಂದರೆ ರೇಖಾ ಚಿತ್ರಗಳ ರಚನೆ. ಅನೇಕ ವಿನ್ಯಾಸಗಳ ರೇಖಾಚಿತ್ರಗಳನ್ನು ತಗಡುಗಳ ಮೇಲೆ ಬಿಡಿಸಲು

ಬೇರೆ ಬೇರೆ ಬಣ್ಣದ ಪೆನ್ಸಿಲ್‌ಗಳನ್ನು ಉಪಯೋಗಿಸುವರು. ಪೆನ್ಸಿಲ್‌ಗಳಲ್ಲಿ ಒರಟು ಮೈವಳಿಕೆಯ ಮೇಲೆ ಸರಾಗವಾಗಿ ಮೂಡಬಲ್ಲ ಹಾಗೂ ಹೆಚ್ಚು ಸವೆಯದೆ ಇರುವಂತಹ ಪೆನ್ಸಿಲ್‌ಗಳಾದ ಎಚ್, ೨ ಎಚ್ ಮತ್ತು ೪ ಎಚ್ ಪೆನ್ಸಿಲ್‌ಗಳನ್ನು ಬಳಸುವರು.

ii.ಅಳತೆ ಪಟ್ಟಿಗಳು : ಚಿತ್ರಗಳನ್ನು ಬಿಡಿಸುವಾಗ ಒಂದೇ ಅಳತೆಗಳಲ್ಲಿ ಅನೇಕ ಚಿತ್ರಗಳನ್ನು ರಚಿಸುವುದಕ್ಕೆ ಗ್ರಾಫ್ ಹಾಕಲಾಗುವದು. ಈ ಗ್ರಾಫ್ ಹಾಕಲು ಇಂಚು, ಸೆಂಟಿಮೀಟರ್ ಹಾಗೂ ಫೂಟಗಳಲ್ಲಿ ಅಳತೆ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಅಳತೆಪಟ್ಟಿಗಳು ಉಪಯೋಗಕ್ಕೆ ಬರುವುವು.

iii. ವಿವಿಧ ಕುಂಚಗಳು : ಗ್ರಾಫ್ ಹಾಕಿ ಪೆನ್ಸಿಲ್‌ಗಳಿಂದ ರೇಖಾಚಿತ್ರಗಳನ್ನು ಪೂರ್ಣಗೊಳಿಸಿದ ನಂತರ, ಅವುಗಳಿಗೆ ವರ್ಣಲೇಪನ ಮಾಡುವ ಸಂದರ್ಭದಲ್ಲಿ ಕುಂಚಗಳ ಬಳಕೆಯಾಗುತ್ತದೆ. ಚಿಕ್ಕ, ದೊಡ್ಡ ಹಾಗೂ ಸೂಕ್ಷ್ಮ ಹೀಗೆ ಹಲವಾರು ವಿನ್ಯಾಸಗಳಲ್ಲಿ ಬಣ್ಣ ತುಂಬಲು ವಿವಿಧ ರೀತಿಯ ಕುಂಚಗಳನ್ನು ಬಳಸುತ್ತಾರೆ. ಕುಂಚಗಳಲ್ಲಿ ಪಾಯಿಂಟ್ ಬ್ರಶ್, ಫ್ಲ್ಯಾಟ್ ಬ್ರಶ್, ರೌಂಡ್ ಬ್ರಶ್, ಲಾಂಗ್ ಹೆಯರ್ ಬ್ರಶ್, ಸೆಬರ್ ಹೆಯರ್ ಬ್ರಶ್ ಹಾಗ್ ಹೆಯರ್ ಬ್ರಶ್, ಹೀಗೆ ಹಲವಾರು ರೀತಿಯ ಬ್ರಶ್‌ಗಳಲ್ಲಿ ಪಾಯಿಂಟ್‌ದಿಂದ ಸುಮಾರು ಐದು ಅಥವಾ ಆರು ಇಂಚುಗಳ ಅಗಲದ ಕುಂಚಗಳನ್ನು ಕಾಣಬಹುದು.

ಫ್ಲ್ಯಾಟ್ ಕುಂಚಗಳನ್ನು ಚಿತ್ರರಚನೆಯಲ್ಲಿ ಬ್ಯಾಕ್‌ಗ್ರೌಂಡ್ ಹೊಡೆಯಲು ಉಪಯೋಗ ಮಾಡಿದರೆ, ರೌಂಡ್ ಬ್ರಶ್‌ಗಳನ್ನು ವಿನ್ಯಾಸಗಳ ಮಧ್ಯಭಾಗದಲ್ಲಿ ಬಣ್ಣ ತುಂಬಲು ಬಳಸುವರು. ಪಾಯಿಂಟ್ ಬ್ರಶ್‌ಗಳನ್ನು ಅತೀ ಸೂಕ್ಷ್ಮ ವಿನ್ಯಾಸಗಳಲ್ಲಿ ಬಣ್ಣ ತುಂಬಲು ಬಳಸುವರು. ಮೊದಲು ಹಾಗ್ ಹೆಯರ್ ಬ್ರಶ್‌ಗಳಿಂದ ಬಣ್ಣ ತುಂಬಿ, ಅಂತಿಮ ರೂಪು ಕೊಡಲು ಸೆಬಲ್ ಹೆಯರ್ ಬ್ರಶ್‌ಗಳನ್ನು ಬಳಸಲಾಗುವುದು.

iv. ಸ್ಪ್ರೇಗನ್ : ಚಿತ್ರ ಕಲಾವಿದರು ಚಿತ್ರ ರಚನೆ ಮಾಡುವ ಸಂದರ್ಭದಲ್ಲಿ ಸ್ಪ್ರೇಗನ್ ಎಂಬ ಸಾಧನವನ್ನು ಉಪಯೋಗಿಸುವರು. ಇದಕ್ಕೆ ವಯರ್ ಬ್ರಶ್ ಎಂಬ ಹೆಸರೂ ಇದೆ. ಈ ಸ್ಪ್ರೇಗನ್‌ಗಳು ಸಣ್ಣ ಹಾಗೂ ದೊಡ್ಡ ಅಳತೆಗಳಲ್ಲಿ ದೊರೆಯುತ್ತವೆ. ಕಬ್ಬಿಣದ ರಥಗಳಿಗೆ ವಿವಿಧ ರೇಖಾ ಚಿತ್ರಗಳನ್ನು ಬಿಡಿಸುವ ಮುಂಚೆ ಪೂರ್ಣ ರಥಗಳಿಗೆ ಒಂದೇ ಬಣ್ಣದಿಂದ ವಾಶ್ ಮಾಡಬೇಕಾಗುತ್ತದೆ. ದೊಡ್ಡ ಗಾತ್ರದ ಬ್ರಶ್‌ಗಳಿಂದ ಲೇಪಿಸಿದ ವರ್ಣವು ಅಲ್ಲಲ್ಲಿ ದಪ್ಪ ಹಾಗೂ ತೆಳುವಾಗಿ ಕಂಡುಬರುತ್ತದೆ. ಆಗ ಈ ಸ್ಪ್ರೇಗನ್‌ಗಳ ಸಹಾಯದಿಂದ ವರ್ಣಲೇಪನ ಮಾಡುವುದರಿಂದ ರಥದ ಎಲ್ಲಾ ಭಾಗಗಳಿಗೆ ಒಂದೇ ರೀತಿಯ ಬ್ಯಾಕ್‌ಗ್ರೌಂಡನ್ನು ರಚಿಸುವಾಗ ಏಯರ್ ಬ್ರಶ್‌ಗಳು ತುಂಬಾ ಸಹಾಯಕವಾಗುತ್ತವೆ. ದೂರದಿಂದ ನೋಡಲು ಏಯರ್ ಬ್ರಶ್‌ಗಳಿಂದ ಲೇಪಿಸಿರುವ ವರ್ಣವು ಬಹಳ ಸುಂದರವಾಗಿ ಕಂಡುಬರುತ್ತದೆ.

v. ಥಿನ್ನರ್ : ರಥಕ್ಕೆ ವರ್ಣಲೇಪನ ಮಾಡುವಾಗ ಡಬ್ಬಿಗಳಲ್ಲಿರುವ ಬೇರೆ ಬೇರೆ ಬಣ್ಣಗಳನ್ನು ಉಪಯೋಗಿಸಿ ಮತ್ತೊಂದು ಬಣ್ಣವನ್ನು ತಯಾರಿಸುವಾಗ, ಬೇರೆ ಖಾಲಿ ಒಂದು ಡಬ್ಬಿಯಲ್ಲಿ ಎರಡು ಬಣ್ಣಗಳನ್ನು ಕಲಿಸಲು ಥಿನ್ನರ್ ಎಂಬ ದ್ರವವನ್ನು ಉಪಯೋಗ ಮಾಡುವರು. ಗಾಳಿಗೆ ವರ್ಣವು

ಗಟ್ಟಿಯಾದ ಸಂದರ್ಭದಲ್ಲಿ ಅದನ್ನು ಕುಂಚಗಳಿಂದ ರಥಕ್ಕೆ ಸರಿಯಾಗಿ ಲೇಪಿಸುವಷ್ಟು ತೆಳು ಮಾಡಿಕೊಳ್ಳಬೇಕಾದಾಗ ಥಿನ್ನರನ್ನು ಉಪಯೋಗಿಸುವರು.

vi. ಸೀಮೆ ಎಣ್ಣೆ ಅಥವಾ ಟರ್ಪೆಂಟೈನ್ : ವರ್ಣಲೇಪನ ಮಾಡಲು ಉಪಯೋಗಿಸಿದ ಎಲ್ಲ ಬಗೆಯ ಬ್ರಶ್‌ಗಳನ್ನು ಸರಿಯಾಗಿ ತೊಳೆಯಲು ಸೀಮೆ ಎಣ್ಣೆ ಅಥವಾ ಟರ್ಪೆಂಟೈನ್‌ಗಳನ್ನು ಉಪಯೋಗಿಸುವರು.

೧೧. ಬಿದಿರುಗಳು : ಕಬ್ಬಿಣದ ರಥಗಳಿಗೆ ಎಲ್ಲ ಬದಿಯಲ್ಲಿಯೂ ಚಿತ್ರರಚನೆ ಮಾಡುವ ಸಂದರ್ಭದಲ್ಲಿ ರಥಗಳ ಸುತ್ತಲೂ ಸಣ್ಣ ಹಾಗೂ ದೊಡ್ಡ ಬಿದಿರಿನ ಗಳಗಳಿಂದ ಅಂತಸ್ತುಗಳನ್ನು ನಿರ್ಮಿಸಿ, ಚಿತ್ರಕಲಾವಿದರು ಅಂತಸ್ತುಗಳ ಮೇಲೆ ನಿಂತು ಚಿತ್ರ ರಚನೆ ಮಾಡಲು ಬಿದಿರುಗಳು ತುಂಬಾ ಉಪಯುಕ್ತವಾಗುವವು.

೧೨. ಎರಕ ಹೊಯ್ಯುವ ಸಾಮಗ್ರಿಗಳು : ಕಬ್ಬಿಣದ ರಥಗಳಲ್ಲಿ ಹೆಚ್ಚಾಗಿ ಉಬ್ಬುಶಿಲ್ಪಗಳು ಕಂಡುಬರದಿದ್ದರೂ ಕೆಲವು ರಥಗಳ ಅಡಿಪಾಯ ಹಾಗೂ ಮಂಟಪ ಭಾಗಗಳಲ್ಲಿ ಕೆಲವು ಪ್ರಾಣಿ ಶಿಲ್ಪಗಳನ್ನು ಹಾಗೂ ದೇವತಾ ಮೂರ್ತಿಗಳ ಕಬ್ಬಿಣದ ಉಬ್ಬುಶಿಲ್ಪಗಳನ್ನು ಕಾಣಬಹುದು. ಇಂತಹ ಉಬ್ಬುಶಿಲ್ಪಗಳನ್ನು ತಯಾರಿಸಲು ಎರಕ ಹೊಯ್ಯುವ ವಿಧಾನವನ್ನು ಬಳಸುವರು. ಈ ವಿಧಾನಕ್ಕೆ ಬಳಕೆಯಾಗುವ ಕೆಲವು ಸಾಮಗ್ರಿಗಳ ಉಪಯೋಗವನ್ನು ತಿಳಿಯೋಣ.

i. ಮೆಟಲ್ ಪೀಸ್‌ಗಳು : ಉಬ್ಬುಶಿಲ್ಪಗಳನ್ನು ತಯಾರಿಸಲು ಸಣ್ಣ ಸಣ್ಣ ಮೆಟಲ್ ಪೀಸ್‌ಗಳನ್ನು ಕಾಯಿಸಿ ದ್ರವರೂಪಗೊಳಿಸುವರು ಕಬ್ಬಿಣದ ದ್ರವವನ್ನು ತಯಾರಿಸಲು ಮೆಟಲ್ ಪೀಸ್‌ಗಳನ್ನು ಬಳಸುವರು.

ii. ಕುಲುಮೆ : ಮೆಟಲ್ ಪೀಸ್‌ಗಳನ್ನು ದ್ರವರೂಪಗೊಳಿಸಲು, ಅವುಗಳನ್ನು ಚೆನ್ನಾಗಿ ಕುದಿಸಲು ಕುಲುಮೆಯನ್ನು ಬಳಸುವರು.

iii. ಪಡಿಯಚ್ಚುಗಳು : ಕಾಯಿಸಿದ ಕಬ್ಬಿಣದ ದ್ರವವನ್ನು ಬೇರೆ ಬೇರೆ ಆಳತೆಗಳಲ್ಲಿರುವ ಬೇರೆ ಬೇರೆ ವಿನ್ಯಾಸಗಳ ಅಚ್ಚುಗಳಲ್ಲಿ ಸುರಿದು ವಿವಿಧ ಉಬ್ಬುಶಿಲ್ಪಗಳ ರಚನೆಗೆ ಅಚ್ಚುಗಳು ಅಥವಾ ಪಡಿಯಚ್ಚುಗಳು ಉಪಯೋಗವಾಗುವವು. ಪಡಿಯಚ್ಚುಗಳಿಗೆ ಮೌಲ್ಡ್‌ಗಳೆಂದು ಕರೆಯುವುದುಂಟು.

೧೩. ಅಲಂಕಾರ ಸಾಮಗ್ರಿಗಳು : ಉತ್ಸವದ ಸಂದರ್ಭದಲ್ಲಿ ಕಬ್ಬಿಣದ ರಥಗಳಿಗೆ ಅಲಂಕಾರ ಮಾಡುವ ಸಲುವಾಗಿ ಅನೇಕ ಸಾಮಗ್ರಿಗಳು ಬಳಕೆಯಾಗುತ್ತವೆ.

ರಥದ ವರ್ಣವು ನಶಿಸಿ ಹೋದಲ್ಲಿ ಉತ್ಸವದ ಸಂದರ್ಭದಲ್ಲಿ ಮತ್ತೆ ಮರು ವರ್ಣಲೇಪನವನ್ನು ಮಾಡುವರು. ಕಬ್ಬಿಣದ ಗನಿಗಳು, ಬಾಳೆದಿಂಡುಗಳನ್ನು ಮಂಟಪದ ಭಾಗದ ನಾಲ್ಕೂ ಬದಿಗಳಲ್ಲಿ ಕಟ್ಟುವರು. ದೊಡ್ಡ ದೊಡ್ಡ ಹೂವಿನ ಹಾರಗಳನ್ನು ಬೇರೆ ಬೇರೆ ವಿನ್ಯಾಸಗಳಲ್ಲಿ ರಥಕ್ಕೆ ನೇತುಹಾಕುವರು. ಅತ್ಯಂತ ಮೇಲಿನ ಭಾಗದಲ್ಲಿ ಕಳಶವನ್ನಿಟ್ಟು ಅದರ ಮೇಲೆ ಬಣ್ಣದ ಛತ್ರಿಯನ್ನು ಕಟ್ಟುವರು. ಅಷ್ಟೇ ಅಲ್ಲದೆ ಕೆಲವು ರಥಗಳಿಗೆ ಮಂಟಪ ಭಾಗದ ಸುತ್ತಲೂ ಸಣ್ಣ ಸಣ್ಣ ಗಂಟೆಗಳನ್ನು ನೇತಾಡುವ ಹಾಗೆ ಕಟ್ಟುವರು. ಬಣ್ಣ ಬಣ್ಣದ ಧ್ವಜಗಳನ್ನು ರಥದ ನಾಲ್ಕೂ ದಿಕ್ಕುಗಳಲ್ಲಿ


ಕಬ್ಬಿಣ ರಥದ ತಯಾರಿಕಾ ಪರಿಕರಗಳು




ಹಿಟರ್ಸ್, ಡ್ರಿಲ್ಲರ್ ಹಾಗೂ ಪಾಲಿಷ್ ಮಷಿನ್



ವೇಲ್ಡಿಂಗ ಮಷಿನ್



ಗ್ಯಾಸ್ ವೇಲ್ಡಿಂಗ್ ಮಷಿನ್



ಮೆಟಲ್ ಕಟಿಂಗ್ ಮಷಿನ್



ಡ್ರಿಲ್ಲಿಂಗ್ ಮಷಿನ್



ಪಾಲಿಷ್ ಮಷಿನ್



ವೇಲ್ಡಿಂಗ್ ಮಾಡುತ್ತಿರುವದು

ಹಾಗೂ ಕಳಸದ ಭಾಗದಲ್ಲಿ ಕಟ್ಟಿರುತ್ತಾರೆ. ರಥಗಳ ಒಂದೊಂದು ಅಂತಸ್ತಿನ ಅಂಚುಗಳಿಗೆ ಲಿಂಬೆ ಹಣ್ಣುಗಳನ್ನು ದಾರದಿಂದ ಹೆಣೆದು ಕಟ್ಟಿರುವುದನ್ನು ಕಾಣಬಹುದು. ರಥದ ಚಕ್ರಗಳಿಗೆ ಅಚ್ಚಿನ ಭಾಗದಲ್ಲಿ ಬಣ್ಣ ಬಣ್ಣದ ಹೂವಿನ ಹಾರಗಳನ್ನು ಸುತ್ತಿರುತ್ತಾರೆ.

೧೪. ಪೂಜಾ ಸಾಮಗ್ರಿಗಳು : ಸಾಮಾನ್ಯವಾಗಿ ಎಲ್ಲ ಕಡೆಗಳಲ್ಲಿಯೂ ಬಳಸುವಂತಹ ಅರಿಶಿಣ , ಕುಂಕುಮ, ಅಡಿಕೆ, ತೆಂಗಿನ ಕಾಯಿಗಳು, ವಿವಿಧ ರೀತಿಯ ಫಲ ಪುಷ್ಪಗಳು, ಆರತಿ, ದೀಪ, ಧೂಪಗಳು, ಗಂಟೆ ಝೂಂಗುಟಿಗಳು, ತಾಮ್ರದ ವಿವಿಧ ಪಾತ್ರೆಗಳು ಕೆಲವು ಬೆಲೆಬಾಳುವ ಆಭರಣಗಳು ಹೀಗೆ ಅನೇಕ ವಿಧದ ಪೂಜಾ ಸಾಮಗ್ರಿಗಳನ್ನು ಬಳಸುವರು.

ಬ. ಬೆಳ್ಳಿ ರಥಗಳ ಪರಿಕರಗಳು :

ಬೆಳ್ಳಿ ರಥ ನಿರ್ಮಾಣ ಕಾರ್ಯವನ್ನು ಕೈಗೊಂಡಾಗ ರಥಶಿಲ್ಪಿಗಳು ನೀಲ ನಕ್ಷೆಯನ್ನಾಧರಿಸಿ, ಮೊದಲು ಕಾಷ್ಠ ಮಾಧ್ಯಮದ ರಥವನ್ನು ತಯಾರಿಸಬೇಕಾಗುವದು. ಆದರೆ ಈ ಕಾಷ್ಠ ರಥಕ್ಕೆ ಯಾವುದೇ ರೀತಿಯ ವಿನ್ಯಾಸಗಳಿರುವುದಿಲ್ಲ. ಈ ರಥದ ಕಾಷ್ಠಗಳಿಗೆ ವಿವಿಧ ರೀತಿಯ ವಿನ್ಯಾಸಗಳನ್ನು ಹೊಂದಿದ ಬೆಳ್ಳಿಯ ಪಟ್ಟಿಕೆಗಳನ್ನು ನಂತರ ಅಳವಡಿಸುವರು.

ಆದ್ದರಿಂದ ಮೊದಲು ನಿರ್ಮಾಣವಾಗುವ ಕಾಷ್ಠ ರಥಕ್ಕೆ ಗಡ್ಡಿ ರಥಗಳ ನಿರ್ಮಾಣದಲ್ಲಿ ಬಳಸುವಂತಹ ಕೆಲವು ಸಾಮಗ್ರಿಗಳನ್ನು ಉಪಯೋಗಿಸಲಾಗುವುದು. ಅವುಗಳ ಉಪಯೋಗಗಳನ್ನು ಕಾಷ್ಠ ಮಾಧ್ಯಮದ ಗಡ್ಡಿ ರಥದ ನಿರ್ಮಾಣ ಹಂತದ ಪರಿಕರಗಳನ್ನು ಅಭ್ಯಸಿಸುವಾಗ ಪರಿಚಯಿಸಿರುವುದರಿಂದ , ಇಲ್ಲಿ ಅವುಗಳ ಹೆಸರುಗಳನ್ನು ಮಾತ್ರ ಸೂಚಿಸಲಾಗಿದೆ. ೧. ಮರದ ದೊಡ್ಡ ಹಲಗೆಗಳು ೨. ವಿವಿಧ ವಿಧದ ಕಾಷ್ಠಗಳು ೩. ಕಬ್ಬಿಣದ ಹಳಿಗಳು, ಸಲಾಕೆಗಳು ಹಾಗೂ ನಟ್ ಬೋಲ್ಟ್‌ಗಳು ೪. ಮರಗೆತ್ತನೆಯ ಸಾಮಗ್ರಿಗಳು. ಅವುಗಳಲ್ಲಿ ಅಳತೆ ಪಟ್ಟಿಗಳು, ಗರಗಸಗಳು, ವುಡ್ ಕಟಿಂಗ್ ಮಶೀನ್, ಡ್ರಿಲ್ಲಿಂಗ್ ಮಶಿನ್, ವುಚ್‌ಕಟಿಂಗ್ ಸಾಧನಗಳು, ಎಲ್ ಶೇಪ್ ಲೈನರ್ಸ್, ಮರದ ಹತೋಡಿಗಳು, ಸುತ್ತಿಗೆಗಳು, ವಿವಿಧ ಪ್ರಕಾರದ ಉಳಿಗಳು, ಸ್ಯಾಂಡ್ ಪೇಪರ್‌ಗಳು ಹಾಗೂ ಪಾಲಿಶ್ ಮಶಿನ್.

ಇಂಥಹ ಎಲ್ಲ ಸಾಮಗ್ರಿಗಳನ್ನು ಉಪಯೋಗಿಸಿ ಕಾಷ್ಠ ರಥವನ್ನು ತಯಾರಿಸಿದ ನಂತರ, ಬೆಳ್ಳಿ ರಥದ ನಿರ್ಮಾಣ ಕೈಗೊಂಡಾಗ , ಬೆಳ್ಳಿಯ ಮಾಧ್ಯಮಕ್ಕೆ ಉಪಯೋಗವಾಗುವಂತಹ ಅನೇಕ ಪರಿಕರಗಳನ್ನು ಕಾಣಬಹುದು. ಅಂತಹ ಪರಿಕರಗಳ ಹೆಸರುಗಳನ್ನು ಹಾಗೂ ಅವುಗಳು ಯಾವ ಸಂದರ್ಭದಲ್ಲಿ ಉಪಯೋಗಿಸಲ್ಪಡುವವು ಎಂಬುದನ್ನು ವಿವರವಾಗಿ ಅಭ್ಯಾಸ ಮಾಡುವಾ.

೧. ಪೆನ್ಸಿಲ್‌ಗಳು : ರಥಶಿಲ್ಪಿಗಳು ಬೆಳ್ಳಿಯ ರಥ ನಿರ್ಮಾಣ ಮಾಡುವ ಮೊದಲ ಹಂತದಲ್ಲಿ, ರಥದ ನೀಲನಕ್ಷೆಯನ್ನು ಸಿದ್ದಪಡಿಸಬೇಕಾಗುತ್ತದೆ. ಎಚ್‌ಬಿ, ೨ಬಿ, ೩ಬಿ, ೪ಬಿ, ೫ಬಿ ಹಾಗೂ ೬ಬಿ ಪೆನ್ಸಿಲ್‌ಗಳನ್ನು ಬಳಸುವರು.

೨. ಪೇಪರ್ಸ್ ಹಾಗೂ ಟ್ರೆಸ್ಸಿಂಗ್ ಶೀಟ್ಸ : ನೀಲನಕ್ಷೆಯನ್ನು ಸಿದ್ದಪಡಿಸಲು ಪುಲ್ ಇಂಪಿರಿಯಲ್ ಅಥವಾ ಹಾಫ್ ಇಂಪಿರಿಯಲ್ ಅಳತೆಯ ಡ್ರಾಯಿಂಗ್ ಪೇಪರ್‌ಗಳನ್ನು

ಬಳಸುವರು. ಅವುಗಳಲ್ಲಿಸಾದಾ ಡ್ರಾಯಿಂಗ್ ಪೇಪರ್, ಸುಪರ್ ನಾರ್ವೆ, ಆರ್ಟ್‌ಕಾರ್ಡ್ ಹಾಗೂ ಐವರಿ ಶೀಟ್ಸ್‌ಗಳೆಂಬ ಅನೇಕ ವಿಧದ ಪೇಪರ್‌ಗಳನ್ನು ಉಪಯೋಗ ಮಾಡುವರು. ಅನೇಕ ಶಿಲ್ಪನ್ಯಾಸಗಳನ್ನು ರಚಿಸಲು ಪೇಪರ್‌ಗಳ ಉಪಯೋಗವಾಗುವುದು.

ಪೇಪರ್‌ಗಳ ಮೇಲೆ ರಚಿಸಿದ ಚಿತ್ರಗಳನ್ನು ಪ್ರತಿಕೃತಿಗಳನ್ನಾಗಿ ಮಾಡಲು ಟ್ರೆಸ್ಸಿಂಗ್ ಶೀಟ್‌ಗಳನ್ನು ಬಳಸುವರು.

೩. ಅಳತೆ ಪಟ್ಟಿಗಳು : ನೀಲನಕ್ಷೆ ತಯಾರಿಸಲು, ವಿವಿಧ ದೇವತಾ ಮೂರ್ತಿಗಳನ್ನು ಚಿತ್ರಿಸುವಾಗ ಬೇರೆ ಬೇರೆ ವಿನ್ಯಾಸಗಳನ್ನು ಬೇರೆ ಬೇರೆ ಅಳತೆಗಳಲ್ಲಿ ಚಿತ್ರಿಸುವಾಗ ಹಾಗೂ ಬೆಳ್ಳಿಯ ತಗಡುಗಳನ್ನು ವಿವಿಧ ಪ್ರಮಾಣಗಳಲ್ಲಿ ಕತ್ತರಿವಾಗ ಅನೇಕ ರೀತಿಯ ಅಳತೆಪಟ್ಟಿಗಳನ್ನು ಉಪಯೋಗಿಸುವರು.

೪.ಅಂಟು ಪದಾರ್ಥಗಳು : ಪೇಪರುಗಳಲ್ಲಿ ರಚನೆಯಾದಂತಹ ಅನೇಕ ಸುಂದರ ವಿನ್ಯಾಸಗಳನ್ನು ಬೆಳ್ಳಿಯ ತಗಡುಗಳಲ್ಲಿ ರಚಿಸಲು ಕಾಗದಗಳು ಬೆಳ್ಳಿಯ ತಗಡುಗಳ ಮೇಲೆ ಅಂಟುವಂತೆ ಮಾಡಲು ಅನೇಕ ರೀತಿಯ ಅಂಟು ಪದಾರ್ಥಗಳನ್ನು ಉಪಯೋಗ ಮಾಡುವರು. ಉದಾ : ಫೆವಿಕಾಲ್, ವೆಮಿಕಾಲ್, ಗಂಜಿ, ರಬ್ಬರ್, ಸೋಲಿಶನ್ ಮೊದಲಾದವುಗಳು.

೫. ಹಿಡಿಕೆಗಳು : ಬೆಳ್ಳಿಯ ತಗಡುಗಳನ್ನು ಕತ್ತರಿಸುವ ಸಮಯದಲ್ಲಿ ಹೀಟ್ ಮಾಡುವ ಸಂದರ್ಭದಲ್ಲಿ ಹಾಗೂ ವಿವಿಧ ವಿನ್ಯಾಸಗಳಲ್ಲಿ ತಗಡುಗಳನ್ನು ಮಣಿಸಲು ಅಥವಾ ಸರಳಗೊಳಿಸಲು ದೊಡ್ಡ ಹಾಗೂ ಚಿಕ್ಕ ಅಳತೆಗಳಲ್ಲಿ ದೊರೆಯುವ ಅನೇಕ ವಿಧದ ಹಿಡಿಕೆಗಳು ಉಪಯೋಗವಾಗುವವು.

೬. ಬೆಳ್ಳಿಯ ತಗಡುಗಳು : ಬೆಳ್ಳಿಯ ರಥಗಳ ನಿರ್ಮಾಣ ಕಾರ್ಯದಲ್ಲಿ ಅನೇಕ ಗೇಜುಗಳಲ್ಲಿ ದೊರೆಯುವ ಬೆಳ್ಳಿಯ ತಗಡುಗಳನ್ನು ಉಪಯೋಗಿಸುವರು. ಈ ತಗಡುಗಳು ಫೂಟ ಹಾಗೂ ಮೀಟರ್‌ಗಳ ಅಳತೆಗಳಲ್ಲಿ ದೊರೆಯುತ್ತವೆ. ಅನೇಕ ವಿನ್ಯಾಸಗಳನ್ನು ರಚಿಸಲು ದಪ್ಪ ಮತ್ತು ತೆಳುವಾದ ಬೆಳ್ಳಿಯ ತಗಡುಗಳನ್ನು ಬಳಸುತ್ತಾರೆ.

೭. ಸಿಲ್ವರ್ ವಾಟರ್ : ರಥವು ಪೂರ್ಣ ಸಿದ್ದಗೊಂಡ ನಂತರ ಗಲೀಜಾದ ರಥದ ಭಾಗಗಳಿಗೆ ಶಿಲ್ಪವಿನ್ಯಾಸಗಳನ್ನು ಸ್ವಚ್ಚಗೊಳಿಸಲು ಹಾಗೂ ರಥಗಳನ್ನು ಪ್ರತಿ ವರ್ಷಕ್ಕೊಮ್ಮೆ ಸುಂದರವಾಗಿ ಹೊಳೆಯುವಂತೆ ಉತ್ಸವದ ಸಂದರ್ಭದಲ್ಲಿ ತೊಳೆಯಲು ಸಿಲ್ವರ್ ವಾಟರ್‌ನ್ನು ಉಪಯೋಗಿಸಲಾಗುವದು.

೮. ಕತ್ತರಿಗಳು : ಬೆಳ್ಳಿಯ ತಗಡುಗಳನ್ನು ಬೇರೆ ಬೇರೆ ಅಳತೆಗಳಲ್ಲಿ ಕತ್ತರಿಸಲು ವಿವಿಧ ದೊಡ್ಡ ಹಾಗೂ ಸಣ್ಣ ಕತ್ತರಿಗಳನ್ನು ಉಪಯೋಗಿಸುವರು. ಬೆಳ್ಳಿಯ ದಪ್ಪ ತಗಡುಗಳನ್ನು ಕತ್ತರಿಸಲು ಸಣ್ಣ ಕತ್ತರಿಗಳನ್ನು ಉಪಯೋಗಿಸುವರು. ಈ ಕತ್ತರಿಗಳಲ್ಲಿ ಸರಳ ಬಾಯಿ ಕತ್ತರಿಗಳು , ಮೂಗು ಬಾಯಿ ಕತ್ತರಿಗಳು , ವಕ್ರಬಾಯಿ ಕತ್ತರಿಗಳು ಹೀಗೆ ವಿವಿಧ ವಿನ್ಯಾಸದ ಬಾಯಿಗಳಿರುವ ಕತ್ತರಿಗಳನ್ನು ಬಳಸುವರು. ಬೆಳ್ಳಿಯ ತಗಡುಗಳನ್ನು ಸರಳವಾಗಿ ಕತ್ತರಿಸಲು ಸರಳಬಾಯಿ ಕತ್ತರಿಗಳು

ದುಂಡಾಕಾರವಾಗಿ ಕತ್ತರಿಸಲು ವಕ್ರಬಾಯಿಯ ಕತ್ತರಿಗಳು ಹಾಗೂ ತಗಡಿನ ಮೂಲೆಗಳನ್ನು ಕತ್ತರಿಸಲು ಮೂಗು ಬಾಯಿಯ ಕತ್ತರಿಗಳು ಉಪಯೋಗಿಸಲ್ಪಡುತ್ತವೆ. ಕತ್ತರಿಗಳ ಹಿಡಿಕೆಗಳು ಅವುಗಳ ಅಳತೆಗಳಿಗೆ ಸಂಬಂಧಿಸಿದಂತೆ ವಿವಿಧ ವಿನ್ಯಾಸಗಳಲ್ಲಿರುವುದನ್ನು ಕಾಣಬಹುದು.

೯. ಮೊಳೆಗಳು : ಬೆಳ್ಳಿಯ ತಗಡುಗಳ ಮೇಲೆ ವಿವಿಧ ಶಿಲ್ಪ ವಿನ್ಯಾಸಗಳನ್ನು ತಯಾರಿಸಿದ ಮೇಲೆ, ಬೇರೆ ಬೇರೆ ಅಳತೆಗಳಲ್ಲಿ ಬಿಡಿಬಿಡಿಯಾಗಿರುವ ತಗಡುಗಳನ್ನು ಮೊದಲೇ ನಿರ್ಮಿಸಲಾದ ಕಾಷ್ಠ ರಥದ ಅನೇಕ ಪಟ್ಟಿಕೆಗಳಲ್ಲಿ ಹೊಂದಿಸಲು ಅರ್ಧ ಇಂಚು, ಒಂದು ಇಂಚು, ಮೂರು ಇಂಚು ಹೀಗೆ ಬೇರೆ ಬೇರೆ ಅಳತೆಗಳಲ್ಲಿ ದೊರೆಯುವ ಮೊಳೆಗಳನ್ನು ಉಪಯೋಗಿಸುವರು.

೧೦. ಸುತ್ತಿಗೆಗಳು : ಸೂಕ್ಷ್ಮ ವಿನ್ಯಾಸಗಳನ್ನು ಬೆಳ್ಳಿಯ ತಗಡುಗಳ ಮೇಲೆ ಮೂಡಿಸಲು ಉಳಿಗಳಿಗೆ ಸರಿಯಾದ ಹದವಾದ ರೀತಿಯಲ್ಲಿ ಪೆಟ್ಟು ಕೊಡಲು ಹಾಗೂ ಅನೇಕ ಭಾಗಗಳ ಮೊಳೆಗಳನ್ನು ಹೊಡೆಯಲು ದುಂಡು ಮುಖದ ಸುತ್ತಿಗೆ, ಚೂಪು ಮುಖದ ಸುತ್ತಿಗೆ, ಚೌಕು ಮುಖದ ಸುತ್ತಿಗೆ, ಹೀಗೆ ಅನೇಕ ರೀತಿಯ ಸುತ್ತಿಗೆಗಳನ್ನು ಉಪಯೋಗಿಸುವರು. ಕೆಲವು ಸಂದರ್ಭಗಳಲ್ಲಿ ಈ ಎಲ್ಲ ಸುತ್ತಿಗೆಗಳು ಬೆಳ್ಳಿಯ ತಗಡುಗಳನ್ನು ಮಣಿಸಲು ಹಾಗೂ ಸರಳಗೊಳಿಸಲು ಉಪಯೋಗವಾಗುವುದುಂಟು.

೧೧. ಬ್ರಶ್‌ಗಳು : ಬೆಳ್ಳಿ ರಥದ ಅನೇಕ ಭಾಗಗಳನ್ನು ಸಿಲ್ವರ್ ವಾಟರ್‌ದಿಂದ ಸ್ವಚ್ಛಗೊಳಿಸಲು ವಿವಿಧ ಪ್ರಕಾರದ ಬ್ರಶ್‌ಗಳನ್ನು ಬಳಸುವರು. ಚಪ್ಪಟೆಯಾದ ಎರಡು ಇಂಚು, ಐದು ಇಂಚು ಹಾಗೂ ಹತ್ತು ಇಂಚುಗಳ ಬ್ರಶ್‌ಗಳನ್ನು ರಥದ ಎಲ್ಲ ಭಾಗಗಳಿಗೆ ಸಿಲ್ವರ್ ವಾಟರ್‌ನ್ನು ಲೇಪಿಸಲು ಉಪಯೋಗಿಸುವರು. ಸೂಕ್ಷ್ಮ ವಿನ್ಯಾಸಗಳನ್ನು ಸ್ವಚ್ಛಗೊಳಿಸಲು ಸಣ್ಣ ಸಣ್ಣ ರೌಂಡ್ ಹಾಗೂ ಪಾಯಿಂಟ್ ಬ್ರಶ್‌ಗಳನ್ನು ಉಪಯೋಗಿಸುವರು. ಈ ಬ್ರಶ್‌ಗಳಲ್ಲಿ ಸೂಕ್ಷ್ಮ ತಂತಿಗಳಿಂದ ಮಾಡಿದ ಬ್ರಶ್‌ಗಳನ್ನು ಕಾಣಬಹುದು. ಹೆಚ್ಚಾಗಿ ಹಾಗ್ ಹೆಯರ್ ಬ್ರಶ್‌ಗಳು ಉಪಯೋಗಕ್ಕೆ ಬರುತ್ತವೆ.

೧೨. ಪಾಲಿಶ್ ಮಶಿನ್ : ರಥವನ್ನು ಸ್ವಚ್ಛಗೊಳಿಸಲು, ಅಥವಾ ರಥದ ಬೆಳ್ಳಿಯ ತಗಡುಗಳ ಬಿಡಿ ವಿನ್ಯಾಸಗಳನ್ನು ಒಂದೊಂದಾಗಿ ಸ್ವಚ್ಛಗೊಳಿಸಲು, ಹ್ಯಾಂಡ್ ಬ್ರಶ್‌ಗಳಿಂದ ಮಾತ್ರವಲ್ಲದೆ ಪಾಲಿಶ್ ಮಶಿನನ್ನು ಉಪಯೋಗಿಸುವರು.

ಪಾಲಿಶ್ ಮಶಿನವು ವಿದ್ಯುತ್ ಚಾಲಿತ ಯಂತ್ರವಾಗಿದೆ. ಇದರ ಮುಂಭಾಗದಲ್ಲಿ ಬರುವ ಕಬ್ಬಿಣದ ಸಲಾಕೆಗೆ ಕಟ್ಟಿಗೆಯ ದುಂಡು ಬ್ರಶ್‌ಗಳನ್ನು ಅಳವಡಿಸಲು ಸಾಧ್ಯವಿದೆ. ಮಶಿನ್ ಶುರುವಾದಾಗ ಜೋರಾಗಿ ತಿರುಗುವ ಬ್ರಶ್‌ನಿಂದ ಅತೀ ಶೀಘ್ರದಲ್ಲಿ ರಥದ ಸ್ವಚ್ಛತೆಯನ್ನು ಮಾಡಲು ಸಾಧ್ಯವಾಗುವದು.

೧೩. ಕಟಿಂಗ್ ಮಶಿನ್ : ರಥ ನಿರ್ಮಾಣ ಕಾರ್ಯದಲ್ಲಿ ಉಪಯೋಗಿಸುವ ಅತೀ ದೊಡ್ಡ ಉದ್ದ ಹಾಗೂ ದಪ್ಪಳತೆಗಳಲ್ಲಿರುವ ಬೆಳ್ಳಿಯ ಪ್ಲೇಟ್ ಹಾಗೂ ತಗಡುಗಳನ್ನು ಅತೀ ಶೀಘ್ರದಲ್ಲಿ ಕತ್ತರಿಸಲು ಕಟಿಂಗ್ ಮಶಿನ್ ತುಂಬಾ ಸಹಾಯಕಾರಿಯಾಗಿದೆ. ಕಟಿಂಗ್ ಮಶಿನ್‌ಗಳಲ್ಲಿ ಸ್ಟ್ಯಾಂಡ್ ಕಟಿಂಗ್ ಮಶಿನ್ ಹಾಗೂ ಹ್ಯಾಂಡ್ ಕಟಿಂಗ್ ಮಶಿನ್‌ಗಳೆಂಬ ಎರಡು ವಿಧಗಳಿವೆ. ದೊಡ್ಡ ದೊಡ್ಡ

ದಪ್ಪವಾದ ತಗಡುಗಳನ್ನು ಬೇರೆ ಬೇರೆ ಅಳತೆಗಳಲ್ಲಿ ಕತ್ತರಿಸಲು ಸ್ವ್ಯಾಂಡ್ ಮಶಿನ್‌ಗಳನ್ನು ಬಳಸುವರು. ತೆಳುವಾದ ಸಣ್ಣ ಸಣ್ಣ ತಗಡಿನ ಬಿಡಿಭಾಗಗಳನ್ನು ಕತ್ತರಿಸಲು ಹ್ಯಾಂಡ್ ಮಶಿನ್‌ಗಳನ್ನು ಉಪಯೋಗಿಸುವರು.

೧೪. ಮೇಣ : ಬೆಳ್ಳಿಯ ತಗಡುಗಳ ಮೇಲೆ ದೇವತಾ ಮೂರ್ತಿಗಳ ಪ್ರಾಣಿ ಪಕ್ಷಿಗಳ ಅನೇಕ ಸುಳಿವುಗಳ ವಿನ್ಯಾಸಗಳನ್ನು ರಚಿಸಲು ಮೇಣದ ಉಪಯೋಗವಾಗುವುದು. ತಗಡುಗಳ ಮೇಲೆ ಪೇಪರುಗಳಲ್ಲಿ ರಚಿಸಿರುವ ಚಿತ್ರಗಳನ್ನು ಅಂಟಿಸಿ, ತಗಡಿನ ಕೆಳಗೆ ಮೇಣವನ್ನಿಟ್ಟು ಉಬ್ಬುಶಿಲ್ಪಗಳನ್ನು ರಚಿಸಲು ಮೇಣದ ಉಪಯೋಗವನ್ನು ಮಾಡುವರು. ಮೇಣವು ಮೆತ್ತಗಿರುವುದರಿಂದ ಬೇರೆ ಬೇರೆ ಆಕಾರಗಳಲ್ಲಿ ವತ್ತಬಹುದಾಗಿದೆ.ಉಬ್ಬು ಶಿಲ್ಪ ರಚನೆಯಲ್ಲಿ ಇದು ಅತ್ಯಂತ ಮುಖ್ಯವಾಗಿದೆ.

೧೫. ರಾಳ : ಉಬ್ಬು ಶಿಲ್ಪಗಳ ರಚನೆಯನ್ನು ಮಾಡಲು ಮೊದಲು ಮೇಣದಿಂದ ತಯಾರಾದ ಅಪೂರ್ಣವಾದ ಉಬ್ಬುಶಿಲ್ಪಗಳ ಬೆಳ್ಳಿಯ ತಗಡುಗಳ ಹಿಂಬದಿಯಲ್ಲಿ ರಾಳದ ದ್ರವವನ್ನು ಹಾಕಿ, ಅದು ಆರಿದ ನಂತರ ಶಿಲ್ಪಗಳಿಗೆ ಅಂತಿಮ ರೂಪವನ್ನು ಕೊಡುತ್ತಾರೆ. ಉಬ್ಬು ಶಿಲ್ಪಗಳ ಅಂತಿಮ ರೂಪ ನಿರ್ಮಾಣದಲ್ಲಿ ರಾಳವನ್ನು ಉಪಯೋಗಿಸುವರು. ಇದರಲ್ಲಿ ಕೊಬ್ಬರಿ ಎಣ್ಣೆ, ಇದ್ದಿಲು , ಹಾಗೂ ರಾಳದ ರಾಸಾಯನಿಕಗಳನ್ನು ಮಿಶ್ರಣ ಮಾಡಿರುತ್ತಾರೆ. ಇದು ಕಪ್ಪು ಬಣ್ಣದ್ದಾಗಿರುವುದು. ಬಿಸಿ ಮಾಡಿದಾಗ ದ್ರವರೂಪಗೊಂಡು ಮತ್ತೆ ಆರಿಸಿದಾಗ ಘನರೂಪವನ್ನು ಹೊಂದುತ್ತದೆ. ಇದನ್ನು ಮತ್ತೆ ಮತ್ತೆ ಬೇರೆ ಕೆಲಸಗಳಲ್ಲಿ ಬಿಸಿ ಮಾಡಿ ಉಪಯೋಗ ಮಾಡಿಕೊಳ್ಳಬಹುದು. ತಗಡುಗಳಲ್ಲಿ ಶಿಲ್ಪರಚನೆಯ ಕಾರ್ಯವನ್ನು ಮಾಡುವಾಗ ಇದು ತುಂಬಾ ಉಪಯುಕ್ತವಾಗಿದೆ.

೧೬. ರಾಳದ ಮಣಿ : ಬೆಳ್ಳಿಯ ಬೇರೆ ಬೇರೆ ಅಳತೆಗಳ ತಗಡುಗಳ ಮೇಲೆ ಅಪೂರ್ಣ ಉಬ್ಬುಶಿಲ್ಪಗಳನ್ನು ತಯಾರಿಸಿದ ನಂತರ ಶಿಲ್ಪಗಳಿಗೆ ಅಂತಿಮ ರೂಪು ಕೊಡಲು ತಗಡುಗಳ ಹಿಂಬದಿಯಲ್ಲಿ ಬಿಸಿ ರಾಳವನ್ನು ಹಾಕಿ, ಆರಿಸಿ ಘನರೂಪವನ್ನು ಮಾಡುವರು. ಇದು ಶಿಲ್ಪಗಳಿಗೆ ಅಂತಿಮ ರೂಪು ನೀಡಲು ಆಧಾರವಾಗುವದು. ಅಪೂರ್ಣ ಉಬ್ಬುಶಿಲ್ಪವನ್ನು ಹೊಂದಿದ ಬೆಳ್ಳಿಯ ತಗಡು ಹಾಗೂ ಅದರ ಹಿಂಬದಿಯಲ್ಲಿ ಘನರೂಪವನ್ನು ಪಡೆದ ರಾಳ ಇವೆರಡನ್ನು ಸೇರಿ 'ರಾಳದಮಣಿ' ಎಂದು ಕರೆಯುವರು.

೧೭. ಉಳಿಗಳು : ಬೆಳ್ಳಿ ರಥಗಳ ನಿರ್ಮಾಣ ಕಾರ್ಯದಲ್ಲಿ ವಿವಿಧ ಶಿಲ್ಪ ವಿನ್ಯಾಸಗಳನ್ನು ರಚಿಸಲು ಬೇರೆ ಬೇರೆ ವಿಧದ ಅನೇಕ ಉಳಿಗಳು ಉಪಯೋಗವಾಗುವುದನ್ನು ಕಾಣಬಹುದು. ಅವುಗಳಲ್ಲಿ ಯಾವ ಯಾವ ಉಳಿಗಳು ಯಾವ ಕೆಲಸಕ್ಕೆ ಉಪಯೋಗವಾಗುವವು ಎಂಬುದನ್ನು ತಿಳಿಯುವಾ.

★. **ದುಂಡು ಮುಖದ ಉಳಿಗಳು** : ಬೆಳ್ಳಿಯ ತಗಡುಗಳ ಮೇಲೆ ಉಬ್ಬುಶಿಲ್ಪ ರಚನೆಯ ಸಂದರ್ಭದಲ್ಲಿ ದುಂಡು ಮುಖದ ಉಳಿಗಳು ಉಪಯೋಗವಾಗುವುವು. ಮೇಣದ ಮೇಲೆ ಬೆಳ್ಳಿಯ ತಗಡುಗಳನ್ನಿಟ್ಟು ಅದರ ಮೇಲೆ ಈ ದಿಂಡು ಉಳಿಗಳ ಸಹಾಯದಿಂದ ಉಬ್ಬುಶಿಲ್ಪಗಳನ್ನು ತಯಾರಿಸುವರು. ದುಂಡು ಮುಖದ ಉಳಿಗಳ ಮೊನೆಗಳು ಚೂಪಾಗಿರದೆ ಗೋಲಿ ಗುಂಡಿನಂತೆ ವಿವಿಧ ಸಣ್ಣ ಹಾಗೂ ದೊಡ್ಡ ಆಕಾರಗಳಲ್ಲಿ ಇರುವುದರಿಂದ ಉಬ್ಬುಶಿಲ್ಪರಚನೆಗೆ ತುಂಬಾ

ಸಹಾಯಕವಾಗುತ್ತವೆ. ಕೆಲವು ಸಣ್ಣ ದುಂಡುಮುಖದ ಉಳಿಗಳನ್ನು ಚಿಕ್ಕ ಉಬ್ಬು ಶಿಲ್ಪ ರಚನೆಯಲ್ಲಿ ಹಾಗೂ ಕೆಲವು ದೊಡ್ಡ ದುಂಡು ಮುಖದ ಉಳಿಗಳನ್ನು ದೊಡ್ಡಳತೆಯ ಉಬ್ಬುಶಿಲ್ಪ ರಚನೆಯಲ್ಲಿ ಉಪಯೋಗಿಸುವರು.

★. **ಉಗುರು ಮುಖದ ಉಳಿಗಳು :** ಉಗುರು ಮುಖದ ಉಳಿಗಳನ್ನು ಯಾವುದಾದರೂ ವಕ್ರ ರೇಖೆಗಳ ವಿನ್ಯಾಸಗಳನ್ನು ರಚಿಸಲು ಉಪಯೋಗಿಸುವರು. ಈ ಉಳಿಗಳು ಉಬ್ಬುಶಿಲ್ಪಗಳಿಗೆ ಅಂತಿಮ ರೂಪ ನೀಡುವ ಸಂದರ್ಭದಲ್ಲಿ ಬಳಕೆಯಾಗುವವು.

★. **ವಿವಿಧ ನಕ್ಷಾ ಉಳಿಗಳು :** ಬೆಳ್ಳಿಯ ತಗಡುಗಳ ಮೇಲೆ ದುಂಡು ಮುಖದ ಉಳಿಗಳಿಂದ ಅನೇಕ ತೆರನಾದ ಉಬ್ಬು ಶಿಲ್ಪಗಳನ್ನು ರಚಿಸಿದ ನಂತರ ಆ ಉಬ್ಬುಶಿಲ್ಪಗಳಿಗೆ ಸೂಕ್ಷ್ಮವಾದ ವಿನ್ಯಾಸಗಳನ್ನು ಮಾಡಲು ವಿವಿಧ ನಕ್ಷಾ ವಳಿಗಳು ಉಪಯೋಗವಾಗುವವು. ನಕ್ಷಾ ಉಳಿಗಳಲ್ಲಿ ತ್ರಿಕೋನ, ಆಯತ, ವರ್ತುಳ, ನಕ್ಷತ್ರ, ಬದಾಮ, ಹೂವಿನಾಕಾರ ಹಾಗೂ ಎಲೆಯಾಕಾರಗಳನ್ನು ಕಾಣಬಹುದು. ಈ ಉಳಿಗಳ ಮೊನೆಗಳು ವಿವಿಧ ಆಕಾರ ಪ್ರಕಾರಗಳಲ್ಲಿ ಇರುವುದರಿಂದ ಉಬ್ಬುಶಿಲ್ಪಗಳಿಗೆ ಸುಂದರವಾದ ಅಂತಿಮ ರೂಪವನ್ನು ಕೊಡಲು ಸಹಾಯಕಾರಿಯಾಗುತ್ತವೆ. ಇವುಗಳನ್ನು ರಥಶಿಲ್ಪಿಗಳು ತಮಗೆ ಬೇಕಾದ ಆಕಾರಗಳಲ್ಲಿ ತಾವೇ ತಯಾರಿಸಿಕೊಳ್ಳುವರು. ಇವು ನೋಡಲು ಕೊಳವೆಗಳಂತೆ ಕಾಣುತ್ತವೆ.

★. **ಚಪ್ಪಟೆ ಮೊನೆಯ ಉಳಿಗಳು :** ಈ ಉಳಿಗಳಲ್ಲಿಯೂ ಸಹ ಅನೇಕ ಪ್ರಕಾರಗಳಿವೆ. ಕಾಲು ಸೆಂಟಿ ಮೀಟರ್‌ದಿಂದ ಎರಡು ಇಂಚುಗಳ ಅಗಲದ ಅಳತೆಯವರೆಗೆ ತಯಾರಾದ ಉಳಿಗಳನ್ನು ಸರಳ ರೇಖೆಗಳಂತಹ ವಿನ್ಯಾಸಗಳನ್ನು ರಚಿಸಲು ಹಾಗೂ ಆ ವಿನ್ಯಾಸಗಳಲ್ಲಿ ಗೆರೆ ಗೆರೆಯಾಕಾರದ ವಿನ್ಯಾಸಗಳನ್ನು ತಯಾರಿಸಲು ಚಪ್ಪಟೆ ಮೊನೆಯ ಉಳಿಗಳು ಉಪಯೋಗವಾಗುವವು.


★. ಚೂಪು ಮೊನೆಯ ಉಳಿಗಳು :

ಪೇಪರುಗಳಲ್ಲಿ ರಚಿಸಿದ ವಿನ್ಯಾಸಗಳನ್ನು ಪ್ರತಿಕೃತಿ ಮಾಡಲು ವಿನ್ಯಾಸಗಳಿರುವ ಪೇಪರುಗಳನ್ನು ಬೆಳ್ಳಿಯ ತಗಡುಗಳಿಗೆ ಅಂಟಿಸಿದ ಮೇಲೆ ಚೂಪು ಮೊನೆಯ ಉಳಿಗಳನ್ನು ಉಪಯೋಗಿಸುವರು. ಪೇಪರುಗಳ ಮೇಲಿನ ವಿನ್ಯಾಸಗಳ ರೇಖಾ ಚಿತ್ರಗಳ ಪ್ರಕಾರ ಚುಕ್ಕೆ ಹಾಕುಲು ಈ ಉಳಿಗಳನ್ನು ಬಳಸುವರು.

೧೮. ಬೆಳ್ಳಿ ಕರಗಿಸುವ ಪಾತ್ರೆಗಳು : ರಥ ನಿರ್ಮಾಣ ಕಾರ್ಯದಲ್ಲಿ ಕೆಲವು ಸಂದರ್ಭಗಳಲ್ಲಿ ಬೆಳ್ಳಿಯನ್ನು ಕರಗಿಸುವ ವಿಧಾನವನ್ನು ನೋಡುತ್ತೇವೆ. ಕೆಲವು ಪಡಿಯಚ್ಚುಗಳಿಂದ ಬೆಳ್ಳಿಯ ಶಿಲ್ಪಗಳನ್ನು ಪ್ರತಿಕೃತಿ ಮಾಡಲು ಬೆಳ್ಳಿಯನ್ನು ಕರಗಿಸಬೇಕಾದ ಸಂದರ್ಭದಲ್ಲಿ ಬೆಳ್ಳಿ ಕರಗಿಸುವ ಪಾತ್ರೆಗಳು ಉಪಯೋಗವಾಗುವವು. ಈ ಪಾತ್ರೆಗಳು ಚಿಕ್ಕ ಅಳತೆಗಳಿಂದ ದೊಡ್ಡ ಅಳತೆಗಳಲ್ಲಿ ದೊರೆಯುತ್ತವೆ. ಈ ಪಾತ್ರೆಗಳು ಕಪ್ಪು ಬಣ್ಣದ್ದಾಗಿರುತ್ತವೆ.

೧೯. ಉಷ್ಣತಾ ಮಾಪಕ : ಪಾತ್ರೆಗಳಲ್ಲಿ ಬೆಳ್ಳಿಯನ್ನು ಕರಗಿಸಲು ತೊಡಗಿದಾಗ ಇಂತಿಷ್ಟು

ಬೆಳ್ಳಿ ರಥಶಿಲ್ಪದ ತಯಾರಿಕಾ ಪರಿಕರಗಳು



ವಿವಿಧ ಆಕಾರದ ಸುತ್ತಿಗೆಗಳು ಹಾಗೂ ಕತ್ತರಿಗಳು



U,V ,C ಹಾಗೂ ದುಂಡು ಮೊನೆಯ ಉಳಿಗಳು



ಬೆಳ್ಳಿ ಕರಗಿಸುವ ಪಾತ್ರೆಗಳು ಹಾಗೂ ಉಷ್ಣಮಾಪಕಗಳು



ವಿವಿಧ ಪ್ರಕಾರದ ಬ್ರಷ್‌ಗಳು





ಸಿಲಿಂಡರ ಗ್ಯಾಸ ಮತ್ತು ಬೆಳ್ಳಿ ತಗಡು

ಉಷ್ಣತೆಯನ್ನು ಹೊಂದಬೇಕೆಂಬ ನಿಯಮವಿದೆ. ಉಷ್ಣತೆಯನ್ನು ಹೊಂದಿದೆ ಎಂದು ಧೃಡಪಡಿಸಲು ಉಷ್ಣತಾ ಮಾಪಕವನ್ನು ಉಪಯೋಗಿಸುವರು.

೨೦. ಬರ್ನರ್ : ಉಬ್ಬುಶಿಲ್ಪಗಳ ಮೇಲೆ ಸೂಕ್ಷ್ಮ ವಿನ್ಯಾಸಗಳನ್ನು ರಚಿಸಲು ಕೆಲವು ಸಂದರ್ಭಗಳಲ್ಲಿ ಬೆಳ್ಳಿಯ ತಗಡುಗಳನ್ನು ಕಾಯಿಸಬೇಕಾಗುವುದು. ರಾಳ ಹಾಕುವ ಸಂದರ್ಭದಲ್ಲಿ ಕಾಯಿಸಬೇಕಾಗುವುದು. ಆದ್ದರಿಂದ ನೀಲಿ ಜ್ವಾಲೆಯನ್ನು ಹೊರಹೊಮ್ಮಿಸುವಂತಹ ಬರ್ನರ್ ಸಹಾಯದಿಂದ ತಗಡುಗಳನ್ನು ಕಾಯಿಸುವರು. ಅತೀ ಉತ್ತಮ ಗತಿಯಲ್ಲಿ ಒಂದೇ ಸವನೆ ನೀಲಿ ಜ್ವಾಲೆಯನ್ನು ಊದುವ ಬರ್ನರ್‌ಗಳು ವಿವಿಧ ಅಳತೆಗಳ ದೊರೆಯುವವು. ಇವುಗಳಲ್ಲಿ ಜ್ವಾಲೆಯನ್ನು ಹೆಚ್ಚು ಕಡಿಮೆ ಮಾಡಿಕೊಳ್ಳುವ ಬಟನ್‌ಗಳಿರುತ್ತವೆ. ಅತೀ ಶೀಘ್ರದಲ್ಲಿ ತಗಡುಗಳನ್ನು ಕಾಯಿಸುವ ಒಂದು ಸಾಧನವಾಗಿದೆ

೨೧. ಗ್ಯಾಸ್ ಸಿಲಿಂಡರ್ : ಬರ್ನರ್‌ಗಳಿಂದ ನೀಲಿ ಜ್ವಾಲೆಯು ಹೊರಬರಲು ಇಂಧನದ ಉಪಯೋಗವು ಮುಖ್ಯವಾಗುತ್ತದೆ. ಆದ್ದರಿಂದ ಗ್ಯಾಸ್ ಸಿಲಿಂಡರ್‌ಗಳ ಸಹಾಯವನ್ನು ಪಡೆಯಬೇಕಾಗುತ್ತದೆ.

೨೨. ಪಡಿಯಚ್ಚುಗಳು : ಒಂದೇ ರೀತಿಯ ಅನೇಕ ಶಿಲ್ಪಗಳನ್ನು ಎರಕ ಹೊಯ್ಯುವ ವಿಧಾನದಿಂದ ರಚಿಸಬೇಕಾದಾಗ ಅನೇಕ ಪಡಿಯಚ್ಚುಗಳು ಉಪಯೋಗವಾಗುವವು. ಪಡಿಯಚ್ಚುಗಳಲ್ಲಿ ಬೆಳ್ಳಿಯ ದ್ರವವನ್ನು ಸುರಿದು ವಿವಿಧ ಶಿಲ್ಪಗಳ ರಚನೆ ಮಾಡುವುದನ್ನು ರಥಗಳ ನಿರ್ಮಾಣ ಹಂತದಲ್ಲಿ ಕಾಣಬಹುದು.

೨೩. ಅಲಂಕಾರ ಸಾಮಗ್ರಿಗಳು : ಬೆಳ್ಳಿ ರಥಗಳು ಉತ್ಸವದ ಸಂದರ್ಭದಲ್ಲಿ ಅಲಂಕಾರಗೊಳ್ಳುವುದನ್ನು ಗಮನಿಸಬಹುದು. ಅವುಗಳ ಅಲಂಕಾರಕ್ಕಾಗಿ ಬೇರೆ ಬೇರೆ ಅಲಂಕಾರ ಸಾಮಗ್ರಿಗಳು ಉಪಯೋಗವಾಗುತ್ತವೆ. ತೇರಿನ ಮಂಟಪ ಭಾಗದಲ್ಲಿ ಕಟ್ಟಲು ಕಬ್ಬಿಣ ಗನಿ, ಬಾಳೆದಿಂಡುಗಳನ್ನು ಬಳಸುವರು. ಎಲ್ಲ ಬದಿಗಳಲ್ಲಿ ಹೂವಿನ ಹಾರಗಳನ್ನು ನೇತುಬಿಡುವರು. ಮೇಲೆ ಚಿನ್ನದ ಕಳಶವನ್ನಿಟ್ಟು, ಒಂದು ಸುಂದರವಾದ ಬಣ್ಣದ ಕೊಡೆಯನ್ನು ಕಟ್ಟುವರು. ಚಕ್ರಗಳಿಗೆ ಹೂವಿನ ಹಾರಗಳನ್ನು ಸುತ್ತುವರು.

ಕ. ಚಿನ್ನದ ರಥದ ಪರಿಕರಗಳು :

ಬೆಳ್ಳಿ ರಥಗಳ ತಯಾರಿಕಾ ಹಂತದಲ್ಲಿ ರಥಶಿಲ್ಪಿಗಳು ಮೊದಲು ಕಾಷ್ಠ ರಥವನ್ನು ತಯಾರಿಸಿಕೊಳ್ಳುವಂತೆ, ಚಿನ್ನದ ರಥ ನಿರ್ಮಾಣ ಕಾರ್ಯದಲ್ಲಿ ಕಾಷ್ಠ ಮಾಧ್ಯಮದ ರಥದ ನಿರ್ಮಾಣವಾಗಬೇಕಾಗುತ್ತದೆ. ನಂತರ ಆ ಕಾಷ್ಠ ರಥಕ್ಕೆ ವಿವಿಧ ರೀತಿಯ ವಿನ್ಯಾಸಗಳನ್ನು ಹೊಂದಿದ ಚಿನ್ನದ ತಗಡುಗಳ ಪಟ್ಟಿಕೆಗಳನ್ನು ಅಳವಡಿಸಲಾಗುತ್ತದೆ. ಆದ್ದರಿಂದ ಬೆಳ್ಳಿ ರಥಗಳ ನಿರ್ಮಾಣದಲ್ಲಿ ಕಾಷ್ಠ ರಥಗಳ ತಯಾರಿಕಾ ಪರಿಕರಗಳನ್ನು ಉಪಯೋಗಿಸುವಂತೆ, ಚಿನ್ನದ ರಥದ ನಿರ್ಮಾಣ ಕಾರ್ಯದಲ್ಲಿಯೂ ಕೂಡ ಅವುಗಳನ್ನೇ ಬಳಸುವುದನ್ನು ಕಾಣುತ್ತೇವೆ.

ಅವುಗಳ ಉಪಯೋಗಗಳನ್ನು ಗಡ್ಡಿ ರಥಗಳ ಪರಿಕರಗಳನ್ನು ಅಭ್ಯಸಿಸುವಾಗ

ತಿಳಿದಿರುವುದರಿಂದ ಇಲ್ಲಿ ಅವುಗಳ ಹೆಸರುಗಳನ್ನು ಮಾತ್ರ ಸೂಚಿಸಲಾಗಿದೆ.

೧. ಮರದ ದೊಡ್ಡ ಹಲಗೆಗಳು ೨. ವಿವಿಧ ವಿಧದ ಕಾಷ್ಠಗಳು ೩. ಕಬ್ಬಿಣದಹಳಿಗಳು, ಸಲಾಕೆಗಳು ಹಾಗೂ ನಟ್ ಬೋಲ್ಟ್‌ಗಳು. ೪. ಮರಗೆತ್ತನೆಯ ಸಾಮಗ್ರಿಗಳು ಅವುಗಳಲ್ಲಿ ಅಳತೆ ಪಟ್ಟಿಗಳು , ಗರಗಸಗಳು, ವುಡ್ ಕಟಿಂಗ್ ಮಶಿನ್, ಡ್ರಿಲ್ಲಿಂಗ್ ಮಶಿನ್, ವುಚ್ ಕಟಿಂಗ್ ಸಾಧನಗಳು, ಎಲ್ ಶೇಪ್ ಲೈನರ್ಸ್, ಮರದ ಹತೋಡಿಗಳು, ಸುತ್ತಿಗೆಗಳು , ವಿವಿಧ ಪ್ರಕಾರದ ಉಳಿಗಳು, ಸ್ಯಾಂಡ್ ಪೇಪರ್‌ಗಳು ಹಾಗೂ ಪಾಲಿಶ್ ಮಶಿನ್.

ಈ ಎಲ್ಲ ಪರಿಕರಗಳನ್ನು ಉಪಯೋಗಿಸಿ ಕಾಷ್ಠ ರಥದ ನಿರ್ಮಾಣವಾದ ನಂತರ, ಚಿನ್ನದ ರಥದ ನಿರ್ಮಾಣ ಹಂತದಲ್ಲಿ ಬೆಳ್ಳಿ ರಥಗಳ ನಿರ್ಮಾಣ ಕಾರ್ಯದಲ್ಲಿ ಬಳಕೆಗೊಳ್ಳುವ ಅನೇಕ ಪರಿಕರಗಳನ್ನು ಉಪಯೋಗಿಸಲಾಗುವದು. ಅವುಗಳಲ್ಲಿ ಬೆಳ್ಳಿಯ ತಗಡುಗಳ ಪಟ್ಟಿಕೆಗಳ ಬದಲಾಗಿ ಚಿನ್ನದ ತಗಡುಗಳ ಪಟ್ಟಿಕೆಗಳನ್ನು ಉಪಯೋಗಿಸುವುದನ್ನು ಬಿಟ್ಟರೆ ಉಳಿದೆಲ್ಲ ಪರಿಕರಗಳು ಒಂದೇ ರೀತಿಯಾಗಿವೆ. ಅವುಗಳ ಉಪಯೋಗಗಳನ್ನು ಬೆಳ್ಳಿ ರಥದ ಪರಿಕರಗಳನ್ನು ಅಭ್ಯಸಿಸುವಾಗ ಪರಿಚಯಿಸಿರುವುದರಿಂದ ಇಲ್ಲಿ ಅವುಗಳ ಹೆಸರುಗಳನ್ನು ಮಾತ್ರ ಹೆಸರಿಸಲಾಗಿದೆ.

೧. ಪೆನ್ಸಿಲ್‌ಗಳು ೨. ಪೇಪರ್ಸ್ ಹಾಗೂ ಟ್ರೆಸ್ಸಿಂಗ್ ಶೀಟ್ಸ್ ೩. ಅಳತೆ ಪಟ್ಟಿಗಳು ೪. ಅಂಟು ಪದಾರ್ಥಗಳು ೫. ಹಿಡಿಕೆಗಳು ೬. ಚಿನ್ನದ ತಗಡುಗಳು ೭. ಸಿಲ್ವರ್ ವಾಟರ್ ೮. ಕತ್ತರಿಗಳು ೯. ಮೊಳೆಗಳು ೧೦. ಸುತ್ತಿಗೆಗಳು ೧೧. ಬ್ರಶ್‌ಗಳು, ೧೨. ಪಾಲಿಶ್ ಮಶಿನ್ ೧೩. ಕಟಿಂಗ್ ಮಶಿನ್ ೧೪. ಮೇಣ ೧೫. ರಾಳ ೧೫. ರಾಳದ ಮಣಿ ೧೬. ಉಳಿಗಳು ಅವುಗಳಲ್ಲಿ ದುಂಡು ಮುಖದ ಉಳಿಗಳು, ಉಗುರು ಮುಖದ ಉಳಿಗಳು, ವಿವಿಧ ನಕ್ಷಾ ಉಳಿಗಳು, ಚಪ್ಪಟೆ ಮೊನೆಯ ಉಳಿಗಳು, ಚೂಪು ಮೊನೆಯ ಉಳಿಗಳು ೧೭. ಬೆಳ್ಳಿ ಕರಗಿಸುವ ಪಾತ್ರೆಗಳು ೧೮. ಉಷ್ಣತಾ ಮಾಪಕ ೧೯. ಬರ್ನರ್ ೨೦. ಗ್ಯಾಸ್ ಸಿಲಿಂಡರ್ ೨೧. ಪಡಿಯಚ್ಚುಗಳು ೨೨. ಅಲಂಕಾರ ಸಾಮಗ್ರಿಗಳು

ಈ ಎಲ್ಲ ಪರಿಕರಗಳನ್ನು ಚಿನ್ನದ ರಥಗಳ ನಿರ್ಮಾಣ ಹಂತದಲ್ಲಿ ಬಳಸಲಾಗುವದು.

III. ಸಂಕೀರ್ಣ ಮಾಧ್ಯಮದ ರಥಗಳು :

ಸಂಕೀರ್ಣ ಮಾಧ್ಯಮದ ರಥಗಳಲ್ಲಿ

ಅ. ಕಟ್ಟುವ ರಥಗಳು

ಬ. ತಟ್ಟೆಯ ರಥಗಳು

ಕ. ಹೂವಿನ ರಥಗಳು

ಡ. ತೆಪ್ಪದ ರಥಗಳು

ಎಂದು ನಾಲ್ಕು ಮಾಧ್ಯಮದ ರಥಗಳನ್ನಾಗಿ ವಿಂಗಡಿಸಿಕೊಂಡು ಮಾಧ್ಯಮಗಳ ಒನ್ನೆಲೆಯಲ್ಲಿ ಅವುಗಳ ತಯಾರಿಕಾ ಪರಿಕರಗಳನ್ನು ಅಧ್ಯಯನ ಮಾಡೋಣ.

ಅ. ಕಟ್ಟುವ ರಥದ ಪರಿಕರಗಳು :

ಸಂಕೀರ್ಣ ಮಾಧ್ಯಮದ ರಥಗಳ ಪರಿಕರಗಳು

- ಕಟ್ಟುವ ರಥಗಳು
  - ದೊಡ್ಡ ಗಾತ್ರದ ಶಿಲೆಗಳು
  - ದೊಡ್ಡ ತೊಲೆಗಳು
  - ಆಧುನಿಕ ವಾಹನಗಳ ಬಿಡಿ ಭಾಗಗಳು
  - ಮರದ ಹಲಗೆಗಳು
  - ಬಿದಿರುಗಳು
  - ಕಾರ್ಡ್ ಬೋರ್ಡ್‌ಗಳು
  - ಬಿಗಿದು ಕಟ್ಟುವ ಸಾಮಗ್ರಿಗಳು
  - ಬಟ್ಟೆಗಳು
  - ತಟ್ಟುಗಳು ಅಥವಾ ನಾರಿನ ಚೀಲಗಳು
  - ಬಣ್ಣದ ಕಾಗದಗಳು
  - ಕ್ಯಾಲೆಂಡರ್‌ಗಳು
  - ಪ್ಲಾಸ್ಟಿಕ್ ಹಾಗೂ ಮಿಂಚುವ ವಸ್ತುಗಳು
  - ವಿವಿಧ ಎಲೆ, ಹೂ, ಹಣ್ಣುಗಳು
  - ಕಳಶ
  - ಬಣ್ಣದ ಕೊಡೆ
  - ಮರದ ದಿಮ್ಮೆ ಹಾಗೂ ರೆಂಬೆಗಳು
  - ಕಬ್ಬಿಣದ ಬಳೆಗಳು
  - ಹಗ್ಗಗಳು
- ತಟ್ಟಿಯ ರಥಗಳು
  - ಮರದ ದೊಡ್ಡ ಹಲಗೆಗಳು
  - ಮರದ ತೊಲೆಗಳು
  - ಕಬ್ಬಿಣ ಹಳಿಗಳು ಹಾಗೂ ನಟ್ ಬೋಲ್ಟ್‌ಗಳು
  - ಮರದ ತೆಳುವಾದ ಹಲಗೆಗಳು ಹಾಗೂ ಬಿದಿರುಗಳು
  - ಕಟ್ಟುವ ಸಾಮಗ್ರಿಗಳು
  - ಬಿದಿರಿನ ತಟ್ಟಿ ಅಥವಾ ಚಾಪೆ
  - ಪೇಸ್ಟಲ್‌ಗಳು
  - ವಿವಿಧ ವರ್ಣಗಳು
  - ಕುಂಚಗಳು
  - ಎಯರ್ ಬ್ರಶ್
  - ಪ್ಯಾಲೆಟ್
  - ಪಿಕ್ಚರ್ ವಾರ್ನಿಸ್
  - ಕಳಶ
  - ಫಲ ಪುಷ್ಪಾಲಂಕಾರ
- ಹೂವಿನ ರಥಗಳು
  - ಬಾಳೆದಿಂಡುಗಳು
  - ಮರದ ಹಲಗೆಗಳು
  - ಬಿಗಿದು ಕಟ್ಟುವ ಸಾಮಗ್ರಿಗಳು
  - ಮುಳ್ಳು ಕಡ್ಡಿಗಳು
  - ಬಣ್ಣದ ಕಾಗದಗಳು
  - ವಿವಿಧ ಪುಷ್ಪಗಳು
  - ವಿವಿಧ ಹಣ್ಣುಗಳು
  - ಉದ್ದವಾದ ಹಗ್ಗಗಳು
- ತೆಪ್ಪದ ರಥಗಳು
  - ಬಾಳೆದಿಂಡುಗಳು
  - ತೆಪ್ಪಗಳು
  - ವಿವಿಧ ಫಲ ಪುಷ್ಪಗಳು
  - ಕಳಶ
  - ಹಗ್ಗ
  - ವಿದ್ಯುತ್ ದೀಪಗಳು
  - ಜನರೇಟರ್
  - ಗ್ಯಾಸ್ ಅಥವಾ ಕಂದೀಲುಗಳು
  - ಪಣತೆಗಳು
  - ಧ್ವಜಗಳು

ಶಿಲಾ ಮಾಧ್ಯಮದ ರಥಗಳ ಪರಿಕರಗಳು

- ದೊಡ್ಡ ದೊಡ್ಡ ಶಿಲೆಗಳು
- ಛಾನಗಳು
- ಸುತ್ತಿಗೆಗಳು
- ಉಳಿಗಳು
- ಸ್ಯಾಂಡ್ ಪೇಪರ್‌ಗಳು
- ಪಾಲಿಶ್ ಮಶಿನ್
- ಸ್ಟೋನ್ ಕಟಿಂಗ್ ಮಶಿನ್
- ಪೇಪರಗಳು ಹಾಗೂ ಪೆನ್ಸಿಲ್‌ಗಳು
- ಅಳತೆಯ ಪಟ್ಟಿಗಳು
- ಚಾಕ್‌ಪೀಸ್‌ಗಳು
- ಡ್ರಿಲ್ಲಿಂಗ್ ಮಶಿನ್
- ಸಾಣೆ ಕಲ್ಲು
- ಕುಲುಮೆ

ಉತ್ಸವದ ಒಂದು ದಿನ ಮುಂಚಿತವಾಗಿ ಅಥವಾ ಅದೇ ದಿನದಂದು ಸಿದ್ಧಗೊಳ್ಳುವ ಈ ಕಟ್ಟುವ ರಥಗಳಿಗೆ ಅನೇಕ ಪರಿಕರಗಳು ಬೇಕಾಗುತ್ತವೆ.

೧. ದೊಡ್ಡ ಗಾತ್ರದ ಶಿಲೆಗಳು : ರಥವನ್ನು ಸಿದ್ಧಪಡಿಸಲು ಮೊದಲು ರಥದ ಚಕ್ರಗಳನ್ನು ಸಿದ್ಧಪಡಿಸುವ ಸಂದರ್ಭದಲ್ಲಿ ದೊಡ್ಡ ದೊಡ್ಡ ಶಿಲೆಗಳಿಂದ ಮಾಡಲಾದ ಚಕ್ರಗಳನ್ನು ಬಳಸುವರು.

೨. ದೊಡ್ಡ ತೊಲೆಗಳು : ರಥದ ಚಕ್ರಗಳಿಗೆ ಅಚ್ಚುಗಳನ್ನಾಗಿ ಮಾಡಲು ಹಾಗೂ ಆಧಾರಗಂಬಗಳನ್ನಾಗಿ ಮಾಡಲು ಮರದ ದೊಡ್ಡ ತೊಲೆಗಳನ್ನು ಉಪಯೋಗಿಸುವರು.

೩. ಆಧುನಿಕ ವಾಹನಗಳ ಬಿಡಿಭಾಗಗಳು : ಇತ್ತೀಚೆಗೆ ಕೆಲವು ಪ್ರದೇಶಗಳಲ್ಲಿ ವಾಹನಗಳ ಟಯರ್ ಗಾಲಿಗಳು, ಟ್ರ್ಯಾಕ್ಟರ್ ಹಾಗೂ ಟ್ರಕ್‌ಗಳಂತಹ ದೊಡ್ಡ ವಾಹನಗಳ ಹಿಂಬದಿಯ ದೊಡ್ಡ ಡಬ್ಬಿಗಳು ಹಾಗೂ ಕೆಲವೊಂದು ಪ್ರದೇಶಗಳಲ್ಲಿ ರಥದ ಅಡಿಪಾಯವನ್ನಾಗಿ ಆಧುನಿಕ ವಾಹನಗಳನ್ನೇ ಉಪಯೋಗಿಸುವುದನ್ನು ಕಾಣಬಹುದು.

೪. ಮರದ ಹಲಗೆಗಳು : ಅಡಿಪಾಯದ ಎಲ್ಲಸಾಮಗ್ರಿಗಳು ಸಿದ್ಧಗೊಂಡ ನಂತರ, ಅದರ ಮೇಲೆ ರಥವನ್ನು ಎತ್ತರವಾಗಿ ಕಟ್ಟುವುದಕ್ಕೆ ಮರದ ಉದ್ದವಾದ ಹಾಗೂ ಸಣ್ಣವಾಗಿರುವ ಮರದ ಹಲಗೆಗಳನ್ನು ಉಪಯೋಗಿಸುವರು.

೫. ಬಿದಿರುಗಳು : ಅಡಿಪಾಯ ಭಾಗದಿಂದ ಮುಂದುವರೆದ ರಥದ ಎತ್ತರವಾದ ಗೋಪುರ ಭಾಗವನ್ನು ಸುಂದರವಾಗಿ ನಿರ್ಮಿಸಲು ಹಾಗೂ ಮಂಟಪ ಭಾಗದಲ್ಲಿ ಮರದ ಹಲಗೆಗಳಿಗೆ ಆಧಾರವಾಗಿ ಅನೇಕ ಬಿದಿರುಗಳ ಕಂಬಗಳನ್ನು ಉಪಯೋಗಿಸುವರು. ಕೆಲವು ಕಡೆಗಳಲ್ಲಿ ಎಳೆ ಬಿದಿರುಗಳನ್ನು ಬೇರೆ ಬೇರೆ ಆಕಾರ ಪ್ರಕಾರಗಳಲ್ಲಿ ಮಣಿಸಿ, ವಿವಿಧ ವಿನ್ಯಾಸಗಳಲ್ಲಿ ಗೋಪುರ ರಚಿಸುವುದನ್ನು ಕಾಣಬಹುದು.

೬. ಕಾರ್ಡ್ ಬೋರ್ಡ್‌ಗಳು : ಆಧುನಿಕ ವಾಹನಗಳನ್ನು ಉಪಯೋಗಿಸಿ ಕಟ್ಟುವ ರಥ ನಿರ್ಮಾಣ ಮಾಡುವ ಸಂದರ್ಭಗಳಲ್ಲಿ ಮಂಟಪ ಭಾಗದ ರಚನೆಗೆ ಕಾರ್ಡ್‌ಬೋರ್ಡ್‌ಗಳನ್ನು ಉಪಯೋಗಿಸುವರು.

೭. ಬಿಗಿದು ಕಟ್ಟುವ ಸಾಮಗ್ರಿಗಳು : ಬೇರೆ ಬೇರೆ ವಿಧವಾದ ಹಲಗೆಗಳು, ಕಾರ್ಡ್‌ಬೋರ್ಡ್‌ಗಳು, ಬಿದಿರುಗಳು ಹೀಗೆ ಅನೇಕ ವಸ್ತುಗಳು ಸರಿಯಾಗಿ ಒಂದಕ್ಕೊಂದು ಹೊಂದಿಕೊಂಡು ಕೂಡಲು ಅವುಗಳನ್ನು ಕಟ್ಟಬೇಕಾಗುತ್ತದೆ. ಆದ್ದರಿಂದ ಬಿಗಿದು ಕಟ್ಟುವ ಸಾಮಗ್ರಿಗಳಾದ ಹಗ್ಗಗಳು, ಚರಿಗಳು, ಖಾತಿ, ಸುತುಳಿ ಇಂತಹ ನಾರಿನಿಂದ ತಯಾರಿಸಿದ ವಸ್ತುಗಳು, ಕಬ್ಬಿನ ರವದಿ , ಬಿದಿರುಗಳ ಎಳೆಯ ಕಡ್ಡಿಗಳು, ಬಾಳೆದಿಂಡಿನ ತೊಗಟೆಯ ಭಾಗ ಹಾಗೂ ಕೆಲವು ಸಂದರ್ಭಗಳಲ್ಲಿ ದಪ್ಪ ಹಾಗೂ ತೆಳುವಾದ ಸರಿಯಾಗಿ ಮಣಿಯುವಂತಹ ಕಬ್ಬಿಣದ ತಂತಿಗಳನ್ನು , ವಾಯರ್‌ಗಳನ್ನು ಹಾಗೂ ವಿವಿಧ ಪ್ರಕಾರದ ದಾರಗಳನ್ನು ಉಪಯೋಗಿಸುವರು.

೮. ಬಟ್ಟೆಗಳು : ರಥವು ಸುಂದರವಾಗಿ ಕಾಣಲು ಅನೇಕ ಅಂತಸ್ತುಗಳಲ್ಲಿ ನಿರ್ಮಿಸಲಾಗುವ ರಥಕ್ಕೆ ವಿವಿಧ ಬಣ್ಣದ ಬಟ್ಟೆಗಳನ್ನು ಬಳಸುವರು. ಪ್ರತಿಯೊಂದು ಅಂತಸ್ತುಗಳಲ್ಲಿ ಬೇರೆ ಬೇರೆ ಬಣ್ಣದ

ಬಟ್ಟೆಗಳು ಉಪಯೋಗವಾಗುವವು. ಇದಲ್ಲದೆ ಗೋಪುರ ಭಾಗದಲ್ಲಿ ಧ್ವಜಗಳನ್ನು ಹಾಗೂ ಪತಾಕೆಗಳನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ತಯಾರಿಸುವರು.

೯. ತಟ್ಟುಗಳು ಅಥವಾ ನಾರಿನ ಚೀಲಗಳು : ಮರದ ಹಲಗೆಗಳಿಂದ ಹಾಗೂ ಬಿದಿರುಗಳಿಂದ ಬಿಗಿದು ತಯಾರಿಸಲ್ಪಟ್ಟ ರಥದ ಭಾಗಗಳು ಹೊರಗೆ ಕಾಣದಂತೆ ಅವುಗಳ ಮೇಲೆ ಸುತ್ತಲು ತಟ್ಟು ಅಥವಾ ನಾರಿನ ಚೀಲಗಳನ್ನು ಉಪಯೋಗಿಸುವರು.

೧೦. ಬಣ್ಣದ ಕಾಗದಗಳು : ಮರದ ಹಲಗೆಗಳು ಹಾಗೂ ಬಿದಿರುಗಳಿಂದ ನಿರ್ಮಿತವಾದ ರಥದ ಮೇಲ್ಭಾಗದಲ್ಲಿ ಸುತ್ತಿದ ತಟ್ಟುಗಳು ಕಾಣದಂತೆ ಬಣ್ಣ ಬಣ್ಣದ ಬಟ್ಟೆಗಳಷ್ಟೇ ಅಲ್ಲದೇ ಬಣ್ಣ ಬಣ್ಣದ ಕಾಗದಗಳನ್ನು ಉಪಯೋಗಿಸುವರು. ಈ ಕಾಗದಗಳಿಂದ ವಿವಿಧ ನಕ್ಷೆಗಳನ್ನು ತಯಾರಿಸಿ ಪರಪರಿ ಹಾಗೂ ಪತಾಕೆಗಳನ್ನು ತಯಾರಿಸಲು ಬಣ್ಣದ ಕಾಗದಗಳು ಉಪಯೋಗವಾಗುವವು. ಈ ಬಣ್ಣದ ಕಾಗದಗಳಲ್ಲಿ ಮಿಂಚು ಕಾಗದಗಳು , ವಿನ್ಯಾಸಗಳ ಕಾಗದಗಳು, ಸಾದಾ ಕಾಗದಗಳು ಹೀಗೆ ಅನೇಕ ರೀತಿಯಲ್ಲಿ ದೊರೆಯುವ ಕಾಗದಗಳು ಉಪಯೋಗಕ್ಕೆ ಬರುವವು.

೧೧. ಕ್ಯಾಲೆಂಡರ್‌ಗಳು : ಕಟ್ಟುವ ರಥಗಳು ಪ್ರಾದೇಶಿಕವಾಗಿ ದೊರೆಯುವಂತಹ ವಿವಿಧ ಸಾಮಗ್ರಿಗಳಿಂದ ರಚಿಸಲ್ಪಟ್ಟಿರುವುದರಿಂದ ಅವುಗಳಲ್ಲಿ ಯಾವುದೇ ರೀತಿಯ ಉಬ್ಬುಶಿಲ್ಪ ವಿನ್ಯಾಸಗಳನ್ನು ಕಾಣಲಾಗುವುದಿಲ್ಲ. ಅನೇಕ ಅಂತಸ್ತುಗಳಲ್ಲಿ ನಿರ್ಮಾಣಗೊಂಡ ರಥಗಳು ಸುಂದರವಾಗಿ ಕಾಣಲು ಪ್ರತಿಯೊಂದು ಅಂತಸ್ತುಗಳ ಸುತ್ತಲೂ ಹಾಗೂ ಮಂಟಪ ಭಾಗದ ಸುತ್ತಲೂ ಸಾಲುಸಾಲಾಗಿ ಅನೇಕ ದೇವತೆಗಳ ಬಣ್ಣ ಬಣ್ಣದ ಕ್ಯಾಲೆಂಡರ್‌ಗಳನ್ನು ಉಪಯೋಗಿಸಲಾಗುವದು. ಕೆಲವು ದೊಡ್ಡ ಕ್ಯಾಲೆಂಡರ್‌ಗಳಿಗೆ ಕಟ್ಟುಗಳನ್ನು ಅಳವಡಿಸಲಾಗುವುದು.

೧೨. ಪ್ಲಾಸ್ಟಿಕ್ ಹಾಗೂ ಮಿಂಚುವ ವಸ್ತುಗಳು : ಕಟ್ಟುವ ರಥವನ್ನು ಸುಂದರಗೊಳಿಸಲು ಮಿಂಚು ಪೇಪರುಗಳನ್ನು ಉಪಯೋಗಿಸುವುದಲ್ಲದೆ, ಬಣ್ಣ ಬಣ್ಣದ ಮಿಂಚುವ ಜರಿಗಳು, ಪ್ಲಾಸ್ಟಿಕ್ ಮಾಧ್ಯಮದಲ್ಲಿ ತಯಾರಿಸಲ್ಪಟ್ಟ ಹೂವಿನ ಹಾರಗಳು ಹಾಗೂ ಪರಪರಿಯಂತಹ ಅನೇಕ ಅಲಂಕಾರಿಕ ಸಾಮಗ್ರಿಗಳನ್ನು ಉಪಯೋಗಿಸುವರು.

೧೩. ವಿವಿಧ ಎಲೆ ಹೂ ಹಣ್ಣುಗಳು : ರಥದ ಮಂಟಪದ ನಾಲ್ಕೂ ದಿಕ್ಕುಗಳಲ್ಲಿ ಕಟ್ಟಲು ಬಾಳೆ ದಿಂಡುಗಳನ್ನು ಉಪಯೋಗಿಸುವರು. ಮಂಟಪ ಭಾಗದ ಮೇಲೆ ಕಬ್ಬು ಹಾಗೂ ತೆಂಗಿನ ಗರಿಗಳಿಂದ ಅಲಂಕರಿಸುವರು. ಕೆಳಭಾಗದ ಅಂತಸ್ತುಗಳ ಅಂಚುಗಳಲ್ಲಿ ಮಾವಿನ ಟೊಳಲುಗಳನ್ನು ದಾರದಿಂದ ಪೋಣಿಸಿ ನೇತು ಹಾಕುವರು. ಅನೇಕ ಹೂವಿನ ಹಾರಗಳನ್ನು ರಥದ ಎಲ್ಲ ಬದಿಗಳಲ್ಲಿ ಮೇಲಿನಿಂದ ಕೆಳಗಿನವರೆಗೂ ನೇತುಬಿಡುವರು. ಅಲ್ಲಲ್ಲಿ ಬಿಡಿ ಹೂಗಳನ್ನು ಅಂಟಿಸುವರು. ಇವುಗಳಲ್ಲದೆ ಲಿಂಬೆ ಹಣ್ಣು , ತೆಂಗಿನ ಕಾಯಿ, ಬಾಳೆಹಣ್ಣು ಹಾಗೂ ಬೂದುಗುಂಬಳಕಾಯಿ ಹೀಗೆ ಅನೇಕ ವಿಧದ ಕಾಯಿ ಹಣ್ಣುಗಳನ್ನು ಉಪಯೋಗಿಸುವರು.

೧೪. ಕಳಶ : ರಥವು ಪೂರ್ಣವಾಗಿ ಅಲಂಕಾರಗೊಂಡ ನಂತರ ಉತ್ಸವದ ಸಂಭರ್ಧದಲ್ಲಿ ರಥದ ಗೋಪುರ ಭಾಗದಲ್ಲಿ ಹೊಂದಿಸಲು ಕಳಶವನ್ನು ಉಪಯೋಗಿಸುವರು.

೧೫. ಬಣ್ಣದ ಕೊಡೆ : ಕಳಶಕ್ಕೆ ನೆರಳು ಬೀಳುವ ಹಾಗೆ ಬಣ್ಣದ ಕೊಡೆಯನ್ನು

ಉಪಯೋಗಿಸುವರು. ಕೆಲವೊಂದು ರಥಗಳಿಗೆ ಅಲಂಕಾರಕ್ಕಾಗಿ ವಿವಿಧ ಬಣ್ಣದ ಕೊಡೆಗಳನ್ನು ಉಪಯೋಗಿಸುವರು.

೧೬. ಮರದ ದಿಮ್ಮೆ ಹಾಗೂ ರೆಂಬೆಗಳು : ರಥೋತ್ಸವ ಜರುಗುವ ಸಂದರ್ಭದಲ್ಲಿ ರಥ ಚಲಿಸುವ ದಿಕ್ಕನ್ನು ಬದಲಾಯಿಸಲು ಅನುಕೂಲವಾಗುವಂತೆ ಮರದ ದಿಮ್ಮೆ ಹಾಗೂ ರೆಂಬೆಗಳನ್ನು ಉಪಯೋಗಿಸಲಾಗುವದು.

೧೭. ಕಬ್ಬಿಣದ ಬಳೆಗಳು : ರಥವನ್ನು ಎಳೆಯಲು ಅನುಕೂಲವಾಗುವಂತೆ ಹಗ್ಗವನ್ನು ಬಿಗಿಯಲು ಮುಂಭಾಗದ ಅಚ್ಚಿಗೆ ಗಾಲಿಗಳನ್ನು ಜೋಡಿಸುವ ಮುಂಚೆಯೇ ಅಚ್ಚುಗಳಿಗೆ ಎರಡು ಕಬ್ಬಿಣದ ಬಳೆಗಳನ್ನು ಹಾಕುತ್ತಾರೆ. ಕೆಲವು ರಥಗಳಲ್ಲಿ ನಟ್ ಬೋಲ್ಟ್‌ಗಳಿಂದ ಬಳೆಗಳನ್ನು ಬಿಗಿದಿರುವುದನ್ನು ಕಾಣಬಹುದು.

೧೮. ಹಗ್ಗಗಳು : ರಥವನ್ನು ಎಳೆಯಲು ದಪ್ಪವಾದ ಹಗ್ಗಗಳನ್ನು ಉಪಯೋಗಿಸುವರು. ಇವು ನಾರಿನಿಂದ ತಯಾರಾದ ಹಗ್ಗಗಳಿರಬಹುದು ಅಥವಾ ಪ್ಲಾಸ್ಟಿಕ್ ವಾಯರ್‌ಗಳನ್ನೂ ಬಳಸಬಹುದು.

ಬ. ತಟ್ಟಿಯ ರಥಗಳ ಪರಿಕರಗಳು : ಈ ರಥಗಳೂ ಸಹ ಕಟ್ಟುವ ರಥಗಳಂತೆಯೇ ಸಿದ್ಧವಾದರೂ ಸಹ ಈ ರಥ ನಿರ್ಮಾಣದಲ್ಲಿ ಬಳಸುವ ಸಾಮಗ್ರಿಗಳು ಬೇರೆಯಾಗಿವೆ.

೧. ಮರದ ದೊಡ್ಡ ಹಲಗೆಗಳು : ಇವುಗಳನ್ನು ರಥಗಳ ಗಾಲಿಗಳನ್ನು ನಿರ್ಮಿಸುವುದಕ್ಕೆ ಬಳಸಲಾಗುವುದು.

೨. ಮರದ ತೊಲೆಗಳು : ಇವುಗಳನ್ನು ರಥದ ಎರಡು ಅಚ್ಚುಗಳು ಆಧಾರ ತೊಲೆಗಳು ಹಾಗೂ ಓಟಿಗಳನ್ನು ನಿರ್ಮಿಸುವುದಕ್ಕೆ ಉಪಯೋಗಿಸಲಾಗುವುದು.

೩. ಕಬ್ಬಿಣದ ಹಳಿಗಳು ಹಾಗೂ ನಟ್ ಬೋಲ್ಟ್‌ಗಳು : ಮರದ ಹಲಗೆಗಳಿಂದ ರಥಗಳ ಚಕ್ರಗಳನ್ನು ತಯಾರು ಮಾಡಲು ಅಚ್ಚು ಆಧಾರ ತೊಲೆ ಹಾಗೂ ಓಟಿಗಳನ್ನು ಸರಿಯಾಗಿ ಸರಿದಾಡದಂತೆ ಹೊಂದಿಸಲು ಕಬ್ಬಿಣದ ಹಳಿಗಳು ಹಾಗೂ ನಟ್ ಬೋಲ್ಟ್‌ಗಳನ್ನು ಉಪಯೋಗಿಸಲಾಗುವುದು.

೪. ಮರದ ತೆಳುವಾದ ಹಲಗೆಗಳು ಹಾಗೂ ಬಿದಿರುಗಳು : ಅಡಿಪಾಯದ ನಂತರ ನಿರ್ಮಾಣಗೊಳ್ಳುವ ರಥದ ಭಾಗಗಳಲ್ಲಿ ಅಂತಸ್ತುಗಳನ್ನು ನಿರ್ಮಿಸಲು ಮರದ ತೆಳುವಾದ ಹಾಗೂ ಉದ್ದವಾದ ಹಲಗೆಗಳನ್ನು ಉಪಯೋಗಿಸುವರು. ಮೇಲೆ ವಿಮಾನ, ಗೋಪುರ ಭಾಗಗಳನ್ನು ನಿರ್ಮಿಸಲು ಎಳೆಬಿದಿರು ಹಾಗೂ ಬಲಿತ ಬಿದಿರುಗಳನ್ನು ಉಪಯೋಗಿಸುವರು.

೫. ಕಟ್ಟುವ ಸಾಮಗ್ರಿಗಳು : ಹಗ್ಗ, ಚರಿ, ದಾರ, ಖಾತಿ, ಪ್ಲಾಸ್ಟಿಕ್ ವಾಯರ್ ಅಲ್ಲದೆ ದಪ್ಪ ಹಾಗೂ ಸಣ್ಣ ತಂತಿಗಳು ಮತ್ತು ತೆಂಗಿನ ನಾರಿನಂತಹ ವಸ್ತುಗಳನ್ನು ಬಿಗಿದು ಕಟ್ಟಲು ಉಪಯೋಗಿಸುವರು.

೬. ಬಿದಿರಿನ ತಟ್ಟಿ ಅಥವಾ ಚಾಪೆ : ಚೌಕಾಕಾರಗಳಲ್ಲಿರುವ ವಿವಿಧ ಅಳತೆಗಳಲ್ಲಿ ದೊರೆಯುವ ಬಿದಿರಿನ ತಟ್ಟಿ ಅಥವಾ ಚಾಪೆಗಳನ್ನು ಮರದ ಅನೇಕ ಹಲಗೆಗಳು ಹಾಗೂ ಬಿದಿರುಗಳಿಂದ ನಿರ್ಮಿಸಿದ ಸಂಪೂರ್ಣ ರಥಕ್ಕೆ, ಹಲಗೆಗಳಾಗಲಿ ಅಥವಾ ಬಿದಿರುಗಳಾಗಲಿ ಹೊರಗೆ ಕಾಣದಂತೆ ಹೊದಿಸುವುದಕ್ಕೆ ಉಪಯೋಗ ಮಾಡುವರು. ತಟ್ಟಿಯ ರಥಗಳಲ್ಲಿ ಬಿದಿರಿನ ತಟ್ಟಿಗಳ ಉಪಯೋಗವು ಹೆಚ್ಚಾಗಿ ಕಂಡುಬರುತ್ತದೆ.

೭. ಪೇಸ್ಟಲ್‌ಗಳು : ಬಿದಿರಿನ ತಟ್ಟಿಗಳಿಗೆ ಚಿತ್ರರಚನೆ ಮಾಡುವ ಸಂದರ್ಭದಲ್ಲಿ ಅನೇಕ ದೇವತೆಗಳ ಪೌರಾಣಿಕ ಹಿನ್ನೆಲೆಯ ವಿವಿಧ ರೇಖಾ ಚಿತ್ರಗಳನ್ನು ಬರೆಯಲು ತಟ್ಟಿಗಳ ಮೇಲೆ ಸರಾಗವಾಗಿ ಮೂಡಬಲ್ಲ ಡ್ರೈ ಮತ್ತು ಆಯಿಲ್ ಪೇಸ್ಟಲ್‌ಗಳನ್ನು ಬಳಸುವರು.

೮. ವಿವಿಧ ವರ್ಣಗಳು : ರಥದ ಸುತ್ತಲೂ ಹೊಂದಿಸಿದ ಚಾಪೆಗಳಲ್ಲಿ ಸುಂದರವಾದ ಚಿತ್ರರಚನೆಯನ್ನು ಮಾಡಲು ವಿವಿಧ ವರ್ಣಗಳನ್ನು ಬಳಸುವರು. ತಟ್ಟಿ ರಥಗಳಲ್ಲಿ ರಥದ ಅಲಂಕಾರ ಮಾಡುವಲ್ಲಿ ವರ್ಣಗಳು ತುಂಬಾ ಉಪಯುಕ್ತತೆಯನ್ನು ಹೊಂದಿವೆ. ಹೆಚ್ಚಾಗಿ ವಾರ್ನಿಸ್ ಪೇಂಟ್‌ಗಳನ್ನು ಬಳಸಲಾಗುವುದು.

೯. ಕುಂಚಗಳು : ತಟ್ಟಿಗಳ ಮೇಲೆ ಅನೇಕ ದೇವತೆಗಳ, ಪುರಾಣ ಪುಣ್ಯ ಕಥೆಗಳ ಚಿತ್ರರಚನೆಯನ್ನು ಮಾಡಲು ಬೇರೆ ಬೇರೆ ರೀತಿಯ ಕುಂಚಗಳು ಉಪಯೋಗಿಸಲ್ಪಡುತ್ತವೆ.

ಅವುಗಳಲ್ಲಿ ಫ್ಲ್ಯಾಟ ಬ್ರಶ್ , ರೌಂಡ್ ಬ್ರಶ್ ಹಾಗೂ ಪಾಯಿಂಟ್ ಬ್ರಶ್ ಎಂಬ ವಿವಿಧ ಕುಂಚಗಳು ವಿವಿಧ ಅಳತೆಗಳಲ್ಲಿ ದೊರೆಯುತ್ತವೆ. ತಟ್ಟಿಗಳ ಮೇಲ್ಮೈಗೆ ವರ್ಣಲೇಪನ ಮಾಡಲು ಫ್ಲ್ಯಾಟ್ ಬ್ರಶ್‌ಗಳು ರೇಖಾ ಚಿತ್ರಗಳಲ್ಲಿ ಬಣ್ಣ ತುಂಬಲು ರೌಂಡ್ ಬ್ರಶ್‌ಗಳು ಹಾಗೂ ಸೂಕ್ಷ್ಮ ವಿನ್ಯಾಸಗಳಿಗೆ ಮತ್ತು ಚಿತ್ರಗಳಿಗೆ ಅಂತಿಮ ರೂಪ ಕೊಡಲು ಪಾಯಿಂಟ್ ಬ್ರಶ್‌ಗಳ ಬಳಕೆಯಾಗುತ್ತದೆ.

೧೦. ಏಯರ್ ಬ್ರಶ್ : ಇದಕ್ಕೆ ಸ್ಪ್ರೇ ಗನ್ ಎಂದೂ ಕರೆಯುವುದುಂಟು. ಕೆಲವೊಂದು ಸಂದರ್ಭಗಳಲ್ಲಿ ವರ್ಣಗಳನ್ನು ಬ್ರಶ್‌ಗಳಿಂದ ಲೇಪಿಸುವಲ್ಲಿ , ದಪ್ಪ - ತೆಳುವಾಗಿ ಹಾಗೂ ಬ್ರಶ್‌ನ ಗೆರೆಗಳು ಚಿತ್ರಗಳಲ್ಲಿ ಕಂಡು ಬರುವ ಸಾಧ್ಯತೆ ಇದ್ದಾಗ, ಬಣ್ಣಗಳು ಸರಿಯಾಗಿ ತಟ್ಟಿಗಳ ಮೇಲೆ ಲೇಪನಗೊಳ್ಳಲು ಏಯರ್ ಬ್ರಶ್‌ಗಳನ್ನು ಉಪಯೋಗಿಸುವರು. ಅತೀ ಶೀಘ್ರದಲ್ಲಿ ವರ್ಣಲೇಪನ ಮಾಡಲು ಏಯರ್ ಬ್ರಶ್‌ಗಳು ತುಂಬಾ ಸಹಾಯಕಾರಿಯಾಗಿವೆ.

೧೧. ಪ್ಯಾಲೆಟ್ : ವರ್ಣಗಾರಿಕೆಯನ್ನು ಮಾಡುವ ಸಂದರ್ಭದಲ್ಲಿ ಎರಡು ವರ್ಣಗಳನ್ನು ಕೂಡಿಸಿ ಮತ್ತೊಂದು ವರ್ಣವನ್ನು ಸಿದ್ಧಪಡಿಸಲು ಒಂದು ಸಾಮಗ್ರಿಯನ್ನು ಉಪಯೋಗಿಸುವರು. ಇದಕ್ಕೆ ಪ್ಯಾಲೆಟ್ ಎಂದು ಕರೆಯುವರು. ಪ್ಯಾಲೆಟ್‌ಗಳು ಚೌಕಾಕಾರವಾಗಿ, ಆಯತಾಕಾರವಾಗಿ ಹಾಗೂ ವರ್ತುಳಾಕಾರವಾಗಿ ಕಂಡುಬರುತ್ತವೆ. ಪ್ಯಾಲೆಟ್‌ಗಳಲ್ಲಿ ವಿವಿಧ ವರ್ಣಗಳನ್ನು ಹಾಕುವ ಸಣ್ಣ ಸಣ್ಣ ಕುಳಿಗಳಿರುತ್ತವೆ.

೧೨. ಪಿಕ್ಚರ್ ವಾರ್ನಿಸ್ : ತಟ್ಟಿಗಳ ಮೇಲೆ ಚಿತ್ರರಚನೆಯು ಪೂರ್ಣಗೊಂಡ ನಂತರ ವರ್ಣಗಳು ಗಾಳಿ, ಬಿಸಿಲು, ಮಳೆಗೆ ಕಿತ್ತು ಅಥವಾ ಅಳುಕಿ ಹೋಗದಂತೆ ಪಿಕ್ಚರ್ ವಾರ್ನಿಸ್ ಅಥವಾ

ಟ್ರಾನ್ಸ್‌ಪರಂಟ್ ವಾರ್ನಿಸ್‌ನ್ನು ಉಪಯೋಗಿಸುವರು.

೧೩. ಕಳಶ : ತಟ್ಟಿಗಳ ಮೇಲೆ ಚಿತ್ರರಚನೆಯು ಪೂರ್ಣಗೊಂಡ ನಂತರ ಕಳಶವನ್ನು ಅಳವಡಿಸುವರು. ಈ ರಥಕ್ಕೆ ಯಾವುದೇ ರೀತಿಯ ಪತಾಕೆಗಳು ಕಂಡುಬರುವುದಿಲ್ಲ.

೧೪. ಫಲ ಪುಷ್ಪಾಲಂಕಾರ : ರಥೋತ್ಸವದ ಸಂದರ್ಭದಲ್ಲಿ ವಿವಿಧ ರೀತಿಯ ಹೂವಿನ ಹಾರಗಳನ್ನು ಅನೇಕ ವಿನ್ಯಾಸಗಳಲ್ಲಿ ರಥಕ್ಕೆ ನೇತು ಹಾಕುವರು. ಲಿಂಬೆ ಹಣ್ಣು, ಬಾಳೆ ಹಣ್ಣು, ತೆಂಗಿನ ಕಾಯಿಗಳು ಬಾಳೆದಿಂಡು, ಹಾಗೂ ತೆಂಗಿನ ಗರಿ ಹೀಗೆ ಪ್ರಾದೇಶಿಕವಾಗಿ ದೊರೆಯುವಂತಹ ಫಲ ಪುಷ್ಪಗಳನ್ನು ರಥಾಲಂಕಾರ ಮಾಡಲು ಉಪಯೋಗಿಸುವರು.

ಕ. ಹೂವಿನ ರಥಗಳ ಪರಿಕರಗಳು :

೧. ಬಾಳೆ ದಿಂಡುಗಳು : ಹೂವಿನ ರಥದ ನಿರ್ಮಾಣ ಹಂತದಲ್ಲಿ ರಥದ ಮಂಟಪ ಭಾಗವನ್ನು ಸಿದ್ಧಪಡಿಸಲು ಅನೇಕ ಬಾಳೆದಿಂಡುಗಳನ್ನು ಉಪಯೋಗಿಸುವರು. ದೊಡ್ಡ ದಿಂಡುಗಳನ್ನು ಹಾಗೂ ಚಿಕ್ಕ ದಿಂಡುಗಳನ್ನು ಉಪಯೋಗಿಸಿ ಪ್ರಮಾಣಬದ್ಧವಾದ ರಥ ನಿರ್ಮಾಣ ಮಾಡುವರು.

೨. ಮರದ ಹಲಗೆಗಳು : ರಥಕ್ಕೆ ಚಕ್ರಗಳನ್ನು ತಯಾರಿಸಲು ಚಿಕ್ಕ ಗಾತ್ರದ ಮರದ ಹಲಗೆಗಳು ಉಪಯೋಗಿಸಲ್ಪಡುತ್ತವೆ. ತೊಲೆಗಳು ಹಾಗೂ ಆಧಾರ ಕಂಬಗಳು ಚಿಕ್ಕ ಗಾತ್ರದ ಮರದ ಹಲಗೆಗಳಿಂದ ತಯಾರಿಸಲ್ಪಡುತ್ತವೆ.

೩. ಬಿಗಿದು ಕಟ್ಟುವ ಸಾಮಗ್ರಿಗಳು : ಬಾಳೆ ದಿಂಡುಗಳನ್ನು ಚೆನ್ನಾಗಿ ಒಂದನ್ನೊಂದು ಹೊಂದಿಸಿ ಬಿಗಿದು ಕಟ್ಟಲು ನಾರಿನಿಂದ ತಯಾರಾದ ಚರಿ, ಸುತುಳಿ, ಖಾತಿ, ಹಗ್ಗ ಹಾಗೂ ಪ್ಲಾಸ್ಟಿಕ್‌ದ ವಯರ್‌ಗಳು ಅಥವಾ ತೆಳುವಾದ ತಂತಿಗಳನ್ನು ಉಪಯೋಗಿಸುವುದು ಕಂಡುಬರುತ್ತದೆ.

೪. ಮುಳ್ಳು ಕಡ್ಡಿಗಳು : ಬಾಳೆ ದಿಂಡುಗಳ ಮೇಲೆ ಸಾಲುಸಾಲಾಗಿ ಮುಳ್ಳುಗಳನ್ನು ಚುಚ್ಚಲು ಹೆಚ್ಚು ಉದ್ದವಿರುವ ಮುಳ್ಳುಗಳುಳ್ಳ ಮುಳ್ಳುಕಡ್ಡಿಗಳನ್ನು ಉಪಯೋಗಿಸುವರು.

೫. ಬಣ್ಣದ ಕಾಗದಗಳು : ಸಣ್ಣ ಸಣ್ಣ ಬಿದಿರು ಕಡ್ಡಿಗಳಿಗೆ ಅಂಟಿಸಿ ಪತಾಕೆಗಳನ್ನು ಮಾಡಲು, ಬಣ್ಣದ ಕಾಗದಗಳನ್ನು ಉಪಯೋಗಿಸುವರು.

೬. ವಿವಿಧ ಪುಷ್ಪಗಳು : ಬಾಳೆ ದಿಂಡುಗಳ ಮೇಲೆ ಸಾಲುಸಾಲಾಗಿ ಚುಚ್ಚಲಾದ ಮುಳ್ಳುಗಳಿಗೆ ಬಿಡಿ ಹೂಗಳನ್ನು ಚುಚ್ಚಲು, ವಿವಿಧ ಹೂವಿನ ಹಾರಗಳನ್ನು ಅನೇಕ ವಿನ್ಯಾಸಗಳಲ್ಲಿ ನೇತು ಹಾಕಲು ಮತ್ತು ಇಡೀ ರಥವು ಹೂಗಳಿಂದಲೇ ನಿರ್ಮಾಣಗೊಳ್ಳಲು ವಿವಿಧ ಪುಷ್ಪಗಳು ಉಪಯೋಗವಾಗುವವು.

೭. ವಿವಿಧ ಹಣ್ಣುಗಳು : ರಥಾಲಂಕಾರ ಸಮಯದಲ್ಲಿ ಹಾಗೂ ಪೂಜಾ ವಿಧಾನಗಳಲ್ಲಿ ವಿವಿಧ ಹಣ್ಣುಗಳು ಬಳಕೆಗೊಳ್ಳುವವು.

೮. ಉದ್ದವಾದ ಹಗ್ಗಗಳು : ರಥವನ್ನು ಎಳೆಯಲು ಅನುಕೂಲವಾಗುವಂತಹ ಹಗ್ಗಗಳನ್ನು ರಥೋತ್ಸವದ ಸಂದರ್ಭದಲ್ಲಿ ಉಪಯೋಗಿಸುವರು.

ಡ. ತೆಪ್ಪದ ರಥದ ಪರಿಕರಗಳು :

೧. ಬಾಳೆ ದಿಂಡುಗಳು : ರಥೋತ್ಸವಗಳು ದೇವಸ್ಥಾನಗಳ ಮುಂದೆ ನಿರ್ಮಾಣವಾದ ಪುಷ್ಕರಣಿಗಳಲ್ಲಿ ಅಥವಾ ದೇವಸ್ಥಾನದ ಬದಿಗಿರುವ ಕೆರೆಗಳಲ್ಲಿ, ಕೊಳಗಳಲ್ಲಿ ಜರುಗುವುದರಿಂದ ನೀರಿನಲ್ಲಿ ಮುಳುಗುವಂತಹ ವ್ಸ್ತುಗಳನ್ನು ಬಳಸುವರು. ಬಾಳೆ ದಿಂಡುಗಳು ನೀರಿನಲ್ಲಿ ತೇಲುವುದರಿಂದ , ರಥ ನಿರ್ಮಾಣದ ಹಂತದಲ್ಲಿ ಇವುಗಳ ಬಳಕೆಯಾಗುತ್ತದೆ.

೨. ತೆಪ್ಪಗಳು : ಕೆಲವು ರಥಗಳನ್ನು ನೀರಲ್ಲಿ ತೇಲಬಲ್ಲ ತೆಪ್ಪಗಳನ್ನು ಉಪಯೋಗಿಸಿ ಅದರ ಮೇಲೆ ಬಾಳೆ ದಿಂಡುಗಳಿಂದ ಮಂಟಪ ಭಾಗದ ನಿರ್ಮಾಣವನ್ನು ಮಾಡುವರು. ಅಡಿಪಾಯವು ಭದ್ರವಾಗಿರಲು ನೀರು ರಥದಲ್ಲಿ ಬರದಂತೆ ಸಂರಕ್ಷಣೆಯ ದೃಷ್ಟಿಯಿಂದ ತೆಪ್ಪಗಳನ್ನು ಬಳಸಲಾಗುವುದು.

೩. ವಿವಿಧ ಫಲ ಪುಷ್ಪಗಳು : ಬಾಳೆ ದಿಂಡುಗಳಿಂದ ಮಂಟಪವನ್ನು ಸಿದ್ಧಗೊಳಿಸಿದ ನಂತರ ವಿವಿಧ ವಿನ್ಯಾಸಗಳಲ್ಲಿ ಹೂವಿನ ಹಾರಗಳನ್ನು ನೇತು ಹಾಕುವರು. ಅಲ್ಲಲ್ಲಿ ಬಿಡಿ ಹೂಗಳನ್ನು ಮುಳ್ಳಿನಿಂದ ಚುಚ್ಚುವರು.

ಲಿಂಬೆ ಹಣ್ಣು , ಪೇರು ಹಣ್ಣು , ತೆಂಗಿನ ಕಾಯಿಗಳಂತಹ ಅನೇಕ ಫಲಗಳನ್ನು ರಥಗಳ ಅಲಂಕಾರಕ್ಕಾಗಿ ಹಾಗೂ ಪೂಜೆಯ ಸಂದರ್ಭದಲ್ಲಿ ಉಪಯೋಗಿಸುವರು.

೪. ಕಳಶ : ಹೂವಿನಿಂದ ಅಲಂಕೃತವಾದ ರಥಕ್ಕೆ ಕಳಶವನ್ನು ಇಡುವರು.

೫. ಹಗ್ಗ : ನೀರಿನಲ್ಲಿರುವ ರಥವು ಗಾಳಿಗೆ ತೇಲಿ ಹೋಗದಂತೆ ತಡೆಯಲು ಉದ್ದವಾದ ಹಗ್ಗಗಳನ್ನು ಬಳಸುವರು.

೬. ವಿದ್ಯುತ್ ದೀಪಗಳು : ರಾತ್ರಿ ಸಮಯದಲ್ಲಿ ರಥವು ಸುಂದರವಾಗಿ ಕಂಗೊಳಿಸಲು ಸಣ್ಣ ಸಣ್ಣ ವಿದ್ಯುತ್ ದೀಪಗಳನ್ನು ಸಾಲುಸಾಲಾಗಿ ಪೋಣಿಸಿದ ಸರಗಳನ್ನು ಉಪಯೋಗಿಸುವರು. ಬೆಳಕು ಹೆಚ್ಚು ಬೀಳಲು ಕೆಲವು ದೊಡ್ಡ ವಿದ್ಯುತ್ ದೀಪಗಳನ್ನು ಬಳಸುವರು. ಅವುಗಳಲ್ಲಿ ಕೆಲವು ಬಣ್ಣ ಬಣ್ಣದ ದೀಪಗಳೂ ಇರುತ್ತವೆ.

೭. ಜನರೇಟರ್ : ವಿದ್ಯುತ್ ದೀಪಗಳು ಉರಿಯುವಂತೆ ಮಾಡಲು ಅನುಕೂಲವಾಗುವಂತೆ ಜನರೇಟರ್ ಸಹಾಯವನ್ನು ಪಡೆಯುವರು.

೮. ಗ್ಯಾಸ್ ಅಥವಾ ಕಂದೀಲ್‌ಗಳು : ಒಂದು ವೇಳೆ ವಿದ್ಯುತ್ ಶಕ್ತಿಯ ಅಭಾವ ಉಂಟಾದಾಗ ಗ್ಯಾಸ್ ಅಥವಾ ಕಂದೀಲ್‌ಗಳು ಉಪಯೋಗವಾಗುವುವು.

೯. ಪಣತೆಗಳು : ತೆಪ್ಪದ ರಥದ ಸುತ್ತಲೂ, ಕಮಾನುಗಳಲ್ಲಿ ಮತ್ತು ಅಡಿಯ ಭಾಗದಲ್ಲಿ ಸಾಲುಸಾಲಾಗಿ ದೀಪದ ಪಣತೆಗಳನ್ನು ಅಲಂಕಾರಕ್ಕಾಗಿ ಬಳಸುವರು.

೧೦. ಧ್ವಜಗಳು : ಕಳಶದ ಭಾಗದಲ್ಲಿ ಸುಂದರವಾಗಿ ಕಾಣಲು ಬಣ್ಣ ಬಣ್ಣದ ಬಟ್ಟೆಗಳ ಅಥವಾ ಬಣ್ಣ ಬಣ್ಣದ ಕಾಗದಗಳ ಪತಾಕೆಗಳು ಹಾಗೂ ಧ್ವಜಗಳನ್ನು ಉಪಯೋಗಿಸುವರು.

IV. ಶಿಲಾ ಮಾಧ್ಯಮದ ರಥಗಳ ಪರಿಕರಗಳು :

ವಾಸ್ತುಶಿಲ್ಪಕಲೆಯ ಅವಿಭಾಜ್ಯ ಅಂಗವಾಗಿ ನಿಂತಿರುವ ಶಿಲಾ ಮಾಧ್ಯಮದ ರಥಗಳನ್ನು ತಯಾರಿಸಲು ಪೂರ್ವಜರು ವಿವಿಧ ರೀತಿಯ ಪರಿಕರಗಳನ್ನು ಉಪಯೋಗಿಸುವರು. ಮೂರ್ತಿ ಶಿಲ್ಪಕಾರರು ಮೂರ್ತಿಗಳನ್ನು ರಚಿಸಲು ಬಳಸುವಂತಹ ಪರಿಕರಗಳೇ ಶಿಲೆಯ ರಥಗಳ ತಯಾರಿಕೆಯಲ್ಲಿ ಉಪಯೋಗಿಸಲ್ಪಡುವವು. ಹೀಗೆ ಉಪಯೋಗವಾಗುವ ಪರಿಕರಗಳ ಹೆಸರುಗಳು ಹಾಗೂ ಅವುಗಳ ಉಪಯೋಗಗಳನ್ನು ತಿಳಿಯುವಾ.

೧. ದೊಡ್ಡ ದೊಡ್ಡ ಶಿಲೆಗಳು : ಶಿಲಾ ರಥಗಳ ನಿರ್ಮಾಣದ ಹಂತದಲ್ಲಿ ರಥದ ಎಲ್ಲ ಭಾಗಗಳಿಗೆ ಶಿಲೆಗಳು ಉಪಯೋಗಿಸಲ್ಪಡುತ್ತವೆ. ಆದ್ದರಿಂದ ದೊಡ್ಡ ಪ್ರಮಾಣದ ಶಿಲೆಯ ಬಂಡೆಗಳನ್ನು ಆಯ್ಕೆ ಮಾಡುವರು.

೨. ಛಾಣಗಳು : ದೊಡ್ಡದೊಡ್ಡ ಶಿಲೆಗಳನ್ನು ವಿವಿಧ ಅಳತೆಗಳಲ್ಲಿ ಕತ್ತರಿಸಲು (ಒಡೆಯಲು) ಛಾಣಗಳು ಉಪಯೋಗವಾಗುವವು. ಅವುಗಳಲ್ಲಿ ಅನೇಕ ಪ್ರಕಾರದ ಛಾಣಗಳಿಗೆ ಆರು ಇಂಚುಗಳಿಂದ ಸುಮಾರು ಒಂದು ಫೂಟ್ ಉದ್ದವಾದ ಚಪ್ಪಟೆಯಾಕಾರದ ಛಾಣಗಳನ್ನು ಕಲ್ಲು ಕತ್ತರಿಸಲು ಉಪಯೋಗಿಸುವರು.

೩. ಸುತ್ತಿಗೆಗಳು : ಶಿಲೆಗಳನ್ನು ಒಡೆಯಲು ಹಾಗೂ ಶಿಲೆಗಳ ಮೇಲೆ ಶಿಲ್ಪ ರಚನೆಯನ್ನು ಮಾಡಲು, ಉಳಿಗಳಿಗೆ ಸರಿಯಾದ ಹಾಗೂ ಹದವಾದ ಪೆಟ್ಟು ಕೊಡಲು ಅನೇಕ ಸುತ್ತಿಗೆಗಳನ್ನು ಉಪಯೋಗಿಸುವರು. ದೊಡ್ಡ ಸುತ್ತಿಗೆಗಳು ಬಿರುಸಾದ ದೊಡ್ಡ ಕಲ್ಲುಗಳ ಕೆತ್ತನೆ ಕೆಲಸದಲ್ಲಿ ಉಪಯೋಗಿಸಲ್ಪಟ್ಟರೆ , ಸಣ್ಣ ಸುತ್ತಿಗೆಗಳು ಸಣ್ಣ ಸಣ್ಣ ಕಲ್ಲುಗಳಲ್ಲಿ ಕೆತ್ತನೆ ಕೆಲಸವನ್ನು ಮಾಡಲು ಉಪಯೋಗವಾಗುವುವು.

೪. ಉಳಿಗಳು : ಕಲ್ಲು ಕೆತ್ತನೆ ಮಾಡಲು ಅನೇಕ ವಿಧಧ ಉಳಿಗಳನ್ನು ಉಪಯೋಗ ಮಾಡುವರು. ಬೇರೆ ಬೇರೆ ವಿನ್ಯಾಸಗಳನ್ನು ರಚಿಸಲು ಬೇರೆ ಬೇರೆ ಆಕಾರ ಪ್ರಕಾರಗಳಲ್ಲಿರುವ ಉಳಿಗಳು ಬಳಕೆಗೊಳ್ಳುವವು. ಈ ಎಲ್ಲ ಉಳಿಗಳನ್ನು ಉಕ್ಕಿನಿಂದ ತಯಾರಿಸಿರುತ್ತಾರೆ.

ಚಪ್ಪಟೆಯಾಕಾರದ ಉಳಿಗಳು ಸುಮಾರು ಕಾಲು ಇಂಚಿನಿಂದ ಎರಡೂವರೆ ಇಂಚುಗಳಷ್ಟು ಅಗಲವಾದ ತುದಿಯುಳ್ಳ ಉಳಿಗಳು ಶಿಲೆಯ ಬೇಡವಾದ ಭಾಗವನ್ನು ತೆಗೆಯುವ ಗಟ್ಟಿಯಾದ ಉಳಿಗಳಾಗಿರುತ್ತವೆ. ಎರಡು ಇಂಚು ಅಥವಾ ಎರಡೂವರೆ ಇಂಚು ಅಳತೆಯ ಉಳಿಗಳನ್ನು ಶಿಲೆ ಕೆತ್ತನೆಯ ಮೊದಲನೇ ಹಂತದಲ್ಲಿ ಉಪಯೋಗಿಸುವರು. ಒಂದು ಇಂಚಿನಿಂದ ಒಂದೂವರೆ ಇಂಚು ತುದಿಯುಳ್ಳ ಉಳಿಗಳನ್ನು ವಿನ್ಯಾಸಗಳ ಕೆತ್ತನೆಯ ಮೊದಲ ಹಂತದಲ್ಲಿ ಉಪಯೋಗಿಸುವರು. ಅರ್ಧ ಇಂಚಿನಿಂದ ಕಾಲು ಇಂಚುಗಳಷ್ಟು ತುದಿಯುಳ್ಳ ಸಣ್ಣ ಉಳಿಗಳನ್ನು ಸೂಕ್ಷ್ಮ ವಿನ್ಯಾಸಗಳನ್ನು ರಚಿಸಲು ಉಪಯೋಗಿಸುವರು.

ಈ ಉಳಿಗಳಲ್ಲಿ ಇಂಗ್ಲೀಷ ಅಕ್ಷರಗಳ ಆಕಾರದಲ್ಲಿ ಅಂದರೆ ವ್ಹಿ ಶೇಪ್, ಯು ಶೇಪ್ ಹಾಗೂ ಸಿ ಶೇಪ್‌ಗಳ ಮೊನೆಯಾಕಾರದ ಅನೇಕ ಬೇರೆ ಉಳಿಗಳನ್ನು ಕಾಣಬಹುದು. ಇವೆಲ್ಲವೂ ಕೂಡ

ಸೂಕ್ಷ್ಮ ಕೆತ್ತನೆ ಕೆಲಸಗಳಲ್ಲಿ ಉಪಯೋಗಕ್ಕೆ ಬರುತ್ತವೆ.

ದುಂಡಾದ ಹಿಡಿಕೆಯುಳ್ಳ ಉಳಿಗಳಲ್ಲಿಯೂ ವ್ಹಿ ಶೇಪ್, ಯು ಶೇಪ್, ಎಲ್ ಶೇಪ್ ಹಾಗೂ ಸಿ ಶೇಪ್‌ಗಳುಳ್ಳ ಉಳಿಗಳನ್ನು ಕಾಣಬಹುದು. ಈ ಉಳಿಗಳು ಸುಮಾರು ಮೂರು ಇಂಚುಗಳಿಂದ ಆರು ಇಂಚುಗಳಷ್ಟು ಉದ್ದವಾಗಿರುತ್ತವೆ. ಇವುಗಳನ್ನು ಕೆತ್ತನೆಯ ಕೆಲಸದಲ್ಲಿ ವಿನ್ಯಾಸಗಳಿಗೆ ಸುಂದರವಾದ ಅಂತಿಮ ರೂಪು ಕೊಡುವುದಕ್ಕೆ ಉಪಯೋಗಿಸುವರು.

ಈ ಎಲ್ಲ ಉಳಿಗಳಿಗೆ ಯಾವುದೇ ರೀತಿಯ ಹಿಡಿಕೆಗಳಿರುವುದಿಲ್ಲ. ಇವೆಲ್ಲ ಉಕ್ಕಿನ ಉಳಿಗಳಾಗಿರುತ್ತವೆ.

೫. ಸ್ಯಾಂಡ್ ಪೇಪರ್‌ಗಳು : ವಿವಿಧ ನಕ್ಷೆಗಳ ಮೂರ್ತಿಗಳ ಕೆತ್ತನೆಯ ಕೆಲಸದ ನಂತರ ಅವುಗಳಿಗೆ ನಯವಾದ ಮೈವಳಿಕೆಯನ್ನು ತರಲು ಸ್ಯಾಂಡ್‌ಪೇಪರ್‌ಗಳನ್ನು ಉಪಯೋಗಿಸುವರು.

೬. ಪಾಲಿಶ್ ಮಶಿನ್ : ದೊಡ್ಡದೊಡ್ಡ ಶಿಲೆಗಳ ಮೈವಳಿಕೆಯನ್ನು ನಯವಾಗಿಸಲು ಸ್ಯಾಂಡ್ ಪೇಪರುಗಳಿಂದ ಸಾಧ್ಯವಾಗದು. ಆದ್ದರಿಂದ ಪಾಲಿಶ್‌ಮಶಿನ್‌ನ ಉಪಯೋಗದಿಂದ ಅತೀ ಶೀಘ್ರದಲ್ಲಿ ನಯವಾಗಿಸಬಹುದು. ಈ ಉಪಕರಣವು ಬೇರೆ ಬೇರೆ ಅಳತೆಗಳ ಬ್ಲೇಡ್‌ಗಳನ್ನು ಹೊಂದಿರುವುದರಿಂದ ಬೇರೆ ಬೇರೆ ಅಳತೆ ಹಾಗೂ ವಿನ್ಯಾಸಗಳಲ್ಲಿರುವ ಕಲ್ಲುಗಳನ್ನು ಪಾಲಿಶ್ ಮಾಡಲು ಅನುಕೂಲವಾಗಿರುತ್ತದೆ.

೭. ಸ್ಟೋನ್ ಕಟಿಂಗ್ ಮಶಿನ್ : ದೊಡ್ಡದೊಡ್ಡ ಕಲ್ಲುಗಳನ್ನು ಬೇರೆ ಬೇರೆ ಆಕಾರಗಳಲ್ಲಿ ಬಹು ಬೇಗನೇ ತುಂಡರಿಸುವುದಕ್ಕೆ ಸ್ಟೋನ್ ಕಟಿಂಗ್ ಮಶಿನ್‌ನ ಉಪಯೋಗ ಮಾಡುವರು. ಈ ಯಂತ್ರಕ್ಕೆ ಬೇರೆ ಬೇರೆ ವಿನ್ಯಾಸಗಳ ಬ್ಲೇಡ್‌ಗಳನ್ನು ಅಳವಡಿಸಬಹುದು. ಇದರಿಂದ ಬೇರೆ ಬೇರೆ ಅಂಚುವಿನ್ಯಾಸಗಳನ್ನು ರಚಿಸಬಹುದು. ಬರಿ ಕಲ್ಲನ್ನು ಕೊರೆಯುವುದಷ್ಟೇ ಅಲ್ಲದೆ ವಿವಿಧ ವಿನ್ಯಾಸಗಳ ರಚನೆಗೂ ಸಹ ಈ ಯಂತ್ರವು ಉಪಯೋಗವಾಗುವುದು.

ಎಲ್ಲ ಬಗೆಯ ಯಂತ್ರಗಳೆಲ್ಲವೂ ವಿದ್ಯುತ್ ಶಕ್ತಿಯಿಂದಲೇ ಕೆಲಸ ಮಾಡುವವು.

೮. ಪೇಪರ್ ಹಾಗೂ ಪೆನ್ಸಿಲ್‌ಗಳು : ಎಲ್ಲ ಶಿಲ್ಪಿಗಳೂ ಉಪಯೋಗಿಸುವಂತೆ ಶಿಲಾ ಮಾಧ್ಯಮದ ಶಿಲ್ಪಗಾರರೂ ಸಹ ಪೇಪರ್ ಹಾಗೂ ಪೆನ್ಸಿಲ್‌ಗಳನ್ನು ನೀಲ ನಕ್ಷೆಗಳನ್ನು ಹಾಗೂ ರೇಖಾ ಚಿತ್ರಗಳನ್ನು ರಚಿಸಲು ಉಪಯೋಗಿಸುವರು.

೯. ಅಳತೆ ಪಟ್ಟಿಗಳು : ಕಾಷ್ಠ ಮಾಧ್ಯಮದಲ್ಲಿ ಬಳಕೆಗೊಳ್ಳುವ ಎಲ್ಲ ತರಹದ ಅಳತೆಯ ಪಟ್ಟಿಗಳು ಶಿಲಾ ಮಾಧ್ಯಮದ ಕೆಲಸದಲ್ಲಿ ಉಪಯೋಗಿಸಲ್ಪಡುವವು.

ಅರ್ಲ್ಡಾಲ್ಡ್ : ಶಿಲೆಯಲ್ಲಿ ಸೂಕ್ಷ್ಮ ವಿನ್ಯಾಸಗಳನ್ನು ಮೂಡಿಸುವಾಗ ಸುತ್ತಿಗೆಯ ಏಟು ತಪ್ಪಾಗಿ ಬಿದ್ದು ವಿನ್ಯಾಸದ ಶಿಲೆಯ ತುಂಡು ಮುರಿದು ಹೋದರೆ, ಅದನ್ನು ಮತ್ತೆ ಅದೇ ವಿನ್ಯಾಸಕ್ಕೆ ಸರಿಯಾಗಿ ಅಂಟಿಸಲು ಈ ಪದಾರ್ಥವನ್ನು ಉಪಯೋಗಿಸುವರು.

೧೦. ಚಾಕ್‌ಪೀಸ್‌ಗಳು : ಶಿಲೆಗಳನ್ನು ವಿವಿಧ ಅಳತೆಗಳಲ್ಲಿ ಕತ್ತರಿಸಲು, ಗುರುತು ಹಾಕಲು

ಮತ್ತು ಅನೇಕ ಶಿಲ್ಪ ವಿನ್ಯಾಸಗಳನ್ನು ರಚಿಸುವ ಬೇರೆ ಬೇರೆ ಅಳತೆಗಳನ್ನು ಗುರುತು ಮಾಡಲು, ಶಿಲೆಗಳ ಮೇಲೆ ಸರಿಯಾಗಿ ಸರಾಗವಾಗಿ ಮೂಡಬಲ್ಲ ಚಾಕ್ ಪೀಸ್‌ಗಳನ್ನು ಬಳಸುವರು.

೧೧. ಡ್ರಿಲ್ಲಿಂಗ್ ಮಶಿನ್: ಶಿಲೆಗಳಿಗೆ ರಂಧ್ರಗಳನ್ನು ತೆಗೆಯಲು ಬೇರೆ ಬೇರೆ ಅಳತೆಯ ರಂಧ್ರಗಳನ್ನು ತೆಗೆಯುವ ಬ್ಲೇಡ್‌ಗಳಿರುವ ಡ್ರಿಲ್ಲಿಂಗ್ ಮಶಿನನ್ನು ಉಪಯೋಗಿಸುವರು.

೧೨. ಸಾಣೆ ಕಲ್ಲು : ಶಿಲ್ಪರಚನೆಯ ಕಾರ್ಯದಲ್ಲಿ ಬಳಕೆಯಾದ ಉಳಿಗಳ ತುದಿಗಳನ್ನು ಚೂಪಾಗಿಸಲು ಅಥವಾ ಸಾಣೆ ಹಿಡಿಯಲು ಸಾಣೆ ಕಲ್ಲನ್ನು ಉಪಯೋಗಿಸುವರು. ಇತ್ತೀಚೆಗೆ ವಿದ್ಯುತ್ ಚಾಲಿತ ಯಂತ್ರವನ್ನು ಉಪಯೋಗಿಸುವುದನ್ನು ಕಾಣುತ್ತೇವೆ.

೧೩. ಕುಲುಮೆ : ಶಿಲ್ಪಿಗಳು ತಮಗೆ ಬೇಕಾದ ಆಕಾರಗಳಲ್ಲಿ ಹಾಗೂ ವಿನ್ಯಾಸಗಳಲ್ಲಿ ಉಳಿಗಳನ್ನು ತಯಾರಿಸಲು ಕುಲುಮೆಯನ್ನು ಉಪಯೋಗಿಸುವರು.

ಹೀಗೆ ಶಿಲೆಯ ಕೆತ್ತನೆಯ ಸಂದರ್ಭದಲ್ಲಿ ಅನೇಕ ಪರಿಕರಗಳು ಉಪಯೋಗವಾಗುವವು.

◆ ◆ ◆

ಅಧ್ಯಾಯ-ನಾಲ್ಕು

ರಥಗಳ ರಚನಾ ವಿಧಾನ

ರಥಗಳ ರಚನಾ ವಿಧಾನ

ರಥವನ್ನು ನಿರ್ಮಾಣ ಮಾಡುವುದೆಂದರೆ ಒಂದು ದೇವಾಲಯವನ್ನು ನಿರ್ಮಾಣ ಮಾಡಿದಂತೆಯೇ ಸರಿ. ನಮ್ಮ ಪೂರ್ವಜರು ನಿರ್ಮಿಸಿರುವ ಅನೇಕ ಸುಂದರವಾದ ದೇವಾಲಯಗಳು ನಾಗರ, ವೇಸರ ಹಾಗೂ ದ್ರಾವಿಡ ಶೈಲಿಗಳಲ್ಲಿ ಕಲಾತ್ಮಕವಾಗಿ ನಿರ್ಮಾಣಗೊಂಡಂತೆ, ರಥಗಳ ನಿರ್ಮಾಣ ಹಂತದಲ್ಲಿ ಈ ಮೂರು ಶೈಲಿಗಳನ್ನು ಅನುಸರಿಸಬೇಕಾಗುವುದು. ಚತುರ್ಭುಜಾಕೃತಿ, ಷಡ್ಭುಜಾಕೃತಿ, ಅಷ್ಟಭುಜಾಕೃತಿ ಹಾಗೂ ಬಹುಭುಜಾಕೃತಿಗಳಲ್ಲಿ ರಥಗಳು ನಿರ್ಮಾಣವಾಗಿರುವುದನ್ನು ಕಾಣಬಹುದು. ರಥಶಿಲ್ಪಕಾರರು ರಥ ನಿರ್ಮಾಣ ಕಾರ್ಯದಲ್ಲಿ ಶಾಸ್ತ್ರಬದ್ಧವಾದ ವಿಧಿವಿಧಾನಗಳನ್ನು ಅನುಸರಿಸುವರು. ಅವುಗಳನ್ನರಿಯಲು, ಶಾಸ್ತ್ರಗ್ರಂಥಗಳ ಅಧ್ಯಯನವನ್ನು ಮಾಡಬೇಕಾಗುತ್ತದೆ. ಒಂದು ವೇಳೆ ಶಾಸ್ತ್ರಾನುಸಾರ ರಥ ನಿರ್ಮಾಣವಾಗದಿದ್ದಲ್ಲಿ, ಅಂತಹ ರಥಗಳಲ್ಲಿ ಆಗಮೋಕ್ತ ಪ್ರತಿಷ್ಠಾನ ನೆರವೇರುವುದಿಲ್ಲ ಹಾಗೂ ಆ ರಥವು ಪೂಜಾರ್ಹವಾಗಿ ಉತ್ಸವದ ಬಳಕೆಗೂ ಬರುವುದಿಲ್ಲ.

ಕರ್ನಾಟಕದ ಅನೇಕ ದೇವಾಲಯಗಳಲ್ಲಿ ಸುಂದರವಾದ ಕಲಾತ್ಮಕ ರಥಗಳಿರುವುದನ್ನು ಕಾಣಬಹುದು. ಅಲ್ಲದೆ ಪ್ರಾದೇಶಿಕವಾಗಿ ಬೇರೆ ಬೇರೆ ಮಾಧ್ಯಮಗಳಲ್ಲಿ ರಥಗಳು ನಿರ್ಮಾಣಗೊಂಡಿವೆ. ವಿವಿಧ ಮಾಧ್ಯಮಗಳಲ್ಲಿ ನಿರ್ಮಾಣವಾದ ರಥಗಳು, ಮಾಧ್ಯಮಗಳಿಗನುಗುಣವಾಗಿ ಬೇರೆ ಬೇರೆ ರಚನಾ ವಿಧಾನಗಳನ್ನನುಸರಿಸಿ ರಚಿಸಲ್ಪಡುವವು. ಕರ್ನಾಟಕದಲ್ಲಿ ನಿರ್ಮಾಗೊಂಡ ರಥಗಳನ್ನು

I. ಕಾಷ್ಠ ಮಾಧ್ಯಮದ ರಥಗಳು

II. ಲೋಹ ಮಾಧ್ಯಮದ ರಥಗಳು

III. ಸಂಕೀರ್ಣ ಮಾಧ್ಯಮದ ರಥಗಳು

IV. ಶಿಲಾ ಮಾಧ್ಯಮದ ರಥಗಳು

ವಿವಿಧ ಮಾಧ್ಯಮದ ವಿವಿಧ ಪ್ರಕಾರದ ರಥಶಿಲ್ಪಗಳು



ಕಬ್ಬಿಣದ ಅಂಕಣ ರಥ



ಕಬ್ಬಿಣದ ಗಡ್ಡಿ ರಥ



ಕಾಷ್ಠದ ಅಂಕಣ ರಥ



ಕಟ್ಟುವಯ ರಥ



ಶಿಲೆಯ ರಥ



ತಟ್ಟಿಯ ರಥ




ತೆಪ್ಪದ ರಥ



ಬೆಳ್ಳಿಯ ರಥ



ಕಾಷ್ಠದ ಗಡ್ಡಿಯ ರಥ



ರಥಗಳ ರಚನಾ ವಿಧಾನ
ಕಾಷ್ಠ ಮಾಧ್ಯಮ ರಥಗಳು
ಲೋಹ ಮಾಧ್ಯಮ ರಥಗಳು
ಸಂಕೀರ್ಣ ಮಾಧ್ಯಮ ರಥಗಳು
ಶಿಲಾ ಮಾಧ್ಯಮ ರಥಗಳು
ಕಾಷ್ಠ ಮಾಧ್ಯಮ ರಥಗಳು
ಗಡ್ಡಿ ರಥಗಳು
ಅಂಕಣ ರಥಗಳು
ಸ್ಥಿರ ರಥ
ಚರ ರಥ
ಅಡಿಪಾಯ ಭಾಗ
ಅಧಿಷ್ಠಾನ ಭಾಗ
ಮಂಟಪ ಭಾಗ
ಚಕ್ರ
ಅಚ್ಚು
ತೊಲೆ
ಹಲಗೆ ಚಕ್ರ
ಅರೆಗಳನ್ನುಳ್ಳ ಚಕ್ರ
ಶಿಲಾ ಚಕ್ರ
ಹಲಗೆಗಳನ್ನು ಕೊರೆಯುವದು
ವಿವಿಧ ರೇಖಾಚಿತ್ರಗಳ ರಚನೆ
ವಿವಿಧ ಮೂರ್ತಿ ಶಿಲ್ಪಗಳ ರಚನೆ
ಬಿಡಿ ಭಾಗಗಳ ಹೊಂದಿಕೆ
ಹಲಗೆಗಳನ್ನು ಕೊರೆಯುವುದು
ಕಂಬಗಳು ಹಾಗೂ ಕಮಾನುಗಳ ತಯಾರಿಕೆ
ಬಿಡಿ ಭಾಗಗಳ ಜೋಡನೆ
ಮಂಟಪ ಭಾಗದ ರಚನೆ
ಅಂಕಣಗಳ ತಯಾರಿಕೆ
ಬಣ್ಣ ಬಣ್ಣದ ಬಟ್ಟೆಗಳ ಹೊಂದಿಕೆ
ಬಿಡಿ ಮೂರ್ತಿಶಿಲ್ಪಗಳ ಮತ್ತು ಕಮಾನುಗಳ ಜೋಡನೆ
ವಿವಿಧ ಪತ್ರ, ಫಲ, ಪುಷ್ಪಾಲಂಕಾರ
ಗೋಪುರ ಭಾಗದ ರಚನೆ
ಗೋಲುಗಳನ್ನು ನಿರ್ಮಿಸುವದು
ಬಣ್ಣದ ಬಟ್ಟೆಗಳ ಮತ್ತು ಪತಾಕೆಗಳ ಜೋಡನೆ
ವಿವಿಧ ಪುಷ್ಪಾಲಂಕಾರ
ಅಡಿಪಾಯ ಭಾಗ
ಅಧಿಷ್ಠಾನ ಭಾಗ
ಮಂಟಪ ಭಾಗ
ಗೋಪುರ ಭಾಗ
ಚಕ್ರ
ಅಚ್ಚು
ತೊಲೆ
ಹಲಗೆ ಚಕ್ರ
ಅರೆಗಳನ್ನುಳ್ಳ ಚಕ್ರ
ಹಲಗೆಗಳನ್ನು ಕೊರೆಯುವದು
ಬಿಡಿ ಭಾಗಗಳ ಹೊಂದಿಕೆ
ಹಲಗೆಗಳನ್ನು ಕೊರೆಯುವುದು
ಕಂಬಗಳು ಹಾಗೂ
ಕಮಾನುಗಳ ತಯಾರಿಕೆ
ಬಿಡಿ ಭಾಗಗಳ ಜೋಡನೆ
ಸಣ್ಣ ಮಂಟಪಗಳ ರಚನೆ ಮತ್ತು ಜೋಡನೆ

ಎಂದು ನಾಲ್ಕು ವಿಧಗಳಲ್ಲಿ ವಿಂಗಡಿಸಿಕೊಂಡು ಪ್ರತಿಯೊಂದು ಮಾಧ್ಯಮದಲ್ಲಿ ಅನುಸರಿಸುವ ಬೇರೆ ಬೇರೆ ರಚನಾ ವಿಧಾನಗಳನ್ನು ವಿವರವಾಗಿ ಅಭ್ಯಾಸ ಮಾಡುವಾ.

I. ಕಾಷ್ಠ ಮಾಧ್ಯಮದ ರಥಗಳ ರಚನಾ ವಿಧಾನ : ಕಾಷ್ಠ ಮಾಧ್ಯಮ ರಥಗಳಲ್ಲಿ

ಅ. ಗಡ್ಡಿ ರಥಗಳು.

ಬ. ಅಂಕಣ ರಥಗಳು ಎಂದು ಎರಡು ವಿಧಗಳಿವೆ. ಪ್ರತಿಯೊಂದು ವಿಧದ ರಚನಾ ವಿಧಾನಗಳನ್ನು ಪ್ರತ್ಯೇಕವಾಗಿ ತಿಳಿಯುವಾ.

ಅ. ಗಡ್ಡೆ ರಥಗಳ ರಚನಾ ವಿಧಾನ :

ನೀಲ ನಕ್ಷೆಗಳ ತಯಾರಿಕೆ : ರಥ ನಿರ್ಮಾಣದ ಕಾರ್ಯವನ್ನು ಕೈಗೊಂಡಾಗ ರಥಶಿಲ್ಪಿಗಳು ಮೊದಲು ಮಾಡುವ ಕೆಲಸವೆಂದರೆ ನೀಲನಕ್ಷೆಗಳ ತಯಾರಿಕೆ. ಡ್ರಾಯಿಂಗ ಪೇಪರುಗಳಲ್ಲಿ ಪೆನ್ಸಿಲ್‌ಗಳನ್ನು ಅಥವಾ ಪೆನ್ನುಗಳನ್ನುಪಯೋಗಿಸಿ, ನಿರ್ಮಾಣವಾಗುವ ರಥದ ವಿವಿಧ ರೇಖಾ ಚಿತ್ರಗಳನ್ನು ಬಿಡಿಸುವರು.

ಗಡ್ಡಿ ರಥಗಳಲ್ಲಿ ಅಡಿಪಾಯ ಭಾಗ, ಅಧಿಷ್ಠಾನ ಭಾಗ, ಮಂಟಪ ಭಾಗ ಹಾಗೂ ಗೋಪುರ ಭಾಗಗಳನ್ನು ಕಾಣಬಹುದು. ಅಲ್ಲದೆ ಚತುರ್ಭುಜಾಕೃತಿ, ಷಡ್ಭುಜಾಕೃತಿ, ಅಷ್ಟಭುಜಾಕೃತಿ ಹೀಗೆ ಬಹುಭುಜಾಕೃತಿಯಲ್ಲಿ ಹಾಗೂ ವಿವಿಧ ಶೈಲಿಗಳಲ್ಲಿಯೂ ಕಾಣಬಹುದು ಆದ್ದರಿಂದ ನೀಲನಕ್ಷೆಗಳನ್ನು ತಯಾರಿಸುವ ರಥಶಿಲ್ಪಿಗಳು, ರಥದ ವಿವಿಧ ಭಾಗಗಳನ್ನು ವಿವಿಧ ಭುಜಾಕೃತಿಗಳನ್ನು ಹಾಗೂ ವಿವಿಧ ಶೈಲಿಗಳನ್ನು ಶಾಸ್ತ್ರ ಗ್ರಂಥಗಳಿಂದ ಅಭ್ಯಸಿಸಿ, ಅನೇಕ ಬೇರೆ ಬೇರೆ ವಿನ್ಯಾಸಗಳಲ್ಲಿ ರಥದ ನೀಲ ನಕ್ಷೆಗಳನ್ನು ತಯಾರಿಸುವರು. ರಥ ಮಾಡಿಸುವವರು ಎಲ್ಲ ವಿನ್ಯಾಸಗಳ ನೀಲನಕ್ಷೆಗಳಲ್ಲಿ ಒಂದನ್ನು ಆಯ್ಕೆ ಮಾಡಿದ ನಂತರ ಮುಂದಿನ ಕೆಲಸ ಪ್ರಾರಂಭವಾಗುವುದು.

ಕಾಷ್ಠಗಳ ಆಯ್ಕೆ : ಕಾಷ್ಠಗಳನ್ನು ಆಯ್ಕೆ ಮಾಡುವುದು ಒಂದು ಪ್ರಮುಖವಾದ ಕಾರ್ಯ. ಸಾಮಾನ್ಯವಾಗಿ ಅತೀ ಹಳೆಯ ಹಾಗೂ ಅತೀ ಎಳೆಯ ಕಟ್ಟಿಗೆಗಳು ಉಪಯೋಗಿಸಲ್ಪಡುವುದಿಲ್ಲ. ಸುಮಾರು ನಲವತ್ತರಿಂದ ಐವತ್ತು ವಯಸ್ಸಿನ ಮರಗಳ ಕಟ್ಟಿಗೆಗಳು ರಥ ನಿರ್ಮಾಣ ಕಾರ್ಯಕ್ಕೆ ಪ್ರಶಸ್ತವಾದವುಗಳು. ಇನ್ನು ವೃಕ್ಷಗಳ ಆಯ್ಕೆ ಸಮಯದಲ್ಲಿ ಅನುಸರಿಸಬೇಕಾದ ಇತರ ನಿಯಮ ಇತ್ಯಾದಿಗಳನ್ನು ವಿಷ್ಣು ಪುರಾಣದಲ್ಲಿ ಈ ರೀತಿಯಲ್ಲಿ ಹೇಳಲಾಗಿದೆ.

''ಶುಭದಿನದ ನಕ್ಷತ್ರದಲ್ಲಿ ಅರಣ್ಯಕ್ಕೆ ಹೋಗಿ, ವೃಕ್ಷವನ್ನು ಆಯ್ಕೆ ಮಾಡಬೇಕು. ಆ ವೃಕ್ಷ ಬೆಂಕಿಯಿಂದ ಸುಟ್ಟಿರಬಾರದು. ಆನೆ ಇರಿತದಿಂದ ಮುರಿದಿರಬಾರದು, ಬಿರುಗಾಳಿಯ ರಭಸಕ್ಕೆ ತುತ್ತಾಗಿರಬಾರದು. ಹುಳುಕು ಹಿಡಿದ ಹಾಗೂ ಗಿಡಬಳ್ಳಿಗಳಿಂದ ಸುತ್ತುವರೆದಿರಬಾರದು. ಪಶು ಪಕ್ಷಿಗಳ ಆಶ್ರಯ ತಾಣವಾಗಿರುವ ದೇವಾಲಯದ, ಆಶ್ರಮದ, ಸ್ಮಶಾನದ ಹಾಗೂ ಹುತ್ತಗಳ ಸನಿಹ ಬೆಳೆದಿರುವ ವೃಕ್ಷಗಳನ್ನು ಆಯ್ಕೆ ಮಾಡುವುದಿಲ್ಲ.[೧]''

ಈ ಎಲ್ಲಾ ನಿಯಮಗಳನ್ನು ಅನುಸರಿಸಿ ಮರದ ಆಯ್ಕೆ ಮಾಡಿದ ನಂತರ, ಸ್ಥಪತಿ ಹಾಗೂ

೧. ''ದೇಗುಲ ರಥ ಶಿಲ್ಪ'' ಧ್ರುವರಾಜ ನಾ. ಗದಗಕರ, ಪು.ಸಂ. ೧೮, ೧೯೯೯

ಪುರೋಹಿತ ಇಬ್ಬರೂ ಕೂಡಿ ವಿಧಿವಿಧಾನಪೂರಕವಾಗಿ ಮರಗಳನ್ನು ಪೂಜಿಸಿ, ಆ ಮರದಲ್ಲಿ ಆಶ್ರಯಿಸಿದ ಭೂತ ಪ್ರೇತಾದಿಗಳಿಗೂ, ತಮ್ಮ ನಿವಾಸವನ್ನು ಬದಲಿಸಬೇಕೆಂದು ಭಕ್ತಿಯಿಂದ ಪ್ರಾರ್ಥಿಸಿಕೊಳ್ಳಬೇಕು. ಸ್ಥಪತಿಯ ಆ ರಾತ್ರಿ ಮರದ ಕೆಳಗಡೆಯೇ ಪವಡಿಸಬೇಕು. ನಿದ್ರೆಯಲ್ಲಿ ಅವನಿಗೆ ದು:ಸ್ವಪ್ನ ಬಿದ್ದರೆ ಆ ಮರವನ್ನು ಕಡಿಯುವಂತಿಲ್ಲ. ಶುಭ ಸ್ವಪ್ನ ಬಿದ್ದರೆ ಆ ಮರವನ್ನು ಕಡಿಯಬಹುದು. ಕಡಿಯುವ ಮುನ್ನ ಕೊಡಲಿಗೆ ಜೇನುತುಪ್ಪವನ್ನು ಲೇಪಿಸಿ ಆ ಕೊಡಲಿಯಿಂದಲೇ ಕಡಿಯಬೇಕು. ಕಡಿಯುವ ಸಮಯದಲ್ಲಿ ಮರವು ಪೂರ್ವ ಇಲ್ಲವೆ ಉತ್ತರಕ್ಕೆ ಉರುಳಿದರೆ ಪ್ರಶಸ್ತ[೨].

ಆದರೆ ಇತ್ತೀಚಿನ ರಥಶಿಲ್ಪಿಗಳು, ಗ್ರಂಥಾಧಾರದಿಂದ ಇಂತಹ ಎಲ್ಲ ವಿಷಯಗಳನ್ನು ತಿಳಿದುಕೊಂಡರೂ, ವೇಳೆಯ ಅಭಾವದಿಂದಲೋ ಅಥವಾ ವ್ಯಾಪಾರದ ದೃಷ್ಟಿಯಿಂದಲೋ ಈ ವಿಧಾನವನ್ನು ಅನುಸರಿಸಿ ರಥ ನಿರ್ಮಾಣ ಮಾಡುವುದಿಲ್ಲ. ಅವರು ಅರಣ್ಯ ಇಲಾಖೆಯವರು ಕೂಡಿಟ್ಟಿರುವ ಕಟ್ಟಿಗೆಗಳನ್ನೋ ಅಥವಾ ಸಾಮಿತಗಳಲ್ಲಿ ಮಾರುವಂತಹ ಬೇರೆ ಬೇರೆ ಕಟ್ಟಿಗೆಗಳನ್ನು ಕೊಂಡುತರುವರು. ಆ ಎಲ್ಲ ಕಾಷ್ಠಗಳನ್ನು ಪೂಜಿಸಿ ಮುಂದಿನ ಕಾರ್ಯವನ್ನು ಕೈಗೊಳ್ಳುವರು.

ರಥಶಿಲ್ಪಿಗಳು ಹಲವಾರು ಮರದ, ಕಟ್ಟಿಗೆಗಳನ್ನು ಬಳಸಿ ರಥಗಳನ್ನು ನಿರ್ಮಿಸುವರು. ನಿಸರ್ಗದಲ್ಲಿ ಬೆಳೆದ ಒಂದೊಂದು ಮರದ ಕಟ್ಟಿಗೆಯು ಒಂದೊಂದು ವಿಶಿಷ್ಠ ಗುಣದರ್ಮವನ್ನು ಹೊಂದಿದ್ದು, ರಥದ ಒಂದೊಂದು ಭಾಗದ ಕೆಲಸಕ್ಕೆ ಸೂಕ್ತವಾಗಿರುತ್ತದೆ. ರಥದ ಆಯಾ ಭಾಗಕ್ಕೆ ಅಂತಹುದೇ ಕಟ್ಟಿಗೆಯನ್ನು ಬಳಸಬೇಕೆಂಬುದು ಒಂದು ನಿಯಮ. ಕಟ್ಟಿಗೆಯ ಗುಣಧರ್ಮವನ್ನರಿತು, ಶಿಲ್ಪಿಗಳು ಅವುಗಳನ್ನು ಹಿತಮಿತವಾಗಿ ಬಳಸುತ್ತಾರೆ. ಸಾಮಾನ್ಯವಾಗಿ ತೇಗು, ಮತ್ತಿ, ಹೊನ್ನಿ, ನಂದಿ, ಶ್ರೀಗಂಧ, ಹಲಸು, ವಾಟೆ, ರಕ್ತಹೊನ್ನಿ, ಬೇವು, ಜಾಲಿ ಹಾಗೂ ದಿಂಡಲ ಕಟ್ಟಿಗೆಗಳು ರಥ ನಿರ್ಮಾಣ ಕಾರ್ಯದಲ್ಲಿ ಹೆಚ್ಚಾಗಿ ಬಳಕೆಯಾಗುವುವು.

ಶಾಸ್ತ್ರಗ್ರಂಥಗಳ ಅಧ್ಯಯನ : ಗಡ್ಡಿ ರಥಗಳನ್ನು ನಿರ್ಮಿಸುವ ಕಾರ್ಯವನ್ನು ಕೈಗೊಂಡಾಗ ಶಾಸ್ತ್ರಗ್ರಂಥಗಳನ್ನು ಅನುಸರಿಸಬೇಕಾಗುವುದು. ರಥದ ಅಧಿಷ್ಠಾನ ಹಾಗೂ ಮಂಟಪ ಭಾಗಗಳಲ್ಲಿ ವಿವಿಧ ಪ್ರಾಣಿ ಪಕ್ಷಿಗಳು, ದೇವತೆಗಳು, ಶಿವಶರಣರು, ಸಿದ್ದಪುರುಷರು, ವಿವಿಧ ನಕ್ಷೆಗಳು ಹೀಗೆ ಅನೇಕ ವಿಧದ ಶಿಲ್ಪವಿನ್ಯಾಸಗಳನ್ನು ಮೂಡಿಸಬೇಕಾಗುತ್ತದೆ. ಅವುಗಳನ್ನು ವಿವಿಧ ತಾಲಮಾನಗಳಿಗೆ ಸರಿಯಾಗಿ ರಚಿಸಬೇಕಾಗುತ್ತದೆ. ಅವುಗಳ ಪುರಾಣ, ಇತಿಹಾಸ ಹಾಗೂ ಚರಿತ್ರೆಗಳ ಆಧಾರದ ಮೇಲೆ, ರೇಖಾ ಚಿತ್ರಗಳನ್ನು ರಚಿಸಬೇಕಾಗುತ್ತದೆ. ವಿವಿಧ ವಿನ್ಯಾಸಗಳ ರಥಗಳ ರಚನೆಗೆ ಪ್ರತಿಮಾಶಾಸ್ತ್ರ, ಚಿತ್ರಕಲೆ, ಜಾಮಿತಿಕ ಅಂಶ, ಪೌರಾಣಿಕ ಸನ್ನಿವೇಶಗಳ ಹಿನ್ನೆಲೆ, ಆಗಮೋಕ್ತ ವಿಚಾರ, ಅಲ್ಲದೆ ರಥಕ್ಕೆ ಸಂಬಂಧಪಟ್ಟ ಊರಿನ, ಮಠದ, ದೇವಸ್ಥಾನದ ಹಾಗೂ ಸಿದ್ದಪುರುಷರ-ಹೀಗೆ ಅನೇಕ ಅಂಶಗಳ ಇತಿಹಾಸ ಹಾಗೂ ಚರಿತ್ರೆಗಳ ಬಗ್ಗೆ ರಥಶಿಲ್ಪಿಗಳು ಆಳವಾಗಿ ಅಧ್ಯಯನ ಮಾಡಬೇಕಾಗುತ್ತದೆ.

ರಥ ನಿರ್ಮಾಣವಾಗುವ ಸ್ಥಳ : ದೊಡ್ಡ ದೊಡ್ಡ ರಥಗಳು ನಿರ್ಮಾಣಗೊಳ್ಳಬೇಕಾದರೆ ವಿಶಾಲವಾದ, ಪ್ರಶಸ್ತವಾದ ಸ್ಥಳವು ಅಷ್ಟೇ ಮುಖ್ಯವಾದುದು. ಹೆಚ್ಚಾಗಿ ರಥಗಳು ಯಾವ ದೇವಸ್ಥಾನಕ್ಕೆ ಸಂಬಂಧಪಟ್ಟಿರುತ್ತವೆಯೋ ಆ ದೇವಸ್ಥಾನದ ಎದುರಿನ ಅಥವಾ ಪಕ್ಕದ ಜಾಗದಲ್ಲಿ ರಥ

---

೨. "ರಥ ಸಾವಿರ ವರ್ಷಗಳ ಇತಿಹಾಸ" ಪಿ. ಆರ್. ತಿಪ್ಪೇಸ್ವಾಮಿ, ಪ್ರಜಾವಾಣಿ ಪು.ಸಂ. ೨೧, ೧೯೯೫.

ನಿರ್ಮಾಣಕ್ಕಾಗಿಯೇ ಒಂದು ಮನೆ ಕಟ್ಟುವರು. ಉದ್ದವಾದ ಬಿದಿರುಗಳಿಂದ, ತಗಡುಗಳಿಂದ, ತಟ್ಟಿನ ಚೀಲಗಳಿಂದ-ಹೀಗೆ ಬೇರೆ ಬೇರೆ ವಸ್ತುಗಳಿಂದ ತಾತ್ಕಾಲಿಕವಾದ ಮನೆಯನ್ನು ನಿರ್ಮಿಸುವರು. ರಥವು ನಿರ್ಮಾಣಗೊಳ್ಳುವವರೆಗೆ, ಎಲ್ಲ ರಥಶಿಲ್ಪಿಗಳಿಗೆ ಊಟ ಹಾಗೂ ವಸತಿಯ ವ್ಯವಸ್ಥೆಯನ್ನು ದೇವಸ್ಥಾನದವರೇ ಮಾಡುವರು.

ಕೆಲವು ಸಲ ರಥಶಿಲ್ಪಿಗಳು ತಮ್ಮ ಮನೆಯ ಸ್ವಂತಜಾಗದಲ್ಲಿ ರಥ ನಿರ್ಮಾಣಕ್ಕಾಗಿಯೇ ನಿರ್ಮಿಸಿರುವ ಮನೆಯಲ್ಲಿ ರಥನಿರ್ಮಾಣ ಮಾಡಿ, ಸಿದ್ಧಗೊಂಡ ರಥದ ಎಲ್ಲ ಭಾಗಗಳನ್ನು ಬಿಡಿಬಿಡಿಯಾಗಿಸಿ ಅವುಗಳನ್ನು ವಾಹನಗಳ ಸಹಾಯದಿಂದ ಆಯಾದೇವಸ್ಥಾಗಳಿಗೆ ಸ್ಥಳಾಂತರಿಸಿ ಬಿಡಿಭಾಗಗಳನ್ನು ಒಂದನ್ನೊಂದು ಹೊಂದಿಸಿ, ಪೂರ್ಣ ರಥವನ್ನು ತಯಾರಿಸುವರು. ಕೆಲವು ರಥ ಶಿಲ್ಪಿಗಳು ರಥ ನಿರ್ಮಾಣ ಕೇಂದ್ರಗಳನ್ನು ನಿರ್ಮಿಸಿ, ರಥ ತಯಾರಿಕಾ ತರಬೇತಿ ನೀಡುವುದನ್ನು ಕರ್ನಾಟಕದ ವಿವಿಧೆಡೆ ನೋಡಬಹುದು.

ಶಿಲ್ಪಿಗಳ ಸಮೂಹ ಗಡ್ಡಿ ರಥ ನಿರ್ಮಾಣಗೊಳ್ಳಲು ಅನೇಕ ರಥಶಿಲ್ಪಿಗಳು ಪರಿಶ್ರಮ ಪಡಬೇಕಾಗುವುದು. ರಥ ನಿರ್ಮಾಣ ಕಾರ್ಯದಲ್ಲಿ, ಕಟ್ಟಿಗೆಗಳನ್ನು ಕೊರೆಯುವುದು. ಶಿಲ್ಪ ವಿನ್ಯಾಸಗಳನ್ನು ಕೆತ್ತನೆ ಮಾಡುವುದು, ವರ್ಣಗಾರಿಕೆಯನ್ನು ಮಾಡುವದು, ಸಿದ್ಧಗೊಂಡ ಬಿಡಿ ಭಾಗಗಳನ್ನು ಒಂದನ್ನೊಂದು ಜೋಡಿಸುವುದು-ಹೀಗೆ ಹಲವಾರು ಕೆಲಸಗಳು ಒಬ್ಬ ಶಿಲ್ಪಿಯಿಂದ ಆಗಲಾರದ್ದು.

ಆದ್ದರಿಂದ ರಥ ನಿರ್ಮಾಣ ಕಾರ್ಯದಲ್ಲಿ ಅನೇಕ ಶಿಲ್ಪಿಗಳು ಕೆಲಸ ಮಾಡಬೇಕಾಗುತ್ತದೆ. ಒಬ್ಬ ಪ್ರಧಾನ ಶಿಲ್ಪಿಯು ಹೇಳಿದಂತೆ ಉಳಿದ ಸಹಾಯಕ ಶಿಲ್ಪಿಗಳೆಲ್ಲರೂ ಕಾರ್ಯ ನಿರ್ವಹಿಸಬೇಕಾಗುತ್ತದೆ. ನೀಲ ನಕ್ಷೆಯನ್ನು ತಯಾರಿಸುವುದು, ವಿವಿಧ ವಿನ್ಯಾಸಗಳ ರೇಖಾ ಚಿತ್ರಗಳನ್ನು ತಯಾರಿಸುವುದು, ವಿವಿಧ ವಿನ್ಯಾಸಗಳ ರೇಖಾ ಚಿತ್ರಗಳನ್ನು ತಯಾರಿಸುವುದು ಹಾಗೂ ಅವುಗಳನ್ನಾಧರಿಸಿ ಮಾರ್ಗದರ್ಶನ ಮಾಡುವುದು ಪ್ರಧಾನ ಶಿಲ್ಪಿಯ ಕೆಲಸವಾದರೆ, ವಿವಿಧ ಶಿಲ್ಪ ವಿನ್ಯಾಸಗಳನ್ನು ಮಾಡಿಸುವುದು, ಸಿದ್ಧವಾದ ಭಾಗಗಳನ್ನು ಹೊಂದಿಸುವುದು ಹೀಗೆ ಹಲವಾರು ಕೆಲಸಗಳು ಸಹಾಯಕ ಶಿಲ್ಪಿಗಳ ಕಾರ್ಯವಾಗಿರುತ್ತದೆ. ಹೀಗೆ ರಥ ನಿರ್ಮಾಣ ಕಾರ್ಯದಲ್ಲಿ ಶಿಲ್ಪಿಗಳ ಸಮೂಹವೇ ಕೆಲಸ ಮಾಡಬೇಕಾಗುತ್ತದೆ[೩].

ಆರಂಭ : ರಥ ನಿರ್ಮಾಣದ ಆರಂಭದಲ್ಲಿ ರಥದ ಗಾತ್ರ ಪ್ರಮಾಣಗಳನ್ನು ಆಧರಿಸಿ ಆಯಾ ಭಾಗಗಳಿಗೆ ಬೇಕಾಗುವ ಆಯಾ ಕಟ್ಟಿಗೆಗಳನ್ನು ಆಯಾ ಪ್ರಮಾಣದಲ್ಲಿ ಕೊರೆಯಬೇಕಾಗುತ್ತದೆ. ಶುಭ ದಿವಸ ಶುಭ ಮುಹೂರ್ತದಲ್ಲಿ, ಪವಿತ್ರ ದೇವತಾಕಾರ್ಯಕ್ಕಾಗಿ ಬಳಸುವ ಈ ಕಟ್ಟಿಗೆಗಳನ್ನು ಹಾಗೂ ಮರಗೆತ್ತನೆಯ ಸಾಮಗ್ರಿಗಳನ್ನು ಶಿಲ್ಪಿ ಹಾಗೂ ಪುರೋಹಿತನು ಸೇರಿ ವಿಧಿವಿಧಾನ ಪೂರ್ವಕವಾಗಿ ಪೂಜಿಸುತ್ತಾರೆ. ಈ ಎಲ್ಲ ಪೂರ್ವಭಾವಿ ಸಿದ್ಧತೆಗಳಾದ ನಂತರ, ಶಿಲ್ಪಿಯು ನೀಲ ನಕ್ಷೆಯನ್ನಾಧರಿಸಿ ರಥ ನಿರ್ಮಾಣ ಕಾರ್ಯದಲ್ಲಿ ತನ್ನ ಸಂಗಡಿಗರೊಂದಿಗೆ ತೊಡಗುತ್ತಾನೆ.

ಕಾಷ್ಠಮಾಧ್ಯಮದ ರಥಗಳನ್ನು ಎರಡು ವಿಧಗಳಲ್ಲಿ ವಿಂಗಡಿಸಬಹುದು, ಅವು ಹೀಗಿವೆ

---

೩. ಸಂದರ್ಶನ-ಮನೋಹರ ಬಡಿಗೇರ, ರಥ ಶಿಲ್ಪಕೇಂದ್ರ ಬೆಂಗಳೂರು, ಜುಲೈ ೬, ೨೦೦೩

ಅ. ಕಾಷ್ಠಮಾಧ್ಯಮದ ಗಡ್ಡಿ ರಥಗಳು

ಬ. ಕಾಷ್ಠಮಾಧ್ಯಮದ ಅಂಕಣ ರಥಗಳು

ಅ. ಕಾಷ್ಠಮಾಧ್ಯಮದ ಗಡ್ಡಿ ರಥಗಳು : ಕಾಷ್ಠ ಮಾಧ್ಯಮದ ಗಡ್ಡಿ ರಥವನ್ನು ಎರಡು ಭಾಗಗಳಲ್ಲಿ ವಿಂಗಡಿಸಬಹುದು.

೧. ಸ್ಥಿರರಥ   ೨. ಚರರಥ

೧. ಸ್ಥಿರರಥ : ಸ್ಥಿರರಥ ದೇವಾಲಯದ ತೇರಿನ ಮನೆಯಲ್ಲಿರುವ ಗಡ್ಡಿ ಸ್ವರೂಪವನ್ನು ಹೊಂದಿದ್ದು ಸ್ಥಾಯಿಯಾಗಿರುತ್ತದೆ. ಈ ಸ್ಥಿರರಥವು ಗಡ್ಡಿಯ ಭಾಗದವರೆಗೆ ಇರಬಹುದು ಇಲ್ಲವೆ ಮಂಟಪ ಭಾಗದವರೆಗೂ ಇರಬಹುದು. ಸ್ಥಿರ ರಥವನ್ನು ರಚನಾ ವಿಧಾನವನ್ನು ಮೂರು ಭಾಗಗಳನ್ನಾಗಿ ವಿಂಗಡಿಸಬಹುದು.

i. ಅಡಿಪಾಯ ಭಾಗ.

ii. ಅಧಿಷ್ಠಾನ ಭಾಗ.

iii. ಮಂಟಪ ಭಾಗ.

ಶಿಲ್ಪಿಯು ಆರಂಭದಲ್ಲಿ ಸ್ಥಿರರಥದ ನಿರ್ಮಾಣದಲ್ಲಿ ಕಾರ್ಯೋನ್ಮುಖನಾಗುವನು.

i. ಅಡಿಪಾಯ ಭಾಗದ ರಚನಾ ವಿಧಾನ : ರಥ ನಿರ್ಮಾಣ ಕಾರ್ಯವು ಅಡಿಪಾಯದಿಂದ ಆರಂಭಗೊಳ್ಳುವುದು. ರಥದ ಅಡಿಪಾಯವು ರ. ಚಕ್ರ, ಠ. ಅಚ್ಚು ಹಾಗೂ ಈ. ತೊಲೆಗಳನ್ನು ಹೊಂದಿರುತ್ತದೆ. ಮೊದಲು ಚಕ್ರಗಳ ವಿಧಗಳು ಹಾಗೂ ಅವುಗಳ ರಚನಾ ವಿಧಾನಗಳನ್ನು ತಿಳಿದುಕೊಳ್ಳೋಣ.

ರ. ಚಕ್ರಗಳು : ರಥಕ್ಕೆ ಮೂರು ವಿಧದ ಚಕ್ರಗಳನ್ನು ಉಪಯೋಗಿಸಲಾಗುತ್ತದೆ.

★. ಹಲಗೆಯ ಚಕ್ರಗಳು ★. ಅರೆಗಳನ್ನುಳ್ಳ ಚಕ್ರಗಳು ★. ಶಿಲೆಯ ಚಕ್ರಗಳು.

★. ಹಲಗೆಯ ಚಕ್ರಗಳು : ಹಲಗೆಯ ಚಕ್ರಗಳನ್ನು ತಯಾರಿಸಲು ಮರದ ದಪ್ಪವಾದ ಹಲಗೆಗಳನ್ನು ಉಪಯೋಗಿಸುವರು. ಚಕ್ರಗಳು ಬಹುದಿನಗಳವರೆಗೆ ಬಾಳಿಕೆ ಬರಲು ಮತ್ತು ರಥದ ಭಾರವನ್ನು ತಡೆಯುವಷ್ಟು ಗಟ್ಟಿಯಾಗಿರಲು ಒಳ್ಳೆಯ ಕಾಷ್ಠಗಳನ್ನು ಉಪಯೋಗಿಸುವರು. ''ರಥಗಳಿಗೆ ಮರದ ಚಕ್ರಗಳನ್ನು ನಿರ್ಮಿಸಲು ಸಾರಾ, ಸಕಲ, ಮಧುಕ, ತಿಂತಿಡಿ, ಬುದ್ಬುದ, ವ್ಯಾಘ್ರ, ಕ್ಷಿವಿಣೆ, ಖದಿರ, ಕೃಕರ, ಕೃತಮೂಲ, ಇಂಥಹ ವೃಕ್ಷಗಳ ಕಟ್ಟಿಗೆಗಳನ್ನು ಬಳಸಬೇಕು'' ಎಂದು 'ಮಾನಸಾರ' ಗ್ರಂಥದಲ್ಲಿ ಉಲ್ಲೇಖಿಸಲಾಗಿದೆ[೪].

''ಚಕ್ರದ ಎತ್ತರ, ಅಡಿಪಾಯದ ಅರ್ಧದಷ್ಟಿರಬೇಕು. ಚಕ್ರದ ವ್ಯಾಸ ಎರಡು ಅಡಿ ಎಂಟು ಅಂಗುಲದಿಂದ ಹಿಡಿದು ಹತ್ತು ಅಡಿ ಎರಡು ಅಂಗುಲದವರೆಗೆ ಇರಬೇಕು. ಅತೀ ದೊಡ್ಡ ಹಾಗೂ

೪. ''ರಥ ಸಾವಿರ ವರ್ಷಗಳ ಇತಿಹಾಸ'' ಪಿ. ಆರ್. ತಿಪ್ಪೇಸ್ವಾಮಿ, ಪ್ರಜಾವಾಣಿ : ಪು.ಸಂ. ೨೨, ೧೯೯೫.

ಅತೀ ಚಿಕ್ಕ ಚಕ್ರಗಳ ಅಳತೆ ಈ ಪ್ರಮಾಣದಲ್ಲಿ ಇರುತ್ತದೆ'' ಎಂದು ಶಿಲ್ಪಶಾಸ್ತ್ರ ಹೇಳುತ್ತದೆ.

ಹಲಗೆಯ ಚಕ್ರಗಳನ್ನು ತಯಾರಿಸಲು ದಪ್ಪ ಹಾಗೂ ಉದ್ದವಾದ ಮರದ ಹಲಗೆಗಳನ್ನು ಸಾಲಾಗಿ ಒಂದಕ್ಕೊಂದು ಹೊಂದಿಕೊಳ್ಳುವಂತೆ ಇಡುವರು. ಉದ್ದ ದಾರ ಮತ್ತು ಚಾಕ್‌ಪೀಸ್‌ಗಳ ಸಹಾಯದಿಂದ ಎಲ್ಲ ಹಲಗೆಗಳ ಮೇಲೆ ಹಾಯ್ದು ಹೋಗುವ ಪ್ರಮಾಣಬದ್ಧವಾದ ದೊಡ್ಡ ವೃತ್ತವನ್ನೆಳೆಯುವರು. ಆಮೇಲೆ ಆ ರೇಖೆಗಳನ್ನಾಧರಿಸಿ ಹಲಗೆಗಳನ್ನು ಕೊರೆಯಲಾಗುವುದು. ಹಲಗೆಗಳು ಒಂದಕ್ಕೊಂದು ಹೊಂದಿಕೊಂಡು ಕೂಡಲು ಹಲಗೆಗಳ ಎರಡೂ ಮೈಗಳ ಮೇಲೆ ಸುಮಾರು ನಾಲ್ಕು ಅಥವಾ ಮೂರು ಇಂಚು ಅಗಲವಾದ, ಚಪ್ಪಟೆಯಾಕಾರದ ಕಬ್ಬಿಣದ ಪಟ್ಟಿಗಳನ್ನು ಅಡ್ಡಲಾಗಿ ನಟ್ ಬೋಲ್ಟ್‌ಗಳ ಸಹಾಯದಿಂದ ಬಿಗಿಯುವರು. ವೃತ್ತಾಕಾರವಾಗಿ ತಯಾರಿಸಲ್ಪಟ್ಟ ಚಕ್ರದ ಮಧ್ಯಭಾಗದಲ್ಲಿ, ರಥದ ಅಚ್ಚು ಸೇರುವಷ್ಟು ಪ್ರಮಾಣದಲ್ಲಿ ದುಂಡಾಕಾರವಾಗಿ ಕೊರೆಯಲಾಗುವುದು. ಚಕ್ರಗಳು ಮಧ್ಯ ಭಾಗದಲ್ಲಿ ದಪ್ಪವಾಗಿದ್ದು ವ್ಯಾಸದ ಅಂಚಿನ ಹತ್ತಿರ ಹೋದಂತೆ ಇಳಿಜಾರಾಗಿರುತ್ತವೆ.

ಮರದ ಚಕ್ರಗಳು ಸವೆಯಬಾರದೆಂದು ಅವುಗಳಿಗೆ ಕಬ್ಬಿಣದ ಹಳಿಗಳನ್ನು ಜೋಡಿಸಿರುತ್ತಾರೆ. ವೃತ್ತಾಕಾರದ ಹಳಿಗಳನ್ನು ಮೊದಲು ಬೆಂಕಿಯಲ್ಲಿ ಕೆಂಪಗಾಗುವಂತೆ ಕಾಯಿಸಿ, ಮರದ ಚಕ್ರಗಳಿಗೆ ಸರಿಯಾಗಿ ಜೋಡಿಸಿದ ನಂತರ, ತಕ್ಷಣದಲ್ಲಿ ನೀರು ಸುರಿಯುವರು. ಇದರಿಂದ ಕಬ್ಬಿಣದ ಹಳಿಗಳು ಕುಗ್ಗಿ ಮರದ ಚಕ್ರಗಳಿಂದ ಸರಿಯದಂತೆ ಗಟ್ಟಿಯಾಗಿ ಹೊಂದಿಕೊಳ್ಳುತ್ತವೆ.

ಚಕ್ರಗಳ ಮಧ್ಯ ದುಂಡಾಕಾರದಲ್ಲಿ ಕೊರೆದಿರುವ ಭಾಗಕ್ಕೆ ತಗಡುಗಳನ್ನು ಇಲ್ಲವೆ ತೆಳು ಕಬ್ಬಿಣದ ಪಟ್ಟಿಗಳನ್ನು ದುಂಡಾಕಾರವಾಗಿ ಹೊಂದಿಸಿ, ಮೊಳೆ ಹೊಡೆದಿರುತ್ತಾರೆ. ಇದಕ್ಕೆ 'ಬಾಯ್ಬಳೆ' ಎಂದು ಕರೆಯುವುದುಂಟು. ಈ ರೀತಿಯಲ್ಲಿ ಹಲಗೆಯ ಚಕ್ರಗಳನ್ನು ತಯಾರಿಸುವರು.

★. **ಅರೆಗಳನ್ನುಳ್ಳ ಚಕ್ರಗಳು :** ಅರೆಗಳನ್ನುಳ್ಳ ಚಕ್ರಗಳೂ ಸಹ ಮರದ ಹಲಗೆ, ಕಬ್ಬಿಣದ ಹಳಿ ಹಾಗೂ ತಗಡುಗಳಿಂದಲೇ ತಯಾರಿಸಲ್ಪಡುವವು. ಈ ಚಕ್ರಗಳ ಮಧ್ಯ ಭಾಗದಲ್ಲಿ ಗಡ್ಡೆ ಇರುತ್ತದೆ. ಈ ಚಕ್ರಗಳಲ್ಲಿರುವ ಹನ್ನೆರಡು ಅರೆಗಳೂ ಮಧ್ಯದಲ್ಲಿರುವ ಗಡ್ಡೆಯನ್ನು ಸಂಧಿಸುತ್ತವೆ. ಈ ಚಕ್ರಗಳಿಗೆ ಕಬ್ಬಿಣದ ಹಳಿಗಳನ್ನು ಹೊಂದಿಸಿರುತ್ತಾರೆ. ಹಳಿಗಳನ್ನು ಹೊಂದಿಸಲು ಮರದ ಹಲಗೆಗಳಿಗೆ ಹೊಂದಿಸುವ ವಿಧಾನವನ್ನೇ ಬಳಸುತ್ತಾರೆ. ಅರೆಗಳನ್ನುಳ್ಳ ಚಕ್ರಗಳು ಚಕ್ಕಡಿಯ ಗಾಲಿಗಳನ್ನು ಹೋಲುತ್ತವೆ. ಆದರೆ ಚಕ್ಕಡಿಯ ಗಾಲಿಗಳಷ್ಟು ಎತ್ತರವಾಗಿರುವುದಿಲ್ಲ. ಚಿಕ್ಕದಾಗಿದ್ದು ರಥದ ಗಾತ್ರಕ್ಕೆ ಪ್ರಮಾಣಬದ್ಧವಾಗಿರುತ್ತವೆ. ಕೆಲವೆಡೆ ಅರೆಗಳನ್ನುಳ್ಳ ಚಕ್ರಗಳನ್ನು ಸಂಪೂರ್ಣವಾಗಿ ಕಬ್ಬಿಣದಿಂದಲೇ ನಿರ್ಮಿಸುವರು. ಕಬ್ಬಿಣದ ಅರೆಗಳ ಚಕ್ರಗಳು ಕಟ್ಟಿಗೆಯ ಅರೆಗಳ ಚಕ್ರಗಳಿಗಿಂತ ದೀರ್ಘ ಕಾಲ ಬಾಳಿಕೆ ಬರುತ್ತವೆ.

★. **ಶಿಲೆಯ ಚಕ್ರಗಳು :** ಅನೇಕ ರಥಗಳಿಗೆ ಶಿಲೆಯ ಚಕ್ರಗಳನ್ನು ಅಳವಡಿಸಿರುವುದನ್ನು ಕಾಣಬಹುದು. ಬೃಹತ್ ಗಾತ್ರದ ಶಿಲೆಯ ಚಕ್ರಗಳನ್ನು ತಯಾರಿಸಲು, ದೊಡ್ಡ ದೊಡ್ಡ ಕಲ್ಲು ಪಡಿಗಳಿಂದ ಹಾಗೂ ಬಂಡೆಗಲ್ಲುಗಳಿಂದ ಶಿಲೆಗಳನ್ನು ಕತ್ತರಿಸಿ ತರಲಾಗುತ್ತದೆ. ಅವುಗಳ ಮೇಲೆ ಬಣ್ಣದ ಕಡು ಅಥವಾ ಪೆನ್ಸಿಲ್‌ಗಳಿಂದ ವೃತ್ತಾಕಾರವಾಗಿ ಗುರುತು ಮಾಡಿದ ನಂತರ, ಆ ಗೆರೆಗಳ ಗುಂಟ

ರಥಶಿಲ್ಪಗಳ ವಿವಿಧ ಪ್ರಕಾರದ ಚಕ್ರಗಳು




ಹಳಿಗಳನ್ನುಳ್ಳ ಮರದ ಗಾಲಿ



ಕಬ್ಬಿಣದ ಅಖಂಡ ಗಾಲಿ



ಮರದ ಗಾಲಿಗಳು



ನಟ್‌ಬೋಲ್ಟ ಹಾಗೂ ಕಬ್ಬಿಣದ ಪಟ್ಟಿಗಳುಳ್ಳ ಮರದ ಗಾಲಿ



ಕಬ್ಬಿಣದ ಗಾಲಿಗಳು



ಸುಂದರ ವಿನ್ಯಾಸದ ಶಿಲೆಯ ಗಾಲಿ



ಶಿಲೆಯ ಗಾಲಿಗಳು



ಅರಗಳನ್ನುಳ್ಳ ಕಬ್ಬಿಣದ ಗಾಲಿ


ಕಾಷ್ಠ ರಥಶಿಲ್ಪಗಳ ಮರದ ಚಕ್ರಗಳು




ಶ್ರೀ ತಾರಕೇಶ್ವರ ರಥದ ಚಕ್ರಗಳು
ಹಾನಗಲ, ಜಿ - ಹಾವೇರಿ



ಶ್ರೀ ಶಂಕರಲಿಂಗನ ರಥದ ಚಕ್ರಗಳು
ಬಳ್ಳಾರಿ, ಜಿ - ಬಳ್ಳಾರಿ



ಶ್ರೀ ಶಂಕಲಿಂಗನ ರಥದ ಚಕ್ರಗಳು
ಸಂಕೇಶ್ವರ, ಜಿ - ಬೆಳಗಾಂವ



ಶ್ರೀ ಆಂಜನೇಯ ರಥದ ಚಕ್ರಗಳು
ಮರೇಮ್ಮನಹಳ್ಳಿ, ಜಿ - ಬಳ್ಳಾರಿ



ವಸ್ತುಸಂಗ್ರಹಾಲಯದ ರಥದ ಚಕ್ರಗಳು
ಧರ್ಮಸ್ಥಳ



ಶ್ರೀ ನಂಜುಂಡೇಶ್ವರ ರಥದ ಚಕ್ರಗಳು
ನಂಜನಗೂಡು

ಕೊರೆಯಲು ಇತ್ತೀಚೆಗೆ ವಿದ್ಯುತ್ ಚಾಲಿತ ಯಂತ್ರಗಳ ಉಪಯೋಗ ಮಾಡುತ್ತಿದ್ದಾರೆ. ಮೊದಲು ನಮ್ಮ ಪೂರ್ವಜರು ಯಾವ ಯಂತ್ರಗಳನ್ನು ಬಳಸದೆ, ಸುತ್ತಿಗೆ ಹಾಗೂ ಛಾಣಗಳಿಂದ ವಿವಿಧ ರೀತಿಯ ಉಳಿಗಳಿಂದ ಮಾತ್ರ ಶಿಲೆಯ ಕೆತ್ತನೆ ಮಾಡುತ್ತಿದ್ದರು. ಈಗ ವಿವಿಧ ಆಧುನಿಕ ಯಂತ್ರಗಳ ಆವಿಷ್ಕಾರವಾದ ನಂತರ ಬೃಹತ್ ಗಾತ್ರದ ಶಿಲೆಗಳನ್ನು ಕತ್ತರಿಸಲು, ಪಾಲಿಶ್ ಮಾಡಲು, ಕೊರೆಯಲು ಅವುಗಳನ್ನೇ ಬಳಸುತ್ತಿದ್ದಾರೆ.

ಶಿಲೆಯ ಚಕ್ರಗಳನ್ನು ತಯಾರಿಸಲು ಛಾಣ ಮತ್ತು ಸುತ್ತಿಗೆಗಳಿಂದಾಗಲಿ ಅಥವಾ ಸ್ಟೋನ್ ಕಟಿಂಗ ಮಶೀನ್‌ನ ಸಹಾಯದಿಂದಾಗಲಿ, ಶಿಲೆಯ ಬೇಡವಾದ ಭಾಗಗಳನ್ನು ಒಡೆದು ತೆಗೆಯುತ್ತಾರೆ. ಪೂರ್ಣವೃತ್ತಾಕಾರದಲ್ಲಿ ತಯಾರಾದ ಎಲ್ಲ ಚಕ್ರಗಳನ್ನು ಸ್ಯಾಂಡ್ ಪೇಪರುಗಳಿಂದ ಅಥವಾ ಪಾಲಿಶ್ ಮಶಿನ್‌ನ ಸಹಾಯದಿಂದ ತಿಕ್ಕಿ ನಯಗೊಳಿಸುತ್ತಾರೆ. ಪೂರ್ಣವಾಗಿ ನಯವಾದ ಮೈವಳಿಕೆಯನ್ನು ಹೊಂದಿದ ಚಕ್ರಗಳ ಮಧ್ಯ ಭಾಗದಲ್ಲಿ ವಿವಿಧ ರೀತಿಯ ಉಳಿಗಳಿಂದ ಅಥವಾ ಡ್ರಿಲ್ಲಿಂಗ್ ಮಶಿನ್‌ನ ಸಹಾಯದಿಂದ ದುಂಡಾಗಿ ಕೊರೆಯುತ್ತಾರೆ. ರಥದ ಅಚ್ಚುಗಳಿಗೆ ಚಕ್ರಗಳು ಸರಿಯಾಗಿ ಸೇರುವಂತೆ ಮಧ್ಯ ಭಾಗದಲ್ಲಿ ದುಂಡಾಗಿ ಕೊರೆದಿರುವ ಭಾಗದಲ್ಲಿ ಸ್ಯಾಂಡ್‌ಪೇಪರುಗಳಿಂದ ಉಜ್ಜಿ ನಯಗೊಳಿಸುವರು.

ಇದೆಲ್ಲ ಪೂರ್ಣಗೊಂಡ ನಂತರ ಚಕ್ರಗಳ ಹೊರ ಮೈಗಳೆಲ್ಲವೂ ಸುಂದರವಾಗಿ ಕಾಣಲು, ಸಣ್ಣ ಸಣ್ಣ ಉಳಿಗಳ ಸಹಾಯದಿಂದ ಹೂ ಬಳ್ಳಿಯಂತಹ ಅನೇಕ ವಿನ್ಯಾಸಗಳ ಉಬ್ಬು ಶಿಲ್ಪಗಳನ್ನು ರಚಿಸುವರು. ಇತ್ತೀಚೆಗೆ ಶಿಲೆಯ ಚಕ್ರಗಳು ಅಚ್ಚಿಗೆ ಸೇರುವ ಭಾಗದಲ್ಲಿ ಕಬ್ಬಿಣದ ಚೌಕಾಕಾರದ ಇಲ್ಲವೆ ವರ್ತುಳಾಕಾರದ ಪ್ಲೇಟ್‌ಗಳನ್ನು ಅಳವಡಿಸುವರು.

ಅ. ಅಚ್ಚುಗಳು : ಮರದ ದೊಡ್ಡ ದೊಡ್ಡ ದಿಂಡುಗಳನ್ನು ಅಚ್ಚು ತಯಾರಿಕೆಗೆ ಉಪಯೋಗಿಸುವರು. ಉತ್ತರ ಕರ್ನಾಟಕದ ಭಾಗದಲ್ಲಿ ದಿಂಡಲ ಇಲ್ಲವೆ ಜಾಲಿ ಕಟ್ಟಿಗೆಯನ್ನು ಬಳಸಿ ಅಚ್ಚನ್ನು ನಿರ್ಮಿಸುತ್ತಾರೆ.

ಮರದ ದೊಡ್ಡ ದಿಂಡುಗಳನ್ನು ವುಡ್ ಕಟಿಂಗ್ ಮಶಿನ್‌ಗಳಿಂದ ಹಾಗೂ ವಿವಿಧ ಗರಗಸಗಳಿಂದ ಕತ್ತರಿಸಿ ಚೌಕಾಕಾರದ ತೊಲೆಗಳಂತೆ ಮಾಡುತ್ತಾರೆ. ಅಚ್ಚುಗಳ ಮಧ್ಯಭಾಗದಲ್ಲಿ ಮಾತ್ರ ಚೌಕಾಕಾರವನ್ನು ಉಳಿಸಿ, ಗಾಲಿಗಳು ಜೋಡಣೆಯಾಗುವ ಭಾಗವನ್ನು ಮಾತ್ರ ಎರಡೂ ಬದಿಗಳಲ್ಲಿ ದುಂಡಾಗಿ ಕೊಳವೆಯಾಕಾರವನ್ನು ಮಾಡುತ್ತಾರೆ. ಆಮೇಲೆ ಪಾಲಿಶ್ ಯಂತ್ರ ಅಥವಾ ಸ್ಯಾಂಡ್ ಪೇಪರುಗಳ ಸಹಾಯದಿಂದ ದುಂಡಾದ ಎರಡೂ ಬದಿಗಳನ್ನು ಉಜ್ಜಿ ನುಣುಪಾಗಿಸುವರು. ಆಮೇಲೆ ಚಕ್ರಗಳು ಜೋಡಣೆಗೊಳ್ಳುವ ಅಚ್ಚಿನ ಭಾಗಗಳಿಗೆ ಅಷ್ಟೇ ಗಾತ್ರದ ಕಬ್ಬಿಣದ ದಪ್ಪವಾದ ಕೊಳವೆಯನ್ನು ಜೋಡಿಸುತ್ತಾರೆ. ಈ ಪದ್ಧತಿಯನ್ನು ಅನುಸರಿಸುವುದರಿಂದ ರಥದ ಅಚ್ಚುಗಳು ಬೇಗನೆ ಸವಕಳಿಯಾಗುವುದಿಲ್ಲ. ರಥವನ್ನು ಎಳೆಯಲು, ಮಿಣೆಗಳನ್ನು ಕಟ್ಟಲು, ದಪ್ಪವಾದ ಎರಡು ಕಬ್ಬಿಣದ ಬಳೆಗಳನ್ನು ಅಚ್ಚುಗಳ ಮಧ್ಯಭಾಗದಿಂದ ಎರಡೂ ಬದಿಗಳಲ್ಲಿ ಕೂಡಿಸುವರು.

ಈ. ತೊಲೆಗಳು : ದೊಡ್ಡ ದೊಡ್ಡ ಹಾಗೂ ದಪ್ಪವಾದಂತಹ ಸಾಗುವಾನಿ ಮರಗಳ ಉದ್ದವಾದ ದಿಂಡುಗಳನ್ನು ತೊಲೆಗಳನ್ನಾಗಿ ಬಳಸುವರು. ವುಡ್ ಕಟಿಂಗ್ ಮಶಿನ್ ಅಥವಾ ಗರಗಸಗಳ ಸಹಾಯದಿಂದ ದಿಂಡುಗಳಿಗೆ ಚೌಕಾಕಾರವನ್ನು ಕೊಟ್ಟು, ಪಾಲಿಶ್ ಮಶಿನ್‌ಗಳ ಸಹಾಯದಿಂದ

ನುಣುಪುಗೊಳಿಸುವರು. ಮೇಲ್ಮೈಯನ್ನು ಸಮತಳಿಯನ್ನಾಗಿಸಲು, ಕೆಲವೊಂದು ಸಾರಿ ವುಡ್‌ಕಟ್‌ನ್ನು ಬಳಸುವರು.

ರಥಗಳಿಗೆ ಆಧಾರ ತೊಲೆಗಳನ್ನಾಗಿ ಬಳಸುವ ಐದು ಅಥವಾ ಆರು ತೊಲೆಗಳ ಎರಡು ಮುಖಗಳಲ್ಲಿ ಸಿಂಹ, ಆನೆ, ಕುದುರೆ ಅಥವಾ ಉಪಪೀಠದ ಮೇಲೆ ಕೆಲವು ಮಿಥುನ ಶಿಲ್ಪಗಳನ್ನು ಸುಂದರವಾಗಿ ರಚಿಸುವರು.

ಹೀಗೆ ಅಡಿಪಾಯದ ಭಾಗಗಳಾದ ಚಕ್ರಗಳು ಅಚ್ಚುಗಳು ಹಾಗೂ ತೊಲೆಗಳು ನಿರ್ಮಾಣಗೊಂಡ ನಂತರ ಅವುಗಳೆಲ್ಲವನ್ನು ಒಂದು ಸ್ಥಳದಲ್ಲಿ ಬಿಡಿಬಿಡಿಯಾಗಿ ತೆಗೆದಿಡುವರು. ಬಿಡಿ ಭಾಗಗಳ ಹೊಂದಾಣಿಕೆ : ಸಿದ್ಧಗೊಂಡ ರಥದ ಚಕ್ರಗಳನ್ನು ಅಚ್ಚುಗಳ ಎರಡೂ ಬದಿಯ ದುಂಡಾಕಾರದ ಕೊಳವೆಯಂತಿರುವ ಭಾಗದಲ್ಲಿ ಸರಿಯಾಗಿ ಹೊಂದಿಸುವರು. ಅಚ್ಚುಗಳ ಕೊಳವೆಯಂತಿರುವ ಭಾಗವು, ಚಕ್ರಗಳ ಮಧ್ಯದಲ್ಲಿ ದುಂಡಾಕಾರವಾಗಿ ಕೊರೆದಿರುವಲ್ಲಿ ಹಾಯ್ದು ಸ್ವಲ್ಪ ಮುಂದೆ ಬಂದಿರುತ್ತದೆ. ರಥದ ಚಕ್ರಗಳು ಅಚ್ಚನ್ನು ದಾಟಿ ಹೊರಬರದಂತೆ ಭದ್ರವಾಗಿ ನಾಲ್ಕೂ ಕಡೆಗಳಲ್ಲಿ ಕೀಲಗಳನ್ನು ಹಾಕುತ್ತಾರೆ.

ಅಚ್ಚುಗಳನ್ನು ಹೊಂದಿಕೊಂಡೇ ಚೌಕಾಕಾರದ ಅಷ್ಟೇ ಗಾತ್ರದ ತೊಲೆಯೊಂದನ್ನು, ಎರಡೂ ಅಚ್ಚುಗಳ ಮೇಲೆಯೂ ಕೂಡಿಸುತ್ತಾರೆ. ಇದನ್ನು ಗ್ರಾಮೀಣ ಭಾಷೆಯಲ್ಲಿ 'ಓಟಿ' ಎಂದು ಕರೆಯುತ್ತಾರೆ. ಗ್ರಾಂಥಿಕ ಭಾಷೆಯಲ್ಲಿ ಇದನ್ನು ಉಪಪೀಠ ಎಂದು ಕರೆಯಬಹುದು ಉಪ ಪೀಠವನ್ನು ಅಚ್ಚಿನ ಮೇಲೆ ಜೋಡಿಸುವುದರಿಂದ, ಅಡಿಪಾಯದ ಎತ್ತರವು ಚಕ್ರಗಳ ಮಟ್ಟವನ್ನು ಮೀರುತ್ತದೆ. ಇದರ ಮೇಲೆ ಉಪಪೀಠದ ಅಗಲಳತೆಗಳಿಗೆ ತಕ್ಕಂತೆ ಐದು ಇಲ್ಲವೆ ಆರು ಆಧಾರ ತೊಲೆಗಳನ್ನು ಸ್ವಲ್ಪ ಸ್ವಲ್ಪ ಅಂತರದಲ್ಲಿ ಸರಿದಾಡದಂತೆ ನಟ್ ಬೋಲ್ಟ್‌ಗಳ ಸಹಾಯದಿಂದ ಅಥವಾ ಕೀಲುಗಳ ಸಹಾಯದಿಂದ ಸರಿಯಾಗಿ ಜೋಡಿಸಲಾಗುತ್ತದೆ. ಹೀಗೆ ಹೊಂದಿಸಿದ ತೊಲೆಗಳ ಮೇಲ್ಭಾಗದಲ್ಲಿ ಸರಿ ಸಮನಾದ ಅಂತರದಲ್ಲಿ ಚೌಕಾಕಾರದಲ್ಲಿ, ದಪ್ಪವಾದ ಹಲಗೆಗಳನ್ನು ಹೊಂದಿಸಿ, ಭದ್ರವಾಗಿ ನಟ್ ಬೋಲ್ಟ್‌ಗಳಿಂದ ಬಿಗಿಯಲಾಗುತ್ತದೆ. ಈ ರೀತಿಯಾಗಿ ರಥದ ಅಡಿಪಾಯ ಭಾಗವನ್ನು ಸುಭದ್ರವಾಗಿ ನಿರ್ಮಿಸುವರು.

ii. ಅಧಿಷ್ಠಾನ ಭಾಗದ ರಚನಾ ವಿಧಾನ : ಗಡ್ಡಿ ರಥಗಳ ಅಧಿಷ್ಠಾನ ಭಾಗವು ನಾಲ್ಕು ಹಂತಗಳಲ್ಲಿ ನಿರ್ಮಾಣಗೊಳ್ಳುವುದು.

★. ಹಲಗೆಗಳನ್ನು ಕೊರೆಯುವುದು

★. ವಿವಿಧ ರೇಖಾ ಚಿತ್ರಗಳ ರಚನೆ

★. ವಿವಿಧ ಮೂರ್ತಿ ಶಿಲ್ಪಗಳ ರಚನೆ

★. ಬಿಡಿ ಭಾಗಗಳ ಹೊಂದಿಕೆ.

ಈ ನಾಲ್ಕೂ ಹಂತಗಳಲ್ಲಿಯ ರಚನಾ ವಿಧಾನಗಳನ್ನು ವಿವರವಾಗಿ ತಿಳಿಯುವಾ


★. **ಹಲಗೆಗಳನ್ನು ಕೊರೆಯುವುದು :** ರಥದ ಅಧಿಷ್ಠಾನ ಬಾಗದ ರಚನೆಗೆ ಶಿಲ್ಪಿಗಳು ಸಾಗುವಾನಿ ಅಥವಾ ಶ್ರೀಗಂಧದ ಕಟ್ಟಿಗೆಗಳನ್ನು ಬಳಸುವರು. ಶ್ರೀಗಂಧದ ಕಾಷ್ಠವು ತುಂಬಾ ದುಬಾರಿಯಾಗಿರುವುದರಿಂದ ಹೆಚ್ಚಾಗಿ ಸಾಗುವಾನಿ ಕಟ್ಟಿಗೆಗಳನ್ನು ಉಪಯೋಗಿಸುವುದನ್ನು ಕಾಣುತ್ತೇವೆ. ಸಾಗುವಾನಿ ಹಾಗೂ ಗಂಧದ ಕಟ್ಟಿಗೆಗಳು ಶಿಲ್ಪ ಕೆತ್ತನೆ ಕೆಲಸಕ್ಕೆ ಯೋಗ್ಯವಾದ ಗುಣವನ್ನು ಹೊಂದಿವೆ. ಆದ್ದರಿಂದ ಅಧಿಷ್ಠಾನ ಭಾಗದ ರಚನೆಗೆ ಇವು ಬಳಸಲ್ಪಡುತ್ತವೆ.

ನಿರ್ಮಾಣಗೊಳ್ಳುವ ರಥದ ನೀಲ ನಕ್ಷೆಯ ಪ್ರಕಾರ ರಥದ ಅಧಿಷ್ಠಾನದ ಆಯಾ ಭಾಗಗಳಿಗೆ ಅನುಕೂಲವಾಗುವಂತೆ, ಹೊಂದಾಣಿಕೆಯಾಗುವಂತೆ ಕಟ್ಟಿಗೆಗಳನ್ನು ಕೊರೆಯಬೇಕಾಗುತ್ತದೆ. ದೊಡ್ಡ ದೊಡ್ಡ ಮರದ ತೊಲೆಗಳಿಂದ ಅನೇಕ ಹಲಗೆಗಳನ್ನು ಬೇರೆ ಬೇರೆ ಅಳತೆಗಳಲ್ಲಿ ಕೊರೆಯುವರು. ಚೌಕಾಕಾರ, ಆಯತಾಕಾರ, ಸ್ವಲ್ಪ ದಪ್ಪವಾದ ಅಗಲವಾದ ಹೀಗೆ ವಿವಿಧ ಅಳತೆ ಮತ್ತು ಆಕಾರಗಳಲ್ಲಿ ಕೊರೆಯಲಾಗುವುದು. ಇವುಗಳನ್ನು ಕೊರೆಯಲು ಅನೇಕ ರೀತಿಯ ಗರಗಸಗಳನ್ನು ಹಾಗೂ ವುಡ್ ಕಟಿಂಗ್ ಮಶಿನ್‌ಗಳನ್ನು ಉಪಯೋಗಮಾಡುವರು. ಇವುಗಳ ಮೇಲ್ಮೈಗಳನ್ನು ಉಚ್‌ಕಟ್ ಅಥವಾ ಪಾಲಿಶ್ ಮಶಿನಗಳಿಂದ ಸಮಗೊಳಿಸುವರು. ರಥದ ಅಧಿಷ್ಠಾನ ಭಾಗದಲ್ಲಿ ಮೂರ್ತಿಶಿಲ್ಪ ರಚನೆಗೆ ಅನುಕೂಲವಾಗುವಂತೆ ಪ್ರಧಾನ ಶಿಲ್ಪಿಯ ಮಾರ್ಗದರ್ಶನದ ಮೇರೆಗೆ ಮೊದಲ ಹಂತದಲ್ಲಿ ಹಲಗೆಗಳನ್ನು ಕೊರೆಯಲಾಗುವುದು.

★. **ವಿವಿಧ ರೇಖಾ ಚಿತ್ರಗಳ ರಚನೆ :** ಅಧಿಷ್ಠಾನ ಭಾಗದಲ್ಲಿ ಶಿಲ್ಪ ರಚನೆಗಳನ್ನು ಮಾಡುವ ಮೊದಲು ಪೂರ್ವಭಾವಿಯಾಗಿ ಅಧಿಷ್ಠಾನ ಭಾಗದ ನೀಲ ನಕ್ಷೆಯ ಪ್ರಕಾರ, ಯಾವ ಯಾವ ಭಾಗದಲ್ಲಿ ಎಂತಹ ಶಿಲ್ಪಗಳನ್ನು ರಚಿಸಬೇಕೆಂಬುವುದರ ಬಗ್ಗೆ ವಿಚಾರಿಸಿ, ಪೇಪರ್‌ಗಳಲ್ಲಿ ವಿವಿಧ ಮೂರ್ತಿಗಳ ರೇಖಾಚಿತ್ರಗಳನ್ನು ರಚಿಸುವರು. ಪ್ರಾಣಿ ಪಕ್ಷಿಗಳ, ದೇವತೆಗಳ, ಸಿದ್ಧಪುರುಷರ, ಶಿವಶರಣರ ಹಾಗೂ ವಿವಿಧ ಹೂ ಬಳ್ಳಿಗಳ ಸುಳುವುಗಳ ಹೀಗೆ ಬೇರೆ ಬೇರೆ ರೀತಿಯ ರೇಖಾ ಚಿತ್ರಗಳನ್ನು ಆಯಾ ಚಿತ್ರಗಳ ತಾಲಮಾನಗಳಿಗೆ ಅನುಗುಣವಾಗಿ ಚಿತ್ರಿಸಬೇಕಾಗುವುದು. ಇವಲ್ಲದೆ ರಾಮಾಯಣ, ಮಹಾಭಾರತ, ಭಾಗವತ, ದಶಾವತಾರ, ಪಂಚತಂತ್ರ, ನವಗ್ರಹ, ಅಷ್ಟದಿಕ್ಪಾಲಕರು , ಮಿಥುನ ಹೀಗೆ ಮರದ ಹಲಗೆಗಳ ಮೇಲೆ ರಚಿಸಬೇಕಾದ ಶಿಲ್ಪಗಳ ರೇಖಾ ಚಿತ್ರಗಳನ್ನು ಪ್ರಧಾನ ಶಿಲ್ಪಿಯ ಆಜ್ಞೆಗನುಸಾರವಾಗಿ ಎಲ್ಲ ಶಿಲ್ಪಿಗಳೂ ರಚಿಸುವರು. ಈ ಎಲ್ಲ ರೇಖಾ ಚಿತ್ರಗಳ ಸರಿ ತಪ್ಪುಗಳನ್ನು ನೋಡಿದ ನಂತರ ಅವುಗಳನ್ನು ಟ್ರೆಸ್ಸಿಂಗ್ ಹಾಳೆಗಳಲ್ಲಿ ಟ್ರೇಸ್ ಮಾಡಿಕೊಳ್ಳಲಾಗುವುದು. ರೇಖಾ ಚಿತ್ರಗಳ ರಚನೆ ಮುಂದಿನ ಕೆಲಸಕ್ಕೆ ಅತ್ಯವಶ್ಯಕವಾಗಿದೆ.

★. **ವಿವಿಧ ಮೂರ್ತಿ ಶಿಲ್ಪಗಳ ರಚನೆ :** ಸಾಂಪ್ರದಾಯಿಕ ಚೌಕು, ವರ್ತುಳ, ಅಷ್ಟಮ, ದ್ವಾದಶ, ನಕ್ಷತ್ರ ಹಾಗೂ ಬಹು ಕೋನಗಳ ವಿನ್ಯಾಸಗಳಲ್ಲಿ ನಿರ್ಮಾಣಗೊಳ್ಳುವ ಅಧಿಷ್ಠಾನ ಭಾಗದ ಆಯಾ ಭಾಗಗಳಿಗೆ ಸರಿಯಾಗಿ ಹೊಂದಾಣಿಕೆಯಾಗುವಂತೆ ಕೊರೆದಿರುವ ಬೇರೆ ಬೇರೆ ಅಳತೆಯ ಹಲಗೆಗಳ ಮತ್ತು ಪಟ್ಟಿಕೆಗಳ ಮೇಲೆ ಶಿಲ್ಪರಚನೆಯನ್ನು ಮಾಡುವುದಕ್ಕಿಂತ ಮೊದಲು, ಆಯಾ ಪಟ್ಟಿಕೆಗಳಿಗೆ ಸಂಬಂಧಿಸಿದ ರೇಖಾಚಿತ್ರಗಳನ್ನು ಪಟ್ಟಿಕೆಗಳ ಮೇಲೆ ಟ್ರೆಸ್ ಮಾಡಿಕೊಳ್ಳುವರು. ಇಲ್ಲವೆ ರಬ್ಬರ್ ಸೋಲಿಶನ್‌ದಂತಹ ಅಂಟು ಪದಾರ್ಥಗಳಿಂದ ರೇಖಾ ಚಿತ್ರಗಳಿರುವ ಪೇಪರ್‌ಗಳನ್ನು ಪಟ್ಟಿಕೆಗಳ ಮೇಲೆ ಅಂಟಿಸುವರು.

ಕಾಷ್ಠ ರಥದ ತಯಾರಿಕಾ ವಿಧಾನಗಳು



ದೇವತಾ ಮೂರ್ತಿಯ ರೇಖಾಚಿತ್ರ



ರಥದ ನೀಲನಕ್ಷೆ



ಕಾರ್ಯನಿರತರಾದ ರಥಶಿಲ್ಪಿಗಳು



ಸಿದ್ಧಗೊಳ್ಳುತ್ತಿರುವ ಚಕ್ರಗಳು



ಹಲಗೆಯ ಮೇಲೆ ಉಬ್ಬು ಶಿಲ್ಪ ತಯಾರಿಕೆ



ಸಿದ್ಧಗೊಂಡಿರುವ ಜಿಡಿ ಶಿಲ್ಪಗಳು



ಸಿದ್ಧಗೊಂಡಿರುವ ಗೋಪುರ ಭಾಗ

ಕಾಷ್ಠ ರಥದ ತಯಾರಿಕಾ ವಿಧಾನಗಳು



ಲಾಂಬಿ ತುಂಬುದಿಕೆ




ಹಲಗೆಯ ಮೇಲೆ ಉಬ್ಬು ಶಿಲ್ಪ ತಯಾರಿಕೆ



ಕಂಬದ ರಚನಾ ವಿಧಾನ



ಕಟ್ಟಿಗೆಯನ್ನು ಗರಗಸದಿಂದ ಕತ್ತರಿಸುವಿಕೆ



ತೊಲೆಗಳ ಜೋಡಣೆ

ಕೆತ್ತನೆ ಕೆಲಸವು ಪ್ರಾರಂಭವಾಗುವುದಕ್ಕಿಂತ ಮೊದಲು ಶಿಲ್ಪಕೆತ್ತನೆಗೆ ಅನುಕೂಲವಾಗುವಂತಹ ಎಲ್ಲ ವಿನ್ಯಾಸಗಳನ್ನು ಸುಂದರವಾಗಿ ಸೂಕ್ಷ್ಮವಾಗಿ ಮೂಡಿಸಲು ಅನುಕೂಲವಾಗುವಂತಹ ಉಳಿಗಳನ್ನು ಆಯ್ಕೆ ಮಾಡುವವರು ಮತ್ತು ಶಿಲ್ಪ ರಚನೆಗೆ ಬೇಕಾಗುವಂತಹ ಕೆಲವು ಉಳಿಗಳನ್ನು ತಾವೇ ಸ್ವತಃ ತಯಾರಿಸಿಕೊಳ್ಳುವರು. ಕುಲುಮೆಯಲ್ಲಿ ಕಾಯಿಸಿ ಬೇಕಾದ ವಿಧದಲ್ಲಿ ಸುತ್ತಿಗೆಯಿಂದ ಬಡಿದು, ನೀರುಣಿಸಿ, ಸೂಕ್ಷ್ಮ ಕೆಲಸಕ್ಕೆ ಉಪಯೋಗವಾಗುವಂತಹ ನಕ್ಷೆಯ ಉಕ್ಕಿನ ಉಳಿಗಳನ್ನು ವಿವಿಧ ಅಳತೆಗಳಲ್ಲಿ ತಯಾರಿಸಿಕೊಳ್ಳುವರು.

ನಂತರ ಪ್ರಧಾನ ಶಿಲ್ಪಿಯ ಮಾರ್ಗದರ್ಶನದಂತೆ ಉಳಿದ ಶಿಲ್ಪಿಗಳು ಮರಗೆತ್ತನೆಯ ಕೆಲಸದಲ್ಲಿ ಕಾರ್ಯೋನ್ಮುಖರಾಗುವರು ಮೂರ್ತಿಶಿಲ್ಪ ರಚನೆಯ ಕಾರ್ಯದಲ್ಲಿ ವಿದ್ಯುತ್ ಚಾಲಿತ ಯಂತ್ರಗಳು ಉಪಯೋಗಕ್ಕೆ ಬರುವುದಿಲ್ಲ. ಇಲ್ಲಿ ಶಿಲ್ಪಿಗಳು ತಮ್ಮ ಕಲಾ ಕೌಶಲ್ಯವನ್ನು ತೋರಿಸಲು ಅವಕಾಶವಿರುತ್ತದೆ.

ಆನೆ, ಕುದುರೆ, ಸಿಂಹ, ನಂದಿ, ನಾಗರ, ಮೊಸಳೆ, ಆಮೆ, ಮರ್ಕಟದಂತಹ ಪ್ರಾಣಿ ಶಿಲ್ಪಗಳು ನವಿಲು, ಗಿಳಿ, ಹಂಸ, ಗರುಡ, ಇಂಥಹ ಅನೇಕ ಪಕ್ಷಿಗಳ ಶಿಲ್ಪಗಳು, ಬ್ರಹ್ಮ, ವಿಷ್ಣು, ಮಹೇಶ್ವರ, ಪಾರ್ವತಿ, ಲಕ್ಷ್ಮಿ, ಸರಸ್ವತಿ, ಗಣಪತಿ, ಆಂಜನೇಯ ಇಂತಹ ಅನೇಕ ದೇವಾನುದೇವತೆಯರ ಶಿಲ್ಪಗಳು, ಅಕ್ಕ ಮಹಾದೇವಿ, ಬಸವಣ್ಣ ಅಲ್ಲಮಪ್ರಭುಗಳ ಇಂತಹ ಶಿವಶರಣರ ಶಿಲ್ಪಗಳು ಇವುಗಳಲ್ಲದೆ, ರಾಮಾಯಣ, ಮಹಾಭಾರತ, ಭಾಗವತ, ದಶಾವತಾರ, ಪಂಚತಂತ್ರ ನವಗ್ರಹ ಅಷ್ಟದಿಕ್ಪಾಲಕರು ಹಾಗೂ ಅನೇಕ ಪೌರಾಣಿಕ ಸನ್ನಿವೇಶಗಳ ಅನೇಕ ಮೂರ್ತಿಶಿಲ್ಪಗಳನ್ನು ರಚಿಸಿದ ನಂತರ ಅವುಗಳಿಗೆ ಸ್ಯಾಂಡ್‌ಪೇಪರ್‌ಗಳಿಂದ ಉಜ್ಜಿ ನಯಗೊಳಿಸುವರು.

ಮೂರ್ತಿಶಿಲ್ಪಗಳನ್ನಷ್ಟೇ ಅಲ್ಲದೆ ಅನೇಕ ಅತೀ ಸೂಕ್ಷ್ಮ ವಿನ್ಯಾಸಗಳನ್ನು ಸುಂದರವಾಗಿ ಕಲಾತ್ಮಕವಾಗಿ, ನೋಡುಗರ ಕಣ್ಮನಗಳನ್ನು ಸೆಳೆಯುವಂತಹ ಮೂರ್ತಿ ಶಿಲ್ಪಗಳ ರಚನೆ ಮಾಡುವುದು ಗಡ್ಡಿ ರಥಗಳಲ್ಲಿ ಒಂದು ಪ್ರಮುಖ ಕೆಲಸವಾಗಿರುತ್ತದೆ. ಅಷ್ಟೇ ಸಾವಧಾನವಾಗಿ ನಡೆಯುವ ಕೆಲಸವು ಹೌದು. ಇದು ಮೂರು ನಾಲ್ಕು ತಿಂಗಳುಗಳ ಕಾಲ ಮಾಡಬೇಕಾದ ಕೆಲಸವಾಗಿರುವುದು. ಈ ಕೆಲಸ ಮುಗಿದ ನಂತರ ರಥ ನಿರ್ಮಾಣದ ಅರ್ಧ ಕೆಲಸವಾದಂತೆಯೇ ಸರಿ.

★. **ಬಿಡಿ ಭಾಗಗಳ ಹೊಂದಾಣಿಕೆ :** ಉಪ ಪೀಠದ ಮೇಲೆ ಐದು ಅಥವಾ ಆರು ಅಧಾರ ತೊಲೆಗಳ ಮೇಲೆ ಸಿಂಹ ಹಾಗೂ ಆನೆಯ ಶಿಲ್ಪವಿನ್ಯಾಸದಿಂದಲೇ ರಥದಲ್ಲಿ ಕುಸುರಿ ಕೆತ್ತನೆಯ ಕೆಲಸ ಪ್ರಾರಂಭವಾಗಿ, ಆಧಾರ ತೊಲೆಗಳು ಸರಿಯಾಗಿ ರಚನೆಗೊಂಡ ನಂತರ, ಅಧಿಷ್ಠಾನ ಭಾಗದ ಸಿದ್ಧತೆಯು ನಡೆಯುತ್ತದೆ[೫].

ಭದ್ರವಾದ ಅಡಿಪಾಯದ ಮೇಲೆ ನೀಲ ನಕ್ಷೆಯ ಪ್ರಕಾರ, ರಥವು ಯಾವ ವಿನ್ಯಾಸಗಳಲ್ಲಿ ನಿರ್ಮಾಣವಾಗಬೇಕಾಗಿದೆಯೋ, ಅಂದರೆ ಚೌಕು, ವರ್ತುಳ, ಅಷ್ಟಮ, ದ್ವಾದಶ, ನಕ್ಷತ್ರ ಹಾಗೂ ಬಹುಕೋನಗಳ ವಿನ್ಯಾಸಗಳು-ಹೀಗೆ ಆಯಾ ವಿನ್ಯಾಸಗಳಲ್ಲಿ ಅಧಿಷ್ಠಾನ ಭಾಗವನ್ನು ನಿರ್ಮಿಸಬೇಕಾಗುವುದು. ನೀಲ ನಕ್ಷೆಯ ಪ್ರಕಾರ, ಅಧಿಷ್ಠಾನ ಭಾಗದ ರಚನೆಯು, ಅನೇಕ ಹಲಗೆಗಳ

೫. ಸಂದರ್ಶನ-ಮಲ್ಲಪ್ಪ ಬಡಿಗೇರ , ರಥ ಶಿಲ್ಪಿ , ಕೊಪ್ಪಳ, ಜುಲೈ ೧೨, ೨೦೦೩

ಮೇಲೆ, ಪಟ್ಟಿಕೆಗಳ ಮೇಲೆ ಹಾಗೂ ಬಿಡಿ ಬಿಡಿಯಾದ ಚೌಕಾಕಾರದ, ಆಯತಾಕಾರದ, ಸಣ್ಣ ಹಲಗೆಗಳ ಮೇಲೆ, ಸುಂದರವಾದ ಸೂಕ್ಷ್ಮ ವಿನ್ಯಾಸಗಳನ್ನು ಹೊಂದಿದ ಶಿಲ್ಪವಿನ್ಯಾಸಗಳನ್ನು ರಥದ ಅಧಿಷ್ಠಾನದ ವಿವಿಧ ಭಾಗಗಳಲ್ಲಿ ಹೊಂದಿಸಬೇಕಾಗುತ್ತದೆ.

ಅಡಿಪಾಯದ ಮೇಲೆ ರಥದ ಅಧಿಷ್ಠಾನವು ಯಾವ ಆಕಾರದಲ್ಲಿ ನಿರ್ಮಾಣವಾಗಬೇಕಾಗಿದೆಯೋ ಆ ಆಕಾರದಲ್ಲಿ ದೊಡ್ಡ ದೊಡ್ಡ ದಪ್ಪವಾದ ಹಲಗೆಗಳನ್ನು ಸರಿಯಾಗಿ ಹೊಂದಿಸಿಕೊಳ್ಳುವರು. ಅವುಗಳನ್ನು ಮೊದಲ ಹಂತದಲ್ಲಿ ಕಟ್ಟೆಗಳ ಆಕಾರದಲ್ಲಿ ಬಿಡಿ ಬಿಡಿಯಾಗಿ ರಚನೆಗೊಂಡ ಆಯತಾಕಾರದ ಚೌಕಾಕಾರದ ಶಿಲ್ಪವಿನ್ಯಾಸಗಳ ಬಿಡಿ ಭಾಗಗಳನ್ನು ಹೊಂದಿಸಲಾಗುವುದು ಅವು ಸರಿಯಾಗಿ ಗಟ್ಟಿಯಾಗಿ ಕೂಡಲು ಎರಡು ಇಂಚುಗಳ ಮೊಳೆಗಳನ್ನು ಹೊಡೆಯುವರು. ಆ ಬಿಡಿ ಭಾಗಗಳ ಜೋಡಣೆಯ ಮೇಲೆ ಹಾಗೂ ಕೆಳಗಡೆಗೆ ಬೇರೆ ಬೇರೆ ನಕ್ಷೆಗಳ ವಿನ್ಯಾಸಗಳಿರುವ ಅಡ್ಡ ಪಟ್ಟಿಕೆಗಳನ್ನು ಹೊಂದಿಸುವರು. ಹಲಗೆಗಳನ್ನು ಹೊಂದಿಸಿ ಚೌಕಾಕಾರದ ಕಟ್ಟೆ ನಿರ್ಮಾಣಗೊಂಡ ನಂತರ ಪೀಠದ ಮೂಲೆಗಳಲ್ಲಿ ಕುಳಿತಿರುವ ಮಂಗನ ಶಿಲ್ಪಗಳನ್ನು ಅಳವಡಿಸುವರು. ಇದರ ಮೇಲೆ ನಿರ್ಮಾಣಗೊಳ್ಳುವ ಬಹುಭುಜಾಕೃತಿಯ ಅಧಿಷ್ಠಾನದ ಪ್ರತಿಯೊಂದು ಭುಜಗಳಲ್ಲಿ ಸಿಂಹಗಳ ಶಿಲ್ಪಗಳನ್ನು ಅಳವಡಿಸುವರು. ರಥದ ಅಧಿಷ್ಠಾನದ ಎಲ್ಲ ಬಾಹುಗಳ ಮೇಲೆ ಮಧ್ಯಭಾಗದಲ್ಲಿ ದೇವತೆಯ, ಶಿವಶರಣರ, ಸಿದ್ಧಪುರುಷರ ಹಾಗೂ ವಿವಿಧ ಪ್ರಾಣಿ ಶಿಲ್ಪಗಳನ್ನು ಹೊಂದಿಸುವರು. ಹಾಗೆಯೇ ಮೇಲೆ ಹೋದಂತೆ ದಶಾವತಾರ, ರಾಮಾಯಣ ಮಹಾಭಾರತ, ಭಾಗವತದಂತಹ ಪುರಾಣ ಸನ್ನಿವೇಶಗಳ ಶಿಲ್ಪ ರಚನೆಗಳನ್ನು ಅಳವಡಿಸುವರು. ಎಲ್ಲ ವಿಧದ ಸುಂದರ ಶಿಲ್ಪವಿನ್ಯಾಸಗಳನ್ನು ನೀಲ ನಕ್ಷೆಯನ್ನು ಆಧರಿಸಿ ಜೋಡಿಸಲಾಗುತ್ತದೆ. ಈ ಎಲ್ಲ ಶಿಲ್ಪವಿನ್ಯಾಸದ ಹಲಗೆಗಳನ್ನು ಜೋಡಿಸಲು, ಹಲಗೆಯ ಅಡ್ಡ ಪಟ್ಟಿಗಳನ್ನು ಮೊಳೆಗಳಿಂದ ಅಥವಾ ನಟ್ ಬೋಲ್ಟ್‌ಗಳಿಂದ ಬಿಗಿದಿರುತ್ತಾರೆ. ಇದರಿಂದ ಶಿಲ್ಪ ವಿನ್ಯಾಸಗಳನ್ನು ಹೊಂದಿದ ಹಲಗೆಗಳು ಒಂದಕ್ಕೊಂದು ಭದ್ರವಾಗಿ ಜೋಡಿಸಲ್ಪಡುತ್ತವೆ. ಸುಂದರವಾಗಿ ಕಾಣುವಂತೆ, ಅಧಿಷ್ಠಾನದ ಪ್ರತಿಯೊಂದು ಬಾಹುಗಳ ಮೇಲಿನ ಅಂಚಿನಲ್ಲಿ ಬುಗುರೆಯಾಕಾರದ ಚಿಕ್ಕ ಚಿಕ್ಕ ಶಿಖರಗಳನ್ನು ಹಾಗೂ ಹಿತ್ತಾಳೆಯ ಗಂಟೆಗಳನ್ನು ಅಳವಡಿಸುವರು. ಕೆಲವು ರಥಗಳ ಅಧಿಷ್ಠಾನ ಭಾಗಗಳನ್ನು ಕೆಳಗಡೆಗೆ ಚಿಕ್ಕದಾಗಿರಿಸಿ, ಮೇಲೆ ಹೋದಂತೆ ಹಂತ ಹಂತವಾಗಿ ವಿಶಾಲವಾಗುವಂತೆ ನಿರ್ಮಿಸುವರು. ಅಲ್ಲದೆ ದುಂಡಾಕಾರದಲ್ಲಿ ಹಾಗೂ ಕಮಲದ ಆಕಾರಗಳಲ್ಲಿಯೂ ನಿರ್ಮಿಸುವರು. ಕೆಲವು ರಥಗಳ ಅಧಿಷ್ಠಾನ ಭಾಗಗಳನ್ನು ಅಡಿಪಾಯಕ್ಕಿಂತಲೂ ವಿಶಾಲವಾಗಿ ನಿರ್ಮಾಣ ಮಾಡುವರು.

ವಿಶಾಲವಾದ ಅಧಿಷ್ಠಾನ ಭಾಗಗಳಲ್ಲಿ ಅನೇಕ ಸುಂದರ ಶಿಲ್ಪವಿನ್ಯಾಸಗಳನ್ನು ಹೊಂದಿಸುವರು ಹಾಗೂ ಆ ಭಾಗದ ಹಲಗೆಗಳು ಸರಿದಾಡದಂತೆ ಜೋಡಣೆ ಮಾಡುವರು. ಈ ಎಲ್ಲ ಕಾರ್ಯ ಮುಗಿದನಂತರ ರಥದ ಮುಂದಿನ ಭಾಗದ ತಯಾರಿಕೆಯನ್ನು ಕೈಗೊಳ್ಳಲು ಅನುಕೂಲವಾಗುವುದು.

iii. ಮಂಟಪ ಭಾಗದ ರಚನಾ ವಿಧಾನ : ಗಡ್ಡಿ ರಥಗಳ ಮಂಟಪ ಭಾಗವು ಮೂರು ಹಂತಗಳಲ್ಲಿ ನಿರ್ಮಾಣಗೊಳ್ಳುವುದು

★. ಹಲಗೆಗಳನ್ನು ಕೊರೆಯುವುದು

★. ಕಮಾನುಗಳ ಹಾಗೂ ಕಂಬಗಳ ತಯಾರಿಕೆ

★. ಬಿಡಿ ಭಾಗಗಳ ಜೋಡಣೆ

ಈ ಮೂರು ಹಂತಗಳಲ್ಲಿಯ ರಚನಾ ವಿಧಾನಗಳನ್ನು ಅಭ್ಯಾಸ ಮಾಡುವಾ.

★. **ಹಲಗೆಗಳನ್ನು ಕೊರೆಯುವುದು :** ನೀಲ ನಕ್ಷೆಯನ್ನಾದರಿಸಿ, ಮಂಟಪ ಭಾಗಗಳಿಗೆ ಬೇಕಾದ ಅಳತೆಗಳಲ್ಲಿ ಹಲಗೆಗಳನ್ನು ಕೊರೆಯಲಾಗುವುದು. ಮಂಟಪ ಭಾಗದಲ್ಲಿ ಅನೇಕ ಕಂಬಗಳು ಹಾಗೂ ಕಮಾನುಗಳನ್ನು ಅಳವಡಿಸಬೇಕಾಗಿರುವುದರಿಂದ, ವಿವಿಧ ಕಂಬಗಳು ಹಾಗೂ ಕಮಾನುಗಳನ್ನು ರಚಿಸಲು ಅನುಕೂಲವಾಗುವಂತೆ, ಬೇರೆ ಬೇರೆ ಅಳತೆಗಳಲ್ಲಿ ಹಲಗೆಗಳನ್ನು ಕೊರೆಯಲಾಗುವುದು. ಅಧಿಷ್ಠಾನ ಭಾಗದ ರಚನೆಗಾಗಿ ಬಳಸಲಾದ ಹಲಗೆಗಳನ್ನು ಕೊರೆಯುವ ಸಾಧನಗಳನ್ನು ಮಂಟಪ ಭಾಗದ ರಚನೆಗೆ ಬೇಕಾದ ಹಲಗೆಗಳನ್ನು ಕೊರೆಯಲು ಉಪಯೋಗಿಸುವರು ಎಲ್ಲ ಅಳತೆಯ ಹಲಗೆಗಳು ಸರಿಯಾಗಿ ಸಿದ್ಧಗೊಂಡ ನಂತರ, ರಥಶಿಲ್ಪಿಗಳು ಮುಂದಿನ ಕೆಲಸದಲ್ಲಿ ತೊಡಗುವರು.

★. **ಕಮಾನುಗಳ ಹಾಗೂ ಕಂಬಗಳ ತಯಾರಿಕೆ :** ರಥದ ಮಂಟಪಗಳು ಅನೇಕ ಪ್ರಕಾರಗಳಲ್ಲಿವೆ 'ಮಾನಸಾರ'ದಲ್ಲಿ ಹಲವಾರು ವಿಧದ ಮಂಟಪಗಳ ಬಗ್ಗೆ ಹೇಳಲಾಗಿದೆ. ನಭಸವನ ಭದ್ರಕ, ಪ್ರಭಂಜನ ಭದ್ರಕ, ನಿಮಾತ ಭದ್ರಕ, ಪವನ ಭದ್ರಕ, ಪ್ರಸಾದಭದ್ರಕ, ಇಂದ್ರ ಭದ್ರಕ ಹಾಗೂ ಅನಿಲ ಭದ್ರಕ ಇವುಗಳು ಬೇರೆ ಬೇರೆ ವಿಧದ ಮುಖಮಂಟಪಗಳಾಗಿವೆ[೬].

ರಥದ ಮಂಟಪ ಭಾಗವು ಚಿತ್ತಾಕರ್ಷಕ ವಿವಿಧ ಪ್ರಕಾರದ ಕಂಬಗಳನ್ನು ಒಳಗೊಂಡಿರುತ್ತದೆ. ಸಾಮಾನ್ಯವಾಗಿ ರಥದ ಮಂಟಪ ಭಾಗವು ಗಡ್ಡಿಯ ವಿನ್ಯಾಸದಂತೆಯೇ ಚೌಕು ಅಷ್ಟಮ, ವರ್ತುಳ ಹಾಗೂ ಬಹುಕೋನ ವಿನ್ಯಾಸಗಳನ್ನು ಹೋಲುವಂತೆ ಮಂಟಪಗಳನ್ನು ರಚಿಸಬೇಕಾಗುತ್ತದೆ. ಶಿಲ್ಪಗಾರರು ಮೊದಲು ಮಂಟಪದ ಅನೇಕ ವಿನ್ಯಾಸಗಳ ರೇಖಾ ಚಿತ್ರಗಳನ್ನು ತಯಾರಿಸಿ ಅವುಗಳ ವಿನ್ಯಾಸಕ್ಕೆ ಅನುಗುಣವಾಗಿ ಕಲಾತ್ಮಕ ಕಂಬಗಳ ರಚನೆಯನ್ನು ಮಾಡುವರು. ಪ್ರಧಾನ ಶಿಲ್ಪಿಯ ಮಾರ್ಗದರ್ಶನದಂತೆ, ಸಹಾಯಕ ಶಿಲ್ಪಿಗಳೆಲ್ಲರೂ ವಿವಿಧ ಕಮಾನುಗಳ ಹಾಗೂ ಕಂಬಗಳ ತಯಾರಿಕೆಯಲ್ಲಿ ನಿರತರಾಗುವರು. ಕಮಾನುಗಳ ವಿನ್ಯಾಸಗಳನ್ನು ಶಿಲ್ಪಿಗಳು ಉಳಿಗಳ ಸಹಾಯದಿಂದಲೇ ಮಾಡಬೇಕಾಗುತ್ತದೆ. ಕಮಾನುಗಳ ಎಡಬಲಗಳಲ್ಲಿ ಸೌಂದರ್ಯವರ್ಧನೆಗೆ ವಿವಿಧ ಶಿಲ್ಪ ರಚನೆಯನ್ನು ಕೈಗೊಳ್ಳುವರು. ಅಧಿಷ್ಠಾನ ಭಾಗದ ಶಿಲ್ಪ ರಚನಾ ವಿಧಾನಗಳನ್ನೇ ಇಲ್ಲಿ ಉಪಯೋಗಿಸಲಾಗುವದು. ಆದರೆ ವಿವಿಧ ಕಂಬಗಳ ತಯಾರಿಕೆಗೆ ಕೇವಲ ಉಳಿಗಳಷ್ಟೇ ಅಲ್ಲದೆ ವಿದ್ಯುತ್ ಚಾಲಿತ ಯಂತ್ರಗಳ ಉಪಯೋಗ ಮಾಡುವರು. ವಿದ್ಯುತ್ ಚಾಲಿತ ಯಂತ್ರಗಳಿಗೆ ಬೇರೆ ಬೇರೆ ರೀತಿಯ ಬ್ಲೇಡ್‌ಗಳನ್ನು ಬಳಸಿ ವಿವಿಧ ವಿನ್ಯಾಸಗಳ ಕಂಬಗಳನ್ನು ರಚಿಸುವರು. ಅಲ್ಲದೆ ಯಂತ್ರಗಳ ಸಹಾಯದಿಂದಲೇ ಕಂಬಗಳ ಪಾಲಿಶ್ ಮಾಡಿ ನುಣುಪು ಕಾಣುವಂತೆ ಮಾಡುವರು. ಮಂಟಪಗಳ ಸಂಖ್ಯೆಗಳಿಗೆ ಸರಿಯಾಗಿ ಕಮಾನುಗಳು ಹಾಗೂ ಕಂಬಗಳು ತಯಾರಿಸಲ್ಪಡುತ್ತವೆ. ಇವುಗಳಲ್ಲದೆ ಉದ್ದವಾದ, ತೆಳುವಾದ ಹಲಗೆ ಪಟ್ಟಿಕೆಗಳ ಮೇಲೆ ತೋರಣದಂತೆ ಬುಗುರಿಯಾಕಾರದ

---

೬. ''ಕೈ ಚಳಕದಿಂದ ಮೈ ತಳೆವ ತರತರದ ರಥಗಳು'' ಶ್ರೀಧರ ಉಪ್ಪೂರ, ಸುಧಾ, ಜನೇವರಿ ೨೬, ೧೯೯೨

ಕಳಸದಂತೆ ಹಾಗೂ ಹೂ ಬಳ್ಳಿಯಂತೆ ಹೀಗೆ ಅನೇಕ ವಿಧಗಳಲ್ಲಿ ಕೆತ್ತನೆ ಕೆಲಸವನ್ನು ಮಾಡುವರು.

ಹೀಗೆ ವಿವಿಧ ಮಂಟಪಗಳ ಕಮಾನುಗಳು ಹಾಗೂ ಕಂಬಗಳು ನಿರ್ಮಾಣವಾದ ನಂತರ ಎಲ್ಲ ಬಿಡಿಯಾದ ಭಾಗಗಳನ್ನು ಸರಿಯಾಗಿ ಹೊಂದಿಸುವ ಕಾರ್ಯ ನಡೆಯುತ್ತದೆ.

★. ಬಿಡಿ ಭಾಗಗಳ ಜೋಡಣೆ : ಅಧಿಷ್ಠಾನ ಭಾಗವು ಪೂರ್ಣ ಸಿದ್ಧಗೊಂಡ ನಂತರ, ಮಂಟಪ ಭಾಗಕ್ಕೆ ಬೇಕಾದ ಎಲ್ಲ ಶಿಲ್ಪ ವಿನ್ಯಾಸಗಳು ಕಮಾನಿನ ಕಂಬಗಳು ಬಿಡಿ ಬಿಡಿಯಾಗಿ ರಚನೆಗೊಂಡ ನಂತರ ಬಿಡಿ ಭಾಗಗಳ ಜೋಡನೆಯ ಕಾರ್ಯವು ಆರಂಭವಾಗುವುದು.

ಅಧಿಷ್ಠಾನ ಭಾಗದ ಮೇಲ್ಭಾಗದಲ್ಲಿ ಮಧ್ಯಮ ಗಾತ್ರದ ಹಲಗೆಗಳ ಪಟ್ಟಿಗಳನ್ನು ಕಟ್ಟಿಗಳ ಆಕಾರದಲ್ಲಿ ಜೋಡಿಸಲಾಗುವುದು. ಚೌಕು, ವರ್ತುಗಳ ಅಷ್ಟವು, ದ್ವಾದಶ ಹೀಗೆ ಬಹುಕೋನಗಳಲ್ಲಿ ನಿರ್ಮಾಣಗೊಂಡ ಗಡ್ಡೆಯ ಮೇಲೆ ಪ್ರತಿಯೊಂದು ಭುಜಕ್ಕೆ ಸಮವಾಗಿ ವಿವಿಧ ವಿನ್ಯಾಸಗಳ ಕಂಬಗಳನ್ನು ಜೋಡಿಸಲಾಗುತ್ತದೆ. ಕೆಳಭಾಗದಲ್ಲಿ ಒಂದೊಂದು ಕಂಬಗಳ ನಡುವೆ ಉಳಿದಿರುವ ಸ್ಥಳಾವಕಾಶದಲ್ಲಿ, ಸುಮಾರು ಹತ್ತು ಅಥವಾ ಹನ್ನೆರಡು ಚಿಕ್ಕ ಚಿಕ್ಕ ಕಂಬಗಳನ್ನು ಹೊಂದಿದ ಮೇಲೆ ಹಾಗೂ ಕೆಳಗೆ ಎರಡು ಇಂಚುಗಳ ಅಡ್ಡ ಪಟ್ಟಿಯನ್ನು ಹೋಂದಿದ ಕಿಟಕಿಯಾಕಾರದ ಜೋಡಣೆಯನ್ನು ರಚಿಸಿ ಹೊಂದಿಸುವರು. ಕಂಬಗಳಿಂದ ಮೇಲೆ ಹೊದಂತೆ ವಿವಿಧ ಮಂಟಪಗಳಿಗೆ ಸಂಬಂಧಿಸಿದ ಬೇರೆ ಬೇರೆ ವಿನ್ಯಾಸಗಳ ಕಮಾನುಗಳ ಪಟ್ಟಿಕೆಗಳನ್ನು ಕಿರು ಮೊಳೆಗಳ ಸಹಾಯದಿಂದ ಜೋಡಿಸುವರು. ಕಮಾನುಗಳ ಒಳಗಡೆಯ ಪಾರ್ಶ್ವಗಳಲ್ಲಿ ವಿವಿಧ ಪಕ್ಷಿಗಳ, ಹೂ ಬಳ್ಳಿಗಳ ನಕ್ಷೆಗಳನ್ನು ಹೊಂದಿದ ಮರದ ಸಣ್ಣ ಸಣ್ಣ ಪಟ್ಟಿಕೆಗಳನ್ನು ಜೋಡಿಸುವರು. ಈ ಎಲ್ಲ ಕಮಾನುಗಳು ಒಂದಕ್ಕೊಂದು ಸರಿಯಾಗಿ ಹೊಂದಿಕೊಂಡು ಕೂಡಲು, ಒಳಭಾಗದಲ್ಲಿ ಉದ್ದ ಹಾಗೂ ತೆಳು ಗಾತ್ರದ ಮರದ ಪಟ್ಟಿಗಳನ್ನು ಸಣ್ಣ ಮೊಳೆಗಳಿಂದ ಜೋಡಿಸುವರು.

ಈ ಎಲ್ಲ ಕೆಲಸ ಮುಗಿದ ನಂತರ ಮೇಲ್ಭಾಗದಲ್ಲಿ ಕಟ್ಟೆಯ ಆಕಾರದಲ್ಲಿ ಎರಡು ಸುತ್ತು ಮರದ ಸಣ್ಣ ಪಟ್ಟಿಗಳನ್ನು ಹೊಂದಿಸಿ, ಅದರ ಮೇಲೆ ಅಗಲವಾದ ಹಲಗೆಗಳನ್ನು ಕಟ್ಟೆಯಾಕಾರದಲ್ಲಿ ಜೋಡಿಸುವರು ಇದಲ್ಲದೆ ಛಾವಣಿಯನ್ನು ಇಳಿಜಾರಾಗುವಂತೆ ಮಾಡಿ, ಸುತ್ತಲೂ ವಿವಿಧ ವಿನ್ಯಾಸಗಳಿಂದ ರಚಿತಗೊಂಡ ಸೂರಪಟ್ಟಿಯನ್ನು ಜೋಡಿಸುವರು. ಸೂರಪಟ್ಟಿಯಲ್ಲಿ ತೋರಣದಂತೆ ಕಾಣುವ ವಿನ್ಯಾಸಗಳಿಗೆ, ಹಿತ್ತಾಳೆಯ ಗಂಟೆಗಳನ್ನು ಅಳವಡಿಸಲಾಗುವುದು. ಪ್ರತಿಯೊಂದು ಭುಜಗಳಲ್ಲಿ ಬುಗುರಿಯಾಕಾರದ ಶಿಲ್ಪಗಳನ್ನು ಅಳವಡಿಸಲಾಗುವುದು.

ಮಂಟಪ ಭಾಗವು ರಥದ ಹೃದಯಭಾಗವಾಗಿರುತ್ತದೆ. ಉತ್ಸವದ ಸಂದರ್ಭದಲ್ಲಿ ಉತ್ಸವ ಮೂರ್ತಿಯನ್ನಿಡುವ ವಿಶೇಷ ಭಾಗವಾಗಿರುತ್ತದೆ. ಆದ್ದರಿಂದ ಮಂಟಪದ ಒಳಗಡೆಗೆ ಮಧ್ಯಭಾಗದಲ್ಲಿ ಚಿತ್ತಾಕರ್ಷಕ ಪ್ರಭಾವಳಿಯನ್ನು ಹೊಂದಿದ ಕಲಾತ್ಮಕ ಪೀಠವನ್ನು ಅಳವಡಿಸುವರು.

ಗಡ್ಡಿ ರಥಗಳ ಆಧಾರ, ಅಧಿಷ್ಠಾನ ಹಾಗೂ ಮಂಟಪ ಭಾಗಗಳ ಹಲಗೆಗಳೆಲ್ಲವೂ ಭದ್ರವಾಗಿ ಕೂಡಲು ಎಲ್ಲ ಭಾಗಗಳ ಒಳಭಾಗಗಳಲ್ಲಿ ಅಡ್ಡಲಾಗಿ ಜೋಡಿಸಲ್ಪಟ್ಟ ಹಲಗೆಗಳ ಮಧ್ಯ ಭಾಗದಲ್ಲಿ ಕೊರೆದ ರಂಧ್ರಗಳ ಮುಖಾಂತರ ಹಾಯ್ದು ಹೋಗುವಂತೆ, ರಥದ ಅಡಿಪಾಯದ ಮಧ್ಯ ಭಾಗದಿಂದ ಮಂಟಪದವರೆಗೆ ದಪ್ಪವಾದ ಒಂದು ಕಬ್ಬಿಣದ ಹಳಿಯನ್ನು ಜೋಡಿಸಲಾಗಿರುತ್ತದೆ. ಅಲ್ಲದೆ ಕೆಲವು

ಸಣ್ಣ ಸಣ್ಣ ಕಬ್ಬಿಣದ ಸಲಾಕೆಗಳನ್ನು ನಟ್ ಬೋಲ್ಟ್‌ಗಳಿಂದ ಬಿಗಿದಿರುತ್ತಾರೆ.

ಇತ್ತೀಚಿನ ಆಧುನಿಕ ರಥಗಳಲ್ಲಿ ಚಕ್ರಗಳು ಸರಿಯಾಗಿ ತಿರುಗಲು ರಥದ ದಿಕ್ಕನ್ನು ಬದಲಾಯಿಸಲು ಹಾಗೂ ಸಾಗುವ ರಥದ ಚಲನೆಯನ್ನು ಒಮ್ಮೆಲೇ ತಡೆಯಲು ಬಾಲ್ ಬೇರಿಂಗ್, ಜಾಕ್ ಹಾಗೂ ಹೈಡ್ರಾಲಿಕ್ ಬ್ರೆಕ್‌ಗಳಂತಹ ವೈಜ್ಞಾನಿಕ ತಂತ್ರಜ್ಞಾನದ ಅಳವಡಿಕೆಯನ್ನು ಮಾಡುತ್ತಾರೆ.

ವರ್ಣಲೇಪನ : ಈ ರೀತಿಯಲ್ಲಿ ರಥದ ಮೂರು ಭಾಗಗಳು ಸರಿಯಾಗಿ ಜೋಡಣೆಯಾದ ನಂತರ, ಆದರ ಹೊರಮೈಗೆ ಹಳದಿ ಬಣ್ಣದ ಪಾಲಿಶ್ ಪುಡಿಯನ್ನು ಹಚ್ಚಿ ಚೆನ್ನಾಗಿ ಉಜ್ಜುವರು. ಇಡೀ ರಥವನ್ನು ಶುಭ್ರ ವಸ್ತ್ರದಿಂದ ಉಜ್ಜಿ, ಚೆನ್ನಾಗಿ ಸ್ವಚ್ಛಗೊಳಿಸಿದ ಮೇಲೆ, ರಥಕ್ಕೆ ಮೂರು ಬಾರಿ ಫ್ರೆಂಚ ಪಾಲಿಶ್‌ನ್ನು ಲೇಪಿಸುವರು. ಇದರಿಂದ ರಥದ ಕಾಷ್ಟಗಳಿಗೆ ಯಾವುದೇ ರೀತಿಯ ಬಾಧೆಯುಂಟಾಗದು. ಅಲ್ಲದೆ ರಥದ ಎಲ್ಲ ಭಾಗದ ಕಾಷ್ಟಗಳಿಗೆ ಒಂದು ಹೊಸ ಹೊಳಪು ಬರುವುದು.

ರಥದ ಅನೇಕ ಶಿಲ್ಪಗಳಿಗೆ ಹಾಗೂ ಮಂಟಪ ಕಂಬಗಳಿಗೆ, ಚಕ್ರಗಳಿಗೆ, ತೊಲೆಗಳಿಗೆ ಹಾಗೂ ವಿವಿಧ ಪಟ್ಟಿಕೆಗಳಿಗೆ ಬೇರೆ ಬೇರೆ ಬಣ್ಣಗಳಿಂದ ಸುಂದರವಾದ ವರ್ಣಲೇಪನ ಮಾಡುವರು. ನಂತರ ವರ್ಣಗಳು ಮಾಸಿಹೋಗದಂತೆ, ಟ್ರಾನ್ಸ್‌ಪರಂಟ್ ವಾರ್ನಿಸನ್ನು ಲೇಪಿಸುವರು. ರಥದ ಚಕ್ರಗಳು ಸರಿಯಾಗಿ ತಿರುಗಲು ಚಕ್ರಗಳನ್ನು ಹೊಂದಿಸಿ, ಅಚ್ಚಿನ ಭಾಗದಲ್ಲಿ ಗ್ರೀಸ್‌ನ್ನು ಹಚ್ಚುವರು. ಅಥವಾ ಎಣ್ಣೆಯನ್ನು ಹಾಕುವರು.

ಈ ರೀತಿಯಾಗಿ ಅನೇಕ ಶಿಲ್ಪಗಳ ಎಡೆಬಿಡದ ಕಾರ್ಯದಿಂದ ಸುಂದರವಾದ, ಕಲಾತ್ಮಕವಾದ ಸ್ಥಿರ ರಥವು ನಿರ್ಮಾಣಗೊಳ್ಳುವದು.

೨. ಚರ ರಥದ ರಚನಾ ವಿಧಾನ : ಉತ್ಸವದ ಸಮಯದಲ್ಲಿ ಈ ಸ್ಥಿರ ರಥದ ಮೇಲೆ ರಥದ ಗಾತ್ರಕ್ಕೆ ಅನುಗುಣವಾಗಿ ಚರರಥದ ಹಂದರವನ್ನು ಹಾಕಿ ಬಿದಿರು, ಅಡಿಕೆ ಪಟ್ಟಿಗಳಿಂದ ಗೋಪುರವನ್ನು ನಿರ್ಮಿಸಿ, ಬಣ್ಣ ಬಣ್ಣದ ಪತಾಕೆಗಳನ್ನು ಸಾಲುಸಾಲಾಗಿ ಕಟ್ಟುವರು. ಇದಕ್ಕೆ ಚರರಥವೆನ್ನುವರು.

ಕೆಲವು ಪ್ರದೇಶಗಳ ಗಡ್ಡಿ ರಥಗಳು ಶಾಶ್ವತವಾದ ಅಡಿಪಾಯ, ಅಧಿಷ್ಠಾನ ಹಾಗೂ ಮಂಟಪ ಭಾಗಗಳನ್ನು ಹೊಂದಿದ್ದರೆ, ಇನ್ನೂ ಕೆಲವು ಪ್ರದೇಶಗಳ ಗಡ್ಡಿ ರಥಗಳು ಕೇವಲ ಅಡಿಪಾಯ ಹಾಗೂ ಅಧಿಷ್ಠಾನ ಭಾಗವನ್ನು ಮಾತ್ರ ಹೊಂದಿವೆ. ಹೀಗೆ ಗಡ್ಡಿ ರಥಗಳಲ್ಲಿ ಶಾಶ್ವತವಾಗಿ ನಿರ್ಮಿಸಲ್ಪಟ್ಟ ರಥದ ಭಾಗಗಳಿಗೆ ಸ್ಥಿರ ರಥವೆಂದು ಕರೆಯುವರು.

ಕೆಲವು ಪ್ರದೇಶಗಳಲ್ಲಿ ಇಂತಹ ಸ್ಥಿರ ರಥಗಳ ಮೇಲೆ ಉತ್ಸವದ ಸಂದರ್ಭದಲ್ಲಿ, ಹಲಗೆಗಳಿಂದ, ಅಡಕೆ ಪಟ್ಟಿಗಳಿಂದ, ಬಿದಿರುಗಳಿಂದ, ಹಾಗೂ ಬಣ್ಣ ಬಣ್ಣದ ಪತಾಕೆಗಳಿಂದ, ಮಂಟಪ ಹಾಗೂ ಗೋಪುರ ಭಾಗಗಳನ್ನು ತಾತ್ಕಾಲಿಕವಾಗಿ ನಿರ್ಮಿಸುವರು. ಹೀಗೆ ತಾತ್ಕಾಲಿಕವಾಗಿ ನಿರ್ಮಿಸಿದ ರಥದ ಭಾಗಕ್ಕೆ ಚರ ರಥವೆಂದು ಕರೆಯುವರು.

ಚರ ರಥವನ್ನು ಎರಡು ಭಾಗಗಳನ್ನಾಗಿ ವಿಂಗಡಿಸಿಕೊಂಡು ಅವುಗಳ ರಚನಾ ವಿಧಾನಗಳನ್ನು ಅಧ್ಯಯನ ಮಾಡೋಣ.

i. ಮಂಟಪ ಭಾಗ ii. ಗೋಪುರ ಭಾಗ.

i. ಮಂಟಪ ಭಾಗದ ರಚನಾ ಮಿಧಾನ : ಚರ ರಥದ ಮಂಟಪ ಭಾಗವು ನಾಲ್ಕು ಹಂತಗಳಲ್ಲಿ ನಿರ್ಮಾಣಗೊಳ್ಳುವುದು.

★. ಅಂಕಣಗಳ ತಯಾರಿಕೆ

★. ಬಣ್ಣ ಬಣ್ಣದ ಬಟ್ಟೆಗಳ ಹೊದಿಕೆ

★. ಬಿಡಿ ಮೂರ್ತಿಶಿಲ್ಪಗಳ ಹಾಗೂ ಮಂಟಪಗಳ ಜೋಡಣೆ

★. ವಿವಿಧ ಪತ್ರ-ಫಲ-ಪುಷ್ಪಾಲಂಕಾರ.

ಈ ನಾಲ್ಕೂ ಹಂತಗಳ ರಚನಾ ವಿಧಾನಗಳನ್ನು ವಿವರವಾಗಿ ತಿಳಿಯುವಾ.

★. **ಅಂಕಣಗಳ ತಯಾರಿಕೆ :** ಅಧಿಷ್ಠಾನ ಭಾಗದವರೆಗೆ ಇರುವ ಸ್ಥಿರ ರಥದ ಮೇಲೆ ಎರಡು ಅಂಕಣಗಳನ್ನು ತಯಾರಿಸುವರು. ಮೊದಲನೆಯ ಅಂಕಣ ದೊಡ್ಡದಾಗಿರುತ್ತದೆ. ಎರಡನೆಯ ಅಂಕಣ ಚಿಕ್ಕದಾಗಿರುತ್ತದೆ. ಬಹುಕೋನ ವಿನ್ಯಾಸಗಳಲ್ಲಿ ಸ್ಥಿರ ರಥವು ಯಾವ ವಿನ್ಯಾಸದಲ್ಲಿರುತ್ತದೆಯೋ ಅದನ್ನು ಆಧರಿಸಿ, ಮಂಟಪ ಭಾಗವಾಗಿ ರಚಿಸಲ್ಪಡುವ ಅಂಕಣವನ್ನು ತಯಾರಿಸಲಾಗುತ್ತದೆ.

ಸ್ಥಿರರಥದ ಪ್ರತಿಯೊಂದು ಭುಜಕ್ಕೆ ಸಮನಾಗಿ, ಲಂಬವಾಗಿ, ಬಿದಿರುಗಳನ್ನು ಅಥವಾ ಮರದ ಪಟ್ಟಿಗಳನ್ನು ನಿಲ್ಲಿಸಿ, ಅವುಗಳ ಮೇಲಿನ ಎಲ್ಲ ಕೊನೆಗಳಿಗೆ ಆಧಾರವಾಗಿ, ಬಿದಿರಿನಲ್ಲಿ ಕತ್ತರಿಸಲಾದ ಉದ್ದವಾದ ಪಟ್ಟಿಗಳನ್ನು ಕಟ್ಟುವರು. ಕೆಲವು ಸಲ ಮರದ ಹಲಗೆಗಳ ಸಣ್ಣ ಪಟ್ಟಿಗಳನ್ನು ಉಪಯೋಗಿಸುವರು. ಸುತ್ತಲೂ ಸಮಾನ ಅಂತರದಲ್ಲಿ ನಿಲ್ಲಿಸಿದ ಮರದ ಪಟ್ಟಿಗಳು ಸರಿದಾಡದಂತೆ, ಒಂದೊಂದು ಪಟ್ಟಿಗಳ ಮಧ್ಯ ಇರುವ ಸ್ಥಳವಕಾಶದಲ್ಲಿ, ಅಡ್ಡಲಾಗಿ ಒಂದಕ್ಕೊಂದು ಹೊಂದುವಂತೆ, ಸಮಾನ ಅಂತರದಲ್ಲಿ ಮರದ ಹಲಗೆಗಳ ಪಟ್ಟಿಗಳನ್ನು ಮೊಳೆಗಳ ಸಹಾಯದಿಂದ ಗಟ್ಟಿಗೊಳಿಸಲಾಗುವುದು. ಮತ್ತೆ ಒಳಗೆ ಆಧಾರಕ್ಕಾಗಿ, ಬಿದಿರುಗಳ ಆಧಾರಗಂಬಗಳನ್ನು ಇಳಿಜಾರಾಗಿ ಕಟ್ಟುವರು. ಮೇಲ್ಭಾಗದಲ್ಲಿ ಮೊದಲು ಬಿದಿರಿನ ಪಟ್ಟಿಗಳಿಂದ ಗುಡಿಸಲಿನ ಆಕಾರದಲ್ಲಿ ನಿರ್ಮಿಸಿಕೊಂಡು, ಅದರ ಮೇಲೆ ಅಗಲವಾದ ಮರದ ಹಲಗೆಗಳನ್ನು ಇಟ್ಟು, ಸಣ್ಣ ತಂತಿಯಿಂದ ಅಥವಾ ಚರಿ ಹಾಗೂ ಖಾತಿಯಿಂದ ಬಿಗಿಯುವರು. ಇದರ ಮೇಲೆ ಎರಡನೆಯ ಅಂಕಣವನ್ನು ಇದೇ ರೀತಿ ತಯಾರಿಸುವರು ಮಂಟಪದ ತಳಪಾಯ ಸಮಗೊಳ್ಳುವಂತೆ, ಅಗಲವಾದ ಹಲಗೆಗಳನ್ನು ಜೋಡಿಸಿ ಮೊಳೆಗಳಿಂದ ಭದ್ರಪಡಿಸುವರು.

★. **ಬಣ್ಣ ಬಣ್ಣದ ಬಟ್ಟೆಗಳ ಹೊದಿಕೆ :** ಅಂಕಣಗಳನ್ನು ತಯಾರಿಸುವಾಗ, ಅನೇಕ ಹಲಗೆಗಳು, ಸಣ್ಣ ಪಟ್ಟಿಗಳು, ಬಿದಿರುಗಂಬಗಳು ಹೀಗೆ ಹಲವು ವಸ್ತುಗಳನ್ನು ಉಪಯೋಗಿಸಲಾಗಿರುತ್ತದೆ. ಈ ಎಲ್ಲ ಜೋಡಣೆಯು ಹೊರಗೆ ತಾಕದಂತೆ ಮೊದಲು ತಟ್ಟಿನ ಚೀಲಗಳನ್ನು ಅವುಗಳ ಮೇಲೆ ಹೊದಿಸಿ,ಅವುಗಳ ಮೇಲೆ ಬಣ್ಣ ಬಣ್ಣದ ಬಟ್ಟೆಗಳನ್ನು ಹೊದಿಸುವರು. ಲಂಬವಾಗಿ ನಿಂತ ಪ್ರತಿಯೊಂದು ಕಂಬಗಳಿಗೆ ಮೊದಲು ತಟ್ಟಿನ ಚೀಲಗಳನ್ನೇ ದಪ್ಪವಾಗಿ ಸುತ್ತುವರು.

ಅವುಗಳ ಮೇಲೆ ವಿವಿಧ ಬಣ್ಣದ ಬಟ್ಟೆಗಳನ್ನು ಸುತ್ತಿ, ದಾರದಿಂದ ಅಥವಾ ಸುತುಳಿಯಿಂದ ಸರಿಯಾಗಿ ಕಟ್ಟುವರು. ಮಂಟಪ ಭಾಗವಾಗಿರುವುದರಿಂದ ನಾಲ್ಕೂ ದಿಕ್ಕುಗಳಲ್ಲಿ ಬಾಗಿಲುಗಳನ್ನು ಬಿಟ್ಟಿರುತ್ತಾರೆ. ಒಳಗಡೆ ಮೇಲ್ಭಾದಲ್ಲಿಯೂ ಸಹ ಬಟ್ಟೆಗಳನ್ನು ಮೊಳೆಗಳಿಂದ ಹೊಡೆದು, ಕೆಳಗೆ ಬೀಳದಂತೆ ದಾರದಿಂದ ಹೊಲಿಯುವರು.

★. **ಬಿಡಿ ಮೂರ್ತಿಶಿಲ್ಪಗಳ ಹಾಗೂ ಮಂಟಪಗಳ ಜೋಡಣೆ :** ಮಂಟಪದ ಎಲ್ಲ ಭಾಗಕ್ಕೆ ಬಣ್ಣ ಬಣ್ಣದ ಬಟ್ಟೆಗಳನ್ನು ಹೊದಿಸಿದ ನಂತರ, ಕಾರ್ಡ್‌ಬೋರ್ಡ್‌ಗಳನ್ನು ಕಮಾನುಗಳಂತೆ ಕತ್ತರಿಸಿ, ವಿವಿಧ ವಿನ್ಯಾಸದ ಕಂಬಗಳ ಹಾಗೂ ಕಮಾನುಗಳಂತೆ, ಬೇರೆ ಬೇರೆ ಬಣ್ಣಗಳಿಂದ ಹಾಗೂ ಬಣ್ಣದ ಪೇಪರುಗಳಿಂದ ತಯಾರಿಸಿ, ಮಂಟಪದ ಸುತ್ತ ಇರುವ ಬಣ್ಣದ ಬಟ್ಟೆ ಸುತ್ತಿದ ಕಂಬಗಳಿಗೆ ಹೊಂದಿಸುವರು. ದೂರದಿಂದ ನೋಡಲು ಕಾಷ್ಠದಿಂದ ತಯಾರಿಸಿದ ಕಂಬಗಳಂತೆ ತೋರುತ್ತದೆ ಈ ಕಂಬಗಳು ಹಾಗೂ ಮಂಟಪಗಳ ಹತ್ತಿರ ಸುತ್ತುವರೆದು ಅನೇಕ ಸಿಂಹ, ಆನೆ, ನಂದಿಯಂತಹ ಬಿಡಿ ಶಿಲ್ಪವಿನ್ಯಾಸಗಳು, ದ್ವಾರಪಾಲಕರು, ಆದಿಶಕ್ತಿ, ಹನುಮಂತ ಇಂತಹ ದೇವತಾ ಶಿಲ್ಪಗಳು ಹಾಗೂ ಮುಂಭಾಗದಲ್ಲಿ ಓಡುವ ಕುದುರೆಗಳ ಶಿಲ್ಪಗಳನ್ನು ಸುಂದರವಾಗಿ ಅಳವಡಿಸುವರು. ಮೇಲಿನ ಅಂಕಣಕ್ಕೆ ಬಣ್ಣದ ಬಟ್ಟೆಯಿಂದ ಸುತ್ತಿದ ಭಾಗಕ್ಕೆ ಅನೇಕ ದೇವಾನುದೇವತೆಯರ, ಋಷಿಮುನಿಗಳ, ಪುರಾಣ ದೃಶ್ಯಗಳ ಅನೇಕ ವರ್ಣಚಿತ್ರಗಳನ್ನು ಅಂಟಿಸುವರು. ಮಂಟಪದ ಭಾಗದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸಲು ಮಂಟಪದಲ್ಲಿ ಒಂದು ಸುಂದರವಾದ ಪ್ರಭಾವಳಿಯಿರುವ ಪೀಠವನ್ನು ಅಲುಗಾಡದಂತೆ ಜೋಡಣೆ ಮಾಡುತ್ತಾರೆ.

★. **ವಿವಿಧ ಪತ್ರ, ಫಲ ಪುಷ್ಪಾಲಂಕಾರ :** ಎಲ್ಲ ಮೂರ್ತಿಗಳ ಜೋಡಣೆಯಾದ ನಂತರ, ತೆಂಗಿನಗರಿ,ಬಾಳೆದಿಂಡು, ಕಬ್ಬುಗಳು, ಮಾವಿನ ಎಲೆಗಳು, ಲಿಂಬೆಹಣ್ಣು , ಬಾಳೆ ಹಣ್ಣುಗಳ ದಿಂಡು, ತೆಂಗಿನ ಕಾಯಿ, ಬೂದುಗುಂಬಳಕಾಯಿ-ಹೀಗೆ ವಿವಿಧ ಫಲಗಳಿಂದ, ವಿವಿಧ ಹೂವಿನ ಹಾರಗಳಿಂದ ಹಾಗೂ ಬಿಡಿ ಹೂಗಳಿಂದ ಮಂಟಪವನ್ನು ಕಣ್ಮನ ಸೆಳೆಯುವಂತೆ ಅಲಂಕಾರಗೊಳಿಸುವರು. ಈ ರೀತಿ ಮಂಟಪದ ಭಾಗದ ರಚನೆಯು ತುಂಬಾ ಸೌಂದರ್ಯದಿಂದ ಕೂಡಿರುತ್ತದೆ.

ii. ಗೋಪುರ ಭಾಗದ ರಚನಾ ವಿಧಾನ : ರಥದ ಗೋಪುರಗಳ ರಚನೆ ಪ್ರಾದೇಶಿಕವಾಗಿ ಒಂದೊಂದು ತೆರನಾಗಿದ್ದು, ಬೇರೆ ಬೇರೆ ರೀತಿಯಲ್ಲಿ ವೈವಿಧ್ಯಮಯವಾಗಿ ಕಂಡುಬರುತ್ತದೆ. ಚರ ರಥದ ಭಾಗವಾಗಿರುವ ಗಡ್ಡಿರಥದ ಗೋಪುರ ಭಾಗವು ಮೂರು ಹಂತಗಳಲ್ಲಿ ನಿರ್ಮಾಣಗೊಳ್ಳುವುದು.

★. ಅಟ್ಟಗಳನ್ನು ಅಥವಾ ಗೋಲಗಳನ್ನು ನಿರ್ಮಿಸುವುದು.

★. ಬಣ್ಣದ ಬಟ್ಟೆಗಳ ಹಾಗೂ ಪತಾಕೆಗಳ ಜೋಡಣೆ.

★. ವಿವಿಧ ಪುಷ್ಪಗಳಿಂದ ಅಲಂಕಾರ. ಈ ಮೂರು ಹಂತಗಳಲ್ಲಿ ನಿರ್ಮಾಣಗೊಳ್ಳುವ ಗೋಪುರದ ರಚನಾ ವಿಧಾನಗಳನ್ನು ತಿಳಿಯುವಾ.

★. **ಅಟ್ಟಗಳನ್ನು ಅಥವಾ ಗೋಲಗಳನ್ನು ನಿರ್ಮಿಸುವುದು :**

ಗೋಪುರವನ್ನು ನಿರ್ಮಿಸಲು ರಥದ ಗಾತ್ರಕ್ಕೆ ಅನುಗುಣವಾಗಿ ಅಟ್ಟಗಳನ್ನು ಹಾಗೂ ಗೋಲಗಳನ್ನು ನಿರ್ಮಿಸಿಕೊಳ್ಳಬೇಕಾಗುವುದು. ರಥದ ಮಂಟಪ ಭಾಗದ ಛಾವಣಿಯ ಮಧ್ಯ ಭಾಗದಲ್ಲಿ, ನಿರ್ಮಾಣವಾಗುವ ಗೋಪುರದ ಎತ್ತರಕ್ಕನುಗುಣವಾಗಿ, ಒಂದು ಉದ್ದವಾದ ಬಿದಿರು ಅಥವಾ ಮರದ ಹಲಗೆಯನ್ನು ನಿಲ್ಲಿಸಿ, ಅದರ ಸುತ್ತಲೂ ಉದ್ದವಾದ ಹಲಗೆಗಳನ್ನು ಒಂದಕ್ಕೊಂದು ಹೊಂದಿಕೊಳ್ಳುವಂತೆ , ಉದ್ದಗಲಗಳಲ್ಲಿ ಖಾತಿಯಿಂದ ಅಥವಾ ಸುತುಳಿಯಿಂದ ಕಟ್ಟುವರು. ಇನ್ನಷ್ಟು ಬಿಗಿಗೊಳಿಸಲು ಮೊಳೆಗಳನ್ನು ಹೊಡೆಯುವರು. ಕೆಳಗಿನಿಂದ ಮೇಲೆ ಹೋದಂತೆ ಚಿಕ್ಕದಾಗುತ್ತ ಹೋಗುವ ಸುಮಾರು ಐದರಿಂದ ಆರು ಅಂಕಣಗಳನ್ನು ಕಟ್ಟುವರು.

ಹೀಗೆ ಭದ್ರವಾಗಿ ನಿರ್ಮಾಣಗೊಂಡ ಅಟ್ಟಗಳಿಗೆ ಕೆಲವು ಪ್ರದೇಶಗಳಲಿ ಗೋಲಗಳನ್ನು ನಿರ್ಮಿಸುವರು. ಈ ಗೋಲಗಳು ಅಟ್ಟಕ್ಕೆ ಹೊಂದಿಕೊಂಡೇ ರಚನೆಯಾಗುತ್ತವೆ. ಮೊದಲು ಬಿದಿರುಗಳನ್ನು ಸೀಳಿ ಉದ್ದ ಪಟ್ಟಿಕೆಗಳನ್ನಾಗಿ ಮಾಡಿ, ಅವುಗಳನ್ನು ಮಂಟಪ ಭಾಗದಿಂದ ಶಿಖರದ ವರೆಗೆ ಬಿಲ್ಲಿನಾಕಾರದಲ್ಲಿ ಮಣಿಸಿ ಕಟ್ಟುವರು. ಆಮೇಲೆ ಮತ್ತೆ ಬಿದಿರುಗಳ ಉದ್ದ ಪಟ್ಟಿಗಳನ್ನು ಮಣಿಸಿ, ಅವುಗಳ ಎರಡೂ ಅಂಚುಗಳನ್ನು ಅಥವಾ ಕೊನೆಗಳನ್ನು ಕೂಡಿಸಿ, ವೃತ್ತಗಳನ್ನು ತಯಾರಿಸುವರು. ಅವುಗಳನ್ನು ಬಿಲ್ಲಿನಾಕಾರದಲ್ಲಿ ಕಟ್ಟಿದ ಎಲ್ಲ ಬಿದಿರುಪಟ್ಟಿಗಳಿಗೆ ಆಗುವಂತೆ ಸಮಾನ ಅಂತರದಲ್ಲಿ ಕೆಳಭಾಗದಿಂದ ಶಿಖರದವರೆಗೆ ಅಡ್ಡವಾಗಿ ಕಟ್ಟುವರು. ಕೆಳಗಿನಿಂದ ಮೇಲೆ ಹೋದಂತೆ, ದೊಡ್ಡ ಆಕಾರದಿಂದ ಚಿಕ್ಕ ಆಕಾರಗಳನ್ನು ಹೊಂದಿದ ಎಲ್ಲ ವೃತ್ತಗಳನ್ನು ಅಡ್ಡಲಾಗಿ ಕಟ್ಟಿದಾಗ, ಗೋಪುರವು ಮೇಲೆ ಹೋದಂತೆ ಸಣ್ಣದಾಗುತ್ತ ಹೋಗುತ್ತದೆ.

ಹೀಗೆ ಕಟ್ಟಿದ ವಿಮಾನ ಭಾಗದಿಂದ ಸ್ವಲ್ಪ ಮೇಲ್ಭಾಗದ ಶಿಖರ ಭಾಗವನ್ನು ಸಹ ಇದೇ ರೀತಿಯಲ್ಲಿ ಚಿಕ್ಕದಾದ ಹಾಗೂ ದುಂಡನೆಯ ಆಕಾರದಲ್ಲಿ ನಿರ್ಮಿಸುವರು. ಕೆಲವು ಪ್ರದೇಶಗಳಲ್ಲಿ ಬಿದಿರು, ಅಡಿಕೆ ಪಟ್ಟಿ ಹಾಗೂ ಬೆತ್ತಗಳಿಂದ ಗೋಲಗಳನ್ನು ತಯಾರಿಸುವುದು ಕಂಡುಬರುತ್ತದೆ.

ಇತ್ತೀಚೆಗೆ ತೆಳುವಾದ ಕಬ್ಬಿಣದ ಪಟ್ಟಿಗಳನ್ನು ಉಪಯೋಗಿಸಿ, ಗೋಪುರ ಭಾಗವನ್ನು ನಿರ್ಮಿಸುವುದುಂಟು ಕಬ್ಬಿಣದ ದಪ್ಪವಾದ ಪಟ್ಟಿಗಳನ್ನು ವೃತ್ತಾಕಾರವಾಗಿ ಅಥವಾ ಬಿಲ್ಲಿನಾಕಾರದಲ್ಲಿ ಮಣಿಸಿ, ಸಮಾನ ಅಂತರಗಳಿಂದ ಜೋಡಿಸಿ, ವೆಲ್ಡಿಂಗ್ ಮಾಡುವ ಹೊಸ ವಿಧಾನವನ್ನು ಕಾಣಬಹುದು. ಇದಲ್ಲದೆ ರಥದ ಮಂಟಪದ ಮೇಲ್ಭಾಗದ ಮಧ್ಯದಲ್ಲಿ ಗೋಪುರದ ಎತ್ತರಕ್ಕೆ ತಕ್ಕಂತೆ ಪೈಪನ್ನ ಲಂಬವಾಗಿ ನಿಲ್ಲಿಸಿ, ಆ ಪೈಪಿಗೆ, ಗೋಪುರಾಕಾರದಲ್ಲಿ ಮಣಿಸಿದ ಎಲ್ಲಾ ತೆಳು ಕಬ್ಬಿಣದ ಪಟ್ಟಿಗಳನ್ನು ನಟ್ ಬೋಲ್ಟ್‌ಗಳಿಂದ ಕೂಡಿಸುವರು. ಇದರ ಮೇಲೆ ಇದೇ ವಿಧಾನದಲ್ಲಿ ದುಂಡನೆಯ ಆಕಾರದ ಶಿಖರವನ್ನು ಜೋಡಿಸುವರು.

ಉತ್ಸವ ಮುಗಿದ ನಂತರ ಬಿದಿರಿನ ಗೋಪುರಗಳನ್ನು ಬಿಡಿಗೊಳಿಸಿದಂತೆ ಈ ಗೋಪುರವನ್ನು ಬಿಡಿಗೊಳಿಸಲಾಗದು. ಇದನ್ನು ಇಡಿಯಾಗಿ ರಥದ ಮನೆಯಲ್ಲಿ ತೆಗೆದಿರಿಸಲು ಸಾಧ್ಯ.

★. **ಬಣ್ಣದ ಬಟ್ಟೆಗಳ ಹಾಗೂ ಪತಾಕೆಗಳ ಜೋಡಣೆ :** ಬಿದಿರುಗಳಿಂದ, ಅಡಿಕೆ ಪಟ್ಟಿಗಳಿಂದ ಹಾಗೂ ಮರದ ಹಲಗೆಗಳಿಂದ ನಿರ್ಮಾಣವಾದ ಅಟ್ಟಗಳು ಹಾಗೂ ಗೋಲಗಳು ಹೊರಗಡೆಗೆ ಕಾಣಿಸದಂತೆ ಬಣ್ಣದ ಬಟ್ಟೆಗಳನ್ನು ಸುತ್ತುವರು. ಪ್ರತಿಯೊಂದು ಅಟ್ಟಗಳಿಗೆ ಬೇರೆ ಬೇರೆ

ಕಾಷ್ಠ ಮಾಧ್ಯಮದ ಗಡ್ಡಿ ರಥಶಿಲ್ಪಗಳು



ಸೊಂಡುರು ಶ್ರೀ ಶಿವಪುರೇಶ್ವರ ರಥ
ಜಿ - ಬಳ್ಳಾರಿ



ಕೊಲ್ಲೂರು ಮೂಕಾಂಬಿಕಾ ರಥ



ಚಾಂದಕೋಟೆ ಶ್ರೀ ಬಸವೇಶ್ವರ ರಥ
ಜಿ - ಬಿಜಾಪುರ




ಕೋಟೆ ಶ್ರೀ ಮಲ್ಲೇಶ್ವರ ರಥ
ವಸ್ತು ಸಂಗ್ರಹಾಲಯ ಧರ್ಮಸ್ಥಳ



ಧವಳಗಿ ಶ್ರೀ ಮಡಿವಾಳೇಶ್ವರ ರಥ
ಜಿ - ಬಿಜಾಪುರ



ಬೇಲೂರು ಶ್ರೀ ಚನ್ನಕೇಶ್ವರ ರಥ



ಗುಡಗುಂಟಿ ಶ್ರೀ ಅಮರೇಶ್ವರ ರಥ
ಜಿ - ರಾಯಚೂರ

ಬಣ್ಣದ ಬಟ್ಟೆಗಳನ್ನು ಇದಲ್ಲದೆ ಕೆಲವು ರಥಗಳಲ್ಲಿ ಗೋಪುರಭಾಗದ ಗೋಲಗಳಿಗೆ ಹಾಗೂ ಶಿಖರಗಳಿಗೆ, ಅವುಗಳ ಅಳತೆಗೆ ಸರಿಯಾಗಿ ಹೊಲಿಸಿದ ಬಟ್ಟೆಗಳನ್ನು ಪೂರ್ಣವಾಗಿ ಹೊದಿಸುವರು. ಬಟ್ಟೆಗಳನ್ನು ಕಟ್ಟಲು ದಪ್ಪವಾದ ದಾರ ಇಲ್ಲವೆ ಸುತುಳಿಗಳನ್ನು ಉಪಯೋಗಿಸುವರು.

ಗೋಲಗಳಿಗೆ ಸುತ್ತಲೂ ಸಮಾನಾಂತರವಾಗಿ ಕಬ್ಬಿಣದ ಬಿದಿರುಕಡ್ಡಿಗಳಿಗೆ ಅಥವಾ ಕಬ್ಬಿಣದ ಪಟ್ಟಿಗಳಿಗೆ ಜೋಡಿಸಲಾದ ಸಣ್ಣ ಕಬ್ಬಿಣದ ಹಳಿಗಳಿಗೆ ಬಣ್ಣ ಬಣ್ಣದ ಬಟ್ಟೆಗಳಿಂದ ಅಥವಾ ಪೇಪರುಗಳಿಂದ ತಯಾರಿಸಲಾದ ಪತಾಕೆಗಳನ್ನು ಅಂಟಿಸುವರು. ಇದಲ್ಲದೆ ಬಿದಿರಿನ ಉದ್ದವಾದ ಪಟ್ಟಿಕೆಗಳ ತುದಿಗೆ ಬಟ್ಟೆಗಳನ್ನು ಕಟ್ಟಿ, ಧ್ವಜಗಳನ್ನು ತಯಾರಿಸಿ ಶಿಖರದ ಭಾಗದಲ್ಲಿ ಕಟ್ಟುವರು.

★. **ವಿವಿಧ ಪುಷ್ಪಾಲಂಕಾರ :** ಧ್ವಜ ಪತಾಕೆಗಳಿರುವ ಕೆಳಗಿನ ಭಾಗದಲ್ಲಿ ವಿವಿಧ ಪುಷ್ಪಗಳಿಂದ ತಯಾರಿಸಿದ ಹಾರಗಳನ್ನು ಬೇರೆ ಬೇರೆ ವಿನ್ಯಾಸಗಳಲ್ಲಿ ನೇತು ಹಾಕುವರು. ಶಿಖರದ ಭಾಗದಲ್ಲಿ ಅಲ್ಲಲ್ಲಿ ಬಿಡಿ ಹೂಗಳಿಂದ ಅಲಂಕಾರಗೊಳಿಸುವರು. ಇದೆಲ್ಲಾ ಆದನಂತರ ಲೋಹದಿಂದ ಮಾಡಿದ ಕಳಶವನ್ನು ಗೋಪುರದ ತುತ್ತ ತುದಿಯಲ್ಲಿದ್ದು ರಥವನ್ನು ಪೂರ್ಣವಾಗಿ ಅಲಂಕಾರಗೊಳಿಸುವರು.

ಸುತ್ತುವರು. ಮತ್ತು ಪ್ರತಿ ಅಟ್ಟದ ಅಂಚುಗಳಿಗೆ ನೇತಾಡುವಂತಹ ಬಟ್ಟೆಯ ವಿನ್ಯಾಸಗಳನ್ನು ಜೋಡಿಸುವರು.

ಬ. ಅಂಕಣ ರಥಗಳ ರಚನಾ ವಿಧಾನಗಳು :

ಕಾಷ್ಠ ಮಾಧ್ಯಮದ ರಥಗಳಲ್ಲಿಯೇ ಮತ್ತೊಂದು ವಿಧವಾದ ಅಂಕಣ ರಥಗಳ ರಚನಾ ವಿಧಾನವು, ಗಡ್ಡಿ ರಥಗಳ ರಚನಾ ವಿಧಾನಗಳಿಗಿಂತ ಸ್ವಲ್ಪ ಬೇರೆಯಾಗಿದೆ.

ಅಂಕಣ ರಥಗಳ ನಿರ್ಮಾಣ ಕಾರ್ಯದಲ್ಲಿ ಕೈಗೊಳ್ಳುವ ಮೊದಲ ಹಂತಗಳೆಂದರೆ ನೀಲ ನಕ್ಷೆಯನ್ನು ತಯಾರಿಸುವುದು, ವಿವಿಧ ಕಾಷ್ಠಗಳನ್ನು ಆಯ್ಕೆ ಮಾಡುವುದು, ಶಾಸ್ತ್ರಗ್ರಂಥಗಳನ್ನು ಅಧ್ಯಯನ ಮಾಡುವುದು ಹಾಗೂ ಆರಂಭ ಮಾಡುವ ಮುನ್ನ ಪೂಜೆ ಪುರಸ್ಕಾರಗಳನ್ನು ಕೈಗೊಳ್ಳುವುದು. ಈ ಎಲ್ಲ ಕಾರ್ಯಗಳು ಗಡ್ಡಿ ರಥಗಳನ್ನು ನಿರ್ಮಾಣ ಮಾಡುವ ಮೊದಲ ಹಂತದಲ್ಲಿ ಕೈಗೊಳ್ಳುವಂತಹ ಕಾರ್ಯ ವಿಧಾನಗಳಲ್ಲಿಯೇ ಮುಂದುವರೆಯುತ್ತವೆ. ಆದರೆ ನೀಲನಕ್ಷೆಗಳ ಪ್ರಕಾರ, ಅಂಕಣ ರಥಗಳ ಬಿಡಿ ಭಾಗಗಳನ್ನು ಕಾಷ್ಠದಲ್ಲಿ ರಚಿಸಿ, ಜೋಡಿಸುವ ವಿಧಾನವು ಸ್ವಲ್ಪ ಭಿನ್ನವಾಗಿರುತ್ತದೆ.ಅಂಕಣ ರಥಗಳನ್ನು

೧. ಅಡಿಪಾಯ ಭಾಗ. ೨. ಅಧಿಷ್ಠಾನ ಭಾಗ

೩. ಮಂಟಪ ಭಾಗ ೪. ಗೋಪುರ ಭಾಗ ಎಂದು ನಾಲ್ಕು ಭಾಗಗಳನ್ನಾಗಿ ವಿಂಗಡಿಸಬಹುದು. ಈ ನಾಲ್ಕೂ ಭಾಗಗಳ ರಚನಾ ವಿಧಾನಗಳನ್ನು ವಿವರವಾಗಿ ಅಭ್ಯಾಸ ಮಾಡುವಾ.

೧. ಅಡಿಪಾಯ ಭಾಗದ ರಚನಾ ವಿಧಾನ : ಅಂಕಣ ರಥದ ಅಡಿಪಾಯ ಭಾಗವು ಚಕ್ರಗಳು ಅಚ್ಚುಗಳು ಹಾಗೂ ತೊಲೆಗಳನ್ನು ಹೊಂದಿರುತ್ತದೆ. ಚಕ್ರಗಳಲ್ಲಿ ಹಲಗೆಯ ಚಕ್ರಗಳು, ಅರೆಗಳನ್ನುಳ್ಳ ಚಕ್ರಗಳು ಹಾಗೂ ಶಿಲೆಯ ಚಕ್ರಗಳನ್ನು ಕಾಣಬಹುದು. ಈ ಪ್ರತಿಯೊಂದು ವಿವಿಧ

ಚಕ್ರಗಳನ್ನು ರಚಿಸಲು ಗಡ್ಡೆ ರಥಗಳ, ಬೇರೆ ಬೇರೆ ಚಕ್ರಗಳನ್ನು ರಚಿಸುವ ರಚನಾ ವಿಧಾನಗಳನ್ನೇ ಅನುಸರಿಸುವರು. ಅಚ್ಚುಗಳನ್ನು ಹಾಗೂ ತೊಲೆಗಳನ್ನು ಮರದ ದಿಮ್ಮಿಗಳಿಂದ ಕೊರೆದು ನಿರ್ಮಾಣ ಮಾಡುವರು. ಸಿದ್ಧಗೊಂಡ ಚಕ್ರಗಳು ಅಚ್ಚುಗಳು ಮತ್ತು ತೊಲೆಗಳನ್ನು ಸರಿಯಾಗಿ ಒಂದಕ್ಕೊಂದನ್ನು ಹೊಂದಿಸಿ, ಭದ್ರವಾದ ಅಡಿಪಾಯ ಭಾಗವನ್ನು ನಿರ್ಮಿಸಲು, ಗಡ್ಡೆ ರಥದ ಅಡಿಪಾಯ ಭಾಗದ ರಚನಾ ವಿಧಾನಗಳನ್ನೇ ಅನುಸರಿಸುವರು.

೨. ಅಧಿಷ್ಠಾನ ಭಾಗದ ರಚನಾ ವಿಧಾನ : ಅಂಕಣ ರಥಗಳ ಅಧಿಷ್ಠಾನ ಭಾಗದ ನಿರ್ಮಾಣ ಕಾರ್ಯವು, ನೀಲ ನಕ್ಷೆಗಳ ತಯಾರಿಕೆಯ ಮೂಲಕ ಪ್ರಾರಂಭಗೊಳ್ಳುವುದು. ಗಡ್ಡಿ ರಥದ ತಯಾರಿಕೆಯಲ್ಲಿ, ನೀಲ ನಕ್ಷೆಗಳನ್ನು ತಯಾರಿಸಿದ ನಂತರ ಅವುಗಳನ್ನು ಮರದ ಹಲಗೆಗಳ ಮೇಲೆ ಟ್ರೇಸ್ ಮಾಡಿದ ನಂತರ, ತದ್ರೂಪವಾಗಿ ಶಿಲ್ಪವಿನ್ಯಾಸಗಳನ್ನು ರಚಿಸಿದಂತೆ ವಿವಿಧ ಕಮಾನುಗಳು ಹಾಗೂ ಕಂಬಗಳನ್ನು ರಚಿಸುವುದನ್ನು ತಿಳಿದಿರುವೆವು. ಅಂಕಣ ರಥಗಳಲ್ಲಿಯೂ ಸಹ ಇದೇ ವಿಧಾನದಲ್ಲಿ ಕೆಲಸ ಪ್ರಾರಂಭವಾಗುತ್ತದೆ. ಆದರೆ ಈ ರಥದಲ್ಲಿ ಗಡ್ಡೆಯ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪ ವಿನ್ಯಾಸಗಳು ಹೆಚ್ಚಾಗಿ ಕಂಡುಬರುವುದಿಲ್ಲ. ಅಲ್ಲಲ್ಲಿ ಒಂದೊಂದು ದೇವತಾ ಶಿಲ್ಪಗಳು ಮಾತ್ರ ಬೆರಳೆಣಿಕೆಯಷ್ಟು ಕಂಡುಬರುವವು. ಅಂಕಣ ರಥಗಳ ಅಧಿಷ್ಠಾನ ಭಾಗವು ವಿವಿಧ ರೀತಿಯ ಕಮಾನುಗಳನ್ನು ಹಾಗೂ ಕಂಬಗಳನ್ನು ಹೊಂದಿರುತ್ತದೆ. ಗಡ್ಡಿ ರಥದ ಮಂಟಪ ಭಾಗವನ್ನು ತಯಾರಿಸುವಾಗ ಉಪಯೋಗಿಸುವ ಸಾಮಗ್ರಿಗಳು ಹಾಗೂ ರಚನಾ ವಿಧಾನಗಳನ್ನು ಉಪಯೋಗಿಸಿ ಅಂಕಣ ರಥದ ಗಡ್ಡಿ ಭಾಗಗಳಿಗೆ, ಕಮಾನು ಹಾಗೂ ಕಂಬಗಳನ್ನು ನಿರ್ಮಿಸುವರು.

ಈ ಕಾರ್ಯವು ಪ್ರಾರಂಭವಾದಾಗ ಕೇವಲ ಅಧಿಷ್ಠಾನ ಭಾಗದ ಕಂಬಗಳು ಹಾಗೂ ಕಮಾನುಗಳನ್ನಷ್ಟೇ ರಚಿಸದೇ ಮುಂದೆ ಮಂಟಪ ಹಾಗೂ ಗೋಪುರ ಭಾಗಗಳಿಗೆ ಅವಶ್ಯಕವಾಗುವವಿವಿಧ ಶೈಲಿಯ ಕಮಾನುಗಳನ್ನು ನೀಲ ನಕ್ಷೆಗಳ ಪ್ರಕಾರ ರಚಿಸಿ, ಬಿಡಿ ಬಿಡಿಯಾಗಿ ಆಯಾ ಭಾಗಗಳಿಗೆ ಬಳಸುವ ಕಮಾನು ಹಾಗೂ ಕಂಬಗಳನ್ನು ವಿಭಾಗ ಮಾಡಿ ಒಂದೆಡೆ ತೆಗೆದಿಡುವರು.

ನಂತರ ಸಿದ್ಧಗೊಂಡ ಅಧಿಷ್ಠಾನ ಭಾಗದ ಎಲ್ಲ ಬಿಡಿಭಾಗಗಳನ್ನು ಜೋಡಿಸುವ ಕಾರ್ಯ ಮುಂದುವರೆಯುವದು.

ಸುಭದ್ರವಾಗಿ ನಿರ್ಮಾಣಗೊಂಡ ಅಡಿಪಾಯದ ಮೇಲೆ ಕೊರೆದ ಹಲಗೆಗಳನ್ನು ಚತುರ್ಭುಜಾಕೃತಿಯಲ್ಲಿ ಜೋಡಿಸಿ, ಅವುಗಳಿಗೆ ಮೊಳೆಗಳನ್ನು ಹೊಡೆದು ಗಟ್ಟಿಗೊಳಿಸುವರು, ಚೌಕಾಕಾರದ ತಳಪಾಯದ ಮೇಲೆ ಅಗಲವಾದ ಹಲಗೆಗಳನ್ನು ಹೊಂದಿಸಿ, ಅಡಿಪಾಯಕ್ಕಿಂತಲೂ ಕಿರಿದಾದ, ಕಟ್ಟೆಯಾಕಾರದ ವಿನ್ಯಾಸವನ್ನು ರಚಿಸುವರು. ಕಟ್ಟೆಯಾಕಾರದ ಚೌಕಾಕೃತಿಯ ಎಲ್ಲ ಬಾಹುಗಳ ಮೇಲೆ, ಉದ್ದನೆಯ ತೆಳುವಾದ ಹಲಗೆಯ ಪಟ್ಟಿಗಳನ್ನು ಮೊಳೆಗಳಿಂದ ಹೊಂದಿಸುವರು. ಚತುರ್ಭುಜಾಕೃತಿಯ ಕಟ್ಟೆಯ ಮೇಲೆ, ಹಲಗೆಯ ಚೌಕಟ್ಟುಗಳಿಗೆ ಕಬ್ಬಿಣದ ಸಣ್ಣ ಸಲಾಕೆಗಳನ್ನು ಅಳವಡಿಸಲಾದ ಕಟಂಜರಗಳನ್ನು ಹೊಂದಿಸುವರು. ಈ ಕಟಂಜರಗಳು ಕಂಬಗಳನ್ನು ಹೊಂದಿದ್ದು ವಿವಿಧ ವಿನ್ಯಾಸಗಳನ್ನು ಹೊಂದಿರುತ್ತವೆ. ಆಮೇಲೆ ಕಟ್ಟೆಯ ಮೇಲ್ಭಾಗದ ಮಧ್ಯದಲ್ಲಿ ಅರಳಿದ ಕಮಲದ ಆಕಾರದಲ್ಲಿ ಪೀಠವನ್ನು ರಚಿಸುವರು ಅದರ ಸುತ್ತಲೂ ಕಂಬ ಹಾಗೂ ಮಂಟಪಗಳನ್ನು ಮೊಳೆಗಳಿಂದ ಹಾಗೂ ನಟ್ ಬೋಲ್ಟ್‌ಗಳಿಂದ ಗಟ್ಟಿಯಾಗಿ ಬಿಗಿಯುವರು. ಕೆಲವೊಂದು ರಥಗಳಲ್ಲಿ ಮಂಟಪಗಳನ್ನು

ಕೂಡಿಸದೆ ಕೇವಲ ಕಂಬಗಳನ್ನು ಅಳವಡಿಸುವರು.

೩. ಮಂಟಪ ಭಾಗದ ರಚನಾ ವಿಧಾನ : ಅಧಿಷ್ಠಾನ ಭಾಗದ ತಯಾರಿಕಾ ಸಂದರ್ಭದಲ್ಲಿ ತಯಾರಿಸಲಾದ ಮಂಟಪ ಭಾಗದ ಎಲ್ಲ ಕಮಾನುಗಳನ್ನು ಹಾಗೂ ಕಂಬಗಳನ್ನು ಸರಿಯಾಗಿ ಹೊಂದಿಸಲು ನಟ್ ಬೋಲ್ಟ್‌ಗಳನ್ನು ಬಳಸುವರು. ವಿವಿಧ ವಿನ್ಯಾಸಗಳ ಮಂಟಪಗಳನ್ನು ಅಧಿಷ್ಠಾನ ಭಾಗದ ಮೇಲೆ ಕೂಡಿಸಿ, ಪ್ರತಿಯೊಂದು ಕಂಬದ ಮೇಲ್ಭಾಗದಲ್ಲಿ ಹಿತ್ತಾಳೆಯ ಬುಗುರೆಯಾಕಾರದ ವಿನ್ಯಾಸಗಳನ್ನು ಬಿಗಿಯುವರು. ಮಂಟಪದ ಮಧ್ಯ ಭಾಗದಲ್ಲಿ, ಪ್ರಭಾವಳಿಯನ್ನು ಹೊಂದಿದ ಸುಂದರವಾದ ಪೀಠವನ್ನು ಜೋಡಿಸುವರು. ಬಹುಕೋನಗಳ ಮಂಟಪದ ಎಲ್ಲ ಕಮಾನುಗಳ ಮೇಲೆ ಹಲಗೆಯ ತೆಳುವಾದ ಪಟ್ಟಿಗಳನ್ನು ಹೊಂದಿಸುವರು. ಕೆಲವೊಂದು ರಥಗಳಿಗೆ ಮಂಟಪ ಭಾಗದಲ್ಲಿ ಜೋಡುಕಂಬಗಳನ್ನು ಕೂಡಿಸಿದ ಕಮಾನುಗಳನ್ನು ನೋಡಬಹುದು. ಮಂಟಪದ ಮೇಲ್ಭಾವಣಿಗೆ, ಅಗಲವಾದ ಹಲಗೆಗಳನ್ನು ಹೊಂದಿಸಿ ಮೊಳೆಗಳಿಂದ ಭದ್ರಪಡಿಸುವರು. ಮಂಟಪ ಭಾಗವು ಸಿದ್ಧವಾದ ನಂತರ ರಥದ ಮುಂದಿನ ಹಂತದ ತಯಾರಿಕೆ ನಡೆಯುತ್ತದೆ.

೪. ಗೋಪುರ ಭಾಗದ ರಚನಾ ವಿಧಾನ : ಗೋಪುರ ಭಾಗವು ಸುಮಾರು ಮೂರು, ಅಥವಾ ನಾಲ್ಕು ಅಂಕಣಗಳನ್ನು ಹೊಂದಿರುತ್ತದೆ. ಈ ಎಲ್ಲ ಅಂಕಣಗಳು ವಿವಿಧ ಕಮಾನುಗಳು ಹಾಗೂ ಕಂಬಗಳನ್ನು ಹೊಂದಿರುತ್ತವೆ. ಮಂಟಪ ಭಾಗದ ಮೇಲ್ಭಾವಣಿಯಿಂದ ಆರಂಭವಾಗುವ ಅಂಕಣ ರಥದ ಗೋಪುರವು ಮೇಲೆ ಹೋದಂತೆ ಚಿಕ್ಕದಾಗುತ್ತ ಹೋಗುತ್ತದೆ. ಪ್ರತಿಯೊಂದು ಅಂಕಣಗಳ ಕಂಬಗಳ ಮೇಲ್ಬದಿಯಲ್ಲಿ ಹಿತ್ತಾಳೆಯ, ಬುಗುರಿಯಾಕಾರದ ವಿನ್ಯಾಸಗಳನ್ನು ಕೂಡಿಸಿರುತ್ತಾರೆ. ಎಲ್ಲ ಅಂಕಣಗಳು ಹಲವಾರು ಕಂಬಗಳನ್ನು ಹಾಗೂ ಕಮಾನುಗಳನ್ನು ಹೊಂದಿದ್ದು , ಅವುಗಳೆಲ್ಲವೂ ಭದ್ರವಾಗಿ ಕೂಡಲು, ಅಧಿಷ್ಠಾನ ಭಾಗದಿಂದ ಶಿಖರಭಾಗದವರೆಗೆ ಉದ್ದನೆಯ ಕಬ್ಬಿಣದ ಸಲಾಕೆಗಳನ್ನು ಜೋಡಿಸಿ ಅವುಗಳಿಗೆ ನಟ್ ಬೋಲ್ಟ್‌ಗಳನ್ನು ಬಿಗಿಯುವರು. ಎಲ್ಲ ಕಬ್ಬಿಣದ ಸಲಾಕೆಗಳೂ, ವಿವಿಧ ಅಂಕಣಗಳ ಮೇಲ್ಭಾವಣಿಯಲ್ಲಿ ಕೊರೆದಿರುವ ರಂಧ್ರಗಳ ಮುಖಾಂತರ ಹಾಯ್ದು ಹೋಗಿರುವುದರಿಂದ ಅಂಕಣಗಳು ಒಂದರ ಮೇಲೊಂದು ನಿಲ್ಲಲು ಆಧಾರವಾಗುತ್ತವೆ.

ವರ್ಣಗಾರಿಕೆ : ಈ ರೀತಿಯಲ್ಲಿ ರಥದ ನಾಲ್ಕೂ ಭಾಗಗಳು ಭದ್ರವಾಗಿ ಜೋಡಣೆಯಾದ ನಂತರ, ವಿವಿಧ ಬಣ್ಣಗಳಿಂದ ವರ್ಣಲೇಪನ ಮಾಡುವರು. ರಥದ ಕಂಬಗಳು ಹಾಗೂ ಕಮಾನುಗಳು ಸುಂದರವಾಗಿ ಕಾಣಲು ಸಣ್ಣ ಕುಂಚಗಳಿಂದ ಅಂಚುಗಳಿಗೆ ಗೆರೆಗಳನ್ನು ಎಳೆಯುವರು. ರಥದ ಎಲ್ಲ ಭಾಗದಲ್ಲಿ ಲೇಪಿಸಿದ ವರ್ಣಕ್ಕಿಂತಲೂ ಪೀಠದ ವರ್ಣವು ಬೇರೆಯಾಗಿಯೇ ಇರುವುದು. ವರ್ಣಲೇಪನವು ಮುಗಿದ ನಂತರ, ಅವುಗಳು ಬೇಗನೆ ಮಾಸಿ ಹೋಗದಂತೆ, ಇಡೀ ರಥಕ್ಕೆ ಟ್ರಾನ್ಸ್‌ಪರಂಟ್ ವಾರ್ನಿಸ್ ಅಥವಾ ಡಿಚ್ಚರ್ ವಾರ್ನಿಸನ್ನು ಲೇಪಿಸುವರು. ಇದರಿಂದ ವರ್ಣಗಳು ಬಹುದಿನಗಳವರೆಗೆ ಉಳಿಯುವುದಷ್ಟೇ ಅಲ್ಲದೆ ಕಾಷ್ಠಗಳಿಗೂ ಸಂರಕ್ಷಣೆ ಸಿಗುತ್ತದೆ.

ಪತ್ರ, ಫಲ ಪುಷ್ಪಾಲಂಕಾರ : ಅಂಕಣದ ರಥಗಳಿಗೆ, ಉತ್ಸವದ ಸಂದರ್ಭದಲ್ಲಿ ವಿವಿಧ ಹೂವಿನ ಹಾರಗಳನ್ನು ಬೇರೆ ಬೇರೆ ವಿನ್ಯಾಸಗಳಲ್ಲಿ ನೇತುಬಿಟ್ಟು, ಕೆಲವು ಬಿಡಿ ಹೂಗಳನ್ನು ಅಲ್ಲಲ್ಲಿ ಅಂಟಿಸುವರು. ಲಿಂಬೆಹಣ್ಣು, ತೆಂಗಿನಕಾಯಿಯಂತಹ ವಿವಿಧ ಹಣ್ಣುಗಳನ್ನು ರಥದ ಮಂಟಪ ಭಾಗದಲ್ಲಿ ಕಟ್ಟುವರು. ಅಲ್ಲದೆ ತೆಂಗಿನ ಗರಿ, ಬಾಳೆದಿಂಡುಗಳನ್ನು ಅಧಿಷ್ಠಾನ ಹಾಗೂ ಮಂಟಪ ಭಾಗಗಳಲ್ಲಿ ಕಟ್ಟುವರು.

ಕಾಷ್ಠ ಮಾಧ್ಯಮದ ಅಂಕಣ ರಥಶಿಲ್ಪಗಳು



ಮುಧೋಳದ ಶ್ರೀ ಬ್ರಹ್ಮಗದ್ದಿಮಠದ ರಥ
ಜಿ - ಬಾಗಲಕೋಟ



ದೋತಿಹಾಳದ ಶ್ರೀ ಅಂಜನೇಯನ ರ
ಜಿ - ಕೊಪ್ಪಳ



ಗೋಡಚಿನಮಲ್ಕಿಯ ಶ್ರೀ ಲಕ್ಷ್ಮೀದೇವಿ ರಥ
ಜಿ - ಬೆಳಗಾಂವ



ಗೋಕಾಕದ ಶ್ರೀ ಬಸವೇಶ್ವರ ರಥ
ಜಿ - ಬೆಳಗಾಂವ



ಸಾವಳಗಿ ಶ್ರೀ ಸಿದ್ಧೇಶ್ವರ ರಥ
ಜಿ - ಬಾಗಲಕೋಟ

ಉತ್ಸವಗಳು ರಾತ್ರಿ ವೇಳೆಯಲ್ಲಿದ್ದರೆ ವಿದ್ಯುತ್ ದೀಪಗಳನ್ನು ಅಳವಡಿಸುವರು. ರಥದ ತುತ್ತ ತುದಿಯ ಮೇಲೆ ಕಳಸವನ್ನಿಟ್ಟು ಒಂದು ಬಣ್ಣದ ಛತ್ರಿಯನ್ನಿಡುವರು.

ಹೀಗೆ ಕಾಷ್ಠ ಮಾಧ್ಯಮದ ಅಂಕಣ ರಥಗಳು ಹಾಗೂ ಗಡ್ಡಿ ರಥಗಳು ನಿರ್ಮಾಣಗೊಳ್ಳುವವು.

II. ಲೋಹ ಮಾಧ್ಯಮ ರಥಗಳ ರಚನಾ ವಿಧಾನಗಳು :

ಲೋಹ ಮಾಧ್ಯಮದ ರಥಗಳನ್ನು ಮೂರು ಮಾಧ್ಯಮಗಳನ್ನಾಗಿ ವಿಂಗಡಿಸಬಹುದು.

ಅ. ಕಬ್ಬಿಣದ ರಥಗಳು

ಬ. ಬೆಳ್ಳಿಯ ರಥಗಳು

ಕ. ಚಿನ್ನದ ರಥಗಳು ಹೀಗೆ ಮೂರು ಮಾಧ್ಯಮದ ರಥಗಳ ತಯಾರಿಕೆಯಲ್ಲಿ ಅನುಸರಿಸುವ ರಚನಾ ವಿಧಾನಗಳನ್ನು ವಿವರವಾಗಿ ತಿಳಿಯುವಾ.

ಅ. ಕಬ್ಬಿಣದ ರಥಗಳ ರಚನಾ ವಿಧಾನ :

ಕಬ್ಬಿಣದ ರಥಗಳು ಸ್ಥಿರರಥಗಳಾಗಿದ್ದು, ಅವುಗಳಲ್ಲಿ ಎರಡು ವಿಧಗಳು.

೧. ಕಬ್ಬಿಣದ ಗಡ್ಡಿ ರಥಗಳು


೨. ಕಬ್ಬಿಣದ ಅಂಕಣ ರಥಗಳು . ಈ ಎರಡೂ ವಿಧಗಳಲ್ಲಿಯ ರಥಗಳ ರಚನಾ ವಿಧಾನಗಳನ್ನು ವಿವರವಾಗಿ ಅಭ್ಯಸಿಸುವಾ.

೧. ಕಬ್ಬಿಣದ ಗಡ್ಡಿ ರಥಗಳ ರಚನಾ ವಿಧಾನ :

ನೀಲ ನಕ್ಷೆಗಳ ತಯಾರಿಕೆ : ಕಬ್ಬಿಣ ರಥಗಳನ್ನು ನಿರ್ಮಾಣ ಮಾಡುವ ಮೊದಲ ಹಂತದಲ್ಲಿ, ನಿರ್ಮಾಣಕಾರರು ಅನೇಕ ವಿನ್ಯಾಸಗಳ ನೀಲ ನಕ್ಷೆಗಳನ್ನು ರಚಿಸಬೇಕಾಗುವುದು. ಪ್ರಮಾಣ ಬದ್ಧವಾದ ರಥದ ನೀಲ ನಕ್ಷೆಗಳನ್ನು ಪೇಪರುಗಳಲ್ಲಿ ರಚಿಸಿ, ರಥ ನಿರ್ಮಾಣ ಮಾಡಿಸುವವರಿಗೆ ತೋರಿಸಬೇಕಾಗುತ್ತದೆ. ಕಬ್ಬಿಣದ ಗಡ್ಡಿ ರಥಗಳೂ ಸಹ ಕಾಷ್ಠ ಮಾಧ್ಯಮದ ಗಡ್ಡಿ ರಥಗಳಂತೆ, ವಿವಿಧ ಭಾಗಗಳನ್ನು, ಅನೇಕ ಭುಜಾಕೃತಿಗಳನ್ನು ಹಾಗೂ ಬೇರೆ ಬೇರೆ ಶೈಲಿಗಳಲ್ಲಿ ನಿರ್ಮಾಣಗೊಳ್ಳುವುದರಿಂದ, ಶಾಸ್ತ್ರಗ್ರಂಥಗಳಾಧಾರಿತ ವಿವಿಧ ವಿನ್ಯಾಸಗಳಲ್ಲಿ, ನೀಲ ನಕ್ಷೆಗಳನ್ನು ರಚಿಸಬೇಕಾಗುವುದು.

ಕಬ್ಬಿಣದ ರಾಡ್‌ಗಳ, ಹಳಿಗಳ ಹಾಗೂ ಪಟ್ಟಿಗಳ ಆಯ್ಕೆ : ಕಬ್ಬಿಣದ ಗಡ್ಡಿ ರಥಗಳು ವಿವಿಧ ಭಾಗಗಳಲ್ಲಿ ನಿರ್ಮಾಣಗೊಳ್ಳುವುದರಿಂದ ಆಯಾ ಭಾಗಗಳಿಗೆ, ಬೇರೆ ಬೇರೆ ದಪ್ಪಳತೆಯ ಕಬ್ಬಿಣದ ರಾಡ್‌ಗಳನ್ನು, ಹಳಿಗಳನ್ನು, ಪಟ್ಟಿಗಳನ್ನು, ತಗಡುಗಳನ್ನು ಹಾಗೂ ತಂತಿಗಳನ್ನು ಉಪಯೋಗಿಸಲಾಗುವುದು. ಕಬ್ಬಿಣದ ರಥ ನಿರ್ಮಾಣವಾಗುವುದಕ್ಕೆ ಮುನ್ನ, ಯಾವ ಭಾಗಗಳಿಗೆ ಯಾವ ದಪ್ಪಳತೆಯ ಕಬ್ಬಿಣವನ್ನು ಬಳಸಬೇಕೆಂಬುದರ ಆಯ್ಕೆ ಮಾಡಬೇಕಾಗುವುದು.

ಶಾಸ್ತ್ರ ಗ್ರಂಥಗಳ ಅಧ್ಯಯನ : ಕಬ್ಬಿಣದ ಗಡ್ಡಿರಥಗಳೂ ಸಹ ಕಾಷ್ಠ ಮಾಧ್ಯಮದ ಗಡ್ಡಿ


ಲೋಹ ಮಾಧ್ಯಮದ ರಥಗಳ ರಚನಾ ವಿಧಾನ
ಕಬ್ಬಿಣ ರಥಗಳು
ಬೆಳ್ಳಿ ರಥಗಳು
ಚಿನ್ನದ ರಥಗಳು
ಕಬ್ಬಿಣ ರಥಗಳು
ಗಡ್ಡಿ ರಥ
ಅಂಕಣ ರಥ
ಅಡಿಪಾಯ ಭಾಗದ ರಚನೆ
ಅಧಿಷ್ಠಾನ ಭಾಗ
ಮಂಟಪ ಭಾಗ
ಗೋಪುರ ಭಾಗ
ಚಕ್ರ
ಅಚ್ಚು
ತೊಲೆ
ಅಖಂಡ ಕಬ್ಬಿಣ ಚಕ್ರ
ಕಬ್ಬಿಣದ ಅರೆಗಳನ್ನುಳ್ಳ ಚಕ್ರ
ಶಿಲಾ ಚಕ್ರ
ಕಬ್ಬಿಣ ಆಕೃತಿಗಳ ರಚನೆ
ಬಿಡಿ ಆಕೃತಿಗಳ ಬೆಸುಗೆ
ಕಮಾನು ಮತ್ತು ಕಂಬಗಳ ತಯಾರಿಕೆ
ಬಿಡಿ ಭಾಗಗಳ ಬೆಸುಗೆ
ವಿವಿಧ ಗೋಲಗಳ ರಚನೆ
ಬಿಡಿ ಗೋಲಗಳ ಹೊಂದಿಕೆ
ಎಲ್ಲ ಭಾಗಗಳ ವರ್ಣಗಾರಿಕೆ
ಅಡಿಪಾಯ ಭಾಗದ ರಚನೆ
ಅಧಿಷ್ಠಾನ ಭಾಗದಿಂದ ಶಿಖರಭಾಗದವರೆಗೆ ರಚನೆ
ವರ್ಣಚಿತ್ರಗಳ ರಚನೆ
ವಿವಿಧ ಫಲಪುಷ್ಪಾಲಂಕಾರ
ಚಕ್ರ
ಅಚ್ಚು
ತೊಲೆ
ಅಖಂಡ ಕಬ್ಬಿಣ ಚಕ್ರ
ಕಬ್ಬಿಣದ ಅರೆಗಳನ್ನುಳ್ಳ ಚಕ್ರ
ಶಿಲಾ ಚಕ್ರ
ಕಬ್ಬಿಣ ಆಕೃತಿಗಳ ರಚನೆ
ಬಿಡಿ ಆಕೃತಿಗಳ ಬೆಸುಗೆ
ವಿವಿಧ ರೇಖಾ ಚಿತ್ರಗಳ ರಚನೆ
ರೇಖಾ ಚಿತ್ರಗಳಲ್ಲಿ ವರ್ಣಗಾರಿಕೆ
ಎಲ್ಲ ಭಾಗಗಳ ವರ್ಣಗಾರಿಕೆ

ರಥಗಳಂತೆ ವಿವಿಧ ವಿನ್ಯಾಸಗಳಲ್ಲಿ ಹಾಗೂ ಶೈಲಿಗಳಲ್ಲಿ, ನಿರ್ಮಾಣಗೊಳ್ಳುವುದರಿಂದ, ಪ್ರತಿಮಾ ಶಾಸ್ತ್ರ ಜಾಮಿತಿಕ ಅಂಶ ಹಾಗೂ ಕೆಲವು ಆಗಮೋಕ್ತ ವಿಚಾರಗಳನ್ನು ತಿಳಿದಿರಬೇಕಾಗುತ್ತದೆ. ಈ ರಥದಲ್ಲಿ ಹೆಚ್ಚಾಗಿ ಉಬ್ಬು ಶಿಲ್ಪಗಳ ರಚನೆ ಕಂಡುಬರುವುದಿಲ್ಲ, ಆದರೆ ಚತುರ್ಭುಜ, ಅಷ್ಟಮ, ಷಡ್ಭುಜಾಕೃತಿಯ ಹೀಗೆ ಅನೇಕ ವಿನ್ಯಾಸಗಳಲ್ಲಿ ರಚನೆಗೊಳ್ಳುತ್ತವೆ. ಎಲ್ಲ ಕೆಲಸವು ಕಬ್ಬಿಣದಿಂದಲೇ ಆಗಬೇಕಾಗಿರುವುದರಿಂದ ಆ ಕೆಲಸಕ್ಕೆ ಉಪಯೋಗವಾಗುವ ಸಲಕರಣೆಗಳ ಬಗ್ಗೆ ಹಾಗೂ ವಿವಿಧ ವಿದ್ಯುತ್‌ಚಾಲಿತ ಯಂತ್ರಗಳ ಬಗ್ಗೆ ವಿವರವಾಗಿ ತಿಳಿಯಬೇಕಾಗುವುದು. ಯಾವುದೇ ಕೆಲಸ ಮಾಡಲು ಅಥವಾ ಒಂದು ಯಂತ್ರವನ್ನು ಉಪಯೋಗಿಸುವ ಮೊದಲು ಅದರ ತಂತ್ರವನ್ನು ಅಭ್ಯಾಸ ಮಾಡಬೇಕಾಗುವುದು. ಇಂತವುಗಳನ್ನೆಲ್ಲಾ ತಿಳಿಯಲು, ಕೆಲವು ಪುಸ್ತಕಗಳು ಹಾಗೂ ಶಾಸ್ತ್ರಗ್ರಂಥಗಳ ಉಪಯೋಗವನ್ನು ಪಡೆಯಬೇಕಾಗುತ್ತದೆ.

ರಥ ನಿರ್ಮಾಣವಾಗುವ ಸ್ಥಳ : ಕಬ್ಬಿಣದ ರಥಗಳು ನಿರ್ಮಾಣಗೊಳ್ಳಲು, ರಥ ತಯಾರಕರು ಮೊದಲು ಒಂದು ದೊಡ್ಡ ಸ್ಥಳವನ್ನು ಆಯ್ಕೆ ಮಾಡಬೇಕಾಗುವುದು. ಕಬ್ಬಿಣದ ರಥ ತಯಾರಕರು ಕೇವಲ ರಥಗಳನ್ನಷ್ಟೇ ಅಲ್ಲದೆ ಬೇರೆ ಬೇರೆ ಕಬ್ಬಿಣದ ಗೃಹೋಪಯೋಗಿ ವಸ್ತುಗಳನ್ನು ಮಾಡುವರು. ಅದಕ್ಕಾಗಿ ಅವರು ತಮ್ಮ ಸ್ವಂತ ಜಾಗದಲ್ಲಿ ಒಂದು ವರ್ಕಶಾಪ್‌ನ್ನು ಮಾಡಿಕೊಂಡಿರುತ್ತಾರೆ. ಕಬ್ಬಿಣವನ್ನು ಕೊರೆಯಲು, ಮಣಿಸಲು, ಪಾಲಿಶ್ ಮಾಡಲು, ವೆಲ್ಡಿಂಗ್ ಮಾಡಲು ಮತ್ತು ಭಾರವಾದ ರಾಡ್‌ಗಳನ್ನು ಸ್ಥಳಾಂತರಿಸಲು ವಿವಿಧ ವಿದ್ಯುತ್‌ಚಾಲಿತ ಉಪಕರಣಗಳನ್ನು ಉಪಯೋಗಿಸುತ್ತಾರೆ. ಈ ಎಲ್ಲ ಉಪಕರಣಗಳು ರಥ ನಿರ್ಮಾಣ ಮಾಡುವಲ್ಲಿ ಸಹಾಯಕಾರಿಯಾಗಿವೆ. ಯಂತ್ರಗಳು ಭಾರವಾಗಿರುವುದರಿಂದ ಹಾಗೂ ಹೆಚ್ಚು ಯುನಿಟ್‌ಗಳ ವಿದ್ಯುತ್‌ನ್ನು ಉಪಯೋಗ ಮಾಡಬೇಕಾಗುವುದರಿಂದ, ತಮ್ಮ ವರ್ಕಶಾಪ್‌ದಲ್ಲಿಯೇ ಕಬ್ಬಿಣದ ರಥ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವರು.

ರಥ ತಯಾರಕರ ಗುಂಪು : ಈ ಎಲ್ಲ ಪೂರ್ವ ಭಾವಿ ಸಿದ್ಧತೆಗಳಾದ ನಂತರ, ಕಬ್ಬಿಣದ ರಥಗಳು ನಿರ್ಮಾಣಗೊಳ್ಳಲು, ಅನೇಕ ಕೆಲಸಗಾರರು ಎಡೆಬಿಡದೆ ಕೆಲಸ ಮಾಡಬೇಕಾಗುತ್ತದೆ. ಕಬ್ಬಿಣದ ಪಟ್ಟಿಗಳನ್ನು ಕತ್ತರಿಸುವುದು, ತಗಡನ್ನು ತುಂಡುಗೊಳಿಸುವುದು ಹಾಗೂ ರೂಪುಗೊಂಡ ರಥದ ಬಿಡಿ ಭಾಗಗಳನ್ನು ಒಂದಕ್ಕೊಂದು ಭದ್ರವಾಗಿ ಹೊಂದಿಸುವುದು, ವೆಲ್ಡಿಂಗ್ ಮಾಡುವದು-ಹೀಗೆ ಅನೇಕ ಕೆಲಸಗಳಿಗೆ ಅನೇಕ ಕೆಲಸಗಾರರು ಕೈಗೂಡಿಸುವರು. ಪ್ರಧಾನ ಶಿಲ್ಪಿಯ ಮಾರ್ಗದರ್ಶನದಂತೆ ಎಲ್ಲ ಕೆಲಸಗಾರರು ಸಹ ಅಚ್ಚುಕಟ್ಟಾಗಿ ತಮ್ಮ ಕಾರ್ಯವನ್ನು ನಿರ್ವಹಿಸುವರು.

ಕಬ್ಬಿಣದ ಗಡ್ಡಿ ರಥಗಳನ್ನು ಈ ನಾಲ್ಕು ಹಂತಗಳಲ್ಲಿ ತಯಾರಿಸಲಾಗುವುದು.

i. ಅಡಿಪಾಯ ಭಾಗದ ರಚನೆ

ii. ಅಧಿಷ್ಠಾನ ಭಾಗದ ರಚನೆ

iii. ಮಂಟಪ ಭಾಗದ ರಚನೆ

iv. ಗೋಪುರ ಭಾಗದ ರಚನೆ

i. ಅಡಿಪಾಯ ಭಾಗದ ರಚನಾ ವಿಧಾನ : ಕಬ್ಬಿಣದ ರಥಶಿಲ್ಪಗಳು, ಮೊದಲು ಅಡಿಪಾಯ ಭಾಗವನ್ನು ತಯಾರಿಸುವದರಲ್ಲಿ ತೊಡಗುವರು. ಕಬ್ಬಿಣದ ಗಡ್ಡಿ ರಥಗಳ ಅಡಿಪಾಯವು, ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಡಿಪಾಯದಂತೆ ರ. ಚಕ್ರಗಳು ಠ. ಅಚ್ಚುಗಳು ಹಾಗೂ ಈ. ತೊಲೆಗಳನ್ನು ಹೊಂದಿರುತ್ತದೆ. ಆದ್ದರಿಂದ ಈ ಮೂರೂ ಬಿಡಿ ಭಾಗಗಳ ತಯಾರಿಕಾ ವಿಧಾನಗಳನ್ನು ವಿವರವಾಗಿ ತಿಳಿಯೋಣ

ರ. ಚಕ್ರಗಳು: ಕಬ್ಬಿಣದ ರಥಗಳಿಗೆ ಮೂರು ವಿಧದ ಚಕ್ರಗಳನ್ನು ಅಳವಡಿಸುವರು.

★. ಅಖಂಡ ಕಬ್ಬಿಣದ ಚಕ್ರಗಳು

★. ಕಬ್ಬಿಣದ ಅರೆಗಳನ್ನುಳ್ಳ ಚಕ್ರಗಳು

★. ಶಿಲೆಯ ಚಕ್ರಗಳು .

★. **ಅಖಂಡ ಕಬ್ಬಿಣದ ಚಕ್ರಗಳು:** ಕೆಲವು ರಥಗಳಿಗೆ ಅಖಂಡ ಕಬ್ಬಿಣದ ಚಕ್ರಗಳನ್ನು ಅಳವಡಿಸುವರು. ಇಂಥ ಅಖಂಡ ಚಕ್ರಗಳ ತಯಾರಿಕೆಯು ಸ್ವಲ್ಪ ದುಬಾರಿಯಾದುದು. ಅತೀ ಭಾರದ ಕಬ್ಬಿಣದ ರಥಕ್ಕೆ ಈ ರೀತಿಯ ಚಕ್ರಗಳನ್ನು ಅಳವಡಿಸಬೇಕಾಗುವುದು.

ನಿರ್ಮಾಣವಾಗುವ ಚಕ್ರಗಳ ಅಳತೆಯ ಒಂದು ಲೋಹದ ಮೌಲ್ಡನ್ನು ತಯಾರಿಸಿ ಆ ಮೌಲ್ಡದ ಒಳಗಡೆಗೆ ವಿವಿಧ ಲೋಹ ರಾಸಾಯನಿಕಗಳಿಂದ ತಯಾರಿಸಿದ ಕ್ಯಾಷ್ಟಿಂಗ್ ಆಯಿಲನ್ನು ಲೇಪಿಸುವರು. ಆಮೇಲೆ ಕಬ್ಬಿಣವನ್ನು ಕರಗಿಸಿ, ದ್ರವರೂಪದ ಕಬ್ಬಿಣವನ್ನು ಆ ಮೇಲ್ಡದಲ್ಲಿ ಸುರಿಯುವರು. ಅದರ ಮೇಲೆ ಪ್ರೆಸ್ ಮಶಿನ್‌ದಿಂದ ಚೆನ್ನಾಗಿ ಒತ್ತಿ , ಕಬ್ಬಿಣದ ದ್ರವರೂಪವು ಘನರೂಪವಾಗುವವರೆಗೆ ನೀರಿನ ಸಹಾಯದಿಂದ ತಣ್ಣಗಾಗಿಸಿ ಎರಡು ದಿನಗಳ ನಂತರ ಪ್ರೆಸ್ ಮಶಿನ್‌ದಿಂದ ಮೌಲ್ಡನ್ನು ಹೊರತೆಗೆಯಲಾಗುವುದು. ಮೌಲ್ಡಗಳನ್ನು ಬಿಚ್ಚಿದ ನಂತರ, ರೂಪುಗೊಂಡ ಗಾಲಿಗಳಿಗೆ ಪಾಲಿಶ್ ಮಶಿನ ಸಹಾಯದಿಂದ ಉಜ್ಜಿ ನಯಗೊಳಿಸಿ ಅಂತಿಮ ರೂಪು ಕೊಡುವರು. ಕಬ್ಬಿಣದ ಅಖಂಡ ಗಾಲಿಗಳನ್ನು ಈ ರೀತಿಯಲ್ಲಿ ಮೆಟಲ್ ಕ್ಯಾಸ್ಟಿಂಗ್ ವಿಧಾನದಿಂದ ತಯಾರಿಸಲಾಗುವುದು.

★. **ಕಬ್ಬಿಣದ ಅರೆಗಳನ್ನುಳ್ಳ ಚಕ್ರಗಳು :** ಕಬ್ಬಿಣದ ದಪ್ಪ ಪಟ್ಟಿಗಳನ್ನು ಕಾಯಿಸಿ ಬಡಿದು ಅವುಗಳ ಎರಡೂ ಅಂಚುಗಳನ್ನು ಕೂಡಿಸಿ, ಒಂದು ವೃತ್ತಾಕಾರ ತಯಾರಿಸಿ, ಅಖಂಡವಾದ ಅಥವಾ ಕೊಳವೆಯಾಕಾರದ ಉದ್ದನೆಯ ಸುಮಾರು ಎಂಟರಿಂದ ಹನ್ನೆರಡು ದಪ್ಪ ಕಬ್ಬಿಣದ ಸರಳುಗಳನ್ನು ಮೊದಲು ತಯಾರಿಸಿದ ವೃತ್ತಾಕಾರದ ಪಟ್ಟಿಗೆ ಹಾಗೂ ನಡುವೆ ಕೂಡಿಸಲಾದ ಗಡ್ಡಿಗೆ ಒಂದನ್ನೊಂದು ಬೆಸೆದು ಗಟ್ಟಿಗೊಳಿಸುವರು. ಪೂರ್ಣವಾಗಿ ಕಬ್ಬಿಣದಿಂದಲೇ ನಿರ್ಮಾಣವಾದ ಈ ಚಕ್ರಗಳು ರಥದ ಭಾರವನ್ನು ತಡೆಯುತ್ತವೆ. ಕೆಲವು ಸಲ ಅರೆಗಳನ್ನುಳ್ಳ ಗಾಲಿಗಳ ಆಕಾರದಲ್ಲಿ ಕ್ಯಾಸ್ಟಿಂಗ್ ಮಾಡುವ ರೀತಿಯಲ್ಲಿ ಇಂಥಹ ಚಕ್ರಗಳು ರಚಿಸಲ್ಪಡುವವು.

★. **ಶಿಲೆಯ ಚಕ್ರಗಳು :** ಕಬ್ಬಿಣದ ಗಡ್ಡೆ ರಥಗಳಿಗೆ ಶಿಲೆಯ ಚಕ್ರಗಳನ್ನೂ ಅಳವಡಿಸುವರು. ರಥದ ಗಾತ್ರಕ್ಕೆ ಅನುಗುಣವಾಗಿ ಈ ಚಕ್ರಗಳು ನಿರ್ಮಾಣಗೊಳ್ಳುತ್ತವೆ. ಕಾಷ್ಠ

ಮಾಧ್ಯಮದ ಗಡ್ಡೆ ರಥಗಳಿಗೆ ಶಿಲೆಯ ಚಕ್ರಗಳನ್ನು ಅಳವಡಿಸಲು ಯಾವ ರೀತಿಯಲ್ಲಿ ಅವುಗಳನ್ನು ತಯಾರಿಸುವರೋ ಅದೇ ವಿಧಾನದಿಂದ ಶಿಲೆಯ ಚಕ್ರಗಳನ್ನು ತಯಾರಿಸಿ, ಕಬ್ಬಿಣದ ರಥಗಳಿಗೆ ಅಳವಡಿಸಲಾಗುವುದು.

ಆ. ಅಚ್ಚುಗಳು : ಕಬ್ಬಿಣ ರಥದ ಅಚ್ಚುಗಳು ಕಬ್ಬಿಣದಿಂದಲೇ ನಿರ್ಮಾಣಗೊಂಡಿರುತ್ತವೆ. ಸುಮಾರು ಎಂಟು ಅಥವಾ ಒಂಭತ್ತು ಅಡಿ ಉದ್ದವಾಗಿದ್ದು, ಮಧ್ಯ ಭಾಗದಲ್ಲಿ ಚೌಕಾಕಾರವಾಗಿದ್ದು ಎರಡೂ ಕೊನೆಗಳಲ್ಲಿ ಕೊಳವೆಯ ಆಕಾರದಲ್ಲಿ ದುಂಡಾಕಾರದಲ್ಲಿರುತ್ತವೆ. ಅಲ್ಲದೆ ಕೆಲವು ರಥಗಳಿಗೆ ಪೈಪುಗಳಾಕಾರದ ದುಂಡಾಕಾರದ ಉದ್ದನೆಯ ಕಬ್ಬಿಣದ ರಾಡ್‌ಗಳನ್ನು ಅಳವಡಿಸುವರು. ಅಚ್ಚುಗಳನ್ನು ರಥದ ಎತ್ತರಕ್ಕೆ ತಕ್ಕಂತೆ ಕತ್ತರಿಸಿ, ಮೆಟಲ್ ಪಾಲಿಶ್ ಮಶಿನ್‌ಗಳಿಂದ ಪಾಲಿಶ್ ಮಾಡಿ ಅವುಗಳಿಗೆ ಅಂತಿಮ ರೂಪು ಕೊಡುವರು.

ಈ. ತೊಲೆಗಳು : ಕಬ್ಬಿಣದ ರಥಗಳ ತೊಲೆಗಳೂ ಸಹ ಕಬ್ಬಿಣದ ದೊಡ್ಡ ಹಾಗೂ ದಪ್ಪ ರಾಡ್‌ಗಳಿಂದ ರಚನೆಯಾಗಿರುತ್ತವೆ. ರಾಡ್‌ಗಳು ಚೌಕಾಕಾರದಲ್ಲಿರಬಹುದು ಅಥವಾ ಕೊಳವೆಯ ಆಕಾರದಲ್ಲಿ ದುಂಡಾಕಾರದಲ್ಲಿ ಇರಬಹುದು. ಈ ಕಬ್ಬಿಣದ ತೊಲೆಗಳ ಎರಡೂ ಕೊನೆಗಳಲ್ಲಿ ಸಿಂಹ ಮತ್ತು ಆನೆಯ ಶಿಲ್ಪಗಳನ್ನು ಕ್ಯಾಸ್ಟಿಂಗ್ ಮೆಥೆಡ್‌ನಲ್ಲಿ ರೂಪುಗೊಳಿಸಿರುವರು. ಬಿಡಿ ಭಾಗಗಳನ್ನು ಹೊಂದಿಸುವುದು : ಎಲ್ಲ ಚಕ್ರಗಳು, ಅಚ್ಚುಗಳು ಹಾಗೂ ತೊಲೆಗಳು ರೂಪುಗೊಂಡ ನಂತರ ಅವುಗಳ ಜೋಡಣೆಯ ಕಾರ್ಯವು ಮುಂದುವರೆಯುವುದು. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಡಿಪಾಯ ಭಾಗವನ್ನು ನಿರ್ಮಿಸಲು ಚಕ್ರ, ಅಚ್ಚು, ಹಾಗೂ ತೊಲೆಗಳನ್ನು ಯಾವ ರೀತಿಯಲ್ಲಿ ಹೊಂದಿಸಲಾಗುವುದೋ, ಅದೇ ರೀತಿಯಲ್ಲಿ ಕಬ್ಬಿಣದ ಗಡ್ಡೆಯ ರಥಗಳಲ್ಲಿ ಕಬ್ಬಿಣದಿಂದ ರಚನೆಗೊಂಡ ಎಲ್ಲ ಬಿಡಿ ಭಾಗಗಳನ್ನು ಹೊಂದಿಸಲಾಗುವುದು. ಈಗಾಗಲೇ ಕಾಷ್ಠ ಮಾಧ್ಯಮದ ಗಡ್ಡೆಯ ರಥದ ಅಡಿಪಾಯ ಭಾಗದ ಬಿಡಿ ಭಾಗಗಳನ್ನು ಜೋಡಿಸುವ ಪ್ರತಿ ಹಂತಗಳನ್ನು ಪರಿಚಯಿಸಲಾಗಿದೆ. ಅದರಂತೆಯೇ ನಟ್ ಬೋಲ್ಟ್‌ಗಳನ್ನು ಬಿಗಿದು, ಕೆಲವು ಭಾಗಗಳಲ್ಲಿ ವೆಲ್ಡಿಂಗ್ ಮಾಡಿ ಅಡಿಪಾಯ ಭಾಗವನ್ನು ಭದ್ರಪಡಿಸುವರು.

ii. ಅಧಿಷ್ಠಾನ ಭಾಗದ ರಚನಾ ವಿಧಾನ :

ಕಬ್ಬಿಣದ ಗಡ್ಡಿ ರಥಗಳ ಅಧಿಷ್ಠಾನ ಭಾಗವು ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳುವುದು.

★. ಕಬ್ಬಿಣದ ಆಕೃತಿಗಳ ರಚನೆ

★. ರಚನೆಗೊಂಡ ಬಿಡಿಯಾಕೃತಿಗಳ ಬೆಸುಗೆ. ಈ ಎರಡೂ ಹಂತಗಳಲ್ಲಿರುವ ರಚನಾ ವಿಧಾನಗಳನ್ನು ನೋಡುವಾ.

★. **ಕಬ್ಬಿಣದ ವಿವಿಧ ಆಕೃತಿಗಳ ರಚನೆ :** ನೀಲ ನಕ್ಷೆಯನ್ನು ತಯಾರಿಸುವ ಕಾರ್ಯದಲ್ಲಿ ಮುಂಚಿತವಾಗಿಯೇ ರಥದ ಅಧಿಷ್ಠಾನ ಭಾಗದ ವಿನ್ಯಾಸಕ್ಕೆ ಹೊಂದಿಕೆಯಾಗುವಂತಹ ಕಬ್ಬಿಣದ ಆಕೃತಿಗಳ ರೇಖಾ ಚಿತ್ರಗಳನ್ನು ರಚಿಸಿರುವುದರ ಆಧಾರದ ಮೇಲೆ, ಕಬ್ಬಿಣದ ವಿವಿಧ ಆಕೃತಿಗಳನ್ನು ತಯಾರಿಸುವರು. ಕಬ್ಬಿಣದ ದಪ್ಪ ಪಟ್ಟಿಗಳನ್ನು ಕಾಯಿಸಿ. ಬಡಿದು ಬೇರೆ ಬೇರೆ ವಿನ್ಯಾಸಗಳಲ್ಲಿ

[illegible]

ಮಣಿಸುವರು. ಕಬ್ಬಿಣದ ಸಣ್ಣ ಸಣ್ಣ ಸಲಾಕೆಗಳನ್ನು ಸಮಾನಾಂತರದಲ್ಲಿ ಎರಡು ಕಬ್ಬಿಣದ ಪಟ್ಟಿಗಳಿಗೆ ಬೆಸುಗೆ ಮಾಡಿ ಜಾಲರಿಯಂತಹ ಉದ್ದವಾದ, ಅಗಲ ಕಡಿಮೆ ಇರುವ ಆಯತದಂತಹ ಚೌಕಟ್ಟುಗಳನ್ನು ರಚಿಸುವರು. ಕೆಲವು ದಪ್ಪವಾದ ಕಬ್ಬಿಣದ ಪಟ್ಟಿಗಳನ್ನು ಸರಿಯಾಗಿ ಸಮಾಂತರವಾಗಿ ಬೆಸೆದು ಜೋಡುಪಟ್ಟಿಗಳನ್ನು ತಯಾರಿಸುವರು. ಅವುಗಳಲ್ಲದೆ ಕಬ್ಬಿಣದ ಕೆಲವು ಪ್ಲೇಟ್‌ಗಳನ್ನು ಅಥವಾ ದಪ್ಪ ತಗಡುಗಳನ್ನು ಅಗಲ ಕಡಿಮೆ ಹಾಗೂ ಉದ್ದ ಹೆಚ್ಚಾಗಿರುವಂತೆ ಮೆಟಲ್ ಕಟಿಂಗ್ ಮಶಿನ್‌ದಿಂದ ಕತ್ತರಿಸುವರು. ಅಲ್ಲದೆ ಕೆಲವು ಸಣ್ಣ ಪಟ್ಟಿಗಳನ್ನು ಉಪಯೋಗಿಸಿ, ಹೂ ಬಳ್ಳಿಯಂತಹ ನಕ್ಷೆಗಳಿರುವ ಪಟ್ಟಿಕೆಗಳನ್ನು ವೆಲ್ಡಿಂಗ್ ಮಾಡುವುದರ ಮೂಲಕ ರಚಿಸುವರು.

★. **ರಚನೆಗೊಂಡ ಬಿಡಿಯಾಕೃತಿಗಳ ಬೆಸುಗೆ :** ಭದ್ರವಾದ ಅಡಿಪಾಯ ಭಾಗದ ಮೇಲೆ ದಪ್ಪ ಕಬ್ಬಿಣದ ಪಟ್ಟಿಗಳನ್ನು ವಿವಿಧ ಭುಜಾಕೃತಿಗಳಾಗುವ ವಿನ್ಯಾಸದಲ್ಲಿ ವೆಲ್ಡಿಂಗ್ ಮಾಡುವರು. ಅದರ ಮೇಲೆ ದಪ್ಪವಾದ ಆಯತಾಕಾರದ ದೊಡ್ಡ ಪ್ಲೇಟ್‌ಗಳನ್ನು ಒಂದನ್ನೊಂದು ಹೊಂದಿಸಿ ಚೌಕಾಕಾರದ ಕಟ್ಟೆಯಾಕಾರದ ವಿನ್ಯಾಸವನ್ನು ನಿರ್ಮಿಸುವರು. ಈ ಚೌಕಾಕಾರದ ಕಟ್ಟೆಯ ಆಕಾರದ ಮೇಲೆ ವಿನ್ಯಾಸದ ಅರಳಿದ ಕಮಲದಂತಿರುವ ಅಥವಾ ಬೇರೆ ವಿನ್ಯಾಸದಲ್ಲಿರುವ ಅಷ್ಟಮ, ಷಡ್ಭುಜ, ದ್ವಾದಶ, ವರ್ತುಳ ಹೀಗೆ ವಿವಿಧ ವಿನ್ಯಾಸಗಳಲ್ಲಿಯ ಒಂದನ್ನು ನೀಲನಕ್ಷೆಯನ್ನಾಧಾರಿತ ಜಾಮಿತಿಯ ಅಂಶಗಳನ್ನು ಒಳಗೊಂಡಂತಹ ಅಧಿಷ್ಠಾನ ಭಾಗವನ್ನು ರಚಿಸುವರು. ಶಿವಲಿಂಗದ ಕೆಳಭಾಗದ ಆಕೃತಿಯನ್ನು ಹೋಲುವ ಅಧಿಷ್ಠಾನ ಭಾಗಗಳನ್ನು ಕಬ್ಬಿಣದ ಅನೇಕ ರಥಗಳಲ್ಲಿ ಕಾಣಬಹುದು. ಈ ವಿನ್ಯಾಸದ ಮೇಲ್ಭಾಗ ಮಧ್ಯಭಾಗ, ಹಾಗೂ ಕೆಳಭಾಗದಲ್ಲಿ ಸಣ್ಣ ಸಣ್ಣ ಸಲಾಕೆಗಳನ್ನು ಅಳವಡಿಸಿ, ತಯಾರಿಸಿದ ಜಾಲರಿಗಳನ್ನು ಮತ್ತು ಹೂವು-ಎಲೆಗಳಂತಹ ವಿನ್ಯಾಸಗಳನ್ನು ಹೊಂದಿದ ಉದ್ದವಾದ ಕಬ್ಬಿಣದ ಪಟ್ಟಿಗಳನ್ನು ಅಳವಡಿಸುವರು. ಈ ಭಾಗದ ಮೇಲ್ಭಾಗದಲ್ಲಿ ಹಿತ್ತಾಳೆಯ ಗಂಟೆಗಳನ್ನು ಸಾಲಾಗಿ ಪ್ರತಿಯೊಂದು ಅತೀ ಹತ್ತಿರದಲ್ಲಿರುವಂತೆ ನೇತುಬಿಡುವರು. ಅಧಿಷ್ಠಾನ ಭಾಗದ ಮಧ್ಯಭಾಗದಲ್ಲಿ ಕೆಲವು ಉಬ್ಬು ಲೋಹ ಶಿಲ್ಪಗಳನ್ನು ನಟ್ ಬೋಲ್ಟ್‌ಗಳಿಂದ ಬಿಗಿಯುವರು. ಹೀಗೆ ಅಧಿಷ್ಠಾನ ಭಾಗವನ್ನು ನಿರ್ಮಿಸುವರು.

iii. ಮಂಟಪ ಭಾಗದ ರಚನಾ ವಿಧಾನ :

ಕಬ್ಬಿಣದ ಗಡ್ಡೆ ರಥಗಳ ಮಂಟಪ ಭಾಗವು ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳುವುದು.

★. ಕಮಾನುಗಳು ಹಾಗೂ ಕಂಬಗಳ ತಯಾರಿಕೆ

★. ಬಿಡಿ ಭಾಗಗಳ ಬೆಸುಗೆ

★. **ಕಮಾನುಗಳು ಹಾಗೂ ಕಂಬಗಳ ತಯಾರಿಕೆ :** ಕಬ್ಬಿಣದ ಗಡ್ಡಿ ರಥಗಳನ್ನು ನಿರ್ಮಾಣ ಮಾಡುವ ಹಂತದಲ್ಲಿ ಮಂಟಪ ಭಾಗಗಳಿಗೆ ಅಳವಡಿಸುವಂತಹ ಅನೇಕ ಕಮಾನುಗಳು ಹಾಗೂ ಕಂಬಗಳನ್ನು ನಿರ್ಮಾಣ ಮಾಡಬೇಕಾಗುವುದು.

ಕಬ್ಬಿಣದ ದಪ್ಪವಾದ ಪಟ್ಟಿಗಳಿಂದ ಮತ್ತು ತೆಳುವಾದ ಪ್ಲೇಟ್‌ಗಳಿಂದ ವಿವಿಧ ವಿನ್ಯಾಸಗಳ ಕಮಾನುಗಳನ್ನು ತಯಾರಿಸುವರು. ಅಲ್ಲದೆ ಕ್ಯಾಸ್ಟಿಂಗ್ ವಿಧಾನದಲ್ಲಿ ಕೆಲವು ಸುಂದರವಾದ ಕಂಬಗಳನ್ನು

ಹಾಗೂ ಉಬ್ಬುಶಿಲ್ಪ ವಿನ್ಯಾಸಗಳನ್ನು ರಚಿಸುವರು. ಹೂ - ಬಳ್ಳಿಗಳ ಆಕಾರದಲ್ಲಿ ಬಿಡಿಬಿಡಿಯಾಗಿ ಕೆಲವೊಂದು ಆಧಾರ ಪಟ್ಟಿಗಳನ್ನು ರಚಿಸುವರು. ದಪ್ಪ ಕಬ್ಬಿಣದ ಪಟ್ಟಿಗಳು ಹಾಗೂ ಸಣ್ಣ ಕಬ್ಬಿಣದ ಸಲಾಕೆಗಳನ್ನು ಉಪಯೋಗಿಸಿ, ವಿವಿಧ ನಕ್ಷೆಗಳಿರುವ ಜಾಲರಿಯನ್ನು ತಯಾರಿಸುವರು. ಇದಲ್ಲದೆ ಬಗುರೆಯ ಆಕಾರದಲ್ಲಿರುವ ಹಲವಾರು ಸಣ್ಣಸಣ್ಣ ಆಕೃತಿಗಳನ್ನು ಮೌಲ್ಡ್ ವಿಧಾನದಲ್ಲಿ ತಯಾರಿಸುವರು.

★. **ಬಿಡಿ ಭಾಗಗಳ ಬೆಸುಗೆ :** ಮಂಟಪ ಭಾಗದ ಎಲ್ಲ ಬಿಡಿ ಭಾಗಗಳು ಸಂಪೂರ್ಣವಾಗಿ ರೂಪುಗೊಂಡ ನಂತರ ಅವುಗಳನ್ನು ಮಂಟಪದ ನೀಲನಕ್ಷೆಯ ವಿನ್ಯಾಸಕ್ಕೆ ಅನುಗುಣವಾಗಿ ಹೊಂದಿಸಿ ಬೆಸೆಯಲಾಗುವುದು.

ಬಹುಭುಜಾಕೃತಿಗಳಲ್ಲಿ ನಿರ್ಮಾಣವಾದ ಅಧಿಷ್ಠಾನ ಭಾಗದ ಮೇಲ್ಭಾಗದಲ್ಲಿ ಸುತ್ತುತ್ತಲೂ ಸಣ್ಣ ಸಣ್ಣ ಸಲಾಕೆಗಳಿಂದ ಹಾಗೂ ತೆಳು ಪಟ್ಟಿಗಳಿಂದ ತಯಾರಿಸಿದ ಉದ್ದವಾದ ಆಯತಾಕಾರದ ಜಾಲರಿಯನ್ನು ನಟ್ ಬೋಲ್ಟ್‌ಗಳಿಂದ ಬಿಗಿಯುವರು. ಇದರ ನಡುವೆ, ಮಂಟಪ ಭಾಗದ ನಾಲ್ಕೂ ದಿಕ್ಕುಗಳಲ್ಲಿ ಸುಂದರವಾದ ವಿನ್ಯಾಸಗಳನ್ನು ಹೊಂದಿದ ಕಮಾನುಗಳನ್ನು ಜೋಡಿಸುವರು. ಅವುಗಳು ಗಟ್ಟಿಯಾಗಿ ಕೂಡಲು ಕೆಲವೊಂದು ಕಡೆ ಬೆಸೆಯುವರು. ಈ ಕಮಾನುಗಳ ಎರಡೂ ಬದಿಗಳಲ್ಲಿ ಸ್ವಲ್ಪ ಹಿಂದೆ ಮುಂದೆ ಅಲ್ಲಲ್ಲಿ ಸುಂದರವಾದ ಕಂಬಗಳನ್ನು ಜೋಡಿಸುವರು. ಇಲ್ಲವೆ ಕೊಳವೆಯಾಕಾರದ ಕಬ್ಬಿಣದ ಪಟ್ಟಿಗಳನ್ನು ಕೂಡಿಸುವರು. ಮಂಟಪದ ಮೇಲ್ಛಾವಣಿಗೆ ದಪ್ಪವಾದ ಕಬ್ಬಿಣದ ತಗಡು ಅಥವಾ ಪ್ಲೇಟ್‌ಗಳನ್ನು ಉಪಯೋಗಿಸುವರು. ಛಾವಣಿಯಿಂದ ಮುಂದೆ ಬಂದ ಸೂರಪಟ್ಟಿಯು ಸುಂದರವಾಗಿ ಕಾಣಲು ವಿವಿಧ ಎಲೆ, ಹೂ-ಬಳ್ಳಿ ನಕ್ಷೆಗಳನ್ನು ಹೊಂದಿದ ಕಬ್ಬಿಣದ ಪಟ್ಟಿಗಳನ್ನು ವೆಲ್ಡಿಂಗ್ ಮಾಡುವರು. ಮಂಟಪಗಳಿರುವ ನಾಲ್ಕೂ ದಿಕ್ಕಿನ ಮೇಲೆ ಬರುವಂತಹ ಸೂರ ಪಟ್ಟಿಯ ಕೆಳಗಡೆಗೆ, ಬುಗುರೆಯಾಕಾರದ ಸಣ್ಣ ಸಣ್ಣ ವಿನ್ಯಾಸಗಳನ್ನು ನಟ್‌ಬೋಲ್ಟಗಳಿಂದ ಬಿಗಿಯುವರು. ಮಂಟಪ ಭಾಗದ ಬಲಭಾಗ ಹಾಗೂ ಎಡಭಾಗಗಳಲ್ಲಿ ಅಲ್ಲಲ್ಲಿ ಒಂದೊಂದು ಪಡಿಯಚ್ಚು ಮಾದರಿಯಲ್ಲಿ ತಯಾರಿಸಲಾದ ಉಬ್ಬು ಶಿಲ್ಪಗಳನ್ನು ಬೆಸುಗೆ ಮಾಡುವರು. ಮಂಟಪದ ಒಳಗಡೆಗೆ ಮಧ್ಯ ಭಾಗದಲ್ಲಿ ಪ್ರಭಾವಳಿ ಇರುವ ಒಂದು ಸುಂದರವಾದ ಪೀಠವನ್ನು ಕೂಡಿಸುವರು. ಹೀಗೆ ಮಂಟಪ ಭಾಗದ ರಚನೆಯಾಗುತ್ತದೆ.

iv. ಗೋಪುರ ಭಾಗದ ರಚನಾ ವಿಧಾನ : ಕಬ್ಬಿಣದ ಗಡ್ಡೆರಥಗಳ ಗೋಪುರ ಭಾಗವೂ ಸಹ ಸ್ಥಿರರಥವಾಗಿದೆ. ಇದು ರಥದ ಮಂಟಪ ಭಾಗದ ಮೇಲೆ ಶಾಶ್ವತವಾಗಿ ರಚನೆಯಾಗಿರುತ್ತದೆ. ಈ ಗೋಪುರ ಭಾಗವು ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳುವುದು.

★. ವಿವಿಧ ಗೋಲಗಳ ತಯಾರಿಕೆ

★. ಬಿಡಿಯಾದ ಗೋಲಗಳ ಹೊಂದಿಕೆ ಈ ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳುವ ಗೋಪುರ ಭಾಗದ ರಚನಾ ವಿಧಾನಗಳನ್ನು ತಿಳಿಯುವಾ.

★. **ವಿವಿಧ ಗೋಲಗಳ ತಯಾರಿಕೆ :** ಕಬ್ಬಿಣದ ಗಡ್ಡಿ ರಥಗಳ ಗೋಪುರಗಳನ್ನು ನಿರ್ಮಿಸಲು ಹೂ ಬಳ್ಳಿಯಂತಹ ನಕ್ಷೆಗಳನ್ನು ಹೊಂದಿದ ವಿವಿಧ ವಿನ್ಯಾಸಗಳಲ್ಲಿ ಮಣಿದಿರುವ ದಪ್ಪ

ಕಬ್ಬಿಣದ ಪಟ್ಟಿಗಳನ್ನು ಹಾಗೂ ಬೇರೆ ಬೇರೆ ಪ್ರಮಾಣದ ಆಕಾರದಲ್ಲಿರುವ ಗೋಲಗಳನ್ನು ರಚಿಸಬೇಕಾಗುವುದು. ತೆಳುವಾದ ಕಬ್ಬಿಣದ ಪಟ್ಟಿಗಳನ್ನು ಆಯತಾಕಾರದಲ್ಲಿ ಹೊಂದಿಸಿ ಅದಕ್ಕೆ ವಿವಿಧ ವಿನ್ಯಾಸಗಳಲ್ಲಿ ಮಣಿಸಿದಂತಹ ದಪ್ಪ ಕಬ್ಬಿಣದ ಮೇಲೆ ಸಣ್ಣ ಕಬ್ಬಿಣದ ಸಲಾಕೆಗಳನ್ನು ಉಪಯೋಗಿಸಿ ವೆಲ್ಡಿಂಗ್ ಮಾಡಿ, ಹೂ ಬಳ್ಳಿ ನಕ್ಷೆಗಳ ಪಟ್ಟಿಕೆಗಳನ್ನು ತಯಾರಿಸುವರು. ಇದಲ್ಲದೆ ಮಧ್ಯದಲ್ಲಿ ದಪ್ಪನೆಯ ಕಬ್ಬಿಣದ ಸಲಾಕೆಯನ್ನು ನಿಲ್ಲಿಸಿ, ತೆಳು ಕಬ್ಬಿಣದ ಪಟ್ಟಿಗಳನ್ನು ಅರ್ಧ ಚಂದ್ರಾಕೃತಿ ಇಲ್ಲವೆ ಎರಡೂ ಕೊನೆಗಳನ್ನು ಕೂಡಿಸಿ ವೃತ್ತಾಕಾರಗಳನ್ನಾಗಿ ಮಾಡಿ, ಉದ್ದ ಹಾಗೂ ಅಡ್ಡಲಾಗಿ ಸಮಾನಾಂತರಗಳಲ್ಲಿ ಹೊಂದಿಸಿ, ವೆಲ್ಡಿಂಗ್ ಮಾಡಿ ಚಿಕ್ಕದಾದ ಹಾಗೂ ದೊಡ್ಡದಾದ ಗೋಲಗಳನ್ನು ತಯಾರಿಸುವರು. ಸಣ್ಣ ಗೋಲವು ಶಿಖರದ ಭಾಗಕ್ಕೆ ಉಪಯೋಗವಾಗುವುದು.

★. **ಬಿಡಿಯಾದ ಗೋಲಗಳ ಹೊಂದಿಕೆ :** ಮೊದಲು ತಯಾರಿಸಿದ ಹೂ ಬಳ್ಳಿಗಳಂತಹ ನಕ್ಷೆಗಳನ್ನುಳ್ಳ ಆಯತಾಕಾರದ ಕಟಂಜರಗಳನ್ನು ಮಂಟಪ ಭಾಗದ ಭಾವಣಿಯ ಮೇಲ್ಭಾಗದಲ್ಲಿ ಬಹು ಭುಜಾಕೃತಿಗಳಲ್ಲಿ ಹೊಂದಿಸುವರು. ಹೀಗೆ ಎರಡು ಅಂಕಣಗಳನ್ನು ರಚಿಸಿದ ನಂತರ, ಅದರ ಮೇಲೆ ಸಣ್ಣ ಕಬ್ಬಿಣದ ಪಟ್ಟಿಗಳಿಂದ ತಯಾರಿಸಿದ ಅರ್ಧಗೋಲವನ್ನಿಟ್ಟು ವೆಲ್ಡಿಂಗ್ ಮಾಡಿ ಅದರ ಮೇಲ್ತುದಿಯಲ್ಲಿ ಚಂಡಿನಾಕಾರದಲ್ಲಿ ತಯಾರಿಸಲಾದ ಸಣ್ಣ ಗೋಲನ್ನು ನಟ್ ಬೋಲ್ಟ್‌ಗಳ ಸಹಾಯದಿಂದ ಬಿಗಿಯುವರು. ಮೇಲೆ ಹೋದಂತೆ ಗೋಪುರವು ಚಿಕ್ಕದಾಗುತ್ತ ಹೋಗುವಂತೆ ರಚಿಸುವರು. ಈ ಗೋಪುರವು ನೋಡಲು ಕಾಷ್ಠ ಮಾಧ್ಯಮದ ಗಡ್ಡೆ ರಥಗಳ ಚರರಥದ ಗೋಪುರ ಭಾಗದ ವಿನ್ಯಾಸದಲ್ಲಿ ನಿರ್ಮಾಣಗೊಂಡಿರುತ್ತದೆ.

ನಿರ್ಮಾಣಗೊಂಡ ರಥಗಳ ವರ್ಣಗಾರಿಕೆ : ಕಬ್ಬಿಣದ ಗಡ್ಡೆ ರಥಗಳು ಅಡಿಪಾಯ, ಅಧಿಷ್ಠಾನ ಮಂಟಪ ಹಾಗೂ ಗೋಪುರ ಭಾಗಗಳನ್ನು ಹೊಂದಿ ಸರಿಯಾಗಿ ನಿರ್ಮಾಣಗೊಂಡ ನಂತರ ಇಡೀ ರಥಕ್ಕೆ ಪಾಲಿಶ್ ಪುಡಿಯನ್ನು ಲೇಪಿಸಿ, ಸ್ಯಾಂಡ್ ಪೇಪರ್‌ಗಳಿಂದ ಅಥವಾ ಪಾಲಿಶ್ ಮಶಿನ್‌ಗಳಿಂದ ಸರಿಯಾಗಿ ಉಜ್ಜಿ, ಕಬ್ಬಿಣದ ತುಕ್ಕು ಹಿಡಿದ ಭಾಗವನ್ನೆಲ್ಲ ಸ್ವಚ್ಛ ಮಾಡಿ, ಬಟ್ಟೆಯಿಂದ ವರೆಸುವರು. ಆಮೇಲೆ ರಥದ ವಿವಿಧ ಭಾಗಗಳಿಗೆ ಬ್ರಶ್‌ಗಳನ್ನು ಅಥವಾ ಸ್ಪ್ರೇ ಗನ್‌ಗಳನ್ನು ಉಪಯೋಗಿಸಿ ವಿವಿಧ ವರ್ಣಗಳಿಂದ ಸುಂದರವಾದ ವರ್ಣಲೇಪನ ಮಾಡುವರು. ರಥದ ಅಧಿಷ್ಠಾನ ಭಾಗದಲ್ಲಿ ಮತ್ತು ಮಂಟಪ ಭಾಗದಲ್ಲಿರುವ ಕೆಲವು ಉಬ್ಬುಶಿಲ್ಪಗಳು ಮತ್ತು ಅನೇಕ ಕಮಾನುಗಳಿಗೆ ಹಾಗೂ ಕಂಬಗಳಿಗೆ ಸುಂದರವಾದ ವರ್ಣಲೇಪನ ಮಾಡುವರು. ಇಡೀ ರಥವನ್ನು ವರ್ಣಲೇಪನಗೊಳಿಸಿದ ನಂತರ ಆ ವರ್ಣಗಳು ಬಿಸಿಲು ಮಳೆಗಳಿಗೆ ಉದುರಿ ಹೋಗದಂತೆ ಟ್ರಾನ್ಸ್‌ಪರಂಟ್ ವಾರ್ನಿಸ್ ಅಥವಾ ಫ್ರೆಂಚ್ ಪಾಲಿಸ್‌ನ್ನು ಲೇಪಿಸುವರು. ಮೆಟಲ್ ಫ್ರೆಂಚ್ ಪಾಲಿಸನ್ನು ಉಪಯೋಗಿಸುವುದರಿಂದ ಬಣ್ಣಗಳಿಗೆ ಹೊಳಪು ಬರುವುದಲ್ಲದೆ ರಥದ ಕಬ್ಬಿಣಗಳಿಗೆ ಯಾವುದೇ ರೀತಿಯ ಬಾಧೆಯುಂಟಾಗದು.

ಉತ್ಸವದ ಸಂದರ್ಭದ ಅಲಂಕಾರ : ಉತ್ಸವದ ಸಂದರ್ಭದಲ್ಲಿ ವಿವಿದ ಹೂವಿನ ಹಾರಗಳಿಂದ ರಥದ ಮಂಟಪ ಭಾಗ ಹಾಗೂ ಅಧಿಷ್ಠಾನ ಭಾಗಗಳನ್ನು ಅಲಂಕಾರಗೊಳಿಸುವರು. ಇದಲ್ಲದೆ ತೆಂಗಿನಗರಿ, ಬಾಳೆದಿಂಡು, ಕಬ್ಬುಗಳು ಹಾಗೂ ವಿವಿಧ ಹಣ್ಣುಗಳಿಂದ, ತಳಿರು ತೋರಣಗಳಿಂದ ಅಲಂಕಾರಗೊಳಿಸುವರು. ಗೋಪುರ ಭಾಗದಲ್ಲಿ ಬಣ್ಣ ಬಣ್ಣದ ಬಟ್ಟೆಗಳು, ಪತಾಕೆಗಳು ಹಾಗೂ ಬಣ್ಣ



ಶ್ರೀ ಬುತ್ತಿ ಬಸವೇಶ್ವರ ರಥ ಕುಷ್ಟಗಿ
ಜಿ - ಕೊಪ್ಪಳ



ಶ್ರೀ ಮುರುಘೇಂದ್ರ ಸ್ವಾಮಿ ರಥ
ಜಾಲವಾದಿ



ಶ್ರೀ ಮಲ್ಲಿಕಾರ್ಜುನ ರಥ, ದೇಸಾಯಿಕಲ್ಲೂರು
ಜಿ - ಗುಲಬರ್ಗಾ



ಶ್ರೀ ಬಸವೇಶ್ವರ ರಥ
ಮುದೋಳ

ಬಣ್ಣದ ಧ್ವಜಗಳನ್ನು ಅಳವಡಿಸುವರು. ಶಿಖರ ಭಾಗಕ್ಕೆ ಕೆಂಪು ಬಣ್ಣದ ಬಟ್ಟೆ ಸುತ್ತಿ ವಿವಿಧ ಹೂಗಳಿಂದ ಅಲಂಕಾರಗೊಳಿಸುವರು. ಶಿಖರದ ತುತ್ತ ತುದಿಯಲ್ಲಿ ಕಳಶವನ್ನಿಟ್ಟು ರಥವನ್ನು ಸಂಪೂರ್ಣವಾಗಿ ಅಲಂಕರಿಸುವರು.

ಹೀಗೆ ಕಬ್ಬಿಣದ ಗಡ್ಡೆ ರಥಗಳು ವಿವಿಧ ಹಂತಗಳಲ್ಲಿ ನಿರ್ಮಾಣಗೊಳ್ಳುತ್ತವೆ.

೨. ಕಬ್ಬಿಣದ ಅಂಕಣ ರಥಗಳ ರಚನಾ ವಿಧಾನಗಳು :

ಲೋಹ ಮಾಧ್ಯಮದ ಕಬ್ಬಿಣದ ರಥಗಳಲ್ಲಿ ಮತ್ತೊಂದು ವಿಧವಾದ ಕಬ್ಬಿಣದ ಅಂಕಣ ರಥಗಳ ರಚನಾ ವಿಧಾನವು ಕಬ್ಬಿಣದ ಗಡ್ಡಿ ರಥಗಳ ರಚನಾ ವಿಧಾನಗಳಿಗಿಂತ ಸ್ವಲ್ಪ ಬೇರೆಯಾಗಿ ಕಂಡುಬರುತ್ತದೆ.

ಅಂಕಣ ರಥಗಳ ನಿರ್ಮಾಣಕಾರ್ಯವನ್ನು ಪ್ರಾರಂಭ ಮಾಡಿದಾಗ ಮೊಟ್ಟ ಮೊದಲು ನೀಲನಕ್ಷೆಗಳ ತಯಾರಿಕೆ ಮಾಡುವದು, ಕಬ್ಬಿಣದ ವಿವಿಧ ರಾಡ್‌ಗಳು, ಹಳಿಗಳು, ಪಟ್ಟಿಗಳು, ತಗಡುಗಳು ಮತ್ತು ಪ್ಲೇಟ್‌ಗಳನ್ನು ಸರಿಯಾಗಿ ಆಯ್ಕೆ ಮಾಡುವುದು, ಕಬ್ಬಿಣ ಕೆಲಸವನ್ನು ಮಾಡುವುದಕ್ಕೆ ಮತ್ತು ರಥದ ಸರಿಯಾದ ನೀಲನಕ್ಷೆಯನ್ನು ತಯಾರಿಸಲು ಕೆಲವೊಂದು ಶಾಸ್ತ್ರ ಗ್ರಂಥಗಳ ಅಧ್ಯಯನ ಮಾಡುವುದು ಹಾಗೂ ತಮ್ಮ ಸ್ವಂತ ಸ್ಥಳದಲ್ಲಿ ವಿವಿಧ ಸಾಮಗ್ರಿಗಳ ಸಮೇತ ಅನೇಕ ಜನ ಕೆಲಸಗಾರರೊಂದಿಗೆ ಕೆಲಸವನ್ನು ಮಾಡುವ ಈ ವಿಧಾನಗಳೆಲ್ಲ, ಕಬ್ಬಿಣದ ಗಡ್ಡಿ ರಥಗಳ ತಯಾರಿಕೆಯ ಕಾರ್ಯದ ಮೊದಲು ಕೈಗೊಂಡ ಕೆಲಸದಂತೆಯೇ ಮುಂದೆ ಸಾಗುವುದು. ಆದರೆ ನೀಲಿ ನಕ್ಷೆಯ ಪ್ರಕಾರ, ಕಬ್ಬಿಣದ ಅಂಕಣ ರಥಗಳ ಬಿಡಿ ಭಾಗಗಳನ್ನು ಕಬ್ಬಿಣದಲ್ಲಿ ರಚಿಸಿ, ಒಂದಕ್ಕೊಂದು ಬೆಸುಗೆ ಮಾಡುವ ವಿಧಾನವು ಗಡ್ಡಿ ರಥಗಳ ಬಿಡಿ ಭಾಗಗಳನ್ನು ಹೊಂದಿಸುವ ಕಾರ್ಯಕ್ಕಿಂತಲೂ ಸ್ವಲ್ಪ ಬೇರೆಯಾಗಿದೆ.

ಕಬ್ಬಿಣದ ಅಂಕಣ ರಥಗಳು ಮುಖ್ಯವಾಗಿ ನಾಲ್ಕು ಹಂತಗಳಲ್ಲಿ ನಿರ್ಮಾಣವಾಗುತ್ತವೆ.

i. ಅಡಿಪಾಯ ಭಾಗದ ತಯಾರಿಕೆ

ii. ಅಧಿಷ್ಠಾನದಿಂದ ಶಿಖರ ಭಾಗದ ತಯಾರಿಕೆ

iii. ವರ್ಣಚಿತ್ರಗಳ ರಚನೆ

iv. ವಿವಿಧ ಫಲ, ಪುಷ್ಪಾಲಂಕಾರ.

i. ಅಡಿಪಾಯ ಭಾಗದ ತಯಾರಿಕೆ :

ಕಬ್ಬಿಣದ ಅಂಕಣ ರಥಗಳ ಅಡಿಪಾಯವೂ ಸಹ ಚಕ್ರಗಳು, ಅಚ್ಚುಗಳು ಹಾಗೂ ತೊಲೆಗಳನ್ನು ಹೊಂದಿರುತ್ತದೆ. ಈ ಮೂರು ಬಿಡಿ ಭಾಗಗಳನ್ನು ಸರಿಯಾಗಿ ಜೋಡಿಸಿದಾಗ ಭದ್ರವಾದ ಅಡಿಪಾಯ ಭಾಗವು ನಿರ್ಮಾಣಗೊಳ್ಳುತ್ತದೆ. ರಥದ ಚಕ್ರ, ಅಚ್ಚು ಹಾಗೂ ತೊಲೆ ಈ ಮೂರು ಬಿಡಿ ಭಾಗಗಳ ರಚನೆ ಹಾಗೂ ಅವುಗಳನ್ನು ಒಂದಕ್ಕೊಂದು ಜೋಡಿಸುವ ವಿಧಾನಗಳು ಕಬ್ಬಿಣದ ಗಡ್ಡಿ ರಥದ ಅಡಿಪಾಯದ ರಚನಾ ವಿಧಾನದಂತೆಯೇ ಇರುತ್ತವೆ. ಗಡ್ಡಿ ರಥಗಳ ಅಡಿಪಾಯ ಭಾಗದ

ತಯಾರಿಕಾ ಹಂತಗಳಲ್ಲಿ ಈ ವಿಧಾನಗಳ ಬಗ್ಗೆ ಚರ್ಚಿಸಲಾಗಿದೆ.

ii. ಅಧಿಷ್ಠಾನ ಭಾಗದಿಂದ ಶಿಖರ ಭಾಗದವರೆಗಿನ ತಯಾರಿಕೆ :

ಕಬ್ಬಿಣದ ಅಂಕಣ ರಥಗಳ ಅಧಿಷ್ಠಾನದಿಂದ ಶಿಖರದವರೆಗಿನ ಭಾಗವು ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳುತ್ತದೆ.

★. ಕಬ್ಬಿಣದ ವಿವಿಧ ಆಕೃತಿಗಳ ರಚನೆ

★. ರಚನೆಗೊಂಡ ಬಿಡಿ ಆಕೃತಿಗಳ ಜೋಡಣೆ

ಈ ಎರಡೂ ಹಂತಗಳ ರಚನಾ ವಿಧಾನಗಳನ್ನು ವಿವರವಾಗಿ ತಿಳಿಯುವಾ.

★. **ಕಬ್ಬಿಣದ ವಿವಿಧ ಆಕೃತಿಗಳ ರಚನೆ :** ಕಬ್ಬಿಣದ ಅಂಕಣ ರಥಗಳು ಅಧಿಷ್ಠಾನ ಭಾಗದಿಂದ ಶಿಖರ ಭಾಗದವರೆಗೆ ಐದು ಅಥವಾ ಆರು ಅಂತಸ್ತುಗಳಲ್ಲಿ ಮುಂದುವರೆಯುತ್ತದೆ. ಎಲ್ಲ ಅಂತಸ್ತುಗಳಿಗೆ ವಿವಿಧ ವಿನ್ಯಾಸಗಳ ಕಮಾನುಗಳನ್ನು ಹಾಗೂ ಕಂಬಗಳನ್ನು ಅಳವಡಿಸಬೇಕಾಗುವುದರಿಂದ ಕಬ್ಬಿಣದ ವಿವಿಧ ಆಕೃತಿಗಳ ರಚನೆಯ ಕಾರ್ಯವನ್ನು ಕೈಗೊಳ್ಳಬೇಕಾಗುವುದು.

ಕಬ್ಬಿಣದ ಎಂಗಲ್ ಪಟ್ಟಿಗಳನ್ನು ಬೇರೆ ಬೇರೆ ಅಳತೆಗಳಲ್ಲಿ ಕೊರೆಯುವುರು. ಆ ಎಂಗಲ್‌ಗಳಿಂದ ಬೇರೆ ಬೇರೆ ಅಳತೆಗಳಲ್ಲಿ ಚೌಕಾಕಾರದ ಹಾಗೂ ಆಯತಾಕಾರದ ಚೌಕಟ್ಟುಗಳನ್ನು ಮಾಡುವರು. ಕಬ್ಬಿಣದ ತೆಳು ಪ್ಲೇಟ್‌ಗಳನ್ನು ಕತ್ತರಿಸಿ ವಿವಿಧ ಕಮಾನುಗಳ ವಿನ್ಯಾಸಗಳನ್ನು ತಯಾರಿಸುವುರು. ಕೆಲವೊಂದು ಸಲ ತಗಡುಗಳಿಂದ ಕಮಾನುಗಳ ವಿನ್ಯಾಸಗಳನ್ನು ತಯಾರಿಸುವರು. ಕಬ್ಬಿಣದ ದಪ್ಪ ಪ್ಲೇಟ್‌ಗಳಿಂದ ಚಪ್ಪಟೆಯ ಕಂಬದಾಕೃತಿಗಳನ್ನು ತಯಾರಿಸಿಕೊಳ್ಳುವರು. ಇವುಗಳಲ್ಲದೆ ಚೌಕಾಕಾರದ ಹಾಗೂ ಆಯತಾಕಾರದ ಜಾಲರಿಗಳನ್ನು ತಯಾರಿಸಲು, ಕಬ್ಬಿಣದ ಸಣ್ಣ ಸಲಾಕೆಗಳನ್ನು ಕಾಯಿಸಿ, ಮೆಟಲ್ ಕಟಿಂಗ್ ಮಶಿನ್‌ದಿಂದ ಕತ್ತರಿಸಿ, ಅವುಗಳನ್ನು ವಿವಿಧ ರೀತಿಯಲ್ಲಿ ಮಣಿಸಿ, ಬೇರೆ ಬೇರೆ ವಿನ್ಯಾಸಗಳನ್ನು ರಚಿಸಿ, ಅವುಗಳನ್ನು ಕಬ್ಬಿಣದ ಉದ್ದಪಟ್ಟಿಗಳಿಂದ ತಯಾರಿಸಿದ ಚೌಕಾಕಾರದ ಹಾಗೂ ಆಯತಾಕಾರದ ಚೌಕಟ್ಟುಗಳಿಗೆ ವೆಲ್ಡಿಂಗ್ ಮಶಿನಿನ ಸಹಾಯದಿಂದ ಬೆಸೆಯುವರು. ಇದಲ್ಲದೆ ಕಬ್ಬಿಣದ ಸಣ್ಣ ಸಲಾಕೆಗಳಿಂದ ವಿವಿಧ ಪ್ರಾಣಿ ಪಕ್ಷಿಗಳ ದೇವಾನುದೇವತೆಯರ ಆಕೃತಿಗಳನ್ನು ತಯಾರಿಸುವರು. ತೆಳು ತಗಡುಗಳಲ್ಲಿ ಕತ್ತರಿಸಿ ನಂದಿ, ಲಿಂಗ, ಜಿಂಕೆ ಹೀಗೆ ಕೆಲವು ಆಕೃತಿಗಳನ್ನು ತಯಾರಿಸುವರು. ಇದಲ್ಲದೆ ಪ್ರತಿಯೊಂದು ಕಮಾನು ಹಾಗೂ ಅಂತಸ್ತುಗಳ ಮೇಲೆ ಬರುವ ಸೂರಪಟ್ಟಿಯನ್ನು ತಯಾರಿಸಲು, ತೆಳುವಾದ ಕಬ್ಬಿಣದ ಪಟ್ಟಿಯಲ್ಲಿ ತ್ರಿಕೋನ, ಎಲೆ, ಹೂ ಬಳ್ಳಿಯಂತಹ ವಿನ್ಯಾಸಗಳನ್ನು ತಯಾರಿಸುವರು. ತೆಳುವಾದ ಕಬ್ಬಿಣದ ಪ್ಲೇಟ್‌ಗಳಿಂದ ದೊಡ್ಡ ದೊಡ್ಡ ಎಲೆಗಳು, ಅರಳಿದ ಹೂಗಳು ಹಾಗೂ ಕಿತ್ತಳೆಯಾಕಾರದ ವಿನ್ಯಾಸಗಳನ್ನು ರಚಿಸುವರು. ಹೀಗೆ ಕಬ್ಬಿಣದ ವಿವಿಧ ಆಕೃತಿಗಳನ್ನು ರಚನೆಮಾಡಿಕೊಳ್ಳುವರು.

★. **ರಚನೆಗೊಂಡ ಬಿಡಿಯಾಕೃತಿಗಳ ಜೋಡಣೆ :** ಕಬ್ಬಿಣದ ಅಂಕಣ ರಥಗಳನ್ನು ಸಿದ್ಧಪಡಿಸಲು, ಮೊದಲು ತಯಾರಿಸಿಕೊಂಡ ವಿವಿಧ ಆಕೃತಿಗಳನ್ನು ಹಾಗೂ ಕತ್ತರಿಸಿ ಇಡಲಾದ

ಎಂಗಲ್ ಪಟ್ಟಿಗಳನ್ನು ಕಮಾನುಗಳನ್ನು, ಕಂಬಗಳನ್ನು ಹೀಗೆ ಹಲವಾರು ಬಿಡಿಯಾಕೃತಿಗಳನ್ನು ನೀಲನಕ್ಷೆಯ ಪ್ರಕಾರ ಜೋಡಣೆ ಮಾಡಬೇಕಾಗುತ್ತದೆ.

ಭದ್ರವಾಗಿ ನಿರ್ಮಾಣಗೊಂಡ ಅಡಿಪಾಯದ ಮೇಲೆ ಅಧಿಷ್ಠಾನದಿಂದ ಗೋಪುರದ ವರೆಗಿನ ಭಾಗವನ್ನು ನಿರ್ಮಿಸಲು ಮೊದಲು, ರಥದ ಎತ್ತರಕ್ಕೆ ಅನುಗುಣವಾಗಿ ಚೌಕಾಕಾರದ ಅಡಿಪಾಯ ಭಾಗದ ನಾಲ್ಕೂ ಭುಜಗಳಿಂದ ಮೇಲೆ ಹೋದಂತೆ ಎಲ್ಲ ಎಂಗಲ್ ಪಟ್ಟಿಗಳ ಕೊನೆಯು ಸಮೀಪಿಸುವಂತೆ, ಮೇಲ್ಭಾಗದಲ್ಲಿ ಕಬ್ಬಿಣದ ಚೌಕಾಕಾರದ ಚೌಕಟ್ಟನ್ನು ಎಂಗಲ್‌ಗಳ ಕೊನೆಗೆ ಜೋಡಿಸುವರು. ಎಂಗಲ್ ಪಟ್ಟಿಗಳು ಲಂಬವಾಗಿ ಗಟ್ಟಿಯಾಗಿ ನಿಲ್ಲಲು, ಪ್ರತಿಯೊಂದು ಪಟ್ಟಿಗೆ ಸಂಬಂಧಪಡುವಂತೆ ಆಧಾರ ಪಟ್ಟಿಗಳನ್ನು, ನಟ್ ಬೋಲ್ಟ್‌ಗಳಿಂದ ಬಿಗಿಯುವರು. ಇದಲ್ಲದೆ ಅಡಿಪಾಯ ಭಾಗದ ಮಧ್ಯಭಾಗದಿಂದ ಮೇಲಿನ ಶಿಖರದ ಮಧ್ಯಭಾಗದವರೆಗೆ ಲಂಬವಾಗಿ, ಒಂದು ದಪ್ಪ ಕಬ್ಬಿಣದ ಸಲಾಕೆಯನ್ನು ಅಥವಾ ರಾಡ್‌ನ್ನು ನಿಲ್ಲಿಸಿ ನಟ್ ಬೋಲ್ಟ್‌ಗಳಿಂದ ಬಿಗಿಯುವರು.

ಕಬ್ಬಿಣದ ಅಂಕಣ ರಥಗಳು ಅಂತಸ್ತುಗಳನ್ನು ಹೊಂದಿ, ನಿರ್ಮಾಣಗೊಳ್ಳುವವು. ಎಲ್ಲ ಅಂತಸ್ತುಗಳು ಉದ್ದಗಲೆತ್ತರಗಳಲ್ಲಿ ಕೆಳಗಿನಿಂದ ಮೇಲೆ ಹೋದಂತೆ ಚಿಕ್ಕದಾಗುತ್ತ ಹೋಗುತ್ತವೆ. ಕೆಲವು ಅಂಕಣಗಳು ಚತುರ್ಭುಜಾಕೃತಿಯಲ್ಲಿ ನಿರ್ಮಾಣಗೊಂಡರೆ, ಇನ್ನು ಕೆಲವು ಅಂಕಣಗಳು ಅಷ್ಟಭುಜಾಕೃತಿಯಲ್ಲಿ ಹಾಗೂ ಷಡ್ಭುಜಾಕೃತಿಯಲ್ಲಿ ನಿರ್ಮಾಣಗೊಳ್ಳುವವು. ಪ್ರತಿಯೊಂದು ಅಂತಸ್ತು ವಿವಿಧ ಕಮಾನುಗಳು ಹಾಗೂ ಕಂಬಗಳನ್ನು ಹೊಂದಿರುತ್ತದೆ. ತಗಡಿನ ಪಟ್ಟಿಗಳಿಂದ ಹಾಗೂ ತೆಳು ಕಬ್ಬಿಣದ ಪ್ಲೇಟ್‌ಗಳಿಂದ ಮಾಡಿದ ಕಮಾನುಗಳನ್ನು ಹಾಗೂ ವಿವಿಧ ಆಕೃತಿಯ ಕಂಬಗಳನ್ನು ಪ್ರತಿಯೊಂದು ಅಂತಸ್ತುಗಳ ಬಾಹುಗಳಲ್ಲಿ ಸುಂದರವಾಗಿ ಕಾಣುವಂತೆ ಅಳವಡಿಸಿ, ನಟ್ ಬೋಲ್ಟ್‌ಗಳಿಂದ ಬಿಗಿಯುವರು. ಪ್ರತಿಯೊಂದು ಅಂತಸ್ತುವಿನ ಮೇಲ್ಛಾವಣಿಗೆ ಕಬ್ಬಿಣದ ದಪ್ಪ ತಗಡುಗಳನ್ನು, ಅಥವಾ ಪ್ಲೇಟ್‌ಗಳನ್ನು ಸರಿಯಾಗಿ ಸಮಾಂತರವಾಗಿ ಹೊಂದಿಸುವರು. ಮೇಲ್ಛಾವಣಿಯಿಂದ ಹೊರಗಡೆಗೆ ಚಾಚಿಕೊಂಡ ಸೂರಪಟ್ಟನ್ನು ವಿವಿಧ ವಿನ್ಯಾಸಗಳಿಂದ ಕೂಡಿದ ಕಬ್ಬಿಣದ ಪಟ್ಟಿಗಳನ್ನು ಹೊಂದಿಸಿ, ವೆಲ್ಡಿಂಗ್ ಮಾಡುವರು. ಕೆಲವು ರಥಗಳಿಗೆ ಪ್ರತಿಯೊಂದು ಅಂತಸ್ತುಗಳ ಎಲ್ಲ ಬಾಹುಗಳ ಅಂಚಿನಲ್ಲಿ ಜಾಲರಿಯನ್ನು ಅಳವಡಿಸುವರು. ಪ್ರತಿಯೊಂದು ಅಂತಸ್ತುಗಳ ಬಾಹುಗಳ ಮಧ್ಯಭಾಗದಲ್ಲಿ ಹೊರ ಚಾಚಿಕೊಂಡಂತಹ ಮಂಟಪಗಳನ್ನು ಅಳವಡಿಸುವರು. ವಿವಿಧ ಕಂಬಗಳನ್ನು ನಟ್ ಬೋಲ್ಟ್‌ಗಳ ಸಹಾಯದಿಂದ ಬಿಗಿಯುವರು. ಮಂಟಪಗಳ ಪಕ್ಕದಲ್ಲಿ ಕಬ್ಬಿಣದ ಸರಳುಗಳಿಂದ ತಯಾರಿಸಿದ ವಿವಿಧ ಪ್ರಾಣಿಗಳು, ಪಕ್ಷಿಗಳು ಹಾಗೂ ದೇವಾನುದೇವತೆಯರ ವಿನ್ಯಾಸಗಳನ್ನು ಹೊಂದಿಸಿ, ವೆಲ್ಡಿಂಗ್ ಮಾಡುವರು. ಪ್ರತಿಯೊಂದು ಸೂರಪಟ್ಟಿಯ ಕೆಳಭಾಗದಲ್ಲಿ ಹಿತ್ತಾಳೆಯ ಗಂಟೆಗಳನ್ನು ಸಾಲಾಗಿ ಅಳವಡಿಸಲಾಗುವದು[೭].

ಶಿಖರ ಭಾಗದಲ್ಲಿ ದೊಡ್ಡ ಕುಂಬಳಕಾಯಿಯ ಆಕಾರದ ಅರಳಿದ ಹೂವಿನಾಕಾರದ, ಮೊಗ್ಗಿನಾಕಾರದ ಹಾಗೂ ಎಲೆಗಳನ್ನು ಹೊಂದಿದ ಕಿತ್ತಳೆ ಹಣ್ಣಿನಾಕಾರದ ವಿನ್ಯಾಸಗಳನ್ನು ಕಬ್ಬಿಣದ ಸರಳುಗಳಿಂದ, ತಗಡುಗಳಿಂದ ಹಾಗೂ ಕಬ್ಬಿಣದ ಪ್ಲೇಟುಗಳಿಂದ ತಯಾರಿಸಿದ ಅಳವಡಿಸುವರು.

ಈ ರಥಗಳು ಅಡಿಪಾಯದಿಂದ ಗೋಪುರದವರೆಗೆ ಸ್ಥಿರರಥಗಳಾಗಿರುತ್ತವೆ. ಗೋಪುರಗಳು

೭. ಸಂದರ್ಶನ- ಪರಶುರಾಮ ಪವಾರ, ರಥ ಶಿಲ್ಪಿ, ಮುದ್ದೇಬಿಹಾಳ

ನೋಡಲು ದೇವಸ್ಥಾನದ ಗೋಪುರಗಳ ಹಾಗೆಯೇ ಕಂಡುಬರುತ್ತವೆ.

ಹೀಗೆ ಆಧಿಷ್ಠಾನ ಭಾಗದಿಂದ ಶಿಖರದವರೆಗೆ ರಥವನ್ನು ಸಿದ್ಧಪಡಿಸುವರು.

iii. ವರ್ಣ ಚಿತ್ರಗಳ ರಚನೆ :

ಕಬ್ಬಿಣದ ಅಂಕಣ ರಥಗಳು, ಅಡಿಪಾಯ ಭಾಗದಿಂದ ಶಿಖರ ಭಾಗದವರೆಗೆ ಸಿದ್ಧಗೊಂಡ ನಂತರ, ರಥದ ಪ್ರತಿಯೊಂದು ಅಂತಸ್ತುಗಳಲ್ಲಿ ವರ್ಣಚಿತ್ರಗಳನ್ನು ರಚಿಸಬೇಕಾಗುವುದು. ಈ ವರ್ಣಚಿತ್ರ ರಚನೆಯು, ಎರಡು ಹಂತಗಳಲ್ಲಿ ಪೂರ್ಣಗೊಳ್ಳುವುದು.

★. ವಿವಿಧ ರೇಖಾಚಿತ್ರಗಳ ರಚನೆ.

★. ರೇಖಾ ಚಿತ್ರಗಳಲ್ಲಿ ವರ್ಣಗಾರಿಕೆ. ಈಗ ಎರಡೂ ಹಂತಗಳ ರಚನಾವಿಧಾನಗಳನ್ನು ತಿಳಿದುಕೊಳ್ಳೋಣ.

★. **ವಿವಿಧ ರೇಖಾ ಚಿತ್ರಗಳ ರಚನೆ :** ರಥದ ಅಡಿಪಾಯ ಭಾಗದ ಚಕ್ರಗಳಿಗೆ ಹೂವಿನಾಕಾರದ ರೇಖಾಚಿತ್ರಗಳನ್ನು ಬಿಡಿಸುವರು. ತೊಲೆಗಳ ಮೇಲೆ ಹಾಗೂ ಅಚ್ಚುಗಳ ಮೇಲೆ ಹೂ ಬಳ್ಳಿಯಂತಹ

ರೇಖಾ ಚಿತ್ರಗಳನ್ನು ಬಿಡಿಸುವರು. ಅಧಿಷ್ಠಾನ ಭಾಗದಿಂದ ಮೇಲೆ ಶಿಖರದವರೆಗೂ ಇರುವ ಪ್ರತಿಯೊಂದು ಅಂತಸ್ತುಗಳಲ್ಲಿ ರಾಮಾಯಣ, ಮಹಾಭಾರತ, ಭಾಗವತ, ದಶಾವತಾರ, ಹೀಗೆ ಪೌರಾಣಿಕ ಸನ್ನಿವೇಶಗಳನ್ನು ಹೇಳುವ ಅನೇಕ ಸುಂದರ ರೇಖಾಚಿತ್ರಗಳನ್ನು ರಚಿಸುವರು. ಕೆಲವು ರಥಗಳ ಅಂತಸ್ತುಗಳಲ್ಲಿ ದೇವತಾ ಚಿತ್ರಗಳ ಜೊತೆಗೆ ವಿವಿಧ ಹೂ , ಎಲೆ, ಬಳ್ಳಿಯಂತಹ ರೇಖಾ ಚಿತ್ರಗಳನ್ನು ರಚಿಸುವರು. ರಥದ ಪ್ರತಿಯೊಂದು ಅಂತಸ್ತುಗಳಲ್ಲಿ ರೇಖಾ ಚಿತ್ರಗಳನ್ನು ಬರೆಯಲು, ಬಿದಿರುಗಳಿಂದ ರಥಗಳ ಸುತ್ತಲೂ ಅಟ್ಟಗಳನ್ನು ನಿರ್ಮಿಸಿಕೊಂಡು, ಅದರ ಮೇಲೆ ನಿಂತು ರಚಿಸುವರು. ಇಲ್ಲದೆ ಏಣಿಯ ಸಹಾಯದಿಂದ ಮೇಲೇರಿ ರೇಖಾ ಚಿತ್ರಗಳನ್ನು ರಚಿಸುವರು.

ರೇಖಾ ಚಿತ್ರಗಳನ್ನು ವಿವಿಧ ಬಣ್ಣದ ಪೆನ್ಸಿಲ್‌ಗಳಿಂದ ಹಾಗೂ ಚಾಕೋಲ್‌ಗಳಿಂದ ರಚಿಸುವರು. ಸುಮಾರು ಐದು ಅಥವಾ ಆರು ಜನ ಚಿತ್ರಕಲಾವಿದರು ಸುಮಾರು ಒಂದು ತಿಂಗಳ ಕಾಲ ಚಿತ್ರ ರಚನೆಯನ್ನು ಕೈಗೊಳ್ಳುವರು.


★. **ರೇಖಾ ಚಿತ್ರಗಳಲ್ಲಿ ವರ್ಣಗಾರಿಕೆ :** ಕಬ್ಬಿಣದ ಅಂಕಣ ರಥದ ಮೇಲೆ ಎಲ್ಲ ಭಾಗಗಳಲ್ಲಿ ಸುಂದರವಾದ ರೇಖಾ ಚಿತ್ರಗಳು ರಚನೆಯಾದ ನಂತರ ಅವುಗಳಿಗೆ ವರ್ಣಲೇಪನ ಮಾಡುವ ಕೆಲಸ ಪ್ರಾರಂಭಗೊಳ್ಳುವದು.

ವರ್ಣಲೇಪನ ಮಾಡಲು ಅನೇಕ ರೀತಿಯ ವಾರ್ನಿಸ್ ಬಣ್ಣಗಳನ್ನು ಉಪಯೋಗಿಸುವರು. ಗಟ್ಟಿ ಬಣ್ಣಗಳನ್ನು ತೆಳ್ಳಗೆ ಮಾಡಿಕೊಳ್ಳಲು ಥಿನ್ನರನ್ನು ಉಪಯೋಗಿಸುವರು. ಅಲ್ಲದೆ ಬಣ್ಣಗಳನ್ನು ಮಿಶ್ರಣ ಮಾಡಲು, ಒಂದು ಪ್ಯಾಲೆಟ್‌ನ್ನು ಉಪಯೋಗಮಾಡುವರು. ಅಲ್ಲದೆ ವಿವಿಧ ರೀತಿಯ ರೇಖಾ ಚಿತ್ರಗಳಲ್ಲಿ ವರ್ಣಗಳನ್ನು ತುಂಬಲು, ಹಲವಾರು ವಿಧದ ಕುಂಚಗಳನ್ನು ಬಳಸಿ ವರ್ಣಲೇಪನ

ಕಬ್ಬಿಣದ ಅಂಕಣ ರಥಶಿಲ್ಪಗಳು



ಜಮಗಾದ ಶ್ರೀ ಸಿದ್ದೇಶ್ವರ ರಥ
ಜಿ - ಗುಲಬರ್ಗಾ



ಕಾಳಬೆಳಗುಂದಿಯ ಶ್ರೀ ಬನದೇಶ್ವರ ರಥ
ಜಿ - ಗುಲಬರ್ಗಾ




ನಾಗಲಾಪೂರದ ಶ್ರೀ ಮೈಲಾರಲಿಂಗೇಶ್ವರ ರ
ಜಿ - ಗುಲಬರ್ಗಾ



ಹೆಡಗಿಮುದ್ರಾದ ಶ್ರೀ ವೀರಭದ್ರೇಶ್ವರ ರಥ
ಜಿ - ಗುಲಬರ್ಗಾ



ದಿಗ್ಗಿ ಶ್ರೀ ಸಂಗಮೇಶ್ವರ ರಥ
ಜಿ - ಗುಲಬರ್ಗಾ



ಸೇಡಂದ ಶ್ರೀ ಕೊತ್ತಲಬಸವೇಶ್ವರ ರಥ
ಜಿ - ಗುಲಬರ್ಗಾ

ಕಾರ್ಯದಲ್ಲಿ ನಿರತರಾಗುವರು.

ರೇಖಾ ಚಿತ್ರಗಳನ್ನು ರಚಿಸುವದಕ್ಕಿಂತ ಮುಂಚೆಯೇ ಸ್ಪ್ರೇಗನ್‌ನಿಂದ, ಇಡಿ ರಥಕ್ಕೆ ತೆಳುವಾದ ಬಿಳಿ ಬಣ್ಣವನ್ನು ಲೇಪಿಸಿ, ಆಮೇಲೆ ರೇಖಾಚಿತ್ರಗಳನ್ನು ರಚಿಸಿ, ಪ್ರತಿಯೊಂದು ಚಿತ್ರಗಳಿಗೆ, ಸನ್ನಿವೇಶಗಳಿಗೆ ಅನುಗುಣವಾಗಿ ವರ್ಣಗಳನ್ನು ತುಂಬುವರು. ರಥದ ಎಲ್ಲ ಭಾಗದ ರೇಖಾ ಚಿತ್ರಗಳು ವರ್ಣರಂಜಿತವಾದ ಮೇಲೆ ಇಡಿ ರಥಕ್ಕೆ ಏಯರ್‌ಬ್ರಶ್‌ನಿಂದ ಟ್ರಾನ್ಸ್‌ಪರೆಂಟ್ ವಾರ್ನಿಸನ್ನು ಲೇಪಿಸುವರು. ಇದರಿಂದ ರಥಕ್ಕೆ ಲೇಪಿಸಿದ ವರ್ಣಗಳು ಮಾಸಿಹೋಗದೆ ಬಹುದಿನಗಳವರೆಗೆ ಉಳಿಯುತ್ತವೆ. ಪ್ರತೀ ವರ್ಷವು ಇದೇ ರೀತಿಯಲ್ಲಿ ವರ್ಣಲೇಪನ ಮಾಡುವುದರಿಂದ ಕಬ್ಬಿಣದ ರಥಕ್ಕೆ ಸಂರಕ್ಷಣೆ ಒದಗಿಸಿದಂತಾಗುವುದು.

iv. ವಿವಿಧ ಫಲ, ಪುಷ್ಪಾಲಂಕಾರ :

ಉತ್ಸವದ ಸಂದರ್ಭದಲ್ಲಿ ರಥವನ್ನು ಅಲಂಕಾರಗೊಳಿಸಲು, ತಳಿರು ತೋರಣಗಳಿಂದ ಸಿಂಗರಿಸುವರು. ಬಾಳೆದಿಂಡು, ಕಬ್ಬುಗಳು, ತೆಂಗಿನ ಗರಿಗಳನ್ನು ರಥದ ಅಧಿಷ್ಠಾನ ಹಾಗೂ ಮಂಟಪ ಭಾಗಗಳಲ್ಲಿ ಕಟ್ಟುವರು. ವಿವಿಧ ಹೂವಿನ ಹಾರಗಳಿಂದ, ಬೇರೆ ಬೇರೆ ವಿನ್ಯಾಸಗಳಲ್ಲಿ ನೇತುಬಿಡುವುದರೊಂದಿಗೆ ಅಲ್ಲಲ್ಲಿ ಬಿಡಿ ಹೂಗಳನ್ನು ಅಂಟಿಸುವರು. ರಥದ ಶಿಖರದಲ್ಲಿ ಬಣ್ಣ ಬಣ್ಣದ ಬಟ್ಟೆಗಳನ್ನು ಸುತ್ತಿ ಶಿಖರದ ದುಂಡನೆಯ ಭಾಗದಲ್ಲಿ ಹೂವಿನ ಹಾರಗಳಿಂದ ಅಲಂಕರಿಸುವರು. ಕೆಲವು ಸಣ್ಣ ಸಣ್ಣ ವಿದ್ಯುತ್ ದೀಪಗಳಿಂದ ರಥದ ಗೋಪುರ ಭಾಗವನ್ನು ಅಲಂಕರಿಸುವರು. ಶಿಖರದ ತುದಿಯ ಮೇಲೆ ಕಳಸವನ್ನಿಟ್ಟು, ಅದರ ಮೇಲೆ ಒಂದು ಛತ್ರಿಯನ್ನು ಹೊಂದಿಸಿ, ಒಂದು ಬಣ್ಣದ ಧ್ವಜವನ್ನು ಕಟ್ಟುವರು. ಲಿಂಬೆ ಹಣ್ಣುಗಳನ್ನು ರಥದ ಎಲ್ಲ ಅಂಕಣಗಳ ಅಂಚುಗಳಲ್ಲಿ ಸಾಲು ಸಾಲಾಗಿ ಕಟ್ಟುವರು. ಇದಲ್ಲದೆ ತೆಂಗಿನಕಾಯಿ ಬೂದುಗುಂಬಳ ಕಾಯಿಗಳನ್ನು ಮಂಟಪ ಭಾಗದ ಮುಂಭಾಗದಲ್ಲಿ ಕಟ್ಟುವರು.

ಈ ರೀತಿಯಾಗಿ ಕಬ್ಬಿಣದ ಅಂಕಣ ರಥಗಳು ಪೂರ್ಣವಾಗಿ ನಿರ್ಮಾಣಗೊಳ್ಳುವವು.

ಬ. ಬೆಳ್ಳಿಯ ರಥಗಳ ರಚನಾ ವಿಧಾನ :

ಲೋಹ ಮಾಧ್ಯಮದ ಬೆಳ್ಳಿಯ ರಥಗಳೂ ಸಹ ಸ್ಥಿರ ರಥಗಳಾಗಿದ್ದು, ಇವುಗಳು ನಾಲ್ಕು ಹಂತಗಳಲ್ಲಿ ನಿರ್ಮಾಣಗೊಳ್ಳುತ್ತವೆ.

೧. ಕಾಷ್ಠ ಮಾಧ್ಯಮದ ರಥದ ನಿರ್ಮಾಣ.

೨. ಬೆಳ್ಳಿಯ ತಗಡುಗಳಲ್ಲಿ ಉಬ್ಬುಶಿಲ್ಪ ಹಾಗೂ ಬಿಡಿಶಿಲ್ಪಗಳ ರಚನೆ.

೩. ಕಾಷ್ಠ ರಥಕ್ಕೆ ಬೆಳ್ಳಿಯ ಉಬ್ಬುಶಿಲ್ಪಗಳ ಹಾಗೂ ಬಿಡಿ ಶಿಲ್ಪಗಳ ಜೋಡಣೆ.

೪. ಉತ್ಸವದ ಸಂದರ್ಭದಲ್ಲಿ ಅಲಂಕಾರ.

ಈ ನಾಲ್ಕೂ ಹಂತಗಳ ರಚನಾ ವಿಧಾನಗಳನ್ನು ವಿವರವಾಗಿ ತಿಳಿದುಕೊಳ್ಳೋಣ .

೧. ಕಾಷ್ಠ ಮಾಧ್ಯಮದ ರಥದ ನಿರ್ಮಾಣ :

ಬೆಳ್ಳಿ ರಥಗಳ ರಚನಾ ವಿಧಾನ

- ಕಾಷ್ಠ ಮಾಧ್ಯಮದ ರಥ ನಿರ್ಮಾಣ
  - ಅಡಿಪಾಯ ಭಾಗದ ರಚನೆ
  - ಅಧಿಷ್ಠಾನ ಭಾಗದ ರಚನೆ
  - ಮಂಟಪ ಭಾಗದ ರಚನೆ
  - ಗೋಪುರ ಭಾಗದ ರಚನೆ
    - ಮರಗಳ ಪಟ್ಟಿಕೆಗಳ ತಯಾರಿಕೆ
    - ಬಿಡಿ ಭಾಗಗಳ ಜೋಡನೆ
- ಬೆಳ್ಳಿ ತಗಡುಗಳಲ್ಲಿ ಉಬ್ಬು ಹಾಗೂ ಬಿಡಿ ಶಿಲ್ಪಗಳ ರಚನೆ
  - ಸ್ಥಳದ ಆಯ್ಕೆ
  - ವಿವಿಧ ಗೇಜುಗಳಲ್ಲಿ ತಗಡುಗಳ ಆಯ್ಕೆ
  - ವಿವಿಧ ರೇಖಾ ಚಿತ್ರಗಳ ರಚನೆ
  - ವಿವಿಧ ತಗಡುಗಳಲ್ಲಿ ರೇಖಾ ಚಿತ್ರಗಳನ್ನು ಮೂಡಿಸುವುದು
  - ಮೇಣದ ಸಹಾಯದಿಂದ ಉಬ್ಬುಶಿಲ್ಪ ತಯಾರಿಕೆ
  - ರಾಳದ ಮಣೆಯಿಂದ ಉಬ್ಬುಶಿಲ್ಪಗಳಿಗೆ ಅಂತಿಮ ರೂಪಕೊಡುವುದು
  - ಮೆಟಲ್‌ಕಾಸ್ಟಿಂಗ್ ವಿಧಾನದಿಂದ ಬಿಡಿ ಶಿಲ್ಪಗಳ ರಚನೆ
- ಕಾಷ್ಠ ರಥಕ್ಕೆ ಬೆಳ್ಳಿಯ ಉಬ್ಬು ಹಾಗೂ ಬಿಡಿ ಶಿಲ್ಪಗಳ ಜೋಡನೆ
- ಉತ್ಸವ ಸಂದರ್ಭದಲ್ಲಿ ಅಲಂಕಾರ

ಚಿನ್ನದ ರಥಗಳ ರಚನಾ ವಿಧಾನ

- ಕಾಷ್ಠ ಮಾಧ್ಯಮದ ರಥ ನಿರ್ಮಾಣ
  - ಅಡಿಪಾಯ ಭಾಗದ ರಚನೆ
  - ಅಧಿಷ್ಠಾನ ಭಾಗದ ರಚನೆ
  - ಮಂಟಪ ಭಾಗದ ರಚನೆ
  - ಗೋಪುರ ಭಾಗದ ರಚನೆ
    - ಮರಗಳ ಪಟ್ಟಿಕೆಗಳ ತಯಾರಿಕೆ
    - ಬಿಡಿ ಭಾಗಗಳ ಜೋಡನೆ
- ಚಿನ್ನದ ತಗಡುಗಳಲ್ಲಿ ಉಬ್ಬು ಹಾಗೂ ಬಿಡಿ ಶಿಲ್ಪಗಳ ರಚನೆ
  - ಸ್ಥಳದ ಆಯ್ಕೆ
  - ವಿವಿಧ ಗೇಜುಗಳಲ್ಲಿ ತಗಡುಗಳ ಆಯ್ಕೆ
  - ವಿವಿಧ ರೇಖಾ ಚಿತ್ರಗಳ ರಚನೆ
  - ವಿವಿಧ ತಗಡುಗಳಲ್ಲಿ ರೇಖಾ ಚಿತ್ರಗಳನ್ನು ಮೂಡಿಸುವುದು
  - ಮೇಣದ ಸಹಾಯದಿಂದ ಉಬ್ಬುಶಿಲ್ಪ ತಯಾರಿಕೆ
  - ರಾಳದ ಮಣೆಯಿಂದ ಉಬ್ಬುಶಿಲ್ಪಗಳಿಗೆ ಅಂತಿಮ ರೂಪಕೊಡುವುದು
  - ಮೆಟಲ್‌ಕಾಸ್ಟಿಂಗ್ ವಿಧಾನದಿಂದ ಬಿಡಿ ಶಿಲ್ಪಗಳ ರಚನೆ
- ಕಾಷ್ಠ ರಥಕ್ಕೆ ಚಿನ್ನದ ಉಬ್ಬು ಹಾಗೂ ಬಿಡಿ ಶಿಲ್ಪಗಳ ಜೋಡನೆ
- ಉತ್ಸವ ಸಂದರ್ಭದಲ್ಲಿ ಅಲಂಕಾರ

ಬೆಳ್ಳಿಯ ರಥವನ್ನು ತಯಾರಿಸುವ ಮೊದಲ ನೀಲ ನಕ್ಷೆಯ ಅನುಗುಣವಾಗಿ ಕಾಷ್ಠ ರಥವನ್ನು ತಯಾರಿಸುವರು. ಬೆಳ್ಳಿಯ ರಥಗಳು ಸ್ಥಿರ ರಥಗಳಾಗಿದ್ದು, ಅಡಿಪಾಯದಿಂದ ಶಿಖರ ಭಾಗದವರೆಗೂ ನಿರ್ಮಾಣಗೊಂಡಿರುವವು. ಆದ್ದರಿಂದ ಮೊದಲು ತಯಾರಿಸಬೇಕಾದ ಕಾಷ್ಠ ರಥವನ್ನೂ ಸಹ ಅಡಿಪಾಯದಿಂದ ಶಿಖರದವರೆಗೆ ಪ್ರಮಾಣಬದ್ಧವಾಗಿ ನಿರ್ಮಾಣ ಮಾಡಬೇಕಾಗುವುದು.

ಕಾಷ್ಠ ಮಾಧ್ಯಮ ರಥದ ನಿರ್ಮಾಣ ಕಾರ್ಯವನ್ನು ಕೈಗೊಂಡಾಗ, ರಥದ ನೀಲನಕ್ಷೆಗಳನ್ನು ತಯಾರಿಸುವುದು, ವಿವಿಧ ಕಾಷ್ಠಗಳನ್ನು ಆಯ್ಕೆ ಮಾಡುವುದು, ಶಾಸ್ತ್ರ ಗ್ರಂಥಗಳ ಅಧ್ಯಯನ ಮಾಡುವುದು, ರಥ ನಿರ್ಮಿಸುವ ಸ್ಥಳವನ್ನು ಆಯ್ಕೆ ಮಾಡುವದು ಹಾಗೂ ಆರಂಭದಲ್ಲಿ ಶಿಲ್ಪ ಮತ್ತು ಪುರೋಹಿತನು ಸೇರಿ ಪೂಜೆ ಪುರಸ್ಕಾರಗಳನ್ನು ಕೈಗೊಳ್ಳುವುದು, ಈ ಎಲ್ಲ ಕಾರ್ಯಗಳು ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ನಿರ್ಮಾಣ ಕಾರ್ಯಗಳಂತೆಯೇ ಮುಂದುವರೆಯುತ್ತವೆ. ಇದಲ್ಲದೆ ಬೆಳ್ಳಿಯ ರಥಗಳು ಅಡಿಪಾಯ, ಅಧಿಷ್ಠಾನ, ಮಂಟಪ, ಹಾಗೂ ಗೋಪುರ ಭಾಗಗಳನ್ನು ಹೊಂದಿರುವುದರಿಂದ, ಅಡಿಪಾಯದಿಂದ ಮಂಟಪ ಭಾಗದವರೆಗೆ, ಗಡ್ಡಿ ರಥಗಳು ಅನೇಕ ವಿನ್ಯಾಸಗಳಲ್ಲಿ ನಿರ್ಮಾಣಗೊಂಡಂತೆಯೇ ರಚನೆಯಾಗುತ್ತವೆ.

ಅಡಿಪಾಯ ಭಾಗದಲ್ಲಿ ಚಕ್ರಗಳು ,ಅಚ್ಚುಗಳು ಹಾಗೂ ತೊಲೆಗಳನ್ನು ನಿರ್ಮಿಸುವುದು ಮತ್ತು ಅವುಗಳನ್ನು ಸರಿಯಾಗಿ ಜೋಡಿಸುವುದು, ಅಧಿಷ್ಠಾನ ಭಾಗವನ್ನು ತಯಾರಿಸಲು ಮರದ ಹಲಗೆಗಳನ್ನು ವಿವಿಧ ಅಳತೆಗಳಲ್ಲಿ ಕೊರೆದು ಬಹುಭುಜಾಕೃತಿಯ ಅಧಿಷ್ಠಾನ ಭಾಗವನ್ನು ಸುಂದರವಾಗಿ ತಯಾರಿಸುವುದು ಹಾಗೂ ಮಂಟಪ ಭಾಗವನ್ನು ನಿರ್ಮಿಸಲು ಅನೇಕ ಕಂಬ ಹಾಗೂ ಕಮಾನುಗಳನ್ನು ತಯಾರಿಸಿ, ಅವುಗಳನ್ನು ಸರಿಯಾಗಿ ಹೊಂದಿಸುವುದು ಈ ಎಲ್ಲ ಕೆಲಸಗಳೂ ಗಡ್ಡಿ ರಥದ ರಚನಾ ವಿಧಾನದಂತೆಯೇ ಮುಂದುವರೆಯುವವು. ಈಗಾಗಲೆ ಈ ಎಲ್ಲ ಕೆಲಸಗಳನ್ನು ಮಾಡುವ ವಿಧಾನಗಳನ್ನು, ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ತಯಾರಿಕಾ ಹಂತಗಳನ್ನು ಅಭ್ಯಾಸಮಾಡುವಾಗ ವಿವರವಾಗಿ ತಿಳಿಯಲಾಗಿದೆ.

ಆದರೆ ಬೆಳ್ಳಿಯ ರಥದ ನಿರ್ಮಾಣ ಕಾರ್ಯದಲ್ಲಿ ಕಾಷ್ಠ ರಥವನ್ನು ನಿರ್ಮಿಸುವಾಗ, ಗೋಪುರ ಭಾಗವನ್ನು ಸಹ, ಮೊದಲು ಕಾಷ್ಠಗಳಿಂದಲೇ ನಿರ್ಮಿಸಿಕೊಳ್ಳಬೇಕಾಗುತ್ತದೆ. ಆದ್ದರಿಂದ, ಮೊದಲು ಕಾಷ್ಠ ರಥದ ಗೋಪುರ ಭಾಗದ ರಚನಾ ವಿಧಾನಗಳನ್ನು ತಿಳಿಯುವಾ.

ಕಾಷ್ಠ ರಥದ ಗೋಪುರ ಭಾಗದ ರಚನಾ ವಿಧಾನ : ಬೆಳ್ಳಿ ರಥದ ನಿರ್ಮಾಣಕ್ಕಾಗಿ ತಯಾರಿಸಲಾಗುವ ಕಾಷ್ಠ ಗೋಪುರವು ಎರಡು ಹಂತಗಳಲ್ಲಿ ನಿರ್ಮಾಣವಾಗುವುದು.

★. ಮರಗಳನ್ನು ಕೊರೆಯುವುದು. ★. ಬಿಡಿ ಭಾಗಗಳ ಜೋಡಣೆ.

ಈ ಎರಡೂ ಹಂತಗಳ ರಚನಾ ವಿಧಾನಗಳನ್ನು ತಿಳಿಯೋಣ.

★. ಮರಗಳನ್ನು ಕೊರೆಯುವುದು : ಕಾಷ್ಠ ರಥದ ಗೋಪುರ ಭಾಗದ ರಚನೆಯ ಕಾರ್ಯದಲ್ಲಿ, ಮೊದಲು ಮರದ ದಿಮ್ಮಿಗಳಿಂದ ಬೇರೆ ಬೇರೆ ಅಳತೆಗಳಲ್ಲಿ ಹಲಗೆಗಳನ್ನು ತಯಾರಿಸುವರು. ಹಲಗೆಗಳಿಗೆ ಪಾಲಿಶ್ ಮಶಿನ್‌ಗಳಿಂದ ಪಾಲಿಶ್ ಮಾಡಿ, ಅವುಗಳಲ್ಲಿ ಉದ್ದನೆಯ

ಪಟ್ಟಿಕೆಗಳನ್ನು ತಯಾರಿಸುವರು. ಚೌಕಾಕಾರದ ಕೆಲವು ಹಲಗೆಗಳಿಂದ ಮಂಟಪದ ಹಿಂದಿನ ಪ್ರಭಾವಳಿಯಾಕಾರದ ದೊಡ್ಡ ದೊಡ್ಡ ಹಾಗೂ ಚಿಕ್ಕದಾದ ವಿನ್ಯಾಸಗಳನ್ನು ತಯಾರಿಸುವರು. ಎರಡು ಅಥವಾ ಮೂರು ದೊಡ್ಡ ಹಲಗೆಗಳನ್ನು ಕೂಡಿಸಿ, ಅರ್ಧ ಚೆಂಡಿನಾಕಾರದ ವಿನ್ಯಾಸವನ್ನು ತಯಾರಿಸುವರು. ಇವೆಲ್ಲವುಗಳಿಗೆ ಪಾಲಿಶ್ ಮಾಡಿ, ಪೇಂಟ್ ಪಾಲಿಶ್‌ನ್ನು ಹಚ್ಚುವರು.

★. **ಬಿಡಿ ಭಾಗಗಳ ಜೋಡಣೆ :** ರಥದ ಗೋಪುರದ ನೀಲ ನಕ್ಷೆಯ ಪ್ರಕಾರ, ಬೇರೆ ಬೇರೆ ವಿನ್ಯಾಸಗಳಲ್ಲಿ ಹಾಗೂ ಅಳತೆಗಳಲ್ಲಿ ಕೊರೆಯಲಾದ, ಮರದ ಬಿಡಿ ಭಾಗಗಳನ್ನು ಸರಿಯಾಗಿ ರಥದ ಮಂಟಪದ ಭಾಗದ ಮೇಲೆ ಜೋಡಿಸಲಾಗುವದು. ಮಂಟಪ ಭಾಗದ ಮೇಲ್ಭಾವಣಿಯಲ್ಲಿ, ಮೊದಲು ಸಣ್ಣ ಸಣ್ಣ ಹಲಗೆಗಳನ್ನು ಕಟ್ಟೆಯಾಕಾರದಲ್ಲಿ ಮೊಳೆಗಳಿಂದ ಹೊಡೆದು ಜೋಡಿಸುವರು. ಗೋಪುರವು ಮೇಲೆ ಹೋದಂತೆ ಸಣ್ಣದಾಗುವಂತೆ, ಕಡಿಮೆ ಉದ್ದಳತೆಗಳಲ್ಲಿ ಕೊರೆಯಲಾದ ಹಲಗೆಗಳನ್ನು ಒಂದರಮೇಲೊಂದನ್ನು ಜೋಡಿಸಿ, ನಟ್ ಬೋಲ್ಟ್‌ಗಳಿಂದ ಬಿಗಿಯಲಾಗುವುದು. ಗೋಪುರದ ತುದಿಗೆ ಶಿಖರ ಭಾಗದಲ್ಲಿ, ಅರ್ಧಗೋಲಾಕಾರದಲ್ಲಿ ತಯಾರಿಸಲಾದ ವಿನ್ಯಾಸವನ್ನು ಸರಿಯಾಗಿ ಜೋಡಿಸುವರು. ಗೋಪುರದ ನಾಲ್ಕೂ ದಿಕ್ಕೂಗಳಲ್ಲಿ ಹಾಗೂ ಶಿಖರದ ನಾಲ್ಕೂ ದಿಕ್ಕುಗಳಲ್ಲಿ, ಪ್ರಭಾವಳಿಯ ಆಕಾರದಲ್ಲಿ ರಚಿಸಲಾದ ಸಣ್ಣ ಸಣ್ಣ ವಿನ್ಯಾಸಗಳನ್ನು ಮೊಳೆಗಳಿಂದ ಹೊಡೆದು ಬಿಗಿಮಾಡುವರು. ಇದಲ್ಲದೆ ಕೆಲವು ರಥಗಳಿಗೆ ಮಂಟಪ ಭಾಗದಲ್ಲಿ ಅಳವಡಿಸಲಾದ ಪೀಠದ ಹಿಂದಿನ ಪ್ರಭಾವಳಿಯ ವಿನ್ಯಾಸವು ಮಂಟಪವನ್ನು ಮೀರಿ ಮೇಲೆ ಬಂದು ಅರ್ಧ-ವೃತ್ತಾಕಾರದಲ್ಲಿ ಕಾಣುವಂತೆ ಜೋಡಿಸಿ, ಅದರ ಮೇಲೆ ಒಂದು ಛತ್ರಿಯಾಕಾರದ ವಿನ್ಯಾಸವನ್ನು ಜೋಡಣೆ ಮಾಡುವುದುಂಟು. ಜೋಡಣೆಯ ಎಲ್ಲ ಕೆಲಸ ಮುಗಿದ ನಂತರ ಪಾಲಿಶ್ ಪೇಪರ್‌ದಿಂದ ಉಜ್ಜಿ ನಯಗೊಳಿಸಿ ಗೋಪುರ ಭಾಗಕ್ಕೆ ಫ್ರೆಂಚ್ ಪಾಲಿಶ್‌ನ್ನು ಲೇಪಿಸುವರು.

ಹೀಗೆ ಕಾಷ್ಠ ಮಾಧ್ಯಮದ ರಥದ ನಿರ್ಮಾಣದ ನಂತರ ಬೆಳ್ಳಿ ರಥದ ನಿರ್ಮಾಣದ ಮುಂದಿನ ಕಾರ್ಯವನ್ನು ಮಾಡಲು ಅನುಕೂಲವಾಗುವುದು.

೨. ಬೆಳ್ಳಿಯ ತಗಡುಗಳಲ್ಲಿ ಉಬ್ಬುಶಿಲ್ಪ ಹಾಗೂ ಬಿಡಿ ಶಿಲ್ಪಗಳ ರಚನೆ :

i. ಸ್ಥಳದ ಆಯ್ಕೆ : ಬೆಳ್ಳಿಯ ಮಾಧ್ಯಮದ ರಥವನ್ನು ನಿರ್ಮಿಸಲು, ಬೆಲೆಬಾಳುವ ಬೆಳ್ಳಿಯನ್ನು ಟನ್‌ಗಟ್ಟಲೆ ತರಬೇಕಾಗುವುದು. ಇಂಥಹ ವಸ್ತುಗಳನ್ನು ಉಪಯೋಗಿಸಿ ಕೆಲಸ ಮಾಡಬೇಕಾದಾಗ, ಮೊದಲು ಅವುಗಳನ್ನು ಸಂರಕ್ಷಿಸಲು ಸುರಕ್ಷಿತವಾದ ಸ್ಥಳದ ಆಯ್ಕೆ ಮಾಡಬೇಕಾಗುವುದು, ಆದ್ದರಿಂದ ಬೆಳ್ಳಿಯ ರಥ ತಯಾರಿಸುವ ಶಿಲ್ಪಿಗಳು, ರಥ ನಿರ್ಮಾಣವಾಗುವ ದೇವಸ್ಥಾನಕ್ಕೆ ಸಂಬಂಧಿಸಿದ, ಅಥವಾ ದೇವಸ್ಥಾನದವರು ಒಪ್ಪಿದರೆ, ತಮ್ಮ ಸ್ವಂತ ಸ್ಥಳದಲ್ಲೇ ಕೆಲಸ ಮಾಡಲು ತೊಡಗುವರು. ಬೆಳ್ಳಿಯ ತಗಡುಗಳಲ್ಲಿ ಶಿಲ್ಪ ವಿನ್ಯಾಸಗಳನ್ನು ರಚಿಸುವ ಕಾರ್ಯ ಕೈಗೊಂಡಾಗ, ದೇವಸ್ಥಾನದ ಕಮೀಟಿಗೆ ಸಂಬಂಧವಿರದ ವ್ಯಕ್ತಿಗಳು ಆ ಸ್ಥಳದಲ್ಲಿ ಬರುವಂತಿಲ್ಲ. ಏನಾದರೂ ಮೋಸ ನಡೆಯಬಾರದೆಂದು ಇಂತಹ ಕಟ್ಟಪ್ಪಣೆಯನ್ನು ಪಾಲಿಸುವರು.

ii. ವಿವಿಧ ಗೇಜ್‌ಗಳಲ್ಲಿ ಬೆಳ್ಳಿಯ ತಗಡುಗಳ ಆಯ್ಕೆ : ಬೆಳ್ಳಿಯ ರಥ ನಿರ್ಮಾಣದಲ್ಲಿ ಬೆಳ್ಳಿಯ ತಗಡುಗಳನ್ನು ಆಯ್ಕೆ ಮಾಡುವುದು ಮುಖ್ಯವಾಗಿರುತ್ತದೆ. ಬೆಳ್ಳಿಯ ತಗಡುಗಳಲ್ಲಿ ವಿವಿಧ

ಉಬ್ಬುಶಿಲ್ಪಗಳನ್ನು ಮೂಡಿಸುವುದು ಹಾಗೂ ಕಾಷ್ಠ ರಥಕ್ಕೆ ಬೆಳ್ಳಿಯ ತಗಡುಗಳನ್ನು ಸರಿಯಾಗಿ ಹೊಂದಿಸುವದು. ಈ ಎಲ್ಲ ಕಾರ್ಯಗಳಿಗೆ ಅನುಕೂಲವಾಗುವಂತಹ ಅನೇಕ ವಿಧದ ಗೇಜ್‌ಗಳಲ್ಲಿ, ಅಂದರೆ ದಪ್ಪಳತೆಗಳಲ್ಲಿ ದೊರೆಯುವ, ಬೆಳ್ಳಿತಗಡುಗಳ ಆಯ್ಕೆ ಮಾಡಬೇಕಾಗುವುದು. ಪ್ರಧಾನ ಶಿಲ್ಪಿಯ ಅಭಿಪ್ರಾಯದ ಮೇರೆಗೆ ರಥ ತಯಾರಿಕೆಗೆ ಅನುಕೂಲ ವಾಗುವಂತಹ ಬೆಳ್ಳಿಯ ತಗಡುಗಳನ್ನು ಖರೀದಿಸಲಾಗುವುದು.

iii. ವಿವಿಧ ರೇಖಾ ಚಿತ್ರಗಳ ರಚನೆ : ಬೆಳ್ಳಿ ರಥದ ತಯಾರಿಕಾ ಹಂತದಲ್ಲಿ, ರಥದ ಆಯಾ ಭಾಗಗಳ ನೀಲ ನಕ್ಷೆಗಳ ಪ್ರಕಾರ, ಯಾವ ಯಾವ ಭಾಗದಲ್ಲಿ ಯಾವ ಯಾವ ಶಿಲ್ಪ ವಿನ್ಯಾಸಗಳು ಬರುವವು ಎಂದು ವಿವೇಚಿಸಿ, ಪ್ರಧಾನ ಶಿಲ್ಪಿಯ ಮಾರ್ಗದರ್ಶನದ ಮೇರೆಗೆ, ಡ್ರಾಯಿಂಗ್ ಪೇಪರುಗಳಲ್ಲಿ, ಪೆನ್ಸಿಲ್‌ಗಳ ಸಹಾಯದಿಂದ ಅನೇಕ ರೇಖಾಚಿತ್ರಗಳನ್ನು ರಚಿಸುವರು. ದೇವಾನುದೇವತೆಯರ, ಶಿವಶರಣರ, ಪ್ರಾಣಿಪಕ್ಷಿಗಳ ಹಾಗೂ ಎಲೆ-ಬಳ್ಳಿ-ಹೂಗಳಂತಹ ವಿನ್ಯಾಸಗಳು ಮತ್ತು ಆನೆ, ಕುದುರೆ, ಸಿಂಹಗಳ ಸಾಲುಗಳು ಹೀಗೆ ವಿವಿಧ ರೀತಿಯ ರೇಖಾ ಚಿತ್ರಗಳನ್ನು, ಪ್ರಧಾನ ಶಿಲ್ಪಿಯ ಮಾರ್ಗದರ್ಶನದಲ್ಲಿ ರಚಿಸಿ, ಅವುಗಳ ತಪ್ಪು ಸರಿಗಳನ್ನು ಪರಿಶೀಲಿಸಿದ ನಂತರ ಮುಂದಿನ ಕೆಲಸ ಪ್ರಾರಂಭವಾಗುವುದು.

iv. ಬೆಳ್ಳಿಯ ತಗಡುಗಳಲ್ಲಿ ರೇಖಾ ಚಿತ್ರಗಳನ್ನು ಮೂಡಿಸುವುದು : ಪೇಪರುಗಳ ಮೇಲೆ ಎಲ್ಲ ರೀತಿಯ ರೇಖಾ ಚಿತ್ರಗಳ ರಚಿಸುವಿಕೆ ಮುಗಿದ ನಂತರ ಅವುಗಳನ್ನು ಬೆಳ್ಳಿಯ ತಗಡುಗಳ ಮೇಲೆ ತದ್ರೂಪವಾಗಿ ರಚಿಸಬೇಕಾಗುವುದು. ಆದ್ದರಿಂದ ಮೊದಲು ಬೆಳ್ಳಿಯ ತಗಡುಗಳನ್ನು ಕತ್ತರಿಸಿ, ಉದ್ದವಾದ ಪಟ್ಟಿಗಳನ್ನು ತಯಾರಿಸುವರು. ನೀಲ ನಕ್ಷೆಯ ಪ್ರಕಾರ, ರಚನೆಗೊಂಡ ರೇಖಾ ಚಿತ್ರಗಳನ್ನು ರಚಿಸುವುದಕ್ಕೆ ಅನುಕೂಲವಾಗುವಂತಹ ಉದ್ದಳತೆಗಳಲ್ಲಿ ಕತ್ತರಿಗಳಿಂದ ಅಥವಾ ಮೆಟಲ್ ಕಟಿಂಗ್ ಮಶಿನ್‌ಗಳಿಂದ ಪಟ್ಟಿಕೆಗಳನ್ನಾಗಿ ಮಾಡಿಕೊಳ್ಳುವರು.

ಪಟ್ಟಿಕೆಗಳನ್ನಾಗಿ ಮಾಡಿಕೊಂಡ ನಂತರ, ಪೇಪರುಗಳಲ್ಲಿ ರಚಿಸಲಾದ ರೇಖಾ ಚಿತ್ರಗಳನ್ನು ಬೆಳ್ಳಿಯ ತಗಡುಗಳ ಮೇಲೆ ತದ್ರೂಪವಾಗಿ ಮೂಡಿಸಲು, ಮೊದಲು ರೇಖಾಚಿತ್ರ ವಿನ್ಯಾಸಗಳನ್ನು ಹೊಂದಿದ ಪೇಪರುಗಳನ್ನು, ಆಯಾ ಅಳತೆಗಳಲ್ಲಿ ಕತ್ತರಿಸಲಾದ ಬೆಳ್ಳಿಯ ತಗಡುಗಳ ಮೇಲೆ, ರಬ್ಬರ್ ಸೋಲಿಶನ್‌ದಂತಹ ಅಂಟು ಪದಾರ್ಥಗಳಿಂದ ಅಂಟಿಸುವರು. ಆಮೇಲೆ ಸಣ್ಣ ಮೊನಚಾದ ಉಳಿಯ ಸಹಾಯದಿಂದ, ರೇಖಾ ಚಿತ್ರಗಳ ಪ್ರತಿಯೊಂದು ರೇಖೆಗಳಗುಂಟ ಹೊಡೆದು, ತಗಡುಗಳ ಮೇಲೆ ಚುಕ್ಕೆ ರೇಖಾ ಚಿತ್ರಗಳನ್ನು ಮೂಡಿಸಿಕೊಳ್ಳುವರು.

v. ಮೇಣದ ಸಹಾಯದಿಂದ ಉಬ್ಬುಶಿಲ್ಪ ತಯಾರಿಕೆ : ಬೆಳ್ಳಿಯ ತಗಡುಗಳ ಮೇಲೆ ಚುಕ್ಕೆ ರೇಖಾ ಚಿತ್ರಗಳನ್ನು ರಚಿಸಿದ ನಂತರ, ಆ ಚಿತ್ರಗಳನ್ನು ಉಬ್ಬು ಶಿಲ್ಪಗಳನ್ನಾಗಿ ಮಾಡಲು, ಮೊದಲು ಯಾವ ಚಿತ್ರಗಳನ್ನು ಉಬ್ಬು ಶಿಲ್ಪಗಳನ್ನಾಗಿ ಮಾಡಬೇಕಾಗಿದೆಯೋ, ಆ ರೇಖಾ ವಿನ್ಯಾಸಗಳಿರುವ ಬೆಳ್ಳಿಯ ತಗಡುಗಳನ್ನು ಮೊದಲು ಬರ್ನರ್‌ದಿಂದ ಹೀಟ್ ಮಾಡುವರು. ಇದರಿಂದ ಗಟ್ಟಿ ತಗಡುಗಳು ಸ್ವಲ್ಪ ಮೆತ್ತಗಾಗುತ್ತವೆ. ಆಮೇಲೆ ಮೇಣವನ್ನು ಚಪ್ಪಟೆಯ, ಆಯತಾಕಾರದ ಅಥವಾ ಚೌಕಾಕಾರವನ್ನಾಗಿ ಮಾಡಿ ಅದರ ಮೇಲೆ, ಮೆತ್ತಗಾದ ಬೆಳ್ಳಿಯ ತಗಡುಗಳನ್ನು ಇಟ್ಟು, ದುಂಡು

ಮುಖದ ಉಳಿಗಳ ಸಹಾಯದಿಂದ ಹಾಗೂ ಕೆಲವು ಚೂಪಾದ ಉಳಿಗಳ ಸಹಾಯದಿಂದ, ಹದವಾದ ರೀತಿಯಲ್ಲಿ ಹತೋಡಿಗಳಿಂದ ಅಥವಾ ಸುತ್ತಿಗೆಗಳಿಂದ ಪೆಟ್ಟು ನೀಡಿ, ಉಬ್ಬು ಶಿಲ್ಪಗಳ ರಚನೆಗಳನ್ನು ಮಾಡುವರು. ಇದು ಪ್ರಾರಂಭದಲ್ಲಿ ಮಾಡುವ ಕೆಲಸ. ತಗಡುಗಳನ್ನು ಕಾಯಿಸಿರುವುದರಿಂದ, ಉಳಿಗಳ ಒತ್ತುವಿಕೆಯಿಂದ ಮೆತ್ತಗಾದ ತಗಡಿನ ಭಾಗದಲ್ಲಿ ಉಬ್ಬು ಶಿಲ್ಪಗಳು ಚೆನ್ನಾಗಿ ಮೂಡಿಬರುತ್ತವೆ.

vi. ರಾಳಮಣಿಯಂದ ಉಬ್ಬುಶಿಲ್ಪಗಳಿಗೆ ಅಂತಿಮ ರೂಪು ಕೊಡುವುದು : ಬೇರೆ ಬೇರೆ ಅಳತೆಗಳ ಬೆಳ್ಳಿಯ ತಗಡುಗಳಲ್ಲಿ ರಚನೆಗೊಂಡ ಉಬ್ಬು ಶಿಲ್ಪಗಳಿಗೆ ಸುಂದರವಾಗಿ ಅಂತಿಮ ರೂಪು ಕೊಡುವುದಕ್ಕೆ, ರಥಶಿಲ್ಪಿಗಳು ಮೊದಲು ರಾಳದ ಮಣಿಯನ್ನು ತಯಾರಿಸುವರು. ಕೊಬ್ಬರಿ ಎಣ್ಣೆ ಇದ್ದಿಲುಗಳನ್ನು ಮಿಶ್ರಣ ಮಾಡಿ, ಅದರಲ್ಲಿ ರಾಳದ ರಾಸಾಯನಿಕವನ್ನು ಮಿಶ್ರಣ ಮಾಡಿ, ಕುದಿ ಬರುವಂತೆ ಕಾಯಿಸಿ ರಾಳವನ್ನು ತಯಾರಿಸಿಕೊಳ್ಳುವರು. ಇದು ಕಪ್ಪು ಬಣ್ಣದ ಸ್ವರೂಪದ ದ್ರವರೂಪದ ಪದಾರ್ಥವಾಗಿರುತ್ತದೆ. ಬೆಳ್ಳಿಯ ತಗಡುಗಳಿಗೆ ಉಳಿಗಳಿಂದ ಪೆಟ್ಟು ನೀಡಿದ ಭಾಗದಲ್ಲಿ, ರಾಳವನ್ನು ಸುರುವಿ ಅದನ್ನು ತಣ್ಣಗಾಗಿಸುವರು. ಆಗ ಅದು ಘನರೂಪವನ್ನು ತಾಳುವುದು. ಕೆಲವು ಚಿಕ್ಕ ಅಳತೆಯಲ್ಲಿ ಕತ್ತರಿಸಲಾದ ತಗಡುಗಳಿಗೆ ಮಾತ್ರ ಈ ರೀತಿಯಲ್ಲಿ ಮಾಡಬಹುದು. ಆದರೆ ಬೆಳ್ಳಿಯ ಉದ್ದವಾದ ಪಟ್ಟಿಕೆಗಳ ಮೇಲೆ ರಚನೆಗೊಂಡ ಉಬ್ಬುಶಿಲ್ಪಗಳಿಗೆ ಹೀಗೆ ಮಾಡಲು ಆಗದು. ಏಕೆಂದರೆ ಪಟ್ಟಿಕೆಗಳು ಉದ್ದವಾಗಿರುವುದರಿಂದ ರಾಳವನ್ನು ಸುರುವಿದಾಗ, ಅದು ಸರಿಯಾದ ರೀತಿಯಲ್ಲಿ ಸಮನಾಗಿ ಲೇಪನವಾಗುವುದಿಲ್ಲ. ಆದ ಕಾರಣ ಮೊದಲು ಒಂದು ಉದ್ದವಾದ ಮರದ ಹಲಗೆಯ ಮೇಲೆ ಬಿಸಿಯಾದ ರಾಳವನ್ನು ಸುರುವಿ, ಅದರ ಮೇಲೆ ಶಿಲ್ಪವಿನ್ಯಾಸಗಳನ್ನು ಹೊಂದಿದ ಬೆಳ್ಳಿ ತಗಡಿನ ಉದ್ದವಾದ ಪಟ್ಟಿಕೆಗಳನ್ನು ಇಡುವರು. ನಂತರ ತಂಪು ಕೊಡುವರು. ಆಗ ರಾಳವು ಗಟ್ಟಿಗೊಂಡು, ಮರದ ಹಲಗೆ, ರಾಳ ಹಾಗೂ ಬೆಳ್ಳಿಯ ತಗಡಿನ ಉದ್ದವಾದ ಪಟ್ಟಿಕೆಗಳು ಒಂದನ್ನೊಂದು ಬಿಡದಂತೆ ಸರಿಯಾಗಿ ಅಂಟಿಕೊಳ್ಳುತ್ತವೆ. ಈ ರೀತಿಯಲ್ಲಿ ರಾಳದ ಮಣಿಯನ್ನು ತಯಾರಿಸಿ, ಅದು ಪೂರ್ಣವಾಗಿ ತಣ್ಣಗಾದ ನಂತರ ಮುಂದಿನ ಕಾರ್ಯವನ್ನು ಕೈಗೊಳ್ಳುವರು. ಉಬ್ಬು ಶಿಲ್ಪಗಳಿಗೆ, ಉಬ್ಬಿದ ಭಾಗದಲ್ಲಿ ಉಳಿಗಳಿಂದ ಪೆಟ್ಟು ನೀಡಲು ಶಿಲ್ಪವಿನ್ಯಾಸಗಳಿಗೆ ರಾಳವುಆಧಾರ ನೀಡುತ್ತದೆ.

ರಾಳದ ಮಣಿಯು ಪೂರ್ಣ ಸಿದ್ಧಗೊಂಡನಂತರ, ನಕ್ಷಾ ಉಳಿಗಳಿಂದ ವಿವಿಧ ಉಗುರು ವಿನ್ಯಾಸದ ಉಳಿಗಳಿಂದ ಉಬ್ಬು ಶಿಲ್ಪಗಳಿಗೆ ಸುತ್ತಿಗೆಯಿಂದ ಹದವಾದ ಪೆಟ್ಟು ನೀಡಿ, ಎಲ್ಲ ಉಬ್ಬು-ಶಿಲ್ಪಗಳಿಗೆ ಅಂತಿಮ ರೂಪುವನ್ನು ಕೊಡುವರು. ಆಗ ಶಿಲ್ಪಗಳು ನೋಡಲು ಬಹಳ ಸುಂದರವಾಗಿ ಕಂಡುಬರುತ್ತವೆ. ಎಲ್ಲ ಶಿಲ್ಪಗಳೂ ಅಂತಿಮ ರೂಪ ಪಡೆದ ನಂತರ ಮತ್ತೆ ಬರ್ನರ್ ಸಹಾಯದಿಂದ ರಾಳದ ಮಣಿಯನ್ನು ಕಾಯಿಸಿ, ಬೆಳ್ಳಿಯ ತಗಡುಗಳಿಗೆ ಖಾವನ್ನು ಕೊಟ್ಟು, ರಾಳದಿಂದ ತಗಡುಗಳನ್ನು ಬೇರ್ಪಡಿಸುವರು. ಈಗ ಬೇರೆ ಬೇರೆ ಅಳತೆಗಳ ತಗಡುಗಳಲಿ ಉಬ್ಬು ಶಿಲ್ಪಗಳು ಸುಂದರವಾಗಿ ಕಾಣತೊಡಗುತ್ತವೆ.

vii. ಮೆಟಲ್ ಕ್ಯಾಸ್ಟಿಂಗ್ ವಿಧಾನದಿಂದ ಬಿಡಿ ಶಿಲ್ಪಗಳ ರಚನೆ : ಬೆಳ್ಳಿ ರಥದ ತಯಾರಿಕೆಯ ಸಮಯದಲ್ಲಿ, ಕೇವಲ ತಗಡುಗಳಲ್ಲಿ ಉಬ್ಬು ಶಿಲ್ಪಗಳನ್ನಷ್ಟೇ ತಯಾರಿಸದೆ, ಮೆಟಲ್ ಕ್ಯಾಸ್ಟಿಂಗ್ ವಿಧಾನದಿಂದ ಕೆಲವು ಬಿಡಿ ಶಿಲ್ಪಗಳ ತಯಾರಿಕೆಯನ್ನು ಕೈಗೊಳ್ಳುವರು. ಸಿಂಹ, ಆನೆ, ಕುದುರೆ, ದೇವತೆಯರು, ವಿವಿಧ ಪಕ್ಷಿಗಳು ಹೀಗೆ ಬೇರೆ ಬೇರೆ ಬಿಡಿ ಶಿಲ್ಪ ವಿನ್ಯಾಸಗಳನ್ನು

ಬೆಳ್ಳಿ ರಥಶಿಲ್ಪದ ತಯಾರಿಕಾ ವಿಧಾನಗಳು






ರಥದ ನೀಲನಕ್ಷೆ




ವಿವಿಧ ನಕ್ಷೆಗಳ ರೇಖಾ ಚಿತ್ರಗಳು




ನಕ್ಷೆಯ ರೇಖಾ ಚಿತ್ರ



ಬೆಳ್ಳಿ ತಗಡುಗಳಲ್ಲಿ ಆನೆಸಾಲುಗಳನ್ನು ಮೂಡಿಸುವಿಕೆ




ಮೇಣದ ಸಹಾಯದಿಂದ ಆನೆಯ ಉಬ್ಬು ಶಿಲ್ಪಗಳನ್ನು ಮೂಡಿಸುವಿಕೆ



ಬೆಳ್ಳಿ ತಗಡುಗಳಲ್ಲಿ ಸಿದ್ಧಗೊಳ್ಳುತ್ತಿರುವ ಆನೆಯ ಉಬ್ಬು ಶಿಲ್ಪಗಳು

ಬೆಳ್ಳಿ ರಥಶಿಲ್ಪದ ತಯಾರಿಕಾ ವಿಧಾನಗಳು



ನಕ್ಷೆಯನ್ನುಳ್ಳ ಬೆಳ್ಳಿ ತಗಡನ್ನು ಕಾಯಿಸುವಿಕೆ



ಬೆಳ್ಳಿ ತಗಡುಗಳಲ್ಲಿ ಅರಗನ್ನು ತುಂಬುವಿಕೆ



ರಾಳದ ಮಣೆಯ ಸಹಾಯದಿಂದ ಸೂಕ್ಷ್ಮ ವಿನ್ಯಾಸಗಳನ್ನು ಮೂಡಿಸುವಿಕೆ



ಅಪೂರ್ಣಗೊಂಡ ಉಬ್ಬು ನಕ್ಷೆಗಳು



ಪೂರ್ಣಗೊಂಡ ಉಬ್ಬು ನಕ್ಷೆಗಳು

ತಯಾರಿಸಬೇಕಾಗುವುದು. ಮೊದಲು ಬೆಳ್ಳಿಯನ್ನು ಕರಗಿಸಿ ದ್ರವರೂಪಗೊಳಿಸಿ, ವಿವಿಧ ಶಿಲ್ಪ ವಿನ್ಯಾಸಗಳ ಪಡಿಯಚ್ಚುಗಳು ಅಥವಾ ಮೌಲ್ಡ್‌ಗಳಲ್ಲಿ, ದ್ರವಗೊಳಿಸಿದ ಬೆಳ್ಳಿಯನ್ನು ಸುರುವಿ ಅದನ್ನು ಗಟ್ಟಿಗೊಳಿಸಿದ ನಂತರ ಮೌಲ್ಡ್‌ಗಳನ್ನು ಬಿಚ್ಚಲಾಗುವದು. ಆಗ ಸುಂದರವಾದ, ಮೂರು ಆಯಾಮಗಳನ್ನು ಹೊಂದಿದ ಬಿಡಿ ಶಿಲ್ಪಗಳು ತಯಾರಾಗುತ್ತವೆ. ಅವುಗಳಿಗೆ ಖಾವು ನೀಡಿ, ಚೂಪಾದ ಸಣ್ಣ ಉಳಿಗಳಿಂದ ಸೂಕ್ಷ್ಮ ವಿನ್ಯಾಸಗಳನ್ನು ಕೊರೆದು ಅಂತಿಮ ರೂಪ ನೀಡುವರು. ಕೆಲವು ಶಿಲ್ಪಗಳಿಗೆ ಕಣ್ಣುಗಳ ಭಾಗದಲ್ಲಿ, ಉಗುರುಗಳ ಭಾಗದಲ್ಲಿ ಮತ್ತು ಆಭರಣಗಳ ವಿನ್ಯಾಸಗಳಲ್ಲಿ ಅಲ್ಲಲ್ಲಿ ಬೇರೆಬೇರೆ ಬಣ್ಣದ ಮುತ್ತುಗಳು, ಹವಳ ಹಾಗೂ ವಜ್ರಗಳಂತಹ ಬೆಲೆಬಾಳುವ ಮಣಿಗಳನ್ನು ಅಳವಡಿಸುವರು. ಇದರಿಂದ ಬಿಡಿಶಿಲ್ಪಗಳ ಸೌಂದರ್ಯವು ನೋಡುಗರ ಕಣ್ಮನಗಳನ್ನು ಸೆಳೆಯುತ್ತದೆ. ಹೀಗೆ ಬೆಳ್ಳಿ ರಥದಲ್ಲಿ ಅಳವಡಿಸಲಾಗುವ ಉಬ್ಬು ಶಿಲ್ಪಗಳು ಹಾಗೂ ಬಿಡಿ ಶಿಲ್ಪಗಳು ರಚನೆಗೊಳ್ಳುತ್ತವೆ.

೩. ಕಾಷ್ಠ ರಥದ ಬೆಳ್ಳಿಯ ಉಬ್ಬು ಶಿಲ್ಪಗಳ ಹಾಗೂ ಬಿಡಿ ಶಿಲ್ಪಗಳ ಜೋಡಣೆ :

ಎಲ್ಲ ಉಬ್ಬು ಶಿಲ್ಪಗಳು ಹಾಗೂ ಬಿಡಿ ಶಿಲ್ಪಗಳೂ ರಚನೆಗೊಂಡ ನಂತರ, ಅವುಗಳನ್ನು ಕಾಷ್ಠ ರಥಕ್ಕೆ ಅಳವಡಿಸುವ ಪ್ರಕ್ರಿಯೆ ಪ್ರಾರಂಭವಾಗುತ್ತದೆ. ಅಡಿಪಾಯ, ಅಧಿಷ್ಠಾನ, ಮಂಟಪ ಹಾಗೂ ಶಿಖರ ಭಾಗಗಳನ್ನು ಹೊಂದಿದ ರಥಕ್ಕೆ, ಆಯಾ ಭಾಗಗಳನ್ನು ಬೇರೆ ಬೇರೆ ವಿನ್ಯಾಸದ ಶಿಲ್ಪಗಳು ಸರಿಯಾಗಿ ಜೋಡಣೆಯಾಗಲು ಪ್ರಧಾನ ಶಿಲ್ಪಿಯ ಮಾರ್ಗದರ್ಶನದಂತೆ ಉಳಿದ ಸಹಾಯಕ ಶಿಲ್ಪಿಗಳು ಕಾರ್ಯೋನ್ಮುಖರಾಗುವರು.

ಅಡಿಪಾಯ ಭಾಗದಲ್ಲಿ ತೊಲೆಗಳಿಗೆ ಐದು ಅಥವಾ ಆರು ಆನೆ ಮತ್ತು ಸಿಂಹಗಳ ಬಿಡಿ ಶಿಲ್ಪಗಳನ್ನು ಅಳವಡಿಸುವರು. ಪ್ರತಿಯೊಂದು ತೊಲೆಗಳ ಮಧ್ಯ ಇರುವ ಜಾಗದಲ್ಲಿ ವಿವಿಧ ಹೂವಿನಾಕಾರದ, ಬಳ್ಳಿಯಾಕಾರದ ಉಬ್ಬುಶಿಲ್ಪಗಳ ವಿನ್ಯಾಸಗಳನ್ನು ಹೊಂದಿದ ಬೆಳ್ಳಿಯ ತಗಡುಗಳನ್ನು ಮೊಳೆಗಳಿಂದ ಬಡಿದು ಹೊಂದಿಸುವರು. ತಗಡುಗಳ ಮೇಲೆ ಹೊಡೆಯುವ ಮೊಳೆಗಳ ದುಂಡಾದ ಭಾಗಗಳಲ್ಲಿ ಬೆಳ್ಳಿಯ ಲೇಪನ ಮಾಡುವರು ಇದರಿಂದ, ಬೇರೆ ಬೇರೆ ತಗಡುಗಳು ಜೋಡಣೆಯಾಗಿರುವುದು ದೂರದಿಂದ ಕಂಡುಬರುವುದಿಲ್ಲ.

ಅಧಿಷ್ಠಾನ ಭಾಗದಲ್ಲಿ ಕೆಳಗಡೆಗೆ ಹೂ ಬಳ್ಳಿಗಳ ನಕ್ಷೆಗಳನ್ನು ಹೊಂದಿದ, ಉಬ್ಬುಶಿಲ್ಪ ಪಟ್ಟಿಕೆಗಳನ್ನು ಸಾಲು ಸಾಲಾಗಿ ಮೊಳೆಗಳಿಂದ ಹೊಡೆದು ಜೋಡಿಸುವರು. ಆನೆಯ ಸಾಲುಗಳು ಕುದುರೆಯ ಸಾಲುಗಳನ್ನು ಹೊಂದಿದ ಹಾಗೂ ನಂದಿ ಶಿವಲಿಂಗದಂತಹ ಉಬ್ಬುಶಿಲ್ಪ ಪಟ್ಟಿಕೆಗಳನ್ನು ಅಧಿಷ್ಠಾನದ ಕೆಳಗಡೆಯ ಭಾಗದಲ್ಲಿ ಹೊಂದಿಸುವರು. ಅಧಿಷ್ಠಾನ ಭಾಗದ ಮಧ್ಯ ಭಾಗದಲ್ಲಿ ಲಕ್ಷ್ಮೀ, ಸರಸ್ವತಿ , ಗಣಪತಿ, ಶಿವಪಾರ್ವತಿ, ವಿಶ್ವಕರ್ಮ, ಆದಿಶಕ್ತಿ ,ಬ್ರಹ್ಮ ,ವಿಷ್ಣು ಇಂತಹ ವಿನ್ಯಾಸಗಳುಳ್ಳ ಉಬ್ಬುಶಿಲ್ಪಗಳು ಅಥವಾ ಬಿಡಿ ಶಿಲ್ಪಗಳನ್ನು ಸುಂದರವಾಗಿ ಕಾಣುವಂತೆ ಜೋಡಿಸುವರು. ಈ ಶಿಲ್ಪವಿನ್ಯಾಸಗಳ ಪಕ್ಕದಲ್ಲಿ ಕಂಬಗಳು ಹಾಗೂ ಕಮಾನುಗಳಾಕಾರದ ವಿವಿಧ ಎಲೆ-ಬಳ್ಳಿ ಹೂಗಳ ವಿನ್ಯಾಸಗಳನ್ನೊಳಗೊಂಡ ಉಬ್ಬುಶಿಲ್ಪಗಳ ಬೆಳ್ಳಿಯ ಪಟ್ಟಿಕೆಗಳನ್ನು ಜೋಡಿಸುವರು. ಅಧಿಷ್ಠಾನ ಭಾಗದ ಪ್ರತಿಯೊಂದು ಭುಜಗಳಲ್ಲಿ ನೆಗೆಯುತ್ತಿರುವ ಸಿಂಹಗಳ ಬಿಡಿ ಶಿಲ್ಪಗಳನ್ನು ಹೊಂದಿಸುವರು. ಅಧಿಷ್ಠಾನ ಭಾಗದ ಮೇಲ್ಭಾಗದಲ್ಲಿ ದಶಾವತಾರ, ನವಗ್ರಗಳು, ಪಂಚಮಹಾಭೂತಗಳು,

ಅಷ್ಟದಿಕ್ಪಾಲಕರು, ಹೀಗೆ ಅನೇಕ ದೇವತಾ ಶಿಲ್ಪಗಳನ್ನು ಹೊಂದಿದ ಕೆಲವು ಉಬ್ಬುಶಿಲ್ಪ ಪಟ್ಟಿಕೆಗಳು ಹಾಗೂ ಕೆಲವು ಬಿಡಿಶಿಲ್ಪಗಳನ್ನು ಅಳವಡಿಸುವರು. ಇದಲ್ಲದೆ ಬೆಳ್ಳಿಯ ಸಣ್ಣ ತಂತಿಗಳಿಂದ ಅಥವಾ ಸರಳುಗಳಿಂದ ತಯಾರಿಸಿದ ಕಟಂಜರವನ್ನು ಅಧಿಷ್ಠಾನ ಭಾಗದ ಮೇಲ್ಭಾಗದಲ್ಲಿ ಓರಣವಾಗಿ ಕೂಡಿಸಿ, ಆ ಭಾಗದಲ್ಲಿ ಬೆಳ್ಳಿಯ ಗಂಟೆಗಳನ್ನು ಸಾಲುಸಾಲಾಗಿ ಅಳವಡಿಸುವರು.

ಇನ್ನು ಮಂಟಪ ಭಾಗದಲ್ಲಿ, ವಿವಿಧ ಕಮಾನುಗಳು ಹಾಗೂ ಕಂಬಗಳಿಗೆ ಹೂ, ಬಳ್ಳಿ, ಎಲೆ ಯಂತಹ ನಕ್ಷೆಗಳನ್ನು ಹೊಂದಿದ ಉಬ್ಬು ಶಿಲ್ಪ ಪಟ್ಟಿಕೆಗಳನ್ನು ಅಳವಡಿಸುವರು. ಅಲ್ಲಲ್ಲಿ ಕೆಲವು ದೇವತಾ ಶಿಲ್ಪಗಳನ್ನೊಳಗೊಂಡ ಬಿಡಿ ಶಿಲ್ಪರಚನಾ ವಿನ್ಯಾಸಗಳನ್ನು ಅಳವಡಿಸುವರು. ಲಿಂಗ, ಸರ್ಪ, ನಂದಿ, ಬ್ರಹ್ಮ,ವಿಷ್ಣು,ಮಹೇಶ್ವರ ಹೀಗೆ ವಿವಿಧ ವಿನ್ಯಾಸಗಳನ್ನು ಹೊಂದಿದ ಉಬ್ಬು ಶಿಲ್ಪಗಳ ಬೆಳ್ಳಿಯ ತಗಡಿನ ಪಟ್ಟಿಗಳನ್ನು ಸರಿಯಾಗಿ ಜೋಡಿಸಿ, ಮೊಳೆಗಳಿಂದ ಭದ್ರಪಡಿಸುವರು. ಮಂಟಪದ ನಡುವೆ ಇರುವ ಪೀಠದ ಭಾಗದಲ್ಲಿ ಸುಂದರವಾದ ಹೂ-ಬಳ್ಳಿಯಂತಹ ನಕ್ಷೆಗಳನ್ನು ಹೊಂದಿದ ಉಬ್ಬು ಶಿಲ್ಪಗಳ ಬೆಳ್ಳಿಯ ತಗಡುಗಳನ್ನು ಹೊಂದಿಸುವರು. ಅಲ್ಲದೆ ಮಂಟಪದ ಮೇಲ್ಛಾವಣಿಯ ಒಳಗಡೆಗೆ ಇದೇ ರೀತಿಯ ಶಿಲ್ಪಪಟ್ಟಿಕೆಗಳನ್ನು ಅಳವಡಿಸುವರು.

ಇನ್ನು ಗೋಪುರ ಭಾಗದಲ್ಲಿ ವಿವಿಧ ನಕ್ಷಾಕೃತಿಗಳನ್ನು ಹೊಂದಿದ ಉಬ್ಬುಶಿಲ್ಪ ಪಟ್ಟಿಕೆಗಳನ್ನು ಸರಿಯಾಗಿ ಹೊಂದಿಸುವರು. ಗೋಪುರದ ಹಾಗೂ ಶಿಖರದ ನಾಲ್ಕೂ ದಿಕ್ಕುಗಳಲ್ಲಿ ಬೆಳ್ಳಿಯ ತಗಡುಗಳಲ್ಲಿ ರಚಿಸಿದ ಸಣ್ಣ ಸಣ್ಣ ಕೀರ್ತಿಮುಖಗಳು ಹಾಗೂ ಕೆಲವು ದೇವತಾ ಮೂರ್ತಿಗಳ ಬಿಡಿ ಶಿಲ್ಪಗಳನ್ನು ಜೋಡಿಸಿರುವರು. ಹೀಗೆ ಎಲ್ಲ ಭಾಗಗಳಲ್ಲಿ ಸುಂದರವಾದ ಶಿಲ್ಪವಿನ್ಯಾಸಗಳನ್ನು ಹೊಂದಿದ ಸುಂದರವಾದ ಬೆಳ್ಳಿ ರಥವು ನಿರ್ಮಾಣಗೊಳ್ಳುವುದು.

ಎಲ್ಲ ರೀತಿಯಿಂದಲೂ ಪೂರ್ಣವಾಗಿ ಸಿದ್ಧಗೊಂಡ ಬೆಳ್ಳಿ ರಥಕ್ಕೆ ಸಿಲ್ವರ್ ವಾಟರನ್ನು ಬಳಸಿ ಚೆನ್ನಾಗಿ ತೊಳೆದು, ವಿವಿಧ ಬ್ರಶ್‌ಗಳಿಂದ ಶುಭ್ರಗೊಳಿಸಿ ಥಳ ಥಳ ಹೊಳೆಯುವಂತೆ ಮಾಡುವರು[೮].

೪. ಉತ್ಸವದ ಸಂದರ್ಭದಲ್ಲಿ ಅಲಂಕಾರ :

ಉತ್ಸವದ ಸಂದರ್ಭದಲ್ಲಿ ರಥದ ಎಲ್ಲ ಭಾಗಗಳಲ್ಲಿ ಹೂವಿನ ಹಾರಗಳಿಂದ ಅಲಂಕಾರ ಮಾಡುವರು. ಮಂಟಪ ಭಾಗದಲ್ಲಿ ಕಬ್ಬುಗಳನ್ನು ಕಟ್ಟುವರು. ಎಲ್ಲ ಭುಜಗಳಲ್ಲಿ ತೆಂಗಿನಕಾಯಿ ಅಥವಾ ಲಿಂಬೆ ಹಣ್ಣುಗಳನ್ನು ಕಟ್ಟುವರು. ಶಿಖರದ ಮೇಲೆ ಚಿನ್ನದ ಕಳಶವನ್ನಿಡುವರು ಮತ್ತು ಶಿಖರಕ್ಕೆ ನೆರಳು ಬೀಳುವಂತೆ, ಒಂದುಬಣ್ಣ ಬಣ್ಣದ ಛತ್ರಿಯನ್ನು ಕಟ್ಟುವರು ಗೋಪುರದ ನಾಲ್ಕೂ ದಿಕ್ಕುಗಳಲ್ಲಿ ಬಣ್ಣದ ಧ್ವಜಗಳನ್ನು ಕಟ್ಟುವರು. ಇದಲ್ಲದೆ ರಥವು ಎಲ್ಲರಿಗೆ ಸುಂದರವಾಗಿ ಕಾಣಲು ರಾತ್ರಿವೇಳೆಯಲ್ಲಿ ಸಣ್ಣ ಸಣ್ಣ ವಿವಿಧ ಬಣ್ಣಗಳ ವಿದ್ಯುತ್ ದೀಪಗಳ ಸರಗಳನ್ನು ಹಾಕಿ ಅಲಂಕರಿಸುವರು. ಹೀಗೆ ಈ ರೀತಿಯಲ್ಲಿ ಬೆಳ್ಳಿಯ ರಥಗಳು ನಿರ್ಮಾಣಗೊಳ್ಳುತ್ತವೆ.

ಕ. ಚಿನ್ನದ ರಥಗಳ ರಚನಾ ವಿಧಾನ :

ಲೋಹ ಮಾಧ್ಯಮದ ಚಿನ್ನದ ರಥಗಳೂ ಸಹ ಸ್ಥಿರ ರಥಗಳಾಗಿದ್ದು ಬೆಳ್ಳಿಯ ರಥದ ತಯಾರಿಕೆಯಂತೆ, ಇವುಗಳೂ ಸಹ ನಾಲ್ಕು ಹಂತಗಳಲ್ಲಿ ನಿರ್ಮಾಣವಾಗುವವು.

೮. ಸಂದರ್ಶನ- ಹಂಸಾನಂದ ಆಚಾರ್ಯ, ಬೆಳ್ಳಿ ರಥ ಶಿಲ್ಪಿ, ಕೊಟ್ಟೂರ, ಡಿಸೆಂಬರ ೨, ೨೦೦೨.

೧. ಕಾಷ್ಠ ಮಾಧ್ಯಮದ ರಥದ ನಿರ್ಮಾಣ.

೨. ಚಿನ್ನದ ತಗಡುಗಳಲ್ಲಿ ಉಬ್ಬುಶಿಲ್ಪ ಹಾಗೂ ಬಿಡಿ ಶಿಲ್ಪಗಳ ರಚನೆ.

೩. ಕಾಷ್ಠ ರಥಕ್ಕೆ ಚಿನ್ನದ ಉಬ್ಬುಶಿಲ್ಪಗಳ ಹಾಗೂ ಬಿಡಿ ಶಿಲ್ಪಗಳ ಜೋಡಣೆ.

೪. ಉತ್ಸವದ ಸಂದರ್ಭದಲ್ಲಿ ಅಲಂಕಾರ.

ಈ ನಾಲ್ಕೂ ಹಂತಗಳ ರಚನಾ ವಿಧಾನಗಳನ್ನು ತಿಳಿಯುವಾ.

೧. ಕಾಷ್ಠ ಮಾಧ್ಯಮದ ರಥದ ನಿರ್ಮಾಣ : ಚಿನ್ನದ ರಥದ ತಯಾರಿಕಾ ಹಂತದಲ್ಲಿ ಮೊದಲು ಕಾಷ್ಠ ಮಾಧ್ಯಮದ ರಥವನ್ನು ತಯಾರಿಸಬೇಕಾಗುವುದು. ಚಿನ್ನದ ರಥಗಳು ಸ್ಥಿರ ರಥಗಳಾಗಿರುವುದರಿಂದ, ಕಾಷ್ಠ ರಥವು ಅಡಿಪಾಯ, ಅಧಿಷ್ಠಾನ, ಮಂಟಪ, ಹಾಗೂ ಗೋಪುರ ಭಾಗಗಳನ್ನು ಹೊಂದಿ, ನಿರ್ಮಾಣವಾಗಬೇಕಾಗುತ್ತದೆ. ಈ ಚಿನ್ನದ ರಥದ ತಯಾರಿಕೆಗಾಗಿ ಕೈಗೊಳ್ಳುವ ಕಾಷ್ಠ ರಥದ ನಿರ್ಮಾಣ ಕಾರ್ಯವು, ಬೆಳ್ಳಿಯ ರಥದ ರಚನೆಯ ಸಂದರ್ಭದಲ್ಲಿ ತಯಾರಿಸಲಾಗುವ ಕಾಷ್ಠ ರಥದಂತೆಯೇ ಪ್ರಾರಂಭಗೊಳ್ಳುವುದು. ರಥಗಳ ವಿನ್ಯಾಸಗಳು ಸ್ವಲ್ಪ ಬೇರೆ ಬೇರೆ ಯಾಗಿರಬಹುದು. ಆದರೆ, ತಯಾರಿಕಾ ಹಂತಗಳು ಒಂದೇ ತೆರನಾಗಿರುವವು.

ಕಾಷ್ಠ ಮಾಧ್ಯಮದ ರಥವನ್ನು ತಯಾರಿಸುವಾಗ ರಥದ ನೀಲನಕ್ಷೆಗಳನ್ನು ತಯಾರಿಸುವುದು. ವಿವಿಧ ಕಾಷ್ಠಗಳನ್ನು ಆಯ್ಕೆಮಾಡುವುದು, ಶಾಸ್ತ್ರ ಗ್ರಂಥಗಳ ಅಧ್ಯಯನ ಮಾಡುವುದು, ರಥ ನಿರ್ಮಿಸುವ ಸ್ಥಳದ ಆಯ್ಕೆ ಮತ್ತು ಆರಂಭದಲ್ಲಿ ಪುರೋಹಿತನು ಹಾಗೂ ಶಿಲ್ಪಿಗಳಿಬ್ಬರೂ ಸೇರಿ, ಪೂಜೆ ಪುರಸ್ಕಾರಗಳನ್ನು ಕೈಗೊಳ್ಳುವುದು. ಈ ಎಲ್ಲ ಕಾರ್ಯಗಳು, ಬೆಳ್ಳಿಯ ರಥಗಳ ತಯಾರಿಕೆಯ ಮೊದಲ ಹಂತದಲ್ಲಿ ಕೈಗೊಳ್ಳುವ ಕಾಷ್ಠ ರಥದ ನಿರ್ಮಾಣ ಹಂತದಂತೆಯೇ ಇರುತ್ತವೆ.

ಅಡಿಪಾಯ ಭಾಗದಲ್ಲಿನ ಚಕ್ರಗಳು, ಅಚ್ಚುಗಳು ಹಾಗೂ ತೊಲೆಗಳನ್ನು ನಿರ್ಮಿಸಿ ಸರಿಯಾಗಿ ಹೊಂದಿಸುವುದು, ವಿವಿಧ ಹಲಗೆಗಳನ್ನು ಕೊರೆದು, ರಥದ ಅಧಿಷ್ಠಾನ, ಮಂಟಪ ಹಾಗೂ ಗೋಪುರ ಭಾಗಗಳನ್ನು ತಯಾರಿಸುವುದು. ಈ ಎಲ್ಲ ಕಾರ್ಯಗಳೂ ಸಹ ಬೆಳ್ಳಿಯ ರಥದ ತಯಾರಿಕಾ ಹಂತದ, ಕಾಷ್ಠ ರಥದ ನಿರ್ಮಾಣದ ಹಂತಗಳಂತೆಯೇ ಮುಂದುವರೆಯುತ್ತವೆ.

೨. ಚಿನ್ನದ ತಗಡುಗಳಲ್ಲಿ ಉಬ್ಬುಶಿಲ್ಪ ಹಾಗೂ ಬಿಡಿ ಶಿಲ್ಪಗಳ ರಚನೆ : ಚಿನ್ನದ ರಥಗಳ ನಿರ್ಮಾಣ ಕಾರ್ಯದಲ್ಲಿ ಬೆಲೆಬಾಳುವ ಚಿನ್ನದ ತಗಡುಗಳಲ್ಲಿ ಉಬ್ಬುಶಿಲ್ಪಗಳು ಹಾಗೂ ವಿವಿಧ ವಿನ್ಯಾಸಗಳ ಸುಂದರವಾದ, ಬಿಡಿ ಶಿಲ್ಪಗಳನ್ನು ರಚನೆ ಮಾಡಬೇಕಾಗುವುದು. ಚಿನ್ನದ ತಗಡುಗಳಲ್ಲಿ ಉಬ್ಬುಶಿಲ್ಪಗಳನ್ನು ಹಾಗೂ ಬಿಡಿ ಶಿಲ್ಪಗಳನ್ನು ಬೆಳ್ಳಿಯ ರಥದ ತಯಾರಿಕಾ ಕಾರ್ಯದಲ್ಲಿ, ಉಬ್ಬುಶಿಲ್ಪಗಳನ್ನು ಹಾಗೂ ಬೆಳ್ಳಿಯ ಬಿಡಿ ಶಿಲ್ಪಗಳನ್ನು ರಚಿಸುವ ವಿಧಾನಗಳಂತೆಯೇ ರಚಿಸುವರು.

ಮೊಟ್ಟ ಮೊದಲು, ಈ ಶಿಲ್ಪಗಳನ್ನು ರಚನೆ ಮಾಡಲು, ಒಂದು ಸುರಕ್ಷಿತವಾದ ಸ್ಥಳವನ್ನು ಆಯ್ಕೆ ಮಾಡುವುದು, ಆಮೇಲೆ ಬೇರೆ ಬೇರೆ ದಪ್ಪಳತೆಗಳಲ್ಲಿ ದೊರೆಯುವ ಚಿನ್ನದ ತಗಡುಗಳನ್ನು ಆಯ್ಕೆ ಮಾಡುವುದು, ಅಲ್ಲದೆ ಶಿಲ್ಪವಿನ್ಯಾಸಗಳನ್ನು ರಚಿಸುವ ಮೊದಲು, ಅವುಗಳ ರೇಖಾ ಚಿತ್ರಗಳ ರಚನೆಯನ್ನು ಕೈಗೊಳ್ಳುವುದು, ಚಿನ್ನದ ತಗಡುಗಳಲ್ಲಿ ರೇಖಾ ಚಿತ್ರಗಳನ್ನು ತದ್ರೂಪವಾಗಿ

ರಚಿಸುವದು, ಚಿನ್ನದ ತಗಡುಗಳ ಮೇಲೆ, ಮೇಣದ ಸಹಾಯದಿಂದ ಉಬ್ಬುಶಿಲ್ಪಗಳನ್ನು ರಚಿಸುವುದು, ರಚನೆಗೊಂಡ ಉಬ್ಬು ಶಿಲ್ಪಗಳಿಗೆ ರಾಳದ ಮಣಿಯ ಸಹಾಯದಿಂದ ಅಂತಿಮ ರೂಪವನ್ನು ಕೊಡುವದು. ಇದೆಲ್ಲ ಆದ ನಂತರ ಮೆಟಲ್ ಕ್ಯಾಸ್ಟಿಂಗ್ ವಿಧಾನದಿಂದ ಚಿನ್ನ ಬಿಡಿ ಶಿಲ್ಪಗಳನ್ನು ತಯಾರಿಸುವದು. ಎಲ್ಲ ಉಬ್ಬು ಶಿಲ್ಪಗಳು ಹಾಗೂ ಬಿಡಿ ಶಿಲ್ಪಗಳು ಸುಂದರವಾದ ಅಂತಿಮ ರೂಪ ಪಡೆದು ರಚನೆಗೊಂಡ ನಂತರ ಮೊದಲು ತಯಾರಿಸಲಾದ ಕಾಷ್ಠ ರಥಕ್ಕೆ ಚಿನ್ನದ ಉಬ್ಬು ಶಿಲ್ಪಗಳ ಹಾಗೂ ಬಿಡಿಶಿಲ್ಪಗಳ ಜೋಡನೆ ಮಾಡುವದಕ್ಕಿಂತ ಮೊದಲು ಎಲ್ಲ ಶಿಲ್ಪವಿನ್ಯಾಸಗಳಿರುವ ಪಟ್ಟಿಕೆಗಳನ್ನು ಗೊಲ್ಡನ್ ವಾಟರ್‌ದಿಂದ ಸ್ವಚ್ಛಗೊಳಿಸುವರು. ಹೀಗೆ ಇಷ್ಟೆಲ್ಲಾ ಕಾರ್ಯ ವಿಧಾನಗಳ ಮೂಲಕ ಚಿನ್ನದ ತಗಡುಗಳಲ್ಲಿ ಉಬ್ಬು ಶಿಲ್ಪಗಳನ್ನು ಹಾಗೂ ಬಿಡಿ ಶಿಲ್ಪಗಳನ್ನು ತಯಾರಿಸುವರು. ಎಲ್ಲ ಕಾರ್ಯಗಳ ವಿಧಿವಿಧಾನಗಳನ್ನು ಈಗಾಗಲೇ ಬೆಳ್ಳಿಯ ತಗಡುಗಳ ಮೇಲೆ ಶಿಲ್ಪರಚನೆ ಮಾಡುವ ಸಂಧರ್ಭದಲ್ಲಿ ವಿವರವಾಗಿ ಹೇಳಲಾಗಿದೆ.

೩. ಕಾಷ್ಠ ರಥಕ್ಕೆ ಚಿನ್ನದ ಉಬ್ಬು ಹಾಗೂ ಬಿಡಿ ಶಿಲ್ಪಗಳ ಜೋಡಣೆ:

ಚಿನ್ನದ ತಗಡುಗಳಲ್ಲಿ ಎಲ್ಲ ಉಬ್ಬುಶಿಲ್ಪಗಳ ಹಾಗೂ ಚಿನ್ನದ ಬಿಡಿಶಿಲ್ಪಗಳು ಪೂರ್ಣವಾಗಿ ರಚನೆಗೊಂಡ ನಂತರ ಅವುಗಳನ್ನು ಮೊದಲೇ ತಯಾರಿಸಿದ ಕಾಷ್ಠ ರಥಕ್ಕೆ ಜೋಡಿಸುವ ಕೆಲಸವು ಪ್ರಾರಂಭಗೊಳ್ಳುತ್ತದೆ. ಪ್ರಧಾನಶಿಲ್ಪಿಯ ಮಾರ್ಗದರ್ಶನದಂತೆ ರಥದ ಅಡಿಪಾಯ ಭಾಗ, ಅಧಿಷ್ಠಾನ ಭಾಗ ಮಂಟಪ ಭಾಗ ಹಾಗೂ ಗೋಪುರ ಭಾಗಗಳಲ್ಲಿ ಆಯಾ ಭಾಗಗಳಿಗೆ ಸಂಬಂಧಪಟ್ಟ ದೇವಾನುದೇವತೆಯರು, ಪ್ರಾಣಿಪಕ್ಷಿಗಳ, ಪುರಾಣಪುಣ್ಯ ಕಥೆಗಳ ಹಾಗೂ ವಿವಿಧ ಎಲೆ, ಬಳ್ಳಿ, ಹೂಗಳಂತಹ ವಿನ್ಯಾಸಗಳ ನಕ್ಷಾಕೃತಿಗಳು ಉಬ್ಬುಶಿಲ್ಪಗಳನ್ನು ಹಾಗೂ ಬಿಡಿಶಿಲ್ಪಗಳನ್ನು ಚಿನ್ನದ ತಗಡುಗಳಲ್ಲಿ ಸರಿಯಾಗಿ ಹೊಂದಿಸುವರು. ಇವುಗಳು ಸರಿಯಾಗಿ ಹೊಂದಿಕೊಂಡು ಕೂಡುವಂತೆ ಮಾಡಲು, ಚಿನ್ನದ ಲೇಪನ ಮಾಡಿದ ಮೊಳೆಗಳನ್ನು ಹೊಡೆಯುವರು.

ರಥದ ವಿವಿಧ ಭಾಗಗಳಲ್ಲಿ, ಯಾವ ಯಾವ ಉಬ್ಬುಶಿಲ್ಪಗಳು ಹಾಗೂ ಬಿಡಿಶಿಲ್ಪಗಳು ಜೋಡಣೆಯಾಗುತ್ತವೆ ಹಾಗೂ ಅವುಗಳನ್ನು ಜೋಡಿಸುವ ಕಾರ್ಯವಿಧಾನಗಳನ್ನು ಬೆಳ್ಳಿಯ ರಥ ತಯಾರಿಕಾ ವಿಧಾನದಲ್ಲಿ ವಿವರವಾಗಿ ಹೇಳಲಾಗಿದೆ. ಚಿನ್ನದ ರಥಕ್ಕೆ ಉಬ್ಬುಶಿಲ್ಪ ಹಾಗೂ ಬಿಡಿಶಿಲ್ಪಗಳ ಜೋಡಣೆಯೂ ಸಹ ಅದೇ ರೀತಿಯ ಕಾರ್ಯವಿಧಾನಗಳಲ್ಲಿ ನಡೆಯುವುದು.

ಅನೇಕ ಶಿಲ್ಪವಿನ್ಯಾಸಗಳನ್ನು ಹೊಂದಿ, ಪೂರ್ಣವಾಗಿ ಸಿದ್ಧಗೊಂಡ ಚಿನ್ನದ ರಥಕ್ಕೆ, ಗೋಲ್ಡನ್ ವಾಟರ್‌ದಿಂದ ತೊಳೆದು, ಬೇರೆ ಬೇರೆ ಬ್ರಶ್‌ಗಳಿಂದ ತಿಕ್ಕಿ, ಸ್ವಚ್ಛವಾದ ಬಟ್ಟೆಯಿಂದ ವರೆಸಿ, ರಥವನ್ನು ಥಳಥಳ ಹೊಳೆಯುವಂತೆ ಮಾಡುವರು.

ಹೀಗೆ ಕಾಷ್ಠ ರಥಕ್ಕೆ, ಚಿನ್ನದ ಉಬ್ಬುಶಿಲ್ಪಗಳ ಹಾಗೂ ಬಿಡಿ ಶಿಲ್ಪಗಳ ಜೋಡಣೆ ಮಾಡಿ ಚಿನ್ನದ ರಥವನ್ನು ಸಿದ್ಧಪಡಿಸುವರು.

೪. ಉತ್ಸವದ ಸಂದರ್ಭದಲ್ಲಿ ಅಲಂಕಾರ : ಉತ್ಸವದ ಸಂದರ್ಭದಲ್ಲಿ, ವಿವಿಧ ಪುಷ್ಪಗಳಿಂದ ತಯಾರಿಸಲಾದ, ಉದ್ದವಾದ ಹಾರಗಳನ್ನು ಬೇರೆ ಬೇರೆ ವಿನ್ಯಾಸಗಳಲ್ಲಿ ಅಧಿಷ್ಠಾನ, ಮಂಟಪ ಹಾಗೂ ಶಿಖರ ಭಾಗಗಳಲ್ಲಿ ನೇತುಬಿಡುವರು. ಕಬ್ಬುಗಳು ಹಾಗೂ ಮಾವಿನ ಎಲೆಗಳಂತಹ ಅನೇಕ ಎಲೆಗಳನ್ನು

ಹಾರದಂತೆ ಮಾಡಿ ರಥದ ಮಂಟಪ ಭಾಗದ ಸುತ್ತಲೂ ಕಟ್ಟುವರು. ತೆಂಗಿನಕಾಯಿ, ಲಿಂಬೆಹಣ್ಣುಗಳು ಹಾಗೂ ಇನ್ನುಳಿದ ವಿವಿಧ ಫಲಗಳನ್ನು, ಉತ್ಸವ ಮೂರ್ತಿಯ ಎದುರುಗಡೆಗೆ ಇಡುವರು. ರಾತ್ರಿ ವೇಳೆ ರಥವು ಸುಂದರವಾಗಿ ಕಾಣಲು ವಿದ್ಯುತ್ ದೀಪಗಳ ಸರಗಳನ್ನು ಹಾಕುವರು. ಶಿಖರ ಭಾಗದಲ್ಲಿ ಚಿನ್ನದ ಕಳಶವನ್ನಿಟ್ಟು, ಅದರ ಮೇಲೆ ಒಂದು ಬಣ್ಣದ ಛತ್ರಿಯನ್ನು ಕಟ್ಟುವರು. ಗೋಪುರ ಭಾಗದಲ್ಲಿ ಬಣ್ಣ ಬಣ್ಣದ ಧ್ವಜಗಳನ್ನು ಕಟ್ಟುವರು. ಈ ರೀತಿಯಲ್ಲಿ ಉತ್ಸವದ ಸಂದರ್ಭದಲ್ಲಿ ಚಿನ್ನದ ರಥವನ್ನು ಅಲಂಕಾರಗೊಳಿಸುವರು.

III. ಸಂಕೀರ್ಣ ಮಾಧ್ಯಮ ರಥಗಳ ರಚನಾ ವಿಧಾನ :

ಸಂಕೀರ್ಣ ಮಾಧ್ಯಮದ ರಥಗಳಲ್ಲಿ

ಅ. ಕಟ್ಟುವ ರಥಗಳು

ಬ. ತಟ್ಟೆಯ ರಥಗಳು

ಕ. ಹೂವಿನ ರಥಗಳು

ಡ. ತೆಪ್ಪದ ರಥಗಳು ಎಂದು ನಾಲ್ಕು ಮಾಧ್ಯಮದ ರಥಗಳನ್ನಾಗಿ ವಿಂಗಡಿಸಿಕೊಂಡು, ಮಾಧ್ಯಮಗಳ ಹಿನ್ನೆಲೆಯಲ್ಲಿ, ಅವುಗಳ ರಚನಾ ವಿಧಾನಗಳನ್ನು ವಿವರವಾಗಿ ಅಭ್ಯಾಸ ಮಾಡುವಾ.

ಅ. ಕಟ್ಟುವ ರಥಗಳ ರಚನಾ ವಿಧಾನ :

ಕರ್ನಾಟಕದ ಹಲವಾರು ಭಾಗಗಳಲ್ಲಿ ಉತ್ಸವಗಳ ಸಂದರ್ಭದಲ್ಲಿ ಮಾತ್ರ ಕಟ್ಟುವ ರಥಗಳು ಕಾಣಸಿಗುತ್ತವೆ. ಈ ಕಟ್ಟುವ ರಥಗಳು ಮುಖ್ಯವಾಗಿ ನಾಲ್ಕು ಹಂತಗಳಲ್ಲಿ ನಿರ್ಮಾಣಗೊಳ್ಳುವವು.

೧. ಅಡಿಪಾಯ ಭಾಗದ ತಯಾರಿಕೆ.

೨. ವಿವಿಧ ವಸ್ತುಗಳಿಂದ ಅಟ್ಟಗಳನ್ನು ಕಟ್ಟುವದು.

೩. ಬಣ್ಣದ ಬಟ್ಟೆಗಳು ಹಾಗೂ ಕಾಗದಗಳ ಬಳಕೆ.

೪. ಪತ್ರ, ಫಲ, ಪುಷ್ಪಗಳಿಂದ ಅಲಂಕಾರ.

ಈ ನಾಲ್ಕೂ ಹಂತಗಳಲ್ಲಿಯ ರಚನಾ ವಿಧಾನಗಳನ್ನು ತಿಳಿಯೋಣ.

೧. ಅಡಿಪಾಯ ಭಾಗದ ತಯಾರಿಕೆ : ಕಟ್ಟುವ ರಥದ ಅಡಿಪಾಯ ಭಾಗವು ಚಕ್ರಗಳು ಅಚ್ಚುಗಳು ಹಾಗೂ ತೊಲೆಗಳನ್ನು ಹೊಂದಿರುತ್ತದೆ. ಈ ರಥಗಳಿಗೆ ಹೆಚ್ಚಾಗಿ ಶಿಲೆಯ ಚಕ್ರಗಳನ್ನೇ ಅಳವಡಿಸುವರು. ಕಾಷ್ಠ ಮಾಧ್ಯಮದ ಗಡ್ಡಿ ರಥದ ಶಿಲೆಯ ಚಕ್ರಗಳನ್ನು ಯಾವ ವಿಧಾನದಲ್ಲಿ ತಯಾರಿಸುವರೋ ಅದೇ ವಿಧಾನದಿಂದ ಶಿಲೆಯ ಚಕ್ರಗಳನ್ನು ತಯಾರಿಸುವರು. ಈ ಚಕ್ರಗಳು ಪ್ರತಿ ವರ್ಷ ನಡೆಯುವ ಉತ್ಸವದಲ್ಲಿ ಉಪಯೋಗವಾಗುವವು. ಇದರಂತೆ ದೊಡ್ಡ ದೊಡ್ಡ ಮರಗಳ ದಿಮ್ಮೆಗಳಿಂದ ಅಚ್ಚುಗಳನ್ನು ಹಾಗೂ ತೊಲೆಗಳನ್ನು ಉದ್ದ ಹಾಗೂ ಆಯತಾಕಾರಗಳಲ್ಲಿ ತಯಾರಿಸುವರು. ಇವುಗಳನ್ನು ಸಹ ಪ್ರತಿ ವರ್ಷ ಉಪಯೋಗಿಸುವರು. ಕಾಷ್ಠ ಮಾಧ್ಯಮದ ಗಡ್ಡೆ

ಸಂಕೀರ್ಣ ಮಾಧ್ಯಮದ ರಥಗಳ ರಚನಾ ವಿಧಾನ

- ಕಟ್ಟುವ ರಥಗಳ ರಚನಾ ವಿಧಾನ
  - ಅಡಿಪಾಯ ಭಾಗದ ತಯಾರಿಕೆ
  - ವಿವಿಧ ವಸ್ತುಗಳಿಂದ ಅಟ್ಟಗಳನ್ನು ಕಟ್ಟುವದು
  - ಬಣ್ಣದ ಬಟ್ಟೆಗಳು ಹಾಗೂ ಕಾಗದಗಳ ಬಳಕೆ
  - ಪತ್ರ ಫಲ ಪುಷ್ಪಗಳಿಂದ ಅಲಂಕಾರ
- ತಟ್ಟಿಯ ರಥಗಳ ರಚನಾ ವಿಧಾನ
  - ಅಡಿಪಾಯ ಭಾಗದ ತಯಾರಿಕೆ
  - ಹಲಗೆ ಬಿದಿರು ಮತ್ತು ಅಡಿಕೆ ಪಟ್ಟಿಗಳಿಂದ ಅಟ್ಟಗಳನ್ನು ಕಟ್ಟುವದು
  - ತಟ್ಟಿಗಳ ಮೇಲೆ ಚಿತ್ರ ರಚನೆ ಹಾಗೂ ಅವುಗಳ ಜೋಡನೆ
  - ಪತ್ರ ಫಲ ಪುಷ್ಪಗಳ ಅಲಂಕಾರ
- ಹೂವಿನ ರಥಗಳ ರಚನಾ ವಿಧಾನ
  - ಅಡಿಪಾಯ ಭಾಗದ ತಯಾರಿಕೆ
  - ಬಾಳೆದಿಂಡು ಹಾಗೂ ಮುಳ್ಳುಗಳ ಜೋಡನೆ
  - ವಿವಿಧ ಪುಷ್ಪಾಲಂಕಾರ
- ತೆಪ್ಪದ ರಥಗಳ ರಚನಾ ವಿಧಾನ
  - ತೆಪ್ಪದ ಮತ್ತು ಬಾಳೆ ದಿಂಡುಗಳ ಜೋಡನೆ
  - ದೀಪಗಳ ಮತ್ತು ಪುಷ್ಪಗಳ ಅಲಂಕಾರ

ಶಿಲಾ ಮಾಧ್ಯಮದ ರಥಗಳ ರಚನಾ ವಿಧಾನ

- ದೊಡ್ಡ ಗಾತ್ರದ ಬಂಡೆಗಳ ಆಯ್ಕೆ
- ಪ್ರಮಾಣ ಬದ್ಧ ನೀಲ ನಕ್ಷೆಗಳ ತಯಾರಿಕೆ
- ಬಂಡೆಗಳನ್ನು ಕೊರೆದು ರಥ ನಿರ್ಮಾಣ

ರಥಗಳ ಅಡಿಪಾಯ ಭಾಗವನ್ನು ರಚಿಸುವಂತೆ, ಚಕ್ರಗಳು, ಅಚ್ಚುಗಳು ಹಾಗೂ ತೊಲೆಗಳನ್ನು ಉಪಯೋಗಿಸಿ, ಕಟ್ಟುವ ರಥದ ಅಡಿಪಾಯವನ್ನು ಭದ್ರವಾಗಿ ತಯಾರಿಸುವರು. ಇನ್ನು ಕೆಲವು ಪ್ರದೇಶಗಳಲ್ಲಿ ಆಧುನಿಕ ವಾಹನಗಳಾದ ಲಾರಿ ಅಥವಾ ಟ್ರ್ಯಾಕ್ಟರ್‌ಗಳ ಓಂಬದಿಯ ಡಬ್ಬಿಗಳನ್ನು ರಥದ ಅಡಿಪಾಯಕ್ಕೆ ಉಪಯೋಗಿಸುವರು. ಇನ್ನೂ ಕೆಲವು ಪ್ರದೇಶಗಳಲ್ಲಿ ಎತ್ತಿನ ಬಂಡಿಗಳನ್ನು ಅಡಿಪಾಯಕ್ಕಾಗಿ ಉಪಯೋಗಿಸುವರು. ಈ ರೀತಿಯಲ್ಲಿ ರಥವನ್ನು ಕಟ್ಟಲು ಅನುಕೂಲವಾಗುವಂತಹ ವಿವಿಧ ವಸ್ತುಗಳಿಂದ ಅಡಿಪಾಯವನ್ನು ಭದ್ರಪಡಿಸುವರು.

೨. ವಿವಿಧ ವಸ್ತುಗಳಿಂದ ಅಟ್ಟಗಳನ್ನು ಕಟ್ಟುವುದು : ಕಟ್ಟುವ ರಥವನ್ನು ನಿರ್ಮಿಸಲು , ಭದ್ರವಾದ ಅಡಿಪಾಯದ ಮೇಲೆ ಮಂಟಪ ಹಾಗೂ ಗೋಪುರ ಭಾಗಗಳ ನಿರ್ಮಾಣ ಮಾಡಲು ವಿವಿಧ ವಸ್ತುಗಳಿಂದ ಅಥವಾ ಬಿದಿರುಗಳಿಂದ ಚೌಕಾಕಾರದ ವಿನ್ಯಾಸವಾಗುವಂತೆ ಅವುಗಳನ್ನು ಒಂದಕ್ಕೊಂದು ಉದ್ದ ಹಾಗೂ ಅಡ್ಡಲಾಗಿ ಹೊಂದಿಕೆಯಾಗುವಂತೆ ಸರಿಯಾಗಿ ಬಿಗಿದು ಕಟ್ಟುವರು. ಇಲ್ಲವೆ ಮರದ ಹಲಗೆಗಳು ಅಂಚುಗಳು ಒಂದನ್ನೊಂದು ಸೇರುವಂತೆ ಕೀಲುಗಳನ್ನು ತಯಾರಿಸಿ, ಎಲ್ಲ ಮರದ ಹಲಗೆಗಳು, ಕೀಲುಗಳಲ್ಲಿ ಹೊಂದಿಕೊಂಡು ಕೂಡುವಂತೆ ಮಾಡಿ ನಟ್ ಬೋಲ್ಟ್‌ಗಳಿಂದ ಬಿಗಿಯುವರು. ಮಂಟಪ ಭಾಗವನ್ನು ದುಂಡಾಕಾರಲ್ಲಿ ಮಂಟಪದಿಂದ ಮೇಲೆ ಹೋದಂತೆ ಸಣ್ಣದಾಗುವಂತೆ ಬಿದಿರುಗಳಿಂದ ತಯಾರಿಸುವರು. ಮಂಟಪ ಭಾಗದಲ್ಲಿ ಕಂಬ ಹಾಗೂ ಕಮಾನುಗಳಂತೆ ಕಾರ್ಡ್‌ಬೋರ್ಡ್‌ಗಳನ್ನು ಕತ್ತರಿಸಿ, ಅವುಗಳನ್ನು ಮೊಳೆಗಳ ಸಹಾಯದಿಂದ ಮತ್ತು ಸುತುಳಿ ಅಥವಾ ಚರಿಯ ಸಹಾಯದಿಂದ ಗಟ್ಟಿಯಾಗಿ ಬಿಗಿಯುವರು. ಎಲ್ಲ ಬಿದಿರುಗಳು ಅಥವಾ ಹಲಗೆಗಳು ಅಲುಗಾಡದಂತೆ ನಿಲ್ಲಲು ಪ್ರತಿಯೊಂದು ಬಿದಿರುಗಳಿಗೆ ಒಂದೊಂದು ಆಧಾರಪಟ್ಟಿಗಳನ್ನು ಕೊಡುವರು. ಎಲ್ಲ ಹಲಗೆಗಳು ಹಾಗೂ ಬಿದಿರುಗಂಬಗಳು ಗಟ್ಟಿಯಾಗಿ ನಿಲ್ಲಲು ಒಂದಕ್ಕೊಂದು ಬಿಡದಂತೆ ಗಟ್ಟಿಯಾಗಿ ಜೋಡಣೆಯಾಗಲು ಸಣ್ಣ ತಂತಿ ಅಥವಾ ಟಯರ್‌ಗಳನ್ನು ಕಟ್ಟಲು ಉಪಯೋಗಿಸುವರು. ಹೀಗೆ ಮೊದಲು ವಿವಿಧ ವಸ್ತುಗಳಿಂದ ಅಟ್ಟಗಳನ್ನು ಕಟ್ಟುವರು.

೩. ಬಣ್ಣದ ಬಟ್ಟೆಗಳು ಹಾಗೂ ಕಾಗದಗಳ ಬಳಕೆ: ಸರಿಯಾಗಿ ಅಟ್ಟಗಳನ್ನು ಕಟ್ಟಿದ ನಂತರ ಮಂಟಪಭಾಗ ಹಾಗೂ ಗೋಪುರ ಭಾಗಗಳನ್ನು ಸುಂದರಗೊಳಿಸಲು ಬಣ್ಣ ಬಣ್ಣದ ಬಟ್ಟೆಗಳು ಹಾಗೂ ಬಣ್ಣ ಬಣ್ಣದ ಕಾಗದಗಳನ್ನು ಬಳಸುವರು. ಮಂಟಪ ಭಾಗದಲ್ಲಿ ಕಮಾನು ಹಾಗೂ ಕಂಬಗಳ ಆಕಾರದಲ್ಲಿ ಕತ್ತರಿಸಿದ ಕಾರ್ಡ್‌ಬೋರ್ಡ್‌ಗಳ ಮೇಲೆ ಬೇರೆ ಬೇರೆ ರೀತಿಯ ಬಣ್ಣದ ಕಾಗದಗಳಿಂದ ವಿವಿಧ ವಿನ್ಯಾಸಗಳನ್ನು ರಚಿಸಿ ಅಂಟಿಸುವರು. ಕಾರ್ಡ್‌ಬೋರ್ಡ್ ಹಾಗೂ ಅಗಲವಾದ ಹಲಗೆಗಳಿಂದ ಮಾಡಿದ ಪೀಠಕ್ಕೆ ಬಣ್ಣದ ಕಾಗದಗಳಿಂದ ನಕ್ಷೆಗಳನ್ನು ತಯಾರಿಸಿ, ಅಂಟಿಸುವರು. ಮಂಟಪ ಭಾಗದ ನಾಲ್ಕೂ ದಿಕ್ಕುಗಳಲ್ಲಿ ಶಿವಶರಣರ ಅಥವಾ ದೇವಾನುದೇವತೆಯರ ಕ್ಯಾಲೆಂಡರ್‌ಗಳನ್ನು ಅಂಟಿಸುವರು. ಕೆಲವು ರಥಗಳಲ್ಲಿ ಗೋಪುರ ಭಾಗದವರೆಗೆ ಇರುವ ಅಟ್ಟಗಳನ್ನು ಮತ್ತು ಬಣ್ಣ ಬಣ್ಣದ ಮುದ್ರಣದ ಕ್ಯಾಲೆಂಡರ್‌ಗಳನ್ನು ಉಪಯೋಗಿಸಿ, ಸುಂದರಗೊಳಿಸುವರು. ಬಿದಿರು ಹಾಗೂ ಹಲಗೆಗಳಿಂದ ನಿರ್ಮಾಣಗೊಂಡ ಅಟ್ಟಗಳನ್ನು ಕಾಣದಂತೆ ಮಾಡಲು ಬಣ್ಣ ಬಣ್ಣದ ಬಟ್ಟೆಗಳನ್ನು ಮಂಟಪ ಭಾಗದಿಂದ ಗೋಪುರದವರೆಗೆ ಹೊದಿಸುವರು, ಬಟ್ಟೆಗಳು ಸರಿಯಾಗಿ ಹೊದಿಕೆಯಾಗಲು ಅಲ್ಲಲ್ಲಿ ದಾರದಿಂದ ಹೊಲಿಯುವರು. ದುಂಡಾಕಾರದಲ್ಲಿ ಬಿದಿರು ಪಟ್ಟಿಗಳಿಂದ

ಹಾಗೂ ಕಬ್ಬಿಣದ ಛಡಿಗಳಿಂದ ಮಾಡಿದ ಶಿಖರದ ಭಾಗಕ್ಕೆ ಕೆಂಪು ಬಣ್ಣದ ಬಟ್ಟೆಯನ್ನು ಸುತ್ತಿ ಸುಂದರ ಕಾಣುವಂತೆ ನೀರಿಗೆಗಳನ್ನು ಮಾಡಿ ಹೊದಿಸುವರು. ಕೆಲವು ರಥಗಳಿಗೆ ಮಂಟಪ ಭಾಗದಲ್ಲಿ ಅಳವಡಿಸಲಾದ ಕಾರ್ಡ್‌ಬೋರ್ಡ್‌ಗಳ ಮೇಲೆ ನಂದಿ, ಲಿಂಗ, ಎಲೆ, ಬಳ್ಳಿಯ ನಕ್ಷೆಗಳು ನವಿಲು, ಗಿಳಿ ಗರುಡ ಹೀಗೆ ಇಂತಹ ವರ್ಣಚಿತ್ರಗಳನ್ನು ಸುಂದರವಾಗಿ ರಚಿಸುವರು. ಪ್ರತಿಯೊಂದು ಅಟ್ಟಗಳ ಅಂಚುಗಳಿಗೆ ವಿವಿಧ ಬಣ್ಣದ ನೀರಿಗೆಯ ವಿನ್ಯಾಸದ ಉದ್ದವಾದ ಬಟ್ಟೆಗಳನ್ನು ಗಾಳಿಗೆ ಹಾರಾಡುವಂತೆ ಸುತ್ತುವರು. ಹೀಗೆ ವಿವಿಧ ಬಣ್ಣಗಳ ಬಟ್ಟೆಗಳಿಂದ, ಕಾಗದಗಳಿಂದ ಹಾಗೂ ವರ್ಣಗಳಿಂದ ಚಿತ್ರಿತಗೊಂಡ ಕಾರ್ಡ್‌ಬೋರ್ಡ್‌ಗಳಿಂದ ಹಾಗೂ ಕ್ಯಾಲೆಂಡರ್‌ಗಳಿಂದ ರಥದ ಮಂಟಪ ಹಾಗೂ ಗೋಪುರ ಭಾಗಗಳನ್ನು ನಿರ್ಮಿಸುವರು.

೪. ಪತ್ರ ಫಲ ಪುಷ್ಪಗಳಿಂದ ಅಲಂಕಾರ : ರಥದ ಮಂಟಪ ಹಾಗೂ ಗೋಪುರ ಭಾಗಗಳು ಬಣ್ಣ ಬಣ್ಣದ ಕಾಗದಗಳಿಂದ ಹಾಗೂ ಬಟ್ಟೆಗಳಿಂದ ಆವೃತಗೊಂಡು ಸುಂದರವಾದ ನಂತರ ತಳಿರು ತೋರಣಗಳಿಂದ ರಥವನ್ನು ಅಲಂಕಾರಗೊಳಿಸುವರು. ಮಂಟಪಭಾಗದಲ್ಲಿ ಕಮಾನುಗಳ ಎರಡೂ ಬದಿಗಳಲ್ಲಿರುವ ಕಂಬಗಳಿಗೆ ಬಾಳೆದಿಂಡುಗಳನ್ನು ಕಟ್ಟುವರು. ಇದಲ್ಲದೆ ಬಾಳೆಗಿಡಗಳನ್ನು ಸಹ ಕಟ್ಟುವರು. ಮಾವಿನ ಎಲೆಗಳನ್ನು ದಾರದಲ್ಲಿ ಪೋಣಿಸಿ, ರಥದ ಮಂಟಪ ಭಾಗದ ಅಟ್ಟದ ಮೇಲ್ಭಾವಣಿಯ ಸುತ್ತಲೂ ಕಟ್ಟುವರು. ಲಿಂಬೆ ಹಣ್ಣುಗಳನ್ನು ದಾರದಲ್ಲಿ ಪೋಣಿಸಿ, ಅವುಗಳಿಗೆ ಕುಂಕುಮವನ್ನು ಹಚ್ಚಿ, ದಾರದಿಂದ ರಥದ ಮಂಟಪದ ಪ್ರತಿಯೊಂದು ಮೂಲೆಯಲ್ಲಿ ನೇತು ಬಿಡುವರು. ಮಂಟಪದ ಮಧ್ಯಭಾಗದ ಕಮಾನಿನ ಮೇಲ್ಭಾಗದಲ್ಲಿ ತೆಂಗಿನಕಾಯಿಗಳನ್ನು ಕಟ್ಟುವರು. ಶಿಖರದ ಭಾಗಕ್ಕೆ ಹತ್ತಿರವಾಗುವಂತೆ ಗೋಪುರದ ಭಾಗದಲ್ಲಿ ತೆಂಗಿನ ಗರಿಗಳನ್ನು ಕಟ್ಟುವರು. ವಿವಿಧ ಪುಷ್ಪಗಳಿಂದ ಮಾಡಲಾದ ಉದ್ದವಾದ ಹಾರಗಳನ್ನು ಮಂಟಪ ಹಾಗೂ ಶಿಖರ ಭಾಗಗಳಲ್ಲಿ ವಿವಿಧ ವಿನ್ಯಾಸಗಳಲ್ಲಿ ನೇತು ಬಿಡುವರು. ಅಲ್ಲದೆ ಚಕ್ರಗಳ ಕೀಲುಗಳುಳ್ಳ ಭಾಗದಲ್ಲಿ ಹೂವಿನ ಹಾರಗಳನ್ನು ಸುತ್ತುವರು. ಇದೆಲ್ಲ ಆದ ನಂತರ ಶಿಖರದ ಮೇಲೆ ತಾಮ್ರದ ಅಥವಾ ಹಿತ್ತಾಳೆಯ ಕಳಶವನ್ನಿಟ್ಟು ಅದರ ಮೇಲೆ ಒಂದು ಬಣ್ಣದ ಛತ್ರಿಯನ್ನು ಕಟ್ಟುವರು. ಗೋಪುರ ಭಾಗದಲ್ಲಿ ಬಣ್ಣ ಬಣ್ಣದ ಧ್ವಜಗಳನ್ನು ಕಟ್ಟಿ ರಥವನ್ನು ಸುಂದರಗೊಳಿಸುವರು. ಹೀಗೆ ಕಟ್ಟುವ ರಥವನ್ನು ನಿರ್ಮಾಣ ಮಾಡುವರು.

ಬ. ತಟ್ಟೆಯ ರಥಗಳ ರಚನಾ ವಿಧಾನ :

ಸಂಕೀರ್ಣ ಮಾಧ್ಯಮದಲ್ಲಿ ಒಂದು ವಿಧವಾದ ತಟ್ಟೆಯ ರಥಗಳನ್ನು ನಾಲ್ಕು ಹಂತಗಳಲ್ಲಿ ನಿರ್ಮಾಣ ಮಾಡುವರು.

೧. ಅಡಿಪಾಯ ಭಾಗದ ತಯಾರಿಕೆ.

೨. ಹಲಗೆ, ಬಿದಿರು ಹಾಗೂ ಅಡಿಕೆ ಪಟ್ಟಿಗಳಿಂದ ಅಟ್ಟಗಳನ್ನು ಕಟ್ಟುವದು.

೩. ತಟ್ಟಿಗಳ ಮೇಲೆ ಚಿತ್ರರಚನೆ ಹಾಗೂ ಅವುಗಳ ಜೋಡಣೆ.

೪. ಪತ್ರ, ಫಲ, ಪುಷ್ಪಗಳಿಂದ ಅಲಂಕಾರ.

ಈ ನಾಲ್ಕೂ ಹಂತಗಳ ರಚನಾ ವಿಧಾನಗಳನ್ನು ವಿವರವಾಗಿ ತಿಳಿಯುವಾ.

೧. ಅಡಿಪಾಯ ಭಾಗದ ತಯಾರಿಕೆ : ತಟ್ಟಿಯ ರಥಗಳ ಅಡಿಪಾಯ ಭಾಗವು ಚಕ್ರಗಳು, ಅಚ್ಚುಗಳು ಹಾಗೂ ತೊಲೆಗಳನ್ನು ಹೊಂದಿರುತ್ತದೆ. ಈ ಎಲ್ಲ ಬಿಡಿ ಭಾಗಗಳ ಹೊಂದಿಸುವಿಕೆಯು ಕಟ್ಟುವ ರಥದ ಅಡಿಪಾಯ ಭಾಗದ ಹೊಂದಿಸುವ ವಿಧಾನದಂತೆಯೇ ಇರುತ್ತದೆ. ಆದರೆ ಈ ರಥಕ್ಕೆ ಮರದ ದೊಡ್ಡ ದೊಡ್ಡ ಹಲಗೆಗಳಿಂದ ತಯಾರಿಸಲಾದ ಗಾಲಿಗಳಿರುತ್ತವೆ. ಹಲಗೆಯ ಗಾಲಿಗಳ ತಯಾರಿಕಾ ವಿಧಾನವನ್ನು ಈಗಾಗಲೇ ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಚಕ್ರಗಳ ತಯಾರಿಕಾ ವಿಧಾನಗಳಲ್ಲಿ ವಿವರವಾಗಿ ತಿಳಿಯಲಾಗಿದೆ.

೨. ಹಲಗೆ ಬಿದಿರು ಹಾಗೂ ಅಡಿಕೆ ಪಟ್ಟಿಗಳಿಂದ ಅಟ್ಟಗಳ ನಿರ್ಮಾಣ: ಭದ್ರವಾದ ಅಡಿಪಾಯದ ಮೇಲೆ ಮರದ ಉದ್ದ ಹಾಗೂ ಅಗಲವಾದ ಹಲಗೆಗಳನ್ನು ಅಡ್ಡಡ್ಡಲಾಗಿ ಹೊಂದಿಸಿ, ನಟ್ ಬೋಲ್ಟ್‌ಗಳಿಂದ ಸರಿಯಾಗಿ ಬಿಗಿದು, ಗಟ್ಟಿಗೊಳಿಸುವರು. ಮರದ ಹಲಗೆಗಳಿಗೆ ಕೀಲುಗಳನ್ನು ಮಾಡಿ ಪ್ರತಿಯೊಂದು ಹಲಗೆಗಳನ್ನು ಕೀಲುಗಳಲ್ಲಿ ಸರಿಯಾಗಿ ಸೇರಿಸಿ, ಚರಿ ಅಥವಾ ಖಾತಿಯಿಂದ ಬಿಗಿದು ಕಟ್ಟುವರು. ರಥದ ಮಂಟಪ ಭಾಗವನ್ನು ಮರದ ಉದ್ದ ಹಲಗೆಗಳಿಂದಲೇ ನಿರ್ಮಾಣ ಮಾಡುವರು. ಮಂಟಪ ಭಾಗದ ಮೇಲೆ ಬರುವಂತಹ ಗೋಪುರ ಭಾಗವನ್ನು ಉದ್ದವಾದ ಬಿದಿರುಗಳಿಂದ ನಿರ್ಮಾಣ ಮಾಡುವರು. ಮಂಟಪ ಭಾಗದ ಮೇಲೆ, ಬಿದಿರುಗಳು ಮೇಲೆ ಹೋದಂತೆ ಅವುಗಳ ಕೊನೆಗಳೆಲ್ಲವೂ ಸಮೀಪಿಸುವಂತೆ ಕಟ್ಟಿ, ಅವುಗಳಿಗೆ ಆಧಾರ ಪಟ್ಟಿಗಳನ್ನು ಕೂಡಿಸುವರು. ಎಲ್ಲ ಬಿದಿರುಗಳು ಸರಿದಾಡದಂತೆ ಮಾಡಲು ಪ್ರತಿಯೊಂದು ಬಿದಿರುಗಳಿಗೆ ತಾಗಿ ಹೋಗುವಂತೆ ಒಂದು ಅಡಿಕೆ ಪಟ್ಟಿಯನ್ನು ವೃತ್ತಾಕಾರವನ್ನಾಗಿ ಮಾಡಿ, ಬಿದಿರುಗಳಿಗೆ ಸುತ್ತಿ ಮೊಳೆಗಳಿಂದ ಗಟ್ಟಿಗೊಳಿಸುವರು. ಗೋಪುರ ಭಾಗದಲ್ಲಿರುವ ಬಿದಿರುಗಳು ಇನ್ನೂ ಗಟ್ಟಿಗೊಳ್ಳಲು ಸಮಾನಾಂತರದಲ್ಲಿ ಅಡಿಕೆ ಪಟ್ಟಿಕೆಗಳನ್ನು ಬಿಗಿದು, ಸುತುಳಿ ಇಲ್ಲವೆ ಖಾತಿಯಿಂದ ಕಟ್ಟುವರು. ಹೀಗೆ ಹಲಗೆಗಳಿಂದ, ಬಿದಿರುಗಳಿಂದ ಹಾಗು ಅಡಿಕೆ ಪಟ್ಟಿಗಳಿಂದ ತಟ್ಟಿರಥದ ಅಟ್ಟವನ್ನು ತಯಾರಿಸುವರು.

೩. ತಟ್ಟಿಗಳ ಮೇಲೆ ಚಿತ್ರ ರಚನೆ ಹಾಗೂ ಅವುಗಳ ಜೋಡಣೆ : ತಟ್ಟಿರಥಗಳ ನಿರ್ಮಾಣ ಕಾರ್ಯದಲ್ಲಿ ಮುಖ್ಯವಾಗಿ ತಟ್ಟಿಗಳ ಅಥವಾ ಚಾಪೆಗಳ ಉಪಯೋಗ ಪ್ರಧಾನವಾಗಿ ಕಂಡು ಬರುತ್ತದೆ. ಬೇರೆ ಬೇರೆ ಉದ್ದಗಲಗಳಲ್ಲಿರುವ ತಟ್ಟಿಗಳ ಮೇಲೆ ಚಿತ್ರ ರಚನೆಯ ಕಾರ್ಯವು ಪ್ರಾರಂಭವಾಗುವುದಕ್ಕಿಂತ ಮೊದಲು ಆ ತಟ್ಟಿಗಳ ಮೇಲೆ ವಯರ್ ಬ್ರಶ್‌ನ ಸಹಾಯದಿಂದ ಬಿಳಿ ಬಣ್ಣದ ವಾಶ್ ಮಾಡುವರು. ನಂತರ ರಾಮಾಯಣ, ಮಹಾಭಾರತ, ದಶಾವತಾರ, ನವಗ್ರಹ ಮತ್ತು ಪುರಾಣ ಪುಣ್ಯಕಥೆಗಳ ಸನ್ನಿವೇಶಗಳು, ಇವಲ್ಲದೆ ಪ್ರಾಣಿ ಪಕ್ಷಿಗಳು, ಎಲೆಗಿಡ ಹೂಗಳು ಅನೇಕ ನಕ್ಷೆಗಳು ಹೀಗೆ ಸಾಂಪ್ರದಾಯಿಕ ಶೈಲಿಯಲ್ಲಿ ವಿವಿಧ ರೇಖಾ ಚಿತ್ರಗಳನ್ನು ಸುಂದರವಾಗಿ ಬರೆದು ಅವುಗಳಿಗೆ ಸನ್ನಿವೇಶಗಳಿಗೆ ತಕ್ಕಂತೆ ವರ್ಣಗಾರಿಕೆಯನ್ನು ಮಾಡುವರು. ಅನೇಕ ಜನ ಕಲಾವಿದರು ಸೇರಿ ತಟ್ಟಿಗಳ ಮೇಲೆ ಸುಂದರ ವರ್ಣಗಾರಿಕೆಯ ಕೆಲಸವನ್ನು ಪೂರ್ಣಗೊಳಿಸಿದ ಮೇಲೆ ಎಲ್ಲ ತಟ್ಟಿಗಳಿಗೆ ಟ್ರಾನ್ಸ್‌ಪರಂಟ್ ವಾರ್ನಿಸನ್ನು ಲೇಪಿಸುವರು.

ಎಲ್ಲ ತಟ್ಟಿಗಳಲ್ಲಿ ವರ್ಣಚಿತ್ರಗಳು ರೂಪುಗೊಂಡ ನಂತರ ಅವುಗಳನ್ನು ರಥದ ಅಡಿಪಾಯ ಭಾಗದಿಂದ ಗೋಪುರದ ಭಾಗದವರೆಗೆ ಸರಿಯಾಗಿ ಹೊಂದಿಸಿ, ಅಟ್ಟಗಳಲ್ಲಿ ಬಿದಿರುಗಳು, ಹಲಗೆಗಳು ಹಾಗೂ ಅಡಿಕೆ ಪಟ್ಟಿಗಳು ಹೊರಗೆ ಕಾಣದಂತೆ ಮಾಡುವರು. ರಥದ ಅಡಿಪಾಯ ಭಾಗದಿಂದ ಗೋಪುರ ಭಾಗದವರೆಗೆ ಸಂಪೂರ್ಣವಾಗಿ ಆವೃತಗೊಂಡ ವರ್ಣಚಿತ್ರಗಳನ್ನೊಳಗೊಂಡ ತಟ್ಟಿಗಳು

ರಥದ ಸೌಂದರ್ಯವನ್ನು ವೃದ್ಧಿಸುವವು.

೪. ಪತ್ರ, ಫಲ, ಪುಷ್ಪಗಳಿಂದ ಅಲಂಕಾರ : ವರ್ಣಚಿತ್ರಗಳನ್ನು ಒಳಗೊಂಡ ಎಲ್ಲ ತಟ್ಟಿಗಳು ರಥದ ಪ್ರತಿಯೊಂದು ಭಾಗದಲ್ಲಿ ಜೋಡಣೆಯಾದ ನಂತರ ರಥಕ್ಕೆ ವಿವಿಧ ಪತ್ರ, ಪುಷ್ಪಗಳಿಂದ ಅಲಂಕಾರ ಮಾಡುವರು. ಮಾವಿನ ಎಲೆಗಳಂತಹ ಉದ್ದವಾದ ಬೇರೆ ಬೇರೆ ಎಲೆಗಳನ್ನು ದಾರದಿಂದ ಪೋಣಿಸಿ, ಉದ್ದವಾದ ಎಲೆಗಳ ಹಾರಗಳನ್ನು ವಿವಿಧ ರೀತಿಯಲ್ಲಿ ಮಂಟಪ ಭಾಗದಲ್ಲಿ ಸುತ್ತುವರೆಯುವಂತೆ ಕಟ್ಟುವರು. ಮಂಟಪ ಭಾಗದ ನಾಲ್ಕೂ ಭುಜಗಳಲ್ಲಿ ಬಾಳೆ ಗಿಡಗಳನ್ನು ಹಾಗೂ ತೆಂಗಿನ ಗರಿಗಳನ್ನು ಕಟ್ಟುವರು. ರಥದ ಶಿಖರ ಭಾಗದಲ್ಲಿ ಯಾವ ನಿಶಾನೆಗಳಾಗಲಿ, ಪತಾಕೆಗಳಾಗಲಿ ಹೆಚ್ಚು ಇರುವುದಿಲ್ಲ. ಗೋಪುರದ ತುದಿಯಲ್ಲಿ ಕಳಸವನ್ನಿಟ್ಟು ಅದರ ಮೇಲೆ ಒಂದು ಬಣ್ಣದ ಕೊಡೆಯನ್ನು ಕಟ್ಟುವರು. ಕಳಸದ ಸುತ್ತಲೂ ಗೋಪುರದ ತುದಿಯಲ್ಲಿ ವಿವಿಧ ಹೂವಿನ ಹಾರಗಳಿಂದ ಸುತ್ತಿ ಅಲಂಕಾರಗೊಳಿಸುವರು. ರಥದ ಮಂಟಪದ ಪೀಠದ ಭಾಗದಲ್ಲಿ ಹೂವುಗಳು ಹಾಗೂ ವಿವಿಧ ಫಲಗಳನ್ನು ತಟ್ಟೆಯಲ್ಲಿ ಇಡುವರು. ದೀಪಗಳನ್ನು ಅಳವಡಿಸುವರು. ಈ ರೀತಿಯಲ್ಲಿ ತಟ್ಟಿಯ ರಥಗಳು ಪೂರ್ಣವಾಗಿ ಸುಂದರವಾಗಿ ನಿರ್ಮಾಣಗೊಳ್ಳುತ್ತವೆ.

ಕ. ಹೂವಿನ ರಥಗಳ ರಚನಾ ವಿಧಾನಗಳು :

ಸಂಕೀರ್ಣ ರ ಮಾಧ್ಯಮದ ಮತ್ತೊಂದು ವಿಧವಾದ ಹೂವಿನ ರಥಗಳು ಮೂರು ಹಂತಗಳಲ್ಲಿ ನಿರ್ಮಾಣಗೊಳ್ಳುತ್ತವೆ.

೧. ಅಡಿಪಾಯ ಭಾಗದ ತಯಾರಿಕೆ

೨. ಬಾಳೆದಿಂಡು ಹಾಗೂ ಮುಳ್ಳುಗಳ ಜೋಡಣೆ.

೩. ವಿವಿಧ ಪುಷ್ಪಾಲಂಕಾರ.

ಈ ಮೂರೂ ಹಂತಗಳಲ್ಲಿಯ ರಚನಾ ವಿಧಾನಗಳನ್ನು ವಿವರವಾಗಿ ತಿಳಿಯೋಣ.

೧. ಅಡಿಪಾಯ ಭಾಗದ ತಯಾರಿಕೆ : ಹೂವಿನ ರಥಗಳು ಚಿಕ್ಕ ಪ್ರಮಾಣದಲ್ಲಿ ನಿರ್ಮಾಣವಾಗುವುದರಿಂದ ಈ ರಥಗಳ ಅಡಿಪಾಯವು ಚಿಕ್ಕದಾಗಿಯೇ ನಿರ್ಮಾಣಗೊಳ್ಳುತ್ತದೆ. ಸಣ್ಣ ಸಣ್ಣ ಮಧ್ಯಮ ಗಾತ್ರದ ಮರದ ಹಲಗೆಗಳಿಂದ ಸಣ್ಣ ಪ್ರಮಾಣದ ಗಾಲಿಗಳನ್ನು ತಯಾರಿಸಿ, ಅದಕ್ಕೆ ಹೊಂದಾಣಿಕೆಯಾಗುವಂತಹ ಅಚ್ಚು ಹಾಗೂ ತೊಲೆಗಳನ್ನು ಮರದ ದಿಂಡುಗಳನ್ನು ಕೊರೆದು ತಯಾರಿಸಿ, ಅವುಗಳನ್ನು ಕಟ್ಟುವ ರಥಗಳ ಅಡಿಪಾಯ ಭಾಗದ ಚಕ್ರ, ಅಚ್ಚು ಹಾಗೂ ತೊಲೆಗಳನ್ನು ಸರಿಯಾಗಿ ಹೊಂದಿಸುವ ವಿಧಾನದಲ್ಲಿ ಹೊಂದಿಸಿ, ಗಟ್ಟಿಯಾದ ಅಡಿಪಾಯ ಭಾಗದ ನಿರ್ಮಾಣ ಮಾಡುವರು.

೨. ಬಾಳೆದಿಂಡುಗಳು ಹಾಗೂ ಮುಳ್ಳುಗಳ ಜೋಡಣೆ : ಮರದ ಚಕ್ರಗಳನ್ನುಳ್ಳ ಅಡಿಪಾಯದ ಮೇಲೆ ನಾಲ್ಕು ಬಿದಿರುಗಳನ್ನು ಕಂಬಗಳಂತೆ ತಂತಿಯಿಂದ ಕಟ್ಟಿ, ಆ ಬಿದಿರುಗಂಬಗಳಿಗೆ ಉದ್ದವಾದ ಮತ್ತು ದಪ್ಪವಾದ ಬಾಳೆ ದಿಂಡುಗಳನ್ನು ಕಟ್ಟುವರು. ಈ ದಿಂಡುಗಳನ್ನು ಆಧಾರವನ್ನಾಗಿ ಮಾಡಿಕೊಂಡು ಅಡ್ಡಡ್ಡಲಾಗಿ ಸಮಾನ ಅಂತರದಲ್ಲಿ ಸಣ್ಣ ಗಾತ್ರದ ಬಾಳೆದಿಂಡುಗಳನ್ನು ಮಂಟಪದ

ಆಕಾರದಲ್ಲಿ ಸುತುಳಿ ಅಥವಾ ಕಾಂತಿಯಿಂದ ಬಿಗಿಯಾಗಿ ಕಟ್ಟುವರು.

ಹೀಗೆ ಕಟ್ಟುವುದರಿಂದ ಮಂಟಪ ಭಾಗವನ್ನು ತಯಾರಿಸಿ ಅದರ ಮೇಲೆ ಗೋಪುರ ಭಾಗವನ್ನು ಸಹ ಇದೇ ರೀತಿಯಲ್ಲಿ ಬಾಳೆದಿಂಡುಗಳನ್ನು ಸಾಲಾಗಿ ಅಡ್ಡಲಾಗಿ ಜೋಡಿಸುವುದರಿಂದ ತಯಾರಿಸುವರು. ಗೋಪುರ ಭಾಗದಲ್ಲಿ ಬಾಳೆದಿಂಡುಗಳನ್ನು ಒಂದರ ಮೇಲೊಂದರಂತೆ ಪಟ್ಟಿ ಕೆಲವು ದಿಂಡುಗಳನ್ನು ಓರಣವಾಗಿ ನಿಲ್ಲಿಸಿ, ಗೋಪುರ ಭಾಗವು ಮೇಲೆ ಹೋದಂತೆ ಚಿಕ್ಕದಾಗುವಂತೆ ಬಾಳೆದಿಂಡುಗಳಿಂದಲೇ ಇಡೀ ರಥವನ್ನು ನಿರ್ಮಿಸುವರು.

ಬಾಳೆದಿಂಡುಗಳಿಂದ ರಥದ ಮಂಟಪ ಹಾಗೂ ಗೋಪುರ ಭಾಗಗಳು ನಿರ್ಮಾಣಗೊಂಡ ನಂತರ ಉದ್ದವಾದ ಮುಳ್ಳುಗಳನ್ನು ಹೊಂದಿದ ಮುಳ್ಳುಗಂಟಿಗಳನ್ನು ಮತ್ತು ಬಿಡಿ ಬಿಡಿಯಾದ ಮುಳ್ಳುಗಳನ್ನು ಬಾಳೆದಿಂಡುಗಳಿಗೆ ಚುಚ್ಚಿ, ಸುತುಳಿಯಿಂದ ಸರಿಯಾಗಿ ಬಿಗಿದು ಕಟ್ಟುವರು. ಗೋಪುರ ಭಾಗದಲ್ಲಿ ಬಿಡಿ ಮುಳ್ಳುಗಳನ್ನು ಸಾಲುಸಾಲಾಗಿ ಬಾಳೆದಿಂಡುಗಳಿಗೆ ಚುಚ್ಚುವರು. ಹೀಗೆ ಬಾಳೆದಿಂಡುಗಳನ್ನು ಹಾಗೂ ಮುಳ್ಳಿನ ಕಂಟಿಗಳನ್ನು ಉಪಯೋಗಿಸಿ, ಹೂವಿನ ರಥದ ಮಂಟಪ ಹಾಗೂ ಗೋಪುರ ಭಾಗವನ್ನು ನಿರ್ಮಿಸುವರು.

೩. ವಿವಿಧ ಪುಷ್ಪಾಲಂಕಾರ : ಬಾಳೆಯ ದಿಂಡುಗಳು ಹಾಗೂ ಉದ್ದನೆಯ ಮುಳ್ಳುಗಳನ್ನು ಹೊಂದಿದ ರಥದ ಮಂಟಪ ಹಾಗು ಗೋಪುರ ಭಾಗಗಳಿಗೆ ವಿವಿಧ ಪುಷ್ಪಗಳಿಂದ ಅಲಂಕಾರ ಮಾಡಲಾಗುವುದು. ಈ ರಥವು ಹೂವಿನ ರಥವಾಗಿರುವುದರಿಂದ ಇಲ್ಲಿ ಬೇರೆ ಬೇರೆ ರೀತಿಯ ಹೂವುಗಳ ಪಾತ್ರ ಅತೀ ಮುಖ್ಯವಾಗಿರುತ್ತದೆ. ಅಡಿಪಾಯದ ಭಾಗದಲ್ಲಿ ಗಾಲಿಗಳಿಗೆ ಬಿಡಿ ಬಿಡಿಯಾದ ಹೂಗಳನ್ನು ಅಂಟಿಸುವರು. ಚಕ್ರಗಳು ಹೊರಗೆ ಸರಿದು ಹೋಗದಂತೆ ತಡೆಯುವ ಕೀಲುಗಳಿಗೆ ದುಂಡಾಕಾರದಲ್ಲಿ ಹೂವಿನ ಹಾರಗಳನ್ನು ಸುತ್ತುವರು. ಬಾಳೆ ದಿಂಡುಗಳು ಹಾಗೂ ಮುಳ್ಳುಗಳಿಂದ ನಿರ್ಮಾಣಗೊಂಡ ಮಂಟಪದ ಎಲ್ಲ ಕಂಬಗಳಿಗೆ ಬೇರೆ ಬೇರೆ ಜಾತಿಯ ಹೂವುಗಳ ಹಾರಗಳನ್ನು ಸುತ್ತುವರು. ಮುಳ್ಳು ಕಂಟಿಯಲ್ಲಿರುವ ಪ್ರತಿಯೊಂದು ಮುಳ್ಳಿಗೂ ಒಂದೊಂದು ದೊಡ್ಡ ಗಾತ್ರದ ಹೂಗಳನ್ನು ಚುಚ್ಚುವರು. ಮುಳ್ಳಿನ ಕಂಟಿಯಲ್ಲಿ ಮುಳ್ಳುಗಳು ಅತೀ ಹತ್ತಿರ ಹತ್ತಿರವಾಗಿ ಇರುವುದರಿಂದ ಅದರ ಮೇಲೆ ಚುಚ್ಚಿದ ಹೂಗಳೂ ಸಹ ತುಂಬ ಹತ್ತಿರ ಹತ್ತಿರವಾಗಿ ಸೊಗಸಾಗಿ ಕಂಡು ಬರುವುವು. ಮಂಟಪ ಭಾಗದ ಛಾವಣಿಯ ಸೂರಪಟ್ಟಿಯ ಕೆಳಗಡೆಗೆ ಬೇರೆ ಬೇರೆ ಹೂವಿನ ಹಾರಗಳನ್ನು ಬೇರೆ ಬೇರೆ ವಿನ್ಯಾಸಗಳಲ್ಲಿ ನೇತುಹಾಕುವರು. ಇದಲ್ಲದೆ ಮಂಟಪದ ಪ್ರತಿಯೊಂದು ಭುಜದಲ್ಲಿ ಸುಂದರವಾದ ಹೂಗುಚ್ಛಗಳನ್ನು ಕಟ್ಟುವರು.

ಇನ್ನು ಗೋಪುರ ಭಾಗದಲ್ಲಿ ಬಾಳೆಯ ದಿಂಡುಗಳಿಗೆ ಸಾಲುಸಾಲಾಗಿ ಚುಚ್ಚಲಾಗುವ ಮುಳ್ಳುಗಳಿಗೆ ಪ್ರತಿಯೊಂದಕ್ಕೂ ಒಂದೊಂದು ಹೂಗಳನ್ನು ಚುಚ್ಚುವರು. ಗೋಪುರದ ತುದಿಯ ಹತ್ತಿರ ಹೋದಂತೆ ಹೂವಿನ ಹಾರಗಳನ್ನು ಒಂದರ ಮೇಲೊಂದರಂತೆ ದಪ್ಪಗಾಗುವಂತೆ ಸುತ್ತುವರು. ಕೆಲವು ಹೂವಿನ ಹಾರಗಳನ್ನು ಮಂಟಪದ ಛಾವಣಿಯಿಂದ ಅಡಿಪಾಯದವರೆಗೆ ನೇತು ಬಿಡುವರು. ಈ ಹೂವಿನ ರಥಕ್ಕೆ ಗೋಪುರದ ಮೇಲೆ ಕಳಸವನ್ನಿಟ್ಟು ಅದರ ಮೇಲೆ ಹೂವಿನಿಂದಲೇ ತಯಾರಿಸಿದ ಒಂದು ಛತ್ರಿಯನ್ನು ಕಟ್ಟುವರು. ಗೋಪುರದ ಕಳಸದ ಹತ್ತಿರ ಹಾಗೂ ಮಂಟಪದ ಕಂಬಗಳಿಗೆ ವಿವಿಧ ಬಣ್ಣದ

ನಿಶಾನೆಗಳನ್ನು ಕಟ್ಟಿ, ರಥವನ್ನು ಅಲಂಕರಿಸುವರು. ಈ ರೀತಿಯಲ್ಲಿ ಹೂವಿನ ರಥವನ್ನು ನಿರ್ಮಿಸುವರು.

ಡ. ತೆಪ್ಪದ ರಥಗಳ ತಯಾರಿಕಾ ವಿಧಾನ :

ಸಂಕೀರ್ಣ ಮಾಧ್ಯಮದ ರಥಗಳಲ್ಲಿ ಒಂದು ವಿಧವಾದ, ತೆಪ್ಪದ ರಥಗಳು ಎರಡು ಹಂತಗಳಲ್ಲಿ ನಿರ್ಮಾಣಗೊಳ್ಳುತ್ತವೆ.

೧. ತೆಪ್ಪ ಹಾಗೂ ಬಾಳೆ ದಿಂಡುಗಳಿಂದ ರಥದ ತಯಾರಿಕೆ.

೨. ನಿರ್ಮಾಣಗೊಂಡ ರಥಕ್ಕೆ ದೀಪ ಹಾಗೂ ಪುಷ್ಪಾಲಂಕಾರ.

೧. ತೆಪ್ಪ ಹಾಗೂ ಬಾಳೆ ದಿಂಡುಗಳಿಂದ ರಥದ ತಯಾರಿಕೆ : ತೆಪ್ಪದ ರಥೋತ್ಸವಗಳು ದೇವಸ್ಥಾನದ ಪುಷ್ಕರಣಿಗಳಲ್ಲಿ ಹಾಗೂ ದೊಡ್ಡ ದೊಡ್ಡ ಕೆರೆಗಳಲ್ಲಿ ಜರುಗುವುದರಿಂದ ನೀರಿನ ಮೇಲೆ ತೇಲುವಂತಹ ವಸ್ತುಗಳನ್ನು ಉಪಯೋಗಿಸಿ, ತೆಪ್ಪದ ರಥಗಳನ್ನು ತಯಾರಿಸುವರು. ಬಾಳೆ ದಿಂಡುಗಳು ನೀರಿನಲ್ಲಿ ತೇಲುವವು. ಆದ್ದರಿಂದ ತೆಪ್ಪದ ರಥದ ತಯಾರಿಕೆಗೆ ಇವುಗಳನ್ನು ಉಪಯೋಗಿಸುವರು.

ನೀರಿನ ಮೇಲೆ ತೇಲುವಂತಹ ಒಂದು ದೊಡ್ಡ ಗಾತ್ರದ ತೆಪ್ಪದಲ್ಲಿ ಅನೇಕ ಬಾಳೆದಿಂಡುಗಳನ್ನು ಉದ್ದುದ್ದವಾಗಿ ಹಾಗು ಅಡ್ಡಡ್ಡವಾಗಿ ಕಟ್ಟಿ ಒಂದು ಸುಂದರವಾದ ಮಂಟಪವನ್ನು ತಯಾರಿಸುವರು. ಹೂವಿನ ರಥದ ನಿರ್ಮಾಣ ಹಂತದಲ್ಲಿ ಬಾಳೆಯ ದಿಂಡುಗಳಿಂದ ಮಂಟಪ ಭಾಗ ಹಾಗೂ ಗೋಪುರದ ಭಾಗವನ್ನು ನಿರ್ಮಿಸಿದಂತೆ, ದೊಡ್ಡ ತೆಪ್ಪದಲ್ಲಿ ಸುಂದರವಾದ ಮಂಟಪ ಹಾಗೂ ಗೋಪುರಗಳನ್ನು ನಿರ್ಮಿಸುವರು. ಬಾಳೆದಿಂಡುಗಳಿಂದ ಕೂಡಿದ ಮಂಟಪ ಭಾಗದ ಸುತ್ತಲೂ ಸಣ್ಣ ಸಣ್ಣ ಕಮಾನುಗಳಾಕಾರದಲ್ಲಿ ಬಾಳೆದಿಂಡುಗಳನ್ನು ಕಲಾತ್ಮಕವಾಗಿ ಜೋಡಿಸುವರು. ಕೆಲವೊಂದು ತೆಪ್ಪದ ರಥಗಳಲ್ಲಿ ಮಂಟಪ ಭಾಗದಲ್ಲಿ ಹಾಗೂ ಗೋಪುರದ ಸುತ್ತಲೂ ಅಲ್ಲಲ್ಲಿ ಒಂದೊಂದು ಸಣ್ಣ ಬಾಳೆದಿಂಡುಗಳ ಕೊನೆಯು ಹೊರ ಚಾಚುವಂತೆ ಮಾಡಿರುತ್ತಾರೆ. ಹೀಗೆ ತೆಪ್ಪ ಹಾಗೂ ಬಾಳೆ ದಿಂಡುಗಳನ್ನು ಉಪಯೋಗಿಸಿ ಈ ತೆಪ್ಪದ ರಥವನ್ನು ತಯಾರಿಸುವರು.

೨. ನಿರ್ಮಾಣಗೊಂಡ ರಥಕ್ಕೆ ಪುಷ್ಪಗಳ ಹಾಗೂ ದೀಪಗಳಲಂಕಾರ : ತೆಪ್ಪದಲ್ಲಿ ಬಾಳೆದಿಂಡುಗಳಿಂದ ನಿರ್ಮಾಣಗೊಂಡ ರಥದ ಮಂಟಪ ಭಾಗದಲ್ಲಿ ಹಾಗೂ ಗೋಪುರ ಭಾಗಗಳಲ್ಲಿ ಅನೇಕ ಹೂವಿನ ಹಾರಗಳನ್ನು ವಿವಿಧ ವಿನ್ಯಾಸಗಳಲ್ಲಿ ಹತ್ತಿರ ಹತ್ತಿರವಾಗಿ ಸಮಾನ ಅಂತರದಲ್ಲಿ ನೇತು ಬಿಡುವರು. ಗೋಪುರ ಭಾಗದಲ್ಲಿ ಕಳಸವನ್ನಿಟ್ಟು , ಅದರ ಸುತ್ತಲೂ ವಿವಿಧ ಜಾತಿಯ ಹೂಗಳಿಂದ ಮಾಡಿದ ಹಾರಗಳನ್ನು ಸುತ್ತುವರು. ಮಂಟಪದ ಕಂಬಗಳಿಗೆ ಕಲಾತ್ಮಕವಾಗಿ ಹಾರಗಳನ್ನು ಸುತ್ತುವರು. ಅಷ್ಟೇ ಅಲ್ಲದೆ ಕೆಲವು ದೊಡ್ಡ ದೊಡ್ಡ ಬಿಡಿ ಹೂಗಳನ್ನು ಅಲ್ಲಲ್ಲಿ ಮುಳ್ಳುಗಳ ಸಹಾಯದಿಂದ ಚುಚ್ಚುವರು. ಮಂಟಪದ ಮಧ್ಯಭಾಗದಲ್ಲಿಡಲಾದ ಪೀಠಕ್ಕೆ ಸುಂದರವಾಗಿ ಬಿಡಿ ಹೂಗಳನ್ನಿಟ್ಟು ಹಾರಗಳನ್ನು ಸುತ್ತುವರು. ಕಳಸದ ಮೇಲೆ ಒಂದು ಧ್ವಜವನ್ನು ಕಟ್ಟುವರು. ಹೀಗೆ ಹೂವಿನ ಹಾರಗಳಿಂದ ಹಾಗೂ ಬಿಡಿ ಹೂಗಳಿಂದ ರಥದ ಅಲಂಕಾರವಾದ ಮೇಲೆ ವಿವಿಧ ಹಣತೆಗಳಿಂದ ರಥವನ್ನು ಅಲಂಕರಿಸುವರು.

ಬಾಳೆದಿಂಡುಗಳಿಂದ ಮಂಟಪ ಭಾಗ ಹಾಗೂ ಗೋಪುರ ಭಾಗಗಳನ್ನು ತಯಾರಿಸುವ

ಸಮಯದಲ್ಲಿ, ಅಲ್ಲಲ್ಲಿ ಕೆಲವು ಕಮಾನುಗಳ ಆಕಾರಗಳನ್ನು ಹಾಗೂ ಕೆಲವು ಸಣ್ಣ ಬಾಳೆದಿಂಡುಗಳ ಕೊನೆಗಳು ಹೊರ ಚಾಚುವಂತೆ ಮಾಡಿದ ಭಾಗಗಳ ಮೇಲೆ, ಸಣ್ಣ ಸಣ್ಣ ಹಣತೆಗಳನ್ನಿಟ್ಟು ದೀಪಧಾರಣ ಮಾಡುವರು ಇದರಿಂದ ರಾತ್ರಿ ವೇಳೆಯಲ್ಲಿ ರಥವು ನೀರಿನಲ್ಲಿ ತೇಲುವಾಗ, ಬಹಳ ಸುಂದರವಾಗಿ ಕಂಡುಬರುವುದು. ಇತ್ತೀಚೆಗೆ ತೆಪ್ಪದ ರಥಗಳಲ್ಲಿ ಬಣ್ಣ ಬಣ್ಣದ ವಿದ್ಯುತ್ ದೀಪಗಳನ್ನು ಸಾಲು ಸಾಲಾಗಿ ಅಳವಡಿಸುವುದು ಕಂಡುಬರುತ್ತದೆ.

ಹೀಗೆ ತೆಪ್ಪದ ರಥಗಳನ್ನು ನಿರ್ಮಾಣ ಮಾಡುವರು.

IV. ಶಿಲಾ ಮಾಧ್ಯಮದ ರಥಗಳ ರಚನಾ ವಿಧಾನ :

ನಮ್ಮ ಪೂರ್ವಜರಾದಂತಹ ರಾಜ ಮಹಾರಾಜರ ಕಾಲದಲ್ಲಿ ನಿರ್ಮಾಣಗೊಂಡ ಅನೇಕ ಶಿಲೆಯ ರಥಗಳನ್ನು ಇಂದಿಗೂ ಕಾಣಬಹುದು. ಇಂಥಹ ಶಿಲಾ ಮಾಧ್ಯಮದ ರಥಗಳು ಮುಖ್ಯವಾಗಿ ಮೂರು ಹಂತಗಳಲ್ಲಿ ನಿರ್ಮಾಣಗೊಳ್ಳುವವು.

ಅ. ದೊಡ್ಡ ಗಾತ್ರದ ಶಿಲಾ ಬಂಡೆಗಳ ಆಯ್ಕೆ.

ಬ. ಪ್ರಮಾಣಬದ್ಧವಾದ ನೀಲನಕ್ಷೆಗಳ ತಯಾರಿಕೆ.

ಕ. ಬಂಡೆಗಳನ್ನು ಕೊರೆದು ರಥ ನಿರ್ಮಾಣ .

ಈ ಮೂರು ಹಂತಗಳಲ್ಲಿಯ ತಯಾರಿಕಾ ವಿಧಾನಗಳನ್ನು ವಿವರವಾಗಿ ತಿಳಿಯುವಾ.

ಅ. ದೊಡ್ಡ ಗಾತ್ರದ ಶಿಲಾಬಂಡೆಗಳನ್ನು ಆಯ್ಕೆ : ಶಿಲೆಯ ರಥವನ್ನು ನಿರ್ಮಿಸಲು ಶಿಲ್ಪಿಗಳು ಮೊದಲು, ಸ್ವತಂತ್ರವಾಗಿ ನಿಂತ ದೊಡ್ಡ ಪ್ರಮಾಣದ ಕಲ್ಲು ಬಂಡೆಗಳನ್ನು ಆಯ್ಕೆ ಮಾಡಬೇಕಾಗುವುದು. ನಿರ್ಮಾಣವಾಗಬೇಕಾಗಿರುವ ರಥದ ಅಗಲ ಎತ್ತರಗಳಿಗೆ ಸರಿ ಹೋಗುವಂತಹ ಶಿಲೆಯನ್ನು ಆಯ್ಕೆ ಮಾಡುವದು. ಆಯ್ಕೆ ಮಾಡಿದ ಶಿಲೆಯ ಬಂಡೆಗಳು ಅಖಂಡವಾಗಿದ್ದು ಯಾವುದೇ ರೀತಿಯ ಒಳಸೀಳುಗಳನ್ನು ಹೊಂದಿರಬಾರದು. ಇದನ್ನು ಪರೀಕ್ಷಿಸಲು, ದೊಡ್ಡ ದೊಡ್ಡ ಹಾರಿಗಳು ಅಥವಾ ಛಾಣಗಳಿಂದ ಹೊಡೆದು ನೋಡುವರು. ಕೆಲವು ಮಧ್ಯಮ ಗಾತ್ರದ ಶಿಲೆಗಳನ್ನು ಆಯ್ಕೆ ಮಾಡುವರು. ಏಕೆಂದರೆ ಎಲ್ಲ ಶಿಲಾ ರಥಗಳು ಅಖಂಡ ಶಿಲೆಯಲ್ಲೇ ನಿರ್ಮಾಣಗೊಂಡಿಲ್ಲ . ಕೆಲವು ರಥಗಳು ಅನೇಕ ಶಿಲೆಗಳನ್ನು ಹೊಂದಿ ನಿರ್ಮಾಣಗೊಂಡಿವೆ. ಇದಲ್ಲದೆ ಕೆಲವು ಸುಟ್ಟ ಇಟ್ಟಿಗೆಗಳನ್ನೂ ಸಹ ಬಳಸುವರು.

ಬ. ಪ್ರಮಾಣಬದ್ಧವಾದ ನೀಲ ನಕ್ಷೆಯ ತಯಾರಿಕೆ : ಶಿಲೆಯ ರಥವನ್ನು ನಿರ್ಮಾಣ ಮಾಡುವ ಮೊದಲು ನೀಲನಕ್ಷೆಗಳನ್ನು ರಚಿಸಬೇಕಾಗುವುದು. ನಿರ್ಮಾಣವಾಗುವ ರಥದ ಉದ್ದ , ಅಗಲ ಹಾಗೂ ಎತ್ತರಗಳಿಗೆ ಅನುಗುಣವಾಗಿ ಎಲ್ಲ ಭಾಗಗಳನ್ನು ಸರಿಯಾಗಿ ಪ್ರಮಾಣಬದ್ಧವಾಗಿ ನಿರ್ಮಿಸಲು ಸಹಾಯಕವಾಗುವಂತಹ ನೀಲ ನಕ್ಷೆಗಳನ್ನು ತಯಾರಿಸುವರು. ವಿವಿಧ ಕಂಬ ಹಾಗೂ ಕಮಾನುಗಳನ್ನು ಹೊಂದಿ ನಿರ್ಮಾಣವಾಗುವ ರಥದ ಬೇರೆ ಬೇರೆ ಭಾಗಗಳಲ್ಲಿ ಅಳವಡುವಂತಹ ಅನೇಕ ಶಿಲ್ಪ ವಿನ್ಯಾಸಗಳ ರೇಖಾಚಿತ್ರಗಳನ್ನು ರಚಿಸುವರು.

ಕ. ಬಂಡೆಗಲ್ಲುಗಳನ್ನು ಕೊರೆದು ರಥ ನಿರ್ಮಾಣ : ಶಿಲೆಯ ರಥವನ್ನು ನಿರ್ಮಿಸಲು ಪ್ರಧಾನ ಶಿಲ್ಪಿಯ ಜೊತೆಯಲ್ಲಿ ಅನೇಕ ಸಹಾಯಕ ಶಿಲ್ಪಿಗಳು ಎಡೆಬಿಡದೆ ಕೆಲಸ ಮಾಡಬೇಕಾಗುವುದು. ಏಕಶಿಲೆಯಲ್ಲಿ ರಥವನ್ನು ನಿರ್ಮಾಣ ಮಾಡಲು ಉಪ ಪೀಠದಿಂದ ಶಿಖರದವರೆಗೆ ರಥದ ಎಲ್ಲಾ ಭಾಗಗಳನ್ನು ಕಲ್ಲಿನಲ್ಲಿಯೇ ಕೊರೆಯಲಾಗುವುದು. ಇದಕ್ಕಾಗಿ ಸೂಕ್ತವಾದ ಕಲ್ಲು ಬಂಡೆಗಳನ್ನು ಆಯ್ದು ಅನಾವಶ್ಯಕವಾದ ಭಾಗಗಳನ್ನು ಕೊರೆದು, ಅಣಿಗೊಳಿಸಿದ ನಂತರ ತುದಿಯಿಂದ ಕೊರೆಯುತ್ತ ರಥದ ಅಡಿಭಾಗಕ್ಕೆ ಬರಬೇಕು. ರಥದ ಎತ್ತರ ಭಾಗದಲ್ಲಿರುವ ಶಿಲೆಯ ಭಾಗವು ಶಿಲ್ಪಿಗಳಿಗೆ ನಿಲ್ಲಲು, ಸ್ಥಳಾವಕಾಶವನ್ನು ಮಾಡಿಕೊಡುತ್ತದೆ.

ಈ ರಥಗಳನ್ನು ಮೊದಲು ಮೇಲಿನಿಂದ ನಿರ್ಮಿಸಲು ಪ್ರಾರಂಭಿಸುವರು. ಆದ್ದರಿಂದ ವಿಮಾನ ಭಾಗವನ್ನು ಮೊದಲು ರಚಿಸಬೇಕಾಗುತ್ತದೆ. ತೀರ ಸಾಧಾರಣ ವಿಮಾನ ರಚನೆಯಲ್ಲಿ, ತಳಭಾಗದಿಂದ ತುದಿಯ ಭಾಗದವರೆಗೆ ಒಟ್ಟು ಆರು ಭಾಗಗಳಿವೆ. ಇಷ್ಟೇ ಅಲ್ಲದೆ ರಥದ ವಿಮಾನಗಳು ವಿವಿಧ ತಲದಲ್ಲಿಯೂ ರಚನೆಗೊಂಡಿರುವುದನ್ನು ನೋಡಬಹುದು.

ಅಧಿಷ್ಠಾನ, ಪಾದ, ಭಿತ್ತಿ , ಪ್ರಸ್ತಾರ, ಗ್ರೀವ, ಶಿಖರ ಮತ್ತು ಸ್ತೂಪಿ- ಈ ರೀತಿಯ ಆರು ಭಾಗಗಳ ಸಾಧಾರಣ ವಿಮಾನವು ಏಕತಲದ ಎಂದರೆ ಒಂದೇ ಅಂತಸ್ತಿನಲ್ಲಿ ನಿರ್ಮಾಣಗೊಂಡಿರುವದು. ಇದಕ್ಕೆ 'ಅಲ್ಪ ವಿಮಾನ' ಎಂದು ಕರೆಯುವರು. ದ್ವಿತಲದ ಎಂದರೆ, ಎರಡು ಅಂತಸ್ತುಗಳಲ್ಲಿ ನಿರ್ಮಾಣಗೊಂಡ ವಿಮಾನದಲ್ಲಿ ಪ್ರಸ್ತಾರ ಮತ್ತು ಗ್ರೀವಗಳ ಮಧ್ಯ ಹಾರವನ್ನು ಸೇರಿಸಲಾಗುವುದು. ಹೀಗೆ ವಿವಿಧ ತಲಗಳಲ್ಲಿ ಹಾರ, ಕೂಟಗಳನ್ನು, ಹುದುಗು ಗಂಬಗಳನ್ನು, ಕ್ಷುದ್ರನಾಸಿಕಗಳನ್ನು ಹೊಂದಿದ ವಿವಿಧ ತರಹದ ವಿಮಾನಗಳನ್ನು ರಚಿಸುವರು[೯]. ಇದಲ್ಲದೆ ನಾಗರ ಹಾಗೂ ದ್ರಾವಿಡ ಶೈಲಿಗಳಲ್ಲಿ ಅನೇಕ ಶಿಲ್ಪ ವಿನ್ಯಾಸಗಳನ್ನೊಳಗೊಂಡ ವಿಮಾನ ಭಾಗವನ್ನು ನಿರ್ಮಿಸುವರು.

ವಿಮಾನ ಭಾಗದ ರಚನೆಯ ನಂತರ ಮಂಟಪ ಭಾಗವನ್ನು ರಚಿಸುವರು. ಅನೇಕ ಕಂಬಗಳು ಹಾಗೂ ಕಮಾನುಗಳನ್ನು ರಚಿಸುವುದಲ್ಲದೆ ಸಿಂಹ, ಆನೆ, ಕುದುರೆ ಇಂಥಹ ಪ್ರಾಣಿಗಳ ಸಾಲುಗಳು, ಮಂಟಪದ ಬಾಗಿಲದ ಎಡ-ಬಲಗಳಲ್ಲಿ ದ್ವಾರ ಫಾಲಕರು, ಕಂಬಗಳ ಮುಂದೆ ನೆಗೆದ ಸಿಂಹಗಳ ಶಿಲ್ಪಗಳು ಹಾಗೂ ಅನೇಕ ನಕ್ಷಾಶಿಲ್ಪಗಳನ್ನು ರಚಿಸುವರು. ಶಿಲಾರಥದ ಎಲ್ಲ ಪಾರ್ಶ್ವ ಬಾಹುಗಳಲ್ಲಿಯೂ ಕಮಾನುಗಳನ್ನು ಹಾಗೂ ಅನೇಕ ಸಣ್ಣ ಮಂಟಪಗಳನ್ನು ರಚಿಸಿ, ಅವುಗಳಲ್ಲಿ ವಿವಿಧ ದೇವಾನುದೇವತೆಯರ, ಗಂಧರ್ವರ, ಕುಬ್ಜರ, ಪಶು ಪಕ್ಷಿಗಳ ಹೀಗೆ ಅನೇಕ ಶಿಲ್ಪವಿನ್ಯಾಸಗಳನ್ನು ಮೂಡಿಸುವರು.

ಕೆಲವು ರಥಗಳಿಗೆ ಮಾತ್ರ ತಿರುಗುವ ಕಲ್ಲಿನ ಗಾಲಿಗಳನ್ನು ರಚಿಸಿರುವುದನ್ನು ಕಾಣಬಹುದು. ರಥದ ಚಕ್ರಗಳ ಮೇಲೆ ಸುಂದರವಾದ ಹೂಬಳ್ಳಿಯಾಕಾರದ ಶಿಲ್ಪ ವಿನ್ಯಾಸಗಳನ್ನು ರಚಿಸುವರು. ಅಲ್ಲದೆ ಕೆಲವು ರಥಗಳ ಗೋಪುರ ಭಾಗಗಳನ್ನು ಸುಟ್ಟ ಇಟ್ಟಿಗೆ ಹಾಗೂ ಗಾರೆಯ ಸಹಾಯದಿಂದ ನಿರ್ಮಿಸಿ, ಬಿಡಿ ಶಿಲೆಗಳಲ್ಲಿ ಸುಂದರವಾದ ಶಿಲ್ಪ ವಿನ್ಯಾಸಗಳನ್ನು ರಚಿಸಿ ಅಳವಡಿಸುವರು.

ಹೀಗೆ ಸುಂದರವಾದ ಶಿಲೆಯ ರಥಗಳನ್ನು ನಮ್ಮ ಪೂರ್ವಜರು ನಿರ್ಮಾಣ ಮಾಡಿರುವರು.

---

೯. "ಶಿಲ್ಪಾದರ್ಶ" ಡಾ.ಜಿ.ಜ್ಞಾನಾನಂದ, ಪು.ಸಂ. ೮೨, ೨೦೦೨

◆ ◆ ◆

ಅಧ್ಯಾಯ-ಐದು

ರಥಗಳ ವಿಂಗಡಣೆ, ವಸ್ತು ವಿಷಯ

ರಥಗಳ ವಿಂಗಡಣೆ, ವಸ್ತು ವಿಷಯ

ನಾವು ನಮ್ಮ ನಾಡಿನ ಹಲವಾರು ದೇವಾಲಯಗಳಲ್ಲಿ ರಥಶಿಲ್ಪಗಳನ್ನು ಕಾಣಬಹುದು. ಉತ್ಸವದ ಸಂದರ್ಭದಲ್ಲಿ ಅಲಂಕಾರಗೊಂಡು ನಿಂತ ರಥವು, ಜಾತಿಬೇಧವಿಲ್ಲದೆ ಭಾವೈಕ್ಯ ಮನೋಭಾವನೆಯಿಂದ ಕೂಡಿದ ಸಾವಿರಾರು ಭಕ್ತರಿಂದ ಎಳೆಯಲ್ಪಡುವುದು. ದೇಗುಲದ ಪ್ರತೀಕವಾದ, ನಿಶ್ಚಲವಾಗಿ ನಿಂತ ರಥವು, ಮುಂದೆ ಚಲಿಸತೊಡಗಿದಾಗ ದೇಗುಲವೇ ಧಾವಿಸಿ ಮುಂದೆ ಬಂದಂತೆ ಕಾಣಿಸುತ್ತದೆ.

ದೇಗುಲ ರಥವು ರಚನೆಯಲ್ಲಿ ದೇವಾಲಯವನ್ನೇ ಹೋಲುತ್ತದೆ. ವಾಸ್ತುಶಾಸ್ತ್ರಗಳನುಸಾರ ದೇವಾಲಯವನ್ನು ನಿರ್ಮಿಸುವಂತೆ, ರಥವೂ ಸಹ ಶಾಸ್ತ್ರ ಸಮ್ಮತವಾಗಿಯೇ ನಿರ್ಮಾಣಗೊಳ್ಳುತ್ತದೆ. ದೇವಾಲಯವು ಅಧಿಷ್ಠಾನ, ಗರ್ಭಗೃಹ ಹಾಗೂ ವಿಮಾನ, ಗೋಪುರ ಭಾಗಗಳನ್ನು ಹೊಂದಿದ್ದರೆ, ರಥವು ಅಡಿಪಾಯ, ಅಧಿಷ್ಠಾನ, ಮಂಟಪ ಹಾಗೂ ವಿಮಾನ ಗೋಪುರ ಭಾಗಗಳನ್ನು ಹೊಂದಿರುತ್ತದೆ[೧].

ದೇವಾಲಯವು ಅಧಿಷ್ಠಾನ ಭಾಗವನ್ನು ಹೊಂದಿರುವಂತೆ ರಥದಲ್ಲಿ ಕಲಾತ್ಮಕವಾದ ಗಡ್ಡಿಯ ಭಾಗವೇ ಅಧಿಷ್ಠಾನವಾಗಿರುತ್ತದೆ. ದೇವಾಲಯದ ಗರ್ಭಗೃಹಕ್ಕೂ, ರಥದ ದೇವತಾವಿಗ್ರಹವನ್ನು ಕೂಡಿಸುವ ಕಲಾತ್ಮಕ ಮಂಟಪಕ್ಕೂ ಯಾವುದೇ ರೀತಿಯ ವ್ಯತ್ಯಾಸವಿರುವುದಿಲ್ಲ. ದೇವಾಲಯದ ಗರ್ಭಗೃಹದ ಮಾದರಿಯಲ್ಲಿಯೇ ರಥದ ಮಂಟಪದ ಭಾಗವು ನಿರ್ಮಾಣವಾಗಿರುತ್ತದೆ. ದೇವಾಲಯಗಳು ಗರ್ಭಗೃಹದ ಮೇಲೆ ಗೋಪುರವನ್ನು ಹೊಂದಿದಂತೆ, ರಥಗಳೂ ಸಹ ಮಂಟಪದ ಮೇಲ್ಭಾಗದಲ್ಲಿ ಅಂತಸ್ತುಗಳುಳ್ಳ ಗೋಪುರಗಳನ್ನು ಹೊಂದಿರುತ್ತವೆ. ದೇವಾಲಯದ ಅಂಗಗಳಾದ ಅಧಿಷ್ಠಾನ ನವರಂಗಮಂಟಪ ಹಾಗೂ ಪ್ರಾಂಗಣದಲ್ಲಿ ಹಲವಾರು ಮೂರ್ತಿಶಿಲ್ಪ ಕಲಾಕೃತಿಗಳನ್ನು ಕಾಣುವಂತೆ ರಥದ ವಿವಿಧ ಅಂಗಗಳಲ್ಲಿಯೂ ಅನೇಕ ಮೂರ್ತಿಶಿಲ್ಪಗಳನ್ನು ಕಾಣಬಹುದು. ದೇವಾಲಯವು ಗೋಪುರ ಭಾಗದಲ್ಲಿ ಅಂದವಾದ ಶಿಖರ ಹಾಗೂ ಕಳಶವನ್ನು ಹೊಂದಿರುವಂತೆ, ರಥವು ಸಹ ಗೋಪುರ ಭಾಗದಲ್ಲಿ ಸುಂದರವಾದ ಶಿಖರ ಹಾಗೂ ಕಳಶವನ್ನು ಹೊಂದಿರುತ್ತದೆ.

೧. ''ದೇಗುಲ ರಥ ಶಿಲ್ಪ'' ದ್ರುವರಾಜ ನಾ. ಗದಗಕರ, ಪು.ಸಂ. ೧೪,೧೯೯೯.

ದೇವಾಲಯಗಳು ನಾಗರ, ದ್ರಾವಿಡ ಹಾಗೂ ವೇಸರ ಶೈಲಿಗಳಲ್ಲಿ ನಿರ್ಮಾಣಗೊಂಡಂತೆ, ರಥಗಳೂ ಸಹ ಈ ಮೂರು ಶೈಲಿಗಳನ್ನು ಅನುಸರಿಸಿ ನಿರ್ಮಾಣಗೊಂಡಿವೆ. ನಾಗರ ಶೈಲಿಯು ಔತ್ತರೇಯ ಶೈಲಿಯೆಂದು ಹೆಸರಾಗಿದೆ. ಈ ನಾಗರ ಶೈಲಿಯು ಕುಶಾನರ ಕೊನೆಯ ಅವಧಿಯಲ್ಲಿ ಹುಟ್ಟಿಕೊಂಡು ಸುಮಾರು ಆರನೆಯ ಶತಮಾನದಲ್ಲಿ ಸ್ಪಷ್ಟರೂಪ ಪಡೆಯಿತು. ಈ ನಡುವೆ, ಗುಪ್ತರ ಕಾಲದಲ್ಲಿ ನಾಗರ ಶೈಲಿಯು ಅಭಿವೃದ್ಧಿ ಹೊಂದಿತು[೨]. ಅಪರಾಜಿತಪೃಚ್ಛ, ಕಾಲುಕಾಗಮ, ಸ್ವಯಂಭುವಾಗಮ, ಕರ್ಣಾಗಮ ಹಾಗೂ ಸುಪ್ರಭೇದಾಗಮಯಗಳಲ್ಲಿ ನಾಗರ ಶೈಲಿಯನ್ನು ವಿವರಿಸಲಾಗಿದೆ. ಸುಪ್ರಭೇದಾಗಮದ ಪ್ರಕಾರ, ದೇವಾಲಯದ ಒಟ್ಟು ರಚನೆ ಹಾಗೂ ಪ್ರತಿಯೊಂದು ಅಂಗಗಳೂ ಚೌಕಾಕಾರದಲ್ಲಿರಬೇಕು. ಹಾಗಿದ್ದರೆ ಅದು ನಾಗರ ಶೈಲಿ ಎಂದು ತಿಳಿಯಲಾಗುತ್ತದೆ. ಇವಲ್ಲದೆ ಪದ್ಮಸಂಹಿತೆ, ಜಿನಸಂಹಿತೆ, ಮಯಮತ, ಕಾಶ್ಯಪಶಿಲ್ಪ ಮಾನಸಾರ ಮುಂತಾದ ಗ್ರಂಥಗಳು ಚೌಕಾಕಾರಕ್ಕೆ ಒತ್ತು ನೀಡಿ ನಾಗರ ಶೈಲಿಯನ್ನು ವರ್ಣಿಸಿವೆ[೩].

ದ್ರಾವಿಡ ಶೈಲಿ ಎಂದರೆ ದಾಕ್ಷಿಣಾತ್ಯ ಶೈಲಿ. ಉತ್ತರ ಭಾರತದ ಕೃತಿಗಳು ಹೇಳುವಂತೆ, ದ್ರಾವಿಡ ಶೈಲಿ ಎಂದರೆ ದ್ರಾವಿಡ ದೇಶದ ಶೈಲಿಯಾಗಿದ್ದು ಮುಖ್ಯವಾಗಿ ತಮಿಳುನಾಡಿನ ಶೈಲಿಯಾಗಿದೆ. ಅಂದರೆ ವಿಸ್ತಾರವಾಗಿ ಆಂದ್ರ, ಕರ್ನಾಟಕ ಹಾಗೂ ಕೇರಳಗಳಿಗೂ ವ್ಯಾಪಿಸಿದೆ. ಇವೆಲ್ಲವನ್ನು ಸೇರಿಕೊಂಡೇ ದ್ರಾವಿಡ ಶೈಲಿ ಎಂದೆನಿಸಿದೆ. ಈ ಅರ್ಥದಲ್ಲಿಯೇ ದಕ್ಷಿಣ ಭಾರತದ ಸಂಸ್ಕೃತಿ, ಕಲೆ ಹಾಗೂ ವಾಸ್ತುಶಿಲ್ಪಗಳನ್ನು ದ್ರಾವಿಡ ಶೈಲಿ ಎಂದು ಕರೆಯಲಾಗುತ್ತದೆ. ಕಾಮಿಕಾಗಮ, ಸ್ವಯಂಭುವಾಗಮ ಹಾಗೂ ಸುಪ್ರಭೇದಾಗಮಗಳು ದ್ರಾವಿಡ ಶೈಲಿಯ ಬಗ್ಗೆ ತಿಳಿಸುತ್ತವೆ. ದೇವಾಲಯವು ಷಟ್ಕೋಣ ಅಥವಾ ಅಷ್ಟಕೋನಗಳಲ್ಲಿ ನಿರ್ಮಾಣಗೊಂಡಿದ್ದರೆ ಅದು ದ್ರಾವಿಡ ಶೈಲಿ ಎಂದು ಹೇಳಿವೆ[೪].

ವೇಸರ ಶೈಲಿಯ ಹೆಸರು ಯಾವುದೇ ಉತ್ತರ ಭಾರತದ ಕೃತಿಗಳಲ್ಲಿ ಉಲ್ಲೇಖವಾಗಿಲ್ಲ. ಅಪರಾಜಿತ ಪೃಚ್ಛವಾಗಲಿ, ಲಕ್ಷಣ ಸಮುಚ್ಚಯವಾಗಲಿ ವೇಸರವನ್ನು ಉಲ್ಲೇಖಿಸಿಲ್ಲ. ಆದ್ದರಿಂದ ವೇಸರ ಎಂಬುದು ಸಂಪೂರ್ಣ ದಕ್ಷಿಣಾತ್ಯವಾಗಿದ್ದ, ದಕ್ಷಿಣ ಭಾರತದ ಬಹುತೇಕ ಕೃತಿಗಳು ಇದನ್ನು ವಿವರಿಸಿವೆ. ಕಾಮಿಕಾಗಮದ ಪ್ರಕಾರ ವೇಸರವೆಂದರೆ, ದ್ರಾವಿಡ ಹಾಗೂ ನಾಗರಗಳ ಸಂಗಮ. ಭಿನ್ನ ಭಿನ್ನ ಜಾತಿಯ ಗಂಡು ಹೆಣ್ಣುಗಳಿಂದ ಜನಿಸಿದ ಹೇಸರಗತ್ತೆಯಂತೆ ಈ ವೇಸರವೆಂದು ಕೂಡ ವಿವರಿಸಲಾಗಿದೆ. ಅಂದರೆ ಇದೊಂದು ಮಿಶ್ರ ಜಾತಿ. ವೇಸರಕ್ಕೆ ಇನ್ನೊಂದು ಅರ್ಥವೆಂದರೆ ಸಂಕರ. ಕಾಯಿಕಾಗಮ, ಸುಪ್ರಭೇದಾಗಮ, ಸ್ವಯಂಭುವಾಗವು ಹಾಗೂ ಅಜಿತಾಗಮಗಳು ಹೇಳುವಂತೆ ದೇವಾಲಯದ ಭಾಗಗಳು ವೃತ್ತಾಕಾರ ಅಥವಾ ಗೋಲಾಕಾರದಲ್ಲಿದ್ದರೆ ಅದು ವೇಸರ ಎಂದು ತಿಳಿಯಬಹುದು[೫].

ಹೀಗೆ ಹಲವಾರು ದೇವಾಲಯಗಳು ವಿವಿಧ ಶೈಲಿಗಳ ಲಕ್ಷಣಗಳಿಗೆ ಅನುಗುಣವಾಗಿ ನಿರ್ಮಾಣಗೊಂಡಂತೆ, ರಥಗಳೂ ಸಹ ಬೇರೆ ಬೇರೆ ಶೈಲಿಗಳಲ್ಲಿ ನಿರ್ಮಾಣಗೊಂಡವೆ. ಆದ್ದರಿಂದ ದೇವಾಲಯದ ಪ್ರತೀಕವಾಗಿರುವ ರಥವನ್ನು ನಡೆಯುವ ದೇಗುಲವೆಂದು ಹೇಳಬಹುದು.

---

೨. ''ಸಿದ್ದಾಪುರ ಪ್ರದೇಶದ ಪುರಾತತ್ತ್ವ'' ಉಮೇಶ ಎನ್. ನಾಯ್ಕ, ಪು.ಸಂ.೧೩೫, ೧೯೯೫
೩. ''ವಿವಿಧ ಶೈಲಿಗಳಲ್ಲಿ ಅರಳಿದ ವಾಸ್ತುಶಿಲ್ಪ'' ಎನ್.ನಾಗೇಶರಾವ, ಸುಧಾ, ಮಾರ್ಚ ೧೯೯೯
೪. ''ಇತಿಹಾಸ ದರ್ಶನ'' ಎಮ್.ಎನ್.ಪ್ರಭಾಕರ, ಪು.ಸಂ.೪೨.
೫. ''ಸಿದ್ದಾಪುರ ಪ್ರದೇಶದ ಪುರಾತತ್ತ್ವ'' ಉಮೇಶ ಎನ್. ನಾಯ್ಕ, ಪು.ಸಂ.೧೩೮,೧೯೯೫

ಕಾಷ್ಠ ಮಾಧ್ಯಮದ ಗಡ್ಡಿ ರಥಶಿಲ್ಪಗಳು



ಮಸ್ಕಿಯ ಶ್ರೀ ಮಲ್ಲಿಕಾರ್ಜುನ ರಥ
ಜಿ - ರಾಯಚೂರ



ಕುಕನೂರದ ಮಹಾಮಾಯಿ ರಥ
ಜಿ - ಕೊಪ್ಪಳ



ಶ್ರೀರಂಗಪಟ್ಟಣದ ಗಂಗಾಧರೇಶ್ವರ ರಥ
ವಸ್ತು ಸಂಗ್ರಹಾಲಯ ಧರ್ಮಸ್ಥಳ



ಸಿರಗುಪ್ಪದ ಶ್ರೀ ಶಂಭುಲಿಂಗನ ರಥ
ಜಿ - ಬಳ್ಳಾರಿ



ಕೊಟ್ಟೂರದ ಶ್ರೀ ಕೊಟ್ಟೂರೇಶ್ವರ ರಥ
ಜಿ - ಬಳ್ಳಾರಿ

ಕಾಷ್ಠ ಮಾಧ್ಯಮದ ಗಡ್ಡಿ ರಥಶಿಲ್ಪಗಳು



ಸೊಗಿಯ ಶ್ರೀ ವೀರಭದ್ರೇಶ್ವರ ರಥ
ಜಿ - ಬಳ್ಳಾರಿ



ಕನಕಗಿರಿಯ ಶ್ರೀ ಕನಕರಾಯನ ರಥ
ಜಿ - ಕೊಪ್ಪಳ



ಕೊಣ್ಣೂರದ ಶ್ರೀ ಮರಡಿಮಠದ ರಥ
ಜಿ - ಬೆಳಗಾಂವ



ಗುಳೇದಗುಡ್ಡದ ಶ್ರೀ ಶಿವಪ್ಪಯ್ಯನ ರಥ
ಜಿ - ಬಾಗಲಕೋಟೆ



ಕೇರದಗಿಯ ಶ್ರೀ ಶರಣಬಸವೇಶ್ವರ ರಥ
ಜಿ - ಗುಲಬರ್ಗಾ



ಶ್ರೀರಂಗಪಟ್ಟಣದ ಶ್ರೀ ಶ್ರೀರಂಗನಾಥನ ರಥ

ನಾಡಿನ ಹಲವಾರು ದೇವಾಲಯಗಳಲ್ಲಿ ಕಾಣಸಿಗುವ ರಥಗಳು ಕಾಷ್ಠ ಮಾಧ್ಯಮ, ಲೋಹ ಮಾಧ್ಯಮ, ಸಂಕೀರ್ಣ ಮಾಧ್ಯಮ ಹಾಗೂ ಶಿಲಾಮಾಧ್ಯಮ ಎಂದು ಬೇರೆ ಬೇರೆ ಮಾಧ್ಯಮಗಳಲ್ಲಿ ನಿರ್ಮಾಣಗೊಂಡಿವೆ. ಅಲ್ಲದೆ, ಗಡ್ಡಿ ರಥಗಳು, ಅಂಕಣ ರಥಗಳು, ಕಟ್ಟುವ ರಥಗಳು, ಹೀಗೆ ವಿವಿಧ ವಿಧದ ರಥಗಳನ್ನು ಕಾಣಬಹುದು. ಈ ಎಲ್ಲ ಮಾಧ್ಯಮದ ಬೇರೆ ಬೇರೆ ವಿಧದ ಹಾಗೂ ಬೇರೆ ಬೇರೆ ಶೈಲಿಗಳಲ್ಲಿ ನಿರ್ಮಾಣಗೊಂಡ ರಥಗಳ ವಿವಿಧ ಭಾಗಗಳಲ್ಲಿ ಹಲವಾರು ಮೂರ್ತಿಶಿಲ್ಪಗಳು ರಚನೆಗೊಂಡಿರುವುದನ್ನು ಕಾಣಬಹುದು. ಆದ್ದರಿಂದ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿ ಕಾಣಸಿಗುವ ರಥಗಳಲ್ಲಿನ ಮೂರ್ತಿಶಿಲ್ಪಗಳ ಬಗ್ಗೆ ವಿವರವಾಗಿ ತಿಳಿಯುವಾ.

ರಥಗಳ ವಿವಿಧ ಭಾಗಗಳಲ್ಲಿ ಮೂರ್ತಿಶಿಲ್ಪಗಳನ್ನು ರಚಿಸಲು ವಿವಿಧ ತಾಲಮಾನಗಳನ್ನು ಉಪಯೋಗಿಸುವರು. ''ತಲ'' ಎಂಬುದನ್ನು 'ಹಸ್ತತಲ' ವೆಂದು ಅರ್ಥೈಸಿದಾಗ ಇದು ಅಂಗೈಯನ್ನು ಸೂಚಿಸುತ್ತದೆ. ಅಂಗೈ ಮಣಿಕಟ್ಟಿನ ಅಂಚಿನಿಂದ ಮಧ್ಯಬೆರಳಿನ ತುದಿಯ ತನಕ ಇರುವ ಉದ್ದವನ್ನು ತಾಲ ಅಥವಾ ತಾಳ ಎಂದು ಸೂಚಿಸಲಾಗುತ್ತದೆ. ಈ ಉದ್ದವು ಕೇಶಾಂತದಿಂದ ಗದ್ದದವರೆಗಿನ ಮುಖದ ಉದ್ದಕ್ಕೆ ಸಮವಾಗಿರುತ್ತದೆ. ತಾಲಮಾನವೆಂದರೆ ತಾಲವನ್ನು ಆಧಾರವಾಗಿರಿಸಿಕೊಂಡಿರುವ ಅಳತೆ ಎಂದು ಅರ್ಥ. ಒಂದು ತಾಲಕ್ಕೆ ೧೨ ಅಂಗುಲ ಎಂದು ಅಂಗೀಕರಿಸಲಾಗಿದೆ. ದಶತಾಲ ಕ್ರಮ ಎಂದರೆ ಸಾಧಾರಣವಾಗಿ ಹತ್ತು ತಾಲಗಳ ಎತ್ತರವೆಂದು ಹೇಳಬಹುದು. ಅದೇ ರೀತಿಯಲ್ಲಿ ಲೆಕ್ಕಿಸಿ ೧೦ x೧೨=೧೨೦ ಎಂದು ದಶತಾಳದಲ್ಲಿರುವ ಅಂಗುಳ ಎಂದು ನಿಗದಿಪಡಿಸಲಾಗಿದೆ[೬]. ಈ ಬಗ್ಗೆ ವಿವರಗಳನ್ನು ಮುಂದಿನ ಪುಟದಲ್ಲಿರುವ ಕೊಷ್ಟಕದಿಂದ ಗ್ರಹಿಸಬಹುದು[೭].

ಇದಲ್ಲದೆ ದಶತಾಲಕ್ಕಿಂತಲೂ ಹೆಚ್ಚಿನ ತಾಲಮಾನ ಕ್ರಮಗಳೂ ಬಳಕೆಯಲ್ಲಿ ಇರುವುದಾಗಿ ರೂಪಮಂಡನ ಮತ್ತು ಅಪರಾಜಿತಪೃಚ್ಛಗಳಿಂದ ತಿಳಿಯುತ್ತದೆ. ಅಲ್ಲಿ ಷೋಡಶ ತಾಳಮಾನ ಕ್ರಮದವರೆಗೂ ವಿವರಿಸಲಾಗಿದೆ. ಅದರ ವಿವರ ಇಂತಿದೆ.

ಏಕಾದಶ ತಾಲ	: ಸ್ಕಂದ ಭೂತ ಚಂಡಿಕಾ ರುದ್ರ ಭೂತಗಣ
ದ್ವಾದಶ ತಾಲ	: ಬೇತಾಳ, ಮಧುಮುರಾ
ತ್ರಯೋದಶ ತಾಲ	: ರಾಕ್ಷಸರು
ಚತುರ್ದಶ ತಾಲ	: ದೈತ್ಯರು, ದಾನವರು
ಪಂಚಾದಶ ತಾಲ	: ಭೃಗು ಚಾಮುಂಡಾ
ಷೋಡಶ ತಾಲ	: ಕ್ರೂರದೇವತೆಗಳು.

ಶುಕ್ರ ನೀತಿಯಲ್ಲಿಯೂ ತಾಲಮಾನದ ಕ್ರಮದ ವಿವರಗಳು ದೊರೆಯುತ್ತವೆ[೮]. ಅದರ ಅನ್ವಯ ಕ್ರೂರ ದೇವತೆಗಳಾದ ಚಂಡಿ, ಭೈರವ, ಬೇತಾಳ, ನರಸಿಂಹ, ವರಾಹ, ಹಯಗ್ರೀವ

೬.''ಶಿಲ್ಪಾದರ್ಶ'' ಜಿ.ಜ್ಞಾನಾನಂದ, ಸಂಪುಟ ೧, ಪು.ಸಂ.೨೦೮, ೨೦೦೧.
೭.''ಶಿಲ್ಪಾದರ್ಶ'' ಜಿ.ಜ್ಞಾನಾನಂದ, ಸಂಪುಟ ೧, ಪು.ಸಂ.೨೦೩, ೨೦೦೧.
೮. ''ಶಿಲ್ಪಾದರ್ಶ'' ಜಿ.ಜ್ಞಾನಾನಂದ, ಸಂಪುಟ ೧, ಪು.ಸಂ.೨೦೨, ೨೦೦೧.

ಕ್ರಮ	ತಾಲಮಾನ	ಉತ್ತಮ	ಮಧ್ಯಮ	ಅಧಮ (ಕನ್ಯಸ/ಕನಿಷ್ಠ)
೧	ದಶತಾಲ	ತ್ರಿಮೂರ್ತಿಗಳು (ಬ್ರಹ್ಮ-ವಿಷ್ಣು-ಮಹೇಶ್ವರ), ದತ್ತಾತ್ರೇಯ, ಬುದ್ಧ, ಅರ್ಹಂತ, ಭಕ್ತರು (ಸೌಯುಜ್ಯ) ಬಲರಾಮ, ಶ್ರೀ ಕೃಷ್ಣ	ಸರಸ್ವತಿ, ಲಕ್ಷ್ಮೀ, ಪಾರ್ವತಿ, ಗೌರಿ,ೀ ಉಷಾ, ಭೂದೇವೀ, ದುರ್ಗಾ, ಸಪ್ತಮಾತೃಕೆಯರು ಜ್ಯೇಷ್ಠಾದೇವಿ, ಶ್ರೀರಾಮ, ಪರಶುರಾಮ,	ಇಂದ್ರ, ಅಗ್ನಿ, ಈಶಾನ, ಬೃಹಸ್ಪತಿ, ಶುಕ್ರಾಚಾರ್ಯ, ಚಂದ್ರ, ಆದಿತ್ಯ, ಅಶ್ವಿನಿಗಳು, ಮುರುಗ, ಮಾರ್ಕಂಡೇಯ, ವರುಣ, ನೀಲಾದೇವಿ, ಆರ್ಯ, ಸುಬ್ರಮಣ್ಣ, ಚಂಡೇಶ್ವರ, ನವಗ್ರಹಗಳು, ಕ್ಷೇತ್ರಪಾಲಕ, ಭಕ್ತರು (ಸಾಮೀಪ್ಯ)
	೧೦X೧೨=೧೨೦	೧೨೪ ಅಂಗುಳ	೧೨೦	೧೧೬
೨	ಸಾರ್ಧನವತಾಲ	---	ದೇವನೊಂದಿಗೆ ಇರುವ ದೇವಿಗ್ರಹಗಳು-ಸೀತೆ, ಪಾರ್ವತಿ ಲಕ್ಷ್ಮೀ ಮುಂತಾದವರಿಗೆ	---
	೯.೫X೧೨=೧೧೪	---	೧೧೪	---
೩	ನವತಾಲ	ಅಷ್ಟವಸುಗಳು,ವಿದ್ಯೇಶ್ವರರು, ಲೋಕಪಾಲಕರು, ನಿರ್ಋತಿ,ಗರುಡ, ಸೂರ್ಯ, ನಾಗರಾಜ್ಯ ರಾಹು, ದೇವ -ದೇವತೆಗಳು, ಸಿದ್ಧರು, ಚಾರಣರು, ದಿವ್ಯರು, ಭಕ್ತರು (ಸಾಲೋಕ್ಯ)	ಯಕ್ಷರು, ಅಪ್ಸರೆಯರು, ಮರುತ್ತುಗಳು, ವಿದ್ಯಾಮೂರ್ತಿಗಳು ವಿದ್ಯಾಧರು, ಋಷಿಗಳು	---
	೯X೧೨=೧೦೮	೧೧೨	೧೦೮	೧೦೪
೪	ಅಷ್ಟ ತಾಲ	ಮನುಷ್ಯರು	ಭೃಗು, ಕಶ್ಯಪ, ಭಗೀರಥ	---
	೮X೧೨=೯೬	೧೦೦	೯೬	೯೨
೫	ಸಪ್ತತಾಲ	ಸಾಧ್ಯರು, ಪಿಶಾಚಿಗಳು	ಅಗಸ್ತ್ಯ	---
	೭X೧೨=೮೪	೮೮	೮೪	೬೮
೬	ಷಟ್ ತಾಲ	---	ಕಬ್ಜರು, ಗೂನು ಬೆನ್ನಿವರು	---
	೬X೧೨=೭೨	೭೬	೭೨	೬೮

ಕ್ರಮ	ತಾಲಮಾನ	ಉತ್ತಮ	ಮಧ್ಯಮ	ಅಧಮ (ಕನ್ಯಸ/ಕನಿಷ್ಠ)
೭	ಪಂಚ ತಾಲ	ಗಣಪತಿ, ಷಣ್ಮುಖ, ವಾಮನ, ಹನುಮಂತ	ಭೂತಗಣಗಳು	ಭೂತಗಣಗಳು
	೫X೧೨=೬೦	೬೪	೬೦	೫೬
೮	ಚತುಸ್ತಾಲ	---	ವಾಮನ, ಭೂತಗಳು, ಅಪಸ್ಮಾರ	---
	೪X೧೨=೪೮	೫೨	೪೮	೪೪
೯	ತ್ರಿತಾಲ	---	ಕಿನ್ನರರು, ಬಾಲಕರು	---
	೩X೧೨=೩೬	೪೦	೩೬	೩೨
೧೦	ದ್ವಿತಾಲ	ಹಂಸ,ಮತ್ಸ್ಯ	ಕಿಂಪುರುಷ, ಕೂರ್ಮ, ಕೂಷ್ಮಾಂಡ	---
	೨X೧೨=೨೪	೨೮	೨೪	೨೦
೧೧	ಏಕ ತಾಲ	---	ಕೂರ್ಮ, ಕೀರ್ತಿಮುಖ, ಕಬಂಧ	---
	೧X೧೨=೧೨	---	೧೨	---

ಸೂಚನೆ : ೧. ಸಿಂಹ, ವೃಷಭ (ನಂದಿ) ಇತ್ಯಾದಿಗಳಿಗೆ ತಾಲಮಾನ ಕ್ರಮಗಳಿಲ್ಲ. ಶಾಸ್ತ್ರದಲ್ಲಿ ಹೇಳಿರುವ ಅಳತೆಗಳನ್ನು ಬಳಸಬೇಕು.

೨. ಕಾಶ್ಯಪ ಶಿಲ್ಪದ ವಿವರಗಳೊಂದಿಗೆ ಮಾನಸಾರ, ಸಕಲಾಧಿಕಾರ, ಸಾರಸ್ವತೀಯ ಚಿತ್ರಕರ್ಮ ಇತ್ಯಾದಿ ಶಾಸ್ತ್ರಗಳಲ್ಲಿ ಹೇಳಿರುವ ವಿವರಗಳನ್ನು ಮೇಲಿನ ಪಟ್ಟಿಕೆಯಲ್ಲಿ ಸೇರಿಸಿದೆ. ಇದು ಸಾಧಾರಣವಾದ ತಾಲಮಾನ ಕ್ರಮ. ವಿಶೇಷ ವಿವರಗಳು ಆಯಾ ಶಾಸ್ತ್ರಗಳಲ್ಲಿ ಲಕ್ಷಣಗಳೊಂದಿಗೇ ಉಕ್ತವಾಗಿರುತ್ತವೆ. ಆ ಅಳತೆಗಳನ್ನು ಅನುಸರಿಸಬೇಕು.

ಮುಂತಾದವು ದ್ವಾದಶ ತಾಲದಲ್ಲಿ ರೂಪಗೊಳ್ಳಬೇಕು.

ಇಷ್ಟೆಲ್ಲಾ ವಿವರಗಳು ದೋರೆತರೂ, ಭಾಗಶಃ ಅನೇಕ ಮಾನಕ್ರಮಗಳು ನಮಗೆ ಲಭಿಸಿದ್ದರೂ, ಪ್ರತಿಮಾ ಮಾನ ಲಕ್ಷಣಂ ನಲ್ಲಿ (೧:೬) ಇಂತು ಹೇಳಲಾಗಿದೆ.

''ಯತ್‌ಕಿಂಚಿತ್ ಕಾಯಕಾಯಾಮಂ ವಿಭಜ್ಯ ನವಭಾಗತಃ ಏಕತಾಳ ಮುಖಂ ಕುರ್ಮಾದ್ವಿಸ್ತರಂ ಚ ತಥೈವ ಚ॥'' ಅಂದರೆ ದೇಹವನ್ನು ಒಂಭತ್ತು ಭಾಗಗಳಾಗಿ ವಿಭಜಿಸಿ, ಅದರಲ್ಲಿ ಮುಖವು ಒಂದು ಭಾಗವಾಗಿ (ಅದನ್ನು ಒಂದು ತಾಲ ಎನ್ನಲಾಗುತ್ತದೆ) ಅದರ ಅಗಲವು ಅಷ್ಟೇ ಇರುವಂತೆ ರೂಪಿಸಬೇಕು.

ರೂಪಮಂಡನದಲ್ಲಿ 'ಸರ್ವೇ ದೇವಾನವಾಂಶಕಾ' (೧:೬) ಎಂದು ಹೇಳಿದೆ. ಅಗ್ನಿ ಪುರಾಣದಲ್ಲಿ (೪೪:೨) 'ಶಿಲಾಂ ಶಿಲ್ಪೀ ತು ನವಧಾ ವಿಭಜ್ಯ ನವಮೇ ಶಕೇ' ಎಂದು, ಶುಕ್ರ ನೀತಿಯು (೪:೪೨೦) ನವತಾಳ ಸ್ಮೃತಾದೈವೀ ಎಂದು, ಬೃಹತ್ ಸಂಹಿತೆಯಲ್ಲಿ (೫೨:೨೦)

''ದಶರಥ ತನಯೋ ರಾಮೋ ಬಲಿಶ್ಚ ವೈರೋಚನಿ : ಶತಂ ವಿಶಮ್

ದ್ವಾದಶಹಾನ್ಯಾ ಶೇಷಾ: ಪ್ರವರ ಸಮನ್ಯೂಸಪರಿಮಾಣಾ: ॥ ''

ಅಂದರೆ, ರಾಮ, ಬಲಿ, ವೈರೋಚನ ಇವರನ್ನು ೧೨೦ ಭಾಗಗಳಲ್ಲೂ ಉಳಿದೆಲ್ಲ ದೇವತೆಗಳನ್ನು ೧೧೨ ಭಾಗಗಳಲ್ಲೂ ರೂಪಿಸಬೇಕು ಎಂದು ಹೇಳಲಾಗಿದೆ.

ಇದೇ ಅಭಿಪ್ರಾಯವು ಮತ್ಸ್ಯಪುರಾಣ (೨೫೭:೧) ದಲ್ಲಿ 'ಮುಖಮಾನೇನ ಕರ್ತವ್ಯ ಸರ್ವಾವಯಕಲ್ಪನಾ' ಎಂದೂ, ವಿಷ್ಣುಧರ್ಮೋತ್ತರ ಪುರಾಣದಲ್ಲಿ (೩೮:೬) 'ಕಾರ್ಯಹಂಸ ಕ್ರಮಾಣೇನ ದೇವಾ............ 'ಎಂದೂ ಹೇಳಿದೆ. ಹಂಸ ಪುರಷ ಉದ್ದವು ೧೦೮ ದೇಹಾಂಗುಳಗಳೆಂದು ಅದೇ ಪುರಾಣದಲ್ಲಿ ಸ್ಪಷ್ಟಗೊಳಿಸಲಾಗಿದೆ. ಇದರಿಂದ ದೇವತಾ ಪ್ರತಿಮೆಗಳನ್ನು ನವತಾಲಕದಲ್ಲಿ ರೂಪಿಸುವುದು ಬಹು ಪ್ರಾಚೀನ ಪದ್ಧತಿ ಎಂಬುವುದು ಗೊತ್ತಾಗುತ್ತದೆ. ತಾಲಮಾನ ಪ್ರಮಾಣದಲ್ಲಿ ಯಾವುದಾದರೂ ಮೂರ್ತಿಯ ಪ್ರಮಾಣದ ಬಗ್ಗೆ ಅನುಮಾನ ಉಂಟಾದರೆ ಅಂತಹ ಸಂದರ್ಭದಲ್ಲಿ ನವತಾಳವನ್ನು ಅನುಸರಿಸಬೇಕೆಂಬ ನಿರ್ದೇಶನವು ಶಿಲ್ಪಶಾಸ್ತ್ರದಲ್ಲಿ ಲಭಿಸುತ್ತದೆ.

ಮೂರ್ತಿಶಿಲ್ಪ ರಚನೆಯಲ್ಲಿ ತಾಲಮಾನಗಳನ್ನು ಅನುಸರಿಸಿದಂತೆ ವಿವಿಧ ಸೂತ್ರಗಳನ್ನೂ ಅನುಸರಿಸಬೇಕಾಗುತ್ತದೆ. ನಿರ್ಧಿಷ್ಟವಾದ ಕೆಲವು ಅಂಗ ಉಪಾಂಗಗಳ ಮೂಲಕ ಹಾಯ್ದು ಹೋಗುವ ರೇಖೆಗಳನ್ನು ನಿಗದಿಪಡಿಸಲಾಗಿದೆ. ಈ ರೇಖೆಗಳನ್ನು ಸೂತ್ರಗಳೆಂದು ಕರೆಯಲಾಗುತ್ತದೆ.

೧. ಕೇಶಾಂತ ೨. ಹನ್ವಂತ ೩. ಹಿಕ್ಕಾ ೪. ಸ್ತನ ೫. ನಾಭಿ ೬. ಮೇಢ್ರ ೭. ಊರ್ವಂತ ೮. ಜಾನು ೯. ಜಂಘ ೧೦. ಭೂಮಿ. ಇವುಗಳೆಲ್ಲವೂ ಮೂರ್ತಿಗೆ ಅಡ್ಡಲಾಗಿ ಹಾಯ್ದು ಹೋಗುವ ಸೂತ್ರಗಳಾಗಿವ್. ಇನ್ನು ಪ್ರತಿಮೆಗಳ ಅಗಲದ ಅಳತೆಯನ್ನು ತಿಳಿಯಲು ಅವುಗಳ ಅಂಗಾಂಗಗಳ ಭಂಗಿಯನ್ನು ತಿಳಿಯಲು ಹಲವು ಸೂತ್ರಗಳನ್ನು ಅನುಸರಿಸುವರು. ಅವುಗಳು ಹೀಗಿವೆ. ೧. ಪೂರ್ವ ಸೂತ್ರ ೨. ಮಧ್ಯ ಸೂತ್ರ ೩. ಪುಟ ಪರ್ಯಂತ ಸೂತ್ರ ೪. ವಕ್ತ್ರಬಾಹ್ಯ ಸೂತ್ರ ೫. ನೇತ್ರಪರ್ಯಂತ

೯. ''ಶಿಲ್ಪಾದರ್ಶ'' ಜಿ.ಜ್ಞಾನಾನಂದ, ಸಂಪುಟ ೧, ಪು.ಸಂ.೨೨೩, ೨೦೦೧ .

ಸೂತ್ರ ೬. ಮುಖ ಪರ್ಯಂತ ಸೂತ್ರ ೭. ಕರ್ಣಸೂತ್ರ ೮. ಕಕ್ಷಪರ್ಯಂತ ಸೂತ್ರ ೯. ಬಾಹು ಪರ್ಯಂತ ಸೂತ್ರ ೧೦. ಪರಭುಜಾವಧಿ ಸೂತ್ರ ೧೧. ಶಿರಃ ಪೃಷ್ಠಾವಸಾನ ಸೂತ್ರ. ಹೀಗೆ ಈ ಎಲ್ಲ ಸೂತ್ರಗಳನ್ನು ಹಾಗೂ ತಾಲಮಾನಗಳನ್ನು ಅನುಸರಿಸಿ ರಥಶಿಲ್ಪಗಳಲ್ಲಿ ಅನೇಕ ಮೂರ್ತಿಶಿಲ್ಪಗಳನ್ನು ರಚಿಸುವರು[೧೦].

ಹೀಗೆ ಪ್ರಾದೇಶಿಕವಾಗಿ ರಥಗಳಲ್ಲಿ ಕಂಡುಬರುವ ಮೂರ್ತಿಶಿಲ್ಪಗಳ ವಿವರಗಳೊಂದಿಗೆ, ರಥಗಳ ವಿವಿಧ ಭಾಗಗಳಲ್ಲಿ ಕಂಡು ಬರುವ ಸಾಮ್ಯತೆ ಹಾಗೂ ವ್ಯತ್ಯಾಸಗಳನ್ನು ಕುರಿತು ತಿಳಿಯಲು ಈಗ ಪ್ರಯತ್ನಿಸುವಾ.

ರಥಶಿಲ್ಪವನ್ನು ಮುಖ್ಯವಾಗಿ ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

I. ಅಡಿಪಾಯ ಭಾಗ

II. ಅಧಿಷ್ಠಾನ ಭಾಗ

III. ಮಂಟಪ ಭಾಗ


IV. ವಿಮಾನ ಗೋಪುರ ಭಾಗ.

I. **ಅಡಿಪಾಯ ಭಾಗ :** ರಥದ ಅಡಿಪಾಯ ಭಾಗವು ದೀರ್ಘ ಕಾಲ ಬಾಳಿಕೆ ಬರುವ ಕಟ್ಟಿಗೆಗಳಿಂದ ಭದ್ರವಾಗಿ ನಿರ್ಮಾಣಗೊಂಡಿದ್ದು, ಚಕ್ರ, ಅಚ್ಚು, ಓಟಿ ಹಾಗೂ ಕಲಾತ್ಮಕ ಆಧಾರ ತೊಲೆಗಳನ್ನು ಒಳಗೊಂಡಿರುತ್ತದೆ. ರಥದ ಉದ್ದಗಲಗಳ ಪ್ರಮಾಣಕ್ಕೆ ತಕ್ಕಂತೆ ಚಕ್ರಗಳನ್ನು ಅಡಿಪಾಯ ಭಾಗದಲ್ಲಿ ಜೋಡಿಸಲಾಗಿರುತ್ತದೆ. ರಥಗಳು ನಾಲ್ಕರಿಂದ ಹದಿನಾರು ಗಾಲಿಗಳನ್ನು ಹೊಂದಿರಬಹುದು. ಹಲಗೆಯ ಚಕ್ರ, ಅರೆಗಳನ್ನುಳ್ಳ ಚಕ್ರ, ಶಿಲೆಯ ಚಕ್ರ ಹಾಗೂ ಲೋಹದ ಚಕ್ರಗಳನ್ನು ರಥಗಳಲ್ಲಿ ಅಳವಡಿಸಿರುವುದನ್ನು ಕಾಣಬಹುದು.

ರಥದ ಅಚ್ಚು ಚೌಕಾಕಾರದ ತೊಲೆಯಂತಿದ್ದು ಎರಡೂ ಬದಿಗಳಲ್ಲಿ ಚಕ್ರಗಳು ತಿರುಗುವಷ್ಟು ಭಾಗ ದುಂಡಾಗಿರುತ್ತದೆ. ಈ ಅಚ್ಚುಗಳನ್ನು ಮರ ಇಲ್ಲವೆ ಕಬ್ಬಿಣದಿಂದ ತಯಾರಿಸಲಾಗಿರುತ್ತದೆ.

ರಥದ ಅಚ್ಚಿನ ಮೇಲ್ಭಾಗದಲ್ಲಿ ಹೊಂದಿಕೊಂಡೇ ಅಷ್ಟೇ ಗಾತ್ರದ ದಪ್ಪವಾದ ತೊಲೆಯನ್ನು ಅಡಿಪಾಯದ ಎತ್ತರವನ್ನು ಹೆಚ್ಚಿಸಲು ಜೋಡಿಸುತ್ತಾರೆ. ಅದನ್ನು ಉಪಪೀಠವೆಂತಲೂ ಕರೆಯುವುದುಂಟು. ಗ್ರಾಮೀಣ ಭಾಷೆಯಲ್ಲಿ ಇದನ್ನು ಓಟೆ ಎಂದು ಕರೆಯಲಾಗುತ್ತದೆ[೧೧]. ಉಪಪೀಠದ ಮೇಲ್ಭಾಗದಲ್ಲಿ ಚೌಕಾಕಾರದ ಕಲಾತ್ಮಕ ತೊಲೆಗಳನ್ನು ಜೋಡಿಸಿರುತ್ತಾರೆ. ಈ ತೊಲೆಗಳು ಎರಡೂ ತುದಿಗಳಲ್ಲಿ ಸಾಂಪ್ರದಾಯಿಕ ಶೈಲಿಯ ಪ್ರಾಣಿಶಿಲ್ಪಗಳನ್ನು ಹೊಂದಿರುತ್ತವೆ. ರಥದಲ್ಲಿ ನವುರಾದ ಕುಸುರಿ ಕೆತ್ತನೆ ಕೆಲಸ ಈ ಭಾಗದಿಂದಲೇ ಆರಂಭವಾಗುತ್ತದೆ. ಉಪಪೀಠದ ಮೇಲೆ ದಪ್ಪವಾದ ತೊಲೆಗಳ ಜೋಡಣೆಯಿಂದ ರಥದ ಅಡಿಪಾಯವು ಗಾಲಿಗಳ ಮಟ್ಟದಿಂದ ಎತ್ತರವನ್ನು ಹೆಚ್ಚಿಸಿಕೊಳ್ಳುತ್ತದೆ. ಈ ಎಲ್ಲಾ ತೊಲೆಗಳ ಮೇಲ್ಭಾಗದಲ್ಲಿ ದಪ್ಪವಾದ ಹಲಗೆಗಳನ್ನು ಭದ್ರವಾಗಿ

೧೦."ಶಿಲ್ಪಾ ದರ್ಶ" ಜಿ.ಜ್ಞಾನಾನಂದ, ಸಂಪುಟ ೧, ಪು.ಸಂ.೨೩೦, ೨೦೦೧ .
೧೧."ದೇಗುಲ ರಥ ಶಿಲ್ಪ" ಧ್ರುವರಾಜ ನಾ. ಗದಗಕರ, ಪು.ಸಂ. ೧೩, ೧೯೯೯.



ರಥಗಳ ವಿಂಗಡಣೆ , ವಸ್ತು ವಿಷಯ
ರಥದ ಭಾಗಗಳು
ಅಡಿಪಾಯ ಭಾಗ
ಅಧಿಷ್ಠಾನ ಭಾಗ
ಮಂಟಪ ಭಾಗ
ಗೋಪುರ ಭಾಗ
ಅಡಿಪಾಯ ಭಾಗ
ಕಾಷ್ಠ ಮಾಧ್ಯಮದ ರಥಗಳ ಅಡಿಪಾಯ ಭಾಗ
ಗಡ್ಡಿ ರಥಗಳು
ಅಂಕಣ ರಥಗಳು
ಪ್ರಾಣಿ ಶಿಲ್ಪಗಳು
ಮಹಾತ್ಮರ ಶಿಲ್ಪಗಳು
ದೇವತಾ ಶಿಲ್ಪಗಳು
ಮಿಥುನ ಶಿಲ್ಪಗಳು
ನಕ್ಷಾ ಶಿಲ್ಪಗಳು
ಲೋಹ ಮಾಧ್ಯಮದ ರಥಗಳ ಅಡಿಪಾಯ ಭಾಗ
ಕಬ್ಬಿಣ ರಥ
ಬೆಳ್ಳಿ ರಥ
ಚಿನ್ನದ ರಥ
ಗಡ್ಡಿ ರಥ
ಅಂಕಣ ರಥ
ಸಂಕೀರ್ಣ ಮಾಧ್ಯಮದ ರಥದ ಅಡಿಪಾಯ ಭಾಗ
ಕಟ್ಟುವ ರಥಗಳು
ತಟ್ಟಿ ರಥಗಳು
ತೆಪ್ಪದ ರಥಗಳು
ಹೂವಿನ ರಥಗಳು
ಶಿಲಾ ಮಾಧ್ಯಮದ ರಥದ ಅಡಿಪಾಯ ಭಾಗ
ಅಧಿಷ್ಠಾನ ಭಾಗ
ಕಾಷ್ಠ ಮಾಧ್ಯಮದ ರಥಗಳ ಅಧಿಷ್ಠಾನ ಭಾಗ
ಗಡ್ಡಿ ರಥಗಳು
ಅಂಕಣ ರಥಗಳು
ದೇವತಾ ಶಿಲ್ಪಗಳು
ಮಹಾತ್ಮರ ಶಿಲ್ಪಗಳು
ಪೌರಾಣಿಕ ಶಿಲ್ಪಗಳು
ಪ್ರಾಣಿ ಶಿಲ್ಪಗಳು
ಮಿಥುನ ಶಿಲ್ಪಗಳು
ನಕ್ಷಾ ಶಿಲ್ಪಗಳು
ಲೋಹ ಮಾಧ್ಯಮದ ರಥಗಳ ಅಧಿಷ್ಠಾನ ಭಾಗ
ಕಬ್ಬಿಣ ರಥ
ಬೆಳ್ಳಿ ರಥ
ಚಿನ್ನದ ರಥ
ಗಡ್ಡಿ ರಥ
ಅಂಕಣ ರಥ
ದೇವತಾ ಶಿಲ್ಪಗಳು
ಪ್ರಾಣಿ ಶಿಲ್ಪಗಳು
ನಕ್ಷಾ ಶಿಲ್ಪಗಳು
ಸಂಕೀರ್ಣ ಮಾಧ್ಯಮದ ರಥದ ಅಧಿಷ್ಠಾನ ಭಾಗ
ಕಟ್ಟುವ ರಥಗಳು
ತಟ್ಟಿ ರಥಗಳು
ತೆಪ್ಪದ ರಥಗಳು
ಹೂವಿನ ರಥಗಳು
ಶಿಲಾ ಮಾಧ್ಯಮದ ರಥದ ಅಧಿಷ್ಠಾನ ಭಾಗ

ಜೋಡಿಸಲಾಗುತ್ತದೆ.

ಈ ರೀತಿಯಾಗಿ ನಿರ್ಮಾಣಗೊಂಡ ರಥದ ಅಡಿಪಾಯ ಭಾಗವನ್ನು ಮಾಧ್ಯಮಗಳಿಗನುಸಾರವಾಗಿ ಈ ಕೆಳಕಂಡಂತೆ ವಿಂಗಡಿಸಲಾಗಿದೆ.

ಅ. ಕಾಷ್ಠ ಮಾಧ್ಯಮ ರಥಗಳ ಅಡಿಪಾಯ ಭಾಗ.

ಬ. ಲೋಹ ಮಾಧ್ಯಮ ರಥಗಳ ಅಡಿಪಾಯ ಭಾಗ.

ಕ. ಸಂಕೀರ್ಣ ಮಾಧ್ಯಮ ರಥಗಳ ಅಡಿಪಾಯ ಭಾಗ.

ಡ. ಶಿಲಾ ಮಾಧ್ಯಮ ರಥಗಳ ಅಡಿಪಾಯ ಭಾಗ.

ಹೀಗೆ ನಾಲ್ಕು ಮಾಧ್ಯಮದ ರಥಗಳ ಅಡಿಪಾಯ ಭಾಗಗಳನ್ನು ಪ್ರಾದೇಶಿಕವಾಗಿ ಕಾಣಸಿಗುವ ರಥಗಳ ಉದಾಹರಣೆಗಳೊಂದಿಗೆ ಅಭ್ಯಸಿಸುವಾ.

ಅ. ಕಾಷ್ಠ ಮಾಧ್ಯಮ ರಥಗಳ ಅಡಿಪಾಯ ಭಾಗ :

ಕಾಷ್ಠ ಮಾಧ್ಯಮ ರಥಗಳ ಅಡಿಪಾಯ ಭಾಗಗಳನ್ನು ಎರಡು ವಿಧಗಳಲ್ಲಿ ವಿಂಗಡಿಸಬಹುದು.

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಡಿಪಾಯ ಭಾಗ.

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಅಡಿಪಾಯ ಭಾಗ.

ಈ ಎರಡೂ ವಿಧದ ರಥಗಳ ಅಡಿಪಾಯ ಭಾಗಗಳನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡುವಾ.

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಡಿಪಾಯ ಭಾಗ :

ನಾಡಿನಾದ್ಯಂತ ಅನೇಕ ಗಡ್ಡಿ ರಥಗಳು ಕಾಣಸಿಗುತ್ತವೆ. ಪ್ರಾದೇಶಿಕವಾಗಿ ಅವುಗಳ ಅಡಿಪಾಯ ಭಾಗದಲ್ಲಿ ಸಾಮ್ಯ ಹಾಗೂ ವ್ಯತ್ಯಾಸವನ್ನು ಕಾಣಬಹುದು. ಸಾಮಾನ್ಯವಾಗಿ ರಥಗಳಿಗೆ ನಾಲ್ಕು ಚಕ್ರಗಳನ್ನು ಅಳವಡಿಸಿರುವುದು ಕಂಡುಬರುತ್ತದೆ. ಆದರೆ ಕೆಲವು ರಥಗಳಲ್ಲಿ ಐದು,ಆರು,ಎಂಟು,ಹತ್ತು,ಹದಿನಾಲ್ಕು,ಹದಿನಾರು ಹೀಗೆ ಬಹುಸಂಖ್ಯೆಯಲ್ಲಿ ಚಕ್ರಗಳನ್ನು ಕಾಣಬಹುದು. ಆಗಮಸಾರದಲ್ಲಿ ರಥದ ಚಕ್ರಗಳನ್ನು ಕುರಿತು ಈ ರೀತಿ ಹೇಳಲಾಗಿದೆ.

''ಚತುಶ್ಚಕ್ರಸ್ತು ಶಕಟಾಃ ಷಟ್ ಚಕ್ರಂ ಸ್ಯಂದನಂ ತತಃ

ಅಷ್ಟಚಕ್ರಃ ಸುಭದ್ರಶ್ಚ ಮೇರೋಶ್ಚ ದಶಚಕ್ರಃ''

ನಾಲ್ಕು ಚಕ್ರಗಳುಳ್ಳ ರಥವನ್ನು ಶಕಟವೆಂತಲೂ, ಎಂಟು ಚಕ್ರಗಳನ್ನುಳ್ಳ ರಥವನ್ನು ಸುಭದ್ರವೆಂತಲೂ, ಹತ್ತು ಚಕ್ರಗಳನ್ನುಳ್ಳ ರಥವನ್ನು ಮೇರುವೆಂತಲೂ ಆಗಮಸಾರದಲ್ಲಿ ಹೇಳಲಾಗಿದೆ[೨].

ಕರ್ನಾಟಕದ ಹಲವು ರಥಗಳು ಮೂರು ವಿಧದ ಚಕ್ರಗಳನ್ನು ಹೊಂದಿವೆ. ಇವುಗಳಲ್ಲಿ

೧೨.''ಪುರಿ ಜಗನ್ನಾಥ ರಥೋತ್ಸವ '' ಪಿ.ಚಿದಾನಂದ, ಪ್ರಜಾವಾಣಿ, ಜುಲೈ ೧೯೯೮.

ಅರೆಗಳನ್ನುಳ್ಳ ಚಕ್ರಗಳಿಗಿಂತಲೂ ಹಲಗೆಯ ಮತ್ತು ಶಿಲೆಯ ಚಕ್ರಗಳು ಹೆಚ್ಚಾಗಿ ಕಂಡುಬರುತ್ತವೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕು ಮರೆಮ್ಮನಹಳ್ಳಿಯ ರಥಗಳು, ಇದೇ ಜಿಲ್ಲೆಯ ಕೂಡ್ಲಗಿ ತಾಲೂಕು ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನದ ರಥ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕು ಕನಕಗಿರಿಯ ಕನಕರಾಯನ ರಥ, ಬೆಳಗಾವಿ ಜಿಲ್ಲೆ ಬೈಲಹೊಂಗಲದ ಮಾರುತಿ ದೇವಸ್ಥಾನದ ರಥ, ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದ ರಥ, ಹುಬ್ಬಳ್ಳಿಯ ಮೂರು ಸಾವಿರ ಮಠದ ರಥಗಳು, ಧಾರವಾಡದ ರಾಘವೇಂದ್ರ ಸ್ವಾಮಿ ರಥ, ಧಾರವಾಡ ಜಿಲ್ಲೆ ಹುನಗುಂದ ತಾಲೂಕಿನ ನಾಲವಡಿಯ ಬಸವೇಶ್ವರ ದೇವಸ್ಥಾನದ ರಥ, ಹಾವೇರಿ ಜಿಲ್ಲೆ ಹಾನಗಲ್ಲದ ತಾರಕೇಶ್ವರ ದೇವಸ್ಥಾನದ ರಥ, ಬಿಜಾಪೂರ ಜಿಲ್ಲೆ ಸಿಂದಗಿ ತಾಲೂಕಿನ ಗೋಲಗೇರಿಯ ಗೊಲ್ಲಾಳೇಶ್ವರ ರಥ, ಚಾಂದ ಕೌವಟೆಯ ಬಸವೇಶ್ವರ ರಥ, ರಾಯಚೂರು ಜಿಲ್ಲೆಯ ಗಬ್ಬೂರದ ಬೂದಿಬಸವೇಶ್ವರ ರಥ, ಕುಕ್ಕೆ ಸುಬ್ರಹ್ಮಣ್ಯಂದ ಸುಬ್ರಹ್ಮಣ್ಯ ಸ್ವಾಮಿಯ ರಥಗಳು, ಶ್ರೀರಂಗಪಟ್ಟಣದ ಶ್ರೀರಂಗನಾಥನ ರಥ, ಬೆಳಗಲಿ ಜಿಲ್ಲೆ ಹುಕ್ಕೇರಿ ತಾಲೂಕಿನ ಸಂಕೇಶ್ವರದ ಶಂಕರಲಿಂಗ ದೇವಸ್ಥಾನದ ರಥ, ನಂಜನಗೂಡಿನ ನಂಜುಡೇಶ್ವರ ದೇವಸ್ಥಾನದ ರಥಗಳು. ಇವುಗಳಲ್ಲದೆ ದಕ್ಷಿಣ ಕರ್ನಾಟಕದ ಶಿರಸಿ, ಸಿದ್ದಾಪೂರ, ಧರ್ಮಸ್ಥಳ, ಕುಂದಾಪೂರ ಹಾಗೂ ಇನ್ನು ಹಲವಾರು ದೇವಾಸ್ಥಾನಗಳ ರಥಗಳಲ್ಲಿ ಮರದ ಹಲಗೆಗಳನ್ನುಳ್ಳ ಚಕ್ರಗಳನ್ನು ಕಾಣಬಹುದು ಉತ್ತರ ಕರ್ನಾಟಕದ ಕೇವಲ ಕೆಲವು ರಥಗಳಲ್ಲಿ ಮರದ ಚಕ್ರಗಳು ಕಂಡುಬಂದರೆ ದಕ್ಷಿಣ ಕರ್ನಾಟಕದ ಹಲವಾರು ರಥಗಳಲ್ಲಿ ಮರದ ಚಕ್ರಗಳನ್ನು ಕಾಣಬಹುದು.

ಉತ್ತರ ಕರ್ನಾಟಕದ ಅನೇಕ ರಥಗಳಲ್ಲಿ ಶಿಲೆಯ ಚಕ್ರಗಳು ಕಂಡುಬರುತ್ತವೆ. ಬಾಗಲಕೋಟ ಜಿಲ್ಲೆಯ ಬದಾಮಿಯ ಬನಶಂಕರಿ ರಥ, ಇದೇ ಜಿಲ್ಲೆಯ ಶಿರೂರದ ಸಿದ್ಧೇಶ್ವರ ರಥ, ಮುಚಖಂಡಿಯ ವೀರಭದ್ರ ರಥ, ಬದಾಮಿ ತಾಲೂಕಿನ ಕೆರೂರದ ರಾಯಚೋಟೇಶ್ವರ ರಥ, ರೋಣ ತಾಲೂಕು ಗಜೇಂದ್ರಗಡದ ಕಾಲಕಾಲೇಶ್ವರ ರಥ, ಗದಗ ಜಿಲ್ಲೆ ಶಿರಹಟ್ಟಿಯ ಫಕೀರ ಸ್ವಾಮಿಯ ರಥ, ಶಿರಹಟ್ಟಿ ತಾಲೂಕಿನ ವರವಿಯ ಮೌನೇಶ್ವರ ರಥ, ಚಿಂಚಲಿ ತಾಲೂಕು ವೀರಭದ್ರ ರಥ, ಹರ್ತಿಯ ವೀರಭದ್ರ ರಥ, ಕೂಡಲ ಸಂಗಮದ ಸಂಗಮನಾಥನ ರಥ, ಬದಾಮಿ ತಾಲೂಕಿನ ಚೊಳಚಗುಡ್ಡದ ವೀರಭದ್ರನ ರಥ, ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ರಥ, ಗೋಕಾಕ ತಾಲೂಕಿನ ಕೊಣ್ಣೂರಿನ ಮರಡಿ ಮಠದ ರಥ, ಅಂಕಲಗಿಯ ಅಡವಿ ಅಜ್ಜನವರ ರಥ, ರಾಯಚೂರು ಜಿಲ್ಲೆಯ ಮಾನ್ವಿಯ ಯಲ್ಲಮ್ಮನ ರಥ, ಕವಿತಾಳದ ತ್ರ್ಯಂಬಕೇಶ್ವರ ರಥ, ಗುಂಜನಹಳ್ಳಿಯ ಗಿರಿನಾಥನ ರಥ, ಲಿಂಗಸೂಗೂರು ತಾಲೂಕಿನ ಮಸ್ಕಿಯ ಮಲ್ಲಕಾರ್ಜುನ ರಥ, ಸಿಂಧನೂರು ತಾಲೂಕಿನ ಬಳಗಾನೂರ ಆಂಜನೇಯನ ರಥ, ಕೊಪ್ಪಳ ಜಿಲ್ಲೆಯ ಹುಲಗಿಯ ಹುಲಿಗೆಮ್ಮನ ರಥ, ಕೊಪ್ಪಳದ ಗವಿಸಿದ್ಧೇಶ್ವರ ರಥ, ಯಲಬುರ್ಗಾ ತಾಲೂಕಿನ ಕುಕನೂರದ ಮಹಾಮಾಯಿ ರಥ, ಗುದ್ನೆಪ್ಪನ ಮಠದ ರಥ, ಇಟಗಿಯ ಆಂಜನೇಯ ರಥ, ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿ ತಾಲೂಕು ಸೋಗಿಯ ವೀರಭದ್ರ ರಥ, ಕುರುವತ್ತಿ ಬಸವೇಶ್ವರ ರಥ, ಮೊದಲಗಟ್ಟಿ ಆಂಜನೇಯನ ರಥ, ಚಳಗುರ್ಕಿಯ ಮರಿತಾತನ ರಥ, ಉಜನಿ ಸಿದ್ಧೇಶ್ವರ ರಥ, ಸಂಡೂರು ಕುಮಾರೇಶ್ವರ ರಥ, ಗುಲಬುರ್ಗಾ ಜಿಲ್ಲೆ ಜೇವರಗಿ ತಾಲೂಕು ಜೇರಟಗಿಯ ಬಸವೇಶ್ವರ ರಥ, ಯಾದಗಿರಿ ತಾಲೂಕು ಕಾಳಬೆಳಗುಂದಿಯ ಬಸವೇಶ್ವರ ರಥ, ಬಿಜಾಪೂರ ಜಿಲ್ಲೆಯ

ಮುದ್ದೇಬಿಹಾಳ ತಾಲೂಕಿನ ಢವಳಗಿಯ ಮಡಿವಾಳೇಶ್ವರ ರಥ, ಜಾಯವಾಡಲಗಿಯ ಸೋಮನಾಥ ರಥ, ಹಡ್ಲಗೇರಿಯ ಬನಶಂಕರಿ ರಥ, ಬಸರಕೋಡದ ಪವಾಡ ಬಸವೇಶ್ವರ ರಥ, ಕಾರವಾರ ಜಿಲ್ಲೆಯ ಉಳವಿಯ ಚನ್ನಬಸವೇಶ್ವರ ರಥ, ಹಾವೇರಿ ಜಿಲ್ಲೆ ಹಿರೂರು ಬಸವೇಶ್ವರ ರಥ, ಸಾವಸಗಿಯ ವೀರಭದ್ರೇಶ್ವರ ರಥ, ಹೀಗೆ ಉತ್ತರ ಕರ್ನಾಟಕದ ಇನ್ನೂ ಹಲವಾರು ಕಾಷ್ಠ ಮಾಧ್ಯಮದ ಗಡ್ಡಿ ರಥಗಳು ಶಿಲೆಯ ಚಕ್ರಗಳನ್ನು ಹೊಂದಿವೆ

ಮರದ ಚಕ್ರಗಳನ್ನು ಹೊಂದಿರುವ ರಥಗಳಲ್ಲಿ ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕು ಕೊಟ್ಟೂರಿನ ರಥ, ಬಿಜಾಪೂರ ಜಿಲ್ಲೆ ಸಿಂದಗಿ ತಾಲೂಕಿನ ಗೋಲಗೇರಿಯ ಗೊಲ್ಲಳೇಶ್ವರ ರಥ, ಹುಬ್ಬಳ್ಳಿಯ ಮೂರು ಸಾವಿರ ಮಠದ ರಥ, ಬಳ್ಳಾರಿ ಜಿಲ್ಲೆ ಹೊಸಪೇಟ ತಾಲೂಕು ಮರೆಮ್ಮನ ಹಳ್ಳಿಯ ರಥ, ಹಂಪೆಯ ವಿರೂಪಾಕ್ಷ ದೇವಾಲಯದ ರಥ, ಉಜನಿಯ ಮರುಳು ಸಿದ್ಧೇಶ್ವರ ರಥ, ರಾಯಚೂರು ಜಿಲ್ಲೆ ಗಬ್ಬೂರದ ಬೂದಿಬಸವೇಶ್ವರ ರಥ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ರಥ, ಬನವಾಸಿಯ ಮಧುಕೇಶ್ವರ ರಥ, ಗೋಕರ್ಣದ ಮಹಾಬಲೇಶ್ವರ ರಥ, ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ರಥ, ಈ ಎಲ್ಲ ರಥಗಳು ಸುಮಾರು ಏಳು ಅಡಿಯಿಂದ ಅಡಿಗಳವರೆಗೆ ವ್ಯಾಸವನ್ನು ಹೊಂದಿದ ಮರದ ಚಕ್ರಗಳನ್ನು ಹೊಂದಿವೆ.

ಶಿಲೆಯ ಚಕ್ರಗಳನ್ನು ಹೊಂದಿರುವ ರಥಗಳಲ್ಲಿ ಬಾದಾಮಿ ಬನಶಂಕರಿಯ ರಥ, ಬಾಗಲಕೋಟ ಜಿಲ್ಲೆ ಶಿರೂರದ ಸಿದ್ಧೇಶ್ವರ ರಥ, ಗದಗ ಜಿಲ್ಲೆ ಶಿರಹಟ್ಟಿಯ ಫಕೀರಸ್ವಾಮಿ ರಥ, ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ರಥ, ಕೊಪ್ಪಳದ ಗವಿಸಿದ್ಧೇಶ್ವರ ರಥ, ಹುಲಗಿಯ ಹುಲಿಗೆಮ್ಮ ದೇವಿ ರಥ, ಬಿಜಾಪೂರ ಜಿಲ್ಲೆಯ ಢವಳಗಿಯ ಮಡಿವಾಳೇಶ್ವರ ರಥ, ಕೂಡಲಸಂಗಮದ ಸಂಗಮನಾಥನ ರಥ, ಗುಲಬುರ್ಗಾ ಜಿಲ್ಲೆ ಜೇವರಗಿ ತಾಲೂಕು ಜೇರಟಗಿಯ ಬಸವಣ್ಣನ ರಥ, ಈ ಎಲ್ಲ ರಥಗಳು ಸುಮಾರು ಏಳು ಅಡಿಗಳಿಂದ ಹತ್ತು ಅಡಿ ವ್ಯಾಸವುಳ್ಳ ಗಾಲಿಗಳನ್ನು ಹೊಂದಿವೆ.

ಮರದ ಚಕ್ರಗಳಿರುವ ರಥಗಳಲ್ಲಿ ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ರಥ, ನಂಜನಗೂಡಿನ ನಂಜುಂಡೇಶ್ವರ ರಥ, ಬನವಾಸಿಯ ಮಧುಕೇಶ್ವರ ರಥ, ಹುಬ್ಬಳ್ಳಿಯ ಮೂರುಸಾವಿರ ಮಠದ ರಥ, ಈ ಎಲ್ಲ ರಥಗಳು ಸುಮಾರು ಎಂಟು ಅಡಿಗಳಿಂದ ಒಂಬತ್ತು ಅಡಿಗಳಷ್ಟು ವ್ಯಾಸವುಳ್ಳ ಮರದ ಗಾಲಿಗಳನ್ನು ಹೊಂದಿವೆ.

ಶಿಲೆಯ ಚಕ್ರಗಳನ್ನು ಹೊಂದಿರುವ ರಥಗಳಲ್ಲಿ ಬಿಜಾಪೂರ ಜಿಲ್ಲೆಯ ಢವಳಗಿಯ ಮಡಿವಾಳೇಶ್ವರ ರಥವು ಅತೀ ಎತ್ತರವಾದ ಗಾಲಿಗಳನ್ನು ಹೊಂದಿದೆ. ಸುಮಾರು ಹತ್ತು ಅಡಿ ವ್ಯಾಸವುಳ್ಳ ಚಕ್ರಗಳನ್ನು ಹೊಂದಿರುವ ಈ ರಥವು ನಾಡಿನ ಅತೀ ಎತ್ತರದ ಶಿಲೆಯ ಚಕ್ರಗಳನ್ನು ಹೊಂದಿದ ರಥವೆಂದೇ ಪ್ರಸಿದ್ಧಿಯನ್ನು ಹೊಂದಿದೆ.

ಮರದ ಚಕ್ರಗಳು ಯಾವುದೇ ರೀತಿಯ ಉಬ್ಬು ಶಿಲ್ಪಗಳ ವಿನ್ಯಾಸವನ್ನು ಹೊಂದಿರುವುದು ಕಂಡುಬರುವುದಿಲ್ಲ. ಆದರೆ ಅನೇಕ ರಥಗಳಲ್ಲಿ ಕಂಡುಬರುವಂತಹ ಶಿಲೆಯ ಚಕ್ರಗಳಲ್ಲಿ ಕೆಲವು ಚಕ್ರಗಳು ಸುಂದರವಾದ ಉಬ್ಬುಶಿಲ್ಪ ವಿನ್ಯಾಸಗಳನ್ನು ಹೊಂದಿವೆ. ಹೂಬಳ್ಳಿಯಾಕಾರದ ಉಬ್ಬುಶಿಲ್ಪ ವಿನ್ಯಾಸಗಳು, ಅರಳಿದ ಹೂವಿನಾಕಾರದ ವಿನ್ಯಾಸಗಳು, ತ್ರಿಕೋನಾಕಾರ ಹಾಗೂ ಸರಪಳಿಯಾಕಾರದ



ಶ್ರೀ ಕೊಟ್ಟೂರೇಶ್ವರ ರಥ
ಕೊಟ್ಟೂರು, ಜಿ - ಬಳ್ಳಾರಿ



ಶ್ರೀ ವೀರಭದ್ರೇಶ್ವರ ರಥ
ಯಾವಗಲ್, ಜಿ - ಗದಗ



ಶ್ರೀ ಶಿವಪೂರೇಶ್ವರ ಸ್ವಾಮಿ ರಥ ಸೊಂಡೂರು, ಜಿ - ಬಳ್ಳಾರಿ



ಶ್ರೀ ಶರಣಬಸವೇಶ್ವರ ರಥ
ಚರಟಗಿ, ಜಿ - ಗುಲಬರ್ಗಾ



ಶ್ರೀ ಶಂಕರಲಿಂಗನ ರಥ
ಸಂಕೇಶ್ವರ, ಜಿ - ಬೆಳಗಾಂವ

ವಿನ್ಯಾಸಗಳು, ಇದಲ್ಲದೆ ಕೆಲವು ಚಕ್ರಗಳಲ್ಲಿ ವೃತ್ತಾಕಾರದ ನಾಲ್ಕೈದು ಪಟ್ಟಿಕೆಗಳನ್ನು ಸಮಾನಾಂತರದಲ್ಲಿ ರಚಿಸಿರುವುದು ಕಂಡುಬರುತ್ತದೆ.

ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಆಧಾರ ತೊಲೆಗಳಲ್ಲಿ ಸುಂದರವಾಗಿ ರಚಿಸಿರುವಂತಹ ವಿವಿಧ ರೀತಿಯ ಶಿಲ್ಪವಿನ್ಯಾಸಗಳನ್ನು ಕಾಣಬಹುದು. ಆಧಾರ ತೊಲೆಗಳಿರುವ ಭಾಗದಲ್ಲಿರುವ ಶಿಲ್ಪಗಳನ್ನು , i. ಪ್ರಾಣಿ ಶಿಲ್ಪಗಳು ii. ಸಿದ್ಧಪುರುಷರ, ಮಹಾತ್ಮರ ಶಿಲ್ಪಗಳು iii. ದೇವತಾ ಶಿಲ್ಪಗಳು iv. ಮಿಥುನ ಶಿಲ್ಪಗಳು v. ನಕ್ಷಾಶಿಲ್ಪಗಳೆಂದು ವಿಂಗಡಿಸಿಕೊಂಡು ನಾಡಿನ ಬೇರೆ ಬೇರೆ ರಥಗಳ ಆಧಾರ ತೊಲೆಗಳಲ್ಲಿ ಕಂಡುಬರುವ ಶಿಲ್ಪಗಳ ಬಗೆಗೆ ತಿಳಿಯುವಾ.

i. **ಪ್ರಾಣಿ ಶಿಲ್ಪಗಳು :** ನಾಡಿನ ಅಸಂಖ್ಯಾತ ಗಡ್ಡಿ ರಥಗಳ ಅಡಿಪಾಯ ಭಾಗದ ಆಧಾರ ತೊಲೆಗಳಲ್ಲಿ ಪ್ರಾಣಿ ಶಿಲ್ಪಗಳನ್ನು ಕಾಣಬಹುದು. ಪ್ರತಿಯೊಂದು ರಥದಲ್ಲಿಯೂ ಹೆಚ್ಚಾಗಿ ಐದು ಆಧಾರ ತೊಲೆಗಳನ್ನು ಕಾಣಬಹುದು. ಈ ಆಧಾರ ತೊಲೆಗಳ ಎರಡೂ ಕೊನೆಗಳಲ್ಲಿ ಸಿಂಹ, ಆನೆ ಹಾಗೂ ಕುದುರೆಗಳ ಶಿಲ್ಪಗಳನ್ನು ರಚಿಸಿರುತ್ತಾರೆ. ಎಲ್ಲ ರಥಗಳಲ್ಲಿಯೂ ಈ ಮೂರು ಪ್ರಾಣಿಗಳ ಶಿಲ್ಪಗಳೇ ಕಂಡರೂ ಅವುಗಳ ರಚನೆ ಕೆಲವು ರಥಗಳಲ್ಲಿ ಬೇರೆ ಬೇರೆಯಾಗಿ ಕಂಡುಬರುತ್ತದೆ. ಕೆಲವು ರಥಗಳಲ್ಲಿ ಒಂದೇ ರೀತಿಯ ಭಂಗಿಯಲ್ಲಿ ರಚಿಸಿರುವುದನ್ನು ನೋಡಬಹುದು.

ಸಿಂಹ, ಆನೆ ಹಾಗೂ ಕುದುರೆಗಳು ಬಲಿಷ್ಠವಾದ ಪ್ರಾಣಿಗಳು. ಅವುಗಳು ಶಕ್ತಿಯ ಸಂಕೇತವಾಗಿವೆ. ರಥವು ಮುಂದೆ ಸಾಗಲು ಶಕ್ತಿಸಂಚಾರವಾಗಲೇಬೇಕು. ಪೌರಾಣಿಕ ಹಿನ್ನೆಲೆಯಿಂದ ಹಾಗೂ ಐತಿಹಾಸಿಕತೆಯಿಂದ ತಿಳಿಯುವುದಾದರೆ ದೇವಾನುದೇವತೆಗಳ ಹಾಗೂ ರಾಜ ಮಹಾರಾಜರ ರಥಗಳು ಶಕ್ತಿಯುತವಾದ ಈ ಪ್ರಾಣಿಗಳಿಂದಲೇ ಎಳೆಯಲ್ಪಡುತ್ತಿದ್ದವು. ಶಿವನು ತ್ರಿಪುರ ಸಂಹಾರ ಮಾಡಲು ಏಳು ಸಿಂಹಗಳಿಂದೆಳೆಯುವ ರಥವನ್ನು ಉಪಯೋಗಿಸಿದರೆ, ಸೂರ್ಯದೇವನ ರಥವು ಏಳು ಕುದುರೆಗಳನ್ನು ಹೊಂದಿದೆ. ಅಲ್ಲದೆ ವಿಜಯಲಕ್ಷ್ಮೀಯ ಆನೆ ಹಾಗೂ ಕುದುರೆಗಳಿಂದ ಎಳೆಯಲ್ಪಡುವ ರಥವನ್ನು ಪೌರಾಣಿಕ ಗ್ರಂಥಗಳು ಉಲ್ಲೇಖಿಸುತ್ತವೆ.

ಈ ದೇಗುಲ ರಥಗಳು ಮುಂದೆ ಸಾಗಲು ಸಾವಿರಾರು ಭಕ್ತರು ಕಾರಣರಾಗುವರು. ಆದರೆ ಯಾವುದೇ ಒಂದು ವಸ್ತು ಚಲಿಸಲು ಅಥವಾ ಸರಿದಾಡಲು ಶಕ್ತಿಸಂಚಯವಾಗಲೇಬೇಕು. ಆದ್ದರಿಂದ ತೇರು ಎಳೆಯುವುದಕ್ಕಿಂತ ಮೊದಲು ಶಕ್ತಿಯ ಸಂಕೇತಗಳಾದ ತೊಲೆಗಳಲ್ಲಿರುವ ಪ್ರಾಣಿಶಿಲ್ಪಗಳಿಗೆ ಪೂಜೆ ಪುನಸ್ಕಾರಗಳು ನಡೆಯುವವು. ಇಂತಹ ಪ್ರಾಣಿ ಶಿಲ್ಪಗಳ ಕಲಾತ್ಮಕ ಭಾವ ಭಂಗಿಗಳನ್ನು ಕುರಿತಾಗಿ ಅಭ್ಯಾಸ ಮಾಡುವಾ.

ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದ ರಥ ಹಾಗೂ ಶಿರಹಟ್ಟಿಯ ಫಕೀರೇಶ್ವರ ಸಂಸ್ಥಾನ ಮಠದ ರಥಗಳು ಆಧಾರ ತೊಲೆಗಳಲ್ಲಿ ಒಂದೇ ರೀತಿಯ ಸಿಂಹ ಹಾಗೂ ಆನೆಯ ಶಿಲ್ಪಗಳನ್ನು ಹೊಂದಿವೆ. ಮುಂಗಾಲುಗಳನ್ನು ಮೇಲಕ್ಕೆತ್ತಿ ಹಾರುವಂತಿರುವ ಸಿಂಹವು ಅಗಲವಾದ ಬಾಯಿತೆರೆದಂತೆ ಹಾಗೂ ಮುಖವನ್ನು ಒಂದು ಬದಿಯಲ್ಲಿ ತಿರುಗಿಸಿ ಕಣ್ಣುಗಳನ್ನು ಅಗಲವಾಗಿರಿಸಿದಂತೆ ಶಿಲ್ಪ ರಚನೆ ಮಾಡಿರುವರು. ಮುಂಗಾಲುಗಳ ಪಂಜಗಳು ಎದ್ದು ಕಾಣುವ ಹಾಗೆ

ರಚಿಸಿ ಆ ಕಾಲುಗಳ ಕೆಳಭಾಗದಲ್ಲಿ ಒಂದು ತಾಯಿ ಆನೆಯನ್ನು ರಚಿಸಿರುವರು. ಒಂದು ತೊಲೆಯಲ್ಲಿ ಆನೆಯು ಮರಿ ಆನೆಯನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಂತೆ ಮತ್ತು ಅದರ ಪಕ್ಕದ ತೊಲೆಯಲ್ಲಿ ರಚಿತವಾದ ಶಿಲ್ಪದಲ್ಲಿ ಸಿಂಹವು ಮರಿ ಆನೆಯನ್ನು ತನ್ನ ಪಂಜುಗಳಿಂದ ಬಡಿದು ಮೇಲಕ್ಕೆತ್ತಿದಂತೆ ರಚಿಸಿರುವರು. ಈ ಶಿಲ್ಪ ರಚನೆಯಲ್ಲಿ ಆನೆಗಳ ದೈನ್ಯತೆ ಹಾಗೂ ಸಿಂಹಗಳ ಆರ್ಭಟಗಳು ಚೆನ್ನಾಗಿ ವ್ಯಕ್ತವಾಗಿವೆ.

ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ದೇವಸ್ಥಾನದ ರಥದ ಆಧಾರ ತೊಲೆಗಳಲ್ಲಿಯ ಸಿಂಹ ಮತ್ತು ಆನೆಯ ಶಿಲ್ಪಗಾರಿಕೆಯು ಬಹಳ ಸುಂದರವಾಗಿ ಕಂಡುಬರುತ್ತದೆ. ಈ ಶಿಲ್ಪಗಳಲ್ಲಿ ಆನೆಯ ಶಿಲ್ಪಗಳಿಗಿಂತ ಸಿಂಹದ ಶಿಲ್ಪಗಳೇ ದೊಡ್ಡಪ್ರಮಾಣದಲ್ಲಿವೆ. ಕಣ್ಣುಗಳನ್ನಗಲಿಸಿ, ಬಾಯ್ದೆರೆದು, ಬಾಲವನ್ನು ಮೇಲೆ ತಿರುಗಿಸಿ, ಮುಂಗಾಲುಗಳಿಂದ ಆನೆಗಳ ತಲೆಯನ್ನು ಒತ್ತಿ ಹಿಡಿದಂತೆ ರಚಿಸಿದ ಸಿಂಹದ ಶಿಲ್ಪಗಳು ಕಲಾತ್ಮಕವಾಗಿ ಮೂಡಿ ಬಂದಿವೆ. ಹೊಟ್ಟೆಯು ಕೆಳಗೆ ತಾಗುವಂತೆ ನಾಲ್ಕೂ ಕಾಲುಗಳನ್ನು ಉದ್ದವಾಗಿ ಚಾಚಿಕೊಂಡು ಮಲಗಿರುವ ಆನೆಯು ರಕ್ಷಣೆಗೋಸ್ಕರ ಸಿಂಹದ ಮುಖಕ್ಕೆ ತನ್ನ ಸೊಂಡಿಲಿನಿಂದ ಹೊಡೆಯುತ್ತಿರುವಂತೆ ಆನೆಯ ಶಿಲ್ಪಗಳನ್ನು ರಚಿಸಿಲಾಗಿದೆ. ಇದೇ ರೀತಿಯ ಶಿಲ್ಪವಿನ್ಯಾಸಗಳನ್ನು ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೀಶ್ವರ ಸಂಸ್ಥಾನ ಮಠದ ರಥದಲ್ಲಿ ಕಾಣಬಹುದು. ಆದರೆ ಈ ಶಿಲ್ಪಗಳಲ್ಲಿ ಆನೆಯ ಶಿಲ್ಪಗಳಿಗೆ ತಲೆ ಹಾಗೂ ಕುತ್ತಿಗೆಗಳಲ್ಲಿ ಸುಂದರವಾದ ಆಭರಣಗಳನ್ನು ರಚಿಸಿರುವರು. ಗದಗ ಜಿಲ್ಲೆ ಚಿಂಚಲಿ ವೀರಭದ್ರೇಶ್ವರ ರಥದಲ್ಲಿಯೂ ಸಹ ಇಂತಹ ಭಂಗಿಯುಳ್ಳ ಆನೆ ಹಾಗೂ ಸಿಂಹಗಳ ಶಿಲ್ಪಗಾರಿಕೆಯು ಕಂಡು ಬರುತ್ತದೆ. ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ ಮರಡಿಮಠದ ರಥವು ಸಹ ಇದೇ ರೀತಿಯ ಶಿಲ್ಪವಿನ್ಯಾಸಗಳನ್ನು ಹೊಂದಿದೆ.

ಕೊಪ್ಪಳ ಜಿಲ್ಲೆ ಹುಲಗಿಯ ಹುಲಿಗೆಮ್ಮನ ದೇವಸ್ಥಾನ ಹಾಗೂ ಕೊಪ್ಪಳದ ಗವಿಸಿದ್ದೇಶ್ವರ ಮಠದ ರಥಗಳು ಒಂದೇ ತೆರನಾದ ಸಿಂಹ ಹಾಗೂ ಆನೆಗಳ ಶಿಲ್ಪಗಳನ್ನು ಹೊಂದಿವೆ. ಈ ಶಿಲ್ಪಗಳ ಭಂಗಿಯು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ರಥದಲ್ಲಿಯ ಶಿಲ್ಪಗಳಂತೆಯೇ ಕಾಣಿಸುತ್ತದೆ. ಆದರೆ ಈ ಶಿಲ್ಪಗಳಲ್ಲಿ ಸಿಂಹವು ಆನೆಯ ತಲೆಯನ್ನು ಗಟ್ಟಿಯಾಗಿ ಹಿಡಿಯುವುದಲ್ಲದೆ, ಆನೆಯು ತನ್ನ ರಕ್ಷಣೆಗೋಸ್ಕರ ಮೇಲಕ್ಕೆತ್ತಿದ ಸೊಂಡಿಲನ್ನು ಸಿಂಹವು ಬಾಯಿಯಿಂದ ಸರಿಯಾಗಿ ಕಚ್ಚಿದ ಹಾಗೆ ರಚಿಸಲ್ಪಟ್ಟಿವೆ.

ಬಾಗಲಕೋಟ ಜಿಲ್ಲೆ ಬಾದಾಮಿ ಬನಶಂಕರಿಯ ರಥ, ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಧವಳಗಿಯ ಮಡಿವಾಳೇಶ್ವರ ರಥ ಹಾಗೂ ಹುಬ್ಬಳ್ಳಿಯ ಮೂರು ಸಾವಿರ ಮಠದ ರಥಗಳಲ್ಲಿ ಆಧಾರ ತೊಲೆಗಳಲ್ಲಿ ಕಂಡುಬರುವ ಆನೆ ಹಾಗೂ ಸಿಂಹದ ಶಿಲ್ಪಗಳ ಭಾವ ಭಂಗಿಗಳು ಒಂದೇ ತೆರನಾಗಿವೆ. ಸಾಂಪ್ರದಾಯಿಕ ಶೈಲಿಯ ಹೊಯ್ಸಳರ ರಾಜಮುದ್ರೆಯಂತಿರುವ ಸಿಂಹದ ಶಿಲ್ಪದ ಶೈಲಿಯು ಬಹಳ ಕಲಾತ್ಮಕವಾಗಿದೆ. ಅಗಲವಾಗಿ ಬಾಯ್ದೆರೆದಿರುವಂತೆ ರಚಿಸಿಲ್ಪಟ್ಟ ಶಿಲ್ಪಗಳು,ಎರಡು ಕೋರೆ ಹಲ್ಲುಗಳನ್ನು ಹಾಗೂ ನಾಲಿಗೆಯನ್ನು ಹೊರ ಚಾಚಿದಂತೆ, ಕಿವಿಗಳನ್ನು ನಿಮಿರಿಸಿ, ಕಣ್ಣುಗಳನ್ನು ಅಗಲವಾಗಿ ತೆರೆದಂತೆ ಕಾಣಿಸುತ್ತವೆ. ಕುತ್ತಿಗೆಯ ಸುತ್ತಲೂ ಇರುವ ಕೇಸರಗಳು ಮೂರು ಪಟ್ಟಿಕೆಗಳಲ್ಲಿ ರಚಿತವಾಗಿವೆ. ಬಾಲದ ಕೊನೆಯು ಸುಂದರವಾದ ಸುರುಳಿ ವಿನ್ಯಾಸಗಳೊಂದಿಗೆ ಸುಂದರಗೊಂಡಿದೆ. ಕುಳಿತಿರುವ ಆನೆಗಳು ಮುಂಗಾಲನ್ನು ಮೇಲಕ್ಕೆತ್ತಿ ಸೊಂಡಿಲನ್ನು ಮೇಲಕ್ಕೆತ್ತಿ ,ಸಿಂಹಗಳಿಂದ

ತಪ್ಪಿಸಿಕೊಳ್ಳಲು ಹವಣಿಸುವಂತೆ ರಚಿಸಲಾಗಿದೆ. ಆನೆಯ ಸೊಂಡಿಲನ್ನು ಗಟ್ಟಿಯಾಗಿ ಹಿಡಿದ ಸಿಂಹಗಳ ಮುಂಗಾಲುಗಳಲ್ಲಿಯ ಪಂಜುಗಳನ್ನು ಕುಸುರಿ ಕೆತ್ತನೆಯಿಂದ ಸುಂದರಗೊಳಿಸಲಾಗಿದೆ. ಬಾದಾಮಿಯ ಬನಶಂಕರಿ ರಥ ಹಾಗೂ ಧವಳಗಿಯ ಮಡಿವಾಳೇಶ್ವರ ರಥಗಳಲ್ಲಿ ಈ ಶಿಲ್ಪಗಳಿಗೆ ಎಣ್ಣೆಯನ್ನು ಮೆತ್ತಿರುವುದರಿಂದ ದೂಳು ಕುಳಿತು ಶಿಲ್ಪಗಳ ಸೂಕ್ಷ್ಮವಾದ ಉಬ್ಬು ತಗ್ಗುಗಳು ಕಾಣಿಸದಂತೆ ಸಂಪೂರ್ಣವಾಗಿ ಮಾಯವಾಗಿವೆ. ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರನ ಹಳೆಯ ರಥದಲ್ಲಿಯೂ ಸಹ ಇದೇ ಭಂಗಿಯಲ್ಲಿರುವ ಸಿಂಹಗಳ ಶಿಲ್ಪಗಳನ್ನು ಮಾತ್ರ ಕಾಣಬಹುದು.

ಬಿಜಾಪುರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಸವೇಶ್ವರ ದೇವಸ್ಥಾನದ ರಥದ ಆಧಾರ ತೊಲೆಗಳು, ಸಿಂಹ ಹಾಗೂ ಆನೆಗಳ ಶಿಲ್ಪಗಳನ್ನು ಹೊಂದಿದ್ದು ಮುಖವನ್ನು ಮೇಲಕ್ಕೆತ್ತಿ ,ಸೊಂಡಿಲಿನಿಂದ ಸಿಂಹದ ಕುತ್ತಿಗೆಯನ್ನು ಹಿಡಿಯಲೆತ್ನಿಸುವ ಹಾಗೆ ಕುಳಿತ ಭಂಗಿಯಲ್ಲಿರುವ, ಆನೆಯ ಮೇಲೆ ಹಾರಿದಂತಿರುವ ಸಿಂಹದ ಶಿಲ್ಪವು, ತನ್ನ ಮುಂಗಾಲುಗಳಿಂದ ಆನೆಯನ್ನು ಗಟ್ಟಿಯಾಗಿ ಹಿಡಿದಂತೆ ಬಾಲವನ್ನು ಮೇಲೆ ತಿರುಗಿಸಿ ಬಾಯಿಯಿಂದ ಆನೆಯ ಸೊಂಡಿಲನ್ನು ಕಚ್ಚುತ್ತಿರುವಂತಹ ಭಂಗಿಯಲ್ಲಿ ರಚಿತಗೊಂಡಿದೆ.

ಗುಲಬುರ್ಗಾ ಜಿಲ್ಲೆಯ ಶಹಾಪುರ ತಾಲೂಕಿನ ದಿಗ್ಗಿ ಸಂಗಮೇಶ್ವರ ದೇವಾಲಯದ ರಥ ಹಾಗೂ ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಜಾಯವಾಡಲಗಿಯ ಸೋಮನಾಥೇಶ್ವರ ದೇವಾಲಯದ ರಥಗಳು ಆಧಾರ ತೊಲೆಗಳಲ್ಲಿ ಸಿಂಹ ಮತ್ತು ಆನೆಗಳ ಶಿಲ್ಪವಿನ್ಯಾಸಗಳನ್ನು ಹೊಂದಿದ್ದು, ಅವುಗಳು ನೋಡಲು ಒಂದೇ ತರನಾಗಿ ಕಂಡುಬರುತ್ತವೆ. ಕಾಲು ಮಡಿಚಿಕೊಂಡು, ಸೊಂಡಿಲದ ಅರ್ಧ ಭಾಗವನ್ನು ಮೇಲೆತ್ತಿ ಕುಳಿತ ಭಂಗಿಯಲ್ಲಿರುವ ಆನೆಯ ಶಿಲ್ಪಗಳು ತುಂಬಾ ಸುಂದರವಾಗಿ ರಚಿತಗೊಂಡಿವೆ. ಆನೆಗಳ ಬೆನ್ನಿನ ಮೇಲೆ ಕಾಲು ಮಡಿಚಿಕೊಂಡು, ಬಾಲವನ್ನು ಮೇಲಕ್ಕೆತ್ತಿ, ದೊಡ್ಡದಾದ ಬಾಯಿತೆರೆದ ಸಿಂಹಗಳ ಶಿಲ್ಪಗಳ ಭಂಗಿಯು ಚೆನ್ನಾಗಿ ಮೂಡಿ ಬಂದಿದೆ.

ರಾಯಚೂರು ಜಿಲ್ಲೆ ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ರಥ, ಮಾನ್ವಿಯ ಯಲ್ಲಮ್ಮ ರಥ, ಗುಡಗುಂಟಿ ಅಮರೇಶ್ವರ ರಥ ಹಾಗೂ ಲಿಂಗಸೂರು ತಾಲೂಕಿನ ಕಸಬಾ ಲಿಂಗಸೂರದ ರಥಗಳ ಆಧಾರ ತೊಲೆಗಳು ಒಂದೇ ತೆರನಾದ ಆನೆ ಹಾಗೂ ಸಿಂಹಗಳ ಶಿಲ್ಪಗಳನ್ನು ಹೊಂದಿವೆ. ಆ ಶಿಲ್ಪಗಳಲ್ಲಿ ಕೆಲವು ಭಾಗಗಳಲ್ಲಿ ಮಾತ್ರ ಸ್ವಲ್ಪಸ್ವಲ್ಪ ವ್ಯತ್ಯಾಸವಿರುವುದು ಕಂಡುಬರುತ್ತದೆ.

ಮಸ್ಕಿಯ ಮಲ್ಲಿಕಾರ್ಜುನ ರಥದ ಆಧಾರ ತೊಲೆಗಳಲ್ಲಿ ಬಾಯ್ದೆರೆದು ನಾಲಗೆಯನ್ನು ಹೊರಚಾಚಿದ ಭಂಗಿಯ ಸಿಂಹದ ಮುಖವಿನ್ಯಾಸಗಳನ್ನು ರಚಿಸಿ ಅವುಗಳ ಮೇಲೆ ಆನೆಗಳು ಕಾಲುಮಡಿಚಿಕೊಂಡು ಕುಳಿತಿರುವಂತೆ ಶಿಲ್ಪರಚನೆ ಮಾಡಿರುವರು. ಆನೆಗಳ ಶಿಲ್ಪಗಳ ಮೇಲೆ ಸಿಂಹಗಳ ಶಿಲ್ಪಗಳನ್ನು ರಚಿಸಲಾಗಿದೆ. ಮುಖ ಮೇಲಕ್ಕೆತ್ತಿ ಸೊಂಡಿಲನ್ನು ಮೇಲೆ ತಿರುಗಿಸಿದಂತೆ ರಚಿತಗೊಂಡಿವೆ. ಈ ಆನೆಗಳ ಶಿಲ್ಪಗಳನ್ನು ರಚಿಸಲಾಗಿದೆ. ಹಿಂಗಾಲುಗಳಿಂದ ಆನೆಯ ಹಿಂಗಾಲುಗಳನ್ನು ಹಿಡಿದು, ಮುಂಗಾಲುಗಳಿಂದ ಆನೆಯ ಮುಖವನ್ನು ಗಟ್ಟಿಯಾಗಿ ಹಿಡಿದಿರುವಂತೆ, ಬಾಲವನ್ನು ಮೇಲೆ ತಿರುಗಿಸಿ ಕಣ್ಣುಗಳನ್ನು ದೊಡ್ಡದಾಗಿಸಿ ಬಾಯ್ದೆರೆದು ನಾಲಿಗೆಯನ್ನು ಹೊರಚಾಚಿದ ಸಿಂಹಗಳ ಶಿಲ್ಪಗಳು ಬಹಳ ಸುಂದರವಾಗಿ ಮೂಡಿಬಂದಿವೆ. ಮುಖದ ಕೆಲವು ಭಾವ ಭಂಗಿಗಳು ಹುಬ್ಬಳ್ಳಿಯ ಮೂರುಸಾವಿರ ಮಠದ ರಥದ ಆಧಾರ ತೊಲೆಯ ಸಿಂಹದ ಶಿಲ್ಪಗಳನ್ನು ಹೋಲುತ್ತವೆ.

ಕಸಬಾ ಲಿಂಗಸೂರು ಹಾಗೂ ಮಾನ್ವಿಯ ಯಲ್ಲಮ್ಮ ರಥಗಳ ಆಧಾರ ತೊಲೆಗಳ ಶಿಲ್ಪಗಳು ಇದೇ ರೀತಿಯಲ್ಲಿದ್ದು, ಈಗ ಅವು ಸರಿಯಾಗಿ ಕಾಣದಂತೆ ಧೂಳು ಹಿಡಿದಿವೆ. ಗುಡಗುಂಟಿ ಅಮರೇಶ್ವರ ರಥದ ಆಧಾರ ತೊಲೆಗಳಲ್ಲಿಯ ಸಿಂಹ ಹಾಗೂ ಆನೆಗಳ ಶಿಲ್ಪಗಳು, ಮಸ್ಕಿಯ ಮಲ್ಲಿಕಾರ್ಜುನ ರಥದ ಆಧಾರ ತೊಲೆಗಳಲ್ಲಿಯ ಶಿಲ್ಪಗಳಂತೆಯೇ ರಚನೆಗೊಂಡಿವೆ. ಆದರೆ ಕೆಳಭಾಗದ ಸಾಲುಗಳು ಗುಡಗುಂಟಿಯ ರಥದಲ್ಲಿ, ಬಳ್ಳಿಯಾಕಾರದ ಹಾಗೂ ದುಂಡು ಮೊಗ್ಗಿನಾಕಾರದ ಶಿಲ್ಪವಿನ್ಯಾಸಗಳನ್ನು ಹೊಂದಿವೆ.

ರಾಯಚೂರು ಜಿಲ್ಲೆಯ ಮುದಗಲ್ ತಾಲೂಕಿನ ಅಂಕ್ಲಿಮಠದ ರಥದ ಆಧಾರ ತೊಲೆಗಳು ಆನೆ ಹಾಗೂ ಸಿಂಹಗಳ ಶಿಲ್ಪಗಳನ್ನು ಹೊಂದಿದ್ದು, ನಿಂತಿರುವ ಭಂಗಿಯಲ್ಲಿರುವ ಆನೆಯ ಮೇಲೆ ಮುಂಗಾಲುಗಳನ್ನು ಮೇಲೆ ಮಾಡಿ ಹಾರಿರುವಂತೆ ಸಿಂಹಗಳ ಶಿಲ್ಪಗಳನ್ನು ರಚಿಸಲಾಗಿದೆ.

ಹುಬ್ಬಳ್ಳಿಯ ಮೂರು ಸಾವಿರ ಮಠದ ರಥದ ಆಧಾರ ತೊಲೆಗಳಲ್ಲಿರುವ ಸಿಂಹ ಹಾಗೂ ಆನೆಗಳ ಶಿಲ್ಪಗಳು ಬಹಳ ಸುಂದರವಾಗಿ ಮಾಡಿ ಬಂದಿವೆ. ಸಿಂಹಗಳ ಶಿಲ್ಪಗಳು ಆನೆಯ ಶಿಲ್ಪಗಳಿಗಿಂತ ದೊಡ್ಡದಾಗಿದ್ದು, ಸಾಂಪ್ರದಾಯಿಕ ಶೈಲಿಯಲ್ಲಿ ರೂಡವನ್ನು ಪಡೆದಿವೆ. ಈ ಶಿಲ್ಪಗಳು, ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಸೋಮನಾಥೇಶ್ವರ ರಥ ಹಾಗೂ ಶಿರಹಟ್ಟಿಯ ಫಕೀರೇಶ್ವರ ಮಠದ ಆಧಾರ ತೊಲೆಗಳಲ್ಲಿ ಕಂಡುಬರುವ, ಸಿಂಹ ಹಾಗೂ ಆನೆಯ ಶಿಲ್ಪಗಳಂತೆಯೇ ಕಂಡುಬರುತ್ತವೆ.

ಬಾಗಲಕೋಟ ಜಿಲ್ಲೆಯ ಹುನಗುಂದದ ವೀರಭದ್ರ ದೇವಸ್ಥಾನ ಹಾಗೂ ಇಳಕಲ್ಲದ ವಿಜಯಮಹಾಂತೇಶ ದೇವಸ್ಥಾನದ ರಥಗಳ ಆಧಾರ ತೊಲೆಗಳಲ್ಲಿ ಕೇವಲ ಸಿಂಹಗಳ ಶಿಲ್ಪಗಳನ್ನು ಮಾತ್ರ ಕಾಣಬಹುದು. ರಾಯಚೂರು ಜಿಲ್ಲೆಯ ಕಲ್ಮಲದ ಕರೆಪ್ಪತಾತನ ರಥ, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಇಟಗಿಯ ಮಹೇಶ್ವರನ ರಥ ಹಾಗೂ ಬಾಗಲಕೋಟೆಯ ಬಸವೇಶ್ವರ ದೇವಸ್ಥಾನದ ರಥಗಳ ಆಧಾರ ತೊಲೆಗಳು ಸಿಂಹಗಳ ಶಿಲ್ಪಗಳನ್ನು ಮಾತ್ರ ಹೊಂದಿದ್ದು, ಸಿಂಹ ಶಿಲ್ಪಗಳು ತೆರೆದ ಬಾಯಿಯಿಂದ ಹೊರಚಾಚಿದ ನಾಲಿಗೆಯು, ಸುಂದರವಾದ ಬಳ್ಳಿಯಾಕಾರದ ವಿನ್ಯಾಸದಲ್ಲಿ ಮುಂದುವರೆದು, ಆ ನಾಲಿಗೆಯ ಮೇಲೆ ಸಿಂಹಗಳ ಮುಗಾಲುಗಳು ಊರುವಂತೆ ಶಿಲ್ಪ ರಚನೆ ಮಾಡಲಾಗಿದೆ.

ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಮಹಾಲಿಂಗೇಶ್ವರ ದೇವಸ್ಥಾನದ ರಥದ ಆಧಾರ ತೊಲೆಗಳ ಶಿಲ್ಪಗಾರಿಕೆಯು ತುಂಬಾ ವಿಶೇಷವಾಗಿ ಕಂಡುಬರುತ್ತದೆ. ದೇಹ ಹಾಗೂ ಹಿಂಗಾಲುಗಳು ಸಿಂಹದ ವಿನ್ಯಾಸದಂತಿದ್ದು ಮುಖ ಹಾಗೂ ಮುಂಗೈಗಳನ್ನು ಮನುಷ್ಯರ ಆಕಾರವನ್ನು ಹೊಂದಿವೆ. ಕೊರಳಲ್ಲಿ ಕೇಸರಗಳ ಬದಲಾಗಿ ಆಭರಣಗಳನ್ನು ರಚಿಸಲಾಗಿದೆ. ಬಾಲವು ಬೆನ್ನಿನ ಮೇಲೆ ಬಂದು ಸುರಳಿಯಾಕಾರದಲ್ಲಿ ಸುತ್ತಿಕೊಂಡಂತೆ ರಚಿಸಲಾಗಿದೆ. ಈ ರಥದಲ್ಲಿ ಒಟ್ಟು ನಾಲ್ಕು ಆಧಾರ ತೊಲೆಗಳಿದ್ದು ರಥದ ಮುಂದೆ ಹಾಗೂ ಹಿಂಭಾಗದಲ್ಲಿ ಕಾಣುವ ಎಂಟು ಶಿಲ್ಪವಿನ್ಯಾಸಗಳಲ್ಲಿ ನಾಲ್ಕು ಶಿಲ್ಪ ವಿನ್ಯಾಸಗಳು ಈ ರೀತಿಯಲ್ಲಿದ್ದು ಉಳಿದ ನಾಲ್ಕು ಶಿಲ್ಪಗಳು, ಸಾಮಾನ್ಯವಾಗಿ ಎಲ್ಲ ರಥಗಳಲ್ಲಿ ಕಂಡುಬರುವ ಸಿಂಹ ಹಾಗೂ ಆನೆ ಶಿಲ್ಪ ವಿನ್ಯಾಸದಂತೆಯೇ ಕಂಡುಬರುತ್ತವೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರದ ಶಂಕರಲಿಂಗನ ದೇವಸ್ಥಾನದ ರಥದ ಆಧಾರ ತೊಲೆಗಳು ಸಿಂಹ, ಆನೆ ಹಾಗೂ ಕುದುರೆಗಳ ಶಿಲ್ಪಗಾರಿಕೆಯನ್ನು ಹೊಂದಿವೆ. ಈ ಎಲ್ಲ ಪ್ರಾಣಿ ಶಿಲ್ಪಗಳು ಕುಳಿತಿರುವ ಭಂಗಿಯಲ್ಲಿವೆ. ರಥದ ಆಧಾರ ತೊಲೆಗಳಲ್ಲಿ ಸಿಂಹ ಹಾಗೂ ಆನೆಗಳ ಶಿಲ್ಪಗಳು ಸಾಮಾನ್ಯವಾಗಿ ಎಲ್ಲ ರಥಗಳಲ್ಲಿ ಕಂಡು ಬರುತ್ತವೆ. ಆದರೆ ಕುದುರೆಯ ಶಿಲ್ಪವಿನ್ಯಾಸಗಳು ಅಲ್ಲಲ್ಲಿ ಕೆಲವು ರಥಗಳಲ್ಲಿ ಮಾತ್ರ ಕಾಣಸಿಗುತ್ತವೆ. ಸಂಕೇಶ್ವರದ ಶಂಕರಲಿಂಗನ ದೇವಸ್ಥಾನದ ರಥದ ಆಧಾರ ತೊಲೆಗಳಲ್ಲಿಯೇ ಕುದುರೆಗಳನ್ನು ಕುಳಿತಿರುವ ಭಂಗಿಯಲ್ಲಿ ಕೆತ್ತಲಾಗಿದೆ. ಆದರೆ ಹೆಚ್ಚಾಗಿ ರಥಗಳಿಗೆ, ರಥೋತ್ಸವದ ಸಂದರ್ಭದಲ್ಲಿ ಕುದುರೆಗಳ ಬಿಡಿ ಶಿಲ್ಪಗಳನ್ನು ರಥದ ಮುಂಭಾಗದಲ್ಲಿ ಅಳವಡಿಸುವುದು ಕಂಡುಬರುತ್ತದೆ.

ಗುಲಬುರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ಜೇರಟಗಿಯ ಶರಣಬಸವೇಶ್ವರ ದೇವಸ್ಥಾನದ ರಥದ ಮುಂಭಾಗದಲ್ಲಿ ಉತ್ಸವದ ಸಂದರ್ಭದಲ್ಲಿ ಸವಾರರ ಸಮೇತವಾಗಿ ರೂಪಗೊಂಡ ನೆಗೆಯುತ್ತಿರುವ ಕುದುರೆಗಳ ಬಿಡಿ ಶಿಲ್ಪಗಳನ್ನು ಜೋಡಿಸಲಾಗಿರುತ್ತದೆ. ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿ ರಥ, ಶ್ರೀ ಪಾರ್ವತಮ್ಮನವರ ರಥ, ಶ್ರೀ ಚಂಡಿಕೇಶ್ವರ ಸ್ವಾಮಿ ರಥ ಹಾಗೂ ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥಗಳೂ ಸಹ, ಉತ್ಸವದ ಸಂದರ್ಭದಲ್ಲಿ ಕುದುರೆಗಳ ಬಿಡಿ ಶಿಲ್ಪಗಳನ್ನು ಹೊಂದಿರುತ್ತವೆ. ಇವುಗಳಲ್ಲಿ ಸುಬ್ರಹ್ಮಣ್ಯ ಸ್ವಾಮಿ ರಥವೊಂದನ್ನು ಹೊರತುಪಡಿಸಿ ಉಳಿದೆಲ್ಲ ರಥಗಳು ಎರಡೆರಡು ಕುದುರೆಗಳ ಶಿಲ್ಪಗಳನ್ನು ಹೊಂದಿದ್ದರೆ. ಸುಬ್ರಹ್ಮಣ್ಯ ಸ್ವಾಮಿ ರಥವು ಮಾತ್ರ ನೆಗೆಯುತ್ತಿರುವ ಏಳು ಕುದುರೆಗಳ ಸುಂದರವಾದ ಶಿಲ್ಪಗಳನ್ನು ಹೊಂದಿರುತ್ತದೆ.

ii. **ಮಹಾತ್ಮರ ಶಿಲ್ಪಗಳು :** ರಥಗಳ ಅಡಿಪಾಯ ಭಾಗದ ಸಿಂಹ ಹಾಗೂ ಆನೆಯ ಶಿಲ್ಪವಿನ್ಯಾಸಗಳನ್ನು ಹೊಂದಿದ ಆಧಾರ ತೊಲೆಗಳ ಪ್ರತಿಯೊಂದರ ನಡುವಿನ ಅಂತರದ ಸ್ಥಳಾವಕಾಶದಲ್ಲಿ ಮಹಾತ್ಮರ ಶಿಲ್ಪಗಳು ಕಂಡುಬರುತ್ತವೆ. ಮಹಾತ್ಮರ ಹೆಸರುಗಳ ಮೇಲೆ ಜರುಗುವಂತಹ ರಥೋತ್ಸವಗಳ ರಥಗಳಲ್ಲಿ ಅಡಿಪಾಯ ಭಾಗದಲ್ಲಿ ಮಹಾತ್ಮರ ಜೀವನದ ವಿಶೇಷ ಸಂದರ್ಭಗಳನ್ನು ತಿಳಿಸುವಂತಹ ಸುಂದರವಾದ ಶಿಲ್ಪಗಾರಿಕೆಯು ಕಂಡು ಬರುತ್ತದೆ.

ಗದಗ ಜಿಲ್ಲೆಯ ಚಿಂಚಲಿ ವೀರಭದ್ರ ದೇವಸ್ಥಾನದ ರಥದ ಅಡಿಪಾಯ ಭಾಗದಲ್ಲಿ ಕೆಲವು ಮಹಾತ್ಮರ ಶಿಲ್ಪಗಳನ್ನು ಕಾಣಬಹುದು. ರಥದ ಅಡಿಪಾಯ ಭಾಗದ ಮುಂಭಾಗದಲ್ಲಿ ಸಿಂಹ ಹಾಗೂ ಆನೆಯ ಶಿಲ್ಪವಿನ್ಯಾಸಗಳ ಮಧ್ಯದಲ್ಲಿ ಉಳಿದ ಸ್ಥಳದಲ್ಲಿ ಬಸವೇಶ್ವರರ ಹಾಗೂ ಅಲ್ಲಮಪ್ರಭುಗಳ ಶಿಲ್ಪಗಳನ್ನು ಕಾಣಬಹುದು. ರಥದ ಅಡಿಪಾಯ ಭಾಗದ ಹಿಂಭಾಗದಲ್ಲಿ ಶರಣಬಸವೇಶ್ವರ ಹಾಗೂ ಸಿದ್ಧರಾಮರ ಉಬ್ಬುಶಿಲ್ಪಗಳನ್ನು ಕಾಣಬಹುದು. ಇದೇ ಜಿಲ್ಲೆಯ ಹರ್ತಿಯ ವೀರಭದ್ರೇಶ್ವರ ದೇವಸ್ಥಾನದ ರಥದಲ್ಲಿಯೂ ಸಹ ಬಸವಣ್ಣನವರ ಉಬ್ಬುಶಿಲ್ಪ ಕಂಡು ಬರುತ್ತದೆ. ಚಿಂಚಲಿಯ ರಥದಲ್ಲಿ ಕಂಡು ಬರುವ ಶಿಲ್ಪದಲ್ಲಿ ಬಸವಣ್ಣನವರು ಆಸನವನ್ನು ಅಲಂಕರಿಸಿದ್ದರೆ. ಹರ್ತಿಯ ರಥದಲ್ಲಿರುವ ಬಸವಣ್ಣನವರ ಶಿಲ್ಪವು ಕುದುರೆಯನ್ನು ಹೊಂದಿದೆ.

ಇದೇ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ರಥದ ಅಡಿಪಾಯ ಭಾಗದಲ್ಲಿ ಮೌನೇಶ್ವರರ ಎರಡು ಉಬ್ಬುಶಿಲ್ಪಗಳನ್ನು ಕಾಣಬಹುದು. ಒಂದು ಶಿಲ್ಪದಲ್ಲಿ ಮೌನೇಶ್ವರರು ಮರದ ನೆರಳಿನಲ್ಲಿ ಕೋಲನ್ನು ಹಿಡಿದುಕೊಂಡು ನಿಂತಂತೆ ಮತ್ತು ಅವರ ಸುತ್ತಲೂ ಹತ್ತಾರು ಕುರಿಗಳು

ನಿಂತಿರುವಂತೆ, ದೂರದಲ್ಲಿ ಕೆಲವು ಮನೆಗಳು ಹಾಗೂ ಕೆಲವು ಗಿಡ ಮರ, ಬೆಟ್ಟಗಳು ಕಾಣಿಸುವ ಹಾಗೆ, ಸುಂದರವಾದ ಕುಸುರಿ ಕೆತ್ತನೆಯಲ್ಲಿ ರೂಪಗೊಳಿಸಲಾಗಿದೆ. ರಥದ ಮುಂಭಾಗದಲ್ಲಿರುವ ಮೌನೇಶ್ವರ ಶಿಲ್ಪವೂ ಸಹ ಸುಂದರವಾಗಿದ್ದು, ಮೌನೇಶ್ವರರು ಪೀಠದ ಮೇಲೆ ಕುಳಿತು ಎಡಗೈಯಲ್ಲಿ ಕೊಡಲಿ ಹಿಡಿದು ಅಭಯಹಸ್ತ ನೀಡಿರುವಂತೆ ರಚಿಸಲಾಗಿದೆ. ಪೀಠವು ಸುಂದರವಾದ ಪ್ರಭಾವಳಿಯನ್ನು ಹೊಂದಿದೆ. ಇದೇ ರೀತಿ ರಾಯಚೂರು ಜಿಲ್ಲೆಯ ಕಲ್ಮಲದ ಕರೆಪ್ಪತಾತನ ರಥದ ಅಡಿಪಾಯ ಭಾಗದಲ್ಲಿಯೂ ಸಹ ಮೌನೇಶ್ವರರು ಕಲ್ಲುಗಳಿಂದ ಕಟ್ಟಲಾದ ಕಟ್ಟೆಯ ಮೇಲೆ ಕುಳಿತಿರುವಂತೆ ಕಾಣುತ್ತದೆ. ಈ ರಥದಲ್ಲಿ ಕರೆಪ್ಪತಾತನವರ ಉಬ್ಬುಶಿಲ್ಪವನ್ನು ಕಾಣಬಹುದು. ಅವರು ಬಂಡೆಗಲ್ಲುಗಳ ಮೇಲೆ ನಿಂತು ಅಭಯಹಸ್ತವನ್ನು ನೀಡಿರುವಂತೆ ಹಾಗೂ ಎಡಗೈಯಲ್ಲಿ ಕೋಲನ್ನು ಹಿಡಿದಿರುವಂತೆ ರಚಿಸಲಾಗಿದೆ. ಅವರ ಹಿಂದೆ ಒಂದು ಜಿಂಕೆಯು ಓಡುತ್ತ ಅವರನ್ನು ಹಿಂತಿರುಗಿ ನೋಡಿರುವಂತೆ ರಚಿಸಲಾಗಿದೆ. ದೂರದಲ್ಲಿ ಕೆಲವು ಮರಗಳು, ದಾರಿ ಹಾಗೂ ಕೆಲವು ಮನೆಗಳು ಕಾಣುವಂತೆ ಸುಂದರವಾಗಿ ಶಿಲ್ಪ ರಚಿಸಲಾಗಿದೆ.

ಕೊಪ್ಪಳದ ಗವಿಸಿದ್ಧೇಶ್ವರ ಮಠದ ರಥದ ಅಡಿಪಾಯ ಭಾಗದಲ್ಲಿ ಮಹಾತ್ಮರ ಉಬ್ಬುಶಿಲ್ಪಗಳು ಕಲಾತ್ಮಕವಾಗಿ ಮೂಡಿ ಬಂದಿವೆ. ಸಿದ್ಧರಾಮನು ಶಿವನನ್ನು ಸಾಕ್ಷಾತ್ಕರಿಸಲು ಬೆಟ್ಟದಿಂದ ಕೆಳಗೆ ಹಾರಿದಂತೆ ಹಾಗೂ ಶಿವನು ಪ್ರತ್ಯಕ್ಷನಾಗಿ ಸಿದ್ಧರಾಮನನ್ನು ರಕ್ಷಿಸಲು ಅವನ ಕೈ ಹಿಡಿದಂತೆ ಮತ್ತು ಅಲ್ಲಲ್ಲಿ ಮರಗಿಡ, ಪೊದೆಗಳು ಕಾಣಿಸುವಂತೆ ಈ ಶಿಲ್ಪವು ಕಲಾತ್ಮಕವಾಗಿ ರೂಪಗೊಂಡಿದೆ.

ಇನ್ನೊಂದು ಶಿಲ್ಪದಲ್ಲಿ ಸಿದ್ಧಲಿಂಗೇಶ್ವರರು ಜಪಮಾಲೆಯನ್ನು ಹಿಡಿದು ಧ್ಯಾನಾಸಕ್ತರಾಗಿ ಕುಳಿತಿರುವಂತೆ, ಅವರ ಸುತ್ತಲೂ ದೊಡ್ಡದಾದ ಹುತ್ತವು ನಿರ್ಮಾಣಗೊಂಡಂತೆ, ಆ ಹುತ್ತಗಳಿಂದ ಕೆಲವು ಹಾವುಗಳ ಹೊರಬಂದಂತೆ, ಹುತ್ತದ ಮೇಲೆ ನಂದಿಯು ನಿಂತು ಹಾಲು ಸೂಸುವಂತೆ ರಚಿಸಲಾಗಿದೆ. ಈ ಶಿಲ್ಪವೂ ಸಹ ಕಣ್ಮನ ಸೆಳೆಯುವಂತಿದೆ.

ಮತ್ತೊಂದು ಉಬ್ಬುಶಿಲ್ಪವು ಅನುಭವ ಮಂಟಪದ ದೃಶ್ಯವನ್ನು ತಿಳಿಯಪಡಿಸುತ್ತದೆ. ಕಲ್ಯಾಣದ ಅನುಭವ ಮಂಟಪದಲ್ಲಿ ಮಹಾಶಿವಶರಣೆ ಪ್ರವೇಶಿಸುತ್ತಿದ್ದಂತೆ ಪೀಠವನ್ನು ಆಲಂಕರಿಸಿದ ಪ್ರಭುದೇವರು ಆಕ್ಕಮಹಾದೇವಿಯನ್ನು ಪ್ರಶ್ನಿಸುವಂತೆ, ಈ ದೃಶ್ಯವನ್ನು ಬಸವಣ್ಣನವರು ಹಾಗೂ ಇನ್ನುಳಿದ ಶಿವಶರಣರು ಆಶ್ಚರ್ಯದಿಂದ ನೋಡುತ್ತಿದ್ದಂತೆ, ರಚಿತಗೊಂಡ ಉಬ್ಬುಶಿಲ್ಪವು ಬಹಳ ಸುಂದರವಾಗಿದೆ.

ಇವುಗಳಲ್ಲದೆ ವರವಿ ಮೌನೇಶ್ವರ ರಥದಲ್ಲಿ ಕಂಡುಬರುವಂತೆ ಈ ರಥದಲ್ಲಿಯೂ ಸಹ ಮೌನೇಶ್ವರರ ಸುಂದರವಾದ ಉಬ್ಬು ಶಿಲ್ಪವನ್ನು ಕಾಣಬಹುದು.

ಬೆಳಗಾಂವ ಜಿಲ್ಲೆಯ ರಾಯಭಾಗ ತಾಲೂಕಿನ ಮುಗಳಖೋಡದ ಸಿದ್ಧ ಸಂಸ್ಥಾನ ಮಠದ ರಥದ ಅಡಿಪಾಯ ಭಾಗದಲ್ಲಿ ಯಲ್ಲಾಲಿಂಗ ಮಹಾರಾಜರ ಸುಂದರವಾದ ಉಬ್ಬುಶಿಲ್ಪವನ್ನು ಕಾಣಬಹುದು. ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪುರದ ಮಹಾಲಿಂಗೇಶ್ವರರ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೀಶ್ವರ ಸಂಸ್ಥಾನ ಮಠದ ರಥದ ಅಡಿಪಾಯ ಭಾಗದಲ್ಲಿ ಮುರುಗೋಡದ ಶ್ರೀ ಮಹಾಂತ

ಶಿವಯೋಗಿಗಳ ಹಾಗೂ ಧ್ಯಾನಾಸಕ್ತರಾದ ಋಷಿಮುನಿಗಳ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಸವೇಶ್ವರ ದೇವಸ್ಥಾನದ ರಥದ ಅಡಿಪಾಯ ಭಾಗದಲ್ಲಿ ಧ್ಯಾನಾಸಕ್ತಳಾಗಿ ಕುಳಿತ ಅಕ್ಕಮಹಾದೇವಿಯ, ಪೀಠವನ್ನು ಅಲಂಕರಿಸಿದ ಬಸವಣ್ಣನವರ, ಹಾಗೂ ಧ್ಯಾನಾಸಕ್ತರಾದ ಇಬ್ಬರು ಋಷಿಮುನಿಗಳ ಉಬ್ಬುಶಿಲ್ಪಗಳನ್ನು ಕಾಣಬಹುದು.

ಗುಲಬುರ್ಗಾ ಜಿಲ್ಲೆ ಜೇವರಗಿ ತಾಲೂಕಿನ ಜೇರಟಗಿಯ ಶ್ರೀ ಶರಣಬಸವೇಶ್ವರ ರಥದ ಅಡಿಪಾಯ ಭಾಗದಲ್ಲಿ, ರಥದ ಮುಂಭಾಗದಲ್ಲಿ ಶ್ರೀ ಶರಣಬಸವೇಶ್ವರರ ಉಬ್ಬುಶಿಲ್ಪವನ್ನು ಕೆತ್ತಲಾಗಿದೆ.

ಈ ರೀತಿಯಲ್ಲಿ ನಾಡಿನ ಕೆಲವು ರಥಗಳಲ್ಲಿ ಮಾತ್ರ ಅಡಿಪಾಯ ಭಾಗದಲ್ಲಿ ಮಹಾತ್ಮರ ಉಬ್ಬುಶಿಲ್ಪ ಕೆತ್ತನೆ ಕಂಡುಬರುತ್ತದೆ.

iii. **ದೇವತಾ ಶಿಲ್ಪಗಳು :** ರಥಗಳ ಆಧಾರ ತೊಲೆಗಳ ನಡುವಿನ ಅಂತರದ ಸ್ಥಳಾವಕಾಶದಲ್ಲಿ ಮಹಾತ್ಮರ ಶಿಲ್ಪಗಳು ಕಂಡುಬರುವಂತೆ ವಿವಿಧ ದೇವತಾ ಶಿಲ್ಪಗಳೂ ಕಂಡುಬರುತ್ತವೆ.

ಬಾಗಲಕೋಟ ಜಿಲ್ಲೆ ಮುಧೋಳ ತಾಲೂಕಿನ ಮಹಾಲಿಂಗಪೂರದ ಮಹಾಲಿಂಗೇಶ್ವರ ರಥದ ಅಡಿಪಾಯ ಭಾಗದಲ್ಲಿ ಬ್ರಹ್ಮ ರಾಕ್ಷಸರನ್ನು ಸಂಹಾರ ಮಾಡುತ್ತಿರುವ ಆದಿಶಕ್ತಿ, ಶ್ರೀ ರಾಮ, ಸೀತೆ, ಲಕ್ಷ್ಮಣರಿಗೆ ನಮಿಸುವ ಆಂಜನೇಯ ಹಾಗೂ ಶಿವ, ಪಾರ್ವತಿ, ಗಣಪತಿಯರೊಂದಿಗೆ ನಂದಿ, ಸಿಂಹ, ನಾರದರು ಹೀಗೆ ವಿವಿಧ ಶಿಲ್ಪಗಳನ್ನು ಕಾಣಬಹುದು.

ಇದೇ ಜಿಲ್ಲೆಯ ಶಿರೂರದ ಶ್ರೀ ಸಿದ್ಧೇಶ್ವರ ರಥದ ಆಡಿಪಾಯ ಭಾಗದಲ್ಲಿ ಸುಂದರವಾದ ದೇವತಾ ಶಿಲ್ಪಗಳು ಕಂಡು ಬರುತ್ತವೆ. ಬಾತುಕೋಳಿಯ ಮೇಲೆ ಕುಳಿತಿರುವ ಬ್ರಹ್ಮ, ನಂದಿಯ ಮೇಲೆ ಕುಳಿತಿರುವ ಶಿವ, ಗರುಡನ ಮೇಲೆ ಕುಳಿತಿರುವ ವಿಷ್ಣು ಹಾಗೂ ಸಿಂಹದ ಮೇಲೆ ಕುಳಿತಿರುವಂತಹ ಆದಿಶಕ್ತಿಯ ಶಿಲ್ಪಗಳು ಗಮನ ಸೆಳೆಯುತ್ತವೆ.

ಕೊಪ್ಪಳ ಜಿಲ್ಲೆಯ ಹುಲಗಿಯ ಹುಲಿಗೆಮ್ಮ ದೇವಸ್ಥಾನದ ರಥದ ಆಡಿಪಾಯ ಭಾಗದಲ್ಲಿ ಕೆತ್ತಲ್ಪಟ್ಟಿರುವ ದೇವತಾ ಶಿಲ್ಪಗಳು ಸುಂದರವಾದ ಕುಸುರಿ ಕೆತ್ತನೆಯಿಂದ ಕೂಡಿವೆ. ವಿವಿಧ ಆಯುಧಗಳನ್ನು ಹಿಡಿದು ಸಿಂಹದ ಮೇಲೆ ಕುಳಿತಿರುವ ಆದಿಶಕ್ತಿ, ಅರಳಿದ ಕಮಲದ ಮೇಲೆ ಕುಳಿತಿರುವ ವೀಣಾಪಾಣಿ, ಕಮಲದ ಹೂಗಳನ್ನು ಹಿಡಿದು ನಾಣ್ಯಗಳನ್ನು ನೀಡುತ್ತಿರುವ, ಅರಳಿದ ಕಮಲದ ಮೇಲೆ ಕುಳಿತಿರುವ ಲಕ್ಷ್ಮೀದೇವಿ, ಇದರಂತೆಯೇ ಕಮಲದ ಮೇಲೆ ಕುಳಿತಿರುವ ಗಣಪ, ಹಾಗೂ ಹಾರವನ್ನು ಧರಿಸಿದಂತಹ ಹುಲಿಗೆಮ್ಮನ ಶಿಲ್ಪಗಳು ಕಂಡುಬರುತ್ತವೆ. ಈ ಎಲ್ಲ ಶಿಲ್ಪಗಳು ಸುಂದರವಾದ ಕಂಬ ಹಾಗೂ ಕಮಾನುಗಳನ್ನು ಹೊಂದಿವೆ.

ಇದೇ ಜಿಲ್ಲೆಯ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ಮಠದ ರಥದಲ್ಲಿಯೂ ಸಹ ಲಕ್ಷ್ಮೀ, ಸ್ವರಸ್ವತಿ ಹಾಗೂ ಗಣಪತಿಯ ಶಿಲ್ಪಗಳನ್ನು ಕಾಣಬಹುದು. ಇದೇ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರದ ಮಹಾಮಾಯಿ ದೇವಸ್ಥಾನದ ರಥದ ಅಡಿಪಾಯ ಭಾಗವು ಶಿವ, ಆಂಜನೇಯ, ಲಕ್ಷ್ಮೀ,

ಆಧಿಶಕ್ತಿ ಹಾಗೂ ಗಣಪತಿಯ ಉಬ್ಬುಶಿಲ್ಪಗಳನ್ನು ಹೊಂದಿದೆ. ಇದೇ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ರಥದ ಅಡಿಪಾಯ ಭಾಗದಲ್ಲಿ ಆದಿಶಕ್ತಿ, ಶಿವ, ಗಣಪತಿ ಹಾಗೂ ಲಕ್ಷ್ಮೀಯ ಮೂರ್ತಿಗಳನ್ನು ಕಾಣಬಹುದು.

ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ ರಥದ ಅಡಿಪಾಯ ಭಾಗದಲ್ಲಿ ಆದಿಶಕ್ತಿ, ಲಕ್ಷ್ಮೀ, ಸರಸ್ವತಿ ಹಾಗೂ ಗಣಪತಿ ಶಿಲ್ಪಗಳು ಕಂಡುಬರುತ್ತವೆ. ಇದೇ ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ರಥದ ಅಡಿಪಾಯ ಭಾಗದಲ್ಲಿ ಆಂಜನೇಯ, ಜಡೆ ಕಟ್ಟಲಾರದ ಶಿವ, ರಾಕ್ಷಸರನ್ನು ಸಂಹರಿಸುವ ಶಕ್ತಿ ಹಾಗೂ ಗಣಪತಿಯ ಉಬ್ಬುಶಿಲ್ಪಗಳನ್ನು ಕಾಣಬಹುದು.

ಇದೇ ರೀತಿಯ ಶಿಲ್ಪಗಳನ್ನು ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳದ ಬಸರಕೊಡದ ಪವಾಡ ಬಸವೇಶ್ವರ ರಥದಲ್ಲಿಯೂ ಕಾಣಬಹುದು. ಗುಲಬರ್ಗಾ ಜಿಲ್ಲೆ ಜೇವರಗಿ ತಾಲೂಕಿನ ಜೇರಟಗಿಯ ಶ್ರೀ ಶರಣಬಸವೇಶ್ವರ ರಥದ ಅಡಿಪಾಯ ಭಾಗದಲ್ಲಿ ಗಣಪತಿ ಲಕ್ಷ್ಮೀ ಹಾಗೂ ಸರಸ್ವತಿ ಶಿಲ್ಪಗಳನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯ ಹಂಪೆಯ ವಿರೂಪಾಕ್ಷ ಹಾಗೂ ಮರೆಮ್ಮನ ಹಳ್ಳಿಯ ಶ್ರೀ ರಾಮಾಂಜನೇಯನ ರಥಗಳಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ ಹಾಗೂ ಆಂಜನೇಯನ ಶಿಲ್ಪಗಳನ್ನು ಕಾಣಬಹುದು. ಇದೇ ಜಿಲ್ಲೆಯ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ರಥದಲ್ಲಿಯೂ ಸಹ ಗಣಪತಿಯ ಶಿಲ್ಪವನ್ನು ಕಾಣಬಹುದು.

ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ವರವಿಯ ಶ್ರೀ ಮೌನೇಶ್ವರ ರಥದ ಅಡಿಪಾಯ ಭಾಗದಲ್ಲಿ ಆದಿಶಕ್ತಿ, ಲಕ್ಷ್ಮೀ ಹಾಗೂ ಗಣಪತಿಯ ಶಿಲ್ಪಗಳು ಸುಂದರವಾಗಿ ಮೂಡಿಬಂದಿವೆ. ಇದೇ ಜಿಲ್ಲೆಯ ಹರ್ತಿಯ ವೀರಭದ್ರ ರಥ ಹಾಗೂ ಚಿಂಚಲಿಯ ವೀರಭದ್ರ ರಥಗಳ ಅಡಿಪಾಯ ಭಾಗದಲ್ಲಿ ವೀರಭದ್ರ, ಶಿವ ಹಾಗೂ ಬ್ರಹ್ಮನ ಮೂರ್ತಿಶಿಲ್ಪಗಳು ಕಂಡುಬರುತ್ತವೆ.

ಹುಬ್ಬಳ್ಳಿಯ ಮೂರು ಸಾವಿರ ಮಠದ ರಥದ ಅಡಿಪಾಯ ಭಾಗದಲ್ಲಿ ಬ್ರಹ್ಮ, ವಿಷ್ಣು ಮಹೇಶ್ವರ ಹಾಗೂ ಶಕ್ತಿಮಾತೆ ಮತ್ತು ಗಣಪತಿಯ ಉಬ್ಬುಶಿಲ್ಪ ವಿನ್ಯಾಸಗಳು ಸುಂದರವಾಗಿ ರೂಪುಗೊಂಡಿವೆ. ಇದೇ ರೀತಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಶ್ರೀ ಬಸವೇಶ್ವರ ರಥದಲ್ಲಿ ಶಿವ ಹಾಗೂ ಆದಿಶಕ್ತಿಯ ಶಿಲ್ಪಗಳು ಕಂಡುಬರುತ್ತವೆ.

ಧಾರವಾಡ ಜಿಲ್ಲೆ ಕುಂದಗೋಳ ತಾಲೂಕಿನ ಹೊಸಕಟ್ಟಿಯ ಮಹಾಂತೇಶನ ರಥ ಹಾಗೂ ಹಾವೇರಿ ಜಿಲ್ಲೆಯ ಸುಲ್ತಾನಪೂರದ ಶ್ರೀ ಸೋಮನಾಥನ ರಥಗಳ ಅಡಿಪಾಯ ಭಾಗಗಳಲ್ಲಿ ಗಣೇಶ ಹಾಗೂ ಶಿವ ಪಾರ್ವತಿಯರ ಶಿಲ್ಪಗಳು ಒಂದೇ ತೆರನಾಗಿ ಕಂಡುಬರುತ್ತವೆ.

ಬೆಳಗಾಂವ ಜಿಲ್ಲೆ ಗೋಕಾಕ ತಾಲೂಕಿನ ಮೊಹರೆಯ ಬಸವಣ್ಣನ ರಥ, ಬರಟಗಿಯ ಲಕ್ಷ್ಮೀದೇವಿಯ ರಥ, ಬೈಲಹೊಂಗಲ ತಾಲೂಕು ಮುರಗೋಡದ ಮಹಾಂತ ಶಿವಯೋಗಿಗಳ ರಥ, ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲೂಕು ಸರೂರದ ಸೋಮನಾಥನ ರಥ, ಇಂಡಿ ತಾಲೂಕು ಮಾವಿನ ಹಳ್ಳಿಯ ಕಾಡಪ್ಪನ ರಥ, ಕೊಪ್ಪಳ ಜಿಲ್ಲೆ ತಿಪ್ಪನ ಹಾಳದ ಗದ್ದುಗೆ ಬಸವೇಶ್ವರ ರಥ,

ರಾಯಚೂರು ಜಿಲ್ಲೆಯ ಅಮರಾವತಿಯ ಅಮರೇಶ್ವರ ರಥ, ದಾವಣಗೇರೆ ಜಿಲ್ಲೆ ಚನ್ನಗಿರಿಯ ರಾಘವೇಂದ್ರ ಸ್ವಾಮಿ ರಥ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕು ಶ್ರೀ ರಾಂಪೂರದ ಶ್ರೀ ಪರಪ್ಪ ಸ್ವಾಮಿ ರಥ, ಮೈಸೂರು ಚಾಮುಂಡೇಶ್ವರಿ ರಥ, ಕುಕ್ಕೆ ಸುಬ್ರಹ್ಮಣ್ಯಂದ ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥ, ನಂಜನಗೂಡಿನ ಶ್ರೀ ನಂಜಂಡೇಶ್ವರ ರಥ, ಹೀಗೆ ನಾಡಿನ ಅನೇಕ ರಥಗಳ ಅಡಿಪಾಯ ಭಾಗದಲ್ಲಿ ಅನೇಕ ದೇವಾನು ದೇವತೆಯರ ಶಿಲ್ಪ ವಿನ್ಯಾಸಗಳನ್ನು ಕಾಣಬಹುದು. ಅವುಗಳಲ್ಲಿ ಶಿವ, ಆದಿಶಕ್ತಿ, ಗಣಪ, ಲಕ್ಷ್ಮೀ , ಸರಸ್ವತಿ, ಬ್ರಹ್ಮ, ವಿಷ್ಣು ಇಂತಹ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ.

iv. **ಮಿಥುನ ಶಿಲ್ಪಗಳು :** ಭಾರತದ ಅನೇಕ ದೇವಾಲಯಗಳಲ್ಲಿ ಮಿಥುನ ಶಿಲ್ಪಗಳನ್ನು ಕಾಣುವಂತೆ ದೇಗುಲದ ಪ್ರತೀಕವಾಗಿರುವ ರಥಗಳಲ್ಲಿಯೂ ಸಹ ಈ ಶಿಲ್ಪಗಳನ್ನು ಕಾಣಬಹುದು. ಇವುಗಳಿಗೆ ಜನಪದರು ನೀಡುವ ಉತ್ತರ ಒಂದೇ 'ಇವು ದೃಷ್ಠಿ ಗೊಂಬೆಗಳು' ಎಂದು. ಯಾವುದೇ ಸುಂದರವಾದ ಮನೆ, ದೇವಸ್ಥಾನ, ಗೋಪುರ, ರಥ, ಸ್ಮಾರಕಗಳಲ್ಲಿ ಇವುಗಳು ಸಾಮಾನ್ಯವಾಗಿ ಇದ್ದೇ ಇರುತ್ತವೆ. ಈ ಲೈಂಗಿಕ ಶಿಲ್ಪಗಳು ಮನುಷ್ಯನ ತೀವ್ರ ದೃಷ್ಠಿಯನ್ನು ತನ್ನೆಡೆಗೆ ಸೆಳೆದು ಆತನ ದೃಷ್ಠಿಯಿಂದ ಆ ವಸ್ತುವಿನ ಮೇಲೆ ಉಂಟಾಗಬಹುದಾದ ಅನಾಹುತವನ್ನು ತಪ್ಪಿಸುತ್ತದೆ ಎಂಬುದಾಗಿ ಹೇಳುತ್ತಾರೆ.

ಭಾರತದ ಇತಿಹಾಸದ ಆರಂಭ ಕಾಲದಲ್ಲೇ ಇಂತಹ ಶಿಲ್ಪಗಳ ರಚನೆಯಾಯಿತು. ಮಹೆಂಜೋದಾರೋ ಉತ್ಖನನದಲ್ಲಿ ದೊರೆತ ಬೆತ್ತಲೆ ನರ್ತಕಿಯ ಕಂಚಿನ ವಿಗ್ರಹ ಇದಕ್ಕೊಂದು ಸುಂದರ ಉದಾಹರಣೆ.ದೇವಾಲಯಗಳು ಧಾರ್ಮಿಕ ಮತ್ತು ಪೂಜಾ ವಿಧಿಗಳ ಸ್ಥಾನ ಮಾತ್ರವಾಗಿರದೆ, ಮಾನವನ ಸಾಮಾಜಿಕ, ಸಾಂಸ್ಕೃತಿಕ ಮತ್ತು ಆರ್ಥಿಕ ಚಟುವಟಿಕೆಗಳ ಕೇಂದ್ರವಾಗಿದ್ದವು. ವೃತ್ತಿನಿರತ ದೇವದಾಸಿಯರು ದೇವಾಲಯಗಳಲ್ಲಿ ತಮ್ಮ ಸಂಗೀತ-ನರ್ತನಗಳಿಂದ ಸೇವೆ ಸಲ್ಲಿಸುತ್ತಿದ್ದರು. ಹೀಗಿರುವಾಗ ದೇವಾಲಯಗಳಲ್ಲಿ ಶೃಂಗಾರ ವರ್ಣನೆಯ ಶಿಲ್ಪಗಳು ಕಾಣಿಸಿಕೊಂಡದ್ದು ಆಶ್ಚರ್ಯವಲ್ಲ[೧೩].

ಭಾರತೀಯ ವಿಚಾರಧಾರೆಯಲ್ಲಿ ಆಧ್ಯಾತ್ಮಕ್ಕೆ ಇರುವಷ್ಟೇ ಪ್ರಾಶಸ್ತ್ಯ ಲೌಕಿಕಕ್ಕೂ ಇದೆ. ಪುರುಷಾರ್ಥಗಳಲ್ಲಿ ಧರ್ಮ, ಅರ್ಥಗಳೊಂದಿಗೆ ಕಾಮವನ್ನು ಸೇರಿಸಲಾಗಿದೆ. ಋಗ್ವೇದ, ಯಜುರ್ವೇದ, ಬೃಹದಾರಣ್ಯಕ, ಚಾಂದೊಗ್ಯ ಉಪನಿಷತ್ ಹಾಗೂ ಮಹಾಭಾರತ ಮುಂತಾದ ಪುರಾಣ ಗ್ರಂಥಗಳಲ್ಲಿ ಲೈಂಗಿಕ ವಿಷಯಗಳ ಮುಕ್ತ ಪ್ರಸ್ತಾಪವಿದೆ.ಕಾಮ ಮತ್ತು ಲೈಂಗಿಕತೆ ಮಾನವನ ಅತ್ಯಂತ ಸಹಜ ಹಾಗೂ ಪ್ರಭಲ ಪ್ರವೃತ್ತಿ ಎಂಬುದನ್ನು ಹಿಂದೂ ಧರ್ಮವು ಗುರುತಿಸಿತ್ತು. ಲೈಂಗಿಕ ಕ್ರಿಯೆಯು ಆನಂದಮಯ ಹಾಗೂ ಮೋಕ್ಷದಾಯಕ ಎಂದು ತಿಳಿಯುಲಾಗಿತ್ತು[೧೪].

ವೇದ ಕಾಲದಿಂದ ಮಧ್ಯಯುಗದವರೆಗೆ ಭಾರತದಲ್ಲಿ ಲೈಂಗಿಕ ವಿಚಾರಗಳ ಬಗ್ಗೆ ಯಾವ ಮಡಿವಂತಿಕೆಯೂ ಇರಲಿಲ್ಲ ಹೀಗಾಗಿ ನಮ್ಮ ಕವಿಗಳು, ಕಲಾವಿದರು, ಶಿಲ್ಪಿಗಳು ಪೂರ್ಣ ಸ್ವಾತಂತ್ರ್ಯದಿಂದ ಶೃಂಗಾರ ಹಾಗೂ ಲೈಂಗಿಕ ವಿಷಯಗಳಿಗೆ ಸಂಬಂಧಿಸಿದ ಕೃತಿಗಳನ್ನು ರಚಿಸಿದರು. ನಮ್ಮ ದೇಶಕ್ಕೆ ಅನ್ಯ ಧರ್ಮಗಳ ಪರಿಚಯವಾದ ಮೇಲೆ ಇಂತಹ ಮುಕ್ತವಾತಾವರಣ ಸ್ವಲ್ಪ ಮಟ್ಟಿಗೆ

---

೧೩. '' ಶೃಂಗಾರ ಶಿಲ್ಪ '' ಯು.ಎಸ್.ವೆಂಕಟರಾಮನ್, ಉದಯವಾಣಿ, ದೀಪಾವಳಿ ವಿಶೇಷಾಂಕ, ೧೯೯೯

೧೪. ''ಭಾರತೀಯರ ವಿಚಾರಧಾರೆಯಲ್ಲಿ ಲೈಂಗಿಕತೆ '' ಎಮ್.ಎಸ್.ಶರ್ಮಾ, ಸುಧಾ, ಡಿಸೆಂಬರ ೧೯೮೭

ಬದಲಾಯಿತು[೧೫].

ಕರ್ನಾಟಕದಲ್ಲಿ ಗಂಗ, ಕದಂಬ, ಚಾಲುಕ್ಯ, ಹೊಯ್ಸಳ ಮತ್ತು ವಿಜಯನಗರ ಶೈಲಿಯ ಅಸಂಖ್ಯ ದೇವಾಲಯಗಳಿವೆ. ಭಾರತದ ಇತರೆಡೆಗಳಂತೆ ಇಲ್ಲಿಯೂ ಶೃಂಗಾರ ಹಾಗೂ ಮಿಥುನ ಶಿಲ್ಪಗಳ ಸುಂದರ ಉದಾಹರಣೆಗಳಿವೆ. ಶೃಂಗಾರ ಶಿಲ್ಪಗಳನ್ನು ದೇವಾಲಯದ ಗರ್ಭಗುಡಿಯ ದ್ವಾರದ ಮೇಲೆ ನಿರ್ಮಿಸಬೇಕೆಂಬ ನಿಯಮವು ಸಮರಾಂಗಣ ಸೂತ್ರಧಾರ, ಬೃಹತ್ ಸಂಹಿತೆ, ಅಗ್ನಿಪುರಾಣ, ಹಯಸಿರ ಪಂಚರತ್ನ ಮುಂತಾದ ಗ್ರಂಥಗಳಲ್ಲಿ ಉಕ್ತವಾಗಿದ್ದರೂ ಕ್ರಮೇಣ ದೇವಾಲಯಗಳ ಇತರ ಭಾಗಗಳಲ್ಲಿಯೂ ಸಹ ಇಂತಹ ಶಿಲ್ಪಗಳನ್ನು ಕೆತ್ತುವ ಪರಿಪಾಠ ಬೆಳೆಯಿತು[೧೬].

ಇದರಂತೆ ರಥಶಿಲ್ಪಗಳೂ ಸಹ ದೇವಾಲಯದ ಅವಿಭಾಜ್ಯ ಅಂಗವಾಗಿರುವುದರಿಂದ ಹಾಗೂ ದೇವಾಲಯದ ಪ್ರತೀಕವೇ ಆಗಿರುವುದರಿಂದ ರಥಶಿಲ್ಪಗಳಲ್ಲಿಯೂ ಸಹ ಅನೇಕ ವಿಧದ ಶೃಂಗಾರ ವರ್ಣನೆಯ ಶಿಲ್ಪಗಳನ್ನು ಕಾಣಬಹುದು.

ಹಲವಾರು ಹಾವಭಾವಗಳನ್ನು ಪ್ರದರ್ಶಿಸುವ ವಿವಿಧ ಭಂಗಿಯಲ್ಲಿರುವ ನಗ್ನ ಸ್ತ್ರೀಯ ಬಿಡಿಶಿಲ್ಪಗಳು, ಕಾಮಾತುರವನ್ನು ಸೂಚಿಸುವ ನಗ್ನ ಅಥವಾ ಅರೆನಗ್ನ ಸ್ತ್ರೀ-ಪುರುಷರ ಜೋಡಿ ಶಿಲ್ಪಗಳು ಚುಂಬನ ಆಲಿಂಗನದಲ್ಲಿ ತೊಡಗಿರುವ ಸ್ತ್ರೀ ಪುರಷರು, ಸಹಜ ಲೈಂಗಿಕ ಆಸನಗಳನ್ನು ತೋರುವ ಶಿಲ್ಪಗಳು, ಅಸಾಧ್ಯ ಹಾಗೂ ಪ್ರಾಯೋಗಿಕವಲ್ಲದ ದೊಂಬರಾಟದಂತಹ ಕಠಿಣ ಆಸನಗಳು, ಸಮೂಹ ಸಂಭೋಗ, ಪಶು ಸಂಭೋಗ, ಸಲಿಂಗ ರತಿ ಮುಂತಾದ ವಿಕೃತ ಕಾಮಕ್ರಿಯೆಗಳನ್ನು ತೋರುವ ಶಿಲ್ಪಗಳು, ಹೀಗೆ ಹಲವಾರು ವಿಧದ ಶಿಲ್ಪಗಳು ರಥದ ಅಡಿಪಾಯ ಹಾಗೂ ಅಧಿಷ್ಠಾನ ಭಾಗಗಳಲ್ಲಿ ಕಂಡುಬರುತ್ತವೆ.

ಹಿಂದೂ ದೇವಾಲಯಗಳು ಪೂಜಾ ಸ್ಥಳಗಳು ಮಾತ್ರವಲ್ಲದೆ, ಸಾಮಾಜಿಕ ಚಟುವಟಿಕೆಗಳ ಕೇಂದ್ರಗಳೂ ಆಗಿರುವುದರಿಂದ ಇಲ್ಲಿ ಅನೇಕ ವಿಚಾರ ವಿನಿಮಯಗಳು ನಡೆಯುತ್ತಿದ್ದವು ಹೊಸ ಹೊಸ ಸುದ್ದಿಗಳೂ ತಿಳಿಯುತ್ತಿದ್ದವು. ದೇವಾಲಯವು ಜ್ಞಾನಾರ್ಜನೆಯ ಕೇಂದ್ರವಾಗಿತ್ತು. ಇಲ್ಲಿನ ಅನೇಕ ಶಿಲ್ಪಗಳು ಅವರಿಗೆ ಪಠ್ಯ ಪುಸ್ತಕಗಳಂತಿದ್ದವು. ಇವುಗಳಂತೆ ಮಿಥುನ ಶಿಲ್ಪಗಳು ಒಂದು ರೀತಿಯಲ್ಲಿ ಶಿಲ್ಪಗಳ ಮೂಲಕ ರಚಿಸಿದ ಕಾಮಸೂತ್ರ. ವಾತ್ಸಾಯನನು ತನ್ನ ಕಾಮಸೂತ್ರದ 'ಬಲೋಪಕ್ರಮಣ' ಎಂಬ ಅಧ್ಯಾಯದಲ್ಲಿ ವಯಸ್ಸಿಗೆ ಬಂದ ಕನ್ಯೆಯರು ಹಾಗೂ ನವವಧುವರರನ್ನು ದೇವಾಲಯಕ್ಕೆ ಕರೆದೊಯ್ದು ಅಲ್ಲಿನ ಮಿಥುನ ಶಿಲ್ಪಗಳನ್ನು ಅವರಿಗೆ ತೋರಿಸಬೇಕೆಂದು ಹೇಳಿದ್ದಾನೆ. ಇದರಿಂದ ಅವರು ಲೈಂಗಿಕ ಜ್ಞಾನವನ್ನು ಪಡೆಯಲು ಸಾಧ್ಯವೆಂಬುದು ಅವನ ಅಭಿಪ್ರಾಯ[೧೭].

ರಥೋತ್ಸವದ ಸಂದರ್ಭದಲ್ಲಿ ನವವಧುವರರಿಗೆ ಹಿರಿಯರು, ರಥದ ಗಡ್ಡಿ ನೋಡಲು ಸೂಚಿಸುವ ವಾಡಿಕೆ ಇನ್ನೂ ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತದೆ. ಆಧ್ಯಾತ್ಮಿಕ ವಿಚಾರಧಾರೆಯಂತೆ ಮನುಷ್ಯನ ಎಲ್ಲ ಕಾಮನೆಗಳು ತೀರಿದ ಮೇಲೆ ಆಧ್ಯಾತ್ಮಿಕ ಪ್ರಗತಿಯಾಗುತ್ತದೆ. ಇದಲ್ಲದೆ ತ್ಯಾಗದ ಉತ್ಪತ್ತಿಗೆ ಅತಿ ಭೋಗವೇ ಕಾರಣವೆಂದು ತಿಳಿದುಬರುತ್ತದೆ. ಅಲ್ಲದೆ ''ಕಾಮವನ್ನು

---

೧೫. '' ಶೃಂಗಾರ ಶಿಲ್ಪ '' ಯು.ಎಸ್.ವೆಂಕಟರಾಮನ್, ಉದಯವಾಣಿ, ದೀಪಾವಳಿ ವಿಶೇಷಾಂಕ, ೧೯೯೯

೧೬.''ದೇವಾಲಯಗಳು ಮತ್ತು ಮಿಥುನ ಶಿಲ್ಪಗಳು'' ಕೆ.ಶ್ರೀನಿವಾಸ ಮೂರ್ತಿ, ಕನ್ನಡ ಪ್ರಭ, ಜುಲೈ ೧೨, ೧೯೯೨

೧೭. '' ಶೃಂಗಾರ ಶಿಲ್ಪ '' ಯು.ಎಸ್.ವೆಂಕಟರಾಮನ್, ಉದಯವಾಣಿ, ದೀಪಾವಳಿ ವಿಶೇಷಾಂಕ, ೧೯೯೯

ಕೊಂದಾತನಲ್ಲದೆ ಶುದ್ಧ ಪ್ರಸಾದಿಯಲ್ಲ, ಕಾಲನನ್ನು ತಿಂದಾತನಲ್ಲದೆ ಸಿದ್ಧ ಪ್ರಸಾದಿಯಲ್ಲ, ತ್ರಿಪುರವನ್ನು ಸುಟ್ಟಾತನಲ್ಲದೆ ಪ್ರಸಿದ್ಧ ಪ್ರಸಾಧಿಯಲ್ಲ'' ಎಂಬ ಹೇಳಿಕೆಯಂತೆ, ಶುದ್ಧ ಸಿದ್ಧ ಹಾಗೂ ಪ್ರಸಿದ್ಧರಾಗಲು ಮೊದಲನೆಯ ಹಂತದಲ್ಲಿಯೇ ಕಾಮನನ್ನು ಕೊಲ್ಲಬೇಕಾಗುತ್ತದೆ[೧೮]. ಮನುಷ್ಯನು ಆಧ್ಯಾತ್ಮಿಕ ದಾರಿಯತ್ತ ಮುನ್ನಡೆಯಲು, ಆತ್ಮವನ್ನು ಸಾಕ್ಷಾತ್ಕರಿಸಿಕೊಳ್ಳಲು, ಅಥವಾ ಮೋಕ್ಷವನ್ನು ಸಾಧಿಸಲು ಪ್ರಪಂಚದಲ್ಲಿರುವಾಗ ಎಲ್ಲ ರೀತಿಯ ಭೋಗವನ್ನು ಮಾಡುವುದು ಅನಿವಾರ್ಯವೆಂದು ತಿಳಿಯ ಪಡಿಸಲು ಈ ವಿಥುನ ಶಿಲ್ಪಗಳು ರಥದ ವಿವಿಧ ಭಾಗಗಳಲ್ಲಿ ರಚನೆಗೊಂಡಿವೆ. ಕೆಲವು ಗಡ್ಡಿ ರಥಗಳ ಅಡಿಪಾಯ ಭಾಗದಲ್ಲಿ ಮಿಥುನ ಶಿಲ್ಪಗಳನ್ನು ಕಾಣಬಹುದು. ಗದಗ ಜಿಲ್ಲೆ ಶಿರಹಟ್ಟಿಯ ಫಕೀರೇಶ್ವರ ಸಂಸ್ಥಾನ ಮಠದ ಅಡಿಪಾಯ ಭಾಗದಲ್ಲಿ ಸುಂದರವಾಗಿ ರಚಿಸಲ್ಪಟ್ಟ ಮಿಥುನ ಶಿಲ್ಪಗಳನ್ನು ಕಾಣಬಹುದು. ಸ್ತ್ರೀ-ಪುರುಷರು ವಿವಿಧ ಭಂಗಿಗಳಲ್ಲಿ ಸಂಭೋಗ ಕ್ರಿಯೆಯಲ್ಲಿ ತೊಡಗಿರುವ ಹಾಗೂ ಅದಕ್ಕೆ ಕೆಲವರು ಸಹಾಯಕರಾಗಿ ನಿಂತಿರುವಂತೆ ರಚಿಸಲಾದ ಶಿಲ್ಪಗಳಿವೆ. ರಥದ ಮುಂಭಾಗ ಹಾಗೂ ಹಿಂಭಾಗದಲ್ಲಿ ಒಟ್ಟು ಆರು ಫಲಕಗಳಲ್ಲಿ ಮಿಥುನ ಶಿಲ್ಪಗಳು ರಚಿಸಲ್ಪಟ್ಟಿವೆ.

ಇದೇ ರೀತಿಯಲ್ಲಿ ರಚಿಸಲಾದ ಮಿಥುನ ಶಿಲ್ಪಗಳನ್ನು ಇದೇ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಶ್ರೀ ಸೋಮೇಶ್ವರ ರಥದಲ್ಲಿಯೂ ಕಾಣಬಹುದು. ಇಲ್ಲಿಯೂ ಸಹ ಸ್ತ್ರೀ-ಪುರುಷರು ವಿವಿಧ ಭಂಗಿಗಳಲ್ಲಿ ರತಿ ಕ್ರೀಡೆಯಲ್ಲಿ ತೊಡಗಿರುವಂತೆ ಕೆತ್ತನೆ ಮಾಡಲಾಗಿದೆ.

ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಕುಕನೂರಿನ ಮಹಾಮಾಯಿ ರಥದ ಅಡಿಪಾಯ ಭಾಗದಲ್ಲಿ ಸಹಜ ಲೈಂಗಿಕ ಆಸನಗಳನ್ನು ತೋರುವ ಹಾಗೂ ಚುಂಬನ ಆಲಿಂಗನದಲ್ಲಿ ತೊಡಗಿರುವ ಸ್ತ್ರೀ-ಪುರುಷರ ಶಿಲ್ಪಗಳನ್ನು ಕಾಣಬಹುದು.

ರಾಯಚೂರು ಜಿಲ್ಲೆ ಮಸ್ಕಿಯ ಮಲ್ಲಿಕಾರ್ಜುನ ರಥ ಹಾಗೂ ಬಳಗಾನೂರದ ಶ್ರೀ ಆಂಜನೇಯನ ರಥದ ಅಡಿಪಾಯ ಭಾಗದಲ್ಲಿ, ಶಿರಹಟ್ಟಿಯ ಶ್ರೀ ಫಕೀರೇಶ್ವರ ಸಂಸ್ಥಾನ ಮಠದ ರಥದಲ್ಲಿ ಕಂಡುಬರುವಂತಹ ಮಿಥುನ ಶಿಲ್ಪಗಳನ್ನು ಕಾಣಬಹುದು. ಅಸಾಧ್ಯ ಹಾಗೂ ಪ್ರಾಯೋಗಿಕವಲ್ಲದ ದೊಂಬರಾಟದಂತಹ ಕಠಿಣ ಆಸನಗಳು ಹಾಗೂ ಸಮೂಹ ಸಂಭೋಗ ಹಾಗೂ ಸಲಿಂಗ ರತಿ ಇಂತಹ ವಿವಿಧ ರೀತಿಯ ಮಿಥುನ ಶಿಲ್ಪಗಳನ್ನು ಕಾಣಬಹುದು. ಆದರೆ ಈ ಶಿಲ್ಪಗಳು ಎಣ್ಣೆ ಹಾಗೂ ಧೂಳುಗಳಿಂದ ಮುಚ್ಚಿ ಹೋಗಿರುವುದರಿಂದ ಸ್ಪಷ್ಟವಾಗಿ ಕಂಡುಬುರವುದಿಲ್ಲ.

ಬಳ್ಳಾರಿ ಜಿಲ್ಲೆ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ರಥದ ಅಡಿಪಾಯ ಭಾಗದಲ್ಲಿ ಕಾಮತುರವನ್ನು ಸೂಚಿಸುವ ನಗ್ನ ಸ್ತ್ರೀ-ಪುರುಷರ ಶಿಲ್ಪಗಳನ್ನು ಕೆತ್ತಲಾಗಿದೆ. ಇಂತಹ ಶಿಲ್ಪಗಳನ್ನು ಇದೇ ಜಿಲ್ಲೆಯ ಹೂವಿನ ಹಡಗಲಿ ತಾಲೂಕು ಸೋಗಿಯ ವೀರಭದ್ರನ ರಥದ ಅಡಿಪಾಯ ಭಾಗದಲ್ಲಿಯೂ ಕಾಣಬಹುದು. ಇಲ್ಲಿ ಕೆಲವು ಪಶು ಸಂಭೋಗ ಸ್ವರತಿ ಶಿಲ್ಪಗಳು ಕಂಡುಬರುತ್ತವೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ರಥದ ಅಡಿಪಾಯ ಭಾಗದಲ್ಲಿ ನಗ್ನವಾಗಿ ನಿಂತ ಸ್ತ್ರೀ-ಪುರಷ ರಾಕ್ಷಸಗಳು ಕೈ ಮೇಲಕ್ಕೆತ್ತಿ ನಿಂತಿರುವಂತೆ ಶಿಲ್ಪರಚನೆ ಮಾಡಲಾಗಿದೆ.

---

೧೮. ''ಕತ್ತಲಿನಿಂದ ಬೆಳಕಿನೆಡೆಗೆ'' ಶ್ರೀ ಶಿವಾನಂದ ಸ್ವಾಮಿ, ಪು.ಸಂ. ೧೭, ೧೯೯೧.

ಹುಬ್ಬಳ್ಳಿಯ ಮೂರು ಸಾವಿರ ಮಠದ ರಥದ ಅಡಿಪಾಯ ಭಾಗದಲ್ಲಿ ಕಾಮಾತುರವನ್ನು ಸೂಚಿಸುವ ನಗ್ನ ಹಾಗೂ ಅರೆನಗ್ನ ಸ್ತ್ರೀ-ಪುರುಷರ ಶಿಲ್ಪಗಳು ಕಂಡು ಬರುತ್ತವೆ. ಇದರಂತೆ ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ, ಮಾನ್ವಿಯ ಯಲ್ಲಮ್ಮ, ಹಾಗೂ ಅಂಕ್ಲೀ ಮಠದ ರಥಗಳ ಅಡಿಪಾಯ ಭಾಗದಲ್ಲಿ ಅರೆ ನಗ್ನ ಸ್ತ್ರೀ-ಪುರುಷರ ಶಿಲ್ಪಗಳನ್ನು ಕಾಣಬಹುದು.

ಧರ್ಮಸ್ಥಳದ ವಸ್ತುಸಂಗ್ರಹಾಲಯದ ಎದುರುಗಡೆಗೆ ಇರುವ ರಥಗಳಲ್ಲಿಯೂ ಸಹ ಸಹಜ ಲೈಂಗಿಕ ಆಸನಗಳನ್ನು ತೋರುವ ಹಾಗು ನಗ್ನ ಸ್ತ್ರೀ-ಪುರಷರ ಶಿಲ್ಪಗಳನ್ನು ಕಾಣಬಹುದು. ಇದಲ್ಲದೆ ಕೆಲವು ಸ್ತ್ರೀ ಹಾಗೂ ಪ್ರಾಣಿ ಸಂಭೋಗ ಕ್ರಿಯೆಯಂತಹ ಶಿಲ್ಪಗಳೂ ರಚನೆಗೊಂಡಿವೆ.

ಶ್ರೀರಂಗಪಟ್ಟಣದ ಶ್ರೀರಂಗನಾಥನ ರಥ, ನಂಜನಗೂಡಿನ ಶ್ರೀ ನಂಜುಂಡೇಶ್ವರ ರಥಗಳು, ಹಂಪೆಯ ಶ್ರೀ ವಿರೂಪಾಕ್ಷ ದೇವರ ರಥ, ಮೈಸೂರಿನ ಶ್ರೀ ಚಾಮುಂಡೇಶ್ವರಿ ರಥ, ಬನವಾಸಿಯ ಶ್ರೀ ಮಧುಕೇಶ್ವರ ರಥ, ಹೀಗೆ ನಾಡಿನ ಕೆಲವು ಹಳೆಯ ರಥಗಳಲ್ಲಿ ಹೆಚ್ಚಾಗಿ ಮಿಥುನ ಶಿಲ್ಪಗಳು ಕಂಡುಬರುತ್ತವೆ.

v. **ನಕ್ಷಾ ಶಿಲ್ಪಗಳು :** ಈ ಹಿಂದೆ ವಿವಿಧ ಶಿಲ್ಪವಿನ್ಯಾಸಗಳನ್ನು ಅಭ್ಯಸಿಸಲು ಹೆಸರಿಸಿದ ಎಲ್ಲ ರಥಗಳೂ ಸಹ ಅನೇಕ ರೀತಿಯ ಸುಂದರವಾದ ನಕ್ಷಾ ವಿನ್ಯಾಸಗಳನ್ನು ಹೊಂದಿವೆ. ರಥದ ಅಡಿಪಾಯ ಭಾಗದಲ್ಲಿ ಕಂಡುಬರುವ ದೇವತಾಶಿಲ್ಪಗಳು, ಪ್ರಾಣಿ ಶಿಲ್ಪಗಳು, ಮಹಾತ್ಮರ ಶಿಲ್ಪಗಳು ಹಾಗೂ ಮಿಥುನ ಶಿಲ್ಪಗಳು ಸುಂದರವಾಗಿ ಕಾಣಲು ರಚಿಸಿದಂತಹ ಅನೇಕ ಕಮಾನು ಕಂಬಗಳಂತಹ ವಿನ್ಯಾಸಗಳಲ್ಲಿ, ಪ್ರಭಾವಳಿಗಳಂತಹ ವಿನ್ಯಾಸಗಳಲ್ಲಿ ಹಾಗೂ ವಿವಿಧ ರೀತಿಯ ಭುಜಾಕೃತಿಗಳಲ್ಲಿ ಅನೇಕ ನಕ್ಷಾ ಶಿಲ್ಪಗಳನ್ನು ಕಾಣಬಹುದು. ಹೂ ಬಳ್ಳಿಯಾಕಾರದ, ಅಂಚುನಕ್ಷೆ, ತುಂಬುನಕ್ಷೆ, ಕುದುರೆ ಬಾಲದ ನಕ್ಷೆ, ಸುರುಳಿ ನಕ್ಷೆ ಹೀಗೆ ಅನೇಕ ನಕ್ಷಾ ಶಿಲ್ಪಗಳನ್ನು ರಥದ ಅಡಿಪಾಯ ಭಾಗದಲ್ಲಿ ಕಾಣಬಹುದು.

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಅಡಿಪಾಯ ಭಾಗ : ಕಾಷ್ಠ ಮಾಧ್ಯಮದ ಅಂಕಣ ರಥಗಳ ಅಡಿಪಾಯ ಭಾಗವೂ ಸಹ ಗಡ್ಡಿ ರಥದ ಅಡಿಪಾಯ ಭಾಗದಂತೆಯೇ ನಿರ್ಮಾಣಗೊಂಡಿರುತ್ತದೆ. ಆದರೆ, ಈ ಅಂಕಣ ರಥಗಳ ಅಚ್ಚುಗಳು ಹಾಗೂ ತೊಲೆಗಳ ಮೇಲೆ ಯಾವುದೇ ರೀತಿಯ ಶಿಲ್ಪ ವಿನ್ಯಾಸಗಳು ಕಂಡುಬರುವುದಿಲ್ಲ. ಅಂಕಣ ರಥಗಳಿಗೆ ಹೆಚ್ಚಾಗಿ ಶಿಲೆಯ ಚಕ್ರಗಳನ್ನು ಅಳವಡಿಸಿರುವುದು ಕಂಡುಬರುತ್ತದೆ. ಅಂಕಣ ರಥಗಳು ನಾಲ್ಕು ಚಕ್ರಗಳನ್ನು ಹೊಂದಿರುವುದು ಎಲ್ಲೆಡೆ ಕಂಡು ಬರುತ್ತದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮದಬಾವಿಯ ಸಿದ್ಧೇಶ್ವರ ರಥ, ಅಥಣಿ ತಾಲೂಕಿನ ಜನವಾಡದ ಲಕ್ಷ್ಮೀದೇವಿಯ ರಥ, ಗೋಕಾಕದ ಬಸವಣ್ಣನ ರಥ, ಬಿಜಾಪುರ ಜಿಲ್ಲೆಯ ಹಲಗುಣಕಿಯ ಸಿದ್ಧೇಶ್ವರ ರಥ, ಮುದ್ದೇಬಿಹಾಳದ ತಾಲೂಕಿನ ಬಿಳೆಬಾವಿಯ ಸಿದ್ಧೇಶ್ವರ ರಥ, ರಾಯಚೂರು ತಾಲೂಕಿನ ಮಲ್ಲಾಪುರದ ಮಲ್ಲಿಕಾರ್ಜುನ ರಥ, ಬಾಗಲಕೋಟ ಜಿಲ್ಲೆ ಮುಧೋಳ ತಾಲೂಕಿನ ಮುಳ್ಳಿಗೇರಿಯ ಆಂಜನೇಯನ ರಥ, ಮುಧೋಳದ ಬ್ರಹ್ಮಗಡ್ಡಿ ಮಠದ ರಥ, ಈ ಎಲ್ಲ ಅಂಕಣ ರಥಗಳು ಸುಮಾರು ನಾಲ್ಕೂವರೆ ಅಡಿ ವ್ಯಾಸವುಳ್ಳ ಶಿಲೆಯ ಚಕ್ರಗಳನ್ನು ಹೊಂದಿವೆ.

ಬಿಜಾಪುರ ಜಿಲ್ಲೆಯ ಹಂಗರಗಿಯ ಲಕ್ಷ್ಮೀ ದೇವಿಯ ಸಣ್ಣ ರಥ, ಕೊಪ್ಪಳ ಜಿಲ್ಲೆ ಕುಷ್ಟಗಿ

ಕಾಷ್ಠ ರಥಗಳ ಅಡಿಪಾಯ ಭಾಗದ ಪ್ರಾಣಿ ಶಿಲ್ಪಗಳು





ಶ್ರೀ ವೀರಭದ್ರೇಶ್ವರ ರಥ
ಹುನಗುಂದ, ಜಿ - ಬಾಗಲಕೋಟ



ಶ್ರೀ ಶಿವಯೋಗೀಶ್ವರ ರಥ
ಇಂಚಲ, ಜಿ - ಬೆಳಗಾಂವ



ಶ್ರೀ ಸಿದ್ಧಸಂಸ್ಥಾನಮಠ ರಥ
ಮುಗಳಕೋಡ, ಜಿ - ಬೆಳಗಾಂವ




ಶ್ರೀ ಮಾಹಾಸಿಂಗೇಶ್ವರ ರಥ
ಮಾಹಾಲಿಂಗಪೂರ, ಜಿ - ಬಾಗಲಕೋಟ




ಶ್ರೀ ಮೂರುಸಾವಿರ ಮಠದ ರಥ
ಹುಬ್ಬಳ್ಳಿ




ಶ್ರೀ ಮರಡಿ ಮಠದ ರಥ
ಕೂನ್ನೂರ, ಜಿ - ಬೆಳಗಾಂವ




ಶ್ರೀ ವೀರಭದ್ರೇಶ್ವರ ರಥ
ಇಟಗಿ, ಜಿ - ಬಳ್ಳಾರಿ



ಶ್ರೀ ಫಕೀರೇಶ್ವರ ಮಠದ ರಥ
ಶಿರಹಟ್ಟಿ, ಜಿ - ಗದಗ



ಶ್ರೀ ಸಿದ್ಧಾರೂಢ ರಥ
ಮುರಕಿಬಾವಿ, ಜಿ - ಬೆಳಗಾಂವ



ಶ್ರೀ ಶಂಕರಲಿಂಗ ರಥ ಸಂಕೇಶ್ವರ, ಜಿ - ಬೆಳಗಾಂವ

ಕಾಷ್ಠ ರಥಗಳ ಅಡಿಪಾಯ ಭಾಗದ ಪ್ರಾಣಿ ಶಿಲ್ಪಗಳು



ಶ್ರೀ ಕನಕರಾಯನ ರಥ
ಕನಕಗಿರಿ, ಜಿ - ಕೊಪ್ಪಳ



ಶ್ರೀ ಬನಶಂಕರಿ ರಥ
ಬದಾಮಿ, ಜಿ - ಬಾಗಲಕೋಟ



ಶ್ರೀ ಗವಿಸಿದ್ದೇಶ್ವರ ರಥ
ಕೊಪ್ಪಳ



ಶ್ರೀ ಅಮರೇಶ್ವರ ರಥ
ಗುಡಗುಂಟಿ, ಜಿ - ರಾಯಚೂರ



ಶ್ರೀ ವೀರಭದ್ರೇಶ್ವರ ರಥ
ಇಟಗಿ, ಜಿ - ಬಳ್ಳಾರಿ



ಶ್ರೀ ಮಹಾಮಾಯಿ ರಥ
ಕುಕನೂರ, ಜಿ - ಕೊಪ್ಪಳ



ಶ್ರೀ ವೀರಭದ್ರೇಶ್ವರ ರಥ
ಬಿಂಚಲಿ, ಜಿ - ಗದಗ




ಶ್ರೀ ಗವಿಸಿದ್ದೇಶ್ವರ ರಥ ಕೊಪ್ಪಳ, ಜ - ಕೊಪ್ಪಳ





ಶ್ರೀ ಗವಿಸಿದ್ದೇಶ್ವರ ರಥ ಕೊಪ್ಪಳ, ಜ - ಕೊಪ್ಪಳ





ಶ್ರೀ ಮಾಹಾಲಿಂಗೇಶ್ವರ ರಥ ಮಾಹಾಲಿಂಗಪೂರ, ಜ - ಬಾಗಲಕೋಟ

ಶ್ರೀ ಸಿದ್ಧಸಂಸ್ಥಾನ ಮಠದ ರಥ ಮುಗಳಖೋಡ, ಜ - ಬೆಳಗಾಂವ

ಕಾಷ್ಠ ರಥಗಳ ಅಡಿಪಾಯ ಭಾಗದ ದೇವತಾ ಹಾಗೂ ಸಿದ್ಧಪುರುಷರ ಶಿಲ್ಪಗಳು



ಶ್ರೀ ಕರೇಪ್ಪತಾತನ ರಥ ಕಲ್ಮಲ, ಜಿ - ರಾಯಚೂರ



ಶ್ರೀ ಸಿಧೇಶ್ವರ ರಥ ಶಿರೂರ, ಜಿ - ಬಾಗಲಕೋಟ



ಶ್ರೀ ಹುಲಿಗೆಮ್ಮನ ರಥ ಹುಲಗಿ, ಜಿ - ಕೊಪ್ಪಳ



ಶ್ರೀ ಮೌನೇಶ್ವರ ರಥ ವರವಿ, ಜಿ - ಗದಗ


ಕಾಷ್ಠ ರಥಗಳ ಅಡಿಪಾಯ ಭಾಗದ ಮಿಥುನ ಶಿಲ್ಪಗಳು




ಶ್ರೀ ಫಕೀರೇಶ್ವರ ರಥ ಶಿರಹಟ್ಟಿ, ಜ - ಗದಗ



ಶ್ರೀ ಫಕೀರೇಶ್ವರ ರಥ ಶಿರಹಟ್ಟಿ, ಜ - ಗದಗ



ಶ್ರೀ ಫಕೀರೇಶ್ವರ ರಥ ಶಿರಹಟ್ಟಿ, ಜ - ಗದಗ



ಶ್ರೀ ಫಕೀರೇಶ್ವರ ರಥ ಶಿರಹಟ್ಟಿ, ಜ - ಗದಗ


ಕಾಷ್ಠ ರಥಗಳ ಅಡಿಪಾಯ ಭಾಗದ ಮಿಥುನ ಶಿಲ್ಪಗಳು




ಶ್ರೀ ಫಕೀರೇಶ್ವರ ರಥ ಶಿರಹಟ್ಟಿ, ಜಿ - ಗದಗ




ಶ್ರೀ ಸೋಮೇಶ್ವರ ರಥ ಲಕ್ಷ್ಮೇಶ್ವರ, ಜಿ - ಗದಗ



ಶ್ರೀ ಸೋಮೇಶ್ವರ ರಥ ಲಕ್ಷ್ಮೇಶ್ವರ, ಜಿ - ಗದಗ



ವಸ್ತು ಸಂಗ್ರಹಾಲಯದ ರಥ, ಧರ್ಮಸ್ಥಳ



ಶ್ರೀ ಸೋಮೇಶ್ವರ ರಥ ಲಕ್ಷ್ಮೇಶ್ವರ, ಜಿ - ಗದಗ



ವಸ್ತು ಸಂಗ್ರಹಾಲಯದ ರಥ, ಧರ್ಮಸ್ಥಳ

ಕಾಷ್ಠ ರಥಗಳ ಅಡಿಪಾಯ ಭಾಗದ ಮಿಥುನ ಶಿಲ್ಪಗಳು






ಶ್ರೀ ಕನಕರಾಯನ ರಥ ಕನಕಗಿರಿ, ಜಿ - ಕೊಪ್ಪಳ




ಶ್ರೀ ನಂಜುಡೇಶ್ವರ ರಥ ನಂಜನಗೂಡು



ಶ್ರೀ ಮಾಹಾಮಾಯಿ ರಥ
ಕುಕನೂರು, ಜಿ - ಕೊಪ್ಪಳ



ಶ್ರೀ ಅಮರೇಶ್ವರ ರಥ
ಗುಡಗುಂಟಿ, ಜಿ - ರಾಯಚೂರ



ಶ್ರೀ ಮಾಹಾಮಾಯಿ ರಥ
ಕುಕನೂರು, ಜಿ - ಕೊಪ್ಪಳ



ಶ್ರೀ ಸಿದ್ಧೇಶ್ವರ ರಥ ನಾಗನೂರ, ಜಿ - ಬೆಳಗಾಂವ

ತಾಲೂಕು ಗುಮಗೇರಿಯ ಅಮರಪ್ಪನ ರಥ, ಗದಗ ಜಿಲ್ಲೆ ಕವಲೂರಿನ ಬಸವಣ್ಣನ ರಥ, ಧಾರವಾಡ ಜಿಲ್ಲೆ ಶಿಗ್ಗಾಂವ ತಾಲೂಕು ಶಿಡಗರಹಳ್ಳಿಯ ಊರಮ್ಮನ ರಥ, ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕು ಚಿಕ್ಕಲಕಿಯ ಮಲ್ಲಯ್ಯನ ರಥ, ಈ ಎಲ್ಲ ರಥಗಳು ಸುಮಾರು ಮೂರುವರೆ ಅಡಿ ವ್ಯಾಸವುಳ್ಳ ಶಿಲೆಯ ಚಕ್ರಗಳನ್ನು ಹೊಂದಿವೆ.

ಅಂಕಣ ರಥಗಳಲ್ಲಿ ಕೆಲವು ರಥಗಳಲ್ಲಿ ಮಾತ್ರ ಅಡಿಪಾಯ ಭಾಗದಲ್ಲಿ ಬೇರೆ ಬೇರೆ ರೀತಿಯ ಚಿತ್ರವಿನ್ಯಾಸಗಳು ಕಂಡುಬರುತ್ತವೆ. ಬೆಳಗಾವಿ ಜಿಲ್ಲೆ ಗೋಕಾಕದ ಬಸವಣ್ಣನ ರಥ, ಬಿಜಾಪುರ ಜಿಲ್ಲೆ ಮುದ್ದೇಬಿಹಾಳದ ಬಿಳೆಬಾವಿಯ ಸಿದ್ಧೇಶ್ವರ ರಥ, ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಚಿಕ್ಕಲಕಿಯ ಮಲ್ಲಯ್ಯನ ರಥ, ಬಿಜಾಪುರ ಜಿಲ್ಲೆ ಹಂಗರಗಿಯ ಊರಮ್ಮನ ರಥ, ಹೀಗೆ ಇಂತಹ ಕೆಲವು ರಥಗಳ ಅಡಿಪಾಯ ಭಾಗದಲ್ಲಿ ಅಚ್ಚುಗಳು ಹಾಗೂ ತೊಲೆಗಳ ಮೇಲೆ ವಿವಿಧ ರೀತಿಯ ಬಣ್ಣಗಳಿಂದ ಅನೇಕ ವಿನ್ಯಾಸಗಳನ್ನು ಬಿಡಿಸಿರುವುದು ಕಂಡು ಬರುತ್ತದೆ. ಕೆಲವು ಎಲೆಬಳ್ಳಿ, ಹೂವಿನಾಕಾರದ, ಸುರುಳಿಯಾಕಾರದ, ಶಂಕಾಕಾರದ ಹಾಗೂ ಸಣ್ಣ ಸಣ್ಣ ಚುಕ್ಕೆಗಳನ್ನಿಡುವುದರ ಮೂಲಕ ಅಡಿಪಾಯ ಭಾಗವನ್ನು ಸುಂದರಗೊಳಿಸಿರುವುದು ಕಂಡು ಬರುತ್ತದೆ.

ಅಂಕಣ ರಥಗಳಲ್ಲಿ ಕೆಲವು ರಥಗಳ ಶಿಲೆಯ ಚಕ್ರಗಳು ಉಬ್ಬುಶಿಲ್ಪಗಳನ್ನು ಹೊಂದಿವೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮದಬಾವಿಯ ಸಿದ್ಧೇಶ್ವರ ರಥದ ಚಕ್ರಗಳು ಹೂವಿನಾಕಾರದ ಉಬ್ಬುಶಿಲ್ಪವಿನ್ಯಾಸವನ್ನು ಹೊಂದಿವೆ. ಬಾಗಲಕೋಟ ಜಿಲ್ಲೆಯ ಮುಧೋಳದ ಸಿದ್ಧೇಶ್ವರ ರಥವು ವೃತ್ತಾಕಾರದ ಉಬ್ಬುಶಿಲ್ಪಗಳನ್ನು ಹೊಂದಿದೆ. ಬೆಳಗಾವಿ ಜಿಲ್ಲೆ ಗೋಕಾಕದ ಬಸವಣ್ಣನ ರಥವು ಚಕ್ರಗಳಲ್ಲಿ ಹೂವಿನ ಎಸಳುಗಳಂತಹ ಉಬ್ಬುಶಿಲ್ಪಗಳನ್ನು ಹೊಂದಿದೆ. ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಿಳೆಬಾವಿಯ ಬಸವಣ್ಣ ರಥವು ಸರಪಳಿಯಾಕಾರದ ಹಾಗೂ ಬಿಡಿ ಬಿಡಿ ಎಲೆಯಾಕಾರದ ಉಬ್ಬುಶಿಲ್ಪ ವಿನ್ಯಾಸಗಳನ್ನು ಹೊಂದಿದೆ. ರಾಯಚೂರು ತಾಲೂಕಿನ ಮಲ್ಲಾಪೂರದ ಮಲ್ಲಿಕಾರ್ಜುನ ರಥವು ಪ್ರತಿಯೊಂದು ಚಕ್ರಗಳಲ್ಲಿ ನಾಲ್ಕು ಬಳೆಯಾಕಾರದ ಉಬ್ಬುಶಿಲ್ಪಗಳನ್ನು ಹೊಂದಿದೆ. ಧಾರವಾಡ ಜಿಲ್ಲೆ ಶಿಗ್ಗಾಂವ ತಾಲೂಕು ಶಿಡಗರಹಳ್ಳಿಯ ಊರಮ್ಮನ ರಥವು ಚಕ್ರಗಳಲ್ಲಿ ಸುರುಳಿಯಾಕಾರದ ಹಾಗೂ ಅಲ್ಲಲ್ಲಿ ನಕ್ಷತ್ರಾಕಾರದ ಉಬ್ಬುಶಿಲ್ಪಗಳನ್ನು ಹೊಂದಿದೆ. ಹೀಗೆ ಅಂಕಣ ರಥಗಳಲ್ಲಿ ಕೆಲವು ರಥಗಳ ಚಕ್ರಗಳಲ್ಲಿ ಸುಂದರವಾದ ಉಬ್ಬುಶಿಲ್ಪಗಳನ್ನು ಕಾಣಬಹುದು.

ಬ. ಲೋಹ ಮಾಧ್ಯಮ ರಥಗಳ ಅಡಿಪಾಯ ಭಾಗ

ಲೋಹ ಮಾಧ್ಯಮದ ರಥಗಳ ಅಡಿಪಾಯ ಭಾಗವನ್ನು

೧. ಕಬ್ಬಿಣ ರಥಗಳ ಅಡಿಪಾಯ ಭಾಗ

೨. ಬೆಳ್ಳಿಯ ರಥಗಳ ಅಡಿಪಾಯ ಭಾಗ.

೩. ಚಿನ್ನದ ರಥಗಳ ಅಡಿಪಾಯ ಭಾಗ. ಹೀಗೆ ಮೂರು ವಿಧದಲ್ಲಿ ವಿಂಗಡಿಸಿಕೊಂಡು ಅಭ್ಯಾಸ ಮಾಡುವಾ.

೧. ಕಬ್ಬಿಣ ರಥಗಳ ಅಡಿಪಾಯ ಭಾಗ : ಕಬ್ಬಿಣ ರಥಗಳನ್ನು ಎರಡು ವಿಧಗಳಲ್ಲಿ ಕಾಣಬಹುದು.

i. ಕಬ್ಬಿಣದ ಗಡ್ಡಿ ರಥಗಳ ಅಡಿಪಾಯ ಭಾಗ.

ii. ಕಬ್ಬಿಣದ ಅಂಕಣ ರಥಗಳ ಅಡಿಪಾಯ ಭಾಗ.

i. ಕಬ್ಬಿಣದ ಗಡ್ಡಿ ರಥಗಳ ಅಡಿಪಾಯ ಭಾಗ : ಕಬ್ಬಿಣದ ಗಡ್ಡಿ ರಥಗಳು ಪೂರ್ಣ ಪ್ರಮಾಣದಲ್ಲಿ ಕಬ್ಬಿಣದಿಂದಲೇ ನಿರ್ಮಾಣ ಗೊಂಡಿರುತ್ತವೆ. ಆದರೆ ಅಡಿಪಾಯ ಭಾಗದಲ್ಲಿ ಕಂಡುಬರುವಂತಹ ಚಕ್ರಗಳು ಮಾತ್ರ ಶಿಲೆಗಳಿಂದ ನಿರ್ಮಾಣಗೊಂಡಿರುವುದನ್ನು ಕಾಣಬಹುದು. ಕಬ್ಬಿಣದ ಗಡ್ಡಿ ರಥಗಳಲ್ಲಿ ಕೆಲವು ರಥಗಳು ಮಾತ್ರ ಕಬ್ಬಿಣದ ಚಕ್ರಗಳನ್ನು ಹೊಂದಿವೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ಕಲಾಲಬಂಡಿಯ ವೀರಭದ್ರನ ರಥ ಹಾಗೂ ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಸಾನಬಾಳದ ಸಿದ್ಧೇಶ್ವರ ರಥಗಳು ಸುಮಾರು ನಾಲ್ಕು ಅಡಿ ಎತ್ತರದ ಚಕ್ರಗಳನ್ನು ಹೊಂದಿವೆ. ಗುಲಬರ್ಗಾ ಜಿಲ್ಲೆಯ ಅಫಜಲಪೂರ ತಾಲೂಕಿನ ದೇಸಾಯಿ ಕಲ್ಲೂರಿನ ಮಲ್ಲಿಕಾರ್ಜುನನ ರಥವು ಸುಮಾರು ಐದು ಅಡಿಗಳಷ್ಟು ಎತ್ತರದ ಅಖಂಡವಾದ ಕಬ್ಬಿಣದ ಚಕ್ರಗಳನ್ನು ಹೊಂದಿದೆ.

ಕೋಲಾರದ ಬಸವೇಶ್ವರ ರಥ, ಮುಧೋಳದ ಬಸವೇಶ್ವರ ರಥ, ಕೊಪ್ಪಳ ಜಿಲ್ಲೆ ಬುತ್ತಿಬಸವೇಶ್ವರ ದೇವಸ್ಥಾನದ ರಥ, ಜಾಲವಾಡಿಯ ಮುರಘೇಂದ್ರ ಸ್ವಾಮಿ ರಥ, ತೆಂಗುಂಟಿಯ ಬಸವಣ್ಣನ ರಥ, ಬಿಜಾಪೂರ ಜಿಲ್ಲೆಯ ವೀರಾಂಜನೇಯ ರಥ, ಈ ಎಲ್ಲ ರಥಗಳು ಸುಮಾರು ನಾಲ್ಕು ಅಡಿಗಳಷ್ಟು ಎತ್ತರದ ಶಿಲೆಯ ಚಕ್ರಗಳನ್ನು ಹೊಂದಿವೆ. ಕಬ್ಬಿಣದ ಗಡ್ಡಿ ರಥಗಳಲ್ಲಿ ಗುಲಬುರ್ಗಾ ಜಿಲ್ಲೆಯ ಅಫಜಲಪೂರ ತಾಲೂಕಿನ ದೇಸಾಯಿ ಕಲ್ಲೂರಿನ ಶ್ರೀ ಮಲ್ಲಿಕಾರ್ಜುನನ ರಥದ ಚಕ್ರಗಳು ಅತೀ ಎತ್ತರವಾಗಿವೆ. ಅಲ್ಲದೆ ಈ ರಥಕ್ಕೆ ಅಖಂಡ ಕಬ್ಬಿಣದ ಆರು ಚಕ್ರಗಳನ್ನು ಅಳವಡಿಸಲಾಗಿದೆ. ಕಬ್ಬಿಣದ ಗಡ್ಡಿ ರಥಗಳಲ್ಲಿ ಅತೀ ಹಳೆಯ ಹಾಗೂ ಆರು ಚಕ್ರಗಳನ್ನು ಹೊಂದಿದ ರಥವೆಂದರೆ ಇದೊಂದೆ ಎನ್ನಬಹುದು.

ಕಬ್ಬಿಣದ ಗಡ್ಡಿ ರಥಗಳ ಅಡಿಪಾಯ ಭಾಗವು ಚಕ್ರ, ಅಚ್ಚು ಹಾಗೂ ತೊಲೆಗಳಿಂದ ಕೂಡಿರುತ್ತದೆ. ಅಡಿಪಾಯ ಭಾಗದ ರಚನೆಯನ್ನು ಈಗಾಗಲೇ ತಿಳಿದುಕೊಂಡಿದ್ದೇವೆ. ಈ ರಥಗಳ ಅಡಿಪಾಯ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪ ವಿನ್ಯಾಸಗಳು ಕಂಡುಬರುವುದಿಲ್ಲ. ಆದರೆ ವಿವಿಧ ಬಣ್ಣಗಳಿಂದ ಸುಂದರವಾದ ಹೂಬಳ್ಳಿ ಸುರಳಿಯಾಕಾರದ ಹಾಗೂ ಜ್ಯಾಮಿತಿಯಾಕಾರದ ಅನೇಕ ನಕ್ಷೆಗಳನ್ನು ಬರೆಯುವುದರ ಮೂಲಕ ಸುಂದರಗೊಳಿಸಿರುತ್ತಾರೆ. ಈ ರಥಗಳಲ್ಲಿ ಬರೆದಿರುವಂತಹ ನಕ್ಷೆಗಳನ್ನು ಮತ್ತೆ ಮರುವರ್ಷ ಬಣ್ಣ ಮಾಡುವ ಸಂದರ್ಭದಲ್ಲಿ ಬೇರೆ ರೀತಿಯಲ್ಲಿ ಬರೆಯಲಾಗುತ್ತದೆ.

ii. ಕಬ್ಬಿಣದ ಅಂಕಣ ರಥಗಳ ಅಡಿಪಾಯ ಭಾಗ : ಕಬ್ಬಿಣದ ಗಡ್ಡಿ ರಥಗಳ ಸಂಖ್ಯೆಗಿಂತ ಕಬ್ಬಿಣದ ಅಂಕಣ ರಥಗಳ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ. ಕಬ್ಬಿಣದ ಅಂಕಣ ರಥಗಳಲ್ಲಿ ಕೆಲವು ರಥಗಳು ಮಾತ್ರ ಅರೆಗಳನ್ನುಳ್ಳ ಲೋಹದ ಚಕ್ರಗಳನ್ನು ಹೊಂದಿವೆ. ಉದಾಹರಣೆಗೆ ಗುಲಬುರ್ಗಾ ಜಿಲ್ಲೆ ಚಾಂಗಳೇರದ ವೀರಭದ್ರ ರಥ ಹಾಗೂ ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕವಿತಾಳದ




ಶ್ರೀ ಸಿದ್ಧಸಂಸ್ಥಾನ ಮಠದ ರಥ ಜಿಡಗಾ, ಜಿ - ಗುಲಬರ್ಗಾ



ಶ್ರೀ ಶರಣಬಸವೇಶ್ವರ ರಥ ರಸ್ತಾಪೂರ, ಜಿ - ಗುಲಬರ್ಗಾ



ಶ್ರೀ ಮಲ್ಲಿಕಾರ್ಜುನ ರಥ ದೇಸಾಯಿಕಲ್ಲೂರ, ಜಿ - ಗುಲಬರ್ಗಾ



ಶ್ರೀ ವೀರಭದ್ರ ರಥ
ಹಡಗಿಮದ್ರಾ, ಜಿ - ಗುಲಬರ್ಗಾ



ಶ್ರೀ ಬಸವೇಶ್ವರ ರಥ
ದೇವರಗೊಣಾಲ, ಜಿ - ಗುಲಬರ್ಗಾ

ಶಂಕರಲಿಂಗನ ರಥ, ಈ ಎರಡು ರಥಗಳು ಕಬ್ಬಿಣದ ಅರೆಗಳನ್ನುಳ್ಳ ಚಕ್ರಗಳನ್ನು ಹೊಂದಿವೆ.

ಕಬ್ಬಿಣದ ಅಂಕಣ ರಥಗಳಲ್ಲಿ ಅನೇಕ ರಥಗಳು ಶಿಲೆಯ ಚಕ್ರಗಳನ್ನು ಹೊಂದಿವೆ. ಇವುಗಳಲ್ಲಿ ಕೆಲವು ರಥಗಳಿಗೆ ಆರು ಚಕ್ರಗಳನ್ನು ಅಳವಡಿಸಲಾಗಿದೆ. ಗುಲಬರ್ಗಾ ಜಿಲ್ಲೆ ಶಹಾಪೂರ ತಾಲೂಕಿನ ರಸ್ತಾಪೂರದ ಶರಬಲಿಂಗೇಶ್ವರ ದೇವಸ್ಥಾನದ ರಥವು ಸುಮಾರು ನಾಲ್ಕೂವರೆ ಅಡಿ ಎತ್ತರದ ಆರು ಗಾಲಿಗಳನ್ನು ಹೊಂದಿದೆ. ಆಳಂದ ತಾಲೂಕಿನ ಮಾದನ ಹಿಪ್ಪರಗಾದ ಶಿವಲಿಂಗೇಶ್ವರ ರಥ, ಸೇಡಂ ತಾಲೂಕಿನ ಗಾಜರಕೋಟದ ವೀರಭದ್ರನ ರಥ, ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕಿನ ಬಳೂಟಗಿಯ ಬಸವಣ್ಣನ ರಥ, ಈ ಎಲ್ಲ ರಥಗಳು ಸುಮಾರು ಮೂರುವರೆ ಅಡಿ ಎತ್ತರದ ಶಿಲೆಯ ಆರು ಚಕ್ರಗಳನ್ನು ಹೊಂದಿವೆ.

ಗುಲಬುರ್ಗಾ ಜಿಲ್ಲೆ ಚಿತಾಪುರ ತಾಲೂಕಿನ ಕೋರವಾರದ ಅಣವೀರಭದ್ರೇಶ್ವರ ರಥ, ಶಹಾಪೂರ ತಾಲೂಕು ಡಿಗ್ಗಿ ಸಂಗವೇಶ್ವರ ರಥ, ಮದ್ದರಕಿ ಬಸವೇಶ್ವರ ರಥ, ಸುರಪುರ ತಾಲೂಕು ದೇವರ ಗೊನಾಲದ ಮೌನೇಶ್ವರ ರಥ, ಯಾದಗಿರಿ ತಾಲೂಕಿನ ಯಾಣಾಗುಂದಿಯ ವೇಂಕಟೇಶ್ವರ ಸ್ವಾಮಿ ರಥ, ಕಾಳಬೆಳಗುಂದಿಯ ಬನದೇಶ್ವರ ರಥ, ಚಿಂಚೊಳ್ಳಿ ತಾಲೂಕು ಸುಲೇಪೇಟದ ವೀರಭದ್ರ ರಥ, ಬೀದರ ಜಿಲ್ಲೆ ಬಸವಕಲ್ಯಾಣದ ಬಸವೇಶ್ವರ ರಥ, ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ ಸುಲ್ತಾನಪೂರದ ಸಿದ್ಧೇಶ್ವರ ರಥ, ರಾಯಚೂರು ಜಿಲ್ಲೆ ದೇವಸೂಗೂರದ ಸೂಗೂರೇಶ್ವರ ರಥ, ಗುಲಬುರ್ಗಾ ಜಿಲ್ಲೆ ಆಳಂದ ತಾಲೂಕಿನ ಜಿಡಗಾದ ಸಿದ್ಧಸಂಸ್ಥಾನ ಮಠದ ರಥ ಹಾಗೂ ಇನ್ನೂ ಅನೇಕ ರಥಗಳು ಶಿಲೆಯ ನಾಲ್ಕು ಚಕ್ರಗಳನ್ನು ಹೊಂದಿವೆ.

ಕಬ್ಬಿಣದ ಅಂಕಣ ರಥಗಳ ಶಿಲೆಯ ಚಕ್ರಗಳು ಸುಂದರವಾದ ವರ್ಣಗಾರಿಕೆಯಿಂದ ಕೂಡಿರುತ್ತವೆ. ಕೆಲವು ಚಕ್ರಗಳು ಉಬ್ಬುಶಿಲ್ಪಗಳನ್ನು ಹೊಂದಿ ವರ್ಣಗಳಿಂದ ಕಲಾತ್ಮಕಗೊಂಡಿರುತ್ತವೆ. ಕಬ್ಬಿಣದ ಅಂಕಣ ರಥಗಳ ಚಕ್ರಗಳ ವರ್ಣಗಾರಿಕೆಯನ್ನು ಮುಂದಿನ ಅದ್ಯಾಯದಲ್ಲಿ ತಿಳಿಯಪಡಿಸಲಾಗುವುದು.

ಈ ಕಬ್ಬಿಣದ ಅಂಕಣ ರಥಗಳ ಅಡಿಪಾಯ ಭಾಗವು ಕಬ್ಬಿಣದ ಅಚ್ಚುಗಳು ಹಾಗೂ ತೊಲೆಗಳನ್ನು ಹೊಂದಿರುತ್ತದೆ. ಅಡಿಪಾಯ ಭಾಗದ ರಚನೆಯನ್ನು ಈಗಾಗಲೇ ತಿಳಿದುಕೊಂಡಿರುವೆವು. ರಥಗಳ ಅಗಲ ಹಾಗೂ ಎತ್ತರಗಳಿಗೆ ಅನುಗುಣವಾಗಿ ಅಡಿಪಾಯ ಭಾಗದ ಚಕ್ರ, ಅಚ್ಚು ಹಾಗೂ ತೊಲೆಗಳು ಬೇರೆ ಬೇರೆ ಪ್ರಮಾಣಗಳಲ್ಲಿ ನಿರ್ಮಾಣಗೊಂಡಿರುತ್ತವೆ. ಕಬ್ಬಿಣದ ಗಡ್ಡಿ ರಥಗಳ ಹಾಗೂ ಅಂಕಣ ರಥಗಳ ಅಡಿಪಾಯ ಭಾಗದ ರಚನೆ ಒಂದೇ ರೀತಿಯಲ್ಲಿ ಕಂಡುಬರುತ್ತದೆ.

೨. ಬೆಳ್ಳಿಯ ರಥಗಳ ಅಡಿಪಾಯ ಭಾಗ :

ಬೆಳ್ಳಿಯ ರಥಗಳ ಅಡಿಪಾಯ ಭಾಗವು ಸಹ ಅಚ್ಚುಗಳು, ತೊಲೆಗಳು ಹಾಗೂ ಚಕ್ರಗಳನ್ನು ಹೊಂದಿರುತ್ತದೆ. ಬೆಳ್ಳಿಯ ರಥಗಳಿಗೆ ಮರದ ಚಕ್ರಗಳ ಅಳವಡಿಕೆಯು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದ ರಥದ ಹಾಗೂ ಶೃಂಗೇರಿಯ

ಶ್ರೀ ಶಾರದಾಂಬೆಯ ಬೆಳ್ಳಿಯ ರಥಗಳ ಅಡಿಪಾಯ ಭಾಗದಲ್ಲಿ ಆಧಾರ ತೊಲೆಗಳ ಮುಂಭಾಗದಲ್ಲಿ, ಬಾಯ್ದೆರೆದ ಸಿಂಹಗಳ ಮುಖವಿನ್ಯಾಸವಿರುವ ಬೆಳ್ಳಿಯ ಶಿಲ್ಪಗಳನ್ನು ಅಳವಡಿಸಲಾಗಿದೆ. ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಗೊಡಚಿ ವೀರಭದ್ರ ದೇವಸ್ಥಾನದ ರಥದ ಅಡಿಪಾಯ ಭಾಗದಲ್ಲಿ ವಿವಿಧ ಸುರುಳಿ ನಕ್ಷೆಗಳು ಹಾಗೂ ಸಿಂಹಗಳ ಉಬ್ಬುಶಿಲ್ಪ ವಿನ್ಯಾಸಗಳಿರುವ ಬೆಳ್ಳಿಯ ತಗಡುಗಳನ್ನು ಅಳವಡಿಸಲಾಗಿದೆ.

೩. ಚಿನ್ನದ ರಥಗಳ ಅಡಿಪಾಯ ಭಾಗ :

ಚಿನ್ನದ ರಥಗಳ ಅಡಿಪಾಯ ಭಾಗವೂ ಸಹ ಬೆಳ್ಳಿ ರಥದ ಮಾದರಿಯಲ್ಲಿಯೇ ಇರುತ್ತದೆ. ರಥದ ಎತ್ತರಕ್ಕೆ ತಕ್ಕಂತೆ ಚಕ್ರಗಳು, ತೊಲೆಗಳು ಹಾಗೂ ಅಚ್ಚುಗಳು ಹೊಂದಿಕೊಂಡಿರುತ್ತವೆ. ಅಡಿಪಾಯ ಭಾಗದಲ್ಲಿ ಕಾಣುವ ಆಧಾರ ತೊಲೆಗಳ ಮುಂದೆ ಕುದುರೆ ಹಾಗೂ ಸಿಂಹಗಳ ಶಿಲ್ಪಗಳನ್ನು ಅಳವಡಿಸಿರುವುದು ಈ ಚಿನ್ನದ ರಥಗಳಲ್ಲಿ ಕಂಡುಬರುತ್ತದೆ. ಉಡುಪಿಯ ಶ್ರೀ ಕೃಷ್ಣನ ಚಿನ್ನದ ರಥದ ಅಡಿಪಾಯ ಭಾಗದಲ್ಲಿ ಈ ರೀತಿಯ ಪ್ರಾಣಿ ಶಿಲ್ಪಗಳು ಕಂಡುಬರುತ್ತವೆ. ಅಲ್ಲಲ್ಲಿ ಕೆಲವು ತುಂಬುನಕ್ಷೆಗಳು, ಅಂಚು ನಕ್ಷೆಗಳು ಹಾಗೂ ಬಳ್ಳಿಯಾಕಾರದ ನಕ್ಷೆಗಳನ್ನು ಕಾಣಬಹುದು.

೪. ಸಂಕೀರ್ಣ ಮಾಧ್ಯಮ ರಥಗಳ ಅಡಿಪಾಯ ಭಾಗ :

ಸಂಕೀರ್ಣ ಮಾಧ್ಯಮ ರಥಗಳನ್ನು ನಾಲ್ಕು ವಿಧಗಳಲ್ಲಿ ಕಾಣಬಹುದು. ಈ ಎಲ್ಲ ರಥಗಳ ಅಡಿಪಾಯ ಭಾಗವನ್ನು ಕುರಿತು ತಿಳಿಯುವಾ.

೧. ಕಟ್ಟುವ ರಥಗಳ ಅಡಿಪಾಯ ಭಾಗ.

೨. ತಟ್ಟಿಯ ರಥಗಳ ಅಡಿಪಾಯ ಭಾಗ.

೩. ತೆಪ್ಪದ ರಥಗಳ ಅಡಿಪಾಯ ಭಾಗ.

೪. ಹೂವಿನ ರಥಗಳ ಅಡಿಪಾಯ ಭಾಗ

೧. ಕಟ್ಟುವ ರಥಗಳ ಅಡಿಪಾಯ ಭಾಗ : ಕಟ್ಟುವ ರಥಗಳ ರಚನೆಯನ್ನು ಈಗಾಗಲೇ ತಿಳಿದುಕೊಂಡಿರುವೆವು. ಇವು ಉತ್ಸವದ ಸಂದರ್ಭದಲ್ಲಿ, ಅದೇ ದಿನದಂದು ಅಥವಾ ಒಂದು ದಿನ ಮುಂಚಿತವಾಗಿ ಮಾತ್ರ ಸಿದ್ಧಗೊಳ್ಳುವ ರಥವೆಂದು ಹೇಳಬಹುದು.

ವಿವಿಧ ಪ್ರದೇಶಗಳಲ್ಲಿ ಕಾಣಸಿಗುವಂತಹ ಕಟ್ಟುವ ರಥದ ಅಡಿಪಾಯ ಭಾಗವು ಅಷ್ಟೇನು ವ್ಯತ್ಯಾಸವಿರದು. ಕೆಲವು ರಥಗಳ ಅಡಿಪಾಯ ಭಾಗ ಮಾತ್ರ ಸ್ವಲ್ಪ ಭಿನ್ನವಾಗಿ ಕಂಡುಬರುತ್ತದೆ. ಕಟ್ಟುವ ರಥಗಳ ಅಡಿಪಾಯ ಭಾಗವು, ಆಯಾ ದೇವಸ್ಥಾನದ ಬದಿಯಲ್ಲಿ, ನಾಲ್ಕು ಚಕ್ರಗಳ ಸಮೇತ ಎರಡು ಅಚ್ಚುಗಳನ್ನು ಹೊಂದಿ ನಿಂತಿರುವುದು ಸಾಮಾನ್ಯವಾಗಿ ಅನೇಕ ಗ್ರಾಮಗಳಲ್ಲಿ ಕಂಡು ಬರುತ್ತದೆ. ಕೆಲವು ಕಟ್ಟುವ ರಥಗಳ ಅಡಿಪಾಯ ಭಾಗವನ್ನು ಸಹ ಸಂಪೂರ್ಣವಾಗಿ ಬಿಚ್ಚಿ ಒಂದು ಕೋಣೆಯಲ್ಲಿ ಸಂರಕ್ಷಿಸಿರುವುದೂ ಕಂಡುಬರುತ್ತದೆ.

ಸಾಮಾನ್ಯವಾಗಿ ಕಟ್ಟುವ ರಥಗಳ ಅಡಿಪಾಯ ಭಾಗವು, ಎರಡು ಅಚ್ಚುಗಳು, ನಾಲ್ಕು ಶಿಲೆಯ

ಚಕ್ರಗಳು ಹಾಗೂ ಅಚ್ಚುಗಳ ಮಧ್ಯದಲ್ಲಿ ಆಸರೆಗಾಗಿ ಜೋಡಿಸಿದ ಎರಡು ತೊಲೆಗಳನ್ನು ಹೊಂದಿರುತ್ತದೆ.

ಕೆಲವು ಪ್ರದೇಶದ ಕಟ್ಟುವ ರಥಗಳ ಅಡಿಪಾಯ ಭಾಗವನ್ನಾಗಿ ಎತ್ತಿನ ಬಂಡಿ ಅಥವಾ ಆಧುನಿಕ ವಾಹನಗಳ ಬಿಡಿ ಭಾಗಗಳನ್ನು ಉಪಯೋಗಿಸುವರು. ಉದಾಹರಣೆಗೆ ಬೆಳಗಾವಿ ಜಿಲ್ಲೆ ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥವು ಉತ್ಸವದ ಸಂದರ್ಭದಲ್ಲಿ ಕಟ್ಟಲ್ಪಡುತ್ತದೆ. ಈ ರಥಕ್ಕೆ ಟ್ರ್ಯಾಕ್ಟರ್ ಇಲ್ಲವೆ ಲಾರಿಯನ್ನು ಬಳಸಲಾಗುತ್ತದೆ. ಈ ವಾಹನಗಳ ವಸ್ತು ಸಾಗಾಣಿಕೆಯ ಭಾಗವನ್ನು ರಥದ ಅಡಿಪಾಯ ಭಾಗವನ್ನಾಗಿ ಉಪಯೋಗಿಸುವರು. ಬೆಳಗಾವಿ ಜಿಲ್ಲೆಯ ಅಥಣಿ ತಾಲೂಕಿನ ಕೆಲವು ಗ್ರಾಮಗಳಲ್ಲಿ ಎತ್ತಿನ ಬಂಡಿಯನ್ನು ಉಪಯೋಗಿಸುವರು. ಕೆಲವು ಪ್ರದೇಶಗಳಲ್ಲಿ ಕೇವಲ ಎತ್ತಿನ ಬಂಡಿಯ ಗಾಲಿಗಳನ್ನು ಮಾತ್ರ ಉಪಯೋಗಿಸುವರು. ಈ ಕಟ್ಟುವ ರಥಗಳ ಅಡಿಪಾಯ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪಗಳನ್ನು ಹಾಗೂ ಚಿತ್ರಫಲಕಗಳನ್ನು ಅಳವಡಿಸಲಾಗದು.

೨. ತಟ್ಟಿಯ ರಥಗಳ ಅಡಿಪಾಯ ಭಾಗ : ತಟ್ಟಿಯ ರಥಗಳಿಗೂ ಅಡಿಪಾಯ ಭಾಗದಲ್ಲಿ ಕಟ್ಟುವ ರಥಗಳಿಗೆ ಉಪಯೋಗಿಸುವಂತಹ ಎಲ್ಲ ವಸ್ತುಗಳು ಉಪಯೋಗಿಸಲ್ಪಡುತ್ತವೆ. ಆದರೆ ಇಲ್ಲಿ ಯಾವುದೇ ರೀತಿಯ ಆಧುನಿಕ ವಾಹನಗಳ ಬಳಕೆಯಾಗುದು. ಈ ರಥಗಳ ಅಡಿಪಾಯ ಭಾಗವು ಸಹ ಚಕ್ರ ಹಾಗೂ ಅಚ್ಚುಗಳನ್ನು ಹೊಂದಿರುತ್ತದೆ. ಈ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪ ಅಥವಾ ಚಿತ್ರ ವಿನ್ಯಾಸಗಳು ಕಂಡುಬರುವುದಿಲ್ಲ.

೩. ತೆಪ್ಪದ ರಥಗಳ ಅಡಿಪಾಯ ಭಾಗ : ತೆಪ್ಪದ ರಥಗಳ ಅಡಿಪಾಯ ಭಾಗವು ಎಲ್ಲ ರಥಗಳಿಗಿಂತಲೂ ಭಿನ್ನವಾಗಿ ಕಂಡುಬರುತ್ತದೆ. ಏಕೆಂದರೆ ಈ ರಥಗಳು ನೀರಿನ ಮೇಲೆ ಚಲಿಸುವಂತವುಗಳು. ಈ ರಥಗಳೂ ಸಹ ಉತ್ಸವದ ಸಂದರ್ಭದಲ್ಲಿ ರಚನೆಗೊಳ್ಳುತ್ತವೆ. ಈ ರಥಗಳು ನೀರಿನ ಮೇಲೆ ಸರಾಗವಾಗಿ ತೇಲುವುದಕ್ಕೆ ಅನುಕೂಲವಾಗುವಂತೆ, ನೀರಿನ ಮೇಲೆ ತೇಲುವಂತಹ ಕೆಲವು ವಸ್ತುಗಳಿಂದ ತೆಪ್ಪದ ರಥಗಳ ಅಡಿಪಾಯ ಭಾಗವು ನಿರ್ಮಾಣಗೊಂಡಿರುತ್ತದೆ.

ಉಡುಪಿಯ ಶ್ರೀ ಕೃಷ್ಣನ ತೆಪ್ಪದ ರಥವು ಅಡಿಯಲ್ಲಿ, ನೀರಲ್ಲಿ ತೇಲುವ ದುಂಡನೆಯ ತೆಪ್ಪವನ್ನು ಹೊಂದಿರುತ್ತದೆ. ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಮಠದ ರಥವು ಅನೇಕ ಬಾಳೆದಿಂಡುಗಳು ಹಾಗೂ ನುಗ್ಗಿ ಕಟ್ಟಿಗೆಗಳಿಂದ ನಿರ್ಮಾಣಗೊಂಡಿರುತ್ತದೆ. ಬಾದಾಮಿಯ ಬನಶಂಕರಿಯ ತೆಪ್ಪದ ರಥವು ಸಹ ಬಾಳೆದಿಂಡುಗಳಿಂದ ಕೂಡಿದ ಅಡಿಪಾಯವನ್ನು ಹೊಂದಿರುತ್ತದೆ. ಮುಧೋಳದ ಬ್ರಹ್ಮಗಡ್ಡಿ ಮಠದಲ್ಲಿ ಮೊದಲು ಎಳೆಯಲಾಗುತ್ತಿದ್ದ ತೆಪ್ಪದ ರಥವು ಸಹ ದುಂಡನೆಯ ಒಂದು ತೇಲುವ ತೆಪ್ಪವನ್ನು ಹೊಂದಿರುತ್ತಿತ್ತು. ಒಟ್ಟಿನಲ್ಲಿ ಹೇಳುವುದಾದರೆ ಈ ತೆಪ್ಪದ ರಥಗಳು ನೀರಿನಲ್ಲಿ ಚಲಿಸಬೇಕಾಗಿರುವುದರಿಂದ ನೀರಿನಲ್ಲಿ ಯಾವ ವಸ್ತುಗಳು ತೇಲುತ್ತವೆಯೋ ಆ ವಸ್ತುಗಳಿಂದ ಈ ತೆಪ್ಪದ ರಥದ ಅಡಿಪಾಯವನ್ನು ಗಟ್ಟಿಗೊಳಿಸಲಾಗುವುದು.

ಈ ರಥಗಳ ಅಡಿಪಾಯ ಭಾಗದಲ್ಲಿ ಯಾವುದೇ ರೀತಿಯ ಮೂರ್ತಿಶಿಲ್ಪಗಳು ಕಂಡುಬರುವುದಿಲ್ಲ.

೪. ಹೂವಿನ ರಥಗಳ ಅಡಿಪಾಯ ಭಾಗ : ಹೂವಿನ ರಥಗಳೂ ಸಹ ಉತ್ಸವದ ದಿನದಂದೇ ನಿರ್ಮಾಣಗೊಳ್ಳುತ್ತವೆ. ಈ ರಥಗಳ ಅಡಿಪಾಯ ಭಾಗವು, ಕಟ್ಟುವ ರಥದ ಅಡಿಪಾಯ ಭಾಗದಂತೆಯೇ ಇದ್ದರೂ, ಅದಕ್ಕಿಂತ ಸಣ್ಣ ಪ್ರಮಾಣದಲ್ಲಿರುತ್ತದೆ. ಈ ಹೂವಿನ ರಥಕ್ಕೆ ಮರದ ಚಕ್ರಗಳನ್ನು ಅಳವಡಿಸಲಾಗುತ್ತದೆ. ಗ್ರಾಮೀಣ ಪ್ರದೇಶಗಳಲ್ಲಿ ಮಾತ್ರ ಈ ಹೂವಿನ ರಥಗಳ ಉತ್ಸವಗಳು ಜರುಗುತ್ತವೆ. ಇತ್ತೀಚೆಗೆ ಹೂವಿನ ರಥಗಳನ್ನು ಕಟ್ಟುವುದು ನಿಂತು ಹೋಗಿ, ಸಣ್ಣ ಪ್ರಮಾಣದಲ್ಲಿ ಗಡ್ಡಿ ರಥಗಳಂತೆಯೇ ನಿರ್ಮಿಸಲಾದ ರಥದ ಮೇಲೆ ವಿವಿಧ ರೀತಿಯ ಹೂವಿನ ಹಾರಗಳನ್ನು ಹಾಕುವುದರ ಮೂಲಕ ಅದನ್ನೇ ಹೂವಿನ ರಥವೆಂದು ಕರೆಯುವುದು ಕೆಲವು ಗ್ರಾಮಗಳಲ್ಲಿ ಕಂಡುಬುರತ್ತದೆ. ಹೀಗೆ ತಯಾರಿಸಿದ ಹೂವಿನ ರಥಗಳ ಅಡಿಪಾಯ ಭಾಗದಲ್ಲಿಯೂ ಸಹ ಸಿಂಹಗಳ ಹಾಗೂ ಆನೆಗಳ ಶಿಲ್ಪಗಳನ್ನು ಕಾಣಬಹುದು. ಆದರೆ ಈ ರಥಗಳು ನೋಡಲು ಗಡ್ಡಿ ರಥಗಳಂತೆಯೇ ಇರುವುದರಿಂದ ಇವುಗಳ ಅಡಿಪಾಯ ಭಾಗದಲ್ಲಿ ಪ್ರಾಣಿ ಶಿಲ್ಪಗಳು ಕಂಡುಬರುತ್ತವೆ.

ಹೀಗೆ ಗಡ್ಡಿ ರಥಗಳ ಮಾದರಿಯಲ್ಲಿ ಸಣ್ಣ ಪ್ರಮಾಣದಲ್ಲಿ ತಯಾರಿಸಿದ ಹೂವಿನ ರಥಗಳ ಅಡಿಪಾಯ ಭಾಗವು ಸಹ ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಡಿಪಾಯ ಭಾಗದ ಎಲ್ಲ ಲಕ್ಷಣಗಳನ್ನು ಒಳಗೊಂಡಿರುತ್ತದೆ. ಈ ರಥಗಳ ಚಕ್ರಗಳೂ ಸಹ ಶಿಲೆಯ ಹಾಗೂ ಮರದಿಂದ ತಯಾರಿಸಲ್ಪಟ್ಟಿರುತ್ತವೆ.

ಡ. ಶಿಲಾ ಮಾಧ್ಯಮ ರಥಗಳ ಅಡಿಪಾಯ ಭಾಗ :

ಉತ್ತರ ಕರ್ನಾಟಕದ ಬಳ್ಳಾರಿ ಜಿಲ್ಲೆಯ ಹಂಪೆಯ ಶ್ರೀ ವಿಜಯ ವಿಠಲ ದೇವಸ್ಥಾನದ ಆವರಣದಲ್ಲಿ ನಿಂತಿರುವ ಜಗತ್ ಪ್ರಸಿದ್ಧವಾದ ಶಿಲಾ ರಥವು ಕಲಾತ್ಮಕವಾದ ಅಡಿಪಾಯ ಭಾಗವನ್ನು ಹೊಂದಿದೆ. ಅಡಿಪಾಯ ಭಾಗದಲ್ಲಿ ಸುಂದರವಾಗಿ ರೂಪುಗೊಂಡ ನಾಲ್ಕೂ ಚಕ್ರಗಳಲ್ಲಿ ಹೂಬಳ್ಳಿಯಾಕಾರದ, ಸುರುಳಿಯಾಕಾರದ ಹಾಗೂ ಬಿಡಿ ಹೂವಿನಾಕಾರದ ಸುಂದರವಾದ ಉಬ್ಬುಶಿಲ್ಪಗಳನ್ನು ಕಾಣಬಹುದು. ಚಕ್ರಗಳ ಮಧ್ಯ ಭಾಗದಲ್ಲಿ ಅಚ್ಚುಗಳಂತೆ ಹೊರಚಾಚಿದ ಶಿಲೆಯ ಭಾಗವು ಸಹ ಸುಂದರವಾದ ಉಬ್ಬು ಶಿಲ್ಪಗಳನ್ನು ಹೊಂದಿವೆ.

ರಥದ ಚಕ್ರಗಳ ಹಿಂಬದಿಯಲ್ಲಿ ಕಾಣುವ ಅಡಿಪಾಯ ಭಾಗದ ಸುತ್ತಲೂ ಹೂವಿನಾಕಾರದ, ಕಮಾನುಗಳಾಕಾರದ, ಅರಳಿದ ಕಮಲದಾಕಾರದ ಹಾಗೂ ಕುದುರೆ ಜಾಲದಂತೆ ಕಾಣುವ ಮತ್ತು ಗಂಟೆಗಳಂತೆ ತೋರುವ ಶಿಲ್ಪವಿನ್ಯಾಸಗಳನ್ನು ಕೆತ್ತಲಾಗಿದೆ. ಅಡಿಪಾಯ ಭಾಗದಲ್ಲಿ ಬುಗುರಿಯಾಕಾರದ ವಿನ್ಯಾಸಗಳ ಮಧ್ಯ ಭಾಗದಲ್ಲಿ ರಥದ ನಾಲ್ಕೂ ದಿಕ್ಕುಗಳಲ್ಲಿ ಎರಡೆರಡು ಕುಬ್ಜರ ಶಿಲ್ಪಗಳಿವೆ. ಆ ಕುಬ್ಜರು ಕೈಗಳನ್ನು ಮೇಲಕ್ಕೆತ್ತಿ ನಿಂತಿರುವ ಹಾಗೆ ರಚಿಸಲಾಗಿದೆ. ಮತ್ತು ಅವರ ಸುತ್ತಲೂ ಕಮಾನುಗಳಾಕಾರದಲ್ಲಿ ಕೆತ್ತಿ ಅವುಗಳ ಮೇಲೆ ಸುರುಳಿಯಾಕಾರದ ನಕ್ಷೆಗಳನ್ನು ರಚಿಸಲಾಗಿದೆ.

ರಥದ ಅಡಿಪಾಯ ಭಾಗದ ಮುಂಭಾಗದಲ್ಲಿ ಎರಡು ಆನೆಯ ಶಿಲ್ಪಗಳನ್ನು ರಚಿಸಲಾಗಿದೆ. ರಥದ ಚಕ್ರಗಳ ಕೆಳಭಾಗದ ಪೀಠದ ಸುತ್ತಲೂ ಕತ್ತಿ ಹಾಗೂ ಗುರಾಣಿಯನ್ನು ಹಿಡಿದ ಕುಬ್ಜರ ಶಿಲ್ಪಗಳನ್ನು ರಚಿಸಿರುವರು. ಅಲ್ಲದೆ ಇದೇ ಪೀಠದ ಪಟ್ಟಿಕೆಯಲ್ಲಿ ನಾಲ್ವರು ಯೋಧರು ರಥಗಳನ್ನೇರಿ ಯುದ್ಧದಲ್ಲಿ ತೊಡಗಿರುವಂತೆ ಶಿಲ್ಪ ರಚನೆ ಮಾಡಲಾಗಿದೆ. ಪೀಠದ ಮೇಲ್ಭಾಗ ಹಾಗೂ ಕೆಳಭಾಗದ ಅಂಚುಗಳಲ್ಲಿ ಸುರುಳಿಯಾಕಾರದ ಅಂಚು ನಕ್ಷೆಗಳನ್ನು ರಚಿಸಲಾಗಿದೆ.

ಹಂಪೆಯ ಶಿಲೆಯ ರಥದ ಭಾಗಗಳು









ರಥದ ಮುಂಭಾಗದಲ್ಲಿ ಎರಡೂ ಆನೆಗಳ ಶಿಲ್ಪಗಳ ಮಧ್ಯ ಭಾಗದಲ್ಲಿ ರಥದ ಮಂಟಪ ಭಾಗವನ್ನು ಪ್ರವೇಶಿಸಲು ಅನುಕೂಲವಾಗುವಂತೆ ಒಂದು ಶಿಲೆಯ ಏಣಿಯನ್ನು ನಿಲ್ಲಿಸಿರುವರು. ಒಟ್ಟಾರೆಯಾಗಿ ಈ ರಥದ ಅಡಿಪಾಯ ಭಾಗವು ಶಿಲಾರಥಗಳ ಅಡಿಪಾಯ ಭಾಗಕ್ಕೆ ಒಂದು ಉತ್ತಮ ಉದಾಹರಣೆ ಎನ್ನಬಹುದು. ಈ ರಥವು ಒಂದು ಉತ್ತಮ ವಾಸ್ತುಶಿಲ್ಪವಾಗಿ ಸ್ಥಿರವಾಗಿ ನಿಂತಿದ್ದರೂ, ರಥದ ನಾಲ್ಕೂ ಚಕ್ರಗಳನ್ನು ತಿರುಗಿಸುವ ಹಾಗೆ ರಚಿಸಿರುವುದು ವಿಶೇಷವೆನಿಸುತ್ತದೆ.

ತಮಿಳುನಾಡಿನ ಮಾಮಲ್ಲಪುರದಲ್ಲಿರುವ ಪಂಚಪಾಂಡವರ ರಥಗಳಲ್ಲಿ ದ್ರೌಪದಿ ಹಾಗೂ ಅರ್ಜುನ ರಥಗಳ ಅಡಿಪಾಯ ಭಾಗದಲ್ಲಿಯ ಉಪಪೀಠದಲ್ಲಿ ಒತ್ತರಿಸಲ್ಪಟ್ಟಿರುವ ಸಿಂಹಗಳು ಎದುರಾಗಿ ನಿಂತ ಆನೆಗಳು ಅಲಂಕರಿಸಿವೆ. ದ್ರೌಪದಿ ರಥದ ಪಶ್ಚಿಮ ದಿಕ್ಭಾಗವನ್ನು ಸಿಂಹಗಳು ಕಾಯುತ್ತಿರುವಂತೆ ಭಾಸವಾಗುತ್ತದೆ.

ಇವುಗಳಲ್ಲದೆ ಓರಿಸ್ಸಾದ ಕೋನಾರ್ಕದ ಸೂರ್ಯ ದೇವಾಲಯ, ಸೋದೆಯ ತ್ರಿವಿಕ್ರಮ ದೇವಾಲಯಗಳು ರಥಾಕಾರದಲ್ಲಿ ನಿರ್ಮಾಣಗೊಂಡಿದ್ದು ಅಡಿಪಾಯ ಭಾಗದಲ್ಲಿ ಚಕ್ರಗಳನ್ನು ರಚಿಸಿರುವುದು ಕಂಡುಬರುತ್ತದೆ.

II. ಅಧಿಷ್ಠಾನ ಭಾಗ :

ರಥದ ಅಡಿಪಾಯ ಭಾಗದ ನಂತರ ಮುಂದುವರೆಯುವ ಭಾಗವೇ ಅಧಿಷ್ಠಾನ ಭಾಗ. ಈ ಭಾಗವು ರಥದ ವಿನ್ಯಾಸವನ್ನು ನಿರ್ಧರಿಸುತ್ತದೆ. ಅಧಿಷ್ಠಾನ ಭಾಗವನ್ನು ಗಡ್ಡಿ ಭಾಗವೆಂದು ಕರೆಯುವ ರೂಢಿ ಉಂಟು. ಅಧಿಷ್ಠಾನ ಭಾಗವು ಸಾಂಪ್ರದಾಯಿಕ ಚೌಕು, ಅಷ್ಟಮ, ಷಟ್ಕೋಣ, ನಕ್ಷತ್ರ ವರ್ತುಳ ಹಾಗೂ ಬಹುಕೋನಗಳಲ್ಲಿ ನಿರ್ಮಾಣಗೊಂಡಿರುತ್ತವೆ. ಪ್ರಾದೇಶಿಕವಾಗಿ ಭಿನ್ನತೆಯನ್ನು ಪಡೆದಿರುವ ರಥದ ಅಧಿಷ್ಠಾನ ಭಾಗವು ಕಲಾತ್ಮಕ ಕುಸುರಿ ಕೆತ್ತನೆಯಿಂದ ಕೂಡಿರುತ್ತದೆ. ಅನೇಕ ಪ್ರಾಣಿ ಶಿಲ್ಪಗಳು, ಪೌರಾಣಿಕ ಸನ್ನಿವೇಶದ ಶಿಲ್ಪಗಳು, ದೇವತಾ ಶಿಲ್ಪಗಳು, ಹೀಗೆ ವಿವಿಧ ಶಿಲ್ಪವಿನ್ಯಾಸಗಳನ್ನು ತನ್ನಲ್ಲಿ ಮೈಗೂಡಿಸಿಕೊಂಡು ಕಣ್ಮನ ಸೆಳೆಯುತ್ತದೆ.

ಈಗ, ಇಷ್ಟೊಂದು ಕಲಾತ್ಮಕವಾಗಿರುವ ನಾಡಿನ ವಿವಿಧ ಪ್ರದೇಶಗಳ ವಿವಿಧ ಮಾಧ್ಯಮದ ರಥಗಳ ಅಧಿಷ್ಠಾನ ಭಾಗಗಳನ್ನು ಅಭ್ಯಸಿಸುವಾ.

ಅ. ಕಾಷ್ಠ ಮಾಧ್ಯಮ ರಥಗಳ ಅಧಿಷ್ಠಾನ ಭಾಗ.

ಬ. ಲೋಹ ಮಾಧ್ಯಮ ರಥಗಳ ಅಧಿಷ್ಠಾನ ಭಾಗ.

ಕ. ಸಂಕೀರ್ಣ ಮಾಧ್ಯಮ ರಥಗಳ ಅಧಿಷ್ಠಾನ ಭಾಗ.

ಡ. ಶಿಲಾ ಮಾಧ್ಯಮ ರಥಗಳ ಅಧಿಷ್ಠಾನ ಭಾಗ.

ಅ. ಕಾಷ್ಠ ಮಾಧ್ಯಮ ರಥಗಳ ಅಧಿಷ್ಠಾನ ಭಾಗ :

ಕಾಷ್ಠ ಮಾಧ್ಯಮ ರಥಗಳಲ್ಲಿ ಎರಡು ವಿಧಗಳು ಈ ಎರಡು ವಿಧದ ರಥಗಳ ಅಧಿಷ್ಠಾನ ಭಾಗಗಳ ಕುರಿತಾಗಿ ಚರ್ಚಿಸುವಾ.

೦

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗ.

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಅಧಿಷ್ಠಾನ ಭಾಗ.

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗ : ಈ ಗಡ್ಡಿ ರಥಗಳ ಅಧಿಷ್ಠಾನ ಭಾಗದಲ್ಲಿ ಕುಸುರಿ ಕೆತ್ತನೆಯಿಂದ ಕೂಡಿದ ಅನೇಕ ಕಲಾತ್ಮಕ ಉಬ್ಬು ಶಿಲ್ಪಗಳನ್ನು ಕಾಣಬಹುದು. ಅಧಿಷ್ಠಾನ ಭಾಗದ ಶಿಲ್ಪಗಳನ್ನು ಈ ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

i. ದೇವತಾ ಶಿಲ್ಪಗಳು   ii. ಮಹಾತ್ಮರ ಶಿಲ್ಪಗಳು   iii. ಪೌರಾಣಿಕ ಶಿಲ್ಪಗಳು

iv. ಪ್ರಾಣಿ ಶಿಲ್ಪಗಳು   v. ಮಿಥುನ ಶಿಲ್ಪಗಳು   vi. ನಕ್ಷಾ ಶಿಲ್ಪಗಳು.

ಕರ್ನಾಟಕದ ಅನೇಕ ಕಾಷ್ಠ ರಥಗಳ ಅಧಿಷ್ಠಾನ ಭಾಗದಲ್ಲಿ ಕಂಡುಬರುವ ಈ ಎಲ್ಲ ಶಿಲ್ಪಗಳ ಬಗ್ಗೆ ತಿಳಿಯುವಾ.

i. ದೇವತಾ ಶಿಲ್ಪಗಳು : ಬಾಗಲಕೋಟ ಜಿಲ್ಲೆಯ ಹುನಗುಂದದ ಶ್ರೀ ವೀರಭದ್ರ ದೇವಸ್ಥಾನದ ರಥದ ಅಧಿಷ್ಠಾನ ಭಾಗವು ಅಷ್ಟಭುಜಾಕೃತಿಯನ್ನು ಹೊಂದಿದೆ. ಅಧಿಷ್ಠಾನ ಭಾಗದ ಪ್ರಾರಂಭ ಭಾಗದ ಚೌಕಾಕಾರದ ವಿನ್ಯಾಸದ ನಾಲ್ಕೂ ಭುಜಗಳ ಮೇಲೆ ಕೆಲವು ಪರಿವಾರ ದೇವತೆಗಳ ಶಿಲ್ಪಗಳನ್ನು ಕಾಣಬಹುದು. ಅಧಿಷ್ಠಾನ ಭಾಗದ ಎಂಟೂ ಬಾಹುಗಳಲ್ಲಿ, ರಥದ ಮುಂಭಾಗದಲ್ಲಿ ವೀರಭದ್ರ, ಶಿವ ಹಾಗೂ ಆದಿಶಕ್ತಿಯ ಶಿಲ್ಪಗಳು ಕಂಡುಬರುತ್ತವೆ. ರಥದ ಹಿಂಭಾಗದಲ್ಲಿ ಲಕ್ಷ್ಮೀ , ಸರಸ್ವತಿ ಹಾಗೂ ಕೆಲವು ಪರಿವಾರ ದೇವತೆಯರ ಶಿಲ್ಪಗಳಿವೆ. ಇದೇ ರೀತಿಯ ಶಿಲ್ಪ ಕೆತ್ತನೆಯನ್ನು ಇದೇ ಜಿಲ್ಲೆಯ ಇಳಕಲ್ಲದ ಶ್ರೀ ವಿಜಯ ಮಹಾಂತೇಶ್ವರ ರಥದಲ್ಲಿ ಕಾಣಬಹುದು.

ಗದಗ ಜಿಲ್ಲೆಯ ಚಿಂಚಲಿಯ ವೀರಭದ್ರ ದೇವಸ್ಥಾನದ ರಥದ ಅಧಿಷ್ಠಾನ ಭಾಗದ ಮಧ್ಯ ಪಟ್ಟಿಕೆಗಳಲ್ಲಿ, ರಥದ ಮುಂಭಾಗದಲ್ಲಿ ಕಾಣುವ ಬಾಹುಗಳಲ್ಲಿ, ವೀರಭದ್ರ, ಶಿವ ಹಾಗೂ ವಿಷ್ಣುವಿನ ಶಿಲ್ಪಗಳನ್ನು ಕೆತ್ತಿರುವರು. ಹೀಗೆಯೇ, ರಥದ ಹಿಂಭಾಗ ಹಾಗೂ ಪಕ್ಕದಲ್ಲಿ ಬರುವ ಬಾಹುಗಳಲ್ಲಿ ಲಕ್ಷ್ಮೀ, ಸರಸ್ವತಿ, ಆದಿಶಕ್ತಿ, ಗಣಪತಿ ಹಾಗೂ ವಿಶ್ವಕರ್ಮರ ಶಿಲ್ಪವಿನ್ಯಾಸಗಳು ಕಂಡುಬರುತ್ತವೆ. ಈ ಎಲ್ಲ ಶಿಲ್ಪಗಳಲ್ಲಿ ಪೀಠ ಹಾಗೂ ಪ್ರಭಾವಳಿಯನ್ನು ಸುಂದರವಾಗಿ ರಚಿಸಲಾಗಿದೆ. ಪ್ರತಿಯೊಂದು ದೇವತಾ ಶಿಲ್ಪಗಳ ಪಕ್ಕದಲ್ಲಿ ಪರಿಚಾರಿಕೆಯರು ನಿಂತಿರುವಂತೆ ರಚಿಸಲಾಗಿದೆ.

ಬಾಗಲಕೋಟ ಜಿಲ್ಲೆಯ ಶಿರೂರದ ಶ್ರೀ ಸಿದ್ಧೇಶ್ವರ ದೇವಸ್ಥಾನದ ರಥವು ಅಷ್ಟಭುಜಾಕೃತಿಯ ಅಧಿಷ್ಠಾನ ಭಾಗವನ್ನು ಹೊಂದಿದ್ದು, ಈ ರಥವು ಸಹ ಎಂಟೂ ಬಾಹುಗಳಲ್ಲಿ ರುದ್ರ, ಕಾಳಿಕಾಮಾತೆ, ಆದಿಶಕ್ತಿ, ಬ್ರಮರಾಂಬೆ, ವಿಷ್ಣು, ಬ್ರಹ್ಮ ಹಾಗೂ ಮುಂತಾದ ದೇವತಾ ಶಿಲ್ಪಗಳನ್ನು ಹೊಂದಿದೆ. ಈ ದೇವತಾ ಶಿಲ್ಪಗಳ ಕೆಳಭಾಗದ ಪಟ್ಟಿಕೆಗಳಲ್ಲಿ ಮೇಷ, ವೃಷಭ, ಮಿಥುನ, ಕರ್ಕ, ಸಿಂಹ, ಕನ್ಯಾ, ಮೀನ, ಕುಂಬ ಹೀಗೆ ವಿವಿಧ ರಾಶಿಗಳ ಶಿಲ್ಪಗಳನ್ನು ರಚಿಸಿರುವರು. ಇದಲ್ಲದೆ ಕೆಲವು ಪರಿವಾರದ ದೇವತೆಗಳು ಹಾಗೂ ಗಂಧರ್ವರ ಶಿಲ್ಪಗಳು ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿವೆ.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಡಸವೇಶ್ವರ ದೇವಸ್ಥಾನದ ರಥದಲ್ಲಿಯೂ ಸಹ ಶಿರೂರದ ಸಿದ್ಧೇಶ್ವರ ರಥದ ಅಧಿಷ್ಠಾನ ಭಾಗದ ಶಿಲ್ಪವಿನ್ಯಾಸಗಳನ್ನೇ

ಕಾಣಬಹುದು. ಈ ರಥದಲ್ಲಿ ಬ್ರಹ್ಮ, ವಿಷ್ಣು ಮಹೇಶ್ವರ ಹಾಗೂ ಗಣಪತಿ ಶಿಲ್ಪಗಳು ಸುಂದರವಾಗಿ ರಚನೆಗೊಂಡಿವೆ. ಇವಲ್ಲದೆ, ಕೆಲವು ದೇವತೆಯರು ಸಾಲು ಸಾಲಾಗಿ ನಿಂತು ಬ್ರಹ್ಮ, ವಿಷ್ಣು ಹಾಗೂ ಮಹೇಶ್ವರರಿಗೆ ಕೈಮುಗಿದು ಪ್ರಾರ್ಥಿಸುವಂತೆ, ಶಿಲ್ಪ ರಚನೆ ಮಾಡಲಾಗಿದೆ. ಕೆಲವು ದೇವತೆಯರು ಆಕಾಶದಲ್ಲಿ ಹಾರುತ್ತಿರುವಂತೆ ರಚಿಸಲಾಗಿದೆ.

ಕೊಪ್ಪಳದ ಹುಲಗಿಯ ಹುಲಿಗೆಮ್ಮ ದೇವಸ್ಥಾನದ ರಥದ ಅಧಿಷ್ಠಾನ ಭಾಗವು ಅಷ್ಟಭುಜಾಕೃತಿಯಲ್ಲಿ ರಚನೆಯಾಗಿದೆ. ಈ ರಥದ ಎಲ್ಲ ಬಾಹುಗಳಲ್ಲಿ ಆದಿಶಕ್ತಿ, ಲಕ್ಷ್ಮೀ, ವಿಶ್ವಕರ್ಮ, ವಿಷ್ಣು, ಗಣಪತಿ ಇಂತಹ ದೇವತಾ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳ ಕೆಳಭಾಗದ ಪಟ್ಟಿಕೆಗಳಲ್ಲಿ ಉತ್ತರಾ, ಭರಣಿ, ರೇವತಿ, ಭರಣಿ ಹೀಗೆ ವಿವಿಧ ರೀತಿಯ ನಕ್ಷತ್ರಗಳ ಶಿಲ್ಪಗಳನ್ನು ರಚಿಸಲಾಗಿದೆ.

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ರಥದ ಅಧಿಷ್ಠಾನ ಭಾಗದಲ್ಲಿಯೂ ಸಹ ಇಂತಹದೇ ದೇವತಾ ಶಿಲ್ಪಗಳು ಕಂಡು ಬರುತ್ತವೆ. ಅಲ್ಲದೆ ಸೂರ್ಯ,ಚಂದ್ರ,ಭರಣಿ,ಮೃಗಶಿರಾ,ಸ್ವಾತಿ ಹೀಗೆ ವಿವಿಧ ಬಗೆಯ ನಕ್ಷತ್ರದೇವತೆಗಳ ಶಿಲ್ಪಗಳನ್ನು ಕಾಣಬಹುದು. ಎಂಟೂ ಬಾಹುಗಳ ಮಧ್ಯ ಭಾಗದಲ್ಲಿ ಶಿವಲಿಂಗದ ಶಿಲ್ಪಗಳಿವೆ. ಅವುಗಳ ಮೇಲ್ಭಾಗದಲ್ಲಿ ಶಿವಲಿಂಗ, ಪ್ರಾಣಲಿಂಗ, ಆಚಾರಲಿಂಗ, ಮಹಾಲಿಂಗ, ಹೀಗೆ ಬರೆದಿರುವರು. ಅಲ್ಲದೆ, ಆ ಲಿಂಗಗಳ ಶಿಲ್ಪಗಳ ಪಕ್ಕದಲ್ಲಿ ಆಗ್ನೇಯ ಚಕ್ರ, ದ್ವಿದಳ, ಆಕಾಶ ಚಕ್ರ ಷೋಡಶದಳ, ಶಿಖಾ ಚಕ್ರ, ತ್ರಿದಳ, ಹೀಗೆ ವಿವಿಧ ರೀತಿಯಲ್ಲಿ ಕೆತ್ತನೆ ಮೂಲಕ ಅಕ್ಷರಗಳನ್ನು ಬರೆಯಲಾಗಿದೆ. ಈ ರಥದ ಅಧಿಷ್ಠಾನ ಭಾಗದ ಕೆಳಪಟ್ಟಿಕೆಗಳಲ್ಲಿ ಕೆತ್ತನೆ ಮಾಡಲಾದ ತಪಸ್ಸಿಗೆ ಕುಳಿತ ಆಂಜನೇಯ, ಅಭಯ ಹಸ್ತಮಾಡಿ ಕುಳಿತ ಶಿವ, ಆದಿಶೇಷನ ಮೇಲೆ ಕುಳಿತ ವಿಷ್ಣುವಿನ ಶಿಲ್ಪಗಳು ಸುಂದರವಾಗಿ ಮೂಡಿ ಬಂದಿವೆ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ರಥದ ಅಧಿಷ್ಠಾನ ಭಾಗವು ಚತುರ್ಭುಜಾಕೃತಿಯಲ್ಲಿ ನಿರ್ಮಾಣಗೊಂಡಿದೆ. ಈ ರಥದ ಅಧಿಷ್ಠಾನ ಭಾಗದ ಸುತ್ತುವರೆದ ಏಳು ಪಟ್ಟಿಕೆಗಳಲ್ಲಿ ಸಾಲು ಸಾಲಾಗಿ ಬ್ರಹ್ಮ,ವಿಷ್ಣು,ಮಹೇಶ್ವರ, ಚಾಮುಂಡಿ,ಕಾಳಿಕಾಮಾತೆ, ಆದಿಶಕ್ತಿ ಲಕ್ಷ್ಮೀ,ಸರಸ್ವತಿ,ಗಣಪತಿ,ಕಾರ್ತಿಕೇಯ,ವೀರಭದ್ರ,ವಿಶ್ವಕರ್ಮ,ಪಾರ್ವತಿ,ಭ್ರಮರಾಂಭೆ,ಅನೇಕ ಪರಿವಾರ ದೇವತೆಗಳು,ಯಕ್ಷರು,ಗಂಧರ್ವರು,ಅಶ್ವಿನಿ ದೇವತೆಗಳೂ ನಕ್ಷತ್ರದೇವತೆಯರು,ರಾಶಿ ದೇವತಿಯರು, ಸೂರ್ಯ ಚಂದ್ರರು,ಹೀಗೆ ಸುಮಾರು ಒಂದುನೂರಾ ಐವತ್ತಕ್ಕೂ ಹೆಚ್ಚು ದೇವಾನು ದೇವತೆಯರ ವಿವಿಧ ಬಾವ ಭಂಗಿಗಳ ಕುಸುರಿ ಕೆತ್ತನೆಯ ಕಲಾತ್ಮಕ ಶಿಲ್ಪಗಳನ್ನು ಕಾಣಬಹುದು. ಬೇಲೂರು ಚನ್ನಕೇಶವ ದೇವಾಲಯದ ರಥವೂ ಸಹ ಚತುಸ್ರಾಕಾರದಲ್ಲಿದ್ದು ಅದರ ಅಧಿಷ್ಠಾನ ಭಾಗವೂ ಸಹ, ಗಂಗಾವತಿಯ ಕನಕರಾಯನ ರಥದ ಅಧಿಷ್ಠಾನ ಭಾಗದಲ್ಲಿ ಕಂಡುಬರುವ ದೇವತಾ ಶಿಲ್ಪಗಳನ್ನು ಕಾಣಬಹುದು.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರಿನ ಶ್ರೀ ಮಹಾಮಾಯಿ ರಥದಲ್ಲಿಯೂ, ವಿವಿಧ ದೇವತಾ ಶಿಲ್ಪಗಳನ್ನು ಕಾಣಬಹುದು. ಪೀಠದ ಮೇಲೆ ಕುಳಿತಿರುವ ಶಿವಪಾರ್ವತಿ ಹಾಗೂ ಗಣಪತಿ ಶಿಲ್ಪ, ಕಮಲದ ಮೇಲೆ ಕುಳಿತ ಬ್ರಹ್ಮ, ಲಕ್ಷ್ಮೀ ಹಾಗೂ ಸರಸ್ವತಿಯರ ಶಿಲ್ಪಗಳು, ನಾಟ್ಯಗಣಪನ ಶಿಲ್ಪ, ನಟರಾಜನ ಶಿಲ್ಪ,ಯಕ್ಷರು ಹಾಗೂ ಗಂಧರ್ವರಂತಹ ಕೆಲವು ಶಿಲ್ಪಗಳು ಕಲಾತ್ಮಕವಾಗಿ ರಚಿಸಲ್ಪಟ್ಟಿವೆ. ಈ ರಥದ ಅಧಿಷ್ಠಾನ ಭಾಗವು ಚತುರ್ಭುಜಾಕೃತಿಯನ್ನು ಹೊಂದಿದೆ.

ಇದೇ ಶೈಲಿಯ ರಥಗಳನ್ನು ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನ, ಸಿಂಧನೂರು ತಾಲೂಕಿನ ಬಳಗಾನೂರದ ಆಂಜನೇಯ ದೇವಸ್ಥಾನಗಳಲ್ಲಿ ಕಾಣಬಹುದು.

ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಮರೆಮ್ಮನ ಹಳ್ಳಿಯ ಶ್ರೀ ರಾಮಾಂಜನೇಯ ರಥಗಳು, ಹೂವಿನ ಹಡಗಲಿ ತಾಲೂಕಿನ ಸೋಗಿಯ ಶ್ರೀ ವೀರಭದ್ರನ ರಥ, ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ರಥ, ಬಾಗಲಕೋಟ ಜಿಲ್ಲೆ ಬಾದಾಮಿ ಬನಶಂಕರಿಯ ರಥ, ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಢವಳಗಿಯ ಶ್ರೀ ಮಡಿವಾಳೇಶ್ವರ ರಥ, ರಾಯಚೂರು ಜಿಲ್ಲೆಯ ಗುಡಗುಂಟಿಯ ಶ್ರೀ ಅಮರೇಶ್ವರ ರಥ, ಕೂಡಲ ಸಂಗಮದ ಶ್ರೀ ಸಂಗಮನಾಥನ ರಥ, ಬಿಜಾಪುರ ಜಿಲ್ಲಿಯ ಶ್ರೀ ಚಾಂದಕೌಟೆಯ ಬಸವೇಶ್ವರ ರಥ, ಈ ಎಲ್ಲ ರಥಗಳು ಅಷ್ಟಭುಜಾಕೃತಿಯನ್ನು ಹೊಂದಿದ ರಥಗಳಾಗಿವೆ. ಈ ರಥಗಳ ಅಧಿಷ್ಠಾನ ಭಾಗದಲ್ಲಿ ದೇವತಾ ಶಿಲ್ಪಗಳ ಸುಂದರವಾದ ಶಿಲ್ಪವಿನ್ಯಾಸಗಳಿದ್ದರೂ, ಅವುಗಳ ಮೇಲೆ ಎಣ್ಣೆ ಹಾಗೂ ಧೂಳು ಬಡಿದು ಅವುಗಳು ಸ್ಪಷ್ಟವಾಗಿ ಕಾಣದಂತೆ ಮುಚ್ಚಿ ಹೋಗಿವೆ. ಈ ರಥಗಳ ಅಧಿಷ್ಠಾನ ಭಾಗದಲ್ಲಿ ಕಂಡುಬರುವ ಶಿಲ್ಪಗಳಲ್ಲಿ ಗಣಪತಿ, ಶಿವ, ಲಕ್ಷ್ಮೀ, ಸರಸ್ವತಿ, ಆಂಜನೇಯ, ಇಂತಹ ಕೆಲವು ದೇವತೆಯರ ಶಿಲ್ಪಗಳನ್ನು ಮಾತ್ರ ಗುರುತಿಸಬಹುದು. ಉಳಿದಂತೆ ಪರಿವಾರ ದೇವತೆಯರು ಹಾಗೂ ಗಂಧರ್ವರ ಶಿಲ್ಪಗಳೆಲ್ಲವೂ ಸಂಪೂರ್ಣವಾಗಿ ಮುಚ್ಚಿ ಹೋಗಿವೆ.

ಶ್ರೀರಂಗಪಟ್ಟಣದ ಶ್ರೀರಂಗನಾಥನ ರಥ, ಕುಕ್ಕೆ ಸುಬ್ರಹ್ಮಣ್ಯಂ ಶ್ರೀ ಸುಬ್ರಹ್ಮಣ್ಯಸ್ವಾಮಿ ರಥ, ಕೊಲ್ಲೂರು ಶ್ರೀ ಮುಕಾಂಬಿಕೆಯ ರಥ, ಧರ್ಮಸ್ಥಳದ ವಸ್ತು ಸಂಗ್ರಹಾಲಯದ ಶ್ರೀರಂಗಪಟ್ಟಣದ ಗಂಗಾಧರೇಶ್ವರ ರಥ, ಈ ಎಲ್ಲ ರಥಗಳು ವೃತ್ತಕಾರದ ಅಧಿಷ್ಠಾನ ಭಾಗವನ್ನು ಹೊಂದಿವೆ. ಈ ಎಲ್ಲ ರಥಗಳ ಅದಿಷ್ಠಾನ ಭಾಗದಲ್ಲಿ ಗಣಪತಿಯ ಶಿಲ್ಪಗಳು ಸಾಮಾನ್ಯವಾಗಿ ಕಂಡು ಬರುತ್ತವೆ. ಧರ್ಮಸ್ಥಳದ ವಸ್ತುಸಂಗ್ರಹಾಲಯದ ಶ್ರೀ ಗಂಗಾಧರೇಶ್ವರ ರಥವು ಅಧಿಷ್ಠಾನ ಭಾಗದ ಕೆಳಭಾಗದ ಪಟ್ಟಿಕೆಗಳಲ್ಲಿ ಮೂರು ಸುತ್ತು ಸುತ್ತಿಕೊಂಡು ಕುಳಿತಿರುವ ಐದು ಹೆಡೆಯ ಸರ್ಪದ ಶಿಲ್ಪಗಳನ್ನು ಹೊಂದಿದೆ. ಅಲ್ಲದೆ ರಥಗಳಲ್ಲಿ ಕುಳಿತು ಹೊರಟಿರುವ ದೇವತೆಗಳ ಶಿಲ್ಪವಿನ್ಯಾಸಗಳನ್ನು ಹೊಂದಿದೆ. ಸುಬ್ರಹ್ಮಣ್ಯಸ್ವಾಮಿ ರಥದ ಅಧಿಷ್ಠಾನ ಭಾಗದಲ್ಲಿ ಗರುಡನ ಮೇಲೆ ಕುಳಿತ ವಿಷ್ಣುವಿನ ಶಿಲ್ಪ ತುಂಬಾ ಸುಂದರವಾಗಿವೆ. ಉಳಿದಂತೆ ಶಿವ, ಬ್ರಹ್ಮ, ಗಣಪತಿ, ಆಂಜನೇಯ,ಕಾಳಿ, ದುರ್ಗಿ ಹಾಗೂ ಆದಿಶಕ್ತಿಯ ಶಿಲ್ಪಗಳು, ನಟರಾಜ, ನಾಟ್ಯ ಸರಸ್ವತಿ, ಹೀಗೆಯೇ ಉಳಿದ ಎಲ್ಲ ರಥಗಳಲ್ಲಿಯೂ ಅನೇಕ ದೇವತಾ ಶಿಲ್ಪಗಳನ್ನು ಕಾಣಬಹುದು.

ಗದಗ ಜಿಲ್ಲೆ ಹರ್ತಿಯ ಶ್ರೀ ವೀರಭದ್ರೇಶ್ವರ ರಥ ಹಾಗೂ ಬೆಳಗಾವ ಜಿಲ್ಲೆಯ ಕೊಣ್ಣೂರಿನ ಶ್ರೀ ಮರಡಿ ಮಠದ ರಥಗಳ ಅಧಿಷ್ಠಾನ ಭಾಗಗಳು ಅಷ್ಠ ಭುಜಾಕೃತಿಗಳಲ್ಲಿ ರಚನೆಗೊಂಡಿವೆ. ಈ ಎರಡೂ ರಥಗಳ ಅಧಿಷ್ಠಾನ ಭಾಗಗಳಲ್ಲಿ ಒಂದೇ ತೆರನಾದ ದೇವತಾ ಶಿಲ್ಪಗಳು ಒಂದೇ ತೆರನಾದ ಭಂಗಿಗಳಲ್ಲಿ ಕಂಡುಬರುತ್ತವೆ. ನಂದಿಯ ಮೇಲೆ ಕುಳಿತಿರುವ ಶಿವ, ಸಿಂಹದ ಮೇಲೆ ಕುಳಿತಿರುವ ಆದಿಶಕ್ತಿ, ಗಜಲಕ್ಷ್ಮೀ, ಕಮಲದ ಮೇಲೆ ಕುಳಿತಿರುವ ವೀಣಾಪಾಣಿ, ಅಲ್ಲದೆ ವಿವಿಧ ನಕ್ಷತ್ರ ದೇವತೆಯರ ಹಾಗೂ ರಾಶಿ ದೇವತೆಯರ ಶಿಲ್ಪಗಳು ಸುಂದರವಾಗಿ ಮೂಡಿ ಬಂದಿವೆ.

ಬಾಗಲಕೋಟ ಜಿಲ್ಲೆ ಗುಳೇದಗುಡ್ಡದ ಕೋಟೆಕಲ್ಲು ಹುಚ್ಚೇಶ್ವರ ರಥ, ಗದಗ ಜಿಲ್ಲೆ ಶಿರಹಟ್ಟಿಯ ಶ್ರೀ ಫಕೀರೇಶ್ವರ ಸಂಸ್ಥಾನ ಮಠದ ರಥ, ಲಕ್ಷ್ಮೇಶ್ವರದ ಶ್ರೀ ಸೋಮೇಶ್ವರ ರಥ, ವರವಿ ಶ್ರೀ ಮೋನೇಶ್ವರ ರಥ, ಹಾವೇರಿ ಜಿಲ್ಲೆಯ ಹಾನಗಲದ ಶ್ರೀ ತಾರಕೇಶ್ವರ ರಥ, ಮೈಸೂರಿನ ಶ್ರೀ ಚಾಮುಂಡೇಶ್ವರಿ ರಥ, ಬಾಗಲಕೋಟ ಜಿಲ್ಲೆ ಕವಟಗಿಯ ಶ್ರೀ ಮಲ್ಲಿಕಾರ್ಜುನ ರಥ, ಹುನಗುಂದ ತಾಲೂಕಿನ ಚೌಡಾಪುರದ ಶ್ರೀ ಪ್ರಭುಸ್ವಾಮಿ ರಥ, ಧಾರವಾಡ ಜಿಲ್ಲೆಯ ಹೊಸ ಯಲ್ಲಾಪೂರದ ಶ್ರೀ ವೆಂಕಟೇಶ್ವರ ರಥ, ನವಲಗುಂದದ ಬಸಾಪೂರದ ಶ್ರೀ ಹನುಮಾನ ರಥ, ಕೊಪ್ಪಳ ಜಿಲ್ಲೆ ಹುಲಿಯಾಪೂರದ ಶ್ರೀ ಹನುಮಾನ ದೇವಸ್ಥಾನದ ರಥ, ಬೆಳಗಾವ ಜಿಲ್ಲೆ ಬೈಲಹೊಂಗಲ ತಾಲೂಕಿನ ಮರಕಿಭಾವಿಯ ಶ್ರೀ ಸಿದ್ಧಾರೂಢ ರಥ, ಮೊಹರೆಯ ಬಸವಣ್ಣನ ರಥ, ಇಂಚಲದ ಶ್ರೀ ಶಿವಯೋಗೇಶ್ವರ ಸಂಸ್ಥಾನದ ರಥ, ಚಿತ್ರದುರ್ಗ ಜಿಲ್ಲೆ ಚಳಕೆರೆ ತಾಲೂಕು ನೇರಲಗುಂಟೆಯ ಶ್ರೀ ಆಂಜನೇಯ ರಥ, ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಇಕ್ಕೇರಿಯ ಶ್ರೀ ಅಖಿಲಾಂಡೇಶ್ವರ ರಥ, ಹೀಗೆ ನಾಡಿನ ಇನ್ನೂ ನೂರಾರು ಗಡ್ಡಿ ರಥಗಳ ಅಧಿಷ್ಠಾನ ಭಾಗದಲ್ಲಿ ಅನೇಕ ದೇವಾನು ದೇವತೆಯರ ಶಿಲ್ಪಗಳು ಕಣ್ಮನ ಸೆಳೆಯುತ್ತವೆ. ಅಧ್ಯಯನದ ಇತಿಮಿತಿಗೆ ಅನುಗುಣವಾಗಿ ಇಲ್ಲಿ ಕೆಲವು ರಥಗಳಲ್ಲಿ ಕಂಡುಬರುವ ಶಿಲ್ಪಗಳ ಬಗ್ಗೆ ಮಾತ್ರ ವಿವರಣೆಯನ್ನು ನೀಡಲಾಗಿದೆ.

ii. ಮಹಾತ್ಮರ ಶಿಲ್ಪಗಳು : ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗದಲ್ಲಿ ಅನೇಕ ಮಹಾತ್ಮರ ಶಿಲ್ಪಗಳನ್ನು ಕಾಣಬಹುದು. ತಮ್ಮ ಜೀವನವನ್ನು ಆತ್ಮ ಸಾಕ್ಷಾತ್ಕರಿಸಿಕೊಳ್ಳಲು ಮೀಸಲಿರಿಸಿ ಅನಂತವನ್ನು ಸೇರಿ ಬ್ರಹ್ಮಾನಂದದಲ್ಲಿ ಮುಳುಗಿದ ಅನೇಕ ಶಿವಶರಣರು ಸಿದ್ಧಪುರಷರು ಮಹಾತ್ಮರೆಂದೆನಿಸಿಕೊಳ್ಳುವರು. ಅಂತವರು ದೇವರ ಸಮಾನರು ಎಂದು ಅನೇಕ ಶಾಸ್ತ್ರಗಳ ಹೇಳಿಕೆಯಂತೆ ಅವರ ಶಿಲ್ಪಗಳನ್ನು ದೇಗುಲದ ರಥಗಳ ಮೇಲೆ ಕಾಣಬಹುದು.

ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಇಂಚಲದ ಶ್ರೀ ಶಿವಯೋಗೀಶ್ವರ ಸಂಸ್ಥಾನ ಮಠದ ರಥದಲ್ಲಿ ಅನೇಕ ಮಹಾತ್ಮರ ಶಿಲ್ಪಗಳನ್ನು ಕಾಣಬಹುದು. ಅಕ್ಕ ಮಹಾದೇವಿ, ಅಲ್ಲಮ ಪ್ರಭು, ಸಿದ್ಧಾರೂಢರು, ಅಥಣಿಯ ಶ್ರೀ ಮುರಘೇಂದ್ರ ಶಿವಯೋಗಿಗಳು, ಮುರಗೋಡದ ಶ್ರೀ ಮಹಾಂತ ಅಜ್ಜನವರ, ಶ್ರೀ ಬಸವಣ್ಣನವರ ಹಾಗೂ ಸಿದ್ಧಲಿಂಗೇಶ್ವರರ ಶಿಲ್ಪಗಳನ್ನು ಕಾಣಬಹುದು. ಈ ಎಲ್ಲ ಶಿಲ್ಪಗಳ ಸುತ್ತಲೂ ಕಮಾನುಗಳು ಹಾಗೂ ಕಂಬಗಳಂತಹ ಕೆತ್ತನೆಯನ್ನು ಮಾಡಿರುವರು.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿಯ ಶ್ರೀ ಮೌನೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಶ್ರೀ ಮೌನೇಶ್ವರರು ಪೀಠದ ಮೇಲೆ ಕುಳಿತಂತೆ ಶಿಲ್ಪರಚನೆ ಮಾಡಲಾಗಿದೆ. ಬಸವಣ್ಣನವರ ಹಾಗೂ ಕೆಲವು ಋಷಿಮುನಿಗಳು ಧ್ಯಾನಾಸಕ್ತರಾಗಿ ಕುಳಿತಿರುವಂತೆ ಶಿಲ್ಪರಚನೆ ಮಾಡಲಾಗಿದೆ. ಇದೇ ತೆರನಾಗಿ ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಅಕ್ಕ ಮಹಾದೇವಿ, ಚನ್ನಬಸವಣ್ಣ ಹಾಗೂ ಮೌನೇಶ್ವರರ ಶಿಲ್ಪವಿನ್ಯಾಸಗಳಿವೆ. ಇವುಗಳಲ್ಲದೆ ಶ್ರೀ ಗವಿಸಿದ್ಧೇಶ್ವರರ ಪವಾಡ ದೃಶ್ಯಗಳನ್ನು ತೋರುವ ಉಬ್ಬುಶಿಲ್ಪ ರಚನೆಯು ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದೆ.

ಬಾಗಲಕೋಟ ಜಿಲ್ಲೆಯ ಹುನಗುಂದ ತಾಲೂಕಿನ ಇಳಕಲದ ಶ್ರೀ ವಿಜಯ ಮಹಾಂತೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಧ್ಯಾನಕ್ಕೆ ಕುಳಿತ ಋಷಿಮುನಿಗಳ, ಕುದುರೆಯ ಮೇಲೆ ಕುಳಿತ

ಬಸವಣ್ಣನವರ ಹಾಗೂ ಜಪ ಮಾಲೆಯನ್ನು ಹಿಡಿದು ನಿಂತ ಅಕ್ಕ ಮಹಾದೇವಿಯ ಶಿಲ್ಪಗಳನ್ನು ರಚಿಸಲಾಗಿದೆ.

ಹುಬ್ಬಳ್ಳಿಯ ಮೂರುಸಾವಿರ ಮಠದ ರಥದ ಅಧಿಷ್ಠಾನ ಭಾಗದಲ್ಲಿ ಕೆಲವು ಮಹಾತ್ಮರ ಶಿಲ್ಪಗಳು ಕಂಡು ಬರುತ್ತವೆ. ಋಷಿ ಮುನಿಗಳು ಯಜ್ಞದಲ್ಲಿ ತೊಡಗಿರುವುದು, ಸಿದ್ಧಾರೂಢರ ಭಾವಶಿಲ್ಪ, ಮುರಗೋಡ ಮಹಾಂತ ಶಿವಯೋಗಿಗಳ ಹಾಗೂ ಬಸವಣ್ಣನವರ ಶಿಲ್ಪಗಳನ್ನು ಕಾಣಬಹುದು. ಬಾಗಲಕೋಟ ಜಿಲ್ಲೆಯ ಹುನಗುಂದದ ಶ್ರೀ ವೀರಭದ್ರ ದೇವಸ್ಥಾನದ ರಥದ ಅಧಿಷ್ಠಾನ ಭಾಗದಲ್ಲಿ ಪೀಠದ ಮೇಲೆ ಕುಳಿತಿರುವ ಸಿದ್ಧಲಿಂಗೇಶ್ವರರ ಶಿಲ್ಪಗಳನ್ನು ಕಾಣಬಹುದು.

ರಾಯಚೂರು ಜಿಲ್ಲೆಯ ಕಲ್ಮಲದ ಶ್ರೀ ಕರೆಪ್ಪತಾತನ ರಥದ ಅಧಿಷ್ಠಾನ ಭಾಗದಲ್ಲಿ ಕರೆಪ್ಪ ತಾತನವರ ಪವಾಡ ದೃಶ್ಯಗಳನ್ನು ಹಾಗೂ ಶರಣ ಬಸವೇಶ್ವರರ ಶಿಲ್ಪಗಳನ್ನು ಸುಂದರವಾಗಿ ರಚಿಸಲಾಗಿದೆ. ಬಾಗಲಕೋಟ ಜಿಲ್ಲೆ ಮುಚಖಂಡಿಯ ಶ್ರೀ ವೀರಭದ್ರೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಸಿದ್ಧಾರೂಢರ ಮುರಘೇಂದ್ರ ಶಿವಯೋಗಿಗಳ, ಗುರುಬಸವ ಶಿವಯೋಗಿಗಳ, ಬಸವಣ್ಣನವರ ಹಾಗೂ ಅಕ್ಕ ಮಹಾದೇವಿಯ ಶಿಲ್ಪಗಳನ್ನು ರಚಿಸಿರುವರು. ಇದೇ ರೀತಿಯ ಶಿಲ್ಪಗಾರಿಕೆಯನ್ನು ಜಮಖಂಡಿ ತಾಲೂಕಿನ ಶಿರೋಳದ ಬಸವೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಕಾಣಬಹುದು.

ಬಿಜಾಪೂರ ಜಿಲ್ಲೆಯ ಸಿಂಧಗಿ ತಾಲೂಕು ಪಡಗಾನೂರ ಮಲ್ಲಯ್ಯನ ರಥ, ಹಾವೇರಿ ಜಿಲ್ಲೆ ಹಾನಗಲ ತಾಲೂಕು ಅರಳೇಶ್ವರದ ಬಸವೇಶ್ವರ ರಥ, ಉಳವಿಯ ಶ್ರೀ ಚನ್ನಬಸವೇಶ್ವರ ರಥ, ಧಾರವಾಡ ಜಿಲ್ಲೆಯ ಗರಗದ ಶ್ರೀ ಮಡಿವಾಳೇಶ್ವರ ರಥ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕು ಶ್ರೀ ರಾಂಪೂರದ ಶ್ರೀ ಪರಪ್ಪಸ್ವಾಮಿ ರಥ, ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲೂಕು ಜಾಯವಾಡಲಗಿಯ ಶ್ರೀ ಸೋಮನಾಥೇಶ್ವರ ರಥ, ಬೆಳಗಾವಿ ಜಿಲ್ಲೆಯ ರಾಯಭಾಗ ತಾಲೂಕಿನ ಮುಗಳಖೋಡದ ಶ್ರೀ ಸಿದ್ಧಸಂಸ್ಥಾನ ಮಠದ ರಥ, ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಶ್ರೀ ಮಹಾಲಿಂಗೇಶ್ವರರ ರಥ, ರಾಯಚೂರು ಜಿಲ್ಲೆ ತಿಂತಣಿಯ ಶ್ರೀ ಮೌನೇಶ್ವರ ರಥ, ಹೀಗೆ ಇನ್ನೂ ಹಲವು ರಥಗಳ ಅಧಿಷ್ಠಾನ ಭಾಗಗಳಲ್ಲಿ ಆಯಾ ಮಠಗಳ ಅಥವಾ ದೇವಾಲಯಗಳ ಪ್ರಮುಖ ಮಹಾತ್ಮರ ಶಿಲ್ಪಗಳನ್ನು ರಚಿಸುವುದಲ್ಲದೆ, ಆ ಭಾಗದ ಸಿದ್ಧ ಪುರಷರ ಶಿಲ್ಪಗಳನ್ನು ಕಾಣಬಹುದು.

ರಥಗಳ ಅಧಿಷ್ಠಾನ ಭಾಗಗಳಲ್ಲಿ ಅಕ್ಕ ಮಹಾದೇವಿ, ಅಲ್ಲಮ ಪ್ರಭುಗಳು, ಚನ್ನ ಬಸವಣ್ಣ, ಶ್ರೀ ಸಿದ್ಧಲಿಂಗೇಶ್ವರರು, ಮೌನೇಶ್ವರರು, ಬಸವಣ್ಣನವರು ಹಾಗೂ ಕೆಲವು ಋಷಿ ಮುನಿಗಳು ಯಜ್ಞದಲ್ಲಿ ಅಥವಾ ಧ್ಯಾನಮಗ್ನರಾಗಿರುವಂತೆ ರಚಿಸಿರುವ ಶಿಲ್ಪಗಳು ಹೆಚ್ಚಾಗಿ ಕಂಡುಬರುತ್ತವೆ. ಮಹಾತ್ಮರ ಹೆಸರಿನಲ್ಲಿಯೇ ರಥಗಳು ನಿರ್ಮಾಣಗೊಂಡಿದ್ದರೆ, ಅಂತಹ ರಥಗಳಲ್ಲಿ ಆಯಾ ಮಹಾತ್ಮರ ಪವಾಡ ಸನ್ನಿವೇಶಗಳನ್ನು ತಿಳಿಸುವ ಶಿಲ್ಪಗಳು ಕಂಡುಬರುತ್ತವೆ.

iii. ಪೌರಾಣಿಕ ಶಿಲ್ಪಗಳು : ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗದಲ್ಲಿ ದಶಾವತಾರ, ಭಾಗವತ, ರಾಮಾಯಣ, ಮಹಾಭಾರತ ಇಂತಹ ಪೌರಾಣಿಕ ಸನ್ನಿವೇಶದ ಶಿಲ್ಪಗಳೂ

ಕಂಡುಬರುವವು.

ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಶ್ರೀ ಮಹಾಲಿಂಗೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಆಂಜನೇಯ ಶ್ರೀ ರಾಮ, ಲಕ್ಷ್ಮಣ ಹಾಗೂ ಸೀತೆಯರಿಗೆ ಶಿರಭಾಗಿರುವುದನ್ನು ತೋರುವ ಶಿಲ್ಪ ರಚನೆ ಮಾಡಲಾಗಿದೆ. ಹುಬ್ಬಳ್ಳಿಯ ಮೂರುಸಾವಿರ ಮಠದ ರಥದ ಅಧಿಷ್ಠಾನ ಭಾಗದಲ್ಲಿ ಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡುತ್ತಿರುವ ಸನ್ನಿವೇಶದ ಶಿಲ್ಪರಚನೆ ತುಂಬಾ ಸುಂದರವಾಗಿದೆ.

ಧರ್ಮಸ್ಥಳದ ವಸ್ತುಸಂಗ್ರಹಾಲಯದಲ್ಲಿ ಕಾಣುವ ಗಂಗಾಧರೇಶ್ವರ ರಥದಲ್ಲಿ ಅಧಿಷ್ಠಾನ ಭಾಗದ ಮಧ್ಯ ಪಟ್ಟಿಕೆಯಲ್ಲಿ ರಾಮ ಹಾಗೂ ರಾವಣರ ಯುದ್ಧ ಸನ್ನಿವೇಶವನ್ನು ತೋರುವ ಶಿಲ್ಪ ರಚನೆ ಮಾಡಲಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಶ್ರೀ ಕನಕರಾಯನ ರಥದಲ್ಲಿ ಆದಿಶಕ್ತಿಯು ರಾಕ್ಷಸರನ್ನು ಸಂಹಾರ ಮಾಡುವ ಸನ್ನಿವೇಶದ ಶಿಲ್ಪರಚನೆ ಕಲಾತ್ಮಕವಾಗಿ ಮೂಡಿ ಬಂದಿದೆ. ಶ್ರೀ ಕೃಷ್ಣನು ಅರ್ಜುನನಿಗೆ ಗೀತೋಪದೇಶ ಮಾಡುವ ಸನ್ನಿವೇಶದ ಶಿಲ್ಪ, ನರಸಿಂಹನು ಹಿರಣ್ಯ ಕಶ್ಯಪವನ್ನು ಸಂಹಾರಿಸುವ ಶಿಲ್ಪ, ವಿಷ್ಣುವು ತಾಳಿದ ದಶಾವತಾರಗಳ ಶಿಲ್ಪಗಳು ಚೆನ್ನಾಗಿ ಮೂಡಿಬಂದಿವೆ.

ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಇಂಚಲದ ಶ್ರೀ ಶಿವಯೋಗೀಶ್ವರ ಸಂಸ್ಥಾನ ಮಠದ ರಥದಲ್ಲಿ ದಶಾವತಾರದ ಶಿಲ್ಪಗಳು ಸುಂದರವಾಗಿವೆ. ಶ್ರೀರಂಗಪಟ್ಟಣದ ಶ್ರೀ ರಂಗನಾಥನ ರಥ ಹಾಗೂ ನಂಜನಗೂಡಿನ ಶ್ರೀ ನಂಜುಂಡೇಶ್ವರ ರಥಗಳಲ್ಲಿ ಮಹಾಭಾರತ ಹಾಗೂ ರಾಮಾಯಣಗಳಿಗೆ ಸಂಬಂಧಿಸಿದ ಶಿಲ್ಪಗಳನ್ನು ಕಾಣಬಹುದು.

ಬಾಗಲಕೋಟ ಜಿಲ್ಲೆಯ ಗುಳೇದಗುಡ್ಡದ ಶ್ರೀ ಕೋಟೆಕಲ್ಲು ಹುಚ್ಚೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಆಂಜನೇಯನು ಶ್ರೀ ರಾಮ ಲಕ್ಷ್ಮಣರನ್ನು ತನ್ನ ಹೆಗಲೇರಿಸಿಕೊಂಡು ಹಾರುತ್ತಿರುವಂತಹ ಶಿಲ್ಪ ರಚನೆಯನ್ನು ಮಡಿರುವರು. ಇದಲ್ಲದೆ ಮಾರ್ಕಂಡೇಯನು ಯಮನ ಪಾಶದಿಂದ ಪಾರಾಗಲು ಶಿವಲಿಂಗವನ್ನು ಬಿಗಿದಪ್ಪಿದಂತೆ ಶಿಲ್ಪ ರಚನೆ ಮಾಡಲಾಗಿದೆ.

ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಸವೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಶ್ರವಣಕುಮಾರನು ತನ್ನ ತಂದೆ ತಾಯಿಯರನ್ನು ತೀರ್ಥಯಾತ್ರೆಗೆ ಕರೆದೊಯ್ಯುವ ಸನ್ನಿವೇಶದ ಶಿಲ್ಪ ರಚನೆ ಕಂಡುಬರುತ್ತದೆ.

ರಾಯಚೂರು ಜಿಲ್ಲೆ ಗಬ್ಬೂರಿನ ಬೂದಿ ಬಸವೇಶ್ವರ ರಥ ಹಾಗೂ ದೇವದುರ್ಗದ ಸೂಗೂರೇಶ್ವರ ರಥಗಳಲ್ಲಿ ಸಿದ್ಧರಾಮನು ಶಿವನನ್ನು ಸಾಕ್ಷಾತ್ಕರಿಸಿಕೊಳ್ಳಲು ಬೆಟ್ಟದಿಂದ ಕೆಳಗೆ ಹಾರಿದಂತೆ ಕಾಣುವ ಶಿಲ್ಪ ರಚನೆಯನ್ನು ಮಾಡಲಾಗಿದೆ.

ಇದೇ ಜಿಲ್ಲೆಯ ನೀರಮಾನ್ವಿಯ ಶ್ರೀ ಯಲ್ಲಮ್ಮನ ರಥ ಹಾಗೂ ಕೊಪ್ಪಳ ಜಿಲ್ಲೆಯ ಕನಕಗಿರಿಯ ಶ್ರೀ ಕನಕರಾಯನ ರಥದ ಅಧಿಷ್ಠಾನ ಭಾಗದಲ್ಲಿ ಪರಶುರಾಮನು ತನ್ನ ತಾಯಿ ರೇಣುಕೆಯ ಶಿರ ಛೇದನ ಮಾಡುವ ಸನ್ನಿವೇಶದ ಶಿಲ್ಪಗಳನ್ನು ಕೆತ್ತಲಾಗಿದೆ. ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ರಥದ ಅಧಿಷ್ಠಾನ ಭಾಗದಲ್ಲಿ ದಶಾವತಾರ,

ಪಂಚತಂತ್ರ, ಹಾಗೂ ರಾಮಾಯಣಗಳಿಗೆ ಸಂಬಂಧಿಸಿದ ಶಿಲ್ಪ ವಿನ್ಯಾಸಗಳಿವೆ. ಇವುಗಳಲ್ಲದೆ, ಮಾರ್ಕಂಡೇಯನು ಯಮನ ಪಾಶದಿಂದ ಬಿಡುಗಡೆ ಹೊಂದಿದ ಸನ್ನಿವೇಶದ ಶಿಲ್ಪವು ಸ್ಪಷ್ಟವಾಗಿ ಕಾಣುವಂತಿದೆ. ಆದಿಶಕ್ತಿಯು ರಾಕ್ಷಸರ ಸಂಹಾರ ಮಾಡಿದ ಸನ್ನಿವೇಶದ ಶಿಲ್ಪ ಹಾಗೂ ಶ್ರೀ ಕೃಷ್ಣ, ರುಕ್ಮಿಣಿಯರು ಪಗಡೆಯಾಟವಾಡುತ್ತಿರುವ ಶಿಲ್ಪಗಳು ತುಂಬಾ ಸುಂದರವಾಗಿವೆ.

ಗದಗ ಜಿಲ್ಲೆಯ ಶಿರಹಟ್ಟಿಯ ಶ್ರೀ ಫಕೀರೇಶ್ವರ ಸಂಸ್ಥಾನ ಮಠದ ರಥದಲ್ಲಿ ದಶಾವತಾರ ಹಾಗೂ ಶ್ರೀ ರಾಮ ಸೀತೆಯರಿಗೆ ಆಂಜನೇಯನು ನಮಸ್ಕರಿಸುವ ಹಾಗೆ ಕೆತ್ತಿದ ಶಿಲ್ಪ ವಿನ್ಯಾಸಗಳಿವೆ. ಇದೇ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಶ್ರೀ ಸೋಮೇಶ್ವರ ರಥ, ಅಧಿಷ್ಠಾನ ಭಾಗದಲ್ಲಿ ವಿಷ್ಣುವು ವಾಮನನ ಅವತಾರ ತಾಳಿದ ಸನ್ನಿವೇಶ ಹಾಗೂ ಬಲಿ ಚಕ್ರವರ್ತಿಯ ತಲೆಯ ಮೇಲೆ ತನ್ನಕಾಲಿಟ್ಟ ಸನ್ನಿ ವೇಶದ ಶಿಲ್ಪ ರಚನೆ ಕಲಾತ್ಮಕವಾಗಿದೆ.

ಬಾಗಲಕೋಟ ಜಿಲ್ಲೆಯ ಶಿರೂರದ ಶ್ರೀ ಸಿದ್ಧೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಹಾಗೂ ಮುಚಖಂಡಿಯ ಶ್ರೀ ವೀರಭದ್ರೇಶ್ವರ ರಥದ ಅಧಿಷ್ಠಾನ ಭಾಗದಲ್ಲಿ ಆಂಜನೇಯನು ಶ್ರೀ ರಾಮ ಲಕ್ಷ್ಮಣರನ್ನು ಹೊತ್ತುಕೊಂಡು ಹಾರುತ್ತಿರುವಂತೆ ಕಾಣುವ ಶಿಲ್ಪವಿನ್ಯಾಸಗಳನ್ನು ರಚಿಸಲಾಗಿದೆ. ಅಲ್ಲದೆ ವಿಷ್ಣುವಿನ, ವಾಮನ ಅವತಾರ ಹಾಗೂ ವರಾಹ ಅವತಾರಗಳ ಶಿಲ್ಪರಚನೆಗಳನ್ನು ನೋಡಬಹುದು. ಇದಲ್ಲದೆ, ಶ್ರೀ ಕೃಷ್ಣನು ಶೇಷನನ್ನು ಸೋಲಿಸಿ ಅದರ ತಲೆಯ ಮೇಲೆ ನೃತ್ಯ ಮಾಡುವಂತಹ ಶಿಲ್ಪ ರಚನೆ ಮಾಡಲಾಗಿದೆ.

ಶ್ರೀರಂಗಪಟ್ಟಣದ ಶ್ರೀ ರಂಗನಾಥನ ರಥದ ಅಧಿಷ್ಠಾನ ಭಾಗದಲ್ಲಿ ಹಾಗೂ ಮೈಸೂರಿನ ರಥದ ಅಧಿಷ್ಠಾನ ಭಾಗದಲ್ಲಿ ಹಾಗೂ ಮೈಸೂರಿನ ಶ್ರೀ ಚಾಮುಂಡೇಶ್ವರಿ ರಥದ ಅಧಿಷ್ಠಾನ ಭಾಗದಲ್ಲಿ ಸುರಾಸುರರು ಸಮುದ್ರ ಮಥನ ಮಾಡುವ ಸನ್ನಿವೇಶ ಹಾಗೂ ಶಿವನು ವಿಷ ಸೇವಿಸುವ ಸನ್ನಿವೇಶವನ್ನು ತೋರುವ ಶಿಲ್ಪ ರಚನೆ ಮಾಡಲಾಗಿದೆ.

ಹೀಗೆ ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಢವಳಗಿಯ ಶ್ರೀ ಮಡಿವಾಳೇಶ್ವರ ರಥ, ಗುಲಬುರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ಜೇರಟಗಿಯ ಶರಣ ಬಸವೇಶ್ವರ ರಥ ಹಾಗೂ ಹಾವೇರಿ ಜಿಲ್ಲೆಯ ಹಾನಗಲದ ತಾರಕೇಶ್ವರ ರಥದ ಅಧಿಷ್ಠಾನ ಭಾಗಗಳಲ್ಲಿ ದಶಾವತಾರದ ಹಾಗೂ ಆದಿಶಕ್ತಿಯು ರಾಕ್ಷಸರನ್ನು ಸಂಹರಿಸುವ ಸನ್ನಿವೇಶದ ಶಿಲ್ಪಗಳು ಕಂಡುಬರುತ್ತವೆ.

ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಮಸ್ಕಿಯ ಜಲ್ಲಿಕಾರ್ಜುನ ರಥದ ಅಧಿಷ್ಠಾನ ಭಾಗದಲ್ಲಿ ಶ್ರೀ ರಾಮನು ಹನುಮಂತನಿಗೆ ಆಶೀರ್ವದಿಸುವಂತೆ, ಆಂಜನೇಯನು ಬೆಟ್ಟವನ್ನು ಹೊತ್ತು ತಂದ ಸನ್ನಿವೇಶ ಹಾಗೂ ಸುರಾಸುರರು ಸಮುದ್ರ ಮಥನ ಮಾಡುವ ಸನ್ನಿವೇಶದ ಶಿಲ್ಪಗಳನ್ನು ರಚಿಸಲಾಗಿದೆ.

ಹೀಗೆ ನಾಡಿನ ಹಲವು ರಥಗಳ ಅಧಿಷ್ಠಾನ ಭಾಗದಲ್ಲಿ ಪೌರಾಣಿಕ ಶಿಲ್ಪಗಳನ್ನು ಕಾಣಬಹುದು.

iv. ಪ್ರಾಣಿ ಪಕ್ಷಿಗಳ ಶಿಲ್ಪಗಳು : ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗದಲ್ಲಿ ಅನೇಕ ಪ್ರಾಣಿ ಪಕ್ಷಿಗಳ ಶಿಲ್ಪಗಳನ್ನು ಕಾಣಬಹುದು. ರಥಗಳ ಅಧಿಷ್ಠಾನ ಭಾಗದ ಪ್ರತಿಯೊಂದು

ಭುಜಗಳಲ್ಲಿ ಆನೆಯ ತಲೆಯ ಮೇಲೆ ನಿಂತು ಎರಡು ಮುಂಗಾಲುಗಳನ್ನು ಮೇಲಕ್ಕೆ ಮಾಡಿ ಹಾರಿದಂತೆ ರಚಿಸಿರುವ ಸಿಂಹಗಳ ಶಿಲ್ಪಗಳು ರಚನೆಗೊಂಡಿರುತ್ತವೆ. ಇಂತಹ ಶಿಲ್ಪಗಳನ್ನು ಪ್ರತಿಯೊಂದು ಗಡ್ಡಿ ರಥಗಳಲ್ಲಿ ಸಾಮಾನ್ಯವಾಗಿ ನೋಡಬಹುದು.

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ರಥ, ಇದೇ ಜಿಲ್ಲೆಯ ಹುಲಗಿಯ ಹುಲಿಗೆಮ್ಮನ ರಥ, ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕೊಣ್ಣೂರದ ಶ್ರೀ ಮರಡಿಮಠದ ರಥ, ಬಾಗಲಕೋಟ ಜಿಲ್ಲೆ ಶಿರೂರದ ಶ್ರೀ ಸಿದ್ಧೇಶ್ವರ ರಥ, ರಾಯಚೂರು ಜಿಲ್ಲೆಯ ಕಲ್ಮಲದ ಶ್ರೀ ಕರೆಪ್ಪತಾತನ ರಥ, ಗದಗ ಜಿಲ್ಲೆ ಚಿಂಚಲಿಯ ಶ್ರೀ ವೀರಭದ್ರನ ರಥ, ಹರ್ತಿಯ ವೀರಭದ್ರ ರಥ, ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಇಂಚಲದ ಶ್ರೀ ಶಿವಯೋಗೀಶ್ವರ ಸಂಸ್ಥಾನ ಮಠದ ರಥ, ಹೀಗೆ ನಾಡಿನ ಹಲವು ರಥಗಳಲ್ಲಿ ಅಧಿಷ್ಠಾನ ಭಾಗದ ಅಷ್ಟ ಭುಜಗಳಲ್ಲಿ ಆನೆಯ ತಲೆಯ ಮೇಲೆ ಹಿಂಗಾಲುಗಳನ್ನು ಊರಿ, ತೆರೆದ ಬಾಯಿಯಿಂದ ಹೊರಬಂದ ಸುರುಳಿ ನಕ್ಷೆಯಾಕಾರದ ಹಾಗೂ ಕುದುರೆ ಬಾಲದ ವಿನ್ಯಾಸದ ನಾಲಿಗೆಯನ್ನು ಮುಂಗಾಲುಗಳಿಂದ ಹಿಡಿದಿರುವಂತೆ ರಚಿಸಲಾದ ಸಿಂಹಗಳ ಶಿಲ್ಪಗಳನ್ನು ಕಾಣಬಹುದು.

ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕು ಕುಕನೂರು ಶ್ರೀ ಮಹಾಮಾಯಿ ರಥದ ಅಧಿಷ್ಠಾನ ಭಾಗದ ಚತುರ್ಭುಜಗಳಲ್ಲಿ, ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕು ಇಟಗಿಯ ರಥದ ಅಧಿಷ್ಠಾನ ಭಾಗದ ತೆಳಭಾಗದ ಪಟ್ಟಿಕೆಗಳಲ್ಲಿ ಸುತ್ತುವರೆದು ಸುಮಾರು ಹದಿನಾರು ಸಿಂಹಗಳ ಶಿಲ್ಪಗಳನ್ನು ಕೆತ್ತಲಾಗಿದೆ. ಇಟಗಿಯ ರಥದಲ್ಲಿರುವ ಸಿಂಹಗಳ ಮುಂಗಾಲುಗಳು ಒಂದನ್ನೊಂದು ಸಂಧಿಸುವಲ್ಲಿ ಹೂವಿನ ಆಕಾರದ ಹಾಗೂ ಬುಗುರೆಯಾಕಾರದ ನಕ್ಷೆಯನ್ನು ರಚಿಸಲಾಗಿದೆ.

ರಾಯಚೂರು ಜಿಲ್ಲೆ ಮಸ್ಕಿಯ ಮಲ್ಲಿಕಾರ್ಜುನ ರಥ, ಸಿಂಧನೂರು ತಾಲೂಕು ಬಳಗಾನೂರದ ಆಂಜನೇಯನ ರಥ, ಅಂಕ್ಲಿ ಮಠದ ರಥ, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ಕುಕನೂರದ ಶ್ರೀ ಮಹಾಮಾಯಿ ರಥ, ಹುಬ್ಬಳ್ಳಿಯ ಮೂರು ಸಾವಿರ ಮಠದ ರಥ, ಈ ಎಲ್ಲ ರಥಗಳ ಅಧಿಷ್ಠಾನ ಭಾಗದ ಕೆಳಭಾಗದ ಪಟ್ಟಿಕೆಗಳಲ್ಲಿ ಮುಂಗಾಲುಗಳನ್ನು ಮೇಲಕ್ಕೆತ್ತಿ ನೆಗೆದಿರುವಂತೆ ತೊರುವ ಕುದುರೆಗಳ ಶಿಲ್ಪಗಳನ್ನು ಕಾಣಬಹುದು.

ಬಿಜಾಪೂರ ಜಿಲ್ಲೆಯ ಬಸರಕೋಡದ ಪವಾಡ ಬಸವೇಶ್ವರ ರಥ, ನಂಜನಗೂಡಿನ ಶ್ರೀ ನಂಜುಡೇಶ್ವರ ರಥ, ಧರ್ಮಸ್ಥಳದ ವಸ್ತುಸಂಗ್ರಹಾಲಯದ ರಥ, ಶ್ರೀರಂಗಪಟ್ಟಣದ ಶ್ರೀ ರಂಗನಾಥನ ರಥ, ಈ ಎಲ್ಲ ರಥಗಳಲ್ಲಿ ಅಧಿಷ್ಠಾನ ಭಾಗದ ಕೆಳಭಾಗದ ಪಟ್ಟಿಕೆಗಳಲ್ಲಿ ನಿಂತಿರುವ ಆನೆಯ ಶಿಲ್ಪಗಳು ಹಾಗೂ ಐದು ಹೆಡೆಗಳನ್ನು ಬಿಚ್ಚಿ ಮೂರುಸುತ್ತು ಸುತ್ತಿರುವ ಸರ್ಪದ ಶಿಲ್ಪವಿನ್ಯಾಸಗಳು ಗಮನ ಸೆಳೆಯುತ್ತವೆ.

ಬಾಗಲಕೋಟ ಜಿಲ್ಲೆಯ ಶಿರೂರದ ಶ್ರೀ ಸಿದ್ಧೇಶ್ವರ ರಥ, ಬಾಗಲಕೋಟೆಯ ಶ್ರೀ ಬಸವೇಶ್ವರ ರಥ, ಹುನಗುಂದದ ಶ್ರೀ ವೀರಭದ್ರನ ರಥ, ಗದಗ ಜಿಲ್ಲೆಯ ಶಿರಹಟ್ಟಿಯ ಶ್ರೀ ಫಕೀರೇಶ್ವರ ಸಂಸ್ಥಾನ ಮಠದ ರಥ, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಜಾಯವಾಡಲಗಿಯ ಸೋಮನಾಥೇಶ್ವರ ರಥ, ಈ ಎಲ್ಲ ರಥಗಳ ಅಧಿಷ್ಠಾನ ಭಾಗದ ಪ್ರಾರಂಭದ ಹಂತದ ಚತುಭುಜಾಕೃತಿಯ ಪ್ರತಿಯೊಂದು ಭುಜಗಳ ಮೇಲೆ ಮಂಗಗಳ ಶಿಲ್ಪಗಳಿವೆ. ಕೈಯಲ್ಲಿ ಬಾಳೆ

ಹಣ್ಣುಗಳನ್ನು ಹಿಡಿದಿರುವಂತೆ, ಮರಿ ಮಂಗನನ್ನು ತಾಯಿ ಮಂಗವು ಅಪ್ಪಿಕೊಂಡು ಕುಳಿತಿರುವಂತೆ ತಮ್ಮ ಲಿಂಗ ಹಾಗೂ ಯೋಣಿಯನ್ನು ತೋರಿಸುವಂತೆ ಕುಳಿತಿರುವ ಮಂಗಗಳ ಶಿಲ್ಪಗಳು ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಸುಂದರವಾಗಿ ಮೂಡಿ ಬಂದಿವೆ. ಈ ಮಂಗನ ಶಿಲ್ಪಗಳು ಮೂರು ಆಯಾಮಗಳನ್ನು ಹೊಂದಿರುವುದರಿಂದ ನೋಡುಗರ ಗಮನ ಸಳೆಯುತ್ತವೆ.

ಮನಸ್ಸು ಮರ್ಕಟದಂತೆ ಎಂಬ ಹೇಳಿಕೆಯಂತೆ ಮಂಗನಂತೆ ಅತ್ತಿತ್ತ ಅರಿದಾಡೋ ಮನಸ್ಸನ್ನು ನಿಗ್ರಹಿಸಿದಲ್ಲಿ ಆತ್ಮ ಸಾಕ್ಷಾತ್ಕರ ಸಾಧ್ಯ. ಅಲ್ಲದೆ ಯಾವುದೇ ಕಾರ್ಯ ಯಶಸ್ವಿಯಾಗಲು ಮನಸ್ಸು ಶಾಂತದಿಂದ ಕೂಡಿರಬೇಕು[೧೯]. ಎಂದು ತಿಳಿಸುವ ಈ ಮಂಗನ ಶಿಲ್ಪಗಳು ರಥದ ಅಧಿಷ್ಠಾನ ಭಾಗದ ಪ್ರಾರಂಭದಲ್ಲೇ ಮೊದಲು ಕಣ್ಣಿಗೆ ಬೀಳುವಂತೆ ರಚಿಸಲ್ಪಟ್ಟಿರುತ್ತವೆ.

ಸರ್ಪಕುಂಡಲಿನಿ ಜಾಗ್ರತೆಯ ನಂತರವೇ ಆಧ್ಯಾತ್ಮದ ಅನುಭವ ಸಾಧ್ಯವೆಂದು ಹೇಳಲು ಅನೇಕ ಸರ್ಪಗಳು ಹೆಡೆ ಎತ್ತಿ ಸುತ್ತಿ ಕುಳಿತಿರುವಂತೆ ಸರ್ಪಗಳ ಶಿಲ್ಪಗಳನ್ನು ರಚಿಸಲಾಗಿರುತ್ತದೆ.

ಆಧ್ಯಾತ್ಮ ದಾರಿಯಲ್ಲಿ ಸಾಗಲು ಧೈರ್ಯ ಶಕ್ತಿ ಸಾಮರ್ಥ್ಯಗಳು ಅತೀ ಅವಶ್ಯ. ಮನಸ್ಸು ಸ್ಥೈರ್ಯ ಕಳೆದುಕೊಳ್ಳದೇ, ದುಷ್ಟ ಶಕ್ತಿಗಳನ್ನು ಮೀರಿ ಮುನ್ನಡೆದು ಸಾಧನೆಯ ದಾರಿಯನ್ನು ಕ್ರಮಿಸಲು ಶಕ್ತಿ ಸಂಚಯವಾಗಬೇಕೆಂಬುದನ್ನು ತಿಳಸಲು ಕುದುರೆ, ಆನೆ ಹಾಗೂ ಸಿಂಹಗಳಂತಹ ಶಕ್ತಿಯುತವಾದ ಬಲಿಷ್ಠ ಪ್ರಾಣಿ ಶಿಲ್ಪಗಳನ್ನು ರಥದ ಅಧಿಷ್ಠಾನ ಭಾಗದ ಕೆಳಭಾಗದ ಪಟ್ಟಿಕೆಗಳಲ್ಲಿ ಹಾಗೂ ಪ್ರತಿಯೊಂದು ಭುಜಗಳಲ್ಲಿ ರಚಿಸಿರುವುದು ಕಂಡು ಬರುತ್ತದೆ[೨೦].

ನಂಜನ ಗೂಡಿನ ನಂಜುಂಡೇಶ್ವರ ರಥ, ಹುಬ್ಬಳ್ಳಿಯ ಮೂರುಸಾವಿರ ಮಠದ ರಥ, ಬನವಾಸಿಯ ಮಧುಕೇಶ್ವರ ರಥ, ಧರ್ಮಸ್ಥಳದ ವಸ್ತುಸಂಗ್ರಹಾಲಯದ ರಥಗಳ ಅಧಿಷ್ಠಾನ ಭಾಗದ ಪ್ರಾರಂಭದ ಪಟ್ಟಿಕೆಗಳಲ್ಲಿ ಕುದುರೆ, ಆನೆ, ಸಿಂಹಗಳ ಶಿಲ್ಪಗಳನ್ನು ಸೂಕ್ಷ್ಮವಾಗಿ ಸಣ್ಣ ಪ್ರಮಾಣದಲ್ಲಿ ಸಾಲು ಸಾಲಾಗಿ ರಚಿಸಲಾಗಿದೆ.

ಶ್ರೀ ರಂಗ ಪಟ್ಟಣದ ಶ್ರೀ ರಂಗನಾಥನ ರಥ, ನಂಜನಗೂಡಿನ ಶ್ರೀ ನಂಜುಂಡೇಶ್ವರ ರಥ, ಬಳ್ಳಾರಿ ಜಿಲ್ಲೆ ಹಂಪಿಯ ಶ್ರೀ ವಿರೂಪಾಕ್ಷನ ರಥ, ಬೆಳಗಾವಿ ಜಿಲ್ಲೆ ಸವದತ್ತಿ ತಾವಾಕಿನ ಇಂಚಲದ ಶ್ರೀ ಶಿವಯೋಗೀಶ್ವರ ಸಂಸ್ಥಾನ ಮಠದ ರಥ, ಬೇಲೂರು ಶ್ರೀ ಚನ್ನಕೇಶವನ ರಥ, ರಾಯಚೂರು ಜಿಲ್ಲೆ ಮಸ್ಕಿಯ ಶ್ರೀ ಮಲ್ಲಿಕಾರ್ಜುನ ರಥ, ಗಬ್ಬೂರಿನ ಶ್ರೀ ಬೂದಿ ಬಸವೇಶ್ವರ ರಥ, ಬಾಗಲಕೋಟ ಜಿಲ್ಲೆ ಬಾದಾಮಿ ಬನಶಂಕರಿಯ ರಥ, ಧರ್ಮಸ್ಥಳದ ವಸ್ತು ಸಂಗ್ರಹಾಲಯದ ಶ್ರೀ ರಂಗನಾಥನ ಹಾಗೂ ಗಂಗಾಧರೇಶ್ವರ ರಥಗಳ ಅಧಿಷ್ಠಾನ ಭಾಗದ ಮಧ್ಯಭಾಗದ ಹಾಗೂ ಮೇಲ್ಭಾಗದ ಕೆಲವು ಪಟ್ಟಿಕೆಗಳಲ್ಲಿ ನಂದಿ, ಹಂಸ, ಸಿಂಹ, ನವಿಲು, ಗಿಳಿಗಳು, ಗರುಡ, ಕೆಲವು ವ್ಯಾಳ ಶಿಲ್ಪಗಳು ಅಲ್ಲದೆ, ದೇವತೆಯರ ಶಿಲ್ಪಗಳ ಜೊತೆಗೆ ರಚನೆ ಮಾಡಲಾದ ವಿವಿಧ ಪ್ರಾಣಿ ಪಕ್ಷಿಗಳ ಶಿಲ್ಪಗಳನ್ನು ಕಾಣಬಹುದು.

ಶ್ರೀರಂಗಪಟ್ಟಣದ ಶ್ರೀ ಗಂಗನಾಥನ ರಥದ ಅಧಿಷ್ಠಾನ ಭಾಗದಲ್ಲಿ ಮೇಲ್ಭಾಗದ

---

೧೯. ''ಮನೋನಿಗ್ರಹ'' ಸಚ್ಚಿದಾನಂದ ಸ್ವಾಮಿಗಳು, ಪು.ಸಂ.೧೬, ೧೯೮೫.
೨೦. ''ಆಧ್ಯಾತ್ಮಿಕ ಚಿಂತನೆ'' ಶ್ರೀ ಸಿದ್ದಲಿಂಗ ಸ್ವಾಮಿಗಳು, ಪು.ಸಂ.೩೭, ೧೯೯೭,

ಪಟ್ಟಿಕೆಯಲ್ಲಿ ಆಕಳು ಕರುವಿಗೆ ಹಾಲುನಿಸುವ ಶಿಲ್ಪ ಸುಂದರವಾಗಿ ಮೂಡಿ ಬಂದಿದೆ. ಧರ್ಮಸ್ಥಳದ ವಸ್ತುಸಂಗ್ರಹಾಲಯದ ರಥದಲ್ಲಿ ವೃಷಭ ಶಿಲ್ಪವು ಸುಂದರವಾಗಿದೆ. ನಂಜನಗೂಡಿನ ಶ್ರೀ ನಂಜುಂಡೇಶ್ವರ ರಥ, ಬಾಗಲಕೋಟ ಜಿಲ್ಲೆಯ ಕೆರೂರಿನ ಬನಶಂಕರಿ ರಥ, ರಾಯಚೂರು ಜಿಲ್ಲೆ ಮಸ್ಕಿಯ ಮಲ್ಲಿಕಾರ್ಜುನ ರಥ ಹಾಗೂ ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಸವೇಶ್ವರ ರಥಗಳಲ್ಲಿ ವ್ಯಾಳ ಶಿಲ್ಪಗಳು ಬಹಳ ಕಲಾತ್ಮಕವಾಗಿ ಮೂಡಿ ಬಂದಿವೆ.

ಹೀಗೆ ನಾಡಿನ ಅಸಂಖ್ಯಾತ ಕಾಷ್ಠ ಮಾಧ್ಯಮದ ಗಡ್ಡಿ ರಥಗಳಲ್ಲಿ ಸಿಂಹ, ಕುದುರೆ, ಆನೆ, ನಂದಿ, ಸರ್ಪ, ಗರುಡ, ಹಂಸ, ನವಿಲು, ಗಿಳಿ, ವೃಷಭ ಹಾಗೂ ವ್ಯಾಳಗಳು, ಈ ಎಲ್ಲ ಪ್ರಾಣಿ ಪಕ್ಷಿಗಳ ಬಿಡಿ ಶಿಲ್ಪಗಳು ಹಾಗೂ ಸಾಲು ಸಾಲಾಗಿ ಕತ್ತನೆ ಮಾಡಲಾದ ಶಿಲ್ಪಗಳನ್ನು ಕಾಣಬಹುದು.

v. **ಮಿಥುನ ಶಿಲ್ಪಗಳು :** ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗದಲ್ಲಿ ಕೆಲವು ಮಿಥುನ ಶಿಲ್ಪಗಳನ್ನು ಕಾಣಬಹುದು. ಮಿಥುನ ಶಿಲ್ಪಗಳ ರಚನೆಗೆ ಕಾರಣಗಳನ್ನು ಈಗಾಗಲೇ ತಿಳಿದುಕೊಂಡಿರುವೆವು. ನಾಡಿನ ಕೆಲವು ಹಳೆಯ ರಥಗಳಲ್ಲಿ ಮಾತ್ರ ಈ ಮಿಥುನ ಶಿಲ್ಪಗಳು ಕಂಡು ಬರುತ್ತವೆ. ಇತ್ತೀಚೆಗೆ ತಯಾರಿಸಿದ ಕೆಲವು ಬೆರಳೆಣಿಕೆಯಷ್ಟು ರಥಗಳಲ್ಲಿ ಈ ಶಿಲ್ಪಗಳು ತಮ್ಮನ್ನು ಗುರುತಿಸಿಕೊಂಡಿವೆ.

ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನದ ರಥಗಳ ಅಧಿಷ್ಠಾನ ಭಾಗದಲ್ಲಿ ಚುಂಬನ, ಆಲಿಂಗನ, ಕಾಮ ಪ್ರೇರಿತ ಶಿಲ್ಪಗಳು ಹಾಗೂ ಸಂಭೋಗ ಕ್ರಿಯೆಯ ವಿವಿಧ ಭಂಗಿಗಳನ್ನು ತೋರುವ ಅನೇಕ ಶಿಲ್ಪಗಳನ್ನು ರಚಿಸಲಾಗಿದೆ. ಕೆಲವು ಸ್ತ್ರೀ ಪುರಷರು ನಗ್ನತೆಯನ್ನು ತೋರುವ ಶಿಲ್ಪಗಳನ್ನು ಕೆತ್ತಲಾಗಿದೆ. ಇದಲ್ಲದೆ ಸೋಗಿಯ ಶ್ರೀ ವೀರಭದ್ರ ರಥ ಹಾಗೂ ಈ ರಥದ ಅಧಿಷ್ಠಾನ ಭಾಗಗಳಲ್ಲಿ ಕೆಲವು ಪ್ರಾಣಿ ಹಾಗೂ ಸ್ತ್ರೀ ಸಂಭೋಗವುಳ್ಳ ಶಿಲ್ಪ ವಿನ್ಯಾಸಗಳು ಕಂಡುಬರುತ್ತವೆ.

ಗದಗ ಜಿಲ್ಲೆಯ ಶಿರಹಟ್ಟಿಯ ಶ್ರೀ ಫಕೀರೇಶ್ವರ ಸಂಸ್ಥಾನ ಮಠದ ರಥ ಹಾಗೂ ಶಿರಹಟ್ಟಿ ತಾಲೂಕು ಲಕ್ಷ್ಮೇಶ್ವರದ ಶ್ರೀ ಸೋಮೇಶ್ವರ ರಥದ ಅಧಿಷ್ಠಾನ ಭಾಗಗಳಲ್ಲಿ ಕೆಳ ಭಾಗದ ಪಟ್ಟಿಕೆಗಳಲ್ಲಿ ಕಾಮಾತುರವನ್ನು ಸೂಚಿಸುವ ನಗ್ನ ಮತ್ತು ಅರೆನಗ್ನ ಸ್ತ್ರೀ ಪುರಷರ ಶಿಲ್ಪಗಳನ್ನು ರಚಿಸಿರುವರು. ಇದಲ್ಲದೆ ಅಸಾಧ್ಯ ಹಾಗೂ ಪ್ರಾಯೋಗಿಕವಲ್ಲದ ದೊಂಬರಾಟದಂತಹ ಸಂಭೋಗ ಕ್ರಿಯೆಯ ಕಠಿಣ ಆಸನಗಳ ಶಿಲ್ಪ ರಚನೆ ಮಾಡಲಾಗಿದೆ.

ಹುಬ್ಬಳ್ಳಿಯ ಮೂರುಸಾವಿರ ಮಠದ ರಥ ಹಾಗೂ ಹಾವೇರಿ ಜಿಲ್ಲೆಯ ಹಾನಗಲ ತಾಲೂಕಿನ ತಾರಕೇಶ್ವರ ರಥದ ಅಧಿಷ್ಠಾನ ಭಾಗದ ಮೇಲ್ಭಾಗದ ಪಟ್ಟಿಕೆಗಳಲ್ಲಿ ಸಹಜ ಲೈಂಗಿಕ ಆಸನಗಳನ್ನು ತೋರುವ ಹಾಗೂ ನಗ್ನ ಸ್ತ್ರೀ ಪುರಷರು ಕೈ ಜೋಡಿಸಿಕೊಂಡು ನಿಂತಿರುವಂತೆ ಶಿಲ್ಪಗಳು ರಚನೆಗೊಂಡಿವೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಬಳಗಾನೂರದ ಆಂಜನೇಯನ ರಥ, ಮಸ್ಕಿಯ ಮಲ್ಲಿಕಾರ್ಜುನ ರಥ, ಹಂಪೆಯ ವಿರೂಪಾಕ್ಷ ದೇವಾಲಯದ ಹಳೆಯ ರಥ, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕು ಕುಕನೂರದ ಮಹಾಮಾಯಿ ರಥ, ಬಾಗಲಕೋಟ ಜಿಲ್ಲೆಯ ಬಾದಾಮಿ

ಕಾಷ್ಠ ರಥಗಳ ಅಧಿಷ್ಠಾನ ಭಾಗದ ದೇವತಾ, ಪ್ರಾಣಿ, ಸಿದ್ಧಪುರುಷರ ಹಾಗೂ ನಕ್ಷಾ ಶಿಲ್ಪಗಳು



ಶ್ರೀ ಸಿದ್ದೇಶ್ವರ ರಥ ಶಿರೂರ, ಜಿ - ಬಾಗಲಕೋಟ



ಶ್ರೀ ಗವಿಸಿದ್ದೇಶ್ವರ ರಥ ಕೊಪ್ಪಳ



ಶ್ರೀ ಮರಡಿ ಮಠದ ರಥ ಕೊಣ್ಣೂರು, ಜಿ - ಬೆಳಗಾಂವ




ಶ್ರೀ ಗವಿಸಿದ್ದೇಶ್ವರ ರಥ ಕೊಪ್ಪಳ

ಕಾಷ್ಠ ರಥಗಳ ಅಧಿಷ್ಠಾನ ಭಾಗದ ದೇವತಾ, ಪ್ರಾಣಿ, ಸಿದ್ಧಪುರುಷರ ಹಾಗೂ ನಕ್ಷಾ ಶಿಲ್ಪಗಳು



ಶ್ರೀ ಗವಿಸಿದ್ದೇಶ್ವರ ರಥ ಕೊಪ್ಪಳ



ಶ್ರೀ ತೋಂಟದಾರ್ಯ ರಥ ಗದಗ



ವಸ್ತುಸಂಗ್ರಹಾಲಯದ ರಥ ಧರ್ಮಸ್ಥಳ



ಶ್ರೀ ಶಿವಯೋಗೇಶ್ವರ ರಥ ಇಂಚಲ, ಜಿ - ಬೆಳಗಾಂವ



ಶ್ರೀ ಶ್ರೀರಂಗನಾಥನ ರಥ ಶ್ರೀರಂಗಪಟ್ಟಣ

ಕಾಷ್ಠ ರಥಗಳ ಅಧಿಷ್ಠಾನ ಭಾಗದ ದೇವತಾ, ಪ್ರಾಣಿ, ಸಿದ್ಧಪುರುಷರ ಹಾಗೂ ನಕ್ಷಾ ಶಿಲ್ಪಗಳು






ಶ್ರೀ ಶಿವಯೋಗೇಶ್ವರ ರಥ ಇಂಚಲ, ಜಿ - ಬೆಳಗಾಂವ




ಶ್ರೀ ಪವಾಡಬಸವೇಶ್ವರ ರಥ ಬಸರಕೋಡ, ಜಿ - ಬಿಜಾಪುರ



ಶ್ರೀ ವೀರಭದ್ರೇಶ್ವರ ರಥ ಬೋಳಚಗುಡ್ಡ, ಜಿ - ಬಾಗಲಕೋಟ



ಶ್ರೀ ವೀರಭದ್ರೇಶ್ವರ ರಥ ಬಿಂಚಲ, ಜಿ - ಗದಗ



ಕಾಷ್ಠ ರಥಗಳ ಅಧಿಷ್ಠಾನ ಭಾಗದ ದೇವತಾ, ಪ್ರಾಣಿ, ಸಿದ್ಧಪುರುಷರ ಹಾಗೂ ನಕ್ಷಾ ಶಿಲ್ಪಗಳು




ಶ್ರೀ ನಂಜುಡೇಶ್ವರ ರಥ ನಂಜನಗೂಡು



ಶ್ರೀ ಬಸವೇಶ್ವರ ರಥ ಹರ್ತಿ, ಜಿ - ಗದಗ



ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥ ಕುಕ್ಕೆಸುಬ್ರಹ್ಮಣ್ಯಂ



ಶ್ರೀ ಶ್ರೀರಂಗನಾಥನ ರಥ ಶ್ರೀರಂಗಪಟ್ಟಣ

ಕಾಷ್ಠ ರಥಗಳ ಅಧಿಷ್ಠಾನ ಭಾಗದ ದೇವತಾ, ಪ್ರಾಣಿ, ಸಿದ್ಧಪುರುಷರ ಹಾಗೂ ನಕ್ಷಾ ಶಿಲ್ಪಗಳು






ವಸ್ತುಸಂಗ್ರಹಾಲಯದ ರಥ ಧರ್ಮಸ್ಥಳ





ಶ್ರೀ ಸಿದ್ದೇಶ್ವರ ರಥ ಶಿರೂರ, ಜಿ - ಬಾಗಲಕೋಟ





ಶ್ರೀ ವೀರಭದ್ರೇಶ್ವರ ರಥ ಹುನಗುಂದ, ಜಿ - ಬಾಗಲಕೋಟ





ಶ್ರೀ ಬಸವೇಶ್ವರ ರಥ ಬಾಗಲಕೋಟ



ಶ್ರೀ ಸಿದ್ದೇಶ್ವರ ರಥ
ಯಾದವಾಡ, ಜಿ - ಬೆಳಗಾಂವ



ಶ್ರೀ ಕನಕರಾಯನ ರಥ ಕನಕಗಿರಿ, ಜಿ - ಕೊಪ್ಪಳ





ಶ್ರೀ ಮಾಹಾಮಾಯಿ ರಥ ಕುಕನೂರು, ಜಿ - ಕೊಪ್ಪಳ


ಕಾಷ್ಠ ರಥಗಳ ಅಧಿಷ್ಠಾನ ಭಾಗದ ದೇವತಾ, ಪ್ರಾಣಿ, ಸಿದ್ಧಪುರುಷರ ಹಾಗೂ ನಕ್ಷಾ ಶಿಲ್ಪಗಳು







ಶ್ರೀ ಮೌನೇಶ್ವರ ರಥ ವರವಿ.
ಜಿ - ಗದಗ



ಶ್ರೀ ಮಲ್ಲಿಕಾರ್ಜುನ ರಥ ಮಸ್ಕಿ
ಜಿ - ರಾಯಚೂರ





ಶ್ರೀ ಮೌನೇಶ್ವರ ರಥ ವರವಿ.
ಜಿ - ಗದಗ



ಶ್ರೀ ಮುರುಸಾವಿರ ಮಠದ ರಥ ಹುಬ್ಬಳ್ಳಿ







ಶ್ರೀ ವೀರಭದ್ರ ರಥ ಸೋಗಿ, ಜಿ - ಬಳ್ಳಾರಿ (ಮಿಥುನ ಶಿಲ್ಪಗಳು)







ಶ್ರೀ ವೀರಭದ್ರ ರಥ ಸೋಗಿ, ಜಿ - ಬಳ್ಳಾರಿ (ಮಿಥುನ ಶಿಲ್ಪಗಳು)



ಬನಶಂಕರಿಯ ರಥ, ಮೈಸೂರು ಚಾಮುಂಡೇಶ್ವರಿ ರಥ, ಬೇಲೂರು ಚನ್ನಕೇಶವ ರಥ, ಗೋಕರ್ಣದ ಮಹಾಬಲೇಶ್ವರ ರಥ, ಬನವಾಸಿಯ ಮಧುಕೇಶ್ವರ ರಥ, ಸುಬ್ರಮಣ್ಯಂದ ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥ, ದಾವಣಗೆರೆ ಜಿಲ್ಲೆ ಚಳ್ಳಕೆರೆ ತಾಲೂಕಿನ ನಾಯಕನಟ್ಟಿಯ ಶ್ರೀ ತಿಪ್ಪೇರುದ್ರಸ್ವಾಮಿ ರಥ, ಉಡುಪಿಯ ಶ್ರೀ ಕೃಷ್ಣನ ರಥ, ಕೊಪ್ಪಳ ಜಿಲ್ಲೆ ಕನಕಗಿರಿಯ ಶ್ರೀ ಕನಕರಾಯನ ರಥ, ಉಳುವಿ ಶ್ರೀ ಚನ್ನಬಸವಣ್ಣನ ರಥ ಹೀಗೆ ನಾಡಿನ ಕೆಲವು ಹಳೆಯ ರಥಗಳ ಅಧಿಷ್ಠಾನ ಭಾಗಗಳಲ್ಲಿ ಮಿಥುನ ಶಿಲ್ಪಗಳನ್ನು ಕಾಣಬಹುದು.

vi. ನಕ್ಷಾ ಶಿಲ್ಪಗಳು : ರಥಗಳ ಅಧಿಷ್ಠಾನ ಭಾಗದ ಪ್ರತಿಯೊಂದು ಶಿಲ್ಪ ಪಟ್ಟಿಕೆಗಳಲ್ಲಿ ಅನೇಕ ನಕ್ಷಾ ಶಿಲ್ಪಗಳು ಕಂಡುಬರುತ್ತವೆ. ರಥದ ಮಧ್ಯಭಾಗದಲ್ಲಿ ಪ್ರತಿಯೊಂದು ಪಟ್ಟಿಕೆಯಲ್ಲಿ ಕಂಡು ಬರುವ ವಿವಿಧ ರೀತಿಯ ಶಿಲ್ಪಗಳ ಪಕ್ಕದಲ್ಲಿ ಹೂಬಳ್ಳಿಯಾಕಾರದ ಕುದುರೆ ಬಾಲದಾಕಾರದ ಹಾಗೂ ಸುರುಳಿ ನಕ್ಷೆಗಳನ್ನು ಕಾಣಬಹುದು.

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ರಥ, ಬೆಳಗಾವಿ ಜಿಲ್ಲೆ ಮರಡಿ ಮಠದ ರಥ, ಬಾಗಲಕೋಟ ಜಿಲ್ಲೆ ಶಿರೂರದ ಶ್ರೀ ಸಿದ್ಧೇಶ್ವರ ರಥ, ಕೊಪ್ಪಳ ಜಿಲ್ಲೆಯ ಹುಲಗಿಯ ಶ್ರೀ ಹಲಿಗೆಮ್ಮನ ರಥ, ಬಿಜಾಪೂರ ಜಿಲ್ಲೆಯ ಜಾಯವಾಡಲಗಿಯ ಶ್ರೀ ಸೋಮೇಶ್ವರ ರಥ, ಬಸರಕೋಡದ ಶ್ರೀ ಪವಾಡ ಬಸವೇಶ್ವರ ರಥ, ಹಂಪಿಯ ವಿರೂಪಾಕ್ಷನ ರಥ, ಹುಬ್ಬಳ್ಳಿಯ ಶ್ರೀ ಮೂರು ಸಾವಿರ ಮಠದ ರಥ, ಕೆರೂರದ ಶ್ರೀ ಬನಶಂಕರಿಯ ರಥ ಇಂಥಹ ಅನೇಕ ಅಷ್ಟ ಭುಜಾಕೃತಿಯ ರಥಗಳಲ್ಲಿ ಅಧಿಷ್ಠಾನ ಭಾಗದ ಕೆಳಭಾಗದ ಹಾಗೂ ಮಧ್ಯ ಭಾಗದ ಪಟ್ಟಿಕೆಗಳಲ್ಲಿ ಕೀರ್ತಿಮುಖ ಹೊಂದಿದ ಶಿಲ್ಪಗಳ ಪಕ್ಕದಲ್ಲಿ ಸೂಕ್ಷ್ಮ ವಿನ್ಯಾಸಗಳನ್ನು ಹೊಂದಿದ ಸುರುಳಿಯಾಕಾರದ ತುಂಬುನಕ್ಷೆಗಳನ್ನು ರಚಿಸಲಾಗಿರುತ್ತದೆ. ಇದಲ್ಲದೆ ಕಮಲದ ಎಸಳಿನಾಕಾರದ ಹಾಗೂ ಹೂಬಳ್ಳಿ ನಕ್ಷೆಗಳಂತಹ ಶಿಲ್ಪಗಳನ್ನು ಕೆತ್ತಲಾದೆ.

ಸಾಮಾನ್ಯವಾಗಿ ಎಲ್ಲ ವಿಧದ ರಥಗಳಲ್ಲಿ ಕಂಡುಬರುವ ಅನೇಕ ರೀತಿಯ ಮೂರ್ತಿಶಿಲ್ಪಗಳ ಕಿರೀಟಗಳು, ಪೀಠಗಳು, ಪ್ರಭಾವಳಿಗಳು, ಕಂಬ ಕಮಾನುಗಳಂತಹ ವಿನ್ಯಾಸಗಳ ಮೇಲೆ ಹಾಗೂ ಪ್ರತಿಯೊಂದು ಶಿಲ್ಪವಿನ್ಯಾಸಗಳ ಸೌಂದರ್ಯವರ್ಧನೆಗೆ ಅನುಗುಣವಾಗುವಂತೆ, ಅಂಚುನಕ್ಷೆಗಳು ತುಂಬುನಕ್ಷೆಗಳು, ಕುದುರೆ ಬಾಲದಂತಹ ನಕ್ಷೆಗಳು, ಎಲೆಯಾಕಾರದ, ಹೂವಿನಾಕಾರದ, ಅರಳಿದ ಕಮಲದಾಕಾರದ, ವಿವಿಧ ಜ್ಯಾಮಿತಿಕ ಆಕಾರದ, ಸುಂದರವಾದ ಸೂಕ್ಷ್ಮ ಕಲಾತ್ಮಕ ವಿನ್ಯಾಸಗಳನ್ನು ಹೊಂದಿದ ನಕ್ಷೆಗಳ ಉಬ್ಬುಶಿಲ್ಪಗಳನ್ನು ರಚಿಸಲಾಗಿರುತ್ತದೆ.

ಈ ಹಿಂದೆ ಅಧಿಷ್ಠಾನ ಭಾಗದ ವಿವಿಧ ಶಿಲ್ಪಗಳನ್ನು ಅಭ್ಯಸಿಸುವ ಸಂದರ್ಭದಲ್ಲಿ ಹೆಸರಿಸಲಾದ ಎಲ್ಲ ರಥಗಳ ಅಧಿಷ್ಠಾನ ಭಾಗದಲ್ಲಿ ಈ ಎಲ್ಲ ರೀತಿಯ ಕುಸುರಿ ಕೆತ್ತನೆಯಿಂದ ಕೂಡಿದ ಕಲಾತ್ಮಕ ನಕ್ಷೆಗಳ ಉಬ್ಬಶಿಲ್ಪಗಳನ್ನು ಕಾಣಬಹುದು. ಈ ನಕ್ಷಾ ಶಿಲ್ಪಗಳಿಂದ ರಥಗಳ ಅಧಿಷ್ಠಾನ ಭಾಗಗಳು ನೋಡುಗರನ್ನು ಆಕರ್ಷಿಸುತ್ತವೆ.

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಅಧಿಷ್ಠಾನ ಭಾಗ :

ಕಾಷ್ಠ ಮಾಧ್ಯಮದ ಅಂಕಣ ರಥಗಳು ಅಡಿಪಾಯ ಭಾಗದ ನಂತರ ಮುಂದುವರೆದು ಶಿಖರ ಭಾಗದವರೆಗೂ ಐದು ಅಥವಾ ಆರು ಅಂತಸ್ತುಗಳಲ್ಲಿ ಸಿದ್ಧಗೊಂಡಿರುತ್ತದೆ. ಅಡಿಪಾಯ ಭಾಗದ

ನಂತರ ಬರುವ ಮೊದಲನೇಯ ಕಮಾನು ಅಥವಾ ಮೊದಲನೆಯ ಅಂತಸ್ತನ್ನು ಅಂಕಣ ರಥಗಳ ಅಧಿಷ್ಠಾನ ಭಾಗವೆನ್ನಬಹುದು. ಏಕೆಂದರೆ ಈ ಭಾಗದ ನಂತರ ಮುಂದುವರೆಯುವ ಅಂತಸ್ತಿನಲ್ಲಿ ರಥೋತ್ಸವದ ಸಂದರ್ಭದಲ್ಲಿ ಉತ್ಸವ ಮೂರ್ತಿಯನ್ನಿಡುತ್ತಾರೆ. ಉತ್ಸವ ಮೂರ್ತಿಯನ್ನಿಡುವ ಭಾಗವು ರಥದ ಮಂಟಪ ಭಾಗವಾಗಿರುವುದರಿಂದ ಈ ಭಾಗದ ಕೆಳಗಡೆಗೆ ಇರುವ ಭಾಗವನ್ನೇ ಅಧಿಷ್ಠಾನ ಭಾಗವೆಂದು ಕರೆಯಬಹುದು.

ಬೆಳಗಾವಿ ಜಿಲ್ಲೆಯ ಗೋಕಾಕದ ಶ್ರೀ ಬಸವಣ್ಣನ ರಥ ಹಾಗೂ ನೀಲಕಂಠೇಶ್ವರ ರಥಗಳ ಅಧಿಷ್ಠಾನ ಭಾಗಗಳು ಕೇವಲ ಕಂಬ ಹಾಗೂ ಕಮಾನುಗಳುಳ್ಳ ಅಂತಸ್ತುಗಳನ್ನು ಮಾತ್ರ ಹೊಂದಿರದೆ, ಚಚ್ಚೌಕಾಕಾರದ ಕಟಂಜರ, ಅದರ ಮಧ್ಯದಲ್ಲಿ ಸುಂದರ ಕಮಾನು ಹಾಗೂ ಕಂಬಗಳಿರುವ ಅಂತಸ್ತು ಹಾಗೂ ಅದರ ಮಧ್ಯದಲ್ಲಿ ಶಿವಲಿಂಗದ ಕೆಳಭಾಗದಲ್ಲಿರುವಂತಹ ರಚನೆಯಂತಹ ವಿನ್ಯಾಸವನ್ನು ಹೊಂದಿದೆ.

ಬಾಗಲಕೋಟ ಜಿಲ್ಲೆ ಮುಧೋಳದ ಶ್ರೀ ಭ್ರಹ್ಮಗಡ್ಡಿ ಮಠದ ಅಂಕಣ ರಥದ ಅಧಿಷ್ಠಾನ ಭಾಗವು ಚತುರ್ಭುಜಾಕೃತಿಯಲ್ಲಿದ್ದು ಪ್ರತಿಯೊಂದು ಭಾಹುಗಳಲ್ಲಿ ನಾಲ್ಕು ಕಮಾನುಗಳನ್ನು ಹಾಗೂ ಹತ್ತು ಕಲಾತ್ಮಕ ಕಂಬಗಳನ್ನು ಹೊಂದಿದೆ. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಗೊಡಚಿನ ಮಲ್ಕಿಯ ಶ್ರೀ ಲಕ್ಷ್ಮೀದೇವಿಯ ರಥವು ಚೌಕಾಕಾರದ ಅಧಿಷ್ಠಾನ ಭಾಗದಲ್ಲಿ ನಾಲ್ಕು ಕಮಾನುಗಳನ್ನು ಹೊಂದಿದೆ.

ಬಿಜಾಪೂರ ಜಿಲ್ಲೆಯ ಹಲಗುಣಕಿಯ ಸಿದ್ಧೇಶ್ವರ ರಥ ಹಾಗೂ ಬಾಗಲಕೋಟ ಜಿಲ್ಲೆ ಬೀಳಗಿ ತಾಲೂಕು ತೋಳಮಟ್ಟಿಯ ಹನುಮದೇವರ ರಥಗಳು, ಗೋಕಾಕದ ನೀಲಕಂಟೇಶ್ವರ ರಥದ ಅಧಿಷ್ಠಾನ ಭಾಗದಂತಹ ವಿನ್ಯಾಸವನ್ನು ಹೊಂದಿವೆ.

ಹೆಚ್ಚೂಕಡಿಮೆ ನಾಡಿನ ಹಲವು ಪ್ರದೇಶಗಳಲ್ಲಿ ಕಂಡುಬರುವ ಕಾಷ್ಠ ಮಾಧ್ಯಮದ ಅಂಕಣ ರಥಗಳೆಲ್ಲವೂ ಚತುರ್ಭುಜಾಕೃತಿಯಲ್ಲೆ ನಿರ್ಮಾಣಗೊಂಡಿದ್ದು ಈ ರಥಗಳ ಅಧಿಷ್ಠಾನ ಭಾಗದಲ್ಲಿ ಯಾವುದೇ ರೀತಿಯ ವ್ಯತ್ಯಾಸಗಳು ಕಂಡುಬರುವುದಿಲ್ಲ. ಪ್ರತಿಯೊಂದು ರಥಗಳ ಕಂಬ ಹಾಗೂ ಕಮಾನುಗಳು ಸ್ವಲ್ಪಮಟ್ಟಿಗೆ ಬೇರೆ ಬೇರೆ ವಿನ್ಯಾಸಗಳಲ್ಲಿ ಕಂಡುಬರುತ್ತವೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನಾಗನೂರು ಹನುಮಂತನ ರಥ, ಪಟ್ಯಾಳದ ಬಸವೇಶ್ವರ ರಥ, ಮದಬಾವಿಯ ಸಿದ್ಧೇಶ್ವರ ರಥ, ಬಿಜಾಪೂರ ಜಿಲ್ಲೆಯ ಕೇಶಾಪೂರದ ಸಿದ್ಧೇಶ್ವರ ರಥ, ಬಾಗಲಕೋಟ ಜಿಲ್ಲೆ ದೇವತಾಪೂರದ ಸೋಮನಾಥನ ರಥ, ಬಾಗಲಕೋಟ ಜಿಲ್ಲೆ ಮುಧೋಳ ತಾಲೂಕಿನ ಮುಳ್ಳಿಗೇರಿ ಆಂಜನೇಯನ ರಥ, ಧಾರವಾಡ ಜಿಲ್ಲೆ ಶಿಗ್ಗಾಂವ ತಾಲೂಕಿನ ಶಿಡಗರಹಳ್ಳಿಯ ಊರಮ್ಮನ ರಥ, ಗದಗ ಜಿಲ್ಲೆ ಕವಲೂರಿನ ಬಸವಣ್ಣನ ರಥ, ಗದಗ ಜಿಲ್ಲೆ ಮುಂಡರಗಿ ತಾಲೂಕು ಹಮ್ಮಿಗಿಯ ಲಕ್ಷ್ಮೀದೇವಿ ರಥ, ಕೊಪ್ಪಳ ಜಿಲ್ಲೆಯ ನೆಲೋಗಿಯ ಶ್ರೀ ವೀರಭದ್ರ, ರಥ, ಈ ಎಲ್ಲ ರಥಗಳ ಅಧಿಷ್ಠಾನ ಭಾಗವು ಚತುಸ್ರಾಕಾರದಲ್ಲಿ ನಿರ್ಮಾಣಗೊಂಡಿದ್ದು ಯಾವುದೇ ರೀತಿಯ ಮೂರ್ತಿ ಶಿಲ್ಪಗಳು ಕಂಡುಬರುವುದಿಲ್ಲ. ಪ್ರತಿಯೊಂದು ಕಮಾನು ಹಾಗೂ ಕಂಬಗಳಿಗೆ ಅಲ್ಲಲ್ಲಿ ಹೂಬಳ್ಳಿಯ ನಕ್ಷೆಯ ಉಬ್ಬುಶಿಲ್ಪಗಳನ್ನು ಮಾತ್ರ ಕಾಣಬಹುದು. ಕೆಲವು ರಥಗಳಿಗೆ ಮಾತ್ರ ಕಂಬಗಳು

.ಹಾಗೂ ಕಮಾನುಗಳಿಗೆ ಬೇರೆ ಬೇರೆ ವರ್ಣಲೇಪನ ಮಾಡಲಾಗಿದೆ. ಅಲ್ಲಲ್ಲಿ ಕೆಲವು ರಥಗಳ ಅಧಿಷ್ಠಾನ ಭಾಗಗಳಲ್ಲಿ ಹೂಬಳ್ಳಿಯಾಕಾರದ, ಎಲೆಯಾಕಾರದ ನಕ್ಷೆಗಳನ್ನು ವಿವಿಧ ಬಣ್ಣಗಳಿಂದ ರಚಿಸಲಾಗಿದೆ.

ಬ. ಲೋಹ ಮಾಧ್ಯಮ ರಥಗಳ ಅಧಿಷ್ಠಾನ ಭಾಗ :

ಲೋಹ ಮಾಧ್ಯಮ ರಥಗಳಲ್ಲಿ ಮೂರು ವಿಧಗಳು.

೧. ಕಬ್ಬಿಣದ ರಥಗಳು.

೨. ಬೆಳ್ಳಿಯ ರಥಗಳು.

೩. ಚಿನ್ನದ ರಥಗಳು. ಈ ಮೂರು ವಿಧದ ಲೋಹ ರಥಗಳ ಅಧಿಷ್ಠಾನ ಭಾಗವನ್ನು ಕುರಿತು ಚರ್ಚಿಸುವಾ.

೧. ಕಬ್ಬಿಣ ರಥಗಳ ಅಧಿಷ್ಠಾನ ಭಾಗ : ಕಬ್ಬಿಣ ರಥಗಳಲ್ಲಿ ಎರಡು ಪ್ರಕಾರದ ರಥಗಳನ್ನು ವಿಂಗಡಿಸಿಕೊಳ್ಳಬಹುದು.

i. ಕಬ್ಬಿಣದ ಗಡ್ಡಿ ರಥಗಳು.

ii. ಕಬ್ಬಿಣದ ಅಂಕಣ ರಥಗಳು. ಈ ಎರಡು ವಿಧದ ರಥಗಳ ಅಧಿಷ್ಠಾನ ಭಾಗಗಳ ಕುರಿತಾಗಿ ತಿಳಿಯುವಾ.

i. **ಕಬ್ಬಿಣದ ಗಡ್ಡಿ ರಥಗಳ ಅಧಿಷ್ಠಾನ ಭಾಗ :** ಕಬ್ಬಿಣದ ಗಡ್ಡಿ ರಥಗಳ ಅಧಿಷ್ಠಾನ ಭಾಗವು ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗವನ್ನು ಹೋಲುವ ವಿನ್ಯಾಸದಲ್ಲೇ ನಿರ್ಮಾಣಗೊಂಡಿರುತ್ತದೆ. ಈ ರಥಗಳ ಅಧಿಷ್ಠಾನ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪಗಳು ಕಂಡುಬರುವುದಿಲ್ಲ. ಅಧಿಷ್ಠಾನ ಭಾಗದ ಕೆಳಭಾಗದಿಂದ ಮಂಟಪಭಾಗದವರೆಗೆ ಇರುವ ಭಾಗದಲ್ಲಿ ಕೆಲವು ಜ್ಯಾಮಿತಿಯ ಆಕೃತಿಯ ನಕ್ಷೆಗಳನ್ನು ಲೋಹದ ಪಟ್ಟಿಕೆಗಳಲ್ಲಿ ತಯಾರಿಸಿ ಹೊಂದಿಸಿರುತ್ತಾರೆ.

ಉದಾಹರಣೆಗೆ ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಶ್ರೀ ಬುತ್ತಿ ಬಸವೇಶ್ವರ ರಥದಲ್ಲಿ ಈ ರೀತಿಯ ವಿನ್ಯಾಸಗಳನ್ನು ರಥದ ಅಧಿಷ್ಠಾನ ಭಾಗದಲ್ಲಿ ಕಾಣಬಹುದು. ಮುಧೋಳದ ಬಸವೇಶ್ವರ ರಥ, ಜಾಲವಾದಿಯ ಮುರಘೇಂದ್ರ ಸ್ವಾಮಿ ರಥ, ಕೋಲಾರದ ಗಣಬಸವೇಶ್ವರ ರಥ, ಈ ಇಲ್ಲ ರಥಗಳ ಅಧಿಷ್ಠಾನ ಭಾಗಗಳು ಕುಷ್ಟಗಿಯ ಬುತ್ತಿ ಬಸವೇಶ್ವರ ರಥದ ಅಧಿಷ್ಠಾನ ಭಾಗದಂತೆಯೇ ಕೆಲವು ಜ್ಯಾಮಿತಿಯ ವಿನ್ಯಾಸಗಳನ್ನು ಹೊಂದಿವೆ.

ಗುಲಬರ್ಗಾ ಜಿಲ್ಲೆ ಅಫಜಲಪೂರ ತಾಲೂಕಿನ ದೇಸಾಯಿ ಕಲ್ಲೂರಿನ ಶ್ರೀ ಮಲ್ಲಿಕಾರ್ಜುನ ರಥದ ಅಧಿಷ್ಠಾನ ಭಾಗವು ಕೆಲವು ಕಂಬಗಳನ್ನು ಹಾಗೂ ಬುಗುರೆಯಾಕಾರದ ವಿನ್ಯಾಸಗಳನ್ನು ಹೊಂದಿದೆ. ಅಧಿಷ್ಠಾನ ಭಾಗದಲ್ಲಿ ಕೆಲವು ಲೋಹದ ಗಿಳಿಗಳ ಆಕೃತಿಗಳನ್ನು ಅಳವಡಿಸಿರುವುದು ವಿಶೇಷವಾಗಿದೆ. ಈ ಒಂದು ಕಬ್ಬಿಣದ ಗಡ್ಡಿ ರಥಕ್ಕೆ ಅಧಿಷ್ಠಾನ ಭಾಗದಲ್ಲಿ ಗಣಪತಿ, ಲಕ್ಷ್ಮೀ ಹಾಗೂ ಸರಸ್ವತಿ ಶಿಲ್ಪಗಳು ರಥದ ಮುಂಭಾಗದಲ್ಲಿ ಕಂಡುಬರುತ್ತವೆ. ಉಳಿದಂತೆ ಈ ರಥವು ಕೂಡ ಎಲ್ಲ ಗಡ್ಡಿ ರಥಗಳಂತೆ ಜ್ಯಾಮಿತಿಯ ಆಕಾರವನ್ನು ಹೊಂದಿದ ಅಧಿಷ್ಠಾನ ಭಾಗವನ್ನು ಹೊಂದಿದೆ.

ತ್ರಿಕೋನಾಕಾರದ, ಹೂಬಳ್ಳಿಯಾಕಾರದ ಹಾಗೂ ಸುರುಳಿಯಾಕಾರದ, ವೃತ್ತಾಕಾರದ ಹಾಗೂ ನಕ್ಷತ್ರಾಕಾರದ ನಕ್ಷೆಗಳನ್ನು ಲೋಹದ ಪಟ್ಟಿಕೆಗಳಲ್ಲಿ ತಾಯಾರಿಸಿ ಅಧಿಷ್ಠಾನ ಭಾಗದ ಅಂಚುಗಳಿಗೆ ಆಲವಡಿಸಿರುವುದು ಕಂಡುಬರುತ್ತದೆ.

ii. ಕಬ್ಬಿಣದ ಅಂಕಣ ರಥಗಳ ಅಧಿಷ್ಠಾನ ಭಾಗ : ಕಬ್ಬಿಣದ ಅಂಕಣ ರಥಗಳೂ ಸಹ ಕಾಷ್ಠ ಮಾಧ್ಯಮದ ಅಂಕಣ ರಥಗಳ ಆಕಾರದಲ್ಲಿಯೇ ನಿರ್ಮಾಣಗೊಂಡಿರುತ್ತವೆ. ಈ ರಥಗಳಲ್ಲಿ ಆಡಿಪಾಯ ಭಾಗದ ನಂತರ ಮುಂದುವರೆಯುವ ಆರು ಅಥವಾ ಏಳು ಅಂತಸ್ತುಗಳಲ್ಲಿ ಮೊದಲನೇಯ ಅಂತಸ್ತನ್ನೇ ಅಧಿಷ್ಠಾನ ಭಾಗವೆಂದು ಹೆಸರಿಸಬಹುದು. ಈ ಭಾಗದ ನಂತರದ ಅಂತಸ್ತನ್ನು ಉತ್ಸವ ಮೂರ್ತಿಯನ್ನಿಡಲು ಉಪಯೋಗಿಸುವುದರಿಂದ ಮೊದಲನೆಯ ಅಂತಸ್ತನ್ನು ಅಧಿಷ್ಠಾನ ಭಾಗವೆನ್ನಬಹುದು.

ಕಬ್ಬಿಣದ ಅಂಕಣ ರಥಗಳ ಅಧಿಷ್ಠಾನ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪವಿನ್ಯಾಸಗಳು ಕಂಡುಬರುವುದಿಲ್ಲ. ಕಬ್ಬಿಣದ ಅಂಕಣ ರಥಗಳ ಅಧಿಷ್ಠಾನ ಭಾಗದಲ್ಲಿ ತಗಡುಗಳಿಂದ ನಿರ್ಮಾಣಗೊಂಡ ಕಂಬ ಹಾಗೂ ಕಮಾನುಗಳು ವಿವಿಧ ವರ್ಣಗಳಿಂದ ಕೂಡಿರುತ್ತವೆ. ಕಂಬಗಳು ಹಾಗೂ ಕಮಾನುಗಳ ಮೇಲೆ ಹೂವು, ಎಲೆ, ಬಳ್ಳಿಗಳ ಹಾಗೂ ವಿವಿಧ ಬಣ್ಣದ ಚುಕ್ಕೆಗಳನ್ನಿಡುವುದರ ಮೂಲಕ ಸುಂದರಗೊಳಿಸಿರುವುದು ಕಂಡುಬರುತ್ತದೆ.

ಕೆಲವು ರಥಗಳ ಅಧಿಷ್ಠಾನ ಭಾಗಗಳಲ್ಲಿ ಸುಂದರವಾದ ಚಿತ್ರರಚನೆ ಮಾಡಲಾಗಿದೆ. ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕೂಡ್ಲಗಿಯ ರಾಮಲಿಂಗೇಶ್ವರ ಹಾಗೂ ಬನಶಂಕರಿ ದೇವಸ್ಥಾನದ ಕಬ್ಬಿಣ ಅಂಕಣ ರಥಗಳ ಅಧಿಷ್ಠಾನ ಭಾಗದಲ್ಲಿ ವಿವಿಧ ದೇವಾನು ದೇವತೆಯರ ಚಿತ್ರ ರಚನೆ ಮಾಡಲಾಗಿದೆ. ಶ್ರೀ ರಾಮಲಿಂಗೇಶ್ವರ ರಥದ ಅಧಿಷ್ಠಾನ ಭಾಗವು ಚೌಕಾಕಾರದಲ್ಲಿದ್ದು ಪ್ರತಿಯೊಂದು ಬಾಹುಗಳಲ್ಲಿ ಐದು ಕಮಾನುಗಳನ್ನು ಹೊಂದಿದೆ. ಪ್ರತಿಯೊಂದು ಕಮಾನುಗಳಲ್ಲಿ ಚಿತ್ರಗಳನ್ನು ರಚಿಸಲಾಗಿದೆ. ಹನುಮಂತನು ಬೆಟ್ಟವನ್ನು ಹೊತ್ತುತ್ತರುವ ಸನ್ನಿವೇಶದ ಚಿತ್ರ, ಪುಷ್ಪಕ ವಿಮಾನದಲ್ಲಿ ಶ್ರೀ ರಾಮ, ಸೀತೆ, ಲಕ್ಷ್ಮಣರು ಬರುತ್ತಿರುವ ಸನ್ನಿವೇಶದ ಚಿತ್ರ, ಶ್ರೀ ರಾಮನು ಬಿಲ್ಲು ಮುರಿದ ಸನ್ನಿವೇಶದ ಚಿತ್ರ, ಸೀತೆಯ ಸ್ವಯಂವರದ ಚಿತ್ರ ಹೀಗೆ ರಾಮಾಯಣಕ್ಕೆ ಸಂಬಂಧಿಸಿದ ಚಿತ್ರಗಳನ್ನು ಈ ರಥದ ಅಧಿಷ್ಠಾನ ಭಾಗದಲ್ಲಿ ರಚಿಸಲಾಗಿದೆ.

ಚಿತಾಪೂರ ತಾಲೂಕು ಕಾಳಗಿಯ ನೀಲಕಂಠೇಶ್ವರ ದೇವಸ್ಥಾನದ ಕಬ್ಬಿಣದ ಅಂಕಣ ರಥವು ಅಧಿಷ್ಠಾನ ಭಾಗದಲ್ಲಿ ಶಿವಲಿಂಗ, ಪರಮೇಶ್ವರ, ಪಾರ್ವತಿ, ಗಣಪತಿ, ಸರಸ್ವತಿ, ಪರಿಚಾಯಿಕೆಯರು ಹಾಗೂ ಆದಿಶಕ್ತಿಯ ಚಿತ್ರಗಳನ್ನು ಹೊಂದಿದೆ. ಬೀದರ ಜಿಲ್ಲೆಯ ಹುಮನಾಬಾದದ ವೀರಭದ್ರ ದೇವಸ್ಥಾನದ ರಥವು ಅಧಿಷ್ಠಾನ ಭಾಗದಲ್ಲಿ ವೀರಭದ್ರ, ಶಿವ, ಗಣಪತಿ, ವಿಷ್ಣು, ಬ್ರಹ್ಮ ಹಾಗೂ ಕೆಲವು ಪರಿವಾರ ದೇವತೆಗಳ ಚಿತ್ರಗಳನ್ನು ಮೈಗೂಡಿಸಿಕೊಂಡಿದೆ.

ಚಿತಾಪೂರ ತಾಲೂಕು ಕೂಡ್ಲಗಿಯ ಬನಶಂಕರಿ ರಥವು ಅಧಿಷ್ಠಾನ ಬಾಗದ ಕಮಾನುಗಳಲ್ಲಿ ಬನಶಂಕರಿ, ಕಾಳಿಕಾಮಾತೆ, ಚಾಮುಂಡೇಶ್ವರಿ, ಆದಿಶಕ್ತಿ, ಲಕ್ಷ್ಮೀ, ಸರಸ್ವತಿ, ಹೀಗೆ ವಿವಿಧ ದೇವತೆಯರ ಚಿತ್ರಗಳನ್ನೊಳಗೊಂಡಿದೆ.

ಗುಲಬುರ್ಗಾ ಜಿಲ್ಲೆಯ, ಆಳಂದ ತಾಲೂಕಿನ, ಜಿಡಗಾದ ಸಿದ್ಧ ಸಂಸ್ಥಾನ ಮಠದ ರಥದ ಅಧಿಷ್ಠಾನ ಭಾಗದ ಕಮಾನುಗಳ ಮಧ್ಯ ಭಾಗದಲ್ಲಿ ಹೂವಿನಾಕಾರದ ವಿನ್ಯಾಸಗಳನ್ನು ತಗಡುಗಳಲ್ಲಿ ತಯಾರಿಸಿ, ಜೋಡಿಸಿ, ಅವುಗಳಿಗೆ ವರ್ಣಲೇಪನ ಮಾಡಲಾಗಿದೆ.

ಬೀದರ ಜಿಲ್ಲೆ ಹುಮನಾಬಾದ ತಾಲೂಕು ಚಾಂಗಳೇಂದ ಶ್ರೀ ವೀರಭದ್ರ ರಥ ಹಾಗೂ ಗುಲಬುರ್ಗಾ ಜಿಲ್ಲೆಯಾದಗಿರಿ ತಾಲೂಕಿನ ಯಾಣಾಗುಂದಿಯ ಶ್ರೀ ಮಾಣಿಕೇಶ್ವರ ರಥದ ಅಧಿಷ್ಠಾನ ಭಾಗದ ಕಮಾನುಗಳ ಪಕ್ಕದಲ್ಲಿ ಕಬ್ಬಿಣದ ಛಡಿಗಳಿಂದ ತಯಾರಿಸಿ ಜೋಡಿಸಲಾದ ಆನೆ, ಕುದುರೆ, ನಾಟ್ಯ ಸರಸ್ವತಿ, ಕೈಮುಗಿದು ನಿಂತ ಬಾಲಕಿಯರು, ಹಂಸ, ನವಿಲು, ಹೀಗೆ ಅನೇಕ ವಿನ್ಯಾಸಗಳನ್ನು ಕಾಣಬಹುದು. ಅವುಗಳನ್ನು ಬೇರೆ ಬೇರೆ ಬಣ್ಣಗಳಿಂದ ಸುಂದರಗೊಳಿಸಿರುವರು.

ಯಾದಗಿರಿ ತಾಲೂಕಿನ ನಾಗಲಾಪೂರದ ಮೈಲಾರಲಿಂಗೇಶ್ವರನ ರಥದ ಅಧಿಷ್ಠಾನ ಭಾಗದಲ್ಲಿ, ಶಿವಲಿಂಗಗಳನ್ನು ತಗಡುಗಳಿಂದ ತಯಾರಿಸಿ ಜೋಡಿಸಿ, ಅವುಗಳಿಗೆ ಕಪ್ಪು ವರ್ಣಲೇಪನ ಮಾಡಿರುವುದು ಕಂಡುಬರುತ್ತದೆ.

ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ, ಕುರುಣಿಯ ಗಂಗಾದೇವಿಯ ಕಬ್ಬಿಣದ ಅಂಕಣ ರಥದಲ್ಲಿಯೂ ಸಹ ಬ್ರಹ್ಮ, ವಿಷ್ಣು, ಮಹೇಶ್ವರ, ಗಣಪತಿ, ಲಕ್ಷ್ಮೀ, ಸರಸ್ವತಿ, ಆದಿಶಕ್ತಿ, ರಾಮ, ಕೃಷ್ಣ ಹೀಗೆ ಅನೇಕ ದೇವಾನು ದೇವತೆಯರ ಚಿತ್ರ ರಚನೆ ಮಾಡಲಾಗಿದೆ. ಈ ರಥದ ಅಧಿಷ್ಠಾನ ಭಾಗವು ಅಷ್ಟಭುಜಾಕೃತಿಯನ್ನು ಹೊಂದಿದೆ.

ರಾಯಚೂರು ಜಿಲ್ಲೆ ದೇವಸುಗೂರದ ಸೂಗೂರೇಶ್ವರ ರಥ, ಬೆಳಗಾವಿ ಜಿಲ್ಲೆಯ ಅಂಕಲಗಿಯ ಅಡವಿಸಿದ್ಧೇಶ್ವರ ರಥ, ಗುಲಬುರ್ಗಾ ಜಿಲ್ಲೆ ಚಿಂಚೊಳ್ಳಿ ತಾಲೂಕಿನ ಕರಕನಳ್ಳಿಯ ಬಕ್ಕ ಪ್ರಭುಗಳ ರಥ, ಬೆಳಗಾವಿ ಜಿಲ್ಲೆಯ ಅಕ್ಕತಂಗಿಯರ ಹಳ್ಳದ ಶ್ರೀ ಯಲ್ಲಮ್ಮನ ರಥ, ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕೋರವಾರದ ಶ್ರೀ ಅಣವೀರಭದ್ರೇಶ್ವರ ರಥ, ಹೀಗೆ ಗುಲಬುರ್ಗಾ ಜಿಲ್ಲೆಯ ಹಲವಾರು ರಥಗಳ ಅಧಿಷ್ಠಾನ ಭಾಗಗಳು ಅನೇಕ ದೇವಾನುದೇವತೆಯರ ಚಿತ್ರಗಳನ್ನು ಮೈಗೂಡಿಸಿಕೊಂಡಿರುವುದು ಕಂಡುಬರುತ್ತದೆ. ಈ ಎಲ್ಲ ರಥಗಳೂ ಚತುರ್ಭುಜಾಕೃತಿಯನ್ನು ಹೊಂದಿದ ಅಧಿಷ್ಠಾನ ಭಾಗವನ್ನು ಹೊಂದಿವೆ.

೨. ಬೆಳ್ಳಿಯ ರಥಗಳ ಅಧಿಷ್ಠಾನ ಭಾಗ :

ಬೆಳ್ಳಿಯ ರಥಗಳ ಅಧಿಷ್ಠಾನ ಭಾಗವು ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಅಧಿಷ್ಠಾನ ಭಾಗವನ್ನೇ ಹೋಲುತ್ತದೆ. ಬೆಳ್ಳಿಯ ರಥಗಳ ಅಧಿಷ್ಠಾನ ಬಾಗವು ಬಹುಕೋನ ಭುಜಾಕೃತಿಯಲ್ಲಿ ರಚನೆಗೊಂಡಿರುತ್ತದೆ. ಈ ರಥದ ಅಧಿಷ್ಠಾನ ಭಾಗದಲ್ಲಿಯೂ ಸುಂದರವಾದ ಮೂರ್ತಿ ಶಿಲ್ಪಗಳನ್ನು ಕಾಣಬಹುದು. ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟು ಸಂಖ್ಯೆಯಲ್ಲಿ ಕಾಣಸಿಗುವ ಬೆಳ್ಳಿಯ ರಥಗಳ ಉದಾಹರಣೆಗಳೊಂದಿಗೆ ಅವುಗಳ ಅಧಿಷ್ಠಾನ ಭಾಗದಲ್ಲಿ ಕಾಣುವ ಶಿಲ್ಪವಿನ್ಯಾಸಗಳನ್ನು ಕುರಿತು ಚರ್ಚಿಸುವಾ.

ಬೆಳ್ಳಿಯ ರಥಗಳ ಅಧಿಷ್ಠಾನ ಭಾಗದಲ್ಲಿ ಅನೇಕ ಕಲಾತ್ಮಕ ಶಿಲ್ಪಗಳನ್ನು ಕಾಣಬಹುದು.

ಅವುಗಳನ್ನು i. ದೇವತಾ ಶಿಲ್ಪಗಳು.

ii. ಪ್ರಾಣಿ ಪಕ್ಷಿಗಳ ಶಿಲ್ಪಗಳು.

iii. ನಕ್ಷಾ ಶಿಲ್ಪಗಳು. ಎಂದು ವಿಂಗಡಿಸಿಕೊಂಡು ವಿವಿಧ ಬೆಳ್ಳಿಯ ರಥಗಳ ಅಧಿಷ್ಠಾನ ಭಾಗದ ಶಿಲ್ಪಗಳ ಕುರಿತಾಗಿ ತಿಳಿದುಕೊಳ್ಳುವಾ.

i. ದೇವತಾ ಶಿಲ್ಪಗಳು : ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕಿನ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ಬೆಳ್ಳಿಯ ರಥದ ಅಧಿಷ್ಠಾನ ಭಾಗದಲ್ಲಿ ದೇವತಾ ಶಿಲ್ಪಗಳು ಕಂಡುಬರುತ್ತವೆ. ಹುಲಿಯ ಚರ್ಮದ ಮೇಲೆ ಕುಳಿತು ಅಭಯಹಸ್ತ ನೀಡಿದ ಶಿವ, ಕಮಲದ ಹೂವಿನ ಮೇಲೆ ಕುಳಿತ ಬ್ರಹ್ಮ, ಕಮಲದಲ್ಲಿ ಎದ್ದುನಿಂತುಕೊಂಡಂತೆ ರಚಿಸಿರುವ ವಿಷ್ಣು, ಸಿಂಹದ ಮೇಲೆ ಕುಳಿತುಕೊಂಡ ಆದಿಶಕ್ತಿ ಹೀಗೆ ವಿವಿಧ ದೇವಾನುದೇವತೆಯರ ಉಬ್ಬುಶಿಲ್ಪಗಳು ಕಂಡುಬರುತ್ತವೆ.

ಶೃಂಗೇರಿಯ ಶಾರದಾಂಬೆಯ ಬೆಳ್ಳಿಯ ರಥದ ಅಧಿಷ್ಠಾನ ಭಾಗವು ಅಷ್ಟ ಭುಜಾಕೃತಿಯಲ್ಲಿ ರಚನೆಗೊಂಡಿದೆ. ಈ ಅಧಿಷ್ಠಾನ ಭಾಗದಲ್ಲಿ ಶೇಷಶಯನ, ಗಣಪತಿ, ಪರಮೇಶ್ವರ ವಿಶ್ವಕರ್ಮ, ಆದಿಶಕ್ತಿ ಇಂತಹ ದೇವತಾ ಶಿಲ್ಪಗಳನ್ನು ಕಾಣಬಹುದು.

ಬೆಳಗಾವಿ ಜಿಲ್ಲೆಯ ಗೊಡಚಿಯ, ಶ್ರೀ ವೀರಭದ್ರೇಶ್ವರನ ಸಣ್ಣ ಪ್ರಮಾಣದ ರಥದಲ್ಲಿ ಶಿವಪಾರ್ವತಿ ಹಾಗೂ ಗಣಪತಿಯರ ಶಿಲ್ಪಗಳು ರಚನೆಗೊಂಡಿವೆ.


ಧರ್ಮಸ್ಥಳದ ಹಾಗೂ ಉಡುಪಿಯ ರಜತ ರಥಗಳ ಅಧಿಷ್ಠಾನ ಭಾಗದಲ್ಲಿ ಗಣಪತಿ, ಲಕ್ಷ್ಮೀ, ಪಾರ್ವತಿ, ವಿಶ್ವಕರ್ಮ, ಶಿವ ಹಾಗೂ ಬ್ರಹ್ಮನ ಉಬ್ಬುಶಿಲ್ಪಗಳು ಕಲಾತ್ಮಕವಾಗಿ ಕಂಡುಬರುತ್ತವೆ.

ii. ಪ್ರಾಣಿ ಪಕ್ಷಿಗಳ ಶಿಲ್ಪಗಳು : ಧರ್ಮಸ್ಥಳದ ರಥದ ಅಧಿಷ್ಠಾನ ಭಾಗದಲ್ಲಿ ಚತುರ್ಭುಜಗಳ ಮೇಲೆ ಸಿಂಹಗಳ ಶಿಲ್ಪಗಳನ್ನು ಹೊಂದಿಸಲಾಗಿದೆ. ಹಿಂಗಾಲುಗಳ ಮೇಲೆ ನಿಂತು ಬಾಲವನ್ನು ಕುತ್ತಿಗೆಯವರೆಗೆ ಮೇಲಕ್ಕೆತ್ತಿ, ಬಾಯಿಯಿಂದ ಹೊರಬಂದ ಹೂಬಳ್ಳಿಯಾಕಾರದ ನಾಲಿಗೆಯನ್ನು ತನ್ನ ಮುಂಗಾಲುಗಳಿಂದ ಹಿಡಿದಂತೆ ಶಿಲ್ಪರಚನೆ ಮಾಡಲಾಗಿದೆ. ಸಿಂಹದ ಶಿಲ್ಪದ ಕಣ್ಣುಗಳಿಗೆ ಕೆಂಪು ಹರಳುಗಳನ್ನು ಹೊಂದಿಸಲಾಗಿದೆ.

ಬಳ್ಳಾರಿ ಜಿಲ್ಲೆಯ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ಬೆಳ್ಳಿಯ ರಥದ ಅಧಿಷ್ಠಾನ ಭಾಗದಲ್ಲಿ ಕುಳಿತಿರುವ ಸಿಂಹಗಳು ಹಾಗೂ ಆನೆಯ ಸಾಲುಗಳ ಶಿಲ್ಪಗಳನ್ನು ಕಾಣಬಹುದು. ಧರ್ಮಸ್ಥಳದ ಶ್ರೀ ಮಂಜುನಾಥನ ಬೆಳ್ಳಿಯ ರಥದಲ್ಲಿ ವಿವಿಧ ದೇವತೆಗಳ ವಾಹನಗಳಾಗಿ ರಚಿಸಲಾದ ನಂದಿ, ಸಿಂಹ, ಮೂಷಕ, ನವಿಲು, ಗರುಡ, ಗಿಳಿ ಇಂತಹ ಪ್ರಾಣಿ ಪಕ್ಷಿಗಳ ಶಿಲ್ಪಗಳನ್ನು ಕೊಟ್ಟೂರಿನ ರಥದಲ್ಲಿಯೂ ಕಾಣಬಹುದು.

ಶೃಂಗೇರಿಯ ಶ್ರೀ ಶಾರದಾಂಬೆಯ ರಥದ ಅಧಿಷ್ಠಾನ ಭಾಗದಲ್ಲಿ ಕುದುರೆ, ಆನೆ ಹಾಗೂ ಸಿಂಹಗಳ ಶಿಲ್ಪಗಳು ಕಂಡುಬರುತ್ತವೆ. ಅಧಿಷ್ಠಾನ ಭಾಗದ ಪಾರ್ಶ್ವ ಭುಜಗಳಲ್ಲಿ ಸಿಂಹ ಹಾಗೂ ಆನೆಗಳ ಶಿಲ್ಪಗಳಲ್ಲದೆ, ವ್ಯಾಳಗಳ ಶಿಲ್ಪಗಳೂ ಕಂಡುಬರುತ್ತವೆ. ಅಲ್ಲದೆ, ನವಿಲು ಹಾಗೂ ಹಂಸ ಪಕ್ಷಿಗಳ ಕೆಲವು ಶಿಲ್ಪಗಳು ಸುಂದರವಾಗಿ ಮೂಡಿ ಬಂದಿವೆ. ವೃಷಭ ಹಾಗೂ ಆನೆಗಳ ಮಿಶ್ರಶಿಲ್ಪಗಳು ಈ ರಥದಲ್ಲಿ


ಬೆಳ್ಳಿ ರಥಗಳಲ್ಲಿಯ ಉಬ್ಬು ಶಿಲ್ಪಗಳು



ಶ್ರೀ ಕೊಟ್ಟೂರೇಶ್ವರ ರಥ ಕೊಟ್ಟೂರು
ಜಿ - ಬಳ್ಳಾರಿ



ಶ್ರೀ ಮಂಜುನಾಥ ರಥ
ಧರ್ಮಸ್ಥಳ




ಶ್ರೀ ಮಂಜುನಾಥ ರಥ
ಧರ್ಮಸ್ಥಳ



ಶ್ರೀ ಮಂಜುನಾಥ ರಥ
ಧರ್ಮಸ್ಥಳ







ಶ್ರೀ ಮಂಜುನಾಥ ರಥ
ಧರ್ಮಸ್ಥಳ

ಶ್ರೀ ಕೊಟ್ಟೂರೇಶ್ವರ ರಥ ಕೊಟ್ಟೂರು, ಜಿ - ಬಳ್ಳಾರಿ

ಕಂಡುಬರುತ್ತವೆ.

iii. ನಕ್ಷಾ ಶಿಲ್ಪಗಳು : ಈ ಮೇಲೆ ಹೆಸರಿಸಲಾದ ಎಲ್ಲ ಬೆಳ್ಳಿಯ ರಥಗಳ ಮೇಲೆ ವಿವಿಧ ನಕ್ಷೆಗಳ ಶಿಲ್ಪಗಾರಿಕೆಯನ್ನು ಕಾಣಬಹುದು. ಅರಳಿದ ಕಮಲದ ಆಕಾರದ ಅಥವಾ ಕಮಲದ ಎಸಳುಗಳನ್ನು ಹೋಲುವ ನಕ್ಷೆಗಳನ್ನು ಅಧಿಷ್ಠಾನ ಭಾಗದ ಪ್ರಾರಂಭಭಾಗದಲ್ಲಿ ಕಾಣಬಹುದು.ಕೆಲವು ಸುರುಳಿಯಾಕಾರದ, ಹೂಬಳ್ಳಿಯಾಕಾರದ, ಅಂಚುನಕ್ಷೆಗಳು ರಚನೆಗೊಂಡಿವೆ. ಕುದುರೆ ಬಾಲದ ಹಂಸದ ರೆಕ್ಕೆಯ ನಕ್ಷೆಗಳು ಹಾಗೂ ಕೆಲವು ಪಕ್ಷಿಗಳ ಮುಖ, ರೆಕ್ಕೆಗಳನ್ನು ಹೋಲುವ ನಕ್ಷೆಗಳನ್ನು ಈ ಎಲ್ಲ ರಥಗಳ ಅಧಿಷ್ಠಾನ ಭಾಗದಲ್ಲಿ ಕಾಣಬಹುದು. ದೇವಾನುದೇವತೆಯರ ಶಿಲ್ಪಗಳ ಹತ್ತಿರ ಪೀಠ, ಪ್ರಭಾವಳಿಗಳಿಗೆ ಹಾಗೂ ಕಂಬ ಕಮಾನುಗಳಂತಹ ಆಕಾರಗಳು ಕಲಾತ್ಮಕವಾಗಿ ಕಾಣಲು ಸೂಕ್ಷ್ಮ ನಕ್ಷೆಗಳನ್ನು ರಚಿಸಿರುವುದು ಕಂಡುಬರುತ್ತದೆ.

೩. ಚಿನ್ನದ ರಥಗಳ ಅಧಿಷ್ಠಾನ ಭಾಗ :

ಚಿನ್ನದ ರಥಗಳ ಅಧಿಷ್ಠಾನ ಭಾಗವು ಬೆಳ್ಳಿಯ ರಥದ ಅಧಿಷ್ಠಾನ ಭಾಗದಂತೆಯೇ ಅಷ್ಟಭುಜಾಕೃತಿ, ಷಡ್ಭುಜಾಕೃತಿ ಹಾಗೂ ಬಹುಕೋನ ಭುಜಾಕೃತಿಗಲ್ಲಿ ರಚನೆಗೊಳ್ಳಬಹುದು. ಕರ್ನಾಟಕದಲ್ಲಿ ಕಾಣಸಿಗುವ ಕೆಲವೇ ಚಿನ್ನದ ರಥಗಳು ಅಷ್ಟಭುಜಾಕೃತಿಯ ಆಧಿಷ್ಠಾನವನ್ನು ಹೊಂದಿರುವುದು ಕಂಡುಬರುತ್ತದೆ. ಚಿನ್ನದ ರಥದ ಅಧಿಷ್ಠಾನ ಭಾಗದಲ್ಲಿ ರಚಿಸಲ್ಪಟ್ಟಿರುವ ವಿವಿಧ ಶಿಲ್ಪಗಳ ಬಗ್ಗೆ ತಿಳಿಯುವಾ.

ಚಿನ್ನದ ರಥದ ಅಧಿಷ್ಠಾನ ಭಾಗದ ಶಿಲ್ಪಗಳನ್ನು

i. ದೇವತಾ ಶಿಲ್ಪಗಳು.

ii. ಪ್ರಾಣಿ ಪಕ್ಷಿಗಳ ಶಿಲ್ಪಗಳು

iii. ನಕ್ಷಾ ಶಿಲ್ಪಗಳು. ಎಂದು ಮೂರು ಪ್ರಕಾರಗಳಲಿ ವಿಂಗಡಿಸಿಕೊಂಡು ಚಿನ್ನದ ರಥಗಳ ಉದಾಹರಣೆಗಳೊಂದಿಗೆ ಅವುಗಳನ್ನು ತಿಳಿಯುವಾ.

i. ದೇವಾತಾಶಿಲ್ಪಗಳು : ಶೃಂಗೇರಿಯ ಶ್ರೀ ಶಾರದಾಂಬೆಯ ಚಿನ್ನದ ರಥದ ಅಧಿಷ್ಠಾನ ಭಾಗವು ಅಷ್ಟಭುಜಾಕೃತಿಯನ್ನು ಹೊಂದಿದೆ. ಈ ರಥದ ಅಧಿಷ್ಠಾನ ಭಾಗದಲ್ಲಿ ನಂದಿಯ ಮೇಲೆ ಕುಳಿತ ಶಿವ, ಗರುಡನ ಮೇಲೆ ಕುಳಿತ ವಿಷ್ಣು ಹಾಗೂ ಕಮಲದ ಮೇಲೆ ಕುಳಿತ ಬ್ರಹ್ಮನ ಶಿಲ್ಪಗಳನ್ನು ಕಾಣಬಹುದು. ಇದಲ್ಲದೆ, ಲಕ್ಷ್ಮೀ, ವೀಣಾಪಾಣಿ ಹಾಗೂ ಗಣೇಶನ ಶಿಲ್ಪಗಳು ಕಲಾತ್ಮಕವಾಗಿ ಮೂಡಿ ಬಂದಿವೆ. ಈ ಎಲ್ಲಾ ಶಿಲ್ಪಗಳ ಕಣ್ಣುಗಳಿಗೆ ಮಿಂಚುವ ಹರಳುಗಳನ್ನು ಅಳವಡಿಸಲಾಗಿದೆ. ಉಡುಪಿಯ ಶ್ರೀ ಕೃಷ್ಣನ ಚಿನ್ನದ ರಥದ ಅಧಿಷ್ಠಾನ ಭಾಗವು ಸಹ ಅಷ್ಟಭುಜಾಕೃತಿಯನ್ನು ಹೊಂದಿದೆ. ಈ ರಥದ ಅಧಿಷ್ಠಾನ ಭಾಗದಲ್ಲಿಯೂ ಸಹ, ಶೃಂಗೇರಿಯ ರಥದಲ್ಲಿ ಕಾಣಸಿಗುವಂತಹ ದೇವತಾ ಶಿಲ್ಪಗಳು ಕಂಡು ಬರುತ್ತವೆ. ಆದರೆ, ಈ ಶಿಲ್ಪಗಳಲ್ಲಿ ಬ್ರಹ್ಮ ವಿಷ್ಣು ಹಾಗೂ ಮಹೇಶ್ವರರು ಸಾಲಾಗಿ ನಿಂತಿರುವಂತೆ ಶಿಲ್ಪ ರಚನೆ ಮಾಡಲಾಗಿದೆ.

ii. ಪ್ರಾಣಿ ಪಕ್ಷಿಗಳ ಶಿಲ್ಪಗಳು : ಉಡುಪಿಯ ಶ್ರೀ ಕೃಷ್ಣನ ದೇವಸ್ಥಾನದ ರಥದ ಅಧಿಷ್ಠಾನ ಭಾಗದಲ್ಲಿಕುದುರೆಗಳ ಶಿಲ್ಪಗಳು ಎದ್ದುಕಾಣುವಂತಿವೆ. ಆನೆ ಹಾಗೂ ಸಿಂಹಗಳ ಬಿಡಿ ಶಿಲ್ಪಗಳು ಹಾಗೂ ಸಾಲು ಸಾಲಾಗಿ ಹೊರಟ ಆನೆಗಳ ವಿವಿಧ ಭಂಗಿಗಳ ಶಿಲ್ಪರಚನೆಯನ್ನು ಕಾಣಬಹುದು. ಕೆಲವು ದೇವಾನುದೇವತೆಯರ ಹಿಂಭಾಗದಲ್ಲಿ ನಿಂತಿರುವಂತೆ, ನಂದಿ, ಸಿಂಹ, ಗರುಡ ಹಾಗೂ ಗಣಪತಿಯ ಹತ್ತಿರ ಕೆಳಗಡೆಗೆ ಕುಳಿತ ಮೂಷಕನ ಶಿಲ್ಪಗಳೂ ಸುಂದರವಾಗಿ ಉಬ್ಬುಶಿಲ್ಪಗಾರಿಕೆಯಲ್ಲಿ ಮೂಡಿಬಂದಿವೆ.

ಶೃಂಗೇರಿಯ ಶ್ರೀ ಶಾರದಾಂಬೆಯ ಚಿನ್ನದ ರಥದ ಅಧಿಷ್ಠಾನ ಭಾಗದಲ್ಲಿ ನಂದಿ, ಸಿಂಹ, ಸರ್ಪ, ಹಂಸ, ನವಿಲು, ಗಿಳಿ, ಕುದುರೆಯ ಸಾಲುಗಳು ಹಾಗೂ ಆನೆಯ ಸಾಲುಗಳನ್ನು ಕಾಣಬಹುದು. ಕೆಲವು ದೇವತಾ ಶಿಲ್ಪಗಳ ವಾಹನಗಳಾಗಿ ಸುಂದರವಾದ ಕಲಾತ್ಮಕವಾದ ಪ್ರಾಣಿ ಶಿಲ್ಪಗಳು ಕಂಡುಬರುತ್ತವೆ.

ಈ ಎರಡೂ ರಥಗಳಲ್ಲಿ ಕುದುರೆ ಹಾಗೂ ಸಿಂಹದ ಶಿಲ್ಪಗಳು ಗಮನ ಸೆಳೆಯುತ್ತವೆ.

iii. ನಕ್ಷಾ ಶಿಲ್ಪಗಳು : ಶೃಂಗೇರಿಯ ಶಾರದಾಂಬೆಯ ರಥ ಮತ್ತು ಉಡುಪಿಯ ಶ್ರೀ ಕೃಷ್ಣನ ರಥಗಳ ಅಧಿಷ್ಠಾನ ಭಾಗಗಳಲ್ಲಿ ಹೂಬಳ್ಳಿಯಾಕಾರದ ನಕ್ಷೆಗಳಿರುವ ಶಿಲ್ಪ ಪಟ್ಟಿಕೆಗಳನ್ನು ಅಧಿಷ್ಠಾನ ಭಾಗದ ಅಂಚುನಕ್ಷೆಗಳಾಗಿ ಬಳಸಿಕೊಂಡಿರುವುದನ್ನು ಕಾಣಬಹುದು. ಮೂರ್ತಿಶಿಲ್ಪಗಳ ಹತ್ತಿರ ಪೀಠ ಹಾಗೂ ಪ್ರಭಾವಳಿಗಳ ಮೇಲೆ ಮತ್ತು ಯಾವುದೇ ಬೇರೆ ಶಿಲ್ಪಗಳಿರದ ಭಾಗವನ್ನು, ಸುಂದರವಾದ ಹೂಬಳ್ಳಿಗಳ ನವಿಲು, ಹಂಸ, ಗಿಳಿಗಳಂತಹ ಪಕ್ಷಿಗಳ ಮುಖ ಹಾಗೂ ರೆಕ್ಕೆಗಳನ್ನು ಹೋಲುವ ನಕ್ಷೆಗಳನ್ನು ತುಂಬು ನಕ್ಷೆಗಳನ್ನಾಗಿ ರಚಿಸಿರುವುದು ರಥಗಳ ಅಧಿಷ್ಠಾನ ಭಾಗದ ಸೌಂದರ್ಯವರ್ಧನೆಗೆ ಕಾರಣವಾಗಿದೆ. ಸುರುಳಿಯಾಕಾರದ ನಕ್ಷೆಗಳಿಗೆ ಅಲ್ಲಲ್ಲಿ ವಿವಿಧ ಪ್ರಕಾರದ ಹರಳುಗಳನ್ನು ಅಳವಡಿಸಿರುವುದು ಕಂಡುಬರುತ್ತದೆ.

ಕ. ಸಂಕೀರ್ಣ ಮಾಧ್ಯಮ ರಥಗಳ ಅಧಿಷ್ಠಾನ ಭಾಗ :

ಸಂಕೀರ್ಣ ಮಾಧ್ಯಮದ ರಥಗಳನ್ನು ನಾಲ್ಕು ವಿಧಗಳಲ್ಲಿ ವಿಂಗಡಿಸಬಹುದು.

೧. ಕಟ್ಟುವ ರಥಗಳು. ೨. ತಟ್ಟಿಯ ರಥಗಳು.

೩. ತೆಪ್ಪದ ರಥಗಳು ೪. ಹೂವಿನ ರಥಗಳು.

ಈ ನಾಲ್ಕು ವಿಧದ ರಥಗಳ ಅಧಿಷ್ಠಾನ ಭಾಗಗಳ ಕುರಿತು ಚರ್ಚಿಸುವಾ.

೧. ಕಟ್ಟುವ ರಥಗಳು : ಕಟ್ಟುವ ರಥಗಳು ಉತ್ಸವದ ದಿನದಂದೆ ಅಥವಾ ಒಂದು ದಿನ ಮುಂಚಿತವಾಗಿ ಸಿದ್ಧಗೊಳ್ಳುವ ರಥಗಳೆಂದು ಈಗಾಗಲೇ ತಿಳಿದಿರುವೆವು. ಈ ರಥಗಳು ಕಬ್ಬಿಣದ ಅಂಕಣ ರಥಗಳಂತೆ ಅಥವಾ ಕಾಷ್ಟ ಮಾಧ್ಯಮದ ಅಂಕಣ ರಥಗಳಂತೆ ಅನೇಕ ಅಂತಸ್ತುಗಳಲ್ಲಿ ನಿರ್ಮಾಣಗೊಳ್ಳುತ್ತವೆ. ಈ ರಥಗಳ ಅಧಿಷ್ಠಾನ ಭಾಗವೆಂದರೆ ಉತ್ಸವ ಮೂರ್ತಿಯನ್ನು ಕೂಡಿಸುವ ಭಾಗದ ಕೆಳಭಾಗವೆಂದು ಹೇಳಬಹುದು. ಆದರೆ ಕೆಲವು ಉತ್ಸವಗಳ ಕಟ್ಟುವ ರಥಗಳಿಗೆ ಮಾತ್ರ ಸುಂದರವಾದ ಚಿತ್ರಪಟಗಳನ್ನು ಹೊಂದಿಸುವುದರ ಮೂಲಕ ಅಥವಾ ದೊಡ್ಡ ದೊಡ್ಡ

ಭಾವಚಿತ್ರಗಳನ್ನು ಜೋಡಿಸುವುದರ ಮೂಲಕ ಅಧಿಷ್ಠಾನ ಭಾಗವನ್ನು ಸುಂದರಗೊಳಿಸುವರು. ಈ ರೀತಿಯಾಗಿ ತಯಾರಿಸಲಾಗುವ ಕಟ್ಟುವ ರಥವನ್ನು ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ಜಾತ್ರೆ ಹಾಗೂ ಗುಲಬುರ್ಗಾದ ಶರಣ ಬಸವೇಶ್ವರ ಜಾತ್ರೆಯ ಸಂದರ್ಭದಲ್ಲಿ ಮಾತ್ರ ಕಾಣಬಹುದು. ಉಳಿದ ಯಾವದೇ ಪ್ರದೇಶದ ಕಟ್ಟುವ ರಥಗಳಿಗೆ ಅಧಿಷ್ಠಾನ ಭಾಗದಲ್ಲಿ ಯಾವುದೇ ರೀತಿಯ ಶಿಲ್ಪ ಹಾಗೂ ಚಕ್ರಗಳನ್ನು ಅಳವಡಿಸುವುದು ಕಂಡುಬರುವುದಿಲ್ಲ.

೨. ತಟ್ಟಿಯ ರಥಗಳ ಅಧಿಷ್ಠಾನ ಭಾಗ : ತಟ್ಟಿಯ ರಥಗಳು ದಕ್ಷಿಣ ಕರ್ನಾಟಕದ ಹಲವು ಭಾಗಗಳ ಉತ್ಸವದ ಸಂದರ್ಭದಲ್ಲಿ ಕಾಣಸಿಗುತ್ತವೆ. ಈ ರಥಗಳೂ ಸಹ ಕಟ್ಟುವ ರಥಗಳಂತೆಯೇ ಅಲ್ಪಾವಧಿಯಲ್ಲಿಯೇ ನಿರ್ಮಾಣಗೊಳ್ಳುತ್ತವೆ. ಈ ರಥಗಳಿಗೆ ಕೆಳಭಾಗದಿಂದ ಶಿಖರ ಭಾಗದವರೆಗೆ ಅನೇಕ ಸುಂದರ ಚಿತ್ರಗಾರಿಕೆಯನ್ನು ಹೊಂದಿದ ತಟ್ಟಿಗಳನ್ನು ಹೆಣೆಯಲಾಗುತ್ತದೆ. ಉತ್ಸವದ ಮೂರ್ತಿಯನ್ನಿಡುವ ಭಾಗದ ಕೆಳಭಾಗದ ಅಂತಸ್ತಿನ ಸುತ್ತಲೂ ಸಹ ಪೌರಾಣಿಕ ಸನ್ನಿವೇಶದ ಅಥವಾ ವಿವಿಧ ದೇವಾನು ದೇವತೆಯರ ಚಿತ್ರಗಳು ರಚಿಸಲ್ಪಟ್ಟ ತಟ್ಟಿಗಳನ್ನು ಕಟ್ಟಿರುತ್ತಾರೆ. ಇವುಗಳು ನೋಡಲು ಕಬ್ಬಿಣದ ಅಂಕಣ ರಥಗಳನ್ನು ನೆನಪಿಗೆ ತರುತ್ತವೆ. ಕಬ್ಬಿಣದ ಅಂಕಣ ರಥಗಳಲ್ಲಿ ಯಾವ ರೀತಿಯಲ್ಲಿ ಅಧಿಷ್ಠಾನ ಭಾಗವು ಚಿತ್ರ ವಿನ್ಯಾಸಗಳಿಂದ ಸುಂದರಗೊಂಡಿರುತ್ತದೆಯೋ ಅದೇ ರೀತಿಯಲ್ಲಿ ತಟ್ಟಿಯ ರಥದ ಅಧಿಷ್ಠಾನ ಭಾಗವು ಸಹ ಕಣ್ಮನ ಸೆಳೆಯುವಂತಿರುತ್ತದೆ.

೩. ತೆಪ್ಪದ ರಥಗಳ ಅಧಿಷ್ಠಾನ ಭಾಗ : ತೆಪ್ಪದ ರಥಗಳಿಗೆ ಅಧಿಷ್ಠಾನ ಭಾಗವು ಇರುವುದಿಲ್ಲ.


೪. ಹೂವಿನ ರಥಗಳ ಅಧಿಷ್ಠಾನ ಭಾಗ : ಹೂವಿನ ರಥಗಳಲ್ಲಿಯೂ ಅಧಿಷ್ಠಾನ ಭಾಗವು ಇರುವುದಿಲ್ಲ.

ಡ. ಶಿಲಾ ಮಾಧ್ಯಮ ರಥಗಳ ಅಧಿಷ್ಠಾನ ಭಾಗ :

ಹಂಪೆಯ ವಿಜಯವಿಠಲ ಮಂದಿರದ ಆವರಣದಲ್ಲಿರುವ ಸುಪ್ರಸಿದ್ಧವಾದ ಶಿಲೆಯ ರಥದಲ್ಲಿ ಅಧಿಷ್ಠಾನ ಭಾಗವನ್ನು ಕಾಣಬಹುದು. ಅಡಿಪಾಯ ಭಾಗದ ನಂತರ ಉಪಾನ, ಪದ್ಮ ಕುಮುದ ವೇದಿಕೆಯನ್ನು ಹೊಂದಿದೆ. ಪದ್ಮವು ಹೂವಿನ ಎಸಳುಗಳಂತೆ ವಿನ್ಯಾಸಗಳನ್ನು ಹೊಂದಿದೆ. ಉಪಾನದಿಂದ ಕುಮುದದವರೆಗಿನ ಭಾಗದಲ್ಲಿ ರಥದ ನಾಲ್ಕೂ ಬಾಹುಗಳ ಮಧ್ಯಭಾಗದಲ್ಲಿ ಮೂರು ಜನ ಕುಬ್ಜರಿರುವ ಶಿಲ್ಪವಿನ್ಯಾಸಗಳನ್ನು ರಚಿಸಲಾಗಿದೆ. ಉಪಾನದ ಮೇಲೆ ಸುರುಳಿಯಾಕಾರದ ಹಾಗೂ ಬಳ್ಳಿಯಾಕಾರದ ನಕ್ಷೆಗಳ ಕೆತ್ತನೆ ಮಾಡಲಾಗಿದೆ. ಕುಬ್ಜಗಣಗಳಿರುವ ಶಿಲ್ಪಗಳು, ಕಂಬಗಳು ಹಾಗೂ ಮಂಟಪಗಳ ಮೇಲೆ ಹೂವಿನಾಕಾರದ ನಕ್ಷೆಗಳನ್ನು ರಚಿಸಲಾಗಿದೆ. ಈ ಭಾಗದ ಎರಡು ಕಡೆಗಳಲ್ಲಿ ಉಗ್ರ ನರಸಿಂಹನ ಶಿಲ್ಪ ಕೆತ್ತನೆ ಮಾಡಲಾಗಿದೆ. ಈ ಶಿಲಾ ರಥದ ಅಧಿಷ್ಠಾನ ಭಾಗವು ಸುಂದರವಾಗಿ ಕಲಾತ್ಮಕವಾಗಿ ಕಂಡುಬರುತ್ತದೆ.

III. ಮಂಟಪ ಭಾಗ :

ರಥದ ಅಧಿಷ್ಠಾನ ಭಾಗದ ನಂತರ ಮುಂದುವರೆಯುವ ಭಾಗವೇ ಮಂಟಪ ಭಾಗ . ಈ ಮಂಟಪ ಭಾಗವನ್ನು ರಥದ ಹೃದಯ ಭಾಗವೆಂದು ಹೇಳಬಹುದು. ರಥದ ಮಂಟಪ ಭಾಗವು,



ಮಂಟಪ ಭಾಗ
ಕಾಷ್ಠ ಮಾಧ್ಯಮದ ರಥಗಳ ಮಂಟಪ ಭಾಗ
ಗಡ್ಡಿ ರಥಗಳು
ಅಂಕಣ ರಥಗಳು
ಲೋಹ ಮಾಧ್ಯಮದ ರಥಗಳ ಮಂಟಪ ಭಾಗ
ಕಬ್ಬಿಣ ರಥ
ಗಡ್ಡಿ ರಥ
ಅಂಕಣ ರಥ
ಬೆಳ್ಳಿ ರಥ
ಚಿನ್ನದ ರಥ
ಸಂಕೀರ್ಣ ಮಾಧ್ಯಮದ ರಥದ ಮಂಟಪ ಭಾಗ
ಕಟ್ಟುವ ರಥಗಳು
ತಟ್ಟಿ ರಥಗಳು
ತೆಪ್ಪದ ರಥಗಳು
ಹೂವಿನ ರಥಗಳು
ಶಿಲಾ ಮಾಧ್ಯಮದ ರಥದ ಮಂಟಪ ಭಾಗ
ಗೋಪುರ ಭಾಗ
ಕಾಷ್ಠ ಮಾಧ್ಯಮದ ರಥಗಳ ಗೋಪುರ ಭಾಗ
ಗಡ್ಡಿ ರಥಗಳು
ಅಂಕಣ ರಥಗಳು
ಲೋಹ ಮಾಧ್ಯಮದ ರಥಗಳ ಗೋಪುರ ಭಾಗ
ಕಬ್ಬಿಣ ರಥ
ಗಡ್ಡಿ ರಥ
ಅಂಕಣ ರಥ
ಬೆಳ್ಳಿ ರಥ
ಚಿನ್ನದ ರಥ
ಸಂಕೀರ್ಣ ಮಾಧ್ಯಮದ ರಥದ ಗೋಪುರ ಭಾಗ
ಕಟ್ಟುವ ರಥಗಳು
ತಟ್ಟಿ ರಥಗಳು
ತೆಪ್ಪದ ರಥಗಳು
ಹೂವಿನ ರಥಗಳು
ಶಿಲಾ ಮಾಧ್ಯಮದ ರಥದ ಗೋಪುರ ಭಾಗ

ದೇವಾಲಯದ ಗರ್ಭಗೃಹವನ್ನು ಪ್ರನಿಧಿಸುತ್ತದೆ. ಇದು ಸಾಂಪ್ರದಾಯಿಕ ಚೌಕು, ವರ್ತುಳ, ಅಷ್ಟಮ, ನಕ್ಷತ್ರ ಹಾಗೂ ಬಹುಕೋನ ವಿನ್ಯಾಸಗಳಲ್ಲಿ ನಿರ್ಮಾಣಗೊಂಡಿರುತ್ತದೆ.

'ಮಾನಸಾರ'ದಲ್ಲಿ ಹಲವಾರು ವಿಧದ ಮುಖ ಮಂಟಪಗಳನ್ನು ಹೆಸರಿಸಲಾಗಿದೆ. ನಭಸವನ ಭದ್ರಕ, ಪ್ರಭಂಜನ ಭದ್ರಕ, ನಿಮಾತ ಭದ್ರಕ, ಪವನ ಭದ್ರಕ, ಪ್ರಸಾದ ಭದ್ರಕ, ಇಂದ್ರ ಭದ್ರಕ ಹಾಗೂ ಅನಿಲ ಭದ್ರಕಗಳೆಂದು ವಿವಿಧ ಮುಖಮಂಟಪಗಳಿವೆ[೨೧]. ರಥದ ಮಂಟಪವು ಸುಂದರವಾದ ಕಮಾನುಗಳು ಹಾಗೂ ಕಲಾತ್ಮಕ ಕಂಬಗಳನ್ನು ಒಳಗೊಂಡಿರುತ್ತದೆ. ಮಂಟಪದ ಒಳಭಾಗದಲ್ಲಿ ಉತ್ಸವ ಮೂರ್ತಿಯನ್ನಿಡಲು ಚಿತ್ತಾಕರ್ಷಕ ಪ್ರಭಾವಳಿಯನ್ನು ಹೊಂದಿದ ಪೀಠವನ್ನು ರಚಿಸಿಡಲಾಗಿರುತ್ತದೆ. ಕೆಲವು ರಥಗಳಲ್ಲಿ ಉತ್ಸವ ಮೂರ್ತಿಯನ್ನಿಡಲು ಮಂಟಪ ಭಾಗದ ಒಳಗಡೆಗೆ ಮತ್ತೊಂದು ಸಣ್ಣ ಮಂಟಪವನ್ನು ನಿರ್ಮಿಸಿರುವುದು ಕಂಡುಬರುತ್ತದೆ.

ಮಂಟಪ ಭಾಗವು ಅಧಿಷ್ಠಾನ ಭಾಗದ ವಿನ್ಯಾಸದ ಆಧಾರದ ಮೇಲೆ ರೂಪಗೊಳ್ಳುತ್ತದೆ. ಬಹುಕೋನ ವಿನ್ಯಾಸದ ಮಂಟಪಗಳು ಹೆಚ್ಚು ಸಂಖ್ಯೆಯಲ್ಲಿ ಕಂಬ ಹಾಗೂ ಕಮಾನುಗಳನ್ನು ಹೊಂದಿ ಕಲಾತ್ಮಕವಾಗಿ ರೂಪಗೊಂಡಿರುತ್ತವೆ. ಮಂಟಪದ ಮೇಲ್ಭಾಗದ ತುದಿಯಲ್ಲಿ ಸ್ವಲ್ಪ ಹೊರಚಾಚಿದ ಸೂರಪಟ್ಟಿಯು ಇರುತ್ತದೆ.ಕೆಲವು ರಥಗಳ ಮಂಟಪ ಭಾಗಗಳು ಸ್ಥಾಯಿಯಾಗಿರುತ್ತವೆ. ಇನ್ನೂ ಕೆಲವು ರಥಗಳಲ್ಲಿ ಉತ್ಸವದ ಸಂದರ್ಭದಲ್ಲಿ ಮಂಟಪ ಭಾಗವನ್ನು ಕಟ್ಟಿಕೊಳ್ಳಬೇಕಾಗುವುದು. ಮಂಟಪ ಬಾಗದ ಸೂಕ್ತ ಸ್ಥಳಗಳಲ್ಲಿ ವಿವಿಧ ಶಿಲ್ಪವಿನ್ಯಾಸಗಳನ್ನು ರಚಿಸಲಾಗಿರುತ್ತದೆ. ಕೆಲವು ರಥಗಳಿಗೆ ಬಿಡಿ ಮೂರ್ತಿಶಿಲ್ಪಗಳನ್ನು ಉತ್ಸವದ ಸಂದರ್ಭದಲ್ಲಿ ಅಳವಡಿಸಲಾಗುತ್ತದೆ.

ಹೀಗೆ ನಿರ್ಮಾಣಗೊಂಡ ರಥದ ಮಂಟಪ ಭಾಗವು ಕರ್ನಾಟಕದ ವಿವಿಧ ಪ್ರದೇಶಗಳ ವಿವಿಧ ಮಾಧ್ಯಮದ ರಥಗಳಲ್ಲಿ ಯಾವ ಯಾವ ರೀತಿಯ ವಿನ್ಯಾಸಗಳಲ್ಲಿ ರಚನೆಗೊಂಡಿವೆ ಎಂಬುದನ್ನು ಚರ್ಚಿಸುವಾ.

ರಥಗಳ ಮಾಧ್ಯಮಗಳಿಗೆ ಅನುಗುಣವಾಗಿ ವಿವಿಧ ಮಾಧ್ಯಮದ ರಥಗಳ ಮಂಟಪ ಭಾಗಗಳನ್ನು ಈ ರೀತಿಯಲ್ಲಿ ವಿಂಗಡಿಸಿಕೊಂಡು ಅಧ್ಯಯನ ಮಾಡೋಣ.

ಅ. ಕಾಷ್ಠ ಮಾಧ್ಯಮ ರಥಗಳ ಮಂಟಪ ಭಾಗ.

ಬ. ಲೋಹ ಮಾದ್ಯಮ ರಥಗಳ ಮಂಟಪ ಭಾಗ.

ಕ. ಸಂಕೀರ್ಣ ಮಾಧ್ಯಮ ರಥಗಳ ಮಂಟಪ ಭಾಗ.

ಡ. ಶಿಲಾ ಮಾಧ್ಯಮ ರಥಗಳ ಮಂಟಪ ಭಾಗ.

ಅ. ಕಾಷ್ಠ ಮಾಧ್ಯಮ ರಥಗಳ ಮಂಟಪ ಭಾಗ :

ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಹಾಗೂ ಅಂಕಣ ರಥಗಳ ಮಂಟಪ ಭಾಗಗಳನ್ನು ಅಭ್ಯಸಿಸಲು ಈ ರೀತಿಯ ವಿಂಗಡಣೆ ಮಾಡಿಕೊಳ್ಳಬಹುದು.

೨೧."ದೇಗುಲ ರಥ ಶಿಲ್ಪ" ದ್ರುವರಾಜ ನಾ. ಗದಗಕರ, ಪು.ಸಂ.೨೩, ೧೯೯೯,

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಮಂಟಪ ಭಾಗ.

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಮಂಟಪ ಭಾಗ.

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಮಂಟಪ ಭಾಗ : ಕಾಷ್ಠ ಮಾದ್ಯಮದ ಗಡ್ಡಿ ರಥಗಳ ಮಂಟಪ ಭಾಗಗಳು ಕೆಲವು ರಥಗಳಲ್ಲಿ ಅಧಿಷ್ಠಾನ ಭಾಗದ ಮೇಲೆ ಸ್ಥಿರವಾಗಿರುವುದು ಕಂಡುಬಂದರೆ, ಇನ್ನೂ ಕೆಲವು ರಥಗಳಲ್ಲಿ ಮಂಟಪ ಭಾಗವನ್ನು ಉತ್ಸವದ ಸಂಧರ್ಭದಲ್ಲಿ ಕಟ್ಟಿಕೊಳ್ಳಲಾಗುವುದು. ಅವುಗಳನ್ನು ಸ್ಥಿರ ಮಂಟಪ ಭಾಗ ಹಾಗೂ ಚರ ಮಂಟಪ ಭಾಗಗಳೆಂದು ಹೆಸರಿಸಬಹುದು.

ಕೊಪ್ಪಳ ಜಿಲ್ಲೆಯ ಹುಲಗಿಯ ಹುಲಿಗೆಮ್ಮನ ರಥ ಹಾಗೂ ಗವಿಸಿದ್ಧೇಶ್ವರ ಮಠದ ರಥಗಳು ಅಷ್ಟಭುಜಾಕೃತಿಯನ್ನು ಹೊಂದಿದ ಎಂಟು ಕಮಾನುಗಳನ್ನು ಹಾಗೂ ಕಲಾತ್ಮಕ ಕಂಬಗಳನ್ನು ಹೊಂದಿದ ಸ್ಥಿರ ಮಂಟಪ ಭಾಗವನ್ನು ಹೊಂದಿವೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮುರಕಿ ಬಾವಿಯ ಶ್ರೀ ಸಿದ್ಧಾರೂಢರ ರಥ, ಬೈಲಹೊಂಗಲದ ಶ್ರೀ ಬಸವೇಶ್ವರ ರಥ, ಬಾಗಲಕೋಟ ಜಿಲ್ಲೆ ಗುಳೇದಗುಡ್ಡದ ಶ್ರೀ ಕೋಟೆ ಹುಚ್ಚೇಶ್ವರ ರಥ, ಮುಚಖಂಡಿಯ ಶ್ರೀ ವೀರಭದ್ರೇಶ್ವರ ರಥ, ಶಿರೂರದ ಶ್ರೀ ಸಿದ್ಧೇಶ್ವರ ರಥ, ಮುಧೋಳ ತಾಲೂಕಿನ ಮಹಾಲಿಂಗಪೂರದ ಶ್ರೀ ಮಹಾಲಿಂಗೇಶ್ವರ ರಥ, ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ವರವಿಯ ಶ್ರೀ ಮೌನೇಶ್ವರ ರಥ, ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ ರಥ, ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಶ್ರೀ ಸೋಮೇಶ್ವರ ರಥ, ಶಿರಹಟ್ಟಿಯ ಶ್ರೀ ಫಕೀರೇಶ್ವರ ಸಂಸ್ಥಾನ ಮಠದ ರಥ, ಬಾಗಲಕೋಟ ಜಿಲ್ಲೆ ಹುನಗುಂದ ತಾಲೂಕಿನ ಇಳಕಲದ ಶ್ರೀ ವಿಜಯ ಮಹಾಂತೇಶ್ವರ ರಥ, ಹುನಗುಂದದ ಶ್ರೀ ವೀರಭದ್ರೇಶ್ವರ ರಥ, ಬಿಜಾಪೂರ ಜಿಲ್ಲೆ ಮದ್ದೇಬಿಹಾಳ ತಾಲೂಕಿನ ಜಾಯವಾಡಲಗಿಯ ಶ್ರೀ ಸೋಮನಾಥೇಶ್ವರ ರಥ, ಈ ಎಲ್ಲ ರಥಗಳು ಅಷ್ಟಭುಜಾಕೃತಿಯನ್ನು ಹೊಂದಿದ ಎಂಟು ಕಮಾನುಗಳು ಹಾಗೂ ಕಲಾತ್ಮಕ ಕಂಬಗಳನ್ನೊಳಗೊಂಡ ಮಂಟಪ ಭಾಗಗಳನ್ನು ಹೊಂದಿವೆ.

ಬಾದಾಮಿಯ ಶ್ರೀ ಬನಶಂಕರಿಯ ರಥ, ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಇಂಚಲದ ಶ್ರೀ ಶಿವಯೋಗೀಶ್ವರ ಸಂಸ್ಥಾನ ಮಠದ ರಥ, ಬಾಗಲಕೋಟ ಜಿಲ್ಲೆ ಗುಳೇದಗುಡ್ಡದ ಶ್ರೀ ಸಂಗಮೇಶ್ವರ ರಥ ಹಾಗೂ ಶಿವಪ್ಪಯ್ಯನ ರಥ, ಗುಲಬುರ್ಗಾ ಜಿಲ್ಲೆ ಜೇವರಗಿ ತಾಲೂಕಿನ ಜೇರಟಗಿಯ ಶ್ರೀ ಶರಣ ಬಸವೇಶ್ವರ ರಥ, ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಢವಳಗಿಯ ಶ್ರೀ ಮಡಿವಾಳೇಶ್ವರ ರಥ, ಸಿಂದಗಿ ತಾಲೂಕಿನ ಗೋಲಗೇರಿಯ ಗೊಲ್ಲಾಳೇಶ್ವರ ರಥ, ಚಾಂದಕೋಟೆಯ ಶ್ರೀ ಬಸವೇಶ್ವರ ರಥ, ಬಾಗಲಕೋಟ ಜಿಲ್ಲೆ ಕೂಡಲ ಸಂಗಮದ ಶ್ರೀ ಸಂಗಮನಾಥನ ರಥ ಹೀಗೆ ಇನ್ನೂ ಹಲವಾರು ರಥಗಳ ಮಂಟಪ ಭಾಗಗಳು ಸ್ಥಿರವಾಗಿದ್ದು, ಹನ್ನೆರಡು ಕಮಾನುಗಳು ಹಾಗೂ ಸುಂದರವಾದ ಕಂಬಗಳನ್ನು ಹೊಂದಿವೆ. ಈ ಮಂಟಪಗಳು ಬಹುಕೋನ ಆಕೃತಿಗಳಲ್ಲಿ ರಚನೆಗೊಂಡಿವೆ. ಮಂಟಪಗಳ ಸೂರ ಪಟ್ಟಿಯ ಭಾಗ ಮಾತ್ರ ಅಷ್ಟಭುಜಾಕೃತಿಯನ್ನು ಹೊಂದಿದೆ.

ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ ರಥ, ಬಾಗಲಕೋಟ ಜಿಲ್ಲೆ ಜಮಖಂಡಿ

ತಾಲೂಕಿನ ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ರಥ, ರಾಮತೀರ್ಥದ ಶ್ರೀ ಕಾಡಸಿದ್ಧೇಶ್ವರ ರಥ, ನಂಜನಗೂಡಿನ ಶ್ರೀ ನಂಜುಂಡೇಶ್ವರ ದೇವಸ್ಥಾನದ ರಥಗಳು. ಈ ಎಲ್ಲ ರಥಗಳು ಚತುರ್ಭುಜಾಕೃತಿಯನ್ನು ಹೊಂದಿದ ಸ್ಥಿರ ಮಂಟಪ ಭಾಗಗಳನ್ನು ಹೊಂದಿವೆ. ಇವುಗಳಲ್ಲಿ ನಂಜನಗೂಡಿನ ಶ್ರೀಕಂಠೇಶ್ವರ ಸ್ವಾಮಿಯ ರಥವು ಚತುರ್ಭುಜಾಕೃತಿಯಲ್ಲಿ ನಿರ್ಮಾಣಗೊಂಡ ಜೋಡು ಮಂಟಪಗಳನ್ನು ಹೊಂದಿದೆ. ಈ ಎಲ್ಲ ರಥಗಳು ನಾಲ್ಕು ಕಮಾನುಗಳನ್ನು ಹೊಂದಿವೆ.

ಹೀಗೆಯೇ ನಾಡಿನ ಇನ್ನೂ ಹಲವಾರು ರಥಗಳು ಇದೇ ರೀತಿಯ ಸ್ಥಿರ ಮಂಟಪ ಭಾಗಗಳನ್ನು ಹೊಂದಿರುವವಲ್ಲದೆ, ಮಂಟಪ ಭಾಗದ ಕಮಾನುಗಳ ಹಾಗೂ ಕಂಬಗಳ ಮೇಲೆ ಸುರುಳಿ ನಕ್ಷೆ ಹೂವಿನಾಕಾರದ ನಕ್ಷೆ, ಕುದುರೆ ಬಾಲದಂತಹ ಹಾಗೂ ಹಕ್ಕಿಗಳ ರೆಕ್ಕೆ ಹಾಗೂ ಮುಖವಿನ್ಯಾಸದ ನಕ್ಷೆಗಳನ್ನು ಹೊಂದಿವೆ. ಸುಂದರ ಕುಸುರಿ ಕೆತ್ತನೆಯಿಂದ ರಚಿಸಿದ ನಕ್ಷೆಗಳಿಂದ ಮಂಟಪ ಭಾಗಗಳು ತುಂಬ ಸುಂದರವಾಗಿ ಆಕರ್ಷಕವಾಗಿ ಕಂಡುಬರುತ್ತವೆ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ರಥ, ಯಲಬುರ್ಗಾ ತಾಲೂಕಿನ ಕುಕನೂರದ ಮಹಾಮಾಯಿಯ ರಥ, ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ರಥ ಹಾಗೂ ಸಿಂಧನೂರು ತಾಲೂಕಿನ ಬಳಗಾನೂರದ ಆಂಜನೇಯನ ರಥ, ಯಲಬುರ್ಗಾ ತಾಲೂಕು ಗುದ್ನೆಪ್ಪನ ಮಠದ ರಥ, ಬಳ್ಳಾರಿ ಜಿಲ್ಲೆ ಶಿರಗುಪ್ಪದ ಶಂಭುಲಿಂಗನ ರಥ, ಹೊಸಮೇಪೆ ತಾಲೂಕಿನ ಮರೆಮ್ಮನಹಳ್ಳಿಯ ರಾಮಾಂಜನೇಯ ರಥ, ಧರ್ಮಸ್ಥಳದ ವಸ್ತುಸಂಗ್ರಹಾಲಯದ ಶ್ರೀ ವೆಂಕಟರಮಣ ಸ್ವಾಮಿ ರಥ, ಶ್ರೀ ಕೋಟೆಮಲ್ಲೇಶ್ವರ ರಥ, ಶ್ರೀ ಗಂಗಾಧರೇಶ್ವರ ಸ್ವಾಮಿ ರಥ, ಶ್ರೀರಂಗಪಟ್ಟಣದ ಶ್ರಿ ರಂಗನಾಥನ ರಥ, ಬೇಲೂರಿನ ಶ್ರೀ ಚನ್ನಕೇಶವನ ರಥ, ಹೀಗೆ ಇನ್ನೂ ಇಂತಹ ಅನೇಕ ಗಡ್ಡಿ ರಥಗಳು ಚತುರ್ಭುಜಾಕೃತಿಯ ಇಲ್ಲವೆ ವರ್ತುಳಾಕಾರದ ಹಾಗೂ ಬಹುಕೋನ ವಿನ್ಯಾಸಗಳ ಚರ ಮಂಟಪ ಭಾಗಗಳನ್ನು ಹೊಂದಿರುತ್ತವೆ. ಈ ಚರ ಮಂಟಪ ಭಾಗಗಳಲ್ಲಿ ಸಿಂಹ, ಆನೆ, ಕುದುರೆ, ನವಿಲು, ಗಿಳಿ, ಗರುಡ ಇಂತಹ ಅನೇಕ ಪ್ರಾಣಿ ಪಕ್ಷಿಗಳು ಹಾಗೂ ಹಲವಾರು ದೇವಾನುದೇವತೆಗಳ ಶಿಲ್ಪಗಳನ್ನು ಅಳವಡಿಸಿರುವುದನ್ನು ಉತ್ಸವದ ಸಂದರ್ಭದಲ್ಲಿ ಕಾಣಬಹುದು. ಇದಲ್ಲದೆ ಕಟ್ಟುಗಳಿಂದ ಅಥವಾ ಹಾರ್ಡ್‌ಭೋರ್ಡ್‌ಗಳಿಂದ ತಯಾರಿಸಿದ ಕಂಬ ಹಾಗೂ ಕಮಾನುಗಳ ಮೇಲೆ ಹೂಬಳ್ಳಿಯಾಕಾರದ, ಸುರುಳಿಯಾಕಾರದ, ಬಿಡಿಬಿಡಿ ಎಲೆಯಾಕಾರದ ಹಾಗೂ ಅನೇಕ ಜ್ಯಾಮಿತಿಕ ಆಕೃತಿಯುಳ್ಳ ಸುಂದರವಾದ ನಕ್ಷೆಗಳನ್ನು ವಿವಿಧ ಬಣ್ಣಗಳಿಂದ ಚಿತ್ರಿಸಿರುವುದು ಕಂಡುಬರುತ್ತದೆ. ಸ್ಥಿರ ಮಂಟಪಗಳ ಮೇಲ್ಭಾಗದ ಸೂರ ಪಟ್ಟಿಯ ಮೇಲೆ ಸಣ್ಣ ಸಣ್ಣ ಹಿತ್ತಾಳೆಯ ಘಂಟೆಗಳನ್ನು ಸಾಲುಸಾಲಾಗಿ ಜೋಡಿಸಿರುವಂತೆ ಚರ ಮಂಟಪಗಳ ಮೇಲ್ಭಾಗದಲ್ಲಿಯೂ ಅಲ್ಲಲ್ಲಿ ಕೆಲವು ಹಿತ್ತಾಳೆಯ ಘಂಟೆಗಳನ್ನು ಅಳವಡಿಸಿರುವುದನ್ನು ಉತ್ಸವದ ಸಂದರ್ಭದಲ್ಲಿ ಕಾಣಬಹುದು.

ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಸ್ಥಿರ ಹಾಗೂ ಚರ ಮಂಟಪ ಭಾಗಗಳಲ್ಲಿ ಆಕರ್ಷಕವಾದ ಪ್ರಭಾವಳಿಯನ್ನು ಹೊಂದಿದ ಪೀಠವನ್ನು ಅಳವಡಿಸಿರುವುದು ಸಾಮಾನ್ಯವಾಗಿ ಎಲ್ಲ ರಥಗಳಲ್ಲಿ ಕಂಡುಬರುತ್ತದೆ.


ರಥಗಳ ಮಂಟಪ ಭಾಗಗಳು



ಶ್ರೀ ಬಸವೇಶ್ವರ ರಥ, ನಾಲವಾಡಿ
ಜಿ - ಧಾರವಾಡ



ಶ್ರೀ ಶಂಕರಲಿಂಗ ರಥ, ಸಂಕೇಶ್ವರ
ಜಿ - ಬೆಳಗಾಂವ



ಶ್ರೀ ಶರಣಬಸವೇಶ್ವರ ರಥ, ಚೇರಟಗಿ
ಜಿ - ಗುಲಬರ್ಗಾ



ಶ್ರೀ ವೀರಭದ್ರನ ರಥ, ಹಲಕರ್ಟಿ
ಜಿ - ಗುಲಬರ್ಗಾ



ಶ್ರೀ ಸಿದ್ದೇಶ್ವರ ರಥ, ಸಾವಳಗಿ
ಜಿ - ಬಾಗಲಕೋಟ



ಶ್ರೀ ಶಿವಪ್ಪಯ್ಯನ ರಥ, ಗುಳೇದಗುಡ್ಡ
ಜಿ - ಬಾಗಲಕೋಟ

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಮಂಟಪ ಭಾಗ : ಕಾಷ್ಠ ಮಾಧ್ಯಮದ ಅಂಕಣ ರಥಗಳ ಮಂಟಪ ಭಾಗಗಳು ಚತುರ್ಭುಜಾಕೃತಿಯಲ್ಲಿ ಹಾಗೂ ಕೆಲವು ರಥಗಳಲ್ಲಿ ಅಷ್ಟಭುಜಾಕೃತಿಯಲ್ಲಿ ಕಂಡುಬರುತ್ತವೆ.

ಬೆಳಗಾವಿ ಜಿಲ್ಲೆ ಗೋಕಾಕದ ಶ್ರೀ ಬಸವಣ್ಣನ ರಥ, ಶ್ರೀ ವೆಂಕಟೇಶ್ವರ ರಥ, ಬಿಜಾಪೂರ ಜಿಲ್ಲೆ ಬಸವನ ಬಾಗೇವಾಡಿಯ ಯರನಾಳದ ಶ್ರೀ ಶಿವಲಿಂಗೇಶ್ವರ ರಥ, ಕೇಶಾಪುರದ ಶ್ರೀ ಬಂಡೆಮ್ಮನ ರಥ, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕಿನ ರ‍್ಯಾವಕಾಕಿಯ ಶ್ರೀ ಬಸವಣ್ಣನ ರಥ ಈ ಎಲ್ಲ ರಥಗಳು ಅಷ್ಟಭುಜಾಕೃತಿಯ ಸುಂದರವಾದ ಮಂಟಪ ಭಾಗವನ್ನು ಹೊಂದಿವೆ. ಎಂಟು ಕಮಾನುಗಳನ್ನು ಹೊಂದಿದ ಮಂಟಪ ಭಾಗದಲ್ಲಿ ಅನೇಕ ಕಂಬಗಳನ್ನು ಕಾಣಬಹುದು ಈ ರಥಗಳ ಮಂಟಪ ಭಾಗದ ಮೇಲೆ ಯಾವುದೇ ರೀತಿಯ ಶಿಲ್ಪ ವಿನ್ಯಾಸಗಳು ಕಂಡುಬರುವುದಿಲ್ಲ . ಆದರೆ ಅಲ್ಲಲ್ಲಿ ಕಮಾನುಗಳ ಮೇಲೆ ಸುರುಳಿಯಾಕಾರದ ಅಥವಾ ಹೂಬಳ್ಳಿಯಾಕಾರದ ಉಬ್ಬುಶಿಲ್ಪಗಳನ್ನು ಕಾಣಬಹುದು. ಮಂಟಪದ ಮಧ್ಯಭಾಗದಲ್ಲಿ ಕಾಣುವ ಪೀಠಕ್ಕೆ ಹಾಗೂ ಕಮಾನು ಹಾಗೂ ಕಂಬಗಳಿಗೆ ವಿವಿಧ ಬಣ್ಣಗಳಿಂದ ನಕ್ಷೆಗಳನ್ನು ಬರೆದಿರುವುದು ಕಂಡು ಬರುತ್ತದೆ.

ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ ಗೊಡಚಿನಮಲ್ಕಿಯ ಶ್ರೀ ಲಕ್ಷ್ಮೀದೇವಿ ರಥ, ಹುಕ್ಕೇರಿ ತಾಲೂಕಿನ ಸಂಗನಕಟ್ಟಿಯ ಶ್ರೀ ಬಸವೇಶ್ವರ ರಥ, ಬೈಲಹೊಂಗಲ ತಾಲೂಕು ಪಟ್ಯಾಳದ ಬಸವಣ್ಣನ ರಥ, ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಬಿಕ್ಕಳಕಿಯ ಶ್ರೀ ಶಿವಲಿಂಗೇಶ್ವರ ರಥ, ರಾಯಚೂರು ಜಿಲ್ಲೆ ಮಾನ್ವಿ ತಾಲೂಕು ಅರೋಲಿಯ ಶ್ರೀ ಮಾರಮ್ಮನ ರಥ, ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಬಿಳೇಬಾವಿಯ ಶ್ರೀ ಸಿದ್ಧೇಶ್ವರ ರಥ ಹೀಗೆ ಇನ್ನೂ ಅನೇಕ ಕಾಷ್ಠ ಮಾಧ್ಯಮದ ಅಂಕಣ ರಥಗಳು ಚತುರ್ಭುಜಾಕೃತಿಯ ಮಂಟಪ ಭಾಗವನ್ನು ಹೊಂದಿವೆ.

ಪ್ರತಿಯೊಂದು ರಥದ ಮಂಟಪ ಭಾಗಗಳು ನಾಲ್ಕು ಕಮಾನುಗಳನ್ನು ಹಾಗೂ ವಿವಿಧ ವಿಧದ ವಿನ್ಯಾಸದ ಸುಂದರವಾದ ಕಂಬಗಳನ್ನು ಹೊಂದಿವೆ. ಈ ಎಲ್ಲ ರಥಗಳ ಮಂಟಪ ಭಾಗಗಳಲ್ಲಿರುವ ಕಂಬಗಳು ಹಾಗೂ ಕಮಾನುಗಳ ಮೇಲೆ ಸುರುಳಿಯಾಕಾರದ, ಹೂಬಳ್ಳಿಯಾಕಾರದ ಅಥವಾ ಜ್ಯಾಮಿತಿಯ ಆಕೃತಿಯುಳ್ಳ ಅಂಚುನಕ್ಷೆಗಳನ್ನು ಹಾಗೂ ತುಂಬುನಕ್ಷೆಗಳನ್ನು ಉಬ್ಬುಶಿಲ್ಪ ಕೆತ್ತನೆಯಲ್ಲಿ ರಚಿಸಿರುವುದು ಕಂಡುಬರುತ್ತದೆ. ಇದಲ್ಲದೆ ಈ ಎಲ್ಲ ರಥಗಳ ಕಂಬ ಹಾಗೂ ಕಮಾನುಗಳನ್ನು ವಿವಿಧ ಬಣ್ಣಗಳಿಂದ ರಚಿಸಲಾದ ನಕ್ಷೆಗಳಿಂದ ಆಕರ್ಷಕವಾಗಿ ಕಾಣುವಂತೆ ಮಾಡಿರುತ್ತಾರೆ.

ಕಾಷ್ಠ ಮಾಧ್ಯಮದ ಅಂಕಣ ರಥಗಳ ಮಂಟಪ ಭಾಗದ ಮಧ್ಯದಲ್ಲಿ ವಿವಿಧ ವಿನ್ಯಾಸಗಳಿರುವ ಆಕರ್ಷಕ ಪೀಠವನ್ನು ಅಳವಡಿಸಿರುತ್ತಾರೆ.

ಬ. ಲೋಹ ಮಾಧ್ಯಮ ರಥಗಳ ಮಂಟಪ ಭಾಗ :

ಲೋಹ ಮಾಧ್ಯಮದ ರಥಗಳ ಮಂಟಪ ಭಾಗಗಳು ಅಷ್ಟ ಭುಜಾಕೃತಿಯಲ್ಲಿ ಹಾಗೂ ಚತುರ್ಭುಜಾಕೃತಿಯಲ್ಲಿ ನಿರ್ಮಾಣಗೊಂಡಿರುವುದನ್ನು ಕಾಣುತ್ತೇವೆ. ಲೋಹ ಮಾಧ್ಯಮದ ಮಂಟಪ ಭಾಗಗಳ ಕುರಿತಾಗಿ ಚರ್ಚಿಸಲು ಈ ರೀತಿಯಲ್ಲಿ ವಿಂಗಡಣೆ ಮಾಡಿಕೊಳ್ಳೋಣ.

೧. ಕಬ್ಬಿಣ ರಥಗಳ ಮಂಟಪ ಭಾಗ.

೨. ಬೆಳ್ಳಿಯ ರಥಗಳ ಮಂಟಪ ಭಾಗ.

೩. ಚಿನ್ನದ ರಥಗಳ ಮಂಟಪ ಭಾಗ.

೧. ಕಬ್ಬಿಣ ರಥಗಳ ಮಂಟಪ ಭಾಗ : ಕಬ್ಬಿಣ ರಥಗಳಲ್ಲಿ ಕಬ್ಬಿಣದ ಗಡ್ಡಿ ರಥಗಳು ಹಾಗೂ ಅಂಕಣ ರಥಗಳನ್ನು ಕಾಣಬಹುದು. ಈ ಎರಡೂ ವಿಧದ ರಥಗಳ ಮಂಟಪ ಭಾಗಗಳ ಕುರಿತಾಗಿ ತಿಳಿಯಲು ಈ ರೀತಿಯಲ್ಲಿ ವಿಂಗಡಣೆ ಮಾಡಿಕೊಳ್ಳಬಹುದು.

i. ಕಬ್ಬಿಣದ ಗಡ್ಡಿ ರಥಗಳ ಮಂಟಪ ಭಾಗ.

ii. ಕಬ್ಬಿಣದ ಅಂಕಣ ರಥಗಳ ಮಂಟಪ ಭಾಗ.

i. ಕಬ್ಬಿಣದ ಗಡ್ಡಿ ರಥಗಳ ಮಂಟಪ ಭಾಗ : ಕಬ್ಬಿಣದ ಗಡ್ಡಿ ರಥಗಳ ಮಂಟಪ ಭಾಗಗಳು ಅಷ್ಟಭುಜಾಕೃತಿಗಳಲ್ಲಿ ಹಾಗೂ ಬಹುಭುಜಾಕೃತಿಗಳಲ್ಲಿ ಕಂಡುಬರುತ್ತವೆ.

ಗುಲಬುರ್ಗಾ ಜಿಲ್ಲೆ ಅಫಜಲಪೂರ ತಾಲೂಕಿನ ದೇಸಾಯಿ ಕಲ್ಲೂರದ ಶ್ರೀ ಮಲ್ಲಿಕಾರ್ಜುನ ರಥದ ಮಂಟಪ ಭಾಗವು ಬಹುಭುಜಾಕೃತಿಯಲ್ಲಿ ರಚನೆಗೊಂಡಿದೆ. ಮಂಟಪ ಭಾಗದಲ್ಲಿ ನಾಲ್ಕು ಸುಂದರವಾದ ಕಮಾನುಗಳನ್ನು ಕಾಣಬಹುದು. ಮಂಟಪದ ಸೂರಪಟ್ಟಿಯ ಕೆಳಭಾಗದಲ್ಲಿ ಬುಗುರೆಯಾಕಾರದ ಹದಿನಾರು ಕಬ್ಬಿಣದ ವಿನ್ಯಾಸಗಳನ್ನು ಜೋಡಿಸಿರುವರು. ಮಂಟಪ ಭಾಗದಲ್ಲಿ ಕಂಬಗಳಿಂದ ಕೇವಲ ಜಾಲರಿಯಂತೆ ಮಾಡಲಾದ ಪಟ್ಟಿಕೆಗಳನ್ನು ಅಳವಡಿಸಲಾಗಿದೆ. ಅಲ್ಲದೆ ಈ ಜಾಲರಿಯ ಆಕಾರಗಳಲ್ಲಿ ಕಬ್ಬಿಣದ ಪಟ್ಟಿಗಳಿಂದ ವಿವಿಧ ನಕ್ಷೆಗಳನ್ನು ರಚಿಸಲಾಗಿದೆ.

ಕೊಪ್ಪಳ ಜಿಲ್ಲೆ ಕುಷ್ಟಗಿಯ ಶ್ರೀ ಬತ್ತಿ ಬಸವೇಶ್ವರ ರಥ ಕೊಲಾರದ ಗಣಬಸವೇಶ್ವರ ರಥ, ಜಾಲವಾದಿಯ ಮುರುಘೇಂದ್ರ ಸ್ವಾಮಿ ರಥ, ಈ ಎಲ್ಲ ಕಬ್ಬಿಣದ ಗಡ್ಡಿ ರಥಗಳು ಅಷ್ಟಭುಜಾಕೃತಿಯನ್ನು ಹೊಂದಿದ ಮಂಟಪ ಭಗಗಳನ್ನು ಹೊಂದಿವೆ. ಈ ಎಲ್ಲ ರಥಗಳು ಕಬ್ಬಿಣದ ಕಂಬಗಳನ್ನು ಹಾಗೂ ಕಮಾನುಗಳನ್ನು ಹೊಂದಿವೆ. ಕಮಾನುಗಳ ಪಕ್ಕದಲ್ಲಿ ವಿವಿಧ ರೀತಿಯ ಕಬ್ಬಿಣದ ಛಡಿಗಳಿಂದ ತಂತಿಗಳಿಂದ ಹಾಗೂ ಶಳಿಗಳಿಂದ ವಿವಿಧ ಜ್ಯಾಮಿತಿಕ, ಹೂಬಳ್ಳಿಯಾಕಾರದ ಹಾಗೂ ಸುರುಳಿ ನಕ್ಷೆಯಾಕಾರದ ಆಕೃತಿಗಳನ್ನು ರಚಿಸಿರುವುದು ಕಂಡು ಬರುತ್ತದೆ. ಈ ಎಲ್ಲ ರಥಗಳ ಮಂಟಪ ಭಾಗದ ಮೇಲ್ಭಾಗದ ಸೂರಪಟ್ಟಿಯಲ್ಲಿ ತ್ರಿಕೋನಾಕಾರದ ಹಾಗೂ ಸುರುಳಿಯಾಕಾರದ ಜ್ಯಾಮಿತಿಕ ನಕ್ಷೆಗಳನ್ನೊಳಗೊಡ ಪಟ್ಟಿಕೆಗಳನ್ನು ಜೋಡಿಸಲಾಗಿದೆ.

ii. ಕಬ್ಬಿಣದ ಅಂಕಣ ರಥಗಳ ಮಂಟಪ ಭಾಗ : ಕಬ್ಬಿಣದ ಅಂಕಣ ರಥಗಳು ಅಡಿಪಾಯದಿಂದ ಗೋಪುರ ಭಾಗದವರೆಗೆ ಚತುರ್ಭುಜಾಕೃತಿಗಳಲ್ಲಿ ಅನೇಕ ಅಂತಸ್ತುಗಳಲ್ಲಿ ನಿರ್ಮಾಣಗೊಂಡಿರುತ್ತವೆ. ಉತ್ಸವದ ಸಂದರ್ಭದಲ್ಲಿ ಉತ್ಸವ ಮೂರ್ತಿಯನ್ನು ಪ್ರತಿಷ್ಠಾಪಿಸುವ ರಥದ ಭಾಗವನ್ನೇ ಈ ರಥಗಳ ಮಂಟಪ ಭಾಗವೆನ್ನುವರು. ಈ ರಥಗಳಲ್ಲಿ ಮಂಟಪ ಭಾಗದ ಅಂತಸ್ತಿನ ವಿನ್ಯಾಸದಂತೆಯೇ ಎಲ್ಲ ಅಂತಸ್ತುಗಳೂ ಸಹ ರಚನೆಗೊಂಡಿರುತ್ತವೆ ಆದರೆ ಮಂಟಪ ಭಾಗದ ಅಂತಸ್ತಿನ ಸುತ್ತಲೂ ಇರುವ ಕಮಾನುಗಳು ಸ್ವಲ್ಪ ಮಟ್ಟಿಗೆ ಬೇರೆಯಾಗಿ ಕಂಡುಬರುತ್ತವೆ.



ಜಿಡಗಾದ ಶ್ರೀ ಯಲ್ಲಾಲಿಂಗೇಶ್ವರ ರಥ
ಜಿ - ಗುಲಬರ್ಗಾ



ಕೊಡ್ಲಿ ಶ್ರೀ ರಾಮಲಿಂಗೇಶ್ವರ ರಥ
ಜಿ - ಗುಲಬರ್ಗಾ



ಸವಳಹಳ್ಳಿ ಶ್ರೀ ಶರಣಬಸವೇಶ್ವರ ರಥ
ಜಿ - ಗುಲಬರ್ಗಾ



ಕಾಳಗಿಯ ಶ್ರೀ ನೀಲಕಂಠೇಶ್ವರ ರಥ
ಜಿ - ಗುಲಬರ್ಗಾ



ಸುಲೇಪೇಟದ ಶ್ರೀ ವೀರಭದ್ರೇಶ್ವರ ರಥ
ಜಿ - ಗುಲಬರ್ಗಾ



ಕೊಡ್ಲಿ ಶ್ರೀ ಬನಶಂಕರಿ ರಥ
ಜಿ - ಗುಲಬರ್ಗಾ

ಕಬ್ಬಿಣದ ಅಂಕಣ ರಥಗಳ ಮಂಟಪ ಭಾಗಗಳಲ್ಲಿ ಕೆಲವು ರಥಗಳಿಗೆ ಚಿತ್ರರಚನೆ ಮಾಡಲಾಗಿರುತ್ತದೆ. ಗುಲಬುರ್ಗಾ ಜಿಲ್ಲೆ ಚಿತಾಪುರ ತಾಲೂಕಿನ ಕೋಡ್ಲಿಯ ರಾಮಲಿಂಗೇಶ್ವರ ರಥದ ಮಂಟಪ ಭಾಗದಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ಕೆಲವು ಸನ್ನಿವೇಶಗಳ ಚಿತ್ರ ರಚನೆ ಮಾಡಲಾಗಿದೆ. ರಾಮನು ಸೀತೆಯ ಜೊತೆ ಸಿಂಹಾಸನದ ಮೇಲೆ ಕುಳಿತಿರುವುದು ಆಂಜನೇಯನು ಅವರಿಗೆ ನಮಸ್ಕರಿಸಿರುವುದು, ಭರತ ತನ್ನ ಅಣ್ಣನ ಪಾದುಕೆಗಳನ್ನು ತನ್ನ ತಲೆಯ ಮೇಲಿರಿಸಿಕೊಂಡಿರುವುದು, ಸೀತೆಯನ್ನು ರಾವಣನು ಅಪಹರಿಸಿಕೊಂಡು ಹೋಗುವುದು, ರಾವಣನ ಜೊತೆ ರಾಮ ಲಕ್ಷ್ಮಣರು ಯುದ್ಧ ಮಾಡುವುದು, ಹೀಗೆ ಅನೇಕ ಚಿತ್ರಗಳನ್ನು ವಿವಿಧ ಬಣ್ಣಗಳಿಂದ ಸುಂದರವಾಗಿ ಈ ರಥದ ಮಂಟಪ ಭಾಗದ ಮೇಲೆ ರಚಿಸಿರುವುದು ಕಂಡುಬರುತ್ತದೆ.

ಇದೇ ಊರಿನ ಶ್ರೀ ಬನಶಂಕರಿ ರಥದ ಮಂಟಪ ಭಾಗದ ಸುತ್ತಲೂ ಆದಿಶಕ್ತಿ, ಬನಶಂಕರಿ, ಲಕ್ಷ್ಮೀ, ಸರಸ್ವತಿ, ಹೀಗೆ ಅನೇಕ ದೇವತೆಗಳ ಚಿತ್ರಗಳನ್ನು ರಚಿಸಲಾಗಿದೆ. ಈ ಎರಡೂ ರಥಗಳ ಮಂಟಪ ಭಾಗದ ಕಂಬ ಹಾಗೂ ಕಮಾನುಗಳ ಮೇಲೆ ಹೂಬಳ್ಳಿಯಾಕಾರದ ಹಾಗೂ ವಿವಿಧ ಸುರುಳಿ ನಕ್ಷೆಗಳನ್ನು ಬೇರೆ ಬೇರೆ ಬಣ್ಣಗಳಿಂದ ರಚಿಸಲಾಗಿದೆ.

ಗುಲಬುರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಸಲೇಪೇಠದ ಶ್ರೀ ವೀರಭದ್ರ ದೇವಸ್ಥಾನದ ರಥದ ಮಂಟಪ ಭಾಗದಲ್ಲಿ ಹಾಗೂ ಬೀದರ ಜಿಲ್ಲೆಯ ಹುಮನಾಬಾದದ ಶ್ರೀ ವೀರಭದ್ರ ರಥದ ಮಂಟಪ ಭಾಗದಲ್ಲಿ ಶ್ರೀ ವೀರಭದ್ರ, ಕಾಳಿಕಾಮತೆ, ದ್ವಾರಪಾಲಕರು, ಶಿವ, ಬ್ರಹ್ಮ, ವಿಷ್ಣು ಹೀಗೆ ಕೆಲವು ದೇವಾನುದೇವತೆಯರ ಚಿತ್ರಗಳನ್ನು ರಚಿಸಿರುವರು.

ಗುಲಬುರ್ಗಾ ಜಿಲ್ಲೆಯ ಚಿತಾಪುರ ತಾಲೂಕಿನ ಕಾಳಗಿಯ ಶ್ರೀ ನೀಲಕಂಠೇಶ್ವರ ರಥದ ಮಂಟಪ ಭಾಗದಲ್ಲಿಯೂ ಸಹ ಗಣಪ, ನಂದಿ, ಶಿವ, ಲಕ್ಷ್ಮೀ, ಸರಸ್ವತಿ, ಆದಿಶಕ್ತಿ ಹೀಗೆ ವಿವಿಧ ದೇವತೆಗಳ ಚಿತ್ರ ರಚನೆ ಮಾಡಲಾಗಿದೆ.

ಇದರಂತೆಯೇ, ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ ಕುರುಣಿಯ ಗಂಗಾದೇವಿ ರಥ, ಸುಲ್ತಾನಪುರದ ರಥ, ಗುಲಬುರ್ಗಾ ಜಿಲ್ಲೆ ಯಾದಗಿರಿ ತಾಲೂಕು ಹೆಡಗಿಮದ್ರಾದ ವೀರಭದ್ರ ರಥ, ಆಳಂದ ತಾಲೂಕಿನ ಜಮಗಾದ ಶಿವಲಿಂಗೇಶ್ವರ ರಥ, ಪಡಸಾವಳಿಯ ಧರ್ಮರಾಯನ ರಥ, ಈ ಎಲ್ಲ ರಥಗಳು ಸುಂದರವಾದ ವರ್ಣಚಿತ್ರಗಳನ್ನು ಮಂಟಪ ಭಾಗದ ಸುತ್ತಲೂ ಮೈಗೂಡಿಸಿಕೊಂಡಿವೆ. ಮಂಟಪ ಭಾಗದ ಅಂತಸ್ತಿನ ಕೆಳಭಾಗ ಹಾಗೂ ಮೇಲ್ಭಾಗದಲ್ಲಿ ಸ್ವಲ್ಪ ಮುಂದೆ ಕಾಣುವ ಕಬ್ಬಿಣದ ಅಥವಾ ತಗಡುಗಳ ಪಟ್ಟಿಕೆಗಳ ಮೇಲೆ ಸುಂದರವಾದ ನಕ್ಷೆಗಳನ್ನು ಹೊಂದಿದ ಕಬ್ಬಿಣದ ಬಿಡಿ ಪಟ್ಟಿಕೆಗಳನ್ನು ಅಳವಡಿಸಲಾಗಿದೆ.

ಗುಲಬುರ್ಗಾ ಜಿಲ್ಲೆ ಯಾದಗಿರಿ ತಾಲೂಕು ಯಾಣಾಗುಂದಿಯ ಶ್ರೀ ಮಾಣಿಕೇಶ್ವರ ರಥ, ಶಹಾಪುರ ತಾಲೂಕಿನ ರಸ್ತಾಪೂರದ ಶ್ರೀ ಶರಭಲಿಂಗೇಶ್ವರ ರಥ, ಆಳಂದ ತಾಲೂಕಿನ ಜಿಡಗಾದ ಶ್ರೀ ಸಿದ್ಧ ಸಂಸ್ಥಾನ ಮಠದ ರಥ, ಜೇವರಗಿ ತಾಲೂಕಿನ ಶ್ರೀ ಡಿಗ್ಗಿ ಸಂಗಮೇಶ್ವರ ರಥ, ಚಿತಾಪುರ ತಾಲೂಕಿನ ಕೊರವಾರದ ಶ್ರೀ ಅಣವೀರಭದ್ರೇಶ್ವರ ರಥ, ಯಾದಗಿರಿ ತಾಲೂಕಿನ ನಾಗಲಾಪೂರದ ಶ್ರೀ ಮೈಲಾರಲಿಂಗೇಶ್ವರ ರಥ, ಬೀದರ ಜಿಲ್ಲೆಯ ಚಾಂಗಳೇರದ ಶ್ರೀ ವೀರಭದ್ರ ರಥ,

ರಾಯಚೂರು ಜಿಲ್ಲೆಯ ದೇವಸೂಗೂರದ ಶ್ರೀ ಸೂಗೂರೇಶ್ವರ ರಥ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನಾಗನೂರದ ಶ್ರೀ ಸಿದ್ಧೇಶ್ವರ ರಥ ಹಾಗೂ ಇನ್ನೂ ಅನೇಕ ಕಬ್ಬಿಣದ ಅಂಕಣ ರಥಗಳು ಮಂಟಪ ಭಾಗದ ಅಂತಸ್ತಿನ ಸುತ್ತಲೂ ವಿವಿಧ ರೀತಿಯ ನಕ್ಷೆಗಳನ್ನು ಹೊಂದಿದ, ಕಟಂಜರಗಳಂತಹ ಪಟ್ಟಿಕೆಗಳನ್ನು ಹೊಂದಿವೆ. ಅಲ್ಲದೆ ಬೇರೆ ಬೇರೆ ರೀತಿಯ ಚಿತ್ರಗಳನ್ನು ಹೊಂದಿವೆ. ಮಂಟಪದ ಅಂತಸ್ತಿನ ಮೇಲ್ಭಾಗದಲ್ಲಿ ಜ್ಯಾಮಿತಿಯಕಾರವುಳ್ಳ ವಿವಿಧ ನಕ್ಷೆಗಳಿಂದ ತಯಾರಿಸಲ್ಪಟ್ಟ ಪಟ್ಟಿಕೆಗಳನ್ನು ಆಳವಡಿಸಿರುವುದು ಕಂಡುಬರುತ್ತದೆ.

೨. ಬೆಳ್ಳಿಯ ರಥಗಳ ಮಂಟಪ ಭಾಗ :

ಕರ್ನಾಟಕದಲ್ಲಿ ಕಂಡುಬರುವ ಕೆಲವೇ ಬೆಳ್ಳಿಯ ರಥಗಳಲ್ಲಿ, ಮಂಟಪ ಭಾಗಗಳು ಅಷ್ಟಭುಜಾಕೃತಿಗಳಲ್ಲಿ ಕಂಡುಬರುತ್ತವೆ.

ಬಳ್ಳಾರಿ ಜಿಲ್ಲೆ ಹೂವಿನ ಹಡಗಲಿ ತಾಲೂಕು ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ದೇವಸ್ಥಾನದ ಬೆಳ್ಳಿಯ ರಥದ ಮಂಟಪ ಭಾಗವು ಷಡ್ಭುಜಾಕೃತಿಯಲ್ಲಿ ರಚನೆಗೊಂಡಿದೆ. ಕಲಾತ್ಮಕ ಕಂಬಗಳು ಹಾಗೂ ಆರು ಸುಂದರವಾದ ಕಮಾನುಗಳನ್ನು ಈ ರಥದ ಮಂಟಪ ಭಾಗದಲ್ಲಿ ಕಾಣಬಹುದು. ಕಂಬಗಳ ಕೆಳಭಾಗದಲ್ಲಿ ನಂದಿ, ಸಿಂಹ, ಹಂಸ, ನವಿಲು ಇಂತಹ ಪ್ರಾಣಿ ಪಕ್ಷಿಗಳ ಕೆಲವು ಉಬ್ಬುಶಿಲ್ಪಗಳನ್ನು ರಚಿಸಿರುವರು ಉಳಿದಂತೆ ಕಂಬಗಳ ಎಲ್ಲ ಬದಿಗಳಲ್ಲೂ ಸುಂದರವಾದ ಸುರುಳಿಯಾಕಾರದ ನಕ್ಷೆಗಳು, ಹೂಬಳ್ಳಿಯಾಕಾರದ ನಕ್ಷೆಗಳು, ಬಿಡಿ ಹೂಗಳುಳ್ಳ ನಕ್ಷೆಗಳು, ಹೀಗೆ ಹಲವಾರು ರೀತಿಯ ನಕ್ಷೆಗಳ ಉಬ್ಬು ಶಿಲ್ಪಗಾರಿಕೆಯನ್ನು ಕಾಣಬಹುದು. ಮಂಟಪದ ಛಾವಣಿಯ ಒಳಭಾಗದಲ್ಲಿ ಅರಳಿದ ಹೂವಿನಾಕಾರದ, ಸುರುಳಿ ನಕ್ಷೆಗಳನ್ನು ತುಂಬು ನಕ್ಷೆಗಳನ್ನು ರಚಿಸಿರುವರು. ಮಂಟಪದ ಎಲ್ಲ ಕಮಾನುಗಳನ್ನು ಸಹ ವಿವಿಧ ನಕ್ಷೆಗಳ ಉಬ್ಬು ಶಿಲ್ಪಗಳಿಂದ ಅಲಂಕರಣಗೊಳಿಸಿರುವುದು ಕಂಡುಬರುತ್ತದೆ. ಮಂಟಪದ ಮೇಲ್ಭಾಗದಲ್ಲಿ ಕಂಡುಬರುವ ಸೂರ ಪಟ್ಟಿಯ ಸುತ್ತಲೂ ಬೆಳ್ಳಿಯ ತಗಡುಗಳಿಂದ ಮಾಡಲ್ಪಟ್ಟ ಎಲೆಯಾಕಾರದ ವಿನ್ಯಾಸಗಳನ್ನು ನೇತಾಡುವಂತೆ ಹೊಂದಿಸಿರುವರು.

ಧರ್ಮಸ್ಥಳದ ಶ್ರೀ ಮಂಜುನಾಥನ ಬೆಳ್ಳಿಯ ರಥದ ಮಂಟಪ ಭಾಗವು ಚತುರ್ಭುಜಾಕೃತಿಯಲ್ಲಿ ರಚನೆಗೊಂಡಿದೆ.ಮಂಟಪದ ಕೆಳಭಾಗದ ಪಟ್ಟಿಕೆಗಳಲ್ಲಿ ಗಣಪತಿ, ಲಕ್ಷ್ಮೀ, ಸರಸ್ವತಿ, ಶಿವ, ಬ್ರಹ್ಮ ಹಾಗೂ ವಿಷ್ಣುವಿನ ಶಿಲ್ಪಗಳನ್ನು ಕಾಣಬಹುದು. ಎಲ್ಲ ದೇವತಾ ಶಿಲ್ಪಗಳು ಸುಂದರವಾದ ಕಮಾನುಗಳಲ್ಲಿ ಆಕರ್ಷಕವಾಗಿ ಕಂಡುಬರುತ್ತವೆ. ಪ್ರತಿಯೊಂದು ದೇವತಾ ಶಿಲ್ಪಗಳ ಮಧ್ಯಭಾಗದಲ್ಲಿ ಉಳಿದಿರುವ ಸ್ಥಳಾವಕಾಶದಲ್ಲಿ ಹೂದಾನಿಗಳ ಉಬ್ಬುಶಿಲ್ಪಗಳಿವೆ. ಮಂಟಪ ಭಾಗದ ಹಿಂಭಾಗದಲ್ಲಿಕಂಡುಬರುವ ಪ್ರಭಾವಳಿಯ ಕೆಳಭಾಗದಲ್ಲಿ ವ್ಯಾಳಗಳು ಹಾಗೂ ಕುದುರೆ ಬಾಲದಂತಹ ಹಾಗೂ ಕೆಲವು ಪಕ್ಷಿಗಳ ಮುಖವಿನ್ಯಾಸಗಳಿರುವ ಉಬ್ಬುಶಿಲ್ಪಗಳು ಬಹಳ ಸುಂದರವಾಗಿ ಕಂಡುಬರುತ್ತವೆ. ಮಂಟಪ ಭಾಗದಲ್ಲಿ ಉತ್ಸವ ಮೂರ್ತಿಯನ್ನಿಡಲು ರಚಿಸಲಾದ ಚಿತ್ತಾಕರ್ಷಕ ಮಂಟಪ ನಾಲ್ಕು ಕಲಾತ್ಮಕ ಕಂಬಗಳು, ಸುರುಳಿ ನಕ್ಷೆ ಹಾಗೂ ಅಂಚುನಕ್ಷೆಗಳಿಂದ ಆಕರ್ಷಕವಾಗಿ ಕಂಡುಬರುತ್ತದೆ. ಮಂಟಪದ ಮೇಲ್ಛಾವಣಿಯ ಒಳಭಾಗದಲ್ಲಿ ಅರಳಿದ ಹೂವುಗಳು ಹಾಗೂ ಅನೇಕ ಸುರುಳಿಬಳ್ಳಿಯಾಕಾರದ ವಿನ್ಯಾಸಗಳು ಬಹಳ ಆಕರ್ಷಕವಾಗಿ ಮೂಡಿಬಂದಿವೆ. ಮಂಟಪದ ಅನೇಕ

ನಕ್ಷೆಗಳ ಮಧ್ಯಭಾಗದಲ್ಲಿ ಬಣ್ಣ ಬಣ್ಣದ ಹರಳುಗಳನ್ನು ಅಳವಡಿಸಲಾಗಿದೆ.

ಶೃಂಗೇರಿಯ ಶ್ರೀ ಶಾರದಾಂಬೆಯ ಬೆಳ್ಳಿಯ ರಥದ ಮಂಟಪ ಭಾಗವು ಅಷ್ಟಭುಜಾಕೃತಿಯಲ್ಲಿ ರಚನೆಗೊಂಡಿದೆ. ಈ ಮಂಟಪ ಭಾಗದಲ್ಲಿ ಕಂಡುಬರುವ ಕಲಾತ್ಮಕ ಹಾಗೂ ಆಕರ್ಷಕ ಕಮಾನುಗಳು ಹಾಗೂ ಕಂಬಗಳು ವಿವಿಧ ರೀತಿಯ ನಕ್ಷೆಗಳ ಉಬ್ಬುಶಿಲ್ಪಗಳನ್ನು ಹೊಂದಿವೆ. ಈ ರಥದಲ್ಲಿರುವ ಎಲ್ಲ ಉಬ್ಬು ಶಿಲ್ಪವಿನ್ಯಾಸಗಳು ಧರ್ಮಸ್ಥಳದ ರಥದಲ್ಲಿ ಕಾಣುವ ನಕ್ಷಾ ವಿನ್ಯಾಸಗಳಂತೆಯೇ ಕಂಡುಬರುತ್ತವೆ. ಮಂಟಪದ ಕಂಬಗಳ ಮೇಲೆ ಲಕ್ಷ್ಮೀ, ಸರಸ್ವತಿ, ಗಣಪತಿ, ಆದಿಶಕ್ತಿ ಹಾಗೂ ಶಿವನ ಶಿಲ್ಪಗಳನ್ನು ಕಾಣಬಹುದು. ಮಂಟಪದ ಮೇಲ್ಛಾವಣಿಯ ಸೂರಪಟ್ಟಿಯ ಮೇಲೆ ಸುರುಳಿಯಾಕಾರದ ನಕ್ಷೆಗಳನ್ನುಳ್ಳ ಉಬ್ಬುಶಿಲ್ಪಗಳನ್ನು ಕಾಣಬಹುದು. ಈ ರಥದ ಮಂಟಪ ಭಾಗದ ಉಬ್ಬುಶಿಲ್ಪ ರಚನೆ ಹಾಗೂ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ರಥದ ಉಬ್ಬುಶಿಲ್ಪ ರಚನೆ ಹೆಚ್ಚೂ ಕಡಿಮೆ ಹೋಲಿಕೆಯಾಗುತ್ತವೆ. ಮಂಟಪದ ಸೂರಪಟ್ಟಿಯ ಕೆಳಭಾಗದಲ್ಲಿ ಬೆಳ್ಳಿಯ ಗುಂಡುಗಳನ್ನು ನೇತಾಡುವಂತೆ ಅಳವಡಿಸಿರುವುದು ಕಂಡುಬರುತ್ತದೆ.

೩. ಚಿನ್ನದ ರಥಗಳ ಮಂಟಪ ಭಾಗ :

ಚಿನ್ನದ ರಥಗಳ ಮಂಟಪ ಭಾಗಗಳೂ ಸಹ ಬೆಳ್ಳಿಯ ರಥಗಳ ಮಂಟಪ ಭಾಗಗಳಂತೆಯೇ ರಚನೆಯಾಗಿರುವುದನ್ನು ಕಾಣಬಹುದು.

ಉಡುಪಿಯ ಶ್ರೀ ಕೃಷ್ಣನ ಚಿನ್ನದ ರಥದ ಮಂಟಪ ಭಾಗವು ಚತುರ್ಭುಜಾಕೃತಿಯಲ್ಲಿದ್ದು, ಕಂಬಗಳು ಹಾಗೂ ಕಮಾನುಗಳಲ್ಲಿ ವಿವಿಧ ರೀತಿಯ ನಕ್ಷೆಗಳ ಉಬ್ಬುಶಿಲ್ಪಗಳನ್ನು ಹೊಂದಿದೆ. ಮಂಟಪದ ಮಧ್ಯಭಾಗದಲ್ಲಿ ಚಿತ್ತಾಕರ್ಷಕ ನಕ್ಷೆಗಳನ್ನು ಹೊಂದಿದೆ. ಮಂಟಪ ಭಾಗದ ನಾಲ್ಕೂ ಭುಜಗಳಿಂದ ಕೆಳಭಾಗದಲ್ಲಿ ನೇತಾಡುವಂತಹ ಚಿನ್ನದ ಗುಂಡುಗಳನ್ನುಳ್ಳ ಸರಗಳನ್ನು ನೇತುಹಾಕಲಾಗಿದೆ. ಮಂಟಪದ ಮೇಲ್ಛಾವಣಿಯಲ್ಲಿ ಅರಳಿದ ಹೂವಿನಾಕಾರದ ಚಿತ್ತಾಕರ್ಷಕ ಉಬ್ಬುಶಿಲ್ಪಗಳನ್ನು ರಚಿಸಲಾಗಿದೆ. ಸೂರಪಟ್ಟಿಯಲ್ಲಿ ಕೆಳಭಾಗದಲ್ಲಿ ಅಲುಗಾಡುವಂತಹ ಪದಕದ ಆಕಾರದಂತಹ ಚಿನ್ನದ ತಗಡುಗಳನ್ನು ಒಂದಕ್ಕೊಂದು ಹತ್ತಿರವಾಗಿ ನೇತಾಡುವಂತೆ ಅಳವಡಿಸಲಾಗಿದೆ. ರಥದ ಮಂಟಪ ಭಾಗದ ಎಲ್ಲ ಭುಜಗಳ ಮಧ್ಯದಲ್ಲಿ ಬುಗುರಿಯಾಕಾರದ ಹಾಗೂ ಸುರುಳಿಯಾಕಾರದ ನಕ್ಷೆಗಳ ಉಬ್ಬುಶಿಲ್ಪ ರಚನೆ ಮಾಡಲಾಗಿದೆ.

ಶೃಂಗೇರಿಯ ಶ್ರೀಶಾರದಾಂಬೆಯ ಚಿನ್ನದ ರಥದ ಮಂಟಪ ಭಾಗವು ಅಷ್ಟಭುಜಾಕೃತಿಯಲ್ಲಿ ರಚನೆಯಾಗಿದೆ. ಈ ರಥದ ಎಲ್ಲ ಕಂಬ ಹಾಗೂ ಕಮಾನುಗಳು ಇದೇ ದೇವಸ್ಥಾನದಲ್ಲಿರುವ ಬೆಳ್ಳಿಯ ರಥದ ಮಾದರಿಯಲ್ಲಿ ರಚನೆಗೊಂಡಿವೆ. ಬೆಳ್ಳಿಯ ರಥ ಹಾಗೂ ಚಿನ್ನದ ರಥಗಳು ಒಂದೇ ರೀತಿಯ ವಿನ್ಯಾಸದಲ್ಲಿ ರಚನೆಯಾಗಿವೆ. ರಥದ ಮಂಟಪ ಭಾಗದ ಮೇಲ್ಛಾವಣಿಯಲ್ಲಿ ಹಾಗೂ ಸೂರಪಟ್ಟಿಯಲ್ಲಿ ಅರಳಿದ ಹೂವಿನಾಕಾರದ ಉಬ್ಬುಶಿಲ್ಪ ರಚನೆ ಮಾಡಲಾಗಿದೆ. ಮಂಟಪ ಭಾಗದ ಮಧ್ಯಭಾಗದಲ್ಲಿರುವ ಪ್ರಭಾವಳಿಯನ್ನೊಳಗೊಂಡ ಪೀಠವು ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದ ಸುರುಳಿಯಾಕಾರದ, ಹೂ ಬಳ್ಳಿಯಾಕಾರದ ಹಾಗೂ ಕೆಲವು ಪಕ್ಷಿಗಳ ಮುಖ ವಿನ್ಯಾಸಗಳನ್ನು ಹೊಂದಿದ ನಕ್ಷೆಗಳನ್ನು ಹೊಂದಿದೆ. ಕಂಬಗಳ ಮೇಲೆ ನವಿಲು, ಹಂಸ ಹಾಗೂ ವಿವಿಧ ಪಕ್ಷಿಗಳ ಮುಖಗಳನ್ನು

ಹೋಲುವ ಹಾಗೂ ರೆಕ್ಕೆಗಳನ್ನು ಹೋಲುವ ನಕ್ಷೆಗಳ ಉಬ್ಬುಶಿಲ್ಪಗಳು ಸುಂದರವಾಗಿ ಮೂಡಿ ಬಂದಿವೆ.

ಕ. ಸಂಕೀರ್ಣ ಮಾಧ್ಯಮ ರಥಗಳ ಮಂಟಪ ಭಾಗ :

ಸಂಕೀರ್ಣ ಮಾಧ್ಯಮದ ರಥಗಳಲ್ಲಿ ಕಟ್ಟುವ ರಥಗಳು ತಟ್ಟಿಯ ರಥಗಳು, ತೆಪ್ಪದ ರಥಗಳು ಹಾಗೂ ಹೂವಿನ ರಥಗಳೆಂದು ವಿವಿಧ ಪ್ರಕಾರಗಳ ರಥಗಳಿವೆ. ಈ ಎಲ್ಲ ವಿಧದ ರಥಗಳ ಮಂಟಪ ಭಾಗಗಳನ್ನು ತಿಳಿಯಲು ಹೀಗೆ ವಿಂಗಡಣೆ ಮಾಡಿಕೊಳ್ಳಬಹುದು.

೧. ಕಟ್ಟುವ ರಥಗಳ ಮಂಟಪ ಭಾಗ.

೨. ತಟ್ಟಿಯ ರಥಗಳ ಮಂಟಪ ಭಾಗ.

೩. ತೆಪ್ಪದ ರಥಗಳ ಮಂಟಪ ಭಾಗ.

೪. ಹೂವಿನ ರಥಗಳ ಮಂಟಪ ಭಾಗ.

೧. ಕಟ್ಟುವ ರಥಗಳ ಮಂಟಪ ಭಾಗ : ಕಟ್ಟುವ ರಥಗಳು ಅಲ್ಪಾವಧಿಯಲ್ಲಿಯೇ ನಿರ್ಮಾಣಗೊಳ್ಳುವ ರಥಗಳು. ಈ ರಥಗಳಲ್ಲಿ ಉತ್ಸವದ ಸಂದರ್ಭದಲ್ಲಿ ಉತ್ಸವ ಮೂರ್ತಿಯನ್ನಿಡುವ ಭಾಗವನ್ನು ಬಹಳ ಸುಂದರವಾಗಿ ವಿವಿಧ ವಸ್ತುಗಳಿಂದ ಕಟ್ಟಿ ಸುಂದರಗೊಳಿಸುವರು. ಈ ಭಾಗವನ್ನೇ ಮಂಟಪ ಭಾಗವೆಂದು ಹೇಳಲಾಗುವುದು.

ಗುಲಬುರ್ಗಾದ ಶರಣ ಬಸವೇಶ್ವರ ರಥ, ಬಾಗಲಕೋಟ ಜಿಲ್ಲೆ ರಬಕವಿಯ ಮಹಾದೇವನ ರಥ, ಜಮಖಂಡಿ ತಾಲೂಕಿನ ಹುಲ್ಯಾಳದ ಸಿದ್ಧೇಶ್ವರ ರಥ, ಮುಧೋಳ ತಾಲೂಕಿನ ಯಡಹಳ್ಳಿಯ ರಥ, ಹೀಗೆಯೇ ಹಲವರು ಗ್ರಾಮೀಣ ಪ್ರದೇಶಗಳಲ್ಲಿ ಉತ್ಸವದ ಸಂದರ್ಭದಲ್ಲಿ ನಿರ್ಮಾಣಗೊಳ್ಳವ ಈ ಕಟ್ಟುವ ರಥಗಳಲ್ಲಿ ಮಂಟಪ ಭಾಗಗಳು ಚಿತ್ತಾಕರ್ಷಕವಾಗಿ ರೂಪಗೊಂಡಿರುತ್ತವೆ. ಮಂಟಪ ಭಾಗದ ಸುತ್ತಲೂ ವಿವಿಧ ಬಣ್ಣದ ಬಟ್ಟೆಗಳನ್ನು ಸುತ್ತಿ ಬೇರೆ ಬೇರೆ ವಸ್ತುಗಳಿಂದ ತಯಾರಿಸಲಾದ ಕಂಬ ಹಾಗೂ ಕಮಾನುಗಳಿಗೆ ವಿವಿಧ ಬಣ್ಣದ ಕಾಗದಗಳು ಹಾಗೂ ಬಟ್ಟೆಗಳನ್ನು ಅಂಟಿಸುವುದು ಅಥವಾ ಕಟ್ಟುವುದನ್ನು ಕಾಣಬಹುದು. ಕೆಲವು ಕಡೆಗಳಲ್ಲಿ ಅಲ್ಲಲ್ಲಿ ಬೇರೆ ಬೇರೆ ಬಣ್ಣಗಳಿಂದ ಗೆರೆಗಳನ್ನೆಳೆಯಲಾಗುವುದು. ವಿವಿಧ ದೇವತೆಗಳ ಭಾವಚಿತ್ರಗಳನ್ನು ಅಥವಾ ಕ್ಯಾಲೆಂಡರುಗಳನ್ನು ಅಳವಡಿಸುವುದು ಕಂಡುಬರುತ್ತದೆ.

ಬೆಳಗಾವಿ ಜಿಲ್ಲೆ ಬೈಲಹೊಂಗಲದ ಶ್ರೀ ಬಸವೇಶ್ವರ ರಥವು ಕಟ್ಟುವ ರಥದ ರಥಗಳಲ್ಲಿ ವಿಶೇಷವೆನಿಸುತ್ತದೆ. ಈ ರಥವು ದೊಡ್ಡ ದೊಡ್ಡ ಫೋಟೋಗಳನ್ನು ಒಳಗೊಂಡಿರುತ್ತದೆ. ಕೆಲವು ಪಕ್ಷಿಗಳ ಹಾಗೂ ಪ್ರಾಣಿಗಳ ಚಿತ್ರಗಳನ್ನು ಅಥವಾ ಕಾರ್ಡ್‌ಬೋರ್ಡ್‌ಗಳ ಮೇಲೆ ಚಿತ್ರಿಸಿ ಕೊರೆಯಲಾದ ಬಿಡಿ ಭಾಗಗಳನ್ನು ರಥದ ಮಂಟಪ ಭಾಗದ ಮುಂಭಾಗದಲ್ಲಿ ಅಳವಡಿಸುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯ ಮೊರಬದ ಶ್ರೀ ವೀರಭದ್ರೇಶ್ವರ ರಥದಲ್ಲಿಯೂ ಇದೇ ರೀತಿಯ ಕೆಲವು ಫೋಟೋಗಳು ಹಾಗೂ ಬಿಡಿ ಶಿಲ್ಪಗಳು ಕಂಡುಬರುತ್ತವೆ. ಈ ಕಟ್ಟುವ ರಥಗಳ ಮಂಟಪ ಭಾಗಗಳು ಪ್ರತಿ ವರ್ಷ ಬೇರೆ ಬೇರೆ ವಿನ್ಯಾಸಗಳಲ್ಲಿ ರೂಪಗೊಳ್ಳುತ್ತವೆ. ಇದರಿಂದ ಗ್ರಾಮೀಣ ಜನರು ರಥ

ಕಟ್ಟುವ ಕಲೆಯನ್ನು ಉಳಿಸಿಕೊಂಡು ಬಂದಿರುವುದು ಹಾಗೂ ಪ್ರತಿ ವರ್ಷವು ಹೊಸ ವಿನ್ಯಾಸದಲ್ಲಿ ಜೋಡಿಸುವ ರಥಶಿಲ್ಪದಲ್ಲಿ ಅವರ ಸೃಜನಶೀಲತೆಯ ಅಭಿವ್ಯಕ್ತಗೊಂಡಿರುತ್ತದೆ.

೨. ತಟ್ಟಿಯ ರಥಗಳ ಮಂಟಪ ಭಾಗ : ತಟ್ಟಿಯ ರಥಗಳು ದಕ್ಷಿಣ ಕರ್ನಾಟಕದ ಕೆಲವು ಗ್ರಾಮೀಣ ಪ್ರದೇಶಗಳಲ್ಲಿ ಕಂಡುಬರುತ್ತವೆ. ಈ ರಥಗಳೂ ಸಹ ಸ್ವಲ್ಪ ಕಾಲಾವಧಿಯಲ್ಲಿಯೇ ರೂಪಗೊಳ್ಳುತ್ತವೆ ಕಬ್ಬಿಣದ ಅಂಕಣ ರಥಗಳ ಮಂಟಪ ಭಾಗದಂತೆಯೇ, ಈ ತಟ್ಟಿಯ ರಥಗಳೂ ಸಹ ಮಂಟಪ ಭಾಗದಲ್ಲಿ ವಿವಿಧ ದೇವತೆಯರ ಹಾಗೂ ಪೌರಾಣಿಕ ಸನ್ನಿವೇಶಗಳನ್ನು ತೋರುವ ಚಿತ್ರಗಳನ್ನೊಳಗೊಂಡ ತಟ್ಟಿಗಳಿಂದ ಸುಂದರಗೊಂಡಿರುತ್ತವೆ. ಮಂಟಪ ಭಾಗದ ಮಧ್ಯದಲ್ಲಿ ಉತ್ಸವ ಮೂರ್ತಿಯನ್ನಿಡಲು ಒಂದು ಪೀಠವನ್ನು ಅಳವಡಿಸಿರುವುದು ಕಂಡುಬರುತ್ತದೆ.


೩. ತೆಪ್ಪದ ರಥಗಳ ಮಂಟಪ ಭಾಗ : ತೆಪ್ಪದ ರಥಗಳು ನೀರಿನಲ್ಲಿ ಚಲಿಸುವವು. ಅಡಿಪಾಯವು ಬಾಳೆ ದಿಂಡುಗಳಿಂದ ಅಥವಾ ದುಂಡನೆಯ ತೆಪ್ಪದಿಂದ ಭದ್ರಗೊಂಡ ಮೇಲೆ ಮುಂದುವರೆಯುವ ರಥದ ಭಾಗವೇ ಮಂಟಪ ಭಾಗವಾಗಿರುತ್ತದೆ. ಈ ಭಾಗವು ಬಾಳೆಗಿಡಗಳು ಹಾಗೂ ಕಬ್ಬು ತಳಿರು ತೋರಣಗಳಿಂದ ರಚನೆಯಾಗಿರುತ್ತದೆ. ಕೆಲವು ಬಣ್ಣದ ಬಟ್ಟೆಗಳನ್ನು ಮಂಟಪ ಭಾಗದಲ್ಲಿ ಸುತ್ತಿರುತ್ತಾರೆ. ಅಲ್ಲಲ್ಲಿ ಕೆಲವು ಹಣತೆಗಳನ್ನು ಸಾಲು ಸಾಲಾಗಿ ಮಂಟಪ ಭಾಗದ ಸುತ್ತಲೂ ಇಡುವ ವ್ಯವಸ್ಥೆಯನ್ನು ಮಾಡಿರುತ್ತಾರೆ. ಕೆಲವು ಸಲ ಮಂಟಪ ಭಾಗದಲ್ಲಿ ಕೆಲವು ಬಿಡಿಶಿಲ್ಪಗಳನ್ನು ಅಳವಡಿಸುವುದು ಕಂಡುಬರುತ್ತದೆ. ತೆಪ್ಪದ ರಥಗಳ ಮಂಟಪ ಭಾಗದ ಮಧ್ಯದಲ್ಲಿ ಒಂದು ಮಣೆ ಅಥವಾ ಪೀಠವನ್ನು ಇಟ್ಟಿರುವುದು ಸಾಮಾನ್ಯವಾಗಿ ಎಲ್ಲ ತೆಪ್ಪದ ರಥಗಳಲ್ಲಿ ಕಂಡುಬರುತ್ತದೆ.

೪. ಹೂವಿನ ರಥಗಳ ಮಂಟಪ ಭಾಗ : ಹೂವಿನ ರಥದ ಮಂಟಪ ಭಾಗವು ಬಾಳೆದಿಂಡು, ಕಬ್ಬು ಅಥವಾ ಮೆತ್ತನೆಯ ಕಟ್ಟಿಗೆಗಳಿಂದ ತಯಾರಾಗಿರುತ್ತದೆ. ಮಂಟಪ ಭಾಗದ ಸುತ್ತಲೂ ಹೂವುಗಳಿಂದ ಅಥವಾ ತಳಿರು ತೋರಣಗಳಿಂದ ಕಟ್ಟಿ ಮಂಟಪ ಭಾಗವನ್ನು ತಯಾರಿಸುವರು ಹೂವಿನ ರಥವು ಹೆಸರಿಗೆ ತಕ್ಕಂತೆ ಹೆಚ್ಚಾಗಿ ಹೂವುಗಳಿಂದಲೇ ಶೃಂಗಾರಗೊಂಡಿರುತ್ತದೆ. ಮಂಟಪ ಭಾಗದಲ್ಲಿ ಅಳವಡಿಸಲಾದ ಕಬ್ಬು ಇಲ್ಲವೆ ಬಾಳೆಯ ಗಿಡಗಳಿಗೆ ವಿವಿಧ ಪ್ರಕಾರದ ಹೂವುಗಳಿಂದ ಅಥವಾ ಹಾರಗಳನ್ನು ಸುತ್ತಿ ಸುಂದರಗೊಳಿಸುವರು. ಮಂಟಪದ ಮಧ್ಯ ಭಾಗದಲ್ಲಿ ಹೂಗಳಿಂದ ತಯಾರಿಸಲ್ಪಟ್ಟ ಒಂದು ಪೀಠವನ್ನು ಅಳವಡಿಸುವರು. ಮಂಟಪ ಭಾಗದ ಮುಂದೆ ಹಣತೆಯನ್ನಿಡಲು ಹೂವಿನ ಹಾರಗಳ ಶಿಂಬಿಗಳನ್ನು ಸಾಲು ಸಾಲಾಗಿ ಜೋಡಿಸಿರುವರು. ಮಂಟಪ ಭಾಗದ ಮೇಲ್ಭಾವಣಿಯಿಂದ ನೇತಾಡುವಂತೆ ಕೆಲವು ಹೂವಿನ ಹಾರಗಳನ್ನು ಕಟ್ಟುವರು.


ಡ. ಶಿಲಾ ಮಾಧ್ಯಮ ರಥಗಳ ಮಂಟಪ ಭಾಗ :

ಶಿಲಾ ಮಾಧ್ಯಮ ರಥಗಳಲ್ಲಿ ಕಲಾತ್ಮಕವಾಗಿ ರಚಿಸಲಾದ ಮಂಟಪ ಭಾಗಗಳನ್ನು ಕಾಣಬಹುದು.

ಹಂಪೆಯ ವಿಜಯವಿಠ್ಠಲ ದೇವಾಲಯದ ಎದುರು ರಚಿಸಲಾದ ರಥಾಕಾರದ ಗರುಡಮಂಟಪವು ಆಕರ್ಷಕವಾದ ಮಂಟಪಭಾಗವನ್ನು ಹೊಂದಿದೆ. ದ್ರಾವಿಡ ಶೈಲಿಯನ್ನು ಹೊಂದಿದ, ಈ ರಥದ ಮಂಟಪ ಭಾಗವು ಚತುಸ್ರಾಕಾರದಲ್ಲಿ ನಿರ್ಮಾಣಗೊಂಡಿದೆ. ಮಂಟಪ



ಮಾಹಾಬಲಿಪೂರದ ಭೀಮ ರಥ



ಮಾಹಾಬಲಿಪೂರದ ಶ್ರೀ ಗಣೇಶ ರಥ



ಹಂಪೆಯ ಶಿಲೆಯ ರಥ



ಮಾಹಾಬಲಿಪೂರದ ಧರ್ಮರಾಜನರಥ



ಮಾಹಾಬಲಿಪೂರದ ಪಂಚಪಾಂಡವರ ರಥಗಳು

ಭಾಗದ ನಾಲ್ಕೂ ಬಾಹುಗಳು ಹಾಗೂ ಭುಜಗಳಲ್ಲಿ ಕಲಾತ್ಮಕ ಕುಂಡ್ಯಸ್ಥಂಭಗಳನ್ನು ಹೊಂದಿದೆ[೨೨]. ಮಂಟಪ ಭಾಗದ ಪ್ರತಿಯೊಂದು ಬಾಹುಗಳ ಮಧ್ಯಭಾಗದಲ್ಲಿ ರಚಿಸಲಾದ ಕಮಾನುಗಳಲ್ಲಿ ಉಗ್ರನರಸಿಂಹ, ವಿಷ್ಣ, ಗರುಡ ಹಾಗು ತಪಸ್ಸಿಗೆ ಕುಳಿತ ಋಷಿಮುನಿ, ಹೀಗೆ ಕೆಲವು ಮೂರ್ತಿಶಿಲ್ಪಗಳನ್ನು ಕಾಣಬಹುದು. ಮಂಟಪ ಭಾಗದಲ್ಲಿ ನಿರ್ಮಿಸಲಾದ ಇನ್ನೂ ಕೆಲವು ಕಮಾನುಗಳಲ್ಲಿ ನಿರ್ಮಿಸಲಾದ ಕೆಲವು ಮೂತಿಶಿಲ್ಪಗಳು ಒಡೆದು ಹೋಗಿವೆ. ಅಲ್ಲದೆ ನಶಿಸಿರುವುದನ್ನು ಕಾಣಬಹುದು. ಮಂಟಪ ಭಾಗದ ಮೇಲ್ಭಾಗದ ಸೂರಪಟ್ಟಿಯಲ್ಲಿ ಬುಗುರಿಯಾಕಾರದ ಕೆಲವು ಉಬ್ಬುಶಿಲ್ಪ ವಿನ್ಯಾಸಗಳನ್ನು ಕಾಣಬಹುದು. ಕಪೋತಗಳಲ್ಲಿಯ ಸೂಕ್ಷ್ಮ ಕುಸುರಿ ಕೆತ್ತನೆಯು ಆಕರ್ಷಕವಾಗಿದೆ. ಕಪೋತಗಳಲ್ಲಿ ಅಲ್ಪನಾಶಿಕಗಳನ್ನು ರಚಿಸಲಾಗಿದೆ. ಮಂಟಪ ಭಾಗದಲ್ಲಿ ರಚಿಸಲಾದ ಪ್ರತಿಯೊಂದು ಕಂಬಗಳು ಹಾಗೂ ಕಮಾನುಗಳಲ್ಲಿ ಸೂಕ್ಷ್ಮವಾಗಿ ಕುಸುರಿ ಕೆತ್ತನೆಯಲ್ಲಿ ರಚಿಸಿರುವ ಸುರಳಿಯಾಕಾರದ, ಹೂಬಳ್ಳಿಯಾಕಾರದ ಹಾಗೂ ಕುದುರೆ ಬಾಲದಾಕಾರದ ನಕ್ಷೆಗಳ ಉಬ್ಬುಶಿಲ್ಪಗಳನ್ನು ಕಾಣಬಹುದು.

ತಮಿಳುನಾಡಿನ ಮಾಮಲ್ಲಪೂರದ ಪಂಚಪಾಂಡವರ ರಥಗಳಲ್ಲಿ ಭೀಮರಥವು ಧೀರ್ಘ ಚತುಸ್ರಾಕಾರದ ಮಂಟಪವನ್ನು ಹೊಂದಿದೆ. ಆದರೆ ಈ ಭಾಗವು ಪೂರ್ಣಗೊಂಡಿಲ್ಲ. ಈ ಮಂಟಪದ ಮುಖ್ಯ ಭಾಗದಲ್ಲಿ ನಾಲ್ಕು ಕಂಬಗಳಿವೆ. ಇದರ ತಳಭಾಗದಲ್ಲಿ ವ್ಯಾಳಗಳನ್ನು ಬಿಡಿಸಲಾಗಿದೆ. ನಾಲ್ಕು ದಿಕ್ಕುಗಳಿಗೂ ಎರಡೆರಡು ಕಂಬಗಳಿವೆ. ಮಂಟಪ ಭಾಗದ ಮೇಲ್ಭಾಗದಲ್ಲಿ ಮನುಷ್ಯರ ತಲೆಗಳನ್ನು ಹೊಂದಿದ ಅಲ್ಪನಾಸಿಕಗಳನ್ನು ಹೊಂದಿದೆ[೨೩]. ಧರ್ಮರಾಜನ ರಥವು ಮಂಟಪ ಭಾಗದಲ್ಲಿರುವ ಕಂಬಗಳ ಮುಂದೆ ಸಿಂಹಗಳ ಹಾಗೂ ದ್ವಾರಪಾಲಕರ ಶಿಲ್ಪಗಳನ್ನು ಹೊಂದಿದೆ. ಮಂಟಪದ ಮೇಲ್ಭಾಗದ ಮೇಲೆ ಅಲ್ಪನಾಸಿಕಗಳನ್ನು ಹೊಂದಿದೆ. ನಕುಲ ಸಹದೇವರ ರಥಗಳಲ್ಲಿ ಅರ್ಧ ಮಂಟಪದ ಛಾವಣಿಗೆ ಮೆತ್ತಿಕೊಂಡಿರುವ ಕಂಬಗಳ ತಳದಲ್ಲಿ ಸಿಂಹಗಳ ಶಿಲ್ಪಗಳಿವೆ. ಹುದುಗಂಬಗಳ ಅಡಿಯಲ್ಲಿ ಆನೆಗಳಿವೆ. ಅರ್ಜುನ ರಥದ ಅರ್ಧ ಮಂಟಪದ ಮೇಲೆ ಹಾರವಿದೆ. ಅರ್ಧ ಮಂಟಪದ ಹಿಂದೆ ಇರುವ ಗರ್ಭಗೃಹವು ಪೂರ್ಣವಾಗಿ ಬಿಡಿಸಲ್ಪಟ್ಟಿಲ್ಲ. ಮುಂಭಾಗದಲ್ಲಿ ಸ್ಥಳವಿಲ್ಲದೆ ಇರುವುದರಿಂದ ದ್ವಾರಪಾಲಕರನ್ನು ರೂಪಿಸಿಲ್ಲ . ಬದಲಿಗೆ ಪಾರ್ಶ್ವದ ಹಾಗೂ ಹಿಂದಿನ ಗೋಡೆಯ ಮೂಲೆಯಲ್ಲಿ ಅವರನ್ನು ರೂಪಿಸಲಾಗಿದೆ. ಕಪೋತದ ಕೆಳಭಾಗದಲ್ಲಿ ಹಂಸಗಳ ತೋರಣವಿದೆ. ಗಣೇಶ ರಥದ ಮಂಟಪದ ಕಂಬಗಳ ಮುಂಭಾಗದಲ್ಲಿ ವ್ಯಾಳಗಳ ಶಿಲ್ಪಗಳನ್ನು ಕಾಣಬಹುದು. ದಕ್ಷಿಣ ಪಿಡಾರಿ ರಥ ಹಾಗೂ ಉತ್ತರ ಪಿಡಾರಿ ರಥಗಳ ಅರ್ಧಮಂಟಪದ ಮೇಲೆ ಅಲಂಕೃತವಾದ ಕಪೋತಗಳನ್ನು ಕಾಣಬಹುದು[೨೪].

IV. ಗೋಪುರ ಭಾಗ :

ರಥಗಳಿಗೆ ಉತ್ಸವದ ಸಂದರ್ಭದಲ್ಲಿ ಗೋಪುರ ಭಾಗಗಳನ್ನು ಕಟ್ಟವರು. ಈ ಭಾಗವು ಬಣ್ಣ ಬಣ್ಣದ ಬಟ್ಟೆಗಳಿಂದ, ಧ್ವಜಗಳಿಂದ, ಸಣ್ಣ ಸಣ್ಣ ವಿವಿಧ ಬಣ್ಣದ ನಿಶಾನೆಗಳಿಂದ ಕೂಡಿರುತ್ತದೆ. ಕೆಲವು ಪ್ರದೇಶದ ರಥಗಳಲ್ಲಿ ಈ ಗೋಪುರ ಭಾಗವನ್ನೂ ಸಹ ಸ್ಥಾಯಿಯಾಗಿರಿಸುವುದುಂಟು. ಬೇರೆ ಬೇರೆ ಪ್ರದೇಶಗಳ ರಥಗಳ ಗೋಪುರ ಭಾಗಗಳು ಬೇರೆ ಬೇರೆ ವಿನ್ಯಾಸದಲ್ಲಿ ನಿರ್ಮಾಣಗೊಂಡಿರುತ್ತವೆ.

೨೨. ''ಶಿಲ್ಪಾ ದರ್ಶ'' ಜಿ.ಜ್ಞಾನಾನಂದ, ಸಂಪುಟ ೧,ಪು.ಸಂ೨೦೧, ೨೦೦೧.
೨೩.''ಶಿಲ್ಪಾ ದರ್ಶ'' ಜಿ.ಜ್ಞಾನಾನಂದ, ಸಂಪುಟ ೧, ಪು.ಸಂ.೮೦, ೨೦೦೧.
೨೪.''ಶಿಲ್ಪಾ ದರ್ಶ'' ಜಿ.ಜ್ಞಾನಾನಂದ, ಸಂಪುಟ ೧, ಪು.ಸಂ.೮೨, ೨೦೦೧.

ಆಯಾ ಪ್ರದೇಶದಲ್ಲಿ ದೊರಕುವ ವಿವಿಧ ವಸ್ತುಗಳಿಂದ ಗೋಪುರ ಭಾಗವನ್ನು ಕಟ್ಟುವರು. ರಥದ ಮಂಟಪದ ಭಾಗದ ನಂತರ ಮುಂದುವರೆಯುವ ಈ ಗೋಪುರ ಭಾಗದ ಮೇಲೆ ವಿವಿಧ ವಿನ್ಯಾಸದ ಶಿಖರಗಳ ಮೇಲೆ ಕಳಶವನ್ನಿಟ್ಟು ರಥೋತ್ಸವವನ್ನು ನೆರವೇರಿಸುವರು.

ಎಲ್ಲ ವಿಧದ ರಥಗಳ ಗೋಪುರ ಭಾಗಗಳನ್ನು ಕುರಿತು ಚರ್ಚಿಸಲು ಹೀಗೆ ವಿಂಗಡಣೆ ಮಾಡಿಕೊಳ್ಳಲಾಗಿದೆ.

ಅ. ಕಾಷ್ಠ ಮಾಧ್ಯಮದ ರಥಗಳ ಗೋಪುರ ಭಾಗ.

ಬ. ಲೋಹ ಮಾಧ್ಯಮದ ರಥಗಳ ಗೋಪುರ ಭಾಗ.

ಕ. ಸಂಕೀರ್ಣ ಮಾಧ್ಯಮದ ರಥಗಳ ಗೋಪುರ ಭಾಗ

ಡ. ಶಿಲಾಮಾಧ್ಯಮದ ರಥಗಳ ಗೋಪುರ ಭಾಗ.

ಅ. ಕಾಷ್ಠ ಮಾಧ್ಯಮದ ರಥಗಳ ಗೋಪುರ ಭಾಗ :

ಈ ಕಾಷ್ಠ ಮಾಧ್ಯಮದ ಗೋಪುರ ಭಾಗಗಳನ್ನು ಈ ಕೆಳಗಿನಂತೆ ವಿಂಗಡಿಸಬಹುದು.

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಗೋಪುರ ಭಾಗ.

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಗೋಪುರ ಭಾಗ.

೧. ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಗೋಪುರ ಭಾಗ : ಕಾಷ್ಠ ಮಾಧ್ಯಮದ ಗಡ್ಡಿ ರಥಗಳಲ್ಲಿ ಕೆಲವು ಪ್ರದೇಶಗಳಲ್ಲಿ ಸ್ಥಿರವಾಗಿರುವ ಗೋಪುರ ಭಾಗವನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಹೆಚ್ಚಿನ ಪ್ರಮಾಣದಲ್ಲಿ ರಥಗಳಿಗೆ ಎಲ್ಲ ಪ್ರದೇಶಗಳಲ್ಲಿ ಉತ್ಸವದ ಸಂದರ್ಭದಲ್ಲಿ ಗೋಪುರ ಭಾಗವನ್ನು ವಿವಿಧ ವಿನ್ಯಾಸಗಳಲ್ಲಿ ಕಟ್ಟುವುದನ್ನು ಕಾಣಬಹುದು.

ಗದಗ ಜಿಲ್ಲೆ ಶಿರಹಟ್ಟಿಯ ಶ್ರೀ ಫಕೀರೇಶ್ವರ ಸಂಸ್ಥಾನ ಮಠದ ರಥ, ವರವಿ ಮೌನೇಶ್ವರರ ರಥ, ಲಕ್ಷ್ಮೇಶ್ವರದ ಶ್ರೀ ಸೋಮೇಶ್ವರ ರಥ, ಹುನಗುಂದದ ಶ್ರೀ ವೀರಭದ್ರನ ರಥ, ಕೂಡಲಸಂಗಮದ ಶ್ರೀ ಸಂಗಮನಾಥನ ರಥ, ಶಿರೂರದ ಶ್ರೀ ಸಿದ್ಧೇಶ್ವರ ರಥ, ಹುಬ್ಬಳ್ಳಿಯ ಶ್ರೀ ಮೂರುಸಾವಿರ ಮಠದ ರಥ, ಧಾರವಾಡ ಜಿಲ್ಲೆ ನಾಲವಾಡಿಯ ಶ್ರೀ ಬಸವೇಶ್ವರ ರಥ, ಕುಕ್ಕೆ ಸುಬ್ರಹ್ಮಣ್ಯಂದ ಶ್ರೀಸುಬ್ರಮಣ್ಯಸ್ವಾಮಿ ರಥ, ನಂಜನಗೂಡಿನ ಶ್ರೀ ಕಂಠೇಶ್ವರ ರಥ, ಉಡುಪಿಯ ಶ್ರೀ ಕೃಷ್ಣನ ರಥಗಳು, ಬೆಳಗಾವಿ ಜಿಲ್ಲೆ ಬೈಲಹೊಂಗಲದ ಶ್ರೀ ಬಸವೇಶ್ವರ ರಥ, ಗೋಕಾಕ ತಾಲೂಕಿನ ಫಾಲ್ಸದ ಶ್ರೀ ಕಾಡಸಿದ್ಧೇಶ್ವರ ರಥ, ಹೀಗೆಯೇ ಇನ್ನೂ ಅನೇಕ ರಥಗಳಲ್ಲಿ ಗೋಪುರ ಭಾಗವು ಉತ್ಸವದ ಸಂದರ್ಭದಲ್ಲಿ ನಿರ್ಮಾಣಗೊಳ್ಳುತ್ತದೆ. ಈ ಎಲ್ಲ ರಥಗಳ ಗೋಪುರ ಭಾಗಗಳು ಚಿಕ್ಕ ಚಿಕ್ಕ ಬಣ್ಣದ ಗುರುತುಗಳಿಂದ ಕಂಗೊಳಿಸುತ್ತಿರುತ್ತದೆ. ಗೋಪುರದ ಭಾಗಗಳು ದುಂಡಾಕಾರದ ಗೂವಿನ ಮೊಗ್ಗಿನಾಕಾರದ ವಿನ್ಯಾಸದಲ್ಲಿ ನಿರ್ಮಾಣಗೊಂಡು, ಗೋಪುರದ ತುದಿಯಲ್ಲಿ ದುಂಡನೆ ಆಕಾರದ ಅಥವಾ ಕಡಗೋಲಾಕಾರದ ವಿನ್ಯಾಸದ ಶಿಖರವನ್ನು ಹೊಂದಿರುತ್ತವೆ. ವಿವಿಧ ಬಣ್ಣದ ಬಟ್ಟೆಗಳಿಂದ ಸುತ್ತಿದ ಶಿಖರದ ಮೇಲೆ ಕಳಶವನ್ನು ಇಡಲಾಗುತ್ತದೆ.

ಕೊಪ್ಪಳದ ಶ್ರೀ ಗವಿಸಿದ್ಧೇಶ್ವರ ರಥ, ಹುಲಗಿಯ ಹುಲಿಗೆಮ್ಮ ದೇವಿ ರಥ, ಗದಗ ಜಿಲ್ಲೆಯ ಹರ್ತಿಯ ವೀರಭದ್ರನ ರಥ, ಬಾಗಲಕೋಟ ಜಿಲ್ಲೆ ಕೆರೂರಿನ ಶ್ರೀ ಬನಶಂಕರಿ ರಥ, ಈ ಎಲ್ಲ ರಥಗಳ ಗೋಪುರ ಭಾಗಗಳು ದುಂಡಾಕಾರವಾಗಿ ಅಥವಾ ಮೊಗ್ಗಿನಾಕಾರದಲ್ಲಿ ನಿರ್ಮಾಣಗೊಂಡರೂ, ಅವುಗಳ ಮೇಲೆ ನಿಶಾನೆಗಳಿರದೆ ಕೇವಲ ಬಣ್ಣ ಬಣ್ಣದ ಬಟ್ಟೆಗಳನ್ನು ಸುತ್ತಿರುವರು.

ಬಾದಾಮಿ ಬನಶಂಕರಿಯ ರಥ, ಚೊಳಚಗುಡ್ಡದ ವೀರಭದ್ರನ ರಥ, ಜಮಖಂಡಿ ತಾಲೂಕಿನ ಹಿಪ್ಪರಗಿಯ ಶ್ರೀ ಸಂಗಮೇಶ್ವರ ರಥ, ಈ ಎಲ್ಲ ರಥಗಳ ಗೋಪುರ ಭಾಗಗಳು ಗುಡಿಯ ಗೋಪುರಗಳಂತೆ ನಿರ್ಮಾಣಗೊಂಡು, ಕೆಲವು ನಿಶಾನೆಗಳನ್ನು ಹೊಂದಿ, ಮೇಲ್ಭಾಗದಲ್ಲಿ ದುಂಡಾಕಾರದ ವಿವಿಧ ಬಣ್ಣದ ಶಿಖರಗಳ ಮೇಲೆ ಕಳಶವನ್ನು ಹೊಂದಿರುತ್ತವೆ. ಈ ರಥಗಳ ಗೋಪುರ ಭಾಗಗಳು ತಳಿರು ತೋರಣಗಳಿಂದ ಅಲಂಕಾರಗೊಂಡಿರುತ್ತವೆ. ಕೇವಲ ಎಲೆಗಳಿಂದಲೇ ಸಂಪೂರ್ಣ ಗೋಪುರ ಭಾಗವು ಮುಚ್ಚಿಹೋಗಿರುತ್ತದೆ.

ಗುಲಬರ್ಗಾ ಜಿಲ್ಲೆ ಜೇವರಗಿ ತಾಲೂಕು ಜೇರಟಗಿಯ ಶ್ರೀ ಶರಣ ಬಸವೇಶ್ವರ ರಥ, ಬಿಜಾಪುರ ಜಿಲ್ಲೆಯ ಸಿಂದಗಿ ತಾಲೂಕಿನ ಗೋಲಗೇರಿಯ ಶ್ರೀ ಗೊಲ್ಲಾಳೇಶ್ವರ ರಥ, ಚಾಂದಕೋಟೆಯ ಶ್ರೀ ಬಸವೇಶ್ವರ ರಥ, ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ ರಥ, ಬಳ್ಳಾರಿ ಜಿಲ್ಲೆ ಸೊಂಡೂರಿನ ಶಿವಪುರೇಶ್ವರ ರಥ, ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ರಥಗಳು ಸ್ಥಿರವಾದ ಗೋಪುರ ಹಾಗೂ ಶಿಖರ ಭಾಗಗಳನ್ನು ಹೊಂದಿವೆ. ಈ ಎಲ್ಲ ರಥಗಳ ಗೋಪುರ ಭಾಗಗಳು ದೇವಸ್ಥಾನದ ಗೋಪುರ ಭಾಗಗಳಿಗೆ ಹೋಲಿಕೆಯಾಗುವವು. ಗೋಪುರ ಭಾಗಗಳ ಮೇಲೆ ಕೆಲವು ಸುರುಳಿಯಾಕಾರದ, ಹೂಬಳ್ಳಿಯಾಕಾರದ, ಅಂಚು ನಕ್ಷೆಗಳನ್ನು ಕೆತ್ತನೆ ಮಾಡಿರುವುದು ಕಂಡು ಬರುತ್ತದೆ. ಇಳಕಲ್ಲದ ಶ್ರೀ ವಿಜಯ ಮಹಾಂತೇಶ್ವರ ರಥದ ಗೋಪುರ ಭಾಗ, ಬಿಜಾಪುರ ಜಿಲ್ಲೆಯ ಚಾಂದಕೋಟೆಯ ಶ್ರೀ ಬಸವೇಶ್ವರ ರಥದ ಗೋಪುರ ಭಾಗ ಹಾಗೂ ಗುಲಬುರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ಜೇರಟಗಿಯ ಶ್ರೀ ಶರಣಬಸವೇಶ್ವರ ರಥಗಳ ಗೋಪುರ ಭಾಗಗಳಲ್ಲಿ ಕಮಾನುಗಳು ಹಾಗೂ ವಿವಿಧ ರೀತಿಯ ಕಂಬಗಳನ್ನು ಕಾಣಬಹುದು. ಉತ್ಸವದ ಸಂದರ್ಭದಲ್ಲಿ ಗೋಪುರದ ಕಮಾನುಗಳಲ್ಲಿ ಬೇರೆ ಬೇರೆ ದೇವತೆಗಳ ಭಾವಚಿತ್ರಗಳು ಅಥವಾ ಕ್ಯಾಲೆಂಡರುಗಳನ್ನು ಅಳವಡಿಸಲಾಗುವುದು. ಇಳಕಲದ ಶ್ರೀ ವಿಜಯ ಮಹಾಂತೇಶ್ವರ ರಥದ ಗೋಪುರ ಭಾಗದಲ್ಲಿ ಕೆಲವು ಮಹಾತ್ಮರ ಚಿತ್ರಗಳನ್ನು ಅಳವಡಿಸಲಾಗುತ್ತದೆ.

ಬಳ್ಳಾರಿ ಜಿಲ್ಲೆ ಕೊಟ್ಟೂರಿನ ಶ್ರೀ ಕೊಟ್ಟೂರೇಶ್ವರ ರಥ ಉಜನಿಯ ಮರುಳ ಸಿದ್ಧೇಶ್ವರ ರಥ, ಹಂಪೆಯ ಶ್ರೀ ವಿರುಪಾಕ್ಷನ ರಥ, ಮರೆಮ್ಮನ ಹಳ್ಳಿಯ ಶ್ರೀ ರಾಮಾಂಜನೇಯ ರಥಗಳು, ಕೊಪ್ಪಳ ಜಿಲ್ಲೆ ಯಲಬುರ್ಗಾ ತಾಲೂಕು ಕುಕನೂರಿನ ಶ್ರೀ ಮಹಾಮಾಯಿ ರಥ, ಗುದ್ನೆಪ್ಪನ ಮಠದ ರಥ, ಗಂಗಾವತಿ ತಾಲೂಕಿನ ಕನಕಗಿರಿಯ ಶ್ರೀ ಕನಕರಾಯನ ರಥ, ಬಳ್ಳಾರಿ ಜಿಲ್ಲೆಯ ಸೋಗಿಯ ಶ್ರೀ ವೀರಭದ್ರನ ರಥ, ಈ ಎಲ್ಲ ರಥಗಳ ಗೋಪುರಗಳು ವಿಜಯನಗರದ ರಾಯಗೋಪುರಗಳ ಹೋಲಿಕೆಯ ವಿನ್ಯಾಸದಲ್ಲಿ, ಉತ್ಸವದ ಸಂದರ್ಭದಲ್ಲಿ ನಿರ್ಮಾಣಗೊಂಡಿರುತ್ತವೆ. ವಿವಿಧ ಬಣ್ಣದ

ಬಟ್ಟೆಗಳಿಂದ ಹಾಗೂ ಕೆಲವು ಚಿತ್ರಗಳನ್ನು ಮೈಗೂಡಿಸಿಕೊಂಡು ಸುಂದರಗೊಂಡಿರುತ್ತವೆ. ಗೋಪುರದ ಮೇಲ್ಭಾಗದಲ್ಲಿ ಕಡಗೋಲು ನೆಲ್ಲಿಯಾಕಾರದ ಚಪ್ಪಟೆಯಾದ ಆಕಾರವನ್ನು ಹೊಂದಿದ ಶಿಖರ ಭಾಗದ ಮೇಲೆ ಕಳಶವನ್ನು ಹೊಂದಿ ಅದರ ಮೇಲೆ ಛತ್ರಿಯನ್ನು ಅಳವಡಿಸಿರುವದು ಕಂಡುಬರುತ್ತದೆ.

ನಂಜನಗೂಡಿನ ಶ್ರೀ ಪಾರ್ವತಮ್ಮನ ರಥ ಹಾಗೂ ಶ್ರೀ ಚಂಡಿಕೇಶ್ವರ ಸ್ವಾಮಿ ರಥಗಳು ಕಿರೀಟದಂತೆ ತೋರುವ ಚಿತ್ತಾಕರ್ಷಕ ಗೋಪುರ ಭಾಗವನ್ನು ಹೊಂದಿರುತ್ತವೆ. ಉತ್ಸವದ ಸಂದರ್ಭದಲ್ಲಿ ಕಟ್ಟಲಾಗುವ ಈ ರಥಗಳ ಗೋಪುರ ಭಾಗದ ಮೇಲೆ ವಿವಿಧ ಬಣ್ಣಗಳಿಂದ ಅನೇಕ ಚಿತ್ತಾರಗಳನ್ನು, ನಕ್ಷಾಕೃತಿಗಳನ್ನು ಹಾಗೂ ವಿವಿಧ ದೇವತೆಗಳ ಚಿತ್ರಗಳನ್ನೊಳಗೊಂಡ ಬಟ್ಟೆಗಳಿಂದ ಹೊದಿಸಿರುತ್ತಾರೆ. ಈ ಎರಡೂ ರಥಗಳ ಗೋಪುರ ಭಾಗಗಳು ವಿಶೇಷವಾಗಿ ಕಂಡುಬರುತ್ತವೆ. ಈ ರಥಗಳ ಗೋಪುರ ಭಾಗಗಳ ತುದಿಯಲ್ಲಿ ಚಿತ್ತಾಕರ್ಷಕ ಶಿಖರದ ಮೇಲೆ ಕಳಶವನ್ನು ಅಳವಡಿಸಲಾಗಿರುತ್ತದೆ.

೨. ಕಾಷ್ಠ ಮಾಧ್ಯಮದ ಅಂಕಣ ರಥಗಳ ಗೋಪುರ ಭಾಗ : ಅಂಕಣ ರಥಗಳ ಮಂಟಪ ಭಾಗದ ಅಂತಸ್ತಿನ ನಂತರ ಮುಂದುವರೆಯುವ ಅಂತಸ್ತುಗಳು ಗೋಪುರ ಭಾಗಕ್ಕೆ ಸಂಬಂಧಪಡುತ್ತವೆ. ಈ ಅಂತಸ್ತುಗಳು ಕೆಳಗಿನಿಂದ ಮೇಲೆ ಹೋದಂತೆ ಚಿಕ್ಕದಾಗುತ್ತ ಹೋಗಿರುತ್ತವೆ. ಉತ್ಸವದ ಸಂದರ್ಭದಲ್ಲಿ ಅಂತ್ಯಂತ ಮೇಲ್ಭಾಗದ ಅಂತಸ್ತಿನ ಮೇಲೆ ದುಂಡಾಕಾರದ ಅಥವಾ ಕಡಗೋಲಾಕಾರದ ಚಪ್ಪಟೆಯ ದುಂಡನೆಯ ಆಕಾರದ ಶಿಖರ ಭಾಗಕ್ಕೆ ಬಣ್ಣ ಬಣ್ಣದ ಬಟ್ಟೆಗಳನ್ನು ಸುತ್ತಿ ಅದರ ಮೇಲೆ ಕಳಶವನ್ನಿಡುವರು. ಉತ್ಸವದ ಸಂದರ್ಭದಲ್ಲಿ ಗೋಪುರ ಭಾಗದಲ್ಲಿರುವ ಪ್ರತಿಯೊಂದು ಅಂತಸ್ತುಗಳಲ್ಲಿ ಕಮಾನುಗಳ ಮಧ್ಯದಲ್ಲಿ ಬೇರೆ ಬೇರೆ ದೇವತೆಗಳ ಚಿತ್ರಪಟಗಳನ್ನು ಅಥವಾ ಪೋಟೋಗಳನ್ನು ಅಳವಡಿಸುವರು.

ಈ ರೀತಿಯಲ್ಲಿ ,ಅಂಕಣ ರಥಗಳ ಗೋಪುರ ಭಾಗವನ್ನು ಆಕರ್ಷಕವಾಗಿ ಕಾಣುವಂತೆ ಸಿದ್ಧಗೊಳಿಸುವುದನ್ನು ,ಉತ್ಸವದ ಸಂದರ್ಭದಲ್ಲಿ ಸಾಮಾನ್ಯವಾಗಿ ಈ ಹಿಂದೆ ಹೆಸರಿಸಲಾದ ಎಲ್ಲ ಅಂಕಣ ರಥಗಳಲ್ಲಿಯೂ ಕಾಣಬಹುದು.

ಬ. ಲೋಹ ಮಾಧ್ಯಮದ ರಥಗಳ ಗೋಪುರ ಭಾಗ :

ಲೋಹ ಮಾಧ್ಯಮ ರಥಗಳ ಗೋಪುರ ಭಾಗದ ಬಗ್ಗೆ ಚರ್ಚಿಸುವ ಮುನ್ನ ವಿವಿಧ ರಥಗಳನ್ನು ಈ ರೀತಿಯಲ್ಲಿ ವಿಂಗಡಿಸಿಕೊಳ್ಳಬಹುದು.

೧. ಕಬ್ಬಿಣದ ರಥಗಳ ಗೋಪುರ ಭಾಗ.

೨. ಬೆಳ್ಳಿಯ ರಥಗಳ ಗೋಪುರ ಭಾಗ.

೩. ಚಿನ್ನದ ರಥಗಳ ಗೋಪುರ ಭಾಗ.

೧. ಕಬ್ಬಿಣದ ರಥಗಳ ಗೋಪುರ ಭಾಗ : ಕಬ್ಬಿಣದ ರಥಗಳನ್ನು

i. ಕಬ್ಬಿಣದ ಗಡ್ಡಿ ರಥಗಳ ಗೋಪುರ ಭಾಗ,

ii. ಕಬ್ಬಿಣದ ಅಂಕಣ ರಥಗಳ ಗೋಪುರ ಭಾಗ, ಎಂದು ವಿಂಗಡಿಸಿಕೊಂಡು ಅವುಗಳ ಗೋಪುರ ಭಾಗಗಳನ್ನು ತಿಳಿಯುವಾ.

i. ಕಬ್ಬಿಣದ ಗಡ್ಡಿ ರಥಗಳ ಗೋಪುರ ಭಾಗ : ಕಬ್ಬಿಣದ ಗಡ್ಡಿ ರಥಗಳ ಗೋಪುರ ಭಾಗವು ಸ್ಥಿರವಾಗಿರುತ್ತದೆ. ಪೂರ್ಣವಾಗಿ ಕಬ್ಬಿಣದಿಂದಲೇ ನಿರ್ಮಾಣಗೊಂಡ ಈ ರಥಗಳಲ್ಲಿ ಗೋಪುರ ಭಾಗವು ಕಬ್ಬಿಣದ ಅನೇಕ ಪಟ್ಟಿಗಳಿಂದ, ತಗಡುಗಳಿಂದ ಹಾಗೂ ಶಳಿಗಳಿಂದ ನಿರ್ಮಾಣ ಗೊಂಡಿರುತ್ತದೆ.

ಕಬ್ಬಿಣದ ಗಡ್ಡಿ ರಥಗಳ ಗೋಪುರ ಭಾಗವು ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಕೆಲವು ರಥಗಳಲ್ಲಿ ಕಂಡುಬರುವ, ಸ್ಥಿರಗೋಪುರ ಭಾಗದಂತೆಯೇ ಕಂಡುಬರುತ್ತದೆ. ಈ ಕಬ್ಬಿಣದ ಗಡ್ಡಿ ರಥಗಳ ಗೋಪುರ ಭಾಗದ ಮೇಲೆ ಕಾಣುವ ದುಂಡನೆಯಾಕಾರದ ಶಿಖರ ಭಾಗದ ಮೇಲೆ ಕಳಶವನ್ನಿಡುವರು. ಉತ್ಸವದ ಸಂದರ್ಭದಲ್ಲಿ ಗೋಪುರ ಭಾಗಕ್ಕೆ ಹಾಗೂ ಶಿಖರ ಭಾಗದಲ್ಲಿ ಬೇರೆ ಬೇರೆ ಬಣ್ಣಗಳಿಂದ ಕೂಡಿದ ಬಟ್ಟೆಯನ್ನು ಸುತ್ತುವರು. ಕೆಲವು ರಥಗಳಿಗೆ ಬಣ್ಣ ಬಣ್ಣದ ನಿಶಾನೆಗಳನ್ನು ಅಳವಡಿಸುವರು.

ಉದಾಹರಣೆಗೆ ಗುಲಬುರ್ಗಾ ಜಿಲ್ಲೆ ಅಫಜಲಪೂರ ತಾಲೂಕಿನ ದೇಸಾಯಿ ಕಲ್ಲೂರದ ಶ್ರೀ ಮಲ್ಲಿಕಾರ್ಜುನ ರಥ, ಜಾಲವಾಡಿಯ ಶ್ರೀ ಮುರಘೇಂದ್ರ ಸ್ವಾಮಿ ರಥ, ಕೊಪ್ಪಳ ಜಿಲ್ಲೆಯ ಕುಷ್ಠಗಿಯ ಶ್ರೀ ಬುತ್ತಿಬಸವೇಶ್ವರ ರಥ, ಕೋಲಾರದ ಗಣ ಬಸವೇಶ್ವರ ರಥ, ಹೀಗೆ ಇನ್ನೂ ಇಂತಹ ಕೆಲವು ರಥಗಳಲ್ಲಿ ಸ್ಥಿರ ಗೋಪುರ ಭಾಗವನ್ನು ಕಾಣಬಹುದು. ಈ ಎಲ್ಲ ರಥಗಳ ಗೋಪುರ ಭಾಗದ ಮೇಲೆ ಅಳವಡಿಸಲಾಗುವ ಶಿಖರ ಭಾಗಕ್ಕೆ ಉತ್ಸವದಲ್ಲಿ ಬೇರೆ ಬೇರೆ ವಿಧದ ಬಣ್ಣದ ಬಟ್ಟೆಗಳನ್ನು ಸುತ್ತುವರು.

ii. ಕಬ್ಬಿಣದ ಅಂಕಣ ರಥಗಳ ಗೋಪುರ ಭಾಗ : ಕಬ್ಬಿಣದ ಅಂಕಣ ರಥಗಳಲ್ಲಿ ಮಂಟಪ ಭಾಗದ ಅಂತಸ್ತಿನ ನಂತರ ಮುಂದುವರೆಯುವ ಮೂರು ಅಥವಾ ನಾಲ್ಕು ಅಂತಸ್ತುಗಳನ್ನು ಗೋಪುರ ಭಾಗವೆನ್ನಬಹುದು. ಈ ಅಂತಸ್ತುಗಳ ಮೇಲೆ ಹೋದಂತೆ ಚಿಕ್ಕದಾಗುತ್ತ ಹೋಗುತ್ತವೆ. ಈ ಎಲ್ಲ ಅಂತಸ್ತುಗಳಲ್ಲಿ ಕಮಾನುಗಳು ಕಂಡುಬರುತ್ತವೆ ಇವುಗಳಲ್ಲಿ ವಿವಿಧ ದೇವಾನುದೇವತೆಯರ, ಮಹಾಪುರಷರ ಚಿತ್ರಗಳನ್ನು ರಚಿಸಿರುವುದು ಕಂಡುಬರುತ್ತದೆ.

ಉದಾಹರಣೆಗೆ ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕೋಡ್ಲಿಯ ಶ್ರೀ ರಾಮಲಿಂಗೇಶ್ವರ ರಥದ ಗೋಪುರ ಭಾಗದಲ್ಲಿ, ರಾಮಾಯಣಕ್ಕೆ ಸಂಬಂಧಪಟ್ಟ ಸನ್ನಿವೇಶಗಳ ಚಿತ್ರಗಳನ್ನು ರಚಿಸಲಾಗಿದೆ. ಇದೇ ಊರಿನ ಬನಶಂಕರಿಯ ರಥದ ಗೋಪುರ ಭಾಗದಲ್ಲಿ ಆದಿಶಕ್ತಿ, ಬನಶಂಕರಿ,ವೀಣಾಪಾಣಿ, ಬ್ರಹ್ಮ, ವಿಷ್ಣು , ಮಹೇಶ್ವರ, ಗಣಪತಿ, ಹೀಗೆ ಹಲವಾರು ದೇವಾನುದೇವತೆಯರ ಚಿತ್ರಗಳನ್ನು ರಚಿಸಿರುವರು. ಇದೇ ರೀತಿಯಲ್ಲಿ ಇದೇ ತಾಲೂಕಿನ ಕಾಳಗಿಯ ಶ್ರೀ ರಾಮಲಿಂಗೇಶ್ವರ ರಥದ ಗೋಪುರ ಭಾಗದಲ್ಲಿ ಹಲವಾರು ದೇವತಾ ಚಿತ್ರಗಳನ್ನು ಕಾಣಬಹುದು. ಬೀದರ ಜಿಲ್ಲೆಯ ಹುಮನಾಬಾದದ ಶ್ರೀ ವೀರಭದ್ರ ರಥದ ಗೋಪುರ ಭಾಗದ ಕಮಾನುಗಳಲ್ಲಿ ಗಂಗಾಂಬಿಕೆ, ನೀಲಾಂಬಿಕೆ, ಬಸವಣ್ಣ, ಚನ್ನಬಸವಣ್ಣ, ಅಕ್ಕ ಮಹಾದೇವಿ, ಅಲ್ಲಮಪ್ರಭು, ದೇವರದಾಸಿಮಯ್ಯ, ಅಂಬಿಗರ ಚೌಡಯ್ಯ, ಹೀಗೆ ಹಲವಾರು ಶಿವಶರಣರ ಚಿತ್ರರಚನೆ

ಮಾಡಲಾಗಿದೆ. ಈ ಎಲ್ಲ ರಥಗಳ ಗೋಪುರ ಭಾಗಗಳಂತೆಯೇ ಸುಲೇಪೇಠದ ಶ್ರೀ ವೀರಭದ್ರನ ರಥದ ಗೋಪುರ ಭಾಗದಲ್ಲಿ ಚಿತ್ರರಚನೆಯನ್ನು ಕಾಣಬಹುದು.

ಕಬ್ಬಿಣದ ಕೆಲವು ಅಂಕಣ ರಥಗಳ ಗೋಪುರ ಭಾಗದಲ್ಲಿ ಉತ್ಸವದ ಸಂದರ್ಭದಲ್ಲಿ ದೇವತಾ ಚಿತ್ರಗಳ ಫೋಟೋಗಳನ್ನು ಅಳವಡಿಸಿರುವುದನ್ನು ಕಾಣಬಹುದು.

ಉದಾಹರಣೆಗೆ ಯಾದಗಿರಿ ತಾಲೂಕು ಯಾಣಾಗುಂದಿಯ ಶ್ರೀ ಮಾಣಿಕೇಶ್ವರ ರಥ, ಹೆಡಗಿಮದ್ರಾದ ಶ್ರೀ ವೀರಭದ್ರ ರಥ, ಆಳಂದ ತಾಲೂಕಿನ ಜಿಡಗಾದ ಶ್ರೀ ಸಿದ್ಧ ಸಂಸ್ಥಾನ ಮಠದ ರಥ, ಶಹಾಪುರ ತಾಲೂಕಿನ ಶ್ರೀ ಡಿಗ್ಗಿ ಸಂಗಮೇಶ್ವರ ರಥ, ಚಿಂಚೋಳಿ ತಾಲೂಕಿನ ಕರಕನಳ್ಳಿಯ ಶ್ರೀ ಬಕ್ಕಪ್ರಭುದೇವರ ರಥ, ಬೀದರ ಜಿಲ್ಲೆಯ ಚಾಂಗಳೇರದ ಶ್ರೀ ವೀರಭದ್ರನ ರಥ, ರಾಯಚೂರು ಜಿಲ್ಲೆಯ ದೇವಸೂಗೂರದ ಶ್ರೀ ಸೂಗೂರೇಶ್ವರ ರಥ, ಬೆಳಗಾವಿ ಜಿಲ್ಲೆಯ ಅಕ್ಕತಂಗಿಯರ ಹಳ್ಳದ ಶ್ರೀ ದುರ್ಗಾದೇವಿಯ ರಥ, ಈ ಎಲ್ಲ ರಥಗಳ ಗೋಪುರ ಭಾಗಗಳಲ್ಲಿ ಕೆಲವು ದೇವತೆಯರ ಚಿತ್ರ ಪಟಗಳನ್ನು ಅಳವಡಿಸುವುದು ಕಂಡುಬರುತ್ತದೆ.

ಈ ಎಲ್ಲ ರಥಗಳು ಹಾಗೂ ಇನ್ನೂ ಅನೇಕ ಕಬ್ಬಿಣದ ಅಂಕಣ ರಥಗಳು, ಗೋಪುರ ಭಾಗದ ಮೇಲೆ ಕಡಗೋಲು ನೆಲ್ಲಿಯಾಕಾರದ ಅಥವಾ ದುಂಡಾಕಾರದ ಶಿಖರ ಭಾಗಗಳನ್ನು ಹೊಂದಿರುತ್ತವೆ. ಕೆಲವು ರಥಗಳು ಮೊಗ್ಗು ಹಾಗೂ ಎಲೆಯಾಕಾರದ ಅರಳಿದ ಹೂವಿನಾಕಾರದ ಸುಂದರವಾದ ಶಿಖರ ಭಾಗಗಳನ್ನು ಹೊಂದಿರುವುದು ಸಾಮಾನ್ಯವಾಗಿ ಕಬ್ಬಿಣದ ಎಲ್ಲ ಅಂಕಣ ರಥಗಳಲ್ಲಿಯೂ ಕಂಡುಬರುತ್ತದೆ. ಶಿಖರ ಭಾಗಗಳು ಚಿತ್ತಾಕರ್ಷಕ ವರ್ಣಗಾರಿಕೆಯಿಂದ ಕೂಡಿರುತ್ತವೆ.

೨. ಬೆಳ್ಳಿಯ ರಥಗಳ ಗೋಪುರ ಭಾಗ :

ಬೆಳ್ಳಿಯ ರಥಗಳ ಗೋಪುರ ಭಾಗವು ದೇವಸ್ಥಾನದ ಗೋಪುರ ಭಾಗದಂತೆಯೇ ನಿರ್ಮಾಣಗೊಂಡಿರುತ್ತದೆ. ಈ ರಥದಲ್ಲಿ ಗೋಪುರ ಹಾಗೂ ಶಿಖರಗಳು ಸ್ಥಿರವಾಗಿ ರಥದಲ್ಲಿಯೇ ಇರುತ್ತವೆ. ಬೆಳ್ಳಿಯ ರಥದ ಗೋಪುರ ಭಾಗವು ಗ್ರೀವ ಹಾಗೂ ಶಿಖರ ಭಾಗದಲ್ಲಿ ಸುಂದರವಾದ ನಕ್ಷೆಗಳನ್ನುಳ್ಳ ಬೆಳ್ಳಿಯ ತಗಡುಗಳ ಉಬ್ಬುಶಿಲ್ಪಗಳನ್ನು ಹೊಂದಿರುತ್ತವೆ.

ಶೃಂಗೇರಿಯ ಶ್ರೀ ಶಾರದಾಂಬೆಯ ರಥ, ಕೊಟ್ಟೂರಿನ ಶ್ರೀ ಕೋಟ್ಟೂರೇಶ್ವರ ರಥ, ಉಡುಪಿಯ ರಥ ಹಾಗೂ ಧರ್ಮಸ್ಥಳದ ಶ್ರೀ ಮಂಜುನಾಥನ ರಥಗಳಲ್ಲಿ ಗೋಪುರ ಹಾಗೂ ಶಿಖರ ಭಾಗಗಳು ಸುಂದರವಾದ ನಕ್ಷೆಗಳ ಉಬ್ಬುಶಿಲ್ಪ ವಿನ್ಯಾಸಗಳನ್ನು ಹೊಂದಿವೆ. ಶೃಂಗೇರಿಯ ರಥದ ಗೋಪುರಭಾಗದಲ್ಲಿ ಒಂದೆರಡು ದೇವತಾ ಶಿಲ್ಪಗಳನ್ನು ಕಾಣಬಹುದು. ಧರ್ಮಸ್ಥಳದ ರಥದ ಪ್ರಭಾವಳಿಯು ಕೀರ್ತಿಮುಖದ ಶಿಲ್ಪವನ್ನು ಹೊಂದಿದೆ. ಈ ಎಲ್ಲ ರಥಗಳಲ್ಲಿ ಗೋಪುರ ಹಾಗೂ ಶಿಖರಗಳ ಮೇಲ್ಭಾಗದಲ್ಲಿ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದ ಹೂವಿನಾಕಾರದ, ಬಳ್ಳಿಯಾಕಾರದ, ವಿವಿಧ ಪಕ್ಷಿಗಳ ರೆಕ್ಕೆಗಳು ಹಾಗೂ ಮುಖದ ವಿನ್ಯಾಸಗಳನ್ನು ಹೋಲುವ ನಕ್ಷೆಗಳ ಉಬ್ಬುಶಿಲ್ಪಗಳನ್ನು ಕಾಣಬಹುದು.

೩. ಚಿನ್ನದ ರಥಗಳ ಗೋಪುರ ಭಾಗ :

ಚಿನ್ನದ ರಥಗಳ ಗೋಪುರ ಭಾಗವು ಸಹ ಬೆಳ್ಳಿಯ ರಥದ ಗೋಪುರ ಭಾಗದಂತೆಯೇ ನಿರ್ಮಾಣಗೊಂಡಿರುತ್ತದೆ. ಶೃಂಗೇರಿಯ ಶ್ರೀ ಶಾರದಾಂಬೆಯ ಹಾಗೂ ಉಡುಪಿಯ ಶ್ರೀ ಕೃಷ್ಣನ ರಥಗಳಲ್ಲಿ ಗೋಪುರ ಭಾಗಗಳಲ್ಲಿ ಕೆಲವು ದೇವತಾಶಿಲ್ಪಗಳು ಹಾಗೂ ಕುಸುರಿ ಕೆತ್ತನೆಯಿಂದ ಕೂಡಿದ ವಿವಿಧ ನಕ್ಷೆಗಳ ಉಬ್ಬುಶಿಲ್ಪಗಳನ್ನು ಕಾಣಬಹುದು. ಗೋಪುರದ ಮೇಲಿರುವ ಶಿಖರವು ಚಪ್ಪಟೆಯ ಕಿತ್ತಳೆ ಹಣ್ಣಿನಾಕಾರದ, ಇಲ್ಲವೆ ಕಡಗೋಲು ನೆಲ್ಲಿಯಾಕಾರದ ವಿನ್ಯಾಸದಲ್ಲಿರುತ್ತದೆ.

ಉತ್ಸವದ ಸಂದರ್ಭದಲ್ಲಿ ಈ ಚಿನ್ನದ ರಥಗಳ ಕಳಶ ಭಾಗದಲ್ಲಿ ಒಂದು ಚಿನ್ನದ ಕೊಡೆಯನ್ನು ಅಳವಡಿಸುವುದು ಕಂಡುಬರುತ್ತದೆ. ಚಿನ್ನದ ರಥಗಳ ಗೋಪುರ ಭಾಗವು, ಬೆಳ್ಳಿಯ ರಥಗಳ ಗೋಪುರ ಭಾಗಕ್ಕೆ ಹೋಲಿಕೆಯಾಗುತ್ತದೆ. ಶೃಂಗೇರಿಯ ಶ್ರೀ ಶಾರದಾಂಬೆಯ ಬೆಳ್ಳಿಯ ರಥ ಹಾಗೂ ಚಿನ್ನದ ರಥಗಳ ಗೋಪುರ ಭಾಗಗಳು ವಿನ್ಯಾಸದಲ್ಲಿ ಸಾಮ್ಯತೆಯನ್ನು ಹೊಂದಿವೆ.

ಕ. ಸಂಕೀರ್ಣ ಮಾಧ್ಯಮ ರಥಗಳ ಗೋಪುರ ಭಾಗ :

ಸಂಕೀರ್ಣ ಮಾಧ್ಯಮದ ರಥಗಳಲ್ಲಿ ಕಟ್ಟುವ ರಥಗಳು, ತಟ್ಟಿಯ ರಥಗಳು, ತೆಪ್ಪದ ರಥಗಳು ಹಾಗೂ ಹೂವಿನ ರಥಗಳ ಗೋಪುರ ಭಾಗಗಳ ಬಗ್ಗೆ ಪ್ರತ್ಯೇಕವಾಗಿ ತಿಳಿಯುವಾ.

೧ . ಕಟ್ಟುವ ರಥಗಳ ಗೋಪುರ ಭಾಗ.

೨. ತಟ್ಟಿಯ ರಥಗಳ ಗೋಪುರ ಭಾಗ.

೩.ತೆಪ್ಪದ ರಥಗಳ ಗೋಪುರ ಭಾಗ.

೪. ಹೂವಿನ ರಥಗಳ ಗೋಪುರ ಭಾಗ.

೧. ಕಟ್ಟುವ ರಥಗಳ ಗೋಪುರ ಭಾಗ : ಕಟ್ಟುವ ರಥಗಳ ಗೋಪುರ ಭಾಗಗಳು ಪ್ರಾದೇಶಿಕವಾಗಿ ಭಿನ್ನತೆಯನ್ನು ಹೊಂದಿರುತ್ತವೆ. ಬೇರೆ ಬೇರೆ ವಸ್ತುಗಳಿಂದ ಕಟ್ಟಲಾಗುವ ಈ ರಥಗಳಲ್ಲಿ ಗೋಪುರ ಭಾಗವು ವಿವಿಧ ಬಣ್ಣ ಬಣ್ಣದ ಬಟ್ಟೆಗಳಿಂದ ಸುಂದರಗೊಂಡಿರುತ್ತದೆ. ಮಂಟಪ ಭಾಗದ ನಂತರ ಕಾಷ್ಠ ಮಾಧ್ಯಮದ ಗಡ್ಡಿ ರಥಗಳ ಚರ ರಥವನ್ನು ಕಟ್ಟುವಂತೆಯೇ ಈ ರಥಗಳ ಗೋಪುರ ಭಾಗವು ನಿರ್ಮಾಣಗೊಂಡಿರುತ್ತದೆ. ಕಟ್ಟುವ ರಥಗಳ ಗೋಪುರ ಭಾಗದಲ್ಲಿ ವಿವಿಧ ದೇವತೆಯರ ಚಿತ್ರಗಳನ್ನು ಅಂಟಿಸುವುದುಂಟು.

ಗುಲಬುರ್ಗಾದ ಶ್ರೀ ಶರಣ ಬಸವೇಶ್ವರ ರಥದಲ್ಲಿ ಈ ರೀತಿಯ ಗೋಪುರವನ್ನು ಕಟ್ಟುವುದು ಕಂಡುಬರುತ್ತದೆ. ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಶ್ರೀ ಬಸವೇಶ್ವರ ರಥ,ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಯಡಹಳ್ಳಿಯ ಸಿದ್ಧೇಶ್ವರ ರಥ, ಜಮಖಂಡಿ ತಾಲೂಕಿನ ರಬಕವಿಯ ಶ್ರೀ ಮಹಾದೇವ ರಥ, ಹೀಗೆ ಇನ್ನೂ ಅನೇಕ ಗ್ರಾಮೀಣ ಪ್ರದೇಶಗಳಲ್ಲಿ ಉತ್ಸವದ ಸಂಧರ್ಭದಲ್ಲಿ ಕಾಣಸಿಗುವ ಕಟ್ಟುವ ರಥಗಳ ಮಂಟಪ ಭಾಗದ ಮೇಲೆ ಮುಂದುವರೆಯುವ ಗೋಪುರ ಭಾಗ ಹಾಗೂ ಶಿಖರ ಭಾಗಗಳು ಆಕರ್ಷಕವಾಗಿ ಕಂಡುಬರುತ್ತವೆ.

೨. ತಟ್ಟಿಯ ರಥಗಳ ಗೋಪುರ ಭಾಗ : ತಟ್ಟಿಯ ರಥಗಳು ಸಹ ಅನೇಕ ಅಂತಸ್ತುಗಳಲ್ಲಿ

ನಿರ್ಮಾಣಗೊಂಡಿರುತ್ತದೆ. ಮಂಟಪ ಭಾಗದ ಅಂತಸ್ತಿನ ಮೇಲೆ ಮುಂದುವರೆಯುವ ಅಂತಸ್ತುಗಳು ಗೋಪುರ ಭಾಗವನ್ನು ಸೇರುತ್ತವೆ. ಈ ರಥದ ಗೋಪುರ ಭಾಗವು ಅಂತಸ್ತುಗಳು ಮೇಲೆ ಹೋದಂತೆ ಚಿಕ್ಕದಾಗಿರುತ್ತದೆ. ಗೋಪುರ ಭಾಗದ ಎಲ್ಲ ಅಂತಸ್ತುಗಳ ಸುತ್ತಲು ವಿವಿಧ ದೇವಾನುದೇವತೆಗಳ ಹಾಗೂ ಪೌರಾಣಿಕ ಹಿನ್ನೆಲೆಯ ಸಾಂದರ್ಭಿಕ ಚಿತ್ರಗಳನ್ನೊಳಗೊಂಡ ತಟ್ಟಿಗಳನ್ನು ಹೊಂದಿಸಲಾಗಿರುತ್ತದೆ. ಗೋಪುರ ಭಾಗದ ಮೇಲೆ ಅರ್ಧ ಚಂದ್ರಾಕೃತಿಯ ಇಲ್ಲವೆ ಗೋಲಾಕಾರದ ಶಿಖರದ ಮೇಲೆ ಖಳಶವನ್ನಿಡಲಾಗುವುದು. ಈ ರೀತಿಯ ಗೋಪುರ ಭಾಗವನ್ನು ದಕ್ಷಿಣ ಕರ್ನಾಟಕದ ಹಲವಾರು ಗ್ರಾಮೀಣ ಪ್ರದೇಶಗಳ ತಟ್ಟಿಯ ರಥಗಳಲ್ಲಿ ಕಾಣಬಹುದು.

೩. ತೆಪ್ಪದ ರಥಗಳ ಗೋಪುರ ಭಾಗ : ತೆಪ್ಪದ ರಥಗಳಲ್ಲಿ ಮಂಟಪ ಭಾಗದ ನಂತರ ಮುಂದುವರೆದು ಎರಡು ಅಥವಾ ಮೂರು ಅಂತಸ್ತುಗಳಲ್ಲಿ ಗೋಪುರ ಭಾಗವು ರಚನೆಯಾಗಿರುತ್ತದೆ. ವಿವಿಧ ಹಗುರವಾದ ಕಟ್ಟಿಗೆ ಬಿದಿರು ಹಾಗೂ ಇತರ ವಸ್ತುಗಳಿಂದ ನಿರ್ಮಿಸಲಾದ ಗೋಪುರ ಭಾಗಕ್ಕೆ ಬಣ್ಣ ಬಣ್ಣದ ಬಟ್ಟೆಯನ್ನು ಸುತ್ತಿರುವರು. ಗೋಪುರದ ಮೇಲ್ಭಾಗದಲ್ಲಿ ದುಂಡನೆಯ ಆಕಾರದಲ್ಲಿರುವ ಶಿಖರದ ಮೇಲೆ ಕಳಶವನ್ನಿಡುವರು.

ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ರಥ, ಮುಧೋಳದ ಶ್ರೀ ಬ್ರಹ್ಮಗಡ್ಡಿಯ ರಥ, ಉಡುಪಿಯ ಶ್ರೀ ಕೃಷ್ಣನ ರಥ, ಹೀಗೆ ಹಲವಾರು ತೆಪ್ಪೋತ್ಸವಗಳಲ್ಲಿ ಕಂಡುಬರುವ ರಥಗಳಲ್ಲಿ ಈ ರೀತಿಯ ಗೋಪುರ ಭಾಗವನ್ನು ಕಾಣಬಹುದು.

೪. ಹೂವಿನ ರಥಗಳ ಗೋಪುರ ಭಾಗ : ಹೂವಿನ ರಥಗಳ ಗೋಪುರ ಭಾಗವು ತೆಪ್ಪದ ರಥಗಳ ಗೋಪುರ ಭಾಗದಂತೆಯೇ ನಿರ್ಮಾಣಗೊಂಡು, ಹೂವಿನ ಹಾರಗಳಿಂದ ಅಲಂಕೃತಗೊಂಡಿರುತ್ತದೆ. ಗೋಪುರದ ಮೇಲ್ಭಾಗದಲ್ಲಿ ಹೂವುಗಳಿಂದ ತಯಾರಿಸಿದ ಗೋಲಾಕಾರದ ಶಿಖರದ ಮೇಲೆ ಕಳಶವನ್ನಿಡುವರು. ಇತ್ತೀಚೆಗೆ ಕಾಷ್ಠ ಮಾಧ್ಯಮದ ಗಡ್ಡಿ ರಥಗಳಂತೆಯೇ ವಿನ್ಯಾಸವಿರುವ, ಚಿಕ್ಕದಾದ ತೇರುಗಳಿಗೆ ಹೂವಿನ ಹಾರಗಳಿಂದ ಅಲಂಕಾರಮಾಡಿ, ಅವುಗಳನ್ನೇ ಹೂವಿನ ರಥಗಳೆಂದು ಉತ್ಸವದಲ್ಲಿ ಬಳಸುವದು ಕಂಡುಬರುತ್ತದೆ. ಈ ರಥಗಳ ಗೋಪುರದ ಮೇಲ್ಭಾಗದಲ್ಲಿ ದುಂಡನೆಯ ಆಕಾರದ ಹೂಗುಚ್ಚವನ್ನೇ ಶಿಖರವನ್ನಾಗಿಸಿ, ಅದರ ಮೇಲೆ ಕಳಶವನ್ನಿಡುವುದು ಕಂಡುಬರುತ್ತದೆ.

ಡ. ಶಿಲಾ ಮಾಧ್ಯಮದ ರಥಗಳ ಗೋಪುರ ಭಾಗ :

ಶಿಲಾ ಮಾಧ್ಯಮದ ರಥಗಳು ಕಲಾತ್ಮಕ ಗೋಪುರ ಭಾಗವನ್ನು ಹೊಂದಿರುವುದು ಕಂಡುಬರುತ್ತದೆ. ಹಂಪೆಯ ಶ್ರೀ ವಿಜಯವಿಠ್ಠಲ ದೇವಸ್ಥಾನದ ಆವರಣದಲ್ಲಿಯ ರಥಾಕಾರದ ಗರುಡ ಮಂಟಪದ ಮೇಲೆ ಇಟ್ಟಿಗೆ ಹಾಗೂ ಗಾರೆಯ ದುಂಡು ಶಿಖರವುಳ್ಳ ಗೋಪುರವಿತ್ತು. ಶಿಲೆಯ ರಥದ ಸುತ್ತಲಿನ ಪ್ರದೇಶದಲ್ಲಿ ಕುರುಚಲು ಗಿಡಗಳು ಒತ್ತಾಗಿ ಬೆಳೆದು, ರಥದ ಗೋಪುರ ಭಾಗದಲ್ಲಿ ಸೀಳು ಬಂದವು. ಇದರಿಂದ ರಥಕ್ಕೆ ಅಪಾಯವೆಂದು ರಥದ ಗೋಪುರ ಭಾಗವನ್ನು ತೆಗೆಯಲಾಯಿತು. ರಥದ ಮಂಟಪ ಭಾಗದಲ್ಲಿ ಇತ್ತೀಚೆಗೆ ಕೆಲವು ಸೈಜುಗಲ್ಲುಗಳ ಕಂಬಗಳನ್ನು ಆಸರೆಯಾಗಿ

ಕೊಡಲಾಗಿದೆ[೨೫]. ಪ್ರಕೃತಿಯ ಮಡಿಲಲ್ಲಿ ಮೈಕೊಡವಿ ನಿಂತ ಹಂಪೆಯ ಶಿಲೆಯ ರಥದ ಗೋಪುರವು, ಮಳೆ, ಗಾಳಿಗಳಿಗೆ ಸಿಲುಕಿ, ನಶಿಸಿ ಹೋದುದರಿಂದ ಹಾಗೂ ಸರಿಯಾದ ಸಂರಕ್ಷಣೆ ಒದಗದಿರುವುದರಿಂದ, ಇಂದು ಅದು ಕಾಣಸಿಗದು.

ಮಾಮಲ್ಲಪೂರದ ಪಂಚಪಾಂಡವರ ರಥಗಳು, ದಕ್ಷಿಣ ಪಿಡಾರಿ, ಉತ್ತರ ಪಿಡಾರಿ ರಥಗಳು ಹಾಗೂ ಗಣೇಶನ ರಥಗಳು ಗೋಪುರ ಭಾಗವನ್ನು ಹೊಂದಿವೆ.

ದ್ರೌಪದಿ ರಥದ ಗುಮ್ಮಟಾಕಾರದ ಶಿಖರದ ನಾಲ್ಕೂ ಕೆಳಮೂಲೆಗಳಲ್ಲಿಯೂ ಲೋಹದ ಉಬ್ಬು ಕೆತ್ತನೆಯಲ್ಲಿ ಕಂಡುಬರುವಂತಹ ಅಲಂಕಾರಿಕ ನಕ್ಷೆಗಳ ಕೆತ್ತನೆ ಇದೆ. ಕಳಶವು ಪ್ರತ್ಯೇಕವಾಗಿ ನಿರ್ಮಾಣಗೊಂಡಿದ್ದು , ಈಗ ಅದು ರಥದ ಮುಂಭಾಗದಲ್ಲಿದೆ. ಅರ್ಜುನ ರಥವು ಕ್ಷುದ್ರನಾಶಿಕ ಕೂಟ, ಶಾಲಾಗಳು, ಗ್ರೀವಾ, ಮಹಾನಾಶಿಕ ಹಾಗೂ ಶಿಖರ ಭಾಗವನ್ನು ಹೊಂದಿದೆ. ಮೇಲಂತಸ್ತಿನ ತುದಿಯಲ್ಲಿರುವ ಶಿಖರವು ಅಷ್ಟಾಸ್ರವಾಗಿದೆ. ಮಹಾನಾಸಿಕ ತೋರಣದಿಂದ ಚಾಚಿಕೊಂಡಿದೆ. ಶಿಖರದಲ್ಲಿ ದ್ರೌಪದಿ ರಥದ ಸೂರಿನ ಮೇಲಿರುವ ಅಲಂಕಾರವನ್ನು ಹೋಲುವ ಕೆತ್ತನೆಗಳಿವೆ. ಅರ್ಜುನ ರಥವು ದ್ರಾವಿಡ ಶೈಲಿಯನ್ನು ಹೊಂದಿದ ಎರಡು ತಲಗಳ ವಿಮಾನ[೨೬].

ಭೀಮ ರಥವು ಏಕತಲದ ವಿಮಾನ. ಇದರ ಸೂರು ಶಾಲಾ ರೀತಿಯಲ್ಲಿ ಮುಚ್ಚಿದ ಎತ್ತಿನ ಗಾಡಿಯ ಆಕಾರದಲ್ಲಿದೆ. ಸೂರಿನ ತುದಿಯಲ್ಲಿ ಸೂಪ್ತಿಗಳ ಸಾಲೊಂದು ಅಲಂಕೃತವಾಗಿದೆ. ಗ್ರೀವದ ಉದ್ದವಾಗಿರುವ ಎರಡು ಪಾರ್ಶ್ವಗಳಲ್ಲಿಯೂ ಮುಂದೆ ಚಾಚಿಕೊಂಡಿರುವ ಐದು ನಾಸಿಕಗಳಿವೆ. ಇವುಗಳಲ್ಲಿ ಮಧ್ಯದಲ್ಲಿರುವುದು ದೊಡ್ಡದಾಗಿದೆ. ಶಿಖರದ ಮೇಲ್ಭಾಗದಲ್ಲಿ ಹದಿನೆಂಟು ಸ್ತೂಪಿಗಳು ಇರಬೇಕಿತ್ತು. ಈಗ ಅವುಗಳ ತಳಗಳು ಮಾತ್ರ ಉಳಿದಕೊಂಡಿವೆ[೨೭].

ಧರ್ಮರಾಜನ ರಥವು ಮೂರು ಅಂತಸ್ತುಗಳ ವಿಮಾನ. ಇದರ ಅಂತಸ್ತುಗಳು ಚೌಕಾರದಲ್ಲಿವೆ. ಗ್ರೀವ ಮತ್ತು ಶಿಖರ ಭಾಗಗಳು ಅಷ್ಟಾಸ್ರಗಳಾಗಿವೆ. ಇದು ಶೈಲಿಯಲ್ಲಿ ಅರ್ಜುನ ರಥವನ್ನು ಹೋಲುತ್ತದೆ. ಸಹದೇವ ರಥದ ಶಿಖರದ ಎರಡು ಕೊನೆಗಳಲ್ಲಿರುವ ತ್ರಿಕೋನಾಕಾರದ ಗೋಡೆಗಳ ಮೇಲೆ ಎರಡು ಅಂತಸ್ತಿನ ವಿಮಾನದ ಉಬ್ಬು ಕೆತ್ತನೆ ಇದೆ. ಗಣೇಶ ರಥವು ಸಹ ಭೀಮ ರಥದಂತಹ ಗೋಪುರವನ್ನು ಹೋಲುತ್ತದೆ. ಇದರ ಮುಚ್ಚಿದ ಎತ್ತಿನ ಗಾಡಿಯ ಆಕಾರದ ತುದಿಯಲ್ಲಿ ಮೂರು ನಾಸಿಕಗಳಿವೆ. ಶಿಖರದ ಮುಚ್ಚಿದ ಎರಡು ಕೊನೆಗಳಲ್ಲಿ ತ್ರಿಶೂಲವನ್ನು ಬಿಡಿಸಲಾಗಿದೆ[೨೮].

ಹೀಗೆ ಶಿಲೆಯ ರಥಗಳಲ್ಲಿಯೂ ಗೋಪುರ ಹಾಗೂ ಶಿಖರ ಭಾಗವು ಕಂಡುಬರುತ್ತದೆ.

: ರಥೋತ್ಸವಗಳ ವಿಧಿವಿಧಾನಗಳು :

ನಮ್ಮ ದೇಶದಲ್ಲಿ ರಥೋತ್ಸವಗಳು ಜಾನಪದ ಹಾಗೂ ಆಗಮೋಕ್ತ ಎಂದು ಎರಡು ತಳಹದಿಯ ಮೇಲೆ ಜರುಗುತ್ತವೆ. ರಥೋತ್ಸವವು ಒಂದು ವೈಧಿಕ ಕ್ರಿಯೆಯಾದರೆ, ತೇರನ್ನು

೨೫.''ಅಲೆಕ್ಸಾಂಡರ್ ಜೆ. ಗ್ರೀನ್ ಲಾ ಮತ್ತು ಜಾನ್ ಗಾಲಿಂಗ್ಸ್ ಕಂಡ ವಿಜಯನಗರ'' ಎಮ್.ಎಸ್.ನಾಗರಾಜರಾವ, ಪು.ಸಂ.೨೨೮,೧೯೯೮.

೨೬. ''ಶಿಲ್ಪಾದರ್ಶ'' ಜಿ.ಜ್ಞಾನಾನಂದ, ಪು.ಸಂ.೭೮, ೨೦೦೧.

೨೭.''ಶಿಲ್ಪಾದರ್ಶ'' ಜಿ.ಜ್ಞಾನಾನಂದ, ಪು.ಸಂ.೮೦, ೨೦೦೧.

೨೮.''ಶಿಲ್ಪಾದರ್ಶ'' ಜಿ.ಜ್ಞಾನಾನಂದ, ಪು.ಸಂ.೮೩, ೨೦೦೧.

ಎಳೆಯುವುದು ಜನಪದ ವಿಧಾನವಾಗಿದೆ ಎನ್ನಬಹುದು. ಒಂದು ಧಾರ್ಮಿಕ ಉತ್ಸವದಲ್ಲಿ ಎಷ್ಟು ಭಾಗ ವೈದಿಕ, ಎಷ್ಟು ಭಾಗ ಅವೈಧಿಕ ಎಂದು ಹೇಳುವುದು ಕಷ್ಟ. ಅಭಿಜಾತ ದೇವತೆಗಳೊಂದಿಗೆ ಗ್ರಾಮ ದೇವತೆಗಳು ಪೂಜೆಗೊಳ್ಳುತ್ತವೆ. ಅವೈಧಿಕ ದೇವತೆಗಳನ್ನು ವೈದಿಕ ವಿಧಾನಗಳಿಂದ ಪೂಜೆ ಮಾಡುವ ಕ್ರಮವು ನಮ್ಮಲ್ಲಿ ಪ್ರಚಲಿತವಿದೆ. ಅದರಂತೆ ವೈದಿಕ ಹಾಗೂ ಜಾನಪದ ಎರಡೂ ಮೂಲಗಳಿಂದಲೂ ನಮ್ಮಲ್ಲಿ ರಥೋತ್ಸವಗಳು ಜರುಗುತ್ತವೆ[೨೯]. ರಥೋತ್ಸವದ ಉದ್ದೇಶವೇನು ಹಾಗೂ ಅವು ಹೇಗೆ ಅಸ್ಥಿತ್ವಕ್ಕೆ ಬಂದವು ಎಂಬ ಪ್ರಶ್ನೆಗಳಿಗೆ ಪುರಾಣ ಇತಿಹಾಸವನ್ನು ಆಧಾರವಾಗಿಟ್ಟುಕೊಂಡು ಮಿಕ್ಕಿದ್ದನ್ನು ತರ್ಕ ಊಹೆಗಳಿಂದ ತಿಳಿಯಬಹುದು.

ಜಗತ್ತಿನಲ್ಲಿ ಪ್ರಪ್ರಥಮವಾಗಿ ಬ್ರಹ್ಮದೇವರು ತಮ್ಮ ದಿನನಿತ್ಯದ ಪೂಜೆ ಅಂಗವಾಗಿ ರಥೋತ್ಸವನ್ನು ಆಚರಿಸಿದರು. ಆದ್ದರಿಂದ ಇದು ಭೂಲೋಕದಲ್ಲಿ ಬ್ರಹ್ಮೋತ್ಸವವೆಂತಲೂ ಪ್ರಚಾರವಾಯಿತು. ಕೆಲವು ರಥಗಳಿಗೆ ಬ್ರಹ್ಮ ರಥಗಳೆಂದೇ ಕರೆಯಲಾಗುತ್ತದೆ. ''ರಥ ಯಾತ್ರಾ ತದಾ ಶುಕ್ರಸುರೈಃ ಸರ್ವೈ ಸದಾ ಕೃತಾ ತಥಕಿನ್ನರ ಗಂಧರ್ವ ಭೂ ಪಾತಾಲ ನಿವಾಸಿಭಿ ; ರಥೋತ್ಸವ ಪ್ರಭಾವೇಣಿ ಮೋದಂದತೇದಿನಿ ದೇವತಾ'' ಎಂಬ ಈ ಶ್ಲೋಕದ ಮೂಲಕ ಆರಂಭದಲ್ಲಿ ರಥೋತ್ಸವನ್ನಾಚರಿಸಿದನು. ನಂತರ ರುದ್ರದೇವರು, ಇಂದ್ರದೇವರು, ಗಂಧರ್ವರು, ಕಿನ್ನರರು ಮತ್ತು ಭೂಲೋಕ ಪಾತಾಳ ನಿವಾಸಿಗಳು ರಥೋತ್ಸವನ್ನು ಆಚರಿಸಿ ಮನೋರಥವನ್ನು ಹೊಂದಿ ಸಂತೋಷ ಪೂರ್ಣರಾಗಿದ್ದಾರೆ ಎಂದು ಹೇಳಿದ್ದಾರೆ.

ರಥೋತ್ಸವವನ್ನು ಕುರಿತು ಮತ್ಸ್ಯ ಪುರಾಣದಲ್ಲಿಯೂ ಒಂದು 'ಆಖ್ಯಾಯಿಕೆ' ಈ ರೀತಿಯಾಗಿದೆ ತ್ರಿಪುರಾಸುರರಿಂದ ಉಪಪಳಕ್ಕೆ ಒಳಗಾದ ಎಲ್ಲಾ ದೇವತೆಗಳು ರುದ್ರದೇವರ ಸನ್ನಿಧಿಗೆ ಬಂದು ಲೋಕ ಕಂಠಕವಾದ ತ್ರಿಪುರನನ್ನು ಸಂಹಾರಮಾಡಲು ಪ್ರಾರ್ಥಿಸಿದರು. ಆಗ ರುದ್ರದೇವರು ಅವರಿಗೆ ರಥ ನಿರ್ಮಾಣ ಮಾಡುವ ವಿಧಾನವನ್ನು ತಿಳಿಸಿ ಉತ್ತಮ ಹಾಗೂ ದಿವ್ಯ ರಥವನ್ನು ನಿರ್ಮಿಸಲು ಹೇಳಿದರು. ಅದರಂತೆ ವಿಧ್ಯುಕ್ತವಾಗಿ ದೇವತೆಗಳು ರಥವನ್ನು ನಿರ್ಮಾಣ ಮಾಡಲು ರುದ್ರದೇವರು ಅವರೊಂದಿಗೆ ಆ ರಥದಲ್ಲಿ ಪರಮಾತ್ಮನನ್ನು ಕೂಡ್ರಿಸಿ ವಿಜೃಂಭಣೆಯಿಂದ ರಥೋತ್ಸವನ್ನು ಆಚರಿಸಿದರು. ಕಾಲಘಟ್ಟದ ದೃಷ್ಠಿಯಿಂದ ನೋಡಿದರೆ ರಥೋತ್ಸವದ ಆಚರಣೆ ವೇದ ಕಾಲದಿಂದ ಈಚಿನದು. ವೇದ ಕಾಲದಲ್ಲಿ ಮೂರ್ತಿ ಪೂಜೆ ಅಸ್ತಿತ್ವದಲ್ಲಿರಲಿಲ್ಲ. ನಿಸರ್ಗದ ವಿಶಿಷ್ಟ ಶಕ್ತಿಗಳಾದ ಅಗ್ನಿ, ವರುಣ, ವಾಯು, ಸೂರ್ಯ, ಚಂದ್ರ ಮೊದಲಾದ ಶಕ್ತಿಗಳನ್ನು ದೇವರೆಂದು ಕಲ್ಪಿಸಿ ಯಜ್ಞ ಯಾಗಾದಿಗಳನ್ನು ಮಾಡಿ ಅಗ್ನಿಯ ಮೂಲಕ ಹವಿಸ್ಸನ್ನು ಅರ್ಪಿಸುತ್ತಿದ್ದರು. ಮಧ್ಯ ಯುಗದ ಸುಮಾರಿಗೆ ಮೂರ್ತಿ ಪೂಜೆ ಆರಂಭಗೊಂಡು ದೇವಾಲಯಗಳು ಅಸ್ತಿತ್ವಕ್ಕೆ ಬರತೊಡಗಿದವು ಎಂದು ತರ್ಕಿಸಬಹುದಾಗಿದೆ. ಕಾಲಾನಂತರದಲ್ಲಿ ಈ ದೇವಾಲಯಗಳನ್ನು ಆಶ್ರಯಿಸಿ ಹಲವಾರು ಉತ್ಸವಾದಿಗಳು ಆರಂಭವಾಗಿ ಉತ್ಸವದ ಪ್ರತೀಕವಾಗಿ ರಥಗಳು ರೂಪಗೊಂಡು ರಥೊತ್ಸವದ ಕಾಲಘಟ್ಟವನ್ನು ಮಧ್ಯಯುಗವೆಂದು ತರ್ಕಿಸಬಹುದಾಗಿದೆ.

ಪುರಾಣ ಕಾಲದಲ್ಲಿ ಬ್ರಹ್ಮನಿಂದ ಆರಂಭಗೊಂಡ ಈ ರಥೋತ್ಸವ ಕಾಲಚಕ್ರ ಉರುಳಿದಂತೆ ರಾಜ ಮಹಾರಾಜರ, ಸಾಮಂತರ, ದಂಢನಾಯಕರ, ಪಾಳೇಗಾರರ, ಆಶ್ರಯದಲ್ಲಿ ಬೆಳೆದು ಉಳಿದು

೨೯.''ದೇಗುಲ ರಥ ಶಿಲ್ಪ'' ದ್ರುವರಾಜ ನಾ. ಗದಗಕರ, ಪು.ಸಂ. ೧೯೯.

ಬಂದಿವೆ. ರಾಜಮಹಾರಾಜರ ಆಳ್ವಿಕೆಯನಂತರ ಈ ರಥೋತ್ಸವಗಳನ್ನು ದೇವಾಲಯಗಳಲ್ಲಿ ಧರ್ಮದರ್ಶಿಗಳು, ಆಡಳಿತ ಮಂಡಳಿಯವರು ಪೋಷಿಸಿಕೊಂಡು ಬಂದರೆ ಮಠಮಾನ್ಯಗಳಲ್ಲಿ ಮಹಾಸ್ವಾಮಿಗಳು ಈ ಪರಪಂರೆಯನ್ನು ಬೆಳೆಸಿ ಉಳಿಕೊಂಡುಬರುವಲ್ಲಿ ಪ್ರಧಾನ ಪಾತ್ರವಹಿಸಿದ್ದಾರೆ. ಸ್ಪೂಟ್ನಿಕ್ ಯುಗದಲ್ಲಿ ಕೂಡಾ ಆರಾಧ್ಯ ದೇವರ, ಸ್ವಾಮಿಗಳ, ಸಾಧು, ಸಂತರ, ಜ್ಞಾನಿಗಳ, ಪವಾಡ ಪುರುಷರ ಹೆಸುರುಗಳಿಂದ ವಿಜೃಂಭಣೆಯಿಂದ ರಥೋತ್ಸವಗಳು ಜರಗುತ್ತವೆ.

ದೇವಾಲಕ್ಕೆ ಬರಲು ಅಶಕ್ತಿರಾದ ಜನಸಮೂಹಕ್ಕೆ ದರ್ಶನಭಾಗ್ಯವನ್ನು ಕಲ್ಪಿಸಿಕೊಡುವ ಉದ್ದೇಶದಿಂದ-ರಥೋತ್ಸವಗಳು ದೇವಾಲಯದಲ್ಲಿ ಅಸ್ತಿತ್ವಕ್ಕೆ ಬಂದವು ರಥೋತ್ಸವದ ದಿವಸ ರೋಗಪಿಡಿತರು, ಅಂಗವಿಕಲರು, ವೃದ್ಧರು, ಬಾಣಂತಿಯರು ಹಾಗೂ ಜನ ಸಾಮಾನ್ಯರು ಎಲ್ಲರೂ ದೇವರ ದರ್ಶನವನ್ನು ತಮ್ಮ ತಮ್ಮ ಮನೆಯಂಗಳದಲ್ಲಿಯೇ ಪಡೆಯುತ್ತಾರೆ. ಆದಿನ ಭಗಂವತ ದೇವಾಲದ ಪರಿಧಿಯನ್ನು ದಾಟಿ ನಗರವನ್ನು ಪ್ರವೇಶಿಸಿ ಭಕ್ತರ ಮನೆಯಂಗಳವನ್ನು ಪ್ರವೇಶಿಸುತ್ತಾನೆ. ರಥೋತ್ಸವದ ದಿನ ರಥಕ್ಕೆ ದೃಷ್ಠಿದೋಷವಿಲ್ಲ , ಸ್ಪರ್ಶದೋಷವಿಲ್ಲ. ಸಮಾನ ಎಲ್ಲ ವರ್ಗದ ಜನರು ತಮ್ಮ ಕವಟುಂಬಿಕ ಪರಿಧಿಯನ್ನು ದಾಟಿ ಸಾಮಾಜಿ ಅಂತಸ್ತನ್ನು ಮರೆತು ಒಂದಾಗಿ ರಥೋತ್ಸವದಲ್ಲಿ ಭಾಗವಹಿಸುತ್ತಾರೆ. ಹೀಗೆ ನಡೆಯುವ ರಥೋತ್ಸವಗಳಲ್ಲಿ ವೈದಿಕ ಹಾಗೂ ಜಾನಪದ ರಥೋತ್ಸವಗಳನ್ನು ಕಾಣಬಹುದು.

ಜಾನಪದ ರಥೋತ್ಸವಗಳು ಹೆಸರೇ ಸೂಚಿಸುವಂತೆ ಜಾನಪದ ತಳಹದಿಯ ಮೇಲೆ ನಡೆಯುವಂತಹದ್ದು . ಈ ರಥೋತ್ಸವಗಳು ಕೇವಲ ರಥೋತ್ಸವದ ಆಚರಣೆಯೊಂದೇ ಆಗಿರದೆ ಮುಂದೆ ಜಾತ್ರೆಯ ಸ್ವರೂಪವನ್ನು ಪಡೆದು. ಮೂರು ದಿವಸಗಳಿಂದ ತಿಂಗಳುಗಟ್ಟಲೆ ಜರುಗುತ್ತವೆ. ಜನಪದ ರಥೋತ್ಸವಗಳ ರೀತಿ ನೀತಿ ಬೇರೆಯಾಗಿರದಿದ್ದರೂ, ಅವುಗಳ ಹಿನ್ನೆಲೆ, ಭಾವನೆ, ಕಲ್ಪನೆಗಳು ಮಾತ್ರ ಭಿನ್ನವಾಗಿರುತ್ತವೆ.

ಆಗಮೋಕ್ತ ರಥೋತ್ಸವಗಳು ಆಯಾದೇವಾಲಯದ ಸಂಪ್ರದಾಯಕ್ಕೆ ಅನುಗುಣವಾಗಿ ಮೂರರಿಂದ ಒಂಭತ್ತು ದಿವಸಗಳವರೆಗೆ ಜರುಗುತ್ತವೆ. ಅದರ ಪೂರ್ವಭಾವಿಯಾಗಿ ದೇವಾಲಯದಲ್ಲಿ ದಿನವಿಡಿ ಹಲವಾರು ಧಾರ್ಮಿಕ ವಿಧಿ ವಿಧಾನಗಳು ಜರುಗುತ್ತವೆ.

ಜಾನಪದ ರಥೋತ್ಸವದ ಮುನ್ನ ಕೆಲವು ಜನಪದೀಯ ಆಚರಣೆಗಳು ಜರುಗುತ್ತವೆ. ವಾರಬಿಡುವುದು, ಕರಿ ಕಟ್ಟುವುದು, ಧ್ವಜಾರೋಹಣ, ಗಡ್ಡಿಗೆ ಹಾಕುವುದು, ಹರಕೆ ಒಪ್ಪಿಸುವುದು, ಗ್ರಾಮ ದೇವತೆಗೆ ಉಡಿ ತುಂಬುವುದು, ತೇರಿನ ಗಾಲಿಗಳನ್ನು ಜೋಡಿಸುವುದು, ರಥ ನಿರ್ಮಾಣ ಮಾಡುವುದು ಅಥವಾ ಸಿದ್ಧಗೊಂಡ ರಥವನ್ನು ಸ್ವಚ್ಛಗೊಳಿಸುವದು ಇವೆ ಮೊದಲಾದ ಕಾರ್ಯಗಳು ಮುಗಿದ ನಂತರ ಉಚ್ಚಾಯಿಗಳ ಮೆರವಣಿಗೆ ನಡೆಯುತ್ತದೆ.

ಆಗಮೋಕ್ತ ರಥೋತ್ಸವಗಳಲ್ಲಿ ಬೆಳಗಿನ ಹೋಮ ಹವನಾದಿಗಳು ಹಾಗೂ ಅನ್ನ ಸಂತರ್ಪಣೆಗಳು ನಡೆದು, ಸಾಯಂಕಾಲ ಪುರಾಣ ಪ್ರವಚನ, ಹರಿಕೀರ್ತನಾದಿಗಳು ಜರುಗಿ, ಗೋಧೂಳಿ ಸಮಯದಲ್ಲಿ ವಾಹನೋತ್ಸವ ಹಾಗೂ ಪಲ್ಲಕ್ಕಿ ಸೇವೆಗಳು ನಡೆಯುತ್ತವೆ.

ಈ ವಾಹನೋತ್ಸವಗಳು ಆಯಾ ದೇವಾಲಯದ ಸಂಪ್ರದಾಯಕ್ಕೆ ಅನುಗುಣವಾಗಿರುತ್ತವೆ.

ಶೈವ ದೇವಾಲಯಗಳಲ್ಲಿ ನಂದಿ, ಸಿಂಹ, ಶರಭ, ಮೇಷ, ಪುರುಷ ಮೊದಲಾದ ವಾಹನಗಳು ಬಳಕೆಯಲ್ಲಿದ್ದರೆ, ವೈಷ್ಣವ ದೇವಾಲಯಗಳಲ್ಲಿ ಗರುಡ, ಹನುಮಂತ, ಹಂಸ, ಮಯೂರ, ಶೇಷ, ಚಂದ್ರ, ಸೂರ್ಯ, ಅಶ್ವ, ಗಜ, ಮೊದಲಾದ ವಾಹನಗಳು ಬಳಕೆಯಲ್ಲಿರುತ್ತವೆ.

ವಾಹನವು ಹಿಂಬದಿಯಲ್ಲಿ ವಿವಿಧ ಬಣ್ಣಗಳನ್ನು ಹೊಂದಿದ ಕೆಲವು ಚಿತ್ರಗಳನ್ನುಳ್ಳ ಹಾಗೂ ನಕ್ಷೆಗಳನ್ನುಳ್ಳ ಕಟ್ಟಿಗೆಯ ಅಥವಾ ಲೋಹದ ವಿಶಾಲವಾದ ಪ್ರಭಾವಳಿಯನ್ನು ಹೊಂದಿರುತ್ತದೆ. ಅದರ ಮಧ್ಯಭಾಗದಲ್ಲಿ ಉತ್ಸವ ಮೂರ್ತಿಯನ್ನಿಡುವಷ್ಟು ಭಾಗ, ಎತ್ತರದ ಪೀಠವನ್ನು ಹೊಂದಿರುತ್ತದೆ. ಅದರ ಕೆಳಗೆ ಆಯಾ ಮೂರ್ತಿಗೆ ಸಂಬಂಧಪಟ್ಟ ವಾಹನಗಳ ಶಿಲ್ಪಗಳನ್ನು ನಿಲ್ಲಿಸಲು ಹಾಗೂ ಬದಲಿಸಲು ಸ್ಥಳವಿರುತ್ತದೆ. ವಾಹನೋತ್ಸವ ಸಮಯದಲ್ಲಿ ದಿನವೂ ಒಂದೊಂದು ವಿಧದ ವಾಹನವನ್ನು ಉತ್ಸವ ಮೂರ್ತಿಯ ಕೆಳಗಡೆಗೆ ಅಲಂಕಾರಿಕವಾಗಿಟ್ಟು, ಗೋಧೂಳಿ ಸಮಯದಲ್ಲಿ ಊರಿನ ನಿಗದಿತ ಭೀದಿಯಲ್ಲಿ ವೈಭವಯುತವಾಗಿ ವಾಹನೋತ್ಸವವನ್ನು ಆಚರಿಸುತ್ತಾರೆ. ವಾಹನಗಳು ಕಟ್ಟಿಗೆ ಅಥವಾ ಕಿಟ್ಟಗಳಿಂದ ತಯಾರಿಸಲ್ಪಡುತ್ತವೆ. ವಿವಿಧ ಬಣ್ಣಗಳಿಂದ ಈ ಶಿಲ್ಪಗಳನ್ನು ಆಕರ್ಷಕವಾಗಿ ಕಾಣುವಂತೆ ಅಲಂಕರಿಸಿ ಶಿಲ್ಪಗಳಲ್ಲಿ ಜೀವಕಳೆಯನ್ನು ತುಂಬಲಾಗುತ್ತದೆ. ನಾಲ್ಕು ಜನರು ಸೇರಿ ವಾಹನವನ್ನು ಸರಾಗವಾಗಿ ಎತ್ತಬಹುದು, ಇಲ್ಲವೆ ಕೆಲವು ವಾಹನಗಳಿಗೆ ಚಕ್ರಗಳನ್ನು ಅಳವಡಿಸಿರುವುದು ಕಂಡುಬರುತ್ತದೆ. ಆಯಾ ದೇವಸ್ಥಾನದ ಸಾಂಪ್ರದಾಯಿಕ ಪದ್ಧತಿಗಳಂತೆ ವಾಹನದ ಎಡಬಲ ಬದಿಗಳಲ್ಲಿ ಛತ್ರಚಾಮರಗಳನ್ನು ಹಿಡಿದುಕೊಂಡು ಹೋಗುವ ಪರಂಪರೆ ಉಂಟು.

ಈ ರೀತಿಯಲ್ಲಿರುವ ವಾಹನಗಳನ್ನು ಗದಗ ಜಿಲ್ಲೆಯ ವರವಿ ಮೌನೇಶ್ವರ ದೇವಸ್ಥಾನ, ಕೊಪ್ಪಳ ಜಿಲ್ಲೆ ಕನಕಗಿರಿಯ ಕನಕರಾಯನ ದೇವಸ್ಥಾನ, ಬಳ್ಳಾರಿ ಜಿಲ್ಲೆ ಮರೆಮ್ಮನಹಳ್ಳಿಯ ಶ್ರೀ ರಾಮಾಂಜನೇಯ ದೇವಸ್ಥಾನ, ನಂಜನಗೂಡಿನ ಶ್ರೀ ನಮಜುಂಡೇಶ್ವರ ದೇವಸ್ಥಾನ, ಬೆಳಗಾವಿ ಜಿಲ್ಲೆ ಸವದತ್ತಿ ತಾಲೂಕಿನ ಕೆಂಗೇರಿಯ ಶ್ರೀ ದೇವಸ್ಥಾನ, ಮೈಸೂರಿನ ಶ್ರೀ ಚಾಮುಂಡೇಶ್ವರಿ ದೇವಸ್ಥಾನ, ಹೀಗೆ ನಾಡಿನ ಹಲವಾರು ಪ್ರಸಿದ್ಧ ದೇವಸ್ಥಾನಗಳಲ್ಲಿ ವಾಹನೋತ್ಸವಗಳನ್ನು ಕಾಣಬಹುದು.

ಈ ವಾಹನಗಳ ಮೆರವಣಿಗೆಯಂತೆಯೇ ಉಚ್ಚಾಯಗಳ ಮರೆವಣಿಗೆಗಳೂ ಸಹ ಬಹಳ ಆಕರ್ಷಕವಾಗಿರುತ್ತವೆ. ಚಕ್ಕಡಿಯ ಕಳಗದ ಮೇಲೆ ದೊಡ್ಡದಾದ ಡೊಳ್ಳಾರಿಯನ್ನಿಟ್ಟು, ಅದರ ಹಿಂಬದಿಯಲ್ಲಿ ಗ್ರಾಮೀಣ ಶೈಲಿಯಲ್ಲಿ ನಿರ್ಮಿಸಿದ ವಿವಿಧ ಚಿತ್ರಗಳನ್ನು ಹೊಂದಿದ ಪ್ರಭಾವಳಿಯನ್ನು ನಿಲ್ಲಿಸಿ ಅದರ ಮೇಲೆ ಛತ್ರಿಯನ್ನು ಕಟ್ಟುವರು. ಕೆಲವು ಪ್ರದೇಶಗಳಲ್ಲಿ ಕಾಷ್ಠ ಮಾಧ್ಯಮದ ಗಡ್ಡಿ ರಥದಂತೆಯೇ ಅಥವಾ ಅದರ ಮಂಟಪ ಭಾಗದಂತೆಯೇ ರಚಿಸಲಾದ ಉಚ್ಚಾಯಿಗಳನ್ನು ಕಾಣಬಹುದು.

ಬಾಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಬನಹಟ್ಟಿ ಶ್ರೀ ಕಾಡಸಿದ್ಧೇಶ್ವರ ಉಚ್ಚಾಯಿ, ವರವಿ ಶ್ರೀ ಮೌನೇಶ್ವರನ ಉಚ್ಚಾಯಿ, ಗದಗ ಜಿಲ್ಲೆಯ ಲಕ್ಷೇಶ್ವರದ ಶ್ರೀ ಸೋಮೇಶ್ವರನ ಉಚ್ಚಾಯಿ, ಬಾಗಲಕೋಟ ಜಿಲ್ಲೆ ಬದಾಮಿ ತಾಲೂಕಿನ ಮಹಾಕೂಟದ ಉಚ್ಚಾಯಿ, ಮುಚಖಂಡಿಯ ಶ್ರೀ ವೀರಭದ್ರನ ಉಚ್ಚಾಯಿ, ಕೂಡಲಸಂಗಮದ ಶ್ರೀ ಸಂಗಮನಾಥನ ಉಚ್ಚಾಯಿ, ಹೀಗೆ ನಾಡಿನ ಹಲವು ದೇವಸ್ಥಾನಗಳಲ್ಲಿ ಕಾಷ್ಠ ಮಾಧ್ಯಮದ ಗಡ್ಡಿ ರಥಗಳನ್ನು ಹೋಲುವ ಉಚ್ಚಾಯಿಗಳನ್ನು ಕಾಣಬಹುದು.

ಉಚ್ಚಾಯಗಳ ಶಿಲ್ಪಗಳು




ಶ್ರೀ ನಂಜುಡೇಶ್ವರ ಉಚ್ಚಾಯ
ನಂಜನಗೂಡು



ಶ್ರೀ ಕನಕರಾಯನ ಉಚ್ಚಾಯ
ಕನಕಗಿರಿ



ಶ್ರೀ ನಂಜುಡೇಶ್ವರ ಉಚ್ಚಾಯ
ನಂಜನಗೂಡು



ಶ್ರೀ ರಾಮಾಂಜನೇಯ ಉಚ್ಚಾಯ
ಮರೆಮ್ಮನಹಳ್ಳಿ
ಜಿ - ಬಳ್ಳಾರಿ



ಶ್ರೀ ನಂಜುಡೇಶ್ವರ ಉಚ್ಚಾಯ
ನಂಜನಗೂಡು



ಶ್ರೀ ಚಾಮುಂಡೇಶ್ವರಿಯ ಉಚ್ಚಾಯ
ಮೈಸೂರು
ಜಿ - ಮೈಸೂರು



ಶ್ರೀ ಚೆನ್ನಕೇಶ್ವರ ಉಚ್ಚಾಯ
ಬೇಲೂರು



ಶ್ರೀ ಮಹಾಲಿಂಗೇಶ್ವರನ ಉಚ್ಚಾಯ
ಮಹಾಲಿಂಗಪುರ
ಜಿ - ಬಾಗಲಕೋಟ



ಶ್ರೀ ನಂಜುಡೇಶ್ವರ ಉಚ್ಚಾಯ
ನಂಜನಗೂಡು



ಶ್ರೀ ನಂಜುಡೇಶ್ವರನ ಉಚ್ಚಾಯ
ನಂಜನಗೂಡು



ಶ್ರೀ ಮಹಾಲಿಂಗೇಶ್ವರನ ಉಚ್ಚಾಯ
ಮಹಾಲಿಂಗಪೂರ
ಜಿ - ಬಾಗಲಕೋಟ



ಶ್ರೀ ಗವಿಸಿದ್ದೇಶ್ವರನ ಉಚ್ಚಾಯ
ಕೊಪ್ಪಳ



ಶ್ರೀ ಮೌನೇಶ್ವರನ ಉಚ್ಚಾಯ
ವರವಿ
ಜಿ - ಗದಗ



ಶ್ರೀ ಸಂಗಮನಾಥ ಉಚ್ಚಾಯ
ಕೂಡಲಸಂಗಮ
ಜಿ - ಬಾಗಲಕೋಟ



ಶ್ರೀ ಚಾಮುಂಡೇಶ್ವರಿಯ ಉಚ್ಚಾಯ
ಮೈಸೂರು
ಜಿ - ಮೈಸೂರು

ಈ ಎರಡೂ ರೀತಿಯ ಉಚ್ಚಾಯಿಗಳಲ್ಲಿ ಉತ್ಸವ ಮೂರ್ತಿಯನ್ನಿರಿಸಿ ಉಚ್ಚಾಯಿಗಳನ್ನು ಹೂವಿನಹಾರಗಳಿಂದ, ತಳಿರುತೋರಣಗಳಿಂದ ಅಲಂಕಾರಗೊಳಿಸಿ ಮೆರವಣಿಗೆಗೆ ಸಿದ್ಧಗೊಳಿಸುವರು. ಆಯಾ ದೇವಾಲಯಗಳ ಸಮಂಪ್ರದಾಯಿಕ ಪದ್ಧತಿಗಳಂತೆ ಅನೇಕ ಸುಮಂಗಲೆಯರು ಆರತಿಯನ್ನು ಹಿಡಿದು, ಕೆಲವರು ಛತ್ರಿ ಚಾಮರಗಳನ್ನು ಹಿಡಿದು, ಊರಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ಕೈಗೊಳ್ಳುವರು. ಉಚ್ಚಾಯಿಯ ಮುಂದೆ ಕೆಲವು ವಾದ್ಯ ಮೇಳಗಳು ಜರುಗುವವು. ಹೀಗೆ, ಬೇರೆ ಬೇರೆ ಪ್ರದೇಶಗಳ ರಥೋತ್ಸವದ ಸಂದರ್ಭದಲ್ಲಿ ರಥೋತ್ಸವಗಳಿಗೆ ಪೂರ್ವಭಾವಿಯಾಗಿ ವಾಹನೋತ್ಸವ ಹಾಗೂ ಉಚ್ಚಾಯಿಗಳ ಮೆರವಣಿಗೆಗಳು ನಡೆಯುವವು.

ರಥೋತ್ಸವಗಳು ಹೆಚ್ಚಾಗಿ ಮಾಘ ಮಾಸದಿಂದ, ಚೈತ್ರ ಮಾಸದ ಅವಧಿಯ ಒಳಗೆ ಜರುಗುತ್ತವೆ. ನಮ್ಮದು ಕೃಷಿಪ್ರಧಾನವಾದ ದೇಶ. ರೈತರಿಗಿದು ವಿರಾಮದ ಸಮಯ. ಮುಂಗಾರು ಸುಗ್ಗಿ ಮುಗಿದು ರೈತರು ಆರ್ಥಿಕವಾಗಿ ಸಬಲರಾಗಿರುತ್ತಾರೆ. ಧಾನ್ಯ ಧನಗಳಿಗೆ ಕೊರತೆ ಇರುವುದಿಲ್ಲ. ಮಳೆಗಾಲ ಮುಗಿದು ನಿಸರ್ಗದಲ್ಲಿ ಎಲ್ಲಿಲ್ಲದ ಚೈತನ್ಯವಿರುತ್ತದೆ. ರಥೋತ್ಸವಗಳಿಗಿದು ಅತ್ಯಂತ ಪರಿಪಕ್ವವಾದ ಕಾಲ. ವರುಷವಿಡಿ ದುಡಿದು ದಣಿದ ರೈತರು ಹುಮ್ಮಸ್ಸಿನಿಂದ ಈ ಜಾತ್ರೆ ಹಾಗೂ ಉತ್ಸವಗಳಲ್ಲಿ ಹರ್ಷಾನಂದ ಪಡೆಯುತ್ತಾರೆ.

ನಾಡಿನಲ್ಲಿ ವಿವಿಧ ಮಾಧ್ಯಮದ ರಥಗಳನ್ನು ಕಾಣಬಹುದು. ರಥೋತ್ಸವಗಳ ಸಂದರ್ಭದಲ್ಲಿ ಕಾಷ್ಠ ರಥಗಳಿದ್ದರೆ ಅವುಗಳನ್ನು ಹೊರತೆಗೆದು, ಸ್ವಚ್ಛಗೊಳಿಸಿ, ಎಣ್ಣೆಯನ್ನೋ ಅಥವಾ ವಾರ್ನಿಸನ್ನೊ ಸವರಿ ಹೊಳೆಯುವಂತೆ ಮಾಡುತ್ತಾರೆ. ಕಬ್ಬಿಣದ ರಥಗಳಿದ್ದರೆ ಅವುಗಳನ್ನು ಸ್ವಚ್ಛವಾಗಿ ಒರಸಿ ವಿವಿಧ ರೀತಿಯ ವರ್ಣ ಲೇಪನ ಮಾಡುತ್ತಾರೆ. ಬೆಳ್ಳಿ ಅಥವಾ ಚಿನ್ನದ ರಥಗಳಿದ್ದರೆ ಅವುಗಳಿಗೆ ಪಾಲಿಶ್ ಮಾಡಲಾಗುತ್ತದೆ. ಇದಲ್ಲದೆ ರಥಗಳು ಹಾಗೂ ಹೂವಿನ ರಥಗಳನ್ನು ಉತ್ಸವದ ಒಂದು ದಿನ ಮುಂಚೆ ಅಥವಾ ಅದೇ ದಿನದಂದು ಸಿದ್ಧಗೊಳಿಸಲಾಗುತ್ತದೆ. ರಥಗಳಿಗೆ ತೆಂಗಿನಗರಿ, ಬಾಳೆಯ ಗಿಡ, ಕಬ್ಬು, ಹಲವಾರು ವಿಧದ ಹೂಮಾಲೆಗಳು ಹಾಗೂ ತಳಿರುತೋರಣಗಳಿಂದ, ಅಡಿಪಾಯಭಾಗದಿಂದ ಗೋಪುರದ ಶಿಖರಗಳವರೆಗೆ ಶೃಂಗಾರ ಮಾಡುವರು.

ಇಷ್ಟೆಲ್ಲ ವಿಧಿವಿಧಾನಗಳನ್ನು ಅನುಸರಿಸಿ ಉತ್ಸವಮೂರ್ತಿಯನ್ನು ಪಲ್ಲಕ್ಕಿ ಉತ್ಸವದಿಂದ ಬರಮಾಡಿಕೊಳ್ಳುತ್ತಾರೆ. ಬಳಿಕ ಉತ್ಸವ ಮೂರ್ತಿಯ ರಥರೋಹಣವಾಗುತ್ತದೆ. ರಥವನ್ನು ಎಳೆದು ಪುನೀತರಾಗಲು ರಥೋತ್ಸವದಲ್ಲಿ ಸಾವಿರಾರು ಜನ ಭಕ್ತಾಧಿಗಳು ಬಂದು ನೆರೆಯುತ್ತಾರೆ. ರಥ ಚಲಿಸುವುದಕ್ಕೂ ಮುಂದೆ ಊರಿನ ಗಣ್ಯರು, ಭಕ್ತರು ರಥದ ಗಾಲಿಗಳಿಗೆ ತೆಂಗಿನಕಾಯಿ ಒಡೆಯುತ್ತಾರೆ. ಬಾಳೆಹಣ್ಣು, ದವನ, ಮೆಣಸು, ಬೆಲ್ಲ ಹಾಗೂ ನಾಣ್ಯಗಳನ್ನು ರಥದ ಮೇಲೆ ತೂರಿ ಬಿಡುವದರ ಮೂಲಕ ತಮ್ಮ ಭಕ್ತಿಯನ್ನು ಸಮರ್ಪಿಸುತ್ತಾರೆ. ಪೂಜೆಯ ನಂತರ ರಥ ಚಲಿಸುತ್ತದೆ.

ರಥಗಳ ಮುಂದೆ ಮುಂದೆ ಆಕರ್ಷಕವಾಗಿ ಕಾಣುವಂತೆ ನಂದಿಕೋಲುಗಳು ಸಾಗುತ್ತಿರುತ್ತವೆ. ರಥದ ಮುಂದೆ ಹಲವಾರು ವಿಧದ ವಾದ್ಯಮೇಳಗಳು ನಡೆಯುತ್ತಿರುತ್ತವೆ ಮತ್ತು ರಥ ಸಾಗುವ ಬೀದಿಯ ಎಲ್ಲ ಮನೆಯವರು ತಮ್ಮ ಮನೆಗಳ ಮುಂದೆ ರಂಗೋಲಿಯನ್ನು ಹಾಕುವರು. ತೆಂಗಿನಕಾಯಿ, ಬಾಳೆಹಣ್ಣು, ನೀಲಾಂಜನಾದಿಗಳಿಂದ ಕೂಡಿದ ಹರಿವಾಣವನ್ನು ಕೈಯಲ್ಲಿ ಹಿಡಿದುಕೊಂಡು

ರಥರೂಢನಾದ ಸ್ವಾಮಿಯ ದರ್ಶನಕ್ಕೆ ಸಿದ್ಧಗೊಳ್ಳುವರು.

ನಾಡಿನ ಕೆಲವು ರಥಗಳು ದಿನದಲ್ಲಿ ಜರುಗಿದರೆ, ಕೆಲವು ರಥೋತ್ಸವಗಳು ಗೋಧೂಳಿಯ ಸಮಯದಲ್ಲಿ ಜರುಗುತ್ತವೆ. ಇನ್ನೂ ಕೆಲವು ಪ್ರದೇಶಗಳಲ್ಲಿ ರಾತ್ರಿ ಸಮಯದಲ್ಲಿ ರಥೋತ್ಸವಗಳು ಜರುಗುತ್ತವೆ.

ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಬನಹಟ್ಟಿಯ ಶ್ರೀ ಕಾಡಸಿದ್ದೇಶ್ವರ ರಥೋತ್ಸವ, ಉಡುಪಿಯ ಶ್ರೀ ಕೃಷ್ಣನ ರಥೋತ್ಸವ, ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಶ್ರೀ ಮಹಾಲಿಂಗೇಶ್ವರ ರಥ, ಹೀಗೆ ಇನ್ನೂ ಹಲವಾರು ರಥೋತ್ಸವಗಳು ರಾತ್ರಿವೇಳೆಯಲ್ಲಿ ಜರುಗುತ್ತವೆ.

ಕುಕ್ಕೆ ಸುಬ್ರಹ್ಮಣ್ಯದ ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥೋತ್ಸವ, ನಂಜನಗೂಡಿನ ಶ್ರೀ ನಂಜುಂಡೇಶ್ವರ ರಥೋತ್ಸವ, ಬಾಗಲಕೋಟ ಜಿಲ್ಲೆಯ ಕೆರೂರದ ಶ್ರೀ ಬನಶಂಕರಿ ರಥೋತ್ಸವ, ಬಳ್ಳಾರಿ ಜಿಲ್ಲೆಯ ಮರೆಮ್ಮನ ಹಳ್ಳಿ ರಥೋತ್ಸವ, ಕೊಪ್ಪಳ ಜಿಲ್ಲೆಕುಕನೂರು ಹಾಗೂ ಗುದ್ನೆಪ್ಪನ ಮಠದ ರಥೋತ್ಸವಗಳು ಹಾಗೂ ಇನ್ನೂ ಹಲವಾರು ರಥೋತ್ಸವಗಳು ಸೂರ್ಯನು ಬಾನಂಗಳದಲ್ಲಿ ಬರುವ ಹೊತ್ತಿಗೆ ಜರುಗುತ್ತವೆ.

ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ರಥೋತ್ಸವ, ಬಾಗಲಕೋಟ ಜಿಲ್ಲೆ ಮುಚಖಂಡಿಯ ಶ್ರೀವೀರಭದ್ರೇಶ್ವರ ರಥೋತ್ಸವ, ರಾಯಚೂರು ಜಿಲ್ಲೆ ಸಿಂಧನೂರು ತಾಲೂಕು ಬಳಗಾನೂರದ ಶ್ರೀ ಆಂಜನೇಯನ ರಥೋತ್ಸವ, ಗುಲಬುರ್ಗಾದ ಶ್ರೀ ಶರಣ ಬಸವೇಶ್ವರ ರಥೋತ್ಸವ, ಸಲೇಪೇಠದ ಶ್ರೀ ವೀಭದ್ರೇಶ್ವರ ರಥೋತ್ಸವ, ಜಿಡಗಾದ ಶ್ರೀ ಸಿದ್ಧ ಸಂಸ್ಥಾನ ಮಠದ ರಥೋತ್ಸವ, ಬಾದಾಮಿಯ ಶ್ರೀ ಬನಶಂಕರಿಯ ರಥೋತ್ಸವ, ಗದಗ ಜಿಲ್ಲೆ ವರವಿಯ ಶ್ರೀ ಮೌನೇಶ್ವರ ರಥೋತ್ಸವ, ಹೀಗೆ ನಾಡಿನ ಹಲವು ರಥೋತ್ಸವಗಳು ಗೋಧೂಳಿಯ ಸಮಯದಲ್ಲಿ ಜರುಗುತ್ತವೆ.

ಕೆಲವು ರಥೋತ್ಸವಗಳು ಪ್ರತಿ ವರ್ಷವೂ ಜರುಗಿದರೆ ಇನ್ನೂ ಕೆಲವು ರಥೋತ್ಸವಗಳು ಮೂರು, ಐದು, ಒಂಬತ್ತು , ಹನ್ನೊಂದು, ಇಪ್ಪತ್ತೈದು, ವರ್ಷಗಳಿಗೊಮ್ಮೆ ನಡೆಯುತ್ತವೆ.

ದಾವಣಗೆರೆಯ ದುರುಗಮ್ಮನ ರಥೋತ್ಸವ ಮೂರು ವರ್ಷಗಳಿಗೊಮ್ಮೆ ನಡೆಯುತ್ತದೆ. ಬೆಳಗಾವಿ ಜಿಲ್ಲೆಯ ಗೋಕಾಕದ ಲಕ್ಷ್ಮಿ ದೇವಿಯ ರಥೋತ್ಸವ ಮೂರು ವರ್ಷಗಳಿಗೊಮ್ಮೆ ನಡೆಯುತ್ತದೆ. ಇದೇ ಜಿಲ್ಲೆ ಗೋಕಾಕ ತಾಲೂಕಿನ ಪಾಶ್ಚಾಪುರದ ಲಕ್ಷ್ಮೀ ರಥೋತ್ಸವ ಹನ್ನೊಂದು ವರ್ಷಗಳಿಗೊಮ್ಮೆ ಜರುಗುತ್ತದೆ. ಬೆಳಗಾವಿ ಜಿಲ್ಲೆಯ ಮಾಟನೂರು ಬಂಡೆಮ್ಮನ ರಥೋತ್ಸವ ಐದು ವರ್ಷಗಳಿಗೊಮ್ಮೆದ ಜರುಗುತ್ತದೆ. ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಹುನ್ನೂರದ ಶ್ರೀ ಲಕ್ಕವ್ವ ದೇವಿ ರಥೋತ್ಸವವು ಇಪ್ಪತ್ತೈದು ವರ್ಷಗಳಿಗೊಮ್ಮೆ ನಡೆಯುತ್ತದೆ.

ಇದಲ್ಲದೆ ಕೆಲವು ರಥೋತ್ಸವಗಳಲ್ಲಿ ಒಮ್ಮೆ ಉಪಯೋಗಿಸಿದ ರಥವನ್ನು ಮರುವರ್ಷದ ಉತ್ಸವದಲ್ಲಿ ಉಪಯೋಗಿಸುವುದಿಲ್ಲ ಉದಾಹರಣೆಗೆ ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಹುನ್ನೂರದ ಶ್ರೀ ರಥೋತ್ಸವದ ಸಂಧರ್ಭದಲ್ಲಿ ರಥವನ್ನು ಬನ್ನಿಗಿಡದ ಕಟ್ಟಿಗೆಯಿಂದ ಪ್ರತಿ ಉತ್ಸವದಲ್ಲಿ

ಹೊಸದಾಗಿ ತಯಾರಿಸಲಾಗುತ್ತದೆ. ಸುಪ್ರಸಿದ್ಧವಾದ ಓರಿಸ್ಸಾದ ಪುರಿ ಜಗನ್ನಾಥ ರಥೋತ್ಸವದ ಸಂದರ್ಭದಲ್ಲಿ ಪ್ರತಿವರ್ಷವೂ ನೂತನ ರಥಗಳು ನಿರ್ಮಾಣಗೊಳ್ಳುತ್ತವೆ. ಈ ರಥಗಳು ಜಗನ್ನಾಥ ದೇವಾಲಯದ ಮಾದರಿಯಲ್ಲೆ ಸಿದ್ಧಗೊಳ್ಳುತ್ತವೆ. ಈ ರಥಗಳನ್ನು ಉತ್ಸವದ ನಂತರ ಸಪೂರ್ಣವಾಗಿ ಬಿಚ್ಚಿ ಪಾಕ ಶಾಲೆಯಲ್ಲಿ ಉರುವಲಕ್ಕಾಗಿ ಉಪಯೋಗಿಸಲಾಗುತ್ತದೆ.

ಕೆಲವು ದೇವಸ್ಥಾನಗಳಲ್ಲಿ ಎರಡು, ಮೂರು, ಐದು ಹೀಗೆ ಬಹು ಸಂಖ್ಯೆಯಲ್ಲಿ ರಥೋತ್ಸವಗಳು ಜರುಗುವುದುಂಟು ಉದಾಹರಣೆಗೆ ಉಡುಪಿಯಲ್ಲಿ ಉತ್ಸವ ಸಂದರ್ಭದಲ್ಲಿ ಮೂರು ರಥಗಳು, ಕುಕ್ಕೆ ಸುಬ್ರಹ್ಮಣಂದಲ್ಲಿ ಸುಬ್ರಹ್ಮಣ್ಯನ ಐದು ರಥಗಳು ನಂಜನಗೂಡಿನ ನಂಜುಡೇಶ್ವರನ ಐದು ರಥಗಳು, ಬಳ್ಳಾರಿ ಜಿಲ್ಲೆ ಮರೆಮ್ಮನಹಳ್ಳಿಯ ಶ್ರೀ ರಾಮಾಂಜಯನ ಎರಡು ರಥಗಳು, ಬೆಳಗಾಂವ ಜಿಲ್ಲೆಯ ಗೋಕಾಕದ ಲಕ್ಷ್ಮೀದೇವಿಯ ಎರಡು ರಥಗಳು, ಪ್ರಸಿದ್ಧವಾದ ಕುರಿ ಜಗನ್ನಾಥನ ಮೂರು ರಥಗಳು, ಹೀಗೆ ಉತ್ಸವದಲ್ಲಿ ಬಹು ಸಂಖ್ಯೆಯ ರಥಗಳನ್ನು ಎಳೆಯುವುದುಂಟು.

ರಥೋತ್ಸವದ ಸಂದರ್ಭದಲ್ಲಿ ಸಂಪೂರ್ಣವಾಗಿ ಶೃಂಗಾರಗೊಂಡು ಉತ್ಸವಕ್ಕೆ ಸಿದ್ಧಗೊಂಡ ರಥಗಳು ಸಾವಿರಾರು ಭಕ್ತರ ಹಸ್ತಸಹಾಯದಿಂದ ಮುಂದೆ ಸಾಗುತ್ತಿದ್ದರೆ, ದೇವಾಲಯವೇ ಮುಂದೆ ಬಂದಂತಾಗುವುದು. ಚಲಿಸುವ ರಥಗಳಿಗೆ ಕೆಲವು ಪ್ರದೇಶಗಳಲ್ಲಿ ಬೆಂಡು ಬೆತ್ತಾಸುಗಳನ್ನು ಅಥವಾ ಉತ್ತತ್ತಿಗಳನ್ನು ಎಸೆಯುವರು. ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಯಡಳ್ಳಿಯ ಶ್ರೀ ಸಿದ್ಧೇಶ್ವರ ರಥೋತ್ಸವದ ಸಂಧರ್ಭದಲ್ಲಿ ರಥವು ಚಲಿಸುತ್ತಿರುವಾಗ ಭಕ್ತಾದಿಗಳು ದೊಡ್ಡ ದೊಡ್ಡ ತೆಂಗಿನ ಕಾಯಿಗಳನ್ನು ಎಸೆಯುವರು. ಇದಲ್ಲದೆ ಗುಲಬರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಸುಲೇಪೇಠದ ಶ್ರೀ ವೀರಭದ್ರನ ರತ ಗತಿಶೀಲವಾದಾಗ ಕೋಳಿಗಳನ್ನು ಹಾರಿಸುವ ಸಂಪ್ರದಾಯವು ವಿಶೇಷವೆನಿಸುತ್ತದೆ.

ಹೀಗೆ ನಾಡಿನ ಹಲವಾರು ಪ್ರದೇಶಗಳಲ್ಲಿ ಉತ್ಸವದ ಸಂದರ್ಭದಲ್ಲಿ ರಥಗಳು, ಭಕ್ತರ ಸಮ್ಮುಖದಲ್ಲಿ ಜಯಘೋಶದೊಂದಿಗೆ ನಗರದ ಮುಖ್ಯ ಬೀದಿಗಳಲ್ಲಿ ಹಾಯ್ದು, ಪಾಜಾಗಟ್ಟಿಯನ್ನು ಮುಟ್ಟಿ, ಮರಳಿ ದೇವಾಲಯವನ್ನು ತಲುಪುತ್ತವೆ. ಈ ರೀತಿಯಲ್ಲಿ ರಥೋತ್ಸವಗಳು ಜರುಗುತ್ತವೆ.

ಶೃಂಗಾರಗೊಂಡ ಗಡ್ಡಿ ರಥಶಿಲ್ಪಗಳು



ಗುಳೇದಗುಡ್ಡದ ಶ್ರೀ ಸಂಗಮೇಶ್ವರ ರಥ
ಜಿ - ಬಾಗಲಕೋಟ



ಲಕ್ಷ್ಮೇಶ್ವರದ ಶ್ರೀ ಸೋಮನಾಥೇಶ್ವರ ರಥ
ಜಿ - ಗದಗ



ಕನಕಗಿರಿಯ ಶ್ರೀ ಕನಕರಾಯನ ರಥ
ಜಿ - ಕೊಪ್ಪಳ



ಬಾದಾಮಿ ಶ್ರೀ ಬನಶಂಕರಿ ರಥ
ಜಿ - ಬಾಗಲಕೋಟ


ಶೃಂಗಾರಗೊಂಡ ಗಡ್ಡಿ ರಥಶಿಲ್ಪಗಳು



ಶ್ರೀ ಸುಬ್ರಹ್ಮಣ್ಯಸ್ವಾಮಿ ರಥ
ನಂಜನಗೂಡು



ಶ್ರೀ ಪಾರ್ವತಮ್ಮನ ರಥ
ನಂಜನಗೂಡು



ಶ್ರೀ ಶ್ರೀಕಂಠೇಶ್ವರ ಸ್ವಾಮಿ ರಥ
ನಂಜನಗೂಡು



ಶ್ರೀ ಚಂಡಿಕೇಶ್ವರ ಸ್ವಾಮಿ ರಥ
ನಂಜನಗೂಡ

ಶೃಂಗಾರಗೊಂಡ ಗಡ್ಡಿ ರಥಶಿಲ್ಪಗಳು



ಮರೆಮ್ಮನಹಳ್ಳಿಯ ಶ್ರೀ ರಾಮಾಂಜನೇಯ ರಥಗಳು
ಜಿ - ಬಳ್ಳಾರಿ



ಚೋಳಚಗುಡ್ಡದ ಶ್ರೀ ವೀರಭದ್ರೇಶ್ವರ ರಥ
ಜಿ - ಬಾಗಲಕೋಟ



ವರವಿ ಶ್ರೀ ಮೌನೇಶ್ವರ ರಥ
ಜಿ - ಗದಗ



ಹುನಗುಂದದ ಶ್ರೀ ವೀರಭದ್ರೇಶ್ವರ ರಥ
ಜಿ - ಬಾಗಲಕೋಟ

ಶೃಂಗಾರಗೊಂಡ ಗಡ್ಡಿ ರಥಶಿಲ್ಪಗಳು



ಮುಚಖಂಡಿ ಶ್ರೀ ವೀರಭದ್ರೇಶ್ವರ ರಥ
ಜಿ - ಬಾಗಲಕೋಟ



ಕೂಡಲಸಂಗಮದ ಶ್ರೀ ಸಂಗಮನಾಥನ ರಥ
ಜಿ - ಬಾಗಲಕೋಟ



ಹರ್ತಿ ಶ್ರೀ ವೀರಭದ್ರೇಶ್ವರ ರಥ
ಜಿ - ಗದಗ



ಕೊಪ್ಪಳದ ಶ್ರೀ ಗವಿಸಿದ್ದೇಶ್ವರ ರಥ
ಜಿ - ಕೊಪ್ಪಳ

ಶೃಂಗಾರಗೊಂಡ ಗಡ್ಡಿ ರಥಶಿಲ್ಪಗಳು



ಗೋಕಾಕದ ಶ್ರೀ ಸಿದ್ದೇಶ್ವರ ರಥ
ಜಿ - ಬೆಳಗಾಂವ



ಶಿರೂರದ ಶ್ರೀ ಸಿದ್ದೇಶ್ವರ ರಥ
ಜಿ - ಬಾಗಲಕೋಟ



ಕೊಟ್ಟೂರದ ಶ್ರೀ ಕೊಟ್ಟೂರೇಶ್ವರ ರಥ
ಜಿ - ಬಳ್ಳಾರಿ



ಸಾಲವಾಡಿಯ ಶ್ರೀ ಬಸವೇಶ್ವರ ರಥ



ಇಳಕಲದ ಶ್ರೀ ವಿಜಯಮಹಾಂತೇಶ್ವರ ರಥ
ಜಿ - ಬಾಗಲಕೋಟ

ಶೃಂಗಾರಗೊಂಡ ಗಡ್ಡಿ ರಥಶಿಲ್ಪಗಳು



ಒರಿಸ್ಸಾದ ಪುರಿ ಜಗನ್ನಾಥ ರಥ



ಕುಕನೂರದ ಶ್ರೀ ಗುದ್ನೆಪ್ಪನಮಠದ ರಥ
ಜಿ - ಕೊಪ್ಪಳ



ಬೇಲೂರು ಶ್ರೀ ಚನ್ನಕೇಶ್ವರ ರಥ



ಹಂಪಿಯ ಶ್ರೀ ವಿರೂಪಾಕ್ಷನ ರಥ
ಜಿ - ಬಳ್ಳಾರಿ

ಶೃಂಗಾರಗೊಂಡ ಮಂಟಪ ರಥಶಿಲ್ಪಗಳು




ಲೋಕಾಪೂರದ ಲೋಕೇಶ್ವರ ರಥ
ಜಿ - ಬಾಗಲಕೋಟ



ಯಡಹಳ್ಳಿಯ ಸಿದ್ಧೇಶ್ವರ ರಥ
ಜಿ - ಬಾಗಲಕೋಟ



ಹಲಕರ್ಟಿಯ ವೀರಭದ್ರೇಶ್ವರ ರಥ
ಜಿ - ಗುಲಬರ್ಗಾ



ಗೋಕಾಕದ ಶ್ರೀ ಈರಣ್ಣನ ರಥ
ಜಿ - ಬೆಳಗಾಂವ



ಗೋಕಾಕದ ಶ್ರೀ ಬಸವೇಶ್ವರ ರಥ
ಜಿ - ಬೆಳಗಾಂವ

ಶೃಂಗಾರಗೊಂಡ ಕಬ್ಬುವ ರಥಶಿಲ್ಪಗಳು



ಮಲ್ಲಾಪೂರದ ವೀರಭದ್ರೇಶ್ವರ ರಥ
ಜಿ - ಬಾಗಲಕೋಟ



ಗುಲಬರ್ಗಾದ ಶ್ರೀ ಶರಣಬಸವೇಶ್ವರ ರಥ
ಜಿ - ಗುಲಬರ್ಗಾ



ರಬಕವಿಯ ಶ್ರೀ ಮಹಾದೇವನ ರಥ
ಜಿ - ಬಾಗಲಕೋಟ



ಮೊರಬದ ಶ್ರೀ ವೀರಭದ್ರೇಶ್ವರ ರಥ
ಜಿ - ಬಳ್ಳಾರಿ



ಬೈಲಹೊಂಗಲದ ಶ್ರೀ ಬಸವೇಶ್ವರ ರಥ
ಜಿ - ಬೆಳಗಾಂವ

ಅಧ್ಯಾಯ- ಆರು

ರಥಗಳಲ್ಲಿ ವರ್ಣವಿನ್ಯಾಸ

ರಥಗಳಲ್ಲಿ ವರ್ಣವಿನ್ಯಾಸ

ಸನಾತನ ಹಿಂದೂ ದೇವಾಲಯಗಳು ಹಲವಾರು ಕಲೆಗಳಿಗೆ ಆಶ್ರಯತಾಣವಾಗಿರುವಂತೆ ದೇವಾಲಯದ ಪ್ರತೀಕವಾಗಿರುವ ರಥಶಿಲ್ಪಗಳೂ ಸಹ ವಿಭಿನ್ನ ಕಲೆಗಳನ್ನು ಪೋಷಿಸುತ್ತಾ ಬಂದಿವೆ. ಅವುಗಳಲ್ಲಿ ಚಿತ್ರಕಲೆಯೂ ಒಂದು. ಬದುಕಿನ ವಿಧಿ ಕ್ರಿಯೆಗಳೆಲ್ಲ ಬಣ್ಣದಲ್ಲಿ ಹುಟ್ಟಿ, ವಿವಿಧ ಚಟುವಟಿಗೆಳೆಲ್ಲ ಬಣ್ಣದಲ್ಲಿ ತೊಡಗಿ, ನೋಡುವ ಕಣ್ಣಿಗೆ ಹಬ್ಬವನ್ನುಂಟು ಮಾಡುವ, ಭಯವನ್ನುಂಟುಮಾಡುವ ಸ್ವಭಾವ ಜನಪದ ಚಿತ್ರಕಲೆಯಲ್ಲಿದೆ.[೧]

ರಥ ಶಿಲ್ಪವು ಜನಪದ ಬದುಕಿನಲ್ಲಿ ಹಾಸುಹೊಕ್ಕಾಗಿದೆ. ಪ್ರಾದೇಶಿಕತೆಯ ಸಂಸ್ಕೃತಿಯ ಹಿನ್ನೆಲೆಯಲ್ಲಿ ಹುಟ್ಟಿಕೊಂಡಿರು ವಂತಹ ಕರ್ನಾಟಕದ ಅಸಂಖ್ಯಾತ ರಥಗಳಲ್ಲಿ ವಿವಿಧ ರೀತಿಯ ವರ್ಣವಿನ್ಯಾಸವನ್ನು ಕಾಣಬಹುದು. ಉತ್ತರ ಕರ್ನಾಟಕದ ಭಾಗವಾಗಿರುವ ಹೈದರಾಬಾದ್ ಕರ್ನಾಟಕದಲ್ಲಿ ಕಂಡುಬರುವ ಕಬ್ಬಿಣದ ರಥಗಳಲ್ಲಿ ವಿಶೇಷವಾಗಿ ಚಿತ್ರಕಲೆಯೇ ಪ್ರಧಾನವಾಗಿ ಕಂಡುಬರುವುದು. ಮುಂಬೈ ಕರ್ನಾಟಕದ ಹಲವಾರು ಕಾಷ್ಠ ರಥಶಿಲ್ಪಗಳು ಸುಂದರವಾದ ಉಬ್ಬುಕೆತ್ತನೆಯನ್ನು ಹೊಂದಿರುವುದಲ್ಲದೆ ವಿವಿಧ ರೀತಿಯ ವರ್ಣಲೇಪನವನ್ನು ಮೈಗೂಡಿಸಿಕೊಂಡಿವೆ. ಉತ್ಸವದ ಸಂದರ್ಭದಲ್ಲಿ ಅಲಂಕಾರಗೊಳ್ಳುವ ಗೋಪುರ ಭಾಗವು ಅನೇಕ ವರ್ಣಗಳಿಂದ ಕೂಡಿದ ಪತಾಕೆಗಳಿಂದ ಹಾಗೂ ಬಣ್ಣ ಬಣ್ಣದ ಬಟ್ಟೆಗಳಿಂದ ವರ್ಣರಂಜಿತವಾಗಿ ಕಂಗೊಳಿಸಿ ವಿಶೇಷವಾಗಿ ಕಣ್ಮನ ಸೆಳೆಯುತ್ತದೆ.

ಇದಲ್ಲದೆ ದಕ್ಷಿಣ ಕರ್ನಾಟಕದ ಉತ್ತರ ಕನ್ನಡ ಹಾಗೂ ದಕ್ಷಣ ಕನ್ನಡ ಜಿಲ್ಲೆಗಳಲ್ಲಿ ತಟ್ಟೆಯ ತೇರಿನ ಮೇಲೆ ಚಿತ್ರಕಲೆಯನ್ನು ಕಾಣಬಹುದು. ದಕ್ಷಿಣ ಕರ್ನಾಟಕದ ವಿವಿಧ ಭಾಗಗಳಲ್ಲಿ ಕಂಡುಬರುವಂತಹ ಅನೇಕ ಕಾಷ್ಠ ಮಾಧ್ಯಮದ ರಥಗಳಲ್ಲಿ ಸುಂದರವಾದ ವರ್ಣಗಾರಿಕೆಯನ್ನು ನೋಡಬಹುದಾಗಿದೆ.

ಪ್ರಾದೇಶಿಕವಾಗಿ ಬೇರೆ ಬೇರೆ ಮಾಧ್ಯಮಗಳಲ್ಲಿ ಕಂಡುಬರುವ ರಥಶಿಲ್ಪಗಳನ್ನು

೧. ''ಕರ್ನಾಟಕದ ಜನಪದ ಚಿತ್ರಕಲೆ'' ಡಾ. ಎಸ್.ಸಿ. ಪಾಟೀಲ. ಪು. ಸಂ. ೫, ೧೯೯೩

I. ಕಾಷ್ಠ ಮಾಧ್ಯಮ

II. ಲೋಹ ಮಾಧ್ಯಮ

III. ಸಂಕೀರ್ಣ ಮಾಧ್ಯಮ

IV. ಶಿಲಾ ಮಾಧ್ಯಮ

ಎಂದು ನಾಲ್ಕು ಮಾಧ್ಯಮಗಳಲ್ಲಿ ವಿಂಗಡಿಸಿಕೊಂಡು ಅವುಗಳ ವರ್ಣಗಾರಿಕೆಯ ಕುರಿತು ಪ್ರಾದೇಶಿಕವಾಗಿ ಕಂಡುಬರುವ ರಥಗಳ ಉದಾಹರಣೆಗಳೊಂದಿಗೆ ವಿವರವಾಗಿ ತಿಳಿಯುವಾ.

I. ಕಾಷ್ಠ ಮಾಧ್ಯಮದ ರಥಗಳ ವರ್ಣವಿನ್ಯಾಸ :

ಕಾಷ್ಠ ಮಾಧ್ಯಮದ ರಥಗಳನ್ನು ಎರಡು ವಿಧಗಳನ್ನಾಗಿ ವಿಂಗಡಿಸಬಹುದು.

ಅ. ಗಡ್ಡಿ ರಥಗಳು

ಬ. ಅಂಕಣ ರಥಗಳು

ಈ ಎರಡೂ ವಿವಿಧ ರಥಗಳಲ್ಲಿ ಕಂಡುಬರುವಂತಹ ವರ್ಣಗಾರಿಕೆಯನ್ನು ಪ್ರತ್ಯೇಕವಾಗಿ ಅಭ್ಯಾಸ ಮಾಡುವಾ.

ಅ. ಗಡ್ಡಿ ರಥಗಳಲ್ಲಿ ವರ್ಣವಿನ್ಯಾಸ :

ವಿಶೇಷವಾಗಿ ದೇವಾಲಯದಂತೆಯೇ ಕಾಣುವ ಈ ಗಡ್ಡಿ ರಥಗಳು ಮುಖ್ಯವಾಗಿ ನಾಲ್ಕು ಭಾಗಗಳನ್ನು ಹೊಂದಿರುತ್ತವೆ.

೧. ಅಡಿಪಾಯ ಭಾಗ

೨. ಅಧಿಷ್ಠಾನ ಭಾಗ

೩. ಮಂಟಪ ಭಾಗ

೪. ವಿಮಾನಗೋಪುರ ಭಾಗ

ಹೀಗೆ ಹೆಸರಿಸಲಾದ ರಥದ ಎಲ್ಲ ಭಾಗಗಳು ಸುಂದರವಾದ ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡಿರುತ್ತವೆ. ಆದ್ದರಿಂದ ಮೇಲೆ ಹೆಸರಿಸಲಾದ ರಥದ ಎಲ್ಲ ಭಾಗಗಳಲ್ಲಿ ಕಾಣುವಂತಹ ವರ್ಣವಿನ್ಯಾಸವನ್ನು ವಿವರವಾಗಿ ತಿಳಿಯುವಾ.

ಅ. ಅಡಿಪಾಯ ಭಾಗದ ವರ್ಣವಿನ್ಯಾಸ : ಗಡ್ಡಿ ರಥಗಳ ಅಡಿಪಾಯ ಭಾಗವು ಮೂರು ಭಾಗಗಳಿಂದ ಕೂಡಿರುತ್ತದೆ.

i. ಚಕ್ರಗಳು

ii. ಅಚ್ಚುಗಳು

ರಥಗಳಲ್ಲಿ ವರ್ಣವಿನ್ಯಾಸ

- ಕಾಷ್ಠ ಮಾಧ್ಯಮದ ರಥ
- ಲೋಹ ಮಾಧ್ಯಮದ ರಥ
- ಸಂಕೀರ್ಣ ಮಾಧ್ಯಮದ ರಥ
- ಶಿಲಾ ಮಾಧ್ಯಮದ ರಥ

ಕಾಷ್ಠ ಮಾಧ್ಯಮದ ರಥಗಳ ವರ್ಣವಿನ್ಯಾಸ

- ಗಡ್ಡಿ ರಥಗಳು
  - ಅಡಿಪಾಯ ಭಾಗ
    - ಚಕ್ರಗಳು
      - ಶಿಲಾ ಚಕ್ರಗಳ ವರ್ಣ ವಿನ್ಯಾಸ
      - ಮರದ ಚಕ್ರಗಳ ವರ್ಣ ವಿನ್ಯಾಸ
    - ಅಚ್ಚುಗಳು
    - ತೊಲೆಗಳ ವರ್ಣ ವಿನ್ಯಾಸ
      - ಪ್ರಾಣಿ ಶಿಲ್ಪಗಳಲ್ಲಿ ವರ್ಣ ವಿನ್ಯಾಸ
      - ದೇವತಾ ಶಿಲ್ಪಗಳಲ್ಲಿ ವರ್ಣ ವಿನ್ಯಾಸ
      - ಮಹಾತ್ಮರ ಶಿಲ್ಪಗಳಲ್ಲಿ ವರ್ಣ ವಿನ್ಯಾಸ
      - ಮಿಥುನ ಶಿಲ್ಪಗಳಲ್ಲಿ ವರ್ಣ ವಿನ್ಯಾಸ
  - ಅಧಿಷ್ಠಾನ ಭಾಗ
    - ದೇವಾತಾ ಶಿಲ್ಪಗಳ ವರ್ಣವಿನ್ಯಾಸ
    - ಮಹಾತ್ಮರ ಶಿಲ್ಪಗಳ ವರ್ಣವಿನ್ಯಾಸ
    - ಪ್ರಾಣಿ ಶಿಲ್ಪಗಳ ವರ್ಣವಿನ್ಯಾಸ
    - ನಕ್ಷಾ ಶಿಲ್ಪಗಳ ವರ್ಣವಿನ್ಯಾಸ
  - ಮಂಟಪ ಭಾಗ
    - ಸ್ಥಿರ ಮಂಟಪ ಭಾಗದ ವರ್ಣಗಾರಿಕೆ
    - ಚರ ಮಂಟಪ ಭಾಗದ ವರ್ಣಗಾರಿಕೆ
      - ಬಿಡಿ ಶಿಲ್ಪಗಳಲ್ಲಿ ವರ್ಣವಿನ್ಯಾಸ
        - ಪ್ರಾಣಿ ಪಕ್ಷಿ ಬಿಡಿ ಶಿಲ್ಪಗಳ ವರ್ಣ ವಿನ್ಯಾಸ
        - ದೇವತಾ ಬಿಡಿ ಶಿಲ್ಪಗಳ ವರ್ಣವಿನ್ಯಾಸ
      - ಕಂಬಗಳು ಮತ್ತು ಕಮಾನುಗಳ ವರ್ಣವಿನ್ಯಾಸ
  - ಗೋಪುರ ಭಾಗ
- ಅಂಕಣ ರಥಗಳು
  - ಅಡಿಪಾಯ ಭಾಗದ ವರ್ಣಗಾರಿಕೆ
  - ಅಧಿಷ್ಠಾನ ಭಾಗದಿಂದ ಶಿಖರಭಾಗದವರೆಗೆ ವರ್ಣಗಾರಿಕೆ

iii. ತೊಲೆಗಳು.

ಈ ಮೂರು ಭಾಗಗಳೂ, ಕೆಲವು ರಥಗಳಲ್ಲಿ ವರ್ಣಗಾರಿಕೆಯಿಂದ ಕೂಡಿರುತ್ತವೆ. ಆದ್ದರಿಂದ ಈ ಮೂರೂ ಭಾಗಗಳಲ್ಲಿ ಕಾಣುವಂತಹ ವರ್ಣಗಾರಿಕೆಯನ್ನು ತಿಳಿಯೋಣ.

i. ಚಕ್ರಗಳ ವರ್ಣಗಾರಿಕೆ : ಕಾಷ್ಠ ಮಾಧ್ಯಮದ ಕೆಲವು ರಥಗಳಲ್ಲಿ ಚಕ್ರಗಳೂ ಸಹ ಸುಂದರವಾದ ವರ್ಣಗಾರಿಕೆಯಿಂದ ಅಲಂಕಾರಗೊಂಡಿರುತ್ತವೆ. ಈ ಕಾಷ್ಠ ಮಾಧ್ಯಮದ ರಥಗಳು ಎರಡು ವಿಧದ ಚಕ್ರಗಳನ್ನು ಹೊಂದಿರುವುದು ಕಂಡುಬರುತ್ತದೆ.

★. ಶಿಲೆಯ ಚಕ್ರಗಳು

★. ಮರದ ಚಕ್ರಗಳು.

ಈ ಎರಡೂ ವಿಧದ ಚಕ್ರಗಳಲ್ಲಿ ಕಾಣುವ ವರ್ಣಗಾರಿಕೆಯನ್ನು ವಿವರವಾಗಿ ಅಭ್ಯಾಸ ಮಾಡೋಣ.

★. ಶಿಲೆಯ ಚಕ್ರಗಳಲ್ಲಿ ವರ್ಣಗಾರಿಕೆ : ಉತ್ತರ ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಅನೇಕ ಗಡ್ಡಿ ರಥಗಳನ್ನು ಕಾಣಬಹುದು. ಹಲವಾರು ರಥಗಳಿಗೆ ಶಿಲೆಯ ಚಕ್ರಗಳನ್ನು ಅಳವಡಿಸಿರುವರು. ಅವುಗಳಲ್ಲಿ ಕೆಲವೊಂದು ಬೃಹದಾಕಾರವಾಗಿವೆ. ಅಷ್ಟೇ ಸುಂದರವು ಹಾಗೂ ಕಲಾತ್ಮಕತೆಯಿಂದಲೂ ಕೂಡಿವೆ. ಗಾಲಿಗಳ ಮೇಲೆ ವಿವಿಧ ರೀತಿಯ ವರ್ಣವಿನ್ಯಾಸವನ್ನು ಕಾಣಬಹುದು.

ಬಾಗಲಕೋಟ ಜಿಲ್ಲೆ ಜಮಖಂಡಿ ತಾಲೂಕಿನ ಚಿಮ್ಮಡದ ಪ್ರಭುದೇವರ ರಥ, ಕಡಪಟ್ಟಿಯ ಜಗದೀಶ್ವರ ದೇವಾಲಯದ ರಥ, ತೇರದಾಳದ ಪ್ರಭುದೇವರ ರಥಗಳು ಶಿಲೆಯ ಚಕ್ರಗಳನ್ನು ಹೊಂದಿದ್ದು, ಚಕ್ರಗಳ ವ್ಯಾಸದ ಕೊನೆಯ ಭಾಗದಲ್ಲಿ ಬಿಳಿ ವರ್ಣದ ಪಟ್ಟಿಯನ್ನು ಹೊಂದಿದ್ದು, ಗಾಲಿಗಳಿಗೆ ಅಚ್ಚುಗಳು ಸೇರಿರುವ ಭಾಗದಲ್ಲಿ ಕಂದು ವರ್ಣದ ಮುರಿಗೆಯಾಕಾರದ ವಿನ್ಯಾಸವನ್ನು ಹೊಂದಿವೆ. ಇದಲ್ಲದೆ ಗಾಲಿಗಳ ಮಧ್ಯಭಾಗದಿಂದ ವ್ಯಾಸದ ಅಂಚಿನವರೆಗೂ ನೀಲಿ ಬಣ್ಣದ ಉದ್ದವಾದ ಪಟ್ಟಿಕೆಗಳು ಸೂರ್ಯನ ಕಿರಣಗಳ ಹಾಗೆ ಗೋಚರಿಸುತ್ತವೆ. ಈ ಎಲ್ಲ ರಥಗಳ ಚಕ್ರಗಳ ವರ್ಣವಿನ್ಯಾಸ ಒಂದೇ ತೆರನಾಗಿದೆ. ಜಮಖಂಡಿ ತಾಲೂಕಿನ ಹಳ್ಯಾಳ, ಮುಧೋಳ ತಾಲೂಕಿನ ಮಲ್ಲಾಪೂರ ರಥದ ಚಕ್ರಗಳು ಸುಮಾರು ನಾಲ್ಕು ಅಡಿ ಎತ್ತರವಾಗಿದ್ದು, ಅಚ್ಚಿನ ಮಗ್ಗುಲ ಸ್ವಲ್ಪ ಮೇಲ್ಭಾಗದಲ್ಲಿ ಬರುವ ಒಂದು ದಪ್ಪ ಉಬ್ಬುಶಿಲ್ಪದ ಪಟ್ಟಿಕೆಯಲ್ಲಿ ತ್ರಿಕೋನಾಕೃತಿಯ ನೀಲಿ ಬಣ್ಣದ ವರ್ಣಗಾರಿಕೆ ಹಾಗೂ ಚಕ್ರದ ವ್ಯಾಸದ ಅಂಚಿನ ಸುತ್ತ ಕೇಸರಿ ಬಣ್ಣದ ಪಟ್ಟಿಕೆಯನ್ನು ಕಾಣಬಹುದು. ಬದಾಮಿ ತಾಲೂಕಿನ ಗುಳೇದಗುಡ್ಡದ ಶಿವಪ್ಪಯ್ಯನ ಮಠದ ರಥದ ಚಕ್ರಗಳು ತುಂಬಾ ಆಕರ್ಷಕವಾಗಿದೆ. ಈ ರಥದ ಚಕ್ರಗಳು ಸುಮಾರು ನಾಲ್ಕೂವರೆ ಅಡಿ ವ್ಯಾಸವನ್ನು ಹೊಂದಿದ್ದು, ಮೊದಲು ಈ ಚಕ್ರಗಳ ಹೊರಮೈಗೆ ಬಿಳಿಯ ಬಣ್ಣವನ್ನು ಲೇಪಿಸಿ, ಚಕ್ರಗಳ ವ್ಯಾಸದ ಕೊನೆಯ ಅಂಚಿನಲ್ಲಿ ಚಕ್ರದ ಸುತ್ತಲೂ ಕೇಸರಿ ವರ್ಣದ ಒಂದು ಇಂಚು ಅಗಲವಾದ ಪಟ್ಟಿಕೆಯನ್ನು ಕೊರೆದಿದ್ದಾರೆ. ಚಕ್ರದ ಮಧ್ಯಭಾಗದ ಅಚ್ಚಿನ ಸುತ್ತಲೂ ಬರುವ ಚಕ್ರದ ಭಾಗದಲ್ಲಿ ಒಂದು

ವರ್ತುಳದಿಂದ ಕೂಡಿದ ಉಬ್ಬುಶಿಲ್ಪಕ್ಕೆ ಕೇಸರಿ ಬಣ್ಣ ಲೇಪಿಸಿದ್ದು, ಅದರ ಸುತ್ತಲೂ ಹದಿನೆಂಟು ಎಲೆಯಾಕಾರದ ಹಸಿರು ವಿನ್ಯಾಸಗಳನ್ನು ಚಿತ್ರಿಸಿದ್ದಾರೆ. ದೂರದಿಂದ ಒಂದು ಹೂವಿನಾಕಾರವಾಗಿ ಕಂಡುಬರುತ್ತದೆ.

ಬಾಗಲಕೋಟೆಯ ಬಸವೇಶ್ವರ ದೇವಸ್ಥಾನದ ರಥದ ಚಕ್ರಗಳು ಸುಮಾರು ಐದು ಅಡಿ ಎತ್ತರವಾಗಿದ್ದು, ಸುಂದರವಾದ ಆಕರ್ಷಕವಾದ ಉಬ್ಬುಶಿಲ್ಪಗಳನ್ನು ಹೊಂದುವುದಲ್ಲದೆ, ಚಿತ್ತಾಕರ್ಷಕ ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡಿವೆ. ಈ ರಥದ ಚಕ್ರಗಳು ಮೂರು ವರ್ತುಳಾಕಾರದ ಉಬ್ಬುಶಿಲ್ಪದ ವಿನ್ಯಾಸವನ್ನು ಹೊಂದಿದ್ದು, ಅಚ್ಚಿನಿಂದ ಸುಮಾರು ಒಂದು ಅಡಿ ಅಂತರದಲ್ಲಿ ಸುತ್ತಲಿರುವ ಉಬ್ಬುಶಿಲ್ಪದ ಮೇಲೆ ವರ್ಣವಿನ್ಯಾಸವನ್ನು ಕಾಣಬಹುದು. ಅಚ್ಚಿನ ಸುತ್ತಲೂ ಗೆರೆಗಳಿಂದ ಕೂಡಿದ, ಬಳೆಗಳಂತೆ ಕಾಣುವ ಒಂದು ಉಬ್ಬುಶಿಲ್ಪದ ವಿನ್ಯಾಸಕ್ಕೆ ಕೆಂಪು ಬಣ್ಣವನ್ನು ಹಚ್ಚಲಾಗಿದೆ. ಅದರ ಸುತ್ತಲೂ ಬರುವ ಹೂವಿನ ಎಸಳುಗಳ ಹಾಗೆ ಅರಳಿದ ಹೂವಿನ ಆಕಾರದ ಆಕೃತಿಗೆ ಆಕಾಶ ನೀಲವರ್ಣವನ್ನು ಲೇಪಿಸಲಾಗಿದೆ. ದೂರದಿಂದ ನೋಡಿದರೆ ಒಂದು ಅರಳಿದ ಸೂರ್ಯಪಾನ ಹೂವಿನ ಆಕೃತಿಯನ್ನು ಹೋಲುವಂತಿದೆ.

ಹುನಗುಂದ ತಾಲೂಕಿನ ಇಳಕಲ್ಲದ ವಿಜಯ ಮಹಾಂತೇಶ ಮಠದ ರಥದ ಶಿಲಾಚಕ್ರಗಳು ಸುಮಾರು ಐದೂವರೆ ಅಡಿ ಎತ್ತರವಾಗಿವೆ. ಈ ಚಕ್ರಗಳು ದ್ವಿವರ್ಣಗಳಿಂದ ಕೂಡಿವೆ. ಚಕ್ರಗಳ ವ್ಯಾಸದ ಕೊನೆಯಿಂದ ಅಚ್ಚಿನಕಡೆಗೆ ಎರಡು ಅಡಿ ವರ್ತುಳದವರೆಗೆ ಬಿಳಿಯ ಬಣ್ಣವನ್ನು ಬಳಿಯಲಾಗಿದೆ. ಆಮೇಲೆ ಅಚ್ಚಿನ ಸುತ್ತುಲೂ ಇರುವ ವರ್ತುಳಾಕಾರಕ್ಕೆ ನೀಲಿ ಬಣ್ಣವನ್ನು ಬಳಿಯಲಾಗಿದೆ. ಈ ತರಹದ ವರ್ಣಗಾರಿಕೆಯನ್ನು ಬೆಳಗಾಂವಿ ಜಿಲ್ಲೆಯ ಗೋಕಾಕ ತಾಲೂಕಿನ ಪಾಶ್ಚಾಪುರದ ಲಕ್ಷ್ಮೀ ದೇವಸ್ಥಾನ, ಕುಂದರಗಿಯ ಅಡವಿಸಿದ್ದೇಶ್ವರ ದೇವಸ್ಥಾನ, ನೇರಲಿಯ ಹನುಮಾನ ದೇವಸ್ಥಾನದ ಶಿಲಾ ಚಕ್ರಗಳಲ್ಲಿಯೂ ಕಾಣಬಹುದಾಗಿದೆ. ಆದರೆ ಇಳಕಲ್ಲದ ಚಕ್ರಗಳಿಗೆ ಪ್ರತಿವರ್ಷ ಬಣ್ಣವನ್ನು ಲೇಪಿಸುವುದರಿಂದ ತುಂಬಾ ಆಕರ್ಷಕವಾಗಿ ಕಂಡುಬರುತ್ತವೆ.

ಹುಬ್ಬಳ್ಳಿಯ ಮೂರು ಸಾವಿರ ಮಠದ ರಥದ ಚಕ್ರಗಳು ಕೇವಲ ಮೂರು ಅಡಿ ವ್ಯಾಸವುಳ್ಳದ್ದಾಗಿದ್ದರೂ ಚಕ್ರಗಳ ಅಚ್ಚು ಹಾಗೂ ವ್ಯಾಸದ ಕೊನೆಯ ಭಾಗದಲ್ಲಿ ಮಾತ್ರ ಬಿಳಿಯ ಪಟ್ಟಿಕೆಗಳನ್ನು ಹೊಂದಿದ್ದು, ಉಳಿದದ್ದು ನೀಲಿ ವರ್ಣಗಳಿಂದ ಕೂಡಿವೆ. ಆದರೆ ಈ ಚಕ್ರಗಳು ತುಂಬಾ ಹಳೆಯದಾಗಿರುವುದರಿಂದ ಈಗ ಮರದ ಚಕ್ರಗಳನ್ನು ಅಳವಡಿಸಲಾಗಿದೆ.

ಬಾದಾಮಿಯ ಬನಶಂಕರಿ ದೇವಸ್ಥಾನದ ರಥವು ಸುಮಾರು ಏಳುವರೆ ಅಡಿ ಎತ್ತರದ ಗಾಲಿಗಳನ್ನು ಹೊಂದಿದ್ದು, ಈ ಗಾಲಿಗಳು ತುಂಬಾ ಎತ್ತರದ ಗಾಲಿಗಳ ಸಾಲಿಗೆ ಸೇರುತ್ತವೆ. ರಥಕ್ಕೆ ತಕ್ಕುದಾದ ಈ ಚಕ್ರಗಳು ಹೊರಮೈಯಲ್ಲಿ ಐದು ಪಟ್ಟಿಕೆಗಳನ್ನು ಹೊಂದಿದ್ದು, ಚಕ್ರದ ಮಧ್ಯಭಾಗದಲ್ಲಿ ಎಲೆ ಬಳ್ಳಿಗಳಂತೆ ಕಾಣುವ ಪದಕದ ಆಕಾರದ ವಿನ್ಯಾಸಗಳನ್ನುಳ್ಳ ಉಬ್ಬುಶಿಲ್ಪವಿನ್ಯಾಸಗಳನ್ನು ಹೊಂದಿವೆ. ಚಕ್ರಗಳ ಅಚ್ಚಿನ ಸುತ್ತಲೂ ಹಾಗೂ ಚಕ್ರದ ವ್ಯಾಸದ ಅಂಚಿನ ಸುತ್ತಲೂ ಸುಣ್ಣವನ್ನು ಬಳಿದಿರುವುದರಿಂದ ಎರಡು ವರ್ತುಳಾಕಾರದ ಬಿಳಿಯ ಪಟ್ಟಿಕೆಗಳು ಕಂಡುಬರುತ್ತವೆ. ಉಳಿದೆಡೆಯಲ್ಲಿ ಹುರಮಂಜನ್ನು ಲೇಪಿಸಲಾಗಿದೆ. ಇದರಂತೆ ಶಿರಗುಪ್ಪದ ಶಂಭುಲಿಂಗ ದೇವಸ್ಥಾನದ

ರಥ, ಬಳ್ಳಾರಿ ಜಿಲ್ಲೆಯ ಇಟಗಿ, ಬದಾಮಿ ತಾಲೂಕಿನ ಮಲ್ಲಾಪೂರ ಹಾಗೂ ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ ರಥಗಳ ಚಕ್ರಗಳನ್ನು ಕಾಣಬಹುದು. ಈ ತರಹದ ಹುರಮಂಜನ್ನು ಬಳಸಿ ಸುಣ್ಣವನ್ನು ಬಳಸುವ ವಿಧಾನ ಸಾಂಪ್ರದಾಯಿಕವಾಗಿ ಬಂದದ್ದರಿಂದ, ಕಂದು ಹಾಗೂ ಬಿಳಿಯ ಬಣ್ಣಗಳನ್ನು ಪೂರಕವಾಗಿ, ರಥದ ಚಕ್ರಗಳ ಸೌಂದರ್ಯಕ್ಕಾಗಿ ಬಳಸುವುದನ್ನು ಕರ್ನಾಟಕದ ವಿವಿಧೆಡೆಯಲ್ಲಿ ಕಾಣಬಹುದು.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸೋಮನಾಥೇಶ್ವರ ದೇವಸ್ಥಾನ (ಜಾಯವಾಡಲಗಿ) ದ ರಥದ ಚಕ್ರಗಳ ವರ್ಣಗಾರಿಕೆಯು ಬಹು ಆಕರ್ಷಣೀಯವಾದುದಾಗಿದೆ. ಸುಮಾರು ನಾಲ್ಕೂವರೆ ಅಡಿ ಎತ್ತರದ ಚಕ್ರಗಳು ಶಿಲೆಯಲ್ಲೇ ಸುಂದರವಾದ ಉಬ್ಬುಶಿಲ್ಪಗಳನ್ನು ಹೊಂದುವುದರೊಂದಿಗೆ ಆಕರ್ಷಣೀಯ ವರ್ಣಗಾರಿಕೆಯನ್ನು ಹೊಂದಿರುವುದನ್ನು ಕಾಣಬಹುದು. ಬಹುತರ ರಥಶಿಲ್ಪಗಳಲ್ಲಿ ಚಕ್ರಗಳು ಉಬ್ಬುಶಿಲ್ಪಗಳನ್ನು ಹೊಂದಿದ್ದರೆ, ವರ್ಣವಿನ್ಯಾಸವು ಕಡಿಮೆ ಪ್ರಮಾಣದಲ್ಲಿರುತ್ತದೆ. ವರ್ಣವಿನ್ಯಾಸದಿಂದ ಕೂಡಿದ್ದರೆ ಉಬ್ಬುಶಿಲ್ಪಕೆತ್ತನೆ ಹೆಚ್ಚಾಗಿ ಕಂಡುಬರುವುದಿಲ್ಲ. ಆದರೆ ಸೋಮನಾಥೇಶ್ವರ ರಥದ ಚಕ್ರಗಳು ಎರಡರಲ್ಲಿಯೂ ಸಮಾನತೆಯನ್ನು ಹೊಂದಿದೆ. ಈ ಚಕ್ರಗಳ ಅಚ್ಚಿನ ಸುತ್ತಲೂ ಸುಮಾರು ಅರ್ಧ ಅಡಿ ಅಂತರದಲ್ಲಿರುವ ವರ್ತುಳಾಕಾರದ ಉಬ್ಬುಶಿಲ್ಪಕ್ಕೆ ಹಳದಿ ವರ್ಣವನ್ನು ಲೇಪಿಸಲಾಗಿದೆ. ಅದರ ಸುತ್ತಲೂ ಬರುವ ಇನ್ನೊಂದು ವರ್ತುಳಾಕಾರದ ವಿನ್ಯಾಸಕ್ಕೆ ಆಕಾಶನೀಲಿ ಅಥವಾ ಕೋಬಾಲ್ಟ್-ಬ್ಲೂ-ವರ್ಣವನ್ನು ಲೇಪಿಸಲಾಗಿದೆ. ಚಕ್ರಗಳ ನಟ್ಟನಡುವೆ ಬರುವ ಕಮಲದ ಹೂವಿನ ಎಸಳಿನಂತೆ ರಚಿತವಾದ, ಸುಮಾರು ಇಪ್ಪತ್ತೈದು ಎಸಳುಗಳಿಗೂ ಬಿಳಿಯ ಬಣ್ಣ ಬಳಿಯಲಾಗಿದೆ. ನಂತರ ಬರುವ ಮೂರು ವರ್ತುಳಾಕಾರದ ಪಟ್ಟಿಕೆಗಳಲ್ಲಿ ಕೇಸರಿ, ಹಳದಿ ಹಾಗೂ ನೀಲಿ ವರ್ಣವನ್ನು ಹಚ್ಚಲಾಗಿದೆ. ಅರಳಿದ ಹೂವಿನಂತೆ ಕಾಣುವ ಚಕ್ರಗಳು ತುಂಬಾ ಆಕರ್ಷಣೀಯವಾಗಿವೆ.


ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೊಡದ ಪವಾಡಬಸವೇಶ್ವರ ದೇವಸ್ಥಾನದ ರಥದ ಚಕ್ರಗಳು ವರ್ತುಳಾಕಾರದ ಪಟ್ಟಿಕೆಗಳನ್ನು ಹೊಂದಿದ್ದು ಅಚ್ಚಿನಿಂದ ಕ್ರಮವಾಗಿ ಕೇಸರಿ, ಹಳದಿ, ಹಸಿರು, ಕೆಂಪು , ಬಿಳಿ ಹಾಗೂ ಕೊನೆಯ ಪಟ್ಟಿಕೆಗೆ ಕೇಸರಿ ವರ್ಣವನ್ನು ಲೇಪಿಸಲಾಗಿದೆ. ಇಂಥಹ ವರ್ಣವಿನ್ಯಾಸಗಳುಳ್ಳ ರಥದ ಚಕ್ರಗಳನ್ನು ಇದೇ ತಾಲೂಕಿನ ತಾಳಿಕೋಟಿ, ಬಳಗಾನೂರು ಅಯ್ಯನಗುಡಿಯ ದೇವಸ್ಥಾನದ ರಥಗಳಲ್ಲಿ ಕಾಣಬಹುದು.

ಇದೇ ತಾಲೂಕಿನ ಢವಳಗಿಯ ಮಡಿವಾಳೇಶ್ವರ ಮಠದ ರಥದ ಚಕ್ರಗಳು ವರ್ಣವಿನ್ಯಾಸದಲ್ಲಿ ತುಂಬಾ ವಿಶೇಷವಾಗಿವೆ. ಸುಮಾರು ಹತ್ತು ಅಡಿ ವ್ಯಾಸವನ್ನು ಹೊಂದಿರುವ ಈ ರಥದ ಚಕ್ರಗಳು ಕರ್ನಾಟಕದಲ್ಲಿಯೇ ಅತ್ಯಂತ ಎತ್ತರವಾದವುಗಳು. ಶಿಲಾ ಮಾಧ್ಯಮದ ಚಕ್ರಗಳಾದ ಇವುಗಳನ್ನು ಗಾತ್ರದಲ್ಲಿ ಕರ್ನಾಟಕದ ಯಾವ ರಥದ ಚಕ್ರಗಳೂ ಮೀರಿಸುವುದಿಲ್ಲ. ಈ ಚಕ್ರಗಳು ಎರಡೆರಡು ಅಡಿಗಳ ಅಂತರದಲ್ಲಿ ಒಂದೊಂದರಂತೆ ಐದು ವರ್ತುಳಾಕಾರದ ಪಟ್ಟಿಕೆಗಳನ್ನು ಹೊಂದಿದ್ದು , ಪ್ರತಿಯೊಂದಕ್ಕೂ ಬಿಳಿಯ ವರ್ಣವನ್ನು ಬಳಿಯಲಾಗಿದೆ.

ಗದಗ ಜಿಲ್ಲೆಯ ಚಿಂಚಲಿಯ ವೀರಭದ್ರ, ದೇವಸ್ಥಾನದ ರಥದ ಶಿಲಾ ಚಕ್ರಗಳು ಕಲಾತ್ಮಕ

ದೃಷ್ಟಿಯಿಂದ ಮನಸೆಳೆಯುತ್ತವೆ. ಇವುಗಳು ನೋಡಲು ಗುಳೇದಗುಡ್ಡದ ಶಿವಪ್ಪಯ್ಯನ ಮಠದ ರಥದ ಚಕ್ರದಂತಹ ವಿನ್ಯಾಸದಂತೆ ಕಂಡರೂ ವರ್ಣವಿನ್ಯಾಸದಲ್ಲಿ ಅವುಗಳಿಗಿಂತ ಭಿನ್ನವಾಗಿವೆ ಹಾಗೂ ಆಕರ್ಷಕವಾಗಿವೆ. ಅಚ್ಚಿನ ಸುತ್ತಲೂ ಇರುವ ಚಿಕ್ಕದಾದ ವರ್ತುಳಾಕಾರದ ಪಟ್ಟಿಗೆ ಕಡುಗಂದು ಬಣ್ಣ ಬಳಿಯಲಾಗಿದ್ದು, ಅವರ ಸುತ್ತಲೂ ಬರುವ ದೊಡ್ಡಪಟ್ಟಿಕೆಯಲ್ಲಿ ಪೋಸ್ಟರ್ ರೆಡ್ ಬಣ್ಣ ಲೇಪಿಸಿ, ಅದೇ ಪಟ್ಟಿಕೆಯಲ್ಲಿ ಎಲೆಯಾಕಾರದ ವಿನ್ಯಾಸಗಳನ್ನು ಬಿಳಿಯ ಬಣ್ಣದಲ್ಲಿ ರಚಿಸಲಾಗಿದೆ. ನಂತರ ವರ್ತುಳಾಕಾರದ ಪಟ್ಟಿಕೆಗೆ ಮತ್ತೆ ಕಡುಗಂದು ಬಣ್ಣವನ್ನು ಲೇಪಿಸಿ, ಚಕ್ರದ ವ್ಯಾಸದ ಕೊನೆಗೆ ಬರುವ ಪಟ್ಟಿಕೆಗೆ ಅತೀ ಸುಂದರವಾದ ಲೈಟ್ ಪಿಕಾಕ್-ಬ್ಲೂ ವರ್ಣವನ್ನು ಲೇಪಿಸಿ ರಥದ ಚಕ್ರಗಳನ್ನು ಶೃಂಗಾರಗೊಳಿಸಲಾಗಿದೆ. ಈ ತರಹದ ವರ್ಣಸಂಯೋಜನೆ ಉಳಿದ ಯಾವ ಪ್ರದೇಶದ ರಥದ ಚಕ್ರಗಳಲ್ಲಿಯೂ ಕಂಡುಬರುವುದಿಲ್ಲ. ವರ್ಣಸಂಯೋಜನೆಯ ದೃಷ್ಟಿಯಿಂದ ಈ ರಥದ ಚಕ್ರಗಳು ತುಂಬಾ ಕಲಾತ್ಮಕವಾಗಿ ಮನಸೂರೆಗೊಳ್ಳುತ್ತವೆ. ರಾಯಚೂರ ಜಿಲ್ಲೆ ದೇವದುರ್ಗ ತಾಲೂಕಿನ ಗೂಲಲದ ಪ್ರಭುದೇವರ ದೇವಸ್ಥಾನದ ರಥವು ಗಾತ್ರದಲ್ಲಿ ಚಿಕ್ಕದಿದ್ದು ರಥದ ಚಕ್ರಗಳು ಸುಮಾರು ನಾಲ್ಕು ಅಡಿ ಎತ್ತರವಾಗಿವೆ. ಗಾತ್ರದಲ್ಲಿ ಚಿಕ್ಕವುಗಳಾದರೂ ವರ್ಣಗಾರಿಕೆಯಲ್ಲಿ ತುಂಬಾ ಮೆಚ್ಚುವಂತಹವುಗಳಾಗಿವೆ. ಉತ್ತರ ಕರ್ನಾಟಕದ ಶಿಲಾಚಕ್ರಗಳಲ್ಲಿನ ಅತ್ಯಂತ ವಿಭಿನ್ನ ವರ್ಣಗಾರಿಕೆ ಇವುಗಳಲ್ಲಿ ಕಂಡುಬರುತ್ತದೆ. ಅಚ್ಚಿನ ಸುತ್ತಲೂ ವರ್ತುಳಾಕಾರದ ವಿನ್ಯಾಸಕ್ಕೆ ಹಳದಿ ವರ್ಣವನ್ನು ಲೇಪಿಸಲಾಗಿದೆ. ಇದರ ಸುತ್ತಲೂ ಬರುವ ವರ್ತುಳಾಕಾರದ ದೊಡ್ಡಪಟ್ಟಿಕೆಗೆ ಬಿಳಿಯ ಬಣ್ಣವನ್ನು ಬಳಿದು, ಅದೇ ಪಟ್ಟಿಕೆಯಲ್ಲಿ ಅರಳಿದ ಹೂವಿನಾಕಾರದಲ್ಲಿ ಹದಿನಾರು ಹೂವಿನ ಎಸಳುಗಳ ವಿನ್ಯಾಸಗಳನ್ನು ಕ್ರಮವಾಗಿ ಹಳದಿ, ಕೆಂಪು, ನೀಲಿ ಮತ್ತೆ ಹಳದಿ, ಕೆಂಪು, ನೀಲಿ ಹೀಗೆ ವರ್ಣಗಳನ್ನು ಪುನರಾವರ್ತಿಸುತ್ತ ಎಲ್ಲ ಎಸಳುಗಳಿಗೆ ಬಣ್ಣವನ್ನು ಲೇಪಿಸಲಾಗಿದೆ. ಇದರ ನಂತರ ಬರುವ ವರ್ತುಳಾಕಾರದ ಪಟ್ಟಿಕೆಯಲ್ಲಿ ಸಣ್ಣ ಸಣ್ಣ ವರ್ತುಳಗಳನ್ನು (ಗೋಲುಗಳನ್ನು) ಚಿತ್ರಿಸಿ ಅನುಕ್ರಮವಾಗಿ ನೀಲಿ, ಕೆಂಪು, ಹಳದಿ, ಬಿಳಿ, ಹಸಿರು, ಮತ್ತೆ ನೀಲಿ, ಕೆಂಪು, ಹಳದಿ, ಬಿಳಿ,ಹಸಿರು ಹೀಗೆಯೇ ವರ್ಣಗಳನ್ನು ಪುನರಾವರ್ತಿಸಿ ಎಲ್ಲ ವರ್ತುಳದ ಗೋಲುಗಳಿಗೆ ವರ್ಣ ಹಚ್ಚಿದ್ದಾರೆ. ಇದರ ನಂತರ ಬರುವ ಕೆಂಪು ವರ್ಣದ ಪಟ್ಟಿಕೆಯ ನಂತರ ಚಕ್ರದ ವ್ಯಾಸದ ಕೊನೆಯ ಭಾಗದಲ್ಲಿ ಬರುವ ದೊಡ್ಡ ವರ್ತುಳಾಕಾರದ ಪಟ್ಟಿಕೆಗೆ ಮೊದಲು ಬಿಳಿ ಬಣ್ಣವನ್ನು ಬಳಿದು, ನಂತರ ಅದೇ ಪಟ್ಟಿಕೆಯ ಬಳ್ಳಿಯಾಕಾರದ ಉಬ್ಬುಶಿಲ್ಪಕ್ಕೆ ಬಿಳಿ ಬಣ್ಣ ಲೇಪಿಸಿ, ಬಳ್ಳಿಯ ಎರಡೂ ಬದಿಗೆ ಬರುವ ಎಲೆಯಾಕಾರದ ಹಣ್ಣಿನಾಕಾರದ ಉಬ್ಬುಶಿಲ್ಪಗಳಿಗೆ ಹಸಿರು ಮತ್ತು ಕೆಂಪು ವರ್ಣವನ್ನು ಹಚ್ಚಿರುವುದನ್ನು ಕಾಣಬಹುದು. ಕಲಾತ್ಮಕತೆಯ ವರ್ಣಸಂಯೋಜನೆಯ ದೃಷ್ಟಿಯಿಂದ ಈ ರಥದ ಚಕ್ರಗಳು ಕಣ್ಮನ ಸೆಳೆಯುತ್ತವೆ. ರಾಯಚೂರು ಜಿಲ್ಲೆಯ ಶಿರವಾರ ಹಾಗೂ ಮಾನ್ವಿಯ ಯಲ್ಲಮ್ಮ ದೇವಸ್ಥಾನಗಳ ರಥಗಳ ಗಾಲಿಗಳು ಸುಮಾರು ನಾಲ್ಕುವರೆ ಅಡಿ ವ್ಯಾಸವುಳ್ಳವುಗಳಾಗಿದ್ದು ಆಕರ್ಷಣೀಯ ವರ್ಣಗಳಿಂದ ಕೂಡಿರುವುದನ್ನು ಗಮನಿಸಬಹುದು. ಚಕ್ರಗಳ ಮಧ್ಯದಲ್ಲಿ ಇರುವ ಅಚ್ಚಿನ ಸುತ್ತಲೂ ಸುಮಾರು ಒಂದು ಅಡಿಯ ಅಂತರದಲ್ಲಿರುವ ಉಬ್ಬುಶಿಲ್ಪದ ಚಕ್ರಾಕಾರದ ವಿನ್ಯಾಸಕ್ಕೆ ಹಳದಿ ಬಣ್ಣ ಬಳಸಿರುವುದನ್ನು ಕಾಣಬಹುದು. ಈ ವಿನ್ಯಾಸದ ನಂತರ ಬರುವ ಒಂದು ವೃತ್ತಾಕಾರದ ಪಟ್ಟಿಕೆಯ ಮೇಲೆ ರಚಿತವಾದ ಹಣ್ಣಿನಾಕಾರದ ಉಬ್ಬುಶಿಲ್ಪಗಳಿಗೆ ಕೇಸರಿ ಹಾಗೂ ಕೆಂಪು ವರ್ಣಗಳನ್ನು ಪುನರಾವರ್ತನಗೊಳಿಸಿ ಆ ವಿನ್ಯಾಸಗಳನ್ನು ಸುಂದರಗೊಳಿಸಿದ್ದಾರೆ. ಈ ಪಟ್ಟಿಕೆಯ ಮೇಲ್ಭಾಗದಲ್ಲಿ

ಕಾಷ್ಠ ರಥಶಿಲ್ಪಗಳ ಶಿಲೆಯ ಚಕ್ರಗಳ ವರ್ಣಗಾರಿಕೆ



ಶ್ರೀ ಬಸವೇಶ್ವರ ರಥದ ಚಕ್ರಗಳು
ಬಾಗಲಕೋಟ, ಜಿ - ಬಾಗಲಕೋಟ



ಶ್ರೀ ಮೌನೇಶ್ವರ ರಥದ ಚಕ್ರಗಳು
ವರವಿ, ಜಿ - ಗದಗ



ಶ್ರೀ ಶಿವಯೋಗೇಶ್ವರ ರಥದ ಚಕ್ರಗಳು
ಶಿವಯೋಗಮಂದಿರ, ಜಿ - ಬಾಗಲಕೋಟ



ಶ್ರೀ ವಿಜಯಮಹಾಂತೇಶ ರಥದ ಚಕ್ರಗಳು
ಇಳಕಲ, ಜಿ - ಬಾಗಲಕೋಟ



ಶ್ರೀ ಮಡಿವಾಳೇಶ್ವರ ರಥದ ಚಕ್ರಗಳು
ಧವಳಗಿ, ಜಿ - ಬಿಜಾಪುರ



ಶ್ರೀ ಶಿವಪ್ಪಯ್ಯನ ಮಠದ ರಥದ ಚಕ್ರಗಳು
ಗುಳೇದಗುಡ್ಡ, ಜಿ - ಬಾಗಲಕೋಟ



ಶ್ರೀ ಬಸವೇಶ್ವರ ರಥದ ಚಕ್ರಗಳು
ಹುನಗುಂದ, ಜಿ - ಬಾಗಲಕೋಟ



ಶ್ರೀ ಭ್ರಷ್ಟಗದ್ದಿ ಮಠದ ರಥದ ಚಕ್ರಗಳು
ಮುಧೋಳ, ಜಿ - ಬಾಗಲಕೋಟ

ಬರುವ ಒಂದು ಅಡಿ ಅಗಲವಾದ ವೃತ್ತಾಕಾರದ ದೊಡ್ಡ ಪಟ್ಟಿಕೆಗೆ ಆಕಾಶನೀಲ ವರ್ಣವನ್ನು ಬಳಸಿದ್ದಾರೆ. ಚಕ್ರಗಳ ವ್ಯಾಸಗಳ ಅಂಚಿನ ಸುತ್ತ ಹಸಿರು ಮಿಶ್ರಿತ ನೀಲಿ ವರ್ಣವನ್ನು ಬಳಸಿರುವುದು ಕಂಡುಬರುತ್ತದೆ. ಇಂಥಹ ವರ್ಣಗಾರಿಕೆಯನ್ನು ಇದೇ ಜಿಲ್ಲೆಯ ನೀರಮಾನ್ವಿಯ ಲಕ್ಷ್ಮೀ ದೇವಸ್ಥಾನ, ಲಿಂಗಸೂಗೂರ ತಾಲೂಕಿನ ಅಂಕಲಿಮಠದ ರಥದಲ್ಲಿಯ ಚಕ್ರಗಳಲ್ಲಿ ಸಿಂಧನೂರು ತಾಲೂಕಿನ ಸುತ್ತಾನಪೂರದ ಹನುಮನ ದೇವಸ್ಥಾನ, ಹೆಡಗಿನಹಾಳದ ಸಿದ್ಧೇಶ್ವರ ದೇವಸ್ಥಾನದ ರಥದ ಚಕ್ರಗಳಲ್ಲಿ ಕಾಣಬಹುದಾಗಿದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರು ಮಹಾಮಾಯಿ ದೇವಸ್ಥಾನದ ರಥ ಹಾಗೂ ಗುದ್ನೆಪ್ಪನ ಮಠದ ರಥದ ಚಕ್ರಗಳು ಒಂದೇ ತೆರನಾದ ವರ್ಣಗಾರಿಕೆಯನ್ನು ಹೊಂದಿವೆ. ಕರ್ನಾಟಕದ ಎಲ್ಲೆಡೆ ಕಂಡುಬರುವ ಜನಪದದ ಸಾಂಪ್ರದಾಯಿಕ ವರ್ಣಗಳಾದ ಹೊರಮಂಜು ಮತ್ತು ಸುಣ್ಣದಿಂದ ಈ ಚಕ್ರಗಳನ್ನು ಅಲಂಕೃತಗೊಳಿಸಲಾಗಿದೆ. ಆದರೆ ಚಕ್ರಗಳ ವ್ಯಾಸದ ಅಂಚಿಗೆ ಸಮೀಪದಲ್ಲಿರುವ ಸುಣ್ಣದ ಬಿಳಿಯ ಪಟ್ಟಿಕೆಯ ಮೇಲೆ ಕೆಂಪು ಹಾಗೂ ಹಸಿರು ವರ್ಣಗಳಿಂದ ಬಳ್ಳಿಯಾಕಾರದ ವಿನ್ಯಾಸವನ್ನು ರಚಿಸಿದ್ದಾರೆ ಆದರಿಂದ ಚಕ್ರಗಳ ಸೌಂದರ್ಯವು ನೋಡಲು ವಿಶೇಷವೆನಿಸುತ್ತದೆ.

ಬಳ್ಳಾರಿ ಜಿಲ್ಲೆಯ ಹೋಸಪೇಟೆ ಹತ್ತಿರ ಬರುವ ಸಿರಗುಪ್ಪದ ರಾರವಿ ಯಲ್ಲಮ್ಮನ ರಥದ ಚಕ್ರಗಳಲ್ಲಿ ಮೂರು ವರ್ತುಳಾಕಾರದ ಉಬ್ಬುಶಿಲ್ಪದ ವಿನ್ಯಾಸಗಳಿಗೆ ಕ್ರಮವಾಗಿ ಹಳದಿ, ನೀಲಿ ಹಾಗೂ ಕಡುಗಂದು ಬಣ್ಣವನ್ನು ಲೇಪಿಸಿರುವುದನ್ನು ಕಾಣಬಹುದು . ಈ ಚಕ್ರಗಳು ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡಬಸವೇಶ್ವರ ದೇವಸ್ಥಾನದ ಚಕ್ರಗಳ ವರ್ಣಗಾರಿಕೆಯನ್ನು ಹೋಲುತ್ತವೆ. ವೃತ್ತಾಕಾರದ ವಿನ್ಯಾಸಗಳಿದ್ದರೂ ಬಣ್ಣಗಳ ಬಳಕೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ.

ಹೀಗೆ ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿ ಕಂಡುಬರುವ ರಥಗಳ ಶಿಲೆಯ ಚಕ್ರಗಳು ವಿವಿಧ ವರ್ಣಗಳನ್ನು ತಮ್ಮಲ್ಲಿ ಮೈಗೂಡಿಸಿಕೊಂಡು ಬಹಳ ಸುಂದರವಾಗಿ ಹಾಗೂ ಆಕರ್ಷಣೀಯವಾಗಿ ಕಂಡುಬರುತ್ತವೆ.


★. **ಮರದ ಮಾಧ್ಯಮದ ಚಕ್ರಗಳ ವರ್ಣಗಾರಿಕೆ :** ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ನಾಲವಡಿಯ ಬಸವೇಶ್ವರ ದೇವಸ್ಥಾನದ ರಥದ ಚಕ್ರಗಳು ಮರದ ಮಾಧ್ಯಮದಲ್ಲಿವೆ. ಈ ಚಕ್ರಗಳು ಯಾವುದೇ ಉಬ್ಬು ಕೆತ್ತನೆ ವಿನ್ಯಾಸವನ್ನು ಹೊಂದಿರದೆ, ಅಚ್ಚಿನ ಸುತ್ತ ಬರುವ ಚಕ್ರಗಳ ಭಾಗಗಳು ಸ್ವಲ್ಪ ಉಬ್ಬಿದ ಆಕಾರವನ್ನು ಹೊಂದಿವೆ. ಅಚ್ಚಿನ ಸುತ್ತ ಬರುವ ಉಬ್ಬಿದ ಆಕಾರದ ಚಕ್ರಗಳ ಭಾಗಗಳಲ್ಲಿ ಐದು ವೃತ್ತಾಕಾರದ ವರ್ಣಪಟ್ಟಿಕೆಗಳು ಕಂಡುಬರುತ್ತವೆ. ಅಚ್ಚಿನ ಹತ್ತಿರ ಬರುವ ಮೊದಲನೆಯ ಪಟ್ಟಿಕೆಯು ಬಿಳಿ, ಎರಡನೆಯ ಪಟ್ಟಿಕೆಯು ಕೇಸರಿ ಮೂರನೆಯ ಪಟ್ಟಿಕೆಯ ಹಸಿರು ನಾಲ್ಕನೆಯ ಪಟ್ಟಿಕೆಯು ಕೇಸರಿ ಹಾಗೂ ಐದನೆಯ ಪಟ್ಟಿಕೆಯು ಬಿಳಿಯ ವರ್ಣವನ್ನು ಹೊಂದಿವೆ. ಐದನೆಯ ಪಟ್ಟಿಕೆಯಿಂದ ಚಕ್ರಗಳ ವ್ಯಾಸದ ಅಂಚಿನ ಭಾಗದ ಸ್ವಲ್ಪ ಅಂತರದವರೆಗೆ ರಚಿಸಲಾದ ವೃತ್ತಾಕಾರದ ಪಟ್ಟಿಕೆಗೆ ಹಸಿರು ವರ್ಣ ಲೇಪಿಸಿರುವುದನ್ನು ಧಾರವಾಡ, ಬೆಳಗಾವಿ ಹಾಗೂ ಬಳ್ಳಾರಿ




ಶ್ರೀ ವೀರಭದ್ರೇಶ್ವರ ರಥದ ಚಕ್ರಗಳು ಬಿಂಚಲಿ, ಜಿ - ಗದಗ



ಶ್ರೀ ಗವಿಸಿದ್ದೇಶ್ವರ ರಥದ ಚಕ್ರಗಳು ಕೊಪ್ಪಳ, ಜಿ - ಕೊಪ್ಪಳ



ಶ್ರೀ ಸಿದ್ದೇಶ್ವರ ಮಠದ ರಥದ ಚಕ್ರಗಳು ಶಿರೂರ, ಜಿ - ಬಾಗಲಕೋಟ



ಶ್ರೀ ವೀರಭದ್ರೇಶ್ವರ ರಥದ ಚಕ್ರಗಳು
ಮುಚಖಂಡಿ, ಜಿ - ಬಾಗಲಕೋಟ



ಶ್ರೀ ಕರೆಪ್ಪತಾತನ ರಥದ ಚಕ್ರಗಳು
ಕಲ್ಮಲ, ಜಿ - ರಾಯಚೂರ

ಜಿಲ್ಲೆಗಳಲ್ಲಿ ಹೆಚ್ಚಾಗಿ ಕಾಣಬಹುದು.

ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥದ ಚಕ್ರಗಳು ನಾಲವಡಿಯ ಬಸವೇಶ್ವರ ದೇವಸ್ಥಾನದ ಚಕ್ರಗಳಂತೆ ಚಪ್ಪಟೆಯ ವಿನ್ಯಾಸವನ್ನು ಹೊಂದಿದ್ದರೂ, ವರ್ಣಗಾರಿಕೆಯಲ್ಲಿ ವ್ಯತ್ಯಾಸ ಕಂಡುಬರುತ್ತದೆ. ಅಚ್ಚಿನ ಸುತ್ತಲೂ ಬರುವ ಉಬ್ಬಿನಾಕಾರದಲ್ಲಿ ಕೆತ್ತಿರುವಂತಹ ಹೂವಿನಾಕಾರದ ಉಬ್ಬು ಕೆತ್ತನೆಯ ವಿನ್ಯಾಸಕ್ಕೆ ಕಪ್ಪು ಮಿಶ್ರಿತ ಹಸಿರು ಬಣ್ಣವನ್ನು ಲೇಪಿಸಲಾಗಿದೆ. ಈ ವಿನ್ಯಾಸದ ಸುತ್ತಲೂ ವೃತ್ತಾಕಾರದ ಹಳದಿ ಪಟ್ಟಿಯನ್ನು ಚಿತ್ರಿಸಿದ್ದಾರೆ. ಹಳದಿ ಪಟ್ಟಿಯ ಸುತ್ತಲೂ ವೃತ್ತಾಕಾರದಲ್ಲಿ ರಚಿತವಾದ ಪದಕದ ಆಕಾರದಲ್ಲಿರುವ ಬಳ್ಳಿಯ ವಿನ್ಯಾಸಗಳಿಗೆ ಹಳದಿ ಬಣ್ಣವನ್ನು ಲೇಪಿಸಲಾಗಿದೆ. ಪದಕಾಕಾರದ ವಿನ್ಯಾಸಗಳ ತುದಿಗಳು ಹಸಿರು ವರ್ಣದ ಚಿಕ್ಕ ಚಿಕ್ಕ ವರ್ತುಳಗಳನ್ನು (ಗೋಲಗಳನ್ನು) ಹೊಂದಿವೆ. ಹಳದಿ ವರ್ಣಗಳನ್ನು ಹೊಂದಿದ ಹನ್ನೆರಡು ಪದಕಾಕಾರದ ವಿನ್ಯಾಸಗಳು ರಥದ ಚಕ್ರಗಳ ಅಚ್ಚಿನ ಸುತ್ತಲೂ ಹರಡಿರುವುದರಿಂದ ಒಂದು ಅರಳಿದ ಹೂವಿನಾಕಾರದಲ್ಲಿ ಗಮನಸೆಳೆಯುತ್ತವೆ. ಹೂವಿನಾಕಾರದ ವಿನ್ಯಾಸವು ಹಳದಿಮಿಶ್ರಿತ ಕೆಂಪು ಮೈವಳಿಕೆಯುಳ್ಳ ಚಕ್ರಗಳ ಮೇಲೆ ರಚಿತಗೊಂಡಿವೆ. ಚಕ್ರಗಳ ವ್ಯಾಸದ ಅಂಚಿನ ಸುತ್ತಲೂ ಒಂದು ಇಂಚು ಅಗಲವಾದ ಹಳದಿ ಪಟ್ಟಿಕೆಯನ್ನು ಚಿತ್ರಿಸಲಾಗಿದೆ.

ಬೈಲಹೊಂಗಲ ತಾಲೂಕಿನ ನೇಸರಗಿಯ ಮತ್ತು ಮೊಹರೆಯ ರಥದ ಚಕ್ರಗಳು ಒಂದೇ ತೆರನಾದ ವರ್ಣ ವಿನ್ಯಾಸವನ್ನು ಹೊಂದಿವೆ. ಮೊದಲು ಚಕ್ರಗಳ ಹೊರಮೈಗೆ ಆಕಾಶನೀಲಿ ವರ್ಣವನ್ನು ಲೇಪಿಸಿ, ಅದರ ಮೇಲ್ಗಡೆ ವಿವಿಧ ವರ್ಣಗಳಿಂದ ನಕ್ಷೆಗಳನ್ನು ಚಿತ್ರಿಸಲಾಗಿದೆ. ಅಚ್ಚಿನ ಸುತ್ತಲೂ ಕೆಂಪು ವರ್ಣಗಳಿಂದ ಪ್ರಾರಂಭಗೊಂಡು ಚಕ್ರಗಳು ವ್ಯಾಸದ ಸುತ್ತಲೂ ಸಮೀಪದಲ್ಲಿರುವ ವೃತ್ತಾಕಾರದ ಕೇಸರಿ ವರ್ಣದ ಪಟ್ಟಿಕೆಯವರೆಗೂ ನಡುವೆ ಬರುವ ಚಕ್ರದ ತೆಳುನೀಲಿ ವರ್ಣದ ಭಾಗದಲ್ಲಿ ಹೂ ಬಳ್ಳಿಯಾಕಾರದ ವಿನ್ಯಾಸಗಳಿವೆ. ಬಳ್ಳಿಗಳಿಗೆ ಹಸಿರು ವರ್ಣ, ಹೂವುಗಳಿಗೆ ಹಳದಿ, ತಿಳಿಗೆಂಪು(ಗುಲಾಬಿ) ಹಾಗೂ ಬಿಳಿಯ ಚುಕ್ಕೆಯಾಕಾರದ ವರ್ಣಗಳನ್ನು ಲೇಪಿಸಲಾಗಿದೆ. ವರ್ಣಸಂಯೋಜನಾ ದೃಷ್ಟಿಯಿಂದ ಈ ರಥಗಳಲ್ಲಿನ ಚಕ್ರಗಳು ತುಂಬಾ ಕಲಾತ್ಮಕವಾಗಿ ತೋರುತ್ತವೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಬೆಂಡಿಗೇರಿಯ ಆಂಜನೇಯ ದೇವಸ್ಥಾನದ ರಥದ ಚಕ್ರಗಳ ವರ್ಣವಿನ್ಯಾಸ ಹಾಗೂ ಕುಂದಗೋಳ ತಾಲೂಕಿನ ಕೂಬಿಹಾಳದ ಯಲ್ಲಮ್ಮ ದೇವರ ದೇವಸ್ಥಾನದ ಚಿಕ್ಕಪ್ರಮಾಣದ ರಥಗಳು ಮರದ ಚಕ್ರಗಳನ್ನು ಹೊಂದಿದ್ದು, ಇಲ್ಲಿ ಸಾಧಾರಣ ವರ್ಣವಿನ್ಯಾಸವನ್ನು ಕಾಣಬಹುದು. ಚಕ್ರಗಳ ಅಚ್ಚಿನ ಸುತ್ತಲೂ ಒಂದು ಅಡಿ ಅಗಲವಾಗಿ ವೃತ್ತಾಕಾರದಲ್ಲಿ ಕಡುಗಂದು ವರ್ಣವನ್ನು ಕಾಣಬಹುದು. ಈ ವೃತ್ತಾಕಾರದ ಪಟ್ಟಿಕೆಯ ನಂತರ ಪ್ರಾರಂಭವಾಗಿ ಚಕ್ರದ ವ್ಯಾಸದ ಅಂಚಿನ ವೃತ್ತಾಕಾರದ ಹಳದಿ ಪಟ್ಟಿಕೆಯವರೆಗೂ ಇರುವ ನಡುವಿನ ಅಂತರದಲ್ಲಿ ಕೇಸರಿ ವರ್ಣವನ್ನು ಲೇಪಿಸಿದ್ದಾರೆ. ಈ ಕೇಸರಿ ಪಟ್ಟಿಕೆಯ ಭಾಗದಲ್ಲಿಯೇ ವೃತ್ತಾಕಾರವಾಗಿ ಕೆಂಪು ಬಿಳಿ ಹಾಗೂ ಕಪ್ಪು ವರ್ಣದ ಸಣ್ಣ ಸಣ್ಣ ಗೋಲಿಗಳಂತೆ ಕಾಣುವ ವಿನ್ಯಾಸವನ್ನು ಪುನರಾವರ್ತಿಸಿರುವುದು ಕಂಡುಬರುತ್ತದೆ.

ಹುಬ್ಬಳ್ಳಿಯ ಮೂರುಸಾವಿರ ಮಠದ ರಥದ ಚಕ್ರಗಳು ಸುಮಾರು ಮೂರು ಅಡಿ ವ್ಯಾಸವುಳ್ಳವುಗಳಾಗಿದ್ದರೂ, ಇವುಗಳಲ್ಲಿಯೂ ಸಹ ವರ್ಣಲೇಪನವನ್ನು ಕಾಣಬಹುದು. ಅಚ್ಚಿನ

ಭಾಗದಲ್ಲಿ ಮತ್ತು ಚಕ್ರಗಳ ವ್ಯಾಸದ ಕೊನೆಯ ಭಾಗದಲ್ಲಿ ಬಿಳಿ ಬಣ್ಣವನ್ನು ಲೇಪಿಸಿ, ಉಳಿದೆಲ್ಲ ಚಕ್ರಗಳ ಭಾಗಗಳಿಗೆ ಕಪ್ಪು ವರ್ಣವು ಲೇಪನಗೊಂಡಿರುವುದನ್ನು ಕಾಣುತ್ತೇವೆ. ಈ ರಥದ ಚಕ್ರಗಳಿಗೆ ಕೇವಲ ಕಪ್ಪು ಹಾಗೂ ಬಿಳಿ-ಎರಡೇ ವರ್ಣಗಳಿಂದ ಲೇಪನ ಮಾಡಿರುವುದು ಒಂದು ವಿಶೇಷವಾಗಿ ತೋರುತ್ತದೆ. ಶಿಲೆಯ ಚಕ್ರಗಳಲ್ಲಿ ಹೊರಮಂಜ ಮತ್ತು ಸುಣ್ಣಗಳೆರಡರಿಂದಲೇ ಸುಂದರಗೊಂಡ ರಥದ ಚಕ್ರಗಳಂತೆ ಕಪ್ಪು ಮತ್ತು ಬಿಳಿಯ ಎರಡೇ ಬಣ್ಣಗಳನ್ನು ಬಳಸಿ, ವೃತ್ತಾಕಾರದ ಪಟ್ಟಿಕೆಗಳಿಂದ ಕೂಡಿದ ವರ್ಣರಚನಾ ವಿನ್ಯಾಸವುಳ್ಳ ಚಕ್ರಗಳು ಇವುಗಳಾಗಿವೆ.

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ಭದ್ರಾಪುರದ ವೀರಭದ್ರ ದೇವಸ್ಥಾನದ ರಥದ ಹಾಗೂ ಕಲಘಟಗಿ ತಾಲೂಕಿನ ಮಸಳಿಕಟ್ಟೆಯ ಆಂಜನೇಯ ದೇವಸ್ಥಾನದ ರಥದ ಚಕ್ರಗಳು ವರ್ಣಗಾರಿಕೆಯಲ್ಲಿ ಅನುರೂಪವಾದವುಗಳು. ಚಕ್ರಗಳ ಹೊರಮೈಗೆ ಮೊದಲು ಹಳದಿ ವರ್ಣವನ್ನು ಲೇಪಿಸಿ, ಅಚ್ಚಿನ ಸುತ್ತಲೂ ಬರುವ ಚಕ್ರದಾಕಾರದ ವಿನ್ಯಾಸಗಳಿಗೆ ಕೇಸರಿ ವರ್ಣವನ್ನು ಹಚ್ಚಿದ್ದಾರೆ. ಚಕ್ರದ ಮಧ್ಯಭಾಗದಲ್ಲಿ ವೃತ್ತಾಕಾರವಾಗಿ, ತ್ರಿಕೋನಾಕಾರವಾಗಿ ಹಸಿರು ಬಣ್ಣದ ವಿನ್ಯಾಸಗಳನ್ನು ಚಿತ್ರಿಸಿದ್ದಾರೆ. ಒಂದೊಂದು ತ್ರಿಕೋನದ ಮಧ್ಯದಲ್ಲಿಯ ಅಂತರದಲ್ಲಿ, ಒಂದೊಂದರಂತೆ ಬಿಳಿಯ ಬಣ್ಣದ ಹಾಗೂ ನೀಲಿ ಬಣ್ಣದ ಚುಕ್ಕೆಗಳನ್ನಿಟ್ಟು ಅಲಂಕರಿಸಿದ್ದಾರೆ. ಚಕ್ರಗಳ ವ್ಯಾಸದ ಕೊನೆಯ ಭಾಗದ ವೃತ್ತಾಕಾರದ ಪಟ್ಟಿಕೆಯು ಕಪ್ಪು ಮಿಶ್ರಿತ ಕೆಂಪು ವರ್ಣದಿಂದ ಆವೃತವಾಗಿದೆ. ಬಹಳ ಸುಂದರವಾದ ವರ್ಣಗಾರಿಕೆಯನ್ನು ಈ ಚಕ್ರಗಳಲ್ಲಿ ಕಾಣಬಹುದು.

ಬಳ್ಳಾರಿ ಜಿಲ್ಲೆಯ ಸಂಡೂರು ತಾಲೂಕಿನ ಶಿವಪುರದ ಬಸವೇಶ್ವರ ದೇವಸ್ಥಾನದ ರಥದ ಚಕ್ರಗಳು ಹಾಗೂ ಹೂವಿನ ಹಡಗಲಿ ತಾಲೂಕಿನ ಇಟಗಿಯ ರಥದ ಚಕ್ರಗಳು ಸುಂದರ ವರ್ಣವಿನ್ಯಾಸವನ್ನು ಹೊಂದಿವೆ. ಚಕ್ರಗಳ ಹೊರಮೈಗೆ ಸಂಪೂರ್ಣವಾಗಿ ಕಡುಕಂದು ಬಣ್ಣವನ್ನು ಲೇಪಿಸಿ ಅದರ ಮೇಲೆ ಬಿಳಿಯ ವರ್ಣದಿಂದ ಚಿತ್ತಾರಗಳನ್ನು ಚಿತ್ರಿಸಿದ್ದಾರೆ. ಅಚ್ಚಿನ ಸುತ್ತಲೂ ವೃತ್ತಾಕಾರವಾಗಿ ಬಿಳಿಯ ವರ್ಣದಿಂದ ಚುಕ್ಕೆಗಳನ್ನಿಟ್ಟು ಒಂದೊಂದು ಚುಕ್ಕಿಗಳ ಮೇಲ್ಭಾಗದಿಂದ ಚಕ್ರಗಳ ವ್ಯಾಸದ ಹತ್ತಿರವಿರುವ ಹಳದಿವರ್ಣದ ವೃತ್ತಾಕಾರದ ಪಟ್ಟಿಕೆಯವರೆಗೆ ಬಿಳಿಯ ವರ್ಣದ ಚಿಕ್ಕ ಚಿಕ್ಕ ಗೆರೆಗಳನ್ನು ಎಳೆದಿದ್ದಾರೆ. ಚಕ್ರಗಳ ವ್ಯಾಸದ ಅಂಚಿನ ಸುತ್ತ ಬಿಳಿ ಹಾಗೂ ಹಳದಿ ವರ್ಣಗಳಿಂದ ಒಂದೊಂದು ಇಂಚು ಅಗಲವಾದ ವರ್ಣಪಟ್ಟಿಕೆಗಳನ್ನು ರಚಿಸಿದ್ದಾರೆ.

ಬಳ್ಳಾರಿ ಜಿಲ್ಲೆಯ ಹಲವಾರು ರಥಗಳಿಗೆ ಮರದ ಮಾಧ್ಯಮದ ಚಕ್ರಗಳಿದ್ದರೂ ಅವುಗಳಿಗೆ ವರ್ಣವಿನ್ಯಾಸವಿರುವುದು ತುಂಬಾ ಕಡಿಮೆ. ಮರದ ಮಾಧ್ಯಮದ ಚಕ್ರಗಳು ಶಿಲಾ ಮಾಧ್ಯಮದ ಚಕ್ರಗಳಿಗಿಂತ ಕಡಿಮೆ ಪ್ರಮಾಣದಲ್ಲಿ ವರ್ಣಗಾರಿಕೆಯನ್ನು ಹೊಂದಿವೆ. ಆದರೆ ಶಿಲಾಮಾಧ್ಯಮದ ಚಕ್ರಗಳ ಮೇಲೆ ಕಾಣುವ ವರ್ಣವಿನ್ಯಾಸಗಳನ್ನು ಮರದ ಮಾಧ್ಯಮದ ಚಕ್ರಗಳಲ್ಲೂ ಕಾಣಬಹುದಾಗಿದೆ.

ii. ಅಚ್ಚುಗಳ ಮೇಲಿನ ವರ್ಣವಿನ್ಯಾಸ :

ಬಹುತರ ರಥಗಳಲ್ಲಿ ಚಕ್ರಗಳು ವರ್ಣವಿನ್ಯಾಸವನ್ನು ಹೊಂದಿದಂತೆ ಚಕ್ರಗಳಿಗೆ ಸಂಬಂಧಿಸಿದ ಮುಖ್ಯವಾದ ಭಾಗವಾದ ಅಚ್ಚುಗಳ ಮೇಲೆ ಸಹ ವರ್ಣಗಾರಿಕೆಯನ್ನು ಕಾಣಬಹುದು

ಯಾವ ರಥದ ಗಾಲಿಗಳು ಬಣ್ಣ ಬಣ್ಣದ ವರ್ಣಗಾರಿಕೆಯಿಂದ ಕೂಡಿವೆಯೋ ಅಂತಹ ರಥದ ಅಚ್ಚುಗಳು ಸಹ ವಿವಿಧ ವರ್ಣಚಿತ್ತಾರಗಳಿಂದ ಕೂಡಿವೆ.

ಗದಗ ಜಿಲ್ಲೆಯ ಚಿಂಚಲಿಯ ವೀರಭದ್ರ ದೇವಸ್ಥಾನದ ರಥದ ಚಕ್ರಗಳು ಕಲಾತ್ಮಕ ವರ್ಣಗಾರಿಕೆಯನ್ನು ಹೊಂದಿದಂತೆ ರಥದ ಅಚ್ಚು ಸಹ ಸ್ವಲ್ಪ ಹಳದಿ ಮಿಶ್ರಿತ ಕೆಂಪು ವರ್ಣವನ್ನು ತನ್ನದಾಗಿಸಿಕೊಂಡಿದೆ. ಪೋಸ್ಟರ್-ರೆಡ್ ವರ್ಣದ ಅಚ್ಚು, ಚಕ್ರಗಳಲ್ಲಿ ಹೂವಿನಾಕಾರದ ಮಧ್ಯದಲ್ಲಿ ಹೊರಬಂದ ಭಾಗವು ಕೆಂಪಾಗಿ ತೋರುವುದರಿಂದ, ಗಾಲಿಗಳ ಮೆರಗನ್ನು ಹೆಚ್ಚಿಸಿದೆ.

ಬಾದಾಮಿ ತಾಲೂಕಿನ ಗುಳೇದಗುಡ್ಡದ ಶಿವಪ್ಪಯ್ಯನ ಮಠದ ರಥದ ಅಚ್ಚುಗಳು ಬಿಳಿಯ ವರ್ಣವನ್ನು ಹೊಂದಿವೆ. ಚಕ್ರಗಳಲ್ಲಿರುವ ಬಿಳಿಯ ಬಣ್ಣ ಹಾಗೂ ಚಕ್ರಗಳ ಮಧ್ಯದಲ್ಲಿ ಹೊರಮೈ ಮೇಲೆ ರಚಿತವಾದ ಅರಳಿದ ಹೂವಿನಾಕಾರದ ಮಧ್ಯದಲ್ಲಿ ಹೊರಬಂದ ಬಿಳಿಯ ಬಣ್ಣದ ಅಚ್ಚಿನ ಭಾಗಗಳು ಚಕ್ರದ ವರ್ಣಗಾರಿಕೆಗೆ ಹೊಂದಿಕೆಯಾಗಿವೆ.

ಬಾಗಲಕೋಟ ಜಿಲ್ಲೆಯ ಬಸವೇಶ್ವರ ದೇವಸ್ಥಾನದ ರಥದ ಅಚ್ಚುಗಳು, ಚಕ್ರಗಳ ಹೊರಮೈ ಮೇಲೆ ರಚಿತವಾದ ಸುಂದರವಾದ ವಿನ್ಯಾಸದ ಮಧ್ಯದಲ್ಲಿ ಹೊರಬಂದು ಆ ಭಾಗಗಳು ಆಕಾಶ ನೀಲಿ ವರ್ಣದಿಂದ ಹಾಗೂ ವರ್ತುಳಾಕಾರದ ಕೆಂಪು ವರ್ಣದ ಪಟ್ಟಿಕೆಗಳಿಂದ ಕೂಡಿವೆ. ದೂರದಿಂದ ಈ ಅಚ್ಚುಗಳ ಹೊರಚಾಚಿದ ಭಾಗವೇ ಚಕ್ರದ ಹೂವಿನ ವಿನ್ಯಾಸದ ಮಧ್ಯದ ಸುಂದರವಾದ ಭಾಗವಾಗಿ ಕಂಡುಬರುತ್ತದೆ.

ಇದೇ ತೆರನಾದ ಅಚ್ಚುಗಳನ್ನು ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡಬಸವೇಶ್ವರ ದೇವಸ್ಥಾನದ ರಥದಲ್ಲಿ ಕಾಣಬಹುದು. ಆದರೆ ಅಚ್ಚುಗಳು ಕಡುಗೆಂಪು ವರ್ಣದಿಂದ ಅಲಂಕೃತಗೊಂಡು ಗಾಲಿಗಳ ಮಧ್ಯದಲ್ಲಿ ಹೊರಚಾಚಿದ ಭಾಗದ ಮೇಲೆ 'ಓಂ' ಎಂದು ಬಿಳಿಯ ವರ್ಣಲೇಪನ ಮಾಡಿ, ಅದರ ಸುತ್ತಲೂ ಬಳ್ಳಿಯಾಕಾರದ ವಿನ್ಯಾಸವನ್ನು ರಚಿಸಿದ್ದಾರೆ. ಇದೇ ತಾಲೂಕಿನ ಜಾಯವಾಡಲಗಿಯ ಸೋಮನಾಥೇಶ್ವರ ದೇವಾಲಯದ ರಥದ ಅಚ್ಚುಗಳು ಕಡುಗೆಂಪು ಹಾಗೂ ಹಳದಿ ವರ್ಣದ ಪಟ್ಟಿಕೆಗಳಿಂದ ಕೂಡಿರುವುದನ್ನು ಕಾಣಬಹುದು.

ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಮರಡಿಮಠದ ಚಕ್ರದ ಅಚ್ಚುಗಳು (ಕ್ರಿಮ್‌ಸನ್‌ರೆಡ್) ಕೆಂಪು ವರ್ಣದಿಂದ ಲೇಪಿತಗೊಂಡಿದ್ದು, ಸುಂದರವಾದ ಉಬ್ಬುಶಿಲ್ಪಗಳನ್ನು ಹೊಂದಿವೆ. ಸುಣ್ಣದಿಂದ ಲೇಪಿತಗೊಂಡಂತಹ ಗಾಲಿಗಳ ಮಧ್ಯದಲ್ಲಿ ಹೊರಚಾಚಿದ ಅಚ್ಚುಗಳ ಕೆಂಪುವರ್ಣವು ಗಾಲಿಗಳ ಸೌಂದರ್ಯವನ್ನು ಹೆಚ್ಚಿಸಿವೆ.

ಕೆಲವೊಂದು ರಥದ ಚಕ್ರಗಳು ವರ್ಣಗಾರಿಕೆಯಿಂದ ಕೂಡಿರದಿದ್ದರೂ ಅಚ್ಚುಗಳು ವರ್ಣಲೇಪಿತವಾಗಿರುವುದನ್ನು ಕಾಣಬಹುದು. ಗದಗ ಜಿಲ್ಲೆಯ ಶಿರಹಟ್ಟಿಯ ಫಕಿರೇಶ್ವರ ಸಂಸ್ಥಾನಮಠದ ರಥದ ಚಕ್ರಗಳು ವರ್ಣಲೇಪನವನ್ನು ಹೊಂದದೆ, ರಥದ ಅಚ್ಚು ತಿಳಿಗೆಂಪು, ಗುಲಾಬಿ ವರ್ಣಗಳಿಂದ ಕೂಡಿರುವುದನ್ನು ಕಾಣಬಹುದು.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಹುಲಿಗೆಮ್ಮ ದೇವಸ್ಥಾನದ ರಥದ ಅಚ್ಚುಗಳು ಮಾತ್ರ

[illegible]

ಹಳದಿ ಬಣ್ಣವನ್ನು ಹೊಂದಿವೆ. ಅಚ್ಚುಗಳಿಗೆ ಅಳವಡಿಸಿದ ಆಯತಾಕಾರದ ನವೀನ ಕೀಲುಗಳು ಹಸಿರು ಬಣ್ಣವನ್ನು ಪಡೆದಿರುವುದರಿಂದ ಶಿಲೆಯ ವರ್ಣರಹಿತ ಚಕ್ರಗಳಿಗೆ ಅಚ್ಚುಗಳ ವರ್ಣಗಾರಿಕೆಯಿಂದ ಸೌಂದರ್ಯ ಬಂದಿದೆ ಎಂದು ಹೇಳಬಹುದು.

ಬಳ್ಳಾರಿ ಜಿಲ್ಲೆಯ ಶಿರಗುಪ್ಪ ತಾಲೂಕಿನ ಶಂಭುಲಿಂಗರಥವು ಸಹ ವರ್ಣರಹಿತ ಚಕ್ರಗಳನ್ನು ಹೊಂದಿ, ಹಸಿರುವರ್ಣದಿಂದ ಲೇಪನ ಹೊಂದಿದಂತಹ ಅಚ್ಚನ್ನು ಕಾಣಬಹುದು. ಇದೇ ತೆರನಾದ ತಿಳಿಗೆಂಪು, ಕಡುಗಂದುವರ್ಣ, ಹಳದಿವರ್ಣ, ನೀಲಿವರ್ಣಗಳಿಂದ ಕೂಡಿದಂತಹ ರಥದ ಅಚ್ಚುಗಳನ್ನು ಕರ್ನಾಟಕದ ವಿವಿಧ ಜಿಲ್ಲೆಗಳ ರಥಗಳಲ್ಲಿ ಕಾಣಬಹುದು.

ಹೆಚ್ಚಾಗಿ ರಥದ ಅಚ್ಚುಗಳು ಒಂದೇ ರೀತಿಯ ವರ್ಣಲೇಪನವನ್ನು ಹೊಂದಿರುವದು ಕಂಡುಬರುತ್ತದೆ. ಆದರೆ ಕೆಲವು ರಥಗಳ ಅಚ್ಚುಗಳ ಮೇಲೆ ಸುಂದರವಾದ ನಕ್ಷೆಗಳಿಂದ ವರ್ಣಗಾರಿಕೆ ಮಾಡಿರುವುದನ್ನು ಕಾಣಬಹುದು.

ಬೆಳಗಾಂವ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥದ ಹಳದಿಮಿಶ್ರಿತ ಕೇಸರಿ ವರ್ಣದ ಅಚ್ಚಿನ ಮೇಲೆ, ಬಿಳಿಯ ವರ್ಣದಿಂದ ''ಓಂ'' ಎಂದು ಬರೆದು ಅಚ್ಚಿನ ಮಧ್ಯಭಾಗದಲ್ಲಿ ಬಿಳಿಯ ಹಾಗೂ ಹಳದಿ ವರ್ಣಗಳಿಂದ ಎಲೆಬಳ್ಳಿಯಂತಹ ಚಕ್ರವಿನ್ಯಾಸವನ್ನು ಚಿತ್ರಿಸಿರುವುದನ್ನು ಕಾಣಬಹುದು. ಬೆಳಗಾಂವ ಜಿಲ್ಲೆಯ ಗೋಕಾಕದ ರಥದ ಅಚ್ಚುಗಳು ಯಲೋ ಆಕರ್ (ಹಳದಿ) ವರ್ಣದಿಂದ ಕೂಡಿದ್ದು ಅದರ ಮೇಲೆ ಬಿಳಿಯ ಬಣ್ಣದಲ್ಲಿ ಎಲೆ ಹಾಗೂ ಬಳ್ಳಿಯ ನಕ್ಷೆಗಳನ್ನು ರಚಿಸಿದ್ದಾರೆ. ಅಚ್ಚುಗಳ ಎರಡೂ ಗಾಲಿಗಳ ಹತ್ತಿರವಿರುವ ಭಾಗದಲ್ಲಿ ಹಾಗೂ ಅಚ್ಚುಗಳ ಮಧ್ಯ ಭಾಗದಲ್ಲಿ ಶಿವಲಿಂಗವನ್ನು ಕಡುಗಂದು ವರ್ಣದಿಂದ ಚಿತ್ರಿಸಿ ಅಲಂಕೃತಗೊಳಿಸಿರುವುದನ್ನು ಕಾಣಬಹುದು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿ ದೇವಸ್ಥಾನದ ಬೃಹತ್ ರಥದ ಅಚ್ಚುಗಳ ವರ್ಣಗಾರಿಕೆ ತುಂಬಾ ವಿಶೇಷವಾಗಿದೆ. ಈ ರಥದ ಅಚ್ಚುಗಳ ಮೇಲೆ ಉಬ್ಬುಶಿಲ್ಪವಿನ್ಯಾಸಗಳು ಕಂಡುಬರುತ್ತವೆ. ಈ ಶಿಲ್ಪವಿನ್ಯಾಸಗಳ ಒಂದರಿಂದ ಒಂದರ ನಡುವೆ ಇರುವ ಅಂತರದಲ್ಲಿ ಹಳದಿ ವರ್ಣವನ್ನು ಲೇಪಿಸಲಾಗಿದೆ. ಐದು ಭಾಗವಾಗಿ ಕಾಣಿಸುವಂತಹ ಹಳದಿ ವರ್ಣದಿಂದ ಲೇಪಿತವಾದ ಅಚ್ಚಿನ ಮೇಲೆ ಚಿತ್ರವಿನ್ಯಾಸಗಳೂ ಸಹ ಕಂಡು ಬರುತ್ತವೆ. ಹಳದಿವರ್ಣದ ಐದು ಭಾಗಗಳ ಮಧ್ಯಭಾಗದಲ್ಲಿ ಕನಕರಾಯನ ಚಿತ್ರವನ್ನು ಕೇಸರಿ ವರ್ಣದಿಂದ ಬಿಡಿಸಿದ್ದಾರೆ. ಈ ಚಿತ್ರದ ಅಕ್ಕಪಕ್ಕದಲ್ಲಿ ಬರುವ ಭಾಗಗಳಲ್ಲಿ ಸುಂದರವಾದ ಶಂಖ ಚಕ್ರಗಳನ್ನು ಬಿಡಿಸಿದ್ದಾರೆ ಗಾಲಿಗಳ ಸಮೀಪದ ಭಾಗಗಳಲ್ಲಿ ಕೀರ್ತಿಮುಖದ ಚಿತ್ರಗಳನ್ನು ರಚಿಸಿರುವುದು ಕಂಡುಬರುತ್ತದೆ.

ಕೆಲವೊಂದು ರಥಗಳಲ್ಲಿ ಆಯಾ ರಥಕ್ಕೆ ಸಂಬಂಧಪಟ್ಟ ದೇವಸ್ಥಾನದ ದೇವತೆಯ ಹೆಸರನ್ನು ಕೇಸರಿ, ಬಿಳಿ ಹಾಗೂ ಹಳದಿ ವರ್ಣಗಳಿಂದ ಬರೆದಿರುವುದನ್ನು ಕಾಣುತ್ತೇವೆ. ಹೀಗೆ ಕಾಷ್ಠ ಮಾಧ್ಯಮದ ರಥಗಳ ಅಚ್ಚುಗಳಲ್ಲಿ ವಿವಿಧ ರೀತಿಯ ವರ್ಣವಿನ್ಯಾಸವನ್ನು ಕಾಣಬಹುದಾಗಿದೆ.

iii. ಆಧಾರ ತೊಲೆಗಳ ಮೇಲಿನ ವರ್ಣವಿನ್ಯಾಸ :

ರಥಶಿಲ್ಪದಲ್ಲಿ ಅಡಿಪಾಯದ ಭಾಗದಲ್ಲಿ ಅಚ್ಚುಗಳ ಮೇಲ್ಭಾಗದಲ್ಲಿ ಆಧಾರತೊಲೆಗಳನ್ನು ಅಳವಡಿಸಿರುತ್ತಾರೆ. ಆಧಾರ ತೊಲೆಗಳು ಸಾಮಾನ್ಯವಾಗಿ ಎಲ್ಲ ರಥಗಳಲ್ಲಿ ಆನೆ ಹಾಗೂ ಸಿಂಹಗಳ ಶಿಲ್ಪಕಲಾಕೃತಿಗಳಿಂದ ಕೂಡಿರುತ್ತವೆ. ಆದರೆ ಕೆಲವು ರಥಗಳಲ್ಲಿ ಕುದುರೆಗಳನ್ನು ಕಾಣಬಹುದು. ಇನ್ನು ಕೆಲವು ರಥಗಳ ಆಧಾರತೊಲೆಗಳು ವಿವಿಧ ರೀತಿಯ ಕಾಷ್ಠಶಿಲ್ಪವಿನ್ಯಾಸಗಳನ್ನು ಹೊಂದಿರುವುದುಂಟು. ಇಲ್ಲಿ ನಿರ್ಮಿತವಾಗಿರುವಂತಹ ಕುಸುರಿ ಕೆತ್ತನೆಯಿಂದ ಕೂಡಿದ ಶಿಲ್ಪಗಳಿಗೆ (ಉಬ್ಬುಶಿಲ್ಪಗಳಿಗೆ) ಆಯಾ ಶಿಲ್ಪಗಳ ಮೆರಗನ್ನು ಅಧಿಕಗೊಳಿಸಲು ಸುಂದರವಾಗಿ ಕಲಾತ್ಮಕವಾಗಿ ವರ್ಣಲೇಪನವನ್ನು ಮಾಡಿರುವುದು ಕೆಲವು ರಥಗಳ ಆಧಾರ ತೊಲೆಗಳಲ್ಲಿ ಕಂಡುಬರುತ್ತದೆ. ವರ್ಣಗಾರಿಕೆಯಿಂದ ಆಕರ್ಷಿಸುವಂತಹ, ಆಧಾರ ತೊಲೆಗಳ ಕಲಾತ್ಮಕ ಶಿಲ್ಪಗಳನ್ನು

★. ಪ್ರಾಣಿಶಿಲ್ಪಗಳು

★. ದೇವತಾಶಿಲ್ಪಗಳು

★. ಮಹಾತ್ಮರ ಶಿಲ್ಪಗಳು

★. ಮಿಥುನ ಶಿಲ್ಪಗಳು

ಎಂದು ವಿಂಗಡಿಸಿಕೊಂಡು ಅವುಗಳಲ್ಲಿ ಕಂಡುಬರುವಂತಹ ವರ್ಣಗಾರಿಕೆಯನ್ನು, ಕರ್ನಾಟಕದ ರಥಗಳ ಆಧಾರ ತೊಲೆಗಳ ಕೆಲವು ಉದಾಹರಣೆಗಳೊಂದಿಗೆ ತಿಳಿಯುವಾ.

★. **ಪ್ರಾಣಿಶಿಲ್ಪಗಳಲ್ಲಿ ವರ್ಣ ವಿನ್ಯಾಸ :** ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರದ ಶಂಕರಲಿಂಗನ ದೇವಸ್ಥಾನದ ಸುಂದರ ರಥದ ತೊಲೆಗಳು ಕಲಾತ್ಮಕವಾದ ಶಿಲ್ಪಗಾರಿಕೆಯ ಜೊತೆಗೆ ವರ್ಣಗಾರಿಕೆಯನ್ನು ಹೊಂದಿವೆ. ಬಹುಪಾಲು ರಥಗಳಲ್ಲಿ ಆಧಾರತೊಲೆಗಳು ಸಿಂಹ ಮತ್ತು ಆನೆಯ ಶಿಲ್ಪಕಲಾಕೃತಿಗಳನ್ನು ಹೊಂದಿರುವುದು ಕಂಡುಬರುವುದು. ಆದರೆ ಈ ರಥದ ಆಧಾರ ತೊಲೆಗಳು ಜೋಡುಕುದುರೆಗಳ ಸುಂದರ ಕಾಷ್ಠಶಿಲ್ಪಕಲಾಕೃತಿಗಳನ್ನು ಹೊಂದಿವೆ. ಈ ರಥದಲ್ಲಿ ಇರುವ ಐದು ಆಧಾರ ತೊಲೆಗಳಲ್ಲಿ ರಥದ ಮುಂಭಾಗಕ್ಕೆ ಮತ್ತು ಹಿಂಬದಿಯಲ್ಲಿ ಕಾಣುವ ಹತ್ತು ಶಿಲ್ಪಗಳಿವೆ. ಇವು ವರ್ಣಗಾರಿಕೆಯ ದೃಷ್ಟಿಯಿಂದ ಅತ್ಯಂತ ಆಕರ್ಷಕವಾಗಿವೆ. ಇವುಗಳ ಪಕ್ಕದಲ್ಲಿ ಬರುವ ತೊಲೆಗಳ ಆನೆಯ ಶಿಲ್ಪಗಳು ವರ್ಣಲೇಪಿತವಾಗಿವೆ. ಇವುಗಳ ಪಕ್ಕದಲ್ಲಿ ಬರುವ ಎರಡು ಸಿಂಹಗಳ ಶಿಲ್ಪಗಳು ತಮ್ಮಲ್ಲಿ ಬಣ್ಣವನ್ನು ಮೈಗೂಡಿಸಿಕೊಂಡಿವೆ.

ಎದುರಿಗೆ ನೋಡುತ್ತಿರುವಂತೆ ಕುಳಿತ ಒಟ್ಟು ನಾಲ್ಕು ಜೋಡುಗುದುರೆಗಳ ಶಿಲ್ಪಗಳು ಶ್ವೇತವರ್ಣದಿಂದ ಲೇಪಿತವಾಗಿವೆ. ಕುದುರೆಗಳ ಗೊರಸುಗಳಿಗೆ ಹಾಗೂ ಕಣ್ಣುಗಳಿಗೆ ಕಪ್ಪು ವರ್ಣಲೇಪನ ಮಾಡಿರುವುದನ್ನು ಕಾಣಬಹುದು. ಕುದುರೆಯ ಮೂಗುದಾಣ, ಹಗೆಯಪಟ್ಟಿ ಹಾಗೂ ಕೊರಳಲ್ಲಿ ರಚಿತಗೊಂಡ ಪದಕದ ಆಕಾರದ ವಿನ್ಯಾಸಕ್ಕೆ ಹಳದಿ ಬಣ್ಣವನ್ನು ಹಚ್ಚಿರುವರು. ಕುದುರೆಯ ಕುತ್ತಿಗೆಯ ಕೆಳಗಡೆಗೆ ನೇತಾಡುವ ಬಟ್ಟೆಯ ವಿನ್ಯಾಸಕ್ಕೆ ಕೇಸರಿವರ್ಣ ಬಳಸಿದ್ದಾರೆ. ಕುದುರೆಗಳ ಬೆನ್ನಿನ ಮೇಲೆ ರಚಿತಗೊಂಡ ಥಡಿಯ ವಿನ್ಯಾಸಕ್ಕೆ ಕೆಂಪು ಹಾಗೂ ನೀಲಿ ಮಿಶ್ರಿತ ಹಸಿರು ವರ್ಣವನ್ನು ಎರಡು ಪಟ್ಟಿಕೆಗಳಾಗಿ ಬಳಸಿದ್ದಾರೆ. ಬಾಯಿಗೆ ಮತ್ತು ಹಗೆಪಟ್ಟಿಯ ನಡುವೆ ಕಾಣಿಸುವ ಮುತ್ತಿನ ವಿನ್ಯಾಸಗಳಿಗೆ

ಗುಲಾಬಿ ಮಿಶ್ರಿತ ಕೆಂಪು ವರ್ಣವನ್ನು ಲೇಪಿಸಿರುವರು. ಕುದುರೆಗಳ ಶಿಲ್ಪಗಳು ಆಧಾರ ತೊಲೆಗಳಲ್ಲಿಯೇ ರಚಿತಗೊಂಡರೂ ಕುದುರೆಗಳ ಶಿಲ್ಪಗಳನ್ನು ಬಿಟ್ಟು ಇನ್ನುಳಿದ ತೊಲೆಗಳ ಭಾಗವನ್ನು ಆಕಾಶನೀಲಿ ವರ್ಣದಿಂದ ಸುಂದರಗೊಳಿಸಿರುವುದರಿಂದ ಕಲಾತ್ಮಕ ವರ್ಣಗಾರಿಕೆಯ ಬಿಳಿಯ ಕುದುರೆಯ ಶಿಲ್ಪಗಳು ಸೌಂದರ್ಯದ ದೃಷ್ಟಿಯಿಂದ ಕಣ್ಮನ ಸೆಳೆಯುತ್ತವೆ.

ಕುದುರೆಗಳ ಶಿಲ್ಪಗಳ ಪಕ್ಕದ ತೊಲೆಯ ಮೇಲೆ ರಚನೆಗೊಂಡ ಆನೆಯ ಶಿಲ್ಪಗಳು ವರ್ಣಗಾರಿಕೆಯಿಂದ ಸುಂದರವಾಗಿವೆ. ಮುಂದಿನ ಎರಡೂ ಕಾಲುಗಳ ಮಧ್ಯ ಸೊಂಡಿಲನ್ನು ಸುತ್ತಿ ಕುಳಿತಿರುವ ಭಂಗಿಯಲ್ಲಿ ರಚಿತಗೊಂಡ ಆನೆಯ ಶಿಲ್ಪಗಳು ಗ್ರೇ (ಬೂದು) ಬಣ್ಣವನ್ನು ಹೊಂದಿವೆ. ಕೊರಳಲ್ಲಿ ಸುತ್ತಿದ್ದ ಗಂಟೆಗಳ ಹಾರವು ಹಾಗೂ ಕಾಲುಗಳಲ್ಲಿ ರಚಿತಗೊಂಡ ಗೆಜ್ಜೆಸರಗಳ ಶಿಲ್ಪ ವಿನ್ಯಾಸಗಳಿಗೆ ಹಳದಿಬಣ್ಣವನ್ನು ಹಚ್ಚಲಾಗಿದೆ. ಬೆನ್ನಿನ ಮೇಲೆ ರಚನೆಗೊಂಡ ಬಟ್ಟೆಗೆ ನೀಲವರ್ಣವನ್ನು ಲೇಪಿಸಿ ಕಣ್ಣು, ಕಿವಿ ಹಾಗೂ ಹೊಟ್ಟೆಯ ಕೆಳಭಾಗದಲ್ಲಿ ಕಪ್ಪು ವರ್ಣದಿಂದ ರೇಖೆಗಳನ್ನು ಎಳೆಯಲಾಗಿದೆ.

ಆನೆಯ ಶಿಲ್ಪಗಳ ಪಕ್ಕದಲ್ಲಿ ಬರುವ ತೊಲೆಗಳ ಮೇಲೆ ಸಿಂಹಗಳ ಶಿಲ್ಪಗಳನ್ನು ಕಾಣಬಹುದು. ಕುದುರೆಯ ಬಾಲದಂತಹ ನಕ್ಷೆಯ ವಿನ್ಯಾಸವನ್ನು ಬಾಯಲ್ಲಿ ಹಿಡಿದು ಬೆನ್ನಿನ ಮೇಲೆ ಬಾಲವನ್ನು ಸುತ್ತಿ ಕುಳಿತಿರುವ ಭಂಗಿಯಲ್ಲಿ ರಚನೆಗೊಂಡ ಸಿಂಹಗಳ ಶಿಲ್ಪಗಳಿಗೆ ಹಳದಿ ವರ್ಣವನ್ನು ಲೇಪಿಸಲಾಗಿದೆ. ಕಣ್ಣಿನ ಭಾಗ ಹಾಗೂ ಬಾಲದ ಕೊನೆಯ ಭಾಗದಲ್ಲಿ ಮಾತ್ರ ಕಪ್ಪು ವರ್ಣವನ್ನು ಲೇಪಿಸಲಾಗಿದೆ. ಕೊರಳಲ್ಲಿ ಕೇಸರಗಳಂತೆ ರಚನೆಗೊಂಡ ಮೂರು ಪಟ್ಟಿಕೆಗಳಲ್ಲಿರುವಂತಹ ವಿನ್ಯಾಸಗಳಿಗೆ ಬಿಳಿಯ ಬಣ್ಣವನ್ನು ಉಪಯೋಗಿಸಿದ್ದಾರೆ. ದಂತಗಳಿಗೆ ಸಹ ಶ್ವೇತವರ್ಣ ಉಪಯೋಗವಾಗಿದೆ. ಬಾಯಿಯಲ್ಲಿ ನೇತಾಡುವಂತಿರುವ ಕುದುರೆಯ ಬಾಲದ ವಿನ್ಯಾಸಕ್ಕೆ ಕೆಂಪು ಬಣ್ಣ ಬಳಸಲಾಗಿದೆ.

ಈ ರಥದ ಆಧಾರ ತೊಲೆಗಳು ಶಿಲ್ಪವಿನ್ಯಾಸಗಳಲ್ಲೂ ಹಾಗೂ ವರ್ಣವಿನ್ಯಾಸಗಳಲ್ಲೂ ತುಂಬಾ ಗಮನ ಸೆಳೆಯುವಂತವುಗಳಾಗಿವೆ.

ಬಾಗಲಕೋಟ ಜಿಲ್ಲೆಯ ಬದಾಮಿ ತಾಲೂಕಿನ ಗುಳೇದಗುಡ್ಡದ ರಥದಲ್ಲಿ ಸಂಕೇಶ್ವರದ ಶಂಕರಲಿಂಗನ ದೇವಸ್ಥಾನದ ರಥದ ತೊಲೆಯ ಶಿಲ್ಪ ವಿನ್ಯಾಸಗಳಂತೆ ಇರುವ ಕುಳಿತಿರುವ ಭಂಗಿಯಲ್ಲಿರುವ ಆನೆಗಳ ಹಾಗೂ ಸಿಂಹಗಳ ಶಿಲ್ಪವಿನ್ಯಾಸಗಳನ್ನು ಕಾಣಬಹುದು. ಆನೆಯ ಶಿಲ್ಪಗಳಿಗೆ ಕಪ್ಪುವರ್ಣ ಲೇಪಿಸಿ, ದಂತಗಳಿಗೆ, ಕಾಲುಗಳ ಉಗುರುಗಳಿಗೆ, ಕಣ್ಣುಗಳಿಗೆ ಹಗೆಯ ಮೇಲಿನ ಹೂವಿನಾಕಾರದ ವಿನ್ಯಾಸಕ್ಕೆ ಹಾಗೂ ಬೆನ್ನಿನ ಮೇಲೆ ಇಳಿಬಿಟ್ಟಿರುವಂತಹ ಬಟ್ಟೆಯ ವಿನ್ಯಾಸಗಳಿಗೆ ಬಿಳಿಯ ಬಣ್ಣವನ್ನು ಲೇಪಿಸಲಾಗಿದೆ.

ಸಿಂಹಗಳ ಬಾಲದ ಕೊನೆಗೆ ಕಣ್ಣುಗಳಿಗೆ ಹಾಗೂ ಕೊರಳಲ್ಲಿ ರಚಿತಗೊಂಡ ಕೇಸರಗಳ ಆಕಾರಗಳಿಗೆ ಕಪ್ಪು ಬಣ್ಣ ಬಳಿಯಲಾಗಿದೆ. ದಂತ ಹಾಗೂ ಉಗುರುಗಳಿಗೆ ಬಿಳಿಯ ಬಣ್ಣ ಹಚ್ಚಲಾಗಿದೆ. ಬಾಯಿಯಿಂದ ಹೊರಚಾಚಿದ ನಾಲಿಗೆ ಹಾಗೂ ಬಾಯಿಯ ಸ್ವಲ್ಪ ಒಳಭಾಗದ ವಿನ್ಯಾಸಕ್ಕೆ ಹಳದಿಮಿಶ್ರಿತ ಕೆಂಪುವರ್ಣವನ್ನು ಬಳಸಲಾಗಿದೆ.

ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಫಕೀರೇಶ್ವರ ಸಂಸ್ಥಾನ ಮಠದ ರಥದ ಆಧಾರ ತೊಲೆಗಳು

ಸಿಂಹಗಳ ಹಾಗೂ ಆನೆಗಳ ನಾಲ್ಕು ಶಿಲ್ಪವಿನ್ಯಾಸಗಳಲ್ಲಿ ವರ್ಣಗಾರಿಕೆಯನ್ನು ಹೊಂದಿವೆ. ಆನೆಯ ಮೇಲೆ ಹಾರುವಂತಹ ಸಿಂಹದ ದೇಹದ ರಚನೆಗೆ ಹಳದಿ ಬಣ್ಣ ಬಳಸಲಾಗಿದೆ. ಕಾಲುಗಳ ಉಗುರುಗಳು ದಂತ ಹಾಗೂ ದೊಡ್ಡದಾಗಿ ಅರಳಿಸಿದ ಕಣ್ಣುಗಳಿಗೆ ಬಿಳಿವರ್ಣವನ್ನು ಬಳಸಲಾಗಿದೆ. ಕೀರ್ತಿಮುಖದಂತೆ ಕಂಡುಬರುವ ಸಿಂಹದ ಮುಖದ ವಿನ್ಯಾಸಕ್ಕೆ ಹಳದಿ ಬಣ್ಣ ಲೇಪಿಸಿ, ಕಣ್ಣುಗಳ ಗುಡ್ಡೆಗಳು ಹಾಗೂ ಕಣ್ಣಿನ ಮೇಲಿನ ಮೂರು ಏರಿದ ಹುಬ್ಬಿನಾಕಾರದ ಮೂರು ಗೆರೆಗಳು ಕಪ್ಪು ವರ್ಣದಿಂದ ಕೂಡಿವೆ. ಕುತ್ತಿಗೆಯ ಸುತ್ತ ರಚಿತಗೊಂಡ ಕೇಸರಗಳು ಕಡುಗಂದು ವರ್ಣವನ್ನು ಹೊಂದಿವೆ. ಹಿಂಗಾಲುಗಳಲ್ಲಿ ಹಾಕಿರುವ ಗೆಜ್ಜೆಗಳು ಹಾಗೂ ಬಾಲದ ಕೊನೆಗೆ ಇರುವ ಹೂವಿನಾಕಾರದ ವಿನ್ಯಾಸಕ್ಕೆ ಬಿಳಿಯ ಬಣ್ಣವನ್ನು ಬಳಸಲಾಗಿದೆ. ತೆರೆದ ಬಾಯಿ, ನಾಲಿಗೆ ಹಾಗೂ ಕುತ್ತಿಗೆಯ ಮೇಲೆ ಬರುವ ವಿನ್ಯಾಸಕ್ಕೆ ಕೆಂಪುಬಣ್ಣ ಹಚ್ಚಿದ್ದಾರೆ. ಕೆಲವೊಂದು ಭಾಗಗಳಲ್ಲಿ ಅಲ್ಲಲ್ಲಿ ನೀಲಿ ವರ್ಣದ ಬಳಕೆ ಕಂಡುಬರುತ್ತದೆ.

ಆನೆಯ ಶಿಲ್ಪಗಳು ಗುಳೇದಗುಡ್ಡದ ರಥದಂತೆ ವರ್ಣಗಾರಿಕೆಯನ್ನು ಹೊಂದಿದ್ದರೂ, ಆನೆಯ ಕೊರಳಲ್ಲಿ ರಚಿತಗೊಂಡ ಗಂಟೆಯ ಸರಗಳ ವಿನ್ಯಾಸಕ್ಕೆ ಕೇಸರಿ ಬಣ್ಣವನ್ನು ಬಳಸಲಾಗಿದೆ.

ಆಧಾರತೊಲೆಗಳ ಶಿಲ್ಪವಿನ್ಯಾಸಗಳಿಗೆ ಸಂಪೂರ್ಣವಾಗಿ ವರ್ಣಲೇಪನ ಮಾಡಿದ ರಥವನ್ನು ಬೆಳಗಾಂವ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೇಶ್ವರ ಸಂಸ್ಥಾನಮಠದಲ್ಲಿ ಕಾಣಬಹುದು. ಆನೆಗಳ ಶಿಲ್ಪವಿನ್ಯಾಸಗಳ ಮೇಲೆ ಹಾರಿ ಕುಳಿತಂತಹ ಸಿಂಹಗಳ ಶಿಲ್ಪಗಳಿಗೆ ಹಳದಿ ವರ್ಣಲೇಪಿಸಲಾಗಿದೆ. ಸಿಂಹಗಳ ಬಾಲದ ಕೊನೆಗೆ ಬರುವ ಕೂದಲುಗಳು ಹಾಗೂ ಕುತ್ತಿಗೆಯ ಸುತ್ತ ಎಲೆಯಾಕಾರದಲ್ಲಿ ರಚಿತಗೊಂಡ ಕೇಸರಗಳಿಗೆ ಕಂದುವರ್ಣದ ಲೇಪನ ಮಾಡಲಾಗಿದೆ. ಕಣ್ಣುಗಳ ಒಳಭಾಗದಲ್ಲಿ ಹಾಗೂ ದಂತಗಳಿಗೆ ಬಿಳಿಯ ವರ್ಣ ಬಳಸಲಾಗಿದ್ದು, ಉಗುರುಗಳು ಹಾಗೂ ಕಣ್ಣಿನ ಗುಡ್ಡೆಗಳಿಗೆ ಕಪ್ಪುವರ್ಣವನ್ನು ಲೇಪಿಸಲಾಗಿದೆ.

ಸಿಂಹಗಳ ಕೆಳಭಾಗದಲ್ಲಿ, ಸೊಂಡಿಲನ್ನು ಮೇಲೆತ್ತಿ ಕುಳಿತ ಭಂಗಿಯಲ್ಲಿ ರಚನೆಗೊಂಡ ಆನೆಗಳ ಶಿಲ್ಪಗಳು ಈ ಹಿಂದೆ ನೋಡಿದ ರಥಗಳ ಶಿಲ್ಪಗಳಂತೆ ಕಪ್ಪುಬಣ್ಣ ಹಾಗೂ ಬೂದು ಬಣ್ಣವನ್ನು

ಹೊಂದದೇ ನೀಲಿ ಮಿಶ್ರಿತ ಬಿಳಿನೇರಳೆ (ಲೈಟ್-ಬ್ಲೂ ವೈಲೆಟ್) ಬಣ್ಣವನ್ನು ಹೊಂದಿವೆ. ಆನೆಗಳ ಕುತ್ತಿಗೆಯಲ್ಲಿ ಕಾಣುವ ಸುಂದರ ಉಬ್ಬುಶಿಲ್ಪದ ವಿನ್ಯಾಸಗಳಿಗೆ ಹಾಗೂ ಹಣೆಪಟ್ಟಿಯಲ್ಲಿ ಕಾಣುವ ವಿನ್ಯಾಸಗಳಿಗೆ ಹಳದಿ ಬಣ್ಣವನ್ನು ಲೇಪಿಸಲಾಗಿದೆ ಆನೆಯ ಶಿಲ್ಪಗಳ ತಲೆಯ ಮೇಲೆ ಹಾಗೂ ಬೆನ್ನಿನ ಮೇಲೆ ಇರುವಂತಹ ಬಟ್ಟೆಯ ರಚನೆಗಳಿಗೆ ಹಳದಿ ಹಾಗೂ ಬಿಳಿ ಮಿಶ್ರಿತ ಕೆಂಪು ವರ್ಣವನ್ನು ಬಳಸಿರುವುದು ಕಂಡುಬರುತ್ತದೆ. ಆನೆಯ ದಂತಗಳಿಗೆ ಬಿಳಿಯ ಬಣ್ಣ ಬಳಸಿದರೆ, ಉಗುರು ಹಾಗೂ ಕಣ್ಣುಗಳಿಗೆ ಕಪ್ಪು ವರ್ಣವನ್ನು ಉಪಯೋಗಿಸಲಾಗಿದೆ. ಈ ರಥದ ಆಧಾರ ತೊಲೆಗಳು ಶಿಲ್ಪ ವಿನ್ಯಾಸದಲ್ಲೇ ಸಾಕಷ್ಟು ಕಲಾತ್ಮಕವಾಗಿದ್ದರೂ, ವರ್ಣಗಾರಿಕೆಯಿಂದ ಅವುಗಳ ಸೌಂದರ್ಯ ಮತ್ತಷ್ಟು ಹೆಚ್ಚಾಗಿರುವುದನ್ನು ಗಮನಿಸಬಹುದು.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಇಟಗಿಯ ಮಹೇಶ್ವರ ದೇವಸ್ಥಾನದ ರಥದ ಆಧಾರ ತೊಲೆಗಳಲ್ಲಿ ಕಂಡುಬರುವಂತಹ ಕುಳಿತಿರುವ ಭಂಗಿಯಲ್ಲಿರುವ ಸಿಂಹಗಳ ಶಿಲ್ಪಗಳು

ಮಿಂಚುವ ಬಂಗಾರವರ್ಣದಿಂದ (ಶೈನಿಂಗ್ ಗೋಲ್ಡನ್ ಕಲರ್) ಲೇಪಿತವಾಗಿವೆ. ಉಗುರುಗಳು, ಕಣ್ಣಿನ ಒಳಭಾಗ ಹಾಗೂ ದಂತಗಳಿಗೆ ಮಾತ್ರ ಬಿಳಿಯ ವರ್ಣವನ್ನು ಬಳಸಲಾಗಿದೆ.

ಇದೇ ತೆರನಾಗಿ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಬಸವೇಶ್ವರ ದೇವಸ್ಥಾನದ ರಥದ ಆಧಾರತೊಲೆಗಳಲ್ಲಿನ, ಕುಳಿತಿರುವ ಭಂಗಿಯಲ್ಲಿ ರಚಿತವಾದ ಶಿಲ್ಪಗಳಿಗೆ ಹಳದಿ ವರ್ಣವನ್ನು ಲೇಪಿಸಿ, ಹಲ್ಲುಗಳು ಹಾಗೂ ಉಗುರುಗಳಿಗೆ ಬಿಳಿ ಬಣ್ಣ ಬಳಸಿದ್ದಾರೆ. ಬಾಯಿಗೆ ಕೆಂಪು ಹಾಗೂ ಕಣ್ಣುಗಳಿಗೆ ಕಪ್ಪುವರ್ಣವನ್ನು ಬಳಸಿರುವುದನ್ನು ಕಾಣಬಹುದಾಗಿದೆ. ಸಿಂಹದ ಶಿಲ್ಪಗಳ ಕೆಳಗಡೆಗೆ ರಚನೆಗೊಂಡ ಆಧಾರ ಪಟ್ಟಿಕೆಗೆ ಹಸಿರುಬಣ್ಣವನ್ನು ಹಚ್ಚಲಾಗಿದೆ.

ಈ ತರಹದ ಆಧಾರತೊಲೆಗಳಲ್ಲಿ ಕಂಡುಬರುವ ಶಿಲ್ಪವಿನ್ಯಾಸಗಳಿಗೆ ಪೂರ್ಣಪ್ರಮಾಣದಲ್ಲಿ ವರ್ಣಗಾರಿಕೆಯನ್ನು ಮಾಡಿರುವುದು ಕೆಲವು ರಥಗಳಲ್ಲಿ ಕಂಡುಬಂದಂತೆ, ಇನ್ನು ಕೆಲವು ರಥಗಳಲ್ಲಿ ಆಧಾರತೊಲೆಗಳಲ್ಲಿ ರಚನೆಗೊಂಡ ಶಿಲ್ಪವಿನ್ಯಾಸಗಳ ಕೆಲವೊಂದು ಭಾಗಗಳಲ್ಲಿ ಮಾತ್ರ ವರ್ಣ ಲೇಪನ ಮಾಡಿರುವುದು ಕಂಡುಬರುತ್ತದೆ.

ಕೊಪ್ಪಳದ ಗವಿಸಿದ್ಧೇಶ್ವರ ಮಠದ ರಥದ ಆಧಾರ ತೊಲೆಗಳಲ್ಲಿ ಕಂಡುಬರುವಂತಹ ಸಿಂಹ ಮತ್ತು ಆನೆಯ ಶಿಲ್ಪಗಳಲ್ಲಿ, ಕುಳಿತ ಆನೆಯ ಮೇಲೆ ಹಾರಿ ಆನೆಯ ಸೊಂಡಿಲನ್ನು ಬಾಯಿಂದ ಕಚ್ಚಿದ ಭಂಗಿಯಲ್ಲಿ ರಚಿತಗೊಂಡ ಶಿಲ್ಪವಿನ್ಯಾಸಗಳ ಕೆಲವು ಭಾಗಗಳಲ್ಲಿ ಮಾತ್ರ ವರ್ಣಲೇಪನವನ್ನು ಕಾಣಬಹುದು. ಸಿಂಹದ ದಂತಗಳು ಹಾಗೂ ಕಾಲುಗಳ ಉಗುರುಗಳಿಗೆ ಮಾತ್ರ ಬಿಳಿಯ ಬಣ್ಣವನ್ನು ಬಳಸಿದ್ದು ಕಣ್ಣುಗಳಿಗೆ ಹಾಗೂ ಬಾಲದ ಕೊನೆಗೆ ಮಾತ್ರ ಕಪ್ಪು ವರ್ಣವನ್ನು ಕಾಣಬಹುದು. ಉಳಿದೆಲ್ಲ ಶಿಲ್ಪದ ಭಾಗಕ್ಕೆ ಯಾವ ತರಹದ ವರ್ಣಲೇಪನವಿಲ್ಲ. ಆನೆಯ ಶಿಲ್ಪಗಳಲ್ಲಿಯೂ ಸಹ ದಂತಗಳು ಹಾಗೂ ಉಗುರುಗಳಿಗೆ ಮಾತ್ರ ಬಿಳಿಯ ಬಣ್ಣ ಬಳಸಿರುವುದು ಕಂಡುಬರುತ್ತದೆ. ಕಣ್ಣುಗಳಿಗೆ ಕಪ್ಪು ವರ್ಣವಿದ್ದು, ಉಳಿದೆಲ್ಲ ಶಿಲ್ಪದ ಭಾಗವು ವರ್ಣರಹಿತವಾಗಿದೆ.

ಇದೇ ರೀತಿಯ ವರ್ಣವಿನ್ಯಾಸವನ್ನು ಹೊಂದಿದ ರಥವನ್ನು ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮುರಕಿಬಾವಿ ಸಿದ್ಧಾರೂಢ ಮಠದಲ್ಲಿ ಕಾಣಬಹುದು. ತೊಲೆಗಳ ಮೇಲೆ ರಚನೆಗೊಂಡ ಕುಳಿತಿರುವ ಭಂಗಿಯ ಶಿಲ್ಪಗಳ ಕಣ್ಣುಗಳು ಮಾತ್ರ ಹಸಿರು ಮಿಶ್ರಿತ ಕಪ್ಪು ವರ್ಣದಿಂದ ಕೂಡಿವೆ.ಆದರೆ ಕಣ್ಣುಗಳಿಗೆ ನೇರವಾಗಿ ಹಸಿರುಮಿಶ್ರಿತ ಕಪ್ಪು ವರ್ಣವನ್ನು ಬಳಸದೆ, ಅದೇ ಬಣ್ಣದ ಗಾಜಿನ ಗೋಲಿಗಳನ್ನು ಕಣ್ಣುಗಳಿಗೆ ಅಳವಡಿಸಿರುವುದರಿಂದ ತುಂಬಾ ಆಕರ್ಷಕವಾಗಿ ತೋರುತ್ತವೆ.

ಕೊಪ್ಪಳ ಜಿಲ್ಲೆಯ ಹುಲಿಗಿಯ ಹುಲಿಗೆಮ್ಮ ದೇವಸ್ಥಾನದ ರಥದ ತೊಲೆಗಳಲ್ಲಿ ಕಂಡುಬರುವ ಆನೆ ಹಾಗೂ ಸಿಂಹಗಳ ಶಿಲ್ಪಗಳು, ಕೊಪ್ಪಳದ ಗವಿಸಿದ್ಧೇಶ್ವರ ಮಠದ ರಥದ ತೊಲೆಗಳ ಶಿಲ್ಪಗಳಂತೆಯೇ ವರ್ಣವಿನ್ಯಾಸವನ್ನು ಹೊಂದಿರುವುದು ಕಂಡುಬರುತ್ತದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ದೇವಸ್ಥಾನದ ರಥದಲ್ಲಿನ ಆಧಾರ ತೊಲೆಗಳ ಸಿಂಹ ಮತ್ತು ಆನೆಯ ಶಿಲ್ಪಗಳಲ್ಲಿನ, ಬೈಲಹೊಂಗಲ ತಾಲೂಕಿನ ಮುರಕಿಬಾವಿಯ ರಥದ ಶಿಲ್ಪಗಳಂತೆ, ಆನೆ ಹಾಗೂ ಸಿಂಹಗಳ ಕಣ್ಣುಗಳಿಗೆ ಮಾತ್ರ ಕಪ್ಪುವರ್ಣವು ಲೇಪಿತವಾಗಿರುವುದನ್ನು ಕಾಣಬಹುದು.



ಶ್ರೀ ವೀರಭದ್ರ ರಥ
ಹುನಗುಂದ, ಜಿ - ಬಾಗಲಕೋಟೆ



ಶ್ರೀ ವೀರಭದ್ರ ರಥ
ಅಥಣಿ, ಜಿ - ಬೆಳಗಾಂವ



ಶ್ರೀ ಫಕೀರೇಶ್ವರ ರಥ
ಶಿರಹಟ್ಟಿ, ಜಿ - ಗದಗ




ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥ ನಂಜನಗೂಡು



ಶ್ರೀ ಮರಡಿ ಮಠದ ರಥ ಕೊಣ್ಣೂರು, ಜಿ - ಬೆಳಗಾಂವ



ಶ್ರೀ ವೀರಭದ್ರ ರಥ
ಹಲಕರ್ಟಿ, ಜಿ - ಗುಲಬರ್ಗಾ



ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥ
ಸುಬ್ರಹ್ಮಣ್ಯ

ಗದಗ ಜಿಲ್ಲೆಯ ಚಿಂಚಲಿಯ ವೀರಭದ್ರ ದೇವಸ್ಥಾನದ ರಥದ ಆಧಾರ ತೊಲೆಗಳು ವಿನ್ಯಾಸದಲ್ಲಿ ಕೊಪ್ಪಳದ ಗವಿಸಿದ್ದೇಶ್ವರ ಮಠದ ರಥದ ಆಧಾರ ತೊಲೆಗಳ ವಿನ್ಯಾಸವನ್ನು ಹೊಂದಿವೆ. ಆದರೆ ವರ್ಣಗಾರಿಕೆಯಲ್ಲಿ ಸ್ವಲ್ಪ ವ್ಯತ್ಯಾಸವಾಗುತ್ತದೆ. ಈ ಸಿಂಹ ಮತ್ತು ಆನೆಯ ಶಿಲ್ಪಗಳ ಕಣ್ಣುಗಳಿಗೆ, ದಂತಗಳಿಗೆ ಹಾಗೂ ಉಗುರುಗಳಿಗೆ ಬಿಳಿಯ ವರ್ಣವನ್ನು ಲೇಪಿಸಿ, ತೆರೆದ ಬಾಯಿಯ ಒಳಗಡೆಗೆ ಸ್ವಲ್ಪ ಕೇಸರಿಮಿಶ್ರಿತ ಕೆಂಪುವರ್ಣವನ್ನು ಲೇಪಿಸಿರುವುದು ಕಂಡುಬರುತ್ತದೆ. ಶಿಲ್ಪಗಳ ಉಳಿದ ಭಾಗಗಳಲ್ಲಿ ಎಲ್ಲೂ ವರ್ಣವಿನ್ಯಾಸ ಕಂಡುಬರುವುದಿಲ್ಲ.

ಇದೇ ರೀತಿಯ ಆಧಾರತೊಲೆಗಳ ಪ್ರಾಣಿಶಿಲ್ಪಗಳ ವರ್ಣಗಾರಿಕೆಯನ್ನು ಕರ್ನಾಟಕದ ಇನ್ನೂ ಅನೇಕ ರಥಶಿಲ್ಪಗಳಲ್ಲಿ ಕಾಣಬಹುದು.

★. **ದೇವತಾ ಶಿಲ್ಪಗಳಲ್ಲಿ ವರ್ಣವಿನ್ಯಾಸ :** ರಥಗಳ ಆಧಾರ ತೊಲೆಗಳಲ್ಲಿ ಸಾಮಾನ್ಯವಾಗಿ ಬಹುಪಾಲು ರಥಗಳಲ್ಲಿ ಸಿಂಹ, ಆನೆ ಹಾಗೂ ಕುದುರೆಗಳಂತಹ ಪ್ರಾಣಿಶಿಲ್ಪಗಳು ಕಂಡುಬಂದರೆ, ಕೆಲವು ರಥಗಳಲ್ಲಿ ತೊಲೆಗಳ ಮೇಲೆ ಸಿಂಹ ಹಾಗೂ ಆನೆಯ ಶಿಲ್ಪಗಳ ಅಕ್ಕಪಕ್ಕದ ಸ್ಥಳಗಳಲ್ಲಿ ದೇವತಾಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳು ಕೆಲವು ರಥಗಳಲ್ಲಿ ವರ್ಣಗಾರಿಕೆಯಿಂದ ಸುಂದರಗೊಂಡಿರುವುದನ್ನು ಗಮನಿಸಬಹುದು.

ಕೊಪ್ಪಳ ಜಿಲ್ಲೆಯ ಹುಲಿಗೆಮ್ಮ ದೇವಸ್ಥಾನದ ಆಧಾರ ತೊಲೆಗಳ ಮೇಲಿನ ದೇವತಾಶಿಲ್ಪಗಳಿಗೆ ವರ್ಣಲೇಪನ ಮಾಡಿರುವುದನ್ನು ಕಾಣಬಹುದು. ರಥದ ಮುಂಭಾಗದ ಆಧಾರ ತೊಲೆಗಳ ಮಧ್ಯಭಾಗದಲ್ಲಿ ರಚಿತಗೊಂಡ ಹುಲಿಗೆಮ್ಮ ದೇವತೆಯ ಮುಖದ ಶಿಲ್ಪದ ಕಣ್ಣುಗಳಿಗೆ ಕಪ್ಪುವರ್ಣವನ್ನು ಬಳಸಲಾಗಿದೆ. ಮುಂದೆ ನೇತುಹಾಕಿದ ಹಾರದ ವಿನ್ಯಾಸಕ್ಕೆ ಹಳದಿ ಬಣ್ಣವನ್ನು ಲೇಪಿಸಿ, ಹಾರದಲ್ಲಿ ಬರುವ ಎಲೆಯ ಉಂಡೆಗೆ ಹಸಿರು ಹಾಗೂ ಮಧ್ಯದಲ್ಲಿ ಬರುವ ಹೂವಿಗೆ ಕೆಂಪುವರ್ಣವನ್ನು ಲೇಪಿಸಿರುವರು. ಸುತ್ತಲೂ ಬರುವ ಕಮಾನುಗಳ ಅಂಚಿನಲ್ಲಿ ಮಿಂಚುವ ಬೆಳ್ಳಿಯ ವರ್ಣವನ್ನು (ಸಿಲ್ವರ್ ಕಲರ್) ಹಚ್ಚಿರುವುದು ಕಂಡುಬರುವುದು.

ರಥದ ಮುಂಭಾಗದ ತೊಲೆಯ ಭಾಗದಲ್ಲಿ ಕಾಣುವ ಕಮಲದ ಮೇಲೆ ಕುಳಿತಿರುವ ಗಣೇಶನ ಉಬ್ಬುಶಿಲ್ಪಕ್ಕೆ ವರ್ಣಲೇಪನ ಮಾಡಿರುವುದು ಕಂಡುಬರುತ್ತದೆ. ಕಣ್ಣುಗಳಿಗೆ ಹಾಗೂ ಹುಬ್ಬುಗಳಿಗೆ ಕಪ್ಪು ವರ್ಣದ ಗೆರೆಗಳನ್ನು ಹಾಕಿ, ಕೈ ಮತ್ತು ಕಾಲುಗಳ ಉಗುರುಗಳಿಗೆ ಬಿಳಿಯ ವರ್ಣವನ್ನು ಬಳಸಿದ್ದಾರೆ. ಕಿರೀಟದಲ್ಲಿ ಕಾಣುವ ಮುತ್ತಿನ ನಕ್ಷೆಯ ಮಧ್ಯದಲ್ಲಿರುವ ದೊಡ್ಡ ಹರಳಿನ ವಿನ್ಯಾಸಕ್ಕೆ ಕೆಂಪುವರ್ಣವನ್ನು ಲೇಪಿಸಿರುವರು ಸುತ್ತಲೂ ಬರುವ ಕಮಾನಿನ ಅಂಚುಗಳಿಗೆ ಸಿಲ್ವರ್ ಕಲರ್(ಬಣ್ಣವನ್ನು) ಬಳಸಿರುವುದನ್ನು ಕಾಣಬಹುದು.

ರಥದ ಹಿಂಭಾಗದ ತೊಲೆಯ ಮೇಲೆ ರಚಿತಗೊಂಡ ಸಿಂಹದ ಮೇಲೆ ಕುಳಿತಿರುವಂತಹ ಆದಿಶಕ್ತಿಯ ಶಿಲ್ಪವಿನ್ಯಾಸದಲ್ಲಿ, ದೇವತೆಯ ಕಣ್ಣುಗಳು ಹಾಗೂ ಹುಬ್ಬುಗಳಿಗೆ ಮತ್ತು ಸಿಂಹದ ಕಣ್ಣುಗಳಿಗೆ ಕಪ್ಪು ವರ್ಣವನ್ನು ಲೇಪಿಸಲಾಗಿದೆ. ಕಿರೀಟದಲ್ಲಿ ಕಾಣುವ ಮಣಿಗೆ ಹಸಿರು ಹಾಗೂ ಕೊರಳಲ್ಲಿರುವ ಸರದ ಮಧ್ಯದ ವಿನ್ಯಾಸಕ್ಕೆ ಕೆಂಪು ಮತ್ತು ಹಳದಿ ವರ್ಣಗಳನ್ನು ಬಳಸಿದ್ದಾರೆ, ಕೊರಳಲ್ಲಿಯ ಹಾಗೂ ಕೈಯಲ್ಲಿಯ ಕೆಲವು ಆಭರಣಗಳಿಗೆ ಬಂಗಾರವರ್ಣವನ್ನು (ಗೊಲ್ಡನ್

ಕಲರ್‌ನ್ನು) ಬಳಸಿರುವುದು ಕಂಡುಬರುತ್ತದೆ.

ರಥದ ಮುಂಭಾಗದಲ್ಲಿ ಲಕ್ಷ್ಮೀ ಹಾಗೂ ಸರಸ್ವತಿಯ ಶಿಲ್ಪಕೆತ್ತನೆಗಳಲ್ಲಿ, ಕಣ್ಣುಗಳಿಗೆ ಕಪ್ಪುವರ್ಣ, ಲಕ್ಷ್ಮೀಯ ಕೈಯಲ್ಲಿಯ ಕಮಲಗಳಿಗೆ ಕೆಂಪುವರ್ಣ ಹಾಗೂ ಬಲಗೈಯಿಂದ ಕೆಳಗೆ ಬೀಳುತ್ತಿರುವ ನಾಣ್ಯಗಳ ವಿನ್ಯಾಸಕ್ಕೆ ಗೋಲ್ಡನ್ ಕಲರ್ (ಬಂಗಾರವರ್ಣ)ನ್ನು ಲೇಪಿಸಿದ್ದಾರೆ. ಎರಡೂ ಶಿಲ್ಪಗಳಲ್ಲಿ ಕಂಡುಬರುವ ಆಭರಣಗಳ ವಿನ್ಯಾಸಕ್ಕೆ ಬಂಗಾರವರ್ಣವನ್ನು ಲೇಪಿಸಿರುವುದು ಕಂಡುಬರುತ್ತದೆ. ಸುತ್ತಲೂ ರಚಿತಗೊಂಡ ಕಮಾನುಗಳಿಗೆ ಸಿಲ್ವರ್ ಬಣ್ಣವನ್ನು ಬಳಸಿರುವುದನ್ನು ಗಮನಿಸಬಹುದು. ಕಿರೀಟಗಳಲ್ಲಿ ಬರುವ ಮಣಿಗಳ ವಿನ್ಯಾಸಕ್ಕೆ ಕೆಂಪು ವರ್ಣವನ್ನು ಬಳಸಿ, ಸರಸ್ವತಿಯ ವೀಣೆಯ ತಂತಿಗಳ ವಿನ್ಯಾಸಕ್ಕೆ ಬಂಗಾರವರ್ಣವನ್ನು ಲೇಪಿಸಿರುವರು.

ಇದೇ ರಥದ ಗಾಯತ್ರಿಯ ಶಿಲ್ಪವೂ ಸಹ ಇದೇ ತೆರನಾದ ವರ್ಣಗಾರಿಕೆಯನ್ನು ಹೊಂದಿದೆ.

ಬಾಗಲಕೋಟ ಜಿಲ್ಲೆಯ ಶಿರೂರು ಸಿದ್ಧೇಶ್ವರ ದೇವಸ್ಥಾನದ ರಥದಲ್ಲಿ ಆಧಾರ ತೊಲೆಗಳ ಮೇಲೆ ಸುಂದರವಾದ ದೇವತಾಮೂರ್ತಿಗಳ ಶಿಲ್ಪಗಳನ್ನು ಕಾಣಬಹುದು. ಇವುಗಳಲ್ಲಿಯೂ ಸ್ವಲ್ಪ ಪ್ರಮಾಣದಲ್ಲಿ ವರ್ಣಲೇಪನವನ್ನು ಕಾಣಬಹುದು.

ರಥದ ಮುಂಭಾಗದ ಆಧಾರ ತೊಲೆಗಳ ಮೇಲೆ ರಚಿತಗೊಂಡ ನಂದಿಯ ಮೇಲೆ ಬರುತ್ತಿರುವ ಶಿವ, ಗರುಡನ ಮೇಲೆ ಬರುತ್ತಿರುವ ವಿಷ್ಣುಹಾಗೂ ಹಂಸದ ಮೇಲೆ ಬರುತ್ತಿರುವ ಬ್ರಹ್ಮನ ಶಿಲ್ಪಗಳಿವೆ. ಈ ದೇವತಾ ಶಿಲ್ಪಗಳ ಕಿರೀಟಭಾಗದಲ್ಲಿ ಬಂಗಾರವರ್ಣವನ್ನು ಲೇಪಿಸಿ, ನಡುವೆ ಇರುವ ಮಣಿಯ ವಿನ್ಯಾಸಕ್ಕೆ ಹಸಿರು ಹಾಗೂ ಕೆಂಪು ಬಣ್ಣಗಳನ್ನು ಹಚ್ಚಿರುವರು ಕಣ್ಣುಗಳಿಗೆ ಕಪ್ಪು ಬಣ್ಣದಿಂದ ಗೆರೆಗಳನ್ನು ಹಾಕಿ, ಕೊರಳಲ್ಲಿರುವ ಹಾರಗಳು ಹಾಗೂ ಆಭರಣಗಳಿಗೆ ಬಂಗಾರವರ್ಣವನ್ನು ಲೇಪಿಸಿರುವುದು ಕಂಡುಬರುವುದು. ಈ ಶಿಲ್ಪಗಳ ಸುತ್ತಲಿರುವ ವೃತ್ತಾಕಾರದ ವಿನ್ಯಾಸಕ್ಕೆ ಹಳದಿಮಿಶ್ರಿತ ಬಂಗಾರವರ್ಣವನ್ನು ಬಳಸಿದ್ದಾರೆ.

ಇದೇ ತೆರನಾದ ವರ್ಣವಿನ್ಯಾಸವಿರುವ ಆಧಾರ ತೊಲೆಗಳ ಶಿಲ್ಪಗಳನ್ನು ಮುಧೋಳ ತಾಲೂಕಿನ ಮಹಾಲಿಂಗಪೂರದ ಮಹಾಲಿಂಗೇಶ್ವರ ದೇವಸ್ಥಾನದ ರಥದಲ್ಲಿ ಕಾಣಬಹುದು.

ಶಿವನ ಉಬ್ಬುಶಿಲ್ಪಕಲಾಕೃತಿಯ ತಲೆಯ ಭಾಗದಲ್ಲಿ ಹಾಗೂ ಶಿವನಕೊರಳಲ್ಲಿ ಕಾಣುವಂತಹ ರುದ್ರಾಕ್ಷಿಗಳು ಹಾಗೂ ಕಣ್ಣಿನ ಭಾಗದಲ್ಲಿ ಕಪ್ಪು ವರ್ಣದಿಂದ ಗೆರೆಗಳನ್ನೆಳೆದು ಅಲ್ಲಲ್ಲಿ ಕೆಂಪು ಹಾಗೂ ಹಳದಿ ಬಣ್ಣವನ್ನು ಬಳಸಿರುವುದು ಕಂಡುಬರುತ್ತದೆ.

ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರು ಹಾಗೂ ಗುದ್ನೆಪ್ಪನ ಮಠದ ರಥಗಳಲ್ಲಿ ತೊಲೆಯ ದೇವತಾಶಿಲ್ಪಗಳ ಮೇಲೆ ವರ್ಣಲೇಪನವಿರುವುದು ಕಂಡುಬರುವುದು. ಕೀರ್ತಿಮುಖದಂತೆ ತೋರುವ ಉಗ್ರನರಸಿಂಹನ ಉಬ್ಬುಶಿಲ್ಪವು ಹಾಗೂ ಆದಿಶಕ್ತಿಯ ಶಿಲ್ಪಗಳೆರಡೂ ಅಲ್ಲಲ್ಲಿ ಕಪ್ಪು ಬಣ್ಣದ ರೇಖೆಗಳನ್ನು ಹೊಂದಿದ್ದು ಆಭರಣಗಳಿಗೆ ಹಳದಿ ಹಾಗೂ ಬಂಗಾರದ ಬಣ್ಣಗಳನ್ನು ಲೇಪಿಸಲಾಗಿದೆ. ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ

ರಥದ ಆಧಾರತೊಲೆಯ ಮೇಲೆ ಕಾಣಿಸುವ ಗಣಪತಿ, ಸರಸ್ವತಿ, ಲಕ್ಷ್ಮೀ, ಕಾಳಿಕಾದೇವಿ ಮುಂತಾದ ಶಿಲ್ಪಗ್ಳಳಿಗೆ ಎಲ್ಲ ರಥಗಳಲ್ಲಿ ಸಾಮಾನ್ಯವಾಗಿ ತೋರುವಂತಹ ಹಳದಿ, ಬಿಳಿ, ಬಂಗಾರವರ್ಣ ಹಾಗೂ ಶಿಲ್ಪಗಳ ಸುತ್ತಲೂ ಇರುವ ಮಂಟಪಗಳ ವಿನ್ಯಾಸಗಳಿಗೆ ಸಿಲ್ವರ್ ಬಣ್ಣವನ್ನು ಉಪಯೋಗಿಸಿರುವುದು ಕಂಡುಬರುತ್ತದೆ. ರಾಯಚೂರು ಜಿಲ್ಲೆಯ ಸಿಂಧನೂರು, ಮಸ್ಕಿ, ಬಳಗಾನೂರು ಮುಂತಾದ ಹಲವು ಪ್ರದೇಶಗಳಲ್ಲಿ ಕಾಣುವಂತಹ ರಥಗಳ ಆಧಾರ ತೊಲೆಗಳ ಭಾಗಗಳಲ್ಲಿನ ದೇವತಾಶಿಲ್ಪಗಳಲ್ಲಿಯೂ ಇದೇ ತೆರನಾದ ವರ್ಣಗಾರಿಕೆಯನ್ನು ಕಾಣಬಹುದು. ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನದ ರಥವು ಆಧಾರ ತೊಲೆಗಳಲ್ಲಿ ನಂದಿ, ಶಿವ ಹಾಗೂ ಬ್ರಹ್ಮ-ವಿಷ್ಣುಗಳ ಶಿಲ್ಪಗಳನ್ನು ಹೊಂದಿದ್ದು, ಬ್ರಹ್ಮವಿಷ್ಣುವಿನ ಆಭರಣದಂತೆ ತೋರುವ ವಿನ್ಯಾಸಗಳಿಗೆ ಹಳದಿ, ಬಂಗಾರವರ್ಣ ಹಾಗೂ ಸಿಲ್ವರ್ ಕಲರ್ ಉಪಯೋಗಿಸಿರುವುದು ಕಂಡುಬರುತ್ತದೆ.

ರಥಗಳ ಆಧಾರ ತೊಲೆಗಳಲ್ಲಿ ಸಿಂಹ ಹಾಗೂ ಆನೆಗಳ ಶಿಲ್ಪಗಳು ಹೆಚ್ಚು ವರ್ಣಗಾರಿಕೆಯನ್ನು ಹೊಂದಿರುವಷ್ಟು, ದೇವತಾ ಮೂರ್ತಿಗಳ ಶಿಲ್ಪಗಳಲ್ಲಿ ಕಾಣಲಾಗದು. ಇಲ್ಲಿ ತುಂಬಾ ಕಡಿಮೆ ಪ್ರಮಾಣದ ವರ್ಣಗಾರಿಕೆ ಕಂಡುಬರುತ್ತದೆ.

★. **ಮಹಾತ್ಮರ ಶಿಲ್ಪಗಳಲ್ಲಿ ವರ್ಣವಿನ್ಯಾಸ :** ರಥಶಿಲ್ಪಗಳ ಆಧಾರ ತೊಲೆಗಳು ಕೆಲವೊಂದು ಪ್ರದೇಶದ ರಥಗಳಲ್ಲಿ ಮಾತ್ರ ಮಹಾತ್ಮರ ಶಿಲ್ಪಗಳನ್ನು ಹೊಂದುವುದಲ್ಲದೆ ಬಹು ಕಡಿಮೆ ಪ್ರಮಾಣದ ವರ್ಣಗಾರಿಕೆಯಿಂದ ಕೂಡಿವೆ.

ಗದಗ ಜಿಲ್ಲೆಯ ಚಿಂಚಲಿ ಬಸವೇಶ್ವರ ದೇವಸ್ಥಾನದ ರಥದಲ್ಲಿ ಆಧಾರ ತೊಲೆಗಳ ಮೇಲೆ ಶಿವಶರಣರ ಶಿಲ್ಪಗಳನ್ನು ಕಾಣಬಹುದು ಅಕ್ಕಮಹಾದೇವಿಯ ಶಿಲ್ಪವು ರಥದ ಮುಂಭಾಗದಲ್ಲಿದ್ದು ಅವಳ ಕೇಶರಾಶಿಗೆ ಕಪ್ಪುವರ್ಣವನ್ನು ಲೇಪಿಸಲಾಗಿದೆ. ಕೈಯಲ್ಲಿ ಹಿಡಿದುಕೊಂಡು ಪೂಜಿಸುತ್ತಿರುವ ಲಿಂಗಕ್ಕೆ ಹಾಗೂ ಅವಳ ಹಿಂದೆ ಬಂದು ನಿಂತ ಹಸುವಿನ ಶಿಲ್ಪದ ಗೊರಸುಗಳಿಗೆ, ಕೋಡು ಹಾಗೂ ಕಣ್ಣುಗಳಿಗೆ ಕಪ್ಪುಮಿಶ್ರಿತ ಕಂದು ವರ್ಣವನ್ನು ಲೇಪಿಸಲಾಗಿದೆ. ಶಿಲ್ಪದ ಸುತ್ತಲೂ ಇರುವ ಚಚ್ಚೌಕದ ವಿನ್ಯಾಸಕ್ಕೆ ಬಂಗಾರವರ್ಣವನ್ನು ಲೇಪಿಸಲಾಗಿದೆ.

ಈ ಶಿಲ್ಪದ ಬಲಗಡೆಯಲ್ಲಿರುವ ಆಧಾರ ತೊಲೆಯ ಮೇಲೆ ಕುದುರೆಯ ಸವಾರಿ ನಡೆಸಿರುವ ಬಸವಣ್ಣನವರ ಶಿಲ್ಪಕ್ಕೆ ವರ್ಣವಿನ್ಯಾಸವಿರುವುದು ಕಂಡುಬರುತ್ತದೆ. ಕಿರೀಟದಲ್ಲಿ ಹಳದಿ ಹಾಗೂ ಬಂಗಾರವರ್ಣಗಳನ್ನು ಬಳಸಿದ್ದು, ಕಿರೀಟದ ನಡುವೆ ಬರುವ ದುಂಡಾಕಾರದ ಮಣಿಗೆ ಕೆಂಪು ವರ್ಣದ ಲೇಪನವಿರುವುದು ಕಂಡುಬರುತ್ತದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ರಥದ ಆಧಾರ ತೊಲೆಯ ಮೇಲೆ ಮೌನೇಶ್ವರನ ಶಿಲ್ಪವಿನ್ಯಾಸಕ್ಕೆ ವರ್ಣಲೇಪನ ಮಾಡಲಾಗಿದೆ. ಕೊಡಲಿಯನ್ನು ಹಿಡಿದುಕೊಂಡ ಮೌನೇಶ್ವರರ ಕೂದಲುಗಳಿಗೆ ಕಪ್ಪುವರ್ಣ ಲೇಪಿಸಿದ್ದು, ಕಣ್ಣುಗಳು ಹಾಗೂ ಹುಬ್ಬುಗಳಿಗೆ ಕಡುಗಂದು ವರ್ಣದ ಗೆರೆಗಳನ್ನು ಹಾಕಿರುವುದು ಕಂಡುಬರುತ್ತದೆ. ಕುಳಿತಿರುವ ಪೀಠ ಹಾಗೂ ಕೈಯಲ್ಲಿಯ ಕೊಡಲಿಗೆ ಬಂಗಾರವರ್ಣ ಹಾಗೂ ಸಿಲ್ವರ್ ಬಣ್ಣವನ್ನು ಲೇಪಿಸಿರುವರು.

ಕೊಪ್ಪಳ ಜಿಲ್ಲೆಯ ಗವಿಸಿದ್ಧೇಶ್ವರ ಮಠದ ರಥದ ಆಧಾರ ತೊಲೆಗಳಲ್ಲಿ ಸುಂದರವಾದ

[illegible]

ಮಹಾತ್ಮರ ಶಿಲ್ಪಗಳಿವೆ. ಹುತ್ತದಲ್ಲಿ ತಪಸ್ಸಿಗೆ ಕುಳಿತಿರುವಂತಹ ಶಿವಲಿಂಗೇಶ್ವರ ಶಿಲ್ಪದ ಮೇಲ್ಭಾಗದಲ್ಲಿ ರಚಿತಗೊಂಡ ಹಸುವಿನ ಕಣ್ಣುಗಳಿಗೆ ಕಪ್ಪುವರ್ಣವನ್ನು ಹಾಗೂ ಗೊರಸುಗಳಿಗೆ ಕಡುಗಂದು ವರ್ಣವನ್ನು ಬಳಸಿರುವುದು ಕಂಡುಬರುವುದು. ಮಹಾಲಿಂಗೇಶ್ವರ ಶಿಲ್ಪದ ಕೊರಳಲ್ಲಿ ಕಾಣುವ ರುದ್ರಾಕ್ಷಿಗಳು, ಕೈಗೆ ಕಟ್ಟಿದ ರುದ್ರಾಕ್ಷಿ ಹಾಗೂ ಜಪಮಾಲೆಗಳೆಲ್ಲವೂ ಕಪ್ಪು ಮಿಶ್ರಿತ ಕೆಂಪು ವರ್ಣದಿಂದ ಸುಂದರಗೊಂಡಿವೆ.

ಪರ್ವತದಿಂದ ಹಾರಿದ ಸಿದ್ಧರಾಮನನ್ನು ಮೇಲೆತ್ತಲು ಬಂದ ಶಿವನ ಶಿಲ್ಪವಿನ್ಯಾಸದಲ್ಲಿ ಕಡಿಮೆ ಪ್ರಮಾಣದ ವರ್ಣಲೇಪನವನ್ನು ಕಾಣಬಹುದು. ಶಿವನ ಹಾಗೂ ಸಿದ್ಧರಾಮನ ಕೊರಳಲ್ಲಿರುವ ರುದ್ರಾಕ್ಷಿಯ ಸರಗಳ ವಿನ್ಯಾಸಕ್ಕೆ ಕಂದುವರ್ಣವನ್ನು ಹಚ್ಚಿರುವರು. ಕೂದಲುಗಳಿಗೆ ಕಪ್ಪುವರ್ಣದಿಂದ ಗೆರೆಗಳನ್ನೆಳೆದಿರುವರು. ಕಣ್ಣು ಹಾಗೂ ಹುಬ್ಬುಗಳಿಗೆ ಸಹ ಕಪ್ಪು ವರ್ಣದ ಲೇಪನವಿರುವುದು ಕಂಡುಬರುತ್ತದೆ. ಶಿವನ ಕೈಯಲ್ಲಿರುವ ತ್ರಿಶೂಲಕ್ಕೆ ಕಟ್ಟಿದಂತಿರುವ ಡಮರುಗದ ಬಣ್ಣವು ಕಂದುಗೆಂಪು ಆಗಿರುವುದು.

ಬಾಗಲಕೋಟೆಯ ಮುಚಖಂಡಿಯ ದೇವಸ್ಥಾನದ ರಥದ ಆಧಾರ ತೊಲೆಗಳಲ್ಲಿ ಬಿಳ್ಳೂರು ಅಜ್ಜನವರ ಶಿಲ್ಪವನ್ನು ಕಾಣಬಹುದು. ಕೊರಳಲ್ಲಿ ಕಟ್ಟಿದ ಲಿಂಗವು ಕಪ್ಪು ವರ್ಣದ್ದಾಗಿದೆ. ಕೈಗಳಿಗೆ, ಹೊಟ್ಟೆಗೆ, ಹಾಗೂ ಹಣೆಗೆ ವಿಭೂತಿಯ ಹಾಗೆ ತೋರುವಂತೆ ಬಿಳಿಯ ವರ್ಣವನ್ನು ಬಳಸಿದ್ದಾರೆ. ಕಣ್ಣುಗಳಿಗೆ ಕಂದು ಹಾಗೂ ಕಪ್ಪು ವರ್ಣಗಳನ್ನು ಬಳಸಿರುವುದು ಕಂಡುಬರುತ್ತದೆ.

ಬೆಳಗಾಂವ ಜಿಲ್ಲೆಯ ಮುಗಳಖೋಡದ ಸಿದ್ಧಸಂಸ್ಥಾನ ಮಠದ ರಥದ ಆಧಾರ ತೊಲೆಗಳಲ್ಲಿ ಯಲ್ಲಾಲಿಂಗ ಮಹಾರಾಜರ ಶಿಲ್ಪವಿನ್ಯಾಸವಿರುವುದನ್ನು ಕಾಣಬಹುದು. ಅವರು ಕುಳಿತಿರುವ ಸಿಂಹಾಸನಕ್ಕೆ ಬಂಗಾರವರ್ಣ ಲೇಪಿಸಿದ್ದು ಕೈಯಲ್ಲಿ ಹಿಡಿದಿರುವ ಉದ್ದನೆಯ ಕೋಲಿನ ಮುಂಭಾದಲ್ಲಿಯೂ ಬಂಗಾರ ವರ್ಣವನ್ನೇ ಬಳಸಿರುವರು. ಕೊರಳಲ್ಲಿರುವ ರುದ್ರಾಕ್ಷಿಗಳಿಗೆ ಕಪ್ಪು ಮಿಶ್ರಿತ ಕೆಂಪು ಹಾಗೂ ತಲೆಯ ಕೂದಲುಗಳಿಗೆ ಕಪ್ಪು ಬಣ್ಣದಿಂದ ಗೆರೆಗಳನ್ನೆಳೆದಿರುವರು.

ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಮಹಾಲಿಂಗೇಶ್ವರ ಮಠದ ರಥದ ಆಧಾರ ತೊಲೆಗಳಲ್ಲಿ ಮಹಾಲಿಂಗೇಶ್ವರರು ಒಬ್ಬ ವೃದ್ಧೆಗೆ ಅಭಯಹಸ್ತ ನೀಡುತ್ತಿರುವುದನ್ನು ಶಿಲ್ಪಕೆತ್ತನೆ ಮಾಡಲಾಗಿದೆ. ಮಹಾಲಿಂಗೇಶ್ವರರ ತಲೆಯ ಕೇಶರಾಶಿಗೆ ಹಾಗೂ ಉದ್ದವಾಗಿ ಇಳಿಬಿದ್ದ ಗಡ್ಡೆಗಳಿಗೆ ಕಪ್ಪು ವರ್ಣದಿಂದ ಗೆರೆಗಳನ್ನೆಳೆದು, ಕಣ್ಣು ಹಾಗೂ ಹುಬ್ಬುಗಳಿಗೆ ಕಂದುಗಪ್ಪು ಬಣ್ಣವನ್ನು ಬಳಸಿರುವುದು ಕಂಡುಬರುತ್ತದೆ. ಮಹಾಲಿಂಗೇಶ್ವರರ ಕೈಯಲ್ಲಿರುವ ಕಮಂಡಲಕ್ಕೆ ಹಾಗೂ ಅವರ ಪಾದರಕ್ಷೆಗಳ ವಿನ್ಯಾಸಕ್ಕೆ ಬಂಗಾರವರ್ಣವನ್ನು ಲೇಪಿಸಲಾಗಿದೆ. ಕೊರಳಲ್ಲಿಯ ರುದ್ರಾಕ್ಷಿಗಳಿಗೆ ಕಪ್ಪುಮಿಶ್ರಿತ ಕೆಂಪುವರ್ಣವನ್ನು ಹಚ್ಚಿದ್ದಾರೆ.

ಬೆಳಗಾಂವ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ರಥದ ಆಧಾರ ತೊಲೆಗಳಲ್ಲಿ ಮಡಿವಾಳೇಶ್ವರರ ಹಾಗೂ ಸಿದ್ದಾರೂಡರ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳೂ ಸಹ ಬಂಗಾರವರ್ಣ, ಕಪ್ಪು, ಕಡುಗಂದು ವರ್ಣಗಳಿಂದ ಅಲಂಕೃತಗೊಂಡಿವೆ. ಮಹಾಂತ ಶಿವಯೋಗಿಗಳ ನಗುಮೊಗದಲ್ಲಿ ಕಾಣುವ ಹಲ್ಲುಗಳಿಗೆ ಬಿಳಿಯ ವರ್ಣ ಲೇಪಿಸಲಾಗಿದೆ. ಮಡಿವಾಳೇಶ್ವರರ

ಕೈಯಲ್ಲಿರುವ ಲಿಂಗಕ್ಕೆ ಹಾಗೂ ಅವರ ಕೊರಳಲ್ಲಿ ಕಾಣುವಂತಹ ರುದ್ರಾಕ್ಷಿಗಳಿಗೆ ಕಪ್ಪು ವರ್ಣವನ್ನು ತುಂಬಲಾಗಿದೆ.

ರಥಗಳ ಗಡ್ಡೆ ಹಾಗೂ ಮಂಟಪ ಭಾಗಗಳಲ್ಲಿರುವಂತೆ ಆಧಾರ ತೊಲೆಗಳ ಮೇಲೆ ಹೆಚ್ಚಾಗಿ ಶಿಲ್ಪ ವಿನ್ಯಾಸಗಳು ಕಂಡುಬರುವುದಿಲ್ಲ. ಆದರೆ ಈ ಎಲ್ಲ ರಥಗಳಲ್ಲಿ ಕಂಡುಬರುವ ಆಧಾರತೊಲೆಗಳ ಶಿಲ್ಪವಿನ್ಯಾಸಗಳಲ್ಲಿಯ ಮಹಾತ್ಮರ ಶಿಲ್ಪಗಳಲ್ಲಿಯ ವರ್ಣಗಾರಿಕೆ ಕಡಿಮೆ ಪ್ರಮಾಣದಲ್ಲಿದ್ದರೂ ಶಿಲ್ಪವಿನ್ಯಾಸಗಳ ಸೌಂದರ್ಯಕ್ಕೆ ಪೂರಕವಾಗಿ ಕಂಡುಬರುತ್ತದೆ.

★. ಮಿಥುನ ಶಿಲ್ಪಗಳಲ್ಲಿ ವರ್ಣವಿನ್ಯಾಸ : ರಥಗಳಲ್ಲಿ ಮಿಥುನ ಶಿಲ್ಪಗಳ ವಿನ್ಯಾಸಗಳು ಹೆಚ್ಚಾಗಿ ರಥದ ಅಧಿಷ್ಠಾನ ಹಾಗೂ ಗಡ್ಡೆಯ ಭಾಗದಲ್ಲಿ ಕಂಡುಬರುತ್ತವೆ. ಆದರೆ ಕೆಲವು ರಥಗಳಲ್ಲಿ ಆಧಾರ ತೊಲೆಗಳ ಮೇಲೂ ಅವುಗಳನ್ನು ಕಾಣಬಹುದು. ರಥದ ಯಾವುದೇ ಭಾಗದಲ್ಲಿಯ ಮಿಥುನ ಶಿಲ್ಪಗಳು ಹೆಚ್ಚಾಗಿ ವರ್ಣಗಾರಿಕೆಯನ್ನು ಹೊಂದಿಲ್ಲ ಅದರಲ್ಲೂ ಆಧಾರ ತೊಲೆಗಳ ಮೇಲೆ ಇರುವ ಮಿಥುನ ಶಿಲ್ಪಗಳು ವರ್ಣಲೇಪಿತವಾಗಿರುವದು ವಿರಳವೆಂದೇ ಹೇಳಬಹುದು. ಆದರೂ ಒಂದೆರಡು ರಥಶಿಲ್ಪಗಳಲ್ಲಿ ವರ್ಣಲೇಪಿತವಾಗಿರುವಂತಹ ಮಿಥುನ ಶಿಲ್ಪಗಳ ಉದಾಹರಣೆಗಳನ್ನು ನೀಡಬಹುದು.

ಆಧಾರ ತೊಲೆಯ ಭಾಗದಲ್ಲಿ ಮಿಥುನಶಿಲ್ಪಗಳನ್ನು ವರ್ಣಗಳ ಸಹಿತವಾಗಿ ಬಿಡಿಸಿರುವ ರಥಶಿಲ್ಪದ ಮುಖ್ಯ ಉದಾಹರಣೆಯೆಂದರೆ, ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ಫಕೀರೇಶ್ವರ ಸಂಸ್ಥಾನ ಮಠದ ರಥವೆಂದು ಹೇಳಬಹುದು. ರತಿಕ್ರೀಡೆಯಲ್ಲಿ ತೊಡಗಿರುವ ಹಲವಾರು ಶಿಲ್ಪಗಳು ವರ್ಣವಿನ್ಯಾಸವನ್ನು ಹೊಂದಿದ್ದು, ಅಲ್ಲಲ್ಲಿ ಬಣ್ಣವು ನಶಿಸಿಹೋಗಿದೆ. ಸಂಭೋಗದ ಹಲವಾರು ಭಂಗಿಗಳನ್ನು ಹೊಂದಿರುವ ಶಿಲ್ಪಗಳು ವಿವಿಧ ಬಣ್ಣಗಳನ್ನು ಮೈಗೂಡಿಸಿಕೊಂಡಿವೆ.

ಕೆಲವೊಂದು ಶಿಲ್ಪಗಳ ಕೊರಳಲ್ಲಿ ಆಭರಣಗಳ ವಿನ್ಯಾಸಗಳಿದ್ದು, ಅವುಗಳಿಗೆ ಬಂಗಾರವರ್ಣ ಅಥವಾ ಹಳದಿ ಬಣ್ಣವನ್ನು ಹಚ್ಚಲಾಗಿದೆ ಸ್ತ್ರೀ ಶಿಲ್ಪಗಳಲ್ಲಿ ಕೈಗಳಲ್ಲಿರುವಂತಹ ಬಳೆಗಳು ಹಾಗೂ ಕೊರಳಲ್ಲಿಯ ಸರಗಳು ಬಂಗಾರ ವರ್ಣಗಳಿಂದ ಕೂಡಿವೆ. ಕಾಲುಗಳಲ್ಲಿ ಕಟ್ಟಿದಂತಿರುವ ಗೆಜ್ಜೆಗಳು ಸಿಲ್ವರ್ ಕಲರ್‌ದಿಂದ (ಬಣ್ಣದಿಂದ) ಲೇಪಿತವಾಗಿವೆ. ಕಣ್ಣುಗಳಿಗೆ ಹಾಗೂ ಹುಬ್ಬಿನ ಭಾಗಗಳಿಗೆ ಕಪ್ಪು ವರ್ಣವನ್ನು ಲೇಪಿಸಲಾಗಿದೆ. ಕೆಲವೊಂದು ಶಿಲ್ಪಗಳ ತಲೆಗೂದಲಿನ ವಿನ್ಯಾಸಕ್ಕೆ ಕಂದುಮಿಶ್ರಿತ ಕಪ್ಪುವರ್ಣವನ್ನು ಲೇಪಿಸಲಾಗಿದೆ. ಕೆಲವು ಸ್ತ್ರೀ ಶಿಲ್ಪಗಳ ಕೈಯಲ್ಲಿಯ ಗಿಡಮೂಲಿಕೆಗಳು ಮತ್ತು ಹಣ್ಣುಗಳು ಹಸಿರು ಹಾಗೂ ಹಳದಿ ವರ್ಣದಿಂದ ಕೂಡಿದಂತವುಗಳು. ಸ್ತ್ರೀ ಮತ್ತು ಪುರುಷ ಶಿಲ್ಪಗಳ ಬಾಯಿಯ ಹಾಗೂ ಅಂಗೈಗಳ ಭಾಗದಲ್ಲಿ ಗುಲಾಬಿ ಬಣ್ಣ ಬಳಿದಿರುವುದು ಕಂಡುಬರುವುದು. ಸ್ತ್ರೀ ಶಿಲ್ಪಗಳ ಸ್ತನಗಳ ಭಾಗಗಳು ಗುಲಾಬಿ ಹಾಗೂ ಕಡುಗಂದು ಬಣ್ಣದಿಂದ ಕೂಡಿದ್ದು, ಯೋನಿಯ ಭಾಗವು ಕೆಲವು ಶಿಲ್ಪಗಳಲ್ಲಿ ಹಸಿರು ಇನ್ನು ಕೆಲವು ಶಿಲ್ಪಗಳಲ್ಲಿ ಕೆಂಪು ಬಣ್ಣದಿಂದ ಲೇಪಿತವಾದುದನ್ನು ಕಾಣಬಹುದು. ಪುರುಷರ ಶಿಲ್ಪಗಳಲ್ಲಿ ಹೆಚ್ಚಾಗಿ ಆಭರಣಗಳು ಕಂಡುಬರುವುದಿಲ್ಲ. ಪುರುಷ ಶಿಲ್ಪಗಳ ಜನನೇಂದ್ರಿಯದ ಭಾಗಗಳು ಹಸಿರು ಹಾಗೂ ಕೆಂಪು ವರ್ಣಗಳನ್ನು ಹೊಂದಿವೆ. ಇವುಗಳಲ್ಲದೆ ಈ ಶಿಲ್ಪಗಳ ಪಕ್ಕದಲ್ಲಿರುವ ಬಟ್ಟೆಯಂತಹ ವಿನ್ಯಾಸ ಹಾಗೂ ನಕ್ಷೆಗಳಿಗೆ ಹಳದಿ ಹಾಗು ಬಿಳಿಯ ವರ್ಣಗಳನ್ನು ಬಳಸಿರುವುದನ್ನು ಕಾಣಬಹುದು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ದೇವಸ್ಥಾನದ ರಥದಲ್ಲಿ ಆಧಾರತೊಲೆಗಳ ಮೇಲೆ ಒಂದೆರಡು ಮಿಥುನ ಶಿಲ್ಪಗಳು ಕಂಡರೂ ಅಷ್ಟೊಂದು ವರ್ಣಗಾರಿಕೆಯಿಂದ ಕೂಡಿಲ್ಲ. ಶಿಲ್ಪಗಳ ಕೊರಳು ಹಾಗೂ ಕೈಯಲ್ಲಿರುವ ಆಭರಣಗಳಿಗೆ ಬಂಗಾರವರ್ಣವು ಲೇಪಿತವಾಗಿದೆ. ಕಣ್ಣು ಹಾಗೂ ತಲೆಗೂದಲುಗಳಿಗೆ ಕಪ್ಪು ವರ್ಣವು ಲೇಪಿತವಾದರೆ, ಸ್ತ್ರೀಪುರುಷರ ಶಿಲ್ಪಗಳಲ್ಲಿಯೂ ಅಲ್ಲಲ್ಲಿ ಕೆಂಪು ವರ್ಣಗವನ್ನು ಬಳಸಿರುವುದು ಕಂಡುಬರುವುದು.

ಬಾಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ಗಲಗಲಿಯ ಸಿದ್ದೇಶ್ವರ ದೇವಸ್ಥಾನದ ರಥದಲ್ಲಿ ಆಧಾರ ತೊಲೆಗಳ ಮೇಲೆ ಒಂದೆರಡು ಮಿಥುನ ಶಿಲ್ಪಗಳಿದ್ದರೂ, ಅವುಗಳಿಗೆ ಕೇವಲ ಹಳದಿ ಹಾಗೂ ಕೆಂಪು ವರ್ಣಗಳಿರುವುದನ್ನು ಗಮನಿಸಬಹುದು.

ರಾಯಚೂರ ಜಿಲ್ಲೆಯ ಗಬ್ಬೂರದ ಬೂದಿ ಬಸವೇಶ್ವರ ದೇವಸ್ಥಾನದ ರಥದ ಆಧಾರ ತೊಲೆಗಳ ಮೇಲೆ ಒಂದೆರಡು ಮಿಥುನ ಶಿಲ್ಪಗಳಿದ್ದರೂ, ಕಡುಗಂದು ಹಾಗೂ ಕಪ್ಪು ವರ್ಣದ ದಪ್ಪನೆಯ ರೇಖೆಯಿಂದ ವರ್ಣಲೇಪನವಾಗಿರುವದನ್ನು ಕಾಣಬಹುದು.

೨. ಅಧಿಷ್ಠಾನ ಭಾಗದ ವರ್ಣವಿನ್ಯಾಸ :

ಅಡಿಪಾಯ ಭಾಗದ ನಂತರ ಮುಂದುವರೆದ ರಥದ ಮೇಲ್ಭಾಗವೇ ಅಧಿಷ್ಠಾನ ಭಾಗ. ಅದನ್ನು 'ಗಡ್ಡಿ ಭಾಗ'ವೆಂದೂ ಕರೆಯಬಹುದು ರಥದ ಗಡ್ಡಿ ಭಾಗವು ಸಾಂಪ್ರದಾಯಿಕ ಚೌಕು, ವರ್ತುಳ, ಅಷ್ಟಮ, ನಕ್ಷತ್ರ ಹಾಗೂ ಬಹುಕೋನ ವಿನ್ಯಾಸಗಳಲ್ಲಿ ನಿರ್ಮಾಣಗೊಂಡಿದೆ. ಅನೇಕ ಪಟ್ಟಿಕೆಗಳಲ್ಲಿ ರಚಿತವಾದ ಕಲಾತ್ಮಕ ಉಬ್ಬುಶಿಲ್ಪಗಳನ್ನು ಕಾಣಬಹುದು. ರಥಕ್ಕೆ ಸಂಬಂಧಪಟ್ಟ ದೇವಾಲಯದ ದೇವತೆಯರ, ಮತಕ್ಕೆ ಸಂಬಂಧಪಟ್ಟ ಮಹಾತ್ಮರ ಮತ್ತು ಪವಾಡ ಸನ್ನಿವೇಶಗಳ ಅನೇಕ ಶಿಲ್ಪಗಳನ್ನು ವಿವಿಧ ವರ್ಣಗಳಿಂದ ಸುಂದರಗೊಳಿಸಿರುವುದನ್ನು ಕಾಣಬಹುದು. ಗಡ್ಡಿ ಅಥವಾ ಅಧಿಷ್ಠಾನ ಭಾಗದಲ್ಲಿ ಕಂಡುಬರುವ ಶಿಲ್ಪವಿನ್ಯಾಸಗಳಾದ ಎಲೆ-ಬಳ್ಳಿ ಹೂವು-ಹಣ್ಣು ಸುಳುವು-ನಕ್ಷೆ, ಪ್ರಾಣಿ-ಪಕ್ಷಿಗಳ ಶಿಲ್ಪಗಳಿಗೆ ವರ್ಣಲೇಪನ ಮಾಡಿ ಸುಂದರಗೊಳಿಸಿರುವುದನ್ನು ಕಾಣಬಹುದು. ರಥದ ಅಧಿಷ್ಠಾನ ಭಾಗದ ವರ್ಣಗಾರಿಕೆಯಿಂದ ಕೂಡಿದ ಉಬ್ಬುಶಿಲ್ಪಗಳನ್ನು

i. ದೇವತಾ ಶಿಲ್ಪಗಳು

ii. ಮಹಾತ್ಮರ ಶಿಲ್ಪಗಳು

iii. ಪ್ರಾಣಿ-ಪಕ್ಷಿಗಳ ಶಿಲ್ಪಗಳು

iv. ನಕ್ಷಾಶಿಲ್ಪಗಳು

ಎಂದು ವಿಂಗಡಿಸಿಕೊಂಡು ಅವುಗಳಲ್ಲಿಯ ವರ್ಣಗಾರಿಕೆಯನ್ನು ತಿಳಿಯಬಹುದು. ಉತ್ತರ ಕರ್ನಾಟಕದ ಅನೇಕ ಕಲಾತ್ಮಕ ರಥಗಳ ಅಧಿಷ್ಠಾನ ಭಾಗಗಳಲ್ಲಿ ವರ್ಣಲೇಪನ ಮಾಡಿದಂತಹ ಅನೇಕ ಶಿಲ್ಪವಿನ್ಯಾಸಗಳನ್ನು ಕಾಣಬಹುದು.

i. ದೇವತಾ ಶಿಲ್ಪಗಳಲ್ಲಿ ವರ್ಣವಿನ್ಯಾಸ : ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥದ ಅಧಿಷ್ಠಾನ ಭಾಗದಲ್ಲಿ ಸುಂದರವಾದ ವರ್ಣವಿನ್ಯಾಸವನ್ನು ಕಾಣಬಹುದು. ಅಷ್ಟಭುಜಾಕೃತಿಯಲ್ಲಿ ರಚನೆಗೊಂಡ ರಥದ ಅಧಿಷ್ಠಾನ ಭಾಗದ ಮಧ್ಯಭಾಗದ ಪಟ್ಟಿಕೆಯಲ್ಲಿ ಶಿವ ಹಾಗೂ ಗಣೇಶನ ಉಬ್ಬುಶಿಲ್ಪಗಳು ವರ್ಣಗಾರಿಕೆಯಿಂದ ಸುಂದರಗೊಂಡಿವೆ. ಶಿವನ ಶಿಲ್ಪದ ಮೈ ಹಾಗೂ ಮುಖಕ್ಕೆ ಆಕಾಶನೀಲ ವರ್ಣ ಲೇಪಿಸಿ, ಕಣ್ಣು ಹಾಗೂ ತಲೆಗೂದಲುಗಳಿಗೆ ಕಪ್ಪುವರ್ಣವನ್ನು ಲೇಪಿಸಲಾಗಿದೆ. ಕೊರಳಲ್ಲಿ ಸುತ್ತಿರುವ ಹಾವು ಹಳದಿ ಹಾಗೂ ಕಂದುಬಣ್ಣದ ಚುಕ್ಕೆಗಳಿಂದ ಅಲಂಕೃತಗೊಂಡರೆ, ಕೈಯಲ್ಲಿರುವ ತ್ರಿಶೂಲ, ತಲೆಯಲ್ಲಿ ಮೂಡಿದ ಅರ್ಧಚಂದ್ರ ಹಾಗೂ ಜಟೆಯಿಂದ ಸುರಿಯುತ್ತಿರುವ ಗಂಗೆಗೆ ಶ್ವೇತವರ್ಣವನ್ನು ಬಳಸಿರುವುದು ಕಂಡುಬರುತ್ತದೆ.

ಗಣೇಶನ ಉಬ್ಬುಶಿಲ್ಪದ ಮೈ ಹಾಗೂ ಮುಖಕ್ಕೆ ಗುಲಾಬಿ ಬಣ್ಣವನ್ನು ಲೇಪಿಸಿ, ಕಣ್ಣುಗಳಿಗೆ ಹಾಗೂ ಬದಿಯಲ್ಲಿ ಕುಳಿತಿರುವ ಮೂಷಕನಿಗೆ ಕಪ್ಪುವರ್ಣವನ್ನು ಬಳಸಲಾಗಿದೆ. ಕಿರೀಟ ಹಾಗೂ ಸಿಂಹಾಸನಗಳಿಗೆ ಬಂಗಾರವರ್ಣವನ್ನು ಬಳಸಿ, ಗಣೇಶನ ಶಿಲ್ಪದ ಸೊಂಡಿಲ ಮೇಲೆ ಬರೆದಂತಹ ನಕ್ಷೆಗೆ ಹಾಗೂ ಕಿರೀಟದಲ್ಲಿಯ ಮುತ್ತಿನ ಆಕಾರದ ವಿನ್ಯಾಸಗಳಿಗೆ ಕೆಂಪು ವರ್ಣವನ್ನು ಬಳಸಿರುವುದನ್ನು ಕಾಣಬಹುದು.

ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಮಹಾಲಿಂಗೇಶ್ವರ ದೇವಸ್ಥಾನದ ರಥದ ಗಡ್ಡೆಯ ಭಾಗದಲ್ಲಿರುವ ಕೆಲವು ಶಿಲ್ಪವಿನ್ಯಾಸಗಳಿಗೆ ವರ್ಣಲೇಪನ ಮಾಡಿರುವುದು ಕಂಡುಬರುತ್ತದೆ. ಅಷ್ಟಭುಜಾಕೃತಿಯಲ್ಲಿ ನಿರ್ಮಿತಗೊಂಡ ಗಡ್ಡೆಯ ರಥದ ಮುಂಭಾಗ ಹಾಗೂ ಹಿಂಬದಿಯಲ್ಲಿ ಕಂಡುಬರುವ ದುರ್ಗಾದೇವಿ ಹಾಗೂ ಮಾರ್ಕಂಡೇಯನ ಶಿಲ್ಪಗಳಿಗೆ ವರ್ಣಲೇಪನವಿರುವುದನ್ನು ಕಾಣಬಹುದು. ದುರ್ಗಾದೇವಿಯ ಶಿಲ್ಪದ ಆಭರಣಗಳ ವಿನ್ಯಾಸಗಳಿಗೆ ಹಳದಿ ಹಾಗೂ ಬಂಗಾರವರ್ಣದ ಮಿಂಚುವಂತಹ ವರ್ಣಗಾರಿಕೆ ಇದೆ. ಕೈಯಲ್ಲಿರುವ ತ್ರಿಶೂಲ, ಖಡ್ಗದಂತಹ ಇನ್ನುಳಿದ ಆಯುಧಗಳಿಗೆ ಸಿಲ್ವರ್ ಕಲರ್ (ಬಣ್ಣವನ್ನು) ಬಳಸಿದ್ದಾರೆ. ತಲೆಗೂದಲು ಹಾಗೂ ಕಣ್ಣುಗಳಿಗೆ ಕಪ್ಪು ವರ್ಣವಿರುವುದು ಕಂಡುಬರುತ್ತದೆ.

ಮಾರ್ಕಂಡೇಯನ ಶಿಲ್ಪದಲ್ಲಿ ಮಾರ್ಕಂಡೇಯನು ಅಪ್ಪಿಕೊಂಡಿರುವ ಶಿವಲಿಂಗದ ಶಿಲ್ಪವು ಕಪ್ಪು ವರ್ಣದಿಂದ ಕೂಡಿದ್ದು ಮಾರ್ಕಂಡೇಯನ ಕಣ್ಣು ಹಾಗೂ ತಲೆಗೂದಲುಗಳಿಗೆ ಕಪ್ಪು ಹಾಗೂ ಕಂದುವರ್ಣಗಳನ್ನು ಬಳಸಲಾಗಿದೆ. ಬಟ್ಟೆಯ ವಿನ್ಯಾಸಗಳಿಗೆ ಹಳದಿ ಹಾಗೂ ಕೇಸರಿ ವರ್ಣಗಳನ್ನು ಉಪಯೋಗಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೇಶ್ವರ ಸಂಸ್ಥಾನಮಠದ ರಥದಲ್ಲಿ, ಧ್ಯಾನಾವಸ್ಥೆಯಲ್ಲಿ ಕುಳಿತಿರುವ ಶಿವ, ಗಣೇಶ, ವೀಣಾಪಾನಿ ಹಾಗೂ ಲಕ್ಷ್ಮೀದೇವಿಯ ಶಿಲ್ಪವಿನ್ಯಾಸಗಳು ವರ್ಣಗಳನ್ನು ಮೈಗೂಡಿಸಿಕೊಂಡಿವೆ. ಧ್ಯಾನಾವಸ್ಥೆಯಲ್ಲಿರುವ ಶಿವನ ಶಿಲ್ಪದ ಕೇಶವಿನ್ಯಾಸ ಹಾಗೂ ಕಣ್ಣುಗಳಿಗೆ ಕಪ್ಪು ವರ್ಣವನ್ನು ಬಳಸಲಾಗಿದೆ. ತೋಳುಗಳಲ್ಲಿ ಹಾಗೂ ಕೊರಳಲ್ಲಿ ಕಾಣುವ ರುದ್ರಾಕ್ಷಿಗಳಂತಹ ವಿನ್ಯಾಸಗಳಿಗೆ ಕಂದು ಬಣ್ಣವನ್ನು ಲೇಪಿಸಲಾಗಿದೆ. ಕೊರಳಲ್ಲಿ ಸುತ್ತಿರುವಂತೆ ತೋರುವ ಹಾವಿನ (ಸರ್ಪದ) ವಿನ್ಯಾಸಕ್ಕೆ ಹಳದಿ, ಕಂದು ಹಾಗೂ ಕಪ್ಪು ವರ್ಣದ ಚುಕ್ಕೆಯಾಕಾರದ ವರ್ಣಗಾರಿಕೆಯನ್ನು ಕಾಣಬಹುದು.

ಗಣೇಶನ ಶಿಲ್ಪದ ಕಿರೀಟ ಹಾಗೂ ಆಭರಣಗಳ ವಿನ್ಯಾಸಗಳಿಗೆ ಬಂಗಾರವರ್ಣದ ಲೇಪನವನ್ನು ಮಾಡಿ, ದಂತಗಳು ಹಾಗೂ ಕೈಯಲ್ಲಿ ಹಿಡಿದಿರುವಂತಹ ಉಂಡೆಗಳಿಗೆ ಬಿಳಿಯ ವರ್ಣವನ್ನು ಬಳಸಿದ್ದಾರೆ. ಕಣ್ಣುಗಳಿಗೆ ಹಾಗೂ ಬದಿಯಲ್ಲಿ ಕುಳಿತಿರುವ ಇಲಿಯ ಶಿಲ್ಪವಿನ್ಯಾಸಕ್ಕೆ ಕಪ್ಪು ವರ್ಣವನ್ನು ಲೇಪಿಸಲಾಗಿದೆ. ಗಣೇಶ ಶಿಲ್ಪದ ಪಂಚೆಯ ಅಂಚಿನ ವಿನ್ಯಾಸಕ್ಕೆ ಹಳದಿಬಣ್ಣವನ್ನು ಬಳಸಲಾಗಿದೆ.

ವೀಣಾಪಾಣಿಯ ಹಾಗೂ ಲಕ್ಷ್ಮೀದೇವಿಯ ಶಿಲ್ಪವಿನ್ಯಾಸಗಳು ಒಂದೇ ರೀತಿಯ ವರ್ಣಗಾರಿಕೆಯನ್ನು ಹೊಂದಿವೆ. ವೀಣಾಪಾನಿಯ ವೀಣೆಯು ಕಂದು ಬಣ್ಣವನ್ನು ಹೊಂದಿದ್ದು, ಲಕ್ಷ್ಮೀಯ ಅಭಯಹಸ್ತದಿಂದ ಬೀಳುತ್ತಿರುವಂತೆ ತೋರುವ ನಾಣ್ಯಗಳಿಗೆ ಬಂಗಾರ ವರ್ಣವನ್ನು ಲೇಪಿಸಲಾಗಿದೆ. ಕಣ್ಣುಗಳು ಹಾಗೂ ಕೇಶರಾಶಿಗೆ ಕಪ್ಪು ವರ್ಣವನ್ನು ಲೇಪಿಸಲಾಗಿದೆ. ಆಭರಣಗಳು ಹಾಗೂ ಕಿರೀಟಗಳ ವಿನ್ಯಾಸಗಳಿಗೆ ಬಂಗಾರ ವರ್ಣ ಹಾಗೂ ಅಲ್ಲಲ್ಲಿ ಕೆಂಪು ಹಾಗೂ ಹಳದಿ ವರ್ಣಗಳನ್ನು ಬಳಸಲಾಗಿದೆ.

ರಾಯಚೂರು ಜಿಲ್ಲೆಯ ಕಲ್ಮಲದ ಕರೆಪ್ಪತಾತನವರ ರಥದಲ್ಲಿ ಗಡ್ಡೆಯ ಭಾಗದಲ್ಲಿ ಕಾಣುವ ಹನುಮಂತ ಹಾಗೂ ಬಿಲ್ಲು ಹಿಡಿದಿರುವ ರಾಮನ ಶಿಲ್ಪಗಳು ವರ್ಣಲೇಪಿತವಾಗಿವೆ. ಇವೆರಡೂ ಶಿಲ್ಪಗಳಲ್ಲಿ ಬಟ್ಟೆಗಳ ವಿನ್ಯಾಸಗಳಿಗೆ ಹಳದಿ, ಹಸಿರು ಹಾಗೂ ಕೆಂಪು ವರ್ಣಗಳನ್ನು ಬಳಸಲಾಗಿದೆ. ಕಣ್ಣುಗಳು ಹಾಗೂ ತಲೆಗೂದಲುಗಳಿಗೆ ಕಂದುವರ್ಣ ಲೇಪಿತಗೊಂಡರೆ, ಆಂಜನೇಯನ ಕೈಯಲ್ಲಿರುವ ಗಧೆ ಹಾಗೂ ರಾಮನ ಕೈಯಲ್ಲಿರುವ ಬಿಲ್ಲುಗಳು ಹಳದಿ ವರ್ಣಗಳಿಂದ ಕೂಡಿವೆ.

ಬಳ್ಳಾರಿ ಜಿಲ್ಲೆಯ ಚಳಗುರ್ಕಿಯ ಬದ್ರಿತಾತ ದೇವಸ್ಥಾನದ ರಥದ ಗಡ್ಡೆಯ ಭಾಗದಲ್ಲಿ ಕಾಳಿಕಾದೇವಿ, ವಿಶ್ವಕರ್ಮಿ, ನಂದಿ ಸವಾರಿಯ ಶಿವ ಹಾಗೂ ಗರುಡ ಸವಾರಿಯಾದ ವಿಷ್ಣುವಿನ ಉಬ್ಬುಶಿಲ್ಪಗಳು ಅಲ್ಲಲ್ಲಿ ವರ್ಣಗಾರಿಕೆಯಿಂದ ಕೂಡಿವೆ. ಎಲ್ಲ ಶಿಲ್ಪಗಳಲ್ಲಿಯ ತಲೆಗೂದಲು ಹಾಗೂ ಕಣ್ಣುಗಳ ವಿನ್ಯಾಸಗಳು ಕಂದು ಹಾಗೂ ಕಪ್ಪು ವರ್ಣಗಳಿಂದ ಕೂಡಿದ್ದರೆ, ಆಭರಣಗಳು ಹಾಗೂ ಕಿರೀಟಗಳು ಬಂಗಾರವರ್ಣಗಳಿಂದ ಶೋಭಿಸುತ್ತವೆ. ಶಿವನ ವಾಹನವಾದ ನಂದಿಯು ಬಿಳಿಯ ವರ್ಣವನ್ನು ಹೊಂದಿದ್ದರೆ, ವಿಷ್ಣುವಿನ ವಾಹನ ಗರುಡವು ಬೂದುಬಣ್ಣವನ್ನು ಹೊಂದಿದೆ. ಬಟ್ಟೆಗಳ ವಿನ್ಯಾಸಗಳಿಗೆ ಅಲ್ಲಲ್ಲಿ ಕೆಂಪು ಹಾಗೂ ಹಸಿರು ವರ್ಣಗಳನ್ನು ಲೇಪಿಸಿರುವುದು ಕಂಡುಬರುತ್ತದೆ.

ರಾಯಚೂರು ಜಿಲ್ಲೆ ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನದ ರಥದ ಗಡ್ಡೆಯ ಭಾಗದಲ್ಲಿ ಅಳವಡಿಸಲಾದ ಭ್ರಮರಾಂಭೆಯ ಜನಪದ ಮಾದರಿಯ ಶಿಲ್ಪ ವರ್ಣಲೇಪಿತವಾಗಿರುವುದನ್ನು ಕಾಣಬಹುದು. ರಥದ ಮುಂಭಾಗದ ಗಡ್ಡೆಯ ಭಾಗದಲ್ಲಿ ಕಾಣುವ ಈ ಮೂರ್ತಿಗೆ ಕೇವಲ ವರ್ಣಗಳನ್ನು ಲೇಪಿಸಿರುವುದಷ್ಟೇ ಅಲ್ಲದೆ ಕೆಲವು ಬಣ್ಣಬಣ್ಣದ ವಸ್ತುಗಳನ್ನು ಅಲಂಕಾರಕ್ಕಾಗಿ ಬಳಸಿರುವುದು ಕಂಡುಬರುತ್ತದೆ. ಶಿಲ್ಪದ ಮುಖ ಹಾಗೂ ಕೈಗಳಿಗೆ ಗುಲಾಬಿ ವರ್ಣ ಲೇಪಿಸಿ, ಕಣ್ಣುಗಳಿಗೆ ಕಪ್ಪು ಹಾಗೂ ಕಂದು ವರ್ಣಗಳನ್ನು ಬಳಸಿರುವರು. ದೇವತೆಯ ವಾಹನ, ಹುಲಿಯ ಶಿಲ್ಪಕ್ಕೆ ಹಳದಿ ವರ್ಣಲೇಪನ ಮಾಡಿ, ಕಪ್ಪು ಬಣ್ಣದ ಸಣ್ಣ ಸಣ್ಣ ಪಟ್ಟಿಕೆಗಳಿರುವುದು ಕಂಡುಬರುತ್ತದೆ. ದೇವತಾಶಿಲ್ಪದ ಹಿಂಬದಿಯಲ್ಲಿರುವ ಕಮಾನಿನ ಆಕಾರದ ಪ್ರಭಾವಳಿಯು ಹಳದಿ, ಹಸಿರು, ನೀಲಿ ಕೆಂಪು ಹಾಗೂ ಕಂದುವರ್ಣಗಳಿಂದ ಕೂಡಿದ ಎಲೆ, ಬಳ್ಳಿ ನಕ್ಷೆಗಳು ಹಾಗೂ ಹೂಗಳ

ವಿನ್ಯಾಸಗಳನ್ನು ಹೊಂದಿದೆ. ಬ್ರಮರಾಂಭೆಯ ಶಿಲ್ಪದ ಮೇಲ್ಭಾಗಕ್ಕೆ ಒಂದು ಕೆಂಪು ವರ್ಣದ ವಸ್ತ್ರ ಹೊದಿಸಿರುವುದು ಕಂಡುಬರುತ್ತದೆ.

ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ ದೇವಸ್ಥಾನದ ರಥದ ಗಡ್ಡೆಯ ಚತುರ್ಭುಜಗಳಲ್ಲಿ ಒಂದೇ ತೆರನಾದ ನಾಲ್ಕು ಜಾನಪದ ಶಿಲ್ಪಗಳ ಶೈಲಿಯ ದೇವತೆಯ ಶಿಲ್ಪಗಳನ್ನು ಕಾಣಬಹುದು. ಈ ಶಿಲ್ಪಗಳ ಮುಖ ಹಾಗೂ ಕೈಕಾಲುಗಳಿಗೆ ತಿಳಿ ಗುಲಾಬಿ ವರ್ಣವನ್ನು ಬಳಸಲಾಗಿದೆ. ರವಿಕೆಯ ವಿನ್ಯಾಸಕ್ಕೆ ಹಸಿರು ಹಾಗೂ ಸೀರೆಯ ವಿನ್ಯಾಸಕ್ಕೆ ಕೇಸರಿ ವರ್ಣಗಳು ಲೇಪಿತವಾಗಿರುವುದನ್ನು ಕಾಣಬಹುದು. ಆಭರಣಗಳಿಗೆ ಹಳದಿ ಬಣ್ಣ ಬಳಸಿದ್ದು, ಕೈಯಲ್ಲಿಯ ತ್ರಿಶೂಲ ಹಾಗೂ ಢಮರುಗಳಿಗೆ ಕಂದು ಹಾಗೂ ಹಳದಿ ವರ್ಣಲೇಪನವನ್ನು ಮಾಡಲಾಗಿದೆ.

ಗದಗ ಜಿಲ್ಲೆಯ ಚಿಂಚಲಿಯ ಬಸವೇಶ್ವರ ದೇವಸ್ಥಾನದ ರಥದಲ್ಲಿ ಲಕ್ಷ್ಮೀ, ಸರಸ್ವತಿ, ಗಣಪ ಹಾಗೂ ಶಿವನ ಶಿಲ್ಪಗಳು ಕೆಲವು ಕಡೆಗಳಲ್ಲಿ ಮಾತ್ರ ವರ್ಣಮಯವಾಗಿವೆ. ಶಿಲ್ಪಗಳ ಕಣ್ಣುಗಳು ಹಾಗೂ ತಲೆಗೂದಲುಗಳಿಗೆ ಕಪ್ಪು ವರ್ಣಗಳನ್ನು ಬಳಸಿ, ಬಟ್ಟೆ ಹಾಗೂ ಬಾಯಿಯ ಕೆಲವು ಭಾಗಗಳಲ್ಲಿ ಮಾತ್ರ ಗುಲಾಬಿಮಿಶ್ರಿತ ಕೆಂಪುವರ್ಣವನ್ನು ಬಳಸಲಾಗಿದೆ. ಎಲ್ಲ ಶಿಲ್ಪಗಳಲ್ಲಿ ಆಭರಣಗಳು ಹಳದಿ ಹಾಗೂ ಬಂಗಾರ ವರ್ಣದ ಹೊಳೆಯುವ ಬಣ್ಣವನ್ನು ಮೈಗೂಡಿಸಿಕೊಂಡಿವೆ.

ದಕ್ಷಿಣ ಕರ್ನಾಟಕದ ಮಂಡ್ಯ ಜಿಲ್ಲೆಯ ಶ್ರೀರಂಗಪಟ್ಟಣದ ಶ್ರೀರಂಗನಾಥನ ದೇವಸ್ಥಾನದ ರಥದ ವರ್ತುಳಾಕಾರದ ಗಡ್ಡೆಯ ಮುಂಭಾಗದಲ್ಲಿ ಮಧ್ಯಪಟ್ಟಿಕೆಯ ಮೇಲೆ ರಚನೆಗೊಂಡ ಸರ್ಪದ ಮೇಲೆ ಕುಳಿತಿರುವ ವಿಷ್ಣುವಿನ ಶಿಲ್ಪದ ಎಡಬಲಗಳಲ್ಲಿ ಇಬ್ಬರು ಪರಿಚಾರಿಕೆಯರ ಶಿಲ್ಪಗಳು ಹಾಗೂ ಜಯವಿಜಯರ ಶಿಲ್ಪಗಳಲ್ಲಿ ಸುಂದರ ವರ್ಣಗಾರಿಕೆಯನ್ನು ಕಾಣಬಹುದು. ಎಲ್ಲ ಶಿಲ್ಪಗಳ ಕಿರೀಟ ಹಾಗೂ ಆಭರಣಗಳಿಗೆ ಬಂಗಾರವರ್ಣವು ಲೇಪಿತವಾಗಿದೆ. ಮುಖ ಮೈ ಕೈಕಾಲುಗಳಿಗೆ ಬಿಳಿ ಮಿಶ್ರಿತ ಗುಲಾಬಿ ವರ್ಣವನ್ನು ಬಳಸಿರುವರು. ವಿಷ್ಣುವಿನ ಶಿಲ್ಪಕ್ಕೆ ಕರಗಳಲ್ಲಿರುವ ಶಂಖ, ಚಕ್ರಗಳು ಹಾಗೂ ಪಂಚೆಗೆ ಹಳದಿ ವರ್ಣವನ್ನು ಬಳಸಿರುವರು. ವಿಷ್ಣು ಕುಳಿತುಕೊಂಡಿರುವ ಹೆಡೆಬಿಚ್ಚಿದ ಸರ್ಪಕ್ಕೆ ನೀಲಿ ಹಾಗೂ ನೀಲಿ ಮಿಶ್ರಿತ ನೇರಳೆ ಬಣ್ಣವನ್ನು ಲೇಪಿಸಲಾಗಿದೆ. ಹೆಡೆಯಾಕಾರದ ವಿನ್ಯಾಸದಲ್ಲಿ ಅಲ್ಲಲ್ಲಿ ಕಪ್ಪು ಹಾಗೂ ಕಂದು ವರ್ಣಗಳನ್ನು ಚುಕ್ಕೆಯಾಕಾರದಲ್ಲಿ ಬಳಸಲಾಗಿದೆ. ಜಯವಿಜಯರ ಹಾಗೂ ಪರಿಚಾರಿಕೆಯರ ಬಟ್ಟೆಯ ವಿನ್ಯಾಸಗಳಿಗೆ ಹಳದಿ ಹಾಗೂ ಕೆಂಪು ವರ್ಣಗಳನ್ನು ಬಳಸಿದರೆ, ಎಲ್ಲ ಶಿಲ್ಪಗಳ ಕಣ್ಣುಗಳು ಹಾಗೂ ತಲೆಗೂದಲುಗಳಿಗೆ ಕಪ್ಪು ವರ್ಣಗಾರಿಕೆ ಇರುವುದು ಕಂಡುಬರುತ್ತದೆ.

ಕುಕ್ಕೆ ಸುಬ್ರಹ್ಮಣ್ಯಂ ದೇವಸ್ಥಾನದ ರಥವು ಗಡ್ಡೆಯ ಭಾಗದಲ್ಲಿ ಅನೇಕ ವರ್ಣಗಳನ್ನು ಮೈಗೂಡಿಸಿಕೊಳ್ಳುವುದಲ್ಲದೆ ದೇವತಾ ಶಿಲ್ಪಗಳೂ ವರ್ಣಲೇಪಿತವಾಗಿರುವುದನ್ನು ಕಾಣಬಹುದು. ಶಿವ, ಗಣಪ, ಆದಿಶಕ್ತಿ, ಸರಸ್ವತಿ ಶಿಲ್ಪಗಳು ವರ್ಣಲೇಪಿತಗೊಂಡಿವೆ. ಎಲ್ಲ ಶಿಲ್ಪಗಳ ಮೈ, ಮುಖ ಹಾಗೂ ಕೈಕಾಲುಗಳು ಬಿಳಿ ಮಿಶ್ರಿತ ಗುಲಾಬಿ ವರ್ಣವನ್ನು ಹೊಂದಿವೆ ಕಣ್ಣು ಹಾಗೂ ಕೇಶರಾಶಿಗೆ ಕಪ್ಪುವರ್ಣ, ಆಭರಣಗಳಿಗೆ ಹಳದಿ ಹಾಗೂ ಬಟ್ಟೆಗಳ ವಿನ್ಯಾಸಗಳಿಗೆ ನೀಲಿ, ಕೆಂಪು, ಹಸಿರು, ಹಳದಿ ಹಾಗೂ ಬಿಳಿಯ ವರ್ಣಗಳನ್ನು ಉಪಯೋಗಿಸಿರುವುದು ಕಂಡುಬರುತ್ತದೆ.

ಹೀಗೆ ರಥಗಳಲ್ಲಿ ಗಡ್ಡೆ ಅಥವಾ ಅಧಿಷ್ಠಾನ ಭಾಗದಲ್ಲಿ ದೇವತಾಶಿಲ್ಪಗಳಲ್ಲಿ ವರ್ಣಗಾರಿಕೆ

ಇರುವುದು ಕರ್ನಾಟಕದ ಹಲವೆಡೆ ಕಂಡುಬರುತ್ತದೆ.

ii. ಮಹಾತ್ಮರ ಶಿಲ್ಪಗಳಲ್ಲಿ ವರ್ಣವಿನ್ಯಾಸ : ಬೆಳಗಾಂವಿ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥದ ಗಡ್ಡೆಯ ಭಾಗದಲ್ಲಿ ಮಹಾತ್ಮರ ವರ್ಣಲೇಪಿತ ಉಬ್ಬುಶಿಲ್ಪಗಳನ್ನು ಕಾಣಬಹುದು. ಅಷ್ಟಭುಜಾಕೃತಿಯಲ್ಲಿ ರಚನೆಗೊಂಡ ಗಡ್ಡೆಯ ಮಧ್ಯಭಾಗದ ಪಟ್ಟಿಕೆಗಳಲ್ಲಿ, ಮುರುಗೋಡದ ಮಹಾಂತ ಶಿವಯೋಗಿಗಳ ಶಿಲ್ಪ, ಅಕ್ಕಮಹಾದೇವಿ, ಅಲ್ಲಮಪ್ರಭು ಹಾಗೂ ಬಸವಣ್ಣನವರ ಶಿಲ್ಪಗಳು ವರ್ಣಗಾರಿಕೆಯಿಂದ ಸುಂದರಗೊಂಡಿವೆ. ಮಹಾಂತ ಶಿವಯೋಗಿಗಳ ಹಾಗೂ ಅಲ್ಲಮಪ್ರಭುಗಳ ಉಬ್ಬುಶಿಲ್ಪಗಳಲ್ಲಿ ಬರುವ ಬಟ್ಟೆಯ ವಿನ್ಯಾಸವು ಹಳದಿ ಮಿಶ್ರಿತ ಕೇಸರಿ (ಕ್ಯಾಂವಿ) ಬಣ್ಣವನ್ನು ಹೊಂದಿದೆ. ಅಲ್ಲಮಪ್ರಭುಗಳ ಕೊರಳಲ್ಲಿರುವ ರುದ್ರಾಕ್ಷಿ ಹಾಗೂ ಮಹಾಂತ ಶಿವಯೋಗಿಗಳ ಕೊರಳಲ್ಲಿರುವ ರುದ್ರಾಕ್ಷಿಮಾಲೆಯ ವಿನ್ಯಾಸಕ್ಕೆ ಕಂದು ಬಣ್ಣವನ್ನು ಲೇಪಿಸಲಾಗಿದೆ. ಮುಖ ಹಾಗೂ ಕೈಗಳಿಗೆ ಬಿಳಿ ಮಿಶ್ರಿತ ಗುಲಾಬಿ ಬಣ್ಣವನ್ನು ಹಚ್ಚಲಾಗಿದೆ. ತಲೆಗೂದಲು ಹಾಗೂ ಕಣ್ಣುಗಳ ಭಾಗಗಳಲ್ಲಿ ಕಪ್ಪು ಬಣ್ಣದಿಂದ ಗೆರೆಗಳನ್ನು ಹಾಕಲಾಗಿದೆ.

ಅಕ್ಕಮಹಾದೇವಿ ಹಾಗೂ ಬಸವಣ್ಣನವರ ಶಿಲ್ಪಗಳಲ್ಲಿ, ಮುಖದ ಹಾಗೂ ಕೈಗಳ ಭಾಗಗಳಿಗೆ ಬಿಳಿ ಮಿಶ್ರಿತ ಗುಲಾಬಿ ಬಣ್ಣ ಹಚ್ಚಲಾಗಿದೆ. ಅಕ್ಕಮಹಾದೇವಿಯ ಕೇಶರಾಶಿಗೆ ಕಪ್ಪು ಬಣ್ಣದಿಂದ ಗೆರೆಗಳನ್ನು ಹಾಕಲಾಗಿದೆ. ಎರಡೂ ಶಿಲ್ಪಗಳಲ್ಲಿ ಕಣ್ಣುಗಳ ಭಾಗಗಳಲ್ಲಿ ಕಂದು ಹಾಗೂ ಕಪ್ಪು ಬಣ್ಣವನ್ನು ಉಪಯೋಗಿಸಲಾಗಿದೆ. ಬಸವಣ್ಣನವರ ಕಿರೀಟಕ್ಕೆ ಹಳದಿ ಹಾಗೂ ಬಟ್ಟೆಗೆ ಬಿಳಿಯ ಬಣ್ಣವನ್ನು ಲೇಪಿಸಿರುವುದು ಕಂಡುಬರುತ್ತದೆ.

ಬಾಗಲಕೋಟೆ ಜಿಲ್ಲೆಯ ಮುಚಖಂಡಿಯ ವೀರಭದ್ರ ದೇವಸ್ಥಾನದ ರಥದಲ್ಲಿ, ಮುರುಘೇಂದ್ರ ಸ್ವಾಮಿಗಳ, ಬಿಳ್ಳೂರು ಅಜ್ಜನವರ ಹಾಗೂ ಅಡವಿಅಜ್ಜನವರ ಶಿಲ್ಪಗಳ ಕೆಲವು ಭಾಗಗಳು ವರ್ಣಗಾರಿಕೆಯಿಂದ ಕೂಡಿವೆ. ಇವೆಲ್ಲ ಶಿಲ್ಪಗಳ ಕಣ್ಣುಗಳ ಭಾಗಗಳಿಗೆ ಕಪ್ಪು ಹಾಗೂ ಕಂದು ಬಣ್ಣಗಳಿಂದ ಗೆರೆಗಳನ್ನು ಎಳೆದಿರುವರು. ಮುರುಘೇಂದ್ರ ಶಿವಯೋಗಿಗಳು ಹಾಗೂ ಬಿಳ್ಳೂರು ಅಜ್ಜನವರು ಆಸನವಾಗಿರಿಸಿಕೊಂಡ ಹುಲಿಯ ಚರ್ಮದ ವಿನ್ಯಾಸಗಳು ಹಳದಿ ಹಾಗೂ ಕಪ್ಪು ಪಟ್ಟಿಕೆಯಿಂದ ಕೂಡಿವೆ ಮೂರೂ ಶಿಲ್ಪಗಳಲ್ಲಿ ಕಂಡುಬರುವ ವಿಭೂತಿಯ ಪಟ್ಟಿಕೆಗಳಂತೆ ಹಣೆಯ ಮೇಲೆ ಹಾಗೂ ಕೈ-ಹೊಟ್ಟೆಗಳ ಮೇಲೆ ಬಿಳಿಯ ವರ್ಣದಿಂದ ಗೆರೆಗಳನ್ನು ಹಾಕಲಾಗಿದೆ.

ಗದಗ ಜಿಲ್ಲೆಯ ಚಿಂಚಲಿಯ ಬಸವೇಶ್ವರ ದೇವಸ್ಥಾನದ ರಥದ ಗಡ್ಡೆಯ ಭಾಗದಲ್ಲಿ, ಧ್ಯಾನಕ್ಕೆ ಕುಳಿತ ಕೆಲವು ಋಷಿಗಳ ಶಿಲ್ಪಗಳು ವರ್ಣಗಾರಿಕೆಯಿಂದ ಕೂಡಿವೆ. ತಲೆಗೂದಲುಗಳಿಗೆ ಕಪ್ಪು, ಕಣ್ಣು ಹಾಗೂ ಹಣೆಯ ಮೇಲೆ ವಿಭೂತಿಯಂತೆ ಕಂಡುಬರುವ ವಿನ್ಯಾಸಕ್ಕೆ ಕಂದು ಹಾಗೂ ಬಿಳಿಯ ಬಣ್ಣವನ್ನು ಬಳಸಿರುವುದು ಕಂಡುಬರುತ್ತದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿಯ ಮೌನೇಶ್ವರ ದೇವಸ್ಥಾನದ ರಥದ ಗಡ್ಡೆಯ ಭಾಗವು ಕೆಲವು ಮಹಾತ್ಮರ ಶಿಲ್ಪಗಳನ್ನು ಹೊಂದಿದೆ. ಇಲ್ಲಿ ರಥದ ಮುಂಭಾಗದ ಗಡ್ಡೆಯ ಭಾಗದಲ್ಲಿ ಕಂಡುಬರುವ ಮೌನೇಶ್ವರ ಶಿಲ್ಪದಲ್ಲಿ ಕೆಲವು ಭಾಗಗಳಲ್ಲಿ ವರ್ಣವಿನ್ಯಾಸವಿರುವುದು ಕಂಡುಬರುತ್ತದೆ. ತಲೆಗೂದಲು ಹಾಗೂ ಕಣ್ಣುಗಳು ಕಪ್ಪುಬಣ್ಣವನ್ನು ಹೊಂದಿದ್ದು, ಕೈಯಲ್ಲಿರುವ ಕೊಡಲಿಗೆ ಕಂದು

ಬಣ್ಣವನ್ನು ಹಚ್ಚಲಾಗಿದೆ. ಬಟ್ಟೆಯ ವಿನ್ಯಾಸಕ್ಕೆ ಹಳದಿ ಮಿಶ್ರಿತ ಕೇಸರಿ ವರ್ಣವನ್ನು ಬಳಸಲಾಗಿದೆ.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಮಹಾಲಿಂಗೇಶ್ವರ ದೇವಸ್ಥಾನದ ಹಾಗೂ ಕೇಸರಕೊಪ್ಪದ ಸಿದ್ಧೇಶ್ವರ ದೇವಸ್ಥಾನದ ರಥಗಳ ಗಡ್ಡೆಯ ಭಾಗದಲ್ಲಿ ಶಿವಶರಣರ ಶಿಲ್ಪಗಳನ್ನು ಕಾಣಬಹುದು. ಮಹಾಲಿಂಗೇಶ್ವರರ, ಬಸವೇಶ್ವರರ ಹಾಗೂ ಅಲ್ಲಮಪ್ರಭುಗಳ ಮೈಮೇಲೆ ಹೊದ್ದಿರುವಂತೆ ಕಾಣುವ ಬಟ್ಟೆಯ ವಿನ್ಯಾಸಗಳಿಗೆ ಹಳದಿ ಮಿಶ್ರಿತ ಕೆಂಪು ವರ್ಣವನ್ನು ಹಚ್ಚಲಾಗಿದೆ. ಎಲ್ಲ ಶಿಲ್ಪಗಳಲ್ಲಿ ತಲೆಗೂದಲುಗಳ ವಿನ್ಯಾಸವು ಕಂದು ವರ್ಣದಿಂದ ಕೂಡಿದ್ದು, ಬಸವೇಶ್ವರರ ಕಿರೀಟದ ವಿನ್ಯಾಸ ಹಾಗೂ ಬಟ್ಟೆಯ ವಿನ್ಯಾಸಕ್ಕೆ ಹಳದಿ ಹಾಗೂ ಬಿಳಿಯ ಬಣ್ಣವನ್ನು ಬಳಸಲಾಗಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೇಶ್ವರ ಸಂಸ್ಥಾನಮಠದ ರಥದ ಗಡ್ಡೆಯ ಭಾಗದಲ್ಲಿ ಮಹಾತ್ಮರ ಶಿಲ್ಪಗಳಿಗೆ ವರ್ಣಲೇಪನ ಮಾಡಿರುವುದು ಕಂಡುಬರುತ್ತದೆ. ಅಷ್ಟಭುಜಾಕೃತಿಯಲ್ಲಿ ರಚನೆಗೊಂಡ ಗಡ್ಡೆಯ ಕೆಳಭಾಗದ ಎರಡು ಪಟ್ಟಿಕೆಗಳಲ್ಲಿ ಅಂಕಲಗಿಯ ಅಡವಿಸಿದ್ದೇಶ್ವರ, ಅಂಬಿಗರ ಚೌಡಯ್ಯ, ಮುರುಗೋಡದ ಮಹಾಂತ ಶಿವಯೋಗಿಗಳ, ಬಿಳ್ಳೂರು ಅಜ್ಜನವರ, ಮುರುಘೇಂದ್ರ ಸ್ವಾಮಿಗಳ ಹಾಗೂ ಅಕ್ಕಮಹಾದೇವಿ, ಬಸವಣ್ಣ, ಪ್ರಭುದೇವರಂತಹ ಅನೇಕ ಮಹಾತ್ಮರ ಶಿಲ್ಪಗಳನ್ನು ಕಾಣಬಹುದು. ಇವುಗಳಲ್ಲಿ ಕೆಲವೊಂದು ಶಿಲ್ಪಗಳು ವರ್ಣವಿನ್ಯಾಸವನ್ನು ಹೊಂದಿವೆ. ಎಲ್ಲ ಶಿಲ್ಪಗಳ ಹಿಂಭಾಗದಲ್ಲಿ ಪೀಠ ಹಾಗೂ ಪ್ರಭಾವಳಿಯಂತೆ ಕಾಣುವ ಉಬ್ಬುಶಿಲ್ಪವಿನ್ಯಾಸಕ್ಕೆ ಬಂಗಾರವರ್ಣವನ್ನು ಲೇಪಿಸಲಾಗಿದೆ. ಕೊರಳಲ್ಲಿ ಕಟ್ಟಿರುವ ರುದ್ರಾಕ್ಷಿ ಮಾಲೆಯಾಕಾರದ ವಿನ್ಯಾಸಗಳಿಗೆ ಕಂದು ವರ್ಣವನ್ನು ಬಳಸಲಾಗಿದೆ. ವಿಭೂತಿಯಂತೆ ಕಾಣಲು ಶಿಲ್ಪಗಳ ಹಣೆಯ ಹಾಗೂ ಕೈ, ಹೊಟ್ಟೆ, ಕಾಲುಗಳ ಕೆಲವು ಭಾಗಗಳಲ್ಲಿ ಬಿಳಿಯ ವರ್ಣದಿಂದ ಗೆರೆಗಳನ್ನು ಎಳೆಯಲಾಗಿದೆ. ಕಣ್ಣುಗಳು ಹಾಗೂ ತಲೆಗೂದಲುಗಳಿಗೆ ಕಪ್ಪು ವರ್ಣವನ್ನು ಬಳಸಿದ್ದಾರೆ. ಎಲ್ಲ ಶಿಲ್ಪಗಳ ಪ್ರಭಾವಳಿ ಸಹಿತವಾಗಿ ರಚನೆಗೊಂಡ ಪೀಠದ ಮಧ್ಯಭಾಗದಲ್ಲಿ ಕೆಂಪು ಮಿಶ್ರಿತ ಕಂದು ಬಣ್ಣವನ್ನು ಲೇಪಿಸಲಾಗಿದೆ.

ಉತ್ತರ ಕರ್ನಾಟಕದ ಹಲವು ಜಿಲ್ಲೆಗಳಲ್ಲಿರುವ ರಥಗಳ ಗಡ್ಡೆಯ ಭಾಗಗಳಲ್ಲಿ ಮಹಾತ್ಮರ ಶಿಲ್ಪಗಳು ಕಂಡುಬರುತ್ತವೆ. ಆದರೆ ಎಲ್ಲ ಶಿಲ್ಪಗಳೂ ವರ್ಣವಿನ್ಯಾಸವನ್ನು ಹೊಂದದೆ ಬೆಳಗಾವಿ, ಗದಗ, ಬಾಗಲಕೋಟೆ ಜಿಲ್ಲೆಯ ಕೆಲವು ರಥಗಳ ಇಂತಹ ಶಿಲ್ಪವಿನ್ಯಾಸಗಳಲ್ಲಿ ಮಾತ್ರ ವರ್ಣಗಾರಿಕೆಯನ್ನು ಕಾಣಬಹುದಾಗಿದೆ.

iii. ಪ್ರಾಣಿ ಪಕ್ಷಿಗಳ ಶಿಲ್ಪವಿನ್ಯಾಸಗಳಲ್ಲಿ ವರ್ಣಗಾರಿಕೆ :

ಬಾಗಲಕೋಟೆ ಜಿಲ್ಲೆಯ ಹುನಗುಂದದ ಬಸವೇಶ್ವರ ದೇವಸ್ಥಾನದ ರಥದ ಗಡ್ಡೆಯ ಭಾಗದಲ್ಲಿ ಆನೆ, ಸಿಂಹ ಹಾಗೂ ಮಂಗಗಳ ಶಿಲ್ಪಗಳಿಗೆ ವರ್ಣಲೇಪನ ಮಾಡಲಾಗಿದೆ. ಅಷ್ಟಭುಜಾಕೃತಿಯಲ್ಲಿ ರಚನೆಗೊಂಡ ರಥದ ಗಡ್ಡಿ ಭಾಗದ ಕೆಳಗಡೆಯ ಪಟ್ಟಿಕೆಯ ನಾಲ್ಕು ಭುಜಗಳಲ್ಲಿ, ಹೂ ಕುಂಡಲವನ್ನು ಎತ್ತಿಹಿಡಿದಿರುವ ಎಂಟು ಆನೆಯ ಶಿಲ್ಪಗಳನ್ನು ಕಾಣಬಹುದು. ಆನೆ ಶಿಲ್ಪಗಳ ಸೊಂಡಿಲು, ಮುಖ, ಕಾಲುಗಳಿಗೆ ಬೂದು ಬಣ್ಣ (ಗ್ರೇ ಕಲರ್) ವನ್ನು ಬಳಿದು ಕಣ್ಣುಗಳಿಗೆ ಹಾಗೂ

ಕಿವಿಯ ಮೇಲ್ಭಾಗದಲ್ಲಿ ಮಾತ್ರ ಕಪ್ಪು ವರ್ಣಲೇಪನ ಮಾಡಲಾಗಿದೆ. ದಂತಗಳಿಗೆ ಹಾಗೂ ಕಾಲುಗಳಲ್ಲಿಯ ಉಗುರುಗಳ ವಿನ್ಯಾಸಕ್ಕೆ ಬಿಳಿಯ ಬಣ್ಣವನ್ನು ಲೇಪಿಸಲಾಗಿದೆ.

ರಥದ ಎಂಟು ಭುಜಗಳಲ್ಲಿ ಕಂಡುಬರುವ ಸಿಂಹದ ಶಿಲ್ಪಗಳ ಕೆಲವೊಂದು ಭಾಗಗಳಲ್ಲಿ ಮಾತ್ರ ವರ್ಣಲೇಪನವನ್ನು ಕಾಣಬಹುದು. ಸಿಂಹಶಿಲ್ಪಗಳ ಬಾಯಿಯ ಒಳಗಡೆಯ ಭಾಗದಲ್ಲಿ ಕೆಂಪು ಹಾಗೂ ದಂತಗಳಿಗೆ ಬಿಳಿಯ ಬಣ್ಣವನ್ನು ಹಚ್ಚಲಾಗಿದೆ. ಕಾಲುಗಳ ಉಗುರುಗಳಿಗೂ ಸಹ ಬಿಳಿಯ ಬಣ್ಣವನ್ನು ಲೇಪಿಸಲಾಗಿದೆ. ಕಣ್ಣುಗಳ ಹಾಗೂ ಕೇಸರಗಳ ಭಾಗಗಳಲ್ಲಿ ಅಲ್ಲಲ್ಲಿ ಕಪ್ಪು ಬಣ್ಣದ ಗೆರೆಗಳನ್ನು ಹಾಕಲಾಗಿದೆ.

ರಥದ ಅಧಿಷ್ಠಾನ ಭಾಗದ ಪ್ರಾರಂಭಿಕ ಭಾಗದ ಚತುರ್ಭುಜಾಕೃತಿಯ ನಾಲ್ಕು ಮೂಲೆಗಳ ಮೇಲೆ ವಿವಿಧ ಭಂಗಿಗಳ ಮಂಗಗಳನ್ನು ಕಾಣಬಹುದು. ರಥದ ಮುಂಬದಿ ಹಾಗೂ ಹಿಂಬದಿಯಲ್ಲಿ ಎರಡು ಮಂಗಗಳ ಶಿಲ್ಪಗಳಿವೆ. ಎಲ್ಲ ಶಿಲ್ಪಗಳಿಗೂ ಮುಖ, ಮೈ, ಕೈ ಹಾಗೂ ಕಾಲುಗಳಿಗೆ ಬೂದು ಬಣ್ಣವನ್ನು ಬಳಿಯಲಾಗಿದೆ. ಕಣ್ಣುಗಳು ಹಾಗೂ ಮೂಗಿನ ಹತ್ತಿರ ಕಪ್ಪು ವರ್ಣದಿಂದ ಗೆರೆಗಳನ್ನು ಎಳೆಯಲಾಗಿದೆ. ಪ್ರತಿಯೊಂದು ಮಂಗನ ಶಿಲ್ಪದ ಕೆಳಗಡೆಗೆ ಕಂಡುಬರುವಂತಹ ಪೀಠದ ರಚನೆಗೆ ಹಳದಿ ಬಣ್ಣವನ್ನು ಲೇಪಿಸಲಾಗಿದೆ. ಮಂಗನ ಶಿಲ್ಪದ ಬಾಯಿಯ ಒಳಗಿನ ಭಾಗದಲ್ಲಿ ಕೆಂಪು ಹಾಗೂ ಹಲ್ಲುಗಳಿಗೆ ಮತ್ತು ಉಗುರುಗಳಿಗೆ ಬಿಳಿಯ ಬಣ್ಣವನ್ನು ಲೇಪಿಸಿದೆ. ಮಂಗಗಳು ಹಣ್ಣುಗಳನ್ನು ಕೈಯಲ್ಲಿ ಹಿಡಿದಿರುವ ಹಾಗೆ ರಚನೆಗೊಂಡಿವೆ. ಮಾವಿನ ಹಣ್ಣುಗಳಿಗೆ ಹಳದಿ, ಬಾಳೆಹಣ್ಣು ಹಾಗೂ ಮೋಸಂಬಿ ಹಣ್ಣಿನಾಕಾರದ ಶಿಲ್ಪವಿನ್ಯಾಸಗಳಿಗೆ ಹಸಿರು ಮಿಶ್ರಿತ ಹಳದಿವರ್ಣವನ್ನು ಲೇಪಿಸಲಾಗಿದೆ. ದ್ರಾಕ್ಷಿಹಣ್ಣಿನ ಶಿಲ್ಪವಿನ್ಯಾಸಗಳಿಗೆ ಹಳದಿ ಮಿಶ್ರಿತ ಹಸಿರು ಹಾಗೂ ಎಲೆಗಳಿಗೆ ಹಸಿರು ಬಣ್ಣವನ್ನು ಉಪಯೋಗಿಸಲಾಗಿದೆ. ಈ ರಥದ ಪ್ರಾಣಿಶಿಲ್ಪಗಳು ವರ್ಣಗಾರಿಕೆಯಿಂದ ಬಹಳ ಸುಂದರವಾಗಿ ಕಂಡುಬರುತ್ತವೆ.

ಬಾಗಲಕೋಟೆ ಜಿಲ್ಲೆಯ ಬಸವೇಶ್ವರ ದೇವಸ್ಥಾನದ ರಥದಲ್ಲಿಯೂ ಗಡ್ಡೆಯ ಭಾಗದಲ್ಲಿ ಸಿಂಹ ಹಾಗೂ ಮಂಗಗಳ ಶಿಲ್ಪಗಳಿಗೆ ವರ್ಣಗಾರಿಕೆ ಮಾಡಿರುವುದನ್ನು ಕಾಣಬಹುದು. ಸಿಂಹಗಳ ಶಿಲ್ಪಗಳು ವರ್ಣಲೇಪನದಲ್ಲಿ ಹುನಗುಂದದ ಬಸವೇಶ್ವರ ದೇವಸ್ಥಾನದ ರಥದ ಸಿಂಹಗಳ ಶಿಲ್ಪಗಳನ್ನೇ ಹೋಲುತ್ತವೆ . ಆದರೆ ಮಂಗಗಳ ವರ್ಣಗಾರಿಕೆಯಲ್ಲಿ ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಮಂಗಗಳ ಮುಖ, ಮೈ, ಕೈ ಹಾಗೂ ಕಾಲುಗಳಿಗೆ ಯಾವುದೇ ವರ್ಣಲೇಪನವನ್ನು ಮಾಡಿಲ್ಲ. ಆದರೆ ಉಗುರುಗಳಿಗೆ ಹಾಗೂ ಹಲ್ಲುಗಳಿಗೆ ಬಿಳಿಯ ಬಣ್ಣ ಹಚ್ಚಿರುವುದನ್ನು ಕಾಣಬಹುದು. ಕಣ್ಣುಗಳು ಹಾಗೂ ತಲೆಯ ಮೇಲೆ ಕೂದಲುಗಳಂತೆ ಕಾಣುವ ಗೆರೆಗಳಂತಹ ವಿನ್ಯಾಸಗಳಿಗೆ ಕಪ್ಪು ವರ್ಣವನ್ನು ಬಳಸಿರುವರು. ಮಂಗನ ಶಿಲ್ಪಗಳಲ್ಲಿ ಗಂಡುಮಂಗ ಹಾಗೂ ಹೆಣ್ಣುಮಂಗಗಳ ಶಿಲ್ಪಗಳಿದ್ದು ಅವುಗಳ ಜನನೇಂದ್ರಿಯಗಳಿಗೆ ಕೆಂಪು ವರ್ಣವನ್ನು ಬಳಸಲಾಗಿದೆ.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೇಶ್ವರ ಸಂಸ್ಥಾನಮಠದ ರಥದ ಅಧಿಷ್ಠಾನ ಭಾಗದಲ್ಲಿ ಆನೆ, ಸಿಂಹ ಹಾಗೂ ನವಿಲುಗಳಂತಹ ಪ್ರಾಣಿಪಕ್ಷಿಗಳ ಶಿಲ್ಪಗಳಲ್ಲಿ ವರ್ಣಗಾರಿಕೆಯನ್ನು ಕಾಣಬಹುದು. ಅಷ್ಟಭುಜಾಕೃತಿಯಲ್ಲಿ ರಚನೆಗೊಂಡ ಅಧಿಷ್ಠಾನ ಭಾಗದ ಎಂಟು ಭುಜಗಳಲ್ಲಿ ಆನೆ ಹಾಗೂ ಸಿಂಹಗಳ ಶಿಲ್ಪಗಳನ್ನು ಕಾಣಬಹುದು. ಆನೆಗಳ ಶಿಲ್ಪಗಳ ಕಿವಿಯ

ಮೇಲ್ಭಾಗದಲ್ಲಿ ಹಾಗೂ ಕೊರಳಲ್ಲಿ ರಚಿತವಾದ ಆಭರಣಗಳ ವಿನ್ಯಾಸಕ್ಕೆ ಹಳದಿ ಹಾಗೂ ಬಂಗಾರವರ್ಣಗಳನ್ನು ಲೇಪಿಸಿ, ತಲೆಯ ಮೇಲೆ ಹೊದಿಕೆಯಂತಿರುವ ಉಬ್ಬುಶಿಲ್ಪದ ವಿನ್ಯಾಸಕ್ಕೆ ಕೆಂಪು ಮಿಶ್ರಿತ ಕಂದು ವರ್ಣವನ್ನು ಬಳಸಲಾಗಿದೆ. ಸಿಂಹದ ಶಿಲ್ಪದ ಕಣ್ಣಿನ ಭಾಗದ ಒಳಗಡೆ ಹಾಗೂ ದಂತಗಳಿಗೆ, ಉಗುರುಗಳಿಗೆ ಹಾಗೂ ಆನೆ ಶಿಲ್ಪದ ದಂತಗಳ ವಿನ್ಯಾಸಗಳಿಗೆ ಬಿಳಿಯ ಬಣ್ಣವನ್ನು ಲೇಪಿಸಲಾಗಿದೆ. ಸಿಂಹಗಳ ಬಾಯಿಯಿಂದ ಪ್ರಾರಂಭಗೊಂಡು, ಮೇಲೆತ್ತಿದ ಮುಂದಿನ ಎರಡೂ ಕಾಲುಗಳ ಮಧ್ಯದವರೆಗೆ ರಚನೆಗೊಂಡು ಕುದುರೆಯ ಬಾಲದಂತಹ ಶಿಲ್ಪವಿನ್ಯಾಸಕ್ಕೆ ಹಳದಿ ಮಿಶ್ರಿತ ಬಂಗಾರ ವರ್ಣವನ್ನು ಲೇಪಿಸಲಾಗಿದೆ.

ಪ್ರಾಣಿಶಿಲ್ಪಗಳಲ್ಲದೇ ಅಧಿಷ್ಠಾನದ ಮಧ್ಯಭಾಗದಿಂದ ಸ್ವಲ್ಪ ಮೇಲೆ ನವಿಲುಗಳ ಉಬ್ಬುಶಿಲ್ಪಗಳ ವಿನ್ಯಾಸಗಳಿಗೆ ನೇರಳೆ, ಹಸಿರು ಹಾಗೂ ಕೆಂಪು ವರ್ಣಗಳನ್ನು ಬಳಸಲಾಗಿದೆ. ಕಣ್ಣುಗಳು ಹಾಗೂ ಕಾಲುಗಳ ಭಾಗಗಳಲ್ಲಿ ಕಪ್ಪು ವರ್ಣದಿಂದ ಗೆರೆಗಳನ್ನು ಹಾಕಲಾಗಿದೆ.

ಗದಗ ಜಿಲ್ಲೆಯ ಚಿಂಚಲಿಯ ಬಸವೇಶ್ವರ ದೇವಸ್ಥಾನದ ರಥದ ಅಧಿಷ್ಠಾನ ಭಾಗದ ಪ್ರಾಣಿ-ಪಕ್ಷಿಗಳ ಶಿಲ್ಪಗಳು ಇಂಚಲದ ರಥದಂತೆಯೇ ಕಂಡು ಬರುತ್ತವೆ. ಆನೆಗಳ ಶಿಲ್ಪಗಳ ತಲೆಯ ಭಾಗದ ಮೇಲಿನ ಹಾಗೂ ಕೊರಳಲ್ಲಿಯ ಆಭರಣಗಳ ವಿನ್ಯಾಸಗಳಿಗೆ ಹಳದಿವರ್ಣ ಮಿಶ್ರಿತ ಬಂಗಾರ ವರ್ಣವನ್ನು ಲೇಪಿಸಲಾಗಿದೆ. ಸಿಂಹಗಳ ಕೇಸರಗಳ ವಿನ್ಯಾಸಗಳಿಗೆ ಬಂಗಾರವರ್ಣ ಹಾಗೂ ಕಪ್ಪು ಗೆರೆಗಳಿಂದ ಅಲಂಕಾರಗೊಳಿಸಲಾಗಿದೆ. ಆದರೆ ಈ ರಥದಲ್ಲಿ ಪ್ರಾಣಿ ಪಕ್ಷಿಗಳ ಮಿಶ್ರಶಿಲ್ಪಗಳು ಅಂದರೆ ಆನೆಯ ಮುಖ, ಗಿಳಿಯ ದೇಹ, ನವಿಲಿನ ರೆಕ್ಕೆ ಹಾಗೂ ಹೆಣ್ಣಿನ ಮುಖ, ಹಸುವಿನ ದೇಹ, ಪಕ್ಷಿಗಳ ರೆಕ್ಕೆಗಳು (ಕಾಮಧೇನು) ಇಂತಹ ಶಿಲ್ಪಗಳಿಗೆ, ಆಭರಣಗಳಂತಹ ವಿನ್ಯಾಸಗಳಿಗೆ ಬಂಗಾರವರ್ಣ, ಕಣ್ಣುಗಳಿಗೆ ಕಪ್ಪು ಹಾಗೂ ಅಲ್ಲಲ್ಲಿ ಕೆಂಪು ಹಾಗೂ ನೇರಳೆ ಬಣ್ಣವನ್ನು ಲೇಪಿಸಲಾಗಿದೆ.

ಕೊಪ್ಪಳ ಜಿಲ್ಲೆಯ ಹುಲುಗಿಯ ಹುಲಿಗೆಮ್ಮ ದೇವಸ್ಥಾನದ ರಥದ ಗಡ್ಡೆಯ ಭಾಗದಲ್ಲಿರುವ ಸಿಂಹಗಳ ಶಿಲ್ಪಗಳಲ್ಲಿ ಕೆಲವು ಭಾಗಗಳಲ್ಲಿ ವರ್ಣವಿನ್ಯಾಸವನ್ನು ಕಾಣಬಹುದು. ಮುಂದಿನ ಎರಡೂ ಕಾಲುಗಳನ್ನು ಮೇಲಕ್ಕೆ ಮಾಡಿ ಹಾರಿದಂತೆ ಕಾಣುವ ಸಿಂಹದ ಶಿಲ್ಪಗಳ ಬಾಯಿಯ ಒಳಗಡೆಯ ಭಾಗದಲ್ಲಿ ಕೆಂಪುವರ್ಣ, ದಂತಗಳು ಹಾಗೂ ಉಗುರುಗಳಿಗೆ ಬಿಳಿಯ ವರ್ಣವನ್ನು ಲೇಪಿಸಿ, ಕಣ್ಣುಗಳಿಗೆ ಕಪ್ಪುವರ್ಣವನ್ನು ಬಳಸಿರುವುದು ಕಂಡುಬರುವುದು.

ಇದೇ ರೀತಿಯ ಶಿಲ್ಪವಿನ್ಯಾಸ ಹಾಗೂ ವರ್ಣಗಾರಿಕೆ ಇರುವ ರಥವನ್ನು ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ದೇವಸ್ಥಾನದಲ್ಲಿ ಕಾಣಬಹುದು.


ಬಾಗಲಕೋಟೆ ಜಿಲ್ಲೆ ಬದಾಮಿ ತಾಲೂಕಿನ ಕೆರೂರು ರಾಯಚೋಟೇಶ್ವರ ದೇವಸ್ಥಾನದ ರಥ ಹಾಗೂ ರಾಯಚೂರು ಜಿಲ್ಲೆ ಕಲ್ಮಲದ ಕರೆಪ್ಪ ತಾತನವರ ರಥದಲ್ಲಿ ಕೊಪ್ಪಳದ ಹುಲುಗಿಯ ಹುಲಿಗೆಮ್ಮ ದೇವಸ್ಥಾನದ ರಥದ ಪ್ರಾಣಿಶಿಲ್ಪಗಳಂತೆಯೇ ವರ್ಣಗಾರಿಕೆ ಇರುವುದು ಕಂಡುಬರುತ್ತದೆ. ಆದರೆ ಈ ರಥಗಳ ಗಿಳಿ ಹಾಗೂ ನವಿಲುಗಳಂತಹ ಶಿಲ್ಪವಿನ್ಯಾಸಗಳಿಗೆ ಹಸಿರು ಕೆಂಪು ಹಾಗೂ ನೇರಳೆ ವರ್ಣಗಳನ್ನು ಬಳಸಲಾಗಿದೆ. ಎಲ್ಲ ಶಿಲ್ಪಗಳ ಕಣ್ಣಿನ ಭಾಗಗಳಲ್ಲಿ ಕಪ್ಪು ವರ್ಣಗಳಿಂದ ಗೆರೆಗಳನ್ನು ಹಾಕಲಾಗಿದೆ.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಸವೇಶ್ವರ ದೇವಸ್ಥಾನದ ರಥ ಹಾಗೂ ಇದೇ ತಾಲೂಕಿನ ಜಾಯವಾಡಲಗಿಯ ಸೋಮನಾಥೇಶ್ವರ ರಥದ ಅಧಿಷ್ಠಾನ ಭಾಗದ ಪ್ರಾಣಿಶಿಲ್ಪಗಳು ಕೆರೂರಿನ ರಾಯಚೂರೇಶ್ವರ ರಥದ ಶಿಲ್ಪವಿನ್ಯಾಸಗಳಂತೆಯೇ ಇವೆ. ಇವುಗಳಲ್ಲಿಯ ವರ್ಣಗಾರಿಕೆ ಸಾಮಾನ್ಯವಾಗಿ ಎಲ್ಲ ರಥಗಳಲ್ಲಿನ ಶಿಲ್ಪವಿನ್ಯಾಸಗಳಂತೆ ಕಪ್ಪು, ಕೆಂಪು ಹಾಗೂ ಕಂದು ವರ್ಣಗಳನ್ನು ಮೈಗೂಡಿಸಿಕೊಂಡಿವೆ. ಕೊಪ್ಪಳದ ಗವಿಸಿದ್ದೇಶ್ವರ ಮಠದ ರಥ, ಬಾಗಲಕೋಟೆ ಜಿಲ್ಲೆಯ ಶಿರೂರು ಸಿದ್ದೇಶ್ವರ ದೇವಸ್ಥಾನದ ರಥಗಳಲ್ಲಿಯೂ ಇದೇ ತೆರನಾದ ಸ್ವಲ್ಪ ಪ್ರಮಾಣದ ವರ್ಣವಿನ್ಯಾಸವನ್ನು ಕಾಣಬಹುದು.

ಬೆಳಗಾಂವ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥದಲ್ಲಿ ಪ್ರಾಣಿಶಿಲ್ಪಗಳ ವರ್ಣವಿನ್ಯಾಸವು ವಿಭಿನ್ನ ರೀತಿಯಿಂದ ಕೂಡಿದೆ. ಅಷ್ಟಭುಜಾಕೃತಿಯಲ್ಲಿ ರಚನೆಗೊಂಡ ರಥದ ಅಧಿಷ್ಠಾನ ಭಾಗವು ಆನೆ, ಸಿಂಹಗಳ ಮುಖದ ಉಬ್ಬುಶಿಲ್ಪಗಳಿಗೆ ಹಾಗೂ ಸರ್ಪಗಳ ಶಿಲ್ಪವಿನ್ಯಾಸಗಳಿಗೆ ಸುಂದರವಾದ ವರ್ಣಗಾರಿಕೆಯನ್ನು ಹೊಂದದೆ ಬಾಗಲಕೋಟೆ ಜಿಲ್ಲೆಯ ಹುನಗುಂದ ರಥದ ಮಂಗನ ಶಿಲ್ಪಗಳಂತೆ ಈ ರಥದ ಆನೆಯ ಶಿಲ್ಪಗಳಿಗೆ ಕಪ್ಪು ವರ್ಣದಿಂದ ಗೆರೆಗಳನ್ನು ಎಳೆಯಲಾಗಿದೆ. ಬಾಯಿ ಹಾಗೂ ಕಿವಿಯ ಕೆಲವು ಭಾಗಗಳಲ್ಲಿ ಕೆಂಪುವರ್ಣವನ್ನು ಬಳಸಲಾಗಿದೆ. ಆನೆಯ ಶಿಲ್ಪಗಳಲ್ಲಿ ಈ ರೀತಿಯ ವರ್ಣಗಾರಿಕೆ ಇರುವುದು ವಿಶೇಷವೆನಿಸುತ್ತದೆ.

ಕೀರ್ತಿ ಮುಖದಂತೆ ಕಾಣುವ ಸಿಂಹಗಳ ಶಿಲ್ಪವಿನ್ಯಾಸಗಳಿಗೆ ಹಳದಿ ಬಣ್ಣವನ್ನು ಲೇಪಿಸಿ, ಕಿವಿಗಳಿಗೆ ಕಪ್ಪು ಹಾಗೂ ನಾಲಿಗೆಗೆ ಕೆಂಪು ವರ್ಣವನ್ನು ಹಚ್ಚಲಾಗಿದೆ. ಕಣ್ಣುಗಳಿಗೆ ಕಪ್ಪು ವರ್ಣವಿದೆ. ದಂತಗಳು ಹಾಗೂ ಕಣ್ಣುಗಳ ಕೆಲವು ಭಾಗಗಳಲ್ಲಿ ಬಿಳಿಯ ಬಣ್ಣವನ್ನು ಲೇಪಿಸಲಾಗಿದೆ. ಅಧಿಷ್ಠಾನದ ಮಧ್ಯಭಾಗದಿಂದ ಸ್ವಲ್ಪ ಮೇಲ್ಭಾಗದಲ್ಲಿ ಅಷ್ಟಭುಜಾಕೃತಿಗಳಲ್ಲಿ ಕಾಣುವ ಎಂಟು ನಾಗಸರ್ಪದ ಹೆಡೆಯಾಕಾರದ ವಿನ್ಯಾಸಗಳು ವರ್ಣಲೇಪಿತಗೊಂಡಿವೆ. ಹೆಡೆಯಾಕಾರದ ವಿನ್ಯಾಸಗಳ ಮಧ್ಯದಲ್ಲಿ ಉದ್ದ ಹಾಗೂ ಅಡ್ಡವಾಗಿ ಎಳೆದ ಕಪ್ಪು ರೇಖೆಗಳಿವೆ. ಕಣ್ಣುಗಳಿಗೆ ಕಪ್ಪು ವರ್ಣವನ್ನು ಬಳಸಿ, ತೆರೆದ ಹೆಡೆಯಾಕಾರದ ವಿನ್ಯಾಸಗಳಿಗೆ ಕಂದು ವರ್ಣದ ದುಂಡನೆಯ ಚುಕ್ಕೆಗಳನ್ನಿಡಲಾಗಿದೆ.


ಕುಕ್ಕೆ ಸುಬ್ರಮಣ್ಯಂ ದೇವಸ್ಥಾನದ ರಥದ ಅಧಿಷ್ಠಾನ ಭಾಗದ ಕೆಳಭಾಗದಲ್ಲಿ ನಾಲ್ಕು ಹಾಗೂ ಮೇಲ್ಭಾಗದಲ್ಲಿ ಹನ್ನೆರಡು ಸಿಂಹಗಳ ಶಿಲ್ಪಗಳನ್ನು ಕಾಣಬಹುದು. ಎಲ್ಲ ಶಿಲ್ಪಗಳೂ ಸುಂದರವಾದ ಹಾಗೂ ವಿಶೇಷವಾದ ವರ್ಣಗಾರಿಕೆಯಿಂದ ಬಹಳ ಕಲಾತ್ಮಕವಾಗಿ ಕಂಡುಬರುತ್ತವೆ. ಮುಂದಿನ ಎರಡು ಕಾಲುಗಳನ್ನು ಮೇಲೆತ್ತಿ ನಿಂತಿರುವ ಸಿಂಹಗಳ ಶಿಲ್ಪಗಳಿಗೆ ಮುಖ, ಕಾಲುಗಳು ಹಾಗೂ ಬೆನ್ನಿನ ಭಾಗಗಳಲ್ಲಿ ಬಿಳಿ ಹಾಗೂ ಕೇಸರಿ ಮಿಶ್ರಿತ ಹಳದಿ ಬಣ್ಣವನ್ನು ಹಚ್ಚಲಾಗಿದೆ. ಕಣ್ಣು, ಮೀಸೆ ಹಾಗೂ ಬಾಲಗಳ ತುದಿಯ ಭಾಗಗಳಲ್ಲಿ ಕಪ್ಪು ವರ್ಣವಿರುವದು. ಕಣ್ಣುಗಳ ಒಳಭಾಗ, ದಂತಗಳು ಹಾಗೂ ಹೊಟ್ಟೆಯ ಭಾಗಗಳಿಗೆ ಬಿಳಿಯ ವರ್ಣಲೇಪನ ಮಾಡಲಾಗಿದೆ. ಮುಖದ ಸುತ್ತಲೂ, ಬಾಯಿ ಹಾಗೂ ಪ್ರತಿಯೊಂದು ಕಾಲುಗಳ ಹಿಂಬದಿಯಲ್ಲಿ ಅಲ್ಲಲ್ಲಿ ಕೆಂಪು ವರ್ಣಲೇಪನ ಮಾಡಿರುವರು.ಬಾಯಿಯಿಂದ ಹೊಟ್ಟೆಯ ಭಾಗಕ್ಕೆ ಹತ್ತಿಕೊಂಡು, ಕಾಲುಗಳ ಭಾಗದವರೆಗೆ ಬಳೆದಿರುವ ನಾಲಿಗೆಯ ವಿನ್ಯಾಸಕ್ಕೆ ಕೆಂಪು, ಬಿಳಿ ಹಾಗೂ ಹಸಿರು ವರ್ಣದಿಂದ ಕೂಡಿದ ಸುಂದರ ವರ್ಣಗಾರಿಕೆಯನ್ನು ಕಾಣಬಹುದು. ಹಣೆಯ ಮುಂಭಾಗ ಹಾಗೂ ಕೇಸರಗಳ ಗುಂಗುರಾಕಾರದ



ಶ್ರೀ ವೀರಭದ್ರ ರಥ
ಹುನಗುಂದ, ಜಿ - ಬಾಗಲಕೋಟ



ಶ್ರೀ ಸುಬ್ರಹ್ಮಣ್ಯ ರಥ
ನಂಜನಗೂಡು



ಶ್ರೀ ಸುಬ್ರಹ್ಮಣ್ಯ ರಥ
ಕುಕ್ಕೆ ಸುಬ್ರಹ್ಮಣ್ಯ



ಶ್ರೀ ರಾಮಾಂಜನೇಯ ರಥದ ಬಿಡಿ ಶಿಲ್ಪಗಳು, ಮರೇಮ್ಮನಹಳ್ಳಿ, ಜಿ - ಬಳ್ಳಾರಿ



ಶ್ರೀ ಶಂಕರಲಿಂಗನ ರಥ ಸಂಕೇಶ್ವರ, ಜಿ - ಬೆಳಗಾಂವ

ವಿನ್ಯಾಸದ ಉಬ್ಬುಶಿಲ್ಪಗಳಿಗೆ ಬಂಗಾರವರ್ಣ ಮಿಶ್ರಿತ ಕಂದು ವರ್ಣಗಾರಿಕೆಯನ್ನು ನೋಡಬಹುದು.

ಅಧಿಷ್ಠಾನ ಭಾಗದಲ್ಲಿ ಸಿಂಹಗಳ ಶಿಲ್ಪಗಳಲ್ಲದೆ ಹೆಡೆಬಿಚ್ಚಿದ ಸರ್ಪಗಳ ಹಾಗೂ ಹಸುಗಳ ಶಿಲ್ಪಗಳಿಗೆ ವರ್ಣಲೇಪನ ಮಾಡಲಾಗಿದೆ. ಹೆಡೆಬಿಚ್ಚಿದ ಸರ್ಪಗಳ ಮೇಲ್ಭಾಗಕ್ಕೆ ಹಳದಿ ವರ್ಣವನ್ನು ಲೇಪಿಸಿ, ಕಂದು ವರ್ಣದ ದುಂಡನೆಯ ಚುಕ್ಕೆಗಳನ್ನಿಡಲಾಗಿದೆ. ಸರ್ಪದ ಹೆಡೆಯಾಕಾರದ ಒಳಭಾಗಗಳಲ್ಲಿ

iv. ನಕ್ಷಾ ಶಿಲ್ಪಗಳಲ್ಲಿ ವರ್ಣವಿನ್ಯಾಸ : ಅಧಿಷ್ಠಾನ ಭಾಗದ ನಕ್ಷಾ ಶಿಲ್ಪಗಳಲ್ಲಿ ವರ್ಣಗಾರಿಕೆಯನ್ನು ಕಾಣಬಹುದು.

ಬಾಗಲಕೋಟೆ ಜಿಲ್ಲೆ ಶಿರೂರು ಸಿದ್ಧೇಶ್ವರ ದೇವಸ್ಥಾನದ ರಥದಲ್ಲಿ ಅಧಿಷ್ಠಾನ ಭಾಗದಲ್ಲಿ ಅಲ್ಲಲ್ಲಿ ವರ್ಣಗಾರಿಕೆಯನ್ನು ಕಾಣಬಹುದು. ಗಡ್ಡೆಯ ಕೆಳಭಾಗದ ಆರಂಭಿಕ ಹಂತದಲ್ಲಿರುವ ಕಮಲದ ಹೂವಿನ ಎಸಳುಗಳಂತಿರುವ ಉಬ್ಬುಶಿಲ್ಪಗಳಲ್ಲಿ ವಿವಿಧ ರೀತಿಯ ವರ್ಣವಿನ್ಯಾಸವನ್ನು ಕಾಣಬಹುದು. ಕಮಲದ ಎಸಳುಗಳ ಮಧ್ಯಭಾಗದಲ್ಲಿ ಕೆಂಪು ಬಣ್ಣ ಹಾಗೂಎಸಳುಗಳ ಅಂಚಿನಲ್ಲಿ ಕಪ್ಪು ಬಣ್ಣದಿಂದ ಸಣ್ಣ ಸಣ್ಣ ಗೆರೆಗಳನ್ನು ಎಳೆಯಲಾಗಿದೆ. ಇದಲ್ಲದೆ ಅಧಿಷ್ಠಾನದ ಮಧ್ಯಭಾಗದಲ್ಲಿ ಕಾಣುವ ಎಲೆ ಹಾಗೂ ಹೂ-ಹಣ್ಣುಗಳಾಕಾರದ ಉಬ್ಬುಶಿಲ್ಪಗಳಿಗೆ ಹಸಿರು, ಹಳದಿ ಹಾಗೂ ಕೇಸರಿಮಿಶ್ರಿತ ಹಳದಿ ಬಣ್ಣವನ್ನು ಲೇಪಿಸಲಾಗಿದೆ.

ಇದೇ ರೀತಿಯ ವರ್ಣ ವಿನ್ಯಾಸವನ್ನು ಬಾಗಲಕೋಟೆ ಜಿಲ್ಲೆಯ ಮುಚಖಂಡಿಯ ವೀರಭದ್ರೇಶ್ವರ ದೇವಸ್ಥಾನದ ರಥದಲ್ಲಿ ಕಾಣಬಹುದು. ಈ ರಥದ ಗಡ್ಡೆಯ ಮಧ್ಯಭಾಗದಲ್ಲಿ ಬರುವಂತಹ ಸುರುಳಿಯಾಕಾರದ ನಕ್ಷೆಗಳಿಗೆ ಬಂಗಾರವರ್ಣ ಹಾಗೂ ಕಪ್ಪುವರ್ಣಗಳಿಂದ ಗೆರೆಗಳನ್ನು ಎಳೆಯಲಾಗಿದೆ. ಇದಲ್ಲದೆ ಪ್ರತಿಯೊಂದು ಶಿಲ್ಪವಿನ್ಯಾಸಗಳ ಪಕ್ಕದಲ್ಲಿ ಕಾಣುವಂತಹ ಅನೇಕ ಹೂವು ಹಾಗೂ ಎಲೆಯಾಕಾರದ ಉಬ್ಬುಶಿಲ್ಪಗಳಿಗೆ ಅಲ್ಲಲ್ಲಿ ಹಸಿರು ಹಾಗೂ ಹಳದಿ ವರ್ಣಲೇಪನವನ್ನು ಮಾಡಲಾಗಿದೆ. ಅಲ್ಲದೆ ಮುರುಗೆಯಾಕಾರದ ನಕ್ಷೆಗಳಿಗೆ ಸಿಲ್ವರ್ ಕಲರನ್ನು ಕೊಡಲಾಗಿದೆ.

ಇದೇ ಜಿಲ್ಲೆಯ ಹುನಗುಂದ ತಾಲೂಕಿನ ವೀರಭದ್ರೇಶ್ವರ ದೇವಸ್ಥಾನದಲ್ಲಿರುವ ರಥದ ಅಧಿಷ್ಠಾನ ಭಾಗದ ಕೆಲವು ನಕ್ಷೆಗಳಲ್ಲಿ ವರ್ಣಲೇಪನವನ್ನು ಕಾಣಬಹುದು. ಅಧಿಷ್ಠಾನ ಭಾಗದ ಮಧ್ಯಪಟ್ಟಿಕೆಗಳಲ್ಲಿ ಮೇಲಿನಿಂದ ಅನುಕ್ರಮವಾಗಿ ಮೂರನೇ ಪಟ್ಟಿಕೆಯಲ್ಲಿ ಅರಳಿದ ಹೂವು ಹಾಗೂ ಅದರ ಸುತ್ತಲೂ ಹರಡಿದ ಅನೇಕ ಎಲೆಗಳಂತಹ ವಿನ್ಯಾಸವನ್ನು ಹೊಂದಿದ ಉಬ್ಬುಶಿಲ್ಪಗಳಲ್ಲಿ ಸುಂದರವಾದ ವರ್ಣವಿನ್ಯಾಸವನ್ನು ಕಾಣಬಹುದು. ಅರಳಿದ ಹೂವಿನಂತಹ ವಿನ್ಯಾಸದ ಮಧ್ಯದಲ್ಲಿ ಕೆಂಪುವರ್ಣ ಹಾಗೂ ದಳಗಳಂತೆ ಕಾಣುವ ವಿನ್ಯಾಸಗಳಿಗೆ ಗುಲಾಬಿ ಬಣ್ಣವನ್ನು ಲೇಪಿಸಲಾಗಿದೆ. ಇದಲ್ಲದೆ ಪ್ರತಿಯೊಂದು ದಳದ ಅಂಚಿನಲ್ಲಿ ಕಡುಗೆಂಪು ವರ್ಣದಿಂದ ಗೆರೆ ಹಾಕಲಾಗಿದೆ. ಎಲೆಯಾಕಾರದ ಕೆಲವು ವಿನ್ಯಾಸಗಳಿಗೆ ಹಸಿರು ಹಾಗೂ ಕಂದು ಮಿಶ್ರಿತ ಹಸಿರು ಬಣ್ಣವನ್ನು ಲೇಪಿಸಲಾಗಿದೆ. ಪ್ರತಿಯೊಂದು ಭುಜದಲ್ಲಿ ಕಾಣುವಂತೆ ಸುತ್ತುವರೆದಿರುವ ಮುರುಗೆಯಾಕಾರದ ಹಾಗೂ ಬಳ್ಳಿಯಾಕಾರದ ನಕ್ಷಾ ವಿನ್ಯಾಸಗಳಿಗೆ ಸಿಲ್ವರ್ ಹಾಗೂ ಗೋಲ್ಡನ್ ಕಲರನ್ನು ಬಳಸಲಾಗಿದೆ. ಇಂಥಹ ವರ್ಣಗಾರಿಕೆಯನ್ನು ಹೊಂದಿದ ರಥಗಳನ್ನು ಬಿಜಾಪುರ ಜಿಲ್ಲೆಯ ಗುಣದಾಳದ ಸಿದ್ಧೇಶ್ವರ

ದೇವಸ್ಥಾನ ಹಾಗೂ ಹಾವೇರಿ ಜಿಲ್ಲೆಯ ಸುತ್ತಾನಪೂರದ ಬಸವೇಶ್ವರ ದೇವಸ್ಥಾನಗಳ ರಥಗಳಲ್ಲಿ ಅಧಿಷ್ಠಾನ ಭಾಗದಲ್ಲಿ ಅರಳಿದ ಹೂವಿನ ನಕ್ಷೆಗಳು ಹಾಗೂ ಅಧಿಷ್ಠಾನ ಭಾಗದ ಸುತ್ತಲೂ ಕಂಡುಬರುವಂತಹ ಬಳ್ಳಿಯಾಕಾರದ ನಕ್ಷೆಗಳಿಗೆ ಕೆಂಪು, ಹಸಿರು, ಗೋಲ್ಡನ್ ಹಾಗೂ ಸಿಲ್ವರ್ ಬಣ್ಣಗಳ ಲೇಪನವನ್ನು ಕಾಣಬಹುದು. ಆದರೆ ಈ ಎರಡೂ ರಥಗಳ ಅಧಿಷ್ಠಾನ ಭಾಗದ ಮೇಲ್ಭಾಗದಲ್ಲಿ ಕಾಣುವಂತಹ ಬುಗುರೆಯಾಕಾರದ ಶಿಲ್ಪಗಳಿಗೆ ಹಳದಿ ವರ್ಣಲೇಪನವನ್ನು ಮಾಡಿರುವರು.

ಕೊಪ್ಪಳದ ಗವಿಸಿದ್ಧೇಶ್ವರ ಮಠದ ದೇವಸ್ಥಾನದ ರಥದಲ್ಲಿ ಅಧಿಷ್ಠಾನ ಭಾಗದ ದೇವತಾಶಿಲ್ಪಗಳ ಮೇಲ್ಭಾಗದಲ್ಲಿ ಕಾಣುವಂತಹ ಪಟ್ಟೋಣ ಆಕೃತಿಯ ಹೂಗಳ ವಿನ್ಯಾಸಗಳಿಗೆ ವರ್ಣಲೇಪನ ಮಾಡಿರುವರು. ಇದೇ ರೀತಿಯ ವರ್ಣಲೇಪನವನ್ನು ಹುಲುಗಿಯ ಹುಲಿಗೆಮ್ಮ ದೇವಸ್ಥಾನದ ರಥದಲ್ಲಿ ಕಾಣಬಹುದು. ಹೂಗಳ ಮಧ್ಯಭಾಗದಲ್ಲಿ ಹಳದಿ ಮಿಶ್ರಿತ ಕೆಂಪು ವರ್ಣವನ್ನು ಹಾಗೂ ಹೂವಿನ ವಿನ್ಯಾಸದ ಹದಿನೆಂಟು ದಳಗಳಿಗೂ ಹಳದಿ ಬಣ್ಣವನ್ನು ಲೇಪಿಸಲಾಗಿದೆ. ಮಧ್ಯದಲ್ಲಿ ಕಾಣುವಂತಹ ಹದಿನಾರು ದಳಗಳಿಗೆ ಕೇಸರಿ ವರ್ಣವನ್ನು ಹಚ್ಚಿದ್ದಾರೆ. ಈ ಎರಡೂ ರಥಗಳ ಅಧಿಷ್ಠಾನ ಭಾಗದ ಅಂಚು ನಕಾಶೆಗಳಿಗೆ ಅಲ್ಲಲ್ಲಿ ಬಂಗಾರವರ್ಣದಿಂದ ಗೆರೆಗಳನ್ನು ಎಳೆದಿದ್ದಾರೆ. ನಕಾಶೆಗಳಲ್ಲಿ ಕಾಣುವಂತಹ ದುಂಡು ದುಂಡು ಉಬ್ಬಾಕೃತಿಗಳಿಗೆ ಕೆಂಪು ಹಾಗೂ ಸುತ್ತಲೂ ಸಿಲ್ವರ್ ಬಣ್ಣವನ್ನು ಲೇಪಿಸಿರುವರು.

ಬಿಜಾಪೂರ ಜಿಲ್ಲೆಯ ಜಾಯವಾಡಲಗಿಯ ರಥ ಹಾಗೂ ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮುರಕಿಬಾವಿಯ ಸಿದ್ಧಾರೂಡ ಮಠದ ರಥಗಳ ಅಧಿಷ್ಠಾನ ಭಾಗದ ನಕ್ಷಾ ಶಿಲ್ಪಗಳಲ್ಲಿ ವರ್ಣ ವಿನ್ಯಾಸವನ್ನು ಕಾಣಬಹುದು. ಪ್ರತಿಯೊಂದು ಭುಜದಲ್ಲಿ ಕಂಡುಬರುವಂತಹ ಆಧಾರ ಕಂಬಗಳಿಗೆ ಅಥವಾ ಬೋದಿಕೆಗಳಂತೆ ಕಾಣಿಸುವ ಆಕಾರಗಳಲ್ಲಿ ಕೆತ್ತಲಾದ ಶಿಲ್ಪವಿನ್ಯಾಸಗಳಿಗೆ ವರ್ಣಲೇಪನವನ್ನು ಮಾಡಿರುವರು ಕುದುರೆ ಬಾಲದ ನಕ್ಷಾಕೃತಿಗಳಿಗೆ ಅಲ್ಲಲ್ಲಿ ಹಳದಿ ಹಾಗೂ ಸಿಲ್ವರ್ ಬಣ್ಣದ ಗೆರೆಗಳನ್ನು ಎಳೆದಿರುವರು. ಇದಲ್ಲದೆ ಅಧಿಷ್ಠಾನ ಭಾಗದ ಸುತ್ತಲೂ ಕಾಣಿಸುವಂತಹ ಹೂ-ಬಳ್ಳಿಯಾಕಾರದ ಅಂಚುವಿನ್ಯಾಸಗಳಿಗೆ ಬಂಗಾರ ವರ್ಣವನ್ನು ಲೇಪಿಸಿರುವರು. ಮಂಟಪಗಳಂತೆ ಕಾಣುವ ಶಿಲ್ಪವಿನ್ಯಾಸಗಳ ಪಕ್ಕದಲ್ಲಿ ಕಾಣುವಂತಹ ಧೀರ್ಘ ಚತುರಸ್ರ ತುಂಬಿ ವಿನ್ಯಾಸಗಳಿಗೆ ಅಲ್ಲಲ್ಲಿ ಕೆಂಪು ಬಣ್ಣದ ಚುಕ್ಕೆಗಳನ್ನಿಡಲಾಗಿದೆ ಮತ್ತು ಸುರುಳಿಯಾಕಾರದ ವಿನ್ಯಾಸಗಳಿಗೆ ಕಪ್ಪು ಬಣ್ಣದ ಗೆರೆಗಳನ್ನು ಎಳೆದಿರುವರು.

ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗೇಶ್ವರ ಮಠದ ರಥದ ಅಧಿಷ್ಠಾನ ಭಾಗದಲ್ಲಿ ಕಾಣುವಂತಹ ಗಂಟೆಯಾಕಾರದ ಶಿಲ್ಪ ವಿನ್ಯಾಸಗಳಿಗೆ ಹಳದಿ ಬಣ್ಣವನ್ನು ಲೇಪಿಸಿರುವರು. ಇದೇ ರೀತಿಯಾಗಿ ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಸವೇಶ್ವರ ದೇವಸ್ಥಾನದ ರಥದ ಅಧಿಷ್ಠಾನ ಭಾಗದಲ್ಲಿ ಗಂಟೆಯಾಕಾರದ ಶಿಲ್ಪ ವಿನ್ಯಾಸಗಳಿಗೆ ಹಳದಿ ವರ್ಣಲೇಪನ ಮಾಡಿರುವುದು ಕಂಡುಬರುತ್ತದೆ.

ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ದೇವಸೂಗೂರದ ಸುಗೂರೇಶ್ವರ ದೇವಸ್ಥಾನದ ರಥದ ಅಧಿಷ್ಠಾನ ಭಾಗದಲ್ಲಿ ಕಾಣುವಂತಹ ಹೂವಿನಾಕಾರದ ನಕ್ಷಾಕೃತಿಗಳು ಹಾಗೂ

ಎಲೆ ಬಳ್ಳಿಯಾಕಾರದ ನಕ್ಷಾ ವಿನ್ಯಾಸಗಳಿಗೆಲ್ಲ ವರ್ಣಲೇಪನವನ್ನು ಕಾಣಬಹುದು. ಅರಳಿದ ಹೂಗಳ ಆಕೃತಿಗಳ ಉಬ್ಬುಶಿಲ್ಪಗಳ ಮಧ್ಯಭಾಗದಲ್ಲಿ ಬಂಗಾರವರ್ಣ ಹಾಗೂ ದಳಗಳಂತಿರುವ ವಿನ್ಯಾಸಗಳಿಗೆ ಸಿಲ್ವರ್ ಕಲರ್ ಬಳಸಲಾಗಿದೆ. ಇದಲ್ಲದೆ ಎಲೆಬಳ್ಳಿಯಾಕಾರದಲ್ಲಿ ಅಧಿಷ್ಠಾನ ಭಾಗದಲ್ಲಿ ಪ್ರತಿಯೊಂದು ಭುಜಾಕೃತಿಗಳನ್ನು ಸುತ್ತುವರೆದಂತಹ ವಿನ್ಯಾಸಕ್ಕೆ ಹಸಿರು ಹಾಗೂ ಹಳದಿ ಬಣ್ಣಗಳನ್ನು ಲೇಪಿಸಿ, ಅಲ್ಲಲ್ಲಿ ಕಪ್ಪು ಬಣ್ಣದ ಗೆರೆಗಳನ್ನು ಎಳೆಯಲಾಗಿದೆ. ಕೆಲವು ತುಂಬು ನಕಾಶೆಗಳಿಗೆ ಅಲ್ಲಲ್ಲಿ ಹಳದಿ ಹಾಗೂ ಕೆಂಪು ವರ್ಣದ ಚುಕ್ಕೆಗಳನ್ನಿಡಲಾಗಿದೆ. ಇದೇ ರೀತಿಯ ವರ್ಣವಿನ್ಯಾಸವಿರುವ ರಥಗಳನ್ನು ರಾಯಚೂರು ಜಿಲ್ಲೆಯ ಕಲ್ಮಲದ ಕರಿತಾತ ಮಠದಲ್ಲಿ ಕಾಣಬಹುದು. ಇದಲ್ಲದೆ ಬಾಗಲಕೋಟೆ ಗುಳೇದಗುಡ್ಡದ ಕೋಟೆಕಲ್ಲು ಹುಚ್ಚೇಶ್ವರ ಮಠ ಹಾಗೂ ಬನಶಂಕರಿ ದೇವಸ್ಥಾನದ ರಥಗಳಲ್ಲಿಯೂ ಕಾಣಬಹುದು. ಗುಳೇದಗುಡ್ಡದ ಸಂಗಮೇಶ್ವರ ದೇವಸ್ಥಾನದ ರಥವು ಉತ್ಸವದ ಸಂದರ್ಭದಲ್ಲಿ ಅಧಿಷ್ಠಾನ ಭಾಗದಲ್ಲಿ ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡಿರುತ್ತದೆ. ಕಮಾನುಗಳಂತೆ ಕಾಣುವ ಅಧಿಷ್ಠಾನ ಭಾಗದಲ್ಲಿ ಸುಂದರವಾದ ನಕ್ಷಾ ವಿನ್ಯಾಸಗಳನ್ನು ಹೊಂದಿದ ಬಣ್ಣ ಬಣ್ಣದ ಕಾಗದಗಳನ್ನು ಅಂಟಿಸಿರುವುದಲ್ಲದೆ, ಕಮಾನುಗಳ ಅಂಚುಗಳಿಗೆ ಕೆಂಪು, ಹಸಿರು, ಹಳದಿ ಹೀಗೆ ವಿವಿಧ ಬಣ್ಣಗಳಿಂದ ಗೆರೆಗಳನ್ನು ಎಳೆಯುವುದು ಕಂಡುಬರುತ್ತದೆ.


ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೀಶ್ವರ ಸಂಸ್ಥಾನ ಮಠದ ರಥದ ಅಧಿಷ್ಠಾನ ಭಾಗದಲ್ಲಿ ಕಂಡುಬರುವ ಕುದುರೆಯ ಬಾಲದಾಕಾರದ ಉಬ್ಬು ಶಿಲ್ಪವಿನ್ಯಾಸಗಳಿಗೆ, ಅಷ್ಟಭುಜಾಕೃತಿಯಲ್ಲಿ ಸುತ್ತಲೂ ರಚನೆಗೊಂಡ ಎಲೆ ಹಾಗೂ ಬಳ್ಳಿಗಳ ವಿನ್ಯಾಸಗಳಿಗೆ ಹಾಗೂ ಮಹಾತ್ಮರ ಶಿಲ್ಪಗಳು ಹಾಗೂ ದೇವತಾ ಶಿಲ್ಪಗಳ ಹಿಂಭಾಗದಲ್ಲಿ ಕಾಣುವ ಹೂವಿನಾಕಾರದ ವಿನ್ಯಾಸಗಳಿಗೆ ಬಂಗಾರ ವರ್ಣದ ಲೇಪನವಾಗಿರುವುದನ್ನು ಕಾಣಬಹುದು.

ಇದೇ ಜಿಲ್ಲೆಯ ಬೈಲಹೊಗಲದ ಬಸವೇಶ್ವರ ದೇವಸ್ಥಾನದ ರಥದ ಅಧಿಷ್ಠಾನ ಭಾಗದ ಮೇಲ್ಭಾಗದಲ್ಲಿ ಕಂಡುಬರುವ ದುಂಡುಗೋಲಿಗಳ ಸರಗಳಂತೆ ಕಾಣುವ ಉಬ್ಬುಶಿಲ್ಪಗಳಿಗೆ ಕೆಂಪು ವರ್ಣವನ್ನು ಬಳಸಲಾಗಿದೆ. ಸುರುಳಿಯಾಕಾರದ, ಪದಕಾಕಾರದ ಶಿಲ್ಪವಿನ್ಯಾಸಗಳಿಗೆ ಹಾಗೂ ಹೂ ದಳಗಳಾಕಾರದ ನಕ್ಷಾ ಶಿಲ್ಪಗಳಿಗೆ ಸಿಲ್ವರ್ ಬಣ್ಣವನ್ನು ಬಳಸಲಾಗಿದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ದೇವಾಲಯದ ರಥದ ಅಧಿಷ್ಠಾನ ಭಾಗದಲ್ಲಿ ಕಂಡುಬರುವಂತಹ ಕುದುರೆ ಹಾಗೂ ಹಂಸಬಾಲದ ನಕ್ಷೆಗಳಿಗೆ ಬಂಗಾರದ ವರ್ಣವನ್ನು ಲೇಪಿಸಲಾಗಿದೆ. ಇದಲ್ಲದೆ ಹೂಬಳ್ಳಿಯಾಕಾರದಲ್ಲಿ ಎಲ್ಲ ಬಾಹುಗಳಲ್ಲಿ ಸುತ್ತುವರೆದಿರು ಉಬ್ಬುಶಿಲ್ಪವಿನ್ಯಾಸಗಳಿಗೆ ಅಲ್ಲಲ್ಲಿ ಹಸಿರು, ಕೆಂಪು ಹಾಗೂ ಹಳದಿ ವರ್ಣಗಳನ್ನು ಬಳಸಲಾಗಿದೆ. ಕೆಲವು ದೇವತಾ ಮೂರ್ತಿಗಳ ಹಿಂದೆ ಇರುವ ಪ್ರಭಾವಳಿಗಳ ವಿನ್ಯಾಸಗಳಲ್ಲಿ ಕಂಡುಬರುವ ಹೂವಿನ ಆಕೃತಿಗಳಿಗೆ ಹಳದಿ ಹಾಗೂ ಕೇಸರಿ ವರ್ಣಗಳನ್ನು ಬಳಸಲಾಗಿದೆ. ಅಲ್ಲದೆ ಹೂವಿನ ದಳಗಳ ಅಂಚುಗಳಲ್ಲಿ ಬಂಗಾರ ವರ್ಣದ ಗೆರೆಗಳನ್ನು ಎಳೆಯಲಾಗಿದೆ. ಇದೇ ರೀತಿಯ ವರ್ಣವಿನ್ಯಾಸವನ್ನು ಜಮಖಂಡಿ ತಾಲೂಕು ಕವಟಗಿಯ ಮಲ್ಲಿಕಾರ್ಜುನ ದೇವಸ್ಥಾನದ ರಥದಲ್ಲಿ, ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ತೋಳಮಟ್ಟಿಯ ಹನುಮಾನ ಮಂದಿರದ ರಥದಲ್ಲಿ ಹಾಗೂ ಧಾರವಾಡ ಜಿಲ್ಲೆಯ ಬೆಂಡಿಗೇರಿಯ ನೀಲಕಂಠೇಶ್ವರ ರಥದಲ್ಲಿ ಕಾಣಬಹುದು.



ಶ್ರೀ ಮಲ್ಲಿಕಾರ್ಜುನ ರಥ
ಮಸ್ಕಿ ಜಿ - ರಾಯಚೂರ



ಶ್ರೀ ಶಿವಯೋಗೇಶ್ವರ ರಥ
ಇಂಚಲ, ಜಿ - ಬೆಳಗಾಂವ



ಶ್ರೀ ಗವಿಸಿದ್ದೇಶ್ವರ ರಥ
ಕೊಪ್ಪಳ



ಶ್ರೀ ವೀರಭದ್ರ ರಥ
ಹುನಗುಂದ, ಜಿ - ಬಾಗಲಕೋಟ



ಶ್ರೀ ವೀರಭದ್ರ ರಥ
ಹಲಕರ್ಟಿ, ಜಿ - ಗುಲಬರ್ಗಾ



ಶ್ರೀ ಫಕೀರೇಶ್ವರ ರಥ ಶಿರಹಟ್ಟಿ, ಜಿ - ಗದಗ

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರದ ಶಂಕರಲಿಂಗ ದೇವಸ್ಥಾನದ ರಥದ ಅಧಿಷ್ಠಾನ ಭಾಗವು ಇಡಿಯಾಗಿ ಕೇಸರಿ ಮಿಶ್ರಿತ ಕೆಂಪು ವರ್ಣದಿಂದ ಕೂಡಿದೆ. ಅಧಿಷ್ಠಾನದ ಎಲ್ಲ ಭಾಗಗಳಲ್ಲಿ ಕಂಡುಬರುವಂತಹ ಕಂಬಗಳಲ್ಲಿ ಹಾಗೂ ಮೇಲ್ಭಾಗದ ಪಟ್ಟಿಕೆಗಳಲ್ಲಿ ಕಂದು ಬಣ್ಣದ ಬಳ್ಳಿಯಾಕಾರದ ಹಾಗೂ ಮುರಿಗೆಯಾಕಾರದ ಅಂಚು ನಕ್ಷೆಗಳನ್ನು ಬಿಡಿಸಿರುವುದನ್ನು ಕಾಣಬಹುದು.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ರಥದ ಅಧಿಷ್ಠಾನ ಭಾಗವು ವರ್ಣಪಟ್ಟಿಕೆಗಳಿಂದ ಸುಂದರಗೊಂಡಿದೆ ಅಧಿಷ್ಠಾನ ಭಾಗದ ಕೆಳಭಾಗದಲ್ಲಿ ನೀಲಿ, ಕೆಂಪು, ಹಳದಿ ಹಾಗೂ ಹಸಿರು ಪಟ್ಟಿಕೆಗಳನ್ನು ಕಾಣಬಹುದು. ಮಧ್ಯ ಭಾಗದಲ್ಲಿ ನೀಲಿ, ಹಸಿರು, ಹಳದಿ, ಕೆಂಪು ಹೀಗೆ ವಿವಿಧ ಬಣ್ಣದ ಪಟ್ಟಿಕೆಗಳನ್ನು ರಚಿಸಿರುವರು. ಮೇಲ್ಭಾಗದಲ್ಲಿ ತ್ರಿಕೋನಾಕೃತಿಯ ಅಂಚು ವಿನ್ಯಾಸಗಳ ಉಬ್ಬು ಶಿಲ್ಪಗಳಿಗೆ ನೇರಳೆ ಬಣ್ಣವನ್ನು ಲೇಪಿಸಲಾಗಿದೆ. ಮಧ್ಯಭಾಗದಲ್ಲಿ ಪ್ರತಿಯೊಂದು ಭುಜ ಹಾಗೂ ಬಾಹುಗಳಲ್ಲಿ ಕಂಡುಬರುವಂತಹ ಹೂವಿನ ಎಸಳುಗಳಂತೆ ಕಾಣುವ ಉಬ್ಬುಶಿಲ್ಪವಿನ್ಯಾಸಗಳಿಗೆ ಕೆಂಪು ಮಿಶ್ರಿತ ಬಿಳಿ ಬಣ್ಣವನ್ನು ಲೇಪಿಸಲಾಗಿದೆ. ಅಲ್ಲದೆ ಮೇಲ್ಭಾಗದ ಕೆಲವು ಪಟ್ಟಿಕೆಗಳಲ್ಲಿ ಹಳದಿ ಬಣ್ಣದಿಂದ ಬಳ್ಳಿಯಾಕಾರದಲ್ಲಿ ಚಿತ್ರಿಸಿರುವುದನ್ನು ಕಾಣಬಹುದು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯ ದೇವಸ್ಥಾನದ ರಥದ ಅಧಿಷ್ಠಾನ ಭಾಗದಲ್ಲಿ ಪದಕಾಕಾರದ ಲೋಹದ ಬಿಡಿಶಿಲ್ಪಗಳಿಗೆ ಸಿಲ್ವರ್ ಕಲರನ್ನು ಲೇಪಿಸಲಾಗಿದೆ. ಅಲ್ಲದೆ ಬುಗುರೆಯಾಕಾರದ ಕೆಲವು ಶಿಲ್ಪವಿನ್ಯಾಸಗಳಿಗೆ ಹಳದಿ ಹಾಗೂ ಕಡುಗಂದು ವರ್ಣಲೇಪನ ಮಾಡಿರುವರು. ಇದರಂತೆಯೇ ಬಾಗಲಕೋಟೆ ಜಿಲ್ಲೆಯ ಮಧೋಳ ತಾಲೂಕಿನ ಮಹಾಲಿಂಗಪುರದ ಮಹಾಲಿಂಗೇಶ್ವರ ಮಠದ ರಥದ ಅಧಿಷ್ಠಾನ ಭಾಗದಲ್ಲಿ ಕಾಣುವಂತಹ ಬುಗುರೆಯಾಕಾರದ ಶಿಲ್ಪ ವಿನ್ಯಾಸಗಳಿಗೆ ಬಂಗಾರ ವರ್ಣವನ್ನು ಲೇಪಿಸಿರುವರು.

೩. ಮಂಟಪ ಭಾಗದ ವರ್ಣಗಾರಿಕೆ :

ಅಧಿಷ್ಠಾನ ಅಥವಾ ಗಡ್ಡಿ ಭಾಗದ ನಂತರ ಮುಂದುವರೆಯುವ ರಥದ ಭಾಗವನ್ನು ಮಂಟಪ ಭಾಗವೆನ್ನುವರು ಈ ಭಾಗವು ಕೆಲವೊಂದು ರಥಗಳಲ್ಲಿ ಸ್ಥಿರವಾಗಿದ್ದು, ಇನ್ನು ಕೆಲವು ಪ್ರದೇಶಗಳ ರಥಗಳಲ್ಲಿ ಉತ್ಸವದ ಸಂದರ್ಭದಲ್ಲಿ ನಿರ್ಮಾಣಗೊಳ್ಳುತ್ತದೆ. ಈ ಭಾಗವು ಬಹು ಸಂಖ್ಯೆಯ ಕಲಾತ್ಮಕ ಕಂಬಗಳನ್ನು ಹಾಗೂ ಕಮಾನುಗಳನ್ನು ಹೊಂದಿರುತ್ತದೆ. ಅಲ್ಲದೆ ಮಂಟಪಭಾಗದ ಮಧ್ಯದಲ್ಲಿ ಆಕರ್ಷಕವಾದ ಪ್ರಭಾವಳಿಯನ್ನು ಹೊಂದಿದ ಪೀಠವಿರುತ್ತದೆ. ಹೀಗಿರುವ ಮಂಟಪದ ಎಲ್ಲ ಭಾಗಗಳು ಅಲ್ಲಲ್ಲಿ ಚಿತ್ತಾಕರ್ಷಕ ವರ್ಣಗಾರಿಕೆಯಿಂದ ಕೂಡಿರುವುದನ್ನು ಕರ್ನಾಟಕದ ವಿವಿಧ ಪ್ರದೇಶದ ರಥಗಳಲ್ಲಿ ಕಾಣಬಹುದು.

i. ಸ್ಥಿರ ರಥಗಳ ಮಂಟಪ ಭಾಗದ ವರ್ಣಗಾರಿಕೆ : ಗದಗ ಜಿಲ್ಲೆಯ ಕೊಕ್ಕರಗುಂಡಿಯ ಬಸವೇಶ್ವರ ದೇವಸ್ಥಾನದ ರಥವು ಮಂಟಪ ಭಾಗದಲ್ಲಿ ವಿವಿಧ ರೀತಿಯ ವರ್ಣವಿನ್ಯಾಸವನ್ನು ಹೊಂದಿದೆ. ಮಂಟಪದ ಎಲ್ಲ ಭಾಗಗಳಲ್ಲಿರುವ ಕಂಬಗಳು ಕೆಳಭಾಗದಲ್ಲಿ ಹಾಗೂ ಮೇಲ್ಭಾಗದಲ್ಲಿ ಬಂಗಾರವರ್ಣವನ್ನು ಹೊಂದಿವೆ. ಮಧ್ಯದಲ್ಲಿ ಕೇಸರಿ ಹಾಗೂ ಹಳದಿ ಬಣ್ಣದ ಗೆರೆಗಳಿಂದ ಕೂಡಿವೆ. ಮಂಟಪದ ಸುತ್ತಲೂ ಇರುವ ಜಾಲರಿಯು ಹಳದಿ ಬಣ್ಣದಿಂದ ಅಲಂಕೃತಗೊಂಡಿದ್ದು ಅದರ ಮೇಲೆ

ಹಸಿರು ಬಣ್ಣದಿಂದ ಬಳ್ಳಿಗಳಂತಹ ಅಂಚು ವಿನ್ಯಾಸಗಳನ್ನು ಬರೆಯಲಾಗಿದೆ. ಇದಲ್ಲದೆ ಕಮಾನುಗಳ ಮೇಲೆ ಕಾಣುವಂತಹ ಹೂವಿನಾಕಾರದ ವಿನ್ಯಾಸಗಳಿಗೆ ಮಧ್ಯಭಾಗದಲ್ಲಿ ಕೆಂಪು ಹಾಗೂ ದಳಗಳಾಕಾರಕ್ಕೆ ಹಳದಿ ಬಣ್ಣವನ್ನು ಹಚ್ಚಲಾಗಿದೆ. ಮಂಟಪದ ಹೊರಮೈಯಲ್ಲಿ ಕಾಣುವಂತಹ ಕೆಲವು ಸರಗಳಾಕಾರದ ಉಬ್ಬುಶಿಲ್ಪಗಳಿಗೆ ಸಿಲ್ವರ್ ಕಲರನ್ನು ಹಚ್ಚಲಾಗಿದೆ.

ಬೆಳಗಾಂವಿ ಜಿಲ್ಲೆ ಗೋಕಾಕ ತಾಲೂಕು ಅರಸನಗಿಯ ಕಾಲಕಾಲೇಶ್ವರ ರಥವು ಕೂಡಾ ಮಂಟಪ ಭಾಗದಲ್ಲಿ ವರ್ಣಗಾರಿಕೆಯಿಂದ ಕೂಡಿದೆ. ಕಂಬಗಳಿಗೆ ಕಡುಗಂದು ವರ್ಣವನ್ನು ಲೇಪಿಸಿ, ಅವುಗಳ ಕೆಳಭಾಗ ಹಾಗೂ ಮೇಲ್ಭಾಗಗಳಿಗೆ ಹಳದಿ ಬಣ್ಣವನ್ನು ಹಚ್ಚಲಾಗಿದೆ. ಕಮಾನುಗಳಲ್ಲಿ ಕಾಣುವ ಸುರುಳಿಯಾಕಾರದ ನಕ್ಷಾಶಿಲ್ಪಗಳಿಗೆ ಕಪ್ಪು ಹಾಗೂ ಬಂಗಾರ ವರ್ಣದ ಗೆರೆಗಳನ್ನು ಅಲ್ಲಲ್ಲಿ ಎಳೆಯಲಾಗಿದೆ ಅಲ್ಲದೆ ಕೆಲವು ಭಾಗಗಳಲ್ಲಿ ಕೆಂಪು ಬಣ್ಣದ ಚುಕ್ಕೆಗಳನ್ನು ಇಡಲಾಗಿದೆ ಇದೇ ರೀತಿಯ ವರ್ಣವಿನ್ಯಾಸವಿರುವ ರಥಗಳನ್ನು ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಸರೂರದ ಸೋಮೇಶ್ವರ ದೇವಸ್ಥಾನ ಹಾಗೂ ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ತೇರದಾಳದ ಪ್ರಭುದೇವರ ದೇವಸ್ಥಾನದಲ್ಲಿ ಕಾಣಬಹುದು.

ಬೆಳಗಾವಿ ಜಿಲ್ಲೆಯ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೀಶ್ವರ ಸಂಸ್ಥಾನ ಮಠದ, ರಥದ ಮಂಟಪ ಭಾಗವು ವರ್ಣಗಾರಿಕೆಯಿಂದ ಕೂಡಿದೆ. ಮಂಟಪದ ಕೆಳಭಾಗದಲ್ಲಿರುವ ಕಟಂಜರ ಆಕಾರದ ವಿನ್ಯಾಸಕ್ಕೆ ಬಿಳಿ ಮಿಶ್ರಿತ ಗುಲಾಬಿ ಬಣ್ಣವನ್ನು ಬಳಿಯಲಾಗಿದೆ. ಕಟಂಜರದ ಮೇಲ್ಭಾಗದ ಪಟ್ಟಿಗಳಿಗೆ ನೇರಳೆ ಬಣ್ಣ ಲೇಪಿಸಿದ್ದು, ಪ್ರತಿಯೊಂದು ಕಟಂಜರದ ಮೇಲೆ ಇರುವಂತಹ ಎರಡೆರಡು ಬುಗುರೆಯಾಕಾರದ ಶಿಲ್ಪಗಳಿಗೆ ಹಳದಿ ಬಣ್ಣವನ್ನು ಲೇಪಿಸಲಾಗಿದೆ. ಮಂಟಪ ಭಾಗವು ಸುಮಾರು ಇಪ್ಪತ್ನಾಲ್ಕು ಕಂಬಗಳನ್ನು ಹೊಂದಿದ್ದು, ಪ್ರತಿಯೊಂದು ಕಂಬಗಳ ಮಧ್ಯ ಭಾಗದಲ್ಲಿ ಕೆಂಪು ಮಿಶ್ರಿತ ನೇರಳೆ ಬಣ್ಣವನ್ನು ಲೇಪಿಸಲಾಗಿದೆ. ಕಂಬಗಳ ಕೆಳಗೆ ಹಾಗೂ ಮೇಲೆ ರಚಿತಗೊಂಡ ಬಳೆಯಾಕಾರದ ವಿನ್ಯಾಸಗಳಿಗೆ ಕ್ರಮವಾಗಿ ತಿಳಿಗಂದು ಹಾಗೂ ಹಳದಿ ಬಣ್ಣವನ್ನು ಹಚ್ಚಲಾಗಿದೆ. ಕಮಾನುಗಳ ಚೌಕಟ್ಟು ಹಾಗೂ ಕಮಾನುಗಳ ಒಳಭಾಗದ ವಿನ್ಯಾಸಗಳ ಅಂಚುಗಳಿಗೆ ಕಡುಗಂದು ಮಿಶ್ರಿತ ನೇರಳೆ ಬಣ್ಣವನ್ನು ಲೇಪಿಸಲಾಗಿದೆ. ಅಲ್ಲದೆ ನೇರಳೆ ಪಟ್ಟಿಯ ಹತ್ತಿರವೇ ಹಳದಿ ಬಣ್ಣದ ಗೆರೆಗಳನ್ನು ಹಾಕಲಾಗಿದೆ. ಮಂಟಪದ ಮಧ್ಯ ಕಾಣಿಸುವಂತಹ ಹೂವಿನಾಕಾರದ ವಿನ್ಯಾಸಗಳಿಗೆ ಬಂಗಾರವರ್ಣವನ್ನು ಲೇಪಿಸಲಾಗಿದೆ. ಇದಲ್ಲದೆ ಮಂಟಪ ಭಾಗದ ಮೇಲ್ಭಾಗದಲ್ಲಿ ಕಾಣುವಂತಹ ಸೂರಪಟ್ಟಿಯ ತ್ರಿಕೋನಾಕಾರದ ವಿನ್ಯಾಸಗಳಿಗೆ ತಿಳಿಗುಲಾಬಿ ಬಣ್ಣ ಬಳಿಯಲಾಗಿದೆ. ಮೇಲ್ಭಾಗದ ಬುಗುರೆಯಾಕಾರದ ಶಿಲ್ಪವಿನ್ಯಾಸಗಳಿಗೆ ಹಳದಿ ವರ್ಣವನ್ನು ಲೇಪಿಸಿರುವುದು ಕಂಡುಬರುತ್ತದೆ.

ಧಾರವಾಡ ರಾಘವೇಂದ್ರ ಸ್ವಾಮಿ ರಥದ ಮಂಟಪ ಭಾಗವು ಹನ್ನೆರಡು ಕಂಬಗಳನ್ನು ಹೊಂದಿದ್ದು, ಪ್ರತಿಯೊಂದು ಕಂಬದ ಕೆಳಭಾಗದಲ್ಲಿ ಬರುವ ಬಳೆಯಾಕಾರದ ವಿನ್ಯಾಸಗಳಿಗೆ ಕೇಸರಿ ವರ್ಣಲೇಪನ ಮಾಡಲಾಗಿದೆ. ಕಂಬಗಳ ಮಧ್ಯಭಾಗದಲ್ಲಿ ಕಂದು ಬಣ್ಣವನ್ನು ಹಚ್ಚಿದ್ದು, ಕಮಾನುಗಳ ವಿನ್ಯಾಸದ ಅಂಚುಗಳಿಗೆ ಹಳದಿ ಬಣ್ಣವಿರುವುದು ಕಂಡುಬರುತ್ತದೆ. ಪ್ರತಿಯೊಂದು ಕಮಾನಿನ ಮಧ್ಯಭಾಗದಲ್ಲಿರುವ ಹೂವಿನಾಕಾರದ ಶಿಲ್ಪ ವಿನ್ಯಾಸಗಳಿಗೆ ಕೇಸರಿ ಬಣ್ಣವನ್ನು ಲೇಪಿಸಲಾಗಿದೆ.

ಗದಗ ಜಿಲ್ಲೆಯ ವರವಿ ಮೌನೇಶ್ವರ ರಥದ ಮಂಟಪ ಭಾಗದಲ್ಲಿ ಅಲ್ಲಲ್ಲಿ ವರ್ಣಲೇಪನ ಮಾಡಲಾಗಿದೆ. ಮಂಟಪದ ಭಾಗದ ಕೆಲವು ಕಂಬಗಳಿಗೆ ಮೇಲೆ ಹಾಗೂ ಕೆಳಭಾಗದಲ್ಲಿ ಬಂಗಾರ ವರ್ಣದ ಗೆರೆಗಳನ್ನು ಹಾಕಲಾಗಿದೆ. ಅಲ್ಲದೆ ಒಳಭಾಗದ ವಿನ್ಯಾಸಗಳಿರುವ ಅಂಚಿನಲ್ಲಿಯೂ ಸಹ ಬಂಗಾರ ವರ್ಣವನ್ನು ಲೇಪಿಸಿರುವರು. ಮಂಟಪದ ಮೇಲ್ಭಾಗದ ಸೂರಪಟ್ಟಿಯಲ್ಲಿ ತೋರಣದಂತೆ ಕಾಣುವ ಉಬ್ಬುಶಿಲ್ಪವಿನ್ಯಾಸಗಳಿಗೆ ಕಂದು ಮಿಶ್ರಿತ ಹಳದಿ ವರ್ಣಲೇಪನ ಮಾಡಲಾಗಿದೆ. ಅಲ್ಲದೆ ಬುಗುರೆಯಾಕಾರದ ಬಿಡಿಶಿಲ್ಪಗಳಿಗೆ ಹಳದಿ ಮಿಶ್ರಿತ ಹಸಿರು ವರ್ಣವನ್ನು ಹಚ್ಚಲಾಗಿದೆ. ಇದೇ ರೀತಿಯ ವರ್ಣವಿನ್ಯಾಸವಿರುವ ರಥವನ್ನು ಚಿಂಚಲಿ ವೀರಭದ್ರ ದೇವಸ್ಥಾನದಲ್ಲಿ ಕಾಣಬಹುದು.

ಕಾರವಾರ ಜಿಲ್ಲೆಯ ಉಳವಿಯ ಚನ್ನಬಸವೇಶ್ವರ ದೇವಾಲಯದ ರಥದ ಮಂಟಪ ಭಾಗವು ಕಂಬ ಹಾಗೂ ಕಮಾನುಗಳಲ್ಲಿ ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡಿದೆ. ಈ ರಥದ ಕಂಬಗಳ ಮಧ್ಯಭಾಗದಲಿ ಕಡುಗಂದು ವರ್ಣಲೇಪನ ಮಾಡಲಾಗಿದೆ ಮಂಟಪದ ಸುತ್ತಲೂ ಇರುವ ಕಟಂಜರಗಳಿಗೆ ತಿಳಿಹಳದಿ ವರ್ಣಲೇಪನ ಮಾಡಲಾಗಿದೆ. ಕಮಾನುಗಳ ಮಧ್ಯದಲ್ಲಿ ಹಾಗೂ ಕಂಬಗಳಿಗೆ ಹತ್ತಿರವಾದ ಹೂ ಬಳ್ಳಿ ವಿನ್ಯಾಸಗಳಿಗೆ ತಿಳಿ ಹಸಿರು, ಹಳದಿ ಹಾಗೂ ಬಿಳಿ ಮಿಶ್ರಿತ ಗುಲಾಬಿ ವರ್ಣಗಳನ್ನು ಬಳಸಲಾಗಿದೆ. ಮಂಟಪದ ಮಧ್ಯಭಾಗದಲ್ಲಿರುವ ಪೀಠವು ಸುಂದರವಾದ ತುಂಬುನಕ್ಷೆಗಳಿಂದ ಅಲಂಕೃತಗೊಂಡಿದ್ದು,ಅಲ್ಲಲ್ಲಿ ಬಂಗಾರ ವರ್ಣದಿಂದ ಗೆರೆಗಳನ್ನು ಹಾಕಲಾಗಿದೆ. ಪೀಠದ ಸುತ್ತಲೂ ಇರುವ ಪ್ರಭಾವಳಿಯಲ್ಲಿ ಕಾಣುವ ಹೂ-ಬಳ್ಳಿ ನಕ್ಷೆಗಳಿಗೆ ಕೆಂಪು, ನೀಲಿ ಹಾಗೂ ಬಂಗಾರ ವರ್ಣಗಳನ್ನು ಬಳಸಲಾಗಿದೆ. ಇದೇ ರೀತಯ ವರ್ಣಗಾರಿಕೆಯನ್ನು ಹೊಂದಿದ ರಥವು ಲಿಂಗಸೂರು ತಾಲೂಕು ಬನ್ನಿಗೋಳದಲ್ಲಿದೆ.

ಗುಲಬುರ್ಗಾ ಜಿಲ್ಲೆ ಜೇವರಗಿ ತಾಲೂಕಿನ ಜೇರಟಗಿಯ ಬಸವೇಶ್ವರ ರಥವು ಮಂಟಪ ಭಾಗದ ಕೆಲವು ಭಾಗಗಳಲ್ಲಿ ವರ್ಣಲೇಪನದಿಂದ ಕೂಡಿದೆ. ಕಂಬಗಳು ಹಾಗೂ ಕಮಾನುಗಳಲ್ಲಿ ಅಲ್ಲಲ್ಲಿ ಹಳದಿ ಹಾಗೂ ಸಿಲ್ವರ್ ಬಣ್ಣವನ್ನು ಕಾಣಬಹುದು ಮಂಟಪದ ಮೇಲ್ಭಾಗದಲ್ಲಿ ಸುತ್ತಲೂ ಇರುವ ಬುಗುರೆಯಾಕಾರದ ವಿನ್ಯಾಸಗಳು ಬಂಗಾರವರ್ಣದಿಂದ ಕೂಡಿವೆ.

ಬಾಗಲಕೋಟೆ ಜಿಲ್ಲೆಯ ಹುನಗುಂದದ ಬಸವೇಶ್ವರ ದೇವಸ್ಥಾನದ ರಥವು ಮಂಟಪ ಭಾಗದಲ್ಲಿ ಸುಂದರವಾದ ವರ್ಣವಿನ್ಯಾಸವನ್ನು ಮೈಗೂಡಿಸಿಕೊಂಡಿದೆ. ಕಂಬ ಹಾಗೂ ಕಮಾನುಗಳಿಗೆ ಮೊದಲು ಕಡುಗಂದು ವರ್ಣಲೇಪನ ಮಾಡಿ ಜೋಡು ಕಮಾನುಗಳ ಒಳಭಾಗದ ವಿನ್ಯಾಸಗಳ ಅಂಚುಗಳಿಗೆ ಸಿಲ್ವರ್ ಬಣ್ಣದ ಗೆರೆಗಳನ್ನು ಹಾಕಲಾಗಿದೆ. ಮಂಟಪಭಾಗದ ಕೆಳಭಾಗದ ಜಾಲರಿಯ ಭಾಗದಲ್ಲಿರುವಂತಹ ಹೂವಿನ ಕುಂಡದಂತೆ ಹಾಗೂ ಹೂಜಿಯಾಕಾರದ ವಿನ್ಯಾಸಗಳಿಗೆ ಬಂಗಾರವರ್ಣ ಹಾಗೂ ಶಿಲ್ವರ್ ಕಲರನ್ನು ಲೇಪಿಸಿ, ಸುಂದರ ಗೊಳಿಸಲಾಗಿದೆ. ಇದೇ ತಾಲೂಕಿನ ಇಲಕಲ್ಲದ ವಿಜಯ ಮಹಾಂತೇಶ್ವರ ರಥದ ಮಂಟಪ ಭಾಗದಲ್ಲಿ ಹುನಗುಂದದ ಬಸವೇಶ್ವರ ರಥದಂತೆಯೇ ವರ್ಣವಿನ್ಯಾಸವನ್ನು ಕಾಣಬಹುದು.

ಇದೇ ಜಿಲ್ಲೆಯ ಜಮಖಂಡಿ ತಾಲೂಕಿನ ಬನಹಟ್ಟಿಯ ಶ್ರೀ ಕಾಡಸಿದ್ದೇಶ್ವರ ದೇವಸ್ಥಾನದ ರಥ, ರಾಮತೀರ್ಥದ ಸಿದ್ದೇಶ್ವರ ದೇವಸ್ಥಾನದ ರಥ ಹಾಗೂ ಆಸಂಗಿಯ ರಥಗಳು ಮಂಟಪ ಭಾಗದ

ಕೆಲವು ಭಾಗಗಳಲ್ಲಿ ಮಾತ್ರ ವರ್ಣಗಾರಿಕೆಯನ್ನು ಹೊಂದಿವೆ ಮಂಟಪದ ಸುತ್ತಲೂ ಇರುವ ಕಬ್ಬಿಣದ ಹಳಿಗಳನ್ನು ಹೊಂದಿದ ಕಟಂಜರುಗಳಿಗೆ ಸಿಲ್ವರ್ ಕಲರ್ ಬಳಸಲಾಗಿದೆ. ಮಂಟಪದ ಸೂರಪಟ್ಟಿಯ ಎಲೆಗಳಂತಹ ವಿನ್ಯಾಸಗಳಿಗೆ ಬಂಗಾರವರ್ಣವನ್ನು ಲೇಪಿಸಲಾಗಿದೆ. ಅಲ್ಲದೆ ರಾಮತೀರ್ಥ ರಥದ ಪೀಠದ ಹಿಂದಿರುವ ಪ್ರಭಾವಳಿಯಲ್ಲಿ ಅಲ್ಲಲ್ಲಿ ಹಸಿರು ಕೆಂಪು ಹಳದಿ ಹಾಗೂ ಬಿಳಿ ವರ್ಣಗಳ ಗೆರೆಗಳನ್ನು ಕಾಣಬಹುದು.

ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಸಂಗಮೇಶ್ವರ ದೇವಸ್ಥಾನದ ರಥದ ಮಂಟಪ ಭಾಗವು ಉತ್ಸವದ ಸಂದರ್ಭದಲ್ಲಿ ಸುಂದರವಾದ ವರ್ಣವಿನ್ಯಾಸದಿಂದ ಆಕರ್ಷಿಸುತ್ತದೆ. ಹದಿನಾರು ಕಂಬಗಳು ಹಾಗೂ ಕಮಾನುಗಳನ್ನು ಹೊಂದಿರುವ ಮಂಟಪಭಾಗದ ಕೆಳಭಾಗದ ಜಾಲರಿಯಂತಿರುವ ಭಾಗದಲ್ಲಿ ಚೌಕಟ್ಟುಗಳಿಗೆ ಹಳದಿ ಬಣ್ಣವನ್ನು ಬಳಿದು ಅದರ ಮೇಲೆ ಕೆಂಪು ಬಣ್ಣದ ಹಾಳೆಗಳನ್ನು ಲೇಪಿಸುವರು. ಮಧ್ಯಭಾಗದಲ್ಲಿ ನೇರಳೆ ಹಿಂಬದಿಯನ್ನು ಹೊಂದಿ, ಬಿಳಿ ಚುಕ್ಕೆಗಳ ನಕ್ಷಾಕೃತಿಯ ಕಾಗದಗಳನ್ನು ಅಂಟಿಸಲಾಗಿರುತ್ತದೆ. ಕಂಬಗಳ ಮೇಲೆ ಹಾಗೂ ಕೆಳಭಾಗಗಳಲ್ಲಿ ಕಾಣುವಂತಹ ಬಳೆಯಾಕಾರದ ವಿನ್ಯಾಸಗಳಿಗೆ ಮಿಂಚುವ ಹಳದಿ ಬಣ್ಣದ ಹಾಳೆಗಳನ್ನು ಅಂಟಿಸಲಾಗುತ್ತದೆ. ಕಮಾನುಗಳ ಚೌಕಟ್ಟುಗಳಿಗೆ ಮೊದಲು ಹಳದಿ ಬಣ್ಣದ ಕಾಗದಗಳನ್ನು ಅಂಟಿಸಿ, ಅದರ ಮೇಲೆ ಕೆಂಪು ಬಣ್ಣದ ಕಾಗದಗಳನ್ನು ಪಟ್ಟಿಗಳನ್ನಾಗಿ ಮಾಡಿ ಅಂಟಿಸುವರು. ಕಮಾನುಗಳ ಪೂರ್ಣ ಭಾಗವನ್ನು ಕೆಂಪು ಬಣ್ಣದ ಕಾಗದಗಳಿಂದ ಆವರಿಸಿ, ಅದರ ಮೇಲೆ ಬೇರೆ ಬೇರೆ ಬಣ್ಣದ ಕಾಗದಗಳಿಂದ ಹಲವಾರು ನಕ್ಷಾಕೃತಿಗಳನ್ನು ತಯಾರಿಸಿ ಅಂಟಿಸುವರು. ಜಾಳಿಗೆಯಂತಿರುವ ಬಣ್ಣ ಬಣ್ಣದ ಬಟ್ಟೆಗಳನ್ನು ಸೂರಪಟ್ಟಿಯ ಮೇಲೆ ಸ್ವಲ್ಪ ಹೊರಬೀಳುವಂತೆ ಕಟ್ಟಲಾಗುವುದು. ಕೆಳಗೆ ನೇತಾಡುವ ಬಟ್ಟೆಯ ಕೊನೆಯ ಅಂಚಿನ ಭಾಗವನ್ನು ತ್ರಿಕೋನಾಕಾರ ಅಥವಾ ಎಲೆಯಾಕಾರವಾಗಿ ಕತ್ತರಿಸಲಾಗುವುದು. ಮಂಟಪದ ಪ್ರತಿಯೊಂದು ಭುಜದಲ್ಲಿ ನೇತಾಡುವಂತೆ ಕಾಗದದ ದುಂಡುಗಳನ್ನು ಮಾಡಿ ದಾರದಿಂದ ಕಟ್ಟುವರು. ವಿವಿಧ ಬಣ್ಣದ ಕಾಗದದ ಉಂಡೆಗಳು ರಥಧ ಮಂಟಪ ಭಾಗವನ್ನು ಆಕರ್ಷಿತಗೊಳಿಸುವವು. ಇದೇ ರೀತಿ ಬಣ್ಣ ಬಣ್ಣದ ಕಾಗದಗಳಿಂದ ಮಂಟಪ ಭಾಗವನ್ನು ಅಲಂಕರಿಸುವ ರಥಗಳನ್ನು ಬಾಗಲಕೋಟೆ ಜಿಲ್ಲೆಯ ಥಂಕನಾಳದ ಬಸವೇಶ್ವರ ದೇವಸ್ಥಾನದಲ್ಲಿ ಹಾಗೂ ಬಿಜಾಪುರ ಜಿಲ್ಲೆಯ ಬಸವನ ಬಾಗೇವಾಡಿಯ ದೇವಲಾಪುರದ ಸಿದ್ಧೇಶ್ವರ ದೇವಸ್ಥಾನದಲ್ಲಿ ಕಾಣಬಹುದು.

ನಂಜನಗೂಡಿನ ನಂಜುಂಡೇಶ್ವರ ರಥದ ಮಂಟಪ ಭಾಗವು ಚಿತ್ತಾಕರ್ಷಕ ವಿನ್ಯಾಸದಿಂದ ಕೂಡಿದೆ. ಈ ರಥದ ಮಂಟಪ ಭಾಗವು ಜೋಡು ಮಂಟಪಗಳನ್ನು ಹೊಂದಿದೆ. ಹೊರಭಾಗದ ಹಾಗೂ ಒಳಭಾಗದ ಮಂಟಪಗಳು ಬೇರೆ ಬೇರೆ ರೀತಿಯ ವರ್ಣವಿನ್ಯಾಸವನ್ನು ಹೊಂದಿವೆ. ಹೊರಗಿನ ಮಂಟಪವು ನಾಲ್ಕು ಕಲಾತ್ಮಕ ಕಂಬಗಳನ್ನು ಹೊಂದಿದ್ದು ಪ್ರತಿಯೊಂದು ಕಂಬಗಳು ಹಾಗೂ ಕಮಾನುಗಳಿಗೆ ಸಿಲ್ವರ್ ಬಣ್ಣ ಮಿಶ್ರಿತ ಬಿಳಿ ಬಣ್ಣವನ್ನು ಬಳಿಯಲಾಗಿದೆ. ಕಂಬಗಳ ಕೆಳಭಾಗದ ಚೌಕಾಕಾರದ ವಿನ್ಯಾಸಗಳಲ್ಲಿ ಹಸಿರು ಹಾಗೂ ಕೇಸರಿ ವರ್ಣಗಳನ್ನು ಹೊಂದಿದ ಹೂವಿನಾಕಾರದ ವಿನ್ಯಾಸಗಳು ಇವೆ.

ಕಂಬಗಳ ಮಧ್ಯಬಾಗಧಲ್ಲಿ ಹಾಗೂ ಮೇಲ್ಭಾಗದಲ್ಲಿರುವ ಬಳೆಯಾಕಾರದ ದುಂಡು ವಿನ್ಯಾಸ

ಗಳಲ್ಲಿ ಅಲ್ಲಲ್ಲಿ ಹಳದಿ ಹಾಗೂ ಕಡುಗಂದು ವರ್ಣಗಳಿಂದ ಗೆರೆಗಳನ್ನೆಳೆಯಲಾಗಿದೆ. ಕಂಬಗಳಿಂದ ಮೇಲ್ಭಾಗದಲ್ಲಿ ಪ್ರಾರಂಭಗೊಳ್ಳುವ ಕಮಾನುಗಳಲ್ಲಿ ಹಸಿರು ಹಾಗೂ ಕೆಂಪು ಬಣ್ಣಗಳಿಂದ ಕೂಡಿದ ಹೂ ಬಳ್ಳಿಗಳ ನಕ್ಷಾಕೃತಿಗಳಿವೆ. ಸುರುಳಿಯಾಕಾರದಲ್ಲಿರುವ ಬಳ್ಳಿಗಳು ಹಸಿರು ವರ್ಣಗಳಿಂದ ಕೂಡಿದ್ದರೆ, ಅವುಗಳಲ್ಲಿ ಕಾಣುವ ಹೂಗಳು ಕೆಂಪು ಬಣ್ಣದ್ದಾಗಿವೆ. ಮಂಟಪದ ಒಳಭಾಗದಲ್ಲಿ ಉಬ್ಬು ಶಿಲ್ಪಗಾರಿಕೆಯಿಂದ ಕೂಡಿದ ಭಾಗಗಳ ಅಂಚಿನಲ್ಲಿ ಹಸಿರು ಹಾಗೂ ಕೆಂಪು ವರ್ಣಗಳಿಂದ ಪಟ್ಟಿಗಳನ್ನು ಎಳೆಯಲಾಗಿದೆ. ಪ್ರತಿಯೊಂದು ಮಂಟಪದ ಮೇಲ್ಭಾಗದ ಮಧ್ಯದಲ್ಲಿರುವಂತಹ ಸುರುಳಿಯಾಕಾರದ ನಕ್ಷೆಗಳು ಹಾಗೂ ಆ ನಕ್ಷೆಗಳಲ್ಲಿ ಮದ್ಯದಲ್ಲಿರುವ ಅರಳಿದ ಕಮಲಗಳಂತಿರುವ ವಿನ್ಯಾಸಗಳಲ್ಲಿ ಸುಂದರವಾದ ವರ್ಣಗಾರಿಕೆಯನ್ನು ಕಾಣಬಹುದು. ಸುರುಳಿಯಾಕಾರದ ನಕ್ಷೆಗಳಿಗೆ ಹಳದಿ ಮಿಶ್ರಿತ ಹಸಿರು ವರ್ಣಲೇಪನವಿದ್ದರೆ, ಅರಳಿದ ಕಮಲಗಳಂತಿರುವ ಉಬ್ಬುಶಿಲ್ಪವಿನ್ಯಾಸಗಳಿಗೆ ಬಿಳಿ ಮಿಶ್ರಿತ ಕೆಂಪು ವರ್ಣಲೇಪನ ಮಾಡಲಾಗಿದೆ. ಕಮಲದ ಹೂವಿನ ಪ್ರತಿಯೊಂದು ಎಸಳುಗಳ ವಿನ್ಯಾಸಗಳಿಗೆ ಕಪ್ಪು ಹಾಗೂ ಬಂಗಾರವರ್ಣದ ಗೆರೆಗಳನ್ನು ಎಳೆಯಲಾಗಿದೆ. ಮಂಟಪದ ಮೇಲ್ಛಾವಣಿಯ ಸೂರಪಟ್ಟಿಗೂ ಸಹಿತ ಬಿಳಿಯ ಬಣ್ಣವನ್ನು ಲೇಪಿಸಲಾಗಿದೆ. ಸೂರಪಟ್ಟಿಯಲ್ಲಿ ಸುತ್ತಲೂ ಕಾಣಿಸುವಂತಹ ಬುಗುರೆಯಾಕಾರದ ವಿನ್ಯಾಸಗಳಲ್ಲಿ ಹಳದಿ ವರ್ಣಲೇಪನವನ್ನು ಕಾಣಬಹುದು.

ಇದರಂತೆ ಒಳಭಾಗದ ಮಂಟಪವೂ ಕೂಡ ವಿವಿಧ ರೀತಿಯ ವರ್ಣಗಳಿಂದ ಸುಂದರಗೊಂಡಿದೆ. ಮೊದಲು ಮಂಟಪದ ಎಲ್ಲ ಭಾಗಗಳಿಗೆ ಹಳದಿ ಮಿಶ್ರಿತ ಬಿಳಿವರ್ಣವನ್ನು ಲೇಪಿಸಲಾಗಿದೆ. ನಾಲ್ಕು ಕಲಾತ್ಮಕ ಕಂಬಗಳ ಕೆಳಭಾಗದಲ್ಲಿ ಕಂಡುಬರುವಂತಹ ಹೂಗಳ ವಿನ್ಯಾಸಗಳಿಗೆ ಕೇಸರಿ ಹಾಗೂ ಕಪ್ಪುವರ್ಣಗಳನ್ನು ಲೇಪಿಸಲಾಗಿದೆ. ಕಂಬಗಳ ಕೆಳಭಾಗಗಳಲ್ಲಿ ಹಾಗೂ ಮೇಲ್ಭಾಗಗಳಲ್ಲಿ ಕಾಣುವಂತಹ ಬಳೆಯಾಕಾರಗಳಿಗೆ ಕೆಂಪು ವರ್ಣವನ್ನು ಲೇಪಿಸಲಾಗಿದೆ. ಕಮಾನುಗಳ ಒಳಭಾಗದ ಅಂಚುಗಳಿಗೆ ಕೇಸರಿ ಬಣ್ಣವನ್ನು ಬಳಿಯಲಾಗಿಹೆ. ಕಮಾನುಗಳಮೇಲೆ ಸುರುಳಿಯಾಕಾರದಲ್ಲಿರುವಂತಹ ತುಂಬು ನಕಾಶೆಗಳಿಗೆ ಹಸಿರು, ನೀಲಿ ಹಾಗೂ ಕೆಂಪು ಮಿಶ್ರಿತ ಹಳದಿ ವರ್ಣಗಳ ಲೇಪನವನ್ನು ಮಾಡಲಾಗಿದೆ. ಮಂಟಪದ ಮೇಲ್ಛಾವಣಿಗೆ ಮೊದಲು ಹಳದಿ ಬಣ್ಣವನ್ನು ಬಳಿದು, ಮಂಟಪದ ಸುತ್ತಲೂ ಇರುವ ಸೂರಪಟ್ಟಿಯ ತ್ರಿಕೋನಾಕಾರದ ವಿನ್ಯಾಸಗಳಿಗೆ ತಿಳಿ ನೀಲಿ ವರ್ಣಲೇಪನ ಮಾಡಲಾಗಿದೆ. ಮಂಟಪದ ಮೇಲ್ಭಾಗದ ಎರಡು ಹಂತಗಳಲ್ಲಿ ಕಾಣುವಂತಹ ಅರ್ಧವೃತ್ತಾಕಾರದ ಉಬ್ಬುಶಿಲ್ಪಗಳಿಗೆ ಗುಲಾಬಿ ಹಾಗೂ ನೀಲಿ ವರ್ಣಗಳನ್ನು ಕ್ರಮವಾಗಿ ಲೇಪಿಸಲಾಗಿದೆ. ಇದಲ್ಲದೆ ಹೊರಗಿನ ಮಂಟಪದ ಸುತ್ತಲೂ ಇರುವ ಕಟಂಜರಗಳಿಗೆ ಹಳದಿ ಮಿಶ್ರಿತ ಹಸಿರು ಬಣ್ಣವನ್ನು ಹಚ್ಚಲಾಗಿದೆ. ಈ ರಥದ ಮಂಟಪ ಭಾಗವು ಅತ್ಯಂತ ಆಕರ್ಷಕವಾಗಿದೆ.

ಬೆಳಗಾಂವಿ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ರಥದ ಮಂಟಪ ಭಾಗವು ಸಹ ವರ್ಣಗಾರಿಕೆಯನ್ನು ಹೊಂದಿದೆ. ಮಂಟಪದ ಕಂಬಗಳ ಮಧ್ಯಭಾಗಗಳಲ್ಲಿರುವ ಜಾಲರಿಯ ಚೌಕಟ್ಟುಗಳಿಗೆ ಹಸಿರು ವರ್ಣವನ್ನು ಲೇಪಿಸಿರುವರು. ಕಂಬಗಳಲ್ಲಿ ಕಾಣುವ ದುಂಡಾದ ವಿನ್ಯಾಸಗಳಿಗೆ ನೀಲಿ ವರ್ಣವನ್ನು ಹಾಗೂ ಕಂಬಗಳ ಮಧ್ಯಭಾಗದಲ್ಲಿ ಕೆಂಪು ಮಿಶ್ರಿತ ಕೇಸರಿ ವರ್ಣವನ್ನು ಕಾಣಬಹುದು. ಕಮಾನುಗಳ ಭಾಗಗಳಲ್ಲಿ ಹಸಿರು ವರ್ಣಲೇಪನ ಮಾಡಲಾಗಿದೆ. ಕಮಾನುಗಳ ಸುತ್ತಲೂ ಇರುವ ಹೂವಿನಾಕಾರದ ವಿನ್ಯಾಸಗಳಿಗೆ ನೀಲಿ ವರ್ಣಲೇಪನ ಮಾಡಲಾಗಿದೆ.

ಕುಕ್ಕೆ ಸುಬ್ರಹ್ಮಣ್ಯಂ ದೇವಸ್ಥಾನದ ರಥದ ಮಂಟಪ ಭಾಗವು ಎಂಟು ಕಂಬಗಳನ್ನು ಹೊಂದಿದ್ದು, ಮೊದಲು ಎಲ್ಲ ಕಂಬಗಳಿಗೆ ತಿಳಿ ನೇರಳೆ ಬಣ್ಣವನ್ನು ಬಳಿಯಲಾಗಿದೆ. ಕಂಬಗಳ ಕೆಳಭಾಗದಲ್ಲಿ, ಮಧ್ಯಭಾಗದಲ್ಲಿ ಹಾಗೂ ಮೇಲ್ಭಾಗದಲ್ಲಿ ಕಾಣುವಂತಹ ಬಳೆಯಾಕಾರದ ಉಬ್ಬು ಶಿಲ್ಪಗಳಿಗೆ ಕ್ರಮವಾಗಿ ಕೆಂಪು, ಹಳದಿ, ನೀಲಿ, ಹಸಿರು, ವರ್ಣಗಳನ್ನು ಮತ್ತೆ ಪುನರಾವರ್ತಿಸಿ ಸುಂದರವಾಗಿ ಲೇಪಿಸಿರುವರು. ಇದಲ್ಲದೆ ಕಮಾನುಗಳ ಭಾಗದಲ್ಲಿ ಕಡುಗಂದು ಬಣ್ಣದ ವರ್ಣಲೇಪನ ಮಾಡಿ, ಅದರ ಮೇಲೆ ತುಂಬು ಬಳ್ಳಿಯಾಕಾರದಲ್ಲಿ ಹಳದಿ ಮಿಶ್ರಿತ ಬಿಳಿ ವರ್ಣದಿಂದ ಚಿತ್ರಿಸಿರುವರು.

ii. ಚರರಥಗಳ ಮಂಟಪ ಭಾಗದ ವರ್ಣವಿನ್ಯಾಸ :

ಸ್ಥಿರ ರಥದ ಮಂಟಪ ಭಾಗದಲ್ಲಿ ಕಾಣುವಂತೆ ಚರರಥಗಳಲ್ಲಿಯ ಮಂಟಪ ಭಾಗದಲ್ಲಿಯೂ ಸುಂದರವಾದ ವರ್ಣವಿನ್ಯಾಸವನ್ನು ಕಾಣಬಹುದು. ಈ ರಥಗಳ ಮಂಟಪ ಭಾಗದಲ್ಲಿ ಅನೇಕ ಬಿಡಿಶಿಲ್ಪವಿನ್ಯಾಸಗಳು, ಕಮಾನುಗಳು ಹಾಗೂ ಕಂಬಗಳನ್ನು ಅಳವಡಿಸಿರುವರು. ಆದ್ದರಿಂದ ಚರರಥದ ಮಂಪಟ ಭಾಗವು ಎರಡು ವಿಧದಲ್ಲಿ ವರ್ಣಗಾರಿಕೆಯಿಂದ ಕೂಡಿರುತ್ತದೆ.

ರ. ಬಿಡಿ ಶಿಲ್ಪಗಳಲ್ಲಿ ವರ್ಣವಿನ್ಯಾಸ

ಠ. ಕಂಬ ಹಾಗೂ ಕಮಾನುಗಳಲ್ಲಿ ವರ್ಣವಿನ್ಯಾಸ.

ರ. ಬಿಡಿ ಶಿಲ್ಪಗಳಲ್ಲಿ ವರ್ಣವಿನ್ಯಾಸ :

ಚರರಥಗಳಲ್ಲಿ ಎರಡು ರೀತಿಯ ಬಿಡಿಶಿಲ್ಪಗಳಲ್ಲಿ ವರ್ಣಗಾರಿಕೆಯನ್ನು ನೋಡಬಹುದು.

★. ಪ್ರಾಣಿ ಪಕ್ಷಿಗಳ ಬಿಡಿಶಿಲ್ಪಗಳಲ್ಲಿ ಹಾಗೂ ಚಿತ್ರಗಳಲ್ಲಿ ವರ್ಣವಿನ್ಯಾಸ.

★. ದೇವತಾ ಬಿಡಿಶಿಲ್ಪಗಳಲ್ಲಿ ಹಾಗೂ ಚಿತ್ರಗಳಲ್ಲಿ ವರ್ಣವಿನ್ಯಾಸ

★. ಪ್ರಾಣಿ-ಪಕ್ಷಿಗಳ ಬಿಡಿಶಿಲ್ಪಗಳಲ್ಲಿ ಹಾಗೂ ಚಿತ್ರಗಳಲ್ಲಿ ವರ್ಣವಿನ್ಯಾಸ : ಬಳ್ಳಾರಿ ಜಿಲ್ಲೆಯ ಹಂಪೆಯ ವಿರೂಪಾಕ್ಷ ದೇವಾಲಯದ ರಥವು ಉತ್ಸವದ ಸಂದರ್ಭದಲ್ಲಿ ಮಂಟಪ ಭಾಗದಲ್ಲಿ ವಿವಿಧ ರೀತಿಯ ಬಿಡಿಶಿಲ್ಪಗಳು ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡಿರುತ್ತದೆ. ರಥದ ಮಂಟಪ ಭಾಗದ ನಾಲ್ಕೂ ಭುಜಗಳಲ್ಲಿ ಕಾಣುವ ಸಿಂಹದ ಶಿಲ್ಪಗಳು ತುಂಬಾ ಆಕರ್ಷಕವಾಗಿರುತ್ತವೆ. ಮುಂಗಾಲುಗಳೆರಡನ್ನೂ ಮೇಲೆ ಎತ್ತಿ ನೆಗೆಯುವಂತಿರುವ ಸಿಂಹಗಳಿಗೆ ಮೊದಲು ಹಳದಿ ವರ್ಣವನ್ನು ಲೇಪಿಸಿ, ನಂತರ ಕಂದು ಬಣ್ಣದಿಂದ ಅಲ್ಲಲ್ಲಿ ಗೆರೆಗಳನ್ನೆಳೆದಿರುತ್ತಾರೆ. ಕಾಲುಗಳಲ್ಲಿರುವ ಎಲ್ಲ ಉಗುರುಗಳು ಹಳದಿ ಮಿಶ್ರಿತ ಬಿಳಿ ಬಣ್ಣವನ್ನು ಹೊಂದಿರುತ್ತವೆ. ತೆರೆದ ಬಾಯಿಯ ಒಳಗಡೆಗೆ ಕೆಂಪು ವರ್ಣವಿದ್ದರೆ ಹಲ್ಲುಗಳು ಬಿಳಿಯ ಬಣ್ಣದ್ದಾಗಿರುತ್ತವೆ. ಕುತ್ತಿಗೆಯ ಸುತ್ತಲೂ ಇರುವ ಕೇಸರಗಳಿಗೆ ಕಂದು ಮಿಶ್ರಿತ ಕಡುಗೆಂಪು ವರ್ಣವನ್ನು ಲೇಪಿಸಲಾಗುತ್ತದೆ. ಹುಬ್ಬು ಕಣ್ಣುಗಳು ಹಾಗೂ ಮೀಸೆಗಳು ಕಪ್ಪು ವರ್ಣದಿಂದ ಸುಂದರಗೊಂಡಿರುತ್ತವೆ. ಇದಲ್ಲದೆ ನವಿಲುಗಳ ಶಿಲ್ಪಗಳಲ್ಲಿ ವಿವಿಧ ರೀತಿಯ ವರ್ಣಗಾರಿಕೆ ಇರುತ್ತದೆ. ನವಿಲಿನ ಕುತ್ತಿಗೆಗೆ ಪಿಕಾಕ್-ಬ್ಲೂ ಬಣ್ಣ, ಕಣ್ಣುಗಳು ಹಾಗೂ ಚುಂಚುಗಳಿಗೆ ಕಪ್ಪು ಬಣ್ಣ, ರೆಕ್ಕೆಗಳಿಗೆ ಹಳದಿ ಮಿಶ್ರಿತ ಬಂಗಾರವರ್ಣ, ಕಾಲುಗಳಿಗೆ ಕಂದು ಮಿಶ್ರಿತ ಹಳದಿ ಬಣ್ಣ

ಹಾಗೂ ನವಿಲು ಗರಿಗಳಿಗೆ ನೀಲಿ ಹಸಿರು, ಹಳದಿ, ಕಡುಗಂದು ಹಾಗೂ ನೇರಳೆ ವರ್ಣಗಳಿಂದ ಸುಂದರಗೊಳಿಸಿರುವುದನ್ನು ಕಾಣಬಹುದು. ಕೆಲವು ಸಣ್ಣ ಸಣ್ಣ ಗಿಳಿಗಳ ಶಿಲ್ಪಗಳನ್ನು ಈ ರಥದ ಮಂಟಪ ಭಾಗದಲ್ಲಿ ಕಾಣಬಹುದು. ಅವುಗಳನ್ನು ಹಸಿರುವರ್ಣ, ಕೆಂಪು ವರ್ಣ ಹಾಗೂ ಕಪ್ಪು ವರ್ಣಗಳಿಂದ ಸುಂದರಗೊಳಿಸಿರುತ್ತಾರೆ.

ಇದೇ ಜಿಲ್ಲೆಯ ಕೂಡ್ಲಗಿ ತಾಲೂಕು ಕೊಟ್ಟೂರಿನ ಕೊಟ್ಟೂರೇಶ್ವರ ರಥದ ಮಂಟಪ ಭಾಗದಲ್ಲಿ ವಿವಿಧ ರೀತಿಯ ಬಿಡಿಚಿತ್ರಗಳನ್ನು ನೋಡಬಹುದು. ಅವುಗಳಲ್ಲಿರುವ ಪ್ರಾಣಿ ಪಕ್ಷಿಗಳ ಚಿತ್ರಗಳು ಸುಂದರವಾದ ವರ್ಣಗಾರಿಕೆಯಿಂದ ಕೂಡಿರುತ್ತವೆ. ಶಿವನ ವಾಹನ ನಂದಿಗೆ ಬಿಳಿಯ ವರ್ಣವಿದ್ದು, ಕಣ್ಣುಗಳಲ್ಲಿ ಹಾಗೂ ಗೊರಸುಗಳ ಭಾಗಗಳಲ್ಲಿ ಕಪ್ಪುವರ್ಣವನ್ನು ಬಳಸಲಾಗಿರುತ್ತದೆ. ಅನೇಕ ಸಿಂಹಗಳ ಚಿತ್ರಗಳಲ್ಲಿ ಹಳದಿ, ಕಂದು ಹಾಗೂ ಕಪ್ಪು ವರ್ಣಗಳನ್ನು ಕಾಣಬಹುದು. ಹಾರುವ ನವಿಲುಗಳು ಕೆಂಪು, ಹಸಿರು, ಹಳದಿ, ಬಿಳಿ ಹಾಗೂ ನೇರಳೆ ಬಣ್ಣಗಳಿಂದ ರಚಿತಗೊಂಡಿದ್ದರೆ. ನೀರಿನಲ್ಲಿ ತೇಲುವ ಹಂಸಗಳು ಬಿಳಿಯ ಹಾಗೂ ತೆಳು ನೀಲಿ ವರ್ಣಗಳನ್ನು ಹೊಂದಿರುತ್ತವೆ.

ಇದೇ ಜಿಲ್ಲೆಯ ಮರೆಮ್ಮನಹಳ್ಳಿಯ ಎರಡು ರಥಗಳ ಮಂಟಪ ಭಾಗಗಳು ಅನೇಕ ಪ್ರಾಣಿಶಿಲ್ಪಗಳನ್ನು ಹೊಂದಿರುತ್ತವೆ. ಇವುಗಳಲ್ಲಿ ಸಿಂಹದ ಶಿಲ್ಪಗಳು, ಆನೆಯ ಶಿಲ್ಪಗಳು ಹಾಗೂ ನಾಗಶೇಷನ ಶಿಲ್ಪಗಳು ಉತ್ತಮ ವರ್ಣಗಾರಿಕೆಯಿಂದ ಕೂಡಿರುತ್ತವೆ. ಸಿಂಹದ ಶಿಲ್ಪಗಳು ಹಂಪೆಯ ವಿರೂಪಾಕ್ಷ ದೇವಾಲಯದ ರಥದ ಮಂಟಪ ಭಾಗದಲ್ಲಿಯ ಸಿಂಹಗಳ ಬಿಡಿಶಿಲ್ಪಗಳಂತೆಯೇ ವರ್ಣಗಾರಿಕೆಯನ್ನು ಹೊಂದಿರುತ್ತವೆ. ಇದಲ್ಲದೆ ಗಿಳಿ ಹಾಗೂ ನವಿಲಿನ ಶಿಲ್ಪಗಳೂ ಸಹ ಅದೇ ರೀತಿಯ ವರ್ಣಗಾರಿಕೆಯನ್ನು ಹೊಂದಿರುತ್ತವೆ. ಆದರೆ ಈ ರಥದಲ್ಲಿ ಶೇಷನಾಗನ ಶಿಲ್ಪಗಳು ಹಳದಿ ಬಣ್ಣದಿಂದ ಕೂಡಿದ್ದು ತೆರೆದ ಹೆಡೆಯಾಕಾರದ ಕೆಳಭಾಗದಲ್ಲಿ ತೆಳು ನೀಲಿ ಬಣ್ಣದಿಂದ ಗೆರೆಗಳನ್ನು ಹಾಕಲಾಗಿರುತ್ತದೆ. ಅಲ್ಲಲ್ಲಿ ಕಂದು ಬಣ್ಣದ ಚುಕ್ಕೆಗಳಿರುತ್ತವೆ. ಇದಲ್ಲದೆ ಕಣ್ಣುಗಳ ಭಾಗಗಳಲ್ಲಿ ಕಪ್ಪು ಹಾಗೂ ಕಂದು ಬಣ್ಣಗಳನ್ನು ಕಾಣಬಹುದು ಐದು ಹೆಡೆಯ ನಾಗಶೇಷನ ತಲೆಯ ಮೇಲ್ಭಾಗದಲ್ಲಿ ಕಾಣುವಂತಹ ಮಣಿಗಳಾಕಾರಗಳಿಗೆ ಕೆಂಪು ಹಾಗೂ ಕಡು ನೀಲಿ ವರ್ಣಗಳನ್ನು ಲೇಪಿಸಿಲಾಗಿದೆ.

ಪ್ರಾಣಿಶಿಲ್ಪ ಮತ್ತು ಚಿತ್ರಗಳಲ್ಲಿ ಇದೇ ರೀತಿಯ ವರ್ಣಗಾರಿಕೆಯನ್ನು ಇದೇ ಜಿಲ್ಲೆಯ ಕೆಲವು ರಥಗಳಲ್ಲಿ ಕಾಣಬಹುದು. ಶಿರಗುಪ್ಪದ ರಾರವಿ ಯಲ್ಲಮ್ಮ, ಚಳಗುರ್ಕಿಯ ಉರಿತಾತನ ರಥ, ಕೂಡ್ಲಗಿ ತಾಲೂಕು ಉಜನಿಯ ಮರುಳುಸಿದ್ಧೇಶ್ವರ ರಥ ಈ ಎಲ್ಲ ರಥಗಳಲ್ಲಿ ಕಾಣಬಹುದು.

ನಂಜನಗೂಡಿನ ನಂಜುಂಡೇಶ್ವರ ರಥದ ಮಂಟಪ ಭಾಗದಲ್ಲಿನ ವಿವಿಧ ರೀತಿಯ ಪ್ರಾಣಿ ಪಕ್ಷಿಗಳ ಬಿಡಿಶಿಲ್ಪಗಳಲ್ಲಿ ಹಾಗೂ ಚಿತ್ರಗಳಲ್ಲಿ ವರ್ಣಗಾರಿಕೆಯನ್ನು ಕಾಣಬಹುದು. ಮಂಟಪ ಭಾಗದಲ್ಲಿರುವ ಸಿಂಹದ ಶಿಲ್ಪಗಳಿಗೆ ಕಂದು ವರ್ಣವಿದ್ದು ಕಣ್ಣುಗಳು ಹಾಗೂ ಕೇಸರಗಳಿಗೆ ಕಪ್ಪು ಬಣ್ಣವನ್ನು ಬಳಸಿರುವರು. ನಂದಿಯ ಶಿಲ್ಪಗಳಿಗೆ ಬಿಳಿ, ಕಂದು, ತಿಳಿನೀಲಿ ಹಾಗೂ ಕಪ್ಪು ವರ್ಣವನ್ನು ಬಳಸಿರುವರು. ನವಿಲು ಹಾಗೂ ಗಿಳಿಗಳ ಚಿತ್ರಗಳಲ್ಲಿ ಅನೇಕ ಬಣ್ಣಗಳನ್ನು ನೋಡಬಹುದು. ನವಿಲುಗಳು ಹೂಬಳ್ಳಿಗಳ ವಿನ್ಯಾಸದ ಮಧ್ಯದಲ್ಲಿ ಕುಳಿತಿದ್ದು, ಪಿಕಾಕ್ ಬ್ಲೂ, ಹಳದಿ, ಕೆಂಪು, ಹಸಿರು, ನೀಲಿ, ಕಡುಗಂದು ಹಾಗೂ ಕಪ್ಪು ವರ್ಣಗಳನ್ನು ಹೊಂದಿವೆ. ಬಳ್ಳಿಯು ಹಸಿರು ವರ್ಣದ್ದಾದರೆ. ಅದರಲ್ಲಿ ಅರಳಿದ ಹೂಗಳು ಕೆಂಪು ವರ್ಣಗಳಿಂದ ಕೂಡಿವೆ. ಗಿಳಿಗಳು ಹಸಿರು ವರ್ಣದಿಂದ

ಚಿತ್ರಿಸಲ್ಪಟ್ಟರೆ ಅವುಗಳ ಕುತ್ತಿಗೆಯಲ್ಲಿ ಕೆಂಪು ಬಣ್ಣದಿಂದ ಗೆರೆಗಳನ್ನು ಹಾಕಲಾಗಿದೆ. ಚುಂಚುಗಳೂ ಸಹ ಕೆಂಪು ವರ್ಣದ್ದಾಗಿವೆ.

ಇದೇ ರೀತಿಯ ವಿವಿಧ ವರ್ಣಚಿತ್ರಗಳಿರುವ ರಥಗಳನ್ನು ಈ ಭಾಗದ ಇನ್ನೂ ಕೆಲವು ರಥಗಳಲ್ಲಿ ಕಾಣಬಹುದು.

★. ದೇವತಾ ಬಿಡಿಶಿಲ್ಪಗಳಲ್ಲಿ ಹಾಗೂ ಚಿತ್ರಗಳಲ್ಲಿ ವರ್ಣವಿನ್ಯಾಸ :ಬಳ್ಳಾರಿ ಜಿಲ್ಲೆಯ ಮರೆಮ್ಮನಹಳ್ಳಿಯ ರಥಗಳಲ್ಲಿ ವಿವಿಧ ರೀತಿಯ ದೇವತೆಗಳ ಬಿಡಿ ಶಿಲ್ಪಗಳು ವರ್ಣಗಾರಿಕೆಯಿಂದ ಕೂಡಿರುತ್ತವೆ. ಮಂಟಪ ಭಾಗದ ಪ್ರತಿಯೊಂದು ಕಮಾನಿನ ಮಧ್ಯದಲ್ಲಿ ಅನೇಕ ದೇವತಾ ಮೂರ್ತಿಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ದ್ವಾರಪಾಲಕರ ಶಿಲ್ಪಗಳು, ಆಂಜನೇಯನ ಶಿಲ್ಪ, ಶಿವ ಪಾರ್ವತಿಯರ ಶಿಲ್ಪಗಳು ಹೀಗೆ ಹಲವಾರು ಶಿಲ್ಪಗಳು ಸುಂದರ ವರ್ಣಗಳಿಂದ ಆಕರ್ಷಕವಾಗಿರುತ್ತವೆ.

ಆಂಜನೇಯನ ಶಿಲ್ಪಕ್ಕೆ ನೀಲಿ ಮಿಶ್ರಿತ ಹಸಿರು ವರ್ಣವನ್ನು ಸಂಪೂರ್ಣವಾಗಿ ಹಚ್ಚಿ, ಕಿರೀಟ ಹಾಗೂ ಆಭರಣಗಳಿಗೆ ಬಂಗಾರವರ್ಣವನ್ನು ಹಚ್ಚಲಾಗಿರುತ್ತದೆ. ಬಾಲಕ್ಕೆ ಕಪ್ಪು ವರ್ಣವನ್ನು, ಕಣ್ಣುಗಳಿಗೆ, ಹುಬ್ಬುಗಳಿಗೆ ಹಾಗೂ ಕೈಗಳ ಕೆಲವು ಭಾಗಗಳಲ್ಲಿಯೂ ಕಪ್ಪು ವರ್ಣವನ್ನು ಬಳಸಲಾಗಿರುತ್ತದೆ.

ಶಿವ ಪಾರ್ವತಿಯರ ಶಿಲ್ಪಗಳಿಗೆ ಕೇಸರಿ ಮಿಶ್ರಿತ ಬಿಳಿವರ್ಣ, ನೀಲಿ ಹಾಗೂ ಕಂದು ವರ್ಣಗಳನ್ನು ಲೇಪಿಸಿರುತ್ತಾರೆ. ಶಿವನ ಕೊರಳಲ್ಲಿಯ ಸರ್ಪಕ್ಕೆ ಹಳದಿ ಹಾಗೂ ಕಂದು ವರ್ಣಗಳಿಂದ ಚುಕ್ಕೆಗಳನ್ನಿಟ್ಟಿರುತ್ತಾರೆ. ದ್ವಾರಪಾಲಕರ ಶಿಲ್ಪಗಳಿಗೆ ಮುಖ, ಮೈ ಹಾಗೂ ಕೈಗಳಿಗೆ ತಿಳಿಗೆಂಪು ಮಿಶ್ರಿತ ಹಳದಿ ವರ್ಣವನ್ನು ಲೇಪಿಸುವರು. ಕಿರೀಟ ಹಾಗೂ ಕೊರಳಲ್ಲಿರುವ ಆಭರಣಗಳಿಗೆ ಹಳದಿ ಹಾಗೂ ಕಡುಗಂದು ವರ್ಣಲೇಪನ ಮಾಡಿ, ಅದರ ಮೇಲೆ ಕೆಂಪು ಹಾಗೂ ನೀಲಿ ವರ್ಣಗಳಿಂದ ಚುಕ್ಕೆಗಳನ್ನಿಡುತ್ತಾರೆ. ಹೆಣ್ಣು ದೇವತೆಯರ ಬಟ್ಟೆಯ ವಿನ್ಯಾಸಗಳಿಗೆ ಹಸಿರು, ಹಳದಿ, ಕೆಂಪು ನೀಲಿ ಹೀಗೆ ವಿವಿಧ ವರ್ಣಗಳನ್ನು ಲೇಪನ ಮಾಡಿರುತ್ತಾರೆ. ಕಣ್ಣುಗಳು ಹಾಗೂ ತಲೆಗೂದಲುಗಳಿಗೆ ಕಪ್ಪು ವರ್ಣದಿಂದ ಗೆರೆಗಳನ್ನೆಳೆದಿರುತ್ತಾರೆ.

ಇದೇ ಜಿಲ್ಲೆಯ ಹಂಪೆಯ ವಿರೂಪಾಕ್ಷದೇವಾಲಯದ ರಥದ ಮಂಟಪ ಭಾಗವು ಉತ್ಸವದ ಸಂದರ್ಭದಲ್ಲಿ ಹಲವಾರು ದೇವತೆಯರ ಶಿಲ್ಪಗಳಲ್ಲಿ ವರ್ಣಗಾರಿಕೆಯನ್ನು ಹೊಂದಿರುತ್ತದೆ. ಈ ರಥದಲ್ಲಿಯೂ ಸಹ ಮರೆಮ್ಮನಹಳ್ಳಿಯ ರಥದ ದೇವತಾ ಶಿಲ್ಪಗಳಲ್ಲಿರುವಂತೆಯೇ ವರ್ಣಗಾರಿಕೆ ಕಂಡುಬರುತ್ತದೆ. ಈ ರಥದಲ್ಲಿ ಗರುಡನ ಶಿಲ್ಪವು ತುಂಬಾ ಆಕರ್ಷಕವಾಗಿ ಕಂಡುಬರುತ್ತದೆ. ಮುಖ, ಮೈ ಹಾಗೂ ಕೈ ಕಾಲುಗಳಿಗೆ ಬಿಳಿ ಮಿಶ್ರಿತ ಕೇಸರಿ ವರ್ಣಲೇಪನ ಮಾಡಿ, ಕಿರೀಟ ಹಾಗೂ ಕೊರಳುಗಳಲ್ಲಿ ಕಾಣಿಸುವಂತಹ ಆಭರಣಗಳ ವಿನ್ಯಾಸಗಳನ್ನು ಬಂಗಾರ ವರ್ಣದಿಂದ ಸುಂದರಗೊಳಿಸಿರುವರು. ಕಿರೀಟದಲ್ಲಿರುವ ಕೆಲವು ಮಣಿಗಳಂತಹ ವಿನ್ಯಾಸಗಳಿಗೆ ಹಾಗೂ ಅಭರಣಗಳಲ್ಲಿರುವ ಮುತ್ತುಗಳಂತಹ ವಿನ್ಯಾಸಗಳಿಗೆ ಕೆಂಪು, ಹಸಿರು, ನೀಲಿ, ಸಿಲ್ವರ್ ಕಲರ್ ಹೀಗೆ ವಿವಿಧ ರೀತಿಯ ವರ್ಣಗಳನ್ನು ಲೇಪಿಸಿರುವರು. ಗರುಡ ದೇವತೆಯ ರೆಕ್ಕೆಗಳನ್ನು ಹಳದಿ ಹಾಗೂ

ಕಂದು ವರ್ಣಗಳಿಂದ ಸುಂದರಗೊಳಿಸುವರು.

ಇದೇ ರೀತಿಯ ದೇವತಾ ಶಿಲ್ಪಗಳ ವರ್ಣಗಾರಿಕೆಯನ್ನು ಬಳ್ಳಾರಿ ಜಿಲ್ಲೆಯ ಸೋಗಿ ವೀರಭದ್ರೇಶ್ವರ ದೇವಸ್ಥಾನದ ರಥದಲ್ಲಿ ಹಾಗೂ ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನದ ರಥದಲ್ಲಿ ಕಾಣಬಹುದು.

ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲೂಕು ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನದ ರಥೋತ್ಸವದ ಸಂದರ್ಭದಲ್ಲಿ ರಥದ ಮಂಟಪ ಭಾಗದಲ್ಲಿ ಅನೇಕ ವರ್ಣಚಿತ್ರಗಳನ್ನು ಅಂಟಿಸುವರು. ಇಲ್ಲವೆ ದೇವಾನುದೇವತೆಯರ ವರ್ಣಚಿತ್ರಗಳ ಫೋಟೋಗಳನ್ನು ಕಟ್ಟಿರುವುದು ಕಂಡುಬರುತ್ತದೆ. ಲಕ್ಷ್ಮೀ, ಸರಸ್ವತಿ, ಗಣಪತಿ, ವಿಷ್ಣು, ಮಹೇಶ್ವರ, ಶಕ್ತಿಮಾತೆ ಹೀಗೆ ಅನೇಕ ದೇವತೆಗಳ ವರ್ಣಚಿತ್ರಗಳಿಂದ ಕೂಡಿದ ಮಂಟಪ ಭಾಗವು ಆಕರ್ಷಕವಾಗಿರುತ್ತದೆ. ಇದೇ ಜಿಲ್ಲೆಯ ಕುರುವತ್ತಿ ಬಸವೇಶ್ವರ ದೇವಸ್ಥಾನದ ರಥದ ಮಂಟಪ ಭಾಗವು ಕೂಡ್ಲಗಿಯ ರಥದಂತೆಯೇ ವರ್ಣಗಾರಿಕೆಯಿಂದ ಕೂಡಿರುತ್ತದೆ.


ಇದೇ ಜಿಲ್ಲೆಯ ಮೈಲಾರ ಲಿಂಗೇಶ್ವರ, ಮೊದಲಗಟ್ಟಿಯ ಆಂಜನೆಯ, ಕುಲಹಳ್ಳಿಯ ಗೋಣಿ ಬಸವೇಶ್ವರ ಈ ಎಲ್ಲ ರಥಗಳ ಮಂಟಪ ಭಾಗಗಳಲ್ಲಿ ವಿವಿಧ ರೀತಿಯ ದೇವಾನುದೇವತೆಯರ ವರ್ಣಚಿತ್ರಗಳನ್ನು ಕಾಣಬಹುದು.

ಕುಕ್ಕೆ ಸುಬ್ರಮಣ್ಯಂ ದ ಸುಬ್ರಮಣ್ಯಸ್ವಾಮಿ ರಥ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಸ್ಥಾನದ ರಥ ಹಾಗೂ ನಂಜನಗೂಡಿನ ನಂಜುಡೇಶ್ವರ ದೇವಸ್ಥಾನದ ರಥಗಳು ಉತ್ಸವದ ಸಂದರ್ಭದಲ್ಲಿ, ಮಂಟಪ ಭಾಗದಲ್ಲಿ ವಿವಿಧ ರೀತಿಯ ದೇವತಾ ಶಿಲ್ಪಗಳನ್ನು ಅಳವಡಿಸಿಕೊಂಡಿರುತ್ತವೆ. ಎಲ್ಲ ದೇವತಾ ಶಿಲ್ಪಗಳೂ ಉತ್ತಮವಾದ ವರ್ಣ ವಿನ್ಯಾಸವನ್ನು ಹೊಂದಿರುತ್ತವೆ.

ಆ. ಕಂಬ ಹಾಗೂ ಕಮಾನುಗಳಲ್ಲಿ ವರ್ಣವಿನ್ಯಾಸ :

ಮೇಲೆ ಹೆಸರಿಸಲಾದ ಎಲ್ಲಾ ದೇವಸ್ಥಾನಗಳ ರಥಗಳೂ ಸಹ ಉತ್ಸವದ ಸಮಯದಲ್ಲಿ ಮಂಟಪ ಭಾಗದಲ್ಲಿ ಕಂಬ ಹಾಗೂ ಕಮಾನುಗಳನ್ನು ಒಳಗೊಂಡಿರುತ್ತವೆ. ಈ ಕಂಬ ಹಾಗೂ ಕಮಾನುಗಳು ಕಣ್ಮನ ಸೆಳೆಯುವಂತಹ ವರ್ಣಗಾರಿಕೆಯನ್ನು ಹೊಂದಿರುತ್ತವೆ. ಇಲ್ಲಿ ಕೆಲವು ರಥಗಳನ್ನು ಉದಾಹರಣೆಯಾಗಿ ಬಳಸಿಕೊಂಡು ಅವುಗಳಲ್ಲಿಯ ವರ್ಣವಿನ್ಯಾಸವನ್ನು ತಿಳಿದುಕೊಳ್ಳೋಣ.

ಕುರುವತ್ತಿಯ ಬಸವೇಶ್ವರ ರಥದ ಮಂಟಪ ಭಾಗವು ವಿವಿಧ ಬಿದಿರುಗಳಿಂದ ಹಾಗೂ ರಟ್ಟುಗಳಿಂದ ತಯಾರಿಸಲ್ಪಟ್ಟು, ಅದರ ಮೇಲೆ ಬಣ್ಣದ ಬಟ್ಟೆಗಳನ್ನು ಸುತ್ತಿರುವುದನ್ನು ಕಾಣಬಹುದು. ಮಂಟಪದ ಸುತ್ತಲೂ ಇರುವ ಕಂಬಗಳ ಮೇಲೆ ಹಸಿರು, ಕೆಂಪು, ಹಳದಿ ಹೀಗೆ ವಿವಿಧ ಬಣ್ಣದ ಬಟ್ಟೆಗಳನ್ನು ಸುತ್ತಿ ಅವುಗಳ ಮೇಲೆ ಬೇರೆ ಬೇರೆ ಬಣ್ಣಗಳಿಂದ ಹೂಬಳ್ಳಿಯಾಕಾರದ ಸುರುಳಿಯಾಕಾರದ ಚಿತ್ರವಿನ್ಯಾಸಗಳನ್ನು ಬರೆಯುವರು. ಇದಲ್ಲದೆ ಕಮಾನುಗಳ ಭಾಗದಲ್ಲಿ ಮೊದಲು ಯಾವುದಾದರೂ ವರ್ಣವನ್ನು ಬಳಿದು, ಅದರ ಮೇಲೆ ತುಂಬು ನಕ್ಷೆಗಳಾಕಾರವಾಗಿ ವಿವಿಧ ವರ್ಣಗಳಿಂದ ಚಿತ್ರಿಸಿರುವರು.



ಶ್ರೀ ಶಂಕರಲಿಂಗನ ರಥ
ಸಂಕೇಶ್ವರ, ಜಿ - ಬೆಳಗಾಂವ



ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥ
ನಂಜನಗೂಡು



ಶ್ರೀ ಸುಬ್ರಹ್ಮಣ್ಯ ಸ್ವಾಮಿ ರಥ
ಕುಕ್ಕೆ ಸುಬ್ರಹ್ಮಣ್ಯ



ಶ್ರೀ ಶ್ರೀಕಂಠೇಶ್ವರ ಸ್ವಾಮಿ ರಥ
ನಂಜನಗೂಡು



ಶ್ರೀ ಸಂಗಮೇಶ್ವರ ರಥ
ಗುಳೇದಗುಡ್ಡ, ಜಿ - ಬಾಗಲಕೋಟ



ಶ್ರೀ ಶ್ರೀರಂಗನಾಥನ ರಥ
ಶ್ರೀರಂಗಪಟ್ಟಣ



ಶ್ರೀ ಬಸವೇಶ್ವರ ರಥ
ಬೈಲಹೊಂಗಲ, ಜಿ - ಬೆಳಗಾಂವ

ಬಳ್ಳಾರಿ ಜಿಲ್ಲೆಯ ಮರೆಮ್ಮನಹಳ್ಳಿ ದೇವಸ್ಥಾನದ ಎರಡು ರಥಗಳಿಗೂ ಮಂಟಪ ಭಾಗವನ್ನು ವಿವಿಧ ವಸ್ತುಗಳಿಂದ ನಿರ್ಮಿಸಿ, ಅನೇಕ ಬಣ್ಣ ಬಣ್ಣದ ಕಾಗದಗಳಿಂದ ಹಾಗೂ ಬಟ್ಟೆಗಳಿಂದ ಸುತ್ತಿ ಸುಂದರಗೊಳಿಸುವರು. ಅಲ್ಲಲ್ಲಿ ಕೆಲವು ಬಣ್ಣಗಳಿಂದ ಗೆರೆಗಳನ್ನೆಳೆಯುವರು. ಕಂಬಗಳ ಕೆಳಭಾಗ ಹಾಗೂ ಮೇಲ್ಭಾಗಗಳಿಗೆ ಹಸಿರು ವರ್ಣಲೇಪನ ಮಾಡಿರುವರು. ಅಲ್ಲದೆ ಕಮಾನುಗಳ ಅಂಚುಗಳಿಗೆ ಬಂಗಾರವರ್ಣವನ್ನು ಲೇಪಿಸುವರು ಅಲ್ಲಲ್ಲಿ ಕೆಂಪು ಹಾಗೂ ಹಳದಿ ವರ್ಣಗಳಿಂದ ಹೂಗಳ ನಕ್ಷೆಗಳನ್ನು ಚಿತ್ರಿಸಿರುವುದು ಕಂಡುಬರುತ್ತದೆ.

ಮೊದಲಗಟ್ಟಿಯ ಆಂಜನೇಯ ದೇವಸ್ಥಾನದ ರಥದ ಮಂಟಪ ಭಾಗದಲ್ಲಿ ಪೂರ್ಣವಾಗಿ ಕೆಂಪು ವರ್ಣವನ್ನು ಲೇಪಿಸುವರು. ಕಂಬಗಳಿಗೆ ಹಳದಿ ವರ್ಣಗಳಿಂದ ಸರಿಸಮನಾದ ಅಂತರದಲ್ಲಿ ಪಟ್ಟಿಗಳನ್ನೆಳೆಯುವರು. ಕಮಾನುಗಳಿಗೆ ಅನೇಕ ರೀತಿಯ ಬಿಡಿಹೂಗಳಂತಹ ಚಿತ್ರ ವಿನ್ಯಾಸಗಳನ್ನು ರಚಿಸಿರುವರು. ಇದರಂತೆ ಹಂಪೆಯ ವಿರೂಪಾಕ್ಷ ದೇವಸ್ಥಾನದ ರಥದ ಮಂಟಪ ಭಾಗವನ್ನು ವಿವಿಧ ವಸ್ತುಗಳಿಂದ ನಿರ್ಮಿಸಿ ಅನೇಕ ಬಣ್ಣ ಬಣ್ಣದ ಬಟ್ಟೆಗಳಿಂದ ಕಾಗದಗಳಿಂದ ಹಾಗೂ ವಿವಿಧ ಮಿಂಚು ಕಾಗದಗಳನ್ನು ಅಂಟಿಸಿ, ಆಕರ್ಷಕವಾಗಿ ಕಾಣುವಂತೆ ಮಾಡುವರು. ಕಂಬ ಹಾಗೂ ಕಮಾನುಗಳಲ್ಲಿ ವಿವಿಧ ರೀತಿಯ ಪಕ್ಷಿಗಳ ಹಾಗೂ ಅರಳಿದ ಹೂಗಳ ಚಿತ್ರಗಳನ್ನು ಬಿಡಿಸಿರುವರು. ಕಂಬಗಳಿಗೆ ಹಾಗೂ ಕಮಾನುಗಳಿಗೆ ಮಿಂಚು ಕಾಗದಗಳನ್ನು ವಿವಿಧ ನಕ್ಷಾಕೃತಿಗಳಲ್ಲಿ ಕತ್ತರಿಸಿ ಅಂಟಿಸುವುದನ್ನು ಕಾಣುತ್ತೇವೆ.

ರಾಯಚೂರು ಜಿಲ್ಲೆಯ ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನದ ರಥದ ಮಂಟಪ ಭಾಗವು ಸಹ ಹಂಪೆಯ ರಥದಂತೆಯೇ ವರ್ಣಗಾರಿಕೆಯುಳ್ಳದ್ದಾಗಿರುತ್ತದೆ. ಇದೇ ರೀತಿಯಲ್ಲಿ ಬಳ್ಳಾರಿ ಜಿಲ್ಲೆಯ ಕೋಟೆ ವೀರಣ್ಣನ ರಥ, ಬೆಟ್ಟದ ಮಲ್ಲೇಶ್ವರ ರಥ, ಸಂಡೂರು ಕುಮಾರೇಶ್ವರ ರಥ, ಉಜನಿ ಮರುಳು ಸಿದ್ಧೇಶ್ವರ ರಥ, ಸೋಗಿ ವೀರಭದ್ರೇಶ್ವರ ರಥಗಳಲ್ಲಿ ಉತ್ಸವದ ಸಂದರ್ಭದಲ್ಲಿ ಮಂಟಪ ಭಾಗವು ಸುಂದರವಾದ ವರ್ಣಗಾರಿಕೆಯಿಂದ ಕಂಗೊಳಿಸುವುದನ್ನು ಕಾಣಬಹುದು.

ಕರ್ನಾಟಕದ ಎಲ್ಲಾ ರಥಗಳೂ ಉತ್ಸವದ ಸಂದರ್ಭದಲ್ಲಿ ಮಂಟಪ ಭಾಗದಲ್ಲಿ ತಳಿರು ತೋರಣಗಳಿಂದ,ಬಣ್ಣ ಬಣ್ಣದ ಹೂವಿನ ಹಾರಗಳಿಂದ, ಕೆಲವು ಪ್ಲಾಸ್ಟಿಕ್ ಹೂಗಳಿಂದ ಹಾಗೂ ಬೇರೆ ಬೇರೆ ಚಿತ್ರವಿನ್ಯಾಸಗಳಿರುವ ಬಟ್ಟೆಗಳಿಂದ ಅಲಂಕೃತಗೊಂಡಿರುವುದನ್ನು ಕಾಣಬಹುದು. ಮಂಟಪ ಭಾಗದ ಮೇಲ್ಭಾವಣಿಯಿಂದ ಸ್ವಲ್ಪ ಹೊರಬೀಳುವಂತೆ ವಿವಿಧ ವರ್ಣಗಳಿಂದ ಚಿತ್ರಿಸಲಾದ ವಿನ್ಯಾಸಗಳುಳ್ಳ ಬಟ್ಟೆಗಳನ್ನು ಉಪಯೋಗಿಸುವರು. ಇಂಥಹ ಬಟ್ಟೆಗಳನ್ನು ಸ್ಥಿರ ಹಾಗೂ ಚರ ರಥಗಳೆರಡರ ಮಂಟಪ ಭಾಗಗಳಲ್ಲಿ ಕಾಣಬಹುದು. ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ರಥ, ನಂಜನಗೂಡಿನ ಐದು ರಥಗಳು, ಮೈಸೂರಿನ ಚಾಮುಂಡೇಶ್ವರಿ ರಥ, ಕುಕ್ಕೆ ಸುಬ್ರಮಣ್ಯಂ ದೇವಸ್ಥಾನದ ರಥ ಹಾಗೂ ಉತ್ತರ ಕರ್ನಾಟಕದ ಕೆಲವು ರಥಗಳಲ್ಲಿ ಸುಂದರವಾದ ವರ್ಣಗಾರಿಕೆಯ ನಕ್ಷೆಯುಳ್ಳ ಬಟ್ಟೆಯ ಪಟ್ಟಿಕೆಗಳನ್ನು ಉಪಯೋಗಿಸುವುದನ್ನು ಕಾಣಬಹುದು.

೪. ವಿಮಾನ ಗೋಪುರ ಭಾಗದ ವರ್ಣವಿನ್ಯಾಸ : ಕರ್ನಾಟಕದ ಎಲ್ಲಪ್ರದೇಶಗಳಲ್ಲಿರುವ ರಥಗಳ ವಿಮಾನ ಗೋಪುರ ಭಾಗಗಳು ಉತ್ಸವದ ಸಂದರ್ಭದಲ್ಲಿ ವಿವಿಧ ರೀತಿಯ ವರ್ಣಗಾರಿಕೆಯಿಂದ ಕಣ್ಮನ ಸೆಳೆಯುತ್ತವೆ. ಪ್ರಾದೇಶಿಕ ರಥಗಳ ಗೋಪುರ ಭಾಗಗಳ

ವರ್ಣಗಾರಿಕೆಯನ್ನು ತಿಳಿಯುವಾ.

ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಗುಳೇದಗುಡ್ಡದ ಸಂಗಮೇಶ್ವರ ರಥದ ವಿಮಾನ ಗೋಪುರ ಭಾಗವು ಅತ್ಯಾಕರ್ಷಕ ವರ್ಣಗಾರಿಕೆಯಿಂದ ಮನಸೆಳೆಯುತ್ತದೆ. ಮಂಟಪ ಭಾಗದ ಮೇಲ್ಛಾವಣಿಯಿಂದ ಶಿಖರ ಭಾಗದವರೆಗೆ ವೃತ್ತಾಕಾರದಲ್ಲಿ ಕಟ್ಟಿದ ಬಿದಿರುಗಳಿಗೆ ಬಣ್ಣ ಬಣ್ಣದ ಪತಾಕೆಗಳನ್ನು ಜೋಡಿಸಿರುತ್ತಾರೆ. ಕೆಳಭಾಗದ ಬಿದಿರಿನ ವೃತ್ತಾಕಾರದ ಪಟ್ಟಿಗಳಿಗೆ ಕೆಂಪು ಬಣ್ಣದ ಪತಾಕೆಗಳನ್ನು ಅದರ ಮೇಲಿನ ಪಟ್ಟಿಗಳಿಗೆ ಬಿಳಿಯ ಹಾಗೂ ಹಳದಿ ಬಣ್ಣದ ಪತಾಕೆಗಳನ್ನು ಜೋಡಿಸಲಾಗುತ್ತದೆ. ಹೀಗೆಯೇ ಪುನರಾವರ್ತಿಸಿಗೊಳ್ಳುತ್ತ ಶಿಖರ ಭಾಗದವರೆಗೆ ಪತಾಕೆಗಳನ್ನು ಜೋಡಿಸಿ, ಶಿಖರ ಭಾಗದಲ್ಲಿ ಚಂಡಿನಾಕಾರದಲ್ಲಿ ಹೊಂದಿಸಲಾದ ಬಿದಿರುಗೋಲಕ್ಕೆ ಕೆಂಪು ಹಾಗೂ ಕೇಸರಿ ಮಿಶ್ರಿತ ವರ್ಣದ ಬಟ್ಟೆಯನ್ನು ಸುತ್ತುವರು. ಅದರ ಮೇಲೆ ಕಳಶವನ್ನಿಟ್ಟು ಒಂದು ಬಣ್ಣದ ಛತ್ರಿಯನ್ನು ತುತ್ತ ತುದಿಯಲ್ಲಿ ಕಟ್ಟಿರುವರು. ಇದರಿಂದಾಗಿ ದೂರದಿಂದ ರಥದ ಗೋಪುರ ಭಾಗವು ಮನಸೆಳೆಯುವಂತಿರುತ್ತದೆ.

ಇದೇ ಜಿಲ್ಲೆಯ ಹುನಗುಂದದ ಬಸವೇಶ್ವರ ದೇವಸ್ಥಾನದ ರಥವೂ ಕೂಡ ತುಂಬ ಆಕರ್ಷಕವಾದ ಗೋಪುರವನ್ನು ಹೊಂದಿರುತ್ತದೆ. ಮಂಟಪ ಭಾಗದ ಮೇಲ್ಛಾವಣಿಯಲ್ಲಿ ನಾಲ್ಕು ಕಳಶಗಳನ್ನು ಹೊಂದಿದ್ದು, ಶಿಖರ ಭಾಗದವರೆಗೆ ವೃತ್ತಾಕಾರವಾಗಿ ಕಟ್ಟಿರುವಂತಹ ಬಿದಿರುಗಳ ಪಟ್ಟಿಗಳಿಗೆ ಸಮಾನಾಂತರದಲ್ಲಿ ಬಣ್ಣ ಬಣ್ಣದ ಪತಾಕೆಗಳನ್ನು ಹೊಂದಿರುತ್ತದೆ. ಇದರ ಶಿಖರ ಭಾಗದ ಗೋಲಾಕಾರದ ವಿನ್ಯಾಸವು ಗುಲಾಬಿ ಬಣ್ಣದ ಬಟ್ಟೆಯಿಂದ ಸುತ್ತುವರೆದಿರುತ್ತದೆ. ಈ ರಥದ ವಿಮಾನ ಗೋಪುರ ಭಾಗವೂ ಸಹ ಗುಳೇದಗುಡ್ಡದ ಸಂಗಮೇಶ್ವರ ರಥದ ಗೋಪುರ ಭಾಗದಂತೆಯೇ ಕಂಗೊಳಿಸುತ್ತದೆ.

ಗದಗ ಜಿಲ್ಲೆಯ ಹರ್ತಿಯ ವೀರಭದ್ರ ದೇವಸ್ಥಾನದ ರಥದ ವಿಮಾನಗೋಪುರ ಭಾಗವು ವಿವಿಧ ಬಣ್ಣಗಳ ಬಟ್ಟೆಗಳಿಂದ ಸುಂದರಗೊಂಡಿರುತ್ತದೆ. ಮಂಟಪ ಭಾಗದ ಮೇಲ್ಭಾಗದಿಂದ ಕಟ್ಟಲಾದ ಅಟ್ಟಗಳಿಗೆ ಸಮಾನಾಂತರದಲ್ಲಿ ಗುಲಾಬಿ, ನೀಲಿ,ಹಳದಿ,ಕೆಂಪು, ಹಸಿರು ಹೀಗೆ ಮತ್ತೆ ಅದೇ ಬಣ್ಣದ ಬಟ್ಟೆಗಳನ್ನು ಪುನರಾವರ್ತಿನೆಗೊಳ್ಳುತ್ತ ಗೋಪುರ ಭಾಗದವರೆಗೆ ಹೋಗಿ ಶಿಖರ ಭಾಗದಲ್ಲಿ ಒಂದು ಗುಲಾಬಿ ಬಣ್ಣದ ಬಟ್ಟೆಯನ್ನು ಹೊಂದಿರುತ್ತದೆ.

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ಸಂಗಮನಾಥನ ದೇವಸ್ಥಾನದ ರಥವು ಗೋಪುರ ಭಾಗದಲ್ಲಿ ಬಣ್ಣ ಬಣ್ಣದ ಬಟ್ಟೆಗಳಿಂದಲೂ ಹಾಗೂ ಪತಾಕೆಗಳಿಂದಲೂ ಸುಂದರಗೊಂಡಿರುತ್ತದೆ. ಮಂಟಪ ಭಾಗದ ಮೇಲಿನಿಂದ ಪ್ರಾರಂಭಗೊಂಡು ಹಸಿರು, ನೀಲಿ, ಗುಲಾಬಿ, ಬಿಳಿ, ಕೆಂಪು ಹೀಗೆ ವಿವಿಧ ಬಣ್ಣದ ಪತಾಕೆಗಳಿಂದ ಕೂಡಿರುತ್ತದೆ. ಶಿಖರ ಭಾಗದ ದುಂಡಾಕಾರದ ಭಾಗವು ಕೆಂಪು ಬಟ್ಟೆಯನ್ನು ಹೊಂದಿರುತ್ತದೆ.

ಕೊಪ್ಪಳ ಜಿಲ್ಲೆಯ ಗವಿಸಿದ್ಧೇಶ್ವರ ಮಠದ ರಥದ ಗೋಪುರ ಭಾಗವು ಬಣ್ಣ ಬಣ್ಣದ ಬಟ್ಟೆಗಳನ್ನು ಕೂಡಿಸಿ ಹೊಲಿದ ಒಂದೇ ಹೊದಿಕೆಯಿಂದ ಸುಂದರಗೊಂಡಿರುತ್ತದೆ. ಕೇಸರಿ, ಬಿಳಿ, ಹಾಗೂ ಹಸಿರು ಬಣ್ಣದ ಬಟ್ಟೆಗಳನ್ನು ಗೋಪುರದ ಅಳತೆಗೆ ಸರಿಯಾಗುವಂತೆ ಹೊಲಿದು, ಇಡೀ

ಗೋಪುರಕ್ಕೆ ಹೊದಿಸಲಾಗುವುದು. ಮೇಲ್ಭಾಗದ ದುಂಡಾಕಾರದ ವಿನ್ಯಾಸಕ್ಕೆ ಕೇಸರಿ ವರ್ಣದ ಬಟ್ಟೆಯನ್ನು ಸುತ್ತಲಾಗುವುದು. ಅದರ ಅಕ್ಕ ಪಕ್ಕದಲ್ಲಿ ಕೇಸರಿ ವರ್ಣದ ಧ್ವಜಗಳನ್ನು ಕಟ್ಟಲಾಗುವುದು.

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ತಂಬೂರಿನ ಗವಿಸಿದ್ದೇಶ್ವರ ರಥ, ಬಾಗಲಕೋಟೆ ಜಿಲ್ಲೆಯ ಥಂಕನಾಳದ ಬಸವೇಶ್ವರ ರಥ, ಹಾವೇರಿ ಜಿಲ್ಲೆಯ ಸುಲ್ತಾನಪುರದ ಬಸವೇಶ್ವರ ರಥ ಈ ಎಲ್ಲ ರಥಗಳ ವಿಮಾನ ಗೋಪುರ ಭಾಗಗಳು ಒಂದೇ ವಿನ್ಯಾಸವನ್ನು ಹೊಂದಿದ್ದು, ಕೆಲವು ಬೇರೆ ಬೇರೆ ಬಣ್ಣದ ಧ್ವಜ ಪತಾಕೆಗಳನ್ನು ಹೊಂದಿರುವುದನ್ನು ಕಾಣಬಹುದು.

ಬಾಗಲಕೋಟೆ ಜಿಲ್ಲೆಯ ಹುನಗುಂದ ತಾಲೂಕಿನ ಇಲಕಲ್ಲದ ವಿಜಯ ಮಹಾಂತೇಶ ಮಠದ ರಥವು ಗೋಪುರ ಭಾಗದಲ್ಲಿ ವರ್ಣಚಿತ್ರಗಳನ್ನು ಹೊಂದಿದ್ದು ಸುಂದರವಾಗಿದೆ. ಬಸವೇಶ್ವರ, ಅಕ್ಕಮಹಾದೇವಿ, ಅಲ್ಲಮಪ್ರಭು, ಸಿದ್ಧಾರೂಡ, ಮುರುಘೇಂದ್ರ ಸ್ವಾಮಿಗಳು ಹೀಗೆ ಅನೇಕ ಶಿವಶರಣರ ವರ್ಣಚಿತ್ರಗಳನ್ನು ಹೊಂದಿರುತ್ತದೆ. ವರ್ಣಚಿತ್ರಗಳಿರುವ ಮಂಟಪಗಳ ಭಾಗವನ್ನು ವಿವಿಧ ಬಣ್ಣದ ಹೂವಿನ ಹಾರಗಳಿಂದ ಸುಂದರಗೊಳಿಸುವರು . ಶಿಖರ ಭಾಗದವರೆಗೂ ಹಸಿರು, ಕೆಂಪು, ಹಳದಿ, ಬಿಳಿ ವರ್ಣಗಳಿಂದ ಕೂಡಿದ ಪತಾಕೆಗಳನ್ನು ಹೊಂದಿರುತ್ತದೆ. ಶಿಖರ ಭಾಗದ ದುಂಡಾಕಾರದ ವಿನ್ಯಾಸದ ಕೆಳಭಾಗದಲ್ಲಿ ಬಂಗಾರ ವರ್ಣದ ಅರ್ಧ ವೃತ್ತಾಕಾರದ ವಿನ್ಯಾಸಗಳನ್ನು ಹೊಂದಿದ್ದು ಇಡೀ ಶಿಖರವು ಕೆಂಪು ವರ್ಣದ ಬಟ್ಟೆಯಿಂದ ಸುತ್ತುವರೆಯಲ್ಪಟ್ಟಿರುತ್ತದೆ. ಕಳಶದ ಮೇಲ್ಭಾಗದಲ್ಲಿ ಕೆಂಪು ವರ್ಣದ ಛತ್ರಿಯನ್ನು ಹೊಂದಿರುತ್ತದೆ.

ಇದೇ ಜಿಲ್ಲೆಯ ಶಿರೂರು ಸಿದ್ಧೇಶ್ವರ ದೇವಸ್ಥಾನದ ರಥ, ಸಿದ್ಧನಕೊಳ್ಳದ ಸಿದ್ದೇಶ್ವರ ರಥ ಹಾಗೂ ಮಹಾಕೂಟದ ಮಹಾಕೂಟೇಶ್ವರ ರಥಗಳು ಹುನಗುಂದದ ಬಸವೇಶ್ವರ ದೇವಸ್ಥಾನದ ರಥದಂತೆಯೇ ಗೋಪುರ ಭಾಗದ ವರ್ಣಗಾರಿಕೆಯನ್ನು ಹೊಂದಿರುತ್ತವೆ. ಆದರೆ ಕೆಲವು ಧ್ವಜ ಪತಾಕೆಗಳ ಬಣ್ಣಗಳಲ್ಲಿ ವ್ಯತ್ಯಾಸವಿರುತ್ತದೆ. ಶಿರೂರು ರಥದ ಶಿಖರ ಭಾಗದ ದುಂಡಾಕಾರದ ವಿನ್ಯಾಸವು ಬಿಳಿಯ ಬಣ್ಣದ ಬಟ್ಟೆಯನ್ನು, ಸಿದ್ಧನಕೊಳ್ಳದ ಸಿದ್ದೇಶ್ವರ ರಥವು ಗುಲಾಬಿ ಬಣ್ಣದ ಬಟ್ಟೆಯನ್ನು, ಮಹಾಕೂಟದ ಮಹಾಕೂಟೇಶ್ವರ ರಥವು ಕೆಂಪು ಬಣ್ಣದ ಬಟ್ಟೆಯನ್ನು ಹೊಂದಿರುತ್ತವೆ ಅಲ್ಲದೆ ವಿವಿಧ ಬಣ್ಣಗಳ ಛತ್ರಿಗಳನ್ನು ಹೊಂದಿರುತ್ತವೆ.

ಹುಬ್ಬಳ್ಳಿಯ ಮೂರುಸಾವಿರ ಮಠದ ರಥವು ಗೋಪುರ ಭಾಗದಲ್ಲಿ ಕೆಂಪು ಮಿಶ್ರಿತ ಕೇಸರಿ ವರ್ಣದ ಬಟ್ಟೆಗಳಿಂದ ಸುಂದರಗೊಂಡು ವೃತ್ತಾಕಾರದ ಬಿದಿರು ಪಟ್ಟಿಕೆಗಳಿಗೆ ಗೋಲ್ಡನ್ ಹಾಗೂ ಸಿಲ್ವರ್ ಕಲರನ್ನು ಹೊಂದಿದ ಬಟ್ಟೆಯ ಸಣ್ಣ ಸಣ್ಣ ಪಟ್ಟಿಕೆಗಳನ್ನು ಹೊಂದಿದೆ. ಶಿಖರದ ಭಾಗದಲ್ಲಿ ಬೇರೆ ಬೇರೆ ಬಣ್ಣಗಳ ಚಿತ್ರವಿನ್ಯಾಸಗಳನ್ನು ಹೊಂದಿದ ಬಟ್ಟೆಗಳಿಂದ ಆವೃತಗೊಂಡು, ಅಲ್ಲಲ್ಲಿ ಕೆಲವು ಮಿಂಚು ಕಾಗದಗಳನ್ನು ಹೊಂದಿರುತ್ತದೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ದೇವಸ್ಥಾನದ ರಥದ ಗೋಪುರ ಭಾಗವು ಅತ್ಯಾಕರ್ಷವಾಗಿರುತ್ತದೆ. ಮಂಟಪಭಾಗದ ಮೇಲ್ಭಾಗದ ಕೆಳಪಟ್ಟಿಕೆಯು ಕಂದು ಬಣ್ಣದ ಚುಕ್ಕೆಗಳನ್ನುಳ್ಳ ಹಳದಿ ಬಣ್ಣದ ಬಟ್ಟೆಯನ್ನು ಹೊಂದಿರುತ್ತದೆ. ಅದರ ಮೇಲೆ ಕೆಳಗಿನಿಂದ ಮೇಲ್ಭಾಗದವರೆಗೆ ಇರುವ ವೃತ್ತಾಕಾರದ ಬಿದಿರುಗಳು ಕ್ರಮವಾಗಿ ಕೆಂಪು, ಹಸಿರು, ಹಳದಿ, ಹಸಿರು,

ಬಿಳಿ, ನೀಲಿ, ಕೆಂಪು ಹೀಗೆ ಬೇರೆ ಬೇರೆ ವರ್ಣಗಳುಳ್ಳ ಪತಾಕೆಗಳನ್ನು ಹೊಂದಿದೆ. ಶಿಖರ ಭಾಗದಲ್ಲಿ ಗೋಲಾಕಾರದಲ್ಲಿರುವ ವಿನ್ಯಾಸಕ್ಕೆ ಹಳದಿ ಮಿಶ್ರಿತ ಕಂದು ವರ್ಣದ ಹೂವಿನ ವಿನ್ಯಾಸಗಳನ್ನುಳ್ಳ ಕೆಂಪು ವರ್ಣದ ಬಟ್ಟೆಯನ್ನು ಸುತ್ತಲಾಗಿದೆ. ಇದೇ ರೀತಿ ವರ್ಣವಿನ್ಯಾಸವುಳ್ಳ ರಥದ ಗೋಪುರ ಭಾಗವನ್ನು ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ರಥದಲ್ಲಿಯೂ ಕಾಣಬಹುದು.

ಬಾದಾಮಿಯ ಬನಶಂಕರಿ ದೇವಸ್ಥಾನದ ರಥದ ಗೋಪುರದ ಶಿಖರ ಭಾಗದವರೆಗೂ ಬಾಳೆ ಗಿಡಗಳನ್ನು ಕಟ್ಟಿ, ಶಿಖರ ಭಾಗಕ್ಕೆ ಕೆಂಪು ವರ್ಣದ ಬಟ್ಟೆಯನ್ನು ಸುತ್ತಿದ ಗೋಲಾಕಾರಕ್ಕೆ ಅಲ್ಲಲ್ಲಿ ಕೆಲವು ಬಣ್ಣ ಬಣ್ಣದ ಹೂಗಳನ್ನು ಅಂಟಿಸುವರು. ಇದಲ್ಲದೆ ಗೋಪುರ ಭಾಗದಿಂದ ಶಿಖರ ಭಾಗದರೆಗೂ ಕೇಸರಿ, ಕೆಂಪು ಹಳದಿ, ನೀಲಿ, ಹಸಿರು, ಬಿಳಿ, ಹೀಗೆ ವಿವಿಧ ವರ್ಣಗಳ ಧ್ವಜಗಳನ್ನು ಕಟ್ಟುವರು. ಇದೇ ರೀತಿಯಲ್ಲಿ ಬದಾಮಿ ತಾಲೂಕಿನ ಚೊಳಚಗುಡ್ಡದ ವೀರಭದ್ರೇಶ್ವರ ದೇವಸ್ಥಾನದ ರಥದ ಗೋಪುರ ಭಾಗವನ್ನು ವಿವಿಧ ವರ್ಣದ ಧ್ವಜಗಳಿಂದ ಸುಂದರಗೊಳಿಸುವರು.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯ ದೇವಸ್ಥಾನದ ರಥದ ಗೋಪುರ ಭಾಗವು ತುಂಬಾ ಆಕರ್ಷಕವಾಗಿರುತ್ತದೆ. ಮಂಟಪ ಭಾಗದ ಮೇಲ್ಭಾಗದಿಂದ ಪ್ರಾರಂಭಗೊಳ್ಳುವ ಗೋಪುರದ ಪ್ರಾರಂಭದಲ್ಲಿ ಕೆಂಪು ಬಣ್ಣದ ಬಟ್ಟೆಯ ಪಟ್ಟಿಯನ್ನು ಕಟ್ಟಿ ಅದರ ಮೇಲಿನ ಹಂತದಲ್ಲಿ ಎಲೆಯಾಕಾರದ ವಿನ್ಯಾಸವನ್ನು ಹೊಂದಿದ ಬಟ್ಟೆಯನ್ನು ಸುತ್ತಿರುತ್ತಾರೆ. ಹಸಿರು, ಗುಲಾಬಿ ಹಾಗೂ ಹಳದಿ ಬಣ್ಣದ ಎಲೆಗಳಂತಹ ಆಕಾರವನ್ನು ಹೊಂದಿದ ವಿನ್ಯಾಸದ ಬಟ್ಟೆಯ ಗೋಪುರ ಭಾಗಕ್ಕೆ ಅತೀ ಯೋಗ್ಯವಾದ ರೀತಿಯಲ್ಲಿ ಹೊಂದಿಕೊಂಡಿರುತ್ತದೆ. ಈ ಭಾಗದ ನಂತರದ ಮುಂದುವರೆಯುವ ಬಿದಿರು ಪಟ್ಟಿಗಳ ಮೇಲೆ ಬೇರೆ ಬೇರೆ ವರ್ಣದ ಬಟ್ಟೆಗಳನ್ನು ಕಟ್ಟಿ, ಶಿಖರ ಭಾಗದ ದುಂಡನೆಯ ಆಕಾರವನ್ನು ಹೊಂದಿದ ಬಿದಿರುಗೋಲಗಳಿಗೆ ಕೆಂಪು, ಹಸಿರು, ಹಳದಿ, ನೀಲಿ, ಬಿಳಿ, ಹೀಗೆ ವಿವಿಧ ಬಣ್ಣದ ಬಟ್ಟೆಗಳನ್ನು ಹೊದಿಸಿರುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯ ಮರೆಮ್ಮನಹಳ್ಳಿಯ ರಥಗಳ ಗೋಪುರ ಭಾಗಗಳು, ಕನಕರಾಯನ ರಥಗಳ ಹೋಪುರ ಭಾಗಗಳಂತೆಯೇ ನಿರ್ಮಾಣಗೊಂಡಿರುತ್ತವೆ. ಮಂಟಪ ಭಾಗದಿಂದ ಪ್ರಾರಂಭಗೊಳ್ಳುವ ಗೋಪುರ ಭಾಗದಲ್ಲಿ ವಿವಿಧ ವರ್ಣಚಿತ್ರಗಳನ್ನು ಅಂಟಿಸುವರು. ಆಂಜನೇಯ , ರಾಮ, ಕೃಷ್ಣ, ಲಕ್ಷ್ಮೀ, ಸರಸ್ವತಿ ಇಂತಹ ಹಲವಾರು ದೇವತೆಯರ ಚಿತ್ರಗಳು ಹಾಗೂ ಅನೇಕ ಸಿದ್ಧ ಪುರುಷರ ವರ್ಣಚಿತ್ರಗಳನ್ನು ಅಂಟಿಸುವರು. ಈ ಬಿದಿರು ಪಟ್ಟಿಗಳ ಮೇಲ್ಭಾಗದಲ್ಲಿ ಇರುವಂತಹ ವೃತ್ತಾಕಾರದ ಬಿದಿರು ಪಟ್ಟಿಗಳಿಗೆ ಶಿಖರ ಭಾಗದ ವರೆಗೆ ಬಣ್ಣ ಬಣ್ಣದ ಬಟ್ಟೆಗಳಿಂದ ಹೊದಿಸಿ ಸುಂದರಗೊಳಿಸುವರು. ಬಿದಿರುಗಳಿಂದ ಕಡಗೋಲು ನೆಲ್ಲಿಯ ಆಕಾರವನ್ನು ಮಾಡಿ ಶಿಖರ ಭಾಗದಲ್ಲಿ ಹೊಂದಿಸಿರುವ ಭಾಗಕ್ಕೆ ಕೆಂಪು ಹಾಗೂ ಬಿಳಿಯ ವರ್ಣಪಟ್ಟಿಗಳಿಂದ ಕೂಡಿದ ಬಟ್ಟೆಯನ್ನು ಹೊದಿಸಿರುತ್ತಾರೆ.

ಇದೇ ಜಿಲ್ಲೆಯ ಕೂಡ್ಲಗಿ ತಾಲೂಕು ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನದ ರಥದ ಗೋಪುರದ ಭಾಗವು ಉತ್ಸವದ ಸಂದರ್ಭದಲ್ಲಿ ಬಹಳ ಆಕರ್ಷಕವಾದ ವರ್ಣವಿನ್ಯಾಸದಿಂದ ಕೂಡಿರುತ್ತದೆ. ಮಂಟಪ ಭಾಗದ ಮೇಲ್ಭಾಗದಿಂದ ಪ್ರಾರಂಭಗೊಳ್ಳುವ ಗೋಪುರದ ಕೆಳಭಾಗದಲ್ಲಿ ಕೆಂಪು ಬಟ್ಟೆಯನ್ನು ಸುತ್ತಲಾಗಿರುತ್ತದೆ. ಅದರ ಮೇಲೆ ಇರುವಂತಹ ಭಿದಿರು ಪಟ್ಟಿಗಳ ಮೇಲೆ, ಹಸಿರು

ಹಾಗೂ ನೀಲಿ ವರ್ಣಗಳುಳ್ಳ ಬಟ್ಟೆಯನ್ನು ಸುತ್ತಲಾಗಿರುತ್ತದೆ. ಹೀಗೆಯೇ ಇದೇ ಬಣ್ಣದ ಬಟ್ಟೆಗಳನ್ನು ಪುನರಾವರ್ತಿಸಿ, ಶಿಖರದ ಕೆಳಭಾಗದಲ್ಲಿ ಅನೇಕ ಬಣ್ಣ ಬಣ್ಣದ ಪತಾಕೆಗಳನ್ನು ಅಳವಡಿಸುವರು. ಅಲ್ಲದೆ ಶಿಖರ ಭಾಗದಲ್ಲಿ ಬಿದಿರುಗಳಿಂದ ತಯಾರಾದ ಗುಮ್ಮಟದ ಆಕಾರವನ್ನು ಹೊಂದಿದ ಭಾಗಕ್ಕೆ ಕೆಂಪು ಬಟ್ಟೆಯನ್ನು ಹೊದಿಸಿರುತ್ತಾರೆ. ಕಳಶದ ಮೇಲ್ಭಾಗದಲ್ಲಿ ಒಂದು ಕೇಸರಿ ಬಣ್ಣದ ಧ್ವಜವನ್ನು ಕಟ್ಟಿರುತ್ತಾರೆ. ಇದೇ ರೀತಿಯ ಗೋಪುರ ಭಾಗದ ವರ್ಣಗಾರಿಕೆಯನ್ನು ಇದೇ ಜಿಲ್ಲೆಯ ಉಜನಿಯ ಮರುಳು ಸಿದ್ಧೇಶ್ವರ ರಥ, ಮೊದಲಗಟ್ಟಿಯ ಆಂಜನೇಯನ ರಥ, ಕುರುವತ್ತಿಯ ಬಸವೇಶ್ವರ ರಥ ಹಾಗೂ ಬೊಮ್ಮಗಟ್ಟದ ಆಂಜನೇಯನ ರಥಗಳಲ್ಲಿ ಕಾಣಬಹುದು.

ಬಳ್ಳಾರಿ ಜಿಲ್ಲೆಯ ಹಂಪೆಯ ವಿರೂಪಾಕ್ಷ ದೇವಾಲಯದ ರಥದ ಗೋಪುರ ಭಾಗವು ತುಂಬಾ ಆಕರ್ಷಕವಾಗಿರುತ್ತದೆ. ಮಂಟಪ ಭಾಗದ ಮೇಲ್ಭಾಗದಿಂದ ಮುಂದುವರೆದ ಗೋಪುರ ಭಾಗವು ನಾಲ್ಕು ಅಂತಸ್ತುಗಳಲ್ಲಿ ನಿರ್ಮಾಣಗೊಂಡಿರುತ್ತದೆ. ಪ್ರತಿಯೊಂದು ಬಿದಿರಿನ ಅಂತಸ್ತುಗಳಿಗೆ ಹಸಿರು, ಗುಲಾಬಿ, ನೀಲಿ, ಬಿಳಿ ಹಾಗೂ ಕೇಸರಿ ವರ್ಣಗಳಿಂದ ಕೂಡಿದ ಪಟ್ಟಿಗಳನ್ನು ಹೊಂದಿದ ಬಟ್ಟೆಯನ್ನು ಸುತ್ತಿರುತ್ತಾರೆ. ಶಿಖರ ಭಾಗದಲ್ಲಿಯೂ ಚಪ್ಪಟೆಯಾಕಾರದ ಕಡಗೋಲು ನೆಲ್ಲಿಯ ಆಕಾರವನ್ನು ಹೊಂದಿದ ಬಿದಿರುಗೋಲಕ್ಕೆ ಇದೇ ವರ್ಣವಿನ್ಯಾಸವುಳ್ಳ ಬಟ್ಟೆಯನ್ನು ಸುತ್ತುವರು. ಇಡೀ ಗೋಪುರದ ಭಾಗದ ಸುತ್ತಲೂ ಅಲ್ಲಲ್ಲಿ ಹಳದಿ, ನೀಲಿ, ಕೆಂಪು ಬಣ್ಣದ ಧ್ವಜಗಳನ್ನು ಅಳವಡಿಸುವರು. ಅಲ್ಲದೆ ಕಳಶ ಭಾಗದ ಮೇಲ್ಭಾಗದಲ್ಲಿ ಒಂದು ಸುಂದರವಾದ ಬಣ್ಣದ ಛತ್ರಿಯನ್ನು ಕಟ್ಟುವರು.

ಹೀಗೆಯೇ ಬಳ್ಳಾರಿ ಜಿಲ್ಲೆಯ ಅನೇಕ ರಥಗಳ ಗೋಪುರ ಭಾಗವನ್ನು ಬಣ್ಣ ಬಣ್ಣದ ಬಟ್ಟೆಗಳಿಂದ ಹಾಗೂ ಧ್ವಜಗಳಿಂದ ಸುಂದರಗೊಳಿಸುವುದನ್ನು ಕಾಣಬಹುದು.

ಬೇಲೂರು ಚನ್ನಕೇಶವ ದೇವಾಲಯದ ರಥದ ಗೋಪುರ ಭಾಗವು ಚತುರ್ಭುಜಾಕೃತಿಯನ್ನು ಹೊಂದಿ, ಕಟ್ಟೆಗಳಂತೆ ಶಿಖರ ಭಾಗದವರೆಗೂ ಮುಂದುವರೆದ ಭಾಗಗಳಲ್ಲಿ ಕ್ರಮವಾಗಿ ಕೆಂಪು, ಬಿಳಿ, ಕೆಂಪು, ಬಿಳಿ, ಕೆಂಪು ಹೀಗೆ ಈ ಎರಡೂ ವರ್ಣಗಳ ಬಟ್ಟೆಗಳನ್ನು ಸುತ್ತಿರುವರು. ಕಟ್ಟೆಗಳಂತಿರುವ ಭಾಗದ ಪ್ರತಿಯೊಂದು ಭುಜಗಳಲ್ಲಿ ಕೆಂಪು, ನೀಲಿ, ಕೆಂಪು ಹಾಗೂ ಕೇಸರಿ, ಬಿಳಿ, ಕೆಸರಿ, ಮತ್ತು ಹಸಿರು, ಹಳದಿ, ಹಸಿರು ಹೀಗೆ ತ್ರಿವರ್ಣಗಳಿಂದ ಕೂಡಿದ ಧ್ವಜಗಳನ್ನು ಅಳವಡಿಸುವರು. ಶಿಖರ ಭಾಗದಲ್ಲಿ ಗುಮ್ಮಟಾಕಾರದಲ್ಲಿರುವ ವಿನ್ಯಾಸಕ್ಕೆ ಕೆಂಪು ವರ್ಣದ ಬಟ್ಟೆಯನ್ನು ಸುತ್ತುವರು.

ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ರಥಗಳು ಉತ್ಸವದ ಸಂದರ್ಭದಲ್ಲಿ ಚಿತ್ತಾಕರ್ಷಕ ವರ್ಣಗಾರಿಕೆಯಿಂದ ಕೂಡಿದ ಗೋಪುರಗಳನ್ನು ಹೊಂದಿರುತ್ತವೆ . ಮಂಟಪ ಭಾಗದ ಮೇಲ್ಭಾಗದಿಂದ ಆರಂಭಗೊಳ್ಳುವ ಗೋಪುರ ಭಾಗದ ಮೊದಲ ಹಂತದಲ್ಲಿ, ಅನೇಕ ದೇವಾನುದೇವತೆಯರ ವರ್ಣ ಚಿತ್ರಗಳನ್ನು ಅಂಟಿಸಿರುತ್ತಾರೆ. ಈ ಭಾಗದ ಮೇಲೆ ಮುಂದುವರೆಯುವ ಗೋಪುರ ಭಾಗಕ್ಕೆ ಅನೇಕ ಪತಾಕೆಗಳನ್ನು ಸಮಾನಾಂತರದಲ್ಲಿ ಸಾಲು ಸಾಲಾಗಿ ಜೋಡಿಸಲಾಗುತ್ತದೆ. ಶಿಖರ ಭಾಗದ ಗೋಲಾಕಾರದ ವಿನ್ಯಾಸಕ್ಕೆ ಕೆಪು, ಬಿಳಿ ಹಾಗೂ ಕೆಂಪು ಹೀಗೆ ಬೇರೆ ಬೇರೆ ವರ್ಣ ಪಟ್ಟಿಕೆಗಳ ಬಟ್ಟೆಯನ್ನು ಸುತ್ತುವರು.

ಇದೇ ರೀತಿಯ ವರ್ಣಗಾರಿಕೆಯನ್ನು ಹೊಂದಿದ ರಥದ ಗೋಪುರಗಳನ್ನು ಮೈಸೂರಿನ ಚಾಮುಂಡೇಶ್ವರಿ ರಥದಲ್ಲಿ, ಶ್ರೀರಂಗಪಟ್ಟಣದ ಶ್ರೀರಂಗನಾಥ ದೇವಾಲಯದ ರಥದಲ್ಲಿ, ಉಡುಪಿಯ ಶ್ರೀ ಕೃಷ್ಣನ ದೇವಸ್ಥಾನದ ರಥದಲ್ಲಿ ಹಾಗೂ ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ರಥದಲ್ಲಿ ಕಾಣಬಹುದು.

ಒರಿಸ್ಸಾದ ಪುರಿ ಜಗನ್ನಾಥ ದೇವಾಲಯದ ಬೃಹತ್ ಪ್ರಮಾಣದಲ್ಲಿರುವ ಮೂರೂ ರಥಗಳ ಗೋಪುರ ಭಾಗಗಳು ಬಹಳ ಸುಂದರವಾದ ವರ್ಣಗಾರಿಕೆಯನ್ನು ಹೊಂದಿರುತ್ತವೆ. ಈ ರಥಗಳ ಮಂಟಪ ಭಾಗಗಳ ನಾಲ್ಕೂ ದಿಕ್ಕುಗಳಲ್ಲಿರುವ ಕಮಾನುಗಳ ಮೇಲ್ಭಾಗದಲ್ಲಿ ಗೋಪುರಾಕಾರದ ನಾಲ್ಕು ವಿನ್ಯಾಸಗಳಿಂದ ಕೂಡಿದ ಭಾಗಗಳಿಗೆ ಹಳದಿ, ಕೆಂಪು, ಪಿಕಾಕ್-ಬ್ಲೂ, ಹಾಗೂ ಕಪ್ಪು ವರ್ಣಗಳಿಂದ ಕೂಡಿದ ಬಟ್ಟೆಗಳನ್ನು ಹೊದಿಸಲಾಗಿರುತ್ತದೆ. ಆ ಬಟ್ಟೆಗಳ ಮೇಲೆ ವಿವಿಧ ವರ್ಣಗಳಿಂದ ಹಾಗೂ ಹಾರಗಳಿಂದ ಸುಂದರವಾದ ಸುರುಳಿ ನಕ್ಷೆಗಳನ್ನು, ಪ್ರಾಣಿ-ಪಕ್ಷಿಗಳ ಚಿತ್ರಗಳನ್ನು, ಎಲೆ ಬಳ್ಳಿಯಾಕಾರದ ವಿನ್ಯಾಸಗಳನ್ನು ರಚಿಸುವರು. ಗೋಪುರಾಕಾರದ ಪ್ರತಿಯೊಂದು ಭಾಗಗಳ ಮೇಲ್ಭಾಗದಲ್ಲಿ ಹೂವಿನಾಕಾರದ ವಿನ್ಯಾಸಗಳನ್ನು ಹಾಗೂ ತುಂಬುನಕ್ಷೆಗಳನ್ನು ಅನೇಕ ಬಣ್ಣಗಳಿಂದ ಹಾಗೂ ಬಣ್ಣದ ದಾರಗಳಿಂದ ರಚಿಸುವರು. ಸುತ್ತಲೂ ಗೋಪುರದಂತಹ ವಿನ್ಯಾಸಗಳ ಮಧ್ಯದಲ್ಲಿ ಕಿರೀಟದಾಕಾರದಲ್ಲಿ ಶಿಖರದವೆಗೆ ಮುಂದುವರೆದ ರಥದ ಗೋಪುರ ಭಾಗದಲ್ಲಿ ಕೆಂಪು, ಹಳದಿ, ಕಪ್ಪು ಹಾಗೂ ಪಿಕಾಕ್-ಬ್ಲೂ ಬಣ್ಣಗಳ ಬಟ್ಟೆಗಳನ್ನು ಹೊದಿಸಲಾಗುತ್ತದೆ. ಈ ಬಟ್ಟೆಗಳ ಮೇಲೆ ಸಹಿತ ಅನೇಕ ವರ್ಣಗಳಿಂದ ಸುಂದರವಾದ ನಕ್ಷೆಗಳನ್ನು ಬಿಡಿಸುವರು. ಬಣ್ಣ ಬಣ್ಣದ ಹಾರಗಳಿಂದ ಕಸೂತಿ ಕೆಲಸವನ್ನು ಮಾಡಿ, ವಿವಿಧ ವಿನ್ಯಾಸಗಳನ್ನು ರಚಿಸುವರು. ಅಲ್ಲಲ್ಲಿ ಕೆಲವು ಮಿಂಚುವ ಬಣ್ಣದ ಬಟ್ಟೆಗಳನ್ನು ಕತ್ತರಿಸಿ ಉದ್ದನೆಯ ತಟ್ಟೆಗಳನ್ನಾಗಿ ಮಾಡಿ ಕೆಲವು ಭಾಗಗಳಲ್ಲಿ ಸುತ್ತುವರು. ಶಿಖರ ಭಾಗದಲ್ಲಿ ದುಂಡಾಕಾರದಲ್ಲಿ ತಯಾರಿಸಿದ ಭಾಗಗಳಲ್ಲಿ ಕೇಸರಿ, ಕೆಂಪು, ಹಸಿರು ಹಾಗೂ ಹಳದಿ ವರ್ಣಗಳಿಂದ ಅನೇಕ ಸುರುಳಿ ನಕ್ಷೆಗಳನ್ನು, ಬಣ್ಣ ಬಣ್ಣದ ಚುಕ್ಕೆಗಳನ್ನು ಹಾಗೂ ಅನೇಕ ಗೆರೆಗಳನ್ನೆಳೆದು ಸುಂದರಗೊಳಿಸಿರುವರು. ಜಗನ್ನಾಥ ದೇವಾಲಯದ ರಥಗಳ ಗೋಪುರ ಭಾಗಗಳ ವರ್ಣಗಾರಿಕೆಯನ್ನು ಶಬ್ದಗಳಲ್ಲಿ ಹೇಳಲು ಅಸಾಧ್ಯವಾಗುವುದು. ಅದನ್ನು ನೋಡಿಯೇ ಆನಂದಿಸಬೇಕು.

ಈ ರೀತಿಯಲ್ಲಿ ಗಡ್ಡೆ ರಥಗಳ ಗೋಪುರ ಭಾಗಗಳು ಮೊಗ್ಗಿನಾಕಾರದಲ್ಲಿ, ಗುಮ್ಮಟಾಕಾರದಲ್ಲಿ, ಹಾಗೂ ಕೆಲವು ದೇವಸ್ಥಾನಗಳ ಗೋಪುರಗಳ ತದ್ರೂಪವಾಗಿಯೇ ನಿರ್ಮಾಣಗೊಂಡು, ಉತ್ಸವದ ಸಂದರ್ಭದಲ್ಲಿ ಅನೇಕ ರೀತಿಯ ಬಣ್ಣದ ಬಟ್ಟೆಗಳಿಂದ ವಿವಿಧ ವರ್ಣಲೇಪನದಿಂದ, ವರ್ಣಚಿತ್ರಗಳ ಅಂಟಿಸುವಿಕೆಯಿಂದ ವಿವಿಧ ಬಣ್ಣದ ಬಿಡಿ ಹೂಗಳಿಂದ ಹಾಗೂ ಬಣ್ಣ ಬಣ್ಣದ ಹೂವಿನ ಹಾರಗಳಿಂದ ಅಲಂಕಾರಗೊಂಡು ವಿವಿಧ ರೀತಿಯ ವರ್ಣವಿನ್ಯಾಸದಿಂದ ಆಕರ್ಷತವಾಗಿರುತ್ತವೆ.

ಬ. ಅಂಕಣ ರಥಗಳಲ್ಲಿ ವರ್ಣವಿನ್ಯಾಸ :

ಕಾಷ್ಠ ಮಾಧ್ಯಮದ ಅಂಕಣ ರಥಗಳೂ ಸಹ ವರ್ಣಗಾರಿಕೆಯಿಂದ ಸುಂದರಗೊಂಡಿರುವುದನ್ನು ಕಾಣಬಹುದು. ಆದ್ದರಿಂದ ಅವುಗಳಲ್ಲಿಯ ವರ್ಣವಿನ್ಯಾಸವನ್ನು ಎರಡು

ಹಂತಗಳಲ್ಲಿ ಅಭ್ಯಾಸ ಮಾಡಬಹುದು.

೧. ಅಡಿಪಾಯ ಭಾಗದ ವರ್ಣಗಾರಿಕೆ.

೨. ಅಧಿಷ್ಠಾನದಿಂದ ಶಿಖರ ಭಾಗದವರೆಗಿನ ವರ್ಣಗಾರಿಕೆ.

೧. ಅಡಿಪಾಯ ಭಾಗದ ವರ್ಣಗಾರಿಕೆ : ಅಂಕಣ ರಥಗಳ ಅಡಿಪಾಯ ಭಾಗದ ಚಕ್ರಗಳು ಹಾಗೂ ಅಚ್ಚುಗಳಿಗೆ ವಿವಿಧ ಬಣ್ಣಗಳನ್ನು ಲೇಪಿಸಿರುವುದು ಕಂಡುಬರುತ್ತದೆ. ಉತ್ತರ ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಕಾಣುವಂತಹ ಅಂಕಣ ರಥಗಳ ಅಡಿಪಾಯ ಭಾಗದ ವರ್ಣಗಾರಿಕೆಯನ್ನು, ಪ್ರಾದೇಶಿಕವಾಗಿ ಕಾಣಸಿಗುವ ರಥಗಳ ಉದಾಹರಣೆಗಳೊಂದಿಗೆ ತಿಳಿಯುವಾ.

ಬೆಳಗಾಂವ ಜಿಲ್ಲೆಯ ಗೋಕಾಕದ ಬಸವೇಶ್ವರ ದೇವಾಲಯದ ರಥಗಳ ಚಕ್ರಗಳು ಮತ್ತು ಅಚ್ಚುಗಳು ಸುಂದರವಾದ ವರ್ಣಲೇಪನದಿಂದ ಕೂಡಿವೆ. ಚಕ್ರಗಳ ಹೊರಮೈಗೆ ಹಳದಿ ವರ್ಣಲೇಪನ ಮಾಡಿ ಚಕ್ರಗಳು ಅಚ್ಚುಗಳನ್ನು ಸೇರುವ ಮಧ್ಯಭಾಗದಲ್ಲಿ ಕಂದು ಬಣ್ಣದ ಪಟ್ಟಿಗಳನ್ನು ಎಳೆಯಲಾಗಿದೆ. ಚಕ್ರಗಳ ವ್ಯಾಸಗಳ ಸುತ್ತಲೂ ಕೆಂಪು ಬಣ್ಣದ ಎರಡು ಇಂಚು ಅಗಲವಾದ ಪಟ್ಟಿಯನ್ನು ಎಳೆಯಲಾಗಿದೆ. ಮಧ್ಯ ಉಳಿದಿರುವ ಚಕ್ರಗಳ ಭಾಗಗಳಲ್ಲಿ ಹೂವಿನಂತಹ ವಿನ್ಯಾಸಗಳನ್ನು ಹಾಗೂ ಬೇರೆ ಬೇರೆ ಬಣ್ಣಗಳಿಂದ ಚುಕ್ಕೆಗಳನ್ನಿಡಲಾಗಿದೆ. ಈ ರಥದ ಅಚ್ಚುಗಳೂ ಸಹ ಕಂದು ವರ್ಣವನ್ನು ಲೇಪಿಸಿಕೊಂಡಿರುವುದನ್ನು ಕಾಣಬಹುದು. ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕು ನಾರಿನಹಾಳದ ಹನುಮಾನ ದೇವಾಲಯದ ಅಂಕಣ ರಥದ ಚಕ್ರಗಳು ಹಾಗೂ ತೊಲೆಗಳ ಭಾಗದಲ್ಲಿ ವಿವಿಧ ರೀತಿಯ ವರ್ಣಗಾರಿಕೆಯನ್ನು ಕಾಣಬಹುದು. ಅಚ್ಚುಗಳು ಸೇರಿಕೊಂಡ ಚಕ್ರಗಳ ಮಧ್ಯಭಾಗದ ಸುತ್ತಲೂ ಕಪ್ಪು ಬಣ್ಣದ ಬಳೆಯಾಕಾರದ ವಿನ್ಯಾಸವಿದ್ದು, ಚಕ್ರಗಳ ವ್ಯಾಸದಲ್ಲಿ ಕೆಂಪು ಬಣ್ಣದ ಪಟ್ಟಿಯನ್ನು ಕಾಣಬಹುದು. ಚಕ್ರಗಳ ಮಧ್ಯ ಉಳಿದಿರುವ ಭಾಗಗಳಲ್ಲಿ ಹಳದಿ ವರ್ಣವನ್ನು ಬಳಿದು ಅದರ ಮೇಲೆ ಬಿಳಿಯ ಬಣ್ಣದ ಗೆರೆಗಳನ್ನು ಹಾಕಲಾಗಿದೆ. ಅಲ್ಲದೆ ಅಚ್ಚುಗಳಿಗೆ ಹಳದಿ ವರ್ಣವನ್ನು ಲೇಪಿಸಿ, ಅದರ ಮೇಲೆ ಹಸಿರು ಹಾಗೂ ಕೆಂಪು ವರ್ಣಗಳಿಂದ ಹೂಬಳ್ಳಿಯ ನಕ್ಷೆಗಳನ್ನು ರಚಿಸಲಾಗಿದೆ.

ರಾಯಚೂರು ಜಿಲ್ಲೆಯ ಮಲ್ಲಾಪುರದ ಮಲ್ಲಿಕಾರ್ಜುನ ದೇವಾಲಯದ ಅಂಕಣ ರಥದ ಚಕ್ರಗಳು ಇಡಿಯಾಗಿ ಕಂದು ಬಣ್ಣದಿಂದ ಕೂಡಿ ಅವುಗಳ ಮೇಲೆ ಬಿಳಿಯ ಬಣ್ಣದ ಚುಕ್ಕೆಗಳನ್ನು ಹಾಗೂ ಸಣ್ಣ ಸಣ್ಣ ಗೆರೆಗಳನ್ನು ಕಾಣಬಹುದು. ಚಕ್ರಗಳ ಮಧ್ಯಭಾಗದಿಂದ ವ್ಯಾಸದ ಕಡೆಗೆ ಎಳೆದಿರುವ ಹಳದಿ ಬಣ್ಣದ ಗೆರೆಗಳು ಸೂರ್ಯನ ಕಿರಣಗಳಂತೆ ಕಾಣಿಸುತ್ತವೆ. ರಥದ ಅಚ್ಚುಗಳ ಮೇಲೆ ಕೇಸರಿ ವರ್ಣದಿಂದ 'ಸ್ವಸ್ತಿಕ್' ಹಾಗೂ 'ಓಂ' ಗಳೆಂದು ಬರೆದಿರುವರು. ಅಲ್ಲಲ್ಲಿ ಹಳದಿ ಹಾಗೂ ಗುಲಾಬಿ ವರ್ಣಗಳಿಂದ ಹೂವಿನ ಎಸಳುಗಳಂತೆ ವಿನ್ಯಾಸಗಳನ್ನು ಚಿತ್ರಿಸಿರುವರು.

ಗದಗ ಜಿಲ್ಲೆಯ ಮೇಣಸಗಿಯ ಬಸವಣ್ಣನ ರಥವು ಚಕ್ರಗಳಲ್ಲಿ ಹಾಗೂ ಅಚ್ಚುಗಳಲ್ಲಿ ಸುಂದರವಾದ ವರ್ಣಗಾರಿಕೆಯನ್ನು ಹೊಂದಿದೆ. ಚಕ್ರಗಳ ಹೊರಮೈಗೆ ಗುಲಾಬಿ ಬಣ್ಣವನ್ನು ಲೇಪಿಸಿ ವ್ಯಾಸದ ಸುತ್ತಲೂ ಕಡುಗೆಂಪು ವರ್ಣದಿಂದ ಹೂಬಳ್ಳಿಯಾಕಾರದಲ್ಲಿ ಚಿತ್ರಿಸಿರುವುದನ್ನು ಕಾಣಬಹುದು. ಅಚ್ಚುಗಳಿಗೆ ಕಡುಗೆಂಪು ವರ್ಣವನ್ನು ಬಳಿದು, ಅದರ ಮೇಲೆ ಹಳದಿ ಹಾಗೂ ಕೇಸರಿ ವರ್ಣಗಳಿಂದ ಹೂವಿನಾಕಾರದ ಚಿತ್ರರಚನೆ ಮಾಡಿರುವುದು ಕಂಡುಬರುತ್ತದೆ.

ಗೋಕಾಕ ತಾಲೂಕಿನ ಮಮಟಗೇರಿಯ ಕಾಡಸಿದ್ಧೇಶ್ವರ ರಥದ ಚಕ್ರಗಳು ಹೊಮ್ಮೈಯಲ್ಲಿ ತಿಳಿ ಹಳದಿ ವರ್ಣಲೇಪನವನ್ನು ಮೈಗೂಡಿಸಿಕೊಂಡು, ಅಚ್ಚುಗಳು ಸೇರಿರುವ ಭಾಗದಲ್ಲಿ ಕೆಂಪು ವರ್ಣದ ವೃತ್ತಾಕಾರದ ವಿನ್ಯಾಸವನ್ನು ಹೊಂದಿದೆ. ವ್ಯಾಸದವರೆಗೆ ಹೂವಿನ ಎಸಳುಗಳಂತೆ ಕಾಣುವ ಹಾಗೆ ತಿಳಿ ನೀಲಿ ಹಾಗೂ ಕಪ್ಪು ವರ್ಣಗಳಿಂದ ಚಿತ್ರಿಸಲಾಗಿದೆ . ಅಚ್ಚುಗಳ ಭಾಗಕ್ಕೆ ಕಡುನೀಲಿ ವರ್ಣಲೇಪನ ಮಾಡಿದ್ದು, ಅದರ ಮೇಲೆ ಹಳದಿ ವರ್ಣದಿಂದ ಲಿಂಗ ಹಾಗೂ ಬಸವಣ್ಣನ ಚಿತ್ರಗಳನ್ನು ರಚಿಸಲಾಗಿದೆ.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಿಳೆಬಾವಿ ಸಿದ್ಧೇಶ್ವರ ರಥವು ಚಕ್ರಗಳ ಹೊರಮೈಗೆ ಹಳದಿ ಬಣ್ಣದ ವೃತ್ತಾಕಾರದ ಪಟ್ಟಿಗಳನ್ನು ಹೊಂದಿದೆ. ಚಕ್ರಗಳ ವ್ಯಾಸದ ಹತ್ತಿರವಿರುವ ಹಳದಿ ಪಟ್ಟಿಯಲ್ಲಿ ಹಾಗೂ ಅಚ್ಚುಗಳು ಚಕ್ರಗಳಿಗೆ ಸೇರಿರುವ ಭಾಗದ ಹಳದಿ ಪಟ್ಟಿಗಳಲ್ಲಿ ಕಂದು ವರ್ಣದಿಂದ ಸುರುಳಿಯಾಕಾರದ ನಕ್ಷೆಯನ್ನು ಬರೆಯಲಾಗಿದೆ. ಅಲ್ಲಲ್ಲಿ ಕೆಂಪು ವರ್ಣದ ದುಂಡನೆಯ ಚುಕ್ಕಿಗಳನ್ನಿಡಲಾಗಿದೆ. ಅಚ್ಚುಗಳಿಗೆ ಕಂದು ವರ್ಣಲೇಪನ ಮಾಡಿ ಅಲ್ಲಲ್ಲಿ ಸುರುಳಿ ನಕ್ಷೆಗಳನ್ನು ಕೆಂಪು ವರ್ಣದಿಂದ ಚಿತ್ರಿಸಲಾಗಿದೆ.

ಇದೇ ಜಿಲ್ಲೆಯ ಯರನಾಳದ ಶಿವಲಿಂಗೇಶ್ವರ ರಥದ ಚಕ್ರಗಳು ಹೊರಮೈಗೆ ತಿಳಿನೀಲಿ ಹಾಗೂ ಕಡುನೀಲಿ ವರ್ಣಗಳಿಂದ ವೃತ್ತಾಕಾರದ ಪಟ್ಟಿಗಳನ್ನು ರಚಿಸಲಾಗಿದೆ. ಕಡುನೀಲಿ ವರ್ಣದ ವೃತ್ತಾಕಾರದ ವಿನ್ಯಾಸದಲ್ಲಿ ಹಳದಿ ವರ್ಣದ ತ್ರಿಕೋನಾಕಾರದ ಹಾಗೂ ಬಳ್ಳಿಯಾಕಾರದ ಗೆರೆಗಳನ್ನೆಳೆಯಲಾಗಿದೆ. ಚಕ್ರಗಳ ವ್ಯಾಸದ ಹತ್ತಿರವಿರುವ ತಿಳಿನೀಲಿ ವರ್ಣದ ವೃತ್ತಾಕಾರದ ಪಟ್ಟಿಕೆಯಲ್ಲಿ ಕಂದು ವರ್ಣದ ದುಂಡನೆಯ ವಿನ್ಯಾಸಗಳನ್ನು ರಚಿಸಿರುವರು. ಅಲ್ಲದೆ ಅಚ್ಚುಗಳಿಗೆ ಕಂದು ವರ್ಣಲೇಪನವಿದ್ದು, ಅಲ್ಲಲ್ಲಿ ಬಿಳಿ ವರ್ಣದಿಂದ ಗೆರೆಗಳನ್ನೆಳೆದು ಸುಂದರಗೊಳಿಸಲಾಗಿದೆ.

ಬೆಳೆಗಾವಿ ಜಿಲ್ಲೆಯ ಅಥಣಿ ತಾಲೂಕಿನ ಜನವಾಡದ ಲಕ್ಷ್ಮೀದೇವಿ ರಥದ ಚಕ್ರಗಳ ಮಧ್ಯಭಾಗದಲ್ಲಿ ವಿವಿಧ ಬಣ್ಣದ ಹೂಗಳಂತಿರುವ ಚಿತ್ರವಿನ್ಯಾಸವನ್ನು ಕಾಣಬಹುದು. ವ್ಯಾಸದ ಸುತ್ತಲೂ ಇರುವ ಹೂಬಳ್ಳಿಗಳಂತಹ ನಕ್ಷೆಗಳು ಹಾಗೂ ಸುರುಳಿಯಾಕಾರದ ನಕ್ಷೆಗಳು ಬಿಳಿ, ಕೇಸರಿ ಹಾಗೂ ತಿಳಿ ನೀಲಿ ವರ್ಣಗಾರಿಕೆಯಿಂದ ಕೂಡಿವೆ. ಅಚ್ಚುಗಳಿಗೆ ತಿಳಿನೀಲಿ ವರ್ಣಲೇಪನ ಮಾಡಿ ಅವುಗಳ ಮೇಲೆ ಕಡು ನೀಲಿ ವರ್ಣದಿಂದ ಲಿಂಗ ಹಾಗೂ ನಂದಿಯ ಚಿತ್ರ ರಚನೆ ಮಾಡಲಾಗಿದೆ.

ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕು ನೆರೋಗಿಯ ಆಂಜನೇಯ ರಥದ ಚಕ್ರಗಳ ಹೊರಮೈ ಹಾಗೂ ಒಳಮೈಗೆ ಹಳದಿ ಮಿಶ್ರಿತ ಕಂದು ವರ್ಣವನ್ನು ಲೇಪಿಸಲಾಗಿದೆ. ಚಕ್ರಗಳ ಹೊರಮೈಗೆ ವ್ಯಾಸದ ಹತ್ತಿರ ಹಳದಿ ಬಣ್ಣದ ವೃತ್ತಾಕಾರದ ಪಟ್ಟಿಯನ್ನು ಎಳೆದು ಅದರಲ್ಲಿ ನೀಲಿ ಬಣ್ಣದ ಚಿಕ್ಕ ಚಿಕ್ಕ ಗೆರೆಗಳನ್ನೆಳೆಯಲಾಗಿದೆ. ಚಕ್ರಗಳ ಮಧ್ಯಭಾಗದ ಸುತ್ತಲೂ ಎಲೆಯಾಕಾರದ ವಿನ್ಯಾಸಗಳನ್ನು ಹಸಿರು ಬಣ್ಣದಲ್ಲಿ ಚಿತ್ರಿಸಿದ್ದು, ಎಲೆಗಳಿಗೆ ಕಪ್ಪು ವರ್ಣದ ಗೆರೆಗಳನ್ನು ಹಾಕಲಾಗಿದೆ. ಅಚ್ಚುಗಳಿಗೆ ಕಡುಗೆಂಪು ವರ್ಣಲೇಪನ ಮಾಡಲಾಗಿದೆ. ಅಲ್ಲದೆ ಅಲ್ಲಲ್ಲಿ ಬೇರೆ ಬೇರೆ ವರ್ಣಗಳ ಚುಕ್ಕೆಗಳನ್ನಿಟ್ಟು ಸುಂದರಗೊಳಿಸಲಾಗಿದೆ.

ಹೀಗೆ ವಿವಿಧ ಪ್ರದೇಶಗಳಲ್ಲಿ ಕಾಣುವ ಅಂಕಣ ರಥಗಳ ಚಕ್ರಗಳು ಹಾಗೂ ಅಚ್ಚುಗಳ

ಭಾಗಗಳು ವರ್ಣಗಾರಿಕೆಯಿಂದ ಸುಂದರಗೊಂಡಿರುವುದನ್ನು ಕಾಣುತ್ತೇವೆ.

೨. ಅಧಿಷ್ಠಾನ ಭಾಗದಿಂದ ಶಿಖರ ಭಾಗದವರೆಗಿನ ವರ್ಣಗಾರಿಕೆ : ಅಂಕಣ ರಥಗಳು ಅಧಿಷ್ಠಾನ ಭಾಗದಿಂದ ಶಿಖರ ಭಾಗದವರೆಗೂ ಅನೇಕ ಅಂತಸ್ತುಗಳಲ್ಲಿ ನಿರ್ಮಾಣಗೊಂಡಿರುತ್ತವೆ. ಕೆಲವು ರಥಗಳಲ್ಲಿ ಮಂಟಪ ಭಾಗಗಳ ವಿನ್ಯಾಸ ಪ್ರತ್ಯೇಕವಾಗಿ ಕಂಡರೂ, ಹೆಚ್ಚಿನ ರಥಗಳಲ್ಲಿ ಪೀಠವನ್ನು ಅಳವಡಿಸಿರುವ ಭಾಗವೇ ಮಂಟಪ ಭಾಗವೆಂದು ತಿಳಿಯಬೇಕಾಗುತ್ತದೆ. ಆದ್ದರಿಂದ ಅಧಿಷ್ಠಾನ, ಮಂಟಪ ಹಾಗೂ ಗೋಪುರ ಭಾಗಗಳೆಂದು ವಿಭಾಗ ಮಾಡದೇ, ಎಲ್ಲ ಭಾಗಗಳಲ್ಲಿರುವ ಅನೇಕ ಕಂಬಗಳು ಹಾಗೂ ಕಮಾನುಗಳಲ್ಲಿ ಒಂದೇ ತೆರನಾಗಿ ಕಾಣುವ ವರ್ಣವಿನ್ಯಾಸವನ್ನು ಕುರಿತು ಅಭ್ಯಾಸಮಾಡುವಾ.

ಬೆಳಗಾವಿ ಜಿಲ್ಲೆಯ ಗೋಕಾಕದ ಬಸವೇಶ್ವರ ದೇವಾಲಯದ ಅಂಕಣ ರಥದ ಅಧಿಷ್ಠಾನ ಭಾಗದಿಂದ ಗೋಪುರ ಭಾಗದವರೆಗೆ ಇರುವ ಅನೇಕ ಕಂಬಗಳು ಹಾಗೂ ಕಮಾನುಗಳಿಗೆ ವಿವಿಧ ರೀತಿಯ ವರ್ಣಲೇಪನ ಮಾಡಲಾಗಿದೆ. ಕಟಂಜರಗಳಂತಿರುವ ಭಾಗಕ್ಕೆ ಬಿಳಿ ಮಿಶ್ರಿತ ಗುಲಾಬಿ ಬಣ್ಣವನ್ನು ಲೇಪಿಸಲಾಗಿದೆ. ಕಮಾನುಗಳಿಗೆ ಸಂಬಂಧಿಸಿದ ಎಲ್ಲ ಕಂಬಗಳ ಮಧ್ಯಭಾಗದಲ್ಲಿ ಹಳದಿ ಮಿಶ್ರಿತ ಕಂದು ಬಣ್ಣವನ್ನು ಲೇಪಿಸಿ, ಕಂಬಗಳ ಕೆಳತುದಿ ಹಾಗೂ ಮೇಲ್ತುದಿಗಳಲ್ಲಿ ನೀಲಿ ಹಾಗೂ ಕೇಸರಿ ವರ್ಣಗಳ ಗೆರೆಗಳನ್ನೆಳೆಯಲಾಗಿದೆ. ವಿವಿಧ ವಿನ್ಯಾಸಗಳಿಂದ ಕೂಡಿದ ಕಮಾನುಗಳಿಗೆ ತಿಳಿಹಳದಿ ಬಣ್ಣವನ್ನು ಲೇಪಿಸಿ, ಅದರ ಮೇಲೆ ಹಸಿರು ಹಾಗೂ ಹಳದಿ ವರ್ಣಗಳಿಂದ ಅರಳಿದ ಹೂವಿನ ಚಿತ್ರಗಳನ್ನು ಬಿಡಿಸಲಾಗಿದೆ. ಕಮಾನುಗಳ ಕೆಲವು ಭಾಗಗಳಲ್ಲಿ ತುಂಬು ನಕ್ಷೆಗಳನ್ನು ಕೆಂಪು ಹಾಗೂ ಹಳದಿ ಮಿಶ್ರಿತ ಕೇಸರಿ ವರ್ಣಗಳಿಂದ ಬಿಡಿಸಲಾಗಿದೆ. ಪ್ರತಿಯೊಂದು ಅಂತಸ್ತುಗಳ ಮೇಲ್ಭಾಗದ ಪಟ್ಟಿಕೆಗಳಲ್ಲಿ ಕೇಸರಿ, ಬಿಳಿ, ನೀಲಿ, ಹಳದಿ ಹಾಗೂ ಕಪ್ಪು ವರ್ಣಗಳಿಂದ ಸಣ್ಣ ಸಣ್ಣ ಪಟ್ಟಿಗಳನ್ನೆಳೆಯಲಾಗಿದೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ನಾರಿನಹಾಳದ ಹನುಮಾನ ದೇವಸ್ಥಾನದ ಅಂಕಣ ರಥದ ಎಲ್ಲ ಅಂತಸ್ತುಗಳಲ್ಲಿರುವ ಕಂಬಗಳಿಗೆ ತಿಳಿಕೇಸರಿ ವರ್ಣವನ್ನು ಲೇಪಿಸಿ, ಆ ಕಂಬಗಳಿಗೆ ಮೇಲಿನಿಂದ ಕೆಳಭಾಗದವರೆಗೆ ಕೆಂಪು ಹಾಗೂ ಹಳದಿ ವರ್ಣಗಳಿಂದ ಸಮಾನಾಂತರದಲ್ಲಿ ಗೆರೆಗಳನ್ನೆಳೆಯಲಾಗಿದೆ. ಅಲ್ಲಲ್ಲಿ ಬಿಳಿ ವರ್ಣದ ಚುಕ್ಕೆಗಳನ್ನಿಡಲಾಗಿದೆ. ಪ್ರತಿಯೊಂದು ಕಮಾನುಗಳಿಗೆ ತಿಳಿಗೆಂಪು ವರ್ಣವನ್ನು ಲೇಪಿಸಿ, ಅದರ ಮೇಲೆ ನೇರಳೆ ವರ್ಣದಿಂದ ಎಲೆಬಳ್ಳಿಯಾಕಾರದ ಚಿತ್ರ ರಚಿಸಲಾಗಿದೆ. ಎಲೆಬಳ್ಳಿಯಾಕಾರದ ಚಿತ್ರವಿನ್ಯಾಸದಲ್ಲಿ ಕಪ್ಪು ಬಣ್ಣದ ಗೆರೆಗಳು ಎದ್ದು ಕಾಣಿಸುತ್ತವೆ. ಅಲ್ಲದೆ ಪ್ರತಿಯೊಂದು ಭುಜಗಳ ಮೇಲಿರುವ ಬುಗುರಿಯಾಕಾರದ ವಿನ್ಯಾಸಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದೆ.

ರಾಯಚೂರು ಜಿಲ್ಲೆ ಮಾನ್ವಿ ತಾಲೂಕು ಅರೋಲಿಯ ಊರಮ್ಮನ ರಥದ ಎಲ್ಲ ಅಂತಸ್ತುಗಳ ಕಂಬಗಳಿಗೆ ನೀಲಿ ವರ್ಣವನ್ನು ಲೇಪಿಸಲಾಗಿದೆ. ಕಂಬದ ನಡುವೆ ಚಿತ್ರಿಸಲಾದ ಹೂವಿನಾಕಾರದ ಕೆಂಪು ಹಾಗೂ ಹಳದಿ ಬಣ್ಣವನ್ನು ತುಂಬಲಾಗಿದೆ. ಕಂಬಗಳಲ್ಲಿ ಬಳೆಯಾಕಾರವಾಗಿ ಕೆತ್ತಿರುವ ವಿನ್ಯಾಸಗಳಿಗೆ ನೇರಳೆ ವರ್ಣಲೇಪನ ಮಾಡಲಾಗಿದೆ. ರಥದ ಎಲ್ಲ ಅಂತಸ್ತುಗಳಲ್ಲಿರುವ ಕಮಾನುಗಳಿಗೆ ತಿಳಿನೀಲಿ ವರ್ಣಲೇಪನ ಮಾಡಲಾಗಿದೆ. ಕಮಾನುಗಳಲ್ಲಿರುವ ಕೆಲವು ಸುರುಳಿಯಾಕಾರದ ನಕ್ಷೆಗಳಿಗೆ

ನೆಜೆಂಟಾ ಬಣ್ಣವನ್ನು ತುಂಬಲಾಗಿದ್ದು ನಕ್ಷೆಗಳಿಗೆ ಅಲ್ಲಲ್ಲಿ ಬಿಳಿ ಹಾಗೂ ಕಪ್ಪು ವರ್ಣದಿಂದ ಗೆರೆಗಳನ್ನೆಳೆಯಲಾಗಿದೆ.

ಇದೇ ಜಿಲ್ಲೆಯ ಲಿಂಗಸೂರು ತಾಲೂಕಿನ ತೀರ್ಥಬಾವಿಯ ರಾಘವೇಂದ್ರ ರಥದಲ್ಲಿ ಕಂಬಗಳಿಗೆ ಕ್ರೀಮ್ ಬಣ್ಣವನ್ನು ಹಚ್ಚಲಾಗಿದೆ. ಅವುಗಳ ಮೇಲೆ ಮಧ್ಯಭಾಗದಲ್ಲಿ ಕಾಣಿಸುವ ಬಳೆಯಾಕಾರದ ಉಬ್ಬುಶಿಲ್ಪವಿನ್ಯಾಸಗಳಿಗೆ ಕ್ರಮವಾಗಿ ತಿಳಿನೀಲಿ ಹಾಗೂ ಕಡುಗಂದು ಹೀಗೆ ಎರಡು ವರ್ಣಗಳಿಂದ ಸುಂದರಗೊಳಿಸಲಾಗಿದೆ. ಇದಲ್ಲದೆ ಕಂಬಗಳ ಮೇಲೆ ಹಾಗೂ ಕೆಳ ತುದಿಗಳಲ್ಲಿ ಕಾಣುವ ಬಳ್ಳಿ ಹಾಗೂ ಹೂವಿನಾಕಾರದ ನಕ್ಷೆಗಳಿಗೆ ಹಸಿರು ಹಾಗೂ ತಿಳಿಗುಲಾಬಿ ವರ್ಣಗಳನ್ನು ತುಂಬಲಾಗಿದೆ.

ಬಿಜಾಪೂರ ಜಿಲ್ಲೆಯ ಕೇಶಾಪೂರದ ಬಂಡೆಮ್ಮನ ರಥದಲ್ಲಿ ಎಲ್ಲ ಅಂತಸ್ತುಗಳ ಕಂಬಗಳು ಹಾಗೂ ಕಮಾನುಗಳಿಗೆ ತಿಳಿಹಳದಿ ವರ್ಣಲೇಪನ ಮಾಡಿ, ಕಂಬಗಳ ಮೇಲೆ, ಮಧ್ಯಭಾಗದಲ್ಲಿ ಹಾಗೂ ಕೆಳಭಾಗದಲ್ಲಿ ನೀಲಿ, ಹಸಿರು ಹಾಗೂ ಕಡುಗಂದು ವರ್ಣಗಳಿಂದ ಸಮಾನಾಂತರದ ಪಟ್ಟಿಗಳನ್ನೆಳೆಯಲಾಗಿದೆ. ಅಲ್ಲಲ್ಲಿ ಬಿಳಿ ಬಣ್ಣದ ಚುಕ್ಕೆಗಳನ್ನಿಡಲಾಗಿದೆ. ಕಮಾನುಗಳ ಅಂಚು ವಿನ್ಯಾಸಗಳಿಗೆ ಬಂಗಾರ ವರ್ಣದ ಗೆರೆಗಳನ್ನು ಹಾಕಿ, ಆ ಗೆರೆಗಳ ಪಕ್ಕದಲ್ಲಿಯೇ ಕಪ್ಪು ಬಣ್ಣದ ಚುಕ್ಕೆಗಳನ್ನಿಡಲಾಗಿದೆ. ಅಂತಸ್ತುಗಳ ಮೇಲ್ಭಾಗದಲ್ಲಿ ಕಾಣುವಂತಹ ಕುದುರೆಯ ಬಾಲದಂತಿರುವ ವಿನ್ಯಾಸಗಳಿಗೆ ಕಂದು ಹಾಗೂ ಕಪ್ಪು ವರ್ಣಗಳನ್ನು ಬಳಸಲಾಗಿದೆ.

ಇದೇ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಿಳೆಬಾವಿ ಸಿದ್ಧೇಶ್ವರ ರಥದ ಎಲ್ಲ ಅಂತಸ್ತುಗಳ ಕಮಾನುಗಳು ತಿಳಿಹಳದಿ ಬಣ್ಣದಿಂದ ಸುಂದರಗೊಂಡಿವೆ. ಅವುಗಳ ಮೇಲೆ ಕಂದು ವರ್ಣದ ಕೆಲವು ಪಕ್ಷಿಗಳ ಮುಖ ವಿನ್ಯಾಸವಿರುವ ಹಾಗೂ ಸುರುಳಿಯಾಕಾರದ ನಕ್ಷೆಗಳನ್ನು ರಚಿಸಲಾಗಿದೆ. ಎಲ್ಲ ಕಂಬಗಳಿಗೆ ತಿಳಿಗುಲಾಬಿ ವರ್ಣಲೇಪನ ಮಾಡಲಾಗಿದೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಚಿಕ್ಕಳಕಿಯ ಶಿವಲಿಂಗೇಶ್ವರ ದೇವಸ್ಥಾನದ ಅಂಕಣ ರಥದ ಎಲ್ಲ ಅಂತಸ್ತುಗಳಲ್ಲಿರುವ ಕಂಬಗಳಿಗೆ ತಿಳಿ ಕೇಸರಿ ವರ್ಣಗಾರಿಕೆಯನ್ನು ಮಾಡಲಾಗಿದೆ. ಅವುಗಳ ಮೇಲೆ ಬಳ್ಳಿಯಾಕಾರದಲ್ಲಿ ಚಿತ್ರಿಸಲಾದ ವಿನ್ಯಾಸಗಳಿಗೆ ಹಸಿರು ಹಾಗೂ ಕೆಂಪು ವರ್ಣಗಳನ್ನು ತುಂಬಲಾಗಿದೆ. ಎಲ್ಲ ಕಮಾನುಗಳಿಗೆ ಹಳದಿ ವರ್ಣವನ್ನು ಲೇಪಿಸಿ, ಅವುಗಳ ಮೇಲೆ ಕಾಣುವಂತಹ ಹೂವಿನಾಕಾರದ ವಿನ್ಯಾಸಗಳಿಗೆ ಕೆಂಪು ಹಾಗೂ ನೀಲಿ ವರ್ಣಗಳನ್ನು ಬಳಸಲಾಗಿದೆ.

ಹೀಗೆ ಅಂಕಣ ರಥಗಳಲ್ಲಿ ಕಂಬಗಳು ಹಾಗೂ ಕಲಾತ್ಮಕ ಕಮಾನುಗಳೇ ಹೆಚ್ಚಾಗಿರುವುದರಿಂದ ಅವುಗಳಿಗೆ ಮೊದಲು ಒಂದು ಬಣ್ಣದಿಂದ ವರ್ಣಲೇಪನ ಮಾಡಿ, ಕೆಲವು ಹೂವಿನಾಕಾರದ, ಬಳ್ಳಿಯಾಕಾರದ, ಸುರುಳಿಯಾಕಾರದ ವಿನ್ಯಾಸಗಳನ್ನು ಹಾಗೂ ಕೆಲವು ರಥಗಳಲ್ಲಿ ಶಿವಲಿಂಗ, ನಂದಿ 'ಸ್ವಸ್ತಿಕ್' ಹಾಗೂ 'ಓಂ' ಗಳಂತಹ ಸಂಕೇತಗಳನ್ನು ಬರೆದಿರುವುದನ್ನು ಕಾಣಬಹುದು. ಇದೇ ರೀತಿಯಲ್ಲಿ ವರ್ಣಗಾರಿಕೆಯನ್ನು ಹೊಂದಿದ ಅನೇಕ ರಥಗಳನ್ನು ಇನ್ನೂ ಅನೇಕ ಪ್ರದೇಶಗಳಲ್ಲಿ ಕಾಣಬಹುದು. ಅಧ್ಯಯನದ ಇತಿಮಿತಿಗೆ ಅನುಗುಣವಾಗಿ ಕೆಲವು ರಥಗಳ ಉದಾಹರಣೆ ಸಹಿತ

ಕಾಷ್ಠ ರಥಶಿಲ್ಪಗಳ ಗೋಪುರ ಭಾಗದ ವರ್ಣ ವಿನ್ಯಾಸ



ಶ್ರೀ ವೀರುಪಾಕ್ಷನ ರಥ
ಹಂಪಿ, ಜಿ - ಬಳ್ಳಾರಿ



ಶ್ರೀ ವೀರಭದ್ರೇಶ್ವರ ರಥ
ಹಲಕರ್ಟಿ, ಜಿ - ಗುಲಬರ್ಗಾ



ಶ್ರೀ ಪುರಿ ಜಗನಾಥ ರಥ
ಒರಿಸ್ಸಾ



ಶ್ರೀ ಮೌನೇಶ್ವರ ರಥ
ವರವಿ, ಜಿ - ಗದಗ



ಶ್ರೀ ವೀರಭದ್ರೇಶ್ವರ ರಥ
ಹರ್ತಿ, ಜಿ - ಗದಗ



ಶ್ರೀ ಸಂಗಮೇಶ್ವರ ರಥ
ಗುಳೇದಗುಡ್ಡ, ಜಿ - ಬಾಗಲಕೋಟ







ಶ್ರೀ ನಂಜುಡೇಶ್ವರ ದೇವಾಲಯದ ರಥಗಳು, ನಂಜನಗೂಡು


ಕಾಷ್ಠ ರಥಶಿಲ್ಪಗಳ ಗೋಪುರ ಭಾಗದ ವರ್ಣ ವಿನ್ಯಾಸ



ಶ್ರೀ ಆಂಜನೇಯ ರಥ
ಮರೇಮ್ಮನಹಳ್ಳಿ, ಜಿ - ಬಳ್ಳಾರಿ



ಶ್ರೀ ವೀರಭದ್ರ ರಥ
ಹುನಗುಂದ, ಜಿ - ಬಾಗಲಕೋಟ



ಶ್ರೀ ಸೋಮೇಶ್ವರ ರಥ
ಲಕ್ಷ್ಮೇಶ್ವರ , ಜಿ - ಗದಗ



ಶ್ರೀ ವೀರಭದ್ರ ರಥ
ಮೋರಬ, ಜಿ - ಬಳ್ಳಾರಿ



ಶ್ರೀ ಮಾಹಾಲಿಂಗೇಶ್ವರ ರಥ
ಮಾಹಾಲಿಂಗಪೂರ, ಜಿ - ಬಾಗಲಕೋಟ



ಶ್ರೀ ವೀರಭದ್ರ ರಥ
ಮುಚಖಂಡಿ, ಜಿ - ಬಾಗಲಕೋಟ



ಶ್ರೀ ಸಿದ್ಧೇಶ್ವರ ರಥ
ಶಿರೂರ, ಜಿ - ಬಾಗಲಕೋಟ




ಶ್ರೀ ಮಾಹಾದೇವ ರಥ
ರಬಕವಿ, ಜಿ - ಬಾಗಲಕೋಟ



ಶ್ರೀ ಬನಶಂಕರಿ ರಥ
ಬಾದಾಮಿ, ಜಿ - ಬಾಗಲಕೋಟ

ಕಾಷ್ಠ ರಥಶಿಲ್ಪಗಳ ಗೋಪುರ ಭಾಗದ ವರ್ಣ ವಿನ್ಯಾಸ



ಶ್ರೀ ಗುದ್ನೆಪ್ಪನ ಮಠದ ರಥ
ಕುಕನೂರ, ಜಿ - ಕೊಪ್ಪಳ



ಶ್ರೀ ಚೆನ್ನಕೇಶವ ರಥ
ಬೇಲೂರು



ಶ್ರೀ ಕೊಟ್ಟೂರೇಶ್ವರ ರಥ
ಕೊಟ್ಟೂರು, ಜಿ - ಬಳ್ಳಾರಿ



ಶ್ರೀ ಸಿದ್ಧಾರೂಢ ರಥ
ಮುರ್ಕಿಬಾವಿ, ಜಿ - ಬೆಳಗಾಂವ



ಶ್ರೀ ಸಂಗಮನಾಥನ ರಥ
ಕೂಡಲಸಂಗಮ, ಜಿ - ಬಾಗಲಕೋಟ



ಶ್ರೀ ತೋಂಟದಾರ್ಯ ಮಠದ ರಥ
ಗದಗ



ಶ್ರೀ ಕನಕರಾಯನ ರಥ
ಕನಕಗಿರಿ, ಜಿ - ಕೊಪ್ಪಳ



ಶ್ರೀ ವಿಜಯಮಹಾಂತೇಶ್ವರ ರಥ
ಇಳಕಲ, ಜಿ - ಬಾಗಲಕೋಟ



ಶ್ರೀ ಗವಿಸಿದ್ದೇಶ್ವರ ರಥ
ಕೊಪ್ಪಳ

ಇಲ್ಲಿ ಹೇಳಲಾಗಿದೆ. ನಾಡಿನ ಇನ್ನೂ ಕೆಲವು ರಥಗಳ ಹೆಸರುಗಳನ್ನು ಹೆಸರಿಸಬಹುದು. ಮುಧೋಳದ ಬ್ರಹ್ಮಗಡ್ಡಿ ರಥ, ಗೋಕಾಕ ತಾಲೂಕು ಮಾವನೂರು ಬಂಡೆಮ್ಮನ ರಥ, ಹುಕ್ಕೇರಿ ತಾಲೂಕಿನ ಸಂಗಾನಟ್ಟಿಯ ಬಸವೇಶ್ವರ ರಥ, ಬೆಳಗಾವಿ ಜಿಲ್ಲೆಯ ಮದಬಾವಿಯ ಬಸವೇಶ್ವರ ರಥ, ಗೊಡಚಿನಮಲ್ಕಿಯ ಲಕ್ಷ್ಮೀ ದೇವಿಯ ರಥ, ಬಾಗಲಕೋಟೆ ಜಿಲ್ಲೆ ಬೀಳಗಿ ತಾಲೂಕು ತೋಳಮಟ್ಟಿಯ ರಥ, ಶಿಗ್ಗಾಂವ ತಾಲೂಕು ಶಿಡಗರಹಳ್ಳಿಯ ಊರಮ್ಮನ ರಥ, ಕೊಪ್ಪಳ ಜಿಲ್ಲೆಯ ರ‍್ಯಾವಣಗಿಯ ಬಸವಣ್ಣನ ರಥ ಹೀಗೆ ಎಲ್ಲ ರಥಗಳಲ್ಲಿ ಸುಂದರವಾದ ವರ್ಣಗಾರಿಕೆಯನ್ನು ಕಾಣಬಹುದು.

II. ಲೋಹ ಮಾಧ್ಯಮದ ರಥಗಳ ವರ್ಣವಿನ್ಯಾಸ :

ಲೋಹ ಮಾಧ್ಯಮ ರಥಗಳನ್ನು ಮೂರು ವಿಧಗಳನ್ನಾಗಿ ವಿಂಗಡಿಸಬಹುದು.

ಅ. ಕಬ್ಬಿಣದ ರಥಗಳು

ಬ. ಬೆಳ್ಳಿಯ ರಥಗಳು

ಕ. ಚಿನ್ನದ ರಥಗಳು

ಈ ಮೂರು ವಿಧಗಳಲ್ಲಿ ನಿರ್ಮಾಣಗೊಂಡ ರಥಗಳಲ್ಲಿ ಕಾಣುವ ವರ್ಣಗಾರಿಕೆಯ ಕುರಿತು ಅಭ್ಯಾಸ ಮಾಡುವಾ.

ಅ. ಕಬ್ಬಿಣದ ರಥಗಳಲ್ಲಿ ವರ್ಣವಿನ್ಯಾಸ : ಕಬ್ಬಿಣದ ರಥಗಳನ್ನು ಎರಡು ವಿಧಗಳನ್ನಾಗಿ ವಿಂಗಡಿಸಬಹುದು.

೧. ಕಬ್ಬಿಣದ ಗಡ್ಡಿ ರಥಗಳು.

೨. ಕಬ್ಬಿಣದ ಅಂಕಣ ರಥಗಳು.

ಅ. ಕಬ್ಬಿಣದ ಗಡ್ಡಿ ರಥಗಳ ವರ್ಣವಿನ್ಯಾಸ :

ಉತ್ತರ ಕರ್ನಾಟಕದಲ್ಲಿ ಕಾಣುವ ಕೆಲವು ಕಬ್ಬಿಣದ ಗಡ್ಡಿ ರಥಗಳಲ್ಲಿ ವರ್ಣಗಾರಿಕೆಯನ್ನು ಕಾಣಬಹುದು. ಕಬ್ಬಿಣದ ಗಡ್ಡಿ ರಥಗಳಲ್ಲಿ ಮುಖ್ಯವಾಗಿ ನಾಲ್ಕು ಭಾಗಗಳನ್ನು ಮಾಡಬಹುದು.


i. ಅಡಿಪಾಯ ಭಾಗ

ii. ಅಧಿಷ್ಠಾನ ಭಾಗ

iii. ಮಂಟಪ ಭಾಗ

iv. ಗೋಪುರ ಭಾಗ

i. ಅಡಿಪಾಯ ಭಾಗದ ವರ್ಣವಿನ್ಯಾಸ : ಕಬ್ಬಿಣದ ಗಡ್ಡಿ ರಥಗಳಲ್ಲಿ ಅಡಿಪಾಯ ಭಾಗದಲ್ಲಿ ಚಕ್ರಗಳಿಗೆ ವಿವಿಧ ಬಣ್ಣಗಳಿಂದ ವರ್ಣಗಾರಿಕೆಯನ್ನು ಮಾಡಿರುತ್ತಾರೆ. ಅಚ್ಚುಗಳಿಗೆ ಹಾಗೂ


ಲೋಹ ಮಾಧ್ಯಮ ರಥಗಳಲ್ಲಿ ವರ್ಣವಿನ್ಯಾಸ
ಕಬ್ಬಿಣ ರಥದ ವರ್ಣವಿನ್ಯಾಸ
ಗಡ್ಡಿ ರಥ
ಅಡಿಪಾಯ ಭಾಗದ ವರ್ಣ ವಿನ್ಯಾಸ
ಅಧಿಷ್ಠಾನ ಭಾಗದ ವರ್ಣ ವಿನ್ಯಾಸ
ಮಂಟಪ ಭಾಗದ ವರ್ಣ ವಿನ್ಯಾಸ
ಗೋಪುರ ಭಾಗದ ವರ್ಣ ವಿನ್ಯಾಸ
ಅಂಕಣ ರಥ
ಅಡಿಪಾಯ ಭಾಗದ ವರ್ಣ ವಿನ್ಯಾಸ
ಅಧಿಷ್ಠಾ ಭಾಗದಿಂದ ಶಿಖರ ಭಾಗದವರೆಗೆ ವರ್ಣವಿನ್ಯಾಸ
ಬೆಳ್ಳಿ ರಥದ ವರ್ಣವಿನ್ಯಾಸ
ಮಂಟಪ ಭಾಗಗಳಲ್ಲಿ ಹರಳುಗಳ ಜೋಡನೆ
ಉತ್ಸವದಲ್ಲಿ ವಿವಿಧ ಬಣ್ಣದ ಪುಷ್ಪಗಳ ಹೊದಿಕೆ
ಚಿನ್ನದ ರಥ ವರ್ಣವಿನ್ಯಾಸ
ಮಂಟಪ ಭಾಗಗಳಲ್ಲಿ ಹರಳುಗಳ ಜೋಡನೆ
ಉತ್ಸವದಲ್ಲಿ ವಿವಿಧ ಬಣ್ಣದ ಪುಷ್ಪಗಳ ಹೊದಿಕೆ
ಸಂಕೀರ್ಣ ಮಾಧ್ಯಮದ ರಥ ವಿನ್ಯಾಸ
ಕಟ್ಟುವ ರಥದ ವರ್ಣ ವಿನ್ಯಾಸ
ಮಂಟಪ ಭಾಗದ ವರ್ಣಗಾರಿಕೆ
ಗೋಪುರ ಭಾಗದ ವರ್ಣಗಾರಿಕೆ
ತಟ್ಟಿಯ ರಥದ ವರ್ಣ ವಿನ್ಯಾಸ
ಮಂಟಪ ಭಾಗದ ವರ್ಣಗಾರಿಕೆ
ಗೋಪುರ ಭಾಗದ ವರ್ಣಗಾರಿಕೆ
ತೆಪ್ಪದ ರಥದ ವರ್ಣ ವಿನ್ಯಾಸ
ಮಂಟಪ ಭಾಗದ ವರ್ಣಗಾರಿಕೆ
ಗೋಪುರ ಭಾಗದ ವರ್ಣಗಾರಿಕೆ
ಹೂವಿನ ರಥದ ವರ್ಣ ವಿನ್ಯಾಸ
ಮಂಟಪ ಭಾಗದ ವರ್ಣಗಾರಿಕೆ
ಗೋಪುರ ಭಾಗದ ವರ್ಣಗಾರಿಕೆ

ತೊಲೆಗಳಿಗೆ ಒಂದೇ ರೀತಿಯ ವರ್ಣಗಾರಿಕೆ ಇರುತ್ತದೆ. ಕಡಿಮೆ ಸಂಖ್ಯೆಯಲ್ಲಿ ಕಾಣುವಂತಹ ಈ ಕಬ್ಬಿಣದ ಗಡ್ಡಿ ರಥಗಳಲ್ಲಿ ಕೆಲವು ರಥಗಳು ಮಾತ್ರ ಉತ್ತಮವಾದ ವರ್ಣವಿನ್ಯಾಸದಿಂದ ಕೂಡಿವೆ.ಅವುಗಳ ಉದಾಹರಣೆಗಳೊಂದಿಗೆ ವರ್ಣವಿನ್ಯಾಸವನ್ನು ಕುರಿತು ತಿಳಿಯುವಾ.

ಕುಷ್ಟಗಿ ತಾಲೂಕು ಬುತ್ತಿ ಬಸವೇಶ್ವರ ದೇವಸ್ಥಾನದ ರಥದ ಚಕ್ರಗಳು ಹಸಿರು ಹಾಗೂ ಬಿಳಿವರ್ಣಗಳ ಬಳಕೆಯಿಂದ ಸುಂದರಗೊಂಡಿವೆ. ಅಲ್ಲಲ್ಲಿ ಕೆಲವು ಸುರುಳಿ ನಕ್ಷೆಗಳನ್ನು ಕಡುನೀಲಿ ವರ್ಣದಿಂದ ಬರೆದಿರುವರು. ಅಚ್ಚುಗಳು ಹಾಗೂ ತೊಲೆಗಳಿಗೆ ಕಂದು ವರ್ಣವಿನ್ಯಾಸವಿದೆ.

ಪವಾರ ರಥಶಿಲ್ಪಿಗಳು ತಯಾರಿಸಿದಂತಹ ಮರೋಳ ಬಸವೇಶ್ವರ ದೇವಾಲಯದ ರಥದ ಅಡಿಪಾಯ ಭಾಗವು ಅಚ್ಚು ಹಾಗೂ ತೊಲೆಗಳಲ್ಲಿ ಕಂದು ಮಿಶ್ರಿತ ಕೆಂಪು ವರ್ಣಗಾರಿಕೆಯನ್ನು ಹೊಂದಿದ್ದು, ಇದ್ದು ಮಧ್ಯದಲ್ಲಿ ಹೂವಿನಂತಹ ವಿನ್ಯಾಸಗಳಿಗೆ ಹಳದಿ ಬಣ್ಣವನ್ನು ಬಳಸಲಾಗಿದೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ಕಲಾಲಬಂಡಿಯ ವೀರಭದ್ರ ದೇವಸ್ಥಾನದ ಕಬ್ಬಿಣದ ರಥದ ಚಕ್ರಗಳಿಗೆ ಕಂದು ವರ್ಣವನ್ನು ಬಳಿದು ಅಚ್ಚುಗಳೂ ಸೇರುವ ಚಕ್ರಗಳ ಮಧ್ಯಭಾಗದಲ್ಲಿ ಕಪ್ಪು ವರ್ಣವನ್ನು ಹಚ್ಚಲಾಗಿದೆ. ಚಕ್ರಗಳ ವ್ಯಾಸದ ಸುತ್ತಲೂ ತಿಳಿಹಳದಿ ಬಣ್ಣವನ್ನು ಲೇಪಿಸಿ, ಮಧ್ಯಭಾಗದಲ್ಲಿ ಕೆಲವು ಹೂವುಗಳಂತಹ ವಿನ್ಯಾಸಗಳನ್ನು ಕೆಂಪು ಹಾಗೂ ತಿಳಿನೀಲಿ ವರ್ಣಗಳಿಂದ ರಚಿಸಲಾಗಿದೆ. ಅಚ್ಚುಗಳು ಹಾಗೂ ತೊಲೆಗಳಿಗೆ ಕಂದು ವರ್ಣಲೇಪನ ಮಾಡಲಾಗಿದೆ.

ಜಾಲವಾದಿ ಮುರುಘೇಂದ್ರ ಸ್ವಾಮಿ ಮಠದ ರಥದ ಅಡಿಪಾಯ ಭಾಗದಲ್ಲಿ ತೊಲೆಗಳು ಹಾಗೂ ಅಚ್ಚುಗಳಿಗೆ ಹಳದಿ ಮಿಶ್ರಿತ ಕಂದು ವರ್ಣವನ್ನು ಲೇಪಿಸಲಾಗಿದೆ. ತೊಲೆಗಳ ಮೇಲೆ ಬಿಳಿಯ ಬಣ್ಣದಿಂದ ಚುಕ್ಕಿಗಳನ್ನಿಟ್ಟು ಹೂಗಳ ಆಕಾರದಲ್ಲಿ ಚಿತ್ರಿಸಿದ್ದಾರೆ. ರಥದ ಚಕ್ರಗಳಿಗೆ ಮೊದಲು ತಿಳಿಗಂದು ವರ್ಣಲೇಪನ ಮಾಡಿ ಚಕ್ರಗಳ ವ್ಯಾಸದ ಸುತ್ತಲೂ ಬಿಳಿಯ ವರ್ಣವನ್ನು ಲೇಪಿಸಲಾಗಿದೆ.

ಹೀಗೆ ಕಬ್ಬಿಣದ ಗಡ್ಡಿ ರಥಗಳ ಅಡಿಪಾಯ ಭಾಗದಲ್ಲಿ ಅಲ್ಲಲ್ಲಿ ಕೆಲವು ಪ್ರದೇಶದ ರಥಗಳಲ್ಲಿ ಮಾತ್ರ ವರ್ಣಗಾರಿಕೆ ಕಂಡುಬರುತ್ತದೆ.

ii. ಅಧಿಷ್ಠಾನ ಭಾಗದ ವರ್ಣಗಾರಿಕೆ : ಕಬ್ಬಿಣದ ಗಡ್ಡಿ ರಥಗಳಲ್ಲಿ ಕೆಲವು ಪ್ರದೇಶದ ರಥಗಳು ಉತ್ತಮವಾದ ವರ್ಣಗಾರಿಕೆಯನ್ನು ಹೊಂದಿವೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ಬುತ್ತಿ ಬಸವೇಶ್ವರ ದೇವಸ್ಥಾನದ ಅಧಿಷ್ಠಾನ ಭಾಗವು ಇಡಿಯಾಗಿ ಕೆಂಪು ವರ್ಣದಿಂದ ಕೂಡಿದೆ. ಅದರ ಮೇಲೆ ಅಲ್ಲಲ್ಲಿ ಕೆಲವು ಭಾಗಗಳ ಮೇಲೆ ಹಳದಿ ಬಣ್ಣದ ಗೆರೆಗಳನ್ನೆಳೆಯಲಾಗಿದೆ.

ಜಾಲವಾದಿ ಮುರುಘೇಂದ್ರ ಸ್ವಾಮಿ ಮಠದ ರಥದ ಅಧಿಷ್ಠಾನ ಭಾಗವು ಪೂರ್ಣವಾಗಿ ಹಳದಿ ಮಿಶ್ರಿತ ಕಂದು ವರ್ಣದಿಂದ ಕೂಡಿದ್ದು ಕೆಲವು ಹೂವು ಬಳ್ಳಿಗಳಂತಹ ವಿನ್ಯಾಸಗಳ ಪಟ್ಟಿಕೆಗಳಿಗೆ ಹಸಿರು ಹಾಗೂ ಕೆಂಪು ವರ್ಣಲೇಪನ ಮಾಡಲಾಗಿದೆ. ಅಧಿಷ್ಠಾನದ ಮೇಲ್ಭಾಗದ ಹಾಗೂ ಕೆಳಭಾಗದ ಪಟ್ಟಿಕೆಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದೆ.

ಮರೋಳ ಬಸವೇಶ್ವರ ದೇವಸ್ಥಾನದ ರಥದ ಅಧಿಷ್ಠಾನ ಭಾಗವು ಪೂರ್ಣವಾಗಿ ಕಡುಗೆಂಪು

ವರ್ಣದಿಂದ ಕೂಡಿದ್ದು ಪ್ರತಿಯೊಂದು ಬಾಹುಗಳಲ್ಲಿರುವ ಹೂವಿನಾಕೃತಿಗಳಿಗೆ ಗುಲಾಬಿ ವರ್ಣಲೇಪನ ಮಾಡಲಾಗಿದೆ. ಇದರಂತೆ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ಕಲಾಲಬಂಡಿಯ ರಥದ ಅಧಿಷ್ಠಾನ ಭಾಗ ಹಾಗೂ ಕೋಲಾರದ ಗಣಿಬಸವೇಶ್ವರ ದೇವಾಲಯದ ರಥದ ಅಧಿಷ್ಠಾನ ಭಾಗವು ಒಂದೇ ತೆರನಾದ ವರ್ಣಗಾರಿಕೆಯನ್ನು ಹೊಂದಿವೆ. ಅಧಿಷ್ಠಾನ ಭಾಗದ ಕೆಳಭಾಗದಲ್ಲಿ ನೀಲಿ ಪಟ್ಟಿಕೆಗಳನ್ನು ಹಾಗೂ ಮೇಲ್ಭಾಗದಲ್ಲಿ ತಿಳುನೀಲಿ ವರ್ಣದ ಎರಡು ಪಟ್ಟಿಗಳನ್ನು ಹೊಂದಿವೆ. ಮಧ್ಯ ಭಾಗದ ಹೂವಿನ ಕುಂಡದ ವಿನ್ಯಾಸಗಳಿಗೆ ಹಸಿರು, ಕೆಂಪು, ಹಳದಿ ಹಾಗೂ ತಿಳಿನೀಲಿ ವರ್ಣಲೇಪನ ಮಾಡಲಾಗಿದೆ.

ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಸಾನಬಾಳದ ಸಿದ್ಧೇಶ್ವರ ದೇವಸ್ಥಾನದ ಕಬ್ಬಿಣದ ಗಡ್ಡಿ ರಥವು ಗಾತ್ರದಲ್ಲಿ ಸಣ್ಣದಾದರೂ ಅಧಿಷ್ಠಾನ ಭಾಗದ ಕೆಲವು ಭಾಗಗಳಲ್ಲಿ ವರ್ಣಗಾರಿಕೆಯಿಂದ ಕೂಡಿದೆ. ಅಧಿಷ್ಠಾನದ ಮಧ್ಯಭಾಗದಲ್ಲಿ ಸುರುಳಿಯಾಕಾರದ ನಕ್ಷೆಗಳಿಗೆ ಕೇಸರಿ ಬಣ್ಣವನ್ನು ಲೇಪಿಸಲಾಗಿದೆ. ಅಧಿಷ್ಠಾನ ಭಾಗದ ಕೆಳಗಡೆಯ ಎರಡು ಹಾಗೂ ಮೇಲ್ಭಾಗದ ಎರಡು ಹೂಬಳ್ಳಿಯಾಕಾರದ ಪಟ್ಟಿಕೆಗಳಿಗೆ ಹಸಿರು ಹಾಗೂ ಕೆಂಪು ವರ್ಣಗಳನ್ನು ತುಂಬಲಾಗಿದೆ. ಉಳಿದ ಎಲ್ಲ ಅಧಿಷ್ಠಾನ ಭಾಗವನ್ನು ತಿಳುಕಂದು ವರ್ಣ ಲೇಪನ ಮಾಡಲಾಗಿದೆ.

ಕೊಪ್ಪಳ ಜಿಲ್ಲೆ ಕುಷ್ಠಗಿ ತಾಲೂಕು ತೆಂಗುಂಟಿಯ ಬಸವಣ್ಣನ ರಥದ ಅಧಿಷ್ಠಾನ ಭಾಗವು ಸಂಪೂರ್ಣವಾಗಿ ಹಳದಿ ಮಿಶ್ರಿತ ಕಂದುವರ್ಣವನ್ನು ಲೇಪಿಸಿಕೊಂಡು ಅದರ ಮೇಲೆ ಬರುವ ಸುರುಳಿಯಾಕಾರದ ವಿನ್ಯಾಸಗಳ ಪಟ್ಟಿಕೆಗಳಿಗೆ ಗುಲಾಬಿ ಬಣ್ಣವನ್ನು ಲೇಪಿಸಿರುವರು. ಅಧಿಷ್ಠಾನದ ಕೆಳಭಾಗದಲ್ಲಿ ಹಾಗೂ ಮೇಲ್ಭಾಗದಲ್ಲಿ ಕಾಣುವ ನಕ್ಷತ್ರಾಕಾರದ ವಿನ್ಯಾಸಗಳಿರುವ ಪಟ್ಟಿಕೆಗಳಿಗೆ ತಿಳಿನೀಲಿ ವರ್ಣಲೇಪನ ಮಾಡಲಾಗಿದೆ.

ಹೀಗೆ ಕೆಲವು ಕಬ್ಬಿಣದ ರಥಗಳ ಅಧಿಷ್ಠಾನ ಭಾಗದಲ್ಲಿ ವರ್ಣಗಾರಿಕೆಯನ್ನು ಕಾಣಬಹುದು.

iii. ಮಂಟಪ ಭಾಗದ ವರ್ಣವಿನ್ಯಾಸ : ಉತ್ಸವದ ಸಂದರ್ಭಗಳಲ್ಲಿ ಕಬ್ಬಿಣದ ಗಡ್ಡೆ ರಥಗಳಿಗೆ ಮಂಟಪ ಭಾಗವನ್ನು ಅನೇಕ ವರ್ಣಗಳಿಂದ ಸುಂದರಗೊಳಿಸಿರುತ್ತಾರೆ.

ಕೊಪ್ಪಳ ಜಿಲ್ಲೆ ಕುಷ್ಠಗಿ ತಾಲೂಕು ತೆಂಗುಂಟಿಯ ಬಸವೇಶ್ವರ ರಥದ ಮಂಟಪ ಭಾಗವು ತಿಳಿಗುಲಾಬಿ ವರ್ಣದಿಂದ ಕೂಡಿದ್ದು ಅದರ ಮೇಲೆ ವಿವಿಧ ವರ್ಣಗಳಿಂದ ಸುಂದರವಾದ ನಕ್ಷೆಗಳನ್ನು ಬರೆದಿರುವರು. ಅನೇಕ ಕಂಬಗಳು, ಕಮಾನುಗಳು ಹಾಗೂ ಜಾಲರಿಗಳನ್ನು ಹೊಂದಿದ ರಥದ ಎಲ್ಲ ಭಾಗಗಳಿಗೆ ಅನೇಕ ತರಹದ ವರ್ಣಲೇಪನ ಮಾಡಿರುವರು. ಕಂಬಗಳಿಗೆ ಹಾಗೂ ಕಮಾನುಗಳಿಗೆ ತಿಳಿಗುಲಾಬಿ ವರ್ಣಲೇಪನ ಮಾಡಿದ್ದು, ಕಂಬಗಳ ಕೆಳಭಾಗದ ಹಾಗೂ ಮೇಲ್ಭಾಗದ ಬಳೆಯಾಕಾರದ ವಿನ್ಯಾಸಗಳಿಗೆ ನೇರಳೆ ಹಾಗೂ ಕೆಂಪು ವರ್ಣಗಳ ದಪ್ಪ ಗೆರೆಗಳನ್ನೆಳೆಯಲಾಗಿದೆ. ಕಂಬಗಳು ಮತ್ತು ಕಮಾನುಗಳಿಗೆ ಸೇರಿಕೊಂಡ ಭಾಗದಲ್ಲಿ ಹಾಗೂ ಕಮಾನುಗಳಲ್ಲಿ ಜಾಲರಿಯಂತೆ ಜೋಡಿಸಲಾದ ಕಬ್ಬಿಣದ ಸಲಾಕೆಗಳಿಗೆ ತಿಳಿಹಸಿರು ಬಣ್ಣವನ್ನು ಲೇಪಿಸಿದ್ದಾರೆ. ಎಲ್ಲ ಕಂಬಗಳಿಗೆ ತಾಗುವಂತೆ ಸುತ್ತುವರೆದಿರುವ ಮಂಟಪ ಭಾಗದ ಕೆಳಭಾಗದ ಜಾಲರಿಗೆ ತಿಳಿನೀಲಿ ವರ್ಣಲೇಪನ ಮಾಡಲಾಗಿದೆ.

ಕುಷ್ಠಗಿಯ ಬುತ್ತಿ ಬಸವೇಶ್ವರ ದೇವಸ್ಥಾನದ ಮಂಟಪ ಭಾಗವು ತುಂಬಾ ಸುಂದರವಾಗಿದೆ.

ಮಂಟಪ ಭಾಗದ ಕಮಾನುಗಳ ಮತ್ತು ಕಂಬಗಳ ಮಧ್ಯಭಾಗದಲ್ಲಿ ಹೊಂದಿಸಲಾದ ಹೂಬಳ್ಳಿಯ ಹಾಗೂ ಸುರುಳಿ ನಕ್ಷೆಗಳಿರುವ ವಿನ್ಯಾಸದ ಕಬ್ಬಿಣದ ಪಟ್ಟಿಗಳಿಗೆ ಕೆಂಪು, ಹಸಿರು, ಕೇಸರಿ ಹಾಗೂ ಹಳದಿ ವರ್ಣಲೇಪನ ಮಾಡಲಾಗಿದೆ. ಕಂಬಗಳಂತಿರುವ ಕಬ್ಬಿಣದ ಸಲಾಕೆಗಳಿಗೆ ತಿಳಿನೇರಳೆ ವರ್ಣಗಾರಿಕೆಯನ್ನು ಕಾಣಬಹುದು. ಕಮಾನುಗಳ ಮಧ್ಯಭಾಗದ ಹೂವಿನಾಕಾರದ ವಿನ್ಯಾಸಗಳಿಗೆ ಹಳದಿ ಹಾಗೂ ಕಡು ನೀಲಿ ವರ್ಣಲೇಪನ ಮಾಡಲಾಗಿದೆ. ಮಂಟಪ ಭಾಗದ ಕಮಾನುಗಳ ಮೇಲ್ಭಾಗದಲ್ಲಿ ದೊಡ್ಡ ಎಲೆಯಾಕಾರದ ಹಾಗೂ ಕಮಲದ ಹೂವಿನಾಕಾರದ ತಗಡಿನ ವಿನ್ಯಾಸಗಳಿಗೆ ಹಸಿರು ಹಾಗೂ ಕೆಂಪು ಬಣ್ಣವನ್ನು ತುಂಬಲಾಗಿದೆ. ಅಲ್ಲಲ್ಲಿ ಕಪ್ಪು ಬಣ್ಣದ ಗೆರೆಗಳನ್ನು ಎಳೆಯಲಾಗಿದೆ. ಮಂಟಪದ ಕೆಳಗಡೆಯ ಭಾಗದ ಜಾಲರಿಯಂತಿರುವ ಭಾಗಕ್ಕೆ ಕಡುಗೆಂಪು ಹಾಗೂ ಗುಲಾಬಿ ವರ್ಣಗಳನ್ನು ಹಚ್ಚಲಾಗಿದೆ.

ಮರೋಳದ ಬಸವೇಶ್ವರ ದೇವಾಲಯದ ರಥದ ಮಂಟಪ ಭಾಗವು ಕಂಬ ಹಾಗೂ ಕಮಾನುಗಳಲ್ಲಿ ವಿವಿಧ ರೀತಿಯ ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡಿದೆ. ಮಂಟಪದ ಕೆಳಭಾಗದ ಜಾಲರಿಯಂತಿರುವ ಭಾಗದಲ್ಲಿ ಎಲೆ ಬಳ್ಳಿಯಾಕಾರದ ನಕ್ಷೆಯನ್ನು ಹೊಂದಿದ ಕಬ್ಬಿಣದ ಪಟ್ಟಿಕೆಗೆ ಹಸಿರು ಹಾಗೂ ತಿಳಿಹಳದಿ ವರ್ಣಲೇಪನ ಮಾಡಲಾಗಿದೆ. ಕಂಬಗಳಿಗೆ ಮೊದಲು ಹಳದಿ ವರ್ಣಲೇಪನ ಮಾಡಿ, ಆಮೇಲೆ ಕಂಬಗಳ ಮಧ್ಯಭಾಗದಲ್ಲಿರುವ ಬಳೆಯಾಕಾರದ ವಿನ್ಯಾಸಗಳಿಗೆ ಕೆಂಪು ಬಣ್ಣದ ಗೆರೆಗಳನ್ನು ಹಾಕಲಾಗಿದೆ. ಅನೇಕ ವರ್ಣಗಳಿಂದ ಚುಕ್ಕೆಗಳನ್ನಿಟ್ಟು ಕಂಬಗಳನ್ನು ಸುಂದರಗೊಳಿಸಲಾಗಿದೆ. ಮಂಟಪಗಳಿಗೆ ಒಳಭಾಗದ ಅಂಚುವಿನ್ಯಾಸಗಳಿಗೆ ಹಳದಿ ಹಾಗೂ ಕಪ್ಪು ವರ್ಣಗಳ ಗೆರೆಗಳನ್ನು ಹಾಕಲಾಗಿದೆ. ಮಂಟಪಗಳ ಮಧ್ಯ ಭಾಗದಲ್ಲಿ ಬರುವ ಅರಳಿದ ಹೂವುಗಳು ಹಾಗೂ ಗಿಳಿಗಳ ವಿನ್ಯಾಸಗಳಿಗೆ ಕೆಂಪು ಹಾಗೂ ಹಸಿರು ವರ್ಣಗಳನ್ನು ಬಳಸಲಾಗಿದೆ. ಮಂಟಪದ ಮೇಲ್ಭಾವಣಿಯಿಂದ ಸ್ವಲ್ಪ ಹೊರಬಂದ ಸೂರಪಟ್ಟಿಯ ತ್ರಿಕೋನಾಕಾರದ ಹಾಗೂ ಮಂಡಾಕಾರದ ವಿನ್ಯಾಸಗಳ ಸಾಲುಗಳುಳ್ಳ ಪಟ್ಟಿಕೆಗಳಿಗೆ ತಿಳಿನೀಲಿ, ಕಪ್ಪು ಹಾಗೂ ಬಿಳಿ ವರ್ಣಗಳನ್ನು ತುಂಬಿ ಸುಂದರಗೊಳಿಸಲಾಗಿದೆ. ಜಾಲವಾದಿ ಮುರುಘೇಂದ್ರ ಸ್ವಾಮಿ ಮಠದ ಕಬ್ಬಿಣದ ರಥದ ಮಂಟಪ ಭಾಗವು ಕಂಬ ಹಾಗೂ ಕಮಾನುಗಳಲ್ಲಿ ವಿವಿಧ ರೀತಿಯ ವರ್ಣಲೇಪನವನ್ನು ಹೊಂದಿದೆ. ಮಂಟಪ ಭಾಗದ ಕೆಳಭಾಗದ ಪಟ್ಟಿಕೆಗಳಿಗೆ ತಿಳಿಗುಲಾಬಿ ವರ್ಣವನ್ನು ಲೇಪಿಸಲಾಗಿದೆ. ಕಂಬಗಳಿಗೆ ನೀಲಿ ವರ್ಣವಿದ್ದು ಅಲ್ಲಲ್ಲಿ ಕಡು ನೀಲಿ ವರ್ಣಗಳಿಂದ ಚುಕ್ಕೆಗಳನ್ನಿಡಲಾಗಿದೆ. ಕಮಾನುಗಳ ಅಂಚುಗಳಿಗೆ ಬಂಗಾರವರ್ಣದ ಗೆರೆಗಳನ್ನು ದಪ್ಪವಾಗಿ ಎಳೆಯಲಾಗಿದೆ. ಮಂಟಪಗಳ, ಕಂಬಗಳಿಂದ ಕಮಾನುಗಳಿಗೆ ಸೇರುವ ಭಾಗದಲ್ಲಿಯ ಸುರುಳಿಯಾಕಾರದ ಹಾಗೂ ವೃತ್ತಾಕಾರದ ವಿನ್ಯಾಸದಲ್ಲಿ ರಚಿಸಲಾದ ಕಬ್ಬಿಣದ ಸಲಾಕೆಗಳಿಗೆ ನೇರಳೆ ಹಾಗೂ ಕಪ್ಪು ವರ್ಣಗಳನ್ನು ಬಳಸಲಾಗಿದೆ. ಮಂಟಪ ಭಾಗದ ಮೇಲ್ಭಾವಣಿಯ ಭಾಗದಲ್ಲಿ ಸೂರಪಟ್ಟಿಯು ಎಲೆಗಳಾಕಾರದಲ್ಲಿ ಕಾಣಿಸುವ ಭಾಗಕ್ಕೆ ಹಸಿರು ಹಾಗೂ ಹಳದಿ ವರ್ಣಗಾರಿಕೆಯನ್ನು ಮಾಡಲಾಗಿದೆ.

ರಾಯಚೂರು ಜಿಲ್ಲೆ ಲಿಂಗಸೂರ ತಾಲೂಕಿನ ಸಾನಬಾಳದ ಸಿದ್ದೇಶ್ವರ ದೇವಸ್ಥಾನದ ರಥದ ಮಂಟಪ ಭಾಗದ ಕಂಬಗಳಿಗೆ ಹಳದಿ ಮಿಶ್ರಿತ ತಿಳಿ ಹಸಿರು ವರ್ಣಲೇಪನ ಮಾಡಲಾಗಿದೆ. ಕಂಬಗಳ ಮಧ್ಯಭಾಗದಲ್ಲಿ ಬಳ್ಳಿಗಳು ಹಾಗೂ ಅರಳಿದ ಹೂವಿನಾಕಾರದ ಕಬ್ಬಿಣದ ಪಟ್ಟಿಗಳ ವಿನ್ಯಾಸಗಳಿಗೆ

ಹಸಿರು, ಕಂದು ಹಾಗೂ ಕೆಂಪು ವರ್ಣಗಳನ್ನು ತುಂಬಿ ಕಪ್ಪು ವರ್ಣದ ಗೆರೆಗಳನ್ನೆಳೆಯಲಾಗಿದೆ. ಮಂಟಪ ಭಾಗದ ಕೆಳಭಾಗದ ಜಾಲರಿಯಂತಿರುವ ಭಾಗದಲ್ಲಿನವಿಲುಗಳು ಹಾಗೂ ಗಿಳಿಗಳ ಆಕಾರದ ತಗಡುಗಳ ವಿನ್ಯಾಸಗಳನ್ನು ನೀಲಿ, ಕೆಂಪು, ಹಸಿರು, ಹಳದಿ ಹಾಗೂ ಕಪ್ಪು ವರ್ಣಗಳಿಂದ ಸುಂದರಗೊಳಿಸಲಾಗಿದೆ. ಕಮಾನುಗಳಿಗೆ ಹಳದಿ ವರ್ಣಲೇಪನ ಮಾಡಿ ಕೆಲವು ಹೂವಿನಂತಹ ವಿನ್ಯಾಸಗಳಿಗೆ ಹಾಗೂ ತುಂಬುನಕ್ಷೆಗಳಿಗೆ ಕಂದು ಬಣ್ಣದಿಂದ ಗೆರೆಗಳನ್ನು ಎಳೆದು ಕಪ್ಪು ಬಣ್ಣದ ಚುಕ್ಕೆಗಳನ್ನಿಡಲಾಗಿದೆ.

iv. ಗೋಪುರ ಭಾಗದ ವರ್ಣವಿನ್ಯಾಸ : ಜಾಲವಾದಿಯ ಮುರುಘೇಂದ್ರ ಸ್ವಾಮಿ ರಥ, ಮರ್ಲೋಳದ ಬಸವೇಶ್ವರ ರಥ, ಕೋಲಾರದ ಗಣಿ ಬಸವೇಶ್ವರ ರಥ, ಕುಷ್ಟಗಿಯ ಬುತ್ತಿ ಬಸವೇಶ್ವರ ರಥ, ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕು ತೆಂಗುಂಟಿಯ ಬಸವೇಶ್ವರ ರಥ ಹಾಗೂ ರಾಯಚೂರು ಜಿಲ್ಲೆಯ ಸಾನಬಾಳದ ಸಿದ್ಧೇಶ್ವರ ದೇವಸ್ಥಾನದ ರಥ ಈ ಎಲ್ಲ ರಥಗಳ ಗೋಪುರ ಭಾಗಗಳು ಉತ್ಸವದ ಸಂದರ್ಭದಲ್ಲಿ ಆಕರ್ಷಕವಾಗಿರುತ್ತವೆ.

ಮುರುಘೇಂದ್ರಸ್ವಾಮಿ ರಥದ ಗೋಪುರ ಭಾಗಕ್ಕೆ ಶಿಖರ ಭಾಗದವರೆಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಸುತ್ತುವರು. ಮಂಟಪದ ಮೇಲ್ಭಾಗದ ಗೋಪುರ ಪ್ರಾರಂಭಗೊಳ್ಳುವ ಮೊದಲ ಹಂತದಲ್ಲಿ ಕೇಸರಿ ಬಣ್ಣದ ಬಟ್ಟೆಯನ್ನು ಸುತ್ತುವರು. ಅದರ ನಂತರ ಕೆಂಪು, ನೀಲಿ ಹಾಗೂ ಹಳದಿ ವರ್ಣದ ಬಟ್ಟೆಗಳನ್ನು ಸುತ್ತಿ, ಶಿಖರ ಭಾಗದಲ್ಲಿರುವ ದುಂಡನೆಯ ಆಕಾರದ ಕಬ್ಬಿಣದ ಗೋಲಕ್ಕೆ ಕೆಂಪು ವರ್ಣದ ಬಟ್ಟೆಯನ್ನು ಸುತ್ತಿರುವರು. ಶಿಖರ ಭಾಗದಲ್ಲಿ ಒಂದೆರಡು ಬಣ್ಣದ ಧ್ವಜಗಳನ್ನು ಕಟ್ಟಿ ಕಳಶದ ಮೇಲೆ ಬಣ್ಣದ ಛತ್ರಿಯನ್ನಿಡುವರು.

ಮರ್ಲೋಳದ ಬಸವೇಶ್ವರ ರಥದ ಗೋಪುರ ಭಾಗವು ಶಿಖರ ಭಾಗದವರೆಗೆ ಬಣ್ಣ ಬಣ್ಣದ ಬಟ್ಟೆಗಳನ್ನು ಸುತ್ತಿಕೊಂಡಿರುವುದಲ್ಲದೆ, ಸುಂದರವಾದ ವರ್ಣಗಳ ಅನೇಕ ಪತಾಕೆಗಳನ್ನೂ ಹೊಂದಿರುತ್ತದೆ. ಶಿಖರ ಭಾಗದ ಮೇಲೆ ಕಬ್ಬಿಣದ ಪಟ್ಟಿಗಳಿಂದ ತಯಾರಿಸಿದ ಗ್ತೋಲಾಕೃತಿಗೆ ಕೇಸರಿ ವರ್ಣದ ಹಾಗೂ ಕೆಂಪು ವರ್ಣದ ಬಟ್ಟೆಗಳನ್ನು ಸುತ್ತಲಾಗುವುದು. ಗೋಪುರ ಭಾಗದಿಂದ ಶಿಖರ ಭಾಗದವರೆಗೆ ಅನೇಕ ಬಣ್ಣ ಬಣ್ಣದ ಧ್ವಜಗಳನ್ನು ಕಟ್ಟಲಾಗುವುದು. ಅಲ್ಲದೆ ಶಿಖರ ಭಾಗದಲ್ಲಿ ಬಣ್ಣ ಬಣ್ಣದ ಎರಡು ಛತ್ರಿಗಳನ್ನಿಡಲಾಗುವುದು.

ಕುಷ್ಟಗಿಯ ಬುತ್ತಿ ಬಸವೇಶ್ವರ ರಥದ ಗೋಪುರ ಭಾಗಕ್ಕೆ ಹಳದಿ ಹಾಗೂ ನೀಲಿ ಬಣ್ಣದ ಧ್ವಜ ಹಾಗೂ ಅನೇಕ ಪತಾಕೆಗಳನ್ನು ಸಾಲುಸಾಲಾಗಿ ಜೋಡಿಸುವುದಲ್ಲದೆ, ಕೆಂಪು ಬಣ್ಣದ ಬಟ್ಟೆಯ ಉದ್ದವಾದ ಪಟ್ಟಿಯನ್ನು ಸೂರಪಟ್ಟಿಯ ಸುತ್ತಲೂ ಕಟ್ಟಿರುವರು. ಅನೇಕ ಬಣ್ಣಗಳ ಹೂವಿನ ಹಾರಗಳನ್ನು ಶಿಖರ ಭಾಗದಲ್ಲಿ ನೇತುಬಿಡುವರು. ಶಿಖರ ಬಾಗಕ್ಕೆ ಕೇಸರಿ ವರ್ಣದ ಬಟ್ಟೆಯನ್ನು ಸುತ್ತುವರು. ಇದಲ್ಲದೆ ಕೆಲವು ಧ್ವಜಗಳನ್ನು ಕಟ್ಟುವರು.

ಹೀಗೆಯೇ ಎಲ್ಲ ರಥಗಳಿಗೆ ಗೋಪುರ ಭಾಗದಲ್ಲಿ ಅನೇಕ ಬಣ್ಣದ ಬಟ್ಟೆಗಳನ್ನು ಧ್ವಜ ಪತಾಕೆಗಳನ್ನು ಬಣ್ಣದ ಛತ್ರಿಗಳನ್ನು ಅಳವಡಿಸಿ ಸುಂದರಗೊಳಿಸುವುದಲ್ಲದೆ ಅನೇಕ ಹೂವಿನ ಹಾರಗಳನ್ನು ನೇತುಹಾಕಿ, ಗೋಪುರವು ವಿವಿಧ ವರ್ಣಗಳಿಂದ ಅಲಂಕಾರಗೊಂಡು

ಆಕರ್ಷಕವಾಗುವಂತೆ ಮಾಡುವರು.

ಉತ್ಸವದ ಸಂದರ್ಭದಲ್ಲಿ ಬಾಳೆಗಿಡಗಳು, ಕಬ್ಬುಗಳು, ವಿವಿಧ ರೀತಿಯ ತಳಿರು ತೋರಣಗಳು, ವಿವಿಧ ಬಣ್ಣದ ಫಲ ಪುಷ್ಪಗಳು, ಕಬ್ಬಿಣದ ರಥಗಳ ಅಧಿಷ್ಠಾನ ಭಾಗದಿಂದ ಗೋಪುರ ಭಾಗದವರೆಗೂ ಅಳವಡಿಕೆಯಾಗುವುದರಿಂದ ಇಡೀ ರಥಗಳು ಅನೇಕ ವರ್ಣಗಳನ್ನು ಮೈಗೂಡಿಸಿಕೊಂಡು ದೂರದಿಂದ ಸುಂದರವಾಗಿ ಕಂಗೊಳಿಸುವವು.

೨. ಕಬ್ಬಿಣದ ಅಂಕಣ ರಥಗಳ ವರ್ಣವಿನ್ಯಾಸ :

ಕಬ್ಬಿಣದ ಅಂಕಣ ರಥಗಳು ಗುಲಬುರ್ಗಾ ಜಿಲ್ಲೆಯಲ್ಲಿ ಬಹು ಸಂಖ್ಯೆಯಲ್ಲಿ ಕಾಣಸಿಗುತ್ತವೆ. ಬೆಳಗಾವಿ, ಬೀದರ್ ಹಾಗೂ ರಾಯಚೂರು ಜಿಲ್ಲೆಗಳ ಕೆಲವು ಪ್ರದೇಶಗಳಲ್ಲಿ ಮಾತ್ರ ಕಬ್ಬಿಣದ ಅಂಕಣ ರಥಗಳನ್ನು ಕಾಣಬಹುದು. ಕಬ್ಬಿಣದ ಅಂಕಣ ರಥಗಳು ಅತೀ ಸುಂದರವಾದ ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡಿವೆ. ಈ ರಥಗಳನ್ನು ಮುಖ್ಯವಾಗಿ ಎರಡು ಭಾಗಗಳನ್ನಾಗಿ ವಿಭಾಗಿಸಬಹುದು.

i. ಅಡಿಪಾಯ ಭಾಗ

ii. ಅಧಿಷ್ಠಾನದಿಂದ ಶಿಖರದವರೆಗಿನ ಭಾಗ ಈ ಎರಡೂ ಭಾಗಗಳಲ್ಲಿಯ ವರ್ಣಗಾರಿಕೆ ಕುರಿತು ತಿಳಿದು ಕೊಳ್ಳುವಾ.

i. ಅಡಿಪಾಯ ಭಾಗದ ವರ್ಣಗಾರಿಕೆ : ಗುಲಬುರ್ಗಾ ಜಿಲ್ಲೆ ಚಿತಾಪೂರ ತಾಲೂಕಿನ ಕೋರವಾರದ ಕೋರಿ ಸಿದ್ಧೇಶ್ವರ ದೇವಸ್ಥಾನದ ರಥದ ಚಕ್ರಗಳು ಹಾಗೂ ಅಚ್ಚುಗಳು ಸುಂದರವಾದ ವರ್ಣಗಾರಿಕೆಯಿಂದ ಕೂಡಿವೆ. ಚಕ್ರಗಳು ಮೇಲೆ ವರ್ತುಳಾಕಾರದಲ್ಲಿ ಕೆತ್ತಿದ ನಾಲ್ಕು ವಿನ್ಯಾಸಗಳಿಗೆ ವಿವಿಧ ಬಣ್ಣಗಳ ಲೇಪನ ಮಾಡಲಾಗಿದೆ. ಚಕ್ರಗಳ ಮಧ್ಯಭಾಗದಿಂದ ವ್ಯಾಸದವರೆಗೆ ಇರುವ ವಿನ್ಯಾಸಗಳಿಗೆ ಕ್ರಮವಾಗಿ ಕೆಂಪು, ಕೇಸರಿ, ಹಳದಿ ಹಾಗೂ ಹಸಿರು ವರ್ಣಗಳನ್ನು ತುಂಬಲಾಗಿದೆ. ಅಲ್ಲಲ್ಲಿ ಕೆಲವು ಹೂವಿನ ಎಸಳುಗಳಂತೆ ಕಾಣುವ ಬಣ್ಣದ ರೇಖಾ ಚಿತ್ರಗಳನ್ನು ರಚಿಸಿರುವರು. ಅಚ್ಚುಗಳು ಹಾಗೂ ಆಧಾರ ಪಟ್ಟಿಗಳಿಗೆ ಕೆಂಪು ಹಾಗೂ ಹಳದಿ ವರ್ಣಲೇಪನ ಮಾಡಲಾಗಿದೆ.

ಇದೇ ಜಿಲ್ಲೆಯ ಜೇವರಗಿ ತಾಲೂಕಿನ ಡಿಗ್ಗಿ ಸಂಗಮೇಶ್ವರ ದೇವಾಲಯದ ಅಡಿಪಾಯ ಭಾಗವು ವರ್ಣಗಾರಿಕೆಯಿಂದ ಸುಂದರಗೊಂಡಿದೆ. ಶಿಲೆಯ ಚಕ್ರಗಳ ಎರಡೂ ಮೈಗಳಿಗೆ ಬೇರೆ ಬೇರೆ ರೀತಿಯ ವರ್ಣಲೇಪನ ಮಾಡಲಾಗಿದೆ. ಚಕ್ರಗಳ ಮಧ್ಯಭಾಗದಲ್ಲಿ ಕಾಣುವ ಅಚ್ಚಿನ ಭಾಗಗಳಿಗೆ ಕೆಂಪು ವರ್ಣವನ್ನು ಹಚ್ಚಿರುವರು. ಚಕ್ರಗಳ ಹೊರಮೈಗೆ ನೀಲಿ ವರ್ಣಲೇಪನ ಮಾಡಿದ್ದು ಒಳಮೈಗೆ ಕೆಂಪು ವರ್ಣಲೇಪನ ಮಾಡಲಾಗಿದೆ. ಎಲೆಯಾಕಾರದ ವಿನ್ಯಾಸಗಳಿರುವ ಚಕ್ರಗಳ ಮಧ್ಯಭಾಗದಲ್ಲಿ ಹಸಿರು ಹಾಗೂ ನೀಲಿ ವರ್ಣಗಳಿಂದ ಬಳೆಯಾಕಾರದ ವಿನ್ಯಾಸಗಳನ್ನು ಚಿತ್ರಿಸಿರುವರು. ಆಧಾರ ಪಟ್ಟಿಗಳಿಗೆ ಹಳದಿ ವರ್ಣಗಳನ್ನು ಲೇಪಿಸಿರುವರು.

ಸುರಪುರ ತಾಲೂಕಿನ ದೇವರ ಗೋನಾಲದ ಬಸವೇಶ್ವರ ದೇವಾಲಯದ ರಥದ ಚಕ್ರಗಳು ತುಂಬಾ ಸುಂದರವಾದ ವರ್ಣವಿನ್ಯಾಸವನ್ನು ಹೊಂದಿವೆ. ಶಿಲೆಯ ಚಕ್ರಗಳ ವ್ಯಾಸದ ಹತ್ತಿರ

ವೃತ್ತಾಕಾರದ ತಿಳಿನೀಲಿ ವರ್ಣಲೇಪನ ಮಾಡಲಾಗಿದೆ. ಮಧ್ಯಭಾಗದಲ್ಲಿ ಕೆತ್ತನೆ ಮಾಡಲಾದ ವರ್ತುಳಾಕಾರ ಹಾಗೂ ತ್ರಿಕೋನಾಕಾರದ ಶಿಲ್ಪ ವಿನ್ಯಾಸಗಳಿಗೆ ಹಳದಿ ಹಾಗೂ ಕೇಸರಿ ವರ್ಣಗಳನ್ನು ತುಂಬಲಾಗಿದೆ. ಚಕ್ರಗಳು ಅಚ್ಚುಗಳಿಗೆ ಸೇರಿರುವ ಭಾಗದ ಹತ್ತಿರವಿರುವ ಮೂರು ಬಳೆಯಾಕಾರದ ವಿನ್ಯಾಸಗಳಿಗೆ ಕಡುಹಸಿರು, ಗುಲಾಬಿ ಹಾಗೂ ಸಿಲ್ವರ್ ಬಣ್ಣಗಳನ್ನು ಹಚ್ಚಲಾಗಿದೆ. ಅಚ್ಚುಗಳಿಗೆ ಹಾಗೂ ಆಧಾರ ಪಟ್ಟಿಗಳಿಗೆ ಕೇಸರಿ ವರ್ಣಲೇಪನ ಮಾಡಲಾಗಿದೆ. ಅಚ್ಚುಗಳ ಮುಂಭಾಗದಲ್ಲಿ ಬಿಳಿ ವರ್ಣದ ಸುರುಳಿ ನಕ್ಷೆಗಳನ್ನು ಚಿತ್ರಿಸಲಾಗಿದೆ.

ಯಾದಗಿರಿ ತಾಲೂಕು ಹೆಡಗಿಮದ್ರಾದ ವೀರಭದ್ರ ದೇವಸ್ಥಾನದ ರಥದ ಚಕ್ರಗಳು ಸುಂದರವಾದ ಚಿತ್ರ ವಿನ್ಯಾಸಗಳಿಂದಕೂಡಿವೆ. ಚಕ್ರಗಳ ಮಧ್ಯಭಾಗದಲ್ಲಿ ಹೂವಿನ ಆಕೃತಿಗಳನ್ನು ರಚಿಸಿರುವ ಭಾಗದಲ್ಲಿ ಬೇರೆ ಬೇರೆ ವರ್ಣಲೇಪನವನ್ನು ಕಾಣಬಹುದು. ಚಕ್ರಗಳ ಮಧ್ಯಭಾಗದಲ್ಲಿ ಹೊರಚಾಚಿದ ಅಚ್ಚುಗಳ ಭಾಗಕ್ಕೆ ಸಿಲ್ವರ್ ವರ್ಣ, ಅದರ ಸುತ್ತಲೂ ಇರುವ ಹೂವಿನಾಕಾರದ ವಿನ್ಯಾಸಕ್ಕೆ ನೀಲಿ, ಕೆಂಪು, ಹಸಿರು, ಬಿಳಿ ಹಾಗೂ ಕಪ್ಪು ವರ್ಣಗಳನ್ನು ತುಂಬಲಾಗಿದೆ. ಈ ಹೂವಿನಂತಹ ವಿನ್ಯಾಸದ ಪಕ್ಕದಲ್ಲಿ ಗುಲಾಬಿ ಬಣ್ಣದ ವೃತ್ತಾಕಾರವನ್ನು ರಚಿಸಿ ,ಚಕ್ರಗಳ ವ್ಯಾಸದ ಹತ್ತಿರ ನೀಲಿ ಹಾಗೂ ಕೆಂಪು ವರ್ಣಗಳಿಂದ ವೃತ್ತಾಕಾರದ ವಿನ್ಯಾಸಗಳನ್ನು ರಚಿಸಿರುವರು. ಅಚ್ಚುಗಳು ಹಾಗೂ ಆಧಾರ ಪಟ್ಟಿಗಳಿಗೆ ಸಿಲ್ವರ್ ಬಣ್ಣವನ್ನು ಲೇಪಿಸಿರುವರು.

ಗುಲಬುರ್ಗಾ ಜಿಲ್ಲೆ ಯಾದಗಿರಿ ತಾಲೂಕು ನಾಗಲಾಪುರದ ಶ್ರೀ ಮೈಲಾರಲಿಂಗೇಶ್ವರ ದೇವಸ್ಥಾನದ ರಥದ ಚಕ್ರಗಳಿಗೆ ಸುಂದರವಾದ ವರ್ಣಗಾರಿಕೆ ಇದೆ. ಚಕ್ರಗಳ ಮಧ್ಯಭಾಗದಲ್ಲಿ ಹೂವಿನಾಕಾರದಲ್ಲಿ ರಚಿಸಿದ ಉಬ್ಬುಶಿಲ್ಪವಿನ್ಯಾಸಗಳಿಗೆ ನೀಲಿ, ಕೆಂಪು, ಹಸಿರು ಹಾಗೂ ಹಳದಿ ವರ್ಣಲೇಪನ ಮಾಡಿರುವರು. ಈ ವಿನ್ಯಾಸಗಳ ಪಕ್ಕದಲ್ಲಿ ಚಕ್ರಗಳ ವ್ಯಾಸಕ್ಕೆ ಸಮೀಪವಾಗುವಂತೆ ರಚಿಸಿರುವ ಬಳೆಯಾಕಾರದ ಉಬ್ಬುಶಿಲ್ಪಗಳಿಗೆ ಹಳದಿ ವರ್ಣವನ್ನು ಲೇಪಿಸಲಾಗಿದೆ. ಚಕ್ರಗಳ ಉಳಿದ ಎಲ್ಲ ಭಾಗಗಳು ಬಿಳಿ ವರ್ಣಗಾರಿಕೆಯನ್ನು ಹೊಂದಿದೆ. ವಿಶೇಷವೆಂದರೆ ಈ ರಥದ ಚಕ್ರಗಳಲ್ಲಿಯೂ ಕೂಡ ಜೇವರಗಿ ತಾಲೂಕಿನ ಡಿಗ್ಗಿ ಸಂಗಮೇಶ್ವರ ದೇವಸ್ಥಾನದ ರಥದ ಚಕ್ರಗಳಂತೆ ಎರಡೂ ಮೈಗಳಲ್ಲಿ ವರ್ಣವಿನ್ಯಾಸವು ಕಂಡುಬರುತ್ತದೆ. ಇದಲ್ಲದೆ ಅಚ್ಚುಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದ್ದು, ಆಧಾರ ಪಟ್ಟಿಗಳಿಗೆಲ್ಲ ಹಳದಿ, ಹಸಿರು, ಕೆಂಪು ಹಾಗೂ ನೀಲಿ ವರ್ಣಗಳನ್ನು ಬಳಸಿರುವರು.

ಚೌಕಾಕಾರದ ಕಬ್ಬಿಣದ ತೊಲೆಗಳಿಗೆ ಹಳದಿ ವರ್ಣಲೇಪನ ಮಾಡಿದ್ದು, ಅವುಗಳ ಮೇಲೆ ಅರಳಿದ ಹೂವುಗಳು ಹಾಗೂ ಎಲೆಗಳ ಚಿತ್ರವಿನ್ಯಾಸಗಳಿರುವವು. ಅವುಗಳಿಗೆ ಹಸಿರು ಹಾಗೂ ಗುಲಾಬಿ ವರ್ಣಗಳನ್ನು ತುಂಬಲಾಗಿದೆ. ಗುಲಬುರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಮದ್ದರಕಿ ಬಸವೇಶ್ವರ ದೇವಸ್ಥಾನದ ರಥದ ಚಕ್ರಗಳಿಗೆ ಹಳದಿ, ಹಸಿರು, ನೀಲಿ ಹಾಗೂ ನೇರಳೆ ವರ್ಣಗಳಿಂದ ವೃತ್ತಾಕಾರದ ಪಟ್ಟಿಗಳನ್ನು ರಚಿಸಿರುವರು. ಅಡಿಪಾಯ ಭಾಗದ ಅಚ್ಚು ಹಾಗೂ ಆಧಾರಪಟ್ಟಿಗಳಿಗೆ ನೇರಳೆ ವರ್ಣವನ್ನು ಹಚ್ಚಲಾಗಿದೆ. ಇದೇ ರೀತಿಯ ವರ್ಣಗಾರಿಕೆಯನ್ನು ರಾಯಚೂರು ಜಿಲ್ಲೆಯ ದೇವಸೂಗೂರಬ ಸೂಗೂರೇಶ್ವರ ದೇವಸ್ಥಾನದ ರಥದಲ್ಲಿ ಕಾಣಬಹುದು.

ಗುಲಬುರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕಿನ ಸುಲೇಪೇಟದ ವೀರಭದ್ರ ದೇವಸ್ಥಾನದ

ರಥದ ಚಕ್ರಗಳಿಗೆ, ಮೊದಲು ಸಂಪೂರ್ಣವಾಗಿ ಬಿಳಿಯ ಬಣ್ಣವನ್ನು ಬಳಿದಿದ್ದು ನಂತರ ಚಕ್ರಗಳ ಮಧ್ಯಭಾಗದಲ್ಲಿ ಮಾತ್ರ ಕೇಸರಿ ಬಣ್ಣದ ವೃತ್ತಾಕಾರದ ವಿನ್ಯಾಸವನ್ನು ರಚಿಸಿರುವರು. ಇದರಂತೆಯೇ ಸೇಡಂ ತಾಲೂಕಿನ ಗಾಜರಕೋಟದ ವೀರಭದ್ರ ದೇವಸ್ಥಾನದ ರಥದ ಚಕ್ರಗಳಿಗೂ ಕೂಡ ನೀಲಿ ಹಾಗೂ ಹಳದಿ ಮಿಶ್ರಿತ ಹಸಿರು ವರ್ಣವನ್ನು ಲೇಪಿಸಿರುವುದು ಕಂಡುಬರುತ್ತದೆ.


ಗುಲಬುರ್ಗಾ ಜಿಲ್ಲೆ ಶಹಾಪೂರ ತಾಲೂಕಿನ ರಸ್ತಾಪೂರದ ಶರಭಲಿಂಗೇಶ್ವರ ದೇವಸ್ಥಾನದ ರಥವು ಸುಂದರವಾದ ವರ್ಣಗಾರಿಕೆಯುಳ್ಳ ಆರು ಚಕ್ರಗಳನ್ನು ಹೊಂದಿದೆ. ಚಕ್ರಗಳ ಮಧ್ಯಭಾಗದಲ್ಲಿ ಹಳದಿ ವರ್ಣದ ವೃತ್ತಾಕಾರವನ್ನು ರಚಿಸಿ, ಅದರ ಸುತ್ತಲೂ ಬಳೆಗಳಂತಿರುವ ಎರಡು ವಿನ್ಯಾಸಗಳಿಗೆ ಕಂದು ಹಾಗೂ ಬಿಳಿಯ ವರ್ಣಲೇಪನ ಮಾಡಲಾಗಿದೆ. ಈ ವಿನ್ಯಾಸಗಳ ಸುತ್ತಲೂ ಹೂವಿನ ದಳಗಳಾಕಾರದ ಉಬ್ಬುಶಿಲ್ಪ ಕೆತ್ತನೆಗೆ ಬಿಳಿ ಮಿಶ್ರಿತ ಹಸಿರು ವರ್ಣವನ್ನು ತುಂಬಿರುವರು. ಇದರ ನಂತರದ ಕೆಂಪು ಹಾಗೂ ಕಂದು ಬಣ್ಣದ, ಬಳೆಯಾಕಾರದ ವಿನ್ಯಾಸಗಳ ಸುತ್ತಲೂ ಇರುವ ತ್ರಿಕೋನಾಕಾರದ ಹೂವಿನ ದಳಗಳಂತಹ ವಿನ್ಯಾಸಗಳಿಗೆ ನೀಲಿ ಹಾಗೂ ಬಿಳಿ ಬಣ್ಣಗಳನ್ನು ತುಂಬಲಾಗಿದೆ. ಚಕ್ರಗಳ ವ್ಯಾಸದ ಹತ್ತಿರವಿರುವ ವೃತ್ತಾಕಾರದ ಉಬ್ಬುಶಿಲ್ಪಕೆತ್ತನೆಗೆ ಹಳದಿ ಬಣ್ಣದ ಲೇಪನವಿದೆ. ದೂರದಿಂದ ಚಕ್ರಗಳನ್ನು ನೋಡಿದರೆ ಅವುಗಳ ವರ್ಣಗಾರಿಕೆಯು ಮನಸೆಳೆಯುತ್ತದೆ.

ಗುಲಬುರ್ಗಾ ಜಿಲ್ಲೆಯ ಆಳಂದ ತಾಲೂಕಿನ ಜಿಡಗಾದ ಯಲ್ಲಾಲಿಂಗೇಶ್ವರ ಮಠದ ರಥದ ಚಕ್ರಗಳ ವರ್ಣಗಾರಿಕೆ ಬಹಳ ಆಕರ್ಷಕವಾಗಿದೆ. ಶಿಲೆಯ ಚಕ್ರಗಳಲ್ಲಿ ಅರಳಿದ ಹೂವಿನಂತೆ ಕಾಣುವ ಸುಂದರವಾದ ಉಬ್ಬು ಶಿಲ್ಪಕೆತ್ತನೆಗೆ ವಿವಿಧ ವರ್ಣಗಳನ್ನು ಲೇಪಿಸಿ, ಸುಂದರಗೊಳಿಸಲಾಗಿದೆ. ಚಕ್ರಗಳ ವ್ಯಾಸದ ಹತ್ತಿರವಿರುವ ಭಾಗದಲ್ಲಿ ಹಳದಿ ಬಣ್ಣದ ವೃತ್ತಾಕಾರದ ಪಟ್ಟಿಯನ್ನೆಳೆಯಲಾಗಿದೆ. ಇದರ ಜೊತೆಯಲ್ಲಿಯೇ ಸುರುಳಿ ನಕ್ಷೆಗಳ ಉಬ್ಬುಶಿಲ್ಪ ಕೆತ್ತನೆಗೆ ಹಸಿರು ಬಣ್ಣ ಬಳಿಯಲಾಗಿದೆ. ಚಕ್ರಗಳ, ಅರಳಿದ ಹೂವಿನಾಕಾರದಲ್ಲಿ ರಚಿತವಾದ ಉಬ್ಬುಶಿಲ್ಪ ವಿನ್ಯಾಸಗಳು, ಹೂವಿನ ಎಸಳುಗಳಂತ ವಿನ್ಯಾಸಗಳಿಗೆ ಗುಲಾಬಿ ಹಾಗೂ ಬಿಳಿ ಮಿಶ್ರಿತ ಗುಲಾಬಿ ವರ್ಣಗಳನ್ನು ತುಂಬಿರುವರು. ಪ್ರತಿಯೊಂದು ಎಸಳುಗಳ ಮಧ್ಯಭಾಗದಲ್ಲಿ ಕಾಣುವ ಸಣ್ಣ ಎಸಳುಗಳಂತ ವಿನ್ಯಾಸಗಳಿಗೆ ಕಡುನೀಲಿ ವರ್ಣಲೇಪನ ಮಾಡಲಾಗಿದೆ. ಹೂವಿನ ವಿನ್ಯಾಸದ ಮಧ್ಯಭಾಗದಲ್ಲಿ ಎರಡು ಹಂತಗಳಲ್ಲಿಯ ಬಳೆಯಾಕಾರದ ವಿನ್ಯಾಸಗಳಿಗೆ ಹಳದಿ, ಕೇಸರಿ, ಕಡುನೀಲಿ ಹಾಗೂ ಹಸಿರು ಬಣ್ಣಗಳನ್ನು ತುಂಬಲಾಗಿದೆ. ಚಕ್ರಗಳ ಎರಡೂ ಮೈಗಳಲ್ಲಿ ಒಂದೇ ರೀತಿಯ ವರ್ಣವಿನ್ಯಾಸವಿದೆ. ಅಚ್ಚುಗಳು ಹಾಗೂ ಆಧಾರ ತೊಲೆಗಳಿಗೆ ಕೇಸರಿ ವರ್ಣವನ್ನು ಲೇಪಿಸಲಾಗಿದೆ. ಆಧಾರತೊಲೆಗಳ ಮೇಲ್ಭಾಗದಲ್ಲಿ ಕಾಣುವ ತಗಡಿನ ಪಟ್ಟಿಕೆಗಳಿಗೆ ನೀಲಿ ವರ್ಣಲೇಪಿಸಿ, ಅವುಗಳ ಮೇಲೆ ಶಿವಲಿಂಗ ಹಾಗೂ ಕುಳಿತಿರುವ ನಂದಿಯ ಚಿತ್ರರಚನೆ ಮಾಡಲಾಗಿದೆ. ಶಿವಲಿಂಗಕ್ಕೆ ಕಪ್ಪು ವರ್ಣ ಹಾಗೂ ನಂದಿಗಳಿಗೆ ಬಿಳಿ ಹಾಗೂ ಕೇಸರಿ ವರ್ಣಗಳನ್ನು ಬಳಸಲಾಗಿದೆ. ಅಡಿಪಾಯದ ಮೇಲ್ಭಾಗದ ತಗಡಿನ ಪಟ್ಟಿಕೆಗಳಲ್ಲಿ ಕಾಣುವಂತಹ ಹೂವಿನಾಕಾರದ ವಿನ್ಯಾಸಗಳಿಗೆ ಹಸಿರು ಮಿಶ್ರಿತ ತಿಳಿ ನೀಲಿ ವರ್ಣಲೇಪನ ಮಾಡಲಾಗಿದೆ.

ಬೆಳಗಾವಿ ಜಿಲ್ಲೆ ಗೋಕಾಕ ತಾಲೂಕಿನ ಗುಡಗೇರಿಯ ರಥದ ಚಕ್ರಗಳು ನಕ್ಷತ್ರಾಕಾರದ ವಿನ್ಯಾಸವುಳ್ಳ ವರ್ಣಗಾರಿಕೆಯನ್ನು ಹೊಂದಿವೆ. ಮೊದಲು ಎಲ್ಲ ಚಕ್ರಗಳ ಹೊರಮೈಗೆ ತಿಳಿಗುಲಾಬಿ ಬಣ್ಣವನ್ನು ಬಳಿದು ಚಕ್ರಗಳ ಮಧ್ಯಭಾಗದಲ್ಲಿ ಕಾಣುವ ಬಳೆಯಾಕಾರದ ಉಬ್ಬುಶಿಲ್ಪ ವಿನ್ಯಾಸಕ್ಕೆ ನೇರಳೆ



ಶ್ರೀ ಶರಭಲಿಂಗೇಶ್ವರ ರಥದ ಚಕ್ರಗಳು ರಸ್ತಾಪುರ, ಜಿ - ಗುಲಬರ್ಗಾ




ಶ್ರೀ ಸುಗೂರೇಶ್ವರ ರಥದ ಚಕ್ರಗಳು ದೇವಸುಗೂರ, ಜಿ - ರಾಯಚೂರ



ಶ್ರೀ ಸಿದ್ಧಸಂಸ್ಥಾನಮಠದ ರಥದ ಚಕ್ರಗಳು ಜಿಡಗಾ, ಜಿ - ಗುಲಬರ್ಗಾ



ಶ್ರೀ ವೀರಭದ್ರೇಶ್ವರ ರಥದ ಚಕ್ರಗಳು ಸುಲೇಪೇಟ, ಜಿ - ಗುಲಬರ್ಗಾ



ಶ್ರೀ ವೀರಭದ್ರೇಶ್ವರ ರಥದ ಚಕ್ರಗಳು ಹೆಡಗಿಮುದ್ರಾ, ಜಿ - ಗುಲಬರ್ಗಾ

ಕಬ್ಬಿಣದ ರಥಶಿಲ್ಪಗಳ ಚಕ್ರಗಳ ವರ್ಣಗಾರಿಕೆ



ಶ್ರೀ ಮೈಲಾರಲಿಂಗೇಶ್ವರ ರಥದ ಚಕ್ರಗಳು ನಾಗಲಾಪೂರ, ಜಿ - ಗುಲಬುರ್ಗಾ



ಶ್ರೀ ಅಡವೀರಭದ್ರೇಶ್ವರ ರಥದ ಚಕ್ರಗಳು ಕೋರವಾರ, ಜಿ - ಗುಲಬರ್ಗಾ




ಶ್ರೀ ಬಸವಣ್ಣನ ರಥದ ಚಕ್ರಗಳು ಗುಡಗೇರಿ, ಜಿ - ಬೆಳಗಾಂವ



ಶ್ರೀ ಬಸವೇಶ್ವರ ರಥದ ಚಕ್ರಗಳು ದೇವರಗೊನಾಲ, ಜಿ - ಗುಲಬುರ್ಗಾ



ಶ್ರೀ ಸಂಗಮೇಶ್ವರ ರಥದ ಚಕ್ರಗಳು ಡಿಗ್ಗಿ, ಜಿ - ಗುಲಬರ್ಗಾ



ಶ್ರೀ ಮಲ್ಲಿಕಾರ್ಜುನ ರಥದ ಚಕ್ರಗಳು ದೇಸಾಯಿಕಲ್ಲೂರ, ಜಿ - ಗುಲಬರ್ಗಾ

ಬಣ್ಣ ಹಚ್ಚಲಾಗಿದೆ. ಅದರ ಪಕ್ಕದಲ್ಲಿ ಹಳದಿ ಬಣ್ಣದ ವೃತ್ತಾಕಾರದ ಪಟ್ಟಿಕೆ ಇದೆ. ನಕ್ಷತ್ರಾಕಾರದಲ್ಲಿ ರಚನೆಗೊಂಡ ವಿನ್ಯಾಸದ ತ್ರಿಕೋನಾಕಾರದ ಭಾಗಗಳಲ್ಲಿ ಕೆಂಪು ಮಿಶ್ರಿತ ಕೇಸರಿ ವರ್ಣಲೇಪನ ಮಾಡಲಾಗಿದೆ. ಅಚ್ಚುಗಳಿಗೆ ಹಾಗೂ ತೊಲೆಗಳಿಗೆ ತಿಳಿಗುಲಾಬಿ ವರ್ಣವನ್ನು ಬಳಿದಿರುವುದು ಕಂಡುಬರುತ್ತದೆ.

ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕಳನಿಯ ನೀಲಕಂಠೇಶ್ವರ ರಥ, ಯಾದಗಿರಿ ತಾಲೂಕಿನ ಕಾಳಬೆಳಗುಂದಿಯ ರಥ, ಬೆಳಗಾಂವಿ ಜಿಲ್ಲೆಯ ಹುಕ್ಕೇರಿ ತಾಲೂಕು ಕುರ್ನಿಯ ಗಂಗಾದೇವಿ ರಥ, ಗೋಕಾಕ ತಾಲೂಕಿನ ಯಾದವಾಡದ ಬಸವೇಶ್ವರ ರಥ, ಗೋಕಾಕದ ಬಸವೇಶ್ವರ ದೇವಾಲಯದ ಚಿಕ್ಕ ರಥ, ಗುಲಬುರ್ಗಾ ಜಿಲ್ಲೆಯ ಯಾದಗಿರಿ ತಾಲೂಕಿನ ಕಾಳಬೆಳಗುಂದಿಯ ಬನದೇಶ್ವರ ರಥ, ಯಾಣಾಗುಂದಿಯ ವೆಂಕಟೇಶ್ವರ ರಥ ಹೀಗೆ ಇನ್ನೂ ಅನೇಕ ಕಬ್ಬಿಣದ ಅಂಕಣ ರಥಗಳ ಅಧಿಷ್ಠಾನ ಭಾಗಗಳಲ್ಲಿ ಚಕ್ರಗಳು, ತೊಲೆಗಳು ಹಾಗೂ ಅಚ್ಚುಗಳಲ್ಲಿ ವರ್ಣವಿನ್ಯಾಸವಿರುವುದನ್ನು ಕಾಣಬಹುದು.

ii. ಅಧಿಷ್ಠಾನ ಭಾಗದಿಂದ ಶಿಖರ ಭಾಗದವರೆಗಿನ ವರ್ಣಗಾರಿಕೆ : ಕಬ್ಬಿಣದ ಅಂಕಣ ರಥಗಳು ಅಧಿಷ್ಠಾನ ಭಾಗದಿಂದ ಶಿಖರ ಭಾಗದವರೆಗೆ ಸುಂದರವಾದ ವರ್ಣಗಾರಿಕೆಯಿಂದ ಕಣ್ಮನ ಸೆಳೆಯುತ್ತವೆ ಗುಲಬುರ್ಗಾ ಜಿಲ್ಲೆಯ ಬೇರೆ ಬೇರೆ ಪ್ರದೇಶಗಳಲ್ಲಿ ಕಾಣುವಂತಹ ಅನೇಕ ರಥಗಳು, ಬೆಳಗಾವಿ ಜಿಲ್ಲೆಯ ಕೆಲವು ರಥಗಳು ಹಾಗೂ ಬೀದರ ಜಿಲ್ಲೆಯ ಒಂದೆರಡು ರಥಗಳು ಆಕರ್ಷಕವಾದ ವರ್ಣಗಾರಿಕೆಯನ್ನು ಹೊಂದಿವೆ.

ಗುಲಬುರ್ಗಾ ಜಿಲ್ಲೆ ಆಳಂದ ತಾಲೂಕು ಸರಸಾಂಬಾದ ಮಲ್ಲಿಕಾರ್ಜುನ ದೇವಸ್ಥಾನದ ರಥವು ಆರು ಅಂತಸ್ತುಗಳಲ್ಲಿ ನಿರ್ಮಾಣಗೊಂಡಿದ್ದು ಪ್ರತಿಯೊಂದು ಅಂತಸ್ತಿನಲ್ಲಿಯ ಅನೇಕ ಕಂಬಗಳು ಹಾಗೂ ಕಮಾನುಗಳು ವಿವಿಧ ಬಣ್ಣದ ವರ್ಣಗಾರಿಕೆಯನ್ನು ಹೊಂದಿವೆ. ಎಲ್ಲ ಕಂಬಗಳಿಗೆ ಕೇಸರಿ ಬಣ್ಣ , ಕಮಾನುಗಳಿಗೆ ಕೆಂಪು ಬಣ್ಣವನ್ನು ಲೇಪಿಸಿದ್ದು, ಕಮಾನುಗಳಲ್ಲಿ ಕಂಡುಬರುವ ಹೂವಿನಾಕಾರದ ಮತ್ತು ಎಲೆಬಳ್ಳಿಯಾಕಾರದ ವಿನ್ಯಾಸಗಳಿಗೆ ಹಸಿರು ಹಾಗೂ ತಿಳಿಗುಲಾಬಿ ವರ್ಣಲೇಪನ ಮಾಡಲಾಗಿದೆ. ಪ್ರತಿಯೊಂದು ಅಂತಸ್ತಿನ ಕೊನೆಯ ಹಂತದಲ್ಲಿರುವ ತ್ರಿಕೋನಾಕಾರದ ವಿನ್ಯಾಸಗಳಿಗೆ ಹಳದಿ ಬಣ್ಣವನ್ನು ಲೇಪಿಸಿರುವರು. ಗೋಪುರ ಭಾಗದ ಮೇಲಿರುವ ಶಿಖರದ ಕಬ್ಬಿಣ ಪಟ್ಟಿಕೆಗಳ ದುಂಡು ವಿನ್ಯಾಸಕ್ಕೆ ಕೆಂಪು ಬಣ್ಣವನ್ನು ಲೇಪಿಸಿರುವರು.

ಇದೇ ಜಿಲ್ಲೆಯ ಆಳಂದ ತಾಲೂಕಿನ ಜಿಡಗಾದ ಯಲ್ಲಾಲಿಂಗೇಶ್ವರ ಮಠದ ರಥದಲ್ಲಿ ಪ್ರತಿಯೊಂದು ಅಂತಸ್ತಿನಲ್ಲಿಯ ಕಬ್ಬಿಣದ ಪಟ್ಟಿಗಳು ಹಾಗೂ ತಗಡುಗಳಿಂದ ನಿರ್ಮಾಣಗೊಂಡ ಅನೇಕ ಕಮಾನುಗಳಿಗೆ ಬಿಳಿಯ ಬಣ್ಣವನ್ನು ಲೇಪಿಸಿದೆ. ಪ್ರತಿಯೊಂದು ಕಮಾನಿನ ಮೇಲ್ಭಾಗದ ಛಾವಣಿಯಂತಿರುವ ಭಾಗಗಳಿಗೆ ತಿಳಿನೀಲಿ ವರ್ಣವನ್ನು ಲೇಪಿಸಲಾಗಿದೆ. ಪ್ರತಿಯೊಂದು ಅಂತಸ್ತಿನ ಎಲ್ಲ ಬಾಹುಗಳ ಕೊನೆಯ ಭಾಗದಲ್ಲಿ ಜೋಡಿಸಲಾದ ತಗಡಿನ ಹೂವಿನಾಕಾರದ ವಿನ್ಯಾಸಗಳಿಗೆ ಕಪ್ಪು ಹಾಗೂ ಗುಲಾಬಿ ವರ್ಣಗಳನ್ನು ಬಳಸಲಾಗಿದೆ. ಕಮಾನುಗಳ ಹಿಂಭಾಗದ ತಗಡು ಪಟ್ಟಿಕೆಗಳಿಗೆ ಕೇಸರಿ ವರ್ಣ ಹಾಗೂ ಪ್ರತಿಯೊಂದು ಅಂತಸ್ತಿನ ಪ್ರಾರಂಭ ಹಂತದಲ್ಲಿರುವ ತಗಡು ಪಟ್ಟಿಕೆಗಳಿಗೆ ಹಸಿರು ಮಿಶ್ರಿತ ನೀಲಿ ವರ್ಣವನ್ನು ಲೇಪಿಸಲಾಗಿದೆ.

ಶಹಾಪೂರ ತಾಲೂಕಿನ ರಸ್ತಾಪುರದ ಶರಭಲಿಂಗೇಶ್ವರ ದೇವಸ್ಥಾನದ ರಥವು ಪ್ರತಿಯೊಂದು ಅಂತಸ್ತಿನ ಕಮಾನುಗಳಿಗೆ ಬೇರೆ ಬೇರೆ ವಿಧದ ವರ್ಣವಿನ್ಯಾಸಗಳನ್ನು ಹೊಂದಿದೆ. ಮೊದಲನೆಯ ಕಮಾನುಗಳಿಗೆ ಬಿಳಿಯ ಬಣ್ಣ, ಎರಡನೇಯ ಅಂತಸ್ತಿನ ಕಮಾನುಗಳಿಗೆ ಹಳದಿ ಬಣ್ಣ ಹೀಗೆ ಕ್ರಮವಾಗಿ ಐದು ಅಂತಸ್ತುಗಳಲ್ಲಿ ಹಸಿರು, ನೀಲಿ ಹಾಗೂ ಕೇಸರಿ ವರ್ಣಗಳನ್ನು ಲೇಪಿಸಿರುವರು. ಹೀಗೆಯೇ ಪ್ರತಿ ಅಂತಸ್ತಿನ ಪ್ರಾರಂಭದ ಭಾಗದಲ್ಲಿರುವ ತಗಡಿನ ಅಡ್ಡ ಪಟ್ಟಿಕೆಗಳಿಗೆ ಕ್ರಮವಾಗಿ ಹಸಿರು, ನೀಲಿ, ಕೇಸರಿ, ತಿಳುಹಳದಿ ಹಾಗೂ ತೆಳುನೀಲಿ ವರ್ಣಲೇಪನ ಮಾಡಲಾಗಿದೆ. ಶಿಖರ ಭಾಗದಲ್ಲಿ ಎಲೆಗಳು ಹಾಗೂ ದುಂಡುಮೊಗ್ಗಿನ ಆಕಾರದಲ್ಲಿ ನಿರ್ಮಾಣಗೊಂಡ ತಗಡಿನ ವಿನ್ಯಾಸಕ್ಕೆ ಹಸಿರು ಹಾಗೂ ಕೇಸರಿ ವರ್ಣಲೇಪನ ಮಾಡಲಾಗಿದೆ.

ಗುಲಬುರ್ಗಾ ಜಿಲ್ಲೆಯ ಚಿಂಚೋಳಿ ತಾಲೂಕು ಚಿಮ್ಮಾ ಇದಲಾಯಿಯ ರಥವು ಐದು ಅಂತಸ್ತುಗಳನ್ನು ಹೊಂದಿದ್ದು, ಮೊದಲನೆಯ ಮೂರು ಅಂತಸ್ತುಗಳಿಗೆ ನೀಲಿ ಬಣ್ಣ, ನಂತರದ ಎರಡು ಅಂತಸ್ತುಗಳಿಗೆ ಕೇಸರಿ ಬಣ್ಣ ಹಾಗೂ ಕೊನೆಯ ಅಂತಸ್ತಿಗೆ ಹಳದಿ ವರ್ಣಲೇಪನವಾಗಿರುವುದನ್ನು ಕಾಣಬಹುದು. ಪ್ರತಿಯೊಂದು ಅಂತಸ್ತಿನ ಕಮಾನುಗಳಿಗೆ ವಿನ್ಯಾಸವಿರುವ ಅಂಚಿನಲ್ಲಿ ಹಸಿರು ವರ್ಣದ ಗೆರೆಗಳನ್ನೆಳೆಯಲಾಗಿದೆ. ಪ್ರತಿಯೊಂದು ಅಂತಸ್ತಿನ ಕಮಾನುಗಳು ಹಾಗೂ ಕಂಬಗಳಂತಿರುವ ತಗಡಿನ ಪಟ್ಟಿಕೆಗಳಲ್ಲಿ ಹಸಿರು ಬಣ್ಣದಿಂದ ಬಳ್ಳಿ ಹಾಗೂ ಎಲೆಗಳನ್ನು ರಚಿಸಿರುವರು. ಶಿಖರ ಭಾಗದ ಚಂಡಿನಾಕಾರದ ಭಾಗಕ್ಕೆ ಹಳದಿ ಹಾಗೂ ಕೇಸರಿ ವರ್ಣಗಳ ಪಟ್ಟಿಗಳನ್ನೆಳೆಯಲಾಗಿದೆ.

ಬೀದರ ಜಿಲ್ಲೆಯ ಹುಮನಾಬಾದ ತಾಲೂಕಿನ ಚಾಂಗಳೇರದ ವೀರಭದ್ರ ದೇವಸ್ಥಾನದ ರಥದ ಎಲ್ಲ ಅಂತಸ್ತುಗಳು ವರ್ಣಗಾರಿಕೆಯಿಂದ ಕೂಡಿವೆ. ಎಲ್ಲ ಅಂತಸ್ತುಗಳಲ್ಲಿ ಕಬ್ಬಿಣದ ಸಲಾಕೆಗಳಿಂದ ರಚಿಸಲಾದ ಆನೆಗಳು, ಹಂಸಗಳು, ವಿವಿಧ ಹೂಬಳ್ಳಿಯಂತಹ ನಕ್ಷೆಗಳು ಹಾಗೂ ಗಿಳಿ, ನವಿಲುಗಳಂತಹ ನಕ್ಷೆಗಳಿಗೆ ನೀಲಿ, ಹಳದಿ, ಕೆಂಪು, ಹಸಿರು ಮತ್ತು ಗುಲಾಬಿ ವರ್ಣಗಳನ್ನು ಲೇಪಿಸಲಾಗಿದೆ. ಎಲ್ಲ ಅಂತಸ್ತುಗಳ ಮೇಲ್ಭಾಗದ ಕಬ್ಬಿಣದ ಎಂಗಲ್ ಪಟ್ಟಿಗಳಿಗೆ ಹಸಿರು ವರ್ಣವನ್ನು ಲೇಪಿಸಲಾಗಿದೆ. ರಥದ ಶಿಖರ ಭಾಗದ, ದುಂಡನೆಯ ಆಕಾರಕ್ಕೆ ಹೊಂದಿಸಲಾದ, ತ್ರಿಕೋನಾಕಾರದ, ಎಲೆಯಾಕಾರದ ತಗಡಿನ ವಿನ್ಯಾಸಗಳಿಗೆ ಹಳದಿ, ಕೆಂಪು ಹಾಗೂ ಹಸಿರು ವರ್ಣಗಳನ್ನು ಲೇಪಿಸಲಾಗಿದೆ.

ಇದೇ ತಾಲೂಕಿನ ಸುಲೇಪೇಟದ ವೀರಭದ್ರೇಶ್ವರ ದೇವಸ್ಥಾನದ ರಥದ ಐದು ಅಂತಸ್ತುಗಳಲ್ಲಿರುವ ಕಂಬಗಳು ಹಾಗೂ ಕಮಾನುಗಳಿಗೆ ಬೇರೆ ಬೇರೆ ರೀತಿಯ ವರ್ಣಗಳನ್ನು ಲೇಪಿಸಲಾಗಿದೆ. ಮೊದಲನೆಯ ಅಂತಸ್ತಿನ ಕಮಾನುಗಳಲ್ಲಿ ಹಸಿರು ವರ್ಣಲೇಪನ ಮಾಡಲಾಗಿದ್ದು ಮಂಟಪದಲ್ಲಿರುವ ಹೂವು ಹಾಗೂ ಎಲೆಗಳಾಕಾರದ ವಿನ್ಯಾಸಗಳನ್ನು ಹಳದಿ ವರ್ಣದಿಂದ ಸುಂದರಗೊಳಿಸಲಾಗಿದೆ. ಮಂಟಪಗಳ ವಿನ್ಯಾಸಗಳ ಅಂಚುಗಳಿಗೆ ಕಪ್ಪು ಹಾಗೂ ಬಿಳಿ ವರ್ಣಗಳ ಗೆರೆಗಳನ್ನೆಳೆಯಲಾಗಿದೆ. ಎರಡನೆಯ ಅಂತಸ್ತಿನ ಕಮಾನುಗಳಿಗೆ ಹಳದಿ ವರ್ಣಲೇಪನ ಮಾಡಿದ್ದು, ಹಸಿರು ಮತ್ತು ನೀಲಿ ಬಣ್ಣಗಳಿಂದ ಹೂವು ಹಾಗೂ ಎಲೆಗಳ ವಿನ್ಯಾಸಗಳನ್ನು ಬಿಡಿಸಲಾಗಿದೆ. ಅಲ್ಲಲ್ಲಿ ಕೇಸರಿ ವರ್ಣದ ಗೆರೆಗಳನ್ನೆಳೆಯಲಾಗಿದೆ. ಮೂರನೆಯ ಅಂತಸ್ತಿನ ಕಮಾನುಗಳಿಗೆ ಬಿಳಿ ಮಿಶ್ರಿತ ಹಳದಿ ವರ್ಣಲೇಪನ ಮಾಡಲಾಗಿದ್ದು, ಹೂವು ಹಾಗೂ ಎಲೆಗಳ ವಿನ್ಯಾಸಗಳಿಗೆ ಕೇಸರಿ ಹಾಗೂ



ಶ್ರೀ ವೀರಭದ್ರೇಶ್ವರ ರಥ
ಹುಮನಾಬಾದ, ಜಿ - ಬೀದರ



ಶ್ರೀ ನೀಲಕಂಠೇಶ್ವರ ರಥ
ಕಾಳಗಿ, ಜಿ - ಗುಲಬರ್ಗಾ



ಶ್ರೀ ವೀರಭದ್ರೇಶ್ವರ ರಥ
ಹುಮನಾಬಾದ, ಜಿ - ಬೀದರ



ಶ್ರೀ ವೀರಭದ್ರೇಶ್ವರ ರಥ
ಸುಲೇಪೇಟ , ಜಿ - ಗುಲಬರ್ಗಾ




ಶ್ರೀ ವೀರಭದ್ರೇಶ್ವರ ರಥ
ಹುಮನಾಬಾದ, ಜಿ - ಬೀದರ



ಶ್ರೀ ವೀರಭದ್ರೇಶ್ವರ ರಥ
ಸುಲೇಪೇಟ , ಜಿ - ಗುಲಬರ್ಗಾ




ಶ್ರೀ ಬನಶಂಕರಿ ರಥ
ಕೋಡ್ಲಿ, ಜಿ - ಗುಲಬರ್ಗಾ



ಶ್ರೀ ರಾಮಲಿಂಗೇಶ್ವರ ರಥ
ಕೋಡ್ಲಿ, ಜಿ - ಗುಲಬರ್ಗಾ



ಶ್ರೀ ಮೈಲಾರಲಿಂಗೇಶ್ವರ ರಥ
ನಾಗಲಾಪೂರ, ಜಿ - ಗುಲಬರ್ಗಾ



ಶ್ರೀ ಸಿದ್ಧಸಂಸ್ಥಾನ ಮಠದ ರಥ
ಜಿಡಗಾ, ಜಿ - ಗುಲಬರ್ಗಾ



ಶ್ರೀ ಶರಣಬಸವೇಶ್ವರ ರಥ
ಸೌಳಹಾಳ, ಜಿ - ಗುಲಬರ್ಗಾ



ಶ್ರೀ ದುರ್ಗಾದೇವಿ ರಥ
ಅಕ್ಕತಂಗೀಯರ ಹಳ್ಳ, ಜಿ - ಬೆಳಗಾಂವ



ಶ್ರೀ ಗಂಗಾದೇವಿ ರಥ
ಕುರ್ಣೆ, ಜಿ - ಬೆಳಗಾಂವ



ಶ್ರೀ ಗಂಗಾದೇವಿ ರಥ
ಕುರ್ಣೆ, ಜಿ - ಬೆಳಗಾಂವ



ಶ್ರೀ ರಾಮಲಿಂಗೇಶ್ವರ ರಥ
ಕೋಡ್ಲಿ, ಜಿ - ಗುಲಬರ್ಗಾ



ಶ್ರೀ ಬನಶಂಕರಿ ರಥ
ಕೋಡ್ಲಿ, ಜಿ - ಗುಲಬರ್ಗಾ

ಹಸಿರು ವರ್ಣಗಳನ್ನು ಬಳಸಲಾಗಿದೆ. ಹೀಗೆಯೇ ನಾಲ್ಕು ಹಾಗೂ ಐದನೆಯ ಅಂತಸ್ತುಗಳಲ್ಲಿನ ಕಮಾನುಗಳಿಗೆ ನೀಲಿ ಮಿಶ್ರಿತ ಹಸಿರು ಹಾಗೂ ನೇರಳೆ ಬಣ್ಣಗಳನ್ನು ಲೇಪಿಸಿ, ಅವುಗಳ ಮೇಲೆ ನೀಲಿ ಹಾಗೂ ಕೇಸರಿ ವರ್ಣಗಳಿಂದ ಎಲೆ ಹೂಗಳ ನಕ್ಷೆಗಳನ್ನು ಬರೆಯಲಾಗಿದೆ. ಪ್ರತಿಯೊಂದು ಅಂತಸ್ತಿನ ಮೇಲ್ಭಾಗದ ಪಟ್ಟಿಕೆಗಳ ತ್ರಿಕೋನಾಕಾರದ ಸಾಲು ವಿನ್ಯಾಸಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದೆ. ಕೆಲವು ಪಟ್ಟಿಕೆಗಳಲ್ಲಿ ಸುರುಳಿಯಾಕಾರದ ವಿನ್ಯಾಸಗಳನ್ನು ಬಿಳಿಯ ವರ್ಣದಿಂದ ಚಿತ್ರಿಸಿರುವರು.

ಕೆಳಭಾಗದ ಅಂತಸ್ತಿನಲ್ಲಿ ಶಿವ ಪಾರ್ವತಿ, ಗಣಪತಿ, ಆಂಜನೇಯ , ಲಕ್ಷ್ಮೀ, ಸರಸ್ವತಿ ಹಾಗೂ ಶಕ್ತಿ ದೇವತೆಯರು ಮೊದಲಾದ ಅನೇಕ ದೇವಾನುದೇವತೆಯರ ಹಾಗೂ ಬಸವಣ್ಣ, ಅಕ್ಕಮಹಾದೇವಿ, ಅಲ್ಲಮಪ್ರಭು, ವಿವೇಕಾನಂದ, ಚನ್ನಬಸವಣ್ಣ ಹೀಗೆ ಅನೇಕ ಸಿದ್ಧಪುರುಷರ ವರ್ಣಚಿತ್ರಗಳನ್ನು ರಚಿಸಿರುವರು. ಪ್ರತಿಯೊಂದು ಅಂತಸ್ತಿನ ನಾಲ್ಕೂ ದಿಕ್ಕುಗಳಲ್ಲಿನ ನಡುವಿನ ಕಮಾನುಗಳಲ್ಲಿಯೂ ಸಹ ದೇವದೇವತೆಯರ ಚಿತ್ರರಚನೆ ಮಾಡಿರುವುದು ಕಂಡುಬರುತ್ತದೆ. ಇದರಿಂದಾಗಿ ರಥವು ಅನೇಕ ವರ್ಣಗಳಿಂದ ಸುಂದರಗೊಂಡಿದೆ. ಶಿಖರ ಭಾಗದಲ್ಲಿರುವ ಕಡಗೋಲು ನೆಲ್ಲಿಯಾಕಾರದಲ್ಲಿರುವ ಗೋಲಾಕೃತಿಗೆ ಕೆಂಪು ಹಾಗೂ ಹಸಿರು ವರ್ಣಲೇಪನ ಮಾಡಲಾಗಿದೆ.

ಇದೇ ರೀತಿಯ ಚಿತ್ರವಿನ್ಯಾಸಗಳನ್ನು ಹೊಂದಿದ ರಥವನ್ನು ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕಾಳಗಿಯ ನೀಲಕಂಠೇಶ್ವರ ದೇವಸ್ಥಾನದಲ್ಲಿ ಕಾಣಬಹುದು. ಈ ರಥದ ಎಲ್ಲ ಅಂತಸ್ತುಗಳಲ್ಲಿಯ ಕಂಬಗಳು ಹಾಗೂ ಕಮಾನುಗಳಿಗೆ ವಿವಿಧ ಬಣ್ಣಗಳನ್ನು ಲೇಪಿಸುವುದಲ್ಲದೆ ಪ್ರತಿಯೊಂದು ಮಂಟಪದಲ್ಲಿ ದೇವಾನುದೇವತೆಯರ ಚಿತ್ರವಿನ್ಯಾಸಗಳನ್ನು ಬಿಡಿಸಲಾಗಿದೆ. ದ್ವಾರ ಪಾಲಕರು, ಶಿವ, ನಂದಿ, ವಿಷ್ಣು, ಆದಿಶಕ್ತಿ, ಗಣಪತಿ ಹೀಗೆ ವಿವಿಧ ದೇವತೆಗಳ ವರ್ಣಚಿತ್ರಗಳನ್ನು ಈ ರಥದಲ್ಲಿ ಕಾಣಬಹುದು. ರಥದ ಮಂಟಪ ಹಾಗೂ ಕಂಬಗಳಿಗೆ ಸುಲೇಪೇಠದ ವೀರಭದ್ರನ ರಥದಂತೆಯೇ ವಿವಿಧ ಬಣ್ಣಗಳಿಂದ ಸುಂದರವಾದ ವರ್ಣಲೇಪನ ಮಾಡಲಾಗಿದೆ. ಶಿಖರ ಭಾಗದಲ್ಲಿಯ ದುಂಡು ಮೊಗ್ಗಿನಾಕಾರದ ವಿನ್ಯಾಸಕ್ಕೆ ಹಸಿರು ನೀಲಿ ಹಳದಿ ಹಾಗೂ ಬಿಳಿಯ ವರ್ಣಗಳಿಂದ ಪಟ್ಟಿಗಳನ್ನೆಳೆಯಲಾಗಿದೆ.

ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕೋಡ್ಲಿಯ ಬನಶಂಕರಿಯ ದೇವಸ್ಥಾನದ ರಥವೂ ಕೂಡ ಅನೇಕ ರೀತಿಯ ವರ್ಣಚಿತ್ರಗಳನ್ನು ಮೈಗೂಡಿಸಿಕೊಂಡಿದೆ. ಲಕ್ಷ್ಮೀ, ಸರಸ್ವತಿ, ದುರ್ಗಿ, ಕಾಳಿಕಾಮಾತೆ, ಆದಿಶಕ್ತಿ, ದಾನಮ್ಮ, ಬನಶಂಕರಿ ಹೀಗೆ ಅನೇಕ ದೇವತೆಯರ ವರ್ಣಚಿತ್ರಗಳನ್ನು ಈ ರಥದ ಎಲ್ಲ ಅಂತಸ್ತುಗಳ ಕಮಾನುಗಳಲ್ಲಿ ಕಾಣಬಹುದು. ಇದಲ್ಲದೆ ಕೋಡ್ಲಿಯ ರಾಮಲಿಂಗೇಶ್ವರ ದೇವಸ್ಥಾನದ ರಥವೂ ಕೂಡ ಅನೇಕ ವರ್ಣಚಿತ್ರಗಳನ್ನು ಒಳಗೊಂಡಿದೆ. ಈ ರಥದಲ್ಲಿ ರಾಮಾಯಣಕ್ಕೆ ಸಂಬಂಧಪಟ್ಟ ಅನೇಕ ಸನ್ನಿವೇಶಗಳ ವರ್ಣಚಿತ್ರಗಳನ್ನು ಸುಂದರವಾಗಿ ರಚಿಸಿರುವರು. ಶಿಖರ ಭಾಗದಲ್ಲಿ ಎಲೆಗಳನ್ನು ಹೊಂದಿದ ಮೊಗ್ಗಿನಾಕಾರದ ಭಾಗವನ್ನು ಹಸಿರು, ಕೇಸರಿ ಹಾಗೂ ಹಳದಿ ಪಟ್ಟಿಕೆಗಳಿಂದ ಸುಂದರಗೊಳಿಸಲಾಗಿದೆ.

ಬೀದರ ಜಿಲ್ಲೆಯ ಹುಮನಾಬಾದಿನ ವೀರಭದ್ರ ದೇವಸ್ಥಾನದ ರಥವೂ ಕೂಡ ಅನೇಕ

ವರ್ಣಚಿತ್ರಗಳನ್ನು ಒಳಗೊಂಡಿದೆ. ರಥದ ಎಲ್ಲ ಅಂತಸ್ತುಗಳಿಗೆ ಬಿಳಿ ಮಿಶ್ರಿತ ಹಸಿರು ವರ್ಣಲೇಪನ ಮಾಡಲಾಗಿದೆ. ಕಮಾನುಗಳ ವಿನ್ಯಾಸದ ಅಂಚುಗಳಿಗೆ ಬಿಳಿ ಹಾಗೂ ನೀಲಿ ವರ್ಣಗಳಿಂದ ಗೆರೆಗಳನ್ನೆಳೆಯಲಾಗಿದೆ. ಪ್ರತಿಯೊಂದು ಅಂತಸ್ತಿನ ಮೇಲ್ಭಾಗದ ಪಟ್ಟಿಕೆಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದೆ. ಕೆಳಭಾಗದ ಪಟ್ಟಿಕೆಗಳಿಗೆ ಕೆಂಪು ಬಣ್ಣವನ್ನು ಬಳಿದು,ಅದರ ಮೇಲಿನ ಸುರುಳಿಯಾಕಾರದ ವಿನ್ಯಾಸಗಳಿಗೆ ಬಿಳಿ ಬಣ್ಣವನ್ನು ತುಂಬಲಾಗಿದೆ. ಪ್ರತಿಯೊಂದು ಅಂತಸ್ತಿನ ಕಮಾನುಗಳಲ್ಲಿ ಕಾಣುವಂತಹ ಹೂ ಬಳ್ಳಿಗಳ ವಿನ್ಯಾಸಗಳಿಗೆ ಹಳದಿ, ಕೆಂಪು ಹಾಗೂ ನೀಲಿ ವರ್ಣಗಳನ್ನು ತುಂಬಲಾಗಿದೆ. ಎಲ್ಲ ಬದಿಗಳ ಕಮಾನುಗಳಲ್ಲಿ ಅನೇಕ ಶಿವಶರಣರ ಚಿತ್ರರಚನೆ ಮಾಡಲಾಗಿದೆ. ಕೆಳಗಡೆಯ ಅಂತಸ್ತಿನಲ್ಲಿ ವೀರಭದ್ರ, ದಕ್ಷಬ್ರಹ್ಮಸಂಹಾರ, ಗಂಗೆ ಹಾಗೂ ಶಿವ-ಹೀಗೆ ವಿವಿಧ ರೀತಿಯ ವರ್ಣಚಿತ್ರಗಳನ್ನು ಬಿಡಿಸಲಾಗಿದೆ.

ಗುಲಬುರ್ಗಾ ಹಾಗೂ ಬೀದರ ಜಿಲ್ಲೆಗಳಲ್ಲಿ ಇಂತಹ ಚಿತ್ರವಿನ್ಯಾಸವಿರುವ ರಥಗಳನ್ನು ಕಾಣಬಹುದು. ಗುಲಬುರ್ಗಾ ಜಿಲ್ಲೆಯ ಅನೇಕ ರಥಗಳಲ್ಲಿ ಕೆಲವು ರಥಗಳು ದೇವಾನುದೇವತೆಯರ ವರ್ಣಚಿತ್ರಗಳನ್ನು ತಮ್ಮಲ್ಲಿ ಮೈಗೂಡಿಸಿಕೊಂಡಿದ್ದರೆ, ಇನ್ನುಳಿದ ರಥಗಳಿಗೆ ಉತ್ಸವದ ಸಂದರ್ಭದಲ್ಲಿ ಪ್ರತಿಯೊಂದು ಅಂತಸ್ತುಗಳ ಕೆಲವು ಕಮಾನುಗಳಲ್ಲಿ ದೇವದೇವತೆಯರ ವರ್ಣಚಿತ್ರಗಳ ಫೋಟೋಗಳನ್ನು ಅಳವಡಿಸುವುದೂ ಕಂಡುಬರುತ್ತದೆ.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕುರ್ನಿಯ ಗಂಗಾದೇವಿಯ ರಥದಲ್ಲಿ ಎಲ್ಲ ಅಂತಸ್ತುಗಳಿಗೆ ಗುಲಾಬಿ ವರ್ಣವನ್ನು ಲೇಪಿಸಿಲಾಗಿದೆ. ಅಧಿಷ್ಠಾನ ಭಾಗದ ಕಟಂಜರವು ಹಳದಿ ಹಾಗೂ ನೇರಳೆ ಬಣ್ಣದಿಂದ ಕೂಡಿದೆ. ಈ ರಥದ ಎಲ್ಲ ಕಮಾನುಗಳಲ್ಲಿಯೂ ಶಿವ, ಪಾರ್ವತಿ, ಗಣಪತಿ, ಲಕ್ಷ್ಮೀ, ಸರಸ್ವತಿ ಹೀಗೆ ವಿವಿಧ ದೇವದೇವತೆಯರ ವರ್ಣಚಿತ್ರಗಳನ್ನು ರಚಿಸಲಾಗಿದೆ.

ಗೋಕಾಕ ತಾಲೂಕು ಗುಡಗೇರಿಯ ಬಸವೇಶ್ವರ ದೇವಸ್ಥಾನದ ರಥದ ಕೆಳಭಾಗದ ಅಂತಸ್ತುಗಳಿಗೆ ನೇರಳೆ ಬಣ್ಣವನ್ನು ಲೇಪಿಸಲಾಗಿದೆ. ಎಲ್ಲ ಕಮಾನುಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದೆ. ಕೆಲವು ಭಾಗಗಳಲ್ಲಿ ಕೆಂಪು ಹಾಗೂ ನೀಲಿ ಬಣ್ಣದ ಹೂವುಗಳ ವಿನ್ಯಾಸಗಳನ್ನು ಚಿತ್ರಿಸಲಾಗಿದೆ. ಇದೇ ತಾಲೂಕಿನ ಅಕ್ಕತಂಗಿಯರ ಹಳ್ಳದ ದುರ್ಗಾದೇವಿಯ ರಥವೂ ಕೂಡ ಇದೇ ರೀತಿಯ ವರ್ಣಗಾರಿಕೆಯನ್ನು ಹೊಂದಿದೆ.

ರಾಯಚೂರು ಜಿಲ್ಲೆಯ ಲಿಂಗಸೂಗೂರು ತಾಲೂಕಿನ ಸೂಗೂರೇಶ್ವರ ದೇವಾಲಯದ ಕಬ್ಬಿಣದ ಅಂಕಣ ರಥವು ಎಲ್ಲ ಅಂತಸ್ತುಗಳಲ್ಲಿ ಬೇರೆ ಬೇರೆ ರೀತಿಯ ವರ್ಣಗಾರಿಕೆಯನ್ನು ಹೊಂದಿದೆ. ಅನುಕ್ರಮವಾಗಿ ಕೆಳಗಿನಿಂದ ಶಿಖರ ಭಾಗದವರೆಗೆ ಇರುವ ಅಂತಸ್ತುಗಳು ಗುಲಾಬಿ, ಕೆಂಪು, ನೇರಳೆ, ನೀಲಿ ಹಾಗೂ ಹಸಿರು ವರ್ಣಗಳಿಂದ ಕೂಡಿದ್ದು ಪ್ರತಿಯೊಂದು ಅಂತಸ್ತಿನ ಮೇಲ್ಭಾಗದ ಪಟ್ಟಿಕೆಗಳಿಗೆ ಕ್ರಮವಾಗಿ ನೇರಳೆ, ನೀಲಿ, ಹಸಿರು ಹಾಗೂ ಕೆಂಪು ವರ್ಣಗಳ ಲೇಪನ ಮಾಡಲಾಗಿದೆ. ಎಲ್ಲ ಅಂತಸ್ತುಗಳ ಮೇಲ್ಭಾಗದಲ್ಲಿರುವ ತ್ರಿಕೋನಾಕಾರದ ಸಾಲು ವಿನ್ಯಾಸಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದೆ. ಶಿಖರ ಭಾಗದಲ್ಲಿ ಅಳವಡಿಸಲಾದ ದುಂಡು ಮೊಗ್ಗಿನಾಕಾರದಲ್ಲಿರುವ ಭಾಗವನ್ನು ಹಸಿರು, ಬಿಳಿ ಹಾಗೂ ಹಳದಿ ಮಿಶ್ರಿತ ಕೆಂಪು ವರ್ಣಗಳಿಂದ ಸುಂದರಗೊಳಿಸಲಾಗಿದೆ.

ಲೋಹ ರಥಶಿಲ್ಪಗಳ ಗೋಪುರ ಭಾಗದ ವರ್ಣ ವಿನ್ಯಾಸ



ಶ್ರೀ ಸಿದ್ಧಸಂಸ್ಥಾನ ಮಠದ ರಥ
ಜಿಡಗಾ, ಜಿ - ಗುಲಬರ್ಗಾ



ಶ್ರೀ ಶರಣಬಸವೇಶ್ವರ ರಥ
ಸವಳಹಾಳ, ಜಿ - ಗುಲಬರ್ಗಾ



ಶ್ರೀ ಮಾಣಿಕೇಶ್ವರ ರಥ
ಯಾಣಾಗುಂದಿ, ಜಿ - ಗುಲಬರ್ಗಾ



ಶ್ರೀ ಬಸವೇಶ್ವರ ರಥ
ದೇವರಗೋಣಾಲ, ಜಿ - ಗುಲಬರ್ಗಾ



ಶ್ರೀ ಮಲ್ಲಿಕಾರ್ಜುನ ರಥ
ದೇಸಾಯಿಕಲ್ಲೂರ, ಜಿ - ಗುಲಬರ್ಗಾ



ಶ್ರೀ ಸಂಗಮೇಶ್ವರ ರಥ
ಡಿಗ್ಗಿ, ಜಿ - ಗುಲಬರ್ಗಾ



ಶ್ರೀ ಬನಶಂಕರಿ ರಥ
ಕೋಡ್ಲಿ, ಜಿ - ಗುಲಬರ್ಗಾ



ಶ್ರೀ ವೀರಭದ್ರ ರಥ
ಸುಲೇಪೇಟ, ಜಿ - ಗುಲಬರ್ಗಾ



ಶ್ರೀ ಮೈಲಾರಲಿಂಗೇಶ್ವರ ರಥ
ನಾಗಲಾಪೂರ, ಜಿ - ಗುಲಬರ್ಗಾ

ಗುಲಬುರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಶಹಬಾದದ ಬಸವೇಶ್ವರ ರಥವು ಸುಂದರವಾದ ವರ್ಣವಿನ್ಯಾಸವನ್ನು ಮೈಗೂಡಿಸಿಕೊಂಡಿದೆ. ಐದು ಅಂತಸ್ತುಗಳಲ್ಲಿರುವ ಅನೇಕ ಕಮಾನುಗಳು ಹಸಿರು ಬಣ್ಣದಿಂದ ಕೂಡಿವೆ. ಕೆಂಪು ವರ್ಣದಿಂದ ಕಂಬಗಳ ಹಾಗೇ ಚಿತ್ರರಚನೆ ಮಾಡಿರುವರು. ಕಮಾನುಗಳ ಒಳ ಅಂಚಿನ ವಿನ್ಯಾಸಗಳಿಗೆ ಹಳದಿ ವರ್ಣದ ಗೆರೆಗಳನ್ನು ಹಾಗೂ ನೀಲಿ ವರ್ಣದ ಚುಕ್ಕೆಗಳನ್ನಿಡಲಾಗಿದೆ. ಕಮಾನುಗಳಲ್ಲಿ ಕಾಣುವಂತಹ ಸುರುಳಿಯಾಕಾರದ ನಕ್ಷೆಗಳಿಗೆ ಹಳದಿ ಹಾಗೂ ಬಿಳಿ ಮಿಶ್ರಿತ ನೀಲಿ ವರ್ಣಗಳನ್ನು ತುಂಬಲಾಗಿದೆ. ಪ್ರತಿಯೊಂದು ಅಂತಸ್ತಿನ ಮೇಲ್ಭಾಗದ ಪಟ್ಟಿಗಳಲ್ಲಿರುವ ಎಲೆಯಾಕಾರದ, ಹೂವಿನಾಕಾರದ ಹಾಗೂ ಸುರುಳಿ ನಕ್ಷೆಗಳಾಕಾರದ ತಗಡಿನ ಪಟ್ಟಿಗಳ ಭಾಗಗಳಿಗೆ ಹಸಿರು, ಗುಲಾಬಿ ಹಾಗೂ ಹಳದಿ ವರ್ಣಲೇಪನ ಮಾಡಲಾಗಿದೆ. ಶಿಖರ ಭಾಗದಲ್ಲಿ ಕಬ್ಬಿಣದ ಪಟ್ಟಿಗಳಿಂದ ರಚಿಸಲಾದ ಮೊಗ್ಗಿನಾಕಾರದ ವಿನ್ಯಾಸಕ್ಕೆ ಗುಲಾಬಿ, ಹಳದಿ ಹಾಗೂ ಕೆಂಪು ವರ್ಣಗಳನ್ನು ಲೇಪಿಸಿ ಸುಂದರಗೊಳಿಸಲಾಗಿದೆ.

ಇದೇ ರೀತಿಯ ವರ್ಣವಿನ್ಯಾಸವಿರುವ ರಥವು ಶಹಾಪೂರ ತಾಲೂಕು ಮದ್ದರಕಿಯ ಬಸವೇಶ್ವರ ದೇವಸ್ಥಾನದಲ್ಲಿದೆ. ಈ ರಥದ ಶಿಖರ ಭಾಗದಲ್ಲಿ ಅಳವಡಿಸಲಾದ ದುಂಡು ಮೊಗ್ಗಿನ ಎಸಳುಗಳಂತಿರುವ ಭಾಗಗಳಿಗೆ ಕೆಂಪು ಬಣ್ಣ, ಬಳೆಯಾಕಾರದ ಭಾಗಕ್ಕೆ ಹಸಿರು ಬಣ್ಣ, ದುಂಡನೆಯ ಭಾಗಕ್ಕೆ ತಿಳಿಗೆಂಪು ವರ್ಣಗಳನ್ನು ಹಚ್ಚಿ, ಅಲ್ಲಲ್ಲಿ ಕಪ್ಪು ವರ್ಣದಿಂದ ಗೆರೆಗಳನ್ನೆಳೆಯಲಾಗಿದೆ. ದುಂಡನೆ ಭಾಗದ ಕೆಳಗಡೆಯ ಎಸಳುಗಳ ಭಾಗದ ಮೇಲೆ ಹಳದಿ ಬಣ್ಣದ ಚುಕ್ಕೆಗಳನ್ನಿಡಲಾಗಿದೆ. ಗುಲಬುರ್ಗಾ ಜಿಲ್ಲೆಯ ಜೇವರಗಿ ತಾಲೂಕಿನ ಸೌಳಹಾಳದ ಶರಣ ಬಸವೇಶ್ವರ ದೇವಸ್ಥಾನದ ರಥವು ಅನೇಕ ವರ್ಣಗಳಿಂದ ಕಂಗೊಳಿಸುತ್ತದೆ. ಪ್ರತಿಯೊಂದು ಅಂತಸ್ತಿನಲ್ಲಿ ಮೊದಲು ತಿಳಿ ಗುಲಾಬಿ ವರ್ಣಲೇಪನ ಮಾಡಿ, ಕಂಬಗಳು ಹಾಗೂ ಕಮಾನುಗಳಂತೆ ಕಾಣುವ ಭಾಗಗಳಿಗೆ ಕಪ್ಪು ಮಿಶ್ರಿತ ಕೆಂಪು ವರ್ಣವನ್ನು ಹಚ್ಚಲಾಗಿದೆ. ಕಮಾನುಗಳ ಒಳ ಅಂಚುಗಳಿಗೆ ಬಿಳಿಯ ಬಣ್ಣದಿಂದ ಹಾಗೂ ಕಪ್ಪು ಬಣ್ಣದಿಂದ ಗೆರೆಗಳನ್ನೆಳೆಯಲಾಗಿದೆ. ಪ್ರತಿಯೊಂದು ಕಮಾನುಗಳಲ್ಲಿ ಕಾಣುವ ಹೂವಿನಾಕಾರದ ವಿನ್ಯಾಸಗಳಿಗೆ ಬಿಳಿ ಹಾಗೂ ತಿಳಿ ಗುಲಾಬಿ ವರ್ಣಗಳನ್ನು ತುಂಬಲಾಗಿದೆ. ಪ್ರತಿಯೊಂದು ಅಂತಸ್ತಿನ ಮೇಲ್ಭಾಗದ ಪಟ್ಟಿಕೆಗಳಲ್ಲಿರುವ ಹೂವಿನಾಕಾರದ ಹಾಗೂ ತ್ರಿಕೋನಾಕಾರದ ಸಾಲುವಿನ್ಯಾಸಗಳಿಗೆ ಹಳದಿ ವರ್ಣಲೇಪನ ಮಾಡಲಾಗಿದೆ. ಶಿಖರಭಾಗದಲ್ಲಿರುವ ಮೊಗ್ಗಿನಾಕಾರದ ಭಾಗಕ್ಕೆ ಹಸಿರು, ಕೇಸರಿ ಹಾಗೂ ಬಿಳಿ ಬಣ್ಣಗಳನ್ನು ಲೇಪಿಸಲಾಗಿದೆ.

ಹೀಗೆ ಕಬ್ಬಿಣದ ಅನೇಕ ಅಂಕಣ ರಥಗಳಲ್ಲಿ ಕಣ್ಮನ ಸೆಳೆಯುವಂತಹ ವಿವಿಧ ರೀತಿಯ ವರ್ಣಗಾರಿಕೆಯನ್ನು ಕಾಣಬಹುದು.

ಕರ್ನಾಟಕದಲ್ಲಿ ಇನ್ನೂ ಹಲವಾರು ಕಬ್ಬಿಣದ ರಥಗಳು ಇವೆ. ಆದರೆ ಇಲ್ಲಿ ಕೆಲವು ರಥಗಳನ್ನು ಉದಾಹರಣೆಗಳಾಗಿ ತೆಗೆದುಕೊಳ್ಳಲಾಗಿದೆ.

ಬ. ಬೆಳ್ಳಿಯ ರಥಗಳಲ್ಲಿ ವರ್ಣವಿನ್ಯಾಸ :

ಕರ್ನಾಟಕದಲ್ಲಿ ಬೆರಳೆಣಿಕೆಯಷ್ಟು ಮಾತ್ರ ಬೆಳ್ಳಿಯ ರಥಗಳನ್ನು ಕಾಣಬಹುದು. ಅವುಗಳಲ್ಲಿ ಧರ್ಮಸ್ಥಳದ ಮಂಜುನಾಥನ ರಥ, ಶೃಂಗೇರಿಯ ಶಾರದಂಬೆಯ ರಥ, ಉಡುಪಿಯ ಕೃಷ್ಣನ ರಥ

ಈ ಎಲ್ಲ ಬೆಳ್ಳಿಯ ರಥಗಳು ಕರ್ನಾಟಕದಲ್ಲಿ ಖ್ಯಾತಿಯನ್ನು ಹೊಂದಿವೆ.

ಬೆಳ್ಳಿಯ ರಥಗಳಲ್ಲಿ ವರ್ಣಗಾರಿಕೆಯು ಹೆಚ್ಚಾಗಿ ಕಂಡುಬರುವುದಿಲ್ಲ. ಕೆಲವು ಮೂರ್ತಿಶಿಲ್ಪಗಳಲ್ಲಿ ಹಾಗೂ ಮಂಟಪ ಭಾಗದ ಪೀಠದಲ್ಲಿ, ಕೆಲವು ಬಣ್ಣ ಬಣ್ಣದ ಮಣಿಗಳು ಮುತ್ತುಗಳು ಹಾಗೂ ಹರಳುಗಳನ್ನು ಅಳವಡಿಸಿರುವರು. ಇವುಗಳನ್ನು ರಥದ ಮುಂಭಾಗದ ಕೆಲವು ಭಾಗಗಳಲ್ಲಿಯೂ ಅಳವಡಿಸಿರುತ್ತಾರೆ. ಆದರೆ ಧರ್ಮಸ್ಥಳದ ಬೆಳ್ಳಿಯ ರಥದ ಮಂಟಪ ಭಾಗದಲ್ಲಿ ಕಂಡುಬರುವ ಕಮಾನುಗಳಲ್ಲಿ ನೀಲಿ ವರ್ಣದ ವೆಲ್ವೆಟ್ ಬಟ್ಟೆಯನ್ನು ಅಳವಡಿಸಿರುವರು. ಈ ರಥವನ್ನು ಬಿಟ್ಟರೆ ಉಳಿದ ಯಾವ ಬೆಳ್ಳಿಯ ರಥಗಳಲ್ಲಿಯೂ ಕೂಡ ಬಣ್ಣದ ಬಟ್ಟೆಗಳ ಉಪಯೋಗ ಕಂಡುಬರುವುದಿಲ್ಲ.

ಆದರೆ ಉತ್ಸವದ ಸಂದರ್ಭದಲ್ಲಿ ಎಲ್ಲ ರಥಗಳಿಗೆ ಬಣ್ಣ ಬಣ್ಣದ ಹೂವುಗಳು, ಹೂವಿನ ಹಾರಗಳು, ತಳಿರು ತೋರಣಗಳು, ಕಬ್ಬು ಹಾಗೂ ಬಾಳೆ ಗಿಡಗಳು ಅಲ್ಲದೆ ಗೋಪುರ ಭಾಗದಲ್ಲಿ ಬಣ್ಣದ ಧ್ವಜಗಳು, ಕೆಲವು ಬಣ್ಣ ಬಣ್ಣದ ಬಟ್ಟೆಗಳು ಹಾಗೂ ಕಳಶದ ಮೇಲೆ ವಿವಿಧ ಬಣ್ಣಗಳ ಛತ್ರಿಗಳನ್ನು ಅಳವಡಿಸುವುದರಿಂದ ರಥಗಳು ವಿವಿಧ ವರ್ಣಗಳಿಂದ ಕೂಡಿರುವುದು ಕಂಡುಬರುತ್ತದೆ.

ಕ. ಚಿನ್ನದ ರಥಗಳಲ್ಲಿ ವರ್ಣವಿನ್ಯಾಸ :

ಕರ್ನಾಟಕದಲ್ಲಿ ಚಿನ್ನದ ರಥಗಳು ಕಾಣಸಿಗುವುದು ತುಂಬಾ ವಿರಳ. ಶೃಂಗೇರಿಯ ಶಾರದಾಂಬೆಯ ರಥ ಹಾಗೂ ಉಡುಪಿಯ ಕೃಷ್ಣನ ರಥಗಳು ಕರ್ನಾಟಕದ ಪ್ರಸಿದ್ಧ ಚಿನ್ನದ ರಥಗಳಾಗಿವೆ.

ಈ ಹಿಂದೆ ತಿಳಿದಿರುವ ಹಾಗೆ ಬೆಳ್ಳಿಯ ರಥಗಳಲ್ಲಿ ಕಾಣುವಂತೆ ಚಿನ್ನದ ರಥಗಳಲ್ಲಿಯೂ ಮಂಟಪ ಭಾಗದ ಪೀಠದಲ್ಲಿ ಹಾಗೂ ಕೆಲವು ಮೂರ್ತಿಶಿಲ್ಪಗಳ ಮುಖ ಹಾಗೂ ಮುಕುಟಗಳ ಉಬ್ಬುಶಿಲ್ಪವಿನ್ಯಾಸಗಳಲ್ಲಿ ಕೆಲವು ಬಣ್ಣ ಬಣ್ಣದ ಮಣಿಗಳು ಹಾಗೂ ಮುತ್ತುಗಳನ್ನು ಅಳವಡಿಸಿರುತ್ತಾರೆ. ಉಳಿದಂತೆ ಯಾವ ಪ್ರಕಾರದ ವರ್ಣಗಳನ್ನಾಗಲಿ ಅಥವಾ ಬಣ್ಣ ಬಣ್ಣದ ವಸ್ತುಗಳನ್ನಾಗಲಿ ಅಳವಡಿಸಿರುವುದು ಕಂಡುಬರುವುದಿಲ್ಲ.

ಉತ್ಸವದ ಸಂದರ್ಭದಲ್ಲಿ ಸಾಮಾನ್ಯವಾಗಿ ತಳಿರು ತೋರಣಗಳು ಧ್ವಜಗಳು ಹಾಗೂ ಹೂವಿನ ಹಾರಗಳಿಂದ ಅಲಂಕಾರ ಮಾಡಿರುತ್ತಾರೆ. ರಾತ್ರಿ ವೇಳೆ ರಥೋತ್ಸವಗಳು ಜರುಗುವ ಸಂದರ್ಭದಲ್ಲಿ ವಿವಿಧ ಬಣ್ಣಗಳ ವಿದ್ಯುತ್ ದೀಪಗಳ ಸರಗಳನ್ನು ಅಳವಡಿಸಿರುತ್ತಾರೆ. ಈ ಎಲ್ಲ ವಸ್ತುಗಳನ್ನು ಹೊಂದಿದ ರಥಗಳು ಉತ್ಸವದ ಸಂದರ್ಭದಲ್ಲಿ ವಿವಿಧ ರೀತಿಯ ವರ್ಣಗಳನ್ನು ಮೈಗೂಡಿಸಿಕೊಂಡು ಸುಂದರವಾಗಿ ಕಂಗೊಳಿಸುತ್ತವೆ.

III. ಸಂಕೀರ್ಣ ಮಾಧ್ಯಮದ ರಥಗಳ ವರ್ಣವಿನ್ಯಾಸ :

ಸಂಕೀರ್ಣ ಮಾಧ್ಯಮದ ರಥಗಳನ್ನು ನಾಲ್ಕು ವಿಧಗಳಲ್ಲಿ ವಿಂಗಡಿಸಬಹುದು.

ಅ. ಕಟ್ಟುವ ರಥಗಳು ಬ. ತಟ್ಟೆಯ ರಥಗಳು

ಕ. ತೆಪ್ಪದ ರಥಗಳು ಡ. ಹೂವಿನ ರಥಗಳು

ಅ. ಕಟ್ಟುವ ರಥಗಳ ವರ್ಣವಿನ್ಯಾಸ :

ಕಟ್ಟುವ ರಥಗಳಲ್ಲಿ ಎರಡು ಭಾಗಗಳಲ್ಲಿ ವರ್ಣಗಾರಿಕೆಯನ್ನು ಕಾಣಬಹುದು.

೧. ಮಂಟಪ ಭಾಗದಲ್ಲಿ ವರ್ಣಗಾರಿಕೆ

೨. ಗೋಪುರ ಭಾಗದಲ್ಲಿ ವರ್ಣಗಾರಿಕೆ

ಈ ಎರಡೂ ಭಾಗಗಳಲ್ಲಿರುವ ವರ್ಣವಿನ್ಯಾಸವನ್ನು ಕುರಿತು ತಿಳಿದುಕೊಳ್ಳೋಣ.

೧. ಮಂಟಪ ಭಾಗದಲ್ಲಿ ವರ್ಣಗಾರಿಕೆ : ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಬಸವಣ್ಣನ ರಥವು ವಿವಿಧ ವಸ್ತುಗಳಿಂದ ನಿರ್ಮಿಸಲ್ಪಟ್ಟು, ಮಂಟಪ ಭಾಗದಲ್ಲಿ ಸುಂದರವಾದ ವರ್ಣಗಾರಿಕೆಯನ್ನು ಹೊಂದಿರುತ್ತದೆ. ಮಂಟಪಭಾಗದ ಕೆಳಭಾಗದಲ್ಲಿ ಜೋಡಿಸಲಾದ ಕಾರ್ಡ್‌ಬೋರ್ಡಿಗೆ ಸುಂದರವಾದ ಹೂವಿನಾಕಾರದ, ತ್ರಿಕೋನಾಕಾರದ ಮತ್ತು ವಿವಿಧ ವಿಧದ ಬಳ್ಳಿಯಾಕಾರದ ನಕ್ಷೆಗಳಿರುವ ಸನ್ಮಾಯಕವನ್ನು ಲೇಪಿಸಿರುವರು. ಇದರ ಮೇಲೆ ರಚಿತವಾದ ಸುಂದರ ಹೂಗಳು ಹಾಗೂ ಎಲೆ ಬಳ್ಳಿಗಳಿಗಳು ಕೆಂಪು, ಹಸಿರು ಹಾಗೂ ಹಳದಿ ವರ್ಣಗಳಿಂದ ಕೂಡಿರುತ್ತವೆ. ಮಂಟಪ ಭಾಗದ ಅನೇಕ ಕಂಬಗಳಿಗೆ ಕೆಳಭಾಗದಲ್ಲಿ ನೀಲಿ ವರ್ಣ, ಮಧ್ಯಭಾಗದಲ್ಲಿ ತಿಳಿಕೇಸರಿ ವರ್ಣ ಹಾಗೂ ಮೇಲ್ಭಾಗದ ಬಳೆಯಾಕಾರದ ವಿನ್ಯಾಸಗಳಿಗೆ ಕೆಂಪು ಹಾಗೂ ನೀಲಿ ವರ್ಣಲೇಪನ ಮಾಡಲಾಗಿರುತ್ತದೆ. ಮಂಟಪಭಾಗದ ಕಮಾನುಗಳಲ್ಲಿ ಬಸವೇಶ್ವರರ, ಮುರುಗೋಡು ಮಹಾಂತ ಅಜ್ಜನವರ, ಕಿತ್ತೂರು ಚೆನ್ನಮ್ಮ ಹಾಗೂ ಅಕ್ಕಮಹಾದೇವಿಯ ದೊಡ್ಡ ದೊಡ್ಡ ವರ್ಣಚಿತ್ರಗಳನ್ನು ಕಟ್ಟುಹಾಕಿಸಿ ಅಳವಡಿಸಿರುತ್ತಾರೆ. ಈ ಎಲ್ಲ ವರ್ಣಚಿತ್ರಗಳು ಬಹಳ ಸುಂದರವಾಗಿ ರಚಿತಗೊಂಡಿರುತ್ತವೆ. ಇದಲ್ಲದೆ ಕಾರ್ಡ್‌ಬೋರ್ಡ್‌ಗಳಲ್ಲಿ ಕಂಬಗಳಂತೆ ರಚಿಸಿರುವ ವಿನ್ಯಾಸಗಳಿಗೆ ಹಸಿರು, ಕೆಂಪು ಹಾಗೂ ಹಳದಿ ಮತ್ತು ವಿವಿಧ ವರ್ಣಗಳಿಂದ ಸುರುಳಿ ನಕ್ಷೆಗಳನ್ನು ಬಿಡಿಸಿರುತ್ತಾರೆ. ಮಧ್ಯಭಾಗದ ಕಮಾನಿನಲ್ಲಿ ಬಸವೇಶ್ವರ ಭಾವಚಿತ್ರವನ್ನು ರಚಿಸಿ ಕಮಾನಿನ ಮೇಲ್ಭಾಗಕ್ಕೆ ಕೆಂಪು ವರ್ಣದ ಬಟ್ಟೆಯನ್ನು ಹೊದಿಸಿರುತ್ತಾರೆ.

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ರಬಕವಿಯ ಮಹಾದೇವ ದೇವಸ್ಥಾನದ ಕಟ್ಟುವ ರಥದ ಮಂಟಪ ಭಾಗವು ವಿವಿಧ ಬಣ್ಣಗಳ ಬಟ್ಟೆಗಳಿಂದ ಸುಂದರಗೊಂಡಿರುತ್ತದೆ. ಮಂಟಪ ಭಾಗವು ಕಾರ್ಡ್‌ಬೋರ್ಡ್‌ಗಳಿಂದ ರಚನೆಯಾದ ಎಂಟು ಕಮಾನುಗಳನ್ನು ಹೊಂದಿದ್ದು, ಆ ಎಲ್ಲ ಕಮಾನುಗಳ ಪಕ್ಕದಲ್ಲಿ ಬೋರ್ಡ್ ಕಾಣದ ಹಾಗೆ, ಗುಲಾಬಿ ಬಣ್ಣದ ಬಟ್ಟೆಯನ್ನು ಅಂಟಿಸಲಾಗಿರುತ್ತದೆ. ಎಲ್ಲ ಕಮಾನುಗಳಿಗೆ ಮೊದಲು ಕೆಂಪು ವರ್ಣವನ್ನು ಲೇಪಿಸಿ, ಅದರ ಮೇಲೆ ಹಳದಿ ವರ್ಣದಿಂದ ಸುರುಳಿ ನಕ್ಷೆಗಳನ್ನು ಬಿಡಿಸಲಾಗಿರುತ್ತದೆ. ಮಂಟಪದ ಕೆಳಭಾಗದಲ್ಲಿ ಮತ್ತು ಎರಡನೆಯ ಅಂತಸ್ತಿನಲ್ಲಿ ನೀಲಿ ವರ್ಣದ ಬಟ್ಟೆಯನ್ನು ನೇತಾಡುವಂತೆ ಕಟ್ಟಿರುತ್ತಾರೆ. ಇದೇ ಜಿಲ್ಲೆಯ ಜಮಖಂಡಿ ತಾಲೂಕಿನ ಹುನ್ನೂರ ಹಾಗೂ ಹಣಗಂಡಿಯಲ್ಲಿಯೂ ಸಹ ಇದೇ ರೀತಿಯ ರಥಗಳನ್ನು ನಿರ್ಮಿಸುವುದಲ್ಲದೆ, ಇದೇ ರೀತಿಯ ವರ್ಣಗಾರಿಕೆಯನ್ನು ಮಾಡಿರುವರು.

ಬಾಗಲಕೋಟ ಜಿಲ್ಲೆಯ ಮುಧೋಳ ತಾಲೂಕು ಹೆಬ್ಬಾಳದ ಸಿದ್ಧೇಶ್ವರ ರಥವು ಮಂಟಪ ಭಾಗದಲ್ಲಿ ಅನೇಕ ಕಾರ್ಡ್‌ಬೋರ್ಡ್‌ಗಳಿಂದ ರಚಿಸಿದ ಕಮಾನುಗಳನ್ನು ಹೊಂದಿರುತ್ತದೆ. ಈ ಕಮಾನುಗಳಿಗೆ ಹಳದಿ ವರ್ಣಲೇಪನ ಮಾಡಿರುತ್ತಾರೆ. ಅದರ ಮೇಲೆ ಸುರುಳಿಯಾಕಾರದ ನಕ್ಷೆಗಳನ್ನು ಹಾಗೂ ಎಲೆ ಬಳ್ಳಿಯಾಕಾರದ ನಕ್ಷೆಗಳನ್ನು ಬಿಡಿಸಿರುತ್ತಾರೆ. ಅವುಗಳಿಗೆ ಕೆಂಪು, ಹಳದಿ, ಹಸಿರು, ಕೇಸರಿ ಹಾಗೂ ನೀಲಿ ವರ್ಣಗಳನ್ನು ತುಂಬಲಾಗಿರುತ್ತದೆ. ಮಂಟಪ ಭಾಗದ ಮೇಲ್ಭಾಗದಲ್ಲಿ ಕೇಸರಿ ವರ್ಣದ ಬಟ್ಟೆಯನ್ನು ಕಟ್ಟಿರುತ್ತಾರೆ. ಅಲ್ಲದೆ ಎಲ್ಲ ಕಮಾನುಗಳ ಪಕ್ಕದಲ್ಲಿ ದೇವದೇವತೆಯರ ವರ್ಣಚಿತ್ರಗಳನ್ನು ಅಂಟಿಸಲಾಗಿರುತ್ತದೆ.

ಗುಲಬುರ್ಗಾದ ಶರಣ ಬಸವೇಶ್ವರ ದೇವಸ್ಥಾನದ ರಥವು ಅನೇಕ ಅಂತಸ್ತುಗಳಲ್ಲಿ ನಿರ್ಮಾಣಗೊಂಡಿರುತ್ತದೆ. ಅಡಿಪಾಯದಿಂದ ಮಂಟಪ ಭಾಗದವರೆಗೆ ನಿರ್ಮಾಣಗೊಂಡ ಅಂತಸ್ತುಗಳನ್ನು ವಿವಿಧ ಬಣ್ಣದ ರಟ್ಟುಗಳಿಂದ, ಕಾಗದಗಳಿಂದ ನಿರ್ಮಿಸಿರುತ್ತಾರೆ. ಅಲ್ಲಲ್ಲಿ ಬೇರೆ ಬೇರೆ ಬಣ್ಣದ ಬಟ್ಟೆಗಳನ್ನು ಸುತ್ತಿರುತ್ತಾರೆ. ಮಂಟಪ ಭಾಗದ ಅನೇಕ ಕಮಾನುಗಳಲ್ಲಿ ಶಿವಪಾರ್ವತಿ, ನಂದಿ, ಲಕ್ಷ್ಮೀ, ಸರಸ್ವತಿ, ಶಕ್ತಿಮಾತೆ, ಆಂಜನೇಯ ಹೀಗೆ ಅನೇಕ ದೇವಾನುದೇವತೆಯರ ವರ್ಣಚಿತ್ರಗಳನ್ನು ಅಂಟಿಸಿರುತ್ತಾರೆ. ಎಲ್ಲ ಕಂಬಗಳ ಆಕಾರಗಳಿಗೆ ಹಳದಿ ಬಣ್ಣವನ್ನು ಲೇಪಿಸಲಾಗಿದೆ. ಪ್ರತಿಯೊಂದು ಕಮಾನುಗಳ ಮಧ್ಯಭಾಗದಲ್ಲಿ ಉಳಿದಿರುವ ಸ್ಥಳದಲ್ಲಿ ವಿವಿಧ ಬಣ್ಣದ ಕಾಗದದ ಹೂಗಳನ್ನು ಅಂಟಿಸುತ್ತಾರೆ. ಪ್ರತಿಯೊಂದು ಅಂತಸ್ತುಗಳಲ್ಲಿ ಹಾಗೂ ಕಮಾನುಗಳ ಮೇಲ್ಭಾಗದ ಪಟ್ಟಿಕೆಗಳಲ್ಲಿ ಸುರುಳಿಯಾಕಾರದ ನಕ್ಷೆಗಳನ್ನು ಹೊಂದಿದ ಬಣ್ಣ ಬಣ್ಣದ ಕಾಗದಗಳನ್ನು ಅಂಟಿಸಿರುತ್ತಾರೆ. ಮಂಟಪ ಭಾಗದ ನಾಲ್ಕೂ ಭುಜಗಳಲ್ಲಿ ಬಣ್ಣದ ಕಾಗದಗಳ ದುಂಡುಗಳನ್ನು ಕಟ್ಟಿರುತ್ತಾರೆ.

ಬೆಳಗಾವಿ ಜಿಲ್ಲೆ ನಾಗನೂರದ ವೀರಭದ್ರ ದೇವಸ್ಥಾನದ ರಥದ ಮಂಟಪ ಭಾಗದಲ್ಲಿಯೂ ಸಹ ಅನೇಕ ಬಣ್ಣದ ಬಟ್ಟೆಗಳನ್ನು ಉಪಯೋಗಿಸಿ ಸುಂದರಗೊಳಿಸಿರುವರು. ಮಂಟಪ ಭಾಗದಲ್ಲಿರುವ ಅನೇಕ ಕಮಾನುಗಳು ಹಾಗೂ ಕಂಬಗಳಂತೆ ಕಾರ್ಡ್‌ಬೋರ್ಡ್‌ನಲ್ಲಿ ನಿರ್ಮಿಸಲಾದ ಭಾಗಗಳಿಗೆ ವಿವಿಧ ಬಣ್ಣದ ಕಾಗದಗಳನ್ನು ಅಂಟಿಸಿರುತ್ತಾರೆ. ಕಮಾನುಗಳ ಮೇಲ್ಭಾಗದಲ್ಲಿ ವಿವಿಧ ದೇವತೆಗಳ ವರ್ಣಚಿತ್ರಗಳನ್ನು ಅಂಟಿಸಿ, ಅವುಗಳ ಪಕ್ಕದಲ್ಲಿ ಬೇರೆ ಬೇರೆ ಬಣ್ಣಗಳಿಂದ ಗೆರೆಗಳನ್ನೆಳೆದಿರುತ್ತಾರೆ.

ಧಾರವಾಡ ಜಿಲ್ಲೆಯ ಬೆಂಡಿಗೇರಿಯ ಹನುಮಾನ ದೇವಸ್ಥಾನದ ಕಟ್ಟುವ ರಥದ ಮಂಟಪ ಭಾಗದಲ್ಲಿ ಬ್ರಹ್ಮ, ವಿಷ್ಣು, ಮಹೇಶ್ವರ, ಗಣಪತಿ, ನಂದಿ, ಆಂಜನೇಯ, ರಾಮ, ಕೃಷ್ಣ, ಹೀಗೆ ಅನೇಕ ವರ್ಣಚಿತ್ರಗಳನ್ನು ಅಂಟಿಸಿರುತ್ತಾರೆ. ಪ್ರತಿಯೊಂದು ಕಂಬಗಳ ವಿನ್ಯಾಸಗಳಿಗೆ ಹಳದಿ ವರ್ಣಲೇಪನ ಮಾಡಿರುತ್ತಾರೆ. ಮಂಟಪ ಭಾಗದ ಮೇಲ್ಭಾವಣಿಯಲ್ಲಿ ಕೆಂಪು ಬಣ್ಣದ ಬಟ್ಟೆಯನ್ನು ಸುತ್ತಲಾಗಿರುತ್ತದೆ. ಅಲ್ಲಲ್ಲಿ ಕೆಲವು ಬಣ್ಣ ಬಣ್ಣದ ಕಾಗದಗಳಿಂದ ತಯಾರಿಸಿದ ಹೂಗಳನ್ನು ಅಂಟಿಸಿರುತ್ತಾರೆ.

ಕುಷ್ಟಗಿ ತಾಲೂಕು ಕುಂದಕೂರದ ಆಂಜನೇಯ ದೇವಸ್ಥಾನದ ಕಟ್ಟುವ ರಥದ ಮಂಟಪವು ಅನೇಕ ಬಣ್ಣದ ಬಟ್ಟೆಗಳಿಂದ ಹಾಗೂ ಕಾಗದಗಳಿಂದ ಸುಂದರಗೊಂಡಿರುತ್ತದೆ. ಈ ರಥವು ಸಹ ಧಾರವಾಡ ಜಿಲ್ಲೆಯ ಬೆಂಡಿಗೇರಿಯ ಹನುಮಾನ ದೇವಸ್ಥಾನದಂತೆಯೇ ವರ್ಣಗಾರಿಕೆಯನ್ನು ಹೊಂದಿರುತ್ತದೆ.

೨. ಗೋಪುರ ಭಾಗದಲ್ಲಿ ವರ್ಣಗಾರಿಕೆ : ಈ ಹಿಂದೆ ಹೆಸರಿಸಲಾದ ರಥಗಳು ಹಾಗೂ ಕರ್ನಾಟಕದ ಇನ್ನುಳಿದ ಪ್ರದೇಶಗಳಲ್ಲಿ ಕಂಡುಬರುವ ಕಟ್ಟುವ ರಥಗಳು ಗೋಪುರ ಭಾಗದಲ್ಲಿ ಅನೇಕ ಪತಾಕೆಗಳು, ಧ್ವಜಗಳು ಹಾಗೂ ಬಣ್ಣ ಬಣ್ಣದ ಬಟ್ಟೆಗಳನ್ನು ಹೊಂದಿರುತ್ತವೆ. ಶಿಖರ ಭಾಗದಲ್ಲಿ ದುಂಡನೆಯ ಆಕಾರದಲ್ಲಿ ನಿರ್ಮಿಸಲಾದ ಭಾಗಕ್ಕೆ ವಿವಿಧ ಬಣ್ಣಗಳ ಕಾಗದಗಳನ್ನು ಹಾಗೂ ಬಟ್ಟೆಯ ಪಟ್ಟಿಕೆಗಳನ್ನು ಕಟ್ಟಿರುತ್ತಾರೆ.

ರಬಕವಿಯ ಮಹಾದೇವ ದೇವಸ್ಥಾನದ ರಥದ ಗೋಪುರ ಭಾಗವು ವಿವಿಧ ಬಣ್ಣದ ಬಟ್ಟೆಗಳಿಂದ ನಿರ್ಮಾಣಗೊಂಡಿದ್ದರೆ, ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥದ ಗೋಪುರ ಭಾಗವು ಬಣ್ಣ ಬಣ್ಣದ ಪತಾಕೆಗಳನ್ನು ಸಾಲು ಸಾಲಾಗಿ ಸಮಾನಾಂತರದಲ್ಲಿ ಜೋಡಿಸುವುದರಿಂದ ನಿರ್ಮಾಣಗೊಳ್ಳುತ್ತದೆ. ಮುಧೋಳ ತಾಲೂಕು ಹೆಬ್ಬಾಳದ ಸಿದ್ಧೇಶ್ವರ ದೇವಸ್ಥಾನದ ರಥದ ಗೋಪುರ ಭಾಗವು ಬಣ್ಣದ ಕಾಗದಗಳಿಂದ ನಿರ್ಮಾಣಗೊಂಡಿರುತ್ತದೆ. ಇದರಂತೆ ಗುಲಬುರ್ಗಾದ ಶರಣ ಬಸವೇಶ್ವರ ರಥವು ಸಹ ಬಣ್ಣ ಬಣ್ಣದ ಕಾಗದಗಳಿಂದಲೇ ನಿರ್ಮಾಣಗೊಂಡಿರುತ್ತದೆ.

ಇದರಂತೆ ಶಿಖರ ಭಾಗದಲ್ಲಿರುವ ಗೋಲಾಕಾರದ ವಿನ್ಯಾಸಕ್ಕೆ ಹಾಗೂ ಕೆಳಗಡೆಯ ಭಾಗದ ಬಳೆಯಾಕಾರದ ವಿನ್ಯಾಸಕ್ಕೆ ಕೆಂಪು ಹಾಗೂ ಬಿಳಿಯ ವರ್ಣದ ಕಾಗದಗಳನ್ನು ಅಂಟಿಸಲಾಗಿದೆ. ಗೋಲಾಕಾರದ ಭಾಗಕ್ಕೆ ಹಳದಿ ಹಾಗೂ ಹಸಿರು ವರ್ಣಗಳ ಕಾಗದಗಳನ್ನು ಪಟ್ಟಿಗಳಾಗಿ ಅಂಟಿಸಿ, ಅವುಗಳ ಮೇಲೆ ಕೆಂಪು ಹಾಗೂ ನೀಲಿ ವಿನ್ಯಾಸಗಳುಳ್ಳ ಪೇಪರುಗಳನ್ನು ಅಂಟಿಸಲಾಗಿರುತ್ತದೆ. ದುಂಡು ವಿನ್ಯಾಸದ ಸುತ್ತಲೂ ಬಣ್ಣ ಬಣ್ಣದ ಪ್ಲಾಸ್ಟಿಕ್ ಹೂಗಳಿಂದ ಮಾಡಿದ ಹಾರಗಳನ್ನು ವಿವಿಧ ರೀತಿಯಲ್ಲಿ ನೇತುಬಿಡುವರು.

ಬೈಲಹೊಂಗಲದ ಬಸವೇಶ್ವರ ರಥದ ಶಿಖರ ಭಾಗದಲ್ಲಿರುವ ಗೋಲಾಕಾರದ ವಿನ್ಯಾಸಕ್ಕೆ ಬಂಗಾರವರ್ಣದ ಪೇಪರುಗಳನ್ನು ಸುತ್ತುತ್ತಿರುವರು. ಅದರ ಕೆಳಭಾಗ ಹಾಗೂ ಮೇಲ್ಭಾಗದಲ್ಲಿರುವ ದುಂಡಾಕಾರದ ಹಾಗೂ ಬಳೆಯಾಕಾರದ ವಿನ್ಯಾಸಗಳಿಗೆ ನೀಲಿ, ಕೆಂಪು, ಹಸಿರು, ಹಳದಿ ಹಾಗೂ ಬಿಳಿ ವರ್ಣಗಳ ಪೇಪರುಗಳನ್ನು ಅಂಟಿಸುವರು.

ಕುಷ್ಟಗಿ ತಾಲೂಕು ಕುಂದಕೂರದ ಆಂಜನೇಯ ದೇವಸ್ಥಾನದ ರಥದ ಶಿಖರ ಭಾಗದ ಗೋಲಾಕಾರದ ವಿನ್ಯಾಸಕ್ಕೆ ಕೆಂಪು ಹಾಗೂ ಗುಲಾಬಿ ಬಣ್ಣದ ಹಾಳೆಗಳನ್ನು ಸುತ್ತುವರು. ಹೀಗೆ ನಾಡಿನ ವಿವಿಧ ಪ್ರದೇಶಗಳಲ್ಲಿ ಕಾಣಸಿಗುವ ಕಟ್ಟುವ ರಥಗಳ ಗೋಪುರ ಭಾಗಗಳಲ್ಲಿ ವರ್ಣಗಾರಿಕೆಯನ್ನು ಕಾಣಬಹುದು.

ಕಟ್ಟುವ ರಥಗಳ ವರ್ಣಗಾರಿಕೆ ಪ್ರತಿವರ್ಷವು ಬೇರೆ ಬೇರೆಯಾಗಿಯೇ ಇರುತ್ತದೆ. ಆದ್ದರಿಂದ ಕೆಲವು ಪ್ರದೇಶಗಳ ಉತ್ತಮವಾದ ಕಟ್ಟುವ ರಥಗಳ ಉದಾಹರಣೆಗಳನ್ನು ಮಾತ್ರ ಇಲ್ಲಿ ಬಳಸಲಾಗಿದೆ. ನಾಡಿನ ಅನೇಕ ಗ್ರಾಮಗಳಲ್ಲಿ ಸಣ್ಣ ಪುಟ್ಟ ಕಟ್ಟುವ ರಥಗಳು ಪ್ರತಿ ವರ್ಷವೂ ನಿರ್ಮಾಣಗೊಳ್ಳುತ್ತಲೇ ಇರುತ್ತವೆ. ಅವುಗಳೆಲ್ಲವು ಉತ್ಸವದ ಸಂದರ್ಭದಲ್ಲಿ ಅನೇಕ ಬಣ್ಣದ ಬಟ್ಟೆಗಳಿಂದ, ಹೂವಿನ ಹಾರಗಳಿಂದ, ಧ್ವಜ ಪತಾಕೆಗಳಿಂದ ಹಾಗೂ ವಿವಿಧ ಬಣ್ಣದ ವಸ್ತುಗಳಿಂದ

ಅಲಂಕಾರಗೊಂಡು, ವಿವಿಧ ಬಣ್ಣಗಳನ್ನು ಮೈಗೂಡಿಸಿಕೊಂಡು ಕಣ್ಮನ ಸೆಳೆಯುವಲ್ಲಿ ಯಶಸ್ವಿಯಾಗುವವೆಂದು ಹೇಳಬಹುದು.

ಬ. ತಟ್ಟಿಯ ರಥಗಳ ವರ್ಣವಿನ್ಯಾಸ :

ತಟ್ಟಿಯ ರಥಗಳು ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡದ ಕೆಲವು ದೇವಸ್ಥಾನಗಳಲ್ಲಿ ಕಂಡುಬರುತ್ತವೆ. ಉತ್ಸವದ ಸಂದರ್ಭದಲ್ಲಿ ನಿರ್ಮಾಣಗೊಳ್ಳುವ ಈ ರಥಗಳು ಅನೇಕ ತಟ್ಟಿಗಳನ್ನು ಹೊಂದಿರುತ್ತವೆ. ತಟ್ಟಿಯ ರಥಗಳಲ್ಲಿ ಚಿತ್ರಕಲೆಯು ವಿಶೇಷವಾಗಿ ಕಂಡು ಬರುತ್ತದೆ. ವಿಜಯನಗರದ ರಾಯಗೋಪುರದ ವಿನ್ಯಾಸದಂತೆ ಕಾಣುವ ತಟ್ಟಿ ರಥಗಳಲ್ಲಿ ಕೆಳಗಿನಿಂದ ಗೋಪುರ ಭಾಗದವರೆಗೆ ಎಲ್ಲ ಬಾಹುಗಳಲ್ಲಿ ವಿವಿಧ ವರ್ಣಗಳನ್ನು ಬಳಸಿ ಅನೇಕ ಪೌರಾಣಿಕ ಚಿತ್ರಗಳನ್ನು ಬಿಡಿಸುವರು. ಉತ್ತರ ಕರ್ನಾಟಕದ ಗುಲಬುರ್ಗಾ ಜಿಲ್ಲೆಯ ಕಬ್ಬಿಣದ ರಥಗಳಲ್ಲಿ ಕಾಣುವಂತೆ ತಟ್ಟಿಯ ರಥಗಳಲ್ಲಿಯೂ ಅನೇಕ ವರ್ಣಚಿತ್ರಗಳನ್ನು ಕಾಣಬಹುದು.

ಮಂಜುಗಣಿಯ ವೆಂಕಟರಮಣ ದೇವಾಲಯದ ತಟ್ಟಿಯ ರಥದಲ್ಲಿ ಈ ರೀತಿಯ ವರ್ಣಚಿತ್ರಗಳನ್ನು ಪ್ರತಿ ವರ್ಷವೂ ಚಿತ್ರಿಸಲಾಗುತ್ತದೆ. ರಾಮಾಯಣ ಮಹಾಭಾರತ, ಹಾಗೂ ಪೌರಾಣಿಕ ಸನ್ನಿವೇಶಗಳ ಚಿತ್ರಗಳು ಅಲ್ಲದೆ ಶಿವ, ವಿಷ್ಣು, ಬ್ರಹ್ಮ, ಲಕ್ಷ್ಮೀ, ಸರಸ್ವತಿ, ಗಣಪತಿ, ಆದಿಶಕ್ತಿ ಕಾಳಿಕಾಮಾತೆ-ಹೀಗೆ ವಿವಿಧ ದೇವಾನುದೇವತೆಗಳ ಚಿತ್ರರಚನೆಯನ್ನು ಮಾಡಿರುತ್ತಾರೆ. ಸುಮಾರು ಐದಾರು ಅಂತಸ್ತುಗಳಲ್ಲಿ ಬೆಳೆದು ನಿಲ್ಲುವ ಈ ರಥಗಳ ಪ್ರತಿಯೊಂದು ಅಂತಸ್ತುವಿನ ಕೊನೆಯ ಭಾಗದಲ್ಲಿ ಹೊರಚಾಚುವಂತೆ ಜೋಡಿಸಲಾದ ತಟ್ಟಿಗಳಿಗೆ ಎಲೆಬಳ್ಳಿಯಾಕಾರವಾಗಿ ಸುರುಳಿಯಾಕಾರದ ಅಥವಾ ವಿವಿಧ ರೀತಿಯ ಅಂಚು ನಕ್ಷೆಗಳನ್ನು ಕೇಸರಿ, ಕೆಂಪು, ಹಳದಿ, ನೀಲಿ, ಗುಲಾಬಿ ಹೀಗೆ ವಿವಿಧ ವರ್ಣಗಳಲ್ಲಿ ಚಿತ್ರಿಸಿರುವರು. ಅಲ್ಲಲ್ಲಿ ಕಪ್ಪು ಬಣ್ಣದ ಗೆರೆಗಳನ್ನೆಳೆದಿರುತ್ತಾರೆ.

ಹೀಗೆಯೇ ಉತ್ತರ ಕನ್ನಡ ಹಾಗೂ ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಕಂಡುಬರುವ ತಟ್ಟಿಯ ರಥಗಳಲ್ಲಿ ಇದೇ ರೀತಿಯ ವರ್ಣಚಿತ್ರಗಳ ರಚನೆಯನ್ನು ಕಾಣಬಹುದು. ಈ ರಥಗಳೂ ಸಹ ಚರ ರಥಗಳಾಗಿರುವುದರಿಂದ ಪ್ರತೀ ವರ್ಷ ನಿರ್ಮಾಣಗೊಳ್ಳುವ ರಥದ ತಟ್ಟಿಗಳ ಮೇಲಿನ ವರ್ಣಚಿತ್ರ ರಚನೆ ಬೇರೆ ಬೇರೆಯಾಗಿಯೇ ಇರುತ್ತದೆ.

ಉತ್ಸವದ ಸಂದರ್ಭದಲ್ಲಿ ಬೇರೆ ಬೇರೆ ಬಣ್ಣಗಳಿಂದ ಕೂಡಿದ ಕಾಗದಗಳನ್ನು ಅಲ್ಲಲ್ಲಿ ಅಂಟಿಸಲಾಗುವುದು. ವಿವಿಧ ಬಣ್ಣದ ಹೂಗಳಿಂದ, ತಳಿರು ತೋರಣಗಳಿಂದ ಅಲಂಕಾರಗೊಳ್ಳುವ ತಟ್ಟಿಯ ರಥಗಳು ಸುಂದರವಾದ ವರ್ಣಗಾರಿಕೆಯಿಂದ ಕಣ್ಮನ ಸೆಳೆಯುತ್ತವೆ.

ಕ. ತೆಪ್ಪದ ರಥಗಳ ವರ್ಣವಿನ್ಯಾಸ :

ದೇವಸ್ಥಾನಗಳಿಗೆ ಸಂಬಂಧಿಸಿದ ಪುಷ್ಕರಣಿಗಳಲ್ಲಿ ಅಥವಾ ದೊಡ್ಡದಾದ ಕೆರೆಗಳಲ್ಲಿ ತೆಪ್ಪೋತ್ಸವಗಳು ಜರುಗುವವು. ಕರ್ನಾಟಕದಲ್ಲಿ ಬಾದಾಮಿಯ ಬನಶಂಕರಿ ದೇವಸ್ಥಾನ, ಬಾಗಲಕೋಟೆ ಜಿಲ್ಲೆಯ ಮುಧೋಳದ ಬ್ರಹ್ಮ ಗಡ್ಡಿ ಮಠ, ಲೋಕಾಪೂರದ ಶಂಭುಲಿಂಗ ಮಠ, ಹುಬ್ಬಳ್ಳಿಯ ಸಿದ್ಧಾರೂಢ ಮಠ, ಹಂಪೆಯ ವಿರೂಪಾಕ್ಷ ದೇವಸ್ಥಾನ, ಮೈಸೂರಿನ ಚಾಮುಂಡಿ ಬೆಟ್ಟ

ಹಾಗೂ ಗೋಕರ್ಣದ ಮಹಾಬಲೇಶ್ವರ ದೇವಸ್ಥಾನ ಹೀಗೆ ಕರ್ನಾಟಕದ ಅನೇಕ ದೇವಸ್ಥಾನಗಳಲ್ಲಿ ಹಾಗೂ ಮಠಗಳಲ್ಲಿ ತೆಪ್ಪದ ರಥಗಳು ಉತ್ಸವದ ಸಂದರ್ಭದಲ್ಲಿ ನಿರ್ಮಾಣಗೊಳ್ಳುವುದನ್ನು ಕಾಣುತ್ತೇವೆ.

ಈ ಎಲ್ಲ ರಥಗಳಲ್ಲಿ ಮಂಟಪ ಭಾಗದಿಂದ ಶಿಖರ ಭಾಗದವರೆಗೆ ಇರುವ ಅನೇಕ ಅಂತಸ್ತುಗಳು ವಿವಿಧ ಬಣ್ಣ ಬಣ್ಣದ ಬಟ್ಟೆಗಳಿಂದ, ಬಣ್ಣ ಬಣ್ಣದ ಕಾಗದಗಳಿಂದ, ಕೆಲವು ವರ್ಣಚಿತ್ರಗಳಿಂದ ಹಾಗೂ ವಿವಿಧ ರೀತಿಯ ಹೂವಿನ ಹಾರಗಳಿಂದ ಅಲಂಕಾರಗೊಂಡು ಅನೇಕ ಬಣ್ಣಗಳ ವಸ್ತುಗಳನ್ನು ಮೈಗೂಡಿಸಿಕೊಂಡಿರುತ್ತವೆ. ಕೆಲವು ರಥಗಳ ಶಿಖರ ಭಾಗದಲ್ಲಿಯ ಗೋಲಾಕೃತಿಗೆ ವಿವಿಧ ಬಣ್ಣದ ಬಟ್ಟೆಗಳನ್ನು ಹಾಗೂ ಕಾಗದಗಳನ್ನು ಸುತ್ತಿರುತ್ತಾರೆ.

ರಥದ ಮಂಟಪ ಭಾಗದಲ್ಲಿ ಬಾಳೆಗಿಡಗಳು, ಕಬ್ಬು, ವಿವಿಧ ಫಲಪುಷ್ಪಗಳು-ಹೀಗೆ ಇವೆಲ್ಲವುಗಳನ್ನು ರಥದ ಸೌಂದರ್ಯವರ್ಧನೆಗೆ ಕಟ್ಟಿರುತ್ತಾರೆ. ಈ ಎಲ್ಲ ವಸ್ತುಗಳು ಬೇರೆ ಬೇರೆ ಬಣ್ಣದವುಗಳಾಗಿರುವುದರಿಂದ ರಥವು ಸುಂದರವಾಗಿ ಕಾಣಿಸುತ್ತದೆ.

ತೆಪ್ಪದ ರಥಗಳ ಗೋಪುರ ಭಾಗಗಳಲ್ಲಿ ವಿವಿಧ ವರ್ಣದ ಧ್ವಜಗಳನ್ನು, ಪತಾಕೆಗಳನ್ನು ಸಹ ಹೊಂದಿಸಲಾಗುತ್ತದೆ. ಕಳಶದ ಮೇಲೆ ಸುಂದರವಾದ ಬಣ್ಣದ ಛತ್ರಿಯನ್ನು ಜೋಡಿಲಾಗುತ್ತದೆ. ಅಲ್ಲದೆ ತೆಪ್ಪೋತ್ಸವಗಳು ರಾತ್ರಿಯ ವೇಳೆಯಲ್ಲಿ ನಡೆಯುವಲ್ಲಿ, ಆ ರಥಗಳಿಗೆ ಬಣ್ಣ ಬಣ್ಣದ ಚಿಕ್ಕ ಚಿಕ್ಕ ವಿದ್ಯುತ್ ದೀಪಗಳ ಸರಗಳನ್ನು ಗೋಪುರ ಹಾಗೂ ಮಂಟಪ ಭಾಗಗಳಲ್ಲಿ ನೇತು ಬಿಡುವರು.

ಹೀಗೆ ವಿವಿಧ ಬಣ್ಣ ಬಣ್ಣದ ವಸ್ತುಗಳನ್ನು ಹೊಂದಿ ನಿರ್ಮಾಣಗೊಂಡ ತೆಪ್ಪದ ರಥಗಳು ತಮ್ಮ ವರ್ಣಗಾರಿಕೆಯಿಂದ ಆಕರ್ಷಕವಾಗಿರುತ್ತವೆ.

ಡ. ಹೂವಿನ ರಥಗಳ ವರ್ಣವಿನ್ಯಾಸ :

ಹೂವಿನ ರಥೋತ್ಸವಗಳು ನಾಡಿನ ಕೆಲವು ಭಾಗಗಳಲ್ಲಿ ಮಾತ್ರ ಕಂಡು ಬರುತ್ತವೆ. ಈ ರಥಗಳೂ ಸಹ ಚರರಥಗಳಾಗಿರುವುದರಿಂದ ಉತ್ಸವದ ಸಂದರ್ಭದಲ್ಲಿ ಮಾತ್ರ ಕಾಣಸಿಗುತ್ತವೆ.

ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಮದಬಾವಿಯ ಶಂಕರಲಿಂಗ ದೇವಸ್ಥಾನ, ಬೆಳಗಾವಿ ಜಿಲ್ಲೆ ಬೈಲಹೊಂಗಲ ತಾಲೂಕಿನ ನಂದೆಳ್ಳಿಯ ಬಸವಣ್ಣನ ದೇವಸ್ಥಾನ, ಇದೇ ಜಿಲ್ಲೆಯ ಅಥಣಿ ತಾಲೂಕು ಸಸಾಲಟ್ಟಿಯ ದೇವಸ್ಥಾನ-ಹೀಗೆ ನಾಡಿನ ಕೆಲವೇ ಪ್ರದೇಶಗಳಲ್ಲಿ ಹೂವಿನ ರಥೋತ್ಸವಗಳು ಜರುಗುತ್ತವೆ.

ಅತೀ ವಿರಳವಾಗಿ ಕಾಣಸಿಗುವ ಹೂವಿನ ರಥಗಳು ಹೆಸರೇ ಸೂಚಿಸುವಂತೆ ಬರಿ ಹೂವಿನಿಂದಲೇ ಅಲಂಕಾರಗೊಂಡಿರುತ್ತವೆ. ಅಡಿಪಾಯದಿಂದ ಶಿಖರದವರೆಗೆ ಐದಾರು ಅಂತಸ್ತುಗಳಲ್ಲಿ ವಿವಿಧ ಬಣ್ಣ ಬಣ್ಣದ ಹೂವುಗಳಿಂದ ಕೂಡಿರುತ್ತವೆ. ಬಣ್ಣ ಬಣ್ಣದ ಬಿಡಿಹೂವುಗಳು, ಹೂವಿನ ಹಾರಗಳು, ಹೂವಿನ ಗುಚ್ಛಗಳು-ಹೀಗೆ ವಿವಿಧ ರೀತಿಯ ಹೂವುಗಳಿಂದಲೇ ರಥವು ನಿರ್ಮಾಣಗೊಂಡಂತೆ ಕಾಣಿಸುತ್ತದೆ.

ಮಂಟಫ ಭಾಗದಲ್ಲಿನ ತಳಿರು ತೋರಣಗಳು, ಕೆಲವು ಹಣ್ಣು ಹಾಗೂ ಕಾಯಿಗಳ ಸರಗಳು,

ಕಬ್ಬು, ಬಾಳೆಗಿಡಗಳು ಇವೆಲ್ಲವುಗಳೂ ಬೇರೆ ಬೇರೆ ವರ್ಣದ್ದಾಗಿರುತ್ತವೆ. ಗೋಪುರ ಭಾಗದಲ್ಲಿ ಕೆಲವು ಬಣ್ಣಗಳ ಧ್ವಜ ಪತಾಕೆಗಳೂ ಅಲ್ಲಲ್ಲಿ ಕಾಣಿಸುತ್ತವೆ. ಶಿಖರದ ಮೇಲ್ಭಾಗದಲ್ಲಿ ಬಣ್ಣ ಬಣ್ಣದ ವಿವಿಧ ಹೂಗಳಿಂದ ನಿರ್ಮಿಸಿದ ಛತ್ರಿ ಇರುತ್ತದೆ. ಈ ಎಲ್ಲ ವರ್ಣಗಾರಿಕೆಯ ನಿಸರ್ಗದತ್ತವಾದ ವಸ್ತುಗಳನ್ನು ಅಳವಡಿಸಿಕೊಂಡು ಹೂವಿನ ರಥಗಳು ತಮ್ಮಲ್ಲಿ ವಿಶೇಷವಾದ ವರ್ಣಗಾರಿಕೆಯನ್ನು ಮೈಗೂಡಿಸಿಕೊಂಡು ಗಮನಸೆಳೆಯುತ್ತವೆ.

IV. ಶಿಲಾ ಮಾಧ್ಯಮದ ರಥಗಳ ವರ್ಣವಿನ್ಯಾಸ :

ಕರ್ನಾಟಕದ ಬಳ್ಳಾರಿ ಜಿಲ್ಲೆಯ ಹಂಪೆಯ ಜಗತ್ ಪ್ರಸಿದ್ಧವಾದ ಶಿಲೆಯ ರಥ, ತಮಿಳುನಾಡಿನ ಮಹಾಬಲಿಪೂರದಲ್ಲಿರುವ ಪಂಚ ಪಾಂಡವರ ರಥಗಳು ಹಾಗೂ ರಥದ ಮಾದರಿಯಲ್ಲೇ ನಿರ್ಮಿತವಾದ ಕೋನಾರ್ಕದ ಸೂರ್ಯದೇವಾಲಯಗಳಂತಹ ವಾಸ್ತುಶಿಲ್ಪಗಳ ಅವಿಭಾಜ್ಯ ಅಂಗವಾಗಿರುವ ಶಿಲಾ ಮಾಧ್ಯಮದ ರಥಗಳಲ್ಲಿ ವರ್ಣಗಾರಿಕೆಯು ಕಂಡುಬರುವುದಿಲ್ಲ.

ಆದರೆ ಹಂಪೆಯ ಶಿಲೆಯ ರಥದ ಮಂಟಪ ಭಾಗದಲ್ಲಿ ವರ್ಣಗಾರಿಕೆ ಇತ್ತು ಎಂದು ಇತ್ತೀಚಿನ ಕೆಲವು ಸಂಶೋಧಕರ ಅಭಿಪ್ರಾಯ. ಮೊದಲು ರಥದ ಕೆಲವು ಭಾಗಗಳಲ್ಲಿ ವರ್ಣಗಾರಿಕೆ ಇತ್ತು. ಆದರೆ ಈಗ ಅದು ಕಾಣಸಿಗುವುದಿಲ್ಲವೆಂದು ಹೇಳುವರು. ಈ ವಿಷಯದ ಬಗ್ಗೆ ಇನ್ನೂ ಸ್ಪಷ್ಟ ನಿರ್ಣಯ ದೊರೆತಿಲ್ಲ.

ಚಿತ್ರಕಲೆಯಲ್ಲಿ ರಥಗಳು

ಉತ್ತರ ಕರ್ನಾಟಕ ಜನರು ಭಾರತ ಹುಣ್ಣಿಮೆಯ ಬೆಳದಿಂಗಳಲ್ಲಿ ತಮ್ಮ ಮನೆಗಳ ಗೋಡೆಗಳ ಮೇಲೆ ರಥದ ಚಿತ್ರಗಳನ್ನು ಬಿಡಿಸುವ ಪದ್ಧತಿ ಹಿಂದಿನಿಂದಲೂ ರೂಢಿಯಲ್ಲಿದೆ. ಭಾರತ ಹುಣ್ಣಿಮೆಯಂದು ಬೇರೆ ಕಡೆ ದೇವರ ಜಾತ್ರೆಗೆ ಹೋಗಿ ರಥೋತ್ಸವದಲ್ಲಿ ಪಾಲುಗೊಳ್ಳಲಾಗದ ಜನಪದರು ಹಿಟ್ಟು ಚೆಲ್ಲಿದಂತಿರುವ ಬೆಳದಿಂಗಳಲ್ಲಿ ಗೋಡೆಗಳ ಮೇಲೆ ಕೈ ಬೆರಳುಗಳಲ್ಲಿ ಸುಣ್ಣದಿಂದ ತೇರನ್ನು ಚಿತ್ರಿಸುತ್ತಾರೆ, ಪೂಜಿಸುತ್ತಾರೆ. ಇದನ್ನು ''ಬೆಳದಿಂಗಳು, ಹೊಯ್ಯುವುದು'' ಎಂದು ಕರೆಯಲಾಗುತ್ತದೆ. ಮಾಘಶುದ್ದ ಸಪ್ತಮಿ ಎಂದು ಸೂರ್ಯ ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಪಾದಾರ್ಪಣೆ ಮಾಡುವ ದಿವಸ. ಈ ದಿವಸವನ್ನು ರಥಸಪ್ತಮಿ ಎಂದು ಕರೆಯಲಾಗುತ್ತದೆ. ಹೆಸರೇ ಸೂಚಿಸುವಂತೆ ಇದೊಂದು ರಥಕ್ಕೆ ಸಂಬಂಧಪಟ್ಟ ಹಬ್ಬ.[೨]

ತಸ್ಯಾಂತಿಥೌ ರಥಂ ಪುರ್ವ ಪ್ರಾಪ ದೇವೋ ದಿವಾಕರ

ಸ ತಿಥಿಃ ಕಥಿತೋ ವಿಪ್ರೈಮಾಘೇ ಯಾ ರಥಸಪ್ತಮಿ.

ಭಗವಾನ್ ಸೂರ್ಯ ನಾರಾಯಣನು ಮಾಘಶುದ್ದ ಸಪ್ತಮಿಯ ದಿನದಂದು ತನ್ನ ದಿವ್ಯವಾದ ರಥವನ್ನು ಏರಿದನು ಎಂಬ ಉಲ್ಲೇಖ ಪುರಾಣದಲ್ಲಿ ಬರುತ್ತದೆ. ಈ ದಿನ ಸಪ್ತಾಶ್ವ ರೂಢನಾದ ಸೂರ್ಯನ ಚಿತ್ರನವನ್ನು ಬಿಡಿಸಿ ವೈಭವದಿಂದ ಪೂಜಿಸಲಾಗುತ್ತದೆ ಹಾಗೂ ಸೂರ್ಯೋದಯದ ಸಮಯದಲ್ಲಿ ' ಏಳು ಎಕ್ಕೆ ಎಲೆಗಳನ್ನು ' ಶಿರಸ್ಸು ಹಾಗೂ ಭುಜದ ಮೇಲಿಟ್ಟುಕೊಂಡು ಸ್ನಾನಮಾಡಿ

೨. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೨೩, ೧೯೯೫

ಮನೆಯ ಅಂಗಳದಲ್ಲಿರುವ ತುಳಸಿಕಟ್ಟೆಯ ಬಳಿ ಹಾಲು ಸಕ್ಕರೆಯನ್ನು ಪಾತ್ರೆಯೊಂದರಲ್ಲಿಟ್ಟು, ಕೆಳಭಾಗದಲ್ಲಿ ಸ್ವಲ್ಪ ಕೆಂಡವನ್ನು ಹಾಕಿ ಸೂರ್ಯನ ಶಾಖದಿಂದ ಹಾಲನ್ನು ಉಕ್ಕಿಸಲಾಗುತ್ತದೆ. ಭೌಗೋಳಿಕವಾಗಿ ಹಗಲು ದೊಡ್ಡದಾಗಿ, ರಾತ್ರಿ ಸಣ್ಣದಾಗುತ್ತ ಹೋಗುತ್ತದೆ. ಸಪ್ತಾಶ್ವ ರೂಢನಾದ ಸೂರ್ಯ ರಥಸಪ್ತಮಿಯ ದಿವಸ ಸಂಚಾರಾರ್ಥವಾಗಿ ದಕ್ಷಿಣಾಯಣದಿಂದ ಉತ್ತರಾಯಣಕ್ಕೆ ಹೊರಡುವ ದಿನವಾದ್ದರಿಂದ ಸೂರ್ಯನ ರಥದ ಚಿತ್ರವನ್ನು ಬರೆದು ಪೂಜಿಸುವ ಆಚರಣೆಯನ್ನು ಈ ಹಬ್ಬದಂದು ಪ್ರಧಾನವಾಗಿ ಕಾಣುತ್ತೇವೆ.[೩]

''ಪದಿನೆಟ್ಟಾಂ ಪಿರಕ್ಕು'' ಇದು ತಮಿಳು ನಾಡಿನಲ್ಲಿ ಕಾವೇರಿಗೆ ಸಂಬಧಿಸಿದಂತಹ ಒಂದು ವಿಶಿಷ್ಟವಾದ ಹಬ್ಬ ಈ ಹಬ್ಬಕ್ಕೆ ಎರಡು ಮೂರು ದಿನಗಳ ಮುಂಚೆಯೇ ನದಿಯ ದಾರಿಗಳಲ್ಲಿ ಚಪ್ಪರಂಗಳೆಂಬ ಕಿರುಗಾಲಿಗಳ ದೇವಾಲಯದ ಮರದ ರಥಗಳು ಮಾರಟಕ್ಕೆ ಸಿಗುತ್ತವೆ. ಅಲ್ಲದೆ ರಥಗಳ ಚಿತ್ರಗಳನ್ನು ರಗೋಲಿಯಲ್ಲಿ ಬಿಡಿಸುವುದು ಉಂಟು.[೪]

ತೊಗಲು ಬೊಂಬೆಗಳಲ್ಲಿಯೂ ವಿವಿಧ ಬಗೆಯ ರಥಗಳ ಚಿತ್ರಗಳನ್ನು ಕಾಣಬಹುದು. ರಥದಲ್ಲಿ ಯುದ್ಧಕ್ಕೆ ಹೊಗುವ ರಾಜರ ಚಿತ್ರಗಳು, ರಥಗಳಲ್ಲಿ ಕುಳಿತು ಯುದ್ಧದಲ್ಲಿ ತೊಡಗಿರುವ ಚಿತ್ರಗಳು ಕಂಡುಬರುತ್ತವೆ. ಅಲ್ಲದೆ ಕೆಲವು ದೇವಾಲಯದ ಗೋಡೆಗಳಲ್ಲಿ ಕಾವಿಕಲೆಯ ಚಿತ್ರಗಳಲ್ಲಿ ದ್ವಿಚಕ್ರ, ಚುತುಷ ಚಕ್ರಗಳ, ಅಶ್ವಾರೂಢ ರಥಗಳನ್ನು ಮಹಾಭಾರತ ರಾಮಾಯಣಗಳ ಯುದ್ಧದ ಸನ್ನಿವೇಶಗಳ ದೃಶ್ಯಗಳಲ್ಲಿ ಕಾಣಬಹುದಾಗಿದೆ.

ಅಲ್ಲದೆ ಪ್ರಾಚೀನ ಹಸ್ತ ಪ್ರತಿಗಳಲ್ಲಿ ಹಾಗೂ ಕಿರುವರ್ಣ ಚಿತ್ರಗಳಲ್ಲಿ ವಿವಿಧ ರೀತಿಯ ರಥಗಳ ಚಿತ್ರಗಳು ಕಂಡುಬರುತ್ತವೆ. ಅಲ್ಲದೆ ಗ್ರಾಮೀಣ ಪ್ರದೇಶದ ಹೆಣ್ಣುಮಕ್ಕಳು ತಮ್ಮ ಕೈಗಳ ಮೇಲೆ ಹಾಕಿಸಿಕೊಳ್ಳುವ ಹಚ್ಚೆಯಲ್ಲಿಯೂ ರಥದ ಮಾದರಿ ಚಿತ್ರಗಳನ್ನು ಕಾಣಬಹುದು. ಶ್ರವಣ ಬೆಳಗೋಳದ ಜೈನ ಮಠ (ಕ್ರಿ.ಶ. ೧೮೨೫) ದ ಒಳಾಂಗನವನ್ನು ಸುತ್ತುವರೆದ ಗೋಡೆಗಳಲ್ಲಿ ರಥೋತ್ಸವ ಆಚರಣೆಯ ಭಿತ್ತಿ ಚಿತ್ರಗಳು ಅಚ್ಚಳಿಯದೆ ಉಳಿದುಕೊಂಡಿದೆ. ಅಂತಹುದೇ ತೇರುಗಳು ಇಂದಿಗೂ ಅಲ್ಲಿ ಬಳಕೆಯಾಗಿದೆ. ಇದಲ್ಲದೆ ಕರಾವಳಿ ಭಾಗದ ಹಾಲಕ್ಕೆ ಜನರು ರಚಿಸುವ 'ಹಸೆ' ಚಿತ್ರಗಳಲ್ಲಿಯೂ ರಥಗಳ ಮಾದರಿಗಳು ಕಂಡುಬರುತ್ತವೆ.[೫]

ಕರ್ನಾಟಕದ ಅನೇಕ ಕಿರುವರ್ಣ ಚಿತ್ರಕಲಾವಿದರು ತಮ್ಮ ಕಲಾಕೃತಿಗಳಲ್ಲಿ ರಥಗಳನ್ನು ಬಿಡಿಸಿರುವುದು ಕಂಡುಬರುತ್ತದೆ. ಹೀಗೆ ವಿವಿಧ ಹಬ್ಬ ಹರಿದಿನಗಳಲ್ಲಿ ಕೆಲವು ಗ್ರಾಮೀಣ ಪ್ರದೇಶಗಳ ಮನೆಗಳ ಗೋಡೆಗಳ ಮೇಲೆ ಹಾಗೂ ಕಸೂತಿ ಕಲೆಯಲ್ಲಿ ಕೂಡಾ ರಥಶಿಲ್ಪಗಳ ಮಾದರಿಗಳನ್ನು ಕಾಣಬಹುದಾಗಿದೆ. ಈ ರೀತಿ ರಥಗಳು ಚಿತ್ರ ಕಲೆಯಲ್ಲಿ ಕಂಡುಬರುತ್ತವೆ.

◆ ◆ ◆

೩. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್.ತಿಪ್ಪೇಸ್ವಾಮಿ, ದೀಪಾವಳಿ ವಿಶೇಷಾಂಕ ಪ್ರಜಾವಾಣಿ ಪು.ಸಂ. ೨೨, ೧೯೯೫

೪. '' ದೇಗುಲ ರಥಶಿಲ್ಪ'' ದ್ರುವರಾಜ. ನಾ. ಗದಗಕರ, ಪು.ಸಂ. ೫೧, ೧೯೯೯

೫. ''ವಾಸ್ತು ಶಿಲ್ಪ ಮತ್ತು ಭಿತ್ತಿ ಚಿತ್ರಗಳಲ್ಲಿ ತೇರು'' ಜೋತ್ಸ್ನಾ ಕಾಮತ, ಪು.ಸಂ.೬೬, ೧೯೯೨.

ಅಧ್ಯಾಯ- ಏಳು

ರಥಶಿಲ್ಪ ಕಲಾವಿದರು ಮತ್ತು ಪೋಷಕರು

ರಥಶಿಲ್ಪ ಕಲಾವಿದರು ಮತ್ತು ಪೋಷಕರು.

ಕಲೆ ಎಂಬುದಕ್ಕೆ ಋಗ್ವೇದದಲ್ಲಿ ಅಂಶ ಎಂಬ ಅರ್ಥಛಾಯೆ ಇದೆ. ಕಲೆ ಎಂಬುದು ಆ ದಿವ್ಯ ಶಕ್ತಿಯ ಕಾಂತಿಯ ಒಂದು ಕಿರಣ. ಕಲೆ ಎಂಬುದರ ಸಾಮಾನ್ಯ ಅರ್ಥ 'ಉಪಾಯ' ಅಥವಾ 'ಕೌಶಲ್ಯ' ಎಂದು. ಯಾವ ಉಪಾಯ ಅಥವಾ ಕೌಶಲ್ಯದಿಂದ ನಮ್ಮ ಭಾವನೆಗಳನ್ನು, ಆಲೋಚನೆಗಳನ್ನು ಮನಮುಟ್ಟುವ ರೀತಿಯಲ್ಲಿ ತಿಳಿಸುವುದೋ, ಅಂತಹ ವಿಧಾನವೇ ಕಲೆ[೧]. ೧. ಮಾನವನ ಕ್ರಿಯಾಶಕ್ತಿಯ ಕುಶಲ ಅಭಿವ್ಯಕ್ತಿಯೇ ಕಲೆ. ಈ ರೀತಿಯ ಅಭಿವ್ಯಕ್ತಿಯ ಹಂಬಲ ಮಾನವನ ಹುಟ್ಟುಗುಣ. ಹಲವು ಬಗೆಯ ಕಲೆಗಳನ್ನು ನೋಡಿದರೆ ಸೌಂದರ್ಯವನ್ನು ಆಸ್ವಾದಿಸುವ ಹಾಗೂ ಅಭಿವ್ಯಕ್ತಿಸುವ ರೀತಿ ವ್ಯಕ್ತಿಯಿಂದ ವ್ಯಕ್ತಿಗೆ, ಪರಿಸರದಿಂದ ಪರಿಸರಕ್ಕೆ ಭಿನ್ನ ಎಂಬುದು ಮನದಟ್ಟಾಗುತ್ತದೆ[೨]. ೨. ಇಂತಹ ಕಲೆಗಳಾದ 'ಮೂರ್ತಿಶಿಲ್ಪ' ಮತ್ತು 'ವಾಸ್ತುಶಿಲ್ಪ' ಪ್ರಧಾನ ಕಲೆಗಳೆನಿಸಿದರೂ ಅವುಗಳ ಉಗಮ ಹಳ್ಳಿಯಲ್ಲೇ ಆಗಿದೆ. ಈ ಹಳ್ಳಿಯ ಕಲಾಕಾರರು ಗುಡಿ ಗೋಪುರಗಳನ್ನು, ಮನೆ ಮಠಗಳನ್ನು ಕಟ್ಟುವುದರ ಮೂಲಕ ತಮ್ಮ ಕಲಾತ್ಮಕತೆ ಹಾಗೂ ಸೌಂದರ್ಯ ದೃಷ್ಟಿಯನ್ನು ತೋರಿಸಿಕೊಂಡಿದ್ದಾರೆ[೩]. ೩. ಹಳ್ಳಿಯ ಯಾವುದೋ ಮೂಲೆಯಲ್ಲಿ ಬದುಕಿ, ಬಡತನದಲ್ಲೇ ಕಾಲಯಾಪನೆ ಮಾಡಿ, ಕಾಲರಾಯನ ಗರ್ಭ ಸೇರಿ ಹೋಗುತ್ತಿದ್ದ ಪ್ರತಿಭಾವಂತ ಕಲಾಕಾರರನ್ನು ಗುರುತಿಸಿ, ಆಳರಸರು ಆಶ್ರಯವನ್ನು ನೀಡಿ, ಪ್ರೋತ್ಸಾಹ ಕೊಟ್ಟಿದ್ದರ ಒಂದು ಫಲವೇ ಇಂದು ವಾಸ್ತುಶಿಲ್ಪಗಳು ಎಲ್ಲೆಡೆ ಕಾಣಸಿಗುತ್ತವೆ[೪]. ಇಂತವುಗಳನ್ನು ರಥಶಿಲ್ಪವೂ ಒಂದು.

ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ವೈವಿಧ್ಯಮಯವಾದ, ಕಲಾತ್ಮಕವಾದ ಮತ್ತು ನೋಡುಗರ

---

೧. ''ಕರ್ನಾಟಕದ ಕಲೆಗಳು'' ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. ೫, ೧೯೮೬,

೨. '' ಕರಕುಶಲ ಕಲೆಗಳು'' ಸಂಪುಟ ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. ೧೪, ೧೯೮೫.

೩. '' ಕರ್ನಾಟಕ ವಾಸ್ತು ಶಿಲ್ಪ ಮತ್ತು ಮೂರ್ತಿ ಶಿಲ್ಪ '' ಪ್ರಕಾಶ ಭಟ್ಟ, ಪ್ರಜಾವಾಣಿ, ಮೇ ೨೨, ೧೯೯೨

೪. ''ಕರ್ನಾಟಕದ ಕಲೆಗಳು'' ಸಂಪುಟ ೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. ೧೧೯, ೧೯೮೬.

ಕಣ್ಮನಗಳನ್ನು ಸೆಳೆಯುವಂತಹ ಅನೇಕ ರಥಶಿಲ್ಪಗಳನ್ನು ಕಾಣಬಹುದು. ಈ ಎಲ್ಲ ಸುಂದರವಾದ ರಥಶಿಲ್ಪಗಳು ನಿರ್ಮಾಣಗೊಳ್ಳಲು, ಅನೇಕ ಸಿದ್ಧಹಸ್ತ ರಥಶಿಲ್ಪಿಗಳೇ ಕಾರಣರೆಂದು ಹೇಳಬಹುದು. ಕರ್ನಾಟಕದ ಹಲವಾರು ಜಿಲ್ಲೆಗಳಲ್ಲಿ ಇಂದಿಗೂ ಸಹ ಅನೇಕ ಶ್ರೇಷ್ಠ ರಥಶಿಲ್ಪಿಗಳಿದ್ದಾರೆ. ಕೆಲವು ರಥಶಿಲ್ಪಿಗಳು, ವಂಶ ಪರಂಪರೆಯಾಗಿ ರಥಗಳ ತಯಾರಿಕೆಯನ್ನು ತಮ್ಮ ಉದ್ಯೋಗವನ್ನಾಗಿಸಿಕೊಂಡು, ತಮ್ಮ ಜೀವನವನ್ನು ರಥ ನಿರ್ಮಾಣ ಮಾಡುವುದರಲ್ಲಿಯೇ ಸವೆಸಿರುವರು. ''ಗುಡಿಗಾರರು ಮತ್ತು ವಿಶ್ವಕರ್ಮ ಜನಾಂಗದವರು ಪರಂಪರಾಗತವಾಗಿ ರಥ ನಿರ್ಮಾಣ ಕಾರ್ಯದಲ್ಲಿ ತೊಡಗಿದ ರಥಶಿಲ್ಪಿಗಳಾಗಿದ್ದಾರೆ''.

ಗುಡಿಗಾರರ ಮುಖ್ಯ ವೃತ್ತಿ ಶ್ರೀಗಂಧದ ಕುಸುರಿ ಕೆಲಸ. ಕರ್ನಾಟಕದ ಉತ್ತರ ಕನ್ನಡ ಜಿಲ್ಲೆಯ ಶಿರಸಿ, ಹೊನ್ನಾವರ ಕುಮಟಾ, ಸಿದ್ಧಾಪೂರ, ಶಿವಮೊಗ್ಗಾ ಜಿಲ್ಲೆಯ ಸೊರಬ, ಸಾಗರ, ತೀರ್ಥಹಳ್ಳಿ, ಬಿಳಿಗೋಡು, ತವಂದೆ ಜಂಗಿಕೊಪ್ಪ, ತಾಳೆಗುಪ್ಪ ಹೊನ್ನಕೇರಿ, ಬನವಾಸಿ, ಕೊಪ್ಪ, ಇಸಳೂರು ಹಾಗೂ ಹೆಬ್ಬಳ್ಳಿಯಲ್ಲಿ ಗುಡಿಗಾರರು ಕೆತ್ತನೆಯ ಕೃಷಿಯನ್ನು ಉಳಿಸಿಕೊಂಡು ಬಂದಿದ್ದಾರೆ. ಗುಡಿಗಾರರು ಮೂಲತಃ ಗೋವೆಯವರೆಂದು ತಿಳಿದು ಬರುತ್ತದೆ[೫]. ಗೋವೆಯಲ್ಲಿ ಪೋರ್ಚುಗೀಸರು ವಸಾಹತು ಸ್ಥಾಪಿಸಿದಾಗ, ವಲಸೆ ಬಂದ ಗುಡಿಗಾರರಿಗೆ, ಅವರ ಕಲಾನೈಪುಣ್ಯತೆಯನ್ನು ಅರಿತು ವಿಜಯನಗರದ ಅರಸರು ಆಶ್ರಯ ನೀಡಿದರು. ಕುಂಡೋದರಿ, ಮಾಳಸಾದೇವಿ ರವಳನಾಥ ರವಳನಾಥ ಮುಂತಾದ ಹೆಸರಿನ ಗುಡಿಗಾರರ ಕುಲದೇವರುಗಳ ದೇವಸ್ಥಾನಗಳು ಇಂದಿಗೂ ಗೋವಾದಲ್ಲಿರುವುದು ಕಂಡುಬರುತ್ತವೆ[೬].

ಇನ್ನು ಉತ್ತರ ಕರ್ನಾಟಕದ ಬಾಗಲಕೋಟೆ ಜಿಲ್ಲೆಯ ಬಾದಾಮಿ, ಹೊಳೆ ಆಲೂರು, ಸುಳ್ಳ ಮುಧೋಳ ತಾಲೂಕಿನ ಲೋಕಾಪುರ, ಜಮಖಂಡಿ ತಾಲೂಕಿನ ತೇರದಾಳ, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ, ಸಿಂದಗಿ, ತಾಳಿಕೋಟಿ, ಗದಗ ಜಿಲ್ಲೆಯ ಶಿರಹಟ್ಟಿ, ಬೆಳಗಾಂವ ಜಿಲ್ಲೆಯ ಬೈಲಹೊಂಗಲ, ಮುರಗೋಡ, ಗೋಕಾಕ, ಹುಕ್ಕೇರಿ, ರಾಯಚೂರ ಜಿಲ್ಲೆಯ ದೇವದುರ್ಗ, ಅಂಕಲಿಮಠ, ಗುಡಗುಂಟಿ, ಬೀದರ ಜಿಲ್ಲೆಯ ಚಿಂಚೋಳಿ, ಹುಮನಾಬಾದ, ಗುಲಬರ್ಗಾ ಜಿಲ್ಲೆಯ ಕುಕನೂರು, ಯಲಬುರ್ಗಾ ಹೀಗೆ ಇನ್ನೂ ಹಲವಾರು ಪ್ರದೇಶಗಳಲ್ಲಿ ವಿಶ್ವಕರ್ಮ ಜನಾಂಗದವರು ಮರಗೆತ್ತನೆಯ ಕೆಲಸ ಹಾಗೂ ರಥಶಿಲ್ಪಗಳನ್ನು ತಯಾರಿಸುವುದನ್ನೇ ತಮ್ಮ ಉದ್ಯೋಗವನ್ನಾಗಿಸಿಕೊಂಡಿರುವುದು ಕಂಡುಬರುತ್ತದೆ.

ರಥಶಿಲ್ಪಿಗಳು ಕರ್ನಾಟಕದ ವಿವಿಧ ಪ್ರದೇಶಗಳಲ್ಲಿ ವಿವಿಧ ಮಾಧ್ಯಮಗಳಲ್ಲಿ ರಥಗಳನ್ನು ನಿರ್ಮಾಣ ಮಾಡಿರುವುದು ಕಂಡುಬರುತ್ತದೆ. ಆದ್ದರಿಂದ, ಮಾಧ್ಯಮಗಳ ಹಿನ್ನೆಲೆಯಲ್ಲಿ ರಥಶಿಲ್ಪ ತಯಾರಕರನ್ನು ನಾಲ್ಕು ವಿಧಗಳಲ್ಲಿ ವಿಂಗಡಿಸಬಹುದು.

I. ಕಾಷ್ಠ ಮಾಧ್ಯಮದ ರಥಶಿಲ್ಪಿಗಳು.

II. ಲೋಹ ಮಾಧ್ಯಮದ ರಥಶಿಲ್ಪಿಗಳು.

III. ಸಂಕೀರ್ಣ ಮಾಧ್ಯಮದ ರಥಶಿಲ್ಪಿಗಳು.


IV. ಶಿಲಾ ಮಾಧ್ಯಮದ ರಥಶಿಲ್ಪಿಗಳು.

---

೫. '' ಕರಕುಶಲ ಕಲೆಗಳು'' ಸಂಪುಟ ೨, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು, ಪು.ಸಂ. ೧೫, ೧೯೮೫.

೬. '' ಗುಡಿಗಾರರ ಕಲೆ ಹಾಗೂ ಬದುಕು '' ಎಸ್.ಕೆ. ಮಹಾತೇಂಶ, ಕನ್ನಡ ಪ್ರಭ, ಮಾರ್ಚ ೪, ೧೯೯೧

ರಥಶಿಲ್ಪ ಕಲಾವಿದರು ಮತ್ತು ಪೋಷಕರು



ಈ ನಾಲ್ಕು ವಿಧದ ರಥಶಿಲ್ಪಗಾರರು ''ರಾಜಾಶ್ರಯ ಹಾಗೂ ಕಲೆ'' ಪ್ರವೀಣ. ಬಿ. ತರಂಗ ಸಂಪುಟ ೧೪ ಸಂಚಿಕೆ ಜನೇವರಿ ೧೦, ೧೯೯೯.

ರಚಿಸಿರುವ ಕಲಾತ್ಮಕ ರಥಗಳು ಹಾಗೂ ಅವರು ಪಡೆದಿರುವ ಪ್ರಶಸ್ತಿ ಪುರಸ್ಕಾರಗಳನ್ನು ವಿವರವಾಗಿ ತಿಳಿಯುವಾ.

I. ಕಾಷ್ಠ ಮಾಧ್ಯಮದ ರಥಶಿಲ್ಪಿಗಳು :

ಕಾಷ್ಠ ಮಾಧ್ಯಮದ ರಥಶಿಲ್ಪಿಗಳಲ್ಲಿ ,

ಅ. ಗಡ್ಡಿ ರಥಶಿಲ್ಪಿಗಳು

ಬ. ಅಂಕಣ ರಥಶಿಲ್ಪಿಗಳು

ಎಂದು ಎರಡು ವಿಧದ ತಯಾರಕರನ್ನು ಕಾಣಬಹುದು. ಈ ಎರಡೂ ವಿಧದ ರಥ ಶಿಲ್ಪಿಗಳ ಬಗ್ಗೆ ವಿವರವಾಗಿ ಅಭ್ಯಾಸ ಮಾಡೋಣ.

ಅ. ಗಡ್ಡಿ ರಥಶಿಲ್ಪಿಗಳು : ಬಾಗಲಕೋಟೆ ಜಿಲ್ಲೆಯ ಬದಾಮಿ ತಾಲೂಕಿನ ಸುಳ್ಳ ಗ್ರಾಮದ ಶ್ರೀ ಮಳಿಯಪ್ಪ ಬಡಿಗೇರ ಅವರು ಉತ್ತಮ ರಥಶಿಲ್ಪಿಗಳಾಗ್ದಿರು[೭]. ಇವರು ನಿರ್ಮಿಸಿದ ಅನೇಕ ರಥಗಳು ಕಲಾ ಪೌಢಿಮೆಗೆ ನಿದರ್ಶನವಾಗಿವೆ. ಇವರು ಸುಮಾರು ಮೂವತ್ತೈದಕ್ಕೂ ಹೆಚ್ಚಿನ ರಥಗಳನ್ನು ನಿರ್ಮಿಸಿರುವರು ಸುಮಾರು ಹದಿನೈದು ಅಡಿಯಿಂದ ಇಪ್ಪತ್ತೈದು ಅಡಿ ಎತ್ತರದ ರಥಗಳನ್ನು ನಿರ್ಮಿಸುವ ಇವರು ತಮ್ಮ ಮಕ್ಕಳಿಗೂ ಸಹ ರಥ ನಿರ್ಮಾಣ ಮಾಡುವ ತರಬೇತಿಯನ್ನು ನೀಡಿ, ಉತ್ತಮ ರಥಶಿಲ್ಪಿಗಳನ್ನಾಗಿಸಿದವರು. ಬೈಲಹೊಂಗಲ ತಾಲೂಕಿನ ಇಂಚಲದ ಶಿವಯೋಗೇಶ್ವರ ಸಂಸ್ಥಾನ ಮಠದ ರಥವು ಇವರ ಕಲಾ ಪ್ರತಿಭೆಯನ್ನು ಹೊರಸೂಸುತ್ತಿದೆ. ಇಂಥಹ ಅನೇಕ ರಥಗಳಾದ ಗೋಕಾಕ ತಾಲೂಕಿನ ಕುರ್ನಿಯ ಬಸವೇಶ್ವರ ರಥ, ಬೆಳಗಾಂವ ಜಿಲ್ಲೆಯ ಹುಕ್ಕೇರಿ ತಾಲೂಕಿನ ನೀರ್ಲಿಯ ಆಂಜನೇಯನ ರಥ, ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿಯ ದೇವಾಪುರದ ಶ್ರೀ ಸಿದ್ಧೇಶ್ವರ ದೇವಸ್ಥಾನದ ರಥ ಹೀಗೆ ಅನೇಕ ರಥಗಳನ್ನು ತಯಾರಿಸಿರುವರು.

ಇವರ ಮಗ ಮಲ್ಲಪ್ಪಾ ಜಿ. ಬಡಿಗೇರ ಇವರು ತಂದೆಯಿಂಥ ಪ್ರಭಾವಿತರಾಗಿ ರಥ ನಿರ್ಮಾಣ ಮಾಡುವುದನ್ನೇ ತಮ್ಮ ಉದ್ಯೋಗವನ್ನಾಗಿಸಿಕೊಂಡಿರುವರು. ಇವರಿಗೆ ಇಬ್ಬರು ಗಂಡುಮಕ್ಕಳಿದ್ದು, ಅವರಿಗೂ ಸಹ ರಥ ತಯಾರಿಕೆಯ ತರಬೇತಿಯನ್ನು ನೀಡುತ್ತಿದ್ದಾರೆ. ಈಗಾಗಲೇ ಅವರೂ ಸಹ ರಥ ನಿರ್ಮಾಣ ಕಾರ್ಯದಲ್ಲಿ ಸಹಾಯಕ ಶಿಲ್ಪಿಗಳಾಗಿ ಅನುಭವ ಪಡೆದವರು. ಇನ್ನು ಕೆಲವೇ ವರ್ಷಗಳಲ್ಲಿ ಅವರೂ ಸಹ ಉತ್ತಮ ರಥಶಿಲ್ಪಿಗಳಾಗುವುದರಲ್ಲಿ ಸಂದೇಹವಿಲ್ಲ. ಮಲ್ಲಪ್ಪಾ. ಬಡಿಗೇರ ಇವರು ಸುಮಾರು ಮೂವತ್ತು ವರ್ಷಗಳಿಂದ ರಥ ನಿರ್ಮಾಣ ಕಾರ್ಯವನ್ನು ಕೈಗೊಂಡು, ಈಗಾಗಲೆ ಸುಮಾರು ಇಪ್ಪತ್ತೈದಕ್ಕೂ ಹೆಚ್ಚಿನ ಸಂಖ್ಯೆಯ ರಥಗಳನ್ನು ನಿರ್ಮಿಸಿರುವರು. ಇವರು ಸುಮಾರು ಹದಿನೈದು ಅಡಿಯಿಂದ ಮೂವತ್ತು ಅಡಿಗಳವರೆಗೆ ರಥ ನಿರ್ಮಾಣ ಮಾಡುವ ಶಿಲ್ಪಕಲಾ ನಿಪುಣರಾಗಿದ್ದಾರೆ[೮].

ಬಾಗಲಕೋಟೆ ಜಿಲ್ಲೆಯ ಮುಚಖಂಡಿಯ ವೀರಭದ್ರೇಶ್ವರ ರಥ, ಕೇಸರಕೊಪ್ಪದ ಅಡವಿಸಿದ್ಧೇಶ್ವರ ರಥ, ಪಾದನಕಟ್ಟಿಯ ರಂಗನಾಥನ ರಥ, ಸಿದ್ಧನಕೊಳ್ಳದ ಸಿದ್ಧೇಶ್ವರ ರಥ, ಕೊಪ್ಪಳದ

---

೭. '' ದೇಗುಲ ರಥ ಶಿಲ್ಪ '' ಧ್ರುವರಾಜ ನಾ. ಗದಗಕರ, ಪು.ಸಂ. ೨೮, ೧೯೯೯.
೮. ''ಮರಗೆತ್ತನೆಯ ಕಲೆ'' ಆರ್. ಸಂತೋಷಕುಮಾರ, ಕಸ್ತೂರಿ, ಸಪ್ಟಂಬರ ೧೯೯೦

ಗವಿಸಿದ್ಧೇಶ್ವರ ರಥ, ಹುಲುಗಿಯ ಹುಲಿಗೆಮ್ಮ ದೇವಸ್ಥಾನದ ರಥ-ಹೀಗೆ ಹಲವಾರು ರಥಗಳು ಮಲ್ಲಪ್ಪನವರ ಕಲಾಪ್ರತಿಭೆಗೆ ಸಾಕ್ಷಿಯಾಗಿವೆ. ಇವರ ಊರು ಮೂಲತಃ ಬದಾಮಿ ತಾಲೂಕಿನ ಸುಳ್ಳ ಗ್ರಾಮ. ಆದರೆ ಈಗ ಇವರು ಕೊಪ್ಪಳದಲ್ಲಿ ತಮ್ಮ ಸ್ವಂತ ಮನೆಯ ಮುಂದೆ ರಥಶಿಲ್ಪಗಳನ್ನು ತಯಾರಿಸಲು ಒಂದು ಪ್ರತ್ಯೇಕ ಮನೆ ಮಾಡಿಕೊಂಡು ಅನೇಕ ಸಹಾಯಕ ಶಿಲ್ಪಿಗಳ ಜೊತೆಗೆ ರಥನಿರ್ಮಾಣ ಮಾಡುವುದರಲ್ಲಿ ನಿರತರಾಗಿರುವರು. ಅನೇಕ ಶಿಲ್ಪಕಲಾ ವಿದ್ಯಾರ್ಥಿಗಳಿಗೆ ತರಬೇತಿಯನ್ನು ನೀಡುವ ಇವರು ಆ ಭಾಗದ ಪ್ರಸಿದ್ಧ ರಥಶಿಲ್ಪಿಗಳೆಂದು ಹೇಳಬಹುದು.

ಇವರ ಸಹೋದರರಾದ ಎಸ್. ಎಂ. ಬಡಿಗೇರ ಅವರೂ ಸಹ ಶ್ರೇಷ್ಠ ರಥಶಿಲ್ಪಿಗಳು. ಇವರು ರಥಶಿಲ್ಪಶಾಸ್ತ್ರವನ್ನು ಅನೇಕ ಶಾಸ್ತ್ರಗ್ರಂಥಗಳಿಂದ ತಿಳಿದುಕೊಂಡವರು. ಅಲ್ಲದೇ ಶಿಲ್ಪಕಲೆಯ ಗಹನವಾದ ವಿಷಯಗಳನ್ನು ಅತೀ ಸರಳವಾಗಿ ತಿಳಿಸಿಕೊಡಬಲ್ಲವರು. ಇವರು ಈಗ ಬೆಂಗಳೂರಿನ ಕಾಮಾಕ್ಷಿಪಾಳ್ಯದಲ್ಲಿ ಒಂದು ರಥಶಿಲ್ಪ ತರಬೇತಿ ಕೇಂದ್ರವನ್ನು ತೆರೆದಿರುವರು. ಹಲವಾರು ವಿದ್ಯಾರ್ಥಿಗಳಿಗೆ ಊಟ ಹಾಗೂ ವಸತಿ ಸೌಕರ್ಯವನ್ನು ಕಲ್ಪಿಸಿ, ರಥಶಿಲ್ಪ ತಯಾರಿಕೆಯ ತರಬೇತಿಯನ್ನು ನೀಡುತ್ತಿದ್ದಾರೆ. ಶಂಕರೆಪ್ಪಾ ಬಡಿಗೇರ. ಇವರು ರಥಶಿಲ್ಪಕಲೆಯಲ್ಲಿ ನಿಷ್ಣಾತರಾಗಿದ್ದು, ಅವರಿಗೆ ರಾಜ್ಯ ಪ್ರಶಸ್ತಿ ಕೂಡ ಲಭಿಸಿದೆ. ಇವರು ಸುಮಾರು ಇಪ್ಪತ್ತಕ್ಕೂ ಹೆಚ್ಚಿನ ಸಂಖ್ಯೆಯ ರಥಗಳನ್ನು ತಯಾರಿಸಿರುವರು. ಇವರ ಸಹೋದರರಾದ ಮಲ್ಲಪ್ಪ ಬಡಿಗೇರ. ಅವರ ಜೊತೆಯಲ್ಲಿ ಶ್ರೀಶೈಲದ ಮಲ್ಲಿಕಾರ್ಜುನ ದೇವಸ್ಥಾನದ ಬೃಹತ್ ರಥವನ್ನು ೧೯೬೬ ರಲ್ಲಿ ನಿರ್ಮಿಸಿರುವರು. ಇದೇ ತೆರನಾದ ಸುಮಾರು ಇಪ್ಪತ್ತು ಅಡಿಗಳಷ್ಟು ಎತ್ತರದ ಗಡ್ಡಿ ರಥವನ್ನು ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಕೇಸರಕೊಪ್ಪದ ಬಿಸಿಲುಸಿದ್ದೇಶ್ವರ ದೇವಸ್ಥಾನಕ್ಕೆ ನಿರ್ಮಿಸಿ ಕೊಟ್ಟಿರುವರು. ಇವರ ಮನೆತನದಲ್ಲಿ ವಂಶಪರಂಪರಾಗತವಾಗಿ ರಥ ನಿರ್ಮಾಣ ಕಾರ್ಯವು ನಡೆದು ಬಂದದ್ದರಿಂದ ಅನೇಕ ರಥಗಳ ತಯಾರಿಕೆಯ ಅನುಭವವುಳ್ಳವರಾಗಿರುವರು[೯].

ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ಆಲಗುಂಡಿಯಲ್ಲಿರುವ ಮಾನಪ್ಪ ಬಡಿಗೇರ. ಅವರು ಅನೇಕ ರಥಗಳನ್ನು ನಿರ್ಮಿಸಿರುವರು. ಸುಮಾರು ಇಪ್ಪತ್ತು ವರ್ಷಗಳಿಂದ ರಥ ನಿರ್ಮಾಣ ಕಾರ್ಯವನ್ನು ಮಾಡುತ್ತಿದ್ದಾರೆ. ಸುಮಾರು ಎಂಟರಿಂದ ಹತ್ತು ರಥಗಳನ್ನು ತಯಾರಿಸಿರುವ ಇವರಿಗೆ ಒಬ್ಬ ಮಗನಿದ್ದು, ಅವನಿಗೂ ಸಹ ರಥ ತಯಾರಿಕೆಯ ಕೆಲಸವನ್ನು ಹೇಳಿಕೊಟ್ಟಿದ್ದಾರೆ. ಬೀಳಗಿ ತಾಲೂಕಿನ ಆಲಗುಂಡಿಯ ಸಿದ್ಧೇಶ್ವರ ರಥ, ಕುಂದರಗಿಯ ಹನುಮಾನ ದೇವರ ರಥ, ಬದಾಮಿ ತಾಲೂಕಿನ ನೀಲಗುಂದದ ಬನಶಂಕರಿ ರಥ, ನಾಗನಾಪುರದ ಬಸವೇಶ್ವರ ರಥ, ಗಡದ ಜಿಲ್ಲೆ ಚಿಂತೂರ ಲಕ್ಷ್ಮೀ ದೇವಸ್ಥಾನದ ರಥ, ನವಲಗುಂದದ ಬೆಳವಟನಿಯ ರಾಘವೇಂದ್ರ ಸ್ವಾಮಿ ರಥ-ಹೀಗೆ ಹಲವಾರು ರಥಗಳನ್ನು ನಿರ್ಮಿಸಿರುವರು.

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಸಾವಳಗಿಯಲ್ಲಿ ಬಿ. ಕೆ. ಬಡಿಗೇರ. ಅವರು ಉತ್ತಮ ರಥಶಿಲ್ಪಿಗಳಾಗಿದ್ದು ಸುಮಾರು ಹತ್ತರಿಂದ ಹನ್ನೆರಡು ರಥಗಳನ್ನು ತಯಾರಿಸಿರುವರು. ಇವರು ರಥಗಳಲ್ಲದೆ ಬಾಗಿಲು, ಕಂಬಗಳು, ಕಮಾನುಗಳು ಹೀಗೆ ವಿವಿಧ ರೀತಿಯ ಕಾಷ್ಠ ಕಲೆಯ ಪರಿಣತರು. ತಮ್ಮ ಮನೆಯ ಮುಂದೆ ಎಲ್ಲ ರೀತಿಯ ರಥಶಿಲ್ಪ ತಯಾರು ಮಾಢುವ ಅನೇಕ ಸಾಮಗ್ರಿಗಳೊಂದಿಗೆ ಸಿದ್ಧವಾದ ಪ್ರತ್ಯೇಕ ಮನೆಯನ್ನು ಕಟ್ಟಿ ಅನೇಕ ಕೆಲಸಗಾರರ ಜೊತೆ ಎಡೆಬಿಡದೆ ಕೆಲಸ ಮಾಡುವ ಇವರು ಆ ಭಾಗದಲ್ಲಿ ವಿವಿಧ ದೇವಸ್ಥಾನಗಳಿಗೆ ಬೇರೆ ಬೇರೆ ವಿನ್ಯಾಸಗಳುಳ್ಳ ರಥಗಳನ್ನು

---

೯. " ಸಂದರ್ಶನ-ಮನೋಹರ ಬಡಿಗೇರ" ರಥ ಶಿಲ್ಪ ಕೇಂದ್ರ, ಬೆಂಗಳೂರು, ಜೂನ್ ೭, ೨೦೦೨

ಮಾಡಿಕೊಟ್ಟಿರುವರು.

ಸಾವಳಗಿಯ ಶಿವಲಿಂಗೇಶ್ವರ ಮಠದ ರಥ. ಚಿಮ್ಮಲಗಿಯ ಬನಶಂಕರಿ ದೇವಿಯ ರಥ ಹಾಗೂ ಹುನಗುಂದ ತಾಲೂಕಿನ ಚೌಡಾಪುರದ ಪ್ರಭುಸ್ವಾಮಿ ದೇವಸ್ಥಾನದ ರಥಗಳು ಇವರ ಕಲಾಭಿವ್ಯಕ್ತಿಗೆ ಸಾಕ್ಷಿಗಳಾಗಿ ನಿಂತಿವೆ[೧೦].

ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಶಂಕರೆಪ್ಪಾ ಕಾಳಪ್ಪಾ ಬಡಿಗೇರ. ಅವರು ತೇರದಾಳದಲ್ಲಿ, ಕಾಷ್ಠ ಮಾಧ್ಯಮದಲ್ಲಿ ಬಾಗಿಲು, ಕಿಂಡಿ, ಮಂಟಪ, ಪಲ್ಲಕ್ಕಿ ಇವುಗಳನ್ನೆಲ್ಲ ಮಾಡುವುದರೊಂದಿಗೆ ಮೂರು ನಾಲ್ಕು ರಥಗಳನ್ನು ನಿರ್ಮಾಣ ಮಾಡಿರುವರು. ಬಡಿಗ ವೃತ್ತಿಯು ಇವರ ಕುಲ ಕಸುಬಾಗಿದ್ದು ಈಗ ಇವರ ಮೂರು ಜನ ಮಕ್ಕಳಿಗೂ ಸಹ ಈ ವೃತ್ತಿಯ ತಿಳುವಳಿಕೆಯನ್ನು ನೀಡಿರುವರು. ಡಂಕನಾಳದ ಬಸವೇಶ್ವರ ರಥ, ಹಿಪ್ಪರಗಿಯ ಸಿದ್ಧಲಿಂಗಸ್ವಾಮಿ ರಥ, ನಾಗನೂರದ ನೀಲಕಂಠೇಶ್ವರ ರಥ, ಬಿಜಾಪುರ ಜಿಲ್ಲೆಯ ಗುಣದಾಳದ ಗಣಪತಿ ದೇವಸ್ಥಾನದ ರಥಗಳು ಇವರ ಮಾರ್ಗದರ್ಶನದಲ್ಲೇ ನಿರ್ಮಾಣವಾದವುಗಳು.

ಇದೇ ಜಿಲ್ಲೆಯ ಮುಧೋಳ ತಾಲೂಕಿನ ಹೆಬ್ಬಾಳದ ಮೌನೇಶ ರಾಜಪ್ಪ ಶಿಲ್ಪಿ. ಎಂಬುವರು ರಥ ನಿರ್ಮಾಣಕಾರರಾಗಿದ್ದಾರೆ. ಇವರು ಸಣ್ಣ ಪ್ರಮಾಣದ, ಅಂದರೆ ದೇವಸ್ಥಾನದ ಒಳಾಂಗಣದಲ್ಲಿ ಎಳೆಯಬಹುದಾದಂತಹ, ಚಿಕ್ಕ ಗಡ್ಡಿ ತೇರುಗಳನ್ನು ನಿರ್ಮಿಸಿರುವರು. ಇವರ ತಂದೆಯರಾದಂತಹ ಕಾಳಪ್ಪ. ಪರಪ್ಪ ಶಿಲ್ಪಿ ಇವರು ಉತ್ತಮ ರಥಶಿಲ್ಪಿಗಳಾಗಿರುವುದರಿಂದ ಇವರಿಗೂ ಸಹ ರಥ ನಿರ್ಮಾಣ ಕಲೆಯು ಸುಲಭವಾಗಿ ಒಲಿದು ಬಂದಿದೆ. ಇವರು ಬೀಳಗಿ ತಾಲೂಕು ತೋಳಮಟ್ಟಿಯ ಹನುಮಾನ ಮಂದಿರದ ರಥ, ಬಾಗಲಕೋಟೆ ತಾಲೂಕಿನ ಚಿಕ್ಕ ಮ್ಯಾಗೇರಿ ವೀರಾಂಜನೇಯ ದೇವಸ್ಥಾನದ ರಥ ಹಾಗೂ ಜಮಖಂಡಿ ತಾಲೂಕು ಕವಟಗಿಯ ಮಲ್ಲಿಕಾರ್ಜುನ ದೇವಸ್ಥಾನದ ರಥ ಹೀಗೆ ಸುಮಾರು ನಾಲ್ಕೈದು ಚಿಕ್ಕ ರಥಗಳನ್ನು ನಿರ್ಮಿಸಿರುವರು. ಇವರು ಸುಮಾರು ಹತ್ತು ವರ್ಷಗಳಿಂದ ರಥ ನಿರ್ಮಾಣ ಮಾಡುವ ಕೆಲಸದಲ್ಲಿ ತೊಡಗಿರುವರು.

ಧಾರವಾಡದ ಹಾವೇರಿ ಪೇಟೆಯಲ್ಲಿ ವಾಸವಾಗಿರುವ ಮಾನಪ್ಪಾ ಈಶ್ವರಪ್ಪ ಬಡಿಗೇರ. ಅವರು ಮೂವತ್ತು ವರ್ಷಗಳಿಂದ ರಥ ನಿರ್ಮಾಣ ಕಾರ್ಯದಲ್ಲಿ ತೊಡಗಿ ಹಲವಾರು ದೇವಸ್ಥಾನಗಳಿಗೆ ರಥಗಳನ್ನು ನಿರ್ಮಿಸಿಕೊಟ್ಟಿರುವರು. ಇವರು ಆಧುನಿಕ ಯಂತ್ರಗಳನ್ನು ಬಳಸದೆ ರಥ ನಿರ್ಮಿಸುವವರಾಗಿದ್ದಾರೆ. ಇತ್ತೀಚೆಗೆ ೧೯೯೭ ರಲ್ಲಿ ಇವರು ನಿರ್ಮಿಸಿದ ಧಾರವಾಡದ ಹೊಸ ಯಲ್ಲಾಪುರದ ಶ್ರೀ ವೆಂಕಟೇಶ್ವರ ದೇವಸ್ಥಾನದ ರಥವು ಆಕರ್ಷಣೀಯವಾಗಿದ್ದು, ಸುಮಾರು ಹದಿನಾರು ಅಡಿ ಎತ್ತರವನ್ನು ಹೊಂದಿದೆ. ಇವರು ಮೂಲತಃ ಅಮ್ಮಿನಬಾವಿಯವರು. ಇವರು ವಂಶಪರಂಪರಾಗತವಾಗಿ ಕಾಷ್ಠ ಮಾಧ್ಯಮದಲ್ಲಿ ಕೆಲಸ ಮಾಡುತ್ತ ಬಂದವರು[೧೧]. ಧಾರವಾಡ ಜಿಲ್ಲೆ ಕಲಘಟಗಿ ತಾಲೂಕಿನ ತಂಬೂರಿನ ಗವಿಸಿದ್ಧೇಶ್ವರ ರಥ, ಶಿಗ್ಗಾಂವ ತಾಲೂಕಿನ ಬೆಳಗಲಿಯ ನಾರಾಯಣಸ್ವಾಮಿ ರಥ, ಕುಂದಗೋಳ ತಾಲೂಕಿನ ಹೊಸಕಟ್ಟಿಯ ಮಹಾಂತೇಶ್ವರ ದೇವಸ್ಥಾನದ ರಥ-ಇಂತಹ ಇನ್ನೂ ಹಲವಾರು ಸುಂದರ ಹಾಗೂ ಕಲಾತ್ಮಕ ರಥಗಳನ್ನು ನಿರ್ಮಾಣ ಮಾಡಿರುವರು.

ಧಾರವಾಡದ ಇನ್ನೋರ್ವ ಯುವ ಕಲಾವಿದ ಶ್ರೀ ರಾಜು ಬಾತಖಂಡೆಯವರು ಐದು ಅಡಿ ಚಿಕ್ಕ ರಥದಿಂದ ಇಪ್ಪತ್ತೈದು ಅಡಿ ಎತ್ತರದವರೆಗೂ ರಥಗಳನ್ನು ನಿರ್ಮಿಸಿರುವರು. ಹೆಚ್ಚಾಗಿ ಅಷ್ಟಮ

---

೧೦. '' ಸಂದರ್ಶನ-ಬಿ.ಕೆ. ಬಡಿಗೇರ'' ರಥ ಶಿಲ್ಪಿ, ಸಾವಳಗಿ, ಜಮಖಂಡಿ ತಾಲೂಕು, ಎಪ್ರಿಲ್ ೨ , ೨೦೦೨

೧೧. '' ದೇಗುಲ ರಥ ಶಿಲ್ಪ '' ದ್ರುವರಾಜ ನಾ. ಗದಗಕರ, ಪು.ಸಂ. ೨೮,೧೯೯೯.

ಶೈಲಿಯನ್ನು ಹೊಂದಿರುವ ಇವರು ನಿರ್ಮಿಸಿರುವ ರಥಗಳು ನಾಡಿನ ಹಲವಾರು ಜಿಲ್ಲೆಗಳಲ್ಲಿ ತಮ್ಮ ಸೌಂದರ್ಯವನ್ನು ಹೊರಸೂಸುತ್ತಿವೆ. ಮಹಾರಾಷ್ಟ್ರದ ನಾಂದೇಡು, ಆಂಧ್ರ, ತುಮಕೂರು, ಗೋವಾ, ಗುಲಬರ್ಗಾ ಜಿಲ್ಲೆಯ ಯಾದಗಿರಿ, ನಿದ್ಧಾಪೂರ, ದಾಂಡೇಲಿ, ಹುಬ್ಬಳ್ಳಿ, ಗದಗ ಹೀಗೆ ಹತ್ತು ಹಲವಾರು ಪ್ರದೇಶಗಳ ದೇವಸ್ಥಾನಗಳಲ್ಲಿನ ರಥಗಳು ಇವರ ಕಲಾ ಪ್ರತಿಭೆಗೆ ಸಾಕ್ಷಿಯಾಗಿ ನಿಂತಿವೆ. ಇವರು ಅನೇಕ ಸಹಾಯಕ ಶಿಲ್ಪಿಗಳೊಂದಿಗೆ ರಥಗಳನ್ನು ನಿರ್ಮಾಣ ಮಾಡಲು ಒಂದು ಸ್ವಂತ ಕಾರ್ಯಾಗಾರವನ್ನು ನಿರ್ಮಿಸಿರುವರು[೨].

ಧಾರವಾಡ ಜಿಲ್ಲೆಯ ಕುಂದಗೋಳ ತಾಲೂಕಿನ ಮತ್ತಿಗಟ್ಟಿಯ ನಿಂಬಣ್ಣಾ ಕಮ್ಮಾರ. ಇವರು ಸುಮಾರು ಮೂವತ್ತು ವರ್ಷಗಳಿಂದ ರಥನಿರ್ಮಾಣ ಕಾರ್ಯದಲ್ಲಿ ನಿರತರಾದವರು. ಇವರು ಹಲವಾರು ಕಾಷ್ಠಶಿಲ್ಪಗಳನ್ನು ಮಾಡುವುದರೊಂದಿಗೆ ಸುಮಾರು ಹದಿನೈದು ರಥಗಳನ್ನು ನಿರ್ಮಿಸಿರುವರು. ಇವುಗಳಲ್ಲಿ ಕೆಲವು ಮಾತ್ರ ದೊಡ್ಡ ರಥಗಳು. ಇನ್ನುಳಿದವುಗಳು ಸುಮಾರು ಐದು ಅಥವಾ ಆರು ಅಡಿ ಎತ್ತರದವು. ದೇವಸ್ಥಾನದ ಒಳಾಂಗಣದಲ್ಲಿ ಎಳೆಯುವಂತಹ ರಥಗಳು. ಇವರು ನಿರ್ಮಿಸಿದ ರಥಗಳಲ್ಲಿ ಮತ್ತಿಗಟ್ಟಿಯ ಚನ್ನಬಸವೇಶ್ವರರ ರಥವು ತುಂಬಾ ಸುಂದರವಾಗಿದೆ. ನವಲಗುಂದ ತಾಲೂಕಿನ ಬಸಾಪುರದ ಹನುಮಾನ ದೇವಸ್ಥಾನದ ರಥ, ಹಾವೇರಿ ಜಿಲ್ಲೆಯ ಸುತ್ತಾನಪೂರದ ಶ್ರೀ ಸೋಮೇಶ್ವರ ರಥಗಳು ಗಾತ್ರದಲ್ಲಿ ದೊಡ್ಡದಾಗಿದ್ದು, ಕಲಾತ್ಮಕವಾಗಿವೆ.

ಧಾರವಾಡ ಜಿಲ್ಲೆಯ ಕಲಘಟಗಿ ತಾಲೂಕಿನ ಬೆನ್ನೂರದಲ್ಲಿ ಮೌನೇಶ ಕಾಳಪ್ಪ ಬಡಿಗೇರ. ಎಂಬ ರಥಶಿಲ್ಪಿಗಳು ಸುಮಾರು ಏಳರಿಂದ ಎಂಟು ರಥಗಳನ್ನು ನಿರ್ಮಿಸಿದವರು. ಷಡ್ಭುಜ ಹಾಗೂ ಅಷ್ಟಭುಜಗಳ ವಿನ್ಯಾಸಗಳಲ್ಲಿರುವ ರಥಗಳು ಸುಮಾರು ನಾಲ್ಕು ಅಡಿಯಿಂದ ಹದಿನೆಂಟು ಅಡಿಗಳವರೆಗೆ ಎತ್ತರವಾಗಿ ನಿರ್ಮಾಣಗೊಂಡಿವೆ. ಬೆಂಡಿಗೇರಿಯ ನೀಲಕಂಠ ದೇವಸ್ಥಾನದ ರಥ, ಬೆನಕನಹಳ್ಳಿಯ ನಂದೀಶನ ರಥ ಮತ್ತು ನಾಗರಹಳ್ಳಿಯ ಪ್ರಭು ದೇವಸ್ವಾಮಿಯ ರಥಗಳು ಇವರ ಹಸ್ತದಿಂದ ನಿರ್ಮಾಣಗೊಂಡಿವೆ.

ಗದಗ ಜಿಲ್ಲೆಯ ರೋಣ ತಾಲೂಕಿನ ಅಬ್ಬಿಗೇರಿಯ ಎಚ್ಚರಪ್ಪಾ ಟಂಕಸಾಲಿ. ಇವರು ಬಡಿಗ ವೃತ್ತಿಯನ್ನು ಮಾಡುತ್ತಿದ್ದು , ಸುಮಾರು ಮೂರು ನಾಲ್ಕು ರಥಗಳನ್ನು ತಯಾರಿಸಿರುವರು. ಸುಮಾರು ಹದಿನೈದು ವರ್ಷಗಳಿಂದ ರಥ ನಿರ್ಮಾಣ ಕಾರ್ಯವನ್ನು ಕೈಗೊಂಡವರು. ಬಹಳ ಎತ್ತರವಾದ ರಥಗಳನ್ನು ನಿರ್ಮಿಸಿಲ್ಲವಾದರೂ, ಇವರು ರಥಗಳಲ್ಲಿ ಸೃಷ್ಟಿಸಿರುವ ಶಿಲ್ಪಗಳು ತುಂಬಾ ಸುಂದರವಾಗಿವೆ. ಕೊಕ್ಕರಗುಂಡಿಯ ಬಸವೇಶ್ವರ ರಥ ಮತ್ತು ಅಕ್ಕಿಗುಂಡದ ವೀರಭದ್ರ ದೇವಸ್ಥಾನದ ರಥಗಳು ಚಿಕ್ಕವಾಗಿದ್ದರೂ ಕಲಾತ್ಮಕವಾಗಿವೆ.

ಇದೇ ಜಿಲ್ಲೆಯ ಮಾರುತಿ ಕಂಬಾರ. ಎಂಬ ರಥಶಿಲ್ಪಿಗಳು ಶಿರಹಟ್ಟಿ ತಾಲೂಕು ತಾಳಿಕೊಪ್ಪದಲ್ಲಿ ತಮ್ಮ ಸ್ವಂತ ಮನೆಯ ಜಾಗದಲ್ಲಿ ಒಂದು ರಥ ತಯಾರಿಕಾ ಕಾರ್ಯಾಗಾರವನ್ನು ಮಾಡಿ ಅನೇಕ ಸಹಾಯಕ ಶಿಲ್ಪಿಗಳೊಡನೆ ಐದು ಗಡ್ಡಿ ರಥಗಳನ್ನು ನಿರ್ಮಿಸಿರುವರು ಇವರು ಸಹ ಚಿಕ್ಕದಾದ ರಥಗಳನ್ನು ತಯಾರಿಸುವರು. ಇವರು ತಯಾರಿಸಿದ ರಥಗಳಲ್ಲಿ ನವಲಗುಂದ ತಾಲೂಕಿನ ಬಸಾಪುರದ ಮಹೇಶ್ವರನ ರಥ ಹಾಗೂ ಮುದಗುಣಕಿಯ ಹನುಮದೇವರ ರಥಗಳು ಎತ್ತರವಾದವುಗಳು ಹಾಗೂ ಕಲಾತ್ಮಕವಾದವುಗಳು.

---

೧೨. ''ಶಿಲ್ಪಿರಾಜು ಬಾತಖಂಡೆ (ಲೇ)'' ಸಿ. ಎಂ. ಅಂಬಿಗೇರ, ಪ್ರಜಾವಾಣಿ , ಜೂನ್ ೧೪, ೧೯೮೮

ಗದಗ ಜಿಲ್ಲೆ ನರಗುಂದ ತಾಲೂಕಿನ ಶಿರೋಳದ ಬಸವರಾಜ ನಿಂಗಪ್ಪ ಕಮ್ಮಾರ. ತಮ್ಮ ಅತೀ ಕಡಿಮೆ ವಯಸ್ಸಿನಲ್ಲಿ ಕಾಷ್ಠ ಕಲಾ ನಿಪುಣರಾದವರು. ಇವರು ಸುಮಾರು ಆರು ವರ್ಷಗಳಿಂದ ಮರದ ಕೆತ್ತನೆಯ ಕೆಲಸವನ್ನು ಮಾಡುತ್ತಿದ್ದು, ಶಿರಹಟ್ಟಿ ತಾಲೂಕಿನ ದೊಡ್ಡೂರು ಹಾಗೂ ಮುಂಡರಗಿ ತಾಲೂಕಿನ ಡಂಬಳದಲ್ಲಿ ಎರಡು ಸುಂದರವಾದ ಚಿಕ್ಕ ರಥಗಳನ್ನು ಮಾಡಿಕೊಟ್ಟಿರುವರು.

ಕೊಪ್ಪಳ ಜಿಲ್ಲೆಯಲ್ಲಿ ಮಲ್ಲಪ್ಪ ಜಿ. ಬಡಿಗೇರ. ಅವರು ಪ್ರಸಿದ್ಧ ರಥಶಿಲ್ಪಿಗಳು. ಇವರ ಮಾರ್ಗದರ್ಶನದಲ್ಲಿ ಐದು ವರ್ಷಗಳ ಕಾಲ ಸಹಾಯಕ ರಥಶಿಲ್ಪಿಯಾಗಿ ಸೇವೆ ಸಲ್ಲಿಸಿ, ನಂತರ ಸ್ವತಂತ್ರವಾಗಿ ರಥಶಿಲ್ಪಗಳನ್ನು ತಯಾರಿಸತೊಡಗಿದ ಗಣಪತಿ ಬಡಿಗೇರ. ಅವರು ಸುಮಾರು ಮೂರು ಅಥವಾ ನಾಲ್ಕು ರಥಶಿಲ್ಪಗಳನ್ನು ನಿರ್ಮಾಣ ಮಾಡಿರುವರು. ಈ ರಥಗಳು ಸುಮಾರು ಎಂಟು ಅಡಿಯಿಂದ ಹದಿನೆಂಟು ಅಡಿಗಳವರೆಗೆ ಎತ್ತರವನ್ನು ಹೊಂದಿವೆ. ಯಲಬುರ್ಗಾ ತಾಲೂಕಿನ ಸಂಗನಹಳ್ಳಿಯ ಸಂಗಮೇಶ್ವರ ರಥ, ಕುಷ್ಟಗಿ ತಾಲೂಕು ಕಂದಕೂರದ ಕರೆಪ್ಪತಾತನ ರಥ, ಇದೇ ತಾಲೂಕಿನ ಹುಲಿಯಾಪುರದ ಹನುಮರಾಯನ ದೇವಸ್ಥಾನದ ರಥಗಳನ್ನು ಕಲಾತ್ಮಕವಾಗಿ ನಿರ್ಮಿಸಿರುವರು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಶರಣಕುಮಾರ ಗುಡಿಗಾರ. ಇವರು ವಂಶಪರಂಪರಾಗತವಾಗಿ ಕಾಷ್ಠಕಲೆಯನ್ನು ಬೆಳೆಸಿಕೊಂಡು ಬಂದಿರುವರು. ಮೊದಮೊದಲು ಇವರು ಕಲಾತ್ಮಕ ಬಾಗಿಲು, ಕಿಟಕಿಗಳು, ಪಲ್ಲಕ್ಕಿ ಸಿಂಹಾಸನಗಳನ್ನು ಹಾಗೂ ಸುಂದರ ಪ್ರಭಾವಳಿಯ ಪೀಠಗಳನ್ನು ರಚಿಸುತ್ತಿದ್ದರು. ಈಗ ಸುಮಾರು ಇಪ್ಪತ್ತು ವರ್ಷಗಳಿಂದ ರಥಗಳನ್ನು ನಿರ್ಮಿಸುವ ಕಾರ್ಯದಲ್ಲಿ ತೊಡಗಿ, ಸುಮಾರು ಐದಾರು ರಥಗಳನ್ನು ಸುಂದರವಾದ ರೀತಿಯಲ್ಲಿ ನಿರ್ಮಿಸಿರುವರು. ಇವರಿಗೆ ಎರಡು ಜನ ಗಂಡು ಮಕ್ಕಳಿದ್ದು, ಈಗ ಅವರೂ ಸಹ ಇದೇ ಉದ್ಯೋಗದಲ್ಲಿ ತೊಡಗಿರುವರು. ಗಂಗಾವತಿ ತಾಲೂಕು ತಿಪ್ಪನಹಾಳದ ಗದ್ದುಗೆ ಬಸವೇಶ್ವರ ರಥ ಯಲಬುರ್ಗಾ ಜಿಲ್ಲೆಯ ಕುಣಕೇರಿಯ ಬಯಲು ಸಿದ್ದೇಶ್ವರ ರಥಗಳು ಇವರ ಕಲಾಪ್ರೌಢಿಮೆಯನ್ನು ಹೊರಸೂಸುತ್ತಿವೆ.

ಇದೇ ಜಿಲ್ಲೆಯ ಶಂಕರೆಪ್ಪ ಸುರೇಂದ್ರ ವಿಶ್ವಕರ್ಮ. ಇವರು ಯಲಬುರ್ಗಾ ಜಿಲ್ಲೆಯ ಹೊಸಳ್ಳಿಯಲ್ಲಿ ವಾಸವಾಗಿದ್ದು ಇವರು ಮೂಲತಃ ಆಚಾರನರಸಾಪುರದವರು. ಈಗಾಗಲೇ ಸುಮಾರು ಹನ್ನೆರಡು ಗಡ್ಡಿ ರಥಗಳನ್ನು ನಿರ್ಮಿಸಿದ್ದು, ಸಮೀಪದ ಊರುಗಳಲ್ಲಿ ಪ್ರಸಿದ್ದ ಶಿಲ್ಪಿಗಳಾಗಿದ್ದಾರೆ. ಇವರು ಉತ್ತಮವಾದ ಶಿಲ್ಪ ಕಲಾಕೃತಿಗಳನ್ನೂ ಮಾಡುವರು. ಮರಗೆತ್ತನೆಯ ಕೆಲಸದಲ್ಲಿ ತುಂಬಾ ಅನುಭವವುಳ್ಳವರು. ಯಲಬುರ್ಗಾ ತಾಲೂಕಿನ ಹೊಸಳ್ಳಿಯ ನರಸಿಂಹೇಶ್ವರ ರಥ, ಗಂಗಾವತಿ ತಾಲೂಕಿನ ಕಲಕೇರಾದ ಕೋರಿ ಸಿದ್ದೇಶ್ವರ ದೇವಸ್ಥಾನದ ರಥದ ನಿರ್ಮಾತೃಗಳಾಗಿದ್ದಾರೆ. ಇವರು ರಚಿಸಿದ ಇನ್ನೂ ಅನೇಕ ರಥಶಿಲ್ಪಗಳು ಚಿಕ್ಕ ಪ್ರಮಾಣದಲ್ಲಿವೆ.

ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಗುಂಜನಹಳ್ಳಿಯಲ್ಲಿ ಈರಪ್ಪ ಕಾಳಪ್ಪ ವಿಶ್ವಕರ್ಮ ಎಂಬ ರಥಶಿಲ್ಪಿಗಳಿರುವರು. ಇವರು ಸುಮಾರು ಮೂವತ್ತು ವರ್ಷಗಳಿಂದ ರಥಶಿಲ್ಪಗಳನ್ನು ನಿರ್ಮಿಸುತ್ತಿದ್ದಾರೆ. ಇವರು ಕಾಷ್ಠ ಕಲೆಯಲ್ಲಿ ಅಪಾರವಾದ ಅನುಭವವುಳ್ಳವರು. ಇವರು ಸುಮಾರು ಹದಿನೈದು ಗಡ್ಡಿ ರಥಗಳನ್ನು ತಯಾರಿಸಿದ್ದು, ಕೆಲವು ಮಾತ್ರ ಚಿಕ್ಕ ಗಾತ್ರದವುಗಳಾಗಿವೆ. ಮೂಲತಃ

ಇವರು ಇದೇ ಜಿಲ್ಲೆಯ ಮಾನ್ವಿಯವರು. ಇವರ ಮೂರು ಜನ ಮಕ್ಕಳೂ ಕೂಡ ಈಗ ಕಾಷ್ಠ ಕಲೆಯಲ್ಲಿ ನಿರತರಾಗಿರುವರು. ಇವರು ರಚಿಸಿರುವ ಎಲ್ಲ ರಥಗಳು ಕಲಾತ್ಮಕವಾಗಿವೆ. ಗುಂಜಹಳ್ಳಿಯ ಗಿರಿನಾಥ ದೇವಸ್ಥಾನದ ರಥ, ಅಮರಾವತಿಯ ಅಮರೇಶ್ವರ ದೇವಸ್ಥಾನದ ರಥ, ನಕ್ಕುಂದದ ಲಕ್ಷ್ಮೀ ದೇವಸ್ಥಾನದ ರಥ ಹೀಗೆ ವಿವಿಧ ದೇವಸ್ಥಾನಗಳಲ್ಲಿ ಇವರು ತಯಾರಿಸಿದ ರಥಗಳನ್ನು ನೋಡಬಹುದು.

ರಾಯಚೂರು ಜಿಲ್ಲೆಯ ಮಹಾಂತೇಶ ಬಡಿಗೇರ ಇವರು ಸುಮಾರು ಎಂಟು ರಥಗಳನ್ನು ತಯಾರಿಸಿದ್ದು, ಹದಿನೈದು ವರ್ಷಗಳಿಂದ ರಥಶಿಲ್ಪ ನಿರ್ಮಾಣದಲ್ಲಿ ತೊಡಗಿದ್ದಾರೆ. ಕೆಲವು ಸಣ್ಣ ರಥಗಳನ್ನು ಸುಮಾರು ಐದರಿಂದ ಎಂಟು ಅಡಿಗಳವರೆಗೆ ಹಾಗೂ ಕೆಲವು ದೊಡ್ಡ ರಥಗಳನ್ನು ಸುಮಾರು ಎಂಟರಿಂದ ಹದಿನೆಂಟು ಅಡಿಗಳಷ್ಟು ಎತ್ತರವಾಗಿ ನಿರ್ಮಿಸಿರುವರು. ಇವರು ದೇವಸ್ಥಾನದ ಬಾಗಿಲು, ಮಂಟಪ, ಪಲ್ಲಕ್ಕಿ ಹೀಗೆ ವಿವಿಧ ಕಾಷ್ಠ ಮಾಧ್ಯಮದ ಉಪಕರಣಗಳನ್ನು ರಚಿಸುವುದರಲ್ಲಿ ಸಿದ್ಧಹಸ್ತರು. ಸಿಂಧನೂರು ತಾಲೂಕು ಗೋರೆಬಾಳದ ಕಾಂತವೀರ ದೇವಸ್ಥಾನದ ರಥ, ಮಾನ್ವಿ ತಾಲೂಕು ಜಂಬಲದಿನ್ನಿಯ ಸಂಗಮೇಶ್ವರ ದೆವಸ್ಥಾನದ ರಥ ಹಾಗೂ ಲಿಂಗಸೂರು ತಾಲೂಕು ಬನ್ನಿಗೋಳದ ಕನಕರಾಯನ ದೇವಸ್ಥಾನದ ರಥಗಳು ಇವರ ಕಲೆಗೆ ಸಾಕ್ಷಿಯಾಗಿವೆ.

ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಕಲ್ಲೂರದ ನಾಗಲಿಂಗಾಚಾರ್ಯ ವಿಶ್ವಕರ್ಮ. ಇವರು ಸುಮಾರು ಇಪ್ಪತ್ತೈದು ವರ್ಷಗಳಿಂದ ರಥ ನಿರ್ಮಾಣ ಕಾರ್ಯದಲ್ಲಿ ತೊಡಗಿರುವರು. ಇವರು ಸುಮಾರು ಹನ್ನೆರಡು ರಥಗಳನ್ನು ತಯಾರಿಸಿದ್ದು, ಎಲ್ಲ ರಥಗಳು ಸುಮಾರು ಹದಿನೆಂಟು ಅಡಿಗಳವರೆಗೆ ಎತ್ತರವಾಗಿವೆ. ಇವರು ತಮ್ಮ ಸ್ವಂತ ಮನೆಯ ಜಾಗದಲ್ಲಿ ಒಂದು ಕಾರ್ಯಾಗಾರವನ್ನು ನಿರ್ಮಿಸಿರುವರು. ಸುಮಾರು ಹದಿನೈದು ಸಹಾಯಕ ರಥ ಶಿಲ್ಪಿಗಳನ್ನು ಕೆಲಸಕ್ಕೆ ಇಟ್ಟುಕೊಂಡು ಅನೇಕ ಕಲಾತ್ಮಕ ಬಾಗಿಲುಗಳು, ಮಂಟಪಗಳು ಹಾಗೂ ಉಪಕರಣರಗಳನ್ನು ತಯಾರಿಸಿರುವರು. ಇವರು ನಿರ್ಮಿಸಿರುವ ರಥಶಿಲ್ಪಗಳೂ ಕಲಾತ್ಮಕವಾದವುಗಳು.

ಲಿಂಗಸೂರು ತಾಲೂಕಿನ ಹಡಲಗಿಯ ಪ್ರಭು ಸ್ವಾಮಿಯ ದೇವಸ್ಥಾನದ ರಥ, ಶಿಗ್ಗಾಂವದ ಚಂದಾಪುರದ ಲಕ್ಷ್ಮೀ ರಥ, ದೇವದುರ್ಗ ತಾಲೂಕಿನ ಕರಡಿಗುಡ್ಡದ ಶಂಕರಲಿಂಗ ದೇವಸ್ಥಾನದ ರಥ, ಲಿಂಗಸೂರು ತಾಲೂಕಿನ ದೇಸಾಯಿ ಬೋಗಾಪುರದ ಕರಿತಾತ ದೇವಸ್ಥಾನ ರಥ- ಈ ಎಲ ರಥಗಳು ವಿವಿಧ ವಿನ್ಯಾಸಗಳಲ್ಲಿ ಹಾಗೂ ವಿವಿಧ ಅಳತೆಗಳಲ್ಲಿ ನಿರ್ಮಾಣಗೊಂಡಿವೆ. ಇದೇ ಜಿಲ್ಲೆಯಲ್ಲಿ ಚಿಕ್ಕ ಚಿಕ್ಕ ರಥಗಳನ್ನು ತಯಾರಿಸುವ ಇನ್ನೂ ಕೆಲವು ರಥಶಿಲ್ಪಿಗಳು ನಾಗಲಿಂಗಾಚಾರ್ಯರ ಮಾರ್ಗದರ್ಶನದಲ್ಲಿ ಕೆಲಸ ಮಾಡಿದವರಾಗಿದ್ದಾರೆ.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಶಿವಾಪೂರದ ವಿಠಲ ಗಂಗಪ್ಪ ಬಡಿಗೇರ. ಇವರು ಈ ಭಾಗದ ಉತ್ತಮ ರಥಶಿಲ್ಪಿಗಳಲ್ಲಿ ಒಬ್ಬರು. ಇವರು ಇಬ್ಬರು ಮಕ್ಕಳೊಂದಿಗೆ ಕಾಷ್ಠ ಕಲೆಯಲ್ಲಿ ನಿರತರಾಗಿ ಸುಮಾರು ಇಪ್ಪತ್ತೈದು ವರ್ಷಗಳಾಗಿವೆ. ಇಷ್ಟು ವರ್ಷಗಳಲ್ಲಿ ಸುಮಾರು ಹದಿನೆಂಟು ರಥಗಳನ್ನು ತಯಾರಿಸಿರುವರು. ವಿದ್ಯಾರ್ಥಿಗಳಿಗೆ ಶಿಲ್ಪಕಲಾ ತರಬೇತಿಯನ್ನು ನೀಡಲು, ಮನೆಯಲ್ಲಿ ಒಂದು ಪ್ರತ್ಯೇಕ ಕೊಠಡಿ ಇದೆ. ಎಲ್ಲ ವಿದ್ಯಾರ್ಥಿಗಳನ್ನು ಸಹಾಯಕ ಶಿಲ್ಪಿಗಳನ್ನಾಗಿ ನೇಮಿಸಿ ವಿವಿಧ

ವಿನ್ಯಾಸದ ರಥಗಳನ್ನು ನಿರ್ಮಾಣ ಮಾಡಿರುವರು. ಇವರು ತಯಾರಿಸಿದ ರಥಗಳು ತುಂಬಾ ಸುಂದರ ಹಾಗೂ ಕಲಾತ್ಮಕವಾಗಿವೆ. ಇವರು ಮೊದಲು ಬದಾಮಿ ತಾಲೂಕಿನ ಸುಳ್ಳ ಗ್ರಾಮದ ರಥಶಿಲ್ಪಿಗಳಾದ ಮಳಿಯಪ್ಪನವರ ಶಿಷ್ಯರು. ಆದ್ದರಿಂದ ಇವರು ಕಾಷ್ಠಕಲಾ ಪರಿಣಿತರಾಗಿರುವರು. ಇವರು ರಚಿಸಿರುವ ರಥಗಳಲ್ಲಿ ಕೆಲವು ರಥಗಳನ್ನು ಮಾತ್ರ ಹೆಸರಿಸಲಾಗಿದೆ. ಅವು ಮುದ್ದೇಬಿಹಾಳ ತಾಲೂಕು ಸರೂರ ಗ್ರಾಮದ ಸೋಮೇಶ್ವರ ದೇವಸ್ಥಾನದ ರಥ, ಬಸವನ ಬಾಗೇವಾಡಿ ತಾಲೂಕಿನ ಬಸನಾಳದ ಬಸವೇಶ್ವರ ದೇವಸ್ಥಾನದ ರಥ ಇಂಡಿ ತಾಲೂಕಿನ ಮಾವಿನಹಳ್ಳಿಯ ಕಾಡಸಿದ್ಧೇಶ್ವರ ರಥ-ಹೀಗೆ ಅನೇಕ ಕಲಾತ್ಮಕ ರಥಗಳು ಇವರ ಕಲಾಭಿರುಚಿಯಿಂದ ಹುಟ್ಟಿಬಂದವುಗಳಾಗಿವೆ.

ಬಿಜಾಪೂರ ಜಿಲ್ಲೆಯ ಇಂಡಿ ತಾಲೂಕಿನ ನಂದರಗಿಯಲ್ಲಿ ಕಾಳಪ್ಪ ನರಸಪ್ಪ ಚಿತ್ರಗಾರ. ಇವರು ಚಿಕ್ಕ ಪ್ರಮಾಣದ ರಥಗಳನ್ನು ಮಾಡುವುದರಲ್ಲಿ ಸಿದ್ಧಹಸ್ತರು. ಸುಮಾರು ಹತ್ತು ವರ್ಷಗಳಿಂದೀಚೆಗೆ ರಥ ನಿರ್ಮಾಣ ಕಾರ್ಯದಲ್ಲಿ ತೊಡಗಿದವರಾಗಿದ್ದಾರೆ. ಇವರು ವಂಶ ಪರಂಪರಾಗತವಾಗಿ ಬಡಿಗ ಕೆಲಸ ಮಾಡುತ್ತ ಮುಂದೆ, ಕಾಷ್ಠ ಶಿಲ್ಪಿಗಳನ್ನು, ದೇವಸ್ಥಾನಗಳಿಗೆ ಸುಂದರ ದ್ವಾರಗಳನ್ನು, ಅನೇಕ ಪೀಠೋಪಕರಣಗಳನ್ನು ನಿರ್ಮಾಣ ಮಾಡುತ್ತ ಬಂದರು. ತಂದೆಯವರಿಂದ ಇವರು ಕಾಷ್ಠ ಕಲೆಯಲ್ಲಿ ನಿಪುಣರಾಗಿ, ಇತ್ತೀಚೆಗೆ ರಥಶಿಲ್ಪಗಳನ್ನು ನಿರ್ಮಾಣ ಮಾಡುವ ಕಾರ್ಯದಲ್ಲಿ ತೊಡಗಿರುವರು. ಕಲಾತ್ಮಕವಾದ ಐದು ರಥಗಳು ಇವರ ಕಲಾ ಸಾಮರ್ಥ್ಯವನ್ನು ತೋರಿಸುವಂತವುಗಳಾಗಿವೆ. ರಥಗಳು ಚಿಕ್ಕ ಪ್ರಮಾಣದವುಗಳಾದರೂ ಸುಂದರವಾಗಿವೆ. ಕನಮಡಿಯ ಶ್ರೀ ಆಂಜನೇಯನ ರಥ, ಸಿಂದಗಿ ತಾಲೂಕಿನ ಸಾಲದಳ್ಳಿಯ ವೆಂಕಟರಮಣ ರಥ, ಬಸವನ ಬಾಗೇವಾಡಿ ತಾಲೂಕಿನ ಸಂಕನಾಳದ ಶಾಂತಲಿಂಗನ ರಥ-ಹೀಗೆ ವಿವಿಧ ರಥಗಳನ್ನು ತಯಾರಿಸಿರುವರು.

ಬಿಜಾಪೂರ ಜಿಲ್ಲೆ ಇಂಡಿ ತಾಲೂಕಿನ ತೆನ್ನಿಹಳ್ಳಿಯ ಕಾಳಪ್ಪ ಕಲ್ಲನೂರ ಅವರು ಕೆಲವು ಗಡ್ಡಿ ರಥಗಳನ್ನು ಮಾಡಿರುವರು. ಸುಮಾರು ಎಳೆಂಟು ರಥಗಳನ್ನು ತಯಾರಿಸಿರುವ ಇವರು ಹದಿನೈದು ವರ್ಷಗಳಿಂದ ರಥನಿರ್ಮಾಣ ಕಾರ್ಯದಲ್ಲಿ ತೊಡಗಿರುವರು. ಇವರಿಗೆ ಒಬ್ಬ ಮಗನಿದ್ದು ಅವನೂ ಕೂಡ ಶಿಲ್ಪಗಾರಿಕೆಯನ್ನು ಚೆನ್ನಾಗಿ ತಿಳಿದಿರುವನು. ಇವರು ತಯಾರಿಸಿದ ರಥಗಳು ಅಷ್ಟೇನು ಎತ್ತರವಾಗಿಲ್ಲವಾದರೂ ನೋಡಲು ಸುಂದರವಾಗಿವೆ ಇವರು ಬಿಜಾಪೂರ ಜಿಲ್ಲೆಯ ಅರ್ಜುನಗಿಯ ಆಂಜನೇಯನ ರಥ, ಸಿಂದಗಿ ತಾಲೂಕಿನ ಪಡಗಾನೂರದ ಮಲ್ಲಯ್ಯನ ರಥ, ಬಸವನ ಬಾಗೇವಾಡಿ ತಾಲೂಕಿನ ಗೊಳಸಂಗಿಯ ಬಸವೇಶ್ವರ ದೇವಸ್ಥಾನದ ರಥಗಳನ್ನು ನಿರ್ಮಿಸಿರುವರು.

ಬೆಳಗಾಂವ ಜಿಲ್ಲೆ ಗೋಕಾಕ ತಾಲೂಕಿನ ಕುಂದರಗಿಯ ಸಿದ್ದಪ್ಪ ಬಡಿಗೇರ. ಇವರು ಗಡ್ಡಿ ರಥಗಳನ್ನು ನಿರ್ಮಿಸುವರು. ಈಗಾಗಲೇ ಆರು ರಥಗಳನ್ನು ನಿರ್ಮಿಸಿದ ಇವರು ಸುಮಾರು ಹತ್ತು ವರ್ಷಗಳಿಂದ ರಥಗಳ ನಿರ್ಮಾಣ ಕಾರ್ಯವನ್ನು ಕೈಗೊಂಡಿರುವರು. ಇವರೂ ಸಹ ಚಿಕ್ಕ ರಥಗಳನ್ನು ತಯಾರು ಮಾಡಿರುವರು. ಪೊಹರೆ ಬಸವಣ್ಣನ ರಥ, ಅರಸನಗಿಯ ಕಾಲಕಾಲೇಶ್ವರ ರಥ, ಬರಟಗಿಯ ಲಕ್ಷ್ಮೀದೇವಿಯ ರಥ-ಹೀಗೆ ಅನೇಕ ರಥಗಳನ್ನು ನಿರ್ಮಿಸಿರುವರು.

ಇದೇ ಜಿಲ್ಲೆ ಬೈಲಹೊಂಗಲ ತಾಲೂಕು ಮುರುಗೋಡದಲ್ಲಿ ವಿವೇಕ ಬ ಶಿಲ್ಪಿ. ಇವರು

[illegible]

[illegible]

[illegible]

ಸುಮಾರು ಐದಾರು ರಥಗಳ ನಿರ್ಮಾಪಕರು. ಇವರು ತಮ್ಮ ತಂದೆಯಿಂದ ಬಡಿಗ ಕೆಲಸವನ್ನು ಕಲಿತು, ಇತ್ತೀಚೆಗೆ ರಥಗಳ ತಯಾರಿಕೆಯನ್ನು ಮಾಡುತ್ತಿರುವರು. ಇವರು ಹೊಳೆ ಆಲೂರಿನ ಮೌನೇಶ ಬಡಿಗೇರ. ಅವರ ಹತ್ತಿರ ಈ ವಿದ್ಯೆಯನ್ನು ಕಲಿತರು. ಬೆಳಗಾಂವ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕೋಚರಿಯ ಮಡಿನಾಥನ ರಥ, ಗೋಕಾಕ ತಾಲೂಕಿನ ಬರಟಗಿಯ ಸಂಗನದೇವನ ರಥ ಹೀಗೆ ಹಲವು ರಥಗಳನ್ನು ಬಹಳ ಸುಂದರವಾಗಿ ನಿರ್ಮಿಸಿರುವರು.

ಬಳ್ಳಾರಿ ಜಿಲ್ಲೆಯ ಕೂಡ್ಲಗಿಯ ಶಿವಾನಂದ ಸಿ. ಮಾಯಾಚಾರ್ಯ. ಇವರು ಕೆಲವು ರಥಗಳನ್ನು ತಯಾರಿಸಿರುವರು. ಇವರು ಹೆಚ್ಚಾಗಿ ಮಧ್ಯಮ ಗಾತ್ರದ ರಥಗಳನ್ನು ತಯಾರಿಸಿರುವರು. ಹೊಸಪೇಟೆ ತಾಲೂಕು ಈಳಿಗನೂರ ಹನುಮಾನ ದೇವಸ್ಥಾನದ ರಥ, ಸಿದ್ಧಾಪುರದ ಕೊಟ್ರೆಪ್ಪನ ರಥ, ಕಾರಟಗಿಯ ಶಂಕರಲಿಂಗನ ದೇವಸ್ಥಾನದ ರಥಗಳನ್ನು ನಿರ್ಮಿಸಿರುವರು.

ಹಾವೇರಿ ಜಿಲ್ಲೆಯ ಶಿರಗಾಂವದ ದೇವೇಂದ್ರಪ್ಪಮಾನಪ್ಪಮಾಯಾಚಾರಿ. ಇವರು ಸುಮಾರು ಹನ್ನೆರಡು ವರ್ಷಗಳಿಂದ ರಥ ನಿರ್ಮಾಣದಲ್ಲಿ ತೊಡಗಿ ಸುಮಾರು ಆರು ರಥಗಳನ್ನು ತಯಾರಿಸಿರುವರು. ಇವುಗಳಲ್ಲಿ ಎರಡು ಮಾತ್ರ ದೊಡ್ಡವಾಗಿದ್ದು ಇನ್ನುಳಿದವುಗಳು ಪ್ರಮಾಣದಲ್ಲಿವೆ. ಇವರು ಶಿರಗಾಂವದ ಕಾಂತೇಶನ ರಥ, ಹಾವೇರಿಯ ಪುರಸಿದ್ಧಪ್ಪನ ರಥ, ಹಾನಗಲ್ಲ ತಾಲೂಕು ಅರಳೇಶ್ವರದ ಬಸವೇಶ್ವರ ರಥ ಹೀಗೆ ಕೆಲವು ಸುಂದರವಾದ ರಥಗಳನ್ನು ರಚಿಸಿರುವರು.

ಇದೇ ಜಿಲ್ಲೆ ಹಾನಗಲ್ಲ ತಾಲೂಕಿನ ಹಿರೂರದ ಕಾಳಪ್ಪ ಎಸ್. ವಿಶ್ವಕರ್ಮ ಇವರು ಸುಮಾರು ಎಂಟು ರಥಗಳನ್ನು ತಯಾರಿಸಿರುವರು. ಅವುಗಳಲ್ಲಿ ಸಾವಸಗಿಯ ವೀರಭದ್ರೇಶ್ವರ ರಥ, ಕದರ ಮುಂಡಗಿಯ ಆಂಜನೇಯನ ರಥ, ಸವಣೂರದ ಅಲ್ಲಿಪೂರದ ಶಂಕರಲಿಂಗನ ರಥ ಹೀಗೆ ಅನೇಕ ರಥಗಳನ್ನು ವಿವಿಧ ವಿನ್ಯಾಸಗಳಲ್ಲಿ ನಿರ್ಮಿಸಿರುವರು.

ಬಾಗಲಕೋಟೆ ಜಿಲ್ಲೆಯ ಲೋಕಾಪೂರದ ಭೀಮರಾವ ಶಂಕರಪ್ಪ ಮಾಯಾಚಾರಿ ಇವರು ಸುಮಾರು ಮೂವತ್ತೈದು ವರ್ಷಗಳಿಂದ ಕಾಷ್ಠ ಶಿಲ್ಪದ ಕೆಲಸದಲ್ಲಿ ನಿರತರಾಗಿರುವರು. ಮೂಲತಃ ಬಸವನ ಬಾಗೇವಾಡಿ ತಾಲೂಕಿನ ಚಿಮ್ಮಲಗಿ ಗ್ರಾಮದವರಾದ ಇವರು ಪ್ರಸ್ತುತ ಲೋಕಾಪೂರದಲ್ಲಿ ವಿಶ್ವಕರ್ಮ ಶಿಲ್ಪಕಲಾ ಕೇಂದ್ರವನ್ನು ಸ್ಥಾಪಿಸಿ, ಎಲ್ಲರಿಗೂ ಚಿರ ಪರಿಚಿತರಾಗಿರುವರು. ಶ್ರೀಗಂಧದ ಮರದ ಕೆತ್ತನೆ ಕೆಲಸದಲ್ಲಿ ಇವರು ತುಂಬಾ ಅನುಭವ ಪಡೆದವರು. ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಅನೇಕ ಪೀಠೋಪಕರಣಗಳನ್ನು, ದೇಗುಲದ ದ್ವಾರಗಳನ್ನು ಹಾಗೂ ಅನೇಕ ಕಾಷ್ಠ ಮೂರ್ತಿಗಳನ್ನು ಸುಂದರವಾಗಿ ರಚಿಸಿರುವಂತೆ, ಹಲವಾರು ರಥ ಶಿಲ್ಪಗಳನ್ನು ನಿಯಮಕ್ಕನುಗುಣವಾಗಿ ಕಲಾತ್ಮಕವಾಗಿ ನಿರ್ಮಿಸಿರುವರು. ಇವರಿಗೆ ಮೂರು ಜನ ಗಂಡುಮಕ್ಕಳಿದ್ದು, ಇವರಲ್ಲಿ ಮಲ್ಲೋಜಮಯಿಚಾರ್ಯ ಮತ್ತು ಮನೋಹರ ಇವರಿಬ್ಬರೂ ಸಹ ಶಿಲ್ಪಕಲೆಯನ್ನೇ ತಮ್ಮ ವೃತ್ತಿಯನ್ನಾಗಿಸಿಕೊಂಡಿರುವರು. ಭೀಮರಾವರ ಜೊತೆಯಲ್ಲಿ ಸಹಾಯಕಶಿಲ್ಪಿಗಳಾಗಿ ಹಲವಾರು ರಥಗಳನ್ನು ತಯಾರಿಸುವಲ್ಲಿ ಭಾಗಿಗಳಾದವರು. ಭೀಮರಾವ ಅವರು ಸುಮಾರು ಇಪ್ಪತ್ತೈದು ರಥಗಳನ್ನು ನಿರ್ಮಿಸಿರುವರು. ಅವುಗಳು ಕರ್ನಾಟಕದ ವಿವಿಧ ಜಿಲ್ಲೆಗಳಲ್ಲಿ ಕಂಡುಬರುತ್ತವೆ. ರಾಯಚೂರ ಜಿಲ್ಲೆಯ ಮಟಮಾರಿ, ತಲಮಾರಿ, ದೇವದುರ್ಗ ತಾಲೂಕಿನ ಅಮರಾಪೂರ, ಬದಾಮಿ ತಾಲೂಕಿನ ಹಲಕುರ್ಕಿ, ಬಿಜಾಪೂರ

ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಮುದೇನೂರು, ಬಸವನ ಬಾಗೇವಾಡಿ ತಾಲೂಕಿನ ಜಾಯವಾಡಲಗಿ, ಆಲಮಟ್ಟಿ, ಗುಲಬುರ್ಗಾದ ಶಹಾಪೂರ ಹಾಗೂ ಬಾಗಲಕೋಟೆ ಮೊದಲಾದ ಪ್ರದೇಶಗಳಲ್ಲಿ ಅನೇಕ ರಥಶಿಲ್ಪಗಳನ್ನು ಬಹಳ ಸುಂದರವಾಗಿ ಹಾಗೂ ಕಲಾತ್ಮಕವಾಗಿ ನಿರ್ಮಿಸಿರುವರು.

ಇವರ ಕಲೆಗೆ ಮೆಚ್ಚಿ ಚಿಮ್ಮಲಗಿಯ ಶ್ರೀ ಮಲ್ಲಿಕಾರ್ಜುನ ಶಿವಾಚಾರ್ಯ ಮಹಾಸ್ವಾಮಿಗಳು, ಭೀಮರಾವರಿಗೆ 'ಕಲಾ ಕೇಸರಿ' ಎಂಬ ಬಿರುದನ್ನು ನೀಡಿ ಗೌರವಿಸಿದ್ದಾರೆ. ಇವರ ಕಲಾ ಪ್ರತಿಭೆಯನ್ನು ನೋಡಿ ವಿವಿಧ ಸಂಘ ಸಂಸ್ಥೆಗಳು ಅನೇಕ ಸನ್ಮಾನಗಳನ್ನು ನೀಡಿ ಗೌರವಿಸಿವೆ. ತಮ್ಮ ಜೀವಿತವನ್ನೇ ಶಿಲ್ಪಕಲೆಗಾಗಿ ಮೀಸಲಾಗಿಟ್ಟ ಇವರಿಗೆ ಕರ್ನಾಟಕ ಶಿಲ್ಪಕಲಾ ಅಕಾಡೆಮಿಯು ೨೦೦೦ ನೇ ಇಸವಿಯ ಪ್ರಶಸ್ತಿ ನೀಡಿ ಗೌರವಿಸಿದೆ. ಇವರು ಬಾಗಲಕೋಟೆ ಜಿಲ್ಲೆಯ ಹೆಸರಾಂತ ಶಿಲ್ಪಿಗಳಾಗಿದ್ದಾರೆ.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ಗುಪ್ಪೇನಹಳ್ಳಿಯ ಎ. ಚಂದ್ರಾಚಾರ್ಯ ಎಂಬ ಹೆಸರಾಂತ ಶಿಲ್ಪಿಗಳು. ಕಾಷ್ಠ ಮಾಧ್ಯಮದ ಅನೇಕ ಗಡ್ಡಿ ರಥಗಳನ್ನು ತಯಾರಿಸಿರುವರು. ೧೯೪೧ ರಲ್ಲಿ ಜನಿಸಿದ ಇವರು ಸುಮಾರು ಮೂವತ್ತೆಂಟು ವರ್ಷಗಳಿಂದ ಕಾಷ್ಠ ಶಿಲ್ಪ, ಕುಸುರಿ ಕೆಲಸ ಹಾಗೂ ರಥಗಳ ತಯಾರಿಕೆಯನ್ನು ಕೈಗೊಂಡವರು. ಲೋಯರ್ ಸೆಕೆಂಡರಿ ವಿದ್ಯಾರ್ಹತೆ ಪಡೆದ ಇವರು ತಮ್ಮ ಅಜ್ಜನವರಾದಂತಹ ಶಿಲ್ಪಶಾಸ್ತ್ರಿಕಾಳಾಭಾರರಿಂದ ಕಾಷ್ಠ ಕಲೆಯನ್ನು ಕಲಿತರು. ಇವರು ಸುಮಾರು ಮೂವತ್ತೇಳು ಅಡಿ ಎತ್ತರದ ರಥಗಳನ್ನು ನಿರ್ಮಿಸಿರುವರು. ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆಯ ಶ್ರೀ ಕಾಲಭೈರವ ಸ್ವಾಮಿ ರಥ, ಶಿವಮೊಗ್ಗ ಜಿಲ್ಲೆ ಶಿಕಾರಿಪೂರ ತಾಲೂಕು ತೋಗರ್ಸಿಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥ, ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲೂಕಿನ ಬಿ.ಜಿ. ಕೆರೆಯ ಶ್ರೀ ಬಸವೇಶ್ವರ ರಥ ಈ ಎಲ್ಲ ರಥಗಳು ಮೂವತ್ತೈದು ಅಡಿ ಎತ್ತರವಾಗಿವೆ. ಶಿವಮೊಗ್ಗ ಜಿಲ್ಲೆ ಸಾಗರ ತಾಲೂಕು ಇಕ್ಕೇರಿಯ ಅಖಿಲಾಂಡೇಶ್ವರಿ ಅಘೋರೇಶ್ವರ ರಥ ಮೂವತ್ತೇಳು ಅಡಿ ಎತ್ತರವಾಗಿದೆ. ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕಿನ ಗಾನಗಟ್ಟೆಯ ಮಾಯಮ್ಮದೇವಿ ರಥವು ನಲವತ್ತೊಂದು ಅಡಿ ಎತ್ತರವಾಗಿದೆ. ಇವುಗಳಲ್ಲದೆ ಚಿತ್ರದುರ್ಗ ಜಿಲ್ಲೆ ಚಳ್ಳಕೆರೆ ತಾಲೂಕು ನೇರಲಗುಂಟೆಯ ಆಂಜನೇಯ ಸ್ವಾಮಿಯ ರಥ, ದಾವಣಗೆರೆ ಜಿಲ್ಲೆ ಚನ್ನಗಿರಿಯ ರಾಘವೇಂದ್ರ ಸ್ವಾಮಿ ರಥ, ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕು, ಆಗರದ ಕಲಾನಾಥೇಶ್ವರದ ರಥ, ಉತ್ತರ ಕನ್ನಡ ಜಿಲ್ಲೆ ಸಿದ್ಧಾಪೂರ ತಾಲೂಕು ಐಸೂರು ಗೌರಿಶಂಕರ ಸ್ವಾಮಿ ರಥ, ಚಳ್ಳಕೆರೆ ತಾಲೂಕು ಮಲ್ಲಸಮುದ್ರದ ಬಸವೇಶ್ವರ ಸ್ವಾಮಿ ರಥ, ಚಿತ್ರದುರ್ಗ ಜಿಲ್ಲೆ ಹೊಸದುರ್ಗ ತಾಲೂಕ ಶ್ರೀ ರಾಂಪುರದ ಶ್ರೀ ಪರಪ್ಪ ಸ್ವಾಮಿ ರಥ-ಹೀಗೆ ಇನ್ನೂ ಅನೇಕ ರಥಗಳು ಸುಮಾರು ಇಪ್ಪತ್ತೈದು ಅಡಿಯಿಂದ ಮೂವತ್ತೊಂದು ಅಡಿಗಳಷ್ಟು ಎತ್ತರವನ್ನು ಹೊಂದಿವೆ[೧೩].

ಇಂತಹ ಅನೇಕ ರಥಗಳನ್ನು ನಿರ್ಮಿಸಿರುವ ಇವರಿಗೆ ಅನೇಕ ಪ್ರಶಸ್ತಿ ಸನ್ಮಾನ ಹಾಗೂ ಬಿರುದುಗಳು ದೊರಕಿವೆ. ಬಾಳೆಹೊನ್ನೂರು ಶ್ರೀಮದ್ ರಂಭಾಪೂರಿ ಜಗದ್ಗುರು ವೀರ ಸೋಮೇಶ್ವರ ಶಿವಾಚಾರ್ಯ ಮಹಾಸ್ವಾಮಿಗಳಿಂದ, ತೋಗರ್ಸಿ ಮಲ್ಲಿಕಾರ್ಜುನ ಸ್ವಾಮಿ ರಥ ನಿರ್ಮಾಣಕ್ಕಾಗಿ, ೧೧/೩/೧೯೯೫ ರಲ್ಲಿ ''ಶಿಲ್ಪ ಕಲಾರತ್ನ '' ಬಿರುದು ನೀಡಿ ಸನ್ಮಾನಿಸಲಾಗಿದೆ.

೧೩. '' ಪತ್ರ ಮಾಹಿತಿ'' ಗೊಪ್ಪೆನ ಹಳ್ಳಿ, ಚಂದ್ರಾಚಾರ, ರಥ ಶಿಲ್ಪಿ, ದಾವಣಗೇರೆ ಜಿಲ್ಲೆ, ಚನ್ನಗಿರಿ ತಾಲೂಕು

ಶ್ರೀ ವಿದ್ಯಾಭಿನವ ವಿದ್ಯಾರಣ್ಯ ಭಾರತೀಸ್ವಾಮಿಗಳಿಂದ ಇಕ್ಕೇರಿಯ ಶ್ರೀ ಅಖಿಲಾಂಡೇಶ್ವರಿ ಅಘೋರೇಶ್ವರ ಸ್ವಾಮಿಯ ರಥ ನಿರ್ಮಾಣಕ್ಕಾಗಿ ೨೯/೨/೧೯೯೬ ರಲ್ಲಿ 'ಶಿಲ್ಪಕಲಾನಿಧಿ' ಬಿರುದನ್ನು ನೀಡಿ ಸನ್ಮಾನಿಸಿದರು.

ಶ್ರೀ ಆಂಜನೇಯ ಸ್ವಾಮಿ ಸಮಿತಿಯಿಂದ ರಾಮಜೋಗಿಹಳ್ಳಿ ಆಂಜನೇಯ ಸ್ವಾಮಿ ರಥ ನಿರ್ಮಾಣಕ್ಕಾಗಿ ೧೯/೫/೧೯೯೭ ರಲ್ಲಿ ''ಶಿಲ್ಪಕಲಾ ಭೂಷಣ'' ಎಂಬ ಬಿರುದು ನೀಡಿ ಗೌರವಿಸಲಾಗಿದೆ. ಇದಲ್ಲದೆ ಡಾ|| ಶಿವಮೂರ್ತಿ ಶಿವಾಚಾರ್ಯ ಸ್ವಾಮಿಗಳಿಂದ ಹೊಳಲ್ಕೆರೆ ಕಾಲಭೈರವ ಸ್ವಾಮಿ ರಥ ನಿರ್ಮಾಣಕ್ಕಾಗಿ ಸನ್ಮಾನ, ಬಿ.ಜಿ. ಕೆರೆ ಬಸವೇಶ್ವರ ಸ್ವಾಮಿಯ ರಥ ನಿರ್ಮಾಣಕ್ಕಾಗಿ ಸನ್ಮಾನ, ಹೀಗೆ ಅನೇಕ ರಥಗಳ ನಿರ್ಮಾಣಕ್ಕೆ ಸನ್ಮಾನಗಳು ದೊರಕಿವೆ. ನಾಡಿನ ವಿವಿಧೆಡೆ ಇವರು ತಯಾರಿಸಿರುವ ಕಲಾತ್ಮಕ ರಥಗಳು ಇವರ ಕಲಾ ಪ್ರೌಢಿಮೆಯನ್ನು ಹೊರಹಾಕುತ್ತಿವೆ. ಇವರು ಅತ್ಯುತ್ತಮ ರಥ ಶಿಲ್ಪಿಗಳೆಂದು ಹೇಳಲು ಇವು ಸಾಕ್ಷಿಯಾಗಿವೆ.

ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲೂಕಿನ ಗುಪ್ಪೇನಹಳ್ಳಿಯಲ್ಲಿ, ಶ್ರೀ ಎಂ. ಪರಮೇಶ್ವರಾಚಾರ್ಯ ಎಂಬ ಇನ್ನೊಬ್ಬ ಸುಪ್ರಸಿದ್ಧ ರಥಶಿಲ್ಪಿಯನ್ನು ಕಾಣಬಹುದು ಇವರು ತಮ್ಮ ಸೋದರಮಾವನವರಾದ ಶಿಲ್ಪಿ ಕಾಳಾಚಾರ್ಯರಿಂದ ರಥಗಳ ತಯಾರಿಕೆಯನ್ನು ಕಲಿತರು. ಇವರು ಸುಮಾರು, ಇಪ್ಪತ್ತೇಳು ಅಡಿಗಳಿಂದ ಆರವತ್ತೊಂಭತ್ತು ಅಡಿಗಳವರೆಗೆ ಎತ್ತರವಿರುವ ಹನ್ನೆರಡು ರಥಗಳನ್ನು ನಿರ್ಮಿಸಿರುವರು.

ಬಳ್ಳಾರಿ ಜಿಲ್ಲೆ ಕೂಡ್ಲಗಿ ತಾಲೂಕು ಉಜನಿಯ ಮರುಳಸಿದ್ಧೇಶ್ವರ ಸ್ವಾಮಿಯ ರಥ, ಚಿಕ್ಕಮಗಳೂರು ಜಿಲ್ಲೆಯಗಟೆಯ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ರಥ, ಬಳ್ಳಾರಿ ಜಿಲ್ಲೆ ಹೊಸಪೇಟೆ ತಾಲೂಕಿನ ಹಂಪಿಯ ಶ್ರೀ ವಿರೂಪಾಕ್ಷ ದೇವಾಲಯದ ರಥ-ಈ ಎಲ್ಲ ರಥಗಳು ಸುಮಾರು ಐವತ್ತು ಅಡಿ ಎತ್ತರವಾಗಿವೆ. ಚಿತ್ರದುರ್ಗ ಜಿಲ್ಲೆ ನಾಯಕನಹಟ್ಟಿಯ ಶ್ರೀ ತಿಪ್ಪೇರುದ್ರ ಸ್ವಾಮಿಯ ರಥವು ಅರವತ್ತೆಂಟು ಅಡಿ ಎತ್ತರವಾಗಿದೆ. ದಾವಣಗೆರೆ ಜಿಲ್ಲೆ ಹೊಸದುರ್ಗ ತಾಲೂಕಿನ ನೀರಗುಂದದ ಶ್ರೀ ಭೈರವೇಶ್ವರ ರಥ, ಮಂಡ್ಯ ಜಿಲ್ಲೆಯ ಶ್ರೀ ಸೋಮನಹಳ್ಳಿ ಅಮ್ಮನವರ ರಥ, ನಾಗಮಂಡಲ ತಾಲೂಕು ಬಿಂದಿಗನವಿಲೆಯ ಶ್ರೀ ಚೆನ್ನಕೇಶ್ವರ ಸ್ವಾಮಿಯ ರಥ, ಮೈಸೂರಿನ ವಂಬಿಕೊಪ್ಪದ ಶ್ರೀ ವೆಂಕಟರಮಣ ಸ್ವಾಮಿಯ ರಥ, ಬಳ್ಳಾರಿ ಜಿಲ್ಲೆ ಸೊಂಡೂರಿನ ಶ್ರೀ ಶಿವಪ್ರರೇಶ್ವರ ಸ್ವಾಮಿಯ ರಥ, ಹಾಗೂ ಶಿವಮೊಗ್ಗ ಜಿಲ್ಲೆ ಗುಪ್ಪೆನಹಳ್ಳಿಯ ಶ್ರೀ ಆಂಜನೇಯಸ್ವಾಮಿ ರಥ-ಇವೆಲ್ಲ ರಥಗಳು ಸುಮಾರು ಇಪ್ಪತ್ತೈದು ಅಡಿಗಳಿಂದ ಇಪ್ಪತ್ತೆಂಟು ಅಡಿಗಳಷ್ಟು ಎತ್ತರವಾಗಿವೆ. ಈ ಎಲ್ಲ ರಥಗಳ ನಿರ್ಮಾಣಕ್ಕೆ ಮೆಚ್ಚಿಕೊಂಡು ಎಲ್ಲ ದೇವಸ್ಥಾನಗಳ ಟ್ರಸ್ಟ್ ಹಾಗೂ ಕಮೀಟಿಯವರು, ಅನೇಕ ಗಣ್ಯ ವ್ಯಕ್ತಿಗಳಿಂದ ಪರಮೇಶ್ವರಾಚಾರ್ಯ ಅವರಿಗೆ ಸನ್ಮಾನಗಳನ್ನು ನೀಡಿವೆ. ಹಂಪಿ ವಿದ್ಯಾರಣ್ಯ ಪೀಠ ಇವರಿಂದ ''ಶಿಲ್ಪಚತುರ'' ಎಂಬ ಬಿರುದು ಬಂದಿದೆ. ಇದಲ್ಲದೆ ವಿಜಯನಗರದ ಆಸ್ತಾನದ ಶಿಲ್ಪಿಗಳಾಗಿ ನೇಮಕ ಮಾಡಿಕೊಂಡಿದ್ದಾರೆ. ಇದಲ್ಲದೆ ಇವರಿಗೆ 'ಶಿಲ್ಪಕಲಾ ಭೂಷಣ' ಮತ್ತು 'ಭವನಶಿಲ್ಪಿ' ಎಂಬ ಬಿರುದುಗಳಿಂದ ಸನ್ಮಾನಿಸಲಾಗಿದೆ.

೧೯/೧೧/೨೦೦೦ ನೇ ಇಸವಿಯಲ್ಲಿ ಪ್ರಿಯದರ್ಶಿನಿ ಇಂದಿರಾಗಾಂಧಿ ಪ್ರಶಸ್ತಿ ದೊರಕಿದೆ.

೧೯೯೧ ನೇ ಸಾಲಿನಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ''ಕರ್ನಾಟಕ ರಾಜ್ಯ ಪ್ರಶಂಸಾಪತ್ರ'', ೧೯೯೨ ರಲ್ಲಿ ಕರ್ನಾಟಕ ರಾಜ್ಯ ಕರಕುಶಲ ಅಭಿವೃದ್ಧಿ ನಿಗಮದಿಂದ ''ಕರ್ನಾಟಕ ರಾಜ್ಯ ಪ್ರಶಸ್ತಿ'', ೧೯೯೫ ರಲ್ಲಿ ''ಕರ್ನಾಟಕ ರಾಜ್ಯ ಶಿಲ್ಪಕಲಾ ಅಕಾಡೆಮಿ ಪ್ರಶಸ್ತಿ'', ೨೦೦೧ ರಲ್ಲಿ ಜಕಣಾಚಾರಿ ಪ್ರಶಸ್ತಿ ಹೀಗೆ ಇನ್ನೂ ಕೆಲವನ್ನು ಸೇರಿ ಸುಮಾರು ಇಪ್ಪತ್ತೈದಕ್ಕೂ ಹೆಚ್ಚಿನ ಸಂಖ್ಯೆಯ ಪ್ರಶಸ್ತಿಗಳನ್ನು ಪಡೆದಿರುವರು[೧೪].

ಶ್ರೀ ಎಂ ಪರಮೇಶ್ವರಾಚಾರ್ಯ. ಅವರು ನಿರ್ಮಿಸಿರುವ ಎಲ್ಲ ರಥಗಳು ಸೂಕ್ಷ್ಮವಾದ ಕುಸುರಿ ಕೆತ್ತನೆಯಿಂದ ಕೂಡಿದ್ದು, ಎಲ್ಲರ ಪ್ರಶಂಸೆಗೆ ಪಾತ್ರವಾಗಿವೆ.

ಹೀಗೆ ಅಪರೂಪವಾದ ಮತ್ತು ಅಪೂರ್ವವಾದ ಶಾಸ್ತ್ರಿಯ ಶಿಲ್ಪ ಕಲೆಯಲ್ಲಿ ಇಂತಹ ರಥಗಳನ್ನು ನಿರ್ಮಿಸುವ ರಥಶಿಲ್ಪಿಗಳಲ್ಲಿ ಪ್ರಸಿದ್ಧರಾದ ಇನ್ನೂ ಕೆಲವರನ್ನು ಹೆಸರಿಸುವುದು ಅಗತ್ಯವಾಗಿದೆ. ಶ್ರೀಯುತ ಗೋಪಾಡಿ ವೆಂಕಟರಮಣ ಆಚಾರ್ಯರು ೧೯೮೮-೮೯ ನೇ ಸಾಲಿನ ಭಾರತ ಸರಕಾರದ ಕರಕುಶಲ ಅಭಿವೃದ್ಧಿ ನಿಗಮದವರು ನೀಡುವ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದಾರೆ. ಇವರ ಬಳಿಯಲ್ಲಿ ಶಾಸ್ತ್ರೀಯವಾಗಿ ಅಧ್ಯಯನ ನಡೆಸಿದ ಶ್ರೀ ಬಿ. ಲಕ್ಷ್ಮೀನಾರಾಯಣ ಆಚಾರ್ಯರು ೧೯೮೯-೯೦ ನೇ ಸಾಲಿನ ಭಾರತ ಸರಕಾರದ ಕರಕುಶಲ ಅಭಿವೃದ್ಧಿ ನಿಗಮದವರು ನೀಡುವ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿರುವರು.

ದಕ್ಷಿಣ ಕನ್ನಡ ಜಿಲ್ಲೆಯ ಕುಂದಾಪುರದ ಸಮೀಪ ಶ್ರೀ ಕೋಟೇಶ್ವರ ಬಿ. ಲಕ್ಷ್ಮೀ ನಾರಾಯಣ ಅವರು ಜಿಲ್ಲೆಯ ಒಳಹೊರಗೆ ನಾಮಾಂಕಿತರಾಗಿರುವರು. ಹಲವಾರು ದೇವಸ್ಥಾನಗಳಿಗೆ ಕಲಾತ್ಮಕ ಬ್ರಹ್ಮರಥ ಹಾಗೂ ಪುಷ್ಪ ರಥಗಳನ್ನು ನಿರ್ಮಿಸಿಕೊಟ್ಟಿರುವರು. ಕೋಟೇಶ್ವರ ಶಂಕರ ನಾರಾಯಣ, ಕೊಲ್ಲೂರು, ಮಂಡ್ಯ, ಶಿವಮೊಗ್ಗ, ಚಿತ್ರದುರ್ಗ, ಶಿರಾಲಿ, ಬಳ್ಳಾರಿ, ಪುಣೆ, ವಿಶಾಖಪಟ್ಟಣ ಹಾಗೂ ಹೈದರಾಬಾದ್‌ಗಳಲ್ಲಿ ಇವರು ನಿರ್ಮಿಸಿಕೊಟ್ಟ ಕಲಾತ್ಮಕ ಭವ್ಯ ರಥಗಳನ್ನು ನೋಡಬಹುದು. ಉಡುಪಿಯ ಚಿನ್ನದ ರಥಕ್ಕೆ ಚಕ್ರಗಳನ್ನು ಜೋಡಿಸಿ ಸ್ಟೇರಿಂಗ್ ಅಳವಡಿಸಿದ ಶ್ರೇಯಸ್ಸು ಇವರಿಗೆ ಸಲ್ಲುತ್ತದೆ. ಹೊಸ ಹೊಸ ರಥಗಳ ಆವಿಷ್ಕಾರಗಳೊಂದಿಗೆ, ಪ್ರಾಚೀನ ರಥಗಳ ದುರಸ್ತಿ ಹಾಗೂ ಅವುಗಳ ಸರಳ ಚಲನೆಗೆ ಸ್ಟೇರಿಂಗ್ ಅಳವಡಿಸುವುದು-ಈ ಎರಡೂ ಕಾರ್ಯಗಳಲ್ಲಿ ತುಂಬಾ ಅನುಭವವುಳ್ಳವರು[೧೫].

ಧರ್ಮಸ್ಥಳದ ಶ್ರೀ ಮಹಾಲಿಂಗಾಚಾರ್ಯ, ಸೊರಬದ ಶ್ರೀ ಮರೂರು ಗಣಪತಪ್ಪಾ, ಶಿಕಾರಿಪುರದ ಶ್ರೀ ತಿಪ್ಪಾಜಪ್ಪಾ, ರಾಣೆಬೆನ್ನೂರಿನ ಬಡಗಿ ಶ್ರೀ ಬಿದರಿ ಕೃಷ್ಣಪ್ಪಾ, ನಾಗಮಂಗಲದ ಶ್ರೀ ರಾಜಾಚಾರ್ಯ, ಮೈಸೂರಿನ ಶ್ರೀ ಎಸ್. ನರಸಿಂಹಾಚಾರ್ಯ ಹೀಗೆ ಕಲಾತ್ಮಕ ರಥಗಳನ್ನು ನಿರ್ಮಿಸುವ ಮೊದಲಾದ ಶಿಲ್ಪಿಗಳನ್ನು ಹೆಸರಿಸಬಹುದು[೧೬].

ರಥಶಿಲ್ಪಗಳು ನಿರ್ಮಾಣಗೊಳ್ಳಲು ಕೇವಲ ಒಬ್ಬ ರಥಶಿಲ್ಪಿಯ ಕೈಯಿಂದ ಸಾಧ್ಯವಾಗದು ಒಬ್ಬ ಪ್ರಧಾನ ರಥಶಿಲ್ಪಿಯ ಮಾರ್ಗದರ್ಶನದಲ್ಲಿ ಅನೇಕ ಸಹಾಯಕ ರಥಶಿಲ್ಪಿಗಳು ಎಡೆಬಿಡದೆ

---

೧೪. '' ದೇಗುಲ ರಥ ಶಿಲ್ಪ '' ದ್ರುವರಾಜ ನಾ. ಗದಗಕರ, ಪು.ಸಂ. ೨೯, ೧೯೯೯.
೧೫. '' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್. ತಿಪ್ಪೇಸ್ವಾಮಿ, ಪ್ರಜಾವಾಣಿ, ದೀಪಾವಳಿ ವಿಶೇಶಾಂಕ, ೧೯೯೫
೧೬. ' ರಥ ಸಾವಿರ ವರ್ಷಗಳ ಇತಿಹಾಸ'' ಪಿ.ಆರ್. ತಿಪ್ಪೇಸ್ವಾಮಿ, ಪ್ರಜಾವಾಣಿ, ದೀಪಾವಳಿ ವಿಶೇಶಾಂಕ, ೧೯೯೫

ಮಾಡುವ ಕೆಲಸದಿಂದ ರಥಶಿಲ್ಪಗಳನ್ನು ನಿರ್ಮಿಸಲು ಸಾಧ್ಯವಾಗುವುದು.

ಬಾಗಲಕೋಟೆಯ ಮೌನೇಶ ಕಾಳಪ್ಪ ಪತ್ತಾರ, ರಾಮಪೂರದ ಸುರೇಂದ್ರ ಶಂಕರಪ್ಪಾ ಬಡಿಗೇರ, ಹೊಳೆ ಆಲೂರಿನ ಗುರುನಾಥ ಬಡಿಗೇರ, ಗದಗದ ಶ್ರೀ ನಿಂಗಪ್ಪ ಪತ್ತಾರ, ಕೊಪ್ಪಳದ ಶ್ರೀ ಮಂಜುನಾಥ ಬಸಪ್ಪ ಬಡಿಗೇರ, ಗಂಗಾವತಿಯ ಶ್ರೀ ಕಾಳಪ್ಪ ನರಸಪ್ಪ ಚಿತ್ರಗಾರ, ರಾಯಚೂರಿನ ಮಾನಪ್ಪ ಎಸ್ ಚಿತ್ರಗಾರ, ಗೋಕಾಕದ ಶ್ರೀ ಕಾಳೇಶ ಆಚಾರ್ಯ, ಶ್ರೀ ಗಂಗಾಧರ ಶಿಲ್ಪಿ, ಶಿರಹಟ್ಟಿಯ ದೇವಿಪ್ರಸಾದ ಮಾಯಾಚಾರ್, ಸುಳ್ಳ ಗ್ರಾಮದ ಶಂಕರೆಪ್ಪ ಬಡಿಗೇರ, ಧಾರವಾಡದ ಸಿದ್ಧಪ್ಪ ರಾಜಪ್ಪ ಬಡಿಗೇರ ಹೀಗೆಯೇ ಇವರಂತಹ ನೂರಾರು ಸಹಾಯಕ ರಥಶಿಲ್ಪಿಗಳನ್ನು ಹೆಸರಿಸಬಹುದು. ನಾಡಿನ ಎಲ್ಲ ರಥಶಿಲ್ಪಿಗಳ ಹೆಸರುಗಳನ್ನು ಹೆಸರಿಸುವುದು ತುಂಬಾ ಕಷ್ಟದ ಕೆಲಸ. ಆದ್ದರಿಂದ ಅಧ್ಯಯನದ ಇತಿಮಿತಿಯಲ್ಲಿ ನಾಡಿನ ಬೇರೆ ಬೇರೆ ಪ್ರದೇಶಗಳಲ್ಲಿರುವ ಕೆಲವರ ಹೆಸರುಗಳನ್ನು ಮಾತ್ರ ಹೆಸರಿಸಲಾಗಿದೆ.

ಬ. ಅಂಕಣ ರಥಗಳ ತಯಾರಕರು :

ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮದನಬಾವಿಯಲ್ಲಿ ಯಚ್ಚರಪ್ಪಾ ನಾಗಲಿಂಗಪ್ಪ ಬಡಿಗೇರ. ಎಂಬುವರು ಅಂಕಣ ರಥಗಳನ್ನು ತಯಾರಿಸುವರು. ಮೂಲತಃ ಇವರು ಬಿಜಾಪೂರ ಜಿಲ್ಲೆ ಬಿಜ್ಜರಗಿಯವರು. ಸುಮಾರು ಹತ್ತು ವರ್ಷಗಳಿಂದ ಅಂಕಣ ರಥಗಳ ತಯಾರಿಕೆಯ ಕಾರ್ಯವನ್ನು ಕೈಗೊಂಡಿದ್ದಾರೆ. ಇವರು ಕೇವಲ ರಥಗಳ ತಯಾರಿಕೆ ಅಷ್ಟೆ ಅಲ್ಲದೆ, ಪೀಠೋಪಕರಣ, ಬಾಗಿಲು ಹೀಗೆ ಅನೇಕ ಕಲಾತ್ಮಕ ವಸ್ತುಗಳನ್ನು ತಯಾರಿಸುವರು. ಇಬ್ಬರು ಮಕ್ಕಳೊಂದಿಗೆ ನಾಲ್ಕು ರಥಗಳನ್ನು ತಯಾರಿಸಿರುವರು. ಇದೇ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನಾಗನೂರು ಹನುಮಂತದೇವರ ರಥ, ಪಟ್ಯಾಳದ ಬಸವೇಶ್ವರ ರಥ, ಮದಬಾವಿಯ ಸಿದ್ಧೇಶ್ವರ ರಥಗಳನ್ನು ಇವರು ತಯಾರಿಸಿರುವರು.

ಗೋಕಾಕ ತಾಲೂಕಿನ ಸುತ್ತಾನಪೂರದ ಶ್ರೀ ಭೀಮಶಿ ಬಡಿಗೇರ. ಅವರು ಅಂಕಣ ರಥ ನಿರ್ಮಾಪಕರಾಗಿರುವರು. ಸುಮಾರು ಇಪ್ಪತ್ತೈದು ವರ್ಷಗಳಿಂದ ಬಡಿಗ ವೃತ್ತಿಯನ್ನು ಮಾಡುತ್ತ ಬಂದ ಇವರು ತಮ್ಮ ತಂದೆಯವರಾದ ಚಿದಾನಂದಪ್ಪ, ನಾಗಲಿಂಗಪ್ಪ ಬಡಿಗೇರ ಅವರಿಂದ ರಥ ನಿರ್ಮಾಣ ಮಾಡುವುದನ್ನು ಕಲಿತರು. ಇಷ್ಟು ವರ್ಷಗಳಲ್ಲಿ ಸುಮಾರು ಹತ್ತು ರಥಗಳನ್ನು ನಿರ್ಮಿಸಿರುವರು. ರಥಗಳನ್ನು ತಯಾರುಮಾಡಿ ಕೊಟ್ಟ ದೇವಸ್ಥಾನದವರು, ಇವರ ಕಲೆಯನ್ನು ಮೆಚ್ಚಿ ಸನ್ಮಾನ ಮಾಡಿರುವರು. ಬಿಜಾಪೂರ ಜಿಲ್ಲೆ ಬಸವನ ಬಾಗೇವಾಡಿಯ ಯಳನಾಳದ ಶಿವಲಿಂಗೇಶ್ವರ ರಥ, ಬೆಳಗಾಂವ ಜಿಲ್ಲೆಯ ಅಥಣಿ ತಾಲೂಕಿನ ಜನವಾಡದ ಲಕ್ಷ್ಮೀದೇವಿಯ ರಥ, ಹುಕ್ಕೇರಿ ತಾಲೂಕಿನ ಸಂಗಾನಟ್ಟಿಯ ಕಟ್ಟೆ ಬಸವೇಶ್ವರ ರಥಗಳನ್ನು ಇವರೇ ತಯಾರಿಸಿದವರು.

ಹಾವೇರಿ ಜಿಲ್ಲೆಯ ಹಾನಗಲ್ಲದ ಶ್ರೀ ನಿಂಗಪ್ಪ ಕಾಶಪ್ಪ ಪತ್ತಾರ ಅವರು ಅಂಕಣ ರಥಗಳನ್ನು ತಯಾರಿಸುವರು. ಸುಮಾರು ಇಪ್ಪತ್ತು ಅಡಿಗಳಷ್ಟು ಇತ್ತರದ ರಥಗಳನ್ನು ಅನೇಕ ಸಹಾಯಕ ಕೆಲಸಗಾರಗೊಂದಿಗೆ ನಿರ್ಮಿಸುವ ಇವರು ತಮ್ಮ ಸ್ವಂತ ಮನೆಯ ಜಾಗದಲ್ಲಿ ಒಂದು ಪ್ರತ್ಯೇಕ ಕಾರ್ಯಾಗಾರವನ್ನು ಕಟ್ಟಿರುವರು. ಗೋಕಾಕ ತಾಲೂಕು ಮಾವನೂರು ಬಂಡೆಮ್ಮನ ರಥ, ಗೊಡಚಿನ

[illegible]

ಮಲಕಿಯ ಲಕ್ಷ್ಮೀದೇವಿಯ ರಥ, ಬಿಜಾಪೂರ ಜಿಲ್ಲೆಯ ಹಲಗುಣಿಯ ಸಿದ್ಧೇಶ್ವರ ರಥ ಹೀಗೆ ಅನೇಕ ರಥಗಳನ್ನು ನಿರ್ಮಿಸಿರುವರು. ಈ ಭಾಗದಲ್ಲಿ ಅಂಕಣ ರಥ ತಯಾರಿಕೆಗೆ ಇವರು ಹೆಸರು ವಾಸಿಯಾಗಿದ್ದಾರೆ.

ಬಿಜಾಪೂರ ಜಿಲ್ಲೆ ಮುದ್ದೇಬಿಹಾಳ ತಾಲೂಕಿನ ಕೋಳೂರಿನಲ್ಲಿ ಮಾನಪ್ಪ ರವಿಂದ್ರ ಕಮ್ಮಾರ: ಎಂಬುವರು ಅಂಕಣ ರಥಗಳ ತಯಾರಕರಾಗಿದ್ದು ಬೆಳಗಾಂವ ಹಾಗೂ ಬಿಜಾಪೂರ ಜಿಲ್ಲೆಗಳಲ್ಲಿ ಹೆಸರು ಪಡೆದರು. ವಿವಿಧ ಬಗೆಯ ಕಲಾತ್ಮಕ ಬಾಗಿಲುಗಳು, ಪಲ್ಲಕ್ಕಿ, ಚೌಕಟ್ಟುಗಳನ್ನು ಮಾಡುತ್ತ ಬಂದ ಇವರು ಸುಮಾರು ಮೂವತ್ತು ವರ್ಷಗಳಿಂದ ಕುಸುರಿ ಕೆತ್ತನೆ ಕೆಲಸವನ್ನು ಕೈಗೊಂಡಿರುವರು. ಇವರು ನಿರ್ಮಿಸಿದ ರಥಗಳೂ ಸಹ ಅಷ್ಟೇ ಸುಂದರವಾಗಿವೆ ಹಾಗೂ ಪ್ರಮಾಣಬದ್ಧವಾಗಿವೆ. ಬಾಗಲಕೋಟೆ ಜಿಲ್ಲೆಯ ಬೀಳಗಿ ತಾಲೂಕಿನ ತೋಳಮಟ್ಟಿಯ ಹನುಮದೇವರ ರಥ, ಬಿಜಾಪೂರ ಜಿಲ್ಲೆಯ ಕೇಶಾಪೂರದ ಬಂಡೆಮ್ಮದೇವಿ ರಥ, ಬೆಳಗಾಂವ ಜಿಲ್ಲೆಯ ಹುಕ್ಕೇರಿ ತಾಲೂಕಿನ ಕೇಚರಿಯ ಬಸವೇಶ್ವರ ದೇವರ ರಥ ಹೀಗೆ ಅನೇಕ ಸುಂದರವಾದ ರಥಗಳನ್ನು ತಯಾರಿಸಿರುವರು.

ಬೆಳಗಾಂವ ಜಿಲ್ಲೆಯ ರಾಮದುರ್ಗದ ಮಂಜುನಾಥ ಬಸಪ್ಪ ಬಡಿಗೇರ. ಇವರು ಅಂಕಣ ರಥ ತಯಾರಕರಾಗಿದ್ದು, ಸುಮಾರು ಹದಿನೈದು ವರ್ಷಗಳಿಂದ ಬಡಿಗ ವೃತ್ತಿ ಯನ್ನು ಮಾಡುತ್ತ ಬಂದಿದ್ದಾರೆ. ತಮ್ಮ ದೊಡ್ಡಪ್ಪನ ಮಕ್ಕಳಾದ ಶಿವಾನಂದ ಹಾಗೂ ವೀರಪ್ಪನ ಜೊತೆಗೆ ಸುಮಾರು ಎಂಟು ರಥಗಳನ್ನು ನಿರ್ಮಾಣ ಮಾಡಿರುವರು. ಎಂಟು ಅಡಿಗಳಿಂದ ಸುಮಾರು ಇಪ್ಪತ್ತು ಅಡಿಗಳವರೆಗೆ ಅನೇಕ ಸುಂದರವಾದ ರಥಗಳನ್ನು ನಿರ್ಮಿಸಿರುವರು. ಗೋಕಾಕ ತಾಲೂಕಿನ ಮಮಟಗೇರಿಯ ಕಾಡಸಿದ್ಧೇಶ್ವರ ರಥ, ಮುಧೋಳ ತಾಲೂಕಿನ ಮಳ್ಳಿಗೇರಿಯ ಆಂಜನೇಯನ ರಥ, ಮುಧೋಳದ ಬ್ರಹ್ಮಗಡ್ಡಿ ಮಠದ ರಥಗಳನ್ನು ಇವರು ತಯಾರಿಸಿರುವರು.

ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ನಾವಲಗಿಯ ಪ್ರಕಾಶ ಮಾರುತಿ ಬಡಿಗೇರ ಅವರು ಅಂಕಣ ರಥಗಳನ್ನು ತಯಾರಿಸುವರು. ಸುಮಾರು ಇಪ್ಪತ್ತು ವರ್ಷಗಳಿಂದ ಬಡಿಗತನ ಮಾಡುತ್ತ ಬಂದ ಇವರು ಈಗಾಗಲೇ ಹದಿನೈದು ಅಂಕಣ ರಥಗಳನ್ನು ನಿರ್ಮಿಸಿರುವರು. ಜಮಖಂಡಿ ತಾಲೂಕಿನ ಚಿಕ್ಕಳಕಿಯ ಶಿವಲಿಂಗೇಶ್ವರ ರಥ, ಹುನಗುಂದ ತಾಲೂಕಿನ ಮೋರಟಗಿಯ ಹನುಮಾನ ದೇವಸ್ಥಾನದ ರಥ, ಬಾಗಲಕೋಟೆಯ ದೇವಲಾಪೂರದ ಸೋಮನಾಥನ ರಥ ಹೀಗೆ ಇವರು ತಯಾರಿಸಿದ ರಥಗಳು ಹಲವಾರು ದೇವಸ್ಥಾನಗಳಲ್ಲಿ ನಿಂತಿವೆ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಬೆನಕನಹಾಳದ ಕಾಳಪ್ಪ ನರಸಪ್ಪ ಚಿತ್ರಗಾರ. ಇವರು ಹತ್ತು ವರ್ಷಗಳಿಂದೀಚೆಗೆ ಅಂಕಣ ರಥಗಳನ್ನು ತಯಾರಿಸುತ್ತಿದ್ದು, ಈಗ ಐದು ರಥಗಳು ಇವರಿಂದ ನಿರ್ಮಾಣವಾಗಿವೆ. ರಾಯಚೂರು ಜಿಲ್ಲೆಯ ಮಾನ್ವಿ ತಾಲೂಕಿನ ಅರೋಲಿಯ ಊರಮ್ಮನ ರಥ, ಸಿಂಧನೂರು ತಾಲೂಕು ತಿಮ್ಮಾಪೂರದ ನಿಜಲಿಂಗಮ್ಮನ ರಥ, ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕು ರ‍್ಯಾವಣಕಿಯ ಬಸವಣ್ಣನ ರಥ-ಹೀಗೆ ಸುತ್ತಮುತ್ತಲಿನ ಬೇರೆ ಬೇರೆ ದೇವಸ್ಥಾನಗಳಲ್ಲಿ ಇವರು ತಯಾರಿಸಿದ ರಥಗಳನ್ನು ಕಾಣಬಹುದು.

ರಾಯಚೂರು ಜಿಲ್ಲೆ ಲಿಂಗಸೂರು ತಾಲೂಕಿನ ದೇಸಾಯಿ ಭೋಗಾಪೂರದ ಕಾಳಪ್ಪ

ಮಾನಪ್ಪ ಚಿತ್ರಗಾರ. ಇವರು ಕೆಲವು ಅಂಕಣದ ರಥಗಳನ್ನು ನಿರ್ಮಿಸಿರುವರು. ಇವುಗಳು ಚಿಕ್ಕ ರಥಗಳಾದರೂ ಸುಂದರವಾದ ರಥಗಳಾಗಿವೆ. ದೇವಸ್ಥಾನದ ಒಳಾಂಗಣದಲ್ಲಿ ಎಳೆಯುವ ರಥಗಳನ್ನು ತಯಾರಿಸಿ ಇವರು ಸುಮಾರು ಎಪ್ಪತ್ತೈದು ವರ್ಷಗಳಿಂದ ಬಡಿಗ ವೃತ್ತಿಯನ್ನು ಮಾಡುತ್ತಿರುವರು. ಕುಸುರಿ ಕೆತ್ತನೆ ಮಾಡುವ ಕೈಚಳಕವನ್ನು ಸಹ ಹೊಂದಿರುವ ಇವರು ಹಲವಾರು ಪಿಠೋಪಕರಣಗಳು, ದ್ವಾರಗಳು ಮತ್ತು ಕಲಾತ್ಮಕ ಮಂಟಪಗಳನ್ನು ಮಾಡಿದ್ದಾರೆ. ಇವರ ಕಲಾಪ್ರತಿಭೆಯು ಇವರು ನಿರ್ಮಿಸಿರುವ ರಥಗಳಲ್ಲಿ ಕಂಡುಬರುತ್ತದೆ.

ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ನಾರಿನಹಾಳದ ಹನುಮಾನ ರಥ, ರಾಯಚೂರು ಜಿಲ್ಲೆ ಲಿಂಗಸೂರು ತಾಲೂಕಿನ ತೀರ್ಥಬಾವಿಯ ರಾಘವೇಂದ್ರನ ರಥ, ರಾಯಚೂರ ತಾಲೂಕ ಮಲ್ಲಾಪೂರದ ಮಲ್ಲಿಕಾರ್ಜುನ ದೇವಸ್ಥಾನದ ರಥಗಳು ಇವರ ಕಲಾವಂತಿಕೆಯ ಪ್ರತೀಕವಾಗಿವೆ.

ಬಾಗಲಕೋಟೆ ಜಿಲ್ಲೆಯ ಅಮಲಝರಿಯಲ್ಲಿ ರಾಜು ಕೊಟ್ರಪ್ಪ ಶಿಲ್ಪಿ. ಎಂಬುವರು ಅಂಕಣ ರಥಗಳನ್ನು ತಯಾರಿಸುವರು. ಕಾಷ್ಠ ಮಾಧ್ಯಮದ ಕೆಲಸದಲ್ಲಿ ತುಂಬಾ ಅನುಭವುಳ್ಳವರು. ಸುಮಾರು ೩೦ ವರ್ಷಗಳಿಂದ ಬಡಿಗ ವೃತ್ತಿ ಮಾಡುತ್ತ ಬಂದ ಇವರು ೧೨ ಅಂಕಣ ರಥಗಳನ್ನು ತಯಾರಿಸಿರುವರು. ಬಿಜಾಪೂರ ಜಿಲ್ಲೆ ಮುದ್ದೇಬಿಹಾಳದ ಬಿಳೆಬಾವಿಯ ಸಿದ್ಧೇಶ್ವರ ರಥ, ಬಿಜಾಪೂರ ಜಿಲ್ಲೆಯ ಹಂಗರಗಿಯ ಲಕ್ಷ್ಮೀದೇವಿಯ ಸಣ್ಣ ರಥ, ಬಾಗಲಕೋಟೆ ಜಿಲ್ಲೆ ಹುನಗುಂದ ತಾಲೂಕಿನ ದಮ್ಮೂರಿನ ವೀರಭದ್ರದೇವರ ರಥ ಈ ಎಲ್ಲ ರಥಗಳು ಇವರ ಕಲಾವೈಖರಿಯನ್ನು ತೋರಿಸುತ್ತವೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಮಾದಳ್ಳಿಯ ಮಹಾದೇವಪ್ಪ ಮಹಾರುದ್ರಪ್ಪ ಬಡಿಗೇರ ಇವರು ಅಂಕಣ ರಥಗಳನ್ನು ತಯಾರಿಸುವರು. ಸುಮಾರು ೨೫ ವರ್ಷಗಳಿಂದ ಬಡಿಗವೃತ್ತಿ ಮಾಡುತ್ತ ಬಂದ ಇವರು ಸುಮಾರು ಎಂಟು ರಥಗಳನ್ನು ತಯಾರಿಸಿರುವರು. ತಮ್ಮ ಇಬ್ಬರು ಮಕ್ಕಳಿಗೂ ಸಹ ಇದೇ ಉದ್ಯೋಗವನ್ನು ಕಲಿಸಿರುವರು. ಇತ್ತೀಚೆಗೆ ಮಾಡಿದ ಎರಡು ರಥಗಳ ನಿರ್ಮಾಣ ಹಂತದಲ್ಲಿ ಇವರೂ ಸಹ ಸಹಾಯಕಶಿಲ್ಪಿಗಳಾಗಿ ಕೆಲಸ ಮಾಡಿದವರು. ಗದಗ ಜಿಲ್ಲೆ ರೋಣ ತಾಲೂಕಿನ ಮೆಣಸಿಗಿಯ ಬಸವಣ್ಣನ ರಥ, ಇದೇ ಜಿಲ್ಲೆ ಮುಂಡರಗಿ ತಾಲೂಕಿನ ಹಮ್ಮಿಗಿಯ ಲಕ್ಷ್ಮೀ ರಥ, ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕು ಚಿಕ್ಕಲಕಿಯ ಮಲ್ಲಯ್ಯನ ರಥ ಹೀಗೆ ಬೇರೆ ಬೇರೆ ದೇವಸ್ಥಾನಗಳಲ್ಲಿ ಇವರು ತಯಾರಿಸಿದ ರಥಗಳನ್ನು ನೋಡಬಹುದು.

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲೂಕು ಗೋತಗಿಯ ರವಿಚಂದ್ರ ಬಸಪ್ಪ ಹೆಗ್ರಿ ಎಂಬುವರು ಅಂಕಣ ರಥ ನಿರ್ಮಾಪಕರು. ಇವರು ತಮ್ಮ ದೊಡ್ಡಪ್ಪರಾದ ವೀರಪ್ಪ ರಾಮಪ್ಪ ಹೆಗ್ರಿ ಅವರಿಂದ ರಥ ತಯಾರಿಕೆಯನ್ನು, ಕಲಿತು ಸುಮಾರು ಹತ್ತು ವರ್ಷಗಳಿಂದ ಈ ಕೆಲಸದಲ್ಲಿ ತೊಡಗಿರುವರು. ಸುಮಾರು ಎಂಟು ಅಡಿಗಳಿಂದ ಹದಿನೆಂಟು ಅಡಿಗಳಷ್ಟು ಎತ್ತರದ ರಥಗಳನ್ನು ನಿರ್ಮಿಸಬಲ್ಲ ಇವರು ಈಗಾಗಲೇ ಎಂಟು ರಥಗಳನ್ನು ತಯಾರಿಸಿರುವರು. ತಮ್ಮ ಮಗನಾದ ಶಂಕರ ರಥ ತಯಾರಿಕೆಯ ತರಬೇತಿಯನ್ನು ಪಡೆಯಲು ಬೆಂಗಳೂರಿನಲ್ಲಿರುವ ಪ್ರಸಿದ್ಧ ರಥಶಿಲ್ಪಿಗಳಾದ ಮನೋಹರ ಬಡಿಗೇರ. ಅವರ ರಥ ಶಿಲ್ಪಿ ತರಬೇತಿ ಕೇಂದ್ರದಲ್ಲಿರುವನು. ಇವರಿಗೆ ಮುಂದೆ ಗಡ್ಡಿ ರಥಗಳ ತಯಾರಿಕೆಯನ್ನು ಮಾಡುವ ಗುರಿ ಇದೆ. ಇವರು ಸುಂದರವಾದ ವಿನ್ಯಾಸವುಳ್ಳ ಅನೇಕ ಪಿಠೋಪಕರಣಗಳು, ದೇಗುಲಗಳ

ದ್ವಾರಗಳು, ಪ್ರಭಾವಳಿ ಮಂಟಪ ಹೀಗೆ ಅನೇಕ ಕಲಾತ್ಮಕ ವಸ್ತುಗಳನ್ನು ತಯಾರಿಸುವರು. ಗಂಗಾವತಿ ತಾಲೂಕು ಸಿದ್ಧಾಪೂರದ ಮಲ್ಲಿಕಾರ್ಜುನ ದೇವರ ರಥ, ಕುಷ್ಟಗಿ ತಾಲೂಕು ಗುಮಗೇರಿಯ ಅಮರೇಶ್ವರ ರಥ, ರಾಯಚೂರು ಜಿಲ್ಲೆ ಲಿಂಗಸೂರ ತಾಲೂಕಿನ ಆದಾಪುರದ ಮರೆಮ್ಮನ ರಥ ಹೀಗೆ ಇನ್ನೂ ಅನೇಕ ರಥಗಳನ್ನು ತಯಾರಿಸಿರುವರು.

ಬಳ್ಳಾರಿ ಜಿಲ್ಲೆ ಚಳಗುರ್ಕಿಯಲ್ಲಿ ವೀರಪ್ಪ ಸಿದ್ಧಪ್ಪ ಕಮ್ಮಾರ. ಎಂಬುವರು ಅಂಕಣ ರಥಗಳನ್ನು ತಯಾರಿಸುವರು. ಇಪ್ಪತ್ತು ವರ್ಷಗಳಿಂದ ಬಡಿಗವೃತ್ತಿ ಮಾಡುತ್ತ ಬಂದ ಇವರು ಐದು ಅಂಕಣ ರಥಗಳನ್ನು ನಿರ್ಮಿಸಿರುವರು. ಇದೇ ಜಿಲ್ಲೆ ಕೂಡ್ಲಿಗಿ ತಾಲೂಕು ನೀರಲಗಿಯ ಆಂಜನೇಯನ ರಥ, ಕೊಪ್ಪಳ ಜಿಲ್ಲೆಯ ನೆಲೋಗಿಯ ಶ್ರೀ ವೀರಭದ್ರನ ರಥ, ಗದಗ ಜಿಲ್ಲೆ ಕವಲೂರಿನ ಬಸವಣ್ಣನ ರಥ ಹೀಗೆ ಸುತ್ತಮುತ್ತಲಿನ ದೇವಸ್ಥಾನಗಳಲ್ಲಿ ಇವರು ತಯಾರಿಸಿದ ರಥಗಳನ್ನು ನೋಡಬಹುದು.

ಧಾರವಾಡ ಜಿಲ್ಲೆಯ ಹುಬ್ಬಳ್ಳಿಯ ಅಗಡಿಯಲ್ಲಿ ವಿರೂಪಾಕ್ಷ ಶಂಕರ ಶಿಲ್ಪಿ ಎಂಬುವರು ಅಂಕಣ ರಥಗಳನ್ನು ತಯಾರಿಸುವರು. ಇವರು ಕಲ್ಲಿನ ವಿಗ್ರಹಗಳನ್ನು ತಯಾರುಮಾಡುವರು. ಕಟ್ಟಿಗೆಯ ಕೆತ್ತನೆ ಕೆಲಸದಲ್ಲಿಯೂ ಸಹ ಅನುಭವವುಳ್ಳವರು. ತಮ್ಮ ಹದಿನೈದು ವರ್ಷಗಳ ರಥ ತಯಾರಿಕೆಯ ಕೆಲಸದಲ್ಲಿ ಇದುವರೆಗೆ ಆರು ಅಂಕಣದ ರಥಗಳನ್ನು ತಯಾರಿಸಿರುವರು. ಕಲಘಟಗಿ ತಾಲೂಕು ತುಮರಿಕೊಪ್ಪದ ವೀರಭದ್ರ ದೇವಸ್ಥಾನದ ರಥ, ಶಿಗ್ಗಾಂವ ತಾಲೂಕಿನ ಶಿಡಗರವಳ್ಳಿಯ ಊರಮ್ಮನ ಗುಡಿಯ ರಥ, ಬಾಗಲಕೋಟೆ ಜಿಲ್ಲೆ ಮುಧೋಳ ತಾಲೂಕಿನ ಮಾಚಕನೂರದ ವೀರಭದ್ರನ ಸಣ್ಣ ರಥ ಹೀಗೆ ಸುತ್ತಮುತ್ತಲಿನ ಪ್ರದೇಶದ ವಿವಿಧ ದೇವಸ್ಥಾನಗಳಲ್ಲಿ ಇವರು ತಯಾರಿಸಿರುವ ರಥಗಳನ್ನು ಕಾಣಬಹುದು.

ಕೊಪ್ಪಳದ ಸಿದ್ಧಪ್ಪ ಬಡಿಗೇರ, ರಾಯಚೂರಿನ ಗಂಗಾವತಿಯ ಶಿವಾನಂದ ಪತ್ತಾರ, ಬೆಳಗಾಂವ ಜಿಲ್ಲೆಯ ಗೋಕಾಕದ ಗುರುನಾಥ ಬಡಿಗೇರ, ಗದಗ ಜಿಲ್ಲೆಯ ನರಗುಂದ ತಾಲೂಕಿನ ಹದ್ಲಿಯ ಹನುಮಂತ ಬಸವಣ್ಣಪ್ಪಾ ಹೂಗಾರ-ಹೀಗೆ ಅಲ್ಲಲ್ಲಿ ಒಂದೆರಡು ಸಣ್ಣ ಪುಟ್ಟ ರಥಗಳನ್ನು ತಯಾರಿಸಿದ ಹಲವರನ್ನು ಹೆಸರಿಸಬಹುದು. ಇಲ್ಲಿ ನಾಡಿನ ಎಲ್ಲ ಅಂಕಣ ರಥ ತಯಾರಿಕರನ್ನು ಹೆಸರಿಸದೆ, ಅಧ್ಯಯನದ ಇತಿಮಿತಿಯಲ್ಲಿ ಸಾಧ್ಯವಾದ ಮಟ್ಟಿಗೆ ಕೆಲವು ರಥಶಿಲ್ಪಿಗಳನ್ನು ಹೆಸರಿಸಲಾಗಿದೆ.

II. ಲೋಹ ಮಾಧ್ಯಮದ ರಥಶಿಲ್ಪಿಗಳು :

ಕರ್ನಾಟಕದ ಹಲವು ಪ್ರದೇಶಗಳಲ್ಲಿ ಲೋಹ ಮಾಧ್ಯಮದ ರಥಗಳನ್ನು ಕಾಣಬಹುದು. ಇವುಗಳನ್ನು ನಿರ್ಮಾಣ ಮಾಡುವ ಶಿಲ್ಪಿಗಳೂ ಸಹ ಕನ್ನಡ ನಾಡಿನ ಹಲವು ಪ್ರದೇಶಗಳಲ್ಲಿ ಕಂಡು ಬರುವರು. ಇವರಲ್ಲಿ ಮೂರು ವಿಧದ ಶಿಲ್ಪಿಗಳನ್ನಾಗಿ ವಿಂಗಡಿಸಬಹುದು.

ಅ. ಕಬ್ಬಿಣ ರಥಗಳ ತಯಾರಕರು.

ಬ. ಬೆಳ್ಳಿಯ ರಥಗಳ ತಯಾರಕರು.

ಕ. ಚಿನ್ನದ ರಥಗಳ ತಯಾರಕರು

ಈ ಮೂರು ವಿಧದ ರಥ ತಯಾರಕರ ಬಗ್ಗೆ ವಿವರವಾಗಿ ತಿಳಿಯುವಾ.

ಅ. ಕಬ್ಬಿಣ ರಥಗಳ ತಯಾರಕರು : ಕರ್ನಾಟಕದ ಬಿಜಾಪೂರ, ಗುಲಬರ್ಗಾ, ಬೀದರ, ರಾಯಚೂರು ಹಾಗೂ ಬೆಳಗಾಂವ ಜಿಲ್ಲೆಗಳಲ್ಲಿ ಕಬ್ಬಿಣ ರಥಗಳ ತಯಾರಕರನ್ನು ಕಾಣಬಹುದು.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳದ ಪರಶುರಾಮ ಪವಾರ ಹಾಗೂ ಅವರ ಸಹೋದರರು ಕಬ್ಬಿಣದ ರಥಗಳ ನಿರ್ಮಾಣ ಮಾಡುವುದಕ್ಕೆ ಪ್ರಸಿದ್ಧರಾಗಿರುವರು. ೧೯೯೦ ರಲ್ಲಿ ಮುದ್ದೇಬಿಹಾಳದಲ್ಲಿ ನರೇಂದ್ರ ವೆಲ್ಡಿಂಗ್ ವರ್ಕಶಾಪ್ ಆರಂಭಮಾಡಿ, ಅಲ್ಲಿಯೇ ರಥ ನಿರ್ಮಾಣ ಮಾಡುವ ಕೆಲಸವನ್ನು ಕೂಡ ಆರಂಭಿಸಿದರು. ತಲೆ ತಲಾಂತರದಿಂದಲೂ ಬಂದ ಕಮ್ಮಾರಿಕೆಯನ್ನು ಮೂಲವಾಗಿಟ್ಟುಕೊಂಡು ವೆಲ್ಡಿಂಗ್ ಕೆಲಸದೊಂದಿಗೆ, ಮನೆಗೆ ಬೇಕಾಗುವ ಕಿಟಕಿ, ಬಾಗಿಲುಗಳು ಹಾಗೂ ಅನೇಕ ಪೀಠೋಪಕರಣಗಳನ್ನು ತಯಾರಿಸುತ್ತಿದ್ದರು. ನರಬೆಂಚಿ ಗ್ರಾಮದ ಎಸ್.ಎಸ್. ಪುಲಕೇಶಿ ಅವರ ಮಾರ್ಗದರ್ಶನದಿಂದ ಮೊದಲಬಾರಿಗೆ ಕಬ್ಬಿಣದ ರಥವನ್ನು ತಯಾರಿಸಿದರು. ಹದಿನಾಲ್ಕು ವರ್ಷಗಳಿಂದ ಕಬ್ಬಿಣ ರಥಗಳ ತಯಾರಿಕೆಯ ಕಾರ್ಯವನ್ನು ಕೈಗೊಂಡ ಇವರು ಇಷ್ಟು ವರ್ಷಗಳಲ್ಲಿ ಮೂವತ್ತೈದು ರಥಗಳನ್ನು ತಯಾರಿಸಿರುವರು. ಕಾಷ್ಠ ಮಾಧ್ಯಮದ ಗಡ್ಡಿ ರಥಗಳಂತೆಯೇ ಕಾಣುವ ಬಹುಕೋನ ವಿನ್ಯಾಸಗಳಲ್ಲಿ ರಥಗಳನ್ನು ನಿರ್ಮಿಸಿವರು. ಸುಮಾರು ಹದಿನೇಳು ಅಡಿಗಳಿಂದ ಮೂವತ್ತೈದು ಅಡಿಗಳಷ್ಟು ಎತ್ತರದ ರಥಗಳು ಇವರಿಂದ ತಯಾರಿಸಲ್ಪಟ್ಟಿವೆ. ಮರೋಳ ಬಸವೇಶ್ವರ ದೇವಾಲಯಕ್ಕೆ ಹದಿನೇಳು ಅಡಿ ಎತ್ತರದ ರಥ, ಕೊಪ್ಪಳ ಜಿಲ್ಲೆ ಕುಷ್ಠಗಿಯ ಬುತ್ತಿ ಬಸವೇಶ್ವರ ದೇವಸ್ಥಾನಕ್ಕೆ ಇಪ್ಪತ್ತೈದು ಅಡಿ ಎತ್ತರದ ರಥಗಳು ಇವರಿಂದ ತಯಾರಿಸಲ್ಪಟ್ಟಿವೆ. ಮರೋಳ ಬಸವೇಶ್ವರ ದೇವಾಲಯಕ್ಕೆ ಹದಿನೇಳು ಅಡಿ ಎತ್ತರದ ರಥ, ಕೊಪ್ಪಳ ಜಿಲ್ಲೆ ಕುಷ್ಠಗಿಯ ಬುತ್ತಿ ಬಸವೇಶ್ವರ ದೇವಸ್ಥಾನಕ್ಕೆ ಇಪ್ಪತ್ತೈದು ಅಡಿ ಎತ್ತರದ ರಥ, ಜಾಲವಾದಿ ಮುರುಘೇಂದ್ರ ಸ್ವಾಮಿ ಮಠಕ್ಕೆ ಇಪ್ಪತ್ತೆಂಟು ಅಡಿ ಎತ್ತರದ ರಥ, ಕೋಲಾರ ಗಣಬಸವೇಶ್ವರ ದೇವಸ್ಥಾನಕ್ಕೆ ಮೂವತ್ತೈದು ಅಡಿ ಎತ್ತರದ ರಥವನ್ನು ಮಾಡಿಕೊಟ್ಟಿರುವರು. ಇವರ ಕಬ್ಬಿಣ ರಥಗಳನ್ನು ಮೆಚ್ಚಿ, ಎಲ್ಲ ದೇವಸ್ಥಾನದವರು ಉತ್ಸವದ ಸಂದರ್ಭದಲ್ಲಿ ಪವಾರ ರಥಶಿಲ್ಪಿಗಳಿಗೆ ಸನ್ಮಾನ ಮಾಡಿ ಆದರಿಸಿದ್ದಾರೆ[೧೭]. ಇವರು ಕಬ್ಬಿಣ ರಥಗಳ ತಯಾರಿಕೆಯಲ್ಲಿ ತುಂಬಾ ಅನುಭವಸ್ತರು ಎಂದು ಇವರು ನಿರ್ಮಿಸಿರುವ ಎಲ್ಲ ರಥಗಳೂ ಹೇಳುತ್ತವೆ.

ಬಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಮಣ್ಣೂರಿನ ಪರಶುರಾಮ ಭದ್ರಪ್ಪಾ ಕಮ್ಮಾರ ಇವರು ಕಬ್ಬಿಣದ ರಥಗಳ ನಿರ್ಮಾಪಕರು. ಮೊದಲು, ಕಬ್ಬಿಣದ ಬಾಗಿಲುಗಳು ಕಿಟಕಿಗಳು ಜಾಲರಿಗಳು ಹಾಗೂ ಕಪಾಟುಗಳನ್ನು ಮಾಡುತ್ತ ಬಂದ ಇವರು, ಇತ್ತೀಚೆಗೆ ತಮ್ಮ ಸ್ವಂತ ಜಾಗದಲ್ಲಿ 'ಕಾಳಮ್ಮ ವೆಲ್ಡಿಂಗ್ ವರ್ಕ್ಸ' ಎಂಬ ಹೆಸರಿನ ವರ್ಕಶಾಪ್ ಆರಂಭಿಸಿ, ಕಬ್ಬಿಣದ ರಥಗಳನ್ನು ನಿರ್ಮಿಸತೊಡಗಿರುವರು. ಸುಮಾರು ಹತ್ತು ವರ್ಷಗಳಿಂದ ಕಬ್ಬಿಣ ರಥಗಳನ್ನು ತಯಾರಿಸುತ್ತಿರುವ ಇವರು ಸುಮಾರು ಇಪ್ಪತ್ತೈದು ಅಡಿಗಳಷ್ಟು ಎತ್ತರದ ರಥಗಳನ್ನು ನಿರ್ಮಿಸಿವರು. ಬಿಜಾಪೂರ ಜಿಲ್ಲೆಯ ಕೆಂಗಲಗುತ್ತಿಯ ವೀರಾಂಜನೇಯನ ದೇವಸ್ಥಾನಕ್ಕೆ ಹನ್ನೆರಡು ಅಡಿ ಎತ್ತರದ ರಥ, ಕೊಪ್ಪಳ ಜಿಲ್ಲೆ ಕುಷ್ಠಗಿ ತಾಲೂಕು ಕಲಾಲಬಂಡಿಯ ವೀರಭದ್ರ ದೇವಸ್ಥಾನಕ್ಕೆ ಇಪ್ಪತ್ತೈದು ಅಡಿ ಎತ್ತರದ ರಥ,

೧೭. '' ದೇವರ ಕಾರುಗಳು '' ಎಸ್.ಕೆ. ರಾಜು, ಪ್ರಜಾವಾಣಿ, ಜುಲೈ ೨೧, ೨೦೦೧

ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಸಾನಬಾಳದ ಸಿದ್ದೇಶ್ವರ ದೇವಸ್ಥಾನಕ್ಕೆ ಹದಿನೆಂಟು ಅಡಿ ಎತ್ತರದ ರಥಗಳನ್ನು ನಿರ್ಮಾಣ ಮಾಡಿಕೊಟ್ಟಿರುವರು. ಇವರು ಪವಾರ ರಥಶಿಲ್ಪಿಗಳ ಮಾರ್ಗದರ್ಶನದಲ್ಲಿ ರಥದ ತಯಾರಿಕೆಯನ್ನು ಕಲಿತಿರುವುದರಿಂದ, ಇವರೂ ಸಹ ಗಡ್ಡಿ ರಥಗಳ ಆಕಾರವನ್ನು ಹೊಂದಿದ ವಿವಿಧ ವಿನ್ಯಾಸವುಳ್ಳ ಕಬ್ಬಿಣದ ರಥಗಳನ್ನು ತಯಾರಿಸುವರು.

ರಾಯಚೂರ ಜಿಲ್ಲೆ ಲಿಂಗಸೂರು ತಾಲೂಕಿನ ಶಿವಂಗಿಯಲ್ಲಿ ಮಂಜುನಾಥ ಬಸಪ್ಪ ಬಡಿಗೇರ. ಎಂಬುವರು ಕಬ್ಬಿಣದ ರಥಗಳನ್ನು ತಯಾರಿಸುವರು. ಸುಮಾರು ಆರು ವರ್ಷಗಳಿಂದ ರಥಶಿಲ್ಪ ತಯಾರಿಕೆಯ ಕೆಲಸವನ್ನು ಕೈಗೊಂಡ ಇವರು, ಆರು ಅಡಿಯಿಂದ ಹನ್ನೆರಡು ಅಡಿಗಳಷ್ಟು ಎತ್ತರದ ಕಬ್ಬಿಣದ ರಥಗಳನ್ನು ನಿರ್ಮಿಸುವರು. ಇವರು ತಯಾರಿಸಿದ ರಥಗಳು ಚಿಕ್ಕವುಗಳಾದರೂ, ತುಂಬಾ ಮಾಟದಿಂದ ಕೂಡಿರುತ್ತವೆ. ಇದೇ ಜಿಲ್ಲೆ ಮಾನ್ವಿ ತಾಲೂಕಿನ ಕವಿತಾಳದ ಶಂಕರಲಿಂಗ ದೇವಸ್ಥಾನದ ರಥ, ಸಿಂಧನೂರು ತಾಲೂಕು ಅರಳಿಹಳ್ಳಿಯ ವೀರಭದ್ರ ದೇವಸ್ಥಾನದ ರಥ, ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲೂಕು ತೆಂಗುಂಟಿಯ ಬಸವಣ್ಣನ ರಥ-ಈ ಎಲ್ಲ ರಥಗಳನ್ನು ಇವರು ತಯಾರಿಸಿರುವರು.

ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಮಾಡಬಾಳದ ಜಗದೀಶ ಪಾಟೀಲ ಮತ್ತು ಇವರ ಸಹೋದರ ಶಂಕರಪ್ಪ ಪಾಟೀಲ ಎಂಬುವರು ಕಬ್ಬಿಣದ ರಥಶಿಲ್ಪಿಗಳು. ಇವರು ಮಾಡಬಾಳ ಕ್ರಾಸ್ ಬಳಿ, ಎಸ್.ಆರ್. ಎಸ್. ಫೆಬ್ರಿಕೇಶನ್ಸ ಎಂಬ ವರ್ಕ್‌ಶಾಪನ್ನು ಪ್ರಾರಂಭಿಸಿ ಮನೆಗಳ ಕಿಟಕಿಗಳು, ಕಟಂಜರಗಳು. ಕಪಾಟಗಳು, ಟ್ರೆಜರಿ ಹೀಗೆ ಅನೇಕ ಗೃಹೋಪಯೋಗಿ ವಸ್ತುಗಳನ್ನು ತಯಾರಿಸುವುದರೊಂದಿಗೆ ಕಬ್ಬಿಣದ ರಥಗಳನ್ನೂ ತಯಾರಿಸುವರು. ಸುಮಾರು ಹದಿನೈದು ವರ್ಷಗಳಿಂದ ರಥ ನಿರ್ಮಾಣ ಕಾರ್ಯವನ್ನು ಕೈಗೊಂಡ ಇವರು ಈಗಾಗಲೇ ಇಪ್ಪತ್ತು ರಥಗಳನ್ನು ತಯಾರಿಸಿರುವರು ಇವರು ತಯಾರಿಸಿದ ರಥಗಳು, ಸುಮಾರು ಹದಿನೈದು ಅಡಿಗಳಿಂದ ಮೂವತ್ತೈದು ಅಡಿಗಳಷ್ಟು ಎತ್ತರವನ್ನು ಹೊಂದಿವೆ.

ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕೂಡ್ಲಿಯ ರಾಮಲಿಂಗೇಶ್ವರ ರಥ, ಕೋರವಾರದ ಕೋರಿಸಿದ್ಧೇಶ್ವರ ರಥಗಳು ಸುಮಾರು ಇಪ್ಪತ್ತೈದು ಅಡಿಗಳಷ್ಟು ಎತ್ತರವನ್ನು ಹೊಂದಿವೆ. ಚಿಂಚೋಳಿ ತಾಲೂಕು ಸುಲೇಪೇಠದ ವೀರಭದ್ರ ದೇವಸ್ಥಾನದ ರಥವು ಮೂವತ್ತೈದು ಅಡಿ ಎತ್ತರವನ್ನು ಹೊಂದಿವೆ. ಇದರಂತೆ ಈ ಭಾಗದ ಅನೇಕ ದೇವಸ್ಥಾನಗಳಲ್ಲಿ ಇವರು ತಯಾರಿಸಿರುವ ರಥಗಳನ್ನು ಕಾಣಬಹುದು[೧೮].

ಗುಲಬುರ್ಗಾ ಜಿಲ್ಲೆಯ ಯಾದಗಿರಿ ತಾಲೂಕಿನ ನಾಗಲಾಪೂರದ ಭೀಮರಾಯ ಅಮ್ಮಣ್ಣಾ ವಿಶ್ವಕರ್ಮ ಇವರು ಅನೇಕ ಕಬ್ಬಿಣದ ರಥಗಳನ್ನು ತಯಾರಿಸಿರುವರು. ಮೂಲತಃ ಬಡಿಗ ವೃತ್ತಿಯನ್ನು ಮಾಡುತ್ತ ಬಂದ ಇವರು ಕಾಷ್ಠ ಮಾಧ್ಯಮದ ಅಂಕಣ ರಥಗಳ ತಯಾರಿಕೆಯನ್ನು ಕಲಿತಿದ್ದರು. ಇವರ ಮಗನಾದ ಗುರುನಾಥನು, ಮೆಕ್ಯಾನಿಕ್ ಕೆಲಸವನ್ನು ಕಲಿತ ನಂತರ ಅವನ ಸಹಾಯದಿಂದ ಭೀಮರಾಯರ ಮಾರ್ಗದರ್ಶನದಲ್ಲಿ ಅನೇಕ ಕಬ್ಬಿಣದ ರಥಗಳು ನಿರ್ಮಾಣಗೊಂಡವು ಇವರು ತಯಾರಿಸಿದ ಕಬ್ಬಿಣದ ರಥಗಳು ತುಂಬಾ ಸುಂದರವಾಗಿವೆ. ಅವರು ಹೇಳುವ ಪ್ರಕಾರ, ರಾವೂರ,

---

೧೮. '' ಸಂದರ್ಶನ-ಜಗದೀಶ್ ಪಾಟೀಲ್'' ಕಬ್ಬಿಣ ರಥ ಶಿಲ್ಪಿಗಳು, ಗುಲಬುರ್ಗಾ, ಜನೇವರಿ ೧೦, ೨೦೦೩

ಅರಿಕೇಮಾರವಾರ, ದೊಡ್ಡಸಂದ್ರ, ಸಣ್ಣಸಂದ್ರ, ನಾಗಲಾಪೂರ, ಗುಡ್ಲಗುಂದ ಹೀಗೆ ಗುಲಬುರ್ಗಾ ಜಿಲ್ಲೆಯ ವಿವಿಧ ದೇವಸ್ಥಾನಗಳಲ್ಲಿ ಇವರು ನಿರ್ಮಿಸಿರುವ ರಥಗಳನ್ನು ಕಾಣಬಹುದು. ಎಲ್ಲ ರಥಗಳೂ ಸುಮಾರು ಹದಿನೈದು ಅಡಿಗಳಿಂದ ಇಪ್ಪತ್ತೈದು ಅಡಿಗಳಷ್ಟು ಎತ್ತರವಾಗಿವೆ ಎಂದು ಅವರು ಹೇಳುತ್ತಾರೆ.

ಗುಲಬುರ್ಗಾ ಜಿಲ್ಲೆಯ ಯಾದಗಿರಿ ತಾಲೂಕಿನ ಹೆಡಗಿ ಮದ್ರಾದ ಮುರಳಿ ನಿಂಗಪ್ಪ ಪತ್ತಾರ. ಇವರು ಕಬ್ಬಿಣದ ರಥಶಿಲ್ಪಿಗಳು ಮೊದಲು ವೆಲ್ಡಿಂಗ್ ಕೆಲಸವನ್ನು ಮಾಡುತ್ತಿದ್ದ ಇವರು, ಹತ್ತು ವರ್ಷಗಳಿಂದೀಚೆಗೆ ಅನೇಕ ಕಬ್ಬಿಣದ ರಥಗಳನ್ನೂ ತಯಾರಿಸಿದ್ದಾರೆ. ಇವರು ತಯಾರಿಸಿದ ರಥಗಳು ಸುಮಾರು ಹದಿನೆಂಟು ಅಡಿಯಿಂದ ಇಪ್ಪತ್ತೈದು ಅಡಿಗಳಷ್ಟು ಎತ್ತರವಾಗಿವೆ. ಇದುವರೆಗೂ ಇವರು ಆರು ರಥಗಳನ್ನು ನಿರ್ಮಾಣ ಮಾಡಿದ್ದು, ಗುಲಬರ್ಗಾ ಜಿಲ್ಲೆಯ ಬೇರೆ ಬೇರೆ ದೇವಸ್ಥಾನಗಳಲ್ಲಿ ಕಾಣಬಹುದು, ಶಹಾಪೂರ ತಾಲೂಕಿನ ಚರಬಸವೇಶ್ವರ ದೇವಸ್ಥಾನದ ರಥ, ಸುರಪೂರ ತಾಲೂಕಿನ ದೇವರ ಗ್ವಾನಾಲದ ಮೌನೇಶ್ವರ ರಥ, ಸೇಡಂ ತಾಲೂಕು ಗಾಜರಕೋಟದ ವೀರಭದ್ರನ ರಥ-ಈ ಎಲ್ಲ ರಥಗಳನ್ನು ಇವರೇ ನಿರ್ಮಿಸಿರುವರು[೧೯].

ಗುಲಬುರ್ಗಾ ಜಿಲ್ಲೆಯ ಆಳಂದ ತಾಲೂಕಿನ ಭೀಮಶಿ, ಮಾನಪ್ಪ, ಬಡಿಗೇರ. ಇವರು ಕಬ್ಬಿಣದ ರಥಗಳನ್ನು ತಯಾರಿಸುವರು. ವಂಶಪರಂಪರಾಗತವಾಗಿ ಬಡಿಗ ಕೆಲಸವನ್ನು ಮಾಡುತ್ತ ಬಂದ ಇವರು ಸುಮಾರು ಹದಿನೈದು ವರ್ಷಗಳಿಂದ ಕಬ್ಬಿಣದ ರಥಗಳನ್ನು ತಯಾರಿಸತೊಡಗಿದ್ದರು. ಮಾನಪ್ಪನವರ ಅಜ್ಜನಾದ ಕಾಳಪ್ಪ ಅವರು ಕಾಷ್ಠ ಮಾಧ್ಯಮದಲ್ಲಿ ಕುಸುರಿ ಕೆತ್ತನೆಯನ್ನು ಮಾಡಿ ಅನೇಕ ಪೀಠೋಪಕರಣಗಳು, ದ್ವಾರಗಳು, ಛತ್ತ , ನಕಾಶೆ ಇಂತಹ ಅನೇಕ ಕಲಾತ್ಮಕ ವಸ್ತುಗಳನ್ನು ತಯಾರಿಸುತ್ತಿದ್ದರು. ಮುಂದೆ ಮಾನಪ್ಪನವರ ತಂದೆ ಅದೇ ಕೆಲಸವನ್ನು ಮುಂದುವರೆಸಿಕೊಂಡು ಬಂದರು. ಅವರು ಒಂದೆರಡು ಕಾಷ್ಠ ಮಾಧ್ಯಮದ ಅಂಕಣ ರಥಗಳನ್ನು ತಯಾರಿಸಿದವರು. ಇದರಿಂದಾಗಿ ಮಾನಪ್ಪನವರಿಗೆ, ತಂದೆಯವರಿಂದ ರಥ ತಯಾರಿಕೆಯ ವಿದ್ಯೆ ದೊರೆಯಿತು. ಇವರು ಡಿಪ್ಲೋಮಾ ಮೆಕ್ಯಾನಿಕಲ್ ಕೋರ್ಸನ್ನು ಕಲಿತ ನಂತರ, ಕಬ್ಬಿಣದ ರಥಗಳನ್ನು ತಯಾರಿಸುವ ಸಾಹಸ ಮಾಡಿದರು. ಇಷ್ಟು ವರ್ಷಗಳಲ್ಲಿ ಸುಮಾರು ಎಂಟು ರಥಗಳನ್ನು ನಿರ್ಮಿಸಿರುವರು. ಇವೆಲ್ಲವು ಕನಿಷ್ಠ ಹದಿನೈದು ಅಡಿಗಳಿಂದ ಮೂವತ್ತೈದು ಅಡಿಗಳಷ್ಟು ಎತ್ತರವಾಗಿವೆ. ಅಲ್ಲದೆ ಕಲಾತ್ಮಕವಾಗಿ ಒಳ್ಳೆಯ ಮಾಟದಿಂದ ಕೂಡಿವೆ. ಗುಲಬರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಕೊತ್ತಲ ಬಸವೇಶ್ವರ ದೇವಸ್ಥಾನದ ರಥ, ಆಳಂದ ತಾಲೂಕಿನ ಮಾದನ ಹಿಪ್ಪರಗಾದ ಶಿವಲಿಂಗೇಶ್ವರ ರಥ, ಸುರಪೂರ ತಾಲೂಕಿನ ನಗನೂರದ ಶರಣಬಸವೇಶ್ವರ ರಥ-ಹೀಗೆ ಜಿಲ್ಲೆಯ ವಿವಿಧ ದೇವಸ್ಥಾನಗಳಲ್ಲಿ ಇವರು ತಯಾರಿಸಿದ ರಥಗಳನ್ನು ನೋಡಬಹುದು.

ಗುಲಬರ್ಗಾಜಿಲ್ಲೆ ಶಹಾಪೂರ ತಾಲೂಕಿನ ಜೇರಟಗಿಯ ಶ್ರೀ ಬಸವರಾಜ ಶಿವಾನಂದ ಕಲೆಗಾರ. ಎಂಬುವರು ಕಬ್ಬಿಣದ ರಥಗಳನ್ನು ತಯಾರಿಸುವರು. ಇವರು ಜೇರಟಗಿಯಲ್ಲಿ ಎಸ್.ಎಸ್.ಕೆ. ನಿವ್ ಫೆಬ್ರಿಕೇಶನ್ ಎಂಬ ಹೆಸರಿನ ವರ್ಕ್‌ಶಾಪನ್ನು ಆರಂಭಮಾಡಿ, ಮೊದಮೊದಲು ಗೃಹೋಪಯೋಗಿ ವಸ್ತುಗಳನ್ನು ತಯಾರಿಸುತ್ತಿದ್ದರು. ನಂತರ ಮೊದಲ ಬಾರಿಗೆ, ಆಳಂದ ತಾಲೂಕಿನ ಹಿರೋಳಿ ಸೋಮಲಿಂಗ ದೇವಸ್ಥಾನದ ಕಮೀಟಿಯವರ ಆದೇಶದ ಮೇರೆಗೆ ಒಂದು ಕಬ್ಬಿಣದ

೧೯. '' ಸಂದರ್ಶನ-ಭೀಮರಾಯ್ ಅಂಬಣ್ಣ, ವಿಶ್ವಕರ್ಮ, ಹೆಡಗಿಮದ್ರಾ

ರಥವನ್ನು ತಯಾರಿಸಿದರು. ಈ ರಥವು ಸುಮಾರು ಮೂವತ್ತೈದು ಅಡಿ ಎತ್ತರವನ್ನು ಹೊಂದಿದೆ. ಇವರು ತಯಾರಿಸಿದ ರಥಗಳು ಸುಮಾರು ಇಪ್ಪತ್ತು ಅಡಿಗಳಿಂದ ಮೂವತ್ತೈದು ಅಡಿಗಳಷ್ಟು ಎತ್ತರವಾಗಿವೆ. ಆಳಂದ ತಾಲೂಕು ಖಾನಾಪೂರದ ಚನ್ನವೀರ ಸ್ವಾಮಿ ಮಠದ ರಥ, ಪದಸಾವಳಿಯ ಧರ್ಮರಾಯನ ರಥ, ಜಿಡಗಾದ ಯಲ್ಲಾಲಿಂಗ ಮಹಾರಾಜರ ಮೂವತ್ತೈದು ಅಡಿ ಎತ್ತರ ರಥ-ಹೀಗೆ ಬೇರೆ ಬೇರೆ ದೇವಸ್ಥಾನಗಳಲ್ಲಿ ಇವರು ಮಾಡಿರುವ ರಥಗಳು ಕಾಣಸಿಗುತ್ತವೆ.

ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ದೇಸನೂರದ ಶಂಕರಪ್ಪ ಚಿದಾನಂದಪ್ಪ ಬಡಿಗೇರ ಇವರು ಇತ್ತೀಚೆಗೆ ಸುಮಾರು ಹತ್ತು ವರ್ಷಗಳಿಂದ ಕೆಲವು ಕಬ್ಬಿಣದ ರಥಗಳನ್ನು ತಯಾರಿಸಿರುವವರು. ಮೊದಲು ಕಾಷ್ಠ ಮಾಧ್ಯಮದ ಅಂಕಣದ ರಥಗಳನ್ನು ನಿರ್ಮಿಸುತ್ತಿದ್ದ ಅವರ ತಂದೆಯವರಿಂದ ರಥ ನಿರ್ಮಾಣದ ಪ್ರತಿಯೊಂದು ಹಂತಗಳನ್ನು ತಿಳಿದಿರುವುದರಿಂದ, ಈಗ ಕಬ್ಬಿಣದ ರಥಗಳನ್ನು ಅತೀ ಸರಳವಾಗಿ ತಯಾರಿಸಬಲ್ಲರು. ಇವರಿಗೆ ಸೂಕ್ಷ್ಮವಾದ ಕುಸುರಿ ಕೆತ್ತನೆ ಕಲೆಯೂ ಸಹ ಕರಗತವಾಗಿದೆ. ಇವರು ತಯಾರಿಸಿದ ರಥಗಳು ಸುಮಾರು ಹದಿನೆಂಟು ಅಡಿಯಿಂದ ಮೂವತ್ತು ಅಡಿಗಳಷ್ಟು ಎತ್ತರವನ್ನು ಹೊಂದಿವೆ. ಗೋಕಾಕ ತಾಲೂಕಿನ ಅಕ್ಕತಂಗಿಯರ ಹಳ್ಳದ ಶ್ರೀ ದುರ್ಗಾದೇವಿಯ ಕಬ್ಬಿಣದ ರಥವು ಸುಮಾರು ಇಪ್ಪತ್ತೈದು ಅಡಿಗಳಷ್ಟು ಎತ್ತರವಾಗಿದೆ. ಕುರಣಿಯ ಗಂಗಾದೇವಿಯ ರಥ ಸುಮಾರು ಇಪ್ಪತ್ತು ಅಡಿ ಎತ್ತರವಾಗಿದೆ. ಅಂಕಲಗಿಯ ಅಡವಿಸಿದ್ದೇಶ್ವರ ರಥವು ಸುಮಾರು ಮೂವತ್ತು ಅಡಿಗಳಷ್ಟು ಎತ್ತರವನ್ನು ಹೊಂದಿದೆ. ಹೀಗೆ ಜಿಲ್ಲೆಯ ಕೆಲವು ದೇವಸ್ಥಾನಗಳಲ್ಲಿ ಇವರು ತಯಾರಿಸಿದ ರಥಗಳನ್ನು ಕಾಣಬಹುದು.

ಇದೇ ಜಿಲ್ಲೆಯ ಗೋಕಾಕ ತಾಲೂಕಿನ ಮಾವನೂರಿನವರಾದ ಶರಣಪ್ಪ ಬಡಿಗೇರ. ಮತ್ತು ಕಾಳಪ್ಪ ಪತ್ತಾರ. ಇವರು ಮೂರು ವರ್ಷಗಳಿಂದೀಚೆಗೆ ಎರಡು ಕಬ್ಬಿಣದ ರಥಗಳನ್ನು ತಯಾರಿಸಿರುವವರು. ಇವರು ದೇಸನೂರು ಶಂಕರಪ್ಪನವರ ಹತ್ತಿರ ರಥ ನಿರ್ಮಾಣ ಕಾರ್ಯವನ್ನು ಕಲಿತವರು. ಹುಕ್ಕೇರಿ ತಾಲೂಕು ಬಳೂಟಗಿಯ ಬಸವಣ್ಣನ ರಥ ಹಾಗೂ ಗೋಕಾಕ ತಾಲೂಕು ಸುತ್ತಾನಪೂರದ ಸಿದ್ದೇಶ್ವರ ರಥಗಳನ್ನು ಇವರು ತಯಾರಿಸಿರುವವರು.

ಬೀದರ ಜಿಲ್ಲೆಯ ಹುಮನಾಬಾದ ಊರಿನವರಾದ ಕಾಳಪ್ಪ ರೇವಣಸಿದ್ದಪ್ಪ ಶಿಲ್ಪಿ ಇವರು ಕಬ್ಬಿಣದ ರಥಗಳನ್ನು ತಯಾರಿಸುವವರು. ಮೂಲತಃ ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ನಾಲವಾರದವರಾದ ಇವರು ಸುಮಾರು ಹನ್ನೆರಡು ರಥಗಳನ್ನು ತಯಾರಿಸಿರುವವರು. ತಲೆತಲಾಂತರದಿಂದಲೂ ಬಡಿಗ ವೃತ್ತಿ ಮಾಡುತ್ತ ಬಂದ ಇವರು ಕಾಷ್ಠ ಮಾಧ್ಯಮದಲ್ಲಿ ಕುಸುರಿ ಕೆತ್ತನೆಯಿಂದ ಕೂಡಿದ ಅನೇಕ ಪೀಠೋಪಕರಣಗಳನ್ನು ತಯಾರಿಸಿರುವವರು. ಬೀದರ ಜಿಲ್ಲೆಯ ಬಸವಕಲ್ಯಾಣದ ಬಸವೇಶ್ವರ ರಥ, ಜೇವರಗಿ ತಾಲೂಕು ಡಿಗ್ಗಿ ಸಂಗಮೇಶ್ವರ ರಥ, ಚಿತಾಪೂರ ತಾಲೂಕು ಕಾಳಗಿಯ ನೀಲಕಂಠೇಶ್ವರ ರಥ-ಹೀಗೆ ಬೀದರ್ ಹಾಗೂ ಗುಲಬರ್ಗಾ ಜಿಲ್ಲೆಗಳ ಅನೇಕ ದೇವಸ್ಥಾನಗಳಲ್ಲಿ ಇವರು ತಯಾರಿಸಿರುವ ರಥಗಳು ಕಂಡುಬರುತ್ತವೆ.

ಕಬ್ಬಿಣದ ರಥಗಳು ನಿರ್ಮಾಣವಾಗಲು ಅನೇಕ ಸಹಾಯಕ ಕೆಲಸಗಾರರ ಜೆವರೂ ಸೇರಬೇಕಾಗುವುದು. ಬಿಜಾಪೂರದ ಬಸವರಾಜ ಬಸವಂತಪ್ಪ ಹೂಗಾರ, ಮಹಾರುದ್ರಪ್ಪ

ದೇವೇಂದ್ರ ಬಡಿಗೇರ, ರಾಯಚೂರು ಜಿಲ್ಲೆಯ ಮಾರುತಿ ಬಸಪ್ಪ ಪಾಟೀಲ, ಹುಚ್ಚಪ್ಪಾ ಲಕ್ಷ್ಮಪ್ಪ ಬಾರಕೇರ, ಗುಲಬುರ್ಗಾದ ಮಾರುತಿ ಅಬ್ಬಲಗೇರಿ, ಅಕ್ಬರ್ ಮನಿಯಾರ, ಬೀದರ ಜಿಲ್ಲೆಯ ದಾವಲಸಾಹೇಬ ಚಂದುಸಾಹೇಬ ಕೊತಬಾಳ, ಯಮನೂರ ಸಾಹೇಬ ಮನ್ನಾಪೂರ, ಬೆಳಗಾಂವ ಜಿಲ್ಲೆಯ ಮಾನಪ್ಪ ಬಡಿಗೇರ ಹೀಗೆ ಅನೇಕ ಸಹಾಯಕ ಕೆಲಸಗಾರರು ಕಬ್ಬಿಣದ ರಥ ತಯಾರಿಕೆಯಲ್ಲಿ ನಿರತರಾಗಿರುವರು ಇವರೂ ಸಹ ಮುಂದೆ ಸ್ವತಂತ್ರವಾಗಿ ಕಬ್ಬಿಣದ ರಥಗಳನ್ನು ತಯಾರಿಸುವಷ್ಟು ಅನುಭವವುಳ್ಳವರು.

ಬ. ಬೆಳ್ಳಿಯ ರಥಗಳ ತಯಾರಕರು : ಮೈಸೂರಿನ ಡಿ.ವಿ. ಸುಬ್ಬಣ್ಣಾಚಾರ್ಯ ಅವರು ಅತ್ಯುತ್ತಮವಾದ ಶಿಲ್ಪಕಲಾ ನೈಪುಣ್ಯತೆಯನ್ನು ಹೊಂದಿದ ಬೆಳ್ಳಿ ರಥಗಳ ತಯಾರಕರಾಗಿದ್ದರು. ೧೯೦೮ರಲ್ಲಿ ಇವರ ಜನನವಾಯಿತು. ತಂದೆ ವೀರಪ್ಪಾಚಾರ್ಯರು ಇವರನ್ನು ಜೊತೆಯಲ್ಲಿರಿಸಿಕೊಂಡು ಶಿಲ್ಪಕಲಾಭ್ಯಾಸವನ್ನು ಮಾಡಿಸಿದರು. ತಂದೆ ದೈವಾದೀನರಾದ ಮೇಲೆ ತಾಯಿಯು ಇವರ ಅಭಿರುಚಿಯನ್ನು ಅರಿತು, ಶಿಲ್ಪಕಲೆಯ ಅಭ್ಯಾಸಕ್ಕೆ ತೊಡಗಿಸಿದರು. ನಂತರ ಇವರು ಅರಮನೆಯಲ್ಲಿ ನಡೆಯುತ್ತಿದ್ದ ಬೆಳ್ಳಿ ಕೆಲಸದ ಇಲಾಖೆಗೆ ಸೇರಿಕೊಂಡರು. ಆ ಇಲಾಖೆಯ ಮುಖ್ಯಸ್ಥರಾಗಿದ್ದ ಶಿಲ್ಪಿ ನಂಜುಂಡಾಚಾರ್ಯರ ಅಚ್ಚುಮೆಚ್ಚಿನ ಶಿಷ್ಯರಾಗಿ, ಶಿಲ್ಪ ವಿದ್ಯೆಯಲ್ಲಿ ಪರಿಣಿತರಾಗಿ, ಬೆಳ್ಳಿಯ ಅನೇಕ ಸುಂದರ ಮೂರ್ತಿಗಳನ್ನು ನಿರ್ಮಿಸುವಷ್ಟು ಸಾಮರ್ಥ್ಯವನ್ನು ಪಡೆದರು.

೧೯೪೦ ರಲ್ಲಿ ಗ್ವಾಲಿಯರ್ ಮಹಾರಾಜರು, ಅವರ ಮನೆಯಲ್ಲಿ ಬೆಳ್ಳಿಯ ಅಂಬಾರಿಯನ್ನು ತಯಾರಿಸಲು ಇವರನ್ನು ಬರಮಾಡಿಕೊಂಡರು. ನಂತರ ಬದರಿ ಕ್ಷೇತ್ರಕ್ಕೆ ಬೆಳ್ಳಿಯ ಬಾಗಿಲು ಮಾಡಗಳನ್ನು ರಚಿಸಿಕೊಟ್ಟರು. ನಂತರ ಇವರು ಬೆಳ್ಳಿಯಲ್ಲಿ ನಾನಾ ವಿಧವಾದ ಕಲಾಕೃತಿಗಳನ್ನು ತಯಾರಿಸಿ, ಕಲ್ಕತ್ತ , ಬೊಂಬಾಯಿ, ದೆಹಲಿ, ಅಹಮದಾಬಾದ ಮುಂತಾದ ಕಡೆಗಳ ವಸ್ತು ಪ್ರದರ್ಶನದಲ್ಲಿ ಪ್ರದರ್ಶಿಸಿ ಕೀರ್ತಿಶಾಲಿಗಳಾದರು.

ಸುಬ್ಬಣ್ಣಾಚಾರ್ಯ ಅವರ ಕಲೆಯನ್ನು ಮೆಚ್ಚಿದ ಪ್ರಾಣಾಚಾರ್ಯರು ಅವರನ್ನು ಧರ್ಮಸ್ಥಳಕ್ಕೆ ಕರೆತಂದು ಶ್ರೀ ಮಂಜಯ್ಯ ಹೆಗಡೆಯವರಿಗೆ ಪರಿಚಯಿಸಿದರು. ಅವರು ದೇವಸ್ಥಾನಕ್ಕೆ ಬೇಕಾದ ಬೆಳ್ಳಿಯ ಮಂಟಪ, ಪಲ್ಲಕ್ಕಿ, ಬಾಗಿಲುವಾಡ ಮೊದಲಾದವುಗಳನ್ನು ಮಾಡಿಸಿದರು. ೧೯೫೧ ರಲ್ಲಿ ನಡೆದ ಮಹಾನಡಾವಳಿಯ ಜ್ಞಾಪಕಾರ್ಥವಾಗಿ, ಇಪ್ಪತ್ತು ಅಡಿ ಎತ್ತರದಲ್ಲಿ ಅತ್ಯುತ್ತಮ ಶಿಲ್ಪಕಲೆಯಿಂದ ಕೂಡಿದ ಬೆಳ್ಳಿಯ ರಥವನ್ನು ಇವರಿಂದ ಮಾಡಿಸಿದರು. ಇದು ರತ್ನವರ್ಮ ಹೆಗಡೆಯವರ ಕಾಲದಲ್ಲಿ ಪೂರ್ಣವಾಗಿ, ಇವರ ಹೆಸರು ಆ ಭಾಗದ ಎಲ್ಲೆಡೆಯಲ್ಲಿಯೂ ಪಸರಿಸಿತು. ಉಡುಪಿಯ ಪುತ್ತಿಗೆ ಮಠದ ರಥವನ್ನೂ ಸಹ ಇವರೇ ಮಾಡಿಕೊಟ್ಟರು. ನಂತರ ಬಂಟವಾಳ ಮುಂತಾದ ಕಡೆಗಳಿಂದ ಹಲವಾರು ದೇವಾಲಯಗಳ ಬಾಗಿಲುವಾಡ, ದೇವರ ಕವಚ, ಪಲ್ಲಕ್ಕಿ, ಮುಂಟಪ, ಮುಂತಾದವುಗಳನ್ನು ಸುಬ್ಬಣ್ಣಾಚಾರ್ಯ ಅವರು ರಚಿಸಿಕೊಟ್ಟರು. ನಮ್ಮ ನಡುವೆ ಇಲ್ಲವಾದರೂ, ಅವರ ಅಪೂರ್ವ ಕಲಾಕೃತಿಗಳು ಅಮರವಾಗಿ ಉಳಿದಿವೆ[೨೦].

ನಾಗಮಂಡಲದ ಲೋಹಶಿಲ್ಪಿ ಚಿನ್ನಾಚಾರ್ಯ ಅವರು ೧೯೬೩ ರಲ್ಲಿ ಜನಿಸಿದರು. ಇವರ

೨೦. '' ಶಿಲ್ಪಿ ಸಂಕುಲ'' ಎ.ಆರ್. ತಿಪ್ಪೇಸ್ವಾಮಿ, ಪ್ರ. ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ೧೯೯೬ ಪು.ಸಂ. ೪೯

ತಂದೆ ಲೋಹಶಿಲ್ಪಕಲೆಯಲ್ಲಿ ಖ್ಯಾತರಾದ ವೆಂಕಟಾಚಾರ್ಯರು. ಚಿನ್ನಾಚಾರ್ಯ ಅವರು, ತಮ್ಮ ತಂದೆಯವರು ಮಾಡುತ್ತಿದ್ದ ಕಂಚಿನ ವಿಗ್ರಹಗಳನ್ನು ನೋಡಿ ಶಿಲ್ಪಕಲೆಗೆ ಮನಸೋತರು. ಅವರು ನಾಗಮಂಡಲವನ್ನು ಬಿಟ್ಟು ಮೈಸೂರಿಗೆ ಬಂದು ನೆಲೆಸಿ, ಪಂಚಲೋಹದ ವಿಗ್ರಹ ಕೆತ್ತನೆಯಲ್ಲಿ ಪ್ರಖ್ಯಾತರಾಗಿದ್ದರು. ೧೯೫೭ ರಲ್ಲಿ ಇವರು ರಚಿಸಿದ ಬೆಳ್ಳಿಯ ಸುಮಾರು ನಾಲ್ಕು ಅಡಿಯ ಬೆಳ್ಳಿಯ ರಥವನ್ನು ಭರತಪುರದ ಅರಮನೆಯಲ್ಲಿ ಕಾಣಬಹುದು. ಇದಲ್ಲದೆ ಶ್ರೀ ಕೂಡ್ಲಿ ಮಠದಲ್ಲಿ ಚಿನ್ನಾಚಾರ್ಯರು ರಚಿಸಿದ ಬೆಳ್ಳಿಯ ಪಲ್ಲಕ್ಕಿ ಮತ್ತು ಎರಡು ಅಡಿಯ ಚಿಕ್ಕ ಬೆಳ್ಳಿಯ ರಥವು ಅಜರಾಮರವಾಗಿದೆ[೨೧].

ಮೈಸೂರಿನ ಇನ್ನೊಬ್ಬ ಖ್ಯಾತ ರಜತ ಶಿಲ್ಪಿ ಅಂಕಪ್ಪಾಚಾರ್ಯರು ೧೯೯೦ ರಲ್ಲಿ ಜನಿಸಿದರು. ಅವರ ತಂದೆಯ ಹೆಸರೂ ಅಂಕಪ್ಪಾಚಾರ್ಯರೆಂದೆ. ಇವರು ಕಾಷ್ಠ ಮಾಧ್ಯಮದ ಕುಸುರಿಕೆತ್ತನೆಯಲ್ಲಿ ಅತ್ಯುತ್ತಮ ಕಲಾ ನೈಪುಣ್ಯತೆಯನ್ನು ಹೊಂದಿದ್ದರು. ಉತ್ತಮ ಸ್ವರ್ಣಶಿಲ್ಪಿಗಳೆಂದು ಹೆಸರು ಪಡೆದ ಸಿಂಗಣ್ಣಾಚಾರ್ಯ ಅವರು ಅಂಕಪ್ಪಾಚಾರ್ಯ ಅವರಿಗೆ ಬೆಳ್ಳಿಯ ಮಾಧ್ಯಮದ ಶಿಲ್ಪಕಲೆಯ ವಿದ್ಯೆಯನ್ನು ಧಾರೆಯರೆದರು. ಅಂಕಪ್ಪಾಚಾರ್ಯ ಅವರ ಕಲಾಕೃತಿಗಳು ನಾಡಿನ ನಾನಾ ಕಡೆಗಳಲ್ಲಿ ಕಂಡುಬರುತ್ತವೆ. ಬೆಳ್ಳಿಯ ಅನೇಕ ಬಗೆಯ ವಿಗ್ರಹವಸ್ತುಗಳನ್ನು, ಕವಚಗಳನ್ನು, ಪಲ್ಲಕ್ಕಿಗಳನ್ನು, ಸಿಂಹಾಸನಾಧಿಗಳನ್ನು ನಿರ್ಮಿಸಿ ಖ್ಯಾತಿಗಳಿಸಿದರು. ಮೈಸೂರಿನ ಪರಕಾಲಸ್ವಾಮಿಯ ಬೆಳ್ಳಿಯ ಮಂಟಪದ ಕೆಲಸದಲ್ಲಿ ಇವರದು ಮುಖ್ಯ ಪಾತ್ರವಾಗಿತ್ತು. ಕೂಡ್ಲಿ ಮಠದಲ್ಲಿ ನಾಲ್ಕು ಸಾವಿರ ತೊಲೆಯ ಬೆಳ್ಳಿಯ ಅಪೂರ್ವ ಕಲಾ ವೈಖರಿಯ ಸಿಂಹಾಸನವನ್ನು ಕಾಣಬಹುದು. ಮೈಸೂರಿನ ಮಹಾದೇಶ್ವರ ಬೆಟ್ಟದ ವೃಷಭವಾಹನವನ್ನು ಹತ್ತು ಸಾವಿರ ತೊಲೆಯ ಬೆಳ್ಳಿಯಲ್ಲಿ ಮಾಡಿಕೊಟ್ಟಿರುವರು. ಹೀಗೆ ಬೆಂಗಳೂರಿನ ಶ್ರೀ ರಂಗನಾಥ ದೇವಾಲಯಕ್ಕೆ ವಿಶೇಷ ಬೆಳ್ಳಿಯ ವಾಹನವನ್ನು ತಯಾರಿಸಿಕೊಟ್ಟಿರುವರು[೨೨].

ಅಂಕಪ್ಪಾಚಾರ್ಯ ಅವರು ಬೆಳ್ಳಿಯ ತಗಡುಗಳಲ್ಲಿ ಚಿತ್ರಪಟಗಳನ್ನು ತಯಾರಿಸುತ್ತಿದ್ದರು. ಮದರಾಸು ಪ್ರಾಂತ್ಯದ ಕೊಲ್ಲಂಗೋಡು ರಾಜರಿಗೆ ೧೯೩೨ ರಲ್ಲಿ ಸಪ್ತಾಶ್ವಗಳ ರಥವೇರಿ ಅಂತರಿಕ್ಷದಲ್ಲಿ ಸಾಗುತ್ತಿರುವ ಸೂರ್ಯದೇವನ ಚಿತ್ರಪಟವನ್ನು ತಯಾರಿಸಿಕೊಟ್ಟರು. ಅಲ್ಲದೆ ಗ್ವಾಲಿಯರ್‌ನಲ್ಲಿ ಐದು ಸಾವಿರ ತೊಲೆ ಬೆಳ್ಳಿಯಲ್ಲಿ ಕಲಾತ್ಮಕವಾದ ಸಿಂಹಾಸನವನ್ನು ನಿರ್ಮಿಸಿ ಕೊಟ್ಟ ನಂತರ, ಇವರ ಕೌಶಲ್ಯವನ್ನು ಮೆಚ್ಚಿಕೊಂಡ ಗ್ವಾಲಿಯರ್‌ದ ರಾಜರು ಒಂದು ಅಂಬಾರಿಯನ್ನು ತಯಾರಿಸಲು ಆದೇಶಿಸಿದರು. ಇದಲ್ಲದೆ ಸುಂದರ ರಥಗಳನ್ನು ಉತ್ತಮ ಶಿಲ್ಪಿಗಳಿಂದ ನಿರ್ಮಿಸಿದ ರಾಜರು, ಒಂದು ಕಲಾತ್ಮಕವಾದ ಬೆಳ್ಳಿಯ ಸಾರೋಟನ್ನು ಅಂಕಪ್ಪಾಚಾರ್ಯ ಅವರಿಂದಲೇ ತಯಾರಿಸಿಕೊಂಡರು.

ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕು ಗುಪ್ಪೇನಹಳ್ಳಿಯ ಶ್ರೀ ಎಂ. ಪರಮೇಶ್ವರಾಚಾರ್ಯ ಅವರು ಖ್ಯಾತ ರಥಶಿಲ್ಪಿಗಳು. ಇವರು ಕಾಷ್ಠ ಮಾಧ್ಯಮದಲ್ಲಿ ಅನೇಕ ರಥಗಳನ್ನು ತಯಾರಿಸಿರುವುದನ್ನು ಈಗಾಗಲೆ ತಿಳಿದಿರುವೆವು. ಇವರು ಉತ್ತಮ ಲೋಹಶಿಲ್ಪಿಯೂ ಹೌದು. ಇವರ ಮಾವನವರಾದ ಚಿಕ್ಕ ವೀರಾಚಾರ್ಯರಿಂದ ಚಿನ್ನ, ಬೆಳ್ಳಿ ಹಾಗೂ ಎರಕದ ಕೆಲಸಗಳನ್ನು ಕಲಿತರು. ಇವರು ಶಿಲ್ಪಕಲಾ

೨೧. '' ಶಿಲ್ಪಿ ಸಂಕುಲ!'' ಎ.ಆರ್. ತಿಪ್ಪೇಸ್ವಾಮಿ, ಪು.ಸಂ. ೪೩, ೧೯೯೬

೨೨. '' ಶಿಲ್ಪಿ ಸಂಕುಲ'' ಎ.ಆರ್. ತಿಪ್ಪೇಸ್ವಾಮಿ, ಪು.ಸಂ. ೩೫, ೧೯೯೬

ನಿಪುಣರಾಗಿ ಅನೇಕ ಮಾನ, ಸಮ್ಮಾನ, ಬಿರುದುಗಳನ್ನು ಪಡೆದಿದ್ದಾರೆ. ಇವರು ಬೆಳ್ಳಿಯ ಮಾಧ್ಯಮದಲ್ಲಿ ಅನೇಕ ದೇವತಾ ವಿಗ್ರಹಗಳು, ಪ್ರಭಾವಳಿಗಳು, ಪಲ್ಲಕ್ಕಿಗಳು, ಕವಚಗಳು, ಕಿರೀಟಗಳು ಹಾಗೂ ಅಭರಣಗಳನ್ನು ತಯಾರಿಸಿ ಖ್ಯಾತಿಯನ್ನು ಗಳಿಸಿದವರು. ಶ್ರೀ ಕೋಟೆ ಆಂಜನೇಯ ಸ್ವಾಮಿ ದೇವಸ್ಥಾನಕ್ಕೆ ಸುಂದರವಾದ ಪ್ರಭಾವಳಿಯನ್ನು ಬೆಳ್ಳಿಯಲ್ಲಿ ತಯಾರಿಸಿರುವರು. ಹೊಳಲ್ಕೆರೆ ತಾಲೂಕು ಚಿಕ್ಕಜಾಜೂರು ಬನಶಂಕರಿ ಅಮ್ಮನವರ ವಿಗ್ರಹ, ಗೊಪ್ಪನಹಳ್ಳಿಯ ಶ್ರೀ ವೀರಭದ್ರ ಸ್ವಾಮಿಯ ಬೆಳ್ಳಿ ವಿಗ್ರಹ, ಇಂಥಹ ಅನೇಕ ವಿಗ್ರಹಗಳನ್ನು ತಯಾರಿಸುವುದಲ್ಲದೆ, ಚೆನ್ನಗಿರಿ ತಾಲೂಕು ದೇವರಹಳ್ಳಿಯ ಶ್ರೀ ರಂಗನಾಥ ಸ್ವಾಮಿಗೆ ಬೆಳ್ಳಿಯ ಪಲ್ಲಕ್ಕಿ, ಶಿವಮೊಗ್ಗ ಜಿಲ್ಲೆಯ ಶ್ರೀ ಮರುಳುಸಿದ್ಧೇಶ್ವರ ದೇವಸ್ಥಾನಕ್ಕೆ ಒಂದು ಸುಂದರವಾದ ಬೆಳ್ಳಿಯ ಪಲ್ಲಕ್ಕಿ ಹಾಗೂ ಪ್ರಭಾವಳಿ, ಹೀಗೆ ಅನೇಕ ಬೆಳ್ಳಿಯ ಕಲಾತ್ಮಕ ವಸ್ತುಗಳನ್ನು ತಯಾರಿಸಿರುವರು. ಇವರಿಗೆ ಅವಕಾಶ ಸಿಕ್ಕರೆ ಬೆಳ್ಳಿಯ ರಥವನ್ನು ತಯಾರಿಸುವ ಸಾಮರ್ಥ್ಯವನ್ನು ಹೊಂದಿದವರೆಂದರೆ ತಪ್ಪಾಗಲಾರದು[೨೩].

ಬಳ್ಳಾರಿ ಜಿಲ್ಲೆಯ ಹೂವಿನ ಹಡಗಲಿಯ ಹಂಸಾನಂದಾಚಾರ್ಯರು ಒಳ್ಳೆಯ ಕಾಷ್ಠ ರಥಶಿಲ್ಪಿಗಳು ಹೌದು ಮತ್ತು ಲೋಹಶಿಲ್ಪಿಗಳೂ ಹೌದು. ಜಿಲ್ಲೆಯ ಅನೇಕ ದೇವಸ್ಥಾನಗಳಿಗೆ ಬಾಗಿಲುವಾಡಗಳು ಬೆಳ್ಳಿಯ ಪ್ರಭಾವಳಿಗಳು, ಬೆಳ್ಳಿಯ ಪೀಠ, ಕಿರೀಟ ಮತ್ತು ಹಲವು ವಿನ್ಯಾಸಗಳುಳ್ಳ ಪಲ್ಲಕ್ಕಿಗಳು ಹೀಗೆ ಹಲವಾರು ಸುಂದರ ಕಲಾತ್ಮಕತೆಯಿಂದ ಕೂಡಿದ ಬೆಳ್ಳಿಯ ವಸ್ತುಗಳನ್ನು ಮಾಡಿ ಕೊಟ್ಟಿರುವರು. ಇತ್ತೀಚೆಗೆ ಕೂಡ್ಲಿಗಿ ತಾಲೂಕು ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನಕ್ಕೆ ಸುಮಾರು ಹದಿನೈದು ಅಡಿ ಎತ್ತರದ ಬೆಳ್ಳಿಯ ರಥವನ್ನು ನಿರ್ಮಿಸಿಕೊಟ್ಟಿರುವರು. ಹಂಸಾನಂದಾಚಾರ್ಯರು ಹಾಗೂ ಅವರ ಮಕ್ಕಳು ಸೇರಿ ತಯಾರಿಸಿದ ಈ ರಥವು ಬೆಳ್ಳಿಯ ಪಟ್ಟಿಕೆಗಳಲ್ಲಿ ಕುಸುರಿ ಕೆತ್ತನೆಯಿಂದ ಕೂಡಿದ ಹಲವಾರು ಸೂಕ್ಷ್ಮ ಸುಂದರ ವಿನ್ಯಾಸಗಳನ್ನು ಹೊಂದಿದೆ[೨೪].

ಮೈಸೂರಿನ ಸಿಂಗಣ್ಣಾಚಾರ್ಯ ಅವರು ಹೆಸರಾಂತ ಲೋಹಶಿಲ್ಪಿಯಾಗಿದ್ದರು. ಇವರ ತಂದೆಯವರಾದ ನರಸಿಂಹಾಚಾರ್ಯ ಅವರು ಮತ್ತು ದೊಡ್ಡಪ್ಪಂದಿರಾದ ಸಿಂಗಣ್ಣನವರು ಅರಮನೆಯ ಶಿಲ್ಪಿಗಳಾಗಿ ಸೇವೆ ಸಲ್ಲಿಸಿದವರೇ. ಸಿಂಗಣ್ಣನವರು ಮುಮ್ಮಡಿ ಕೃಷ್ಣರಾಜ ಒಡೆಯರ ಪ್ರತಿಮೆಯನ್ನು ಬೆಳ್ಳಿಯಲ್ಲಿ ನಿರ್ಮಿಸಿದವರು. ತಂದೆಯವರಾದ ನರಸಿಂಹಾಚಾರ್ಯರು ಮಾಡಿದ ಕುಸುರಿ ಕೆಲಸದ ಸ್ವರ್ಣಛತ್ರೆಯು ತಿರುಪತಿ ವೆಂಕಟರಮಣ ಸ್ವಾಮಿಯ ಪ್ರತಿಮೆಯನ್ನು ಅಲಂಕರಿಸಿದೆ. ಇವರು ತಮ್ಮ ಕಲಾ ಪ್ರೌಢಿಮೆಯಿಂದ ಮನೆತನದ ಕೀರ್ತಿ ಗೌರವಗಳನ್ನು ಅಚ್ಚಳಿಯದಂತೆ ಮಾಡಿದವರು.

ಸಿಂಗಣ್ಣಾಚಾರ್ಯ ಅವರ ತಂದೆಯು ಮಗನನ್ನು ಉತ್ತಮ ಶಿಲ್ಪಿಯನ್ನಾಗಿ ಮಾಡಬೇಕೆಂದು ಕನಸು ಕಂಡಿದ್ದರು. ತಂದೆಯವರು ಕಾಲವಾದ ನಂತರ ಅವರ ತಾಯಿಯ ಪ್ರೋತ್ಸಾಹದಿಂದ, ವಿದ್ವಾನ್ ಜನ್ನಂಜಪ್ಪನವರಿಂದ ಸಂಗೀತಾಭ್ಯಾಸ ಮಾಡಿದರು. ಕ್ರಮೇಣ ಆಧ್ಯಾತ್ಮಿಕ ಸಾಧನೆಯತ್ತ ಒಲವು ಹರಿಸಿದರು. ಪುರಾಣ, ಶ್ರವಣ, ಧ್ಯಾನ, ಏಕಾಗ್ರತೆಯಿಂದ ಹದಗೊಂಡ ಮನಸ್ಸು, ಶಿಲ್ಪಕಲೆಯಲ್ಲಿ ಆಸಕ್ತಿ ತೋರಿತು. ಇವರ ದೊಡ್ಡಪ್ಪನವರಾದ ಚೆಲುವಾಚಾರ್ಯರು ಅರಮನೆಯ

೨೩. '' ಶಿಲ್ಪಿ ಸಂಕುಲ'' ಎ.ಆರ್. ತಿಪ್ಪೇಸ್ವಾಮಿ, ಪು.ಸಂ. ೧೦೬, ೧೯೯೬.

೨೪. ಸಂದರ್ಶನ- ಹಂಸಾನಂದ ಆಚಾರ ಬೆಳ್ಳಿಯ ರಥ ಶಿಲ್ಪಿ, ಕೊಟ್ಟೂರು, ಡಿಸೆಂಬರ ೨, ೨೦೦೨



ಶ್ರೀ ಎ ಪಿ ನೀಲಕಂಠಾಚಾರ್ಯ



ಶ್ರೀ ಎಮ್ ಪರಮೇಶ್ವರಾಚಾರ್ಯ
ರಾಷ್ಟ್ರ ಪ್ರಶಸ್ತಿ ಮತ್ತು ಜಕನಾಚಾರಿ ಪ್ರಶಸ್ತಿ ವಿಜೇತರು



ಶ್ರೀ ಎಮ್ ಚಂದ್ರಾಚಾರ್ಯ



ವಿಠ್ಠಲ ಬಡಿಗೇರ



ಕುಮಾರ ಸುರೇಂದ್ರಾಚಾರ್ಯ



ಶ್ರೀ ಮನೋಹರ ಎಮ್ ಬಡಿಗೇರ
ರಾಜ್ಯ ಪ್ರಶಸ್ತಿ ವಿಜೇತರು



ಶ್ರೀ ಹಂಸಾನಂದಾಚಾರ್ಯ ಹಾಗೂ ಅವರ ಪುತ್ರ



ಶ್ರೀ ಚಿದಾನಂದ ಬಡಿಗೇರ



ಶ್ರೀ ಶಂಕರಪ್ಪ ಬಡಿಗೇರ ಹಾಗೂ ಸಹಾಯಕ ಶಿಲ್ಪಿಗಳು



ಶ್ರೀ ನಾಗಲಿಂಗಪ್ಪ ಬಡಿಗೇರ ಹಾಗೂ ಸಹಾಯಕ ಶಿಲ್ಪಿಗಳು



ಶ್ರೀ ಮಾನಪ್ಪ ಬಡಿಗೇರ



ರಥಶಿಲ್ಪ ಕೇಂದ್ರದಲ್ಲಿ ತರಬೇತಿ ಪಡೆಯುತ್ತಿರುವ ಸಹಾಯಕ ರಥಶಿಲ್ಪಿಗಳು ಬೆಂಗಳೂರ



ಶ್ರೀ ಮಾರುತಿ ಕಂಬಾರ ಹಾಗೂ ಸಹಾಯಕ ಶಿಲ್ಪಿಗಳು



ಶ್ರೀ ಪವಾರ
ರಥಶಿಲ್ಪಿ

ಶಿಲ್ಪಿಗಳಾಗಿದ್ದರು. ಇವರ ಬಳಿ ಅರಮನೆಯಲ್ಲಿ ಕೆಲಸ ಮಾಡುವ ಅವಕಾಶ ದೊರೆಯಿತು. ಅರಮನೆಯ ಬಾಗಿಲುವಾಡಗಳನ್ನು ಬೆಳ್ಳಿಯಲ್ಲಿ ತಯಾರಿಸುವಾಗ ಮೈಸೂರಿನ ಅಗ್ರಗಣ್ಯ ಶಿಲ್ಪಿಗಳ ಜೊತೆ ಸಿಂಗಣ್ಣಾಚಾರ್ಯರೂ ಕೆಲಸ ಮಾಡಿದಂತವರು [೨೫].

ಇವರು ಅನೇಕ ಬೆಳ್ಳಿಯ ಕಲಾತ್ಮಕ ವಸ್ತುಗಳನ್ನು ತಯಾರಿಸಿದವರು. ಅವುಗಳನ್ನು ನಾಡಿನ ವಿವಿಧೆಡೆಯಲ್ಲಿ ಕಾಣಬಹುದು. ನಂಜನಗೂಡಿನ ಶ್ರೀನಂಜುಂಡೇಶ್ವರ ದೇವಾಲಯದ ಗರ್ಭಗುಡಿಯ ಹಿಂಭಾಗದ ಮೂಲೆಯಲ್ಲಿರುವ ಶ್ರೀ ಗಣಪತಿ ವಿಗ್ರಹಕ್ಕೆ ಬೆಳ್ಳಿಯ ಹಾಗೂ ಚಿನ್ನದ ಕವಚವನ್ನು ಮಾಡಿಕೊಟ್ಟರು. ಇವುಗಳಲ್ಲದೇ ಬೆಳ್ಳಿಯ ಬಾಗಿಲುವಾಡು ಹಾಗೂ ಚಿನ್ನದ ಕೀರಿಟವನ್ನು ಮಾಡಿಕೊಟ್ಟರು. ನಾಲ್ಕು ಸಾವಿರ ತೊಲೆ ಚಿನ್ನದಿಂದ ತಯಾರಿಸಲಾದ ಮೈಸೂರು ಅರಸರ ಸಿಂಹಾಸನವು, ಒಂದು ಅಪೂರ್ವವಾದ ಕಲಾಕೃತಿ. ಒಳ್ಳೆಯ ಕೆತ್ತನೆ ಕೆಲಸದಿಂದ ಕೂಡಿದ ಹಿಂಬದಿಯ ಗೋಪುರದ ಹಂತಗಳ ಎರಡೂ ಕಡೆಗಳಲ್ಲಿಯೂ ಚಂದನದ ಗೊಂಬೆಗಳು, ಮೇಲ್ಭಾಗದಲ್ಲಿ ಒಳ್ಳೆಯ ಕುಸುರಿ ಕೆತ್ತನೆಯಿಂದ ಕೂಡಿದ ಛತ್ರಿ-ಹೀಗೆ ಸಿಂಹಾಸನದ ಒಂದೊಂದು ಭಾಗವು ಕಲಾಪೂರ್ಣವಾಗಿದೆ. ಅರಮನೆಯ ಆವರಣದಲ್ಲಿ ಮನಸೆಳೆಯುವ ನಾಗಗಣಪತಿಯ ಸೌಂದರ್ಯವನ್ನು ಕಂಡ ಪ್ರಸಿದ್ದ ಚಿತ್ರಕಲಾವಿದರಾಗಿದ್ದ ರಾಜಾರವಿವರ್ಮರು ಸಿಂಗಣ್ಣಾಚಾರ್ಯ ಅವರನ್ನು ಬಹುವಾಗಿ ಪ್ರಶಂಶಿಸಿದ್ದರು[೨೬]. ಪ್ರತೀ ವರ್ಷವು ಮೈಸೂರು ನಗರದ ಪ್ರಮುಖ ಆಕರ್ಷಣೆಯಾದ ದಸರಾ ಮಹೋತ್ಸವದಲ್ಲಿ ಬಳಸಲಾಗುವ ಅಂಬಾರಿಯು ಸಿಂಗಣ್ಣಾಚಾರ್ಯರಿಂದಲೇ ತಯಾರಿಸಲ್ಪಟ್ಟಿದೆ. ಆರು ಸಾವಿರ ತೊಲೆ ಬಂಗಾರದ ತೆಳುವಾದ ತಗಡಿನ ಹೊದಿಕೆ, ಹನ್ನೆರಡು ಕಂಬಗಳು, ಮೇಲ್ಭಾಗದಲ್ಲಿ ಭವ್ಯವಾದ ಕಿರೀಟೋಪಾದಿಯ ಗೋಪುರ ಅದರ ಮೇಲೆ ಪಂಚಕಳಶಗಳು, ಸುಂದರ ಬಳ್ಳಿಗಳಂತೆ ನಕ್ಷೆಯುಳ್ಳ ಪೀಠ-ಹೀಗೆ ಕಲಾತ್ಮಕವಾದ ಅಂಬಾರಿಯನ್ನು ಕಾಣಬಹುದು. ಆಚಾರ್ಯರು ಮುಪ್ಪಿನಲ್ಲಿಯೂ ಸುಮ್ಮನೆ ಕೂತವರಲ್ಲ. ೧೯೫೬ ರಲ್ಲಿ ಚಿನ್ನದ ಸುಂದರ ಉಮಾಮಹೇಶ್ವರಿ ವಿಗ್ರಹವನ್ನು ೧೯೫೪ ರಲ್ಲಿ ಚಕ್ರಪಾಣಿ, ನಾಗಭೂಷಣ ಸ್ವಾಮಿ ಮುಂತಾದ ಪ್ರತಿಮೆಗಳನ್ನು, ೧೯೫೭ ರಲ್ಲಿ ಭರತಪೂರದ ರಾಜರಿಗಾಗಿ ರಾಮಲಕ್ಷಣ, ಸೀತಾದಿಗಳಿರುವ ಪ್ರತಿಮೆಯನ್ನು ನಿರ್ಮಿಸಿಕೊಟ್ಟರು.

ಸಿಂಗಣ್ಣಾಚಾರ್ಯ ಅವರ ಕೀರ್ತಿಯನ್ನು ಉಳಿಸಬಲ್ಲ ಬಹುಮುಖ್ಯ ವಸ್ತುಗಳೆಂದರೆ ಮೈಸೂರು ಅರಮನೆಗೆ ಸೇರಿದ ಅಂಬಾರಿ, ಬೆಳ್ಳಿಯ ಸುಂದರವಾದ ರಥ ಮತ್ತು ರತ್ನಸಿಂಹಾಸನ. ಮಹಾರಾಜರುಗಳು ವರ್ದಂತಿಯ ಸಮಯದಲ್ಲಿ ಉಪಯೋಗಿಸುತ್ತಿದ್ದ ಬೆಳ್ಳಿಯ ರಥವು ಅಷ್ಟೇ ಕಲಾಪೂರ್ಣವಾದದ್ದು. ಮೈಸೂರಿನ ಶ್ರೀ ಶಂಕರಾನಂದ ಭಾರತಿ ಮಠಕ್ಕೆ ಒಂದು ಬೆಳ್ಳಿಯ ಪಾರ್ಥಸಾರಥಿ ರಥವನ್ನು ಮಾಡಿಕೊಟ್ಟರು. ಎರಡು ಜೊತೆ ಕುದುರೆಗಳಿಂದ ಕೂಡಿದ ಈ ರಥವು ಅಸಾಧಾರಣ ಸೌಂದರ್ಯದಿಂದ ಶೋಭಿಸುತ್ತದೆ. ಹೀಗೆ ಬಹುವಿಧವಾಗಿ ತಮ್ಮ ಜೀವನವನ್ನು ಕಲೆಗಾಗಿ ತೇದ ಆಚಾರ್ಯರಿಗೆ ಜಯಚಾಮರಾಜೇಂದ್ರ ಒಡೆಯರು ''ಸ್ವರ್ಣಕಲಾ ನಿಪುಣ'' ಎಂಬ ಬಿರುದನ್ನು ನೀಡಿ ಗೌರವಿಸಿದ್ದರು. ಕರ್ನಾಟಕದ ಕಲಾವಿದರಿಗೆಲ್ಲ ಆಚಾರ್ಯ ಪುರುಷರಂತಿದ್ದ

---

೨೫. '' ಶಿಲ್ಪಿ ಸಂಕುಲ'' ಎ.ಆರ್. ತಿಪ್ಪೇಸ್ವಾಮಿ, ಪು.ಸಂ. ೧೫, ೧೯೯೬ .

೨೬. ''ಸ್ವರ್ಣಕಲಾ ನಿಪುಣ ಸಿಂಗಣ್ಣಾಚಾರ್ಯ'' ಎಸ್. ಪ್ರಭು, ಪ್ರಜಾವಣಿ, ಫೇಬ್ರುವರಿ ೪, ೧೯೯೧

ಸಿಂಗಣ್ಣಾಚಾರ್ಯರು ತಮ್ಮ ಶ್ರದ್ಧೆ, ಕಲಾಸಕ್ತಿಗಳನ್ನು ಕೊನೆಯತನಕ ಉಳಿಸಿಕೊಂಡು ಬಂದು, ಆದರ್ಶಪ್ರಾಯರಾಗಿ ಸ್ಫೂರ್ತಿದಾಯಕರಾದವರು[೨೭].

ಮೈಸೂರಿನ ಖ್ಯಾತ ಶಿಲ್ಪಿ ನಂಜುಂಡಾಚಾರ್ಯರು, ಇನ್ನೊಬ್ಬ ಶಿಲ್ಪಿ ಎನ್.ಎಂ. ಕೆ. ಆಚಾರ್ಯರು, ನಾಗಮಂಡಲದ ಶಿಲ್ಪಿ ಶ್ರೀ ಎನ್. ಜಿ. ನೀಲಕಂಠಾಚಾರ್ಯರು, ಗೋಕರ್ಣದ ಸುರೇಂದ್ರಾಚಾರ್ಯರು, ಸೊರಬದ ನಾಗಲಿಂಗಾಚಾರ್ಯರು-ಹೀಗೆ ಅನೇಕ ಲೋಹ ಶಿಲ್ಪಿಗಳು ಎಲೆಮರೆಯ ಕಾಯಿಯಂತೆ, ತಮ್ಮ ಅನುಭವದ ರುಚಿಯನ್ನು ತೋರಿಸಿ, ಬೆಳ್ಳಿಯ ಕೆಲಸಗಾರಿಕೆಯಲ್ಲಿ ನಿಪುಣರೆನಿಸಿಕೊಂಡಿರುವರು[೨೮].

ಇತ್ತೀಚೆಗೆ ಬನವಾಸಿಯ ಕದಂಬನಗರದ ನಿವಾಸಿ ಪ್ರಕಾಶ ಜಯರಾಮ್ ರೇವಣಕರ್ ಎಂಬುವರು ಚಿನ್ನ, ಬೆಳ್ಳಿಯ ಕುಸುರಿ ಕೆತ್ತನೆಯಲ್ಲಿ ರಾಜ್ಯದಲ್ಲಿ ಹೆಸರುವಾಸಿಯಾಗಿರುವರು. ವಿಶೇಷವಾಗಿ ಬೆಳ್ಳಿಯ ಮೂರ್ತಿಗಳು, ಬೆಳ್ಳಿಯ ಅಲಂಕಾರಿಕ ವಸ್ತುಗಳು, ಪೀಠಗಳು ಹಾಗೂ ವಿವಿಧ ವಿನ್ಯಾಸಗಳ ಪಲ್ಲಕ್ಕಿಗಳು, ಹೀಗೆ ಅನೇಕ ಬೆಳ್ಳಿಯ ಕಲಾತ್ಮಕ ವಸ್ತುಗಳನ್ನು ಇವರು ತಯಾರಿಸಿರುವರು. ಯಲ್ಲಾಪುರದ ಆಂಜನೇಯ, ಕುಮಟಾದ ಶಾಂತಿಕಾ ಪರಮೇಶ್ವರಿ, ಶಿರಸಿಯ ಗಣೇಶ ನಗರದ ಮಾರುತಿ, ಕಾರವಾರದ ಗಣಪತಿ, ಸ್ವರ್ಣವಲ್ಲಿ ಶ್ರೀಗಳ ಬೆಳ್ಳಿಯ ಪೀಠ, ಕುಮಟಾದ ಶಾಂತಿಕಾ ಪರಮೇಶ್ವರಿಯ ಸುಂದರವಾದ ಬೆಳ್ಳಿಯ ಪಲ್ಲಕಿ-ಹೀಗೆ ಇವೆಲ್ಲ ಕಲಾಕೃತಿಗಳಲ್ಲಿ ಇವರ ಕಲಾಪ್ರೌಢಿಮೆಯು ಮನಸೆಳೆಯುತ್ತದೆ. ಇಂತಹ ಅನುಭವಿ ಹಾಗೂ ಯುವ ಶಿಲ್ಪಿಗಳನ್ನು ಕರ್ನಾಟಕದ ಇನ್ನೂ ಕೆಲವುಕಡೆಗಳಲ್ಲಿ ಕಾಣಬಹುದು.

ಬೆಳಗಾಂವದ ಮಹಾದೇವ ಪತ್ತಾರ, ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲೂಕಿನ ಶಿವಕುಮಾರ ಕೊಪ್ಪದ, ಗೋಕಾಕ ತಾಲೂಕಿನ ಕಿರಣ ವಿಶ್ವಕರ್ಮ, ಧಾರವಾಡದ ಮುರುಳಿ ಪತ್ತಾರ ಹೀಗೆ ಅನೇಕ ಯುವ ಲೋಹಶಿಲ್ಪಕಾರರು ಸಾಧನೆಯ ಹಂತದಲ್ಲಿರುವುದನ್ನು ಕಾಣಬಹುದು. ಇವರು ಶಾಸ್ತ್ರಬದ್ಧವಾದ, ಕಲಾತ್ಮಕವಾದ ಬೆಳ್ಳಿಯ ಮೂರ್ತಿಗಳು, ಬಾಗಿಲುವಾಡಗಳು, ಪಲ್ಲಕ್ಕಿಗಳನ್ನು ತಯಾರಿಸುವಷ್ಟು ಪರಿಣಿತರಾಗಿರುವರು ಎಂದು ಹೇಳಿದರೆ ತಪ್ಪಾಗಲಾರದು.

ಕ. ಚಿನ್ನದ ರಥಗಳ ತಯಾರಕರು : ಈಗಾಗಲೇ ಪರಿಚಯಿಸಿರುವ ಬೆಳ್ಳಿಯ ರಥಗಳ ತಯಾರಕರೆಲ್ಲರೂ ಚಿನ್ನದ ಮಾಧ್ಯಮದಲ್ಲಿ ಕುಸುರಿ ಕೆತ್ತನೆ ಮಾಡುವ ನೈಪುಣ್ಯತೆಯನ್ನು ಹೊಂದಿದವರು. ಅನೇಕ ಬಾಗಿಲುವಾಡಗಳನ್ನು, ಪೀಠಗಳನ್ನು ಹಾಗೂ ಅನೇಕ ದೇವತಾಮೂರ್ತಿಗಳನ್ನು ಬೆಳ್ಳಿಯಲ್ಲಿ ತಯಾರಿಸಿರುವಂತೆ, ಚಿನ್ನದಲ್ಲಿಯೂ ತಯಾರಿಸಿರುವುದನ್ನು ಕಾಣಬಹುದು. ಬೆಳ್ಳಿಯ ಮಾಧ್ಯಮದಲ್ಲಿ ಪೂರ್ಣವಾಗಿ ಕುಸುರಿ ಕೆಲಸವನ್ನು ಕರಗತ ಮಾಡಿಕೊಂಡ ಈ ಎಲ್ಲ ಲೋಹ ಶಿಲ್ಪಿಗಳು ಚಿನ್ನದ ಮಾಧ್ಯಮದ ಕೆಲಸದಲ್ಲೂ ಪರಿಣತರು. ಆದ್ದರಿಂದ ಈಗಾಗಲೇ ಪರಿಚಯಿಸಿದ ಎಲ್ಲ ಬೆಳ್ಳಿಯ ರಥಶಿಲ್ಪಕಾರರನ್ನು ಚಿನ್ನದ ರಥಗಳ ತಯಾರಕರೆಂದು ಹೇಳಬಹುದು.

III. ಸಂಕೀರ್ಣ ಮಾಧ್ಯಮದ ರಥಶಿಲ್ಪಿಗಳು :

---

೨೭. " ದೇಗುಲ ರಥ ಶಿಲ್ಪ " ದ್ರುವರಾಜ ನಾ. ಗದಗಕರ, ಪು.ಸಂ. ೨೯, ೧೯೯೯

೨೮. " ಶಿಲ್ಪಿ ಸಂಕುಲ" ಎ.ಆರ್. ತಿಪ್ಪೇಸ್ವಾಮಿ, ಪು.ಸಂ. ೧೫, ೧೯೯೬ .

ಕರ್ನಾಟಕದ ಅನೇಕ ಪ್ರದೇಶಗಳಲ್ಲಿ ಕಟ್ಟುವ ರಥ ಹೂವಿನ ರಥ, ತೆಪ್ಪದ ರಥ ಹಾಗೂ ತಟ್ಟೆಯ ರಥಗಳು-ಹೀಗೆ ವಿವಿಧ ರೀತಿಯ ಸಂಕೀರ್ಣ ಮಾಧ್ಯಮದ ರಥಗಳನ್ನು ಕಾಣಬಹುದು. ಈ ಎಲ್ಲ ರಥಗಳು ಉತ್ಸವದ ಸಂದರ್ಭದಲ್ಲಿ ತಮ್ಮನ್ನು ಪ್ರದರ್ಶಿಸಿಕೊಂಡು ಕೆಲವು ದಿನಗಳ ನಂತರ ಮಾಯವಾಗಿ, ಮತ್ತೆ ಮುಂದಿನ ವರ್ಷದ ಉತ್ಸವದಲ್ಲಿಯೇ ಕಂಡುಬರುವವು, ಬೇರೆ ಬೇರೆ ವರ್ಷದ ಉತ್ಸವಗಳಲ್ಲಿ ಇವುಗಳ ವಿನ್ಯಾಸ ಹಾಗೂ ಬಾಹ್ಯ ಸೌಂದರ್ಯವು ಬೇರೆ ಬೇರೆಯಾಗಿಯೇ ಕಂಡುಬರುವುದು. ಏಕೆಂದರೆ ಈ ಎಲ್ಲ ರಥಗಳು ಚರರಥಗಳಾಗಿವೆ. ಈ ರಥಗಳು ಪ್ರಾದೇಶಿಕವಾಗಿ ದೊರೆಯುವ ವಸ್ತುಗಳಿಂದ ಬೇರೆ ಬೇರೆ ವಿನ್ಯಾಸಗಳಲ್ಲಿ ಆಯಾ ಪ್ರದೇಶದ ಜನರ ಕಲಾತ್ಮಕ ದೃಷ್ಟಿಗನುಸಾರವಾಗಿ ನಿರ್ಮಿತವಾಗುವವು.

ಕಾಷ್ಠ ಮಾಧ್ಯಮದ ಗಡ್ಡಿ ರಥಗಳನ್ನು ತಯಾರಿಸಲು, ನಿಪುಣ ಕಾಷ್ಠ ಶಿಲ್ಪಿಗಳೇ ಬೇಕು. ಲೋಹದ ರಥಗಳು ಲೋಹಶಿಲ್ಪಿಗಳಿಂದ ನಿರ್ಮಾಣಗೊಳ್ಳುವವು. ಆದರೆ ಈ ಸಂಕೀರ್ಣ ರಥಗಳು ಆಯಾ ಪ್ರದೇಶದ ಕಲಾತ್ಮಕ ಹಾಗೂ ಸೃಜನಶಕ್ತಿಯನ್ನು ಹೊಂದಿದ ಅನೇಕ ಜನರಿಂದ ನಿರ್ಮಿಸಲ್ಪಡುವವು. ಸಂಕೀರ್ಣ ರಥಗಳ ನಿರ್ಮಾಣ ಕಾರ್ಯದಲ್ಲಿ ಮುಖ್ಯವಾಗಿ ಆಯಾ ದೇವಸ್ಥಾನಗಳ ಪುರೋಹಿತರು ಊರಿನ ಬೇರೆ ಬೇರೆ ಬಡಿಗ ವೃತ್ತಿಯವರು ಹಾಗೂ ಅನೇಕ ಯುವಕರು ಪಾಲ್ಗೊಳ್ಳುವರು. ರಥಗಳ ಗಾಲಿಗಳನ್ನು ಅಚ್ಚುಗಳಿಗೆ ಅಳವಡಿಸುವುದು ಹಾಗೂ ಅಚ್ಚುಗಳನ್ನು ಸರಿಯಾಗಿ ಹೊಂದಿಸಲು ಊರಿನ ಬಡಿಗರು ಸಹಾಯಕರಾಗುವರು. ಹಲಗೆಗಳನ್ನು ಕಟ್ಟಲು ಮತ್ತು ಬಟ್ಟೆಗಳನ್ನು ಹೊದಿಸಲು ಯುವಕರು ಸಹಾಯ ಮಾಡುವರು. ಗೋಪುರ ಭಾಗದಲ್ಲಿ ಶಿಖರಕ್ಕೆ ಬೇಕಾಗುವ ಗೋಲಗಳನ್ನು ತಯಾರಿಸಲು ಊರಿನ ಮಾದರವರು ಸಹಾಯ ಮಾಡುವರು. ಊರಿನ ಗಾಣಿಗ ಜಾತಿಯವರಿಂದ ಎಣ್ಣೆಯನ್ನು ತಂದು ರಥವನ್ನು ಸ್ವಚ್ಛಗೊಳಿಸುವರು. ಎಲ್ಲರೂ ಸೇರಿ ರಥವನ್ನು ತಳಿರು ತೋರಣಗಳಿಂದ, ಹೂವಿನ ಹಾರಗಳಿಂದ ಸಿಂಗರಿಸುವುದಕ್ಕೆ ದೇವಸ್ಥಾನದವರು ಹಾಗೂ ಹೂಗಾರರು ಸಹಾಯಕರಾಗುವರು. ಹೀಗೆ ಯಾವುದೇ ಜಾತಿಭೇದವಿಲ್ಲದೆ, ಆಯಾ ಕೆಲಸವನ್ನು ಮಾಡಲು ಯಾರು ಸಾಮರ್ಥ್ಯವನ್ನು ಹೊಂದಿರುವರೋ ಅವರಿಂದ ಈ ರಥಗಳು ನಿರ್ಮಾಣಗೊಳ್ಳುವವು. ಆದ್ದರಿಂದ ಯಾವ ಊರಿನಲ್ಲಿ ರಥೋತ್ಸವವಾಗುವುದೋ, ಆ ಊರಿನವರೇ ಈ ಸಂಕೀರ್ಣ ರಥಗಳ ತಯಾರಕರೆಂದರೆ ತಪ್ಪಾಗಲಾರದು.

IV. ಶಿಲಾ ಮಾಧ್ಯಮದ ರಥಶಿಲ್ಪಿಗಳು :

ಶಿಲಾ ಮಾಧ್ಯಮದ ರಥಗಳು ರಾಜ ಮಹಾರಾಜರ ಕಾಲದಲ್ಲಿಯೇ ನಿರ್ಮಾಣಗೊಂಡಿರುವವು. ಇತ್ತೀಚೆಗೆ ಕರ್ನಾಟಕದಲ್ಲಿ ಶಿಲಾ ಮಾಧ್ಯಮದ ರಥಗಳಂತು ನಿರ್ಮಾಣಗೊಂಡಿಲ್ಲ, ಆದರೆ ಶಿಲ್ಪಿಗಳು ಶಿಲಾ ಮಾಧ್ಯಮದಲ್ಲಿ ದ್ವಾರಗಳು, ವಿಗ್ರಹಗಳು, ಕಂಬಗಳು, ಕಮಾನುಗಳು ಹೀಗೆ ವಿವಿಧ ಕಲಾತ್ಮಕ ಶಿಲ್ಪಕೆತ್ತನೆ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಕಾಣಬಹುದು.

ಈಗಾಗಲೇ ಪರಿಚಯಿಸಿದ ಕಾಷ್ಠ ಮಾಧ್ಯಮದ ರಥಗಳ ತಯಾರಕರಲ್ಲಿ, ಲೋಹ

ಮಾಧ್ಯಮದ ರಥಗಳ ತಯಾರಕರಲ್ಲಿ ಹಾಗೂ ಲೋಹ ಮಾಧ್ಯಮದ ರಥಗಳ ತಯಾರಕರಲ್ಲಿ ಕೆಲವು ರಥಶಿಲ್ಪಿಗಳು ಶಿಲಾ ಮಾಧ್ಯಮದ ಕುಸುರಿ ಕೆತ್ತನೆಯ ಕೆಲಸಗಾರಿಕೆಯಲ್ಲಿಯೂ ಪರಿಣತಿಯನ್ನು ಪಡೆದಿರುವವರು. ಅವರು ಅನೇಕ ಸುಂದರವಾದ ವಿಗ್ರಹಗಳನ್ನು, ದೇವಸ್ಥಾನದ ದ್ವಾರಗಳನ್ನು, ಕಂಬಗಳು ಹಾಗೂ ಕಲಾತ್ಮಕ ಕಮಾನುಗಳನ್ನು ವಿವಿಧ ಕುಸುರಿ ಕೆತ್ತನೆಯ ವಸ್ತುಗಳನ್ನು ತಯಾರಿಸಿರುವವರು. ಹೀಗೆ ಅನೇಕ ರೀತಿಯಾಗಿ ಶಿಲೆಗಳಲ್ಲಿ ತಮ್ಮ ಕಲಾ ಪ್ರೌಢಿಮೆಯನ್ನು ವ್ಯಕ್ತಪಡಿಸಿರುವವರು. ಕಾಷ್ಠ ಹಾಗೂ ಲೋಹ ಮಾಧ್ಯಮದ ರಥಗಳನ್ನು ತಯಾರಿಸುವ ಈ ಎಲ್ಲ ರಥಶಿಲ್ಪಿಗಳು ರಥಗಳ ನಿರ್ಮಾಣ ಕಾರ್ಯಕ್ಕೆ ಸಂಬಂಧಿಸಿದ ಶಾಸ್ತ್ರಾಭ್ಯಾಸವನ್ನು ಮಾಡಿದವರಾಗಿರುವರು. ರಥಗಳಲ್ಲಿ ರೂಪುಗೊಳ್ಳುವ ಪ್ರತಿಯೊಂದು ಶಿಲ್ಪ ವಿನ್ಯಾಸಗಳ ಬಗ್ಗೆಯೂ ತಿಳಿದವರಾಗಿರುವರು. ಇವರು ತಯಾರಿಸಿದ ಅನೇಕ ಭವ್ಯ ಹಾಗೂ ಕಲಾತ್ಮಕ ರಥಗಳನ್ನು ಕರ್ನಾಟಕದಾದ್ಯಂತ ಕಾಣಬಹುದು. ಇಂಥಹ ಅನುಭವಿ ನಿಪುಣ ರಥಶಿಲ್ಪಿಗಳು ಶಿಲಾ ಮಾಧ್ಯಮದ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದರಿಂದ ಇಂದು ಅತ್ಯುತ್ತಮ ಶಿಲಾರಥಗಳನ್ನು ಕಾಣಬಹುದು. ಇಂತಹ ರಥಶಿಲ್ಪಿಗಳಿಗೆ ಶಿಲಾ ಮಾಧ್ಯಮದ ರಥ ನಿರ್ಮಾಣ ಮಾಡುವ ಅವಕಾಶವು ದೊರಕಿದರೆ ಅತ್ಯುತ್ತಮವಾದ ಶಿಲಾ ರಥಗಳನ್ನು ನಿರ್ಮಿಸುವುದರಲ್ಲಿ ಎರಡು ಮಾತಿಲ್ಲ.

ಯಾವುದೇ ಒಂದು ಕಲಾ ಪರಂಪರೆ ಬೆಳೆಯಲು ಅದರ ಪೋಷಕರ ಪಾತ್ರವು ಅಷ್ಟೇ ಮಹತ್ವವಾಗಿರುತ್ತದೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ಬೆಳೆದು ಬಂದಿರುವ ರಥಶಿಲ್ಪ ಕಲೆಯ ಪರಂಪರೆಗೆ ಅದರ ಪೋಷಕರು ಬಹುಮುಖ್ಯ ಕಾರಣರಾಗಿರುವರು.

ಹಿಂದೆ ನಮ್ಮ ರಾಜಮಹಾರಾಜರು ರಥೋತ್ಸವಗಳ ಪರಂಪರೆಯನ್ನು ಪೋಷಿಸಿಕೊಂಡು ಬಂದರೆ, ಕಾಲಾನಂತರದಲ್ಲಿ ದೇವಾಲಯದ ಧರ್ಮದರ್ಶಿಗಳು, ಆಡಳಿತ ಮಂಡಳಿಯವರು, ಮಠಮಾನ್ಯಗಳ ಸ್ವಾಮಿಗಳು ಹಾಗೂ ಪುರ ಪ್ರಮುಖರು ಈ ಪರಂಪರೆಯನ್ನು ಬೆಳೆಸಿ ಉಳಿಸಿಕೊಂಡು ಬರುವಲ್ಲಿ ಪ್ರಧಾನ ಪಾತ್ರವಹಿಸಿರುವರು. ಇತ್ತೀಚೆಗೆ ಸರಕಾರವು ಜಾತ್ರಾ ಸಮಯದಲ್ಲಿ ಹಲವು ಸೌಲಭ್ಯಗಳನ್ನು ನೀಡಿ ಸಹಕರಿಸುತ್ತಿದೆಯಲ್ಲದೆ, ಕೆಲವೆಡೆ ಸರಕಾರದ ಪೂರ್ಣ ಸಹಕಾರದೊಂದಿಗೆ ರಥೋತ್ಸವಗಳು ಜರುಗುತ್ತಿವೆ. ಹೀಗೆ ಉತ್ಸವಗಳಲ್ಲಿ ಪರಂಪರಾಗತವಾಗಿ ಬಳಸಲ್ಪಡುವ ರಥಶಿಲ್ಪಿಗಳನ್ನು ಪೋಷಿಸಿದವರ ಬಗ್ಗೆ ವಿವರವಾಗಿ ತಿಳಿಯುವಾ.

ವಿಜಯನಗರದ ಅರಸರ ರಾಜಾಶ್ರಯದಲ್ಲಿ ಬೆಳೆದುಬಂದ ಹಂಪೆಯ ವಿರೂಪಾಕ್ಷನ ರಥೋತ್ಸವವು ಭವ್ಯ ಐತಿಹಾಸಿಕ ಪರಂಪರೆಯನ್ನು ಹೊಂದಿದೆ. ಕನ್ನಡ ನಾಡನ್ನು ಬಹುಕಾಲದವರೆಗೆ ಆಳಿದ ವಿಜಯನಗರದ ಅರಸರು ತಮ್ಮ ಆಳ್ವಿಕೆಯ ಕಾಲದಲ್ಲಿ ಹಲವಾರು ದೇಗುಲಗಳನ್ನು ನಿರ್ಮಿಸಿದಂತೆ, ಉತ್ಸವಕ್ಕಾಗಿ ಸುಂದರವಾದ ಮರದ ರಥಗಳನ್ನು ಹಾಗೂ ಕಲಾತ್ಮಕ ಶಿಲೆಯ ರಥಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಕದಂಬರ ರಾಜಧಾನಿಯಾಗಿ ವೈಭವ ಶಿಖರವನ್ನೇರಿದ ಬನವಾಸಿಗೆ ಕೀರ್ತಿಯನ್ನು ತಂದುಕೊಟ್ಟ ಮಧುಕೇಶ್ವರ ದೇವಾಲಯದ ರಥಗಳು, ರಾಜಾಶ್ರಯದಿಂದ ಪೋಷಿಸಲ್ಪಟ್ಟಿವೆ. ಉಳವಿ ಜಾತ್ರೆಯೂ ಸಹ ಐತಿಹಾಸಿಕ ಭವ್ಯ ಪರಂಪರೆಯನ್ನು ಹೊಂದಿದೆ. ಉಳವಿ ಚನ್ನಬಸವಣ್ಣನ ಮೂಲ ರಥವನ್ನು ಸೋದೆಯ ಅರಸರೇ ಮಾಡಿಸಿಕೊಟ್ಟರೆಂದು

ತಿಳಿದುಬರುತ್ತದೆ[೨೯]. ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಬನಹಟ್ಟಿ, ರಾಮತೀರ್ಥ ಹಾಗೂ ಆಸಂಗಿಯ ರಥಗಳು, ಆಗಿನ ಸಾಂಗಲಿ ಸಂಸ್ಥಾನಕ್ಕೆ ಒಳಪಟ್ಟ ಜಮಖಂಡಿಯ ಸಂಸ್ಥಾನಿಕರಿಂದ ಪೋಷಿಸಲ್ಪಟ್ಟಿವೆ. ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಮರೆಮ್ಮನಹಳ್ಳಿಯ ಆಂಜನೇಯ ದೇವಾಲಯದ ಎರಡು ರಥಗಳು ಹಳೆಯದಾಗಿದ್ದು ಹರಪನಹಳ್ಳಿಯ ಸೋಮಶೇಖರ ನಾಯಕನು ಈ ರಥಗಳನ್ನು ಮಾಡಿಸಿದನೆಂದು ಐತಿಹ್ಯವಿದೆ. ಬಾಗಲಕೋಟೆ ಜಿಲ್ಲೆ ಬೀಳಗಿಯ ರಥಗಳು ಘಂಟೆ ರಾಜವಶರಿಂದ ಪೋಷಿಸಲ್ಪಟ್ಟಿವೆ. ಮೈಸೂರಿನ ಚಾಮುಂಡೇಶ್ವರಿ ರಥ ಹಾಗೂ ಮೇಲುಕೋಟೆ ಕೃಷ್ಣರಾಜ ಮುಡಿ ರಥಗಳು ಮೈಸೂರು ರಾಜರ ಕಾಲದಿಂದ ಪರಂಪರಾಗತವಾಗಿ ಪೋಷಿಸಿಕೊಂಡು ಬಂದವುಗಳಾಗಿವೆ. ರಾಯಚೂರು ಜಿಲ್ಲೆಯ ಗಬ್ಬೂರಿನ ಬೂದಿ ಬಸವೇಶ್ವರ ದೇವಸ್ಥಾನದ ರಥವು ಅಲ್ಲಿನ ಆಸ್ಥಾನಿಕರಿಂದ ಪೋಷಿಸಲ್ಪಟ್ಟಿದೆ. ಹೀಗೆ ಕರ್ನಾಟಕದ ಅನೇಕ ಕಲಾತ್ಮಕ ಭವ್ಯ ರಥಗಳು ರಾಜಾಶ್ರಯದಿಂದ ಪೋಷಿಸಲ್ಪಟ್ಟಿರುವುದನ್ನು ಕಾಣಬಹುದು. ಇವುಗಳಲ್ಲದೆ ಅನೇಕ ದೇವಸ್ಥಾನಗಳು ಹಾಗೂ ಮಠಮಾನ್ಯಗಳು ರಥಗಳನ್ನು ಪೋಷಿಸಿಕೊಂಡು ಬಂದಿವೆ. ಹುಬ್ಬಳ್ಳಿಯ ಮೂರು ಸಾವಿರ ಮಠದ ಕಲಾತ್ಮಕ ಭವ್ಯ ರಥ, ಸಿದ್ಧಾರೂಢ ಮಠದ ರಥ, ಗರಗದ ಮಡಿವಾಳೇಶ್ವರ ಮಠದ ರಥ, ಧಾರವಾಡದ ಮುರುಘಾಮಠದ ರಥ, ಅಥಣಿಯ ಮುರುಘೇಂದ್ರ ಶಿವಯೋಗಿ ಮಠದ ರಥ, ಗದಗ ಜಿಲ್ಲೆ ಶಿರಹಟ್ಟಿಯ ಫಕೀರ ಸ್ವಾಮಿ ರಥ, ಬಳ್ಳಾರಿ ಜಿಲ್ಲೆ ಕೊಟ್ಟೂರಿನ ಕೊಟ್ಟೂರೇಶ್ವರ ರಥ, ಗದುಗಿನ ತೋಂಟದಾರ್ಯ ಮಠದ ರಥ, ಕೊಪ್ಪಳ ಜಿಲ್ಲೆಯಲಬುರ್ಗಾ ತಾಲೂಕು ಗುದ್ನೆಪ್ಪನ ಮಠದ ರಥ, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಢವಳಗಿಯ ಮಡಿವಾಳೇಶ್ವರ ಮಠದ ರಥ, ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ ಮಠದ ರಥ, ಲಿಂಗಸೂರು ತಾಲೂಕಿನ ಅಂಕಲಿಮಠದ ರಥ, ಮಾನ್ವಿ ನೀರ್‌ಮಾನ್ವಿಯ ರಥಗಳು, ಗುಲಬುರ್ಗಾ ಜಿಲ್ಲೆ ಆಳಂದ ತಾಲೂಕಿನ ಜಿಡಗಾದ ಯಲ್ಲಾಲಿಂಗ ಸ್ವಾಮಿಗಳ ಮಠದ ರಥ, ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಮಹಾಲಿಂಗಪೂರದ ಮಹಾಲಿಂಗೇಶ್ವರ ಮಠದ ರಥ, ಬೆಳಗಾಂವ ಜಿಲ್ಲೆ ಗೋಕಾಕ ತಾಲೂಕಿನ ಕೊಣ್ಣೂರು ಮರಡಿಮಠದ ರಥ, ಗುಲಬುರ್ಗಾದ ಶರಣ ಬಸವೇಶ್ವರ ರಥ, ಅಂಕಲಗಿಯ ಅವದಿ ಅಜ್ಜನವರ ರಥ, ರಾಯಚೂರು ಜಿಲ್ಲೆಯ ಕಲ್ಮಲದ ಕರೆಪ್ಪತಾತ ಮಠದ ರಥ, ಶಿಶುನಾಳದ ಶ್ರೀ ಶರೀಪ ಸಿದ್ಧಯೋಗಿ ಮಠದ ರಥ-ಹೀಗೆ ಇನ್ನೂ ಅನೇಕ ರಥಗಳು ಅನೇಕ ಮಠಾಧೀಶರಿಂದ ಪೋಷಿಸಲ್ಪಟ್ಟಿವೆ.

ಅಲ್ಲದೆ ಕರ್ನಾಟಕದ ಹಲವಾರು ದೇವಸ್ಥಾನಗಳ ಆಡಳಿತ ಮಂಡಳಿಯವರಿಂದ ಪೋಷಣೆಗೆಯನ್ನು ಪಡೆದ ರಥಗಳನ್ನು ಕಾಣಬಹುದು. ಬಾಗಲಕೋಟೆ ಜಿಲ್ಲೆಯ ಬದಾಮಿ ಬನಶಂಕರಿಯ ರಥ, ಇಳಕಲ್ಲದ ವಿಜಯ ಮಹಾಂತೇಶ್ವರ ರಥ, ಶಿರೂರದ ಸಿದ್ದೇಶ್ವರ ರಥ, ಮುಚಖಂಡಿಯ ವೀರಭದ್ರ ರಥ, ಬಿಜಾಪೂರ ಜಿಲ್ಲೆಯ ಸಿಂದಗಿಯ ಗೊಲ್ಲಾಳೇಶ್ವರ ರಥ, ಚಾಂದಕೋಡದ ಬಸವೇಶ್ವರ ರಥ, ಮುದ್ದೇಬಿಹಾಳ ತಾಲೂಕಿನ ಬಸರಕೋಡದ ಪವಾಡ ಬಸವೇಶ್ವರ ರಥ, ಹಡ್ಲಗೇರಿಯ ಬನಶಂಕರಿ ರಥ, ಸಜ್ಜಲಗುಡ್ಡದ ಶರಣಮ್ಮ ದೇವಸ್ಥಾನದ ರಥ, ಗದಗ ಜಿಲ್ಲೆಯ ತಿಂತನಿ ಮೌನೇಶ್ವರ ರಥ, ಬೆಳಗಾಂವ ಜಿಲ್ಲೆಯ ಗೋಕಾಕದ ವೆಂಕಟರಮಣ ರಥ ಹಾಗೂ ಬಸವೇಶ್ವರ ರಥ ರಾಮದುರ್ಗದ ವೆಂಕಟರಮಣ ರಥ, ಗಜೇಂದ್ರಗಡದ ಕಾಲಕಾಲೇಶ್ವರ

೨೯. "ಸೋದೆ ಅರಸು ಮನೆತನ, ಒಂದು ಅಧ್ಯಯನ" ಡಾ. ಎಂ.ಜಿ. ವಾರಿ, ಪು.ಸಂ. ೩೯

ರಥ, ಬಾಗಲಕೋಟೆ ಜಿಲ್ಲೆಯ ಕೂಡಲ ಸಂಗಮದ ಸಂಗಮೇಶ್ವರ ರಥ, ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕು ಕನಕಗಿರಿಯ ಕನಕರಾಯನ ರಥ, ಹುಲುಗಿಯ ಹುಲಿಗೆಮ್ಮ ದೇವಿಯ ರಥ, ಕೊಪ್ಪಳದ ಗವಿಧ್ಧೇಶ್ವರ ರಥ, ಯಲಬುರ್ಗಾ ತಾಲೂಕು ಕುಕನೂರಿನ ಮಹಾಮಾಯಿ ದೇವಿ ರಥ, ರಾಯಚೂರು ಜಿಲ್ಲೆಯ ಮಾನ್ವಿಯ ಯಲ್ಲಮ್ಮನ ರಥ, ದೇವಸೂಗೂರದ ಸೂಗೂರೇಶ್ವರ ರಥ, ಗಬ್ಬೂರಿನ ಬೂದಿ ಬಸವೇಶ್ವರ ರಥ, ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ ರಥ, ಬಳಗಾನೂರದ ಆಂಜನೇಯನ ರಥ, ಸಿಂಧನೂರು ತಾಲೂಕು ಜವಳಗೇರದ ವೆಂಕಟರಮಣ ರಥ, ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲೂಕು ಕೊಟ್ಟೂರಿನ ಕೊಟ್ಟೂರೇಶ್ವರ ರಥ, ಹೂವಿನ ಹಡಗಲಿಯ ತಾಲೂಕು ಸೋಗಿಯ ಶ್ರೀ ವೀರಭದ್ರನ ರಥ, ಉಜನಿಯ ಮರುಳುಸಿದ್ಧೇಶ್ವರ ರಥ, ಸಂಡೂರಿನ ಕುಮಾರೇಶ್ವರ ರಥ, ಬಿಕ್ಕಿಮರಡಿಯ ದುರುಗಮ್ಮನ ರಥ, ಕೋಟೆ ವೀರಣ್ಣನ ರಥ, ಹೂವಿನ ಹಡಗಲಿ ತಾಲೂಕು ಕುರವತ್ತಿ ಬಸವೇಶ್ವರ ರಥ, ಸಿಂಗಟಲೂರು ವೀರಭದ್ರೇಶ್ವರ ರಥ, ಮೊದಲಗಟ್ಟ ಆಂಜನೇಯ ರಥ, ಬೆಟ್ಟದ ಮಲ್ಲೇಶ್ವರ ರಥ, ಬೀದರ ಜಿಲ್ಲೆಯ ಬಸವಕಲ್ಯಾಣದ ಬಸವೇಶ್ವರ ರಥ, ಹುಮನಾಬಾದದ ವೀರಭದ್ರ ರಥ, ಚಾಂಗಳೇರದ ಬಕ್ಕಪ್ರಭು ರಥ, ಗುಲಬರ್ಗಾ ಜಿಲ್ಲೆ ಚಿಂಚೋಳಿ ತಾಲೂಕಿನ ಸುಲೇಪೇಠದ ವೀರಭದ್ರ ರಥ, ಚಿತಾಪೂರ ತಾಲೂಕಿನ ಕೋರವಾರದ ಕೋರಿಸಿದ್ಧೇಶ್ವರ ರಥ, ಕಾಳಗಿಯ ನೀಲಕಂಠೇಶ್ವರ ರಥ, ಯಡಗುಂದಿಯ ವೆಂಕಟೇಶ್ವರ ಸ್ವಾಮಿ ರಥ, ಅಫಜಲಪೂರ ತಾಲೂಕು ದೇಸಾಯಿ ಕಲ್ಲೂರದ ಮಲ್ಲಿಕಾರ್ಜುನ ದೇವಸ್ಥಾನದ ರಥ, ಹಾವೇರಿ ಜಿಲ್ಲೆಯ ಹಾನಗಲ್ಲದ ತಾರಕೇಶ್ವರ ದೇವಸ್ಥಾನದ ರಥ, ಗೋಕರ್ಣದ ಮಹಾಬಲೇಶ್ವರ ರಥ, ಬೇಲೂರು ಚನ್ನಕೇಶವ ರಥ, ಹಳೇಬೀಡಿನ ಮಹೇಶ್ವರ ರಥ, ಮೇಲುಕೋಟೆಯ ಚೆಲುವನಾರಾಯಣನ ರಥ, ಹೊರನಾಡು ಅನ್ನಪೂರ್ಣೇಶ್ವರಿ ರಥ, ಯಡೆಯೂರು ಸಿದ್ಧಲಿಂಗೇಶ್ವರ ರಥ, ಕಾರ್ಕಳದ ಅನಂತಶಯನ ರಥ, ಕೊಲ್ಲೂರು ಮೂಕಾಂಬಿಕೆಯ ರಥ, ಕನ್ನಂಬಾಡಿ ಮಹಾಲಕ್ಷ್ಮೀಯ ರಥ, ತುಮಕೂರು ಸಿದ್ಧಲಿಂಗೇಶ್ವರ ರಥ, ನಂಜನಗೂಡಿನ ನಂಜುಂಡೇಶ್ವರ ರಥಗಳು, ಶ್ರೀರಂಗಪಟ್ಟಣದ ಶ್ರೀರಂಗನಾಥನ ರಥ, ಶಿರಸಿಯ ಮಾರಿಕಾಂಬಾ ರಥ, ಕೊಡಗಿನ ಓಂಕಾರೇಶ್ವರ ರಥ, ಸುಬ್ರಹ್ಮಣ್ಯಂದ ಸುಬ್ರಹ್ಮಣ್ಯಸ್ವಾಮಿ ರಥಗಳು, ಹೇಮಗಿರಿಯ ಮಲ್ಲಿಕಾರ್ಜುನನ ರಥ, ನೆಲಮಂಗಲದ ಚೆನ್ನಕೇಶವ ರಥ, ಪಾಪನಾಶಿ ಕಲ್ಲೇಶ್ವರ ರಥ, ಕಾಮನಾಪೂರದ ಪಟ್ಟಾಭಿರಾಮ ರಥ, ಧರ್ಮಸ್ಥಳದ ಮಂಜುನಾಥ ಸ್ವಾಮಿ ರಥ, ಹಿರೇಹಡಲಗಿಯ ಹಾಲಸ್ವಾಮಿ ರಥ, ಹೇಮಗಿರಿ ವರದರಾಜನ ರಥ, ದೊಡ್ಡ ಬಳ್ಳಾಪೂರದ ಚಂದ್ರಮೌಳೇಶ್ವರಿ ರಥ, ಸನ್ನತ್ತಿಯ ಚಂದ್ರಲಾ ಪರಮೇಶ್ವರಿ ರಥ, ತೀರ್ಥಹಳ್ಳಿ ರಾಮೇಶ್ವರ ರಥ, ತಲಕಾಡು ಕೀರ್ತಿನಾರಾಯಣ ರಥ, ಬಿಳಿಗಿರಿ ರಂಗಸ್ವಾಮಿ ರಥ-ಹೀಗೆ ಕರ್ನಾಟಕದ ಅನೇಕ ದೇವಾಲಯಗಳಲ್ಲಿ ರಥಗಳನ್ನು ಪೋಷಿಸಿಕೊಂಡು ಪರಂಪರಾಗತವಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬೆಳೆಸಿಕೊಂಡು ಬಂದಿರುವುದನ್ನು ಕಾಣಬಹುದು.

ಇವುಗಳಲ್ಲದೆ ಅನೇಕ ವಸ್ತು ಸಂಗ್ರಹಾಲಯಗಳಲ್ಲಿ ಹಳೆಯದಾದ ಕಲಾತ್ಮಕ ಸುಂದರ ಕುಸುರಿ ಕೆತ್ತನೆಯಿಂದ ಕೂಡಿದ ರಥಗಳನ್ನು ಪೋಷಿಸಿಕೊಂಡು ಬಂದಿರುವುದನ್ನು ಕರ್ನಾಟಕದ ವಿವಿಧೆಡೆಯಲ್ಲಿ ಕಾಣಬಹುದು. ಮೈಸೂರಿನ ಜಾನಪದ ವಸ್ತು ಸಂಗ್ರಹಾಲಯದಲ್ಲಿರುವ ಎರಡು ರಥಗಳು ಪ್ರೇಕ್ಷಕರನ್ನು ಬಹುವಾಗಿ ಆಕರ್ಷಿಸುತ್ತವೆ. ಪ್ರಖ್ಯಾತ ಕಲಾವಿದರಾದ ಪಿ. ಆರ್. ತಿಪ್ಪೇಸ್ವಾಮಿಯವರು

ಮೈಸೂರು ವಿಶ್ವವಿದ್ಯಾಲಯದ ಜಾನಪದ ವಸ್ತುಸಂಗ್ರಹಾಲಯದಲ್ಲಿ ಕ್ಯೂರೇಟರ್ ಆಗಿ ಕೆಲಸಮಾಡುವ ಸಂದರ್ಭದಲ್ಲಿ ಕ್ಷೇತ್ರಕಾರ್ಯದಲ್ಲಿ ತೊಡಗಿರುವಾಗ ಸಿದ್ಧಾಪೂರ ತಾಲೂಕಿನ ಎರಡು ರಥಗಳು ಅವರ ಗಮನಸೆಳೆದವು. ಹಳೆಯ ರಥಗಳೆಂದು ವಿಸರ್ಜಿಸುತ್ತಿದ್ದ ಅವುಗಳಲ್ಲಿನ ವಿವಿಧ ಮೂರ್ತಿಶಿಲ್ಪಗಳನ್ನು, ಕುಸುರಿ ಕೆತ್ತನೆಯನ್ನು ನೋಡಿ ಅವುಗಳನ್ನು ತಮ್ಮ ವಸ್ತುಸಂಗ್ರಹಾಲಯಕ್ಕೆ ದಾನವಾಗಿ ಪಡೆದರು. ಮುಜರಾಯಿ ಇಲಾಖೆಗೆ ಸೇರಿದ ಈ ರಥಗಳು ಇಂದಿಗೂ ಮೈಸೂರಿನ ವಸ್ತು ಸಂಗ್ರಹಾಲಯದಲ್ಲಿವೆ ಧರ್ಮಸ್ಥಳದ ಶ್ರೀ ಮಂಜುನಾಥ ಸ್ವಾಮಿ ದೇವಾಲಯದ ಎದುರುಗಡೆ ಇರುವ ವಸ್ತುಸಂಗ್ರಹಾಲಯದ ಪಕ್ಕದಲ್ಲಿ ನಿಂತಿರುವ ಸುಂದರವಾದ ಐದು ರಥಗಳಿಗೆ ಸರಿಯಾದ ಪೋಷಣೆ ಒದಗಿಸಿರುವುದನ್ನು ಕಾಣಬಹುದು. ತುಂಬಾ ಹಳೆಯದಾಗಿ ಶಿಥಿಲಾವಸ್ಥೆಯಲ್ಲಿರುವ ರಥಗಳಿಗೆ ಅಚ್ಚುಗಳ ಕೆಳಭಾಗದಲ್ಲಿ ಕಲ್ಲಿನ ಕಟ್ಟೆಯ ಆಧಾರ ಕೊಟ್ಟು ನಿಲ್ಲಿಸಿರುವುದನ್ನು ಕಾಣಬಹುದು. ಪ್ರತಿಯೊಂದು ರಥಗಳು ಬೇರೆ ಬೇರೆ ವಿನ್ಯಾಸದಲ್ಲಿದ್ದು ಬೇರೆ ಬೇರೆ ಪ್ರದೇಶದವುಗಳಾಗಿವೆ. ಹಂಪಿ ಕನ್ನಡ ವಿಶ್ವವಿದ್ಯಾಲಯದ ವಸ್ತುಸಂಗ್ರಹಾಲಯದಲ್ಲಿ ಹಳೆಯದಾದ ಒಂದು ಮರದ ರಥವನ್ನು ಹಾಗೂ ಹಂಪೆಯ ವಿಜಯವಿಠಲ ದೇವಾಲಯದ ಮುಂಭಾಗದಲ್ಲಿರುವ ಶಿಲೆಯ ರಥದಂತೆ ಥರ್ಮಾಕೋಲ್ ದಿಂದ ತಯಾರಿಸಿದ ಸುಂದರವಾದ ರಥಗಳನ್ನು ಕಾಣಬಹುದು. ಹೀಗೆ ಬೇರೆ ಬೇರೆ ವಸ್ತು ಸಂಗ್ರಹಾಲಯಗಳಲ್ಲಿ ರಥಗಳ ಪೋಷಣೆಯನ್ನು ಕಾಣಬಹುದು.

ಈ ರೀತಿಯಾಗಿ ಕರ್ನಾಟಕದಲ್ಲಿ ರಥಶಿಲ್ಪಗಳು ಪರಂಪರಾಗತವಾಗಿ ಉಳಿಯಲು ಸಹಾಯಕರಾದ ಹಲವರನ್ನು 'ರಥಶಿಲ್ಪ ಕಲೆಯ ಪೋಷಕರು' ಎಂದು ಕರೆಯಬಹುದು.

◆ ◆ ◆

ಅಧ್ಯಾಯ- ಎಂಟು

ರಥಗಳ ಸಂರಕ್ಷಣಾ ವಿಧಾನಗಳು

ರಥಗಳ ಸಂರಕ್ಷಣಾ ವಿಧಾನಗಳು

ಜಾತ್ರೆ ಉತ್ಸವಗಳ ಅವಿಭಾಜ್ಯ ಅಂಗವಾಗಿರುವ ರಥಗಳು ಉತ್ಸವದ ಸಮಯದಲ್ಲಿ ಓರಣವಾಗಿ ಸಿಂಗರಿಸಲ್ಪಟ್ಟು, ಉತ್ಸವದ ನಂತರ ಅವುಗಳನ್ನು ನಿರ್ಲಕ್ಷಿಸಿ, ದೇವಾಲಯದ ಹಿಂಭಾಗದ ಒಂದು ಮೂಲೆಯಲ್ಲಿಯೋ, ಇಲ್ಲವೆ ದೇವಾಲಯದ ಸನಿಹದ ಬಯಲಿನಲ್ಲಿಯೋ ವರ್ಷವಿಡಿ ಗಾಳಿ, ಮಳೆ, ಬಿಸಿಲುಗಳಿಗೆ ತೆರೆದಿಡುವ ನಮ್ಮ ವರ್ತನೆ ಇಂದಿಗೂ ಮುಂದುವರೆದಿದೆ.

ದೇವಾಲಯಗಳು ಶಿಲ್ಪವಿನ್ಯಾಸಗಳನ್ನು ಹೊಂದಿದಂತೆ, ರಥಶಿಲ್ಪಗಳೂ ಸಹ ಸುಂದರ ಕಲಾತ್ಮಕ ಶಿಲ್ಪವೈಭವವನ್ನು ಮೈಗೂಡಿಸಿಕೊಂಡಿವೆ. ವಾಸ್ತುಶಿಲ್ಪವನ್ನು ಸಂರಕ್ಷಿಸಿದಂತೆ, ರಥಶಿಲ್ಪಗಳನ್ನೂ ಸಂರಕ್ಷಿಸುವುದು ನಮ್ಮ ಆದ್ಯ ಕರ್ತವ್ಯ. ಮಳೆ, ಗಾಳಿ, ಚಳಿ ಬಿಸಿಲುಗಳಿಗೆ ಮೈಯೊಡ್ಡಿ ನಿಂತ, ಶಿಥಿಲಾವಸ್ಥೆಯಲ್ಲಿರುವ ರಥಗಳಿಂದ ಉತ್ಸವದ ಸಂದರ್ಭದಲ್ಲಿ ದುರಂತಗಳು ಸಂಭವಿಸಿ, ಪ್ರಾಣಹಾನಿಯಾಗುವ ಸಂದರ್ಭಗಳನ್ನೂ ಕಾಣಬೇಕಾಗುತ್ತದೆ.


ಭವ್ಯವಾದ, ಕಲಾತ್ಮಕವಾದ ಕಾಷ್ಠಕಲೆಯನ್ನು ಮೈಗೂಡಿಸಿಕೊಂಡಿರುವ ರಥಶಿಲ್ಪಗಳ ನಿರ್ಲಕ್ಷದಿಂದ, ಪೂರ್ವಜರು ನಿರ್ಮಿಸಿದ ಕಾಷ್ಠಶಿಲ್ಪವನ್ನು ಮುಂದಿನ ತಲೆಮಾರಿನವರು ಕಾಣಲಾರರು. ರಾಜ ಮಹಾರಾಜರುಗಳ ಕಲಾಪ್ರಜ್ಞೆಯ ಪ್ರತೀಕವಾಗಿ ಅರಳಿ ನಿಂತ ದಿವ್ಯ ರಥಗಳನ್ನು ನೈಸರ್ಗಿಕ ವಿಕೋಪಕ್ಕೆ ತುತ್ತಾಗುವ ಮೊದಲು ಸಂರಕ್ಷಿಸುವ ಉಪಾಯಗಳನ್ನು ಮಾಡಬೇಕು.

ಕರ್ನಾಟಕದಲ್ಲಿ ಅನೇಕ ಕಲಾತ್ಮಕ ರಥಗಳನ್ನು ವಿವಿಧ ಮಾಧ್ಯಮಗಳಲ್ಲಿ ನಿರ್ಮಿಸಿರುವುದನ್ನು ಕಾಣಬಹುದು. ಅವುಗಳನ್ನು

೧. ಕಾಷ್ಠಮಾಧ್ಯಮ

೨. ಲೋಹಮಾಧ್ಯಮ

೩. ಶಿಲಾಮಾಧ್ಯಮಗಳೆಂದು ವಿಂಗಡಿಸಿಕೊಂಡು, ಪ್ರಾದೇಶಿಕವಾಗಿ ಅವುಗಳ ರಕ್ಷಣಾ ವಿಧಾನಗಳ ಕುರಿತು ಚರ್ಚಿಸುವಾ.


ರಥಗಳ ಸಂರಕ್ಷಣಾ ವಿಧಾನಗಳು
ಕಾಷ್ಠ ಮಾಧ್ಯಮದ ರಥಗಳು
ಲೋಹ ಮಾಧ್ಯಮದ ರಥಗಳು
ಶಿಲಾ ಮಾಧ್ಯಮದ ರಥಗಳು
ಕಬ್ಬಿಣ ರಥಗಳು
ಬೆಳ್ಳಿಯ ರಥಗಳು
ಚಿನ್ನದ ರಥಗಳು

I. ಕಾಷ್ಟಮಾಧ್ಯಮ ರಥಗಳ ರಕ್ಷಣಾ ವಿಧಾನ :

ಕರ್ನಾಟಕದಾದ್ಯಂತ ಬಹುತೇಕ ಜಿಲ್ಲೆಗಳಲ್ಲಿ ಕಾಷ್ಠ ಮಾಧ್ಯಮದ ರಥಶಿಲ್ಪಗಳನ್ನು ಕಾಣಬಹುದು. ಕೆಲವು ಪ್ರದೇಶದ ರಥಗಳು ಸಂರಕ್ಷಣೆಯಿಂದ ವಂಚಿತವಾಗಿ, ಅವುಗಳ ಕಲಾತ್ಮಕ ಕಾಷ್ಠಕಲೆಯು ಹಾಳಾಗಿರುವುದನ್ನು ಕಾಣಬಹುದು.

ಬಾಗಲಕೋಟೆ ಜಿಲ್ಲೆ ಬಾದಾಮಿಯ ಬನಶಂಕರಿ ದೇವಸ್ಥಾನದ ರಥದಲ್ಲಿಯ ಸುಂದರವಾದ ಕಾಷ್ಠಕಲೆಯು ಪ್ರತಿವರ್ಷ ಉತ್ಸವದ ಸಂದರ್ಭದಲ್ಲಿ ಹಚ್ಚಲಾಗುವ ಹುರಮಂಜ ಹಾಗೂ ಎಣ್ಣೆಯಿಂದ ಪೂರ್ಣವಾಗಿ ಮುಚ್ಚಿಹೋಗಿರುವುದನ್ನು ಕಾಣಬಹುದು. ಇದರಂತೆ ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಕುಕನೂರು ಗುದ್ನೆಪ್ಪನ ಮಠದ ರಥ, ಬಳ್ಳಾರಿ ಜಿಲ್ಲೆಯ ಮರೆಮ್ಮನ ಹಳ್ಳಿಯ ರಥಗಳು, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಢವಳಗಿಯ ಮಡಿವಾಳೇಶ್ವರ ದೇವಸ್ಥಾನದ ರಥ, ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ರಥ, ಬನವಾಸಿಯ ಮಧುಕೇಶ್ವರ ದೇವಾಲಯದ ರಥಗಳು, ರಾಯಚೂರು ಜಿಲ್ಲೆ ಲಿಂಗಸೂರು ತಾಲೂಕಿನ, ಮಸ್ಕಿಯ ಮಲ್ಲಿಕಾರ್ಜುನ ದೇವಸ್ಥಾನದ ರಥ, ಇದೇ ತಾಲೂಕಿನ ಬಳಗಾನೂರದ ಆಂಜನೇಯ ದೇವಸ್ಥಾನದ ರಥ, ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಬನಶಂಕರಿ ದೇವಸ್ಥಾನದ ರಥ, ರಾಯಚೂರ ಜಿಲ್ಲೆಯ ದೇವಸೂಗೂರದ ಸೂಗೂರೇಶ್ವರ ದೇವಸ್ಥಾನದ ರಥ, ಇದೇ ಜಿಲ್ಲೆಯ ಮಾನ್ವಿ ತಾಲೂಕಿನ ನೀರಮಾನ್ವಿಯ ಯಲ್ಲಮ್ಮ ದೇವಸ್ಥಾನದ ರಥ, ಗದುಗಿನ ತೋಂಟದಾರ್ಯ ಮಠದ ರಥ, ಕುಕ್ಕೆ ಸುಬ್ಬಹ್ಮಣ್ಯಂದ ಸುಬ್ರಹ್ಮಣ್ಯ ಸ್ವಾಮಿ ರಥ ಹೀಗೆ ಕರ್ನಾಟಕದ ಅನೇಕ ಪ್ರದೇಶಗಳಲ್ಲಿನ ರಥಗಳಲ್ಲಿಯ ಸುಂದರ ಸೂಕ್ಷ್ಮ ವಿನ್ಯಾಸಗಳು ಉತ್ಸವದ ಸಂದರ್ಭದಲ್ಲಿ ವಿಪರೀತವಾದ ಎಣ್ಣೆ, ಸುಣ್ಣ, ಹುರಮಂಜ ಹಚ್ಚುವುದರಿಂದ, ಸಂಪೂರ್ಣ ಮುಚ್ಚಿ ಹೋಗಿರುವುದನ್ನು ಕಾಣುತ್ತೇವೆ. ಅಲ್ಲದೆ ಇವುಗಳಲ್ಲಿ ಕೆಲವು ರಥಗಳು ಯಾವುದೇ ಸಂರಕ್ಷಣೆಯ ನಿವೇಶನಗಳನ್ನು ಹೊಂದದೇ ಪ್ರಕೃತಿಯ ವಿಕೋಪಕ್ಕೆ ತುತ್ತಾಗುತ್ತಿರುವುದನ್ನು ಕಾಣಬಹುದು.

ಕರ್ನಾಟಕದ ಕೆಲವು ಪ್ರದೇಶಗಳ ಕಾಷ್ಠ ಮಾಧ್ಯಮದ ರಥಗಳಿಗೆ ವಿವಿಧ ರೀತಿಯಲ್ಲಿ ಸಂರಕ್ಷಣೆ ಒದಗಿಸಿರುವುದನ್ನು ಕಾಣಬಹುದು.

ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹೊಳೆಹಿಟ್ನಿಯ ಬಸವಣ್ಣ ದೇವಸ್ಥಾನದ ರಥಕ್ಕೆ ಬಟ್ಟೆಯಿಂದ ಪೂರ್ಣವಾಗಿ ಹೊದಿಸಿ, ರಥಕ್ಕೆ ಒಂದು ಪ್ರತ್ಯೇಕವಾದ ಮನೆಯನ್ನು ಕಟ್ಟಿರುವುದರಿಂದ ರಥವು ಸುಸ್ಥಿತಿಯಲ್ಲಿರುವುದು ಕಂಡುಬರುತ್ತದೆ. ನಿವೇಶನವು ಕಲ್ಲಿನಿಂದ ನಿರ್ಮಾಣಗೊಂಡ ಮೂರು ಗೋಡೆಗಳನ್ನು ಹೊಂದಿದ್ದು, ಮೇಲ್ಭಾಗದಲ್ಲಿ ನಾಲ್ಕೂ ಕಡೆಗಳಲ್ಲಿ ಇಳಿಜಾರಾಕಾರವಾಗಿ ತಗಡುಗಳನ್ನು ಜೋಡಿಸಲಾಗಿದೆ. ಇದರಿಂದ ಮಳೆಗಾಲದಲ್ಲಿ ನೀರು ರಥದ ಮನೆಯ ಮೇಲೆ ನಿಲ್ಲದೆ ಸರಾಗವಾಗಿ ಕೆಳಗೆ ಬೀಳುವುದರಿಂದ ರಥವು ಸುರಕ್ಷಿತವಾಗಿರುತ್ತದೆ. ಮುಂಭಾಗದಲ್ಲಿ ಒಂದು ಕಬ್ಬಿಣದ ಬಾಗಿಲವನ್ನು ನಿರ್ಮಿಸಿರುವರು.

ಬಾಗಲಕೋಟೆ ಜಿಲ್ಲೆಯ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ರಥಕ್ಕಾಗಿ ಪ್ರತ್ಯೇಕ ನಿವೇಶನವಿರುವುದನ್ನು ಕಾಣಬಹುದು. ಹೊಳೆಹಿಟ್ನಿಯ ಬಸವಣ್ಣ ದೇವಸ್ಥಾನದ ರಥದಂತೆ, ಮೊದಲು

ರಥಕ್ಕೆ ಗೋಣಿ/ಗೊಬ್ಬರದ, ಪ್ಲಾಸ್ಟಿಕ್ ಚೀಲಗಳಿಂದ ತಯಾರಿಸಿದ ಹೊದಿಕೆಯನ್ನು ಹೊದಿಸಿ, ರಥವನ್ನು ಮನೆಯಲ್ಲಿ ನಿಲ್ಲಿಸುವರು. ಸುಮಾರು ಮೂವತ್ತೈದು ಅಡಿ ಎತ್ತರವಾಗಿ ನಿರ್ಮಾಣಗೊಂಡ ರಥದ ಮನೆಯ ಪೂರ್ಣ ಪ್ರಯೋಗದಲ್ಲಿ ಅಂದರೆ ನಾಲ್ಕೂ ಕಡೆಗಳಲ್ಲಿ ಹಾಗೂ ಮೇಲ್ಭಾಗದಲ್ಲಿ ತಗಡುಗಳಿಂದ ಜೋಡಿಸಲ್ಪಟ್ಟ ಚೌಕಾಕಾರದ ನಿವೇಶನವಿರುವುದು ಕಂಡುಬರುವುದು. ಇದರಿಂದ ರಥವು ಯಾವುದೇ ಪ್ರಕೃತಿ ವಿಕೋಪಕ್ಕೆ ಸಿಗದೆ ಸುರಕ್ಷಿತವಾಗಿರುವುದನ್ನು ಕಾಣಬಹುದು.

ಬಾಗಲಕೋಟೆ ಜಿಲ್ಲೆಯ ಗುಳೇದಗುಡ್ಡದ ಕೋಟಿಗಲ್ಲು ಹುಚ್ಚೇಶ್ವರ ಮಠದ ರಥದ ಮನೆಯ ಮೂರು ಗೋಡೆಗಳನ್ನು ಕಲ್ಲಿನಿಂದ ನಿರ್ಮಿಸಲಾಗಿದ್ದು, ಛಾವಣಿಯು ತಗಡಿನಿಂದ ನಿರ್ಮಾಣಗೊಂಡಿದ್ದು, ಎದುರುಗಡೆಗೆ ತಗಡುಗಳ ಜೋಡನೆಯಿಂದ ಮಾಡಿದ ಹತ್ತು ಅಡಿ ಎತ್ತರದ ಎರಡು ಬಾಗಿಲುಗಳನ್ನು ಹೊಂದಿದೆ. ಮಳೆಯ ನೀರು ಛಾವಣಿಯ ಮೇಲೆ ನಿಲ್ಲದಂತೆ ತಗಡುಗಳನ್ನು ಇಳಿಜಾರಾಗಿ ಜೋಡಿಸಿರುವುದು ಕಂಡುಬರುತ್ತದೆ. ಬಾಗಿಲುಗಳಿಗೆ ಬೀಗ ಹಾಕುವುದಲ್ಲದೆ, ಐದು ಕಡೆಗೆ ನಟ್ ಬೋಲ್ಟ್‌ಗಳನ್ನು ಬಿಗಿದಿರುವುದನ್ನು ಕಾಣಬಹುದು. ಇದರಿಂದ ಪಶುಗಳಿಂದಾಗಲಿ, ಕಿಡಿಗೇಡಿಗಳಿಂದಾಗಲಿ ರಥಶಿಲ್ಪಗಳಿಗೆ ಧಕ್ಕೆಯುಂಟಾಗದು.

ಇದೇ ರೀತಿಯ ರಥ ಸಂರಕ್ಷಣಾ ಮನೆಯನ್ನು ಗದಗ ಜಿಲ್ಲೆಯ ಚಿಂಚಲಿಯ ಬಸವೇಶ್ವರ ದೇವಸ್ಥಾನ ಆವರಣದಲ್ಲಿ ಕಾಣಬಹುದು. ಬಾಗಿಲುಗಳ ಎದುರುಗಡೆಯ ಗೋಡೆಗೆ ಮೇಲ್ಭಾಗದಲ್ಲಿ, ಗಾಳಿಯಾಡಲು ಎರಡು ದೊಡ್ಡ ಕಿಟಕಿಗಳನ್ನು ಬಿಟ್ಟಿರುವರು. ರಥದ ಮನೆಯ ಕಟ್ಟಡವು ಇಟ್ಟಿಗೆಗಳಿಂದ ನಿರ್ಮಾಣಗೊಂಡಿದ್ದು ಹೊರಗೋಡೆಗಳಿಗೆ ಸುಣ್ಣವನ್ನು ಬಳಿಯಲಾಗಿದೆ.

ಹಾವೇರಿ ಜಿಲ್ಲೆಯ ರಟಹಳ್ಳಿಯ ವೀರಭದ್ರ ದೇವಸ್ಥಾನದ ರಥದ ಮನೆಯು ಇಟ್ಟಿಗೆಗಳಿಂದ ನಿರ್ಮಾಣಗೊಂಡಿದ್ದು, ಮೇಲ್ಛಾವಣಿಯು ಮಾತ್ರ ಮರದ ಅಡ್ಡ ತೊಲೆಗಳನ್ನು ಹೊಂದಿ, ಮೇಲ್ಭಾಗದಲ್ಲಿ ಗುಡಿಸಲು ಆಕಾರದ ಬಿದಿರು ಜೋಡನೆಯಿಂದ ಕೂಡಿ, ಅದರ ಮೇಲ್ಭಾಗದಲ್ಲಿ ಹಂಚುಗಳನ್ನು ಜೋಡಿಸಿರುವುದನ್ನು ಕಾಣಬಹುದು.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಜಾಯವಾಡಲಗಿಯ ಸೋಮನಾಥೇಶ್ವರ ದೇವಸ್ಥಾನದ ಮುಂಭಾಗದಲ್ಲಿ, ಬಾಗಲಕೋಟೆಯ ಬಸವೇಶ್ವರ ದೇವಸ್ಥಾನದ ರಥದ ಮನೆಯನ್ನೇ ಹೋಲುವ ರಥದ ಮನೆಯನ್ನು ಕಾಣಬಹುದು. ಬಾಗಿಲುಗಳ ಮೇಲೆ ಕಬ್ಬಿಣದ ಅಡ್ಡಪಟ್ಟಿಗಳನ್ನು ಬಡಿದು, ಅವುಗಳಿಗೆ ಹಳದಿ ಹಾಗೂ ಕೇಸರಿ ಬಣ್ಣವನ್ನು ಲೇಪಿಸಿರುವರು. ರಥದ ಬಾಗಿಲುಗಳಿಗೆ ನೀಲ ವರ್ಣವನ್ನು ಲೇಪಿಸಲಾಗಿದೆ. ಬಾಗಿಲುಗಳ ಮೇಲ್ಭಾಗ ಹಾಗೂ ಎರಡೂ ಪಕ್ಕದ ಪಾರ್ಶ್ವ ಗೋಡೆಗಳಲ್ಲಿ ಸಣ್ಣ ಸಣ್ಣ ಐದು ಕಿಟಕಿಗಳನ್ನು ನಿರ್ಮಿಸಿರುವರು. ಬಾಗಿಲುಗಳ ಮೇಲೆ ನಿವೇಶನ ಕಟ್ಟಿಸಿಕೊಟ್ಟವರ ಹೆಸರನ್ನು ಹಾಗೂ ಇಸ್ವಿಗಳನ್ನು ಕಬ್ಬಿಣದ ಸರಳುಗಳಿಂದ ರಚಿಸಲಾಗಿದೆ.

ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನೇಸರಗಿ ಹಾಗೂ ಸವದತ್ತಿ ತಾಲೂಕಿನ ಇಂಚಲದ ಶಿವಯೋಗೇಶ್ವರ ಸಂಸ್ಥಾನ ಮಠ, ರಾಯಚೂರು ಜಿಲ್ಲೆಯ ದೇವಸೂಗೂರದ ಸುಗೂರೇಶ್ವರ ದೇವಸ್ಥಾನದ ರಥದ ನಿವೇಶನಗಳು, ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳದ ಜಾಯವಾಡಲಗಿಯ ಸೋಮನಾಥೇಶ್ವರ ದೇವಸ್ಥಾನದ ಆವರಣದಲ್ಲಿನ ರಥದ ಮನೆಯನ್ನೇ

ಹೋಲುತ್ತವೆ.

ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದ ರಥದ ಮನೆ, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಬಸರಕೊಡದ ಪವಾಡ ಬಸವೇಶ್ವರ ದೇವಸ್ಥಾನದ ರಥದ ಮನೆ , ಹಾವೇರಿ ಜಿಲ್ಲೆಯ ಹಾನಗಲ್ಲದ ತಾರಕೇಶ್ವರ ದೇವಸ್ಥಾನದ ರಥದ ಮನೆ, ಬಾಗಲಕೋಟ ಜಿಲ್ಲೆ ಬದಾಮಿ ತಾಲೂಕಿನ ಮಲ್ಲಾಪೂರದ ವೀರಭದ್ರ ದೇವಸ್ಥಾನದ ರಥದ ಮನೆಗಳು ಒಂದೇ ರೀತಿಯಲ್ಲಿ ನಿರ್ಮಾಣಗೊಂಡಿದ್ದು, ಮೂರು ಕಡೆಗಳಲ್ಲಿ ಇಟ್ಟಿಗೆ ಅಥವಾ ಕಲ್ಲಿನ ಗೋಡೆಗಳನ್ನು ಹೊಂದಿದ್ದು, ಛಾವಣಿಯು ತಗಡುಗಳಿಂದ ಜೋಡಿಸಲ್ಪಟ್ಟಿದೆ. ರಕ್ಷಣೆ ನೀಡಲು ಬಾಗಿಲುಗಳನ್ನು ಕೂಡಿಸಲಾಗಿಲ್ಲ. ಇದರಿಂದ ಪಶುಗಳಿಂದ, ಗಾಳಿ, ಬಿಸಿಲು ಮತ್ತು ಜನರಿಂದ ರಥಗಳಿಗೆ ಧಕ್ಕೆಯುಂಟಾಗುವುದು.

ಇದೇ ರೀತಿಯ ಕಟ್ಟಡಗಳನ್ನು ಹೊಂದಿದ ಗುಳೇದಗುಡ್ಡದ ಸಂಗಮೇಶ್ವರ ದೇವಸ್ಥಾನದ ರಥದ ನಿವೇಶನ ಹಾಗೂ ಮಹಾಲಿಂಗಪೂರದ ಮಹಾಲಿಂಗೇಶ್ವರ ದೇವಸ್ಥಾನ ಮತ್ತು ಬಾಗಲಕೋಟ ಜಿಲ್ಲೆಯ ಜಮಖಂಡಿ ತಾಲೂಕಿನ ರಾಮತೀರ್ಥ ಮತ್ತು ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ದೇವಸ್ಥಾನಗಳ ರಥಗಳ ಮನೆಗಳಿಗೆ ಮುಂಬಾಗಿಲುಗಳಿರುವುದರಿಂದ ರಥಗಳು ಒಳ್ಳೆಯ ರೀತಿಯಿಂದ ಸಂರಕ್ಷಿಸಲ್ಪಡುತ್ತವೆ.

ಬನವಾಸಿಯ ಮಧುಕೇಶ್ವರ ದೇವಸ್ಥಾನದ ಪಕ್ಕದಲ್ಲಿ ಹಾಗೂ ರಾಯಚೂರು ಜಿಲ್ಲೆಯ ಗುಡಗುಂಟಿ ಅಮರೇಶ್ವರ ದೇವಸ್ಥಾನದ ಆವರಣದಲ್ಲಿ ಜೋಡುಮನೆಗಳನ್ನು ಕಾಣಬಹುದು. ಆದರೆ ಇವುಗಳಿಗೂ ಮುಂಬಾಗಿಲುಗಳ ಕೊರತೆ ಇರುವುದರಿಂದ, ಕೆಲವು ಪ್ರಾಣಿಗಳಿಂದ ರಥದ ನಿವೇಶನಳಲ್ಲಿ ಗಲೀಜು ಉಂಟಾಗಿರುವುದು ಕಂಡುಬರುತ್ತದೆ.

ಕೊಪ್ಪಳ ಜಿಲ್ಲೆ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ದೇವಸ್ಥಾನದ ರಥದ ಮನೆ ಹಾಗೂ ಗದಗ ಜಿಲ್ಲೆಯ ಶಿರಹಟ್ಟಿಯ ಫಕೀರೇಶ್ವರ ಸಂಸ್ಥಾನಮಠದ ರಥದ ಮನೆಗಳು ಒಂದೇ ರೀತಿಯಲ್ಲಿ ನಿರ್ಮಾಣಗೊಂಡಿವೆ. ಪಾರ್ಶ್ವಗಳಲ್ಲಿ ಗೋಡೆಗಳನ್ನು ಹೊಂದಿದ್ದು, ಮುಂಭಾಗ ಹಾಗೂ ಹಿಂಭಾಗಗಳಲ್ಲಿ ಯಾವುದೇ ಗೋಡೆಗಳನ್ನು ಹೊಂದಿಲ್ಲ. ಮೇಲ್ಛಾವಣಿಯು ತಗಡಿನಿಂದ ನಿರ್ಮಿತಗೊಂಡಿದೆ. ಕನಕಗಿರಿಯ ರಥದ ನಿವೇಶನದ ಮೇಲ್ಛಾವಣಿಯು ಗುಡಿಸಲಾಕಾರದಲ್ಲಿದ್ದು, ಗೋಡೆಗಳಿಲ್ಲದ ಸ್ಥಳಗಳಲ್ಲಿ, ಅರ್ಧಭಾಗದಷ್ಟು ತಂತಿಯ ಕಟಂಜರವನ್ನು ಹೊಂದಿದೆ. ಈ ರೀತಿಯ ಕಟಂಜರವು ಶಿರಹಟ್ಟಿಯ ರಥದ ನಿವೇಶನದ ಮುಂದೆ ಕಂಡುಬರುತ್ತದೆ. ತಂತಿಯ ಕಟಂಜರಗಳು ಇರದಿರುವುದರಿಂದ ರಥದ ಮನೆಯೊಳಗೆ ನಾಯಿ, ಗೂಳಿಗಳು ಹಾಗೂ ಇತರ ಪ್ರಾಣಿಗಳು ವಾಸಮಾಡುವುದರಿಂದ ಒಳಗಡೆಗೆ ಗಲೀಜು ಕಂಡುಬರುವುದು. ಇದರಿಂದ ರಥದ ರಕ್ಷಣೆಗೆ ಅಡ್ಡಿಯುಂಟಾಗುವುದು. ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಗೊಡಚಿನಮಲ್ಕಿಯ ಲಕ್ಷ್ಮೀದೇವಿಯ ದೇವಸ್ಥಾನದ ಹಾಗೂ ಪಾಶ್ಚಾಪುರದ ಲಕ್ಷ್ಮೀದೇವಿ ದೇವಸ್ಥಾನದ ರಥದ ನಿವೇಶನಗಳು ಮೂರು ಗೋಡೆಗಳನ್ನು ಹೊಂದಿದ್ದು, ಮೇಲ್ಛಾವಣಿಗೆ ಹಂಚುಗಳನ್ನು ಅಳವಡಿಸಲಾಗಿದೆ. ವಿಶೇಷವೆಂದರೆ, ಮುಂಭಾಗದಲ್ಲಿ ಬಾಗಿಲುಗಳನ್ನು ಕೂಡಿಸದೆ, ಬರಿಯ

ಕಲ್ಲುಗಳನ್ನು ಅರ್ಧದಷ್ಟು ವಟ್ಟುವಿಕೆಯಿಂದ ಮುಚ್ಚಿರುವುದನ್ನು ಕಾಣಬಹುದು. ಪಾಶ್ಚಾಪುರದ ರಥದ ನಿವೇಶನದ ಮುಂಭಾಗದಲ್ಲಿ ಪೂರ್ಣ ಪ್ರಮಾಣದಲ್ಲಿ ಮುಚ್ಚುವಂತೆ ಕಲ್ಲುಗಳನ್ನು ವಟ್ಟಿ ಜೋಡಿಸಿರುವುದನ್ನು ಕಾಣಬಹುದು. ಏಕೆಂದರೆ ಇಲ್ಲಿನ ರಥೋತ್ಸವಗಳು ಐದು, ಏಳು ಹಾಗೂ ಒಂಭತ್ತು ವರ್ಷಗಳಿಗೊಮ್ಮೆ ಜರುಗುವುದರಿಂದ ರಥಗಳಿಗೆ ಯಾವುದೇ ರೀತಿಯ ಬಾಧೆಯುಂಟಾಗಲಾರದಂತೆ ಕಲ್ಲಿನ ವಟ್ಟುವಿಕೆಯಿಂದ ನಿರ್ಮಾಣಗೊಂಡ ಮುಂಗೋಡೆಗಳನ್ನು ನೋಡಬಹುದು.

ಬೆಳಗಾಂವಿ ಜಿಲ್ಲೆಯ ಗೋಕಾಕದಲ್ಲೇ ಕಂಡುಬರುವ ಮೂರು ಬೇರೆ ಬೇರೆ ದೇವಸ್ಥಾನಗಳ ರಥಗಳ ಸಂರಕ್ಷಣಾ ಕಟ್ಟಡಗಳು ಇಟ್ಟಿಗೆ ಹಾಗೂ ಗಾರೆಯಿಂದ ನಿರ್ಮಾಣಗೊಂಡಿವೆ. ಮೇಲ್ಛಾವಣಿ ತಗಡುಗಳು ಇಲ್ಲವೆ ಹಂಚುಗಳಿಂದ ಆವೃತಗೊಂಡಿದ್ದು, ಮುಂಬದಿಯಲ್ಲಿ ಬರುವ ಬಾಗಿಲುಗಳು ಕಟ್ಟಿಗೆ ಇಲ್ಲವೆ ಬಿದಿರಿನ ಪಟ್ಟಿಗಳಿಂದ ಅಡ್ಡ ಉದ್ದಗಳಾಕಾರದಲ್ಲಿ ಜೋಡಿಸಿ ತಯಾರಿಸಲ್ಪಟ್ಟಿವೆ. ಈ ಎಲ್ಲ ನಿವೇಶನಗಳು ಎತ್ತರವಾದ ಮರದ ಕೆಳಗಡೆಗೆ ನಿರ್ಮಿಸಲ್ಪಟ್ಟಿರುವುದರಿಂದ ಮಳೆಗಾಲದಲ್ಲಿ ಮಳೆಯ ನೀರಿನಿಂದ ರಥಗಳು ಹಾನಿಗೊಳಗಾಗುವುದನ್ನು ಬಹುಮಟ್ಟಿಗೆ ತಡೆಯಲು ಸಾಧ್ಯವಾಗುವುದು. ಕೊಪ್ಪಳ ಜಿಲ್ಲೆಯ ಹುಲಗಿಯ ಹುಲಿಗೆಮ್ಮ ದೇವಸ್ಥಾನದ ಆವರಣದಲ್ಲಿರುವ ರಥದ ಮನೆಯು ಸುವ್ಯವಸ್ಥಿತವಾಗಿ ನಿರ್ಮಾಣಗೊಂಡಿದೆ. ನಾಲ್ಕೂ ಕಡೆಗಳಲ್ಲಿ ತಗಡುಗಳ ಜೋಡನೆಯಿಂದ ನಿರ್ಮಾಣಗೊಂಡಿದ್ದು, ಮೇಲ್ಛಾವಣಿಯು ಎರಡೂ ಕಡೆಗೆ ಇಳಿಜಾರು ಆಕಾರದಲ್ಲಿ ತಗಡುಗಳಿಂದಲೇ ಜೋಡಿಸಲ್ಪಟ್ಟಿದೆ. ಮನೆಯ ಮುಂಬರುವ ಬಾಗಿಲು, ಅಂಚುಗಳಲ್ಲಿ ಹಾಗೂ ಮಧ್ಯಭಾಗದಲ್ಲಿ ಕಬ್ಬಿಣದ ಪಟ್ಟಿಗಳಿಂದ ಕೂಡಿದೆ. ಇದರಿಂದ ರಥವು ಯೋಗ್ಯ ರೀತಿಯಲ್ಲಿ ಸಂರಕ್ಷಿಸಲ್ಪಟ್ಟಿದೆ.

ಬೆಳಗಾಂವಿ ಜಿಲ್ಲೆಯ ಮುಗಳಖೋಡದ ಸಿದ್ಧಸಂಸ್ಥಾನಮಠದ ರಥ, ಬಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಚಾಂದಕೌಟನ ಬಸವಣ್ಣ ದೇವಸ್ಥಾನದ ರಥ, ಬಾಗಲಕೋಟ ಜಿಲ್ಲೆಯ ಮುಧೋಳದ ಬ್ರಹ್ಮಗಡ್ಡಿ ಮಠದ ರಥ ಹಾಗೂ ಬಳ್ಳಾರಿ ಜಿಲ್ಲೆಯ ಹೊಸಪೇಟೆ ತಾಲೂಕಿನ ಹಂಪೆಯ ವಿರೂಪಾಕ್ಷ ದೇವಾಲಯದ ರಥಗಳ ಸಂರಕ್ಷಣಾ ಪದ್ಧತಿಗಳು ಒಂದೇ ರೀತಿಯಲ್ಲಿರುವುದು ಕಂಡುಬರುತ್ತದೆ. ಈ ಎಲ್ಲ ರಥಗಳೂ ಸಹ ತಗಡುಗಳ ಜೋಡನೆಯಿಂದ ಸಂರಕ್ಷಿಸಲ್ಪಟ್ಟರೂ, ನಾವು ಹಿಂದೆ ತಿಳಿದಂತೆ ರಥಕ್ಕಾಗಿ ಚೌಕಾಕಾರದ ಮನೆ ಕಟ್ಟಿ, ಅದರಲ್ಲಿ ರಥಗಳನ್ನು ನಿಲ್ಲಿಸುವುದು ಇಲ್ಲಿ ಕಂಡುಬರುವುದಿಲ್ಲ. ಬದಲಾಗಿ ರಥಗಳ ಪಕ್ಕದಲ್ಲಿಯೇ ರಥಕ್ಕೆ ಹೊಂದಿಕೊಂಡೇ ತಗಡುಗಳನ್ನು ಜೋಡಿಸಿರುವುದು ಕಂಡುಬರುತ್ತದೆ.

ಮೊದಲು ರಥದಿಂದ ಸ್ವಲ್ಪ ಅಂತರದಲ್ಲಿ, ಕಬ್ಬಿಣದ ಉದ್ದವಾದ ಕಂಬಗಳನ್ನು ಜೋಡಿಸಿ, ರಥದ ಕೆಳಭಾಗದಿಂದ ಮೇಲ್ಭಾಗದವರೆಗೂ ತಗಡುಗಳನ್ನು ಜೋಡಿಸುತ್ತ ಹೋಗಿರುವುದನ್ನು ಕಾಣಬಹುದು. ತಗಡುಗಳನ್ನು ಮೊಳೆಗಳಿಂದ ಜೋಡನೆ ಮಾಡಿರುವುದರಿಂದ ರಥಕ್ಕೆ ಯಾವುದೇ ಪ್ರಾಣಿಗಳಿಂದ ಬಾಧೆಯುಂಟಾಗದು. ರಥದ ಮೇಲ್ಭಾಗದಲ್ಲಿ ಅಡ್ಡವಾಗಿ ತಗಡುಗಳನ್ನು ಜೋಡಿಸಿರುವುದರಿಂದ ಮಳೆಯಿಂದ ರಥವು ಸಂರಕ್ಷಿಸಲ್ಪಡುತ್ತದೆ.

ಹಂಪೆಯ ವಿರೂಪಾಕ್ಷ ದೇವಸ್ಥಾನದ ಎದುರುಗಡೆಗೆ ಈ ರೀತಿ ನಿರ್ಮಿಸಲಾದ ಜೋಡುರಥಗಳ ಮನೆಗಳನ್ನು ಕಾಣಬಹುದು. ಹಂಪೆ ಹಾಗೂ ಮುಗಳಖೋಡದ ರಥಗಳು ಗಾಲಿಗಳಿಂದ ಮೇಲ್ಭಾಗದವರೆಗೂ ತಗಡುಗಳಿಂದ ಮುಚ್ಚಲ್ಪಟ್ಟಿದ್ದರೆ, ಚಾಂದಕೌಟ ಹಾಗೂ ಮುಧೋಳದ ರಥಗಳು ಗಾಲಿಗಳ ಭಾಗವನ್ನು ಬಿಟ್ಟು, ಅದರ ಮೇಲ್ಭಾಗದಿಂದ ಪ್ರಾರಂಭಗೊಂಡು ಮೇಲ್ತುದಿಯವರೆಗೆ ತಗಡುಗಳಿಂದ ಆವೃತಗೊಂಡಿರುವುದನ್ನು ಕಾಣಬಹುದು. ಈ ರೀತಿ ರಕ್ಷಣೆ ಒದಗಿಸಿರುವುದರಿಂದ ಬಿಸಿಲು, ಮಳೆ, ಗಾಳಿಯಿಂದ ರಥಕ್ಕೆ ಧಕ್ಕೆಯುಂಟಾಗದು.

ತಗಡುಗಳಿಂದ ಜೋಡನೆಗೊಂಡ ಹಾಗೂ ಕಲ್ಲಿನ, ಗಾರೆಯ, ಅಥವಾ ಇಟ್ಟಿಗೆಗಳಿಂದ ನಿವೇಶನಗಳನ್ನು ನಿರ್ಮಿಸಿ, ರಥಗಳನ್ನು ಸಂರಕ್ಷಿಸುವುದೊಂದೆಡೆಯಾದರೆ, ರಥಗಳಿಗೆ ಯಾವುದೇ ನಿವೇಶನಗಳನ್ನು ನಿರ್ಮಿಸದೇ, ಮಂದಿರದ ಹೊರಭಾಗದ ಆವರಣದಲ್ಲಿ ನಿಂತ ರಥದ ಸಂರಕ್ಷಣೆಗೆ ಕೇವಲ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಿರುವ ಉದಾಹರಣೆಗಳು ಉತ್ತರ ಕರ್ನಾಟಕದ ಹಲವು ಪ್ರದೇಶಗಳಲ್ಲಿ ಕಂಡುಬರುತ್ತವೆ.

ರಾಯಚೂರು ಜಿಲ್ಲೆಯ ಕಲ್ಮಲದ ಕರೆಪ್ಪ ತಾತ ದೇವಸ್ಥಾನದ ರಥಕ್ಕೆ ಗಾಲಿಗಳನ್ನು ಹೊರತು ಪಡಿಸಿ ಉಳಿದ ರಥದ ಭಾಗಕ್ಕೆ ಹಳದಿ ಬಣ್ಣದ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಿರುವುದನ್ನು ಕಾಣಬಹುದು. ಪ್ಲಾಸ್ಟಿಕ್ ಹೊದಿಸಿ, ಅದು ಗಟ್ಟಿಯಾಗಿ ಕೂರಲು, ಗಾಳಿಗೆ ಹಾರದಂತೆ ಹಗ್ಗದಿಂದ ಬಿಗಿದಿರುವುದು ಕಂಡುಬರುತ್ತದೆ.

ಕೊಪ್ಪಳ ಜಿಲ್ಲೆ ಕಿನ್ನಾಳದ ರಥಕ್ಕೆ ಕಪ್ಪು ಬಣ್ಣದ ಪ್ಲಾಸ್ಟಿಕ್ ಹೊದಿಕೆಯನ್ನು ಹಗ್ಗದಿಂದ ಕಟ್ಟಿರುವದು ಕಂಡುಬರುತ್ತದೆ. ಇದರಂತೆ ಬೆಳಗಾವಿ ಜಿಲ್ಲೆಯ ಹುಕ್ಕೇರಿ ತಾಲೂಕಿನ ಹೊಳೆಹಿಟ್ನಿಯ ರಥದ ಮೇಲ್ಭಾಗದಲ್ಲಿ ಗೊಬ್ಬರ ಚೀಲಗಳಿಂದ ಹೊದಿಕೆ ತಯಾರಿಸಿ, ರಥಕ್ಕೆ ಹೊದಿಸಿರುವುದನ್ನು ಕಾಣಬಹುದು.

ಕೆಲವು ಪ್ರದೇಶಗಳಲ್ಲಿ ರಥಕ್ಕೆ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಿ, ರಥದ ಮನೆಗಳಲ್ಲಿ ನಿಲ್ಲಿಸಿರುವದನ್ನು ಕಾಣಬಹುದು. ಹಾವೇರಿ ಜಿಲ್ಲೆಯ ರಟಹಳ್ಳಿಯ ವೀರಭದ್ರ ದೇವಸ್ಥಾನದ ರಥ, ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನ ದೇಸನೂರದ ಬಸವೇಶ್ವರ ರಥ, ಇದೆ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮುರುಕಿಬಾವಿ ರಥದ ಮೇಲೆ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಿ, ರಥದ ಮನೆಯಲ್ಲಿ ರಥವನ್ನು ಸುರಕ್ಷಿತವಾಗಿ ಇಟ್ಟಿರುವುದನ್ನು ಕಾಣಬಹುದು.

ರಥಗಳನ್ನು ಇನ್ನೂ ಉತ್ತಮ ರೀತಿಯಿಂದ ಸಂರಕ್ಷಿಸಲು ಇತ್ತೀಚೆಗೆ ಇಟ್ಟಿಗೆ, ಸಿಮೆಂಟಗಳನ್ನು ಬಳಸಿ ಕಲಾತ್ಮಕವಾದ ಮನೆಗಳನ್ನು ಪ್ರತ್ಯೇಕವಾಗಿ ರಥಗಳನ್ನು ನಿಲ್ಲಿಸಲೆಂದೇ ನಿರ್ಮಿಸಿರುವುದನ್ನು ಕರ್ನಾಟಕದ ಕೆಲವು ಪ್ರದೇಶಗಳಲ್ಲಿ ಕಾಣಬಹುದು.

ಧಾರವಾಡದ ಮೂರುಸಾವಿರ ಮಠದ ರಥದ ಮನೆಯು ಉತ್ತಮವಾಗಿ ನಿರ್ಮಾಣಗೊಂಡಿದೆ. ಮೂರು ಕಡೆಗಳಲ್ಲಿ ಗೋಡೆಗಳಿಂದಾವೃತವಾದ ರಥದ ಮನೆಯ ಮುಂಭಾಗದಲ್ಲಿ, ಕಬ್ಬಿಣದ ಬಾಗಿಲುಗಳನ್ನು ಜೋಡಿಸಿರುವರು. ರಥಕ್ಕೆ ಪ್ಲಾಸ್ಟಿಕ್ ಹೊದಿಕೆಯನ್ನು ಹೊದಿಸಿ, ರಥದ ಮನೆಯಲ್ಲಿ ನಿಲ್ಲಿಸಿರುವುದರಿಂದ ರಥವು ಸುರಕ್ಷಿತವಾಗಿದೆ. ರಥದ ನಿವೇಶನದ

ಒಳಗೋಡೆಗೆ ಕ್ರೀಮ್ ಕಲರ್ ಹಾಗೂ ಹೊರಗೋಡೆಗೆ ಕೇಸರಿ ಮಿಶ್ರಿತ ಕೆಂಪು ವರ್ಣಗಾರಿಕೆಯನ್ನು ಕಾಣಬಹುದು.

ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ದೇವಸ್ಥಾನದ ಆವರಣದಲ್ಲಿ ಸುಂದರವಾಗಿ ನಿರ್ಮಾಣಗೊಂಡ ರಥದ ಮನೆಯನ್ನು ಕಾಣಬಹುದು. ಇದು ಕಲಾತ್ಮಕ ಕಂಬಗಳಿಂದ ಹಾಗೂ ಕಮಾನುಗಳಿಂದ ಕೂಡಿದ್ದು, ಸುಂದರವಾದ ವರ್ಣಗಾರಿಕೆಯನ್ನು ಹೊಂದಿದೆ. ಜೋಡುರಥಗಳಿಗೆ ನಿರ್ಮಿಸಲಾದ ಈ ನಿವೇಶನವು ಇಟ್ಟಿಗೆ ಹಾಗೂ ಸಿಮೆಂಟಗಳಂತಹ ವಸ್ತುಗಳಿಂದ ನಿರ್ಮಾಣಗೊಂಡಿದ್ದು, ಮೇಲ್ಛಾವಣಿಯೂ ಸಹ ಕಾಂಕ್ರೀಟ್ ಮಾಧ್ಯಮದ್ದಾಗಿದೆ. ರಥೋತ್ಸವದ ಸಂದರ್ಭದಲ್ಲಿ ಹಿರಿಯರು ರಥೋತ್ಸವ ಜರುಗುವುದನ್ನು ನೋಡಲು, ಇದೇ ನಿವೇಶನದ ಮೇಲ್ಭಾಗದಲ್ಲಿ ಗ್ಯಾಲರಿಯಿಂದ ಕೂಡಿದ ಸ್ಥಳಾವಕಾಶವನ್ನು ಹೊಂದಿದೆ.

ಇದೇ ರೀತಿಯ ರಥದ ಉತ್ತಮವಾದ ನಿವೇಶನವನ್ನು ಬೆಳಗಾಂವ ಜಿಲ್ಲೆಯ ಗೋಕಾಕ ತಾಲೂಕಿನ ಮರಡಿಮಠದ ಆವರಣದಲ್ಲಿ ಕಾಣಬಹುದು. ಗಟ್ಟಿಮುಟ್ಟಾದ ರಥದ ನಿವೇಶನದ ಗೋಡೆಗಳು ಇಟ್ಟಿಗೆ ಹಾಗೂ ಸಿಮೆಂಟುಗಳಂತಹ ಆಧುನಿಕ ವಸ್ತುಗಳಿಂದ ಕೂಡಿದ್ದು, ಮೇಲ್ಛಾವಣಿಯು ಕಾಂಕ್ರೀಟ್ ಮಾಧ್ಯಮದಿಂದ ನಿರ್ಮಾಣಗೊಂಡಿದೆ. ರಥದ ನಿವೇಶನದ ಒಳ ಹಾಗೂ ಹೊರಗೋಡೆಗಳಿಗೆ ತಿಳಿ ಗುಲಾಬಿ ಬಣ್ಣವನ್ನು ಬಳಿಯಲಾಗಿದೆ. ನಿವೇಶನದ ಮೇಲ್ಭಾಗದಲ್ಲಿ, ಕಟ್ಟಡವನ್ನು ಕಟ್ಟಲು ಕಾಣಿಕೆಕೊಟ್ಟ ಭಕ್ತರ ಹೆಸರು ಹಾಗೂ ಕಾಣಿಕೆಯ ಲೆಕ್ಕವನ್ನು ಬರೆಯಲಾಗಿದೆ.

ಈ ರೀತಿಯಲ್ಲಿ ರಥದ ನಿವೇಶನಗಳನ್ನು ಕಟ್ಟುವುದರಿಂದ, ರಥಶಿಲ್ಪಗಳ ರಕ್ಷಣೆ ಸರಿಯಾದ ರೀತಿಯಲ್ಲಿ ಸಾಧ್ಯವಾಗುತ್ತದೆ. ಇನ್ನು ಕೆಲವು ಪ್ರದೇಶಗಳಲ್ಲಿ ರಥಗಳನ್ನು ತೆಂಗಿನ ಗರಿ ಅಥವಾ ಆಪು ಅಥವಾ ರವದಿಯ ಸಹಾಯದಿಂದ ಸಂರಕ್ಷಿಸುವುದು ಕಂಡು ಬರುತ್ತದೆ. ಬಾಗಲಕೋಟೆ ಜಿಲ್ಲೆಯ ಬದಾಮಿಯ ಬನಶಂಕರಿ ದೇವಸ್ಥಾನದ ರಥದ ರಕ್ಷಣೆಗಾಗಿ, ತೆಂಗಿನ ಗರಿಗಳನ್ನು ಬಳಸಿರುವುದನ್ನು ಕಾಣಬಹುದು. ರಥದ ಗಾಲಿಗಳ ಭಾಗ ಹಾಗೂ ಗಡ್ಡೆಯಭಾಗಗಳನ್ನು ಹೊರತುಪಡಿಸಿ, ಕೇವಲ ಮೇಲ್ಭಾಗದಲ್ಲಿ ಮಾತ್ರ ಚಪ್ಪರದ ಹಾಗೆ ಇಳಿಜಾರಾಕಾರವಾಗಿ ತೆಂಗಿನ ಗರಿಗಳನ್ನು ಜೋಡಿಸಿ ಹೊದಿಸಲಾಗಿದೆ. ಈ ರೀತಿಯ ಹೊದಿಸುವಿಕೆಯಿಂದ ಮಳೆಗಾಲದಲ್ಲಿ ಮಳೆಯ ನೀರಿನಿಂದ ರಥದ ಸಂರಕ್ಷಣೆಯಾದರೆ, ಉಳಿದ ಬೇಸಿಗೆ ಕಾಲ ಹಾಗೂ ಚಳಿಗಾಲಗಳಲ್ಲಿ ಬಿಸಿಲು ಹಾಗೂ ಗಾಳಿಗಳಿಂದ ರಥದ ಗಡ್ಡೆಯ ಭಾಗವು ಶಿಥಿಲಾವಸ್ಥೆಗೆ ತಿರುಗುವ ಸಂಭವಗಳಿರುವುದನ್ನು ಕಾಣಬಹುದು. ಉತ್ತಮ ಕಾಷ್ಠಕಲೆಯ ಸೂಕ್ಷ್ಮ ವಿನ್ಯಾಸಗಳೆಲ್ಲವು ಕಿಡಿಗೇಡಿಗಳಿಂದ, ಪಶುಗಳಿಂದ ಹಾಗೂ ಪ್ರಕೃತಿಯ ವಿಕೋಪಕ್ಕೆ ಸಿಲುಕಿ, ಹಾಳಾಗುವುದನ್ನು ಕಾಣಬಹುದು. ಈ ರೀತಿಯ ತೆಂಗಿನ ಗರಿಗಳ ಹೊದಿಸುವಿಕೆಯು ರಥಗಳಿಗೆ ಅಷ್ಟೊಂದು ಸಂರಕ್ಷಣೆಯನ್ನು ಕೊಡಲಾರದು.

ಬೆಳಗಾಂವ ಜಿಲ್ಲೆಯ ಹುಕ್ಕೇರಿ ತಾಲೂಕಿನ ಸಂಕೇಶ್ವರದ ಶಂಕರಲಿಂಗ ದೇವಸ್ಥಾನದ ರಥದ ಮೇಲೆ ರವದಿಯ ಹೊದಿಕೆಯನ್ನು ಬದಾಮಿಯ ಬನಶಂಕರಿಯ ರಥದ ಹೊದಿಕೆಯಂತೆ ಹೊದಿಸಿರುವುದನ್ನು ಕಾಣಬಹುದು. ಈ ರಥಕ್ಕೆ ಮರದ ಗಾಲಿಗಳಿರುವುದರಿಂದ ಮಳೆ ಹಾಗೂ ಬಿಸಿಲುಗಳಿಗೆ ತುತ್ತಾಗಿ ಬೇಗನೆ ಹಾಳಾಗುವ ಸಂಭವ ಕಂಡುಬರುತ್ತದೆ.

ಬಿಜಾಪೂರ ಜಿಲ್ಲೆಯ ಸಿಂದಗಿ ತಾಲೂಕಿನ ಗೊಲಗೇರಿಯ ಗೊಲ್ಲಾಳೇಶ್ವರ ದೇವಸ್ಥಾನದ ರಥದ ಸಂರಕ್ಷಣೆ ರವದಿ, ಒಣಹಲ್ಲು, ಆಪು ಹೊದಿಸುವಿಕೆಯಿಂದ ಕೂಡಿದೆ. ಈ ರಥದ ಮೇಲೆ ರವದಿ, ಹುಲ್ಲುಗಳನ್ನು ರಥದ ಗಾಲಿಗಳಿಂದ ಮೇಲ್ಭಾಗದವರೆಗೆ ಸಂಪೂರ್ಣವಾಗಿ ಹೊದಿಸಿರುವುದನ್ನು ಕಾಣಬಹುದು. ಈ ರೀತಿ ಹೊದಿಸುವುದರಿಂದ ರಥವು ಬಿಸಿಲು, ಗಾಳಿ ಹಾಗೂ ಮಳೆಯಿಂದ ಸಂರಕ್ಷಿಸಲ್ಪಟ್ಟರೂ, ಒಮ್ಮೆ ಹೊದಿಸಿದ ಮೇಲೆ ವರ್ಷಕ್ಕೊಮ್ಮೆ ತೆಗೆಯುವ ಈ ರವದಿಯ ಹೊದಿಕೆಯು ಮಳೆಯ ನೀರಿನಿಂದ ಕೊಳೆಯುವ ಸಂಭವ ಉಂಟು. ಕೊಳೆತ ಭಾಗದಲ್ಲಿ ರಥದ ಕಾಷ್ಠಶಿಲ್ಪಗಳು ಹಾಳಾಗುವ ಸಂಭವವೂ ಹೆಚ್ಚು.

ರಾಯಚೂರು ಜಿಲ್ಲೆಯ ದೇವದುರ್ಗ ತಾಲೂಕಿನ ಗೂಗಲದ ಪ್ರಭುದೇವರ ದೇವಸ್ಥಾನದ ರಥವು ಸಹ ಗೊಲಗೇರಿಯ ರಥದಂತೆ ಗಾಲಿಗಳನ್ನು ಹೊರತುಪಡಿಸಿ, ಸಂಪೂರ್ಣವಾಗಿ ರವದಿ, ಆಪುಗಳಿಂದ ಸಂರಕ್ಷಣೆಗೊಂಡಿದೆ.

ಯಡೆಯೂರು ಸಿದ್ಧಲಿಂಗೇಶ್ವರ ದೇವಸ್ಥಾನದ ರಥದ ಮನೆಯು ಹುಲ್ಲಿನ ಚಪ್ಪರದಿಂದ ನಿರ್ಮಾಣಗೊಂಡಿದೆ. ಸುತ್ತಲೂ ಉದ್ದನೆಯ ಕಲ್ಲುಗಳನ್ನು ಜೋಡಿಸಿ, ಒಳಮಗ್ಗುಲಗಳಲ್ಲಿ ಬಿದಿರಿನಿಂದ ಹಂದರವನ್ನು ತಯಾರಿಸಿ, ಅದರ ಮೇಲೆ ಹುಲ್ಲಿನ ಚಪ್ಪರವನ್ನು ಹೆಣೆದಿರುವುದು ಕಂಡುಬರುವದು. ಕೆಳಭಾಗವು ವಿಸ್ತಾರಗೊಂಡು, ಮೇಲ್ಭಾಗವು ಚೂಪಾಕಾರದಿಂದ ನಿರ್ಮಾಣಗೊಂಡಿರುವುದರಿಂದ, ಮಳೆಯ ನೀರು ಸರಾಗವಾಗಿ ಕೆಳಗೆ ಜಾರಿ ಹೋಗುವುದರಿಂದ ರಥವು ಮಳೆಗಾಲದಲ್ಲಿ ಸಂರಕ್ಷಿಸಲ್ಪಡುವುದು. ರಥವು ಚಪ್ಪರದ ಒಳಗಡೆಗೆ ಇರುವುದರಿಂದ ಬಿಸಿಲು, ಗಾಳಿಗಳಿಂದ ಹಾಳಾಗುವ ಸಂಭವವಿಲ್ಲ.

ಕುಕ್ಕೆ ಸುಬ್ರಮಣ್ಯಂ ದೇವಸ್ಥಾನದ ಬ್ರಹ್ಮರಥವು ಚಪ್ಪರದ ಮನೆಯಂತೆ ಆಕಾರವನ್ನು ಹೊಂದಿದ ರಥದ ಮನೆಯನ್ನು ಹೊಂದಿದೆ. ಮೇಲ್ಛಾವಣಿಯು ಓರಡಿಯಾಗಿ ಹಂಚುಗಳನ್ನು ಹೊಂದಿದ್ದು, ಕೆಳಗಡೆಯ ನಾಲ್ಕೂ ಕಡೆಗಳಲ್ಲಿ, ಕಾರ್ಡ್‌ಬೋರ್ಡುಗಳಿಂದ ಇಳಿಜಾರಾಕಾರವಾಗಿ ನಿರ್ಮಿಸಲ್ಪಟ್ಟಿದೆ. ಇದರಿಂದ ಮಳೆಯ ನೀರು ಸರಾಗವಾಗಿ ಜಾರಿ ಹೋಗುವುದರಿಂದ, ರಥವು ಮಳೆಯಿಂದ ಸುರಕ್ಷಿತವಾಗಿ ಉಳಿಯುತ್ತದೆ. ಕೆಳಗಡೆಯ ಒಂದು ಬದಿಯಲ್ಲಿ ಬಾಗಿಲನ್ನು ಬಿಡಲಾಗಿದೆ. ಚಪ್ಪರದ ಮನೆಯ ಹೋಲಿಕೆಯನ್ನು ಕಾಣಬಹುದು. ಉಡುಪಿಯ ಶ್ರೀಕೃಷ್ಣನ ದೇವಸ್ಥಾನದ ರಥದ ಮನೆಯು ಮುಂದುಗಡೆಗೆ ಬಾಗಿಲುಗಳನ್ನು ಹೊಂದದೆ, ತಟ್ಟಿಗಳಿಂದ ಹೆಣೆದ ಹೊದಿಕೆಯನ್ನು ಹೊಂದಿದೆ. ಆದರೆ ತಟ್ಟಿಗಳು ಹರುಕುಮುರಕಲಾಗಿರುವುದರಿಂದ, ರಥಗಳಿಗೆ ಸರಿಯಾದ ರಕ್ಷಣೆ ಒದಗದಿರುವುದು ಕಂಡುಬರುತ್ತದೆ.

ಬಳ್ಳಾರಿ ಜಿಲ್ಲೆಯ ಹೂವಿನಹಡಗಲಿ ತಾಲೂಕಿನ ಸೋಗಿ ಮರೆಮ್ಮನ ಹಳ್ಳಿಯಲ್ಲಿ ಕಂಡುಬರುವ ರಥಗಳ ರಕ್ಷಣಾ ಪದ್ಧತಿಯು ಬಾದಾಮಿ ಬನಶಂಕರಿ ರಥದ ಸಂರಕ್ಷಣಾ ವಿಧಾನವನ್ನು ಹೋಲುತ್ತದೆ. ಬನಶಂಕರಿ ದೇವಸ್ಥಾನದ ರಥವು ಮೇಲ್ಭಾಗದಲ್ಲಿ ಇಳಿಜಾರಾದ ಚಪ್ಪರದ ಮೇಲ್ಛಾವಣಿಯನ್ನು ಹೊಂದಿದಂತೆ, ಮರೆಮ್ಮನ ಹಳ್ಳಿಯ ರಥಗಳಿಗೆ ಓರಡಿಯಾಗಿ ಚಪ್ಪರದ ಮೇಲ್ಛಾವಣಿಯನ್ನು ಹೊಂದಿದ ರೀತಿಯಲ್ಲಿ ತಗಡು ಹಾಗೂ ಕಾರ್ಡ್‌ಬೋರ್ಡಗಳನ್ನು

ಜೋಡಿಸಿರುವುದು ಕಂಡುಬರುತ್ತದೆ ಕೇವಲ ಮೇಲ್ಭಾವಣಿಯು ಮಾತ್ರ ಮಳೆಯ ಕಾಲದಲ್ಲಿ ಸಂರಕ್ಷಣೆಯನ್ನು ಒದಗಿಸಿದರೆ, ರಥದ ಉಳಿದ ಭಾಗಗಳು ಹಾಗೂ ಗಾಲಿಗಳ ಭಾಗಗಳು ಧೂಳು, ಬಿಸಿಲು, ಗಾಳಿಗಳಿಂದ ಶಿಥಿಲಾವಸ್ಥೆಯನ್ನು ಹೊಂದುತ್ತಲಿವೆ.

ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಢವಳಗಿಯ ಮಡಿವಾಳೇಶ್ವರ ದೇವಸ್ಥಾನದ ರಥ ಹಾಗೂ ಇದೇ ತಾಲೂಕಿನ ಹಡ್ಲಗೇರಿಯ ಬನಶಂಕರಿ ರಥಗಳು ತುಂಬಾ ಹಳೆಯ ರಥಗಳಾದರೂ ಅವುಗಳ ರಕ್ಷಣೆಗೆ ಯಾವುದೇ ರೀತಿಯ ನಿವೇಶನವಾಗಲಿ, ಹೊದಿಕೆಯಾಗಲಿ ಇಲ್ಲವೇ ಇಲ್ಲ. ಸುಂದರವಾದ ರಥಗಳು ಬಿಸಿಲು,ಗಾಳಿ, ಮಳೆಗೆ ಮೈಯೊಡ್ಡಿ ನಿಂತಿರುವುದನ್ನು ಗಮನಿಸಬಹುದು. ಇದರಿಂದಾಗಿ ಕಾಷ್ಠಶಿಲ್ಪಗಳ ಸೂಕ್ಷ್ಮ ಕುಸುರಿ ಕೆತ್ತನೆಯ ವಿನ್ಯಾಸಗಳು ಈಗಾಗಲೇ ನಶಿಸಿ ಹೋಗಿರುವುದನ್ನು ಗಮನಿಸಬಹುದು.

ರಥಶಿಲ್ಪಗಳಲ್ಲಿ ಗಡ್ಡಿರಥಗಳಿಗೆ ಹಾಗೂ ಅಂಕಣ ರಥಗಳಿಗೆ ಅಂದರೆ ಸ್ಥಿರರಥಗಳಿಗೆ ನಿವೇಶನಗಳನ್ನು ಕಟ್ಟಿ ಸಂರಕ್ಷಣೆಯನ್ನು ಒದಗಿಸಿದಂತೆಯೆ, ಜಾತ್ರೆಯ ಸಂದರ್ಭದಲ್ಲಿ ಕಟ್ಟುವ ರಥಗಳಿಗೆ ಅಂದರೆ ಚರರಥಗಳಿಗೆ ಸಂರಕ್ಷಣೆ ಒದಗಿಸಿರುವುದನ್ನು ಕಾಣಬಹುದು.

ಬೆಳಗಾಂವ ಜಿಲ್ಲೆ ಗೋಕಾಕ ತಾಲೂಕಿನ ಗೋಕಾಕದಲ್ಲೇ ಇರುವ ಯಲ್ಲಮ್ಮನ ದೇವಸ್ಥಾನದ ಚರರಥಕ್ಕೆ ಸಂರಕ್ಷಣೆಯನ್ನು ಒದಗಿಸಲು ದೇವಸ್ಥಾನದ ಮಗ್ಗುಲಲ್ಲಿ ಒಂದು ಸಣ್ಣ ಮನೆಯನ್ನು ನಿರ್ಮಿಸಿರುವರು. ಚರರಥಗಳು ಉತ್ಸವದ ಸಂದರ್ಭದಲ್ಲಿ ಮಾತ್ರ ತಯಾರಿಸಲ್ಪಟ್ಟು ಉತ್ಸವದ ನಂತರ ರಥದ ಎಲ್ಲ ಕಟ್ಟಿದ ಭಾಗಗಳನ್ನು ಬಿಡಿಬಿಡಿಯಾಗಿರಿಸಿ, ಅವುಗಳನ್ನು ರಥದ ಮನೆಯಲ್ಲಿ ಇಡುವರು. ರಥ ತಯಾರಿಕೆಗೆ ಬೇಕಾದ ಹಗ್ಗ, ಹಲಗೆಗಳು, ಬಿದಿರುಗಂಬಗಳು, ಕೆಲವೊಂದು ಲೋಹದ ಪಟ್ಟಿಗಳು, ಬಣ್ಣ ಬಣ್ಣದ ಬಟ್ಟೆಗಳು ಹೀಗೆ ವಿವಿಧ ರೀತಿಯ ವಸ್ತುಗಳನ್ನು ತೇರುಮನೆಯಲ್ಲಿ ಹಾಳಾಗದಂತೆ ಇಡುವುದು ಕಂಡುಬರುತ್ತದೆ.

ಇದೇ ರೀತಿ ಬಾಗಲಕೋಟೆ ಜಿಲ್ಲೆಯ ಮುಧೋಳ ತಾಲೂಕಿನ ಯಡಹಳ್ಳಿಯ ಸಿದ್ಧೇಶ್ವರ ದೇವಸ್ಥಾನದ ರಥದ ಭಾಗಗಳು, ಬದಾಮಿ ತಾಲೂಕಿನ ಮಲ್ಲಾಪೂರದ ವೀರಭದ್ರ ದೇವಸ್ಥಾನದ ರಥದ ಭಾಗಗಳು, ಜಮಖಂಡಿ ತಾಲೂಕಿನ ಹಿಪ್ಪರಗಿಯ ಸಂಗಮೇಶ್ವರ ದೇವಸ್ಥಾನದ ರಥದ ಬಿಡಿಭಾಗಗಳು, ಇದೇ ತಾಲೂಕಿನ ರಬಕವಿಯ ಮಹಾದೇವ ದೇವಸ್ಥಾನದ ರಥದ ಬಿಡಿಭಾಗಗಳು, ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ನೇಸರಗಿಯ ರಥದ ಭಾಗಗಳು, ರಾಯಚೂರು ಜಿಲ್ಲೆಯ ಶಿರವಾರದ ಸಿದ್ಧೇಶ್ವರ ದೇವಸ್ಥಾನದ ರಥದ ಬಿಡಿಭಾಗಗಳನ್ನು ಸಂರಕ್ಷಿಸಲು ಆಯಾ ದೇವಸ್ಥಾನದ ಪಕ್ಕದಲ್ಲಿ ಸಣ್ಣ ಕೋಣೆಯನ್ನು ಮಾಡಿ, ರಥದ ಸಾಮಗ್ರಿಗಳನ್ನು ಇಡುವುದಕ್ಕೆ ಮಾತ್ರ ಉಪಯೋಗಿಸುವುದನ್ನು ಕಾಣುತ್ತೇವೆ.

ರಥಗಳ ರಕ್ಷಣೆ ನಿವೇಶನ ಕಟ್ಟುವುದರಿಂದ ಮಾತ್ರ ಮುಗಿಯಿತು ಎಂದಾಗದು. ಕರ್ನಾಟಕದ ಹಲವು ಪ್ರದೇಶಗಳಲ್ಲಿ ಪ್ರತ್ಯೇಕ ನಿವೇಶನಗಳನ್ನು ಹೊಂದಿದ ಅನೇಕ ರಥಗಳು ಸರಿಯಾಗಿ ಸಂರಕ್ಷಣೆಯಾಗದೆ ಶಿಥಿಲಾವಸ್ಥೆಯಲ್ಲಿರುವುದನ್ನು ಕಾಣಬಹುದು. ಉದಾ : ಬಾಗಲಕೋಟೆ ಜಿಲ್ಲೆಯ ಕೂಡಲಸಂಗಮದ ರಥ, ರಾಯಚೂರು ಜಿಲ್ಲೆಯ ಲಿಂಗಸೂರು ತಾಲೂಕಿನ ಮಸ್ಕಿಯ ಮಲ್ಲಿಕಾರ್ಜುನ

ದೇವಸ್ಥಾನದ ರಥ, ಮುದ್ದೇಬಿಹಾಳ ತಾಲೂಕಿನ ಢವಳಗಿಯ ಮಡಿವಾಳೇಶ್ವರ ದೇವಸ್ಥಾನದ ರಥ, ಬಳ್ಳಾರಿ ಜಿಲ್ಲೆಯ ಮರೆಮ್ಮನ ಹಳ್ಳಿಯ ಎರಡು ರಥಗಳು, ಕೊಪ್ಪಳ ಜಿಲ್ಲೆಯ ಯಲಬುರ್ಗಾ ತಾಲೂಕಿನ ಗುದ್ನೆಪ್ಪನ ಮಠದ ರಥ, ರಾಯಚೂರು ಜಿಲ್ಲೆಯ ಬಳಗಾನೂರು ಆಂಜನೇಯ ದೇವಸ್ಥಾನದ ರಥ, ಇದೇ ಜಿಲ್ಲೆಯ ದೇವಸೂಗೂರದ ಸುಗೂರೇಶ್ವರ ದೇವಸ್ಥಾನದ ರಥ, ಬಾಗಲಕೋಟೆ ಜಿಲ್ಲೆಯ ಬದಾಮಿ ಬನಶಂಕರಿ ದೇವಾಲಯದ ರಥ, ಕುಕ್ಕೆ ಸುಬ್ರಹ್ಮಣ್ಯಂದ ಸುಬ್ರಹ್ಮಣ್ಯ ಸ್ವಾಮಿ ದೇವಾಲಯದ ರಥ, ಮೈಸೂರು ಚಾಮುಂಡೇಶ್ವರಿ ರಥ, ಬನವಾಸಿಯ ಮಧುಕೇಶ್ವರ ದೇವಸ್ಥಾನದ ರಥ, ಧರ್ಮಸ್ಥಳದ ವಸ್ತು ಸಂಗ್ರಹಾಲಯಕ್ಕೆ ಸೇರಿದ ಐದು ಕಾಷ್ಠ ರಥಗಳು-ಹೀಗೆ ಕರ್ನಾಟಕದ ಅನೇಕ, ಸುಂದವಾದ ಕಾಷ್ಠ ಶಿಲ್ಪಗಳನ್ನು ಹೊಂದಿದ ರಥಗಳು, ಪ್ರಸ್ತುತ ಸಂದರ್ಭದಲ್ಲಿ ತಮ್ಮಲ್ಲಿ ಮೈಗೂಡಿಸಿಕೊಂಡಿರುವ ಕಲಾತ್ಮಕವಾದ ಶಿಲ್ಪಕಲೆಯನ್ನು ಕಳೆದುಕೊಳ್ಳುತ್ತಿರುವುದನ್ನು ಕಾಣಬಹುದು. ಪ್ರತಿ ವರ್ಷವು ಜರುಗುವ ಉತ್ಸವದ ಸಂದರ್ಭದಲ್ಲಿ ರಥಗಳಿಗೆ ಎಣ್ಣೆ ಸವರುವದರಿಂದ, ರಥೋತ್ಸವದ ಸಂದರ್ಭದಲ್ಲಿ ಮೇಲೇಳುವ ಧೂಳು ರಥದ ಸುಂದರವಾದ ಕಾಷ್ಠಮೂರ್ತಿ ಶಿಲ್ಪಗಳ ಮೇಲೆ ಪದರು ಪದರಾಗಿ ಮೆತ್ತಿಕೊಳ್ಳುವುದರಿಂದ ರಥದ ಶಿಲ್ಪಗಳು ಕಾಣದಂತೆ ಮಾಯವಾಗುತ್ತವೆ. ಮೊದಲಿನಿಂದಲೂ ರಥಕ್ಕೆ ಎಣ್ಣೆ ಸವರುವದು ನಮ್ಮ ಸಂಪ್ರದಾಯವಾಗಿದೆ ಎಂದು ಎಲ್ಲ ಗ್ರಾಮಸ್ಥರೂ ಹೇಳುವರು ರಥದ ಕಟ್ಟಿಗೆಗೆ ಯಾವುದೇ ಹುಳ ಅಥವಾ ನೀರಿನಿಂದ ಧಕ್ಕೆಯಾಗಬಾರದೆಂದು ಎಣ್ಣೆ ಸವರುತ್ತಿರುವುದೇನೋ ನಿಜ. ಆದರೆ ಕಾಲ ಬದಲಾದಂತೆ ಕಾಷ್ಠ ರಕ್ಷಣೆಗೆ ಅನೇಕ ನವೀನ ಆವಿಷ್ಕಾರಗಳಾಗಿರುವುದನ್ನು ಗಮನಿಸದೇ, ಎಣ್ಣೆ ಸವರುವದೇ ನಮ್ಮ ಸಂಪ್ರದಾಯವೆನ್ನುವ ಗ್ರಾಮಸ್ಥರ ಅಭಿಪ್ರಾಯವು ಅನೇಕ ಕಾಷ್ಠ ರಥಗಳ ಕಲಾತ್ಮತೆಗೆ ಧಕ್ಕೆಯನ್ನು ತಂದಿದೆ ಎಂದು ಹೇಳಬಹುದು.

ಕಾಷ್ಠ ಮಾಧ್ಯಮದ ಯಾವುದೇ ವಸ್ತುಗಳಿಗೆ ಕ್ರಿಮಿ ಕೀಟಗಳಿಂದ, ನೀರಿನಿಂದ ಹಾಗೂ ಬಿಸಿಲು ಗಾಳಿಗಳಿಂದ ಬಾಧೆಯಾಗದಂತೆ ಅನೇಕ ರಾಸಾಯನಿಕಗಳನ್ನು ಆವಿಷ್ಕಾರಗೊಳಿಸಿದ್ದಾರೆ. ಅಂತಹ ರಾಸಾಯನಿಕ ವಸ್ತುಗಳ ಲೇಪನದಿಂದ ಕಟ್ಟಿಗೆಯ ವಸ್ತುಗಳಿಗೆ ಒಂದು ರೀತಿಯ ಹೊಳಪು ಬರುವುದಲ್ಲದೆ ಉತ್ತಮವಾದ ರೀತಿಯಲ್ಲಿ ಸಂರಕ್ಷಣೆಯೂ ಒದಗುತ್ತದೆ. ಸಂರಕ್ಷಣೆಗಾಗಿ ಇಂತಹ ಮಾಧ್ಯಮವನ್ನು ಅಳವಡಿಸಿಕೊಂಡ ನವೀನ ರಥಗಳನ್ನು ಕಾಣಬಹುದು. ಉದಾ: ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ವರವಿಯ ಮೌನೇಶ್ವರ ದೇವಸ್ಥಾನದ ರಥಕ್ಕೆ ಅಡಿಪಾಯ ಭಾಗದಿಂದ ಮಂಟಪ ಭಾಗದವರೆಗೆ ಹಳದಿ ಟಚವುಡ್ ಎಂಬ ರಾಸಾಯನಿಕವನ್ನು ಲೇಪಿಸಿರುವುದನ್ನು ಕಾಣಬಹುದು. ಕೆಲವು ಮೂರ್ತಿಶಿಲ್ಪಗಳಿಗೆ ಬಿಳಿ ಹಾಗೂ ಕೆಂಪು ಬಣ್ಣದ ವಾರ್ನಿಸ್ ಬಳಸಿರುವುದನ್ನು ಗಮನಿಸಬಹುದು. ಇದರಿಂದ ರಥವು ಒಂದು ರೀತಿಯ ಹೊಳಪನ್ನು ಪಡೆದು ಸುಂದರವಾಗಿ ಕಂಡುಬರುತ್ತದೆ. ಅಷ್ಟೇ ಅಲ್ಲದೇ ಅಧಿಷ್ಠಾನ ಭಾಗದಲ್ಲಿ ಕುಸುರಿ ಕೆತ್ತನೆಯಿಂದ ಕೂಡಿದ ಅನೇಕ ಶಿಲ್ಪಗಳು ಯಾವುದೇ ಕಿಡಿಗೇಡಿಗಳ ಕೈಗೆ ಎಟುಕದಂತೆ ಸಂಪೂರ್ಣವಾಗಿ ತಂತಿಯ ಕಟಂಜರಿನಿಂದ ಆವೃತವಾಗಿರುವುದು ಒಂದು ವಿಶೇಷ. ಸಂರಕ್ಷಣಾ ಪದ್ಧತಿಯೆಂದು ಹೇಳಬಹುದು. ಇಂತಹುದೇ ಸಂರಕ್ಷಣಾ ವಿಧಾನವನ್ನು ಇದೇ ಜಿಲ್ಲೆಯ ಚಿಂಚಲಿ ವೀರಭದ್ರೇಶ್ವರ ದೇವಸ್ಥಾನದ ರಥಕ್ಕೆ ಬಳಸಿರುವುದರಿಂದ ರಥವು ಸುಂದರವಾದ ಕಾಷ್ಠ ಮೂರ್ತಿಶಿಲ್ಪಗಳನ್ನು ಇನ್ನೂ ಉಳಿಸಿಕೊಂಡು ಬಂದಿದೆ. ವರವಿಯ ಮೌನೇಶ್ವರ ದೇವಸ್ಥಾನದ ರಥಕ್ಕಿಂತಲೂ ಚಿಂಚಲಿಯ ರಥವು ಹಳೆಯದಾದರೂ, ಮೂರ್ತಿಶಿಲ್ಪಗಳಿಗೆ ಯಾವುದೇ ರೀತಿಯ ಧಕ್ಕೆಯುಂಟಾಗದೇ ಮೊದಲಿನ

ಸ್ಥಿತಿಯಲ್ಲಿರುವುದನ್ನು ಗಮನಿಸಬಹುದಾಗಿದೆ. ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮುರಕಿಬಾವಿಯ ಬಸವೇಶ್ವರ ದೇವಸ್ಥಾನದ ರಥವು ಇಪ್ಪತ್ತು ವರ್ಷ ಹಳೆಯದಾದರೂ ಟಚ್‌ವುಡ್ ಎಂಬ ವಾರ್ನಿಸ್ ಬಳಸಿರುವುದರಿಂದ ಯಾವುದೇ ರೀತಿಯ ಬಾಧೆಯುಂಟಾಗದೆ ಸುಸ್ಥಿತಿಯಲ್ಲಿರುವುದನ್ನು ಕಾಣಬಹುದು.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ಭವ್ಯವಾದ ರಥವು ಅನೇಕ ಕುಸುರಿ ಕೆತ್ತನೆಯ ಸುಂದರ ಕಾಷ್ಠ ಶಿಲ್ಪಗಳನ್ನು ಎಲ್ಲರ ಗಮನ ಸೆಳೆಯುವಂತೆ ಉಳಿಸಿಕೊಂಡು ನಿಂತಿರುವುದನ್ನು ಕಾಣಬಹುದು. ಈ ರಥವು ಸುಮಾರು ಎಂಭತ್ತು ವರ್ಷ ಹಳೆಯದಾದರು ಪ್ರಸ್ತುತದಲ್ಲಿಯೂ ತನ್ನ ಮೂಲ ಸ್ವರೂಪವನ್ನು ಉಳಿಸಿಕೊಂಡು ಬಂದಿದೆ. ಇದೇ ಜಿಲ್ಲೆಯ ಕೊಪ್ಪಳದಲ್ಲೇ ಗವಿಸಿದ್ಧೇಶ್ವರ ದೇವಸ್ಥಾನದ ರಥವು ಸುಮಾರು ಹನ್ನೆರಡು ವರ್ಷ ಹಳೆಯದಾದರೂ ಮೂರ್ತಿಶಿಲ್ಪಗಳಿಗೆ ಯಾವುದೇ ರೀತಿಯ ದಕ್ಕೆಯುಂಟಾಗದಂತೆ ತನ್ನ ಸೌಂದರ್ಯವನ್ನು ಉಳಿಸಿಕೊಂಡು ಬಂದಿದೆ. ಈ ಎರಡೂ ರಥಗಳಿಗೆ ಅಧಿಷ್ಠಾನ ಭಾಗದಿಂದ ಮಂಟಪ ಭಾಗದವರೆಗೆ ಹಳದಿ ಟ್ರಾನ್ಸ್‌ಪರಂಟ್ ವಾರ್ನಿಸ್ ಲೇಪಿಸಲಾಗಿದೆ ಹಾಗೂ ಈ ಭಾಗದಲ್ಲಿ ಕಂಡುಬರುವ ಉಬ್ಬು ಶಿಲ್ಪಗಳಿಗೆ ಅಲ್ಲಲ್ಲಿ ವಿವಿಧ ವರ್ಣಗಳನ್ನು ಲೇಪಿಸಲಾಗಿದೆ.

ಬೆಳಗಾವ ಜಿಲ್ಲೆಯ ಗೋಕಾಕ ತಾಲೂಕಿನ ಕೊಣ್ಣೂರಿನ ಮರಡಿಮಠದಲ್ಲಿ ಕಂಡುಬರುವ ರಥದ ರಕ್ಷಣೆಗೆ ಕೊಪ್ಪಳ ಜಿಲ್ಲೆ ಹಾಗೂ ಗದಗ ಜಿಲ್ಲೆಗಳಲ್ಲಿ ಬಳಸಿರುವ ನವೀನ ವಿಧಾನಗಳನ್ನು ಬಳಸಿರುವುದನ್ನು ಕಾಣಬಹುದು. ಇದೇ ಜಿಲ್ಲೆಯ ಗೋಕಾಕದ ವೆಂಕಟೇಶ್ವರ ದೇವಸ್ಥಾನ ಹಾಗೂ ಬಸವೇಶ್ವರ ದೇವಸ್ಥಾನದ ಎರಡೂ ರಥಗಳಿಗೆ ಕಂದು ಮಿಶ್ರಿತ ಹಳದಿ ಬಣ್ಣವನ್ನು ಲೇಪಿಸಿರುವುದರಿಂದ ರಥಕ್ಕೆ ಬಳಸಿದ ಎಲ್ಲ ಕಾಷ್ಠಗಳು ಇನ್ನೂ ಸುಸ್ಥಿತಿಯಲ್ಲಿರುವುದನ್ನು ಕಾಣಬಹುದು. ಇದೇ ಜಿಲ್ಲೆಯ ಬೈಲಹೊಂಗಲದ ಬಸವೇಶ್ವರ ದೇವಸ್ಥಾನದ ರಥಕ್ಕೆ ವಿವಿಧ ವಾರ್ನಿಸ್ ಬಣ್ಣ ಬಳಸಿ, ಮೇಲೆ ಟ್ರಾನ್ಸ್‌ಪರಂಟ್ ವಾರ್ನಿಸ್ ಬಳಸಿರುವುದರಿಂದ ರಥವು ಸುಸ್ಥಿಯಲ್ಲಿರುವುದನ್ನು ಕಾಣಬಹುದು. ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ನಾಲವಡಿಯ ಬಸವೇಶ್ವರ ದೇವಸ್ಥಾನದ ರಥ, ಬಾಗಲಕೋಟೆ ಜಿಲ್ಲೆಯ ನವಲಗುಂದದ ಬಸವೇಶ್ವರ ರಥ, ಇದೇ ಜಿಲ್ಲೆಯ ಹುನಗುಂದ ತಾಲೂಕಿನ ಇಲಕಲ್ಲದ ವಿಜಯಮಹಾಂತೇಶ್ವರ ದೇವಸ್ಥಾನದ ರಥ, ಇದೇ ಜಿಲ್ಲೆಯ ಜಮಖಂಡಿ ತಾಲೂಕಿನ ಬನಹಟ್ಟಿಯ ಶ್ರೀ ಕಾಡಸಿದ್ಧೇಶ್ವರ ದೇವಸ್ಥಾನದ ರಥ-ಈ ಎಲ್ಲ ರಥಗಳಿಗೆ ವುಡ್ ವಾರ್ನಿಸ್ ಹಾಗೂ ಪೇಂಟ್ ಬಳಸಿ ರಥಗಳ ಸಂರಕ್ಷಣೆ ಮಾಡಲಾಗಿದೆ.

ಟಚ್‌ವುಡ್, ಟ್ರಾನ್ಸ್‌ಪರಂಟ್ ವುಡ್‌ವಾರ್ನಿಸ್, ವುಡ್ ಪಾಲಿಶ್, ವಾರ್ನಿಸ್ ಹಾಗೂ ವಿವಿಧ ವಾರ್ನಿಸ್ ಬಣ್ಣಗಳನ್ನು ಲೇಪಿಸಿ, ರಥದ ಶಿಲ್ಪಕಲಾಕೃತಿಗಳಿಗೆ ಸಂರಕ್ಷಣೆಯನ್ನು ಒದಗಿಸಿರುವುದು ಇತ್ತೀಚಿನ ಹೊಸ ಪದ್ಧತಿ ಎಂದು ಹೇಳಬಹುದು.

ಇನ್ನು ಈ ಕಾಷ್ಠ ರಥಗಳ ಶಿಲ್ಪಗಳನ್ನು ಸಂರಕ್ಷಿಸುವ ವಿಧಾನ ಎಷ್ಟು ಮಹತ್ವವೋ ಅಷ್ಟೇ ಮಹತ್ವವನ್ನು ದಿವ್ಯ ರಥಗಳ ರಥೋತ್ಸವಗಳ ಸಂದರ್ಭದಲ್ಲಿಯೂ ಕೊಡಬೇಕಾಗುತ್ತದೆ. ಏಕೆಂದರೆ ಕಾಷ್ಠಮಾಧ್ಯಮದ ಭವ್ಯ ರಥಗಳು ಉತ್ಸವದ ಸಂದರ್ಭದಲ್ಲಿ ಬೃಹತ್ ಜನ ಸಮೂಹದಿಂದ

ಎಳೆಯಲ್ಪಡುತ್ತವೆ. ರಥವನ್ನು ಎಳೆಯಲು ಜನರು ಸೇರಿದಂತೆ, ರಥೋತ್ಸವವನ್ನು ನೋಡಲು ಜನಸಾಗರವೂ ಸೇರಿರುತ್ತದೆ. ಎಲ್ಲರೂ ರಥವನ್ನು ಎಳೆಯಲು ಉತ್ಸಾಹಭರಿತರಾಗಿರುತ್ತಾರೆ. ರಥದ ಚಕ್ರಗಳಿಗೆ ಸವಕಳಿ ಬಂದಿದ್ದರೆ, ಅಂತಹ ಚಕ್ರಗಳನ್ನು ಬದಲಾಯಿಸದಿದ್ದರೆ ಅಥವಾ ರಥದ ಅಚ್ಚುಗಳು ಬೃಹತ್ ರಥದ ಭಾರವನ್ನು ತಡೆಯದೆ ಮುರಿದು ಹೋದರೆ, ಅದರಿಂದ ತುಂಬಾ ಅನಾಹುತಗಳಾಗುವ ಸಂದರ್ಭಗಳುಂಟು. ಇದರಿಂದ ಆಧುನಿಕ ರಥ ಶಿಲ್ಪಕಾರರು ರಥ ನಿರ್ಮಾಣದಲ್ಲಿ ನವೀನ ಸೂತ್ರಗಳನ್ನು ಬಳಸುತ್ತಿರುವುದು ಕಂಡುಬರುತ್ತದೆ.

ಕೊಪ್ಪಳ ಜಿಲ್ಲೆಯ ಗಂಗಾವತಿ ತಾಲೂಕಿನ ಕನಕಗಿರಿಯ ಕನಕರಾಯನ ದೇವಸ್ಥಾನದ ರಥವು ಸುಮಾರು ಐವತ್ತು ಅಡಿ ಎತ್ತರವಾದ ಭವ್ಯ ರಥವಾಗಿದೆ. ಉತ್ಸವದ ಸಂದರ್ಭದಲ್ಲಿ ಬಲಬದಿಯ ಒಂದು ಗಾಲಿ ಸವಕಳಿ ಬಂದದ್ದರಿಂದ ಚಕ್ರಮುರಿದು ರಥವು ಬಲಭಾಗಕ್ಕೆ ಬಾಗತೊಡಗಿತು. ಆದರೆ ಯಾವುದೇ ಅನಾಹುತವು ಸಂಭವಿಸಲಿಲ್ಲ. ಆಮೇಲೆ ರಥದ ಎಲ್ಲ ಚಕ್ರಗಳನ್ನು ತೆಗೆದು ಮತ್ತೆ ಹೊಸ ಮರದ ಗಾಲಿಗಳನ್ನು ಜೋಡಿಸಿರುವುದು ಕಂಡುಬರುತ್ತದೆ. ಹೊಸದಾಗಿ ಜೋಡಿಸಲ್ಪಟ್ಟ ಮರದ ಚಕ್ರಗಳ ಒಳಭಾಗ ಹಾಗೂ ಹೊರಮಗ್ಗುಲಗಳಲ್ಲಿ ಅಡ್ಡಲಾಗಿ ಎರಡೆರಡು ಕಬ್ಬಿಣದ ಸಲಾಕೆಗಳನ್ನು ನಟ್ ಬೋಲ್ಟ್‌ಗಳಿಂದ ಬಿಗಿಯಲಾಗಿದೆ. ಚಕ್ರದ ವ್ಯಾಸದ ಕೊನೆಗೆ ಕಬ್ಬಿಣದ ವರ್ತುಳಾಕಾರದ ಸಲಾಕೆಯನ್ನು ಜೋಡಿಸಲಾಗಿದೆ. ಇದರಿಂದ ಮರದ ಚಕ್ರಗಳಿಗೆ ಸವಕಳಿ ಬರುವುದು ಕಡಿಮೆಯಾಗುತ್ತದೆ. ಚಕ್ರಗಳು ಬಹುದಿನಗಳವರೆಗೆ ಬಾಳಿಕೆ ಬರುವುದರಿಂದ ಯಾವುದೇ ತೊಂದರೆಯುಂಟಾಗುವುದಿಲ್ಲ. ಕಾಷ್ಠ ಮಾಧ್ಯಮದ ರಥಗಳಿಗೆ ಕಲ್ಲಿನ ಗಾಲಿಗಳನ್ನು ಹಾಗೂ ಮರದ ಗಾಲಿಗಳನ್ನು ಅಳವಡಿಸಿರುವುದು ಕಂಡುಬರುತ್ತದೆ. ಕಲ್ಲಿನ ಚಕ್ರಗಳು ಮರದ ಅಚ್ಚುಗಳಿಗೆ ಜೋಡಿಸಲ್ಪಟ್ಟಿರುವುದರಿಂದ, ಚಕ್ರಗಳು ಜೋಡನೆಯಾಗುವ ಸ್ಥಳದಲ್ಲಿ ಮರದ ಅಚ್ಚುಗಳಿಗೆ ಕಬ್ಬಿಣದ ವೈಸರ್‌ಗಳನ್ನು ಅಳವಡಿಸುವದು ಕಂಡುಬರುತ್ತದೆ. ಕಬ್ಬಿಣದ ಕೀಲುಗಳನ್ನು ಅಳವಡಿಸಿರುವದರಿಂದ ಕೀಲುಗಳ ಸವಕಳಿ ಕಡಿಮೆಯಾಗುವುದು. ಎರಡೂ ಅಚ್ಚುಗಳ ಚಕ್ರಗಳನ್ನು ಜೋಡಿಸಿದ ಹೊರಮೈಗೆ ಕಟ್ಟಿಗೆಯ ತೊಲೆ ಇಲ್ಲವೆ ಕಬ್ಬಿಣದ ರಾಡ್‌ಗಳನ್ನು ಬಳಸಿ, ಚಕ್ರಗಳು ಮುಂದೆ ಸರಿದು ಬೀಳದಂತೆ ವ್ಯವಸ್ಥಿತವಾಗಿ ಜೋಡಿಸಿದ ಅನೇಕ ರಥಗಳನ್ನು ಕಾಣಬಹುದು. ಉದಾ : ಕೊಪ್ಪಳ ಜಿಲ್ಲೆಯ ಹುಲುಗಿಯ ಹುಲಿಗೆಮ್ಮ ದೇವಸ್ಥಾನದ ರಥ ಹಾಗೂ ಬಳ್ಳಾರಿ ಜಿಲ್ಲೆಯ ಶಿರಗುಪ್ಪತಾಲೂಕಿನ ಶಿರಗುಪ್ಪದ ಶಂಭುಲಿಂಗೇಶ್ವರ ದೇವಸ್ಥಾನದ ರಥಗಳು ಶಿಲೆಯ ಚಕ್ರಗಳನ್ನು ಒಳಗೊಂಡಿವೆ. ವಿಶೇಷವೆಂದರೆ ಈ ಎರಡೂ ರಥಗಳ ಚಕ್ರಗಳ ಒಳಭಾಗ ಹಾಗೂ ಹೊರಭಾಗಗಳಲ್ಲಿ ಕಬ್ಬಿಣದ ರಾಡ್‌ಗಳನ್ನು ಆಯತಾಕಾರದಲ್ಲಿ ಜೋಡಿಸಲಾಗಿದೆ. ಕಬ್ಬಿಣದ ರಾಡ್‌ಗಳನ್ನು ತೊಲೆಗಳಿಗೆ ನಟ್ ಬೋಲ್ಟ್‌ಗಳಿಂದ ಬಿಗಿಯಲಾಗಿದೆ. ಚಕ್ರಗಳು ಹೊರಬೀಳದಂತೆ ಕೀಲುಗಳೂ ಸಹ ಕಬ್ಬಿಣದ್ದಾಗಿವೆ.

ಬಾಗಲಕೋಟೆ ಜಿಲ್ಲೆಯ ಹುನಗುಂದದ ಬಸವೇಶ್ವರ ರಥ, ಗದಗ ಜಿಲ್ಲೆಯ ಚಿಂಚಲಿಯ ವೀರಭದ್ರರಥ, ಬದಾಮಿ ಬನಶಂಕರಿಯ ರಥ, ಗದಗ ಜಿಲ್ಲೆ ಶಿರಹಟ್ಟಿ ತಾಲೂಕಿನ ವರವಿ ಮೌನೇಶ್ವರ ರಥ, ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾಲೂಕಿನ ಮುರಕಿಬಾವಿಯ ಬಸವೇಶ್ವರ ರಥ, ಹಾವೇರಿ ಜಿಲ್ಲೆಯ ಹಾನಗಲ್ಲದ ತಾರಕೇಶ್ವರ ದೇವಸ್ಥಾನದ ರಥ, ಬಿಜಾಪೂರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ಜಾಯವಾಡಲಗಿಯ ರಥ, ಬಾಗಲಕೋಟೆ ಜಿಲ್ಲೆಯ ಶಿರೂರಿನ

ಸಿದ್ಧೇಶ್ವರ ದೇವಸ್ಥಾನದ ರಥಗಳಿಗೆ ಉತ್ಸವದ ಸಂಧರ್ಭದಲ್ಲಿ, ಚಕ್ರಗಳ ಜೋಡನೆಯ ಮಧ್ಯಭಾಗದಿಂದ ಹೊರಬಂದ ಅಚ್ಚುಗಳಿಗೆ, ಚಕ್ರಗಳು ಹೊರಗೆ ಸರಿಯದಂತೆ ಅಡ್ಡಲಾಗಿ ಮರದ ಎರಡು ದೊಡ್ಡ ಗಾತ್ರದ ತೊಲೆಗಳನ್ನು ಹಗ್ಗದಿಂದ ಬಿಗಿಯುವುದನ್ನು ಕಾಣಬಹುದು. ಹೀಗೆ ಜೋಡಿಸುವುದರಿಂದ ರಥೋತ್ಸವದ ಸಂದರ್ಭದಲ್ಲಿ ರಥದ ಚಕ್ರಗಳು ಆಚೆ ಈಚೆಗೆ ಅಲುಗಾಡದೆ ಸರಿಯಾದ ಗತಿಯಲ್ಲಿ ಸಾಗುತ್ತವೆ. ಶಿಲೆಯ ಚಕ್ರಗಳಿಗೆ ಈ ರೀತಿಯ ರಾಡ್ ಅಥವಾ ತೊಲೆಯ ಸಹಾಯದಿಂದ ಸಂರಕ್ಷಣೆಯನ್ನು ಒದಗಿಸುವುದು ಒಂದು ವಿಧಾನವಾದರೆ, ಕಾಷ್ಠರಥಗಳ ಕಾಷ್ಠ ಚಕ್ರಗಳಿಗೆ ಮತ್ತೊಂದು ರೀತಿಯಿಂದ ಸಂರಕ್ಷಣೆ ಒದಗಿಸಿರುವುದನ್ನು ಕಾಣಬಹುದು.

ಬಳ್ಳಾರಿ ಜಿಲ್ಲೆಯ ಮರೆಮ್ಮನಹಳ್ಳಿಯಲ್ಲಿರುವ ಎರಡು ರಥಗಳಿಗೆ ಕಾಷ್ಠ ಮಾಧ್ಯಮದ ಚಕ್ರಗಳನ್ನು ಅಳವಡಿಸಲಾಗಿದೆ. ಈಗಾಗಲೇ ಸವಕಳಿಗೊಂಡ ಮರದ ಚಕ್ರಗಳನ್ನು ಬದಿಗಿರಿಸಿ, ಹೊಸ ಚಕ್ರಗಳನ್ನು ಜೋಡಿಸಿರುವುದು ಕಂಡುಬರುತ್ತದೆ. ಸುಮಾರು ಆರು ಅಡಿ ಎತ್ತರದ ಚಕ್ರಗಳನ್ನು ತಯಾರಿಸಲು, ಐದು ಮರದ ಹಲಗೆಗಳನ್ನು ಜೋಡಿಸುವುದಕ್ಕಾಗಿ ಚಕ್ರಗಳ ಎರಡೂ ಬದಿಗಳಲ್ಲಿ ಎಲ್ಲಮರದ ಹಲಗೆಗಳಿಗೆ ತಾಗುವಂತೆ ಐದು ಮರದ ದಿಂಡುಗಳನ್ನು ಅಡ್ಡವಾಗಿರಿಸಿ ಸುಮಾರು ನಲವತ್ತು ನಟ್ ಬೋಲ್ಟ್‌ಗಳಿಂದ ಬಿಗಿಯಲಾಗಿದೆ. ಇದರಿಂದ ಹಲಗೆಗಳು ಒಂದನ್ನೊಂದು ಬಿಡುವುದಿಲ್ಲ. ಚಕ್ರಗಳಿಂದ ಹೊರಬಂದ ಅಚ್ಚುಗಳ ಭಾಗದಲ್ಲಿಕಬ್ಬಿಣದ ಪ್ಲೇಟ್ ಹಾಗೂ ವೈಸರ್‌ಗಳನ್ನು ಬಳಸಿದ್ದಾರೆ. ಚಕ್ರಗಳ ವ್ಯಾಸದ ಸುತ್ತಲೂ ತಗಡುಗಳ ಪಟ್ಟಿಗಳನ್ನು ಮೊಳೆಗಳಿಂದ ಹೊಡೆದಿರುವುದನ್ನು ಕಾಣಬಹುದು. ಇದರಿಂದ ಮರದ ಚಕ್ರಗಳು ಬಹುದಿನ ಬಾಳಿಕೆ ಬರುತ್ತವೆ. ಇದೊಂದು ಉತ್ತಮ ರೀತಿಯ ಚಕ್ರಗಳ ಸಂರಕ್ಷಣಾ ವಿಧಾನವೆಂದು ಹೇಳಬಹುದು. ಈ ರೀತಿಯ ಚಕ್ರಗಳನ್ನು ಗಂಗಾವತಿ ತಾಲೂಕಿನ ಕನಕರಾಯನ ರಥಕ್ಕೆ ಅಳವಡಿಸಿರುವುದನ್ನು ಕಾಣಬಹುದು.

ಧಾರವಾಡ ಜಿಲ್ಲೆಯ ನವಲಗುಂದ ತಾಲೂಕಿನ ನಾಲವಡಿಯ ಬಸವೇಶ್ವರ ದೇವಸ್ಥಾನದ ರಥ, ಧಾರವಾಡದ ಆಂಜನೇಯಸ್ವಾಮಿ ರಥ, ಬೆಳಗಾಂವ ಜಿಲ್ಲೆಯ ಬೈಲಹೊಂಗಲ ತಾಲೂಕಿನ ಮುರಕಿಬಾವಿಯ ಸಿದ್ಧಾರೂಡ ಮಠದ ರಥ, ಇದೇ ಜಿಲ್ಲೆಯ ಗೋಕಾಕದ ವೆಂಕಟೇಶ್ವರ ದೇವಸ್ಥಾನದ ರಥಗಳ ಚಕ್ರಗಳು ಮಧ್ಯದಲ್ಲಿ ಉಬ್ಬಾಗಿದ್ದು, ವ್ಯಾಸದ ಅಂಚಿಗೆ ಹೋದಂತೆ ಚಪ್ಪಟೆಯಾಕಾರವನ್ನು ಹೋಲುತ್ತವೆ. ಈ ಎಲ್ಲ ರಥಗಳ ಚಕ್ರಗಳು ಒಂದೇ ತೆರನಾದ ಆಕಾರ ಎತ್ತರಗಳನ್ನು ಹೊಂದಿದ್ದು, ಚಕ್ರಗಳ ವಾಸ್ಯದ ಸುತ್ತಲೂ ಕಬ್ಬಿಣದ ಹಳಿಗಳನ್ನು ಅಳವಡಿಸಲಾಗಿದೆ. ಕಬ್ಬಿಣದ ದಪ್ಪವಾದ ರಾಡ್‌ಗಳನ್ನೇ ರಥಗಳ ಅಚ್ಚುಗಳಾಗಿ ಉಪಯೋಗಿಸಲಾಗಿದೆ. ಚಕ್ರಗಳ ಮಧ್ಯದಲ್ಲಿ ಬರುವ ರಂಧ್ರಗಳ ಒಳಭಾಗದಲ್ಲಿಯೂ ಸಹ ತಗಡುಗಳನ್ನು ಬಳಸಲಾಗಿದೆ. ಇದರಿಂದ ಗಾಲಿಗಳಿಗೆ ಸವಕಳಿ ಬರುವುದು ಕಡಿಮೆಯಾಗುತ್ತದೆ.

ಬಿಜಾಪುರ ಜಿಲ್ಲೆ ಸಿಂದಗಿ ತಾಲೂಕಿನ ಗೊಲಗೇರಿಯ ಗೊಲ್ಲಾಳೇಶ್ವರ ದೇವಸ್ಥಾನದ ರಥ, ಹಂಪೆಯ ವಿರೂಪಾಕ್ಷ ದೇವಾಲಯದ ರಥ, ಹಾವೇರಿ ಜಿಲ್ಲೆಯ ರಟಹಳ್ಳಿ ರಥ, ಹಾನಗಲ್ಲದ ತಾರಕೇಶ್ವರ ದೇವಸ್ಥಾನದ ರಥ, ಗದಗ ಜಿಲ್ಲೆಯ ಶಿರಹಟ್ಟಿ ತಾಲೂಕಿನ ಲಕ್ಷ್ಮೇಶ್ವರದ ಸೋಮೇಶ್ವರ ದೇವಸ್ಥಾನದ ರಥ, ಕುಕ್ಕೆ ಸುಬ್ರಹ್ಮಣ್ಯಂದ ಸುಬ್ರಹ್ಮಣ್ಯಸ್ವಾಮಿ ದೇವಾಲಯದ ರಥಗಳು, ಬನವಾಸಿಯ ಮಧುಕೇಶ್ವರ ದೇವಸ್ಥಾನದ ರಥಗಳು, ನಂಜನಗೂಡಿನ ನಂಜುಂಡಸ್ವಾಮಿ ದೇವಾಲಯದ ರಥಗಳು

ಕೊಲ್ಲೂರು ಮೂಕಾಂಬಿಕಾ ದೇವಸ್ಥಾನದ ರಥ, ಕೊಪ್ಪಳದ ಗವಿಸಿದ್ಧೇಶ್ವರ ದೇವಸ್ಥಾನದ ರಥ, ಈ ಎಲ್ಲ ರಥಗಳಲ್ಲಿ ಹೈಡ್ರಾಲಿಕ್ ಬ್ರೆಕ್ ಮತ್ತು ಬಾಲ್‌ಬೇರಿಂಗನ್ನು ಅಳವಡಿಸಿದ್ದಾರೆ. ಇವುಗಳಲ್ಲಿ ಕೆಲವು ರಥಗಳಿಗೆ ಮೇಟರ್ ಸ್ಟೇರಿಂಗನ್ನು ಬಳಸಿದ್ದಾರೆ. ಇದರಿಂದ ರಥದ ಚಲಿಸುವ ದಿಕ್ಕನ್ನು ಬೇಗನೇ ಬದಲಾಯಿಸಬಹುದಾಗಿದೆ. ಈ ರೀತಿಯ ವೈಜ್ಞಾನಿಕ ತಂತ್ರಗಳನ್ನು ಅಳವಡಿಸುವುದರಿಂದ ರಥೋತ್ಸವದ ಸಂದರ್ಭದಲ್ಲಿ ಅನಾಹುತಗಳಾಗುವ ಸಂಭವವು ಕಡಿಮೆಯಾಗುತ್ತದೆ ಅಲ್ಲದೆ ರಥಗಳೂ ಸುಸ್ಥಿತಿಯಲ್ಲಿರುತ್ತವೆ.

ಹೀಗೆ ವಿವಿಧ ರೀತಿಯಲ್ಲಿ ಸಂರಕ್ಷಿಸಲ್ಪಟ್ಟ ಅನೇಕ ಭವ್ಯ ಹಾಗೂ ದಿವ್ಯ ಕಾಷ್ಠ ರಥಗಳನ್ನು ಉತ್ತರ ಕರ್ನಾಟಕದ ಹಲವೆಡೆ ಕಾಣಬಹುದು.

II. ಲೋಹ ಮಾಧ್ಯಮದ ರಥಗಳ ರಕ್ಷಣಾ ವಿಧಾನಗಳು :

ಕರ್ನಾಟಕದಲ್ಲಿ ಕಂಡುಬರುವ ಲೋಹದ ರಥಗಳನ್ನು

ಅ. ಕಬ್ಬಿಣದ ರಥಗಳು

ಬ. ಬೆಳ್ಳಿಯ ರಥಗಳು

ಕ. ಚಿನ್ನದ ರಥಗಳು

ಎಂದು ಮೂರು ಮಾಧ್ಯಮಗಳಾಗಿ ವಿಂಗಡಿಸಿಕೊಂಡು, ಅವುಗಳು ಯಾವ ರೀತಿ ರಕ್ಷಣೆಗೊಂಡಿವೆ ಎಂಬುವುದನ್ನು ತಿಳಿಯೋಣ.

೧. ಕಬ್ಬಿಣದ ರಥಗಳು :

ಕಬ್ಬಿಣ ಮಾಧ್ಯಮದ ರಥಗಳನ್ನು ಕರ್ನಾಟಕದ ಗುಲಬುರ್ಗಾ, ಬೀದರ, ರಾಯಚೂರು ಹಾಗೂ ಬೆಳಗಾಂವ ಜಿಲ್ಲೆಗಳಲ್ಲಿ ಕಾಣಬಹುದು.

ಗುಲಬುರ್ಗಾ ಜಿಲ್ಲೆಯ ಚಿತಾಪೂರ ತಾಲೂಕಿನ ಕೋರವಾರದ ಅಣವೀರಭದ್ರೇಶ್ವರ ದೇವಸ್ಥಾನದ ಕಬ್ಬಿಣದ ರಥವು ಪ್ರತ್ಯೇಕವಾದ ನಿವೇಶನವನ್ನು ಹೊಂದಿದೆ. ಸುಮಾರು ನಲವತ್ತೈದು ಅಡಿ ಎತ್ತರವನ್ನು ಹೊಂದಿದ ರಥಕ್ಕೆ ಸುಮಾರು ಅರವತ್ತು ಅಡಿ ಎತ್ತರದ ಮನೆಯನ್ನು ನಿರ್ಮಿಸಿದ್ದಾರೆ. ಮೂರು ಮಗ್ಗುಲಗಳಲ್ಲಿ ಎತ್ತರವಾದ ಗೋಡೆಗಳನ್ನು ನಿರ್ಮಿಸಿ, ಮುಂಬದಿಯಲ್ಲಿ ಸುಮಾರು ಏಳು ಅಡಿಗಳಷ್ಟು ಎತ್ತರವಾದ ಕಬ್ಬಿಣದ ಬಾಗಿಲುಗಳನ್ನು ಹಚ್ಚಿರುವರು. ಮೇಲ್ಛಾವಣಿಯು ಕಾಂಕ್ರೀಟ್‌ದಿಂದ ಕೂಡಿದ್ದು, ಮನೆಯು ರಥಕ್ಕೆ ಉತ್ತಮ ರೀತಿಯ ಸಂರಕ್ಷಣೆಯನ್ನು ಒದಗಿಸಿದೆ. ರಥದ ಮನೆಯ ಮಾಳಿಗೆಯ ಮುಂಭಾಗದ ಎರಡೂ ಬದಿಗಳಲ್ಲಿ ಕುಳಿತಿರುವ ನಂದಿ ಶಿಲ್ಪಗಳನ್ನು ಕಾಣಬಹುದು. ಮುಂಭಾಗದ ಮಧ್ಯ ಭಾಗದಲ್ಲಿ ಒಂದು ಕೇಸರಿ ಬಣ್ಣದ ಧ್ವಜವನ್ನು ಕಾಣಬಹುದು. ರಥಶಿಲ್ಪದ ಸೌಂದರ್ಯಕ್ಕೆ ಮಹತ್ವ ಕೊಟ್ಟಂತೆ ರಥದ ಮನೆಯು ಸುಂದರವಾಗಿ ಕಾಣಲು ಸುಣ್ಣ ಬಣ್ಣಗಳಿಂದ ಅಲಂಕಾರಗೊಳಿಸಿರುವುದು ಕಂಡುಬರುತ್ತದೆ.

ಇದೇ ತೆರನಾದ ರಥದ ಮನೆಯನ್ನು ಇದೇ ಜಿಲ್ಲೆಯ ಶಹಾಬಾದದ ಬಸವೇಶ್ವರ

ದೇವಸ್ಥಾನದ ಎದುರುಗಡೆಗೆ ಕಾಣಬಹುದು. ಈ ಮನೆಯೂ ಸಹ ಸುಮಾರು ಆರವತ್ತು ಅಡಿಗಳಷ್ಟು ಎತ್ತರವಿದ್ದು, ಮುಂಭಾಗದಲ್ಲಿ ಕಬ್ಬಿಣದ ಸಲಾಕೆಗಳಿಂದ ಬಾಗಿಲನ್ನು ನಿರ್ಮಿಸಿರುವರು. ಮಾಳಿಗೆಯ ಮೇಲೆ ಎರಡೂ ಬದಿಗಳಲ್ಲಿ ಕುಳಿತಿರುವ ನಂದಿ ಮೂರ್ತಿಗಳನ್ನು ಕಾಣಬಹುದು. ಅದರಂತೆ ಮಧ್ಯದಲ್ಲಿ ಮಂಟಪವನ್ನು ಹೊಂದಿದ ಶಿವಲಿಂಗದ ಮೂರ್ತಿಯನ್ನು ನಿರ್ಮಿಸಿರುವುರು. ಶಿವಲಿಂಗಕ್ಕೆ ಕಪ್ಪು ಬಣ್ಣವನ್ನು ಲೇಪಿಸಿ, ಉಳಿದೆಲ್ಲ ಮನೆಗೆ ಸುಣ್ಣ ಬಳಿಯಲಾಗಿದೆ.

ಇದೇ ಜಿಲ್ಲೆಯ ಯಾದಗಿರಿ ತಾಲೂಕಿನ ಕಾಳಬೆಳಗುಂದಿಯ ಬನದೇಶ್ವರ ದೇವಸ್ಥಾನದ ಎದುರುಗಡೆಗೆ ರಥಗಳ ಜೋಡುಮನೆಯನ್ನು ಕಾಣಬಹುದು. ಈ ದೇವಸ್ಥಾನಕ್ಕೆ ಒಂದು ಕಾಷ್ಠ ಮಾಧ್ಯಮದ ರಥ ಹಾಗೂ ಒಂದು ಕಬ್ಬಿಣದ ರಥವನ್ನು ದೇಣಿಗೆಯಾಗಿ ನೀಡಿದ ಭಕ್ತರು ರಥಗಳ ಜೋಡುಮನೆಗಳನ್ನು ನಿರ್ಮಿಸಿರುವರು. ಮುಂಭಾಗದಲ್ಲಿ ಬಾಗಿಲುಗಳನ್ನು ಹೊಂದದೇ ಇರುವುದರಿಂದ ದನಕರುಗಳಿಂದ ಹಾಗೂ ಕಿಡಿಗೇಡಿಗಳಿಂದ ರಥಗಳ ಸಂರಕ್ಷಣೆಗೆ ಅಡ್ಡಿಯುಂಟಾಗಬಹುದು.

ಗುಲಬುರ್ಗಾ ಜಿಲ್ಲೆಯ ಶಹಾಪೂರ ತಾಲೂಕಿನ ಮದ್ದರಕಿ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಇದೀಗ ಕಾಂಕ್ರೀಟ್ ಮಾಧ್ಯಮದ ರಥದ ಮನೆಯು ನಿರ್ಮಾಣಗೊಳ್ಳುತ್ತಿದೆ. ಇದೇ ಜಿಲ್ಲೆ ಯಾದಗಿರಿ ತಾಲೂಕಿನ ಅಬ್ಬೆ ತುಮಕೂರಿನ ವೀರಭದ್ರ ದೇವಸ್ಥಾನ ರಥದ ಮನೆಯೂ ಸಹ ಮದ್ದರಕಿಯ ಬಸವೇಶ್ವರ ದೇವಸ್ಥಾನದ ರಥದ ಮನೆಯಂತೆಯೇ ನಿರ್ಮಿತವಾಗಿದೆ. ಇದೇ ಜಿಲ್ಲೆ ಸೇಡಂದ ಕೊತ್ತಲ ಬಸವೇಶ್ವರ ದೇವಸ್ಥಾನದ ಮಗ್ಗುಲಲ್ಲಿ ನಿಂತ ಕಬ್ಬಿಣದ ರಥಕ್ಕೆ ಪ್ರತ್ಯೇಕ ಮನೆ ಇಲ್ಲ. ಆದರೆ ದೇವಸ್ಥಾನದ ಹೊರಗೋಡೆ ಹಾಗೂ ಅದರ ಪಕ್ಕದಲ್ಲಿ ನಿರ್ಮಾಣಗೊಂಡ ಅಂಗಡಿ ಮುಂಗಟ್ಟುಗಳ ಗೋಡೆಗಳ ನಡುವೆ ಇರುವ ಸ್ಥಳಾವಕಾಶವನ್ನು ತನ್ನದಾಗಿಸಿಕೊಂಡಿದೆ. ಅವೆರಡು ಗೋಡೆಗಳನ್ನು ಬಳಸಿಕೊಂಡು ಕಬ್ಬಿಣದ ಬಾಗಿಲುಗಳನ್ನು ಹಚ್ಚಿರುವುದು ಕಂಡುಬರುವುದು. ಇದರಿಂದ ರಥಕ್ಕೆ ಸರಿಯಾದ ರೀತಿಯಲ್ಲಿ ಸಂರಕ್ಷಣೆ ಸಿಗುವುದಿಲ್ಲ. ರಥಕ್ಕೆ ಲೇಪಿಸಿದ ವರ್ಣವೆಲ್ಲವೂ ಈಗಾಗಲೇ ಬಿಸಿಲು ಮತ್ತು ಮಳೆ ನೀರಿನಿಂದ ಸಂಪೂರ್ಣವಾಗಿ ತೊಳೆದು ಹೋಗಿದೆ.

ಬೀದರ ಜಿಲ್ಲೆಯ ಹುಮನಾಬಾದ ವೀರಭದ್ರೇಶ್ವರ ದೇವಸ್ಥಾನದ ರಥವು, ಮೇಲ್ಛಾವಣಿಯನ್ನು ಹೊಂದದ ಮೂರು ಅರ್ಧಗೋಡೆಗಳು ಹಾಗೂ ಮುಂಬದಿಯಲ್ಲಿ, ಸುಂದರವಾದ ನಕ್ಷೆಗಳನ್ನೊಳಗೊಂಡ ಎರಡು ಕಬ್ಬಿಣದ ಬಾಗಿಲುಗಳನ್ನು ಹೊಂದಿದೆ. ಗಟ್ಟಿಮುಟ್ಟಾದ ಗೋಡೆಗಳಿದ್ದರೂ, ಮೇಲ್ಛಾವಣಿಯು ಇರದಿರುವುದರಿಂದ ಬಿಸಿಲು ಹಾಗು ಮಳೆಯ ನೀರಿನ ಹೊಡೆತಕ್ಕೆ ರಥವು ಹಾಳಾಗುವ ಸಂಭವವು ಉಂಟು. ರಥದ ಮನೆಯ ಮುಂಭಾಗದ ಬಾಗಿಲುಗಳಿಗೆ, ವಿವಿಧ ನಕ್ಷೆಗಳಿಗೆ ಬೇರೆ ಬೇರೆ ಬಣ್ಣಗಳನ್ನು ಲೇಪಿಸಿದ್ದಾರೆ.

ಕೊಪ್ಪಳ ಜಿಲ್ಲೆಯ ಕುಷ್ಟಗಿಯ ಬುತ್ತಿಬಸವೇಶ್ವರ ದೇವಸ್ಥಾನದ ಪಕ್ಕದಲ್ಲಿರುವ ತೇರು ಮನೆ ತುಂಬಾ ಸುರಕ್ಷಿತವಾಗಿದೆ. ಎದುರುಗಡೆಗೆ ಕಬ್ಬಿಣದ ಬಾಗಿಲುಗಳನ್ನು ಹೊಂದಿದ್ದು, ಮೇಲ್ಛಾವಣಿಗೆ ತಗಡುಗಳನ್ನು ಅಳವಡಿಸಿದ್ದಾರೆ.

ರಾಯಚೂರು ಜಿಲ್ಲೆಯ ದೇವಸೂಗೂರದ ಸೂಗೂರೇಶ್ವರ ದೇವಸ್ಥಾನದ ಕಬ್ಬಿಣದ ರಥ,

ಬೆಳಗಾಂವ ಜಿಲ್ಲೆಯ ಗೋಕಾಕದ ಬಸವೇಶ್ವರ ದೇವಸ್ಥಾನದ ಕಬ್ಬಿಣದ ರಥಗಳು ಪ್ರತ್ಯೇಕ ಸುರಕ್ಷಿತವಾದ ಮನೆಗಳನ್ನು ಹೊಂದಿವೆ.

ಬಿಜಾಪೂರ ಜಿಲ್ಲೆಯ ಬಸವನ ಬಾಗೇವಾಡಿಯ ನಿಡಗುಂದಿಯ ಬಸವೇಶ್ವರ ದೇವಸ್ಥಾನದ ಕಬ್ಬಿಣ ರಥ, ಆಸಂಗಿಯ ವೀರಭದ್ರೇಶ್ವರ ರಥ, ಮುದ್ದೇಬಿಹಾಳ ತಾಲೂಕಿನ ಕವಡಿಮಟ್ಟಿಯ ಹನುಮಾನ ದೇವಾಲಯದ ರಥ, ಇಂಡಿ ತಾಲೂಕಿನ ಬಸನಾಳದ ಬಸವಣ್ಣ ದೇವಸ್ಥಾನದ ರಥಗಳು ತಗಡಿನ ಮೇಲ್ಛಾವಣಿಯನ್ನು ಹೊಂದಿದ ಪ್ರತ್ಯೇಕ ರಥದ ಮನೆಗಳನ್ನು ಹೊಂದಿವೆ.

ಗುಲಬುರ್ಗಾ, ಬೀದರ ಜಿಲ್ಲೆಗಳಲ್ಲಿ ಕಬ್ಬಿಣದ ರಥಗಳ ಸಂರಕ್ಷಣೆಗೆ ಪ್ರತ್ಯೇಕ ತೇರು ಮನೆಗಳಿರುವುದು ಅಷ್ಟಾಗಿ ಕಂಡುಬರುವುದಿಲ್ಲ. ಇವೆರಡೂ ಜಿಲ್ಲೆಗಳಲ್ಲಿ ಕಬ್ಬಿಣದ ರಥಗಳು ಬಿಸಿಲು, ಮಳೆಗಳಿಗೆ ಮೈಯೊಡ್ಡಿ ವರ್ಷವಿಡೀ ನಿಂತಿರುವುದನ್ನು ಗಮನಿಸಬಹುದು.

ಗುಲಬುರ್ಗಾ ಜಿಲ್ಲೆ ಆಳಂದ ತಾಲೂಕಿನ ಮಾದನಹಿಪ್ಪರಗದ ಶಿವಲಿಂಗೇಶ್ವರ ರಥ, ಶಹಾಪೂರ ತಾಲೂಕಿನ ರಸ್ತಾಪುರದ ಶರಭಲಿಂಗೇಶ್ವರ ದೇವಸ್ಥಾನದ ರಥ, ಆಳಂದ ತಾಲೂಕಿನ ಜಮಗಾದ ರಥ, ಚಿತಾಪೂರ ತಾಲೂಕಿನ ಕೂಡ್ಲಿ ಬನಶಂಕರಿಯ ದೇವಸ್ಥಾನದ ರಥ, ಬೀದರ ಜಿಲ್ಲೆ ಕರಕನಳ್ಳಿಯ ಬಕ್ಕಪ್ರಭು ದೇವಸ್ಥಾನದ ರಥ-ಈ ಎಲ್ಲ ರಥಗಳು ಯಾವುದೇ ರೀತಿಯ ಆಸರೆಯನ್ನು ಹೊಂದದೇ ಬಿಸಿಲಿಗೆ ಮೈಯೊಡ್ಡಿ ನಿಂತಿರುವುದರಿಂದ, ರಥಕ್ಕೆ ಲೇಪಿಸಿದ ಬಣ್ಣ ನಶಿಸಿ ಹೋಗಿರುವುದನ್ನು ಗಮನಿಸಬಹುದು. ಅಲ್ಲದೆ ಅಲ್ಲಲ್ಲಿ ತುಕ್ಕು ಹಿಡಿದು ಹಾಳಾಗುವ ಸ್ಥಿತಿಯಲ್ಲಿರುವುದನ್ನು ಕಾಣಬಹುದು.

ಗೋಕಾಕ ತಾಲೂಕಿನ ಅಕ್ಕತಂಗಿಯರ ಹಳ್ಳದ ದುರ್ಗಾದೇವಿ ದೇವಸ್ಥಾನ ಹಾಗೂ ಅಂಕಲಗಿಯ ದೇವಸ್ಥಾನಗಳಲ್ಲಿರುವ ರಥಗಳು ಒಳ್ಳೆಯ ರೀತಿಯ ರಥದ ಮನೆಗಳನ್ನು ಹೊಂದಿದ್ದು ಇದೇ ತಾಲೂಕಿನ ಕುರಣಿ ಹಾಗೂ ಗುಡಗೇರಿಯ ರಥಗಳು ಒಂದು ಗಿಡದ ಆಸರೆಯನ್ನು ಹೊಂದಿರುವುದನ್ನು ಕಾಣಬಹುದು.

ಗುಲಬುರ್ಗಾ ಜಿಲ್ಲೆಯ ಆಳಂದ ತಾಲೂಕಿನ ಜಿಡಗಾ ಮಠದ ರಥ, ಚಿಂಚೋಳಿ ತಾಲೂಕಿನ ಸುಲೇಪೇಟದ ವೀರಭದ್ರ ದೇವಸ್ಥಾನದ ರಥ, ಜೇವರಗಿ ತಾಲೂಕಿನ ಸೌಳಹಳ್ಳಿಯ ಶರಣಬಸವೇಶ್ವರ ರಥ, ಚಿತಾಪೂರ ತಾಲೂಕಿನ ಕಾಳಗಿಯ ನೀಲಕಂಠೇಶ್ವರ ದೇವಸ್ಥಾನದ ರಥ, ಯಾದಗಿರಿ ತಾಲೂಕಿನ ನಾಗಲಾಪೂರದ ಮೈಲಾರಲಿಂಗೇಶ್ವರ ದೇವಸ್ಥಾನದ ರಥ, ಶಹಾಪೂರ ತಾಲೂಕು ಡಗ್ಗಿ ಸಂಗಮೇಶ್ವರ ದೇವಸ್ಥಾನದ ರಥ ಹಾಗೂ ಬೀದರ್ ಜಿಲ್ಲೆ ಹುಮನಾಬಾದ ತಾಲೂಕಿನ ಚಾಂಗಳೇರದ ವೀರಭದ್ರ ದೇವಸ್ಥಾನದ ರಥಗಳು ಸುಂದರವಾದ ವರ್ಣಗಾರಿಕೆಯಿಂದ ಗಮನ ಸೆಳೆಯುವಂತಹ ವಿನ್ಯಾಸಗಳನ್ನು ಹೊಂದಿದ್ದರೂ ಅವುಗಳ ರಕ್ಷಣೆಗೆ ಯಾವುದೇ ರೀತಿಯ ಆಸರೆಯು ಕಂಡುಬರುವುದಿಲ್ಲ.

ಇದೇ ಜಿಲ್ಲೆಯ ಅಫಜಲಪೂರ ತಾಲೂಕಿನ ದೇಸಾಯಿ ಕಲ್ಲೂರದ ಬೃಹತ್ ಪ್ರಮಾಣದ ಕಬ್ಬಿಣದ ರಥವು ವಿನ್ಯಾಸ, ಆಕಾರ, ಪ್ರಕಾರಗಳಲ್ಲಿ ತುಂಬಾ ವಿಶೇಷವಾದಂತಹದು ಮತ್ತು ಅಷ್ಟೇ ಹಳೆಯದಾದ ರಥವು ಹೌದು. ಸುಮಾರು ನಾಲ್ಕುನೂರು ವರ್ಷಗಳಷ್ಟು ಹಳೆಯದಾದ ಈ ರಥದ

ವಿನ್ಯಾಸವು ಗುಲಬುರ್ಗಾ ಜಿಲ್ಲೆಯ ಎಲ್ಲ ಕಬ್ಬಿಣ ರಥಗಳ ವಿನ್ಯಾಸಗಳನ್ನು ಮೀರಿಸುವಂತಹದು. ಅತ್ಯಂತ ಸುಂದರ ಹಾಗೂ ಭದ್ರವಾಗಿ ನಿರ್ಮಾಣಗೊಂಡ ಈ ರಥವು ಸುಮಾರು ಎಪ್ಪತ್ತು ವರ್ಷಗಳಿಂದ ಒಂದೇ ಕಡೆಗೆ ನಿಂತಿದ್ದು, ರಥದ ಅರ್ಧದಷ್ಟು ಗಾಲಿಗಳು ಮಣ್ಣಿನಲ್ಲಿ ಹೂತುಹೋಗಿದ್ದವು. ಈಗ ಎರಡು ವರ್ಷಗಳಿಂದೀಚೆಗೆ ಆ ರಥವನ್ನು ಗ್ರಾಮಸ್ಥರು ಗಮನಕ್ಕೆ ತೆಗೆದುಕೊಂಡು ಸರಕಾರದಿಂದ ಮೂರುಲಕ್ಷ ರೂಪಾಯಿಗಳನ್ನು ಸಹಾಯಧನವನ್ನಾಗಿ ಪಡೆದು ರಥದ ಸಂರಕ್ಷಣೆಯನ್ನು ಮಾಡಿದ್ದಾರೆ. ಬಹು ವರ್ಷಗಳಿಂದ ಬಿಸಿಲು ಮಳೆಗೆ ಸಿಲುಕಿ ರಥದ ವರ್ಣಗಾರಿಕೆಯೆಲ್ಲ ಕಾಣದಂತೆ ಮಾಯವಾಗಿದೆ. ರಥವು ಪಂಚಲೋಹದಿಂದ ಮಿಶ್ರಿತವಾಗಿ ನಿರ್ಮಾಣಗೊಂಡಿದ್ದರಿಂದ ಸ್ವಲ್ಪ ಕಡಿಮೆ ಪ್ರಮಾಣದಲ್ಲಿ ತುಕ್ಕುಹಿಡಿದಿದೆ. ಇದೇ ವರ್ಷ ಈ ರಥಕ್ಕೆ ವರ್ಣಲೇಪನಮಾಡಿ ರಥವನ್ನು ಉತ್ಸವದ ಸಂದರ್ಭದಲ್ಲಿ ಬಳಸುವ ತಯಾರಿಯು ನಡೆದಿದೆ. ಆದರೆ ಇಂಥ ವಿಶೇಷವಾದ ರಥಕ್ಕೆ ಒಂದು ಪ್ರತ್ಯೇಕ ನಿವೇಶನ ಇಲ್ಲದಿರುವದನ್ನು ಗಮನಿಸಬಹುದು.

ಗುಲಬುರ್ಗಾ ಜಿಲ್ಲೆಯ ಅನೇಕ ರಥಗಳು ದೊಡ್ಡ ದೊಡ್ಡ ದೇವಸ್ಥಾನಗಳ ಎದುರು ಬಿಸಿಲು, ಮಳೆ, ಗಾಳಿಗಳಿಗೆ ಮೈಯೊಡ್ಡಿ ನಿಂತಿವೆ. ರಥಗಳಿಗೆ ಮಳೆಗಾಲದಲ್ಲಿ ನೀರು ತಗುಲುವುದರಿಂದ ತುಕ್ಕುಹಿಡಿದು ಹಾಳಾಗಬಾರದೆಂದು ವಿವಿಧ ಬಣ್ಣಗಳನ್ನು ಲೇಪಿಸಿರುತ್ತೇವೆಂದು ಗ್ರಾಮಸ್ಥರು ಹೇಳುತ್ತಾರೆ. ಆದರೆ ಮಳೆಗಾಲ ಹೋಗಿ, ಬೇಸಿಗೆ ಕಾಲ ಬಂದಾಗ ಬಿಸಿಲಿನ ಧಗೆಯಿಂದ ಬಣ್ಣವೆಲ್ಲವೂ ಹಕಳುಗಟ್ಟಿ, ಕಿತ್ತು ಹೋಗಿರುವುದನ್ನು ಅವರು ಗಮನಿಸಿಲ್ಲ. ಮಳೆ ಬಿಸಿಲುಗಳಿಂದ ಹಾಳಾದ ರಥದ ಭಾಗಗಳು ರಥೋತ್ಸವದ ಸಂದರ್ಭದಲ್ಲಿ ಸವಕಳಿಗೊಂಡು ಕೀಳುವ ಮತ್ತು ಮುರಿಯುವ ಸಾಧ್ಯತೆಗಳು ಉಂಟು. ಇದರಿಂದ ಅನಾಹುತಗಳೂ ಸಂಭವಿಸಬಹುದು.

ಈ ಕಬ್ಬಿಣದ ರಥಗಳು ಮಳೆಗಾಲದಲ್ಲಿ ತುಕ್ಕುಹಿಡಿಯಬಾರದೆಂದು ವಾರ್ನಿಸ್ ಬಣ್ಣಗಳನ್ನು ಲೇಪಿಸುವುದು ಒಂದು ಉತ್ತಮ ಸಂರಕ್ಷಣಾ ಪದ್ಧತಿಯಾದರೂ, ಬೇಸಿಗೆಯಲ್ಲಿ ಅವುಗಳ ಸುಂದರ ವರ್ಣಗಾರಿಕೆಯನ್ನು ರಕ್ಷಿಸಲು ಒಂದು ಪ್ರತ್ಯೇಕವಾದ ರಥದ ಮನೆ ಕಟ್ಟುವುದು ಒಳ್ಳೆಯದು. ಮನೆ ಕಟ್ಟಲು ಆಗದಿದ್ದಲ್ಲಿ ಪ್ಲಾಸ್ಟಿಕ್, ಬಟ್ಟೆ, ತೆಂಗಿನಗರಿ, ರವದಿ ಹೀಗೆ ಆಯಾ ಪ್ರದೇಶದಲ್ಲಿ ಲಭ್ಯವಾಗುವಂತಹ ಸಾಮಗ್ರಿಗಳಿಂದ ಹೊದಿಕೆ ತಯಾರಿಸಿ, ರಥಗಳು ಸಂಪೂರ್ಣವಾಗಿ ಮುಚ್ಚುವಂತೆ ಹೊದಿಸಬಹುದು. ಹೀಗೆ ಮಾಡುವುದರಿಂದ ಕಬ್ಬಿಣದ ರಥಗಳು ಪ್ರಕೃತಿಯ ವಿಕೋಪಕ್ಕೆ ತುತ್ತಾಗದೆ, ಬಹಳ ದಿನಗಳವರೆಗೆ ಬಾಳಿಕೆ ಬರುತ್ತವೆ.

ಬ. ಬೆಳ್ಳಿಯ ರಥಗಳು :

ಕರ್ನಾಟಕದಲ್ಲಿ ಬೆಳ್ಳಿಯ ರಥಗಳು ಬೆರಳೆಣಿಕೆಯಷ್ಟು ಮಾತ್ರ ಕಾಣಸಿಗುತ್ತವೆ. ಬೆಳ್ಳಿಯ ರಥಗಳು ಸಂಪೂರ್ಣವಾಗಿ ಸ್ಥಿರರಥಗಳಾಗಿದ್ದು, ಹೆಸರಾಂತ ದೇವಾಲಯಗಳಲ್ಲಿ ನಿರ್ಮಾಣಗೊಂಡಿವೆ.

ಧರ್ಮಸ್ಥಳದ ಶ್ರೀ ಮಂಜುನಾಥ ದೇವಸ್ಥಾನದ ಅಪೂರ್ವವಾದ ಬೆಳ್ಳಿಯ ರಥವು ತನ್ನ ಕಲಾ ಪ್ರೌಢಿಮೆಯಿಂದ ಕಲಾಸಕ್ತರ ಕಣ್ಮನಗಳನ್ನು ಸೆಳೆಯುವಂತಹದು. ದೇವಸ್ಥಾನದ ಎಡಬದಿಯಲ್ಲಿ ಈ ರಥಕ್ಕಾಗಿ ಪ್ರತ್ಯೇಕ ಮನೆ ಇರುವುದನ್ನು ಗಮನಿಸಬಹುದು. ಸುಮಾರು ಮೂವತ್ತೈದು ಅಡಿ ಎತ್ತರದ

ಮನೆ ನಿರ್ಮಿಸಿ ಎತ್ತರವಾದ, ಸುಂದರ ನಕ್ಷಾಕೃತಿಗಳನ್ನು ಹೊಂದಿದ ಕಬ್ಬಿಣದ ಎರಡು ಬಾಗಿಲುಗಳನ್ನು ಹೊಂದಿಸಲಾಗಿದೆ. ಕಬ್ಬಿಣದ ಬಾಗಿಲುಗಳ ಒಳಭಾಗದಲ್ಲಿ ದಪ್ಪವಾದ ಕಬ್ಬಿಣದ ತಂತಿಯ ಕಟಂಜರವನ್ನು ಅಳವಡಿಸಲಾಗಿದೆ. ರಥವು ದೂರದಿಂದ ಎಲ್ಲರಿಗೂ ಕಾಣುತ್ತದೆ. ಆದರೆ ರಥಕ್ಕೆ ಯಾವುದೇ ರೀತಿಯ ಧಕ್ಕೆಯುಂಟು ಮಾಡಲು ಅವಕಾಶವೇ ಇಲ್ಲ. ಹೊರಮಗ್ಗುಲಲ್ಲಿ ಬಾಗಿಲುಗಳಿಗೆ ಎರಡು ದೊಡ್ಡ ಬೀಗಗಳನ್ನು ಹಾಕಿರುವುದು ಕಂಡುಬರುತ್ತದೆ. ಯಾವುದೇ ಪಶುಗಳಿಂದ, ಕಿಡಿಗೇಡಿಗಳಿಂದ ಧಕ್ಕೆಯುಂಟಾಗದಂತೆ ರಥಕ್ಕೆ ಸಂರಕ್ಷಣೆ ಒದಗಿಸಿರುವುದನ್ನು ಇಲ್ಲಿ ಕಾಣಬಹುದು.

ಬಳ್ಳಾರಿ ಜಿಲ್ಲೆಯ ಕೂಡ್ಲಗಿ ತಾಲೂಕು ಕೊಟ್ಟೂರಿನ ಕೊಟ್ಟೂರೇಶ್ವರ ದೇವಸ್ಥಾನದ ಹದಿನೆಂಟು ಅಡಿ ಎತ್ತರದ ಬೆಳ್ಳಿಯ ರಥವು ಪ್ರತ್ಯೇಕ ನಿವೇಶನದಲ್ಲಿ ನಿಂತಿರುವುದನ್ನು ಗಮನಿಸಬಹುದು. ಈಗ ಒಂದು ವರ್ಷದ ಹಿಂದೆ ತಯಾರಾದ ಈ ರಥಕ್ಕೆ ಕಾಂಕ್ರೀಟ್ ಮಾಧ್ಯಮದ ಮೇಲ್ಛಾವಣಿಯನ್ನು ಹೊಂದಿದ ಮನೆಗೆ ಕಬ್ಬಿಣದ ಎರಡು ಬಾಗಿಲುಗಳನ್ನು ಅಳವಡಿಸಿ, ತಂತಿಯ ಕಟಂಜರವನ್ನು ಹೊಡೆದಿದ್ದಾರೆ. ಇದು ಇನ್ನೂ ನಿರ್ಮಾಣದ ಹಂತದಲ್ಲಿರುವುದನ್ನು ಕಾಣಬಹುದು.

ಯಡೆಯೂರು ಸಿದ್ಧಲಿಂಗೇಶ್ವರ ದೇವಸ್ಥಾನದಲ್ಲಿರುವ ಬೆಳ್ಳಿ ರಥವು ದೇವಸ್ಥಾನದ ಒಳಾಂಗಣದಲ್ಲಿ ಪ್ರದಕ್ಷಣೆ ಹಾಕುವುದರಿಂದ, ದೇವಸ್ಥಾನದ ಒಳಾಂಗಣದಲ್ಲೇ ರಥದ ಮನೆಯನ್ನು ನಿರ್ಮಿಸಿರುವರು. ದಪ್ಪ ತಂತಿಯಿಂದ ತಯಾರಿಸಲ್ಪಟ್ಟ ಎರಡು ಕಟಂಜರಗಳಿಂದ ನಿರ್ಮಾಣಗೊಂಡ ಮನೆಯು ರಥಕ್ಕೆ ಸಂಪೂರ್ಣ ಸಂರಕ್ಷಣೆಯನ್ನು ಒದಗಿಸಿದೆ. ಈ ರಥದ ಛಾಯಾಚಿತ್ರಗಳನ್ನು ತೆಗೆಯಲು ಪ್ರವಾಸಿಗರಿಗೆ ಅವಕಾಶವಿಲ್ಲ.

ಬೆಳಗಾಂವ ಜಿಲ್ಲೆ ರಾಮದುರ್ಗ ತಾಲೂಕಿನ ಗೊಡಚಿ ವೀರಭದ್ರ ದೇವಸ್ಥಾನದಲ್ಲಿ ಸುಮಾರು ನಾಲ್ಕು ಅಡಿಯ ಚಿಕ್ಕ ಪ್ರಮಾಣದ ಬೆಳ್ಳಿ ರಥವನ್ನು ಕಾಣಬಹುದು. ದೇವಸ್ಥಾನದ ಪ್ರದಕ್ಷಿಣಾಪಥದಲ್ಲಿ ಸಂಚರಿಸುವ ಈ ರಥಕ್ಕೆ ದೇವಸ್ಥಾನದಲ್ಲೆ ಬಲಭಾಗದಲ್ಲಿ ಒಂದು ಚಿಕ್ಕ ಮನೆಯನ್ನು ನಿರ್ಮಿಸಿ ಎಲ್ಲರಿಗೂ ಕಾಣುವ ಉದ್ದೇಶದಿಂದ ಗಾಜಿನ ಬಾಗಿಲುಗಳನ್ನು ಹೊಂದಿಸಿದ್ದಾರೆ. ಬಾಗಿಲುಗಳ ಹೊರಮಗ್ಗುಲದ ಕಟ್ಟಿಗೆಯ ಚೌಕಟ್ಟುಗಳಿಗೆ ತಂತಿಯ ಕಟಂಜರದ ಮತ್ತೊಂದು ಬಾಗಿಲನ್ನು ಹೊಂದಿಸಿರುವುದನ್ನು ಕಾಣಬಹುದು.

ಶೃಂಗೇರಿ ಶಾರದಾಂಬೆ ದೇವಸ್ಥಾನದಲ್ಲಿರುವ ಬೆಳ್ಳಿ ರಥವು ದೇವಸ್ಥಾನದ ಸಭಾಂಗಣದಲ್ಲಿ ಸುರಕ್ಷಿತವಾದ ಮನೆಯಲ್ಲಿ ನಿಂತಿರುವುದನ್ನು ಕಾಣಬಹುದು. ಕಟ್ಟಿಗೆಯ ಚೌಕಟ್ಟುಗಳನ್ನು ಹೊಂದಿದ ಸಂಪೂರ್ಣ ಗಾಜಿನ ಮನೆಯು ಪ್ರವಾಸಿಗರಿಗೆ ಬೆಳ್ಳಿಯ ರಥವನ್ನು ವೀಕ್ಷಿಸಲು ಅನುವು ಮಾಡಿಕೊಟ್ಟಿದೆ. ಗಾಜಿನ ಮನೆಯ ಸುತ್ತಲೂ ತಂತಿಯ ಕಟಂಜರಗಳನ್ನು ಅಳವಡಿಸಿರುವುದರಿಂದ ರಥಕ್ಕೆ ಯಾವುದೇ ರೀತಿಯಿಂದ ಧಕ್ಕೆಯಾಗದೆ ಸಂರಕ್ಷಣೆಯನ್ನು ನೀಡುತ್ತದೆ.

ಉಡುಪಿಯ ಶ್ರೀಕೃಷ್ಣನ ದೇವಸ್ಥಾನದ ರಜತ ರಥವು ಪ್ರತ್ಯೇಕವಾದ ಮನೆಯನ್ನು ಹೊಂದಿದೆ. ಈ ರಥವನ್ನು ಸಹ ಕಟಂಜರಗಳಿಂದಾವೃತವಾದ ಮನೆಯಲ್ಲಿ ಸುರಕ್ಷಿತವಾಗಿ ನಿಲ್ಲಿಸಿರುವುದನ್ನು ಕಾಣಬಹುದು.

ಎಲ್ಲ ಬೆಳ್ಳಿಯ ಮಾಧ್ಯಮದ ರಥಗಳಿಗೆ ವರ್ಷಕ್ಕೊಂದು ಸಾರಿ ಪಾಲಿಶ್ ಮಾಡುವುದರಿಂದ

ಬೆಳ್ಳಿಯ ಹೊಳಪನ್ನು ಉಳಿಸಿಕೊಳ್ಳಲು ಸಾಧ್ಯವಾಗಿದೆ. ರಥಗಳನ್ನು ನೋಡಿದಾಗ ಇದೇ ವರ್ಷವೇ ಅವುಗಳು ನಿರ್ಮಾಣಗೊಂಡಿವೆಯೇನೋ ಎಂಬ ಭಾವನೆ ಮನದಲ್ಲಿ ಮೂಡುತ್ತದೆ.

ಕ. ಚಿನ್ನದ ರಥಗಳು:

ಕರ್ನಾಟಕದಲ್ಲಿ ಚಿನ್ನದ ರಥಗಳ ಸಂಖ್ಯೆ ಬೆಳ್ಳಿಯ ರಥಗಳಿಗಿಂತ ಕಡಿಮೆ ಪ್ರಮಾಣದಲ್ಲಿರುವುದನ್ನು ಗಮನಿಸಬಹುದು. ಶೃಂಗೇರಿಯ ಶಾರದಾಂಬೆ ದೇವಸ್ಥಾನದ ರಥ ಹಾಗೂ ಉಡುಪಿಯ ಶ್ರೀಕೃಷ್ಣದೇವಾಲಯದ ರಥಗಳೆರಡನ್ನು ಬಿಟ್ಟರೆ ಗಮನ ಸೆಳೆಯುವಂತಹ, ಕಣ್ಮನ ತಣಿಸುವ, ದೊಡ್ಡ ಪ್ರಮಾಣದ ಚಿನ್ನದ ರಥಗಳು ಕರ್ನಾಟಕದ ಯಾವ ಭಾಗದಲ್ಲಿಯೂ ಕಾಣಸಿಗುವುದಿಲ್ಲ.

ಶೃಂಗೇರಿಯ ಶ್ರೀ ಶಾರದಾಂಬೆ ದೇವಸ್ಥಾನದ ಸಭಾಂಗಣದಲ್ಲಿ ಪ್ರವಾಸಿಗರ ಗಮನ ಸೆಳೆಯುತ್ತ ನಿಂತ ಚಿನ್ನದ ರಥವು ಪ್ರತ್ಯೇಕ ಮನೆಯನ್ನು ಹೊಂದಿದೆ. ಇದೇ ಸಭಾಂಗಣದಲ್ಲಿ ಬೆಳ್ಳಿ ರಥದ ಎದುರುಗಡೆಗೆ ಚಿನ್ನದ ರಥದ ಮನೆಯನ್ನು ನಿರ್ಮಿಸಿರುವರು. ಕಟ್ಟಿಗೆಯ ಚೌಕಟ್ಟುಗಳನ್ನು ಹೊಂದಿದ ಗಾಜಿನ ಮನೆಯು ಬೆಳ್ಳಿ ರಥದ ಮನೆಯ ತದ್ರೂಪವಾಗಿದೆ. ಮನೆಯ ಸುತ್ತಲೂ ತಂತಿಯ ಕಟಂಜರವನ್ನು ಬಡಿದು ಬೀಗ ಹಾಕಿರುವುದು ಕಂಡುಬರುತ್ತದೆ. ದೇವಸ್ಥಾನದ ಒಳಗಡೆಗೆ ಮನೆ ನಿರ್ಮಿಸಿರುವುದರಿಂದ ರಥವು ಯಾವುದೇ ಧಕ್ಕೆಗೆ ಒಳಗಾಗದು.

ಉಡುಪಿಯ ಶ್ರೀಕೃಷ್ಣನ ದೇವಸ್ಥಾನದ ಚಿನ್ನದ ರಥವು ಕರ್ನಾಟಕದ ಚಿನ್ನದ ರಥಗಳಲ್ಲಿ ಬಹಳ ಪ್ರಸಿದ್ಧವಾದುದು. ಈ ರಥವು ಶೃಂಗೇರಿಯ ರಥಕ್ಕಿಂತ ದೊಡ್ಡ ಪ್ರಮಾಣದಲ್ಲಿದೆ. ದೇವಸ್ಥಾನದ ಹೊರಭಾಗದಲ್ಲಿ ಇದಕ್ಕೊಂದು ಪ್ರತ್ಯೇಕ ನಿವೇಶನವಿದೆ. ದೇವಸ್ಥಾನದ ಹೊರಭಾಗದಲ್ಲಿ ರಥದ ಮನೆ ನಿರ್ಮಾಣವಾಗಿರುವುದರಿಂದ, ಪ್ರವಾಸಿಗರಿಗೆ ಕಾಣುವ ಉದ್ದೇಶದಿಂದ ಒಂದು ಕಿಟಕಿಯನ್ನು ಹೊರತುಪಡಿಸಿ ರಥದ ಉಳಿದ ಭಾಗವೆಲ್ಲವೂ, ಮುಚ್ಚುವಂತೆ ರಥದ ಮನೆಯು ನಿರ್ಮಾಣಗೊಂಡಿದೆ. ಮನೆಯು ದಪ್ಪ ತಂತಿಯ ಕಟಂಜರದಿಂದ ಆವೃತವಾಗಿದೆ. ಮನೆ ಮುಂದಿರುವ ಕಿಟಕಿಯನ್ನು ದಪ್ಪ ಕಬ್ಬಿಣದ ಸಲಾಕೆಗಳಿಂದ ತಯಾರಿಸಿದ್ದಾರೆ. ಕೇವಲ ಉತ್ಸವದ ಸಂದರ್ಭದಲ್ಲಿ ಮಾತ್ರ ಪೂರ್ಣ ರಥವನ್ನು ಎಲ್ಲರೂ ನೋಡಲು ಸಾಧ್ಯ. ವಿಶೇಷವೆಂದರೆ ರಥವು ಉತ್ಸವದ ಸಂದರ್ಭದಲ್ಲಿ ಸರಿಯಾಗಿ ತಿರುಗಿಬರಲು ಬಾಲ್‌ಬೇರಿಂಗ್ ಹಾಗೂ ಸ್ಟೇರಿಂಗನ್ನು ಅಳವಡಿಸಿರುವುದನ್ನು ಗಮನಿಸಬಹುದು.

ಉತ್ಸವದ ಸಂದರ್ಭದಲ್ಲಿ ದೇವಸ್ಥಾನದ ಕಮೀಟಿಯವರು ರಥದ ಸಂರಕ್ಷಣೆಗಾಗಿ ಒಂದು ರಕ್ಷಣಾತಂಡವನ್ನು ನೇಮಿಸಿರುತ್ತಾರೆ. ಇದಲ್ಲದೆ ಪೊಲೀಸ್ ಇಲಾಖೆಯ ಸಹಾಯವನ್ನು ಪಡೆಯಬೇಕಾಗುತ್ತದೆ. ಉತ್ಸವದ ಸಂದರ್ಭದಲ್ಲಿ ರಥದ ರಕ್ಷಣೆ ಒಂದು ಜವಾಬ್ದಾರಿಯುತ ಕೆಲಸವೇ ಆಗಿರುತ್ತದೆ.

ಹೀಗೆ ಬೆಳ್ಳಿ ಹಾಗೂ ಚಿನ್ನದ ರಥಗಳ ಸಂರಕ್ಷಣಾ ಪದ್ಧತಿಗಳನ್ನು ಕಾಣಬಹುದು.

III. ಶಿಲಾ ಮಾಧ್ಯಮದ ರಥ :

ಕರ್ನಾಟಕದಲ್ಲಿ ಶಿಲಾ ಮಾಧ್ಯಮದ ರಥವೆಂದಾಗ ಎಲ್ಲರ ನೆನಪಿಗೆ ಬರುವುದೇ ಹಂಪಿಯ ವಿಜಯವಿಠಲ ದೇವಸ್ಥಾನದ ಎದುರುಗಡೆ ನಿಂತಿರುವ ಸುಂದರವಾದ, ಕಲಾತ್ಮಕವಾದ, ಕಣ್ಮನಸೆಳೆಯುವ ಕಲ್ಲಿನ ರಥ, ಈ ರಥವು ವಿಜಯನಗರದ ಅರಸರ ಕಾಲದಲ್ಲಿ ನಿರ್ಮಾಣಗೊಂಡದ್ದು . ಈ ರಥವು ವಿಜಯವಿಠಲ ದೇವಸ್ಥಾನದ ವಾಸ್ತು ಕಲೆಯ ಒಂದು ಅಂಗವಾಗಿ ನಿಂತಿದೆ. ರಥದ ಗೋಪುರಭಾಗವು ಅಳಿದು ಹೋಗಿ, ಈಗ ಮಂಟಪದ ಭಾಗದವರೆಗೂ ತನ್ನ ಚೆಲುವನ್ನು ಹೊರಸೂಸುತ್ತಿದೆ. ಅನೇಕ ಪ್ರವಾಸಿಗರ ಕಣ್ಮನತಣಿಸುವ ರಥವು ಮಂದಿರದ ಎದುರುಗಡೆಗೆ ಒಳಭಾಗದಲ್ಲಿ ನಿರ್ಮಾಣಗೊಂಡಿದೆ. ಈ ಮಂದಿರದ ಸಂರಕ್ಷಣೆಯನ್ನು ಆರ್ಕ್ಯಾಲಾಜಿ ಡಿಪಾರ್ಟಮೆಂಟ್ ವಹಿಸಿಕೊಂಡಿದೆ. ಈ ರಥವನ್ನು ನೋಡಲು ಪ್ರವಾಸಿಗರು ಟಿಕೇಟ್ ಪಡೆಯಬೇಕಾಗುತ್ತದೆ. ಪ್ರವಾಸಿಗರು ರಥಕ್ಕೆ ಧಕ್ಕೆ ಮಾಡದಂತೆ ಸೆಕ್ಯೂರಿಟಿ ಗಾರ್ಡ್‌ಗಳನ್ನು ಡಿಪಾರ್ಟಮೆಂಟ್ ನೇಮಿಸಿದೆ.

ಅನೇಕ ಕಲಾ ಶಾಲೆಗಳಿಂದ ವಿದ್ಯಾರ್ಥಿಗಳು ಹಾಗೂ ಕಲಾಸಕ್ತರು ರಥದ ಸ್ಕೇಚ್ ಹಾಗೂ ಪೇಂಟಿಂಗ್ ಮಾಡಲು ಹೋಗಬೇಕಾದರೆ, ಮೊದಲು ಆರ್ಕ್ಯಾಲಾಜಿ ಡಿಪಾರ್ಟಮೆಂಟ್‌ದಿಂದ ಅಪ್ಪಣೆ ಪಡೆಯಬೇಕಾಗುತ್ತದೆ. ಈ ರಥಕ್ಕೆ ಒಳ್ಳೆಯ ಸಂರಕ್ಷಣೆಯನ್ನು ಒದಗಿಸಿರುವುದನ್ನು ಕಾಣಬಹುದು.

ಹೀಗೆ ಕರ್ನಾಟಕದಲ್ಲಿ ವಿವಿಧ ಮಾಧ್ಯಮದ ರಥಗಳನ್ನು ಬೇರೆ ಬೇರೆ ವಿಧಾನಗಳಿಂದ ಸಂರಕ್ಷಿಸುವುದನ್ನು ಕಾಣಬಹುದು.

ರಥಶಿಲ್ಪಗಳ ಸಂರಕ್ಷಣೆಯ ಉಪಾಯಗಳು :

೧. ಕಲಾತ್ಮಕ ರಥಗಳು ಬಹುಕಾಲದ ವರೆಗೆ ಬಾಳಿಕೆಬರಲು ಅವುಗಳನ್ನು ಸರಿಯಾದ ರೀತಿಯಲ್ಲಿ ರಕ್ಷಿಸುವುದು ತುಂಬಾ ಮುಖ್ಯ. ಆಯಾ ದೇವಸ್ಥಾನದ ಆವರಣದಲ್ಲಿ ರಥಗಳಿಗಾಗಿಯೇ ಪ್ರತ್ತೇಕ ನಿವೇಶನಗಳನ್ನು ಕಟ್ಟಿಸಬೇಕು. ಕಿಡಿಗೇಡಿಗಳಿಂದ ಹಾಗೂ ದನಕರುಗಳಿಂದ ರಕ್ಷಿಸಲು ನೆಲೆಬಾಗಿಲುಗಳನ್ನು ಕಟ್ಟಿಸಬೇಕು.

೨. ಬಿಸಿಲು ಮಳೆಗಾಳಿಗಳಿಂದ ರಕ್ಷಿಸಲು ಅವುಗಳ ಮೇಲೆ ಪ್ಲಾಸ್ಟಿಕ್ ಅಥವಾ ತಾಡಪತ್ರಿಯ ಹೊದಿಕೆಯನ್ನು ಹೊದಿಸಬೇಕು.

೩. ರಥಗಳ ಅಡಿಪಾಯದಿಂದ ಮೇಲ್ಭಾಗದವರೆಗೆ ತಗಡುಗಳನ್ನು ನಟ್‌ಬೋಲ್ಟ್‌ಗಳಿಂದ ಹೊಂದಿಸುವುದು.

೪. ರಥಗಳಲ್ಲಿ ಕಾಣುವ ಕುಸುರಿ ಕೆತ್ತನೆಯಿಂದ ಕೂಡಿದ ಕಲಾತ್ಮಕ ಶಿಲ್ಪಿಗಾರಿಕೆಯನ್ನು ಉಳಿಸಿಕೊಳ್ಳಲು ಟಚ್‌ವುಡ್ ಅಥವಾ ಫ್ರೇಂಚ್‌ಪಾಲಿಸನ್ನು ಹಚ್ಚುವದು.

೫. ಉತ್ಸವದಲ್ಲಿ ಯಾವದೇ ರೀತಿಯ ಅನಾಹುತಗಳು ಸಂಭವಿಸದಂತೆ, ರಥಗಳಲ್ಲಿ ಸವಕಳಿಯಾದ ಚಕ್ರಗಳನ್ನು ಬದಲಿಸುವದು ಅಲ್ಲದೇ ರಥಗಳ ಶಿಥಿಲವಾದ ಭಾಗಗಳನ್ನು ಬದಲಿಸುವುದು.

ರಥಶಿಲ್ಪಗಳ ಸೌಂರಕ್ಷಣಾ ವಿಧಾನಗಳು



ಗೊಕಾಕದ ಶ್ರೀ ಬಸವೇಶ್ವರ ರಥ
ಜಿ - ಬೆಳಗಾಂವ



ಕಿನ್ನಾಳದ ಶ್ರೀ ವೀರಭದ್ರೇಶ್ವರ ರಥ
ಜಿ - ಕೊಪ್ಪಳ



ಗೊಕಾಕದ ಶ್ರೀ ಬನಶಂಕರಿ ರಥ
ಜಿ - ಬೆಳಗಾಂವ



ಗೊಡಚಿನಮಲ್ಕಿಯ ಶ್ರೀ ಲಕ್ಷ್ಮೀದೇವಿ ರಥ
ಜಿ - ಬೆಳಗಾಂವ




ಬಾದಾಮಿಯ ಶ್ರೀ ಬನಶಂಕರಿ ರಥ
ಜಿ - ಬಾಗಲಕೋಟ



ಮುಗಳಖೋಡದ ಸಿದ್ಧಸಂಸ್ಥಾನ ಮಠದ ರಥ
ಜಿ - ಬೆಳಗಾಂವ

ರಥಶಿಲ್ಪಗಳ ಸಂರಕ್ಷಣಾ ವಿಧಾನಗಳು



ಗುಳೇದಗುಡ್ಡದ ಶ್ರೀ ಸಂಗಮೇಶ್ವರ ರಥ
ಜಿ - ಬಾಗಲಕೋಟ



ಕೋರವಾರದ ಶ್ರೀ ಕೋರಿಸಿದ್ಧೇಶ್ವರ ರಥ
ಜಿ - ಗುಲಬರ್ಗಾ



ಸಂಕೇಶ್ವರದ ಶ್ರೀ ಶಂಕರಲಿಂಗ ರಥ
ಜಿ - ಬೆಳಗಾಂವ



ಹುಲಿಗಿಯ ಶ್ರೀ ಹುಲಿಗೆಮ್ಮದೇವಿ ರಥ
ಜಿ - ಕೊಪ್ಪಳ



ಹೊಳೆಹಿಟ್ನಿಯ ಶ್ರೀ ಬಸವಣ್ಣನ ರಥ
ಜಿ - ಬೆಳಗಾಂವ



ಸುಬ್ರಹ್ಮಣ್ಯದ ಶ್ರೀ ಸುಬ್ರಹ್ಮಣ್ಯಸ್ವಾಮಿ ರಥ



ಕನಕಗಿರಿಯ ಶ್ರೀ ಕನಕರಾಯನ ರಥ
ಜಿ - ಕೊಪ್ಪಳ



ಮರೆಮ್ಮನ ಹಳ್ಳಿಯ ಶ್ರೀ ಆಂಜನೇಯನ ರಥ
ಜಿ - ಬಳ್ಳಾರಿ



ಸಿರಹಟ್ಟಿಯ ಶ್ರೀ ಫಕಿರೇಶ್ವರ ರಥ
ಜಿ - ಗದಗ



ಹಾನಗಲದ ಶ್ರೀ ತಾರಕೇಶ್ವರ ರಥ
ಜಿ - ಹಾವೇರಿ



ಧರ್ಮಸ್ಥಳದ ಶ್ರೀ ಮಂಜುನಾಥ ರಥ



ಬಸರಕೋಡದ ಶ್ರೀ ಪವಾಡಬಸವೇಶ್ವರ ರಥ
ಜಿ - ಬಿಜಾಪುರ



ಕೊಟ್ಟೂರು ಶ್ರೀ ಕೊಟ್ಟೂರೇಶ್ವರ ರಥ
ಜಿ - ಬಳ್ಳಾರಿ



ಅಷ್ಟೆತುಮಕೂರದ ಶ್ರೀ ವೀರಭದ್ರ ರಥ
ಜಿ - ಗುಲಬರ್ಗಾ

ರಥಶಿಲ್ಪಗಳ ಸೌಂರಕ್ಷಣಾ ವಿಧಾನಗಳು



ಗೋಕಾಕದ ಶ್ರೀ ನೀಲಕಂಠೇಶ್ವರ ರಥ
ಜಿ - ಬೆಳಗಾಂವ



ಗೂಗಲದ ಶ್ರೀ ಪ್ರಭುದೇವರ ರಥ
ಜಿ - ರಾಯಚೂರ



ಧಾರವಾಡದ ಮೂರುಸಾವಿರ ಮಠದ ರಥ
ಜಿ - ಧಾರವಾಡ



ಕಲ್ಲೂರದ ಶ್ರೀ ಕರೇಪ್ಪತಾತನ ರಥ
ಜಿ - ರಾಯಚೂರ



ಚಾಂದಕೋಟೆಯ ಶ್ರೀ ಬಸವೇಶ್ವರ ರಥ
ಜಿ - ಬಿಜಾಪುರ



ಕೊಣ್ಣೂರದ ಮರಡಿಮಠದ ರಥ
ಜಿ - ಬೆಳಗಾಂವ

ರಥಶಿಲ್ಪಗಳ ಸೌಂರಕ್ಷಣಾ ವಿಧಾನಗಳು




ಕೂಡಲಸಂಗಮದ ಶ್ರೀ ಸಂಗಮನಾಥನ ರಥ
ಜಿ - ಬಾಗಲಕೋಟ



ಹಂಪಿಯ ಶ್ರೀ ವಿರುಪಾಕ್ಷದೇವರ ರಥ
ಜಿ - ಬಳ್ಳಾರಿ



ಮದ್ದರಕಿ ಶ್ರೀ ಬಸವೇಶ್ವರ ರಥ
ಜಿ - ಗುಲಬರ್ಗಾ



ಕಾಳಬೆಳಗುಂದಿಯ ಶ್ರೀ ಬಣದೇಶ್ವರ ರಥಗಳು
ಜಿ - ಗುಲಬರ್ಗಾ



ಗುಡಗುಂಟಿ ಶ್ರೀ ಅಮರೇಶ್ವರ ರಥಗಳು
ಜಿ - ರಾಯಚೂರ



ಬಾಗಲಕೋಟೆಯ ಶ್ರೀ ಬಸವೇಶ್ವರ ರಥ
ಜಿ - ಬಾಗಲಕೋಟ

೬. ಲೋಹ ಮಾಧ್ಯಮದ ರಥಗಳಾದ ಕಬ್ಬಿಣದ ರಥಗಳು ತುಕ್ಕು ಹಿಡಿಯದಂತೆ ಪ್ರತಿ ವರ್ಷ ವರ್ಣಲೇಪನ ಮಾಡುವದು.

೭. ಚಿನ್ನ ಹಾಗೂ ಬೆಳ್ಳಿಯ ರಥಗಳು ಸುರಕ್ಷಿತವಾಗಿರುವಂತೆ ಪ್ರತ್ತೇಕ ಮನೆಗಳನ್ನು ನಿರ್ಮಿಸುವದು ಹಾಗೂ ಅವುಗಳ ಹೊಳಪನ್ನು ಉಳಿಸಿಕೊಳ್ಳಲು ಪ್ರತಿ ವರ್ಷ ಪಾಲಿಶ್ ಮಾಡುವದು.

೮. ತುಂಬಾ ಹಳೆಯದಾದ ಹಾಗೂ ಶಿಥಿಲಾವಸ್ಥೆಯಲ್ಲಿರುವ ಕಲಾತ್ಮಕ ರಥಗಳನ್ನು ವಸ್ತು ಸಂಗ್ರಹಾಲಯಗಳಿಗೆ ಒಪ್ಪಿಸುವದು.

೯. ಉತ್ಸವದ ಸಂದರ್ಭದಲ್ಲಿ ರಥಗಳನ್ನೆಳೆಯಲು ಹಾಗೂ ರಥಗಳು ಸರಿಯಾಗಿ ತಿರುಗಲು ಅನುಕೂಲವಾಗುವಂತೆ ರಥದ ಚಕ್ರಗಳಿಗೆ ವ್ಹಾಲ್‌ಬೆರಿಂಗ್‌ನ್ನು ಅಳವಡಿಸುವುದು.

೧೦. ಈಗಾಗಲೇ ಧೂಳು ಹಾಗೂ ಎಣ್ಣೆಯಿಂದ ತಮ್ಮ ಮೊದಲ ಸ್ವರೂಪವನ್ನು ಕಳೆದುಕೊಂಡ ರಥಗಳನ್ನು ರಾಸಾಯನಿಕಗಳಿಂದ ಸ್ವಚ್ಛಗೊಳಿಸುವುದು.

◆ ◆ ◆

ಅಧ್ಯಾಯ- ಒಂಭತ್ತು

ಸಮಾರೋಪ

ಸಮಾರೋಪ

ಮೊದಲನೆಯ ಅಧ್ಯಾಯವು ಅಧ್ಯಯನದ ಉದ್ದೇಶ, ಸ್ವರೂಪ ಮತ್ತು ವಿಧಾನಗಳನ್ನು ಒಳಗೊಂಡಿದೆ. ಮಾನವನೊಬ್ಬ ಪ್ರಕೃತಿಯ ಹಸುಗುಸು. ಪ್ರಕೃತಿಯಿಂದಲೇ ಅವನಿಗೆ ಪ್ರಚೋದನೆ, ಪ್ರಕೃತಿಯ ವಿಕೋಪಕ್ಕೆ ಆತ ಬೆರಗಾಗುತ್ತಾನೆ. ಆದರೆ ಕೋಮಲತೆಗೆ ಮಂತ್ರ ಮುಗ್ಧನಾಗುತ್ತಾನೆ. ಭಯ, ಅಭಯ, ಸುಖ, ದುಃಖ ಮೊದಲಾದ ಭಾವನೆಗಳಿಗೆ ಸೆರೆಯಾಗಿ ಕುಸಿಯುತ್ತಾನೆ. ಅವನು ಪ್ರಕೃತಿಯನ್ನು ಅನುಕರಿಸುತ್ತಾನೆ. ಆದ್ದರಿಂದ, ಪ್ರಕೃತಿಗೆ ಮೊರೆಹೊಕ್ಕು ಆರಾಧನೆ ಮಾಡುವುದು ಆತನ ಸಹಜ ಗುಣ.[೧]

ದುಡಿದು ಬೆವರು ಸುರಿಸಿದರೂ ಫಲ ದೊರೆಯದೇ ಇದ್ದಾಗ ಮನುಷ್ಯ ಪ್ರಕೃತಿಯ ಆರಾಧನೆ ಮಾಡುವುದರ ಜೊತೆಗೆ ಪ್ರಕೃತಿಯನ್ನು ಪ್ರೀತಿಸುವುದು ಅವನ ಸಹಜ ಗುಣ. ಹೀಗೆ ಆದಿ ಮಾನವನ ದೈವದ ಪರಿಕಲ್ಪನೆಯೇ ಆತನ ಎಲ್ಲ ಕಲೆ ಸಾಹಿತ್ಯಗಳಿಗೂ ಮೂಲ ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಆತನು ಅನಾದಿಕಾಲದಿಂದಲೂ ಬೆಳೆಸಿ ಪೋಷಿಸಿಕೊಂಡು ಬಂದ ಕಲೆಗಳೆಲ್ಲವು ಆರಾಧನಾ ಸಂಧರ್ಭದಲ್ಲಿಯೇ ಹುಟ್ಟಿದಂತವುಗಳು. ಆತ ದೈವದ ಬಗ್ಗೆ ಚಿಂತನೆ ನಡೆಸಿದ್ದು ಗೀತ ನೃತ್ಯಗಳಿಗೆ ಮೂಲವಾಯಿತು ಮತ್ತು ದೈವಕ್ಕೆ ಮಾಡಿದ ಅಲಂಕಾರ ಚಿತ್ರ ಹಾಗೂ ಶಿಲ್ಪಗಳು ಚಿತ್ರಕಲೆ ಹಾಗೂ ಶಿಲ್ಪಕಲೆಗಳಿಗೆ ಮೂಲವಾಯಿತೆಂದು ಹೇಳಬಹುದು.

ಕಲೆ ಮಾನವನ ಅನಂತ ಆನಂದಕ್ಕಾಗಿ ಹುಟ್ಟಿರುವಂತಹದು. ಕಲೆಯನ್ನು ಮಾನವ ತನ್ನ ಬಾಳಿನ ಎಲ್ಲ ಸಂದರ್ಭಗಳಲ್ಲಿ ಬೆಳೆಸುತ್ತಾ ಬಂದಿದ್ದಾನೆ. ಭಯ ಭಕ್ತಿಗಳಿಂದ ಅವುಗಳನ್ನು ಪೂಜಿಸಿ ಅವುಗಳಲ್ಲಿ ದೈವತ್ವವನ್ನು ಕಂಡುಕೊಂಡಿದ್ದಾನೆ.[೨]

ಹೀಗೆ ದೈವಿ ಆರಾಧನೆಯ ಹಿನ್ನೆಲೆಯಲ್ಲಿ ಬೆಳೆದು ಬಂದ ಕಲೆಗಳಲ್ಲಿ ರಥಶಿಲ್ಪಕಲೆಯೂ ಒಂದು ಎಂದು ಹೇಳಬಹುದು. ಮಾನವನ ದೈವಿ ಪರಿಕಲ್ಪನೆಯಲ್ಲಿ ಮನೆ ದೇವತೆ, ಸೀಮೆ ದೇವತೆ, ಓಣಿ ದೇವತೆ, ಗ್ರಾಮ ದೇವತೆಗಳು ಹುಟ್ಟುವುದರ ಜೊತೆಗೆ ಆ ದೇವತೆಗಳ ಉತ್ಸವದ ಸಂದರ್ಭದಲ್ಲಿ

---

೧. ''ಜನಪದ ಸಮಾಜ ಸಂಸ್ಕೃತಿ '' ಗುರುಮೂರ್ತಿ ಕೆ.ಜಿ., ಪು.ಸಂ.೧೫೦, ೧೯೭೯.
೨.'' ಕರ್ನಾಟಕದ ಜನಪದ ಚಿತ್ರಕಲೆ'' ಡಾ. ಎಸ್.ಸಿ. ಪಾಟೀಲ, ಪು.ಸಂ.೮, ೧೯೯೩.

ರಥಶಿಲ್ಪಗಳೂ ಹುಟ್ಟಿದವು.

ಭಾರತೀಯರ ಜೀವನದಲ್ಲಿ ಜಾತ್ರೆ ಹಾಗೂ ರಥಗಳಿಗೆ ತನ್ನದೇ ಆದ ವಿಶಿಷ್ಟ ಸ್ಥಾನವಿದೆ. ನಾಡಿನ ಹಲವು ಪ್ರದೇಶಗಳಲ್ಲಿ ಜಾತ್ರೆಗಳು ಜರುಗುತ್ತವೆ. ಈ ಜಾತ್ರೆಗಳಲ್ಲಿ ರಥಗಳೇ ಪ್ರಮುಖವೆನ್ನಬಹುದು. ಜಾತ್ರೆಯ ಎಲ್ಲ ಕಾರ್ಯಗಳು ರಥವನ್ನು ಕೇಂದ್ರವನ್ನಾಗಿರಿಸಿಕೊಂಡೇ ಮುಂದುವರೆಯುತ್ತವೆ.

ಧಾರ್ಮಿಕ ನಂಬಿಕೆ ಜಾತ್ರೆ ಉತ್ಸವಗಳು ಜನಪದರಿಂದ ಪರಂಪರಾಗತವಾಗಿ ಬಂದ ಬಳುವಳಿಯಾಗಿವೆ. ಅದರಂತೆ ರಥಶಿಲ್ಪಗಳೂ ಕೂಡ ಉತ್ಸವಗಳಲ್ಲಿ ಬಳಸಲ್ಪಡುವ ರಥಗಳು ಕಾಲದಿಂದ ಕಾಲಕ್ಕೆ ಬದಲಾವಣೆಗೊಂಡು ಈಗಲೂ ತನ್ನ ತನವನ್ನು ಉಳಿಸಿಕೊಂಡು ಬಂದಿದೆ. ರಥವು ಒಂದು ಸುಂದರ ಕಲಾತ್ಮಕ ಶಿಲ್ಪವಾಗಿ ಸಮಾಜದ ಅವಿಭಾಜ್ಯ ಅಂಗವಾಗಿ ನಿಂತಿದೆ ಎಂದು ಈ ಅಧ್ಯಯನದಿಂದ ತಿಳಿಯಬಹುದಾಗಿದೆ.

ಎರಡನೆಯ ಅಧ್ಯಾಯವು ರಥಶಿಲ್ಪದ ಐತಿಹಾಸಿಕ ಹಿನ್ನೆಲೆಯನ್ನು ಒಳಗೊಂಡಿದೆ. ಪ್ರಾರಂಭದಲ್ಲಿ ರಥಗಳು ರಾಜಮಹಾರಾಜರ ಸಂಚಾರಿ ವಾಹನಗಳಾಗಿದ್ದವು. ವಿವಿಧ ವಿನ್ಯಾಸಗಳಲ್ಲಿ ತಯಾರಿಸಿದ ರಥಗಳನ್ನು ತಮ್ಮ ಬೇರೆ ಬೇರೆ ಕೆಲಸಗಳಿಗೆ, ಒಂದೊಂದನ್ನು ಪ್ರತ್ಯೇಕವಾಗಿ ಉಪಯೋಗಿಸುತ್ತಿದ್ದರು. ವಿಹಾರ ರಥಗಳು, ಸಂಗ್ರಾಮ ರಥಗಳು, ವೈಣಿಕ ರಥಗಳು ಹಾಗೂ ನೌಕಾವಿಹಾರ ರಥಗಳು- ಹೀಗೆ ವಿವಿಧ ಬಗೆಯ ರಥಗಳು ಅವರ ನಿತ್ಯ ಜೀವನದಲ್ಲಿ ಉಪಯೋಗವಾಗುತ್ತಿದ್ದವು. ಹೀಗೆ ಬೇರೆ ಬೇರೆ ವಿನ್ಯಾಸಗಳಲ್ಲಿರುವ ವಿವಿಧ ಬಗೆಯ ರಥಗಳ ಬಗ್ಗೆ ಚರ್ಚಿಸಲಾಗಿದೆ.

ಪ್ರಾರಂಭದಲ್ಲಿ ಸಾಗಾಣಿಕೆಗಾಗಿ ಬಳಸಲ್ಪಡುತ್ತಿದ್ದ ರಥಗಳು ನಂತರದಲ್ಲಿ ಅದರ ಜೊತೆ ಜೊತೆಯಾಗಿಯೇ ಧಾರ್ಮಿಕ ಉದ್ದೇಶಗಳಿಗಾಗಿಯೂ ಬಳಕೆಯಾಗತೊಡಗಿದವು. ಅನೇಕ ರಾಜ ಮಹಾರಾಜರು ಸುಂದರವಾದ ದೇವಾಲಯಗಳನ್ನು ನಿರ್ಮಿಸಿದಂತೆ, ಕಲಾತ್ಮಕ ಸುಂದರ ರಥಗಳನ್ನು ನಿರ್ಮಿಸಿ, ತಮ್ಮ ಕುಲದೇವತೆಯನ್ನು ರಥದಲ್ಲಿ ಪ್ರತಿಷ್ಠಾಪಿಸಿ, ಉತ್ಸವಗಳನ್ನು ಮಾಡುವುದರ ಮೂಲಕ ರಥಶಿಲ್ಪಗಳಿಗೆ ಒಂದು ಮಹತ್ವವನ್ನು ನೀಡಿದರು. ಇದಲ್ಲದೆ ರಥಗಳು, ಉತ್ಸವಗಳಲ್ಲಿ ಸುಗಮವಾಗಿ ಸಾಗಲು ತಮ್ಮ ಸಂಪತ್ತನ್ನು ವಿನಿಯೋಗಿಸಿ ವಿಶಾಲವಾದ ರಥಬೀದಿಗಳನ್ನು ನಿರ್ಮಾಣ ಮಾಡಿದರು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು , ಸೋದೆಯ ಅರಸರು, ಸುರಪುರದ ನಾಯಕರು ಹಾಗೂ ಬೀಳಗಿಯ ಸಂಸ್ಥಾನಿಕರು ಹೀಗೆ ಮುಂತಾದವರ ಆಡಳಿತ ಕಾಲದಲ್ಲಿ ರಚನೆಯಾದ ರಥಶಿಲ್ಪಗಳ ಕುರಿತು ಅಧ್ಯಯನ ಮಾಡುವುದರ ಜೊತೆಗೆ ರಥಶಿಲ್ಪಕಲೆಯ ಇತಿಹಾಸವನ್ನು ಅನುಕ್ರಮವಾಗಿ ಕಟ್ಟಿಕೊಡಲಾಗಿದೆ.

ರಥಶಿಲ್ಪಕಲೆಯ ಇತಿಹಾಸದ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ , ಪೂರಕವಾಗಿ ಆಯಾ ಕಾಲದ ಸಮಕಾಲೀನ ಸಾಹಿತ್ಯ ಮತ್ತು ಶಾಸನಗಳಲ್ಲಿ ಉಲ್ಲೇಖವಾದ ರಥಶಿಲ್ಪಗಳ ಉದಾಹರಣೆಗಳನ್ನು ಬಳಸಿಕೊಂಡು ಅನೇಕ ದೇವಾಲಯಗಳು ವೀರಗಲ್ಲು, ಶಾಸನಗಳಂತಹ ಸ್ಮಾರಕಗಳ ಮೇಲೆ ಕೆತ್ತಲ್ಪಟ್ಟ ರಥಶಿಲ್ಪ ಮಾದರಿಗಳನ್ನು ಗಮನಿಸಿ, ತೌಲನಿಕವಾಗಿ ಚರ್ಚಿಸಲಾಗಿದೆ.

ರಥಶಿಲ್ಪಗಳ ವಿಷಯವಾಗಿ ಕೆಲವು ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ. ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಿರುವ ಪ್ರಕಾರ, ದೇವಾಲಯದ ಉತ್ಸವಗಳಲ್ಲಿ ಬಳಸಲ್ಪಡುವ ದೇಗುಲ ರಥಗಳು, ದೇವತೆಗಳು, ಋಷಿಮುನಿಗಳು, ಬ್ರಾಹ್ಮಣರು, ಪಂಡಿತೋತ್ತಮರು, ಅರಸರು, ಯಕ್ಷರು, ಕಿನ್ನರರು ಹಾಗೂ ಕ್ಷತ್ರೀಯರು ಹಲವಾರು ಬಗೆಯ ರಥಗಳನ್ನು ಬಳಸುತ್ತಿದ್ದರೆಂದು ತಿಳಿದು ಬರುತ್ತದೆ. ಇಂತಹ ವಿಷಯದ ಬಗ್ಗೆ ವಿವಿಧ ಪ್ರಾಚೀನ ಗ್ರಂಥಗಳನುಸಾರ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ರಥಗಳ ತಯಾರಿಕಾ ಪರಿಕರಗಳ ವಿಷಯವನ್ನು ಒಳಗೊಂಡಿದೆ ರಥಶಿಲ್ಪವನ್ನು ನಿರ್ಮಿಸುವಲ್ಲಿ ವಿವಿಧ ರೀತಿಯ ಪರಿಕರಗಳು ಬಳಕೆಯಾಗುತ್ತವೆ. ಮಾಧ್ಯಮದ ಹಿನ್ನೆಲೆಯಲ್ಲಿ ಬೇರೆ ಬೇರೆಯಾಗಿ ಬಳಸಲ್ಪಡುವ ಪರಿಕರಗಳನ್ನು ವಿಂಗಡಿಸಿಕೊಂಡು ಅಧ್ಯಯನ ಮಾಡಲಾಗಿದೆ. ಶಿಲಾ ಮಾಧ್ಯಮ, ಕಾಷ್ಠ ಮಾಧ್ಯಮ, ಲೋಹ ಮಾಧ್ಯಮ ಹಾಗೂ ಸಂಕೀರ್ಣ ಮಾಧ್ಯಮದ ರಥಗಳನ್ನು ತಯಾರಿಸುವ ಸಾಮಗ್ರಿಗಳು ಆಯಾ ಮಾಧ್ಯಮಕ್ಕನುಗುಣವಾಗಿ ವಿವಿಧ ಪ್ರಕಾರಗಳಲ್ಲಿರುತ್ತವೆ ಎಂಬುದನ್ನು ವಿವರಿಸಲಾಗಿದೆ. ವಿವಿಧ ಮಾಧ್ಯಮದ ರಥಗಳ ತಯಾರಿಕಾ ಪರಿಕರಗಳನ್ನು ಅದ್ಯಾಯನಕ್ಕೊಳಪಡಿಸಿ ಆಯಾ ರಥಗಳನ್ನು ನಿರ್ಮಿಸುವ ಕಟ್ಟಿಗೆ ಗಾಲಿಗಳಿಗೆ ಬಳಸುವ ಶಿಲೆ, ಅಲ್ಲದೆ ಕಳಸವನ್ನು ಒಳಗೊಂಡಂತೆ ವಿವಿಧ ಭಾಗಗಳಲ್ಲಿ ಬಳಸುವ ಲೋಹದಂತಹ ವಸ್ತುಗಳು, ರಥದ ಅಲಂಕರಣಕ್ಕಾಗಿ ಉಪಯೋಗಿಸಲಾಗುವ ವಿವಿಧ ಬಣ್ಣದ ಬಟ್ಟೆಗಳು, ಧ್ವಜಗಳು, ತಳಿರು ತೋರಣಗಳು, ಬಾಳೆ ದಿಂಡುಗಳು- ಹೀಗೆ ಈ ಮೊದಲಾದ ವಸ್ತುಗಳನ್ನು ವಿಷಯಾನುಸಾರ ಗಣನೆಗೆ ತೆಗೆದುಕೊಳ್ಳಲಾಗಿದೆ. ಇದಲ್ಲದೆ ಬೇರೆ ಬೇರೆ ಮಾಧ್ಯಮದ ರಥಗಳನ್ನು ತಯಾರಿಸಲು ರಥಶಿಲ್ಪಿಗಳು ಸುತ್ತಿಗೆ, ಉಳಿಗಳು ಅನೇಕ ವಿದ್ಯುತ್ ಚಾಲಿತ ಯಂತ್ರಗಳನ್ನು ಬಳಸುವರು. ಅಲ್ಲದೆ ಕಬ್ಬಿಣ, ಹಿತ್ತಾಳೆ, ಬೆಳ್ಳಿ ಬಂಗಾರ ಮೊದಲಾದ ಲೋಹಗಳನ್ನು ಹಾಗೂ ಈ ಲೋಹಗಳಿಂದ ಎರಕಹೊಯ್ದು ರಥಶಿಲ್ಪ ನಿರ್ಮಿಸುವಲ್ಲಿ ಬಳಕೆಯಾಗುವ ವಸ್ತುಗಳ ಬಗ್ಗೆ ತಿಳಿಯಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ರಥಗಳ ರಚನಾ ವಿಧಾನಗಳ ಬಗ್ಗೆ ಚರ್ಚಿಸಲಾಗಿದೆ. ಪ್ರಾಚೀನ ಗ್ರಂಥಗಳಾದ 'ಮಾನಸಾರ', 'ವಿಜಯತಂತ್ರ', ಪರಾಶರವಾಸ್ತು, ರುದ್ರವಾಸ್ತು, ಈ ಮೊದಲಾದವುಗಳಲ್ಲಿ ಉಲ್ಲೇಖಗೊಂಡಿರುವ ವಿಜಯಕಾಂತ, ಶ್ರೀರಕ, ನಬಸವನಭದ್ರಕ, ಪತ್ರಕಲ್ಪ, ಪುಷ್ಪಕ ರಥ, ಚಿತ್ರಕಲ್ಪ, ಸಾಮ್ಯ ರಥ, ಗಂಧರ್ವ ರಥ ಹಾಗೂ ಮೊದಲಾದ ರಥಗಳನ್ನು ಹೆಸರಿಸಲಾಗಿದೆ.

ಕರ್ನಾಟಕದಲ್ಲಿ ವಿವಿಧ ಸುಂದರವಾದ ದೇವಾಲಯಗಳು ಬೇರೆ ಬೇರೆ ಶೈಲಿಗಳಲ್ಲಿ ನಿರ್ಮಾಣಗೊಂಡಂತೆ, ರಥಶಿಲ್ಪಗಳೂ ಸಹ ನಾಗರ, ವೇಸರ, ದ್ರಾವಿಡ ಹೀಗೆ ವಿವಿಧ ಶೈಲಿಗಳಲ್ಲಿ ನಿರ್ಮಾಣಗೊಂಡಿವೆ. ಅನೇಕ ರಥಗಳು ಚೌಕು, ಅಷ್ಟಮ, ದ್ವಾದಶ, ವರ್ತುಳ ಹಾಗೂ ಬಹುಕೋನಗಳ ವಿನ್ಯಾಸಗಳಲ್ಲಿಯೂ ಕಂಡು ಬರುವವು. ಪ್ರಾದೇಶಿಕತೆಯ ಹಿನ್ನೆಲೆಯಲ್ಲಿ ನಾಡಿನಾದ್ಯಂತ ಕಟ್ಟಿಗೆಯ ರಥ, ಲೋಹದ ರಥ, ಸಂಕೀರ್ಣ ರಥ ಹಾಗೂ ಶಿಲಾ ರಥಗಳನ್ನು ಕಾಣಬಹುದು. ಪ್ರಾದೇಶಿಕವಾಗಿ ಈ ಎಲ್ಲ ರಥಗಳಲ್ಲಿ ಕಂಡುಬರುವ ಸಾಮ್ಯಗಳು ಹಾಗೂ ವ್ಯತ್ಯಾಸಗಳನ್ನು ಗುರುತಿಸುತ್ತಾ, ಅವುಗಳ ರಚನಾ ವಿಧಾನಗಳ ಬಗ್ಗೆ ಚರ್ಚಿಸಲಾಗಿದೆ.

ರಥಶಿಲ್ಪಗಳು ಒಂದೇ ಹಂತದಲ್ಲಿ ನಿರ್ಮಾಣಗೊಳ್ಳದೆ, ವಿವಿಧ ಹಂತಗಳಲ್ಲಿ

ನಿರ್ಮಾಣಗೊಳ್ಳುತ್ತವೆ. ರಥಶಿಲ್ಪ ನಿರ್ಮಾಣ ಕಾರ್ಯದಲ್ಲಿ ಅದಕ್ಕೆ ಪೂರ್ವಭಾವಿಯಾಗಿ ನೀಲ ನಕ್ಷೆಗಳನ್ನು ರಚಿಸುವರು. ಅದರಲ್ಲಿ ಅಳವಡಿಸುವ ಮೂರ್ತಿಗಳು, ಚಿತ್ರ ವಿನ್ಯಾಸಗಳು, ಅವುಗಳನ್ನು ಸೂಕ್ಷ್ಮ ಕುಸುರಿಕೆತ್ತನೆಯ ಕೆಲಸದಿಂದ ಸುಂದರಗೊಳಿಸುವದು, ರಚನೆಯಾದ ರಥಶಿಲ್ಪದ ಎಲ್ಲ ಬಿಡಿಭಾಗಗಳನ್ನು ಅಡಿಪಾಯ, ಅಧಿಷ್ಠಾನ, ಮಂಟಪ, ಗೋಪುರ ಹಾಗೂ ಕಳಶ ಭಾಗಗಳಲ್ಲಿ ಸರಿಯಾಗಿ ಹೊಂದಿಸುವುದು, ಇದಲ್ಲದೆ ರಥಶಿಲ್ಪಿಯು ಮೊದಲ ಹಂತದಲ್ಲಿ ರಥ ನಿರ್ಮಾಣ ಮಾಡಿದ ನಂತರ, ಎರಡನೆಯ ಹಂತದಲ್ಲಿ, ನಿಯೋಜಿಸಲ್ಪಟ್ಟ ಕುಶಲಕರ್ಮಿಗಳು ಉತ್ಸವಕ್ಕಾಗಿ ರಥವನ್ನು ಸಿದ್ಧಗೊಳಿಸಿ, ರಥದ ಮೇಲೆ ಗೋಪುರ ನಿರ್ಮಿಸುವುದು. ನಂತರ, ಬಣ್ಣ ಬಣ್ಣದ ಬಟ್ಟೆ ಪತಾಕೆಗಳನ್ನು ಕಟ್ಟುವುದು, ಕಳಶವನ್ನಿಟ್ಟು ತಳಿರುತೋರಣಗಳಿಂದ ಅಲಂಕಾರ ಮಾಡುವುದು, ಹೀಗೆ ಪ್ರತಿಯೊಂದು ಹಂತದ ನಿರ್ಮಾಣ ಸಂದರ್ಭದಲ್ಲಿ ಅನುಸರಿಸುವ ಇವೆ ಮೊದಲಾದ ವಿಧಾನಗಳನ್ನು ವಿವರವಾಗಿ ಚರ್ಚಿಸಲಾಗಿದೆ.

ಲೋಹ ಮಾಧ್ಯಮದ ರಥಗಳಲ್ಲಿ ಕಬ್ಬಿಣ, ಬೆಳ್ಳಿ ಹಾಗೂ ಚಿನ್ನದ ರಥಗಳು ನಿರ್ಮಾಣಗೊಂಡಿರುವುದನ್ನು ನಾಡಿನ ವಿವಿಧೆಡೆಯಲ್ಲಿ ಕಾಣಬಹುದು. ಕಬ್ಬಿಣದ ರಥಗಳನ್ನು ತಯಾರಿಸುವ ಹಂತದಲ್ಲಿ ಕಬ್ಬಿಣದ ಪಟ್ಟಿಗಳನ್ನು, ರಾಡ್‌ಗಳನ್ನು ಹಾಗೂ ತಗಡುಗಳನ್ನು ಕತ್ತರಿಸುವುದು, ಅವುಗಳನ್ನು ಒಂದಕ್ಕೊಂದು ಜೋಡಿಸಿ ವೆಲ್ಡಿಂಗ್ ಮಾಡುವುದು, ಪೂರ್ಣ ಕಬ್ಬಿಣದಿಂದ ಸಿದ್ದಗೊಂಡ ರಥಕ್ಕೆ ವರ್ಣಗಾರಿಕೆಯನ್ನು ಮಾಡುವುದು- ಹೀಗೆ ಬೇರೆ ಬೇರೆ ಕಾರ್ಯಗಳನ್ನು ಕೈಗೊಳ್ಳಬೇಕಾಗುವುದು. ಚಿನ್ನದ ಹಾಗೂ ಬೆಳ್ಳಿಯ ಮಾಧ್ಯಮದ ರಥಗಳನ್ನು ತಯಾರಿಸುವಾಗ ಮೊದಲು ನೀಲ ನಕ್ಷೆಯ ಪ್ರಕಾರ, ಒಂದು ಕಾಷ್ಠ ರಥವನ್ನು ತಯಾರಿಸುವರು. ಆಮೇಲೆ ಬೆಳ್ಳಿ ಅಥವಾ ಬಂಗಾರದ ತಗಡುಗಳಲ್ಲಿ ಉಬ್ಬು ಶಿಲ್ಪಗಳನ್ನು ತಯಾರಿಸುವರು. ಕೆಲವೊಂದು ಸಂದರ್ಭದಲ್ಲಿ ಬೆಳ್ಳಿ ಅಥವಾ ಬಂಗಾರವನ್ನು ಕರಗಿಸಿ, ಪಡಿಯಚ್ಚುಗಳಲ್ಲಿ ದ್ರವರೂಪದ ಲೋಹವನ್ನು ಸುರಿದು ವಿವಿಧ ಶಿಲ್ಪಕಲಾಕೃತಿಗಳನ್ನು ರಚಿಸುವರು. ಎಲ್ಲ ಕಲಾಕೃತಿಗಳು ಬಿಡಿ ಬಿಡಿಯಾಗಿ ಪಟ್ಟಿಕೆಗಳಲ್ಲಿ ಸಿದ್ದಗೊಂಡ ನಂತರ ಕಾಷ್ಠ ರಥಕ್ಕೆ ಮೊಳೆಗಳಿಂದ ಹೊಡೆದು ಸರಿಯಾಗಿ ಕೂಡಿಸುವುದು, ಕಾಯಿಸುವುದು, ಪಾಲಿಶ್ ಮಾಡುವುದು ಹೀಗೆ ವಿವಿಧ ಹಂತಗಳಲ್ಲಿ ತಯಾರಿಸುವ ವಿಧಿವಿಧಾನಗಳನ್ನು ವಿವರವಾಗಿ ಅಧ್ಯಯನ ಮಾಡಲಾಗಿದೆ.

ಅದರಂತೆಯೇ ಸಂಕೀರ್ಣ ಮಾಧ್ಯಮದ ರಥಗಳಾದ ಕಟ್ಟುವ ರಥಗಳು, ತಟ್ಟೆಯ ರಥಗಳು, ತೆಪ್ಪದ ರಥಗಳು, ಹೂವಿನ ರಥಗಳು ಹೀಗೆ ಅನೇಕ ವಿಧದ ರಥಗಳು ನಾಡಿನ ವಿವಿಧೆಡೆ ಉತ್ಸವದ ಸಂದರ್ಭದಲ್ಲಿ ಕಾಣಸಿಗುವವು, ಈ ಎಲ್ಲ ರಥಗಳ ತಯಾರಿಕಾ ವಿಧಾನಗಳ ಬಗ್ಗೆ ವಿವರವಾಗಿ ತಿಳಿಯಲಾಗಿದೆ.

ಐದನೆಯ ಅಧ್ಯಾಯವು ರಥಗಳ ವಿಂಗಡನೆ ಹಾಗೂ ವಸ್ತು ವಿಷಯವನ್ನು ಒಳಗೊಂಡಿದೆ. ನಾಡಿನ ಹಲವಾರು ದೇವಸ್ಥಾನಗಳಲ್ಲಿ ಹಾಗೂ ಮಠ ಮಾನ್ಯಗಳಲ್ಲಿ ವಿವಿಧ ವಿನ್ಯಾಸಗಳ, ಶೈಲಿಗಳ ಮತ್ತು ವಿವಿಧ ಮಾಧ್ಯಮಗಳ ರಥಶಿಲ್ಪಗಳು ಕಂಡುಬರುತ್ತವೆ. ಅನೇಕ ಶಿಲ್ಪಕಲಾಕೃತಿಗಳನ್ನು ಹಾಗೂ ಚಿತ್ರಕಲೆಯನ್ನು ಮೈಗೂಡಿಸಿಕೊಂಡಿವೆ. ಈ ಎಲ್ಲ ರಥಗಳು ತಮ್ಮಲ್ಲಿ, ದಾರ್ಮಿಕ, ಸಾಮಾಜಿಕ, ಐತಿಹಾಸಿಕ ಹೀಗೆ ಅನೇಕ ವಿಷಯಗಳನ್ನಾಧರಿಸಿದ ಶಿಲ್ಪಕೃತಿಗಳನ್ನು ಹಾಗೂ ಚಿತ್ರಕೃತಿಗಳನ್ನು ತಮ್ಮಲ್ಲಿ

ಮೈಗೂಡಿಸಿಕೊಂಡಿವೆ. ಈ ಎಲ್ಲ ರಥಗಳು ಅನೇಕ ಶಿವಶರಣರ, ದೇವಾನುದೇವತೆಯರ, ಸಿದ್ಧ ಪುರುಷರ, ಪ್ರಾಣಿ ಪಕ್ಷಿಗಳ, ವಿವಿಧ ನಕ್ಷೆಗಳ, ಎಲೆಬಳ್ಳಿಯಂತ ವಿನ್ಯಾಸಗಳ, ಮಿಥುನ, ಅಷ್ಟದಿಕ್ಪಾಲಕರ, ನವಗ್ರಹಗಳ, ದ್ವಾರಪಾಲಕರ, ಗಂಧರ್ವರ, ಪಂಡಿತೋತ್ತಮರ ಹಾಗೂ ರಾಮಾಯಣ, ಮಹಾಭಾರತ, ದಶಾವತಾರ, ಪಂಚತಂತ್ರ ಇಂತಹ ಪೌರಾಣಿಕ ಹಿನ್ನೆಲೆಯ ಶಿಲ್ಪಕೃತಿಗಳನ್ನು ಹಾಗೂ ಚಿತ್ರಕೃತಿಗಳನ್ನು ಅಧಿಷ್ಠಾನ ಹಾಗೂ ಮಂಟಪ ಭಾಗಗಳಲ್ಲಿ ಹೊಂದಿವೆ. ಈ ಎಲ್ಲ ಶಿಲ್ಪ ಹಾಗೂ ಚಿತ್ರಕೃತಿಗಳನ್ನಾಧರಿಸಿ ನಮ್ಮ ಪೂರ್ವಜರ ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ಮನೋಭಾವವನ್ನು ಅರಿಯುವ ನಿಟ್ಟಿನಲ್ಲಿ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ರಥ ಶಿಲ್ಪಗಳ ಅಧ್ಯಯನದಿಂದ ಮಾನವನ ಕಲಾ ಬದುಕು, ಧಾರ್ಮಿಕ ನಂಬಿಕೆ ಆಚರಣೆಗಳಂತಹ ಸಾಂಸ್ಕೃತಿಕ ಸಂಗತಿಗಳು ತಿಳಿದು ಬರುತ್ತವೆ. ಅಲ್ಲದೆ ನಮ್ಮ ಪೂರ್ವಜರು ತಯಾರಿಸಿದ ರಥಶಿಲ್ಪಗಳಲ್ಲಿ ಕಾಣುವ ಕಲಾವಂತಿಕೆ, ಸೃಜನಾತ್ಮಕತೆಯ ಜೊತೆಗೆ ಅವರ ಜೀವನದ ವಿವಿಧ ಮಜಲುಗಳನ್ನು ತಿಳಿಯಬಹುದಾಗಿದೆ.

ರಥೋತ್ಸವಗಳಲ್ಲಿ ಪ್ರಾದೇಶಿಕವಾಗಿ ಬೇರೆ ಬೇರೆ ಪೂಜಾ ವಿಧಿ-ವಿಧಾನಗಳು ಕಂಡುಬರುತ್ತವೆ. ಕೆಲವು ರಥೋತ್ಸವಗಳು ಮುಂಜಾನೆಯ ಸಮಯದಲ್ಲಿ ಜರುಗಿದರೆ, ಇನ್ನೂ ಕೆಲವು ರಥಗಳು ಗೋಧೂಳಿಯ ಸಮಯದಲ್ಲಿ ನಡೆಯುವವು. ಅಲ್ಲದೆ ಕೆಲವು ಪ್ರದೇಶಗಳಲ್ಲಿ ರಾತ್ರಿ ಸಮಯದಲ್ಲಿ ರಥೋತ್ಸವಗಳು ಜರುಗುತ್ತವೆ.ಆಯಾ ಪ್ರದೇಶದ ರಥೋತ್ಸವಗಳ ವಿಧಿ-ವಿಧಾನಗಳನ್ನು ತಿಳಿಯುವ ಪ್ರಯತ್ನ ಮಾಡಲಾಗಿದೆ.

ರಥೋತ್ಸವಗಳು ಜರುಗುವ ಮುನ್ನ ಕೆಲವು ಪ್ರದೇಶಗಳಲ್ಲಿ ಆಯಾ ದೇವಾಲಯದ ಸಂಪ್ರದಾಯಕ್ಕೆ ಅನುಗುಣವಾಗಿ ವಾಹನೋತ್ಸವ ಅಥವಾ ಉಚ್ಚಾಯದ ಮೆರವಣಿಗೆಗಳು ನಡೆಯುತ್ತದೆ. ನಂದಿ, ಸಿಂಹ, ಶರಭ, ಮೇಷ, ಗಜ ಹೀಗೆ ಮುಂತಾದ ಪ್ರಾಣಿ ಶಿಲ್ಪಗಳನ್ನು, ಪ್ರಭಾವಳಿಯನ್ನು ಹೊಂದಿದ, ಹೂವಿನ ಅಲಂಕಾರವನ್ನು ಮಾಡಿದ ವಾಹನಗಳಲ್ಲಿಟ್ಟು ವಿವಿಧ ಮೇಳಗಳ ಜೊತೆಯಲ್ಲಿ ಮೆರವಣಿಗೆ ಮಾಡುವರು. ಇನ್ನು ಕೆಲವು ಪ್ರದೇಶದ ರಥೋತ್ಸವಗಳಲ್ಲಿ, ಕಟ್ಟುವ ರಥದಂತೆ ಅಥವಾ ಗಡ್ಡೆಯ ರಥದಂತೆಯೇ ವಿನ್ಯಾಸವನ್ನುಹೊಂದಿದ ಉಚ್ಚಾಯದಲ್ಲಿ ದೇವತಾ ಮೂರ್ತಿಗಳನ್ನು ಅಥವಾ ಚಿತ್ರಗಳನ್ನು ಪ್ರತಿಷ್ಠಾಪಿಸಿ, ಉಚ್ಚಾಯವನ್ನು ಎಲ್ಲ ಗ್ರಾಮಸ್ಥರೂ ಕೂಡಿ ಎಳೆಯುವರು. ಈ ರೀತಿಯ ಮೆರವಣಿಗೆಗಳು ಹಾಗೂ ಅವುಗಳ ಪೂಜಾ ವಿಧಿವಿಧಾನಗಳ ಬಗ್ಗೆಯೂ ತಿಳಿಯಲಾಗಿದೆ.

ರಥೋತ್ಸವಗಳಿಗೆ ಮುನ್ನ ಎಳೆಯುವ ಈ ಉಚ್ಚಾಯಗಳಲ್ಲಿ ಅನೇಕ ಸುಂದರವಾದ ಪ್ರಾಣಿಶಿಲ್ಪಗಳು, ಶಿವ ಶರಣರ ಶಿಲ್ಪಗಳು, ದೇವತಾ ಶಿಲ್ಪಗಳು ಹಾಗೂ ಅನೇಕ ಹೂ ಬಳ್ಳಿಯಂತಹ ನಕ್ಷಾ ವಿನ್ಯಾಸಗಳನ್ನು ಕಾಣಬಹುದು. ಇದಲ್ಲದೆ ಕೆಲವು ಉಚ್ಚಾಯಗಳಲ್ಲಿ ಬಣ್ಣ ಬಣ್ಣದ ಕಾಗದಗಳು, ಬಟ್ಟೆಗಳು ಹಾಗೂ ವಿವಿಧ ವರ್ಣಗಳಿಂದ ರಚಿಸಿದಂತಹ ವರ್ಣಚಿತ್ರಗಳು ಕಂಡುಬರುವವು. ಆದ್ದರಿಂದ ಉಚ್ಚಾಯಗಳಲ್ಲಿ ಕಂಡುಬರುವಂತಹ ಶಿಲ್ಪಕಲಾಕೃತಿಗಳ ಬಗ್ಗೆ ಹಾಗೂ ಅವುಗಳಲ್ಲಿ ಕಾಣುವಂತಹ ವರ್ಣವಿನ್ಯಾಸದ ಬಗ್ಗೆ ತಿಳಿಯುವ ಹಾಗೂ ವಿವಿಧ ಪ್ರದೇಶಗಳಲ್ಲಿಯ ವ್ಯತ್ಯಾಸಗಳನ್ನು

ಮತ್ತು ಸಾಮ್ಯಗಳನ್ನು ಕಂಡುಕೊಳ್ಳುವ ಉದ್ದೇಶವನ್ನು ಹೊಂದಿದೆ. ಇದರೊಂದಿಗೆ ಉಚ್ಛಾಯಗಳ ರಚನಾ ವಿಧಾನಗಳನ್ನೂ ತಿಳಿಯಬಹುದಾಗಿದೆ.

ಆರನೆಯ ಅಧ್ಯಾಯದಲ್ಲಿ ರಥಗಳ ವರ್ಣವಿನ್ಯಾಸದ ಬಗ್ಗೆ ಚರ್ಚಿಸಲಾಗಿದೆ. ಕೆಲವು ರಥಗಳು ಸುಂದರವಾದ ವರ್ಣಚಿತ್ರಗಳಿಂದ ಅಲಂಕಾರಗೊಂಡಿರುತ್ತವೆ. ಅಲ್ಲದೆ ಕೆಲವು ರಥಗಳಿಗೆ ವಿವಿಧ ಬಣ್ಣ ಬಣ್ಣದ ಕಾಗದಗಳಿಂದ, ಬಣ್ಣ ಬಣ್ಣದ ಬಟ್ಟೆಗಳಿಂದ, ಹಸಿರು ತಳಿರು ತೋರಣಗಳಿಂದ, ಬಣ್ಣ ಬಣ್ಣದ ಹೂಗಳಿಂದ ಸಿಂಗರಿಸಿ ಇಡೀ ರಥವನ್ನು ವರ್ಣಗಳಿಂದ ಕಂಗೊಳಿಸುವ ಹಾಗೆ ಮಾಡಿರುತ್ತಾರೆ. ಆದ್ದರಿಂದ ಕರ್ನಾಟಕದ ವಿವಿಧೆಡೆ ಕಂಡುಬರುವ ರಥಗಳಲ್ಲಿ ವರ್ಣವಿನ್ಯಾಸವು ಯಾವ ರೀತಿಯಲ್ಲಿ ಮೂಡಿಬಂದಿದೆ ಎಂಬುದರ ಬಗ್ಗೆ ವಿವಿಧ ಮಾಧ್ಯಮದ ರಥಗಳ ಉದಾರಣೆಗಳೊಂದಿಗೆ ವಿವರವಾಗಿ ಅಧ್ಯಯನ ಮಾಡಲಾಗಿದೆ.

ಇದಲ್ಲದೆ ಹಾಲಕ್ಕಿ ಜನರು ರಚಿಸುವ 'ಹಸೆ' ಚಿತ್ರಗಳಲ್ಲಿ ಮೂಡಿ ಬಂದಿರುವ ರಥಗಳು ಕರಾವಳಿ ಭಾಗದ ವಿಶೇಷ ಕಲೆಯಾದ 'ಕಾವಿ' ಭಿತ್ತಿ ಚಿತ್ರಗಳಲ್ಲಿ ಕಂಡುಬರುವ ಸುಂದರವಾದ ರಥಗಳು, ಗ್ರಾಮೀಣ ಹೆಣ್ಣು ಮಕ್ಕಳು ಕಸೂತಿ ಕೆಲಸದಲ್ಲಿ ಉಪಯೋಗಿಸಿಕೊಂಡ ರಥದ ವಿನ್ಯಾಸಗಳು, ಉತ್ತರ ಕರ್ನಾಟಕದ ಗ್ರಾಮೀಣ ಜನರು ಬರೆಯುವ ಬೆಳದಿಂಗಳ ಚಿತ್ರಗಳಲ್ಲಿ ಕಂಡು ಬರುವ ರಥಗಳು, ಅಲ್ಲದೆ ಕೆಲವು ಜಾತ್ರಾ ವಿಶೇಷಗಳಲ್ಲಿ ಬಣ್ಣ ಬಣ್ಣದ ರಂಗೋಲಿಯಿಂದ ಬಿಡಿಸಿದರಥದ ಚಿತ್ರಗಳು- ಹೀಗೆ ಹಲವಾರು ಚಿತ್ರ ವಿನ್ಯಾಸಗಳಲ್ಲಿ ವೈವಿಧ್ಯಮಯವಾಗಿ ರೂಪುತಾಳಿರುವ ರಥಶಿಲ್ಪ ಮಾದರಿಯ ಚಿತ್ರಗಳ ಬಗ್ಗೆ ಚರ್ಚಿಸಲಾಗಿದೆ.

ಏಳನೆಯ ಅಧ್ಯಾಯದಲ್ಲಿ ರಥಗಳ ತಯಾರಕರು ಹಾಗೂ ಅವುಗಳ ಪೋಷಕರ ಬಗ್ಗೆ ಚರ್ಚಿಸಲಾಗಿದೆ. ಯಾವುದೇ ಒಂದು ಕಲಾ ಪರಂಪರೆ ಬೆಳೆಯಲು ಅದರ ಪೋಷಕರ ಪಾತ್ರ ಮಹತ್ವಪೂರ್ಣವಾಗಿರುತ್ತದೆ. ಪ್ರಾಚೀನ ಕಾಲದಿಂದ ಇಂದಿನವರೆಗೂ ವೈಭವಯುತವಾಗಿ ಬೆಳೆದು ಬಂದಿರುವ ರಥಶಿಲ್ಪಕಲೆಯ ಪರಂಪರೆಗೆ ಅದರ ಪೋಷಕರು ಬಹುಮುಖ್ಯ ಕಾರಣರಾಗಿದ್ದಾರೆ. ಭಾರತದಲ್ಲಿ ಸಿಂಧೂ ನಾಗರಿಕತೆಯಿಂದ ಇಂದಿನವರೆಗೂ ಅನೇಕ ರಥಶಿಲ್ಪಗಳಿಗೆ ಪೋಷಣೆಯನ್ನು ಒದಗಿಸಿರುವರು ರಾಜಮಹಾರಾಜರು, ಸಂಸ್ಥಾನಿಕರು, ಸಾಮಂತರು, ಪುರಪ್ರಮುಖರು ಮಾತ್ರವಲ್ಲದೆ ಸಾಮಾನ್ಯ ಜನರೂ ಸಹಿತ ರಥಶಿಲ್ಪ ಕಲೆಯನ್ನು ಪೋಷಿಸುತ್ತ ಬಂದಿರುವರು.

ಕರ್ನಾಟಕದಲ್ಲಿ ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ದೊರೆಗಳು, ಸೋದೆ ಅರಸರು ಮುಂತಾದವರು ರಥಶಿಲ್ಪಕಲೆಯ ಪೋಷಕರಾಗಿರುವುದು ತಿಳಿದು ಬರುತ್ತದೆ. ಸೋದೆ ಅರಸದಿಂದ ನಿರ್ಮಿತವಾದ ಬನವಾಸಿಯ ರಥ, ಘಂಟೆ ರಾಜವಂಶದಿಂದ ರಚನೆಯಾದ ಬೀಳಗಿಯ ರಥ, ವಿಜಯನಗರದ ಅರಸರಿಂದ ನಿರ್ಮಾಣಗೊಂಡ ಹಂಪೆಯ ಶಿಲೆಯ ರಥ, ಕರ್ನಾಟಕದ ಅನೇಕ ಮಠಮಾನ್ಯಗಳಲ್ಲಿ ಕಂಡುಬರುವ ಹಳೆಯ ರಥಗಳು, ಉಡುಪಿ , ಶೃಂಗೇರಿ ಹಾಗೂ ಧರ್ಮಸ್ಥಳಗಳಲ್ಲಿ ಧರ್ಮದರ್ಶಿಗಳು ಮತ್ತು ಸ್ವಾಮಿಗಳಿಂದ ಪೋಷಣೆಗೊಂಡ ರಥಗಳು- ಹೀಗೆ ಅನೇಕರಿಂದ ರಥಶಿಲ್ಪಗಳು ಪೋಷಣೆಯನ್ನು ಪಡೆದಿರುವ ವಿಷಯವನ್ನು ತಿಳಿಯಲಾಗಿದೆ.

ಕರ್ನಾಟಕದಲ್ಲಿ ಇಂದಿಗೂ ಶ್ರೇಷ್ಠ ರಥಶಿಲ್ಪಿಗಳಿದ್ದಾರೆ. ಬಾಗಲಕೋಟ ಜಿಲ್ಲೆಯ ಬದಾಮಿ

ತಾಲೂಕಿನ ಸುಳ್ಳ ಗ್ರಾಮದ ಮಳಿಯಪ್ಪ ಬಡಿಗೇರ, ಬೆಂಗಳೂರಿನ ಮನೋಹರ ಬಡಿಗೇರ, ಕೊಪ್ಪಳದ ಮಲ್ಲಪ್ಪ ಬಡಿಗೇರ, ಲೋಕಾಪುರದ ಭೀಮರಾವ ಮಾಯಾಚಾರ್ಯ, ದಾವಣಗೆರೆ ಜಿಲ್ಲೆ ಚನ್ನಗಿರಿ ತಾಲೂಕಿನ ಗೊಪ್ಪೆನ್ನಳ್ಳಿಯ ಎಂ. ಪರಮೇಶ್ವರಾಚಾರ್ಯ, ಎ. ಚಂದ್ರಾಚಾರ್ಯ, ಮೈಸೂರಿನ ಸಿ. ಪರಮೇಶ್ವರಾಚಾರ್ಯ ಇವರೆಲ್ಲ ಹೆಸರಾಂತ ಕಾಷ್ಠ ರಥಶಿಲ್ಪಿಗಳು. ಅಲ್ಲದೆ ಅನೇಕ ರಥಶಿಲ್ಪಗಳನ್ನು ಲೋಹ ಮಾಧ್ಯಮದಲ್ಲಿ ತಯಾರಿಸಿ, ಅಜರಾಮರರಾದ ಸಿಂಗಣ್ಣಾಚಾರ್ಯ, ಎ. ಚನ್ನಾಚಾರ್ಯ, ಡಿ.ವಿ.ಸುಬ್ಬಣ್ಣಾಚಾರ್ಯ, ರಜತಕಲಾ ಪ್ರವೀಣ ಅಂಕಪ್ಪಾಚಾರ್ಯ ಹೀಗೆ ಅನೇಕ ಸಮಕಾಲೀನ ರಥಶಿಲ್ಪ ಕಲಾವಿದರು ತಯಾರಿಸಿದ ರಥಶಿಲ್ಪಗಳು ಹಾಗೂ ಅವರು ಪಡೆದಿರುವ ಮಾನ, ಸಮ್ಮಾನಗಳು, ಪ್ರಶಸ್ತಿ ಪುರಸ್ಕಾರಗಳು ಮತ್ತು ಪಡೆದಿರುವ ಬಿರುದುಗಳು, ಈ ಎಲ್ಲ ವಿಷಯಗಳ ಬಗ್ಗೆ ಚರ್ಚಿಸುತ್ತ ಕಲಾವಿದರ ಪರಿಚಯವನ್ನು ಮಾಡಿಕೊಡಲಾಗಿದೆ.

ಎಂಟನೆಯ ಅಧ್ಯಾಯದಲ್ಲಿ ರಥಗಳ ಸಂರಕ್ಷಣಾ ವಿಧಾನಗಳ ಬಗ್ಗೆ ವಿವರಿಸಲಾಗಿದೆ. ವ್ಯಕ್ತಿ, ಸಂಸ್ಥೆ, ಸಮಾಜದ ಸಾಂಸ್ಕೃತಿಕ ಬುತ್ತಿಯಾಗಿರುವ ರಥಶಿಲ್ಪಗಳು ಹಾಳಾಗದಂತೆ ಉಳಿಸಿಕೊಳ್ಳುವುದು. ಇಂದು ತೀರಾ ಅಗತ್ಯವಾಗಿದೆ. ಅನೇಕ ರಥಶಿಲ್ಪಗಳು ಕಾಲ ಕಳೆದಂತೆ ತಮ್ಮ ಮೂಲ ಸ್ವರೂಪವನ್ನು ಕಳೆದುಕೊಂಡು ಹಾಳಾಗುತ್ತ ಸಾಗುತ್ತಿದೆ. ಇದಕ್ಕೆ ಕಾಲಮಾನದ ಪ್ರಭಾವಕ್ಕಿಂತ ನಾವು ಅವುಗಳ ರಕ್ಷಣೆಯ ಬಗ್ಗೆ ಹೆಚ್ಚು ಗಮನ ಹರಿಸದೇ ಇರುವುದು ಬಹುಮುಖ್ಯ ಕಾರಣವಾಗಿದೆ.

ಜಾತ್ರೆ ಉತ್ಸವಗಳ ಅವಿಭಾಜ್ಯ ಅಂಗವಾಗಿರುವ ರಥಶಿಲ್ಪಗಳು, ಉತ್ಸವದ ಸಮಯದಲ್ಲಿ ಓರಣವಾಗಿ ಸಿಂಗರಿಸಲ್ಪಟ್ಟು, ಉತ್ಸವದ ನಂತರ ಅವುಗಳನ್ನು ನಿರ್ಲಕ್ಷಿಸಿ ದೇವಾಲಯದ ಹಿಂಭಾಗದ ಒಂದು ಮೂಲೆಯಲ್ಲಿಯೋ ಅಥವಾ ಸನಿಹದ ಬಯಲಿನಲ್ಲಿಯೋ ನಿಲ್ಲಿಸಿ, ಅದಕ್ಕೆ ತೆಂಗಿನ ಗರಿಗಳನ್ನು ಹೊಂದಿಸುವುದು, ಪ್ಲಾಸ್ಟಿಕ್ ಹಾಳೆಗಳಿಂದ ಮುಚ್ಚುವುದು, ಇಲ್ಲವೆ ತಗಡುಗಳಿಂದ ಮರೆ ಮಾಡುವಂತಹ ತಾತ್ಪೂರ್ತಿಕ ಕ್ರಮಗಳು ರಥಶಿಲ್ಪ ರಕ್ಷಣೆಯಲ್ಲಿ ನಾವು ತೋರುವ ನಿರ್ಲಕ್ಷ್ಯದ ಪ್ರತೀಕಗಳಾಗಿವೆ. ಉದಾಹರಣೆಗೆ :- ಸೋದೆ ಅರಸರ ಕಾಲದಲ್ಲಿ ರಚಿತವಾದ ಬನವಾಸಿಯ ರಥವು ಸಧ್ಯದಲ್ಲಿ ಶಿಥಿಲಾವಸ್ಥೆಯಲ್ಲಿದೆ. ಬೀಳಗಿ ಸಂಸ್ಥಾನಿಕರ ಕಾಲದ ಸೀತಾರಾಮಚಂದ್ರ ದೇವಾಲಯದ ಮುಂದಿರುವ ರಥ ಹಾಳಾಗುವ ಸ್ಥಿತಿಯಲ್ಲಿದೆ. ಬಾದಾಮಿ ಬನಶಂಕರಿ ದೇವಸ್ಥಾನಕ್ಕೆ ಸಂಬಂಧಿಸಿದ, ಬಯಲಿನಲ್ಲಿ ಗಾಳಿ, ಬಿಸಿಲು, ಮಳೆಗಳಿಗೆ ಮೈಯೊಡ್ಡಿ ನಿಂತಿರುವ ರಥದ ಎಲ್ಲ ಕಲಾತ್ಮಕ ಶಿಲ್ಪ ವಿನ್ಯಾಸಗಳು ಎಣ್ಣೆ ಹಾಗೂ ಧೂಳಿನಿಂದ ಸಂಪೂರ್ಣವಾಗಿ ಮುಚ್ಚಿಹೋಗಿವೆ. ಗುಲಬರ್ಗಾ ಜಿಲ್ಲೆಯ ಅನೇಕ ಲೋಹದ ರಥಗಳು ಯಾವುದೇ ಆಸರೆ ಇಲ್ಲದೆ ಪ್ರಕೃತಿಗೆ ಮೈಯೊಡ್ಡಿ ನಿಂತಿವೆ.

ಹೀಗೆ ಕರ್ನಾಟಕದುದ್ದಕ್ಕೂ ಅನೇಕ ರಥಗಳು ನಾಶದ ಅಂಚಿನಲ್ಲಿರುವುದು ಕಂಡುಬರುತ್ತದೆ. ಆದ್ದರಿಂದ ನಮ್ಮ ಪೂರ್ವಜರ ರಥಶಿಲ್ಪಗಳ ಸಂರಕ್ಷಣೆಗೆ ರಕ್ಷಣೆ ಒದಗಿಸುವ ವಿಧಾನಗಳನ್ನು ಚರ್ಚಿಸುತ್ತಾ, ಆಧುನಿಕ ವಿಧಾನಗಳಿಂದ ರಥಶಿಲ್ಪಗಳನ್ನು ಹೆಚ್ಚುಕಾಲ ಉಳಿಸಿಕೊಳ್ಳುವ ಬಗೆಗಿರುವ ವಿಧಾನಗಳನ್ನು ಈ ಅಧ್ಯಯನದಲ್ಲಿ ತಿಳಿದುಕೊಳ್ಳಲಾಗಿದೆ.

ಹೀಗೆ, ನಾಡಿನಾದ್ಯಂತ ಎಲ್ಲ ಭಾಗಗಳಲ್ಲಿ ಅನೇಕ ರಥಶಿಲ್ಪಗಳನ್ನು ಕಾಣಬಹುದು. ಈ

ಅಧ್ಯಯನದಲ್ಲಿ ಕರ್ನಾಟಕದ ಎಲ್ಲ ಭಾಗಗಳಲ್ಲಿ ಕಂಡು ಬರುವಂತಹ ಕಲಾತ್ಮಕ ಹಾಗೂ ಸುಂದರವಾದ ಪ್ರಮುಖ ರಥಗಳನ್ನು ಅಧ್ಯಯನಕ್ಕೊಳಪಡಿಸಿಕೊಂಡು, ಅಧ್ಯಯನದ ಇತಿಮಿತಿಗೆ ಅನುಗುಣವಾಗಿ ಉತ್ತರ ಕರ್ನಾಟಕದ ಹನ್ನೆರಡು ಜಿಲ್ಲೆಗಳಲ್ಲಿ ಕಂಡುಬರುವ ಸುಂದರವಾದ ರಥಶಿಲ್ಪಗಳ ಬಗ್ಗೆ ವಿಶೇಶವಾಗಿ ಚರ್ಚಿಸಲಾಗಿದೆ.

ಒಂಬತ್ತನೆಯ ಅಧ್ಯಾಯದಲ್ಲಿ ಪ್ರಸ್ತುತ ಪ್ರಬಂಧದ ಎಂಟು ಅಧ್ಯಾಯಗಳಲ್ಲಿ ಕಂಡುಕೊಂಡ ಫಲಿತಗಳನ್ನು ಹೇಳಲಾಗಿದೆ.

ಈ ಅಧ್ಯಯನದಿಂದ ಕಂಡುಕೊಂಡ ಫಲಿತಗಳು :

ರಥಗಳು ವೇದ ಕಾಲದಿಂದಲೂ ತಮ್ಮನ್ನು ಗುರುತಿಸಿಕೊಂಡಿವೆ. ಅನೇಕ ದೇವಾನುದೇವತೆಯರು ಅನೇಕ ಕಾರ್ಯಗಳಿಗೆ ವಿವಿಧ ರಥಗಳನ್ನು ಬಳಸುತ್ತಿದ್ದರೆಂದು ಪ್ರಾಚೀನ ಗ್ರಂಥಗಳಿಂದ ತಿಳಿದುಬರುತ್ತದೆ. ಈ ರಥವು ಮಾನವನ ಜೀವನದಲ್ಲೂ ಪ್ರಮುಖ ಪಾತ್ರವಹಿಸಿತು. ಪ್ರಾಗೈತಿಹಾಸಿಕ ಕಾಲದಿಂದ ಇಂದಿನವರೆಗೂ ರಥಶಿಲ್ಪಗಳನ್ನು ಕಾಣಬಹುದು. ಅನೇಕ ನಾಗರಿಕತೆಗಳಲ್ಲಿ ವಿವಿಧ ರೀತಿಯಲ್ಲಿ ವಿನ್ಯಾಸದಲ್ಲಿ ಬದಲಾವಣೆಗೊಂಡು ರಾಜ ಮಹಾರಾಜರ ಕಾಲದಲ್ಲಿ ಸಂಚಾರಿ ವಾಹನವಾಗಿ ಬಳಕೆಗೊಂಡಿತು. ಅವರ ಕಾಲದಲ್ಲಿಯೇ ಧಾರ್ಮಿಕ ಉತ್ಸವಗಳಿಗೂ ರಥಗಳು ಸೃಷ್ಠಿಯಾದವು. ರಥಗಳು ಸುಂದರವಾದ ಸೂಕ್ಷ್ಮ ಕುಸುರಿ ಕೆತ್ತನೆಯನ್ನು ಹೊಂದಿ ಕಲಾತ್ಮಕ ಶಿಲ್ಪಕಲಾಕೃತಿಗಳಾಗಿವೆ. ಕೆಲವು ರಥಗಳು ವಾಸ್ತುಶಿಲ್ಪಕೃತಿಗಳಾಗಿ ನಮ್ಮ ಕಣ್ಮನಗಳನ್ನು ಸೆಳೆದಿವೆ. ಹೀಗೆ ರಥಶಿಲ್ಪಗಳಿಗೆ ಒಂದು ಇತಿಹಾಸವಿದೆ ಎಂಬುವುದು ಈ ಅಧ್ಯಯದಿಂದ ತಿಳಿಯಬಹುದು, ಅಲ್ಲದೆ ರಥಶಿಲ್ಪಗಳಿಂದ ನಮ್ಮ ಪೂರ್ವಜರ ಕಲೆ ಹಾಗೂ ಸಂಸ್ಕೃತಿಗಳನ್ನು ತಿಳಿಯಬಹುದಾಗಿದೆ.

ರಥಗಳು ದೇವಾಲಯದ ಪ್ರತೀಕವೆಂದೇ ಹೇಳಬೇಕು. ದೇವಾಲಯಗಳನ್ನು ವಾಸ್ತುಶಾಸ್ತ್ರ ಸಮ್ಮತವಾಗಿ ರಚಿಸುವಂತೆ ಈ ದೇಗುಲ ರಥಗಳೂ ಕೂಡ ಶಾಸ್ತ್ರಾನುಸಾರ ನಿರ್ಮಾಣಗೊಳ್ಳುವವು. ಬೇರೆ ಬೇರೆ ಶೈಲಿಯ ಬೇರೆ ಬೇರೆ ಮಾಧ್ಯಮದ ರಥಗಳು ಯಾವ ರೀತಿಯಲ್ಲಿ ನಿರ್ಮಾಣಗೊಳ್ಳುತ್ತವೆ. ಎಂಬುವುದನ್ನು ಹಾಗೂ ಪ್ರತಿಯೊಂದು ಮಾಧ್ಯಮದ ರಥಗಳ ವಿವಿಧ ಭಾಗಗಳ ರಚನೆಯಲ್ಲಿ ಹೇಗೆ ಸಾಮ್ಯತೆಯನ್ನು ಹಾಗೂ ಭಿನ್ನತೆಯನ್ನು ಹೊಂದಿರುತ್ತವೆ ಎಂಬುವುದನ್ನು ಈ ಅಧ್ಯಯನದಿಂದ ಕಂಡುಕೊಳ್ಳಬಹುದು.

ವಿವಿಧ ಮಾಧ್ಯಮಗಳಲ್ಲಿ ನಿರ್ಮಾಣಗೊಂಡ ರಥಗಳಲ್ಲಿಯೂ ವಿವಿಧ ಪ್ರಕಾರಗಳಿವೆ. ಈ ಎಲ್ಲ ಪ್ರಕಾರದ ರಥಗಳನ್ನು ನಿರ್ಮಾಣ ಮಾಡಲು ಆಯಾ ಮಾಧ್ಯಮಗಳಿಗೆ ಅನುಗುಣವಾಗಿ ಬೇರೆ ಬೇರೆ ವಿಧಧ ತಯಾರಿಕಾ ಸಾಮಗ್ರಿಗಳನ್ನು ಬಳಸಲಾಗುವುದು. ಈ ಎಲ್ಲ ವಿಧದ ಸಾಮಗ್ರಿಗಳು, ಬೇರೆ ಬೇರೆ ಮಾಧ್ಯಮದ ರಥ ತಯಾರಿಕೆಯಲ್ಲಿ ಹೇಗೆ ಬಳಸಲ್ಪಡುವವು ಎಂಬುವುದನ್ನು ತಿಳಿಯಬಹುದಾಗಿದೆ.

ರಥಗಳು ತಮ್ಮಲ್ಲಿ ಅನೇಕ ಸುಂದರ ಶಿಲ್ಪಗಳನ್ನು ಮೈಗೂಡಿಸಿಕೊಂಡಿವೆ. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ನಿರ್ಮಾಣಗೊಂಡ ರಥಗಳಲ್ಲಿ ಕಾಣುವ ಸುಂದರ ಶಿಲ್ಪಗಾರಿಕೆಯ ಬಗ್ಗೆ ತಿಳಿಯಬಹುದು. ವಿವಿಧ ಶೈಲಿಯಲ್ಲಿ ನಿರ್ಮಾಣಗೊಂಡ ರಥಗಳ ಬೇರೆ ಬೇರೆ ಭಾಗಗಳ ಮೇಲೆ

ರಚನೆಯಾದ ಶಿಲ್ಪಗಳು ಅವುಗಳನ್ನು ರಚಿಸುವ ಕ್ರಮವನ್ನು ಕುರಿತು ತಿಳಿಯಬಹುದು ಅಲ್ಲದೆ ಬೇರೆ ಬೇರೆ ಶೈಲಿಯ ರಥಗಳಲ್ಲಿ ಪ್ರಾದೇಶಿಕವಾಗಿ ಕಂಡುಬರುವ ವ್ಯತ್ಯಾಸಗಳನ್ನು ಕಂಡುಕೊಳ್ಳಬಹುದು.

ರಥಶಿಲ್ಪಗಳು ಕೇವಲ ಶಿಲ್ಪಕಲೆಯನ್ನಷ್ಟೇ ಅಲ್ಲದೆ ಚಿತ್ರಕಲೆಯನ್ನು ಮೈಗೂಡಿಸಿಕೊಂಡಿದೆ. ಕೆಲವು ಮಾಧ್ಯಮದ ರಥಗಳಲ್ಲಿ ಶಿಲ್ಪಕಲೆ ಪ್ರಧಾನವಾಗಿದ್ದರೆ ಇನ್ನೂ ಕೆಲವು ರಥಗಳಲ್ಲಿ ಶಿಲ್ಪಕಲೆ ಪ್ರಧಾನವಾಗಿ ಕಂಡುಬರುತ್ತದೆ. ಪ್ರಾದೇಶಿಕವಾಗಿ ರಥಗಳು ಚಿತ್ರಕಲೆಯನ್ನು ಯಾವ ರೀತಿಯಲ್ಲಿ ಪೋಷಿಸಿವೆ ಎಂಬುವುದನ್ನು ಅರಿಯಬಹುದು.

ರಥಶಿಲ್ಪಗಳು ಇಂದಿಗೂ ನಮ್ಮನ್ನು ಗಮನ ಸೆಳೆಯುವಂತೆ ಮಾಡಲು ಅವುಗಳ ಕಲಾತ್ಮಕತೆಯೇ ಕಾರಣ. ಇಂತಹ ರಥಶಿಲ್ಪಗಳು ನಿರ್ಮಾಣಗೊಳ್ಳಲು ರಥ ನಿರ್ಮಾಣಕಾರರ ಸೃಜನಶೀಲತೆಯೇ ಕಾರಣವೆನ್ನಬಹುದು. ತಮ್ಮ ಜೀವನವನ್ನು ರಥನಿರ್ಮಾಣ ಕಾರ್ಯಕ್ಕೆ ಮೀಸಲಾಗಿರಿಸಿದ ಅನೇಕ ಕಲಾವಿದರು ಕರ್ನಾಟಕದಲ್ಲಿದ್ದಾರೆ. ಕರ್ನಾಟಕದ ವಿವಿಧ ಪ್ರದೇಶಗಳಲ್ಲಿರುವ ಕಲಾವಿದರು ಹಾಗೂ ಅವರು ರಥನಿರ್ಮಾಣ ಕಾರ್ಯದಲ್ಲಿ ಮಾಡಿರುವ ಸಾಧನೆ ಅವುಗಳನ್ನು ತಿಳಿಯಬಹುದಾಗಿದೆ.

ರಥ ನಿರ್ಮಾಣಗೊಳ್ಳಲು ಕೇವಲ ಕಲಾವಿದರಷ್ಟೇ ಆದರೆ ಸಾಲದು ಆ ಕಾಲವಿದರಿಗೆ ಪ್ರೋತ್ಸಾಹಿಸುವವರೂ ಬೇಕು. ಕಲಾವಿದರನ್ನು ಪ್ರೋತ್ಸಾಹಿಸಿ ನಿರ್ಮಾಣಗೊಂಡ ರಥಶಿಲ್ಪಗಳನ್ನು ಬಹುಕಾಲದಿಂದ ಪೋಷಿಸಿಕೊಂಡು ಬಂದ ಅನೇಕ ಪೋಷಕರ ಬಗ್ಗೆಯೂ ಈ ಅಧ್ಯಯನದಿಂದ ಅರಿಯಬಹುದಾಗಿದೆ.

ರಾಜಾಶ್ರಯದಿಂದ ಬೆಳೆದುಬಂದ ರಥಗಳು ಇಂದಿಗೂ ಕೂಡ ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡಿವೆ. ಕೆಲವು ರಾಜರು ಭಕ್ತಿಯಿಂದ ಹಾಗೂ ಸಮಾಜದಲ್ಲಿ ಒಂದು ಸಿಸ್ತನ್ನು ಮೂಡಿಸಲು ಭಾವೈಕ್ಯ ಮನೊಭಾವಗಳು ಬೆಳೆಯಲು ಸುಂದರವಾದ ಭವ್ಯ ರಥಗಳನ್ನು ವಿವಿಧ ದೇವಾಲಯಗಳಿಗೆ ದಾನವಾಗಿ ಕೊಟ್ಟಿರುವ ಉದಾಹರಣೆಗಳೂ ಸಾಕಷ್ಟಿವೆ. ಹೀಗೆ ದಾನವಾಗಿ ಪಡೆದುಕೊಂಡ ಕಲಾತ್ಮಕ ರಥಗಳು ಇತಿಹಾಸದ ಪ್ರತೀಕವಾಗಿವೆ. ಅವುಗಳಗೆ ಸರಿಯಾದ ರಕ್ಷಣೆ ಇಲ್ಲದೆ ಅವು ಶಿಥಿಲಾವಸ್ಥೆಯಲ್ಲಿವೆ. ಇಂತಹ ಅಪರೂಪದ ರಥಗಳನ್ನು ಹಾಗೂ ಇತ್ತೀಚೆಗೆ ನಿರ್ಮಾಣಗೊಂಡ ರಥಗಳನ್ನು ಸರಿಯಾದ ರೀತಿಯಲ್ಲಿ ರಕ್ಷಿಸುವ ವಿಧಾನಗಳನ್ನು ಈ ಅಧ್ಯಯನದಿಂದ ತಿಳಿಯಬಹುದಾಗಿದೆ. ಜೊತೆಯಲ್ಲಿ ಕರ್ನಾಟಕದ ವಿವಿಧ ಪ್ರದೇಶಗಳೂ ಕಾಣುವ ವಿವಿಧ ಮಾಧ್ಯಮದ ರಥಗಳು ಯಾವ ರೀತಿಯಲ್ಲಿ ರಚನೆಗೊಂಡಿವೆ ಎಂಬುದನ್ನು ತಿಳಿಯಬಹುದಾಗಿದೆ.

ಜನಪದರ ಧರ್ಮಪ್ರಜ್ಞೆಯಿಂದ ಇಂದಿಗೂ ರಥಶಿಲ್ಪಗಳು ಸಮಾಜದ ಅವಿಭಾಜ್ಯ ಅಂಗವಾಗಿ ನಿಂತಿವೆ. ಉತ್ಸವಗಳಲ್ಲಿ ಅವುಗಳನ್ನು ಶೃಂಗಾರ ಮಾಡುವಿಕೆ, ರಥೋತ್ಸವದ ಮುನ್ನ ಮಾಡುವ ಕೆಲವು ವಿಧಿ ವಿದಾನಗಳು ಆ ಸಂದರ್ಭದಲ್ಲಿ ಜರುಗುವ ಕೆಲವು ಕಲಾಮೇಳಗಳು ಹಾಗೂ ಇವೆಲ್ಲದರ ಪರಿಣಾಮವಾಗಿ ಸಮುದಾಯದ ಮೇಲೆ ರಥೋತ್ಸವಗಳಿಂದಾಗುವ ಪ್ರೇರಣೆ ಈ ಎಲ್ಲ ವಿಷಯಗಳ ಬಗ್ಗೆ ಸೂಕ್ಷ್ಮವಾಗಿ ಅರಿಯಬಹುದು.

ಭಾರತೀಯ ಸಂಸ್ಕೃತಿಯಲ್ಲಿ ರಥಗಳು ವಿಶಿಷ್ಟ ಸ್ಥಾನ ಪಡೆದುಕೊಂಡಿವೆ ಅವುಗಳಿಂದ ಸಾಮರಸ್ಯ, ಸಹಬಾಳ್ವೆ, ಸೌಹಾರ್ದ, ಭಾವೈಕ್ಯತೆ ಇವುಗಳಲ್ಲದೆ ಲಲಿತ ಕಲೆಗಳೂ ಬೆಳೆಯುತ್ತವೆ

ಎಂಬುದನ್ನು ಈ ಅಧ್ಯಯನದಿಂದ ಅರಿಯಬಹುದು.

ಸಲಹೆಗಳು :

ನಾಡಿನ ಅನೇಕ ರಥಗಳನ್ನು ಉತ್ಸವದ ಸಂದರ್ಭದಲ್ಲಿ ಉಪಯೋಗಿಸಿಕೊಂಡು, ನಂತರ ದೇವಸ್ಥಾನದ ಯಾವದೋ ಒಂದು ಮೂಲೆಯಲ್ಲಿ ನಿಲ್ಲಿಸಿರುವುದು ಕಂಡುಬರುತ್ತದೆ. ಮಳೆ, ಬಿಸಿಲು, ಗಾಳಿಗೆ ಮೈಯೊಡ್ಡಿ ನಿಂತ ರಥಗಳು ಬಹಳ ವರ್ಷ ಬಾಳಿಕೆ ಬರಲಾರವು. ಅಲ್ಲದೆ ಈಗಾಗಲೇ ಕೆಲವು ಹಳೆಯ ರಥಗಳು ಶಿಥಿಲಾವಸ್ಥೆಯಲ್ಲಿವೆ. ಇಂತಹ ರಥಗಳಿಗೆ ಸಂರಕ್ಷಣೆ ನೀಡುವದಕ್ಕೆ ಪ್ರತಿಯೊಂದು ರಥಗಳಿಗೆ ಆಯಾ ದೇವಸ್ಥಾನದ ಪುರೋಹಿತರು, ಮಠಾಧಿಪತಿಗಳು ಹಾಗೂ ಧರ್ಮದರ್ಶಿಗಳು ರಥದ ಮನೆಯನ್ನು ನಿರ್ಮಿಸುವ ಯೋಜನೆ ಕೈಗೊಳ್ಳಬೇಕು.

ಜಾತ್ರೆಯ ಸಂದರ್ಭದಲ್ಲಿ ಕಾಷ್ಠ ರಥಗಳಿಗೆ ಎಣ್ಣೆ ಹಾಗೂ ಹುರಮಂಜನ್ನು ಸವರುವದರಿಂದ, ರಥವು ಧೂಳು ಹಿಡಿದು ಬೇರೆ ಭಾಗದ ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದ ರಥದ ಶಿಲ್ಪಗಾರಿಕೆಯು ಕಾಣದಂತೆ ಮುಚ್ಚಿಹೋಗಿರುವುದನ್ನು ನಾಡಿನ ಹಲವಾರು ರಥಗಳಲ್ಲಿ ಕಾಣಬಹುದು. ಆದ್ದರಿಂದ ಎಣ್ಣೆ ಹಾಗೂ ಹುರಿಮಂಜನ್ನು ಬಳೆಯದೇ ಕಟ್ಟಿಗೆ ಕೊಳೆಯದಂತಹ ಹಾಗೂ ಧೂಳು ಹಿಡಿಯದಂತಹ ಕೆಲವು ರಾಸಾಯನಿಕಗಳನ್ನು ಲೇಪಿಸಬೇಕು.

ಕೆಲವು ಹಳೆಯ ರಥಗಳ ಚಕ್ರಗಳು ಹಾಗೂ ಅಚ್ಚುಗಳು ಸವೆದು ಹೋದದ್ದು ಕಂಡುಬರುತ್ತದೆ. ರಥಗಳ ಅಂತಹ ಭಾಗಗಳನ್ನು ಮತ್ತೆ ಹೊಸದಾಗಿ ಜೋಡನೆ ಮಾಡಬೇಕು. ಇದರಿಂದ ಉತ್ಸವದ ಸಂದರ್ಭದಲ್ಲಾಗುವ ಅನಾಹುತಗಳನ್ನು ತಪ್ಪಿಸಬಹುದು.

ಸೂಕ್ಷ್ಮ ಕುಸುರಿ ಕೆತ್ತನೆಯಿಂದ ಕೂಡಿದ ಕಲಾತ್ಮಕ ರಥಗಳನ್ನು ನಿರ್ಮಿಸುವ ರಥಶಿಲ್ಪಿಗಳು ನಾಡಿನಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ. ಆದರೆ ಅದರಲ್ಲಿ ಕೆಲವು ರಥಶಿಲ್ಪಿಗಳು ಮಾತ್ರ ಈ ಕಲೆಯಲ್ಲಿ ಸಿದ್ಧಹಸ್ತರು. ಅಂತಹ ಶಿಲ್ಪಿಗಳಿಂದ ನಾಡಿನ ಬೇರೆ ಬೇರೆ ಶಿಲ್ಪಿಗಳಿಗೆ 'ರಥಶಿಲ್ಪ ತಯಾರಿಕಾ ಶಿಬಿರ' ಕೈಗೊಳ್ಳುವ ಮೂಲಕ ಸರಿಯಾದ ರೀತಿಯಲ್ಲಿ ರಥಶಿಲ್ಪಗಾರಿಕೆಯ ಬಗ್ಗೆ ತಿಳಿಹೇಳುವ ಕೆಲಸ ನಡೆಯಬೇಕು.

ನಾಡಿನ ಹಲವಾರು ಕಡೆಗಳಲ್ಲಿ ಕೆಲವು ರಥಶಿಲ್ಪ ಕೇಂದ್ರಗಳನ್ನು ತೆರೆದು, ಆಸಕ್ತಿಯುಳ್ಳವರಿಗೆ ಸಾಂಪ್ರದಾಯಿಕ ಶಿಲ್ಪಕಲೆಯ ಕುರಿತಾಗಿ ಸರಿಯಾದ ತರಬೇತಿ ನೀಡಬೇಕು. ಇದರಿಂದ ನಾಡಿನಲ್ಲಿ ಸುಂದರವಾದ ರಥಗಳು ನಿರ್ಮಾಣಗೊಳ್ಳುತ್ತವೆ ಹಾಗೂ ಇತ್ತೀಚೆಗೆ ಮರೆತುಹೋಗುತ್ತಿರುವ ಹಾಗೂ ಕಾಣದಂತೆ ನಶಿಸಿ ಹೋಗುತ್ತಿರುವ ಸಂಪ್ರದಾಯಿಕ ಶಿಲ್ಪಕಲೆಯನ್ನು ಉಳಿಸಿಕೊಂಡಂತಾಗುವುದು.

ಒಳ್ಳೆಯ ರಥಶಿಲ್ಪ ತಯಾರಿಸುವ ಶಿಲ್ಪಿಗಳನ್ನು ಗುರುತಿಸಿ, ಅದರಿಂದ ಸಾಂಪ್ರದಾಯಿಕ ಶಿಲ್ಪಕಲೆಯನ್ನು ಉಳಿಸಿ ಬೆಳೆಸುವ ಯೋಜನೆಯನ್ನು ಸರಕಾರ ಇಲ್ಲವೆ ವಿಶ್ವವಿದ್ಯಾಲಯಗಳು ಕೈಗೊಳ್ಳಬೇಕು.

ಐತಿಹಾಸಿಕ ಹಿನ್ನಲೆಯನ್ನು ಹೊಂದಿದ ಸಾಂಪ್ರದಾಯಿಕ ಶಿಲ್ಪಕಲೆ ಮತ್ತು ಚಿತ್ರಕಲೆಗಳನ್ನು ಉಳಿಸಿ ಬೆಳೆಸಿಕೊಂಡು ಬಂದ ಹಾಗೂ ನಮ್ಮ ನಾಡಿನ ಸಾಂಸ್ಕೃತಿಕ ಬುತ್ತಿಯಾಗಿರುವ ರಥಶಿಲ್ಪಗಳಲ್ಲಿ

ಕೆಲವು ಕಲಾತ್ಮಕ ರಥಗಳು ಶಿಥಿಲಾವಸ್ಥೆಯಲ್ಲಿವೆ. ಅಂತಹ ರಥಗಳನ್ನು ವಸ್ತುಸಂಗ್ರಹಾಲಯಗಳಲ್ಲಿ ಇರಿಸುವ ಕಾರ್ಯ ನಡೆಯಬೇಕು.

ಐತಿಯಾಸಿಕ, ಧಾರ್ಮಿಕ, ಸಾಮಾಜಿಕ ಹಾಗೂ ಸಾಂಸ್ಕೃತಿಕ ವಿಷಯಗಳನ್ನು ಮೈಗೂಡಿಸಿಕೊಂಡಿರುವ ರಥಶಿಲ್ಪವನ್ನು ಕೇವಲ ಕಲಾತ್ಮಕ ದೃಷ್ಟಿಯಿಂದಷ್ಟೇ ಅಲ್ಲದೆ, ಇನ್ನೂ ಬೇರೆ ಬೇರೆ ಆಯಾಮಗಳಲ್ಲಿ ಅಧ್ಯಯನ ಮಾಡಬಹುದು. ಎಂದು ಹೇಳುತ್ತಾ ಈ ಅಧ್ಯಯನವನ್ನು ಸಮಾರೋಪ ಮಾಡುವೆನು.

◆ ◆ ◆

ಅನುಬಂಧಗಳು

ಅನುಬಂಧ-೧

ಸಂಕ್ಷೇಪಗಳು

೧. ಕ್ರಿ.ಪೂ. - ಕ್ರಿಸ್ತ ಪೂರ್ವ

೨. ಕ.ವಿ.ವಿ - ಕರ್ನಾಟಕ ವಿಶ್ವ ವಿದ್ಯಾಲಯ

೩. ಸಂ. - ಸಂಪಾದಕರು

೪. ಕ.ಸಾ.ಪ - ಕನ್ನಡ ಸಾಹಿತ್ಯ ಪರಿಷತ್ತ

೫. ಲೇ - ಲೇಖನಗಳು

೬. ಪು.ಸಂ. - ಪುಟ ಸಂಖ್ಯೆ

೭. ಪ್ರ. - ಪ್ರಕಟಣೆ

೮. ಬೆಂ.ವಿ.ವಿ. - ಬೆಂಗಳೂರು ವಿಶ್ವ ವಿದ್ಯಾಲಯ

೯. ಅ - ಅನುವಾದ

೧೦. ಮೈ.ವಿ.ವಿ. - ಮೈಸೂರು ವಿಶ್ವ ವಿದ್ಯಾಲಯ

೧೧. ಮ.ಪ್ರ. - ಮಹಾಪ್ರಭಂಧ

೧೨. ಗು.ವಿ.ವಿ. - ಗುಲಬುರ್ಗಾ ವಿಶ್ವ ವಿದ್ಯಾಲಯ

೧೩. ಸಂ.ಪು. - ಸಂಪುಟ

ಚಿತ್ರ ಋಣ

೧. ''ಉದಯವಾಣಿ'' ದೀಪಾವಳಿಯ ವಿಶೇಷಾಂಕ ೨೦೦೨

೨. ''ಶಿಲ್ಪಾದರ್ಶ'' ಸಂ.ಪು. ೧, ಜಿ. ಜ್ಞಾನಾನಂದ, ಪ್ರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩. ''ಶಿಲ್ಪಾದರ್ಶ'' ಸಂ.ಪು. ೨, ಜಿ. ಜ್ಞಾನಾನಂದ, ಪ್ರ. ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

ನೆರವು

೧. ಕರ್ನಾಟಕ ವಿಶ್ವ ವಿದ್ಯಾಲಯ, ಧಾರವಾಡ.

೨. ಕನ್ನಡ ವಿಶ್ವ ವಿದ್ಯಾಲಯ, ಹಂಪಿ.

೩. ಕುವೆಂಪು ವಿಶ್ವ ವಿದ್ಯಾಲಯ, ಶಿವಮೊಗ್ಗ.


೪. ಗುಲಬುರ್ಗಾ ವಿಶ್ವ ವಿದ್ಯಾಲಯ, ಗುಲಬುರ್ಗಾ.

೫. ಬೆಂಗಳೂರು ವಿಶ್ವ ವಿದ್ಯಾಲಯ, ಬೆಂಗಳೂರು.

೬. ಮೈಸೂರು ವಿಶ್ವ ವಿದ್ಯಾಲಯ, ಮೈಸೂರು.

ಕ್ಷೇತ್ರಕಾರ್ಯದ ಸ್ಥಳಗಳು

ಅನುಬಂಧ - ೨. ನಕಾಶೆ.



ಅನುಬಂಧ -೩

ಕ್ಷೇತ್ರ ಕಾರ್ಯದ ಸ್ಥಳಗಳು

ಅ.ಸಂ.	ಊರು	ದೇವಸ್ಥಾನದ ಹೆಸರು	ತಾಲೂಕು	ಜಿಲ್ಲೆ
೧	ಬದಾಮಿ	ಶ್ರೀ ಬನಶಂಕರಿ	ಬದಾಮಿ	ಬಾಗಲಕೋಟ
೨	ಬಾಗಲಕೋಟ	ಶ್ರೀ ಬಸವೇಶ್ವರ	ಬಾಗಲಕೋಟ	ಬಾಗಲಕೋಟ
೩	ಕೆರೂರು	ಶ್ರೀ ಬನಶಂಕರಿ	ಬದಾಮಿ	ಬಾಗಲಕೋಟ
೪	ಶಿರೂರು	ಶ್ರೀ ಸಿದ್ದೇಶ್ವರ	ಬಾಗಲಕೋಟ	ಬಾಗಲಕೋಟ
೫	ಮುಚಖಂಡಿ	ಶ್ರೀ ವೀರಭಧ್ರ	ಬಾಗಲಕೋಟ	ಬಾಗಲಕೋಟ
೬	ಚೊಳಚಗುಡ್ಡ	ಶ್ರೀ ವೀರಭಧ್ರ	ಬದಾಮಿ	ಬಾಗಲಕೋಟ
೭	ಮಹಾಕೂಟ	ಶ್ರೀ ಮಹಾಕೂಟೇಶ್ವರ	ಬದಾಮಿ	ಬಾಗಲಕೋಟ
೮	ಗುಳೇದಗುಡ್ಡ	ಶ್ರೀ ಸಂಗಮೇಶ್ವರ	ಬದಾಮಿ	ಬಾಗಲಕೋಟ
೯	ಮಲ್ಲಾಪುರ	ಶ್ರೀ ವೀರಭದ್ರ	ಬದಾಮಿ	ಬಾಗಲಕೋಟ
೧೦	ಚಿಕ್ಕಮ್ಯಾಗೇರಿ	ಶ್ರೀ ವೀರಾಂಜನೇಯ	ಬಾಗಲಕೋಟ	ಬಾಗಲಕೋಟ
೧೧	ಆಲಗುಂಡಿ	ಶ್ರೀ ಸಿದ್ದೇಶ್ವರ	ಬೀಳಗಿ	ಬಾಗಲಕೋಟ
೧೨	ಕುಂದರಗಿಯ	ಶ್ರೀ ಹನುಮಾನ	ಬೀಳಗಿ	ಬಾಗಲಕೋಟ
೧೩	ತೋಳಮಟ್ಟಿ	ಶ್ರೀ ಹನುಮಾನ	ಬೀಳಗಿ	ಬಾಗಲಕೋಟ
೧೪	ಹುನಗುಂದ	ಶ್ರೀ ವೀರಭದ್ರ	ಹುನಗುಂದ	ಬಾಗಲಕೋಟ
೧೫	ಇಳಕಲ	ಶ್ರೀ ವಿಜಯ ಮಹಾಂತೇಶರ	ಹುನಗುಂದ	ಬಾಗಲಕೋಟ
೧೬	ಮುಧೋಳ	ಶ್ರೀ ಬ್ರಹ್ಮಗಡ್ಡಿ ಮಠ	ಮುಧೋಳ	ಬಾಗಲಕೋಟ
೧೭	ಎಡಳ್ಳಿ	ಶ್ರೀ ಸಿದ್ದೇಶ್ವರ	ಮುಧೋಳ	ಬಾಗಲಕೋಟ
೧೮	ಮಹಾಲಿಂಗಪುರ	ಶ್ರೀ ಮಹಾಲಿಂಗೇಶ್ವರ	ಮುಧೋಳ	ಬಾಗಲಕೋಟ
೧೯	ಬನಹಟ್ಟಿ	ಶ್ರೀ ಕಾಡಸಿದ್ದೇಶ್ವರ	ಜಮಖಂಡಿ	ಬಾಗಲಕೋಟ
೨೦	ರಾಮತೀರ್ಥ	ಶ್ರೀ ಕಾಡಸಿದ್ದೇಶ್ವರ	ಜಮಖಂಡಿ	ಬಾಗಲಕೋಟ
೨೧	ಆಸಂಗಿ	ಶ್ರೀ ಕಾಡಸಿದ್ದೇಶ್ವರ	ಜಮಖಂಡಿ	ಬಾಗಲಕೋಟ
೨೨	ಸಾವಳಗಿ	ಶ್ರೀ ಶಿವಲಿಂಗೇಶ್ವರ	ಜಮಖಂಡಿ	ಬಾಗಲಕೋಟ
೨೩	ಚಿಮ್ಮಲಗಿ	ಶ್ರೀ ಬನಶಂಕರಿ	ಜಮಖಂಡಿ	ಬಾಗಲಕೋಟ
೨೪	ಚಿತಾಪುರ	ಶ್ರೀ ಅಣವೀರಭದ್ರೇಶ್ವರ	ಚಿತಾಪುರ	ಗುಲಬರ್ಗಾ
೨೫	ಕೋಡ್ಲಿ	ಶ್ರೀ ರಾಮಲಿಂಗೇಶ್ವರ	ಚಿತಾಪುರ	ಗುಲಬರ್ಗಾ
೨೬	ಕೋಡ್ಲಿ	ಶ್ರೀ ಬನಶಂಕರಿ	ಚಿತಾಪುರ	ಗುಲಬರ್ಗಾ

ಅ.ಸಂ. ಊರು	ದೇವಸ್ಥಾನದ ಹೆಸರು	ತಾಲೂಕು	ಜಿಲ್ಲೆ
೨೭ ಕಾಳಗಿ	ಶ್ರೀ ನೀಲಕಂಠೇಶ್ವರ	ಚಿತಾಪುರ	ಗುಲಬರ್ಗಾ
೨೮ ಹಲಕರ್ಟಿ	ಶ್ರೀ ವೀರಭದ್ರೇಶ್ವರ	ಚಿತಾಪುರ	ಗುಲಬರ್ಗಾ
೨೯ ಜಿಡಗಾ	ಶ್ರೀ ಸಿದ್ಧಸಂಸ್ಥಾನ ಮಠ	ಆಳಂದ	ಗುಲಬರ್ಗಾ
೩೦ ಮಾದನಹಿಪ್ಪರಗಾ	ಶ್ರೀ ಶರಣಶಿವಲಿಂಗೇಶ್ವರ	ಆಳಂದ	ಗುಲಬರ್ಗಾ
೩೧ ಖಾನಾಪುರ	ಶ್ರೀ ಚನ್ನವೀರ	ಆಳಂದ	ಗುಲಬರ್ಗಾ
೩೨ ಪಡನಾವಳಿ	ಶ್ರೀ ಧರ್ಮರಾಯ	ಆಳಂದ	ಗುಲಬರ್ಗಾ
೩೩ ಹಿರೋಳಿ	ಶ್ರೀ ಸೋಮಲಿಂಗ	ಆಳಂದ	ಗುಲಬರ್ಗಾ
೩೪ ಯಾಣಾಗುಂದಿ	ಶ್ರೀ ಮಾಣಿಕೇಶ್ವರ	ಯಾದಗಿರಿ	ಗುಲಬರ್ಗಾ
೩೫ ನಾಗಲಾಪುರ	ಶ್ರೀ ಮೈಲಾರೇಶ್ವರ	ಯಾದಗಿರಿ	ಗುಲಬರ್ಗಾ
೩೬ ಕಾಳಬೆಳಗುಂದಿ	ಶ್ರೀ ಬನದೇಶ್ವರ	ಯಾದಗಿರಿ	ಗುಲಬರ್ಗಾ
೩೭ ಹೆಡಗಿ ಮದ್ರಾ	ಶ್ರೀ ವೀರಭದ್ರ	ಯಾದಗಿರಿ	ಗುಲಬರ್ಗಾ
೩೭ ಗುಡೆಬೇಲೂರು	ಶ್ರೀ ಶಂಕರಲಿಂಗ	ಯಾದಗಿರಿ	ಗುಲಬರ್ಗಾ
೩೮ ಮದ್ದರಕಿ	ಶ್ರೀ ಬಸವೇಶ್ವರ	ಶಹಾಪುರ	ಗುಲಬರ್ಗಾ
೪೦ ಡಿಗ್ಗಿ	ಶ್ರೀ ಸಂಗಮೇಶ್ವರ	ಶಹಾಪುರ	ಗುಲಬರ್ಗಾ
೪೧ ರಸ್ತಾಪುರ	ಶ್ರೀ ಶರಬಲಿಂಗೇಶ್ವರ	ಶಹಾಪುರ	ಗುಲಬರ್ಗಾ
೪೨ ಸೌಳಹಾಳ	ಶ್ರೀ ಶರಣಬಸವೇಶ್ವರ	ಜೇವರಗಿ	ಗುಲಬರ್ಗಾ
೪೩ ಜೇವರಗಿ	ಶ್ರೀ ಕಟ್ಟಿಸಂಗಯ್ಯ	ಶಹಾಪುರ	ಗುಲಬರ್ಗಾ
೪೪ ಜೇರಟಗಿ	ಶ್ರೀ ಶರಣ ಬಸವೇಶ್ವರ	ಶಹಾಪುರ	ಗುಲಬರ್ಗಾ
೪೫ ಕಡಕೊಳ	ಶ್ರೀ ಮಡಿವಾಳೇಶ್ವರ	ಶಹಾಪುರ	ಗುಲಬರ್ಗಾ
೪೬ ಸುಲೇಪೇಟ	ಶ್ರೀ ವೀರಭದ್ರ	ಚಿಂಚೊಳ್ಳಿ	ಗುಲಬರ್ಗಾ
೪೭ ಕರಕನಳ್ಳಿ	ಶ್ರೀ ಬಕ್ಕಪ್ರಭು	ಚಿಂಚೊಳಿ	ಗುಲಬರ್ಗಾ
೪೮ ಸೇಡಂ	ಶ್ರೀ ಚರಬಸವೇಶ್ವರ	ಸೇಡಂ	ಗುಲಬರ್ಗಾ
೪೯ ಶಾಬಾದ	ಶ್ರೀ ಶರಣ ಬಸವೇಶ್ವರ	ಸೇಡಂ	ಗುಲಬರ್ಗಾ
೫೦ ಕೋಡ್ಲಾ	ಶ್ರೀ ವೀರಭದ್ರೇಶ್ವರ	ಸೇಡಂ	ಗುಲಬರ್ಗಾ
೫೧ ನಗನೂರು	ಶ್ರೀ ಬಸವೇಶ್ವರ	ಸುರಪುರ	ಗುಲಬರ್ಗಾ
೫೨ ದೇಸಾಯಿಕಲ್ಲೂರ	ಶ್ರೀ ಮಲ್ಲಿಕಾರ್ಜುನ	ಅಫಜಲಪುರ	ಗುಲಬರ್ಗಾ
೫೩ ಗುಲಬರ್ಗಾ	ಶ್ರೀ ಶರಣಬಸವೇಶ್ವರ	ಗುಲಬರ್ಗಾ	ಗುಲಬರ್ಗಾ
೫೪ ಹುಮನಾಬಾದ	ಶ್ರೀ ವೀರಭದ್ರೇಶ್ವರ	ಬೀದರ	ಗುಲಬರ್ಗಾ

ಅ.ಸಂ.	ಊರು	ದೇವಸ್ಥಾನದ ಹೆಸರು	ತಾಲೂಕು	ಜಿಲ್ಲೆ
೫೫	ಬಸವಕಲ್ಯಾಣ	ಶ್ರೀ ಬಸವೇಶ್ವರ	ಬಸವಕಲ್ಯಾಣ	ಗುಲಬರ್ಗಾ
೫೬	ಚಂಗಳೇರ	ಶ್ರೀ ವೀರಭದ್ರೇಶ್ವರ	ಬೀದರ	ಗುಲಬರ್ಗಾ
೫೭	ಹಾರಕೋಡ	ಶ್ರೀ ಚನ್ನಬಸವೇಶ್ವರ	ಬಸವಕಲ್ಯಾಣ	ಗುಲಬರ್ಗಾ
೫೮	ಕೊಪ್ಪಳ	ಶ್ರೀ ಗವಿಸಿದ್ದೇಶ್ವರ	ಕೊಪ್ಪಳ	ಕೊಪ್ಪಳ
೫೯	ಹುಲಗಿ	ಶ್ರೀ ಹುಲಿಗೆಮ್ಮ	ಕೊಪ್ಪಳ	ಕೊಪ್ಪಳ
೬೦	ಕುಕನೂರು	ಶ್ರೀ ಮಹಾಮಾಯಿ	ಯಲಬುರ್ಗಾ	ಕೊಪ್ಪಳ
೬೧	ಕುಕನೂರು	ಶ್ರೀ ಗುದ್ನೆಪ್ಪನ ಮಠ	ಯಲಬುರ್ಗಾ	ಕೊಪ್ಪಳ
೬೨	ಕಿನ್ನಾಳ	ಶ್ರೀ ವೀರಭದ್ರ	ಕೊಪ್ಪಳ	ಕೊಪ್ಪಳ
೬೩	ಕನಕಗಿರಿ	ಶ್ರೀ ಕನಕರಾಯ	ಗಂಗಾವತಿ	ಕೊಪ್ಪಳ
೬೪	ಕುಷ್ಟಗಿ	ಶ್ರೀ ಬುತ್ತಿ ಬಸವೇಶ್ವರ	ಕುಷ್ಟಗಿ	ಕೊಪ್ಪಳ
೬೫	ದೇವಸೂಗೂರು	ಶ್ರೀ ಸೂಗೂರೇಶ್ವರ	ದೇವದುರ್ಗ	ರಾಯಚೂರು
೬೬	ಕಲ್ಮಲ	ಶ್ರೀ ಕರೆಪ್ಪತಾತ	ರಾಯಚೂರು	ರಾಯಚೂರು
೬೭	ಗಬ್ಬೂರು	ಶ್ರೀ ಬೂದಿಬಸವೇಶ್ವರ	ರಾಯಚೂರು	ರಾಯಚೂರು
೬೮	ಮಾನ್ವಿ	ಶ್ರೀ ಯಲ್ಲಮ್ಮ	ಮಾನ್ವಿ	ರಾಯಚೂರು
೬೯	ಅಂಭಾಮಠ	ಶ್ರೀ ಅಂಭಾಮಟ	ಸಿಂಧನೂರು	ರಾಯಚೂರು
೭೦	ಬಳಗಾನೂರು	ಶ್ರೀ ಆಂಜನೇಯ	ಸಿಂಧನೂರು	ರಾಯಚೂರು
೭೧	ಮಸ್ಕಿ	ಶ್ರೀ ಮಲ್ಲಿಕಾರ್ಜುನ	ಲಿಂಗಸೂರು	ರಾಯಚೂರು
೭೨	ಗೂಗಲ	ಶ್ರೀ ಪ್ರಭುದೇವ	ದೇವದುರ್ಗ	ರಾಯಚೂರು
೭೩	ಎಡೆಯಾಪುರ	ಶ್ರೀ ಸಿದ್ದಲಿಂಗೇಶ್ವರ	ಯಲಬುರ್ಗಾ	ಕೊಪ್ಪಳ
೭೪	ತಿಂಥಣಿ	ಶ್ರೀ ಮೌನೇಶ್ವರ	ದೇವದುರ್ಗ	ರಾಯಚೂರು
೭೫	ಗುಡಗುಂಟಿ	ಶ್ರೀ ಅಮರೇಶ್ವರ	ದೇವದುರ್ಗ	ರಾಯಚೂರು
೭೬	ಕಸಲಾಲಿಂಗಸೂರು	ಶ್ರೀ ಕುಪ್ಪಸ್ವಾಮಿ	ಲಿಂಗಸೂರು	ರಾಯಚೂರು
೭೭	ರ್‍ಯಾವಣಗಿ	ಶ್ರೀ ವೀರಣ್ಣಾ	ಯಲಬುರ್ಗ	ಕೊಪ್ಪಳ
೭೮	ನವಲಿ	ಶ್ರಿ ಲಕ್ಷ್ಮೀ ದೇವಿ	ಗಂಗಾವತಿ	ಕೊಪ್ಪಳ
೭೯	ಇಂಗಿ	ಶ್ರೀ ಮಹೇಶ್ವರ	ಯಲಬುರ್ಗ	ಕೊಪ್ಪಳ
೮೦	ಕೊಟ್ಟೂರು	ಶ್ರೀ ಕೊಟ್ಟೂರೇಶ್ವರ	ಕೂಡ್ಲಗಿ	ಬಳ್ಳಾರಿ
೮೧	ಸಂಡೂರು	ಶ್ರೀ ಶಿವಪುರೇಶ್ವರ	ಕೂಡ್ಲಗಿ	ಬಳ್ಳಾರಿ
೮೨	ಹಂಪಿ	ಶ್ರೀ ವಿರುಪಾಕ್ಷ	ಹೊಸಪೇಟ	ಬಳ್ಳಾರಿ

ಅ.ಸಂ.	ಊರು	ದೇವಸ್ಥಾನದ ಹೆಸರು	ತಾಲೂಕು	ಜಿಲ್ಲೆ
೮೩	ಉಜನಿ	ಶ್ರೀ ಮರುಳಸಿದ್ದೇಶ್ವರ	ಕೂಡ್ಲಗಿ	ಬಳ್ಳಾರಿ
೮೩	ಮರೆಮ್ಮನ ಹಳ್ಳಿ	ಶ್ರೀ ರಾಮಾಂಜನೇಯ	ಕೂಡ್ಲಗಿ	ಬಳ್ಳಾರಿ
೮೪	ಇಟಗಿ	ಶ್ರೀ ಆಂಜನೇಯ	ಹೂವಿನ ಹಡಗಲಿ	ಬಳ್ಳಾರಿ
೮೫	ಚಳಗುರ್ಕಿ	ಶ್ರೀ ಯರಿತಾತ	ಹೊಸಪೇಟೆ	ಬಳ್ಳಾರಿ
೮೬	ಸೋಗಿ	ಶ್ರೀ ವೀರಭದ್ರ	ಹೂವಿನ ಹಡಗಲಿ	ಬಳ್ಳಾರಿ
೮೭	ಕುರುವತ್ತಿ	ಶ್ರೀ ಬಸವೇಶ್ವರ	ಹೂವಿನ ಹಡಗಲಿ	ಬಳ್ಳಾರಿ
೮೮	ಮೊದಲಗಟ್ಟಿ	ಶ್ರೀ ಆಂಜನೇಯ	ಹೂವಿನ ಹಡಗಲಿ	ಬಳ್ಳಾರಿ
೮೯	ಗೋಕಾಕ	ಶ್ರೀ ಲಕ್ಷ್ಮೀದೇವಿ	ಗೋಕಾಕ	ಬೆಳಗಾವಿ
೯೦	ಅಕ್ಕತಂಗಿಯರಹಳ್ಳಿ	ಶ್ರೀ ದುರ್ಗಾದೇವಿ	ಗೋಕಾಕ	ಬೆಳಗಾವಿ
೯೧	ಅಂಕಲಗಿ	ಶ್ರೀ ಅಡವಿಸಿದ್ದೇಶ್ವರ	ಗೋಕಾಕ	ಬೆಳಗಾವಿ
೯೨	ಕುಂದರಗಿ	ಶ್ರೀ ಅಡವಿಸಿದ್ದೇಶ್ವರ	ಗೋಕಾಕ	ಬೆಳಗಾವಿ
೯೩	ಗೋಕಾಕ	ಶ್ರೀಈರಣ್ಣ	ಗೋಕಾಕ	ಬೆಳಗಾವಿ
೯೪	ಗೋಕಾಕ	ಶ್ರೀ ವೆಂಕಟೇಶ್ವರ	ಗೋಕಾಕ	ಬೆಳಗಾವಿ
೯೫	ಕೊಣ್ಣೂರು	ಶ್ರೀ ಮರಡಿಮಠ	ಗೋಕಾಕ	ಬೆಳಗಾವಿ
೯೬	ಪಾಲ್ಲ(ಗೋಕಾಕ)	ಶ್ರೀ ಕಾಡಸಿದ್ದೇಶ್ವರ	ಗೋಕಾಕ	ಬೆಳಗಾವಿ
೯೭	ಗೊಡಚಿನಮಲ್ಕಿ	ಶ್ರೀ ಲಕ್ಷ್ಮೀದೇವಿ	ಗೋಕಾಕ	ಬೆಳಗಾವಿ
೯೮	ಮಾವನೂರು	ಶ್ರೀ ಬಂಡೆಮ್ಮ	ಪಾಶ್ಚಾಪುರ	ಬೆಳಗಾವಿ
೯೯	ಸಂಕೇಶ್ವರ	ಶ್ರೀ ಶಂಕರಲಿಂಗ	ಹುಕ್ಕೇರಿ	ಬೆಳಗಾವಿ
೧೦೦	ಹೊಳೆಹಿರ್ನಿ	ಶ್ರೀ ಬಸವಣ್ಣ	ಹುಕ್ಕೇರಿ	ಬೆಳಗಾವಿ
೧೦೧	ಕೇಚರಿ	ಶ್ರೀ ಲಕ್ಷ್ಮೀದೇವಿ	ಹುಕ್ಕೇರಿ	ಬೆಳಗಾವಿ
೧೦೨	ಕುರಣಿ	ಶ್ರೀ ಗಂಗಾದೇವಿ	ಗೋಕಾಕ	ಬೆಳಗಾವಿ
೧೦೩	ರಾಮದುರ್ಗ	ಶ್ರೀವೆಂಕಟೇಶ್ವರ	ಸವದತ್ತಿ	ಬೆಳಗಾವಿ
೧೦೪	ಇಂಚಲ	ಶ್ರೀವಯೋಗೀಶ್ವರ ಮಠ	ಸವದತ್ತಿ	ಬೆಳಗಾವಿ
೧೦೫	ಸುಲ್ತಾನಪೂರ	ಶ್ರೀಸಿದ್ದೇಶ್ವರ	ಹುಕ್ಕೇರಿ	ಬೆಳಗಾವಿ
೧೦೬	ನಾಗನೂರು	ಶ್ರೀ ಸಿದ್ಧೇಶ್ವರ	ಬೈಲಹೊಂಗಲ	ಬೈಲಹೊಂಗಲ
೧೦೭	ಬೈಲಹೊಂಗಲ	ಶ್ರೀ ಬಸವೇಶ್ವರ	ಬೈಲಹೊಂಗಲ	ಬೈಲಹೊಂಗಲ
೧೦೮	ನೇಸರಗಿ	ಶ್ರೀ ಮಡಿವಾಳೇಶ್ವರ	ಬೈಲಹೊಂಗಲ	ಬೈಲಹೊಂಗಲ
೧೦೯	ಮುರಕಿಬಾವಿ	ಶ್ರೀ ಸಿದ್ಧಾರೂಡ	ಬೈಲಹೊಂಗಲ	ಬೈಲಹೊಂಗಲ

ಅ.ಸಂ.	ಊರು	ದೇವಸ್ಥಾನದ ಹೆಸರು	ತಾಲೂಕು	ಜಿಲ್ಲೆ
೧೧೦	ಮೊಹರೆ	ಶ್ರೀ ಬಸವಣ್ಣ	ಬೈಲಹೊಂಗಲ	ಬೈಲಹೊಂಗಲ
೧೧೧	ಪಟ್ಯಾಳ	ಶ್ರೀ ಬಸವೇಶ್ವರ	ಬೈಲಹೊಂಗಲ	ಬೈಲಹೊಂಗಲ
೧೧೨	ಬೈಲಹೊಂಗಲ	ಶ್ರೀರಾಮಲಿಂಗೇಶ್ವರ	ಬೈಲಹೊಂಗಲ	ಬೈಲಹೊಂಗಲ
೧೧೩	ಸೊಗಲ	ಶ್ರೀ ಸೋಮೇಶ್ವರ	ಬೈಲಹೊಂಗಲ	ಬೈಲಹೊಂಗಲ
೧೧೪	ಕಾರಿಮನಿ	ಶ್ರೀ ಬಸವಣ್ಣ	ಬೈಲಹೊಂಗಲ	ಬೈಲಹೊಂಗಲ
೧೧೫	ಅಥಣಿ	ಶ್ರೀ ಮುರುಘೇಂದ್ರಸ್ವಾಮಿ	ಅಥಣಿ	ಬೆಳಗಾಂವ
೧೧೬	ಮುಗಳಖೋಡ	ಶ್ರೀ ಸಿದ್ಧ ಸಂಸ್ಥಾನ ಮಠ	ರಾಯಭಾಗ	ಬೆಳಗಾಂವ
೧೧೭	ಗೋಲಬಾವಿ	ಶ್ರೀ ಬಸವೇಶ್ವರ	ರಾಯಭಾಗ	ಬೆಳಗಾಂವ
೧೧೮	ಸಸಾಲಟ್ಟಿ	ಶ್ರೀ ಶಿವಲಿಂಗೇಶ್ವರ	ಅಥಣಿ	ಬೆಳಗಾಂವ
೧೧೯	ಗದಗ	ಶ್ರೀ ತೋಂಟದಾರ್ಯ್ಯಮಠ	ಗದಗ	ಗದಗ
೧೨೦	ಶಿರಹಟ್ಟಿ	ಶ್ರೀ ಫಕೀರೇಶ್ವರ	ಶಿರಹಟ್ಟಿ	ಗದಗ
೧೨೧	ವರವಿ	ಶ್ರೀ ಮೌನೇಶ್ವರ	ಶಿರಹಟ್ಟಿ	ಗದಗ
೧೨೨	ಲಕ್ಷ್ಮೇಶ್ವರ	ಶ್ರೀ ಸೋಮೇಶ್ವರ	ಶಿರಹಟ್ಟಿ	ಗದಗ
೧೨೩	ಗಜೇಂದ್ರಗಡ	ಶ್ರೀ ಕಾಲಕಾಲೇಶ್ವರ	ರೋಣ	ಗದಗ
೧೨೪	ಹಾನಗಲ	ಶ್ರೀ ತಾರದೇಶ್ವರ	ಹಾನಗಲ	ಹಾವೇರಿ
೧೨೫	ಹಾವೇರಿ	ಶ್ರೀ ವೀರಭದ್ರ	ಹಾವೇರಿ	ಹಾವೇರಿ
೧೨೬	ಹಿರೂರು	ಶ್ರೀ ಬಸವೇಶ್ವರ	ಹಾನಗಲ	ಹಾವೇರಿ
೧೨೭	ಬಂಕಾಪೂರ	ಶ್ರೀ ಅರಳೇಶ್ವರ	ಹಾನಗಲ	ಹಾವೇರಿ
೧೨೮	ಧಾರವಾಡ	ಶ್ರೀ ಮೂರುಸಾವಿರ ಮಠ	ಧಾರವಾಡ	ಧಾರವಾಡ
೧೨೯	ಹುಬ್ಬಳ್ಳಿ	ಶ್ರೀ ಮೂರುಸಾವಿರ ಮಠ	ಧಾರವಾಡ	ಧಾರವಾಡ
೧೩೦	ಗದಗ	ಶ್ರೀ ಮಡಿವಾಳೇಶ್ವರ	ಧಾರವಾಡ	ಧಾರವಾಡ
೧೩೧	ಉಳವಿ	ಶ್ರೀ ಚನ್ನಬಸವಣ್ಣ	ಕಾರವಾರ	ಕಾರವಾರ
೧೩೨	ಖಾನಾಪೂರ	ಶ್ರೀ ಬನಶಂಕರಿ	ಧಾರವಾಡ	ಧಾರವಾಡ
೧೩೩	ಢವಳಗಿ	ಶ್ರೀ ಮಡಿವಾಳೇಶ್ವರ	ಮದ್ದೇಬಿಹಾಳ	ಬಿಜಾಪೂರ
೧೩೪	ಜಾಯವಾಡಲಗಿ	ಸೋಮನಾಥೇಶ್ವರ	ಬಸವನ ಬಾಗೇವಾಡಿ	ಬಿಜಾಪೂರ
೧೩೫	ಬಸರಕೋಡ	ಪವಾಡ ಬಸವೇಶ್ವರ	ಬಸವನ ಬಾಗೇವಾಡಿ	ಬಿಜಾಪೂರ
೧೩೬	ಹಡ್ಲಗೇರಿ	ಬನಶಂಕರಿ	ಬಸವನ ಬಾಗೇವಾಡಿ	ಬಿಜಾಪೂರ
೧೩೭	ಗೋಲಗೇರಿ	ಗೊಲ್ಲಾಳೇಶ್ವರ	ಸಿಂದಗಿ	ಬಿಜಾಪೂರ

ಅ.ಸಂ.	ಊರು	ದೇವಸ್ಥಾನದ ಹೆಸರು	ತಾಲೂಕು	ಜಿಲ್ಲೆ
೧೩೮	ಚಾಂದಕೋಟೆ	ಬಸವೇಶ್ವರ	ಸಿಂದಗಿ	ಬಿಜಾಪೂರ
೧೩೯	ಸಜ್ಜಲಗುಡ್ಡ	ಶರಣಮ್ಮ	ಹುನಗುಂದ	ಬಾಗಲಕೋಟ
೧೪೦	ನಾಲವಾಡಿ	ಬಸವೇಶ್ವರ	ನವಲಗುಂದ	ಧಾರವಾಡ
೧೪೧	ಕೂಡಲಸಂಗಮ	ಶ್ರೀ ಸಂಗಮೇಶ್ವರ	ಬಾಗಲಕೋಟ	ಭಾಗಲಕೋಟ
೧೪೨	ಕುಕ್ಕೆ ಸುಬ್ರಹ್ಮಣ್ಯ	ಸುಬ್ರಹ್ಮಣ್ಯ ಸ್ವಾಮಿ		ದಕ್ಷಿಣ ಕನ್ನಡ
೧೪೩	ಧರ್ಮಸ್ಥಳ	ಶ್ರೀ ಮಂಜುನಾಥ		ದಕ್ಷಿಣ ಕನ್ನಡ
೧೪೪	ಧರ್ಮಸ್ಥಳ	ವಸ್ತುಸಂಗ್ರಹಾಲಯ		ದಕ್ಷಿಣ ಕನ್ನಡ
೧೪೫	ಮೈಸೂರು	ಚಾಮುಂಡೇಶ್ವರ		ಮೈಸೂರು
೧೪೬	ನಂಜನಗೂಡು	ನಂಜುಂಡೇಶ್ವರ		
೧೪೭	ಶೃಂಗೇರಿ	ಶಾರದಾಂಬೆ		ಚಿಕ್ಕಮಗಳೂರು
೧೪೮	ಕೊಲ್ಲೂರು	ಶ್ರೀಮೂಕಾಂಬಿಕೆ		ಉಡುಪಿ
೧೪೯	ಉಡುಪಿ	ಶ್ರೀ ಕೃಷ್ಣ		ಉಡುಪಿ
೧೫೦	ಶ್ರೀರಂಗಪಟ್ಟಣ	ಶ್ರೀ ರಂಗನಾಥ		ಮಂಡ್ಯ
೧೫೧	ದಾವಣಗೆರೆ	ವೆಂಕಟೇಶ್ವರ		ದಾವಣಗೆರೆ

◆ ◆ ◆

ರಥ ಶಿಲ್ಪಿಗಳ ನೆಲೆಗಳು

ಅನುಬಂಧ - ೪. ನಕಾಶೆ



ಅನುಬಂಧ - ೫

ಸಂದರ್ಶಿಸಿದ ರಥಶಿಲ್ಪಿಗಳ ಹೆಸರು ಹಾಗೂ ವಿಳಾಸ

೧ **ಮಲ್ಲಪ್ಪ ಬಡಿಗೇರ**
ಅಂಚೆ. ಕೊಪ್ಪಳ, ಬಸ್-ಸ್ಟ್ಯಾಂಡ್ ರೋಡ,
ತಾ. ಕೊಪ್ಪಳ ಜಿ.ಕೊಪ್ಪಳ

೨ **ಮನೋಹರ ಬಡಿಗೇರ**
ರಥಶಿಲ್ಪ ತರಬೇತಿ ಕೇಂದ್ರ, ಕಾಮಾಕ್ಷಿ ಪಾಳ್ಯ,
ಬೆಂಗಳೂರು

೩ **ಮಾನಪ್ಪ ಬಡಿಗೇರ**
ಅಂಚೆ. ಆಲಗುಂಡಿ, ಬಸವನಗಡಿ ಹತ್ತಿರ,
ತಾ. ಬೀಳಗಿ ಜಿ. ಬಾಗಲಕೋಟ

೪ **ಬಿ.ಕೆ. ಬಡಿಗೇರ**
ಅಂಚೆ. ಸಾವಳಗಿ
ತಾ. ಜಮಖಂಡಿ ಜಿ. ಬಾಗಲಕೋಟ

೫ **ಶಂಕರಪ್ಪ ಕಾಳಪ್ಪ ಬಡಿಗೇರ**
ಅಂಚೆ. ಜಮಖಂಡಿ, ಕುಂಬಾರ ಗಲ್ಲಿ,
ತಾ. ಜಮಖಂಡಿ ಜಿ. ಬಾಗಲಕೋಟ

೬ **ಮೌನೇಶ ರಾಜಪ್ಪ ಶಿಲ್ಪಿ**
ಅಂಚೆ.ಹೆಬ್ಬಾಳ, ನೀರನ ಟಾಕಿ ಹತ್ತಿರ,
ತಾ. ಮಧೋಳ ಜಿ. ಬಾಗಲಕೋಟ

೭ **ಮಾನಪ್ಪ ಈಶ್ವರಪ್ಪ ಬಡಿಗೇರ**
ಅಂಚೆ. ಧಾರವಾಡ, ಜಯನಗರ,೧೩ ಕ್ರಾಸ್,
ಜಿ. ಧಾರವಾಡ

೮ **ರಾಜು ಬಾತಖಂಡೆ**
ಅಂಚೆ. ಧಾರವಾಡ, ಹಾವೇರಿ ಪೇಟೆ,
ಜಿ. ಧಾರವಾಡ.

೯ **ಮೌನೇಶ ಕಾಳಪ್ಪ ಬಡಿಗೇರ**
ಅಂಚೆ.ಬೆನ್ನೂರು, ವಿದ್ಯಾನಗರ,
ತಾ. ಕಲಘಟಗಿ ಜಿ. ಧಾರವಾಡ

೧೦ **ಎರಚಪ್ಪ ಟಂಕಸಾಲಿ**
ಅಂಚೆ.ಅಬ್ಬಿಗೇರಿ,
ತಾ.ರೋಣ ಜಿ.ಗದಗ

೧೧ **ಮಾರುತಿ ಕಂಬಾರ**
ಅಂಚೆ.ತಾಳಿಕೊಪ್ಪ,
ತಾ. ಶಿರಹಟ್ಟಿ ಜಿ. ಗದಗ

೧೨ **ಶರಣಕುಮಾರ ಗುಡಿಗಾರ**
ಅಂಚೆ. ಗಂಗಾವತಿ, ಗುಡಿ ಹತ್ತಿರ,
ತಾ. ಗಂಗಾವತಿ ಜಿ. ಕೊಪ್ಪಳ

೧೩ **ಸುರೇಶ ವಿಶ್ವಕರ್ಮ**
ಅಂಚೆ.ಹೊಸಳ್ಳಿ, ಗಡದ ಗಲ್ಲಿ,
ತಾ.ಯಲಬುರ್ಗಾ ಜಿ. ಕೊಪ್ಪಳ

೧೪ **ಕಾಳಪ್ಪ ವಿಶ್ವಕರ್ಮ**
ಅಂಚೆ.ಗುಂಜನ ಹಳ್ಳಿ, ಮಾರ್ಕೆಟ ರೋಡ.
ತಾ. ಸಿಂಧನೂರು ಜಿ. ರಾಯಚೂರು

೧೫ **ರೇವಣಸಿದ್ಧಪ್ಪ ಕಾಳಪ್ಪ ಬಡಿಗೇರ**
ಅಂಚೆ.ಹೊಳೆಆಲೂರ,ಬಸ್‌ನಿಲ್ದಾಣರೋಡ,
ತಾ. ರೋಣ ಜಿ.ಗದಗ

೧೬ **ಕಾಳಪ್ಪ ನರಸಪ್ಪ ಚಿತ್ರಗಾರ**
ಅಂಚೆ. ನಂದರಗಿ, ಶನಿವಾರ ಪೇಠ,
ತಾ. ಇಂಡಿ ಜಿ. ಬಿಜಾಪೂರ

೧೭ **ವಿವೇಕ ಬ. ಶಿಲ್ಪಿ**
ಅಂಚೆ. ಮುರುಗೋಡ, ಮಠದ ಹತ್ತಿರ,
ತಾ. ಬೈಲಹೊಂಗಲ ಜಿ. ಬೆಳಗಾಂವಿ

೧೮ **ಶಿವಾನಂದ ಮಾಯಾಚಾರ್ಯ**
ಅಂಚೆ. ಕೂಡ್ಲಗಿ, ಮಾರುತಿ ಗಲ್ಲಿ,
ತಾ. ಕೂಡ್ಲಗಿ ಜಿ. ಬಳ್ಳಾರಿ

ಅನುಬಂಧ-೬

ಗ್ರಂಥ ಋಣ

೧ **ಅರವತ್ತನಾಲ್ಕು ಕಲೆಗಳು :** ಮ. ಶ್ರೀಧರ ಮೂರ್ತಿ
ಪ್ರಸಾರಾಂಗ, ಬೆಂ.ವಿ.ವಿ. ಬೆಂಗಳೂರು-೧೯೭೪

೨ **ಉತ್ತರ ಕನ್ನಡ ಜಿಲ್ಲೆಯ ಜನಪದ ಆಟಗಳು :** ನಾಯಕ ಎನ್. ಆರ್. ಮತ್ತು ಶಾಂತಿ ನಾಯಕ (ಸಂ) :
ಪ್ರಸಾರಾಂಗ, ಕ.ವಿ.ವಿ. ಧಾರವಾಡ - ೧೯೭೪

೩ **ಕರ್ನಾಟಕ ದೇವಾಲಯ ಕೋಶ, ಬಳ್ಳಾರಿ ಜಿಲ್ಲೆ :** ಡಾ. ಕೆ.ಎಂ. ಸುರೇಶ, ವಾಸುದೇವ ಬಡಿಗೇರ,
ಪ್ರಸಾರಾಂಗ, ಕನ್ನಡ.ವಿ. ಹಂಪಿ - ೧೯೯೯

೪ **ಕರ್ನಾಟಕ ಭಿತ್ತಿ ಚಿತ್ರ ಪರಂಪರೆ :** ಡಾ. ಅ.ಲ. ನರಸಿಂಹನ್,
ಕರ್ನಾಟಕ ಲಲಿತ ಕಲಾ ಅಕಾಡೆಮಿ, ಬೆಂಗಳೂರು - ೧೯೯೮

೫ **ಕಲೆ ಮತ್ತು ಹಬ್ಬ :** ಎಸ್.ಕೆ. ಹೂಗಾರ,
ಕನ್ನಡ ಅಧ್ಯಯನ ಪೀಠ, ಕ.ವಿ. ಧಾರವಾಡ - ೧೯೭೭

೬ **ಕರ್ನಾಟಕದ ಗ್ರಾಮ ದೇವತೆಗಳು :** ಡಿ. ಲಿಂಗಯ್ಯ,
ಐಬಿಎಚ್. ಪ್ರಕಾಶ, ಬೆಂಗಳೂರು - ೧೯೮೪

೭ **ಕರ್ನಾಟಕದ ಜನಪದ ಗೀತೆಗಳು ಸಾಂಸ್ಕೃತಿಕ ಅಧ್ಯಯನ :** ನಂ. ತಪಸ್ವಿಕುಮಾರ
ಪ್ರಸಾರಾಂಗ, ಮೈ.ವಿ. ವಿ. ಮೈಸೂರು - ೧೯೮೨

೮ **ಕಲೆಯ ದರ್ಶನ :** ಡಾ. ಶಿವರಾಮ ಕಾರಂತ,
ರಾಜಲಕ್ಷ್ಮೀ ಪ್ರಕಾಶನ, ಬೆಂಗಳೂರು - ೧೯೮೨

೯ **ಕಲೆ ಎಂದರೇನು? :** ಲಿಯೋ ಟಾಲ್‌ಸ್ಟಾಯ್, ಅನು.ಸಿ.ಪಿ. ಕೃಷ್ಣಕುಮಾರ್.
ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು - ೨೦೦೦

೧೦ **ಕಲಾ ತತ್ವ :** ಡಾ. ದೇ. ಜವರೇಗೌಡ,
ಕುವೆಂಪು ವಿದ್ಯಾವರ್ಧಕ ಟ್ರಸ್ಟ, ಮೈಸೂರು - ೧೯೭೬

೧೧ **ಕರ್ನಾಟಕದ ಕಲೆಗಳು- ೧, ಭೂಮಿಕೆ :** ಪ್ರೊ. ಎಸ್.ಕೆ. ರಾಮಚಂದ್ರರಾವ್,
ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು - ೧೯೮೧

೧೨ **ಕರಕುಶಲ ಕಲೆಗಳು :** ಡಿ. ಗಣೇಶ,
ನಿರ್ದೇಶಕರು, ಪ್ರಸಾರಾಂಗ, ಮೈ.ವಿ.ವಿ. ಮೈಸೂರು - ೧೯೮೨

೧೩ **ಕನ್ನಡ ಜಾನಪದ ಸಾಹಿತ್ಯ :** ಡಾ. ಬೆಟಗೇರಿ ಕೃಷ್ಣಶರ್ಮ
ಪ್ರಸಾರಾಂಗ, ಕ.ವಿ.ವಿ. ಧಾರವಾಡ - ೧೯೭೬

೧೪ **ಕರ್ನಾಟಕ ಸಂಸ್ಕೃತಿ, ಪರಂಪರೆ ಹಬ್ಬಗಳು (ಭಾಗ-೧) :** ಎಸ್.ಎಸ್. ಹಿರೇಮಠ
ಸಮತಾ ಪ್ರಕಾಶನ, ಹರಪನ ಹಳ್ಳಿ - ೧೯೯೨

೧೫ **ಕನ್ನಡ ಜನಪದ ಕಲೆಗಳು :** ಗೊ. ರು. ಚೆನ್ನಬಸಪ್ಪ

ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು - ೧೯೭೭

೧೬ **ಕರಕುಶಲ ಕಲೆಗಳು : ಕನ್ನಡ ವಿಶ್ವವಿದ್ಯಾಲಯ ವಿಶ್ವಕೋಶ - ೨ :** ಕರಿಗೌಡ ಬೀಚನಹಳ್ಳಿ, (ಸಂ)

ಪ್ರಸಾರಾಂಗ, ಕನ್ನಡ ವಿ.ವಿ.ಹಂಪಿ - ೨೦೦೦

೧೭ **ಕರ್ನಾಟಕ ಚರಿತ್ರೆ, - ೩ :** ಪ್ರೊ. ಬಿ. ಷೇಕ್ ಅಲಿ, ಪ್ರೊ.ಕೆ.ಎಸ್. ಶಿವಣ್ಣ,

ಪ್ರಸಾರಾಂಗ, ಕನ್ನಡ ವಿ. ವಿ. ಹಂಪೆ - ೧೯೯೭

೧೮ **ಕಲೆಯ ಅರ್ಥ :** ರವೀಂದ್ರ ನಾಥ ಟ್ಯಾಗೋರ್, ಅ.- ಎಚ್.ಎಸ್. ಶ್ರೀಮತಿ,

ಕರ್ನಾಟಕ ಚಿತ್ರಕಲಾ ಪರಿಷತ್, ಬೆಂಗಳೂರು - ೧೯೮೮

೧೯ **ಕಲಾನುಭವ :** ವಿ. ಸೀತಾರಾಮಯ್ಯ,

ಬೆಂ. ವಿ.ವಿ. ಬೆಂಗಳೂರು - ೧೯೭೬

೨೦ **ಕರ್ನಾಟಕದ ಜನಪದ ಚಿತ್ರಕಲೆ :** ಡಾ. ಎಸ್.ಸಿ. ಪಾಟೀಲ,

ವೀರಶೈವ ಅಧ್ಯಯನ ಸಂಸ್ಥೆ, ಶ್ರೀ ತೋಂಟದಾರ್ಯ

ಸಂಸ್ಥಾನಮಠ, ಗದಗ - ೧೯೯೩

೨೧ **ಕನ್ನಡ ಶಾಸನಶಿಲ್ಪ :** ಡಾ. ಡಿ.ವಿ. ಪರಮಶಿವಮೂರ್ತಿ,

ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

೨೨ **ಕಲಾಕೋಶ :** ಪಿ. ಆರ್. ತಿಪ್ಪೇಸ್ವಾಮಿ, (ಸಂ)

ಕರ್ನಾಟಕ ಲಲಿತಕಲಾ ಅಕಾಡೆಮಿ,

ಬೆಂಗಲೂರು - ೧೯೯೪

೨೩ **ಕಲಾ ಪ್ರಪಂಚ :** ಡಾ. ಶಿವರಾಮ ಕಾರಂತ,

ಪ್ರಸಾರಾಂಗ, ಕ.ವಿ. ವಿ. ಧಾರವಾಡ - ೧೯೭೮

೨೪ **ಕರ್ನಾಟಕದ ಆಧುನಿಕ ಶಿಲ್ಪಕಲೆ :** ಕೆ.ವಿ. ಸುಬ್ರಹ್ಮಣ್ಯಂ,

ಕರ್ನಾಟಕ ಲಲಿತ ಕಲಾ ಅಕಾಡೆಮಿ,

ಬೆಂಗಳೂರು - ೧೯೯೩

೨೫ **ಕಲಾವಿದರು ನಡೆದು ಬಂದ ದಾರಿ :** ಗವೀಶ ಹಿರೇಮಠ,

ದಿ ಐಡಿಯಲ್ ಫೈನ್ ಆರ್ಟ್ಸ್, ಗುಲಬುರ್ಗಾ - ೧೯೮೩

೨೬ **ಗ್ರಾಮ ದೇವತೆಗಳು :** ಡಾ. ಎಸ್. ಪಿ. ಪಾಟೀಲ,

ಪಿ ಎಚ್.ಡಿ. ಮಹಾಪ್ರಬಂಧ, (ಅಪ್ರಕಟಿತ)

ಕ.ವಿ.ವಿ. ಧಾರವಾಡ.

೨೭ **ಚಾಲುಕ್ಯ ವಾಸ್ತು ಶಿಲ್ಪವೈಭವ :** ಡಾ. ಕರವೀರಪ್ರಭು ಕ್ಯಾಲಕೊಂಡ,

ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೭

೨೮ **ಚಿತ್ರ ಶಿಲ್ಪ ವಾಸ್ತುಕಲೆಗಳು :**
ಡಾ. ಶಿವರಾಮ ಕಾರಂತ
ಕನ್ನಡ ಅಧ್ಯಯನ ಪೀಠ, ವಿಷೇಶ
ಉಪನ್ಯಾಸ ಮಾಲೆ - ೩, ಕ.ವಿ.ವಿ.ಧಾರವಾಡ

೨೯ **ಜನಪದ ಆರಾಧನೆ ಮತ್ತು ಕಂಗಲೆ :**
ಡಾ. ಸುಸಿಲಾ ಪಿ. ಉಪಾಧ್ಯಾಯ,
ಪಾದೇಶಿಕ ಜಾನಪದ ಮತ್ತು ರಂಗಲೆಗಳ
ಅದ್ಯಯನ ಕೇಂದ್ರ, ಉಡುಪಿ - ೧೯೮೯

೩೦ **ಜಾನಪದ ಬದುಕು :**
ಕೆ.ಎಸ್. ಉಪಾದ್ಯಾಯ,
ಕರ್ನಾಟಕ ಸಂಘ, ಕಿತ್ತೂರ - ೧೯೯೪

೩೧ **ದೇಗುಲ ರಥಶಿಲ್ಪಗಳು :**
ದ್ರುವರಾಜ ನಾ. ಗದಗಕರ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೧೯೯೯

೩೨ **ದೇವಾಲಯ ಮತ್ತು ಲೈಂಗಿಕ ಶಿಲ್ಪ :**
ತಾ.ಪಿ. ಧರ್ಮರಾವ(ಮೂಲ) ಎಸ್. ಆರ್. ಶಾಸ್ತ್ರಿ(ಅಣು),
ನವ ಕರ್ನಾಟಕ ಪಬ್ಲಿಕೆಷನ್ ಲಿ. ಬೆಂಗಳೂರು - ೧೯೮೩

೩೩ **ಬಸವಣ್ಣವರ ವಚನಗಳು :**
ಡಾ. ಆರ್.ಸಿ. ಹಿರೇಮಠ (ಸಂ)
ಶ್ರೀ ಮುರುಘಾಮಠ, ಧಾರವಾಡ - ೧೯೮೮

೩೪ **ಬಳ್ಳಾರಿ ಜಿಲ್ಲೆಯ ಮರದ ವಾಸ್ತು :**
ಡಾ. ಸಿ. ಮಹದೇವ
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೩೫ **ಭಾರತದ ಹಬ್ಬ ಹರಿದಿನಗಳು :**
ಪ್ರೊ. ಡಿ.ಟಿ. ರಂಗಸ್ವಾಮಿ
ಸಮಾಜ ಪುಸ್ತಕಾಲಯ, ಧಾರವಾಡ - ೧೯೮೪

೩೬ **ಭಾರತೀಯ ಕಾವ್ಯ ಮೀಮಾಂಸೆ :**
ತಿ.ನಂ. ಶ್ರೀಕಂಠಯ್ಯ
ಕನ್ನಡ ಮತ್ತು ಸಂಸ್ಕೃತಿಕ ಇಲಾಖೆ, ಬೆಂಗಳೂರು - ೧೯೫೩

೩೭ **ಬಾದಾಮಿ ಒಂದು ಸಾಂಸ್ಕೃತಿಕ ಅದ್ಯಯನ :**
ಡಾ. ಶೀಲಾಕಾಂತ ಪತ್ತಾರ,
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೦

೩೮ **ಭಾರತೀಯ ವಿದ್ಯೆ :**
ಬಿ.ಎಸ್. ರಾಮಕೃಷ್ಣರಾವ್ (ಅನು),
ಭಾರತೀಯ ವಿದ್ಯಾಭವನ, ಬೆಂಗಳೂರು - ೧೯೮೭

೩೯ **ಬಿಜಾಪೂರ ಜಿಲ್ಲೆಯ ಜಾತ್ರೆಗಳು, ಒಂದು ಅದ್ಯಯನ :**
ರಾಜೇಸಾಬ ಚಪ್ಪರಬಂದ,
ಪಿ.ಎಚ್.ಡಿ. ಮಹಾಪ್ರಬಂಧ ಪ್ರಕಟಿತ, ಕ.ವಿ.ವಿ.
ಧಾರವಾಡ - ೧೯೯೮

೩೯ **ಮಲೆ ಕರ್ನಾಟಕದ ಅರಸು ಮನೆತನಗಳು :**
ರಾಜಾರಾಂ ಹೆಗಡೆ, ಅಶೋಕ ಶೆಟ್ಟರ (ಸಂ)
ಪ್ರಸಾರಾಂಗ, ಕನ್ನಡ ವಿ.ವಿ. ಹಂಪಿ - ೨೦೦೧

೪೦ **ಮೂರ್ತಿ ಶಿಲ್ಪ, ನೆಲೆ ಹಿನ್ನೆಲೆ :**
ಎಸ್.ಕೆ. ರಾಮಚಂದ್ರರಾವ್,
ಪ್ರಸಾರಾಂಗ, ಬೆಂ. ವಿ.ವಿ. ಬೆಂಗಳೂರು - ೧೯೭೫

